(B)025225

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ಹನ್ನೊಂದನೆ ವಿಧಾನಸಭೆಯ ಮೂರನೆ ಅಧಿವೇಶನ

THIRD SESSION OF THE ELEVENTH LEGISLATIVE ASSEMBLY

ಸಂಪುಟ ೭ (ಕ್ರಮಾಂಕ ೩ ರಿಂದ ೫)

Volume 7 (No.3 to 5)

ಭಾಗ - 2

(೨೫ನೇ ಜುಲೈ ೨೦೦೧ ರಿಂದ ೨೭ನೇ ಜುಲೈ ೨೦೦೧)

(25th July 2001 to 27th July 2001)

ಕರ್ನಾಟಕ ವಿಧಾನಸಭೆ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಬುಧವಾರ, ೨೮ನೇ ನವೆಂಬರ್ ೨೦೦೧

1. <u>ಪ್ರಶ್ನೋತ್ತರ</u> :

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು .... 673..772

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. .... 772..943

2. <u>ಅಧ್ಯಕ್ಷರ ಅಪ್ಪಣೆ ಮೇರೆಗೆ</u> :

ಅ) ಪಿ.ಎಫ್. ಬಗ್ಗೆ ಸುಳ್ಳು ವದಂತಿಯಿಂದ ಪೀಣ್ಯದಲ್ಲಿ ಸಂಭವಿಸಿದ ಘಟನೆ ಬಗ್ಗೆ .... 944..953

— ಶ್ರೀ ಆರ್. ಅಶೋಕ
— ಶ್ರೀ ಪಿ.ಜಿ.ಆರ್. ಸಿಂಧ್ಯಾ
— ಶ್ರೀ ಎಸ್. ಸುರೇಶ್ ಕುಮಾರ್
— ಶ್ರೀ ಸಿ. ಚೆನ್ನಿಗಪ್ಪ
— ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್
— ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)
— ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಸಚಿವರು)

ಆ) ಟಿ.ನರಸೀಪುರ, ಕೊಳ್ಳೇಗಾಲ, ಮುತ್ತತ್ತಿ, ಚಾಮರಾಜನಗರ ತಾಲ್ಲೂಕುಗಳಲ್ಲಿ ಆನೆಗಳಿಂದ ಆಗುತ್ತಿರುವ ಪ್ರಾಣ ಹಾನಿ ಬಗ್ಗೆ .... 953..956

— ಶ್ರೀ ಬಿ. ಸೋಮಶೇಖರ್
— ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು)

ಇ) ಗದಗ್ ಜಿಲ್ಲೆಗೆ ವೈದ್ಯಕೀಯ ಕಾಲೇಜು ಮಂಜೂರು ಮಾಡಿರುವ ಬಗ್ಗೆ .... 956..957

— ಶ್ರೀ ಎಸ್.ಎಸ್. ಪಾಟೀಲ್

ಋ) ಸದನದ ಸದಸ್ಯರ ಹಕ್ಕುಬಾಧ್ಯತೆಯನ್ನು ಮೇಲ್ಮನೆಯಲ್ಲಿ ಚರ್ಚೆ ಮಾಡಿರುವ ಬಗ್ಗೆ .... 957..958

— ಶ್ರೀ ಎಸ್.ಎಸ್. ಪಾಟಲ್

ಉ) 1997 ರಲ್ಲಿ ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುವ ಸಂದರ್ಭದಲ್ಲಿ ಆಗಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ .... 958..960

— ಶ್ರೀ ಎನ್. ಸಂಪಂಗಿ

ಊ) ಆಲಮಟ್ಟಿ ಜಲಾಶಯದ ಹಿನ್ನೀರಿನಿಂದುಂಟಾಗುವ ದುಷ್ಪರಿಣಾಮಗಳು .... 960..971

— ಶ್ರೀ ಪಿ.ಹೆಚ್. ಪೂಜಾರ್

— ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ನೀರಾವರಿ ನಾಯಕರು)

3. ಉನ್ನತ ಶಿಕ್ಷಣ ಸಚಿವರಿಂದ ವರದಿ ಮಂಡನೆ :

ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) ಜಂಟಿ ಸಲಹಾ ಸಮಿತಿ ವರದಿ ಮಂಡನೆ ಬಗ್ಗೆ .... 972..976

4. ಅಧ್ಯಕ್ಷರ ತೀರ್ಪು : .... 976..978

5. ವಿತ್ತೀಯ ಕಾರ್ಯಕಲಾಪಗಳು : .... 978..991

(1) ಬೇಡಿಕೆಗಳ ಮಂಡನೆ :

ಬೇಡಿಕೆ ಸಂಖ್ಯೆ (28, 4, 57, 58, 42, 14, 15, 16, 17, 18, 19, 20, 21, 22, 23, 24, 25, 5, 7, 6, 56, 8, 12, 13, 25, 29, 31, 33, 34, 35, 40, 41, 46, 44, 45, 47, 48, 49, 60)

— ಮಂಡಿಸಲಾಯಿತು.

6. ಗಮನ ಸೆಳೆವ ಸೂಚನೆ : .... 991..1011

ಹಾಸನ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿನ ಅವ್ಯವಹಾರಗಳ ಬಗ್ಗೆ.

— ಶ್ರೀ ಕೆ.ಹೆಚ್. ಹನುಮೇಗೌಡ

— ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು)

7. ವಿತ್ತೀಯ ಕಾರ್ಯಕಲಾಪಗಳು : .... 1011..1024

2000-2001ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ

— ಶ್ರೀ ಜಿ. ರಾಜುಗೌಡ

— ಶ್ರೀ ಎ. ಪಾಪಣ್ಣ

8. ಮಂತ್ರಿಗಳಿಂದ ಹೇಳಿಕೆ : .... 1024..1029

ಅ) ಚಿಂಚೋಳಿ ತಾಲ್ಲೂಕಿನಲ್ಲಿ ಆಗಿರತಕ್ಕಂತಹ ಶಿಶುಗಳ ಅಪಹರಣ ಕುರಿತು.

— ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಆ) ಪೀಣ್ಯದಲ್ಲಿ ಗಾರ್ಮೆಂಟ್ ವರ್ಕರ್ಸ್ ಧರಣಿ ಮಾಡಿದ ಸಂದರ್ಭದಲ್ಲಿ ನಡೆದಂತಹ ಘಟನೆ. .... 1029..1035

— ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಇ) ಹೆಣ್ಣುಮಕ್ಕಳ ಮಾರಾಟದ ವಿಚಾರ .... 1035..1038

— ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

— ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

9. ವಿತ್ತೀಯ ಕಾರ್ಯಕಲಾಪಗಳು : .... 1039..1056

2000-2001ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

— ಶ್ರೀ ಎಸ್.ಎಸ್. ಪಾಟೀಲ್

10. ಪ್ರಕಟಣೆ : 1056

- - -

ಗುರುವಾರ, ೨೯ನೇ ನವೆಂಬರ್ ೨೦೦೧

1. ಪ್ರಶ್ನೋತ್ತರ :

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು .... 1057..1112

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. .... 1112..1203

2. ಅಧ್ಯಕ್ಷರ ಅಪ್ಪಣೆ ಮೇರೆಗೆ :

(i) ರಾಜ್ಯದಲ್ಲಿ ತೆಂಗಿನ ಬೆಳೆಗೆ ನುಸಿ ರೋಗ ತಗಲಿರುವುದರಿಂದ ನೀರಾ ಇಳಿಸಲು ಅನುಮತಿ ಕೋರಿಕೆ .... 1203..1211

— ಶ್ರೀ ಡಿ.ವಿ. ಸದಾನಂದಗೌಡ
— ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್
— ಶ್ರೀ ಸಿ. ಗುರುಸ್ವಾಮಿ

(ii) ಗಂಗಾಕಲ್ಯಾಣ ಯೋಜನೆಯನ್ನು ಬೆಳಗಾಂ ವಿಭಾಗದಲ್ಲಿ ಅನುಷ್ಠಾನಗೊಳಿಸುವ ಬಗ್ಗೆ. 1211.1213

— ಶ್ರೀ ಎಸ್.ಎಸ್. ಪಾಟೀಲ್

3. ವಿತ್ತೀಯ ಕಾರ್ಯಕಲಾಪ :

2001-2002ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ .... 1213..1249

— ಶ್ರೀ ಎಸ್.ಎಸ್. ಪಾಟೀಲ್
— ಶ್ರೀ ಕೆ. ಜಯಪ್ರಕಾಶ್ ಹೆಗಡೆ
— ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್
— ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ
— ಶ್ರೀ ಎಂ.ಎಸ್. ಆತ್ಮಾನಂದ

4. ಪ್ರಕಟಣೆ :

ಡಬ್ಲ್ಯೂಟಿಓ ಕುರಿತಂತೆ ನಡೆಯಲಿರುವ ಚರ್ಚೆಯಲ್ಲಿ ಸದಸ್ಯರು ಭಾಗವಹಿಸಲು ಮನವಿ 1249

3. ವಿತ್ತೀಯ ಕಾರ್ಯಕಲಾಪ :

2001-2002ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು) .... 1249..1264

— ಶ್ರೀ ಎ. ರಾಮದಾಸ್.

ಶುಕ್ರವಾರ, ೨೩ನೇ ನವೆಂಬರ್ ೨೦೦೧

1. ಸಂತಾಪ ಸೂಚನೆ :

ಶ್ರೀ ಬೋಳ ರಘುರಾಮಶೆಟ್ಟಿರವರ ನಿಧನದ ಬಗ್ಗೆ 1265

2. ಅಧ್ಯಕ್ಷರ ಅಪ್ಪಣೆ ಮೇರೆಗೆ :

ಹೊಸಕೋಟೆ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಹಾಡು ಹಗಲಲ್ಲಿ ವಯೋವೃದ್ಧ ವಿಜ್ಞಾನಿ ಜಿ.ಎಸ್. ಚಂದ್ರಶೇಖರ್‌ರವರನ್ನು ಕೊಲೆ ಮಾಡಿರುವುದರ ಬಗ್ಗೆ .... 1265..1270

— ಶ್ರೀ ಪಿ.ಜಿ.ಆರ್. ಸಿಂಧ್ಯಾ
— ಶ್ರೀ ಎಸ್. ಸುರೇಶ್‌ಕುಮಾರ್
— ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

3. ವಿತ್ತೀಯ ಕಾರ್ಯಕಲಾಪ :

2001-2002ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ .... 1270..1303

— ಶ್ರೀ ಎ. ರಾಮದಾಸ್
— ಶ್ರೀ ಕೆ.ಬಿ. ಮಲ್ಲಿಕಾರ್ಜುನ

4. ಅಧ್ಯಕ್ಷರ ತೀರ್ಪು :

ಆಪಾದನೆ ಮಾಡುವುದಕ್ಕೆ ಮೊದಲು ಅನುಸರಿಸಬೇಕಾದ ನಿಯಮಗಳ ಬಗ್ಗೆ .... 1303..1305

5. ವಿತ್ತೀಯ ಕಾರ್ಯಕಲಾಪ :

2001-2002ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು) .... 1308..1341

— ಶ್ರೀ ಹೆಚ್. ಗೋಪಾಲ್ ಭಂಡಾರಿ
— ಶ್ರೀ ಎನ್. ಸಂಪಂಗಿ
— ಶ್ರೀಮತಿ ಅನುಸೂಯಮ್ಮ ನಟರಾಜ್
— ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು
— ಶ್ರೀ ಕೆ.ಎಂ. ಕೃಷ್ಣಮೂರ್ತಿ

6. ಅಧ್ಯಕ್ಷರ ಅಪ್ಪಣೆ ಮೇರೆಗೆ :

(ಅ) ಬರಪರಿಹಾರಕ್ಕಾಗಿ ಕೇಂದ್ರ ಸರ್ಕಾರದಿಂದ ತಜ್ಞರ ತಂಡ ರಾಜ್ಯಕ್ಕೆ ಬರುತ್ತಿರುವುದರ ಬಗ್ಗೆ .... 1342..1343

— ಶ್ರೀ ಡಿ.ವಿ. ಸದಾನಂದಗೌಡ
— ಶ್ರೀ ಪಿ.ಜಿ.ಆರ್. ಸಿಂಧ್ಯಾ
— ಶ್ರೀ ಸಿ. ಚನ್ನಿಗಪ್ಪ

(ಆ) ಹೊಸಕೋಟೆ ತಾಲ್ಲೂಕಿನಲ್ಲಿ ವಿಜ್ಞಾನಿಯ ಕೊಲೆ ಕುರಿತು (ಮುಂದು) .... 1343..1348

— ಶ್ರೀ ಬಿ.ಎನ್. ಬಚ್ಚೇಗೌಡ
— ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

7. ವಿತ್ತೀಯ ಕಾರ್ಯಕಲಾಪಗಳು :

2001-2002ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ (ಮುಂದು) .... 1348..1414

— ಶ್ರೀ ಬಿ.ಆರ್. ಯಾವಗಲ್
— ಶ್ರೀ ಗುಂಡಪ್ಪ ವಕೀಲ್
— ಶ್ರೀ ಬಿ. ಸೋಮಶೇಖರ್
— ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ
— ಶ್ರೀ ಸಿ.ಬಿ. ಸುರೇಶ್‌ಬಾಬು
— ಶ್ರೀ ಕರಡಿ ಸಂಗಣ್ಣ
— ಶ್ರೀ ಪಿ.ಹೆಚ್. ಪೂಜಾರ್
— ಶ್ರೀ ಸಿ. ಗುರುಸ್ವಾಮಿ
— ಶ್ರೀ ಹಂಪನಗೌಡ ಬಾದರ್ಲಿ

- - -

ಕರ್ನಾಟಕ ವಿಧಾನಸಭೆ

ಬುಧವಾರ 25ನೇ ಜುಲೈ 2001 ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಎಂ.ವಿ. ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

1. ಪ್ರಶ್ನೋತ್ತರ

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಕಮಲಾಪುರ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ

271(3368) ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಮಹಾಗಾವ್ ವಾಡಿ, ಮಹಾಗಾಂವ್ ತಾಂಡ, ಮರಗುತ್ತಿ, ಕಲಮೂಡ ಮುಂತಾದ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ;

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :—

ಅ) ಬಂದಿದೆ.

ಆ) 1. ಮಹಾಗಾಂವ್ ವಾಡಿ ಗ್ರಾಮಕ್ಕೆ ಕೊಳವೆ ನೀರು ಸರಬರಾಜು (ಪುನಶ್ಚೇತನ) ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

2. ಮಹಾಗಾಂವ್ ತಾಂಡಕ್ಕೆ ಕಿರು ನೀರು ಸರಬರಾಜು (ಹೆಚ್ಚಿಸುವುದು) ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

3. ಮರಗುತ್ತಿ ಗ್ರಾಮಕ್ಕೆ ಕೊಳವೆ ನೀರು ಸರಬರಾಜು (ಹೆಚ್ಚಿಸುವುದು) ಯೋಜನೆ ಪ್ರಗತಿಯಲ್ಲಿದೆ.

F-2-II

4. ಕಲಮೂಡ ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆಯನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಮೇಲ್ಕಂಡ ಯೋಜನೆಗಳಲ್ಲದೆ, ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಕಮಲಾಪುರ ವಿಧಾನ ಸಭೆ ಮತ ಕ್ಷೇತ್ರದಲ್ಲಿ 15 ಕೊಳವೆ ನೀರು ಸರಬರಾಜು ಯೋಜನೆಗಳು ಮತ್ತು 13 ಕಿರು ನೀರು ಸರಬರಾಜು ಯೋಜನೆಗಳನ್ನು ಒಟ್ಟು ರೂ.151.70 ಲಕ್ಷ ಅಂದಾಜು ಮೊತ್ತದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಶ್ರೀ ದೇವುನಾಯಕ್ ಬೆಳಮಗಿ :— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಒದಗಿಸಿರತಕ್ಕ ಉತ್ತರದಿಂದ ನನಗೆ ತೃಪ್ತಿ ಇದೆ. ಈ ಮಾತನ್ನು ಏತಕ್ಕೆ ಹೇಳುತ್ತೇನೆಂದರೆ, ನಾನು ಹೋದಸಲ ಸದನದಲ್ಲಿ ಇದೇ ಪ್ರಶ್ನೆಯನ್ನು ಹಾಕಿದ್ದೆ. ಆಗ, ಎಲ್ಲಾ ನಾಲ್ಕು ಕೆಲಸಗಳೂ ಮುಗಿದಿದೆ ಎಂದು ಉತ್ತರವನ್ನು ಕೊಟ್ಟಿದ್ದರು. ಈಗ ಕೊಟ್ಟಿರುವ ಉತ್ತರದಲ್ಲಿ, 'ಪ್ರಗತಿಯಲ್ಲಿದೆ' 'ಕೈಗೆತ್ತಿಕೊಳ್ಳಲಾಗಿದೆ' ಎಂದು ಹೇಳಿದ್ದಾರೆ. ಈ ಉತ್ತರ ಸಮರ್ಪಕವಾಗಿದೆ. ಹೋದಸಾರಿ, ನಾನು ಬಾವಿಯಲ್ಲಿದ್ದಾಗಲೂ ಸನ್ಮಾನ್ಯ ಸಚಿವರು ನನ್ನ ಮೇಲೆ ನಂಬಿಕೆ ಮಾಡಲಿಲ್ಲ. ಕೆಲಸ ಮುಗಿದಿದೆ ಎಂದು ಹೇಳಿದರು. ಅಂತಹ ಉತ್ತರವನ್ನೇ ನಿಮಗೆ ಕೊಟ್ಟರು. ಈ ರೀತಿ ತಪ್ಪು ಉತ್ತರವನ್ನು ಕೊಟ್ಟ ವ್ಯಕ್ತಿಗೆ ನೀವೇನು ಮಾಡುತ್ತೀರಿ? ನೀವು ಬೇಕಾದರೆ ಕಡತ ತೆಗೆದು ನೋಡಿ. ಈ ಕೆಲಸಗಳೆಲ್ಲಾ ಪೂರ್ಣ ಮುಗಿದಿದೆ ಎಂದು ಉತ್ತರ ಕೊಟ್ಟರು. ನಾನು ಬಾವಿಗೆ ಬಿದ್ದೆ, ಆದರೆ, ಆದರಿಂದ ನೆಮ್ಮದಿಯಾಗಲಿಲ್ಲ. ಈಗಿನ ಸಲ, ನಾಲ್ಕೂ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ, ಪ್ರಗತಿಯಲ್ಲಿದೆ ಎಂದು ಹೇಳುತ್ತಿದ್ದಾರೆ. ಇದು ಸಮರ್ಪಕವಾದ ಉತ್ತರ. ಇವತ್ತು ಕೆಲಸ ಚಾಲೂ ಆಗಿವೆ. ಹಿಂದೆ "ಅವರು ಕ್ರಮ ತೆಗೆದುಕೊಳ್ಳುತ್ತಾರೆ ನೀವು, ನಿಮ್ಮ ಜಾಗಕ್ಕೆ ಹೋಗಿ" ಎಂದು ತಾವು ಹೇಳಿದ್ದಕ್ಕೆ, ತಮ್ಮ ಮಾತಿಗೆ ಮಾನ್ಯತೆ ಕೊಟ್ಟು ನಾನು ಬಂದೆ. ಆದರೆ, ಈಗ ಕೆಲಸಗಳು ಚಾಲೂ ಆಗಿವೆ. ಆದರೆಸ ಮೊದಲಿನ ಸಲ ನಿಮಗೆ ತಪ್ಪು ಮಾಹಿತಿ ಕೊಟ್ಟರು. ಅಂತಹ ವ್ಯಕ್ತಿಗೆ ನೀವೇನು ಮಾಡುತ್ತೀರಿ? ನನ್ನ ಕ್ಷೇತ್ರ ಬಹಳ ಹಿಂದುಳಿದ ಕ್ಷೇತ್ರ. ಬರಗಾಲ ಪೀಡಿತವಾಗಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ಹೆಚ್ಚಿನ ಆದ್ಯತೆ ಕೊಟ್ಟು, ನನ್ನ ಕ್ಷೇತ್ರಕ್ಕೆ ಕುಡಿಯುವ ನೀರಿನ ಒತ್ತು ಕೊಟ್ಟು, ನಿಮ್ಮ ಅಧಿಕಾರಿಗಳಿಗೆ ಆದೇಶ ಕೊಟ್ಟು ಶೀಘ್ರದಲ್ಲಿಯೇ ಕೆಲಸ ಮಾಡಿಸಬೇಕೆಂದು ಅವರಿಗೂ ವಿನಂತಿ ಮಾಡಿಕೊಳ್ಳುತ್ತೇನೆ. ಒಂದು ಮಾತು, ಇಂತಹತಪ್ಪು ಮಾಹಿತಿ ಕೊಟ್ಟವರಿಗೆ ಏನು ಮಾಡುತ್ತೀರಿ ಎನ್ನುವುದನ್ನು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ :— ಸನ್ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ಹಿಂದಿನ ಸಲ ಇದೇ ಪ್ರಶ್ನೆಯನ್ನು ಕೇಳಿದಾಗ ಇವೆಲ್ಲಾ ಕಾಮಗಾರಿಗಳೂ ಮುಗಿದುಬಿಟ್ಟಿವೆಯೆಂದು ಉತ್ತರ ಕೊಟ್ಟಿದ್ದರು.

2-A-T1

ಇವತ್ತಿನ ಉತ್ತರದಲ್ಲಿ ಈಗ ಪ್ರಾರಂಭ ಮಾಡಿದ್ದೇವೆಂದು ಹೇಳಲಾಗಿದೆ. ಅಂದರೆ, ಈ ರೀತಿ ತಪ್ಪು ಮಾಹಿತಿಯನ್ನು ಕೊಡುವಂಥ ಅಧಿಕಾರಿಗಳಿಗೆ ಏನಾದರೊಂದು ಶಿಕ್ಷೆ ಕೊಡುವಂತಾದ್ದು ಮತ್ತು ಶಿಸ್ತಿನ ಕ್ರಮ ಕೈಗೊಳ್ಳುವಂತಾದ್ದು ಆಗಬೇಕು. ಇಲ್ಲದೇ ಹೋದರೆ ಸದನಕ್ಕೆ ಇದೇ ರೀತಿ ನಿಮ್ಮ ಮುಖಾಂತರ ತಪ್ಪು ಮಾಹಿತಿಯನ್ನು ಕೊಡುವಂತಾದ್ದು ಆಗುತ್ತದೆ. ಅದರ ಬಗ್ಗೆ ಕ್ರಮ ಕೈಗೊಳ್ಳುವಂತಾದ್ದು ಆಗಬೇಕು.

ಶ್ರೀ ಎಂ.ವೈ. ಘೋರ್ಪಡೆ :— ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಎಷ್ಟು ವಿವರಗಳನ್ನು ಕೊಡಲಿಕ್ಕೆ ಸಾಧ್ಯ, ಆ ವಿವರಗಳನ್ನು ಕೊಡುವ ಪ್ರಯತ್ನ ನಾನು ಮಾಡುತ್ತಲೇ ಬಂದಿದ್ದೇನೆ. ಈ ಪ್ರಶ್ನೆ ಆಳಂದ ಮತ್ತು ಗುಲ್ಬರ್ಗಾ ತಾಲ್ಲೂಕು ಅಂದರೆ ಕಮಲಾಪುರ ಅಸೆಂಬ್ಲಿ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು. ಇದರಲ್ಲಿ 158 ಹ್ಯಾಬಿಟೇಷನ್ಸ್ ಇದೆ. ಇದರಲ್ಲಿ ಆಳಂದ್‌ನಲ್ಲಿ 86, ಗುಲ್ಬರ್ಗಾ ತಾಲ್ಲೂಕಿನಲ್ಲಿ 92, ಮತ್ತೆ ನಾಲ್ಕೈದು ಕಡೆ ಎಲ್ಲಿ ತೊಂದರೆ ಇತ್ತು, ಆ ಹಳ್ಳಿಯ ವಿವರಗಳು ಕೂಡ ಇಲ್ಲಿದೆ. ಯಾವ ಯಾವ ಮಟ್ಟಕ್ಕೆ ಯಾವ ಕೆಲಸ ಬಂದಿದೆ ಎಂಬುದನ್ನೂ ಹೇಳಿದ್ದೇನೆ. ಅದಲ್ಲದೆ, 15 ಪೈಪ್ ವಾಟರ್ ಸಪ್ಲೈ ಮತ್ತು 13 ಮಿನಿ ವಾಟರ್ ಸಪ್ಲೈ ಅಂಡರ್ ಇಂಪ್ಲಿಮೆಂಟೇಷನ್ ಎಂದು ಇದೆ. ಅಂದರೆ, ಬೇರೆ ಬೇರೆ ಹಂತದಲ್ಲಿ ಇದೆ. ಯಾವ ಕೆಲಸ ಯಾವ ಹಂತದಲ್ಲಿದೆ, ಯಾವುದು ಪೂರ್ತಿಯಾಗಿದೆ, ಯಾವುದು ಅರ್ಧ ಆಗಿದೆ, ಎಲ್ಲಿ ಸೋರ್ಸ್ ಬತ್ತಿ ಹೋಗಿದೆ ಎಂದು. ಈ ಕೆಲಸದ ಬಗ್ಗೆ ಎಲ್ಲಾ ವಿವರಗಳೂ, ನನ್ನ ಕಡೆಗೆ ಇದೆ. ಇದರಲ್ಲಿ ಮುಚ್ಚುಮರೆ ಏನಿಲ್ಲ. ಇದರಲ್ಲಿ ನಾವು 151 ಲಕ್ಷ ರೂ. ಖರ್ಚು ಮಾಡುವವರಿದ್ದೇವೆ. ಇವೆಲ್ಲಾ ಕೆಲಸಗಳು ತಮ್ಮ ತಮ್ಮ ಕ್ಷೇತ್ರದಲ್ಲಿ ನಡೆಯುತ್ತಾ ಇದೆ ಎಂದು ನನ್ನ ಕಡೆ ಮಾಹಿತಿ ಇದೆ. ಅದನ್ನು ತಮಗೆ ಕೂಡ ಕೊಟ್ಟಿದ್ದೇನೆ. ಇದಲ್ಲದೆ, ಇನ್ನೇನಾದರೂ ಮಾಡಬೇಕೆಂದು ತಮ್ಮ ಅಭಿಪ್ರಾಯವಿದ್ದರೆ, ಅದನ್ನು ನನಗೆ ಹೇಳಿದರೆ, ಅದನ್ನೂ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :— ಈಗ ಕೊಟ್ಟಿರುವ ಉತ್ತರ ಸರಿ ಇದೆ. ತಪ್ಪು ಇಲ್ಲ. ಆದರೆ, ಹಿಂದಿನ ಅಧಿವೇಶನದಲ್ಲಿ ಇದೇ ಪ್ರಶ್ನೆ ಕೇಳಿದಾಗ, ಇವೆಲ್ಲಾ ಕಾಮಗಾರಿಗಳೂ ಮುಗಿದು ಹೋಗಿದೆ ಎಂದು ಉತ್ತರ ಕೊಟ್ಟಿದ್ದರು. ಅದನ್ನು ಹೇಳುತ್ತಾ ಇದ್ದೇನೆ. ಆ ರೀತಿ ಮತ್ತು ಮಾಹಿತಿ ಕೊಡುವಂತಾದ್ದು ಆಗಬಾರದು ಅಂತಹವರ ಮೇಲೆ ಕ್ರಮ ಕೈಗೊಳ್ಳಿ ಎಂದು ಹೇಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ :— ಆಗ ಏನು ಉತ್ತರ ಕೊಟ್ಟಿದ್ದಾರೆಂಬುದು ನನ್ನ ನೆನಪಿನಲ್ಲಿ ಇಲ್ಲ ಆದರೆ, ತಪ್ಪು ಮಾಹಿತಿ ಕೊಡುವಂಥ ಪ್ರಯತ್ನವನ್ನು ಮಾಡುವುದಿಲ್ಲ. ನನಗೆ ಗೊತ್ತಾದರೆ, ಆ ರೀತಿ ತಪ್ಪು ಮಾಡಲಿಕ್ಕೆ ಬಿಡುವುದೇ ಇಲ್ಲ.

ಗ್ರಾಮ ಪಂಚಾಯಿತಿಗಳಿಗೆ ಬಂದಿರುವ ಅನುದಾನವನ್ನು ಕೆ.ಪಿ.ಟಿ.ಸಿ.ಎಲ್. ಬಳಸಿಕೊಂಡಿರುವುದು.

272 (3333) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) ತುರುವೇಕೆರೆ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಸರ್ಕಾರವು ಗ್ರಾಮ ಪಂಚಾಯಿತಿಗಳಿಗೆ ಕೊಡುತ್ತಿರುವ ಅನುದಾನದಲ್ಲಿ ಕೆ.ಪಿ.ಟಿ.ಸಿ.ಎಲ್.ಗೆ ಬಳಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಅನುದಾನ ಕಡಿಮೆ ಆಗಿರುವುದರಿಂದ ಗ್ರಾಮಗಳ ಸುಧಾರಣೆ ಆಗದಿರುವುದು ಹಾಗೂ ಬಿಲ್ ಕಲೆಕ್ಟರ್ ಮತ್ತು ವಾಟರ್‌ಮೆನ್‌ಗಳಿಗೆ ಸಂಬಳ ನೀಡಿರುವುದು ನಿಜವೆ;

ಇ. ಹಾಗಿದ್ದಲ್ಲಿ, ಈ ಬಾರಿ ಅನುದಾನ ಜಾಸ್ತಿ ಮಾಡಲಾಗುವುದೆ;

ಈ. ಕೆ.ಪಿ.ಟಿ.ಸಿ.ಎಲ್.ನ ಬಿಲ್ ಪಾವತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

ಶ್ರೀ ಎಂ.ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :—

ಅ. ಹೌದು

ಆ. ನೀರುಗಂಟಿ ಮತ್ತು ಬಿಲ್ ಕಲೆಕ್ಟರ್‌ರವರುಗಳು ಗ್ರಾಮ ಪಂಚಾಯಿತಿ ನೌಕರರಾಗಿದ್ದು, ಇವರ ವೇತನವನ್ನು ಪಂಚಾಯಿತಿ ವಸೂಲಿ ಮಾಡುವ ಕಂದಾಯಗಳಿಂದ ಭರಿಸಲಾಗುತ್ತಿದೆ. ಸಿಬ್ಬಂದಿ ವೆಚ್ಚವನ್ನು ಗ್ರಾಮ ಪಂಚಾಯತಿಗಳಿಗೆ ನೀಡಲಾಗುವ ಅನುದಾನ ಮತ್ತು ಅಭಿವೃದ್ಧಿ ಅನುದಾನಗಳಿಂದ (ಮುಕ್ತ ಅನುದಾನ) ಭರಿಸಲು ಅವಕಾಶವಿರುವುದಿಲ್ಲ.

ಇ. ೨೦೦೧-೨೦೦೨ರ ಸಾಲಿನಿಂದ ಸರ್ಕಾರವು ಗ್ರಾಮ ಪಂಚಾಯತ್‌ಗಳಿಗೆ ಶಾಸನಬದ್ಧ ಅನುದಾನವಾದ ರೂ.೨.೦೦ ಲಕ್ಷದ ಜೊತೆಗೆ ಮುಕ್ತ ಅನುದಾನ (ಅಭಿವೃದ್ಧಿ ಅನುದಾನ) ಹಾಗು ರೂ. ೧.೫೦ ಲಕ್ಷಗಳನ್ನು ನೀಡಲಾಗುತ್ತಿದೆ.

ಈ. ಗ್ರಾಮ ಪಂಚಾಯತ್‌ಗಳು ಬಳಕೆದಾರರಿಂದ ಹಣ ವಸೂಲಿ ಮಾಡಿ ಬಿಲ್ ಪಾವತಿಸಬೇಕಾಗುತ್ತದೆ. ಬಾಕಿ ಹಣವನ್ನು ಒದಗಿಸುವ ಅನುದಾನವಾದ ರೂ. ೨.೦೦ ಲಕ್ಷಗಳಲ್ಲಿ ಶೇಕಡಾ ೫೦ಕ್ಕಿಂತ ಹೆಚ್ಚಿಲ್ಲದಂತೆ ಹೊಂದಾಣಿಕೆ ಮಾಡಿಕೊಂಡು ಬಾಕಿಯನ್ನು ಪಾವತಿಸಬೇಕಾಗುತ್ತದೆ. ಇನ್ನು ಮುಂದೆ ವಿದ್ಯುತ್ ಬಿಲ್ಲನ್ನು ಪಂಚಾಯತ್‌ಗಳೇ ಪಾವತಿಸುವ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ :— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾ, ಗ್ರಾಮ ಪಂಚಾಯ್ತಿಗಳು ಬಳಕೆದಾರರಿಂದ ಹಣ ವಸೂಲಿ ಮಾಡಿ ಕೆ.ಪಿ.ಟಿ.ಸಿ.ಎಲ್‌ನ ಬಿಲ್ ಪಾವತಿ ಮಾಡಬೇಕಾಗುತ್ತದೆಂದು ಹೇಳಿದ್ದಾರೆ. ಆದರೆ, ಹೋದವರ್ಷ ಕೆ.ಇ.ಬಿ. ಬಿಲ್ ಬಂದಂತಹ ಸಂದರ್ಭದಲ್ಲಿ ತುಮಕೂರು ಜಿಲ್ಲಾ ಪಂಚಾಯ್ತಿಯಲ್ಲಿ, 10ನೇ ಹಣಕಾಸಿನ ಆಯೋಗದಲ್ಲಿ ಕೊಡತಕ್ಕ ಹಣದಲ್ಲಿ ಪೂರ್ಣವಾಗಿ ಕಟ್ ಮಾಡಿರತಕ್ಕಂತಾದ್ದು. ಗ್ರಾಮ ಪಂಚಾಯ್ತಿಗಳು ಬಳಕೆದಾರರಿಂದ ಹಣ ವಸೂಲಿ ಮಾಡಿ ಕೆ.ಪಿ.ಟಿ.ಸಿ.ಎಲ್‌ಗೆ ಪಾವತಿ ಮಾಡಬೇಕಾಗುತ್ತದೆಂಬ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ, ಸರ್ಕಾರ ಕೊಡತಕ್ಕ ಅನುದಾನದಲ್ಲಿ ಕಟ್ ಮಾಡಿ, ಪೂರ್ಣವಾಗಿ ಇಡೀ ಜಿಲ್ಲೆಯ ಹಣವನ್ನು 10ನೇ ಹಣಕಾಸಿನ ಆಯೋಗದ ದುಡ್ಡಿನಲ್ಲಿ ಕಟ್ ಮಾಡಿರತಕ್ಕಂತಾದ್ದು. ಈ ರೀತಿ ಮಾಡುವುದಕ್ಕಾಗುತ್ತದೆಯೇ ಎಂಬುದು ನನ್ನ ಪ್ರಶ್ನೆ.

ಶ್ರೀ ಎಂ.ವೈ. ಘೋರ್ಪಡೆ :— ಮಾನ್ಯ ಅಧ್ಯಕ್ಷರೇ, 1999ನೇ ಜನವರಿಯಲ್ಲಿ ಒಂದು ಪ್ರಮುಖವಾದ ತೀರ್ಮಾನವನ್ನು ಈ ಸರ್ಕಾರ ಮಾಡಿತು. ಅದೇನೆಂದರೆ, ಬಾಕಿ ಏನಿದೆ, ಅದರಲ್ಲಿ ಬಡ್ಡಿಯನ್ನೂ ಸಂಪೂರ್ಣವಾಗಿ ವಜಾ ಮಾಡಬೇಕು. ಮತ್ತೆ ಬೇರೆ ಹಣ ಏನಿದೆ, ಅದರಲ್ಲಿ ಅರ್ಧ ವಜಾ ಮಾಡಬೇಕೆಂಬ ತೀರ್ಮಾನವನ್ನು ಜನವರಿ 1999ರಲ್ಲಿ ತೆಗೆದುಕೊಂಡಿತು. ಅನಂತರ ಅಕ್ಟೋಬರ್ 2000 ರಲ್ಲಿ ಈ ಬಾಕಿಗೋಸ್ಕರ, 10ನೇ ಹಣಕಾಸಿನ ಆಯೋಗದಿಂದ ಏನು ಹಣ ಬರುತ್ತದೆ, ಅದನ್ನು ಉಪಯೋಗಿಸಬಹುದು ಎಂದು ಆದೇಶ ಕೊಟ್ಟೆವು. ಅಂದರೆ, ಇಷ್ಟು ಮಾಡಿದರೂ ಕೂಡ ಈ 50 ಪರ್ಸೆಂಟ್ ಏನು ಕೊಡಬೇಕು, ಅದು ಕೊಡುವುದಕ್ಕೆ ಆಗದಿದ್ದರೆ ಈ ಎರಡು ಲಕ್ಷ ಅನುದಾನ ನಾವೇನು ಕೊಡುತ್ತೇವೆ ಅದರಲ್ಲಿ ಒಂದು ಲಕ್ಷದವರೆಗೂ ಅವರು ಉಪಯೋಗಿಸಬಹುದೆಂದು ತೀರ್ಮಾನ ಕೊಟ್ಟಿದ್ದೇವೆ. ಅದಕ್ಕಿಂತ ಜಾಸ್ತಿ ಇರುವುದಕ್ಕೆ ಸಾಧ್ಯವಿಲ್ಲವೆಂದು ನಮ್ಮ ಅಭಿಪ್ರಾಯ ಇದೆ. ಆದರೆ, ಕರೆಂಟ್ ಬಿಲ್ಸ್ ಏನಿದೆ, ಅದು ಅವರು ವಸೂಲಿ ಮಾಡಲೇಬೇಕು. ಆ ಟ್ಯಾಕ್ಸ್ ಅವರು ಹಾಕಲೇಬೇಕು. ನಾವು ಈ ಕರೆಂಟ್ ಬಿಲ್ಸನ್ನು ವಜಾ ಮಾಡುವುದಕ್ಕೆ ಆಗುವುದಿಲ್ಲ. ಹಿಂದಿನಿಂದ ಬಂದಿರತಕ್ಕ ಬಾಕಿ ಏನಿದೆ, ಅದರಲ್ಲಿ ಬಡ್ಡಿ ತೆಗೆದ ನಂತರ ಮತ್ತೆ ಇದರಲ್ಲೂ 50 ಬಾಕಿಯನ್ನು ವಜಾ ಮಾಡಿದ ನಂತರ ಬಾಕಿ ಏನು ಉಳಿಯುತ್ತದೆ ಅವರು 10ನೇ ಹಣಕಾಸಿನ ಆಯೋಗದಿಂದ ಕೊಡಬಹುದು ಅಥವಾ ಅದೂ ಸಾಲದೇ ಹೋದರೆ ಒಂದು ಲಕ್ಷದವರೆಗೂ ಅನುದಾನದಿಂದ ಕೊಡಬೇಕೆಂದು ಹೇಳಿದ್ದೇವೆ. ಕರೆಂಟ್ ಹಣ ಏನಿದೆ, ಅವರು ಸ್ವಂತ ಟ್ಯಾಕ್ಸ್ ಹಾಕಿ ಕೊಡಬೇಕಾಗುತ್ತದೆ. ಇದು ನಾವೆಲ್ಲರೂ ಒಪ್ಪುವುದು ಹಿತ. ಏಕೆಂದರೆ, ಮುಂದೆ ಸಾಕಷ್ಟು ವರ್ಲ್ಡ್ ಬ್ಯಾಂಕ್ ಪ್ರಾಜೆಕ್ಟ್ಸ್ ಬರುತ್ತವೆ. ಅಲ್ಲಿ ಫಲಾನುಭವಿಗಳಿಂದ ಕರೆಂಟ್ ಬಿಲ್ಸ್ ವಸೂಲಿ ಮಾಡಬೇಕೆಂದು ಕಡ್ಡಾಯವಾಗಿ ಇದೆ. ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಇತ್ತೀಚೆಗೆ ನಾವೇನು

ಒಂದು ಲಕ್ಷ ಇವತ್ತು ಸಾವಿರ ಸ್ಪೆಷಲ್ ಗ್ರಾಂಟ್ ಕೊಟ್ಟಿದ್ದೇವೆ, ಅದೂ ಕೂಡ ಬಿಡುಗಡೆಯಾಗಿದೆ. ಆದರೆ, ಅದನ್ನು ಇದಕ್ಕೋಸ್ಕರ ಉಪಯೋಗ ಮಾಡಲಿಕ್ಕೆ ಬರುವುದಿಲ್ಲ. ಅದು ಅಸೆಟ್ಸ್ ಕ್ರಿಯೇಷನ್‌ಗೆ ಮಾತ್ರ ಬಿಡುಗಡೆ ಮಾಡಬೇಕು. ಕರೆಂಟ್ ಅರಿಯರ್ಸ್ ಕಟ್ಟಲಿಕ್ಕೆ ನಾವು ಕೊಟ್ಟಿರತಕ್ಕ ಅನುದಾನ ಉಪಯೋಗ ಬರುವುದಿಲ್ಲ. ಒಂದು ಮಾತು ಹೇಳಬೇಕಾದರೆ, ಹೆಚ್ಚು ಕಡಿಮೆ ಏಳು ಲಕ್ಷ ಐವತ್ತು ಸಾವಿರ ರೂಪಾಯಿಗಳನ್ನು ನಾವು ಪ್ರತಿಯೊಂದು ಪಂಚಾಯಿತಿಗೆ ಕೊಡುತ್ತಾ ಇದ್ದೇವೆ. ಇದರಲ್ಲಿ ಎರಡ ಲಕ್ಷ ಸ್ಟ್ಯಾಚುಟರಿ ಗ್ರಾಂಟ್. ಇತ್ತೀಚೆಗೆ ಬಜೆಟ್‌ನಲ್ಲಿ ಒಂದೂವರೆ ಲಕ್ಷ ಹೇಳಿರತಕ್ಕಂತಾದ್ದು. ಆಮೇಲೆ ಜವಹರ ಗ್ರಾಮ ಸಮೃದ್ಧಿ ಯೋಜನೆಯಲ್ಲಿ ಎರಡು ಲಕ್ಷ. ಫೈನಾನ್ಸ್ ಕಮೀಷನ್ ಹಣ ಒಂದು ಲಕ್ಷ. ಅವರ ಸ್ವಂತ ರಿಸೋರ್ಸ್‌ಸ್ ಇನ್ನೂ ಒಂದು ಲಕ್ಷ. ಹೀಗಾಗಿ ಏಳೂವರೆ ಲಕ್ಷ ರೂಪಾಯಿ ಬೇರೆ ಬೇರೆ ಕೆಲಸಕ್ಕೆ, ಡೆವಲಪ್‌ಮೆಂಟ್ ಕೆಲಸಕ್ಕೆ ಖರ್ಚು ಮಾಡಲಿಕ್ಕೆ ಇದೆ. ಆದರೆ, ಇದರಲ್ಲಿ ಬಾಕಿಯನ್ನು ಕೊಡಲಿಕ್ಕೆ, ಈ ಹಣ ಉಪಯೋಗಿಸಬಾರದು ಎಂದು ಇದೆ. ಅದರಲ್ಲಿ ಎರಡು ಲಕ್ಷದಲ್ಲಿ, ಒಂದು ಲಕ್ಷ ಮಾತ್ರ ಉಪಯೋಗಿಸಬೇಕೆಂದು ಹೋದ ವರ್ಷ ಹೇಳಿದ್ದೇವೆ. ಇದರಿಂದ, ಈ ಬಾಕಿ ತೊಂದರೆ ಏನಿತ್ತು ಇದನ್ನು ನಿವಾರಿಸುವುದಕ್ಕೆ ಏನು ಮಾಡಲಿಕ್ಕೆ ಸಾಧ್ಯವೋ ಅಷ್ಟನ್ನು ಮಾಡಿದ್ದೇವೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ :— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಕೊಡತಕ್ಕ ಅನುದಾನದಲ್ಲಿ ಕಟ್ ಮಾಡುವುದಕ್ಕಾಗುವುದಿಲ್ಲವೆಂಬ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲಿ ಬಳಕೆದಾರರಿಂದ ಹಣ ವಸೂಲಿ ಮಾಡಬೇಕೆನ್ನುವಂಥಾದ್ದು. ಇಲ್ಲ ನಾನು ಕೇಳಿರತಕ್ಕ ಒಂದು ಪ್ರಶ್ನೆಯಲ್ಲಿ, ಇವತ್ತೇನು ಸರ್ಕಾರ ಅಧಿಕಾರ ವಿಕೇಂದ್ರೀಕರಣ ಎನ್ನುವ ಮಾತನ್ನು ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಹೇಳಿರತಕ್ಕ ವ್ಯವಸ್ಥೆಯಲ್ಲಿ ಇವತ್ತು ಅಸಲಿಗಿಂತ ಬಡ್ಡಿಯೇ ಜಾಸ್ತಿಯಾಗಿರತಕ್ಕಂತಾದ್ದು ಇಲ್ಲಿ ಬಂದಿರತಕ್ಕ ಪ್ರಸ್ತಾವ. ಇವತ್ತು ಕೆ.ಇ.ಬಿ ನಲ್ಲಿ ಮೀಟರ್‌ಗಳನ್ನು ಹಾಕಿಲ್ಲ. ಅದು ಬೀದಿ ದೀಪ ಇರಬಹುದು, ಕುಡಿಯುವ ನೀರಿನ ಯೋಜನೆ ಇರಬಹುದು. ಈ ರೀತಿಯಾದಂತಹ ಯಾವುದಕ್ಕೂ ಮೀಟರ್ ಇಲ್ಲ. ಮತ್ತೆ ಬಲ್ಬ್ ಮತ್ತು ಟ್ಯೂಬ್‌ಗಳು ಹೋದಂಥ ಸಂದರ್ಭದಲ್ಲಿ ಪ್ರತಿ ದಿವಸಕ್ಕೆ ಇಷ್ಟು ಎಂದು ಹಣ ನಿಗದಿ ಮಾಡಿ, ಅದನ್ನು ವಸೂಲಿ ಮಾಡತಕ್ಕಂತಾದ್ದು. ಆ ದೃಷ್ಟಿಯಿಂದ ಇದಕ್ಕೆ ಏನಾದರೂ ಕಡಿವಾಣ ಹಾಕುವುದಕ್ಕೆ ಸಾಧ್ಯವೇ ಎಂಬ ಮಾತನ್ನು ಮಾನ್ಯ ಮಂತ್ರಿಗಳಲ್ಲಿ ಕೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿದರು ಇಲ್ಲಿ ತಾವು ಎಲೆಕ್ಟ್ರಿಸಿಟಿ ಬಿಲ್ ಸಲುವಾಗಿ ಒಂದು ಲಕ್ಷ ರೂಪಾಯಿ ಕಡಿತ ಮಾಡಿದ್ದೀರಿ ಎಂದು.

ಶ್ರೀ ಎಂ.ವೈ. ಘೋರ್ಪಡೆ :— ಕಡಿತ ಅಲ್ಲ. ಅವರು ಖರ್ಚು ಮಾಡಿದ್ದು. ಅವಶ್ಯಕತೆ ಇದ್ದರೆ ಒಂದು ಲಕ್ಷದವರೆಗೂ ಉಪಯೋಗಿಸಬಹುದು ಎಂದು ಹೋದ ವರ್ಷ ಹೇಳಿದ್ದು.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೇ, ತಾವು ಮೊದಲು ಎರಡು ಲಕ್ಷ ರೂ. ಅನುದಾನ ಮಾಡಿದಿರಲ್ಲಾ, ಅದರಲ್ಲಿ ಮೇಜರ್ ಒಂದು ಲಕ್ಷದಿಂದ ಒಂದೂವರೆ ಲಕ್ಷದವರೆಗೂ ಕೆ ಪಿ ಟಿ ಸಿ ಎಲ್‌ನವರು ಹಣ ಕಟ್ ಮಾಡಿಕೊಂಡಿದ್ದಾರೆ. ಇನ್ನುಳಿದ 50 ಸಾವಿರ ರೂ. ಕಳುಹಿಸಿದ್ದಾರೆ. ಆ ಗ್ರಾಮ ಪಂಚಾಯಿತಿಗೆ 50 ಸಾವಿರ ರೂ. ಅಷ್ಟೇ ಮುಟ್ಟಿದೆ. ಮಾನ್ಯ ಮುಖ್ಯ ಮಂತ್ರಿಗಳು ಅಧಿಕಾರ ತೆಗೆದುಕೊಂಡ ಒಂದೂವರೆ ವರ್ಷದೊಳಗೆ ಇಲ್ಲಿಯವರೆಗೂ ಅನುದಾನ ಎಂದು ಹೇಳಿ, ಅಷ್ಟು ಹಣ ಬಂದಿಲ್ಲ ಈ ಕೆ ಪಿ ಟಿ ಸಿ ಎಲ್‌ಗೆ 50 ಪರ್ಸೆಂಟ್ ಕಡಿತಗಿಂತ ಜಾಸ್ತಿ ಕಡಿತ ಆಗಿದೆ. ಇದು ತಪ್ಪಬೇಕು. ಬಾಕಿ ಹಣದಲ್ಲಿ. ಆಮೇಲೆ ಇನ್ನೊಂದು ತಾವು ಬಳ್ಳಾರಿ ಜಿಲ್ಲೆಯಲ್ಲಿ ಒಂದು ಘೋಷಣೆ ಮಾಡಿದಿರಿ. ಇಲ್ಲಿಯವರೆಗೂ ನಾವು ಗ್ರಾಮ ಪಂಚಾಯಿತಿಗಳಿಗೆ ಮೂರುವರೆ ಲಕ್ಷ ರೂಪಾಯಿಗಳನ್ನು ಬಜೆಟ್‌ನಲ್ಲಿ ಏನು ಅನುದಾನ ಘೋಷಣೆ ಮಾಡಿದ್ದೇವೆ ಅದನ್ನು ಏಳು ಲಕ್ಷಕ್ಕೆ ಹೆಚ್ಚು ಮಾಡುತ್ತೇವೆ ಎನ್ನತಕ್ಕಂಥಾದ್ದು. ನಾನು ಬಳ್ಳಾರಿ ಜಿಲ್ಲೆಯಲ್ಲಿ ಚುನಾವಣಾ ಪ್ರಚಾರದಲ್ಲಿ ಒಂದು ಹೇಳಿಕೆಯನ್ನು ನೋಡಿದ್ದೇನೆ. ಇದು ಸರಿಯೋ ತಪ್ಪೋ ಎನ್ನುವಂತಾದ್ದನ್ನು ಹೇಳಬೇಕು.

ಶ್ರೀ ಎಂ.ವೈ. ಘೋರ್ಪಡೆ :— ಅದು ಸರಿಯಲ್ಲ. ಏಳು ಲಕ್ಷ ರೂ. ಎಂದು ಲೆಕ್ಕ ಹೇಳಿದ್ದು ಸರಿ. ಅದು ಬೇರೆ ಬೇರೆ ರೀತಿಯಲ್ಲಿ ನಾವು ಕೊಡುವಂತಹ ಹಣ. ಹೆಚ್ಚು ಕಡಿಮೆ 7-8 ಲಕ್ಷ ರೂಪಾಯಿಗಳಾಗುತ್ತದೆ. ಈ ಮಾತನ್ನು ಹೇಳಿದ್ದೇನೆ. ಅನುದಾನವನ್ನು ಏಳು ಲಕ್ಷ ರೂ.ಗಳಿಗೆ ಮಾಡುತ್ತೇನೆ ಎನ್ನುವ ಮಾತನ್ನು ಹೇಳಿಲ್ಲ. ಪತ್ರಿಕೆಯಲ್ಲಿ ಬರೆಯುತ್ತಾರೆ, ಪಾಪ. ಎರಡು ಲಕ್ಷ ರೂ. ಇದ್ದುದ್ದನ್ನು ಮೂರೂವರೆ ಲಕ್ಷ ರೂ.ಗಳಿಗೆ ಹೆಚ್ಚು ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ :— ಅನುದಾನದಲ್ಲಿ ಕರೆಂಟ್‌ದ್ದು ಎಷ್ಟು ಮುರಿದುಕೊಳ್ಳುತ್ತೀರಿ ಎನ್ನುವುದನ್ನು ನಿರ್ದಿಷ್ಟವಾಗಿ ಹೇಳಿ. ಅದರ ಬಗ್ಗೆ ಒಂದು ಗೈಡ್‌ಲೈನ್ಸ್ ಇಡಿ.

ಶ್ರೀ ಎಂ.ವೈ. ಘೋರ್ಪಡೆ :— ಮಾನ್ಯ ಅಧ್ಯಕ್ಷರೇ, ಮೊದಲು ಏನು ಇತ್ತು ಅದರಲ್ಲಿ ಇಂಟ್ರೆಸ್ಟ್ ತೆಗೆದು ಹಾಕಿದ್ದೇವೆ. ಮತ್ತು 50 ಪರ್ಸೆಂಟ್ ಬಾಕಿಯನ್ನು ಕಡಿಮೆ ಮಾಡಿದ್ದೇವೆ. ಉಳಿದಿದ್ದು 50 ಪರ್ಸೆಂಟ್ ಏನು ಇದೆ ಅದನ್ನು ಕಟ್ಟಲಿಕ್ಕೆ 10ನೇ ಹಣಕಾಸಿನ ಆಯೋಗದ ಹಣ ಉಪಯೋಗಿಸಬಹುದು ಎಂದು ಹೇಳಿದ್ದೇವೆ. ಅದೂ ಸಾಲದೇ ಬಂದರೆ ಈ ಎರಡು ಲಕ್ಷದಲ್ಲಿ ಒಂದು ಲಕ್ಷದವರೆಗೂ ಉಪಯೋಗಿಸಬಹುದು

ಎಂದು ಹೋದ ವರ್ಷ ಹೇಳಿದ್ದು. ಇದನ್ನು ಉಪಯೋಗಿಸಿದರೆ ಬಾಕಿ ಯಾವುದಾದರೂ ಇರಬಹುದು. ಹೀಗಿರುವಾಗ ಅವರು ಎರಡು ಲಕ್ಷ ರೂ. ಕಟ್ ಮಾಡುವುದಕ್ಕೆ ಅವಕಾಶ ಇಲ್ಲ. ಅಂತಹ ಉದಾಹರಣೆಗಳು ಇದ್ದರೆ ತಾವು ನನ್ನ ಗಮನಕ್ಕೆ ತಂದರೆ ನಾನು ನೋಡುತ್ತೇನೆ. ಆದರೆ ಕರೆಂಟ್ ಬಿಲ್ಸ್ ಏನು ಇದೆ ಅದನ್ನು ವಸೂಲಿ ಮಾಡಬೇಕು.

ಶ್ರೀ ಅರಗ ಜ್ಞಾನೇಂದ್ರ :— ಪಂಚಾಯಿತಿ ಲೈಟ್ ಬಿಲ್‌ಗಳನ್ನು ಜಿಲ್ಲಾ ಪಂಚಾಯಿತಿಯವರು ಕಟಾವು ಮಾಡಿ ಕೆಪಿಟಿಸಿಎಲ್‌ಗೆ ಕೊಡುತ್ತಾರೆ. ಎಷ್ಟು ಮೀಟರ್ ರೀಡಿಂಗ್ ಆಗಿದೆ, ಎಷ್ಟು ಕಟ್ಟಬೇಕು ಎನ್ನುವ ಲೆಕ್ಕಾಚಾರ ಸರಿಯಾಗಿಲ್ಲ. ಇವರು ಕಟ್ಟಿರತಕ್ಕಂಥಾದ್ದೇ ಒಂದು ದುಡ್ಡು. ಆಮೇಲೆ ಹೋಗಿ ಲೆಡ್ಜರ್ ನೋಡಿದರೆ ಇನ್ನೊಂದು ಅಂಕಿಅಂಶ ಇರುತ್ತದೆ. ಕ್ರಮವಾಗಿ ಕೆಪಿಟಿಸಿಎಲ್‌ನವರು ಪಂಚಾಯಿತಿಗೆ ನೋಟೀಸ್ ಕೊಡಲಿ, ಪಂಚಾಯಿತಿಯವರು ಹೋಗಿ ಲೆಡ್ಜರ್ ತೆಗೆಸಿ ನೋಡಿ ಪಂಚಾಯಿತಿ ಕಾರ್ಯದರ್ಶಿ ಆ ಬಿಲ್ಲು ಕಟ್ಟುವಂತೆ ಇರಲಿ. ಜಿಲ್ಲಾ ಪಂಚಾಯಿತಿಯಲ್ಲಿ ಆ ಬಿಲ್ ಕಟಾವು ಮಾಡಿ ಕೊಟ್ಟರೆ ಲೆಕ್ಕಾಚಾರ ಒಂದಕ್ಕೊಂದು ತಾಳೆ ಇರುವುದಿಲ್ಲ. ನಾವು ಪ್ರತಿ ತಿಂಗಳು ಮೀಟಿಂಗ್ ಮಾಡುತ್ತೇವೆ ಎಂದು ಸೆಕ್ರೆಟರಿಗಳು ಬೊಬ್ಬೆ ಹೊಡೆಯುತ್ತಿದ್ದಾರೆ. ನಮಗೆ ಬರುವುದರಲ್ಲಿ ಇಷ್ಟು ಹಣ ಕಟಾವು ಮಾಡುತ್ತಿದ್ದಾರೆ, ತಪ್ಪು ತಪ್ಪು ಲೆಕ್ಕಾಚಾರ ಇದೆ ಎಂದು ಅವರು ಹೇಳುತ್ತಾರೆ. ಆಮೇಲೆ ಕೆಪಿಟಿಸಿಎಲ್‌ನವರಿಗೂ ಪಂಚಾಯಿತಿಯವರಿಗೂ ಸಾಮರಸ್ಯವಿಲ್ಲ. ಒಂದು ಲೈಟ್ ಹಾಕಿ ಕೊಡಬೇಕಾದರೆ ಒಬ್ಬ ಲೈನ್‌ಮನ್ ಬರುವುದಿಲ್ಲ ಪಂಚಾಯಿತಿಯವರು ಗೋಳಾಡುತ್ತಿದ್ದಾರೆ. ತಿಂಗಳಾನುಗಟ್ಟಲೆ ಒಂದು ಸ್ಟ್ರೀಟ್ ಲೈಟ್ ಹಾಕಿ ಕೊಡುವುದಕ್ಕೆ ಆಗುತ್ತಿಲ್ಲ. ಒಂದು ಸ್ಟ್ರೀಟ್ ಲೈಟ್‌ಗೆ ಒಂದು ಪಾಯಿಂಟ್ ಅಂದರೆ ನಾಲ್ಕು ಮಿನಿಮಮ್ ಲೈಟ್ ಇರಬೇಕು. ಒಂದು ಲೈಟ್‌ಗೆ ಒಂದು ಪಾಯಿಂಟ್ ಫಿಕ್ಸ್ ಮಾಡಿದ್ದಾರೆ. ಇದರಿಂದ ಪಂಚಾಯಿತಿಗೆ ಬರುವ ದುಡ್ಡು ಪೂರ್ತಿ ಕೆ.ಪಿ.ಟಿಸಿಎಲ್‌ಗೆ ಹೋಗುತ್ತಿದೆ.

ಶ್ರೀ ಎಂ.ವೈ. ಘೋರ್ಪಡೆ :— ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದ ನಾಯಕರು ಹೇಳಿದಹಾಗೆ ರೀಕನ್ಸಿಲಿಯೇಷನ್ ಮಾಡುವಾಗ ಕೆಪಿಟಿಸಿಎಲ್‌ಗೆ ಎಷ್ಟು ಕೊಡಬೇಕು, ಇದರ ಬಗ್ಗೆ ಏನಾದರೂ ಭಿನ್ನಾಭಿಪ್ರಾಯ ಇದ್ದರೆ ರೀಕನ್ಸಿಲಿಯೇಷನ್ ಮಾಡಿಸುತ್ತಿದ್ದೇವೆ. ಅದರಲ್ಲಿ ಏನಾದರೂ ತೊಂದರೆ ಇದ್ದರೆ ದಯವಿಟ್ಟು ತಿಳಿಸಿ. ಆ ಹಳ್ಳಿಯಲ್ಲಿ ಗೊಂದಲ ಇದ್ದರೆ ತಕ್ಷಣ ರೀಕನ್ಸಿಲಿಯೇಷನ್ ಮಾಡಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ರಾಜ್ಯದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳಿಗೆ ಹೆಚ್ಚುವರಿ ಶಿಕ್ಷಕರ ನೇಮಕಾತಿ

273 (3019) ಸದಾನಂದ ಗೌಡ ಡಿ.ವಿ. (ಪುತ್ತೂರು) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದಲ್ಲಿರುವ ಒಟ್ಟು ಪ್ರೌಢಶಾಲೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಪ್ರತ್ಯೇಕ ವಿವರ ನೀಡುವುದು).

2) ಹೆಚ್ಚು ಪ್ರೌಢಶಾಲೆಗಳನ್ನು ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆಯೇ?

3) ಎಷ್ಟು ಶಾಲೆಗಳನ್ನು ಸ್ಥಾಪಿಸಲಾಗುವುದು? ಜಿಲ್ಲಾವಾರು ಮಾಹಿತಿ ನೀಡುವುದು.

4) ರಾಜ್ಯದಲ್ಲಿ ಸರ್ಕಾರಿ ಪ್ರೌಢಶಾಲಾ ಶಿಕ್ಷಕರುಗಳ ಸಂಖ್ಯೆ ಎಷ್ಟು?

5) ಹೆಚ್ಚುವರಿ ಶಿಕ್ಷಕರುಗಳನ್ನು ನೇಮಕ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಸರ್ಕಾರಿ ಪ್ರೌಢಶಾಲೆಗಳು 2667

ಖಾಸಗಿ ಪ್ರೌಢಶಾಲೆಗಳು 5482

ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ.

ಆ) ಹೌದು

ಇ) 120

1)	ರಾಯಚೂರು	16
2)	ಕೊಪ್ಪಳ	08
3)	ಬಳ್ಳಾರಿ	11
4)	ಗುಲ್ಬರ್ಗಾ	20
5)	ಬಾಗಲಕೋಟೆ	07
6)	ಬಿಜಾಪುರ	13
7)	ಬೀದರ್	04
8)	ಬೆಂಗಳೂರು ಗ್ರಾ	03

F-3-II

9)	ಕೋಲಾರ	05
10)	ದಾವಣಗೆರೆ	03
11)	ಮೈಸೂರು	07
12)	ಚಾಮರಾಜನಗರ	04
13)	ಮಂಡ್ಯ	04
14)	ಚಿಕ್ಕಮಗಳೂರು	02
15)	ಕೊಡಗು	01
16)	ದಕ್ಷಿಣ ಕನ್ನಡ	01
17)	ಬೆಳಗಾಂ	05
18)	ಗದಗ್	01
19)	ಹಾಸನ	01
20)	ಹಾವೇರಿ	04
	ಒಟ್ಟು	120

ಈ) 33902 (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ.)

ಉ) ಅಗತ್ಯತೆಯನ್ನು ಗಮನದಲ್ಲಿರಿಸಿಕೊಂಡು ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 3019 ಕ್ಕೆ ಅನುಬಂಧ

ಪ್ರೌಢಶಾಲೆಗಳು

ಕ್ರಮ	ಜಿಲ್ಲೆಯ ಹೆಸರು	ಸರ್ಕಾರಿ	ಅನುದಾನ ಸಹಿತ	ಅನುದಾನ ರಹಿತ	ಸರ್ಕಾರಿ ಪ್ರೌಢ ಶಾಲೆ ಸಹ ಶಿಕ್ಷಕರ ಸಂಖ್ಯೆ
1)	ಬೆಂಗಳೂರು ಉತ್ತರ	40	106	324	559
2)	ಬೆಂಗಳೂರು ದಕ್ಷಿಣ	57	121	270	866
3)	ಬೆಂಗಳೂರು (ಗ್ರಾ)	107	80	111	1,436
4)	ಕೋಲಾರ	153	49	136	2,628
5)	ತುಮಕೂರು	149	240	152	2,564

3-A-II

1	2	3	4	5	6
6)	ಶಿವಮೊಗ್ಗ	117	83	102	1,488
7)	ಚಿತ್ರದುರ್ಗ	78	131	95	1,021
8)	ದಾವಣಗೆರೆ	113	85	33	1,232
9)	ಮೈಸೂರು	137	85	169	1,018
10)	ಚಾಮರಾಜನಗರ	43	27	49	636
11)	ಮಂಡ್ಯ	141	62	110	1,588
12)	ಹಾಸನ	164	98	110	1,987
13)	ಚಿಕ್ಕಮಗಳೂರು	85	79	57	1,089
14)	ಕೊಡಗು	29	45	25	463
15)	ದಕ್ಷಿಣ ಕನ್ನಡ	113	101	70	1,489
16)	ಉಡುಪಿ	7	59	44	819
17)	ಬೆಳಗಾಂ	133	253	189	1,799
18)	ಬಿಜಾಪುರ	59	181	101	835
19)	ಬಾಗಲಕೋಟೆ	64	79	76	812
20)	ಧಾರವಾಡ	40	96	61	595
21)	ಗದಗ	47	73	50	187
22)	ಹಾವೇರಿ	65	92	73	660
23)	ಉತ್ತರ ಕನ್ನಡ	70	119	51	711
24)	ಗುಲ್ಬರ್ಗಾ	214	54	147	3,004
25)	ಬಳ್ಳಾರಿ	91	60	60	1,015
26)	ರಾಯಚೂರು	82	20	53	931
27)	ಕೊಪ್ಪಳ	76	22	27	725
28)	ಬೀದರ್	130	68	111	1,345
	ಒಟ್ಟು	2,667	2,524	2,956	33,902

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೇ ಈ ಉತ್ತರವನ್ನು ನೋಡಿದರೆ ಸ್ವಲ್ಪ ಗಡಿಬಿಡಿಯಾಗುತ್ತಿದೆ. ಎಷ್ಟರ ಮಟ್ಟಿಗೆ ತಾರತಮ್ಯವಾಗಿದೆ ಎನ್ನುವುದು ಇದರಲ್ಲಿ ಗೊತ್ತಾಗುತ್ತದೆ. ಕೆಲವು ಜಿಲ್ಲೆಗಳಿಗೆ 20 ಹೈಸ್ಕೂಲ್, ಕೆಲವು ಜಿಲ್ಲೆಗಳಿಗೆ 16 ಹೈಸ್ಕೂಲ್‌ಗಳನ್ನು ಕೊಟ್ಟಿದ್ದೀರಿ. ಕೆಲವು ಜಿಲ್ಲೆಗಳಿಗೆ ಹೈಸ್ಕೂಲ್‌ಗಳನ್ನು ಕೊಟ್ಟಿಲ್ಲ. ಕೆಲವು ಜಿಲ್ಲೆಗಳಿಗೆ ಒಂದೊಂದು ಹೈಸ್ಕೂಲ್ ಕೊಟ್ಟಿದ್ದೀರಿ. ಬಹುಶ: ನನಗನ್ನಿಸುತ್ತದೆ ಉತ್ತರ ಕರ್ನಾಟಕ ಅಭಿವೃದ್ಧಿ ಮಾಡುತ್ತೇವೆಂದು ಘೋಷಣೆ ಮಾಡಿದ್ದಕ್ಕಾಗಿ ಇದನ್ನು ಮಾಡಿದ್ದೀರಾ ಅಥವಾ ಈ ತಾರತಮ್ಯ ಮಾಡಲಿಕ್ಕೆ ಕಾರಣಗಳೇನು? ಎರಡನೆಯದಾಗಿ ಈ ವರ್ಷ ನಿಮ್ಮ ಸರ್ಕಾರ ಎಷ್ಟು ಖಾಸಗಿ ಶಾಲೆಗಳನ್ನು ಕೊಡಲು ಅನುಮತಿ ನೀಡಿದ್ದೀರಿ? ಮೂರನೆಯದಾಗಿ ಸರ್ಕಾರಿ ಶಾಲೆಗಳಲ್ಲಿ ಈಗ ಇರುವ ಅಧ್ಯಾಪಕರ ಕೊರತೆ ಎಷ್ಟು? ಈ ಕೊರತೆಯನ್ನು ನೀಗಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ.

ಶ್ರೀ ಎಚ್. ವಿಶ್ವನಾಥ್ :— ಮಾನ್ಯ ಅಧ್ಯಕ್ಷರೇ, ಸರ್ಕಾರ ಯಾವ ತಾರತಮ್ಯವನ್ನು ಮಾಡಿಲ್ಲ. ಈಗಾಗಲೇ ಸರ್ಕಾರ ಎಲ್ಲಿ ಅಸಮಾನತೆ ಇದೆ, ಅಲ್ಲಿ ಸಮಾನತೆ ಮಾಡುವ ದೃಷ್ಟಿಯಿಂದ ಈಶಾನ್ಯ ವಲಯ ಅಂತ ಹೇಳಿ ನಾವು 79 ಪ್ರೌಢ ಶಾಲೆಗಳನ್ನು ಆ ಭಾಗಕ್ಕೆ ಕೊಟ್ಟಿದ್ದೇವೆ. 7 ಜಿಲ್ಲೆಗಳಿಗೆ 79 ಪ್ರೌಢ ಶಾಲೆಗಳು ಮತ್ತು ಉಳಿದ 13 ಜಿಲ್ಲೆಗಳಿಗೆ 41 ಪ್ರೌಢ ಶಾಲೆಗಳನ್ನು ಕೊಟ್ಟಿದ್ದೇವೆ. ನಿಜ, ಇನ್ನೂ 8 ಜಿಲ್ಲೆಗಳಿಗೆ ಕೊಡಬೇಕಾಗಿದೆ. ನಮಗೆ ಇರುವಂತಹ ಮಿತಿಯೊಳಗೆ ಹೊಸದಾಗಿ ಈ ವರ್ಷ ಮುಖ್ಯಮಂತ್ರಿಗಳು ವಿಶೇಷವಾಗಿ ಹಣ ಬಿಡುಗಡೆ ಮಾಡಿ 120 ಪ್ರೌಢ ಶಾಲೆಗಳನ್ನು ಈ ಆಯವ್ಯಯದಲ್ಲಿ ಕೊಟ್ಟಿರುವುದರಿಂದ ಅದರಲ್ಲಿ 79 ಪ್ರೌಢ ಶಾಲೆಗಳನ್ನು ಎಲ್ಲಿ ಶೈಕ್ಷಣಿಕವಾಗಿ ಅಸಮತೋಲನೆ ಇದೆ ಆ ಜಿಲ್ಲೆಗಳಿಗೆ ಕೊಟ್ಟಿರತಕ್ಕಂಥಾದ್ದು ಇದೆ. ಆದ್ದರಿಂದ ಗುಲ್ಬರ್ಗ ವಿಭಾಗಕ್ಕೆ 20 ಪ್ರೌಢ ಶಾಲೆಗಳನ್ನು ಕೊಟ್ಟಿದ್ದೇವೆ. ಅದನ್ನು ನೋಡಿದರೆ ಆ ಭಾಗದಲ್ಲಿ ಹೆಚ್ಚು ಇವೆ ಈ ಭಾಗದಲ್ಲಿ ಕಡಿಮೆ ಇದೆ ಎಂದು ಅಸಮಾನತೆಯನ್ನು ಸಮಾನತೆ ಮಾಡಲು ಕೊಟ್ಟಿದ್ದೇವೆ. ಆದ್ದರಿಂದ ಯಾರಿಗೂ ತಾರತಮ್ಯ ಮಾಡುವಂತಹ ದೃಷ್ಟಿ ಸರ್ಕಾರಕ್ಕೆ ಇಲ್ಲ. ಆಗ ನಮಗೆ ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ. ಈಗಾಗಲೇ ನಾವು ಎರಡು ಸಾವಿರ ಪ್ರೌಢ ಶಾಲಾ ಶಿಕ್ಷಕರನ್ನು ತುಂಬುತ್ತಿದ್ದೇವೆ. ಇನ್ನು 15-20 ದಿವಸಗೊಳಗಾಗಿ ಅವರಿಗೆ ಆದೇಶವನ್ನು ಕೊಡುತ್ತಿದ್ದೇವೆ. ಪ್ರೌಢ ಶಾಲಾ ಶಿಕ್ಷಕರ ಕೊರತೆ ಏನು ಇದೆ ಅದನ್ನು ನೀಗಿಸತಕ್ಕಂಥಾದ್ದು, ಮತ್ತು ಈ ಹೊಸ 120 ಪ್ರೌಢ ಶಾಲೆಗಳಿಗೆ ನಬಾರ್ಡ್‌ನಿಂದ ಹಣ ಒದಗಿಸಿ ಕಟ್ಟಡದ ಸಮೇತ ಶಾಲೆಗಳನ್ನು ಕೊಡುತ್ತಿದ್ದೇವೆ. ಹಿಂದೆ 300ಕ್ಕೂ ಮೀರಿ ಪ್ರೌಢ ಶಾಲೆಗಳನ್ನು ಕೊಟ್ಟಂತಹ ಸಂದರ್ಭದಲ್ಲಿ ಶಿಕ್ಷಕರನ್ನು ಕೊಟ್ಟಿಲ್ಲ, ಕಟ್ಟಡಗಳನ್ನೂ ಸಹ ಕೊಟ್ಟಿರಲಿಲ್ಲ. ಆದರೆ ನಾವು ಹೊಸದಾಗಿ ಕೊಟ್ಟಿರತಕ್ಕಂಥ 120 ಶಾಲೆಗಳಿಗೂ ಕೂಡ 20 ಲಕ್ಷ ರೂಪಾಯಿಗಳಂತೆ ಒಂದೊಂದು ಪ್ರೌಢ ಶಾಲೆಗಳು ಕಟ್ಟಡಕ್ಕೆ ಕೊಟ್ಟಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಾಡಿದ ಒಳ್ಳೆಯ ಕೆಲಸವನ್ನು ನಾವು ಸ್ವಾಗತಿಸುತ್ತೇವೆ. ಆದರೆ ತಾವು ಹಿಂದುಳಿದ ಜಿಲ್ಲೆಗಳನ್ನು ಸಮಾನತೆ ಮಾಡುವ ದೃಷ್ಟಿಯಿಂದ ಒಂದು ಲಿಸ್ಟ್ ಮಾಡಿದ್ದೀರಿ. ನಿನ್ನೆತಾನೆ ಮಾನ್ಯ ಖರ್ಗೆಯವರು ಹೇಳಿದ ಹಾಗೆ ನಮ್ಮ ಉತ್ತರ ಕರ್ನಾಟಕದಲ್ಲಿ ಅತಿ ಹಿಂದುಳಿದ ಮುಂಡರಗಿ ಎನ್ನುವ ಒಂದು ಕ್ಷೇತ್ರ ಇದೆ. ಇಲ್ಲಿ ಹೊಸದಾಗಿ ಒಂದು ಲಿಸ್ಟ್ ಕೊಟ್ಟಿದ್ದಾರೆ. ಅದರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಚಾಮರಾಜನಗರ ಜಿಲ್ಲೆ, ಮಂಡ್ಯ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ, ಕೊಡಗು ಜಿಲ್ಲೆ, ದಕ್ಷಿಣ ಜಿಲ್ಲೆ, ಬೆಳಗಾಂ ಜಿಲ್ಲೆ, ಗದಗ್ ಜಿಲ್ಲೆಗೆ ಒಂದೇ ಕೊಟ್ಟಿದ್ದೀರಿ. ಹಿಂದುಳಿದ ಜಿಲ್ಲೆಗಳನ್ನು ಸಮಾನತೆ ಮಾಡಲು ಕೊಟ್ಟಿದ್ದಾರೆ ನಮ್ಮದು ತಕರಾರು ಇಲ್ಲ. ಆದರೆ ಇಲ್ಲಿ 7-8 ಹೈಸ್ಕೂಲ್‌ಗಳನ್ನು ಕೊಟ್ಟು, ನಮ್ಮ ಹಿಂದುಳಿದ ಜಿಲ್ಲೆಗಳಿಗೆ ಒಂದು, ಎರಡು ಹೈಸ್ಕೂಲ್‌ಗಳನ್ನು ಕೊಟ್ಟಿದ್ದರೆ ನಿಜವಾಗಿಯೂ ಅದು ಸಮಾನತೆ ಆಗುತ್ತಿತ್ತು. ಅದು ಇಲ್ಲ ಆದ್ದರಿಂದ ಈ ಲಿಸ್ಟನ್ನು ರದ್ದು ಮಾಡಬೇಕು. ನಾನು ತಮ್ಮ ಮುಖಾಂತರ ಕಳಕಳಿಯಿಂದ ಕೇಳುತ್ತೇನೆ, ನಾವು ಇವುಗಳನ್ನು ತೆಗೆದು ಹೈದ್ರಾಬಾದ್ ಕರ್ನಾಟಕ ಏರಿಯಾಗೆ ಕೊಡಿ. ನಮ್ಮದೇನು ತಕರಾರು ಇಲ್ಲ. ಆ ಕಡೆ ಕೊಟ್ಟಾಗ ನಮಗೂ ಒಂದು ಎರಡು ಕೊಟ್ಟಿದ್ದರೆ ಒಳ್ಳೆಯದಾಗುತ್ತಿತ್ತು. ನಮ್ಮ ಮುಂಡರಗಿ ಅಂತಹ ಕ್ಷೇತ್ರಗಳು ಇವೆ. ನಾನು ನನ್ನ ಬಗ್ಗೆ ಹೇಳಿಕೊಳ್ಳುತ್ತೇನೆಂದು ಅಲ್ಲ. ನಾನು ನಿನ್ನೆ ಹೇಳಿದೆ ಎ.ಬಿ.ಸಿ. ಯಲ್ಲಿ ನಮ್ಮದು 'ಡಿ'ನಲ್ಲಿ ಬರುತ್ತವೆ. ತಾವು ಬೇಕಾದರೆ ಡಾ: ಎಂ. ನಂಜುಡಪ್ಪನವರ ವರದಿಯನ್ನು ತೆಗೆದು ನೋಡಿ. ದಯವಿಟ್ಟು ತಾವು ತಾಲ್ಲೂಕಿಗೆ ಕೊಡುತ್ತೀರಾ?

ಶ್ರೀ ಎಚ್. ವಿಶ್ವನಾಥ್ :— ಮಾನ್ಯ ಅಧ್ಯಕ್ಷರೇ ...

ಅಧ್ಯಕ್ಷರು :— ಎಲ್ಲರೂ ಕೇಳಲಿ, ಆಮೇಲೆ ಉತ್ತರ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಮಾನ್ಯ ಅಧ್ಯಕ್ಷರೇ, ಈ ಅಸಮಾನತೆಯನ್ನು ಸರಿ ಮಾಡಬೇಕು, ಎನ್ನುವ ದೃಷ್ಟಿಯಿಂದ ಮಾಡುತ್ತಿರುವ ಪ್ರಯತ್ನವನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಇಲ್ಲಿ ಒಂದು ಅಂಶವನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ನಮ್ಮಲ್ಲಿ ಒಂದು ಪುನರ್ವಸತಿ ಕೇಂದ್ರ ಇದೆ. ನಿಮ್ಮ ಸರ್ಕಾರದ ಬೇರೆ ಬೇರೆ ಯೋಜನೆಗಳು ಬಂದಿರುವುದಿಂದ, ಇಂತಹ ಸ್ಥಳಗಳಲ್ಲಿ ಆದರೂ ಒಂದು ಹೈಸ್ಕೂಲ್ ಬೇಕೋ ಬೇಡವೋ. ನಾನು ನಾಲ್ಕು ವರ್ಷಗಳಿಂದ ಕೇಳುತ್ತಿದ್ದೇನೆ. ಇದನ್ನು ಆದ್ಯತೆ ಮೇಲೆ ತೆಗೆದುಕೊಳ್ಳುವುದಿಲ್ಲ ಅಂತ ಅಂದರೆ ಹೇಗೆ? ಈಗ 60 ಸಂಖ್ಯೆಗಿಂತ ಕಡಿಮೆ ಇದ್ದರೆ ಗುಡ್ಡಗಾಡು ಪ್ರದೇಶಗಳಲ್ಲಿರುವ ಹೈಸ್ಕೂಲ್‌ಗಳನ್ನು ಬಂದ್ ಮಾಡುತ್ತೇವೆ ಎಂದು ಹೇಳಿದ್ದೀರಿ. ಆಗ ಅಂತಹ ಸ್ಕೂಲ್‌ಗಳನ್ನು ಬಂದ್ ಮಾಡಬಾರದು. ಖಾಸಗಿ ಹೈಸ್ಕೂಲ್‌ಗಳನ್ನು ಬಂದ್ ಮಾಡುತ್ತೇವೆಂದು ಸರ್ಕ್ಯೂಲರ್ ಕಳಿಸಿದ್ದಾರೆ. ಹಾಗೆ ಆಗಬಾರದು.

ಶ್ರೀ ಎನ್. ಯೋಗೀಶ್ ಭಟ್ :— ಪ್ರೌಢಶಾಲೆಗಳಿಗೆ ಉಪಾಧ್ಯಾಯರನ್ನು ನೇಮಿಸುವಾಗ ವಿಶೇಷವಾಗಿ ನಗರ ಪ್ರದೇಶದ ಶಾಲೆಗಳನ್ನು ನಿರ್ಲಕ್ಷಿಸಿದ್ದೀರಿ ಎಂದು ನಾನು ಆರೋಪಿಸುತ್ತೇನೆ. ವಿಶೇಷವಾಗಿ ಮಂಗಳೂರಕು ಕ್ಷೇತ್ರದಲ್ಲಿ ಸಾಕಷ್ಟು ಅಧ್ಯಾಪಕರ ಕೊರತೆ ಇದ್ದಾಗಲೂ ಕೂಡ ನಾವು ಪದೇ ಪದೇ ಬೇಡಿಕೆಯನ್ನು ಇಟ್ಟರೂ ಕೂಡ ಶಿಕ್ಷಕರನ್ನು ನೀವು ನೇಮಕಾತಿ ಮಾಡಿಲ್ಲ, ನಮಗೆ ತೊಂದರೆಯಾಗುತ್ತಿದೆ. ತಕ್ಷಣ ಅದನ್ನು ಸರಿಪಡಿಸುವ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ.

ಶ್ರೀ ಕರಡಿ ಸಂಗಣ್ಣ (ಕೊಪ್ಪಳ) :— ಅಧ್ಯಕ್ಷರೇ, ಶೈಕ್ಷಣಿಕವಾಗಿ ಹಿಂದುಳಿದಿರುವ ಕಡೆ ಹೊಸ ಹೈಸ್ಕೂಲ್ ಪ್ರಾರಂಭಿಸುವ ಯೋಜನೆ ಸ್ವಾಗತಾರ್ಹ. ಆದರೆ ಸಚಿವರು ಇಲ್ಲಿ ನೀಡಿರುವ ಅಂಕಿ ಅಂಶ ನೋಡಿದಾಗ ಕೊಪ್ಪಳ ಜಿಲ್ಲೆಗೆ ಬಹಳ ಅನ್ಯಾಯವಾಗಿದೆ. ಅಲ್ಲದೆ ಮಾನ್ಯ ವಿಶ್ವನಾಥ್ ಅವರು ಮೊನ್ನೆ ಕೊಪ್ಪಳ ಜಿಲ್ಲೆಗೆ 8 ಹೈಸ್ಕೂಲ್ ಕೊಟ್ಟಿದ್ದಾರೆ ಆದರೆ ಕೊಪ್ಪಳ ಮತ್ತು ಯಾದಗಿರಿಗೆ ಒಂದೊಂದೇ ಕೊಟ್ಟಿದ್ದಾರೆ. ಬೇರೆ ತಾಲೂಕಿಗೆ ಎರಡು ಮೂರು ಎಂದು ಹೀಗೆ ಏಕೆ ತಾರತಮ್ಯ ಮಾಡಿದ್ದಾರೆ, ಅದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಚಂದ್ರಕಾಂತ್ ಬೆಲ್ಲದ :— ಧಾರವಾಡ ಒಂದು ಶೈಕ್ಷಣಿಕ ನಗರ. ಆದರೆ ಅಲ್ಲಿ ಎಲ್ಲಾ ಖಾಸಗಿ ಪ್ರೌಢಶಾಲೆಗಳೇ ಇದ್ದಾವೆ, ನನ್ನ ವಿನಂತಿಯೇನೆಂದರೆ ಧಾರವಾಡ ನಗರದಲ್ಲೂ ಸಾಕಷ್ಟು ಕೊಳಚೆ ಪ್ರದೇಶಗಳಿವೆ, ಬಡಜನರಿದ್ದಾರೆ, ಅಲ್ಲಿ ಸರ್ಕಾರಿ ಪ್ರೌಢಶಾಲೆಗಳಿರಬೇಕೆಂದು ನಾನು ಸತತವಾಗಿ ಹೇಳುತ್ತಿದ್ದೇನೆ. ದಯಮಾಡಿ ಧಾರವಾಡಕ್ಕೆ ಎರಡು ಪ್ರೌಢಶಾಲೆ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಚ್. ಹನುಮೇಗೌಡ (ಹಾಸನ) :— ಹಾಸನ ಜಿಲ್ಲೆಯಲ್ಲೂ ಹೈಸ್ಕೂಲುಗಳಿಲ್ಲದೆ ಶಿಕ್ಷಣದ ದೃಷ್ಟಿಯಿಂದ ಕೆಲವು ಭಾಗಗಳು ಬಹಳ ಹಿಂದುಳಿದಿವೆ. ಪ್ರತಿ ವರ್ಷಾನೂ ಅನೇಕ ಅರ್ಜಿಗಳು ಹೈಸ್ಕೂಲ್‌ನ್ನು ಕೋರಿ ಬರುತ್ತಿವೆ, ಒಂದೇ ಒಂದು ಕೊಟ್ಟಿದ್ದಾರೆ, ಅವನ್ನು ಯಾವ ಸ್ಥಳಕ್ಕೆ ಕೊಟ್ಟಿದ್ದಾರೆ? ಉಳಿದ ಅರ್ಜಿಗಳನ್ನು ಪರಿಗಣಿಸಿ ಯಾವ ವರ್ಷ ಕೊಡುತ್ತೀರಿ?

ಶ್ರೀ ಸಿ. ಚೆನ್ನಿಗಪ್ಪ :— ಕಳೆದ ವರ್ಷ ಹೊಸದಾದ ಪ್ರೌಢಶಾಲೆ ತೆರೆಯುವುದಾಗಿ ಸಚಿವರು ಹೇಳಿದರು, ಆದರೂ ತೆರೆದಿರಲಿಲ್ಲ, ಆದಕ್ಕೆ ಹಿಂದೆ ತೆರೆದಿದ್ದ ಶಾಲೆಗಳಲ್ಲಿ ಐವತ್ತು ಇಂಗ್ಲೀಷ್ ಮತ್ತು ಗಣಿತಕ್ಕೆ ಸುಮಾರು ಸ್ಕೂಲ್ಗಳಲ್ಲಿ ಟೀಚರ್ಸೇ ಇಲ್ಲ, ಉದಾಹರಣೆಗೆ ಬೈರನಾಯಕನಹಳ್ಳಿ ಮತ್ತು ತ್ಯಾಮಗೊಂಡ್ಲು ಶಾಲೆಗಳು, ಕೂಡಲೇ ಇಲ್ಲಿ ಶಾಲಾ ಶಿಕ್ಷಕರನ್ನು ನೇಮಿಸಿಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ವಿ. ಕೃಷ್ಣಪ್ಪ :— ಶಾಲೆಗಳೇನೋ ಕೊಡುತ್ತಿದ್ದಾರೆ. ಆದರೆ ಇರುವ ಶಾಲೆಗಳ ರಿಪೇರಿ ಬಗ್ಗೆ ಸರ್ಕಾರ ಗಮನಹರಿಸಬೇಕು.

ಶ್ರೀ ಎನ್. ಸಂಪಂಗಿ :— ಕೋಲಾರಕ್ಕೆ ಕೇವಲ 5 ಪ್ರೌಢಶಾಲೆಗಳನ್ನು ಕೊಟ್ಟಿದ್ದಾರೆ. ಇದು ಬಹಳ ಅನ್ಯಾಯ, ಅದು ಗಡಿನಾಡು ಪ್ರದೇಶವಾಗಿದ್ದು ಹಂತ ಹಂತವಾಗಿ ಕನ್ನಡವನ್ನೇ ಅಲ್ಲಿ ಮರೆಯುತ್ತಿದ್ದಾರೆ. ಅಲ್ಲಿ ಹೆಚ್ಚು ಹೆಚ್ಚು ಪ್ರೌಢಶಾಲೆಗಳನ್ನು ಕೊಟ್ಟು ಪ್ರೋತ್ಸಾಹಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಹೆಚ್.ಎಸ್. ಮಹಾದೇವ ಪ್ರಸಾದ್ :— ಅಧ್ಯಕ್ಷರೇ, ಈಗಾಗಲೇ ಮೈಸೂರು ಜಿಲ್ಲೆಯಲ್ಲಿ 137 ಹೈಸ್ಕೂಲುಗಳಿವೆ ಅಲ್ಲಿಗೆ ಮತ್ತೆ 7 ಮಾಡುತ್ತಿದ್ದೀರಿ, ನಮ್ಮದು ಹೊಸ ಜಿಲ್ಲೆ, ಬಹಳ ಹಿಂದುಳಿದಿರುವ ಜಿಲ್ಲೆ ಚಾಮರಾಜನಗರ. ಅಲ್ಲಿರುವುದು ಕೇವಲ 43 ಹೈಸ್ಕೂಲು. ಅಂತಹ ಕಡೆಗೆ ನಾಲ್ಕು ಮಾತ್ರ ಕೊಟ್ಟಿದ್ದೀರಿ. ನಮ್ಮದೂ ಒಂತರಹ ಉತ್ತರ ಕರ್ನಾಟಕ ಜಿಲ್ಲೆಗಳಿಗೆ ಹೋಲಿಕೆ ಆಗುವಂಥದ್ದೇ, ಆದ್ದರಿಂದ ವಿಶೇಷವಾಗಿ ಕ್ರಮ ತೆಗೆದುಕೊಂಡು ಹೆಚ್ಚಿಗೆ ಕೊಡಬೇಕು.

ಶ್ರೀ ರಾಜೇಂದ್ರ ವರ್ಮ (ಹುಲಸೂರು) :— ಸಚಿವರು ಬರೀ ಉತ್ತರ ಕರ್ನಾಟಕವನ್ನು ಸಮರ್ಥನೆ ಮಾಡುತ್ತೇವೆಂದು ಹೇಳುತ್ತಾರೆ, ಹಾಗೆ ರಾಯಚೂರಿಗೆ 16 ಕೊಟ್ಟಿದ್ದಾರೆ, ಗಲ್ಬರ್ಗಕ್ಕೆ 20 ಕೊಟ್ಟಿದ್ದಾರೆ, ಬೀದರ್‌ನಲ್ಲಿ ಕೇವಲ 4 ಕೊಟ್ಟಿದ್ದಾರೆ, ಮೊದಲು ಸಭೆ ನಡೆಸಿದಾಗ ಏನು ಹೇಳಿದರು ಅಂದರೆ ಪ್ರತಿ ಉತ್ತರ ಕರ್ನಾಟಕ ಮತಕ್ಷೇತ್ರಕ್ಕೆ ಎರಡೆರಡು ಕೊಡುತ್ತೇವೆಂದಿದ್ದರು, ಆಗ ಈ ತಾರತಮ್ಯವನ್ನು ಏತಕ್ಕೆ ಮಾಡಿದರು ಎಂದು ಕೇಳುತ್ತಿದ್ದೇನೆ.

ಶ್ರೀ ಎಚ್. ವಿಶ್ವನಾಥ್ :— ಅಧ್ಯಕ್ಷರೇ, ಮಾನ್ಯ ಸದಾನಂದಗೌಡರು ಕೇಳಿದ ಪ್ರಶ್ನೆಗೆ ಸುಮಾರು 15 ಜನ ಉಪ ಪ್ರಶ್ನೆಯನ್ನು ಕೇಳಿದ್ದಾರೆ. ಬಹಳ ಸಂತೋಷ. ಶಿಕ್ಷಣದ ಬಗ್ಗೆ ಇಷ್ಟೊಂದು ಆಸಕ್ತಿ ತೆಗೆದುಕೊಂಡಿರುವುದು ನಾಡಿಗೆ ಒಂದು ಸೌಭಾಗ್ಯವೆಂದು ನಾನು ಭಾವನೆ ಮಾಡುತ್ತೇನೆ. ನಿನ್ನೆ ನಮ್ಮ ವಿರೋಧ ಪಕ್ಷದ ನಾಯಕರು ಇಡೀ ರಾಜ್ಯದಲ್ಲಿ ಯಾವ ಯಾವ ಬ್ಲಾಕುಗಳಲ್ಲಿ ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ ಎಂದು ಡಾ: ನಂಜುಂಡಪ್ಪ ವರದಿ ಆಧರಿಸಿ ವಿಶ್ಲೇಷಿಸಿದರು. ಇಲ್ಲಿ ನಾನು ಕೊಟ್ಟಿರುವ 120 ಶಾಲೆಗಳೂ ಸಹಾ ಡಾ: ನಂಜುಂಡಪ್ಪ ವರದಿ ತೋರಿಸಿರುವ ಶೈಕ್ಷಣಿಕ ಹಿಂದುಳಿದ ಭಾಗಗಳನ್ನೇ ಆರಿಸಿ ಕೊಟ್ಟಿರುವುದು. ಅದರಲ್ಲಿ ವಿಶೇಷವಾಗಿ ಈಶಾನ್ಯ ಭಾಗಕ್ಕೆ ತಾರತಮ್ಯ ನಿವಾರಿಸುವ ಸಲುವಾಗಿ ಹೆಚ್ಚು ಕೊಟ್ಟಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಅಧ್ಯಕ್ಷರೇ ಸ್ಪೆಸಿಫಿಕ್ ಆನ್ಸರ್ ಕೊಡದೆ ಇಂಥದ್ದೇ ಉಢಾಫೇ ಉತ್ತರ ಕೊಡುತ್ತಾ ಇದ್ದಾರೆ ಇದಕ್ಕೇನು ಹೇಳುವುದು? ಉದಾಹರಣೆಗೆ ಹೆಚ್ಚುವರಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಉದ್ದೇಶವಿದೆಯೆಂದು ಉತ್ತರದಲ್ಲಿ ಹೇಳಿದ್ದಾರೆ, ಅದು ಯಾವಾಗ ಎಷ್ಟು ಮಾಡುತ್ತೀರಿ ಎಂದು ಹೇಳಿಬಿಟ್ಟರೆ ಆಯಿತು. ಅದನ್ನು ಬಿಟ್ಟು ಬಾಕಿ ಎಲ್ಲಾ ಹೇಳಿಕೊಂಡು ಬರುತ್ತಿರುವ ಇವರ ಉತ್ತರ ನಗೆಪಾಟಲು.

ಶ್ರೀ ಎಚ್. ವಿಶ್ವನಾಥ್ :— ಹಾಗಾದರೇ ಈಗ 15 ಜನ ಏನು ಕೇಳಿದರು, ಅದು ನಗೆಪಾಟಲಾ? 15 ಜನಕ್ಕೂ ಉತ್ತರ ಹೇಳಬೇಕಲ್ಲಾ. ನಾವು ಅಗತ್ಯತೆ ಅನುಸರಿಸಿ ಕೊಟ್ಟಿದ್ದೇವೆ. ಮತ್ತು ಚನ್ನಿಗಪ್ಪ ಅವರು ಹೇಳಿದರು ಇಂಗ್ಲೀಷ್, ಗಣಿತ ಟೀಚರ್ಸ್ ಕೊಟ್ಟಿಲ್ಲ ಎಂದು. ಹಿಂದೆ 300ಕ್ಕೂ ಮೀರಿ ಶಾಲೆಯನ್ನು ಸರ್ಕಾರ ಪ್ರಾರಂಭ ಮಾಡಬೇಕೆ ಹೊರತು ಅಲ್ಲಿಗೆ ಶಿಕ್ಷಕರನ್ನಾಗಲೀ ಕಟ್ಟಡವನ್ನಾಗಲೀ ಕೊಡಲಿಲ್ಲ. ಈಗ ಎರಡು ಸಾವಿರ ಶಿಕ್ಷಕರಲ್ಲಿ ಒಂದೂವರೆ ಸಾವಿರಕ್ಕೂ ಮೀರಿ ಗಣಿತ ಇಂಗ್ಲೀಷ್ ಶಿಕ್ಷಕರನ್ನು ನಾವು ಮಾಡುತ್ತಿದ್ದೇವೆ. ಬಹುಶ: ಇನ್ನೊಂದು ತಿಂಗಳೊಳಗೆ ಅವರಿಗೆಲ್ಲಾ ಆದೇಶ ಸಿಗುತ್ತದೆ. ಆಮೇಲೆ ಮಾನ್ಯ ಕಾಗೇರಿಯವರು ಹೇಳಿದರು ಪುನರ್ವಸತಿ ಕೇಂದ್ರಗಳಲ್ಲಿ ಕಡ್ಡಾಯವಾಗಿ ನಾವು ಹೈಸ್ಕೂಲು ತೆಗೆಯುತ್ತಿದ್ದೇವೆ, ಬಸವನಬಾಗೇವಾಡಿ ಇರಬಹುದು, ಬೀಳಗಿ ಇರಬಹುದು, ಅಲ್ಲೆಲ್ಲಾ ನಾವು ಕೊಟ್ಟಿದ್ದೇವೆ. ತಾವೂ ಬರೆದರೆ ಸರ್ಕಾರ ಅದಕ್ಕೆ ಸ್ಪಂದಿಸುವುದು. ಇದರಲ್ಲಿ ಯಾವ ತಾರತಮ್ಯ ಆಗಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ :— ತಾವು ತಾರತಮ್ಯ ನಿವಾರಣೆಗೆ ಆದ್ಯತೆ ಕೊಟ್ಟಿದ್ದೇರೆಂದು ಹೇಳಿದಿರಿ, ಇದರ ಬಗ್ಗೆ ನಮ್ಮ ಅಭ್ಯಂತರವಿಲ್ಲ, ಆದರೆ ಈ ಬಾರಿ 7ನೇ ತರಗತಿಯಲ್ಲಿ ಭಾರಿ ರಿಸಲ್ಟ್ ಬಂದ ಭಾಗಗಳಲ್ಲಿ ಯಾವುದೇ ಶಾಲೆಗಳಲ್ಲಿ ಅಡ್ಮಿಷನ್ ಮಾಡಲು ಆಗುತ್ತಿಲ್ಲ. ನನ್ನ ಮತ್ತೊಂದು ತಾಲ್ಲೂಕಿನಲ್ಲೇ 90 ಶಾಲೆಗಳಲ್ಲಿ ಶೇಕಡ ನೂರು ಫಲಿತಾಂಶ 7ನೇ ತರಗತಿಯಲ್ಲಿ ಬಂದಿದೆ. ಹೀಗಿರುವಾಗ ಇರುವ ಶಾಲೆಗಳಲ್ಲಿ ಅಡ್ಮಿಷನ್ ಅವಕಾಶ ಮಿತಿಮೀರಿದೆ, ಹೀಗಾದರೆ ನಮ್ಮ ಮಕ್ಕಳ ಭವಿಷ್ಯವೇನು? ಇದಕ್ಕೆ ಪರ್ಯಾಯ ವ್ಯವಸ್ಥೆಯೇನು?

ಶ್ರೀ ಎಚ್. ವಿಶ್ವನಾಥ್ :— 7ನೇ ತರಗತಿ ಪಾಸಾದವರಿಗೆ ಯಾರಿಗೂ ಪ್ರವೇಶಾವಕಾಶ ನಾವು ನಿರಾಕರಿಸಿಲ್ಲ. ಅಂಥದ್ದೂ ಯಾವುದಾದರೂ ಇದ್ದರೆ ಸರ್ಕಾರದ ಗಮನಕ್ಕೆ ತನ್ನಿರಿ, ಪ್ರವೇಶ ಕೊಡುತ್ತೇವೆ; ಇನ್ನು ಅಲ್ಲಿಗೆ ಹೈಸ್ಕೂಲ್ ಬೇಕೆನ್ನುವ ಬಗ್ಗೆ ಅಗತ್ಯತೆ ಅನುಸರಿಸಿ ಯೋಚನೆ ಮಾಡುತ್ತೇವೆ.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮತದಾನ

274(2968) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

೧. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾವಣೆಯನ್ನು ನಡೆಸುವಾಗ ರಾಜ್ಯದ ಚುನಾವಣೆ ಕಾನೂನು ಪ್ರಕಾರ ಹಾಗೂ ಕೇಂದ್ರ ಸರ್ಕಾರ ಕಾಲಕಾಲಕ್ಕೆ ನೀಡಿದ ಸಲಹೆ ಸೂಚನೆಗಳನ್ನು ಅನುಸರಿಸಿ ಚುನಾವಣೆ ನಡೆಸಲು ಸರ್ಕಾರ ಇಚ್ಛಿಸಿದೆಯೇ?

೨. ಹೌದಾದರೆ ಈ ನಿರ್ಧಾರಗಳನ್ನು ಎಂದಿನಿಂದ ಜಾರಿಗೊಳಿಸಲಾಗುವುದು?

೩. ಈ ಸಂಸ್ಥೆಗಳಿಗೆ ಉತ್ತಮ ಮಟ್ಟದ ಜನ ಪ್ರತಿನಿಧಿಗಳನ್ನು ಚುನಾಯಿಸಲು ಗುರುತಿನ ಚೀಟಿ ಕೊಡುವುದು, ಕಡ್ಡಾಯ ಮತದಾನ, ತಪ್ಪಿದಲ್ಲಿ ಸವಲತ್ತುಗಳನ್ನು ಮೊಟಕುಗೊಳಿಸುವುದು, ಪ್ರತಿನಿಧಿಗಳು ಉಮೇದುವಾರಿಕೆ ಸಲ್ಲಿಸುವ ಸಂದರ್ಭದಲ್ಲಿ ತಮ್ಮ ಆಸ್ತಿ ಹಾಗೂ ದಾಯಿತ್ವಗಳ ಘೋಷಣೆ, ಚುನಾವಣಾ ವೆಚ್ಚದ ಮೇಲೆ ಕಡಿವಾಣ ಮುಂತಾದ ಸುಧಾರಣೆಗಳನ್ನು ಜಾರಿಗೆ ತರಲು ಇರುವ ಅಡಚಣೆಗಳೇನು?

೪. ಇವುಗಳಿಗೆ ಸೂಕ್ತ ತಿದ್ದುಪಡಿ ತಂದು ಎಂದಿನಿಂದ ಜಾರಿಗೊಳಿಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :—

೧. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ೧೯೯೩ರ ಪ್ರಕರಣ ೩೦೮ ರನ್ವಯ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾವಣೆ ನಡೆಸಲು ರಾಜ್ಯದಲ್ಲಿ ಪ್ರತ್ಯೇಕ ರಾಜ್ಯ ಚುನಾವಣಾ ಆಯೋಗವನ್ನು ರಚಿಸಲಾಗಿದೆ. ಈ ಆಯೋಗವು ಅಧಿನಿಯಮದನ್ವಯ ರಚಿಸಲಾಗಿರುವ ನಿಯಮಗಳಂತೆ ಚುನಾವಣೆಗಳನ್ನು ನಡೆಸುತ್ತದೆ.

೨. ಉದ್ಭವಿಸುವುದಿಲ್ಲ.

೩. ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

೪. ಉದ್ಭವಿಸುವುದಿಲ್ಲ.

11.10 ಎ.ಎಂ.

ಶ್ರೀ ಎ.ಎಸ್. ಗುರುಸ್ವಾಮಿ :— ಅಧ್ಯಕ್ಷರೆ, 74ನೇ ತಿದ್ದುಪಡಿ ಏನು ಪಂಚಾಯತ್ ರಾಜ್ ಕಾನೂನಿಗೆ ಆಯಿತು, ಆಗ ಅದರಲ್ಲಿ ಕಡ್ಡಾಯವಾಗಿ ಒಂದು ಪ್ರಾವಿಷನನ್ನು ಮಾಡಿದ್ದಾರೆ. ಏನೆಂದರೆ ಈ ಒಂದು ಪಂಚಾಯತ್ ರಾಜ್‌ನ ಮೂರು ಘಟಕಗಳೇನು ಇದ್ದಾವೆ, ಎಲ್ಲಾ ಚುನಾವಣೆಗಳನ್ನು ಒಂದೇ ಸಲ ಮಾಡಬೇಕೆನ್ನತಕ್ಕದ್ದು ಅಲ್ಲಿ ಇದೆ ಎನ್ನುವುದನ್ನು ನಾನು ತಿಳಿದುಕೊಂಡಿದ್ದೇನೆ, ಓದಿದ್ದೇನೆ. ಇದನ್ನು ಸರ್ಕಾರ ಏತಕ್ಕೆ ಜಾರಿಗೆ ತಂದಿಲ್ಲ? 74ನೇ ಅಮೆಂಡ್‌ಮೆಂಟ್ ಮಾಡುವಂಥ ಸಂದರ್ಭದಲ್ಲಿ ಎಸ್.ಕೆ.ಡೇ ರಿಪೋರ್ಟ್‌ನಲ್ಲಿ ಪಂಚಾಯತ್ ರಾಜ್ ಬಗ್ಗೆ ಬಹಳ ಅಮೂಲ್ಯವಾದ ಬಹಳಷ್ಟು ಸಲಹೆಗಳನ್ನು ಬೈಬಲ್ ರೀತಿಯಲ್ಲಿ ಅವನು ಕೊಟ್ಟಿದ್ದಾನೆ. ಪ್ರಾಕ್ಟಿಕಲ್ ಸಲಹೆಗಳನ್ನು ಕೊಟ್ಟಿದ್ದಾನೆ. ಅದನ್ನು ಸರ್ಕಾರ ಪರಿಶೀಲನೆ ಮಾಡಿ ಏನಾದರೂ ಕಾರ್ಯಗತ ಮಾಡಲಿಕ್ಕೆ ಇಚ್ಛೆ ಇದೆಯೇ

F-4-II

ಎನ್ನತಕ್ಕದ್ದು ಮತ್ತು tendency from decentralisation to Centralisation. ಸ್ಟಾರ್ಟ್ ಆಗಿದೆ, ಇದನ್ನು ತಮ್ಮ ಕಾಲದಲ್ಲಿ ಪ್ರಿವೆಂಟ್ ಮಾಡುತ್ತೀರಾ? ಈ ಸಂಸ್ಥೆಗಳಿಗೆ ಉತ್ತಮ ಮಟ್ಟದ ಜನಪ್ರತಿನಿಧಿಗಳನ್ನು ಚುನಾಯಿಸಲು ಗುರುತಿನ ಚೀಟಿಗಳನ್ನು ಕೊಡುವುದು, ಕಡ್ಡಾಯ ಮತದಾನ, ತಪ್ಪಿದಲ್ಲಿ ಸವಲತ್ತುಗಳನ್ನು ಮೊಟಕುಗೊಳಿಸುವುದು, ಪ್ರತಿನಿಧಿಗಳು ಉಮೇದುವಾರಿಕೆ ಸಲ್ಲಿಸುವ ಸಂದರ್ಭದಲ್ಲಿ ತಮ್ಮ ಆಸ್ತಿ ಹಾಗೂ ದಾಯಿತ್ವಗಳ ಘೋಷಣೆ, ಚುನಾವಣಾ ವೆಚ್ಚದ ಮೇಲೆ ಕಡಿವಾಣ ಮುಂತಾದ ಸುಧಾರಣೆಗಳನ್ನು ಜಾರಿಗೆ ತರಲು ಇರುವ ಅಡಚಣೆಗಳೇನು? ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಆದಕ್ಕೆ ಅವರ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ ಎಂದು ಒಪ್ಪಿಕೊಂಡಿದ್ದಾರೆ. ನನ್ನದೊಂದು ಸಲಹೆ ಇದೆ. ದಯಮಾಡಿ ಇದನ್ನು ಮಾನ್ಯ ಮಂತ್ರಿಗಳು ಪರಿಶೀಲಿಸಬೇಕು ಗುರುತಿನ ಚೀಟಿ ಎಂದರೆ ಐಡಿ ಕಾರ್ಡೇ ಬೇಕೆಂದಿಲ್ಲ. Ration card also applies ಅವೂ ಕೂಡ ಗುರುತು ತೋರಿಸುತ್ತದೆ. ಇದನ್ನು ತೋರಿಸಿದ ವ್ಯಕ್ತಿಗಳಿಗೆ ಮತದಾನದಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕೊಟ್ಟರೆ ಉತ್ತಮ ಜನರು ಆದರಲ್ಲಿ ಭಾಗವಹಿಸುವುದಕ್ಕೆ ಬರುತ್ತದೆ. ಕಡ್ಡಾಯ ಮತದಾನದ ಬಗ್ಗೆ ಅಮೆಂಡ್‌ಮೆಂಟ್ ಬಗ್ಗೆ ಯಾವುದೇ ಕಾನೂನನ್ನು ಮಾಡಬೇಕಾಗಿಲ್ಲ.

ಅಧ್ಯಕ್ಷರು :— ಆದು ಸೆಂಟ್ರಲ್ ಎಲೆಕ್ಷನ್ ಕಮೀಷನ್‌ಗೆ ಸಂಬಂಧಪಟ್ಟದ್ದು.

ಶ್ರೀ ಎ.ಎಸ್. ಗುರುಸ್ವಾಮಿ :— ಇದರ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಸರ್ಕ್ಯೂಲರನ್ನು ಹೊರಡಿಸಿದರೆ ಸಾಕು. ಯಾರು ಮತದಾನದಲ್ಲಿ ಭಾಗವಹಿಸುವುದಿಲ್ಲ, ಇವರ ರೆಸಿಡೆನ್ಷಿಯಲ್ ಕ್ವಾಲಿಫಿಕೇಷನನ್ನು ವೆರಿವೈ ಮಾಡುತ್ತೇನೆ ಎಂದು ಹೇಳಿಬಿಡಿ. ಸವಲತ್ತು ಪುನರ್ ಪರಿಶೀಲನೆ ಮಾಡುತ್ತೇವೆ ಎಂದು ತಾವು ಹೇಳಿದರಿ. ಆಗ ಎಲ್ಲರೂ ವೋಟ್ ಮಾಡುತ್ತಾರೆ.

ಅಧ್ಯಕ್ಷರು :— ಅಲ್ಲಿ ಏನೇನು ಸಲಹೆಗಳು ಇದೆಯೋ ಅವುಗಳನ್ನು ಪರಿಶೀಲಿಸುತ್ತಿದ್ದೇವೆ ಎಂದು ಹೇಳಿದ್ದಾರಲ್ಲಾ?

ಶ್ರೀ ಎಂ.ವೈ. ಘೋರ್ಪಡೆ :— ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ವ್ಯಾಪ್ತಿಯಲ್ಲಿರುವ ಪ್ರಶ್ನೆಗಳಿಗೆ ನಾನು ಉತ್ತರವನ್ನು ಹೇಳುವುದಕ್ಕೆ ಸಾಧ್ಯವಾಗುತ್ತದೆ. ಹೊರಗಡೆ ಇರುವುದು ಬೇರೆ ವಿಷಯ. ಇದು ಎಲೆಕ್ಷನ್ ಕಮಿಷನ್‌ಗೆ ಸಂಬಂಧಪಟ್ಟದ್ದು. ಇದು ತಮಗೆ ಗೊತ್ತಿರುವ ಹಾಗೆ 93 ಆ್ಯಕ್ಟಿನ ಪ್ರಕಾರ ಸೆಕ್ಷನ್ 308 ರ ಪ್ರಕಾರ ಎಲೆಕ್ಷನ್ ಕಮೀಷನ್ ಸ್ಥಾಪನೆಯಾಗಿದೆ. ಆದು ಎಲ್ಲಾ ಚುನಾವಣೆಗಳನ್ನು ನಡೆಸಬೇಕು ಎಂದು ಹೇಳಿ ಸ್ಪಷ್ಟವಾಗಿ ಇದೆ. ಇತ್ತೀಚೆಗೆ ಎಲೆಕ್ಷನ್ ಕಮೀಷನ್‌ನಿಂದ ಕೆಲವು ಪ್ರಸ್ತಾವನೆಗಳು ಬಂದಿವೆ. ಯಾರು ಅಕೌಂಟ್ಸ್ ಫರ್ನಿಷ್ ಮಾಡುವುದಿಲ್ಲ, ಅವರನ್ನು ಡಿಸ್-ಕ್ವಾಲಿಫೈ ಮಾಡಬೇಕು.

4-A-II

ಸ್ಟೇಟ್ ಎಲೆಕ್ಷನ್ ಕಮೀಷನ್ ಅಡಿಯಲ್ಲಿ ಎಲೆಕ್ಷನ್ ಸ್ಟಾಫ್ ಏನು ಇದೆ, ಇವರು ಕಮಿಷನ್ ಅಡಿಯಲ್ಲಿ ಕೆಲಸ ಮಾಡಬೇಕು. ಇವೆರಡು ಮುಖ್ಯವಾದ ಪ್ರಸ್ತಾವನೆಗಳು ಬಂದಿದೆ. ಈಗ ನಾವು ಈ ಪ್ರಸ್ತಾವನೆಯನ್ನು ಕೂಡ ಗಮನಿಸಿ ಸೂಕ್ತವಾದ ಕಾರ್ಯಕ್ರಮಗಳನ್ನು ಮಾಡುತ್ತೇವೆ. ಪಂಚಾಯತ್ ರಾಜ್ ವ್ಯವಸ್ಥೆಗೆ ರಿಫಾರ್ಮ್ಸ್ ತರುವ ವಿಚಾರ ಸರ್ಕಾರಕ್ಕೆ ಇದೆ. ಆಗಸ್ಟ್ ತಿಂಗಳಲ್ಲಿ ಈ ರಿಫಾರ್ಮ್ಸ್‌ನ್ನು ಯಾವ ರೀತಿ ಮಾಡಬೇಕೆಂದು ನಿರ್ಧಾರವನ್ನು ಮಾಡುತ್ತೇವೆ. ಮತ್ತೆ ಅಕ್ಟೋಬರ್ ತಿಂಗಳೊಳಗಾಗಿ ಈ ಅನುಷ್ಠಾನಕ್ಕೆ ತರುವುದಕ್ಕೆ ಸರ್ವ ಪ್ರಯತ್ನವನ್ನು ಮಾಡುತ್ತೇವೆ. ಇದರಲ್ಲಿ ಆಕ್ಟ್‌ಗೆ ಸ್ವಲ್ಪ ಅಮೆಂಡ್‌ಮೆಂಟ್ಸ್ ಮಾಡುವ ಅವಶ್ಯಕತೆ ಇರಬಹುದು. ಅಡ್ಮಿನಿಸ್ಟ್ರೇಟೀವ್ ಪ್ರೊಸೀಜರ್‌ನಲ್ಲೂ ಕೂಡ ಬಹಳಷ್ಟು ಬದಲಾವಣೆಗಳನ್ನು ಮಾಡುವ ಅವಶ್ಯಕತೆ ಇರಬಹುದು. ಆ ಕಾಲಕ್ಕೆ ಈ ಸೂಚನೆಗಳನ್ನೂ ಕೂಡ ನಾವು ಗಮನಕ್ಕೆ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೇ, ಇದು ಒಂದು ಮಹತ್ವದ ವಿಚಾರ. ಈ ಪಂಚಾಯತ್ ರಾಜ್ ಸಂಸ್ಥೆಗೆ ಚುನಾವಣೆ ನಡೆಯತಕ್ಕ ಸಂದರ್ಭದಲ್ಲಿ ಮಾನ್ಯ ಗುರುಸ್ವಾಮಿಯವರು ಎತ್ತಿರತಕ್ಕಂಥದ್ದು ಈ ಚುನಾವಣಾ ವೆಚ್ಚದ ಬಗ್ಗೆ ಕಡಿವಾಣವನ್ನು ಹಾಕತಕ್ಕದ್ದು, ಈ ರಿಸರ್ವೇಷನ್ಸ್ ಪ್ರೆಸಿಡೆಂಟ್, ವೈಸ್ ಪ್ರೆಸಿಡೆಂಟ್ ರಿಸರ್ವೇಷನ್ ಮತ್ತೆ ಆ ಕ್ಷೇತ್ರದ ವಾರ್ಡ್‌ಗಳನ್ನು ರಿಸರ್ವ್ ಮಾಡತಕ್ಕದ್ದು, ಆ ಪವರ್ಸ್‌ನ್ನು ಎಲೆಕ್ಷನ್ ಕಮಿಷನ್‌ಗೆ ಕೊಡುವುದಕ್ಕೆ ಅದು ನಮ್ಮ ಕೈಯಲ್ಲೂ ಆಗಿರಲಿಲ್ಲ. I agree that this was a fault in our time. ನಾವು ಮಾಡುವುದಕ್ಕಾಗಲಿಲ್ಲ. ನಾನೇನು ಹೇಳುತ್ತೇನೆ, ಇದನ್ನು ಸರ್ಕಾರ ಮಾಡುವುದರ ಬದಲಾಗಿ you must take all parties into confidence in this regard. ನಿಮಗೊಂದು ಕಾನ್ಸೆಪ್ಟ್ ಇದೆ. ಇದನ್ನು ಆದಷ್ಟು ಪಾರ್ಟಿಲೆಸ್ ಆಗಿ ಎಲೆಕ್ಷನನ್ನು ಮಾಡಬೇಕೆಂದು ತಮ್ಮ ಮನಸ್ಸಿನಲ್ಲಿ ಇದೆ. ಅದನ್ನು ಅನೇಕ ಸಂದರ್ಭದಲ್ಲಿ ಹೇಳಿದ್ದೀರಿ. We appreciate, ನಿಮ್ಮ ಕಾಲದಲ್ಲಿ ಏನಾದರೂ ಒಂದು ರಿಜಿಡ್ ಆಗಿ ಈಗ ಆಕ್ಚುಯಲ್ ಎಲೆಕ್ಷನ್ ಎಂದರೆ it has become farce, ಮಸಲ್ ಪವರ್, ಮನಿ ಪವರ್, ಲಿಕ್ಕರ್ ಪವರ, ಅದರ ಡಿಸ್ಟ್ರಿಬ್ಯೂಷನ್ ಇದು ಆಗಿದೆಯೇ ಹೊರತು ಇದು ಒಂದೊಂದು ಗ್ರಾಮ ಪಂಚಾಯಿತಿಯ ಎಲೆಕ್ಷನ್ ಪ್ರೆಸ್ಟೀಜ್ ಮಾಡಿಕೊಂಡು ಒಂದು ಲಕ್ಷ ಎರಡು ಲಕ್ಷ ರೂಪಾಯಿಗಳನ್ನು ಒಂದು ಸೀಟ್‌ಗೆ ಖರ್ಚು ಮಾಡಿರತಕ್ಕದ್ದು ಗೊತ್ತಿದೆ. ಆಮೇಲೆ ಪ್ರೆಸಿಡೆಂಟ್, ವೈಸ್ ಪ್ರೆಸಿಡೆಂಟ್‌ನಲ್ಲಿ ನಾನು ಪ್ರೆಸಿಡೆಂಟ್ ಆಗಬೇಕು, ನೀನು ಪ್ರೆಸಿಡೆಂಟ್ ಆಗಬೇಕೆಂದು ಹೇಳಿ 5 ಲಕ್ಷ ರೂ. ಗೆ 10 ಲಕ್ಷ ರೂ.ಗೆ ಕರೆದುಕೊಂಡು ಹೋಗಿ ಕಿಡ್ನ್ಯಾಪ್ ಮಾಡಿರತಕ್ಕದ್ದೂ ಗೊತ್ತಿದೆ. This is the right time for the Government to make major revolutionary changes, and major reforms. You can take into confidence all parties in the matter. ಇದರಲ್ಲಿ ಬರೀ ರೂಲಿಂಗ್ ಪಾರ್ಟಿ,

ಮತ್ತೊಂದು ಗೌರ್ನಮೆಂಟ್ ಎನ್ನುವ ಪ್ರಶ್ನೆ ಬರಬಾರದು. You must constitute a Committee, take all parties into confidence and then make reforms. This will certainly bring in changes at the grassroot level. It will have better representatives where they can contribute to the polity.

ಶ್ರೀ ಎಂ.ವೈ ಘೋರ್ಪಡೆ :— ಮಾನ್ಯ ಅಧ್ಯಕ್ಷರೇ, ಆಗಲೇ ಒಂದು ಡೆವಲಪ್‌ಮೆಂಟ್ ಕಮೀಷನರ್ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿದ್ದೇವೆ. ಏಕೆಂದರೆ ರಿಫಾರ್ಮ್ಸ್ ಏನು ಇರಬೇಕೆಂದು ನಮ್ಮ ಮನಸ್ಸಿನಲ್ಲಿ ಸ್ಪಷ್ಟವಾದ ಚಿತ್ರ ಮೂಡಬೇಕು. ಅನಂತರ ಅದನ್ನು ಅನುಷ್ಠಾನ ಮಾಡುವ ಪ್ರಶ್ನೆ ಬರುತ್ತದೆ. ಆಗಸ್ಟ್ ತಿಂಗಳು ಆದ ನಂತರ ರಿಫಾರ್ಮ್ಸ್ ಏನು ಇರಬೇಕು ಎನ್ನುವುದು ಬಂದಾಗ ಎಲೆಕ್ಟೋರಲ್ ರಿಫಾರ್ಮ್ಸ್ ಬಗ್ಗೆಯೂ ನಾರು ಗಮನವನ್ನು ಕೊಡಬೇಕೆನ್ನುವ ಅಭಿಪ್ರಾಯ ಏನು ಇದೆ, ಅದನ್ನು ನಾನು ಒಪ್ಪುತ್ತೇನೆ. ಮತ್ತೆ ಎಲ್ಲಾ ಪಕ್ಷಗಳಿಗೆ ಈ ರಿಫಾರ್ಮ್ಸ್ ಬಗ್ಗೆ ಮಾಹಿತಿ ಕೊಟ್ಟು ಅವರ ಅಭಿಪ್ರಾಯಗಳನ್ನು ಕೂಡ ತೆಗೆದುಕೊಳ್ಳುವ ಪ್ರಯತ್ನವನ್ನು ಖಂಡಿತವಾಗಿಯೂ ನಾವು ಮಾಡುತ್ತೇವೆ.

ಶ್ರೀ ಎ.ಎಸ್. ಗುರುಸ್ವಾಮಿ :— ಮಾನ್ಯ ಅಧ್ಯಕ್ಷರೇ, 93ರ ಆ್ಯಕ್ಟ್‌ನಲ್ಲಿ ಒಂದು ಒಳ್ಳೆಯ ಪ್ರಾವಿಷನ್ ಇದೆ. ಯಾವ ಪಂಚಾಯಿತಿ ಮೆಂಬರ್, ಛೇರ್ಮನ್, ಸದಸ್ಯ ಏನಾದರೂ ಪಂಚಾಯಿತಿಯಲ್ಲಿ ವೆಸ್ಟೆಡ್ ಇಂಟರೆಸ್ಟ್ ಇಟ್ಟುಕೊಂಡು ಕೆಲಸ ಮಾಡಿದ ಪಕ್ಷದಲ್ಲಿ ಅವನನ್ನು ಡಿಸ್-ಮೆಂಬರ್ ಮಾಡಬೇಕೆಂದು ಇದೆ. ಇದುವರೆಗೂ ನನಗೆ ಕಂಡಂತೆ ಕರ್ನಾಟಕ ರಾಜ್ಯದಲ್ಲಿ ಎಷ್ಟು ಮಂದಿಯನ್ನು ಹಾಗೆ ಮಾಡಿದ್ದಾರೆಂದು ದಯಮಾಡಿ ಸಭೆಗೆ ತಿಳಿಸಬೇಕೆಂದು ಕೋರುತ್ತೇನೆ.

ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಕುಡಿಯುವ ನೀರಿನ ಯೋಜನೆಗಳ ವಿಳಂಬ

275 (3008) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಕುಡಿಯುವ ನೀರಿನ ಎಷ್ಟು ಯೋಜನೆಗಳು ಅನುಷ್ಠಾನದಲ್ಲಿವೆ.

ಆ) ಹಾಗಿದ್ದಲ್ಲಿ, ಯೋಜನೆಗಳ ಪ್ರಗತಿ ಯಾವ ಹಂತದಲ್ಲಿದೆ ವಿವರ ನೀಡುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :—

ಅ) 33

ಆ) ವಿವರಗಳನ್ನು ಅನುಬಂಧ (1)ರಲ್ಲಿ ನೀಡಲಾಗಿದೆ.

ಅನುಬಂಧ-1

ವಿಧಾನಸಭೆ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೦೦ರ ಉತ್ತರದ ಲಗತ್ತು.
ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಅನುಷ್ಠಾನದಲ್ಲಿರುವ ಗ್ರಾಮೀಣ ನೀರು ಸರಬರಾಜು ಯೋಜನೆಗಳು

ರೂ.ಲಕ್ಷಗಳಲ್ಲಿ

1	2	3	4	5	6	7
ಕ್ರ. ಸಂ.	ಗ್ರಾಮ	ಯೋಜನೆ	ವಲಯ	ಅಂದಾಜು ಮೊತ್ತ	ಜೂನ್-2001ರ ಅಂತ್ಯದವರೆಗಿನ ವೆಚ್ಚ.	ಷರಾ
1	ಮುತ್ತಿನ ಮುಲಸೋಗೆ ದಿಂಡಗಾಡು	ಎಳನೀರು ಸರಬರಾಜು	ರಾಜ್ಯ	7.60	8.31	ಯೋಜನೆ ಪೂರ್ಣಗೊಂಡಿದ್ದು ಪ್ರಾಯೋಗಿಕವಾಗಿ ನೀರು ಪೂರೈಕೆ ಮಾಡಲಾಗುತ್ತಿದೆ.
2	ಚಿಟ್ಟ ಹೆಬ್ಬಾಗಿಲು	ಎಳನೀರು ಸರಬರಾಜು	ರಾಜ್ಯ	5.75	6.67	
3	ಹುಣಸೇಕುಪ್ಪ	ಎಳನೀರು ಸರಬರಾಜು	ರಾಜ್ಯ	6.00	6.48	
4	ಗಂಗನಕುಪ್ಪೆ ವಡ್ಡರಕುಪ್ಪೆ ಕುಮಾರಿ ಕೊಪ್ಪಲು	ಎಳನೀರು ಸರಬರಾಜು	ರಾಜ್ಯ	9.15	7.60	
5	ಶಾನುಭೋಗನಹಳ್ಳಿ	ಎಳನೀರು ಸರಬರಾಜು	ರಾಜ್ಯ	6.95	4.03	
6	ಅತ್ತಿಗೋಡು	ಎಳನೀರು ಸರಬರಾಜು	ರಾಜ್ಯ	7.25	6.07	
7	ವಡ್ಡರಹಳ್ಳಿ	ಎಳನೀರು ಸರಬರಾಜು	ಕೇಂದ್ರ	7.09	6.45	
8	ಚಿಕ್ಕನೇರಳೆ ಸಂತೆಮಾಲ	ಎಳನೀರು ಸರಬರಾಜು	ಕೇಂದ.	8.00	6.05	

1	2	3	4	5	6
9	ಮುತ್ತಿನ ಮುಲಸೋಗ ದಿಂಡಗಾಡು	ಎಳನೀರು ಸರಬರಾಜು	ರಾಜ್ಯ	7.60	8.31
10	ಸಿಟ್ನಿ ಹೆಬ್ಬಾಗಿಲು	ಎಳನೀರು ಸರಬರಾಜು	ರಾಜ್ಯ	5.75	6.67
11	ಹುಣಸೇಕುಪ್ಪ	ಎಳನೀರು ಸರಬರಾಜು	ರಾಜ್ಯ	6.00	6.48
12	ಗಂಗನಕುಪ್ಪೆ ವಡ್ಡರಕುಪ್ಪೆ ಕುಮಾರಿ ಕೊಪ್ಪಲು	ಎಳನೀರು ಸರಬರಾಜು	ರಾಜ್ಯ	9.15	7.60
13	ಶಾನುಭೋಗನಹಳ್ಳಿ	ಎಳನೀರು ಸರಬರಾಜು	ರಾಜ್ಯ	6.95	4.03
14	ಅತ್ತಿಗೋಡು	ಎಳನೀರು ಸರಬರಾಜು	ರಾಜ್ಯ	7.25	6.07
15	ವಡ್ಡರಹಳ್ಳಿ	ಎಳನೀರು ಸರಬರಾಜು	ಕೇಂದ್ರ	9.15	7.60
16	ಚಿಕ್ಕನೇರಳೆ ಸಂತೆಮಾಲ	ಎಳನೀರು ಸರಬರಾಜು	ಕೇಂದ್ರ	9.15	7.60

1	2	3	4	5	6
17	ಮುತ್ತಿನ ಮುಲಸೋಗ ದಿಂಡಗಾಡು	ಎಳನೀರು ಸರಬರಾಜು	ರಾಜ್ಯ	7.60	8.31
18	ಸಿಟ್ನಿ ಹೆಬ್ಬಾಗಿಲು	ಎಳನೀರು ಸರಬರಾಜು	ರಾಜ್ಯ	5.75	6.67
19	ಹುಣಸೇಕುಪ್ಪ	ಎಳನೀರು ಸರಬರಾಜು	ರಾಜ್ಯ	6.00	6.48
20	ಗಂಗನಕುಪ್ಪೆ ವಡ್ಡರಕುಪ್ಪೆ ಕುಮಾರಿ ಕೊಪ್ಪಲು	ಎಳನೀರು ಸರಬರಾಜು	ರಾಜ್ಯ	9.15	7.60
21	ಶಾನುಭೋಗನಹಳ್ಳಿ	ಎಳನೀರು ಸರಬರಾಜು	ರಾಜ್ಯ	6.95	4.03
22	ಅತ್ತಿಗೋಡು	ಎಳನೀರು ಸರಬರಾಜು	ರಾಜ್ಯ	7.25	6.07
23	ವಡ್ಡರಹಳ್ಳಿ	ಎಳನೀರು ಸರಬರಾಜು	ಕೇಂದ್ರ	9.15	7.60
24	ಚಿಕ್ಕನೇರಳೆ ಸಂತೆಮಾಲ	ಎಳನೀರು ಸರಬರಾಜು	ಕೇಂದ್ರ	9.15	7.60

7

ಯೋಜನೆ ಪೂರ್ಣಗೊಂಡಿದ್ದು
ಪ್ರಾಯೋಗಿಕವಾಗಿ ನೀರು
ಪೂರೈಕೆ ಮಾಡಲಾಗುತ್ತಿದೆ.

7

ಯೋಜನೆ ಪೂರ್ಣಗೊಂಡಿದ್ದು
ಪ್ರಾಯೋಗಿಕವಾಗಿ ನೀರು
ಪೂರೈಕೆ ಮಾಡಲಾಗುತ್ತಿದೆ.

1	2	3	4	5	6
17	ಮುತ್ತಿನ ಮುಲಸೋಗ ದಿಂಡಗಾಡು	ಎಳನೀರು ಸರಬರಾಜು	ರಾಜ್ಯ	7.60	8.31
18	ಸಿಟ್ಟಿ ಹೆಬ್ಬಾಗಿಲು	ಎಳನೀರು ಸರಬರಾಜು	ರಾಜ್ಯ	5.75	6.67
19	ಹುಣಸೇಕುಪ್ಪ	ಎಳನೀರು ಸರಬರಾಜು	ರಾಜ್ಯ	6.00	6.48
20	ಗಂಗನಕುಪ್ಪೆ ವಡ್ಡರಕುಪ್ಪೆ ಕುಮಾರಿ ಕೊಪ್ಪಲು	ಎಳನೀರು ಸರಬರಾಜು	ರಾಜ್ಯ	9.15	7.60
21	ಶಾನುಭೋಗನಹಳ್ಳಿ	ಎಳನೀರು ಸರಬರಾಜು	ರಾಜ್ಯ	6.95	4.03
22	ಅತ್ತಿಗೋಡು	ಎಳನೀರು ಸರಬರಾಜು	ರಾಜ್ಯ	7.25	6.07
23	ವಡ್ಡರಹಳ್ಳಿ	ಎಳನೀರು ಸರಬರಾಜು	ಕೇಂದ್ರ	9.15	7.60
24	ಚಿಕ್ಕನೇರಳೆ ಸಂತೆಮಾಲ	ಎಳನೀರು ಸರಬರಾಜು	ಕೇಂದ್ರ	9.15	7.60

1	2	3	4	5	6
17	ಮುತ್ತಿನ ಮುಲಸೋಗ ದಿಂಡಗಾಡು	ಎಳನೀರು ಸರಬರಾಜು	ರಾಜ್ಯ	7.60	8.31
18	ಸಿಟ್ಟಿ ಹೆಬ್ಬಾಗಿಲು	ಎಳನೀರು ಸರಬರಾಜು	ರಾಜ್ಯ	5.75	6.67
19	ಹುಣಸೇಕುಪ್ಪ	ಎಳನೀರು ಸರಬರಾಜು	ರಾಜ್ಯ	6.00	6.48
20	ಗಂಗನಕುಪ್ಪೆ ವಡ್ಡರಕುಪ್ಪೆ ಕುಮಾರಿ ಕೊಪ್ಪಲು	ಎಳನೀರು ಸರಬರಾಜು	ರಾಜ್ಯ	9.15	7.60
21	ಶಾನುಭೋಗನಹಳ್ಳಿ	ಎಳನೀರು ಸರಬರಾಜು	ರಾಜ್ಯ	6.95	4.03
22	ಅತ್ತಿಗೋಡು	ಎಳನೀರು ಸರಬರಾಜು	ರಾಜ್ಯ	7.25	6.07
23	ವಡ್ಡರಹಳ್ಳಿ	ಎಳನೀರು ಸರಬರಾಜು	ಕೇಂದ್ರ	9.15	7.60
24	ಚಿಕ್ಕನೇರಳೆ ಸಂತೆಮಾಲ	ಎಳನೀರು ಸರಬರಾಜು	ಕೇಂದ್ರ	9.15	7.60

7

ಯೋಜನೆ ಪೂರ್ಣಗೊಂಡಿದ್ದು
ಪ್ರಾಯೋಗಿಕವಾಗಿ ನೀರು
ಪೂರೈಕೆ ಮಾಡಲಾಗುತ್ತಿದೆ.

7

ಯೋಜನೆ ಪೂರ್ಣಗೊಂಡಿದ್ದು
ಪ್ರಾಯೋಗಿಕವಾಗಿ ನೀರು
ಪೂರೈಕೆ ಮಾಡಲಾಗುತ್ತಿದೆ.

F-5-II

ಶ್ರೀ ಹೆಚ್.ಸಿ. ಬಸವರಾಜು :— ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಪಿರಿಯಾಪಟ್ಟಣ ತಾಲ್ಲೂಕು ಕಳೆದ ಎರಡೂ ವರ್ಷಗಳಿಂದಲೂ ಕೂಡ ಬಹಳ ಗಂಭೀರವಾದ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಅವರ ಉತ್ತರದ ಪ್ರಕಾರ ಸುಮಾರು 33 ಯೋಜನೆಗಳು ಕಂಪ್ಲೀಟ್ ಆಗಬೇಕೆಂದು ಕೊಟ್ಟಿದ್ದಾರೆ. ಮೂಲತ: 49 ಯೋಜನೆಗಳಿಗೂ ಹೆಚ್ಚು ಕಾಮಗಾರಿಗಳು ಕೆಲಸವಾಗದೇ ವಿವಿಧ ಹಂತಗಳಲ್ಲಿ ನಿಂತಿವೆ. ಇದಕ್ಕೆ ಕಾರಣವಾದರೂ ಏನು ಎನ್ನುವುದನ್ನು ದಯವಿಟ್ಟು ತಿಳಿಸಬೇಕು. ಮತ್ತು ಅದೇ ರೀತಿ ಪ್ರಾರಂಭ ಮಾಡದೇ ಟೆಂಡರ್ ಕರೆಯದೆ ಇರುವ ಯೋಜನೆಗಳೆಷ್ಟು? ಜಿಲ್ಲಾ ಪಂಚಾಯಿತಿ ವತಿಯಿಂದ ಪೈಪು ಮತ್ತು ಪಂಪು ಸರಬರಾಜು ಮೂರ ತಿಂಗಳಿಂದ ಮಾಡದೇ ಇದ್ದು ಯೋಜನೆಗಳು ಕುಂಠಿತವಾಗಿರುವುದೆಷ್ಟು? ಯೋಜನೆ ಮುಗಿದು ವಿದ್ಯುಚ್ಛಕ್ತಿ ಸರಬರಾಜಾಗದೆ ಇರುವ ಯೋಜನೆಗಳೆಷ್ಟು? ಈ ಯೋಜನೆಗಳನ್ನು ಯಾವಾಗ ಮುಗಿಸುತ್ತೀರಿ ಅದಲ್ಲದೆ ಎಸ್.ಆರ್.ಡಬ್ಲ್ಯೂ. ಎಸ್.ಆರ್.ಡಬ್ಲ್ಯೂ ಯೋಜನೆಗಳು ಸುಮಾರು ಎರಡು ವರ್ಷಗಳಿಂದಲೂ ಟೆಂಡರ್ ಕರೆಯದೆ ನಿಂತಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು :— ಮಾನ್ಯ ಬಸವರಾಜುರವರೇ, ಎಳೆಂಟು ಪ್ರಶ್ನೆಗಳನ್ನು ಕೇಳಿದರೆ ಅವರು ಹೇಗೆ ಉತ್ತರವನ್ನು ಹೇಳಲು ಸಾಧ್ಯವಾಗುತ್ತೆ. ನೀವೇ ಹೇಳಿ.

ಶ್ರೀ ಹೆಚ್.ಸಿ. ಬಸವರಾಜು :— ಎಲ್ಲಾ ಒಂದೇ ಪ್ರಶ್ನೆ ಕುಡಿಯುವ ನೀರಿಗೆ ಸಂಬಂಧಪಟ್ಟಿರುವುದು. ಅದನ್ನು ಹೇಳಿಬಿಟ್ಟರೆ ಮುಗಿಯಿತುಯ ಏನಾಗಿದೆ ಎಂದರೆ ನಮ್ಮ ತಾಲ್ಲೂಕಿನಲ್ಲಿ ನಾನು ಶಾಸಕನಾಗಿ ಕೆಲಸ ಮಾಡುವುದೇ ಕಷ್ಟವಾಗಿಬಿಟ್ಟಿದೆ. ಸಾಮಾನ್ಯವಾಗಿ ಹಳ್ಳಿಗಳಿಗೆ ಹೋದಾಗ ಅವರು ಕೇಳುವುದು ಕುಡಿಯುವ ನೀರಿನ ಯೋಜನೆ ಬಗ್ಗೆ ಎರಡು ವರ್ಷಗಳಾದರೂ ಈ ಯೋಜನೆಗಳು ಕಂಪ್ಲೀಟ್ ಆಗಿಲ್ಲವೆಂದು ಹೇಳಿದಾಗ ಶಾಸಕರಾಗಿ ನೀವೇನು ಮಾಡುತ್ತೀರಿ ಎಂದು ಕೇಳಿದಾಗ ಏನು ಉತ್ತರ ಕೊಡಬೇಕೆಂದು ಸನ್ಮಾನ್ಯ ಮಂತ್ರಿಗಳು ಹೇಳಬೇಕು. ಎರಡು ವರ್ಷಗಳಿಂದಲೂ ಕಾಮಗಾರಿಗಳೆಲ್ಲಾ ಹಾಗೆಯೇ ಇವೆ.

ಶ್ರೀ ಎಂ.ವೈ. ಘೋರ್ಪಡೆ :— ಮಾನ್ಯ ಅಧ್ಯಕ್ಷರೇ, ನನಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಟ್ಟರೆ ಕೊಡುತ್ತೇನೆ. ಎಷ್ಟೊಂದು ಪ್ರಶ್ನೆಗಳನ್ನು ಕೇಳಿದ್ದಾರೆ. ನಾನು ನಾಲ್ಕು ಹಂತದಲ್ಲಿ ಉತ್ತರ ಕೊಡಬೇಕಾಗಿದೆ. ಇದು ಎಲ್ಲಾ ಪಿರಿಯಾಪಟ್ಟಣಕ್ಕೆ ಸಂಬಂಧಪಟ್ಟಿರುವುದು. ಪೈಪ್ ವಾಟರ್ ಸಪ್ಲೈ 129 ಇದೆ. ಬೋರ್‌ವೆಲ್ಸ್ ಹ್ಯಾಂಡ್ ಪಂಪ್ಸ್ 1253 ಇದೆ. ಮಿನಿವಾಟರ್ ಸಪ್ಲೈ 150 ಇದೆ. ಇದು ಒಂದು. ಅದಲ್ಲದೆ 33 ಸ್ಕೀಮ್‌ಗಳನ್ನು ನಾವು ತೆಗೆದುಕೊಂಡಿದ್ದೇವೆ. ಈ 33 ಸ್ಕೀಂಗಳಿಗೆ 160 ಕೋಟಿ ಲಕ್ಷ ರೂಪಾಯಿಗಳು ಖರ್ಚಾಗಿದೆ. ಈ 33 ಸ್ಕೀಮ್‌ಗಳಲ್ಲಿ ಈಗಾಗಲೇ ಮೂರು ಕಂಪ್ಲೀಟ್ ಆಗಿದೆ ಮತ್ತೆ ಎಂಟು

ಕಂಪ್ಲೀಟ್ ಆಗಿದೆ. ಅದಕ್ಕೆ ಎನರ್ಜೈಜೇಷನ್ ಆಗಬೇಕು. 8 ಮುಗಿಯುತ್ತಿದೆ, 14 ಚಾಲ್ತಿಯಲ್ಲಿದೆ, 80 ಲಕ್ಷ ರೂಪಾಯಿಗಳ ಖರ್ಚು ಮಾಡಿ ಇನ್ನು 11 ಸ್ಕೀಂ ಅನ್ನು ನಾವು ಮಾಡುತ್ತಿದ್ದೇವೆ. ಈ ಎಲ್ಲಾ ಕೆಲಸಗಳನ್ನು ಇದೇ ವರ್ಷದಲ್ಲಿ ಪೂರ್ಣಗೊಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಮೈಸೂರು ಜಿಲ್ಲೆಯಲ್ಲಿ 40 ಕೋಟಿ ರೂಪಾಯಿಗಳು ಕುಡಿಯುವ ನೀರಿನ ಕಾರ್ಯಕ್ರಮವಿದ್ದು, ಈಗಾಗಲೇ ಇದರಲ್ಲಿ 13 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ, ಈ ಕಾರ್ಯಕ್ರಮದ ಕಡೆ ಎಲ್ಲಾ ಶಾಸಕರು ಗಮನಕೊಟ್ಟು ಯಶಸ್ವಿಯಾಗುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದಲ್ಲದೆ ಪಿರಿಯಾ ಪಟ್ಟಣ ತಾಲ್ಲೂಕಿನಲ್ಲಿ 43 ಲಕ್ಷ ರೂ.ಗಳನ್ನು ರಾಜ್ಯ ವಲಯ, 51 ಲಕ್ಷ ರೂ.ಗಳನ್ನು ಕೇಂದ್ರ ವಲಯದಲ್ಲಿ ಈ ವರ್ಷ ಕೊಟ್ಟಿದೇವೆ, ಈ ಎಲ್ಲಾ ಕಾರ್ಯಕ್ರಮಗಳು ಅಲ್ಲಿ ನಡೆಯುತ್ತಿವೆ.

ಶ್ರೀ ಹೆಚ್.ಸಿ. ಬಸವರಾಜು :— ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ ಅಲ್ಲಿ ಕೆಲಸ ನಡೆಯುತ್ತಿಲ್ಲ. ಏಕೆಂದರೆ ಕಳೆದ ಮೂರು ತಿಂಗಳಿನಿಂದ ಜಿಲ್ಲಾ ಪಂಚಾಯಿತಿಯಿಂದ ಒಂದು ಪೈಸೆಯನ್ನೂ ಕೊಟ್ಟಿಲ್ಲ; ಸುಮಾರು 10-15 ಯೋಜನೆಗಳು ಬರೀ ಪೈಪ್ ಮೋಟರ್ ಇಲ್ಲದೆ ಕರೆಂಟ್ ಕೊಟ್ಟರೂ ಕೂಡ ಮೂರು ತಿಂಗಳಿನಿಂದ ಕೆಲಸ ನಿಂತಿದೆ. ಜಿಲ್ಲಾ ಪಂಚಾಯಿತಿ ಕರ್ತವ್ಯ ಲೋಪದಿಂದ ಇವತ್ತು ಅಲ್ಲಿ ಜನರು ತೊಂದರೆ ಪಡುತ್ತಿದ್ದಾರೆ, ಜಿಲ್ಲಾ ಪಂಚಾಯಿತಿ ಬಗ್ಗೆ ಸರ್ಕಾರ ಹತೋಟಿಯನ್ನು ಕಳೆದುಕೊಂಡಿದೆ, ಈ ಕೆಲಸ ಯಾವಾಗ ಆಗುತ್ತದೆಂಬುದರ ಬಗ್ಗೆ ನನಗೆ ಸ್ಪಷ್ಟೀಕರಣ ಕೊಡಬೇಕು.

ಶ್ರೀ ಎಂ.ವೈ. ಘೋರ್ಪಡೆ :— ಇದನ್ನು ನನ್ನ ಗಮನಕ್ಕೆ ತಂದಿಲ್ಲ, ಗಮನಕ್ಕೆ ತಂದರೆ ಈ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಹೆಚ್.ಸಿ. ಬಸವರಾಜು :— ಸ್ವಾಮಿ ಈ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕು ಕಳೆದ ಮೂರು ತಿಂಗಳಿಂದ ಏತಕ್ಕೆ ಇಡೀ ಜಿಲ್ಲೆಯಲ್ಲಿ ಅಳವಡಿಸಲು ಪೈಪ್‌ಗಳನ್ನು ಕೊಟ್ಟಿಲ್ಲ?. ಮೂರು ತಿಂಗಳಿಂದ ಕುಡಿಯುವುದಕ್ಕೆ ನೀರಿಲ್ಲದೆ ಜನರು ತೊಂದರೆಪಡುತ್ತಿದ್ದಾರೆ, ಸರ್ಕಾರ ಹೀಗೆ ಮೌನವಾಗಿರುವುದು ಸರಿಯಲ್ಲ, ನಮಗೆ ನ್ಯಾಯ ದೊರಕಿಸಿಕೊಡಬೇಕು. ಉದಾಹರಣೆಗೆ ಕಣಗಾಲ್ ಗ್ರಾಮದಲ್ಲಿ ವಿಶ್ವ ಬ್ಯಾಂಕ್ ಯೋಜನೆಯಡಿಯಲ್ಲಿ ಕೆಲಸ ಎತ್ತಿಕೊಂಡು ಅದೂ ಕೂಡ ಆಗಿಲ್ಲ, ಇದೇ ಸರ್ಕಾರ ಎರಡು ಲಕ್ಷ ರೂಪಾಯಿಗಳ ಕೊಳವೆಬಾವಿಯನ್ನು ಹೊಸದಾಗಿ ತೆಗೆದರೇ ಹೊರತು ಮೂರು ತಿಂಗಳಿಂದ ಏನೂ ಮಾಡಿಲ್ಲ; ಕುಡಿಯುವ ನೀರಿಗೆ 100-200 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿಕೆಗಳು ಮಾತ್ರ ಬರುತ್ತವೆಯೇ ಹೊರತು ಹಣ ಮಾತ್ರ ಬಿಡುಗಡೆಯಾಗಿಲ್ಲ. ಜಿಲ್ಲಾ ಪರಿಷತ್‌ನವರು ಹಣ ಬಿಡುಗಡೆಯಾಗದೆ ನಾವೇನೂ ಮಾಡುವುದಕ್ಕಾಗುತ್ತದೆಂದು ಹೇಳುತ್ತಾರೆ. ಸತ್ಯಾಂಶ ಏನೆಂಬುದನ್ನು ಸರ್ಕಾರ ದಯವಿಟ್ಟು ಹೇಳಬೇಕು.

ಶ್ರೀ ಎಂ.ವೈ. ಘೋರ್ಪಡೆ :— ಮೈಸೂರು ಜಿಲ್ಲೆಯ 40 ಕೋಟಿ ರೂಪಾಯಿಗಳ ಕಾರ್ಯಕ್ರಮ ಹೇಗೆ ನಡೆಯುತ್ತಿದೆ ಎಂಬುದನ್ನು ನೋಡುವುದಕ್ಕೆ ಸ್ವತ: ನಾನೇ ಬಂದಿದ್ದೇ. 13 ಕೋಟಿ ರೂಪಾಯಿಗಳನ್ನು ಪ್ರಥಮವಾಗಿ ಅವೇರ್‌ನೆಸ್ ಪ್ರೋಗ್ರಾಂನ್ನು ಮಾಡಬೇಕಾಗುತ್ತದೆ, ಅದನ್ನು ಮಾಡುತ್ತಿದ್ದಾರೆ. ಈ ಕ್ರಾಯಕ್ರಮ ಪೂರೈಸಲು ಮೂರು ವರ್ಷಗಳು ಬೇಕು, ಇಷ್ಟೆಲ್ಲಾ ಮಾಡಿ ಯಾವುದಾದದರೂ ಹಳ್ಳಿಯಲ್ಲಿ ತೊಂದರೆ ಇರುವ ಬಗ್ಗೆ ನನಗೆ ತಿಳಿಸಲಿ, ನಾನು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ.

ಬಸವನಬಾಗೇವಾಡಿ ತಾಲ್ಲೂಕಿನಲ್ಲಿ ಹೊಸದಾಗಿ ಶಾಲೆಗಳ ಪ್ರಾರಂಭ

276 (3378) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ನೂತನವಾಗಿ ಪ್ರಾರಂಭವಾಗಿರುವ ಗುಲ್ಬರ್ಗಾ ಶಿಕ್ಷಣ ನಿರ್ದೇಶನಾಲಯ ವ್ಯಾಪ್ತಿಯಲ್ಲಿ ಬರುವ ಬಿಜಾಪುರ ಜಿಲ್ಲೆ ಬಸವನಬಾಗೇವಾಡಿ ಮತಕ್ಷೇತ್ರದಲ್ಲಿ ಈ ವರ್ಷ ಹೊಸದಾಗಿ ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಪ್ರೌಢ ಶಾಲೆಗಳನ್ನು ಮಂಜೂರು ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?

2) ಇದ್ದಲ್ಲಿ ಸ್ಥಾಪಿಸಲಿರುವ ಸ್ಥಳಗಳ ಹೆಸರು ಹಾಗೂ ಸಂಖ್ಯೆಗಳೆಷ್ಟು (ವಿವರ ನೀಡುವುದು)

ಶ್ರೀ ಎಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

1) ಹೌದು

2) ಬಸವನಬಾಗೇವಾಡಿ ಮತಕ್ಷೇತ್ರದಲ್ಲಿ ಈ ವರ್ಷ ಹೊಸದಾಗಿ ಸವನಹಳ್ಳಿ ಗ್ರಾಮದಲ್ಲಿ ಒಂದು ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡಲಾಗಿದೆ. ಮತ್ತು ಕಿರಿಯ ಪ್ರಾಥಮಿಕ ಶಾಲೆಗಳು ಈ ಕೆಳಕಂಡ ಸ್ಥಳಗಳಲ್ಲಿ ಮಂಜೂರು ಮಾಡಲಾಗಿದೆ.

1) ಬಳುವೆ ಕ್ರಾಸ್
2) ಬೆಲ್ಲದ್ ಹೆಳಂದ ಕ್ರಾಸ್
3) ಕೊನಿಹಾಳ ಹೊಸ ಬಡಾವಣೆ
4) ಯು.ಕೆ.ಎ. ಬಡಾವಣೆ
5) ಇಂದ್ರಾನಗರ ಬಡಾವಣೆ, ಬಾಗೇವಾಡಿ
6) ಬಿರೇಶ್ವರ ನಗರ ಹಿಂಗಳೇಶ್ವರ
7) ಕುರುಬರ ದಿಣ್ಣೆ

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ :— ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ಎಳು ಕಿರಿಯ ಪ್ರಾಥಮಿಕ ಶಾಲೆಗಳನ್ನು ಮಂಜೂರು ಮಾಡಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ, ಧನ್ಯವಾದಗಳು. ಜೊತೆಗೆ ನನ್ನ ಕ್ಷೇತ್ರದ ಬಸವನಬಾಗೇವಾಡಿ ತಾಲ್ಲೂಕಿನ ಒಂದು ಗ್ರಾಮಕ್ಕೆ ದಿನಾಂಕ:25-6-2001 ರಂದು ಬನ್ನಾಳಪುರದಿಂದ ಒಂದು ಪ್ರೌಢ ಶಾಲೆಯನ್ನು ವರ್ಗಾಯಿಸುವ ಆದೇಶವನ್ನು ಮಾಡಿದ್ದಾರೆ. ಆದರೆ ಅದನ್ನು ಇನ್ನೂ ವರ್ಗಾಯಿಸಿಲ್ಲ, ಇನ್ನೂ ವಿದ್ಯಾರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿಲ್ಲ, ದಯವಿಟ್ಟು ಆ ಕೆಲಸವನ್ನು ಬೇಗ ಮಾಡಬೇಕೆಂದು ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ಜೊತೆಗೆ ಸುಮಾರು 18 ಗ್ರಾಮಗಳು ಮುಳುಗಡೆಯಾಗುತ್ತಿವೆ. ಬೀಳಗಿ, ಬಾಗಲಕೋಟೆ, ಜಮಖಂಡಿ ಕ್ಷೇತ್ರಗಳಲ್ಲಿ ಸರ್ಕಾರ ಪ್ರೌಢ ಶಾಲೆಗಳನನ್ನು ಈಗಾಗಲೇ ಮಂಜೂರು ಮಾಡಿರುವುದು ಸ್ವಾಗತಾರ್ಹ ವಿಚಾರ. ಅದೇ ರೀತಿ ನನ್ನ ಮತಕ್ಷೇತ್ರದಲ್ಲಿ ಬರುವ ಬಾಗೇವಾಡಿ ತಾಲ್ಲೂಕಿನ ಐರೋಹಳ್ಳಿ ಹಾಗೂ ಬೆಳ್ಳೂತಿ ಗ್ರಾಮ ಸೇರಿ ಒಂದು ಪ್ರೌಢ ಶಾಲೆ, ಕೋಲಾರದಲ್ಲೊಂದು ಹೆಣ್ಣುಮಕ್ಕಳ ಪ್ರೌಢ ಶಾಲೆ, ಬಿಜಾಪುರ ತಾಲ್ಲೂಕಿನ ಹರಗಿರಗಿ, ಬೆಳ್ಳೊಬ್ಬಿ ಪುನರ್ವಸತಿ ಕೇಂದ್ರ ಸೇರಿ ಅಲ್ಲೊಂದು ಪ್ರೌಢ ಶಾಲೆ .....

ಅಧ್ಯಕ್ಷರು :— ವಿವರಕ್ಕೆ ಹೋಗಬೇಡಿ, ಸಪ್ಲಿಮೆಂಟರಿ ಪ್ರಶ್ನೆಯನ್ನು ಕೇಳಿ ಉತ್ತರವನ್ನು ತೆಗೆದುಕೊಳ್ಳಬೇಕು. ನೀವು ಪ್ರಶ್ನೆಯನ್ನು ಓದುತ್ತಿದ್ದೀರಷ್ಟೆ.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ :— ಈ ವಿಷಯವನ್ನು ಸಂಬಂಧಿಸಿದ ಶಿಕ್ಷಣಾಧಿಕಾರಿಗಳು ತಮಗೆ ಸಲ್ಲಿಸಿದ್ದಾರೆ, ದಯವಿಟ್ಟು ಅಲ್ಲೂ ಕೂಡ ಹೊಸ ಶಾಲೆಗಳನ್ನು ಮಂಜೂರು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ವಿಶ್ವನಾಥ್ :— ಶಾಸಕರು ಮುಳುಗಡೆಯಾದ ಪ್ರದೇಶದಲ್ಲಿ ಹೊಸ ಶಾಲೆಗಳನ್ನು ಪ್ರಾರಂಭ ಮಾಡಬೇಕೆಂದು ಕೇಳುತ್ತಿದ್ದಾರೆ, ಮುಳುಗಡೆ ಪ್ರದೇಶದಲ್ಲಿರುವ ವಿಶೇಷಾಧಿಕಾರಿಗಳು ಶಿಫಾರಸ್ಸು ಮಾಡಿದ್ದು ಅದು ಪಟ್ಟಿಯಲ್ಲಿದ್ದರೆ ಮಂಜೂರು ಮಾಡಲು ಸರ್ಕಾರ ತಯಾರಿದೆ. ಆದಲೇ ಹೈಸ್ಕೂಲ್, ಪ್ರಾಥಮಿಕ ಶಾಲೆಗಳನ್ನು ಪ್ರಾರಂಭ ಮಾಡಿದ್ದೇವೆ, ಅವರ ವರದಿಯಲ್ಲಿ ಏನಿದೆ ಮತ್ತು ತಾವು ಹೇಳಿದ್ದನ್ನು ಎರಡೂ ಸೇರಿಸಿ ಕ್ರೋಢೀಕರಿಸಿ ವಿಶೇಷವಾಗಿ ಒಂದು ಸಭೆಯನ್ನು ಮಾಡಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ವೈದ್ಯಕೀಯ ಸೇವಾ ಸೌಲಭ್ಯ

3137 ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) :— ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಗಳೂರಿನಲ್ಲಿರುವ ಜಿಲ್ಲಾ ಆಸ್ಪತ್ರೆಯಾದ ವೆನ್‌ಲಾಕ್ ಆಸ್ಪತ್ರೆಯಲ್ಲಿ ಆಯುರ್ವೇದ ಹಾಗೂ ಹೋಮಿಯೋಪತಿ ಚಿಕಿತ್ಸೆ ಸೌಲಭ್ಯ ದೊರಕುವಂತೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?

ಆ) ಸಾವಿನಂಚಿನಲ್ಲಿರುವ ರೋಗಿಗಳಿಗೆ ಶುಶ್ರೂಷ ವಿಭಾಗ, ಟ್ರೋಮಾ ಸೆಂಟರ್ ಹಾಗೂ ಅಪಘಾತಗಳು ನಡೆಯುವಂತಹ ಸಂದರ್ಭದಲ್ಲಿ ವೈದ್ಯಕೀಯ ಸೇವಾ ಸೌಲಭ್ಯಗಳುಳ್ಳ ಆಂಬುಲೆನ್ಸ್ (ವೈದ್ಯರು, ದಾದಿಗಳುಳ್ಳ) ತುರ್ತು ಚಿಕಿತ್ಸಾ ಘಟಕಗಳನ್ನು ಒದಗಿಸಲು ಯಾವ ಕ್ರಮ ಕೈಗೊಳ್ಳಲಿದೆ?

ಶ್ರೀಮತಿ ನಫೀಸ್ ಫಜಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :—

ಅ) ಈ ಸೌಲಭ್ಯವನ್ನು ಕಲ್ಪಿಸಲು ಯೋಚಿಸಲಾಗಿದೆ.

ಆ) ವಿಷಮಸ್ಥಿತಿಯಲ್ಲಿರುವ ರೋಗಿಗಳಿಗೆ ನುರಿತ ವೈದ್ಯರಿಂದ ಚಿಕಿತ್ಸೆ ನೀಡಲಾಗುತ್ತಿದೆ. ಆಂಬ್ಯುಲೆನ್ಸ್ ಹಾಗೂ ದಾದಿಯರ ಸೇವೆ ನಿರಂತರವಾಗಿ ನೀಡಲಾಗುತ್ತಿದೆ. ದಿನದ 24 ಗಂಟೆಗಳ ಕಾಲ ಈ ಸೇವೆ ಲಭ್ಯವಿರುತ್ತದೆ. ಆದರೆ, ಇಂತಹ ರೋಗಿಗಳಿಗೆ ಪ್ರತ್ಯೇಕವಾದ ಶುಶ್ರೂಷಾ ವಿಭಾಗ ಇರುವುದಿಲ್ಲ.

ಶ್ರೀ ಎನ್. ಯೋಗೀಶ್ ಭಟ್ :— ಮೊದಲನೆಯದಾಗಿ ಮಂಗಳೂರಿನ ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯಲ್ಲಿ ಆಯುರ್ವೇದ ಹಾಗೂ ಹೋಮಿಯೋಪತಿ ಕೇಂದ್ರಗಳಲ್ಲಿ ಈ ಸೌಲಭ್ಯ ಕಲ್ಪಿಸಲು ಯೋಚಿಸುತ್ತೇವೆಂದು ಹೇಳಿದ್ದೀರಿ, ಧನ್ಯವಾದಗಳು ಇದನ್ನು ಶೀಘ್ರ ಕಾರ್ಯರೂಪಕ್ಕೆ ತರುವಂತೆ ಮಾಡಬೇಕೆಂದು ಹೇಳಬಯಸುತ್ತೇನೆ. ಈ ಆಸ್ಪತ್ರೆಯಲ್ಲಿ 5000 ಮೇಜರ್ ಆಪರೇಷನ್‌ಗಳಾಗುತ್ತಿವೆ, 2 ಲಕ್ಷ ಹೊರರೋಗಿಗಳು ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ಆದರ ಇವತ್ತು ಬ್ಲಡ್ ಬ್ಯಾಂಕ್ ಆಗಲಿ, ಲ್ಯಾಬೋರೇಟರಿಯಾಗಲಿ, ಡಯಲಿಸಸ್ ಇಲ್ಲ, ಖಾಸಗಿ ಸಂಸ್ಥೆಗಳಿಂದ ಸಿಬ್ಬಂದಿಗಳನ್ನು ಪಡೆದುಕೊಂಡು ರನ್ ಮಾಡುವಂತಹ ಸ್ಥಿತಿ ಬಂದಿದೆ. ಅದಕ್ಕಾಗಿ ಅಲ್ಲಿಗೆ ಬೇಕಾದಷ್ಟು ಸ್ಟಾಫ್ ಕೊಡಬೇಕು ನಮ್ಮಲ್ಲಿ ಎಕ್ಸ್‌ರೇ ಟೆಕ್ನಿಷಿಯನ್ ಕೂಡ ಇಲ್ಲ, 7 ಹುದ್ದೆಗಳಲ್ಲಿ ಕೇವಲ 3 ಜನ ಮಾತ್ರವಿದ್ದಾರೆ, ಅದಿಗೆ ಸಂಬಂಧಿಸಿದಂತೆ ತುಂಬಾ ತೊಂದರೆಯಾಗುತ್ತಿದೆ, ಈ ಎಲ್ಲಾ ಹಿನ್ನೆಲೆಯಲ್ಲಿ ಇದರ ವ್ಯವಸ್ಥೆಯನ್ನು ತಕ್ಷಣ ಸರಿಪಡಿಸಬೇಕೆಂದು ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

ಶ್ರೀಮತಿ ನಫೀಸ್ ಫಜಲ್ :— ಮಾನ್ಯ ಅಧ್ಯಕ್ಷರೆ, ವೆನ್‌ಲಾಕ್ ಆಸ್ಪತ್ರೆಯ ಅಧೀಕ್ಷಕರಿಗೆ ನಿನ್ನೆ ಆಯುರ್ವೇದ ಹಾಗೂ ಹೋಮಿಯೋಪತಿ ಚಿಕಿತ್ಸೆಗೆ ವ್ಯವಸ್ಥೆ ಮಾಡಲು ಆದೇಶವನ್ನು ನೀಡಲಾಗಿದೆ. ತಮಗೆ ಗೊತ್ತಿರುವಂತೆ ಮಂಗಳೂರಿನಲ್ಲಿ

ಆಯುರ್ವೇದ ಜಿಲ್ಲಾ ಆಸ್ಪತ್ರೆ ಇಲ್ಲ. ಆದುದರಿಂದ ಖಾಸಗಿ ಆಸ್ಪತ್ರೆಗಳನ್ನು ಸಂಪರ್ಕಿಸಿ ಅಲ್ಲಿರುವ ವೈದ್ಯರ ಸೇವೆಯನ್ನು ಬಳಸಿಕೊಳ್ಳಲು ಸೂಚಿಸಲಾಗಿದೆ. ಅಲ್ಲಿರುವ ಟ್ರಾಮಾ ಸೆಂಟರ್ ಬಗ್ಗೆ ತಮಗೆ ತಿಳಿಸಲಿಚ್ಛಿಪಡುತ್ತೇನೆ, ನಮ್ಮ ಕ್ಲಿನಿಕಲ್ ಫೀನಿಂದ 73 ಲಕ್ಷ ರೂಪಾಯಿಗಳನ್ನು ಮಂಜೂರಾತಿ ಮಾಡಿದ್ದೇವೆ, ಆದಕ್ಕಾಗಿ ಇಲ್ಲೊಂದು ಕಟ್ಟಡವನ್ನು ಕಟ್ಟಲು ಇಚ್ಛಿಪಟ್ಟಿದ್ದೇವೆ. The proposed building shall be constructed on the existing physiotherapy & Artificial Limb Centre. We have taken action to construct Ist Floor for Trauma Centre measuring about 170% 70 built up area. ಈ ಕೆಲಸದ ಜವಾಬ್ದಾರಿಯನ್ನು ಕೇಂದ್ರ ಸರ್ಕಾರ ಅಂಡರ್‌ಟೇಕಿಂಗ್ ಸಂಸ್ಥೆಯಾದ ಮೆಕಾನ್‌ಗೆ ಕೊಟ್ಟಿದ್ದೇವೆ. ಮಳೆಗಾಲವಾದ ಮೇಲೆ ಆಗಸ್ಟ್ ಕೊನೆಯಲ್ಲಿ ಈ ನಿರ್ಮಾಣ ಕೆಲಸವನ್ನು ಆರಂಭಿಸುತ್ತೇವೆ. ಮುಂಬರುವ ಒಂದೂವರೆ ವರ್ಷದಲ್ಲಿ ಆ ಕಟ್ಟಡ ತಯಾರಾಗಬಹುದು. ಇನ್ನು ತಾವು ಅಪಘಾತಗಳ ಬಗ್ಗೆ ಹೇಳಿದ್ದೀರಿ. ಅಲ್ಲಿ ಅಪಘಾತಗಳು ಜರುಗುತ್ತಿರುವುದರಿಂದ

At present throughout the day, casuality services are available for all trauma cases by respective Specialists and Assistant Surgeons are posted in casualities for immediate care and treatment of such cases. Services of Specialities are available throughout the day. According to our statistics, there will be about 15 to 20 trauma cases every day. During the day, three Staff Nurses and three Ward Attenders are on duty. During the night, two Staff Nurses and two boys are available for work. I would like to state regarding Ambulances. There are two Ambulances which are on the road, two from the regular Health side and one from KHSDP side. Drivers to Ambulances are also available throughout the day and night. We have also made arrangements for telephone calls have to to be made for ambulance service. The number is 102 if emergency phone calls have to be made for ambulance service. As stated by the Hon'ble Member, it has come to our notice that there is a shortage of Staff Nurses. We have also requisitioned for 40 Staff nurses through KHSDP.

ಶ್ರೀ ಎನ್. ಯೋಗೀಶ್ ಭಟ್:— 73 ಲಕ್ಷ ರೂಪಾಯಿಗಳ ಒಂದು ಟ್ರಾಮಾ ಸೆಂಟರ್ ಅನ್ನು ತಾವು ಮಂಜೂರು ಮಾಡಿರುವುದಕ್ಕೆ ತಮಗೆ ಧನ್ಯವಾದಗಳನ್ನರ್ಪಿಸುತ್ತೇವೆ.

ಕ್ಯಾನ್ಸರ್ ಹಾಗೂ ಏಡ್ಸ್ ರೋಗದಿಂದ ಬಳಲುತ್ತಿರುವ ಜೀವನದ ಕೊನೆಯ ಹಂತದಲ್ಲಿರುವ ರೋಗಿಗಳಿಗೆ ವಿಶೇಷವಾದ ಒಂದು ವ್ಯವಸ್ಥೆ ಮಾಡಿಕೊಡಬೇಕೆಂಬುದು ನಮ್ಮ ಬೇಡಿಕೆಯಾಗಿದೆ. ಏಕೆಂದರೆ, ಸದರಿ ರೋಗಗಳಿಗೆ ತುತ್ತಾಗಿರುವವರನ್ನು ಮನೆಯಲ್ಲಿ ಇಟ್ಟುಕೊಳ್ಳುವಂತಿಲ್ಲ ಮತ್ತು ರೋಗಿಗಳಿಗೆ ಸೂಕ್ತ ಚಿಕಿತ್ಸೆ ಕೊಡಿಸಲು ಅನೇಕ ಬಡ ಕುಟುಂಬಗಳಿಗೆ ಸಾಧ್ಯವಾಗುತ್ತಿಲ್ಲವಾದ್ದರಿಂದ ಈ ರೋಗಿಗಳಿಗೆ ವಿಶೇಷ ವ್ಯವಸ್ಥೆ ಕಲ್ಪಿಸಿ ಚಿಕಿತ್ಸೆ ಕೊಡುವುದಕ್ಕೋಸ್ಕರ ವಿಶೇಷ ಘಟಕವೊಂದನ್ನು ತಾವು ಮಂಜೂರು ಮಾಡಬೇಕು. ಕ್ಲಿನಿಕಲ್ ಫೀನಲ್ಲಿ ಇನ್ನೂ ಒಂದು ಕೋಟಿ ರೂಪಾಯಿಗಳಷ್ಟು ಹಣ ಇರುವುದರಿಂದ ಸರ್ಕಾರಕ್ಕೆ ಹೆಚ್ಚೇನೂ ಹೊರೆಯಾಗುವುದಿಲ್ಲವಾದ್ದರಿಂದ ಈ ಹಣದಲ್ಲಿ ಇತರೇ ವ್ಯವಸ್ಥೆಗಳನ್ನು ಮಾಡಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀಮತಿ ನಫೀಸಾ ಫಜಲ್ :— ನಾನು ಆ ಕುರಿತು ಪರಿಶೀಲನೆ ಮಾಡಿ ಮುಂದಿನ ಕ್ರಮ ಕೈಗೊಳ್ಳುತ್ತೇನೆ.

ಪ್ರಧಾನ ಮಂತ್ರಿಯವರ ಗ್ರಾಮ ಸಡಕ್ ಯೋಜನೆ ಕುರಿತು.

279(3017) ಶ್ರೀ ರಾಜುಗೌಡ ಜಿ. (ಹನ್ನೂರು) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಪ್ರಧಾನ ಮಂತ್ರಿಯವರ ಗ್ರಾಮ ಸಡಕ್ ಯೋಜನೆಯಲ್ಲಿ ಜಿಲ್ಲಾ ಪಂಚಾಯತಿಗೆ ಎಷ್ಟು ಹಣ ದೊರೆಯಲಿದೆ.

ಶ್ರೀ ಎಂ.ವೈ. ಘೋರ್ಪಡೆ :— ಆ ಪೈಪ್‌ಲೈನ್ ಎಷ್ಟು ಇದೆ, ಅದಕ್ಕಿಂತ ಜಾಸ್ತಿ ಹಣವನ್ನು ಬಿಡುಗಡೆ ಮಾಡಿದ್ದಾರೆ ಎನ್ನತಕ್ಕ ಒಂದು ದೂರು ಬಂದಿದೆ. ಪೈಪಿನ ಗುಣಮಟ್ಟದ ಬಗ್ಗೆ ಮತ್ತೊಂದು ದೂರು ಇದೆ. ಅದರ ಬಗ್ಗೆ ನಾವೇ ತೀರ್ಮಾನ ಮಾಡಬಾರದು, ಮೂರನೇ ಪಾರ್ಟಿಗೆ ವಹಿಸಿಕೊಟ್ಟರೆ ಪೂರ್ಣವಾದ ನ್ಯಾಯ ಒದಗಿಸಿದಂತಾಗುತ್ತದೆಂದು ನಾವು ಈ ಕೆಲಸ ಮಾಡಿದ್ದೇವೆ. ಈ ಮೂರನೇ ಪಾರ್ಟಿಯವರಿಗೆ ವರದಿ ನೀಡಲು ಏನು ವೆಚ್ಚವಾಗುತ್ತದೆ ಅದನ್ನೂ ಕೊಟ್ಟಿದ್ದೇವೆ.

ಶ್ರೀ ಬಿ. ಶಿವರಾಮ್ :— ಲೋಪದೋಷದ ಬಗ್ಗೆ ನಾನು ಹೇಳುವುದಕ್ಕಿಂತ ಅವರ ಕಛೇರಿಯಲ್ಲಿ ಕೆಲಸ ಮಾಡುತ್ತಿರುವ ಜಿಲ್ಲಾ ವ್ಯವಸ್ಥಾಪಕ ನಿರ್ದೇಶಕರೇ ಪತ್ರವನ್ನು ಬರೆದಿದ್ದಾರೆ. ನಾನು ಆರೋಪಗಳನ್ನು ಮಾಡಿಲ್ಲ. ಇದು ಹೇಗೆ ದೃಢಿಕರಣಗೊಂಡಿದೆ ಎಂಬುದಕ್ಕೆ ಅವರ ಪ್ರಶ್ನೆಯ್ಲೇ ಉತ್ತರವನ್ನು ಹೇಳಿದ್ದಾರೆ. ಪೂರ್ಣಗೊಂಡಿರುವ ಕೆಲವು ಯೋಜನೆಗಳು ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಗಳಿಗೆ ವಹಿಸಿಕೊಡಲು ಕಾರಣಗಳನ್ನು ನಾಲ್ಕು ಅಂಶಗಳಲ್ಲಿ ಕೊಟ್ಟಿದ್ದಾರೆ. ಈ ನಾಲ್ಕು ಅಂಶಗಳಲ್ಲಿ ಇದು ಬರುತ್ತದೆ. ಲೋಪದೋಷವಿರುವುದರಿಂದ ಗ್ರಾಮ ಸಮಿತಿಗಳು ಇದರ ನಿರ್ವಹಣೆಯನ್ನು ವಹಿಸಿಕೊಳ್ಳಲು ಸಿದ್ಧರಿಲ್ಲ. ಅವರು ವಹಿಸಿಕೊಳ್ಳದಿದ್ದ ಪಕ್ಷದಲ್ಲಿ ಗ್ರಾಮ ಸಮಿತಿಗೆ ಬದಲಾಗಿ ಗ್ರಾಮ ಪಂಚಾಯಿತಿಗೆ ವಹಿಸಿಕೊಡುವ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಂ.ವೈ. ಘೋರ್ಪಡೆ :— ವೈಯಕ್ತಿಕವಾಗಿ ಅವರೇನು ದೂರು ಕೊಟ್ಟಿದ್ದಾರೆ ಅದರ ಬಗ್ಗೆ ಮೂರನೇ ವ್ಯಕ್ತಿಯಿಂದ ಪರಿಶೀಲನೇ ಮಾಡಿಸುತ್ತಿದ್ದೇವೆ. ಇದಕ್ಕಿಂತ ಜಾಸ್ತಿ ಏನು ಹೇಳಲಿ.

ಶ್ರೀ ಕೆ.ಹೆಚ್. ಹನುಮೇಗೌಡ :— ಸನ್ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರಲಿಚ್ಛಿಸುತ್ತೇನೆ. ಹಾಸನ ಕ್ಷೇತ್ರದಲ್ಲಿ ಉದ್ದೂರು ಒಂಬುದೊಂದು ಗ್ರಾಮ ಇದೆ. ಆ ಗ್ರಾಮದಲ್ಲಿ ವಿಶ್ವಬ್ಯಾಂಕ್ ಯೋಜನೆ ಅಡಿಯಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತ ಮಾಡಿದ್ದಾರೆ. ಗ್ರಾಮದವರು ಎಷ್ಟು ಹಣವನ್ನು ಕಟ್ಟಬೇಕಾಗಿತ್ತೋ ಅಷ್ಟು ಹಣವನ್ನು ಅವರು ಕಟ್ಟಿದ್ದಾರೆ. ಸುಮಾರು 20 ವರ್ಷಗಳ ಹಿಂದೆ ಆ ಊರಿನಲ್ಲಿ ಒಂದು ಓವರ್‌ಹೆಡ್ ಟ್ಯಾಂಕ್ ಕಟ್ಟಿ ಒಂದು ಸಣ್ಣ ಮಿನಿ ವಾಟರ್ ಸಪ್ಲೈ ಮಾಡಿದ್ದರು. ವಿಶ್ವಬ್ಯಾಂಕ್ ಯೋಜನೆ ಅಡಿಯಲ್ಲಿ ಪುನ: ಆ ಊರಿಗೆ ಕುಡಿಯುವ ನೀರಿನ ಯೋಜನೆಯನ್ನು ತೆಗೆದುಕೊಂಡಾದ ಮೇಲೆ ಗ್ರಾಮಸ್ಥರು ಮತ್ತೊಂದು ಓವರ್‌ಹೆಡ್ ಟ್ಯಾಂಕ್‌ಗಾಗಿ ಮನವಿ ಮಾಡಿದ್ದಾರೆ. ಚಿಕ್ಕದಾದ ಓವರ್‌ಹೆಡ್ ಟ್ಯಾಂಕ್ ನಿರ್ಮಾಣವಾದ ಮೇಲೆ ಊರಿನ ಜನಸಂಖ್ಯೆ ನಾಲ್ಕರಷ್ಟು ಜಾಸ್ತಿಯಾಗಿದೆ, ಇರುವ ಟ್ಯಾಂಕ್‌ನಲ್ಲಿಯ ನೀರು ಗ್ರಾಮಕ್ಕೆ ಸಾಕಾಗುವುದಿಲ್ಲ, ಆದ್ದರಿಂದ ಮತ್ತೊಂದು ಓವರ್‌ಹೆಡ್ ಟ್ಯಾಂಕ್ ಕಟ್ಟಿಕೊಡಿ ಎಂದು ಗ್ರಾಮಸ್ಥರು ಕೇಳಿದ್ದಾರೆ.

ಯಾರೋ ದುರುದ್ದೇಶದಿಂದ ಹೇಳಿದರು ಎಂದುಕೊಂಡು ಅಲ್ಲಿ ಓವರ್‌ಹೆಡ್ ಟ್ಯಾಂಕ್ ಕಟ್ಟದೇ ಹಾಗೇ ಬಿಟ್ಟು ಯೋಜನೆಯನ್ನು ಮುಗಿಸಿದ್ದಾರೆ. ನಾನು ಈ ಬಗ್ಗೆ 2-3 ಬಾರಿ ಪತ್ರಗಳನ್ನು ಬರೆದು ಅವರಿಗೆ ಹೇಳಿದ್ದೆ. ಈ ಯೋಜನೆಯಿಂದ ಜನಗಳಿಗೆ ಕುಡಿಯುವ ನೀರು ಪೂರ್ಣವಾಗಿ ಸಿಗಬೇಕು. ಈಗ ಇರತಕ್ಕಂಥ ಓವರ್‌ಹೆಡ್ ಟ್ಯಾಂಕಿಗೆ ನಾಲ್ಕು ಸಾರಿ ಭರ್ತಿ ಮಾಡಿದರೂ ಕೂಡ ಈಗಿರುವ ಜನಸಂಖ್ಯೆಗೆ ಅದು ಸಾಕಾಗುವುದಿಲ್ಲ. ದಯವಿಟ್ಟು ಓವರ್‌ಹೆಡ್ ಟ್ಯಾಂಕ್ ಅನ್ನು ಮೊದಲು ಎಸ್ಟಿಮೇಟ್‌ನಲ್ಲಿರುವ ರೀತಿಯಲ್ಲಿ ನಿರ್ಮಾಣ ಮಾಡಿಕೊಡಬೇಕು. ನಾನು ಕಾಗದ ಬರೆದ ಊರಿನವರು ಮನವಿ ಮಾಡಿಕೊಂಡಿದ್ದರೂ ಕೂಡ ಇದು ಆಗಿರುವುದಿಲ್ಲ. ಇದನ್ನು ಯಾವಾಗ ಮಾನ್ಯ ಮಂತ್ರಿಗಳು ಮಾಡಿಸಿಕೊಡುತ್ತಾರೆ.?

ಶ್ರೀ ಎಂ.ವೈ. ಘೋರ್ಪಡೆ :— ಮಾನ್ಯ ಶಿವರಾಮುರವರ ಪರ್ಟಿಕ್ಯುಲರ್ ಪ್ರಶ್ನೆಗೆ ನಾನು ಉತ್ತರಿಸಿದ್ದೇನೆ. ಅದರ ಬಗ್ಗೆ ಮಾತ್ರ ನನ್ನ ಬಳಿ ಈಗ ಮಾಹಿತಿ ಇದೆ.

ಅಧ್ಯಕ್ಷರು :— ಅದರ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿ. ಮಾನ್ಯ ಮಂತ್ರಿಗಳು ಉತ್ತರ ಹೇಳುವುದಕ್ಕೆ ಸಿದ್ಧರಿದ್ದರೆ ನನ್ನದೇನೂ ಅಬ್ಜೆಕ್ಷನ್ ಇಲ್ಲ. ಪ್ರಶ್ನೆ ಇಡೀ ರಾಜ್ಯಕ್ಕೆ ಸಂಬಂಧಿಸಿದಂತೆ ಇದ್ದರೂ ಕೂಡ ಎಲ್ಲಾ ಸದಸ್ಯರು ತಮ್ಮ ತಮ್ಮ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಉಪ ಪ್ರಶ್ನೆಗಳನ್ನು ಕೇಳುತ್ತಿದ್ದರೆ ಮಾನ್ಯ ಸಚಿವರ ಬಳಿ ಉತ್ತರ ಎಲ್ಲಿರುತ್ತದೆ? ಮಾನ್ಯ ಸಚಿವರು ಏನಾದರೂ ಉತ್ತ ಹೇಳುವುದಿದ್ದರೆ ಹೇಳಿ.

ಶ್ರೀ ಎಂ.ವೈ. ಘೋರ್ಪಡೆ :— ನಾನು ಸದರಿ ಪ್ರಶ್ನೆಗೆ ಸಂಪೂರ್ಣವಾದಂತಹ ಉತ್ತರವನ್ನು ಕೊಟ್ಟಿದ್ದೇನೆ. ಸ್ಪೆಸಿಫಿಕ್ಕಾಗಿ ಯಾವುದಾದದರೂ ಸ್ಕೀಮ್‌ನ ಬಗ್ಗೆ ಮಾನ್ಯ ಸದಸ್ಯರುಗಳು ಕೇಳುವುದಾದರೆ, ಅದರ ಬಗ್ಗೆ ನನಗೆ ಅವರು ಮಾಹಿತಿಯನ್ನು ಕೊಟ್ಟರೆ ನಾನು ಆ ಬಗ್ಗೆ ನೋಡಿಸುತ್ತೇನೆ. ಯಾವುದೋ ಒಂದು ಪ್ರಶ್ನೆಯನ್ನು ಸಡನ್ನಾಗಿ ಇಲ್ಲಿ ಕೇಳಿದರೆ ನಾನು ಹೇಗೆ ಉತ್ತರ ಕೊಡಲು ಸಾಧ್ಯವಾಗುತ್ತದೆ? ಜನರಲ್ ನೇಚರ್ ಆಗಿರತಕ್ಕ ಪ್ರಶ್ನೆಗೆ ನಾನು ಈಗಾಗಲೇ ಉತ್ತರ ನೀಡಿದ್ದೇನೆ. ಇಂಡಿವಿಜ್ಯುಯಲ್ ಪ್ರಶ್ನೆಗಳಿಗೆ ನಾನು ಮಾಹಿತಿ ಇಲ್ಲದೆ ತಕ್ಷಣವೇ ಹೇಗೆ ಉತ್ತರಿಸಲು ಸಾಧ್ಯ? ಆದುದರಿಂದ ಅದರ ಬಗ್ಗೆ ನನಗೆ ಮಾಹಿತಿ ಕೊಟ್ಟರೆ, ತಕ್ಷಣವೇ ಅದನ್ನು ನಾನು ಅಧಿಕಾರಿಗಳಿಗೆ ಕಳುಹಿಸಿಕೊಟ್ಟು ನೋಡಿಸುತ್ತೇನೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ :— ಮಾನ್ಯ ಅಧ್ಯಕ್ಷರೇ, ಕಳೆದ ಬಾರಿ ಸದನದಲ್ಲಿ ಇದು ಪ್ರಸ್ತಾಪವಾದ ಸಂದರ್ಭದಲ್ಲಿ ಗ್ರಾಮ ನೈರ್ಮಲ್ಯ ಸಮಿತಿ ಮತ್ತು ಗ್ರಾಮ ಪಂಚಾಯಿತಿಗಳ ನಡುವೆ ಸಂಬಂಧ ಸರಿಯಾಗಿ ಇಲ್ಲದಿರುವುದರಿಂದ ವ್ಯವಸ್ಥೆ ಸರಿಯಾಗಿ ಮಾಡುವ ಉದ್ದೇಶದಿಂದ ನೀರು ಸರಬರಾಜು ಯೋಜನಾ ಕಾಮಗಾರಿಗಳನ್ನು

ಗ್ರಾಮ ಪಂಚಾಯಿತಿಗೆ ವಹಿಸಿಕೊಡಬೇಕು ಎಂದು ನಾವು ಕೋರಿದ್ದೆವು. ಮಾನ್ಯ ಸಚಿವರು ಇದನ್ನು ಪರಿಶೀಲನೆ ಮಾಡುತ್ತೇನೆ ಎಂಬ ಮಾತನ್ನು ಸಹ ಇಲ್ಲಿ ಹೇಳಿದ್ದರು. ಗ್ರಾಮ ನೈರ್ಮಲ್ಯ ಸಮಿತಿಯರು ಯಾವುದೇ ರೀತಿಯಿಂದ ದುಡ್ಡು ವಸೂಲು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅವರಿಂದ ಸರಿಯ.ಗಿ ಕೆಲಸ ಮಾಡಲಿಕ್ಕಾಗುತ್ತಿಲ್ಲ. ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ವಹಿಸಿದ್ದೇ ಆದರೆ ಖಂಡಿತಾವಾಗಿಯೂ ಕೂಡ ಕೆಲಸವನ್ನು ಮಾಡಲಿಕ್ಕೆ ಸರಿಯಾದಂತಹ ವ್ಯವಸ್ಥೆ ಆಗುತ್ತದೆ. ಆದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರಿಸಬೇಕು.

ಶ್ರೀ ಹೆಚ್.ಎಂ. ರೇವಣ್ಣ:— ಗ್ರಾಮ ನೈರ್ಮಲ್ಯ ಸಮಿತಿಯವರು ದುಡ್ಡು ವಸೂಲಿ ಮಾಡಿ ನೀರು ಬಿಡುವವನಿಗೂ ಕೂಡ ಸಂಬಳ ಕೊಡಂವಂತಹ ಪರಿಸ್ಥಿತಿಯಲ್ಲಿ ಇಲ್ಲ. ಇದನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಿದರೆ ಅನುಕೂಲವಾಗುತ್ತದೆ.

ಶ್ರೀ ಬಿ. ಶಿವರಾಮು :— ಗ್ರಾಮ ಪಂಚಾಯಿತಿಗಳಿಗೆ ವಹಿಸತಕ್ಕಂಥ ಕ್ರಮವನ್ನು ಸರ್ಕಾರ ದಯವಿಟ್ಟು ತೆಗೆದುಕೊಳ್ಳಬೇಕೆಂದು ಆಗ್ರಹಿಸುತ್ತಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ :—ವಿಲೇಜ್ ಕಮಿಟಿ ಏನಿದೆ ಅದನ್ನು ಗ್ರಾಮ ಪಂಚಾಯಿತಿಯೇ ರಚಿಸುತ್ತದೆ. ಗ್ರಾಮ ಪಂಚಾಯಿತಿಯ ಸದಸ್ಯರಲ್ಲದೇ ಬೇರೆಯವರನ್ನೂ ಕೂಡ ಅದರಲ್ಲಿ ಸೇರಿಸಲಿಕ್ಕೆ ಅವಕಾಶ ಇರುತ್ತದೆ. ಕಾನೂನಿನ ಪ್ರಕಾರ ಅವರಿಗೂ ಕೂಡ ಅಧಿಕಾರವನ್ನು ಕೊಟ್ಟಿರುತ್ತಾರೆ. ಗ್ರಾಮ ಪಂಚಾಯಿತಿ ಬೇರೆ, ಅದೇ ಬೇರೆ ಎಂದು ನಾವು ಗ್ರಹಿಸುವುದು ಅಷ್ಟೊಂದು ಸರಿಯಲ್ಲ. ಗ್ರಾಮ ಪಂಚಾಯಿತಿಯೇ ರಚಿಸಿರತಕ್ಕಂಥ ಸಮಿತಿ ಇದು. ಅದು ನೀರಿನ ಕೆಲಸಕ್ಕಾಗಿ ಪ್ರತ್ಯೇಕವಾಗಿ ಇದರ ಕಡೆಗೆ ಗಮನ ಕೊಡಬೇಕೆಂಬ ಉದ್ದೇಶದಿಂದ ಇದನ್ನು ಮಾಡಲಾಗಿದೆ. ವಿಶ್ವಬ್ಯಾಂಕ್ ನೆರವಿನ 900 ಕೋಟಿ ರೂ.ಗಳ ಕಾರ್ಯಕ್ರಮವನ್ನು ನಾವು ಈಗ ಪ್ರಾರಂಭ ಮಾಡುತ್ತಿದ್ದೇವೆ. ಅದರಲ್ಲಿ ಕೂಡ ವಿಲೇಜ್ ಕಮಿಟಿ ತಪ್ಪಿದ್ದಲ್ಲ. ಅದು ಇರಬೇಕೆಂದು ಎಲ್ಲರ ಅಭಿಪ್ರಾಯ ಇದೆ. ಗ್ರಾಮ ಪಂಚಾಯಿತಿಗೆ ಮತ್ತು ವಿಲೇಜ್ ಕಮಿಟಿಗೆ ನೇರವಾದಂತಹ ಸಂಬಂಧ ಇದೆ.

ನಾಗಮಂಗಲ ತಾಲ್ಲೂಕಿನ ಸರ್ವೆ ನಂ. 22, ಹಾಲಳು ಗ್ರಾಮದಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಮದ್ಯ ತಯಾರು ಘಟಕ

ಶ್ರೀ ಚಲುವರಾಯಸ್ವಾಮಿ ಎನ್. (ನಾಗಮಂಗಲ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನಾಗಮಂಗಲ ತಾಲ್ಲೂಕಿನ ಸರ್ವೆ ನಂ. 22, ಹಾಲಳು ಗ್ರಾಮ ಇಲ್ಲಿ ಅನ್ಯಕ್ರಾಂತವಾಗದೇ ಅನಧಿಕೃತವಾಗಿ ಮದ್ಯ ತಯಾರು ಘಟಕದ ಕಟ್ಟಡದ ಕೆಲಸಕ್ಕೆ ಗ್ರಾಮ ಪಂಚಾಯಿತಿಯ (ಕಾಳಿಂಗನ ಹಳ್ಳಿ) ಜನರಲ್ ಲೈಸನ್ಸ್ ನೀಡಬಹುದೇ; ಅಥವಾ ಇಲ್ಲವೇ;

ಆ. ಇಲ್ಲದಿದ್ದಲ್ಲಿ ಕಾನೂನು ಉಲ್ಲಂಘನೆ ಮಾಡಿ ಜನರಲ್ ಲೈಸನ್ಸನ್ನು ನೀಡಿರುವ ಕಾಳಿಂಗನ ಹಳ್ಳಿ ಗ್ರಾಮ ಪಂಚಾಯಿತಿಯ ಸಂಬಂಧಪಟ್ಟವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :—

ಅ) ಸದರಿ ಗ್ರಾಮ ಪಂಚಾಯಿತಿಯು ಪರಿವರ್ತಿಸದೇ ಇರುವ ಜಮೀನಿನಲ್ಲಿ ಕಟ್ಟಡ ಕಟ್ಟಲು ಜನರಲ್ ಲೈಸನ್ಸನ್ನು ನೀಡಿರುತ್ತದೆ.

ಅ) ಬಾಧಿತ ವ್ಯಕ್ತಿಯು ಗ್ರಾಮ ಪಂಚಾಯಿತಿಯ ಆದೇಶದ ವಿರುದ್ಧ ಕಾನೂನಿನ ಪ್ರಕಾರ ಮೇಲ್ಮನವಿಯನ್ನು ಕಾರ್ಯನಿರ್ವಾಹಕ ಅಧಿಕಾರಿಗೆ ಸಲ್ಲಿಸಲು ಅವಕಾಶವಿರುತ್ತದೆ.

ಶ್ರೀ ಎಸ್. ಚಲುವರಾಯಸ್ವಾಮಿ :— ಮಾನ್ಯ ಅಧ್ಯಕ್ಷರೇ, ಕಾನೂನು ಬಾಹಿರವಾಗಿ ಜನರಲ್ ಲೈಸನ್ಸನ್ನು ಕಾರ್ಯದರ್ಶಿ ಕೊಟ್ಟಿದ್ದಾರೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಲೈಸನ್ಸ್ ಕೊಟ್ಟಿದ್ದರೆ ಅದನ್ನು ಸರಿಪಡಿಸಿಕೊಳ್ಳುವುದಕ್ಕಾಗಿ ನಾನು ನಿಮ್ಮ ಹತ್ತಿ ಪ್ರಶ್ನೆಯನ್ನು ಕಳುಹಿಸಿಲ್ಲ. ಇವತ್ತು ನನ್ನ ತಾಲ್ಲೂಕಿನ ಆ ಸರ್ವೆ ನಂಬರಿನಲ್ಲಿ ಒಂದೂವರೆ ಕೋಟಿಯಿಂದ ಎರಡು ಕೋಟಿ ರೂ.ಗಳಷ್ಟು ಬೆಲೆ ಬಾಳತಕ್ಕಂಥ ಕಟ್ಟಡವನ್ನು ಒಬ್ಬ ಮಾಜಿ ಶಾಸಕರು ಅನಧಿಕೃತವಾಗಿ ಕಾನೂನು ಬಾಹಿರವಾದ ಲೈಸನ್ಸ್ ಅನ್ನು ತೆಗೆದುಕೊಂಡು ಕಟ್ಟುತ್ತಿದ್ದಾರೆ. ಆ ಸೆಕ್ರೆಟರಿ ಮೇಲೆ ಮತ್ತು ಆ ಪಂಚಾಯಿತಿ ಇಲಾಖೆ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವ ಬಗ್ಗೆ ನನಗೆ ಸ್ಪೆಸಿಫಿಕ್ಕಾದ ಉತ್ತರ ಬೇಕು. ಈ ರೀತಿಯ ಕಟ್ಟವನ್ನು ಕಟ್ಟುತ್ತಿದ್ದೇನೆ ಎಂದು ಅವರೇ ಪತ್ರಿಕೆಯಲ್ಲಿ ಹೇಳಿದ್ದಾರೆ. ಇಷ್ಟೊಂದು ಅವ್ಯವಹಾರ ನಡೆದು ಒಂದು ಸಣ್ಣ ಲೈಸನ್ಸ್ ಪಡೆದು ಮಾಡತಕ್ಕಂಥದಕ್ಕೆ ಅವಕಾಶ ಕೊಟ್ಟಂತಹ ಪಂಚಾಯಿತಿ ಇಲಾಖೆ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಎಷ್ಟು ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಂ.ವೈ. ಘೋರ್ಪಡೆ :— ಮಾನ್ಯ ಅಧ್ಯಕ್ಷರೇ, ಈ ಗ್ರಾಮದಲ್ಲಿ ಆಕ್ಟಿನ ಸೆಕ್ಷನ್ 66ರ ಪ್ರಕಾರ ಲೈಸನ್ಸ್ ಅನ್ನು ಇಷ್ಯೂ ಮಾಡಿದ್ದಾರೆ, ಲೈಸನ್ಸ್ ಅನ್ನು ಇಷ್ಯೂ

ಮಾಡಿದ ಮೇಲೆ ಅಲ್ಲಿ ಈಗ ಶ್ರೀನಿವಾಸ ಡಿಸ್ಟಿಲರಿ ಎಂದು ಒಂದು ಡಿಸ್ಟಿಲರಿಯೊಂದನ್ನು ಕಟ್ಟಬೇಕೆಂದಿದ್ದಾರೆ ಎಂದು ಕಾಣಿಸುತ್ತದೆ. ಕನ್‌ವರ್ಟ ಮಾಡದೆಯೇ ಲೈಸನ್ಸ್ ಕೊಡಲಿಕ್ಕೆ ಪಂಚಾಯಿತಿಗೆ ಅರ್ಹತೆ ಇದೆಯೇ ಅಥವಾ ಇಲ್ಲವೇ ಎಂಬುದು ಮಾನ್ಯ ಸದಸ್ಯರ ಪ್ರಶ್ನೆಯಾಗಿದೆ. ನನ್ನ ಕಡೆ ಇರತಕ್ಕಂಥ ಮಾಹಿತಿ ಪ್ರಕಾರ ಲೈಸನ್ಸ್ ಕೊಟ್ಟಿದ್ದಾರೆ. 500 ರೂ.ಗಳ ಫೀಸನ್ನೂ ಕೂಡ ಕಟ್ಟಿಸಿಕೊಂಡಿದ್ದಾರೆ. ಏನಾದರೂ ತಪ್ಪಿದ್ದರೆ ಅಗ್ರೀವ್ಡ್ ಪಾರ್ಟಿ ಯಾರಿದ್ದಾರೋ ಅವರಿಗೆ ಅಪೀಲ್ ಹೋಗಲಿಕ್ಕೆ ಅವಕಾಶ ಇದೆ. ಸರ್ಕಾರ ಇದರಲ್ಲಿ ಹೇಗೆ ನೇರ ಪ್ರವೇಶ ಮಾಡಲಿಕ್ಕೆ ಬರುತ್ತದೆ.

ಶ್ರೀ ಎನ್. ಚಲುವರಾಯಸ್ವಾಮಿ :— ಮಾನ್ಯ ಅಧ್ಯಕ್ಷರೇ, ಅಪೀಲ್ ಹೋಗಲಿಕ್ಕೆ ಇದು ಯಾರೊಬ್ಬರ ಆಸ್ತಿಯಲ್ಲ. ಸರ್ಕಾರಿ ಕಾನೂನನ್ನು ಉಲ್ಲಂಘನೆ ಮಾಡಿ ಈ ಲೈಸನ್ಸ್ ಅನ್ನು ಕೊಟ್ಟಿರುವುದಕ್ಕೆ ಅವನನ್ನು ವಜಾ ಮಾಡಬೇಕು ಮತ್ತು ಅವನ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಯಾರಾದರೂ ವೈಯಕ್ತಿಕವಾದಂತಹ ಆಸ್ತಿಯ ಮೇಲೆ ಇವರು ಕಟ್ಟಡ ಕಟ್ಟುತ್ತಿದ್ದರೆ ಅವರು ಅಪೀಲ್ ಹೋಗುತ್ತಾರೆ. ಸರ್ಕಾರ ಪಂಚಾಯಿತಿ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಒಬ್ಬ ಕಾರ್ಯದರ್ಶಿ ಕಾನೂನು ಬಾಹಿರವಾಗಿ ಲೈಸನ್ಸ್ ಕೊಟ್ಟಿರುವುದರಿಂದ, ಆ ಲೈಸನ್ಸ್ ಅನ್ನು ಆಧಾರವಾಗಿಟ್ಟುಕೊಂಡು ಕಟ್ಟಡ ನಿರ್ಮಿಸಲಾಗುತ್ತಿದೆ. ಕನ್ನಡಪ್ರಭಾ ಪತ್ರಿಕೆಯಲ್ಲಿ ಈ ಬಗ್ಗೆ ಬಂದಿದೆ. ಈ ವಿಷಯದ ಬಗ್ಗೆ ಪ್ರಸ್ತಾಪಿಸಲು ನಾನು ಕಾಲಿಂಗ್ ಅಟೆನ್‌ಷನ್‌ವೊಂದನ್ನು ಕಳುಹಿಸಿದ್ದೇನೆ. ಅದಕ್ಕೆ ಸಂಬಂಧಪಟ್ಟ ಸಚಿವರು ಇಬ್ಬರಿದ್ದಾರೆ. ಅದರ ಬಗ್ಗೆ ನಾನು ನಾಳೆ ಕೇಳುತ್ತೇನೆ. ಇವತ್ತು ಪಂಚಾಯಿತಿ ಕಾರ್ಯದರ್ಶಿಯವರು ಲೈಸನ್ಸ್ ಕೊಟ್ಟಿರುವುದಕ್ಕೆ ಸೀಮಿತವಾಗಿ ಮಾತ್ರ ನಾನು ಕೇಳುತ್ತಿದ್ದೇನೆ. ಇದಕ್ಕೆ ಬಹಳಷ್ಟು ನಿಗೂಢವಾದಂತಹ ಹಿನ್ನಲೆಯೊಂದಿದೆ. ಅದನ್ನು ಈ ಪ್ರಶ್ನೆಯೋತ್ತರ ವೇಳೆಯಲ್ಲಿ ಕೇಳಲು ನನಗೆ ಕಾಲಾವಕಾಶ ಇಲ್ಲದಿರುವುದರಿಂದ ಆ ಬಗ್ಗೆ ಪ್ರಸ್ತಾಪಿಸಲು ನಾನು ಕಾಲಿಂಗ್ ಅಟೆನ್‌ಷನ್‌ವೊಂದನ್ನು ಕಳುಹಿಸಿದ್ದೇನೆ. ದಯವಿಟ್ಟು ಈ ಪಂಚಾಯಿತಿ ಕಾರ್ಯದರ್ಶಿ ಮೇಲೆ ಕ್ರಮ ತೆಗೆದುಕೊಂಡು ಅವನನ್ನು ಸಸ್ಪೆಂಡ್ ಮಾಡಬೇಕು ಮತ್ತು ಲೈಸನ್ಸ್ ರದ್ದುಮಾಡಬೇಕು. ದಯಮಾಡಿ ಈ ಎರಡು ಅಂಶಗಳ ಬಗ್ಗೆ ಮಾನ್ಯ ಸಚಿವರು ಉತ್ತರಿಸಬೇಕೆಂದು ಕೋರುತ್ತೇನೆ.

ಶ್ರೀ ಸಿ. ಚನ್ನಿಗಪ್ಪ :— ಮಾನ್ಯ ಅಧ್ಯಕ್ಷರೇ, ಯಾವುದಾದರೂ ಪ್ರೈವೇಟ್ ಸೈಟ್‌ನಲ್ಲಿ ಆಶ್ರಯ ಮನೆ ಕಟ್ಟಬೇಕಾದರೆ ಲೈಸನ್ಸ್ ಕೊಡಿ ಎಂದು ಪಂಚಾಯಿತಿಯವರನ್ನು ಕೇಳಿದರೆ, ಆ ರೀತಿ ಕೊಡಲಿಕ್ಕೆ ಬರುವುದಿಲ್ಲ, ಇದನ್ನು ಕನ್ವರ್ಷನ್ ಮಾಡಿಕೊಂಡು ಬನ್ನಿ ಎಂದು ರಿಪ್ಲೈ ಕೊಡುತ್ತಾರೆ. ಆದರೆ ಇಲ್ಲಿ 2-3 ಎಕರೆ ಜಮೀನಿಗೆ ಒಂದು ದೊಡ್ಡ ಡಿಸ್ಟಿಲರಿ ಕಟ್ಟಲು ಯಾವುದೇ ದುಡ್ಡು ಕಟ್ಟಿಸಿಕೊಳ್ಳದೇ ಮತ್ತು ಭೂ ಪರಿವರ್ತನೆ ಆಗದಂತೆ ಲೈಸನ್ಸ್ ನೀಡಲಾಗಿದೆ. 5-10 ಲಕ್ಷ ರೂ. ಆಸ್ತಿಯಲ್ಲಿ ಡಿಸ್ಟಿಲರಿಯೊಂದನ್ನು

ಅಕ್ರಮವಾಗಿ ಕಟ್ಟುವಾಗ ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಲ್ಲವೇ? ಆ ಸಕ್ರೆಟರಿಯವರು ಯಾವ ರೀತಿಯಾಗಿ ಇದಕ್ಕೆ ಲೈಸನ್ಸ್ ಕೊಟ್ಟಿದ್ದಾರೆ? ಸರ್ಕಾರ ಕೂಡಲೆ ಲೈಸನ್ಸ್ ರದ್ದುಮಾಡಬೇಕು. ಸರ್ಕಾರಕ್ಕೆ ಆಗುತ್ತಿರುವ ನಷ್ಟವನ್ನು ತಪ್ಪಿಸಲು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್:— ಮಾನ್ಯ ಅಧ್ಯಕ್ಷರೇ, ಇಲ್ಲಿ ಕೊಟ್ಟಿರುವ ಉತ್ತರ ಅವಾಯ್ಡ್ ಮಾಡುವಂತೆ ಇದೆ. ಅವತ್ತು ಅಲ್ಲಿ ಅಕ್ರಮವಾಗಿ ಡಿಸ್ಟಿಲರಿ ಬಿಲ್ಡಿಂಗ್ ಒಂದು ಪರ್ಟಿಕ್ಯೂಲರ್ ಜಮೀನಿನಲ್ಲಿ ನಿರ್ಮಾಣವಾಗುತ್ತಿದೆ. ಅಲ್ಲಿರತಕ್ಕಂಥ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ಅದಕ್ಕೆ ಲೈಸನ್ಸ್ ಕೊಟ್ಟಿದ್ದಾನೆ. ಅಲ್ಲಿ ಕೃಷಿ ಭೂಮಿಯನ್ನು ಪರಿವರ್ತನೆ ಮಾಡಿಲ್ಲ. ಕೃಷಿ ಮಾಡದೆಯೇ ಅಲ್ಲಿ ಕಟ್ಟಡವೊಂದು ನಿರ್ಮಾಣವಾಗುತ್ತಿರುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುವುದಿಲ್ಲವೆನ್ನುವುದಾದರೆ ಅದರಲ್ಲಿ ಬಹಳಷ್ಟು ಅವ್ಯವಹಾರ ನಡೆದಿದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಅದರಲ್ಲಿ ಯಾರ ರಾಜಕೀಯ ಹಿನ್ನಲೆ ಇದೆ? ಎಂತಹ ವ್ಯಕ್ತಿ ಇದನ್ನು ಮಾಡುತ್ತಿದ್ದಾರೆ ಎಂಬ ಬಗ್ಗೆ ಸರ್ಕಾರ ನೋಡಬೇಕು. ಇವತ್ತು ಮಾನ್ಯ ಸಚಿವರು 'ಬಾಧಿತ ವ್ಯಕ್ತಿಯು ಗ್ರಾಮ ಪಂಚಾಯಿತಿಯ ಆದೇಶದ ವಿರುದ್ಧ ಕಾನೂನಿನ ಪ್ರಕಾರ ಮೇಲ್ಮನವಿ ಸಲ್ಲಿಸಬೇಕು.' ಎಂಬ ಉತ್ತರವನ್ನು ನೀಡಿದ್ದಾರೆ. ಇಲ್ಲಿ ಸರ್ಕಾರಕ್ಕೆ ಲುಕ್ಸಾನು ಆಗುತ್ತಿದೆ. ಇಲ್ಲಿ ಕೃಷಿ ಭೂಮಿ ಪರಿವರ್ತನೆ ಆಗಿಲ್ಲ. ಸರ್ಕಾರದ ಈ ಕಾನೂನು ವಿರುದ್ಧರಾದಂತಹ ಕ್ರಮವನ್ನು ಸೆಕ್ರೆಟರಿ ಲೈಸನ್ಸ್ ಕೊಡುವ ಮೂಲಕ ಮಾಡಿದ್ದಾನೆ. ಆ ಸೆಕ್ರೆಟರಿ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕು? ಇದರ ಬಗ್ಗೆ ಯಾರೋ ಒಬ್ಬರು ಹೋಗಿ ಅಪೀಲ್ ಮಾಡುವಂತಾದ್ದು ಆಗಬಾರದು. ಇದು ಬಹಳ ದೊಡ್ಡ ಹಗರಣವಾಗಿದೆ. ಇದರ ಬಗ್ಗೆ ಮಾನ್ಯ ಸಚಿವರು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಹೀಗೆಯೇ ಬಿಟ್ಟರೆ ನಾಳೆ ಎಲ್ಲಾ ಕಡೆಗಳಲ್ಲಿಯೂ ಕೊಟ್ಟುಕೊಂಡು ಬರಲಿಕ್ಕೆ ಶುರು ಮಾಡುತ್ತಾರೆ. ಆಗ ಸರ್ಕಾರ ಏನು ಮಾಡುತ್ತದೆ ಆಗ ಅಲ್ಲಿಯ ಹಳ್ಳಿಯವರೇ ಹೋಗಿ ಎ.ಸಿ. ಅಥವಾ ಡಿ.ಸಿ.ಗೆ ಅಪೀಲ್ ಮಾಡಬೇಕೆಂದು ಸರ್ಕಾರ ಹೇಳುತ್ತದೆಯೇ? ಸರ್ಕಾರದ ಗಮನಕ್ಕೆ ಇದು ಬಂದ ಮೇಲೆ ಸಂಬಂಧಪಟ್ಟ ಸೆಕ್ರೆಟರಿ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಅವನ್ನು ತಕ್ಷಣವೇ ಸಸ್ಪೆಂಡ್ ಅಥವಾ ಡಿಸ್‌ಮಿಸ್ ಮಾಡಬೇಕು.

ಶ್ರೀ ಎಂ.ವೈ. ಘೋರ್ಪಡೆ:— ಮಾನ್ಯ ಅಧ್ಯಕ್ಷರೇ, ಪ್ರತಿಯೊಂದು ವಿಷಯಕ್ಕೆ ನಾವು ಹಸ್ತಕ್ಷೇಪ ಮಾಡುವುದಾದರೆ . . . .

(ಗೊಂದಲ)

ಅಧ್ಯಕ್ಷರು:— ಎಲ್ಲರೂ ಒಂದೇ ಸಲಕ್ಕೆ ಎದ್ದು ನಿಂತರೆ ಹೇಗೆ? ಒಬ್ಬೊಬ್ಬರಾಗಿ ಮಾತನಾಡಿ. ಮಾನ್ಯ ಸಚಿವರು ತಮ್ಮ ಉತ್ತರ ಕೊಡಲು ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಚನ್ನಿಗಪ್ಪ :— ಲೈಸನ್ಸ್ ಕ್ಯಾನ್ಸಲ್ ಆಗಬೇಕು. ಸರ್ಕಾರಕ್ಕೆ ಹಣ ಕಟ್ಟಬೇಕು.

ಶ್ರೀ ಜಗದೀಶ್ ಶೆಟ್ಟರ್ :— ಪರಿಸರ ಮಾಲಿನ್ಯದಿಂದ ಅನುಮತಿ ತೆಗೆದುಕೊಂಡಿಲ್ಲ, ಯಾವುದೇ ಇಲಾಖೆಯಿಂದ ಪರವಾನಗಿ ತೆಗೆದುಕೊಂಡಿಲ್ಲ. ಯಾವುದೇ ಪರವಾನಗಿ ಇಲ್ಲದೆ ಅಲ್ಲಿ ಒಂದು ಡಿಸ್ಟಿಲರಿ ಬರುತ್ತಿದೆ.

(ಗೊಂದಲ)

ಶ್ರೀ ಎಂ.ವೈ. ಘೋರ್ಪಡೆ :— ಸಣ್ಣ ವಿಷಯ ಇದ್ದರೂ ಕೂಡ ಅದು ಗಂಭೀರವಾದ ಪ್ರಶ್ನೆ. ಯಾವುದೇ ಹಗರಣದಲ್ಲಿ ಅಕ್ರಮ ಆದರೆ ಅದನ್ನು ಸರಿಪಡಿಸುವ ವಿಧಾನ ಕಾನೂನಿನಲ್ಲಿ ಇದ್ದಾಗ ಅದನ್ನು ಅಲಕ್ಷ ಮಾಡಿಕೊಂಡು ಇಲ್ಲಯೇ ಸಭೆಯಲ್ಲಿ ತೀರ್ಮಾನ ಮಾಡುವುದು ಸರಿಯಾದ ಸಂಪ್ರದಾಯ ಅಲ್ಲ.

ಶ್ರೀ ಜಗದೀಶ್ ಶೆಟ್ಟರ್ :— ಭೂಮಿ ಪರಿವರ್ತನೆ ಮಾಡದೇ ಅನುಮತಿ ಕೊಟ್ಟಿದ್ದಾರೆ. ಪ್ರೈಮಾ-ಫೇಸಿ ಕೇಸ್ ಆಗಿದೆ, ಅವರ ಮೇಲೆ ಕ್ರಮ ಕೈಗೊಳ್ಳಿ.

ಶ್ರೀ ಎಂ.ವೈ. ಘೋರ್ಪಡೆ :— ಕಾರ್ಯದರ್ಶಿ ಕೊಟ್ಟಿಲ್ಲ. ಗ್ರಾಮ ಪಂಚಾಯಿತಿಯವರು ಕೊಟ್ಟಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ :— ನಾವು ಪ್ರತಿಯೊಂದು ಸಣ್ಣ ವಿಷಯಗಳಿಗೂ ಇನ್‌ಸ್ಪೆಕ್ಷನ್ ಮಾಡುವುದಕ್ಕಾಗುತ್ತಾ ಎಂದರೆ ಹೇಗೆ? What message this House is sending

ಅಧ್ಯಕ್ಷರು :— ಘೋರ್ಪಡೆಯವರೇ, ತಮ್ಮ ಗಮನಕ್ಕೆ ತಂದಿದ್ದಾರೆ, ವೆರಿಫೈ ಮಾಡಿ ನೋಡಿ, ಕಾನೂನಿನಲ್ಲಿ ಇದ್ದರೆ ಮಾಡಿ. ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಿ ಎಂದು ಹೇಳುತ್ತಿದ್ದಾರೆ. I have instructed the Minister to take action as per te Act and Rules. ಈಗ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ಮುಂದಿನ ಐದು ಪ್ರಶ್ನೆಗಳನ್ನು we will take up during this week only. They will not lapse.

(ಅ) ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳ 18ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 151 ಪ್ರಶ್ನೆಗಳ ಪೈಕಿ 112 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ರಾಜ್ಯದಲ್ಲಿ ಹೊಸದಾಗಿ ಟಿ.ಸಿ.ಹೆಚ್. ಮತ್ತು ಬಿ.ಎಡ್ ಕಾಲೇಜುಗಳ ಪ್ರಾರಂಭ

2469 (2942) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಈ ಹಿಂದೆ ಟಿ.ಸಿ.ಹೆಚ್. ಮತ್ತು ಬಿ.ಎಡ್ ಕಾಲೇಜುಗಳನ್ನು ಪ್ರಾರಂಭಿಸಲು ನಿಷೇದಿಸಲಾಗಿತ್ತೆ ;

ಆ) ಈ ನಿಷೇದಕ್ಕೆ ಕಾರಣಗಳೇನು ;

ಇ) ಈ ನಿಷೇದ ಆಜ್ಞೆಯನ್ನು ರದ್ದು ಗೊಳಿಸಲಾಗಿದೆಯೇ ಹಾಗಿದ್ದಲ್ಲಿ ಎಂದಿನಿಂದ ರದ್ದು ಗೊಳಿಸಲಾಗಿದೆ ;

ಈ) ಪುನ: ಈಗ ಹೊಸದಾಗಿ ಟಿ.ಸಿ.ಹೆಚ್. ಮತ್ತು ಬಿ.ಎಡ್ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗುವುದೇ? ಎಂದಿನಿಂದ ಮತ್ತು ಎಲ್ಲೆಲ್ಲಿ ಪ್ರಾರಂಭಿಸಲು ಅವಕಾಶ ಕಲ್ಪಿಸಲಾಗಿದೆ ; ಅನುಮತಿಗಾಗಿ ಎಷ್ಟು ಅರ್ಜಿಗಳು ಬಂದಿವೆ (ವಿವರ ನೀಡುವುದು)

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಹೌದು

ಆ) ಬೇಡಿಕೆಗಿಂತ ತರಬೇತಿ ಪಡೆದ ಅಭ್ಯರ್ಥಿಗಳ ಲಭ್ಯತೆ ಅತ್ಯಧಿಕವಾಗಿದ್ದುದರಿಂದ ಹಾಗೂ ಎನ್.ಸಿ.ಟಿ.ಇ. ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ನಿಷೇಧ ವಿಧಿಸಲಾಗಿದೆ.

ಇ) ಹೊಸದಾಗಿ ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ ಮಾರ್ಗಸೂಚಿಗಳನ್ನು ರಚಿಸಲಾಗುತ್ತಿದೆ. ಆದರೆ, ಬಿ.ಎಡ್. ಕಾಲೇಜುಗಳು ಸೇರಿದಂತೆ ಹೊಸ ಸಿ.ಪಿ.ಇಡಿ. ಬಿ.ಪಿ.ಇಡಿ, ಎನ್.ಟಿ.ಸಿ, ಹಿಂದಿ ಶಿಕ್ಷಾ ಸ್ನಾತಕ್ ಇತ್ಯಾದಿ ಶಿಕ್ಷಕರ ತರಬೇತಿ ಸಂಸ್ಥೆಗಳ ಸ್ಥಾಪನೆ ಬಗ್ಗೆ ನಿಷೇಧ ಮುಂದುವರಿಸಲಾಗಿದೆ. ಈ ಕುರಿತಂತೆ ಸಾವಿರಾರು ಅರ್ಜಿಗಳು ಸ್ವೀಕೃತವಾಗಿವೆ.

ಕೊಡಗು ಜಿಲ್ಲೆಯಲ್ಲಿ ಖಾಲಿ ಇರತಕ್ಕ ವೃತ್ತಿಪರ ಶಿಕ್ಷಕರ ಹುದ್ದೆಗಳನ್ನು ಭರ್ತಿಮಾಡುವುದು

2489(2428) ಶ್ರೀ ಅಪ್ಪಚ್ಚು ರಂಜನ್ (ಸೋಮವಾರಪೇಟೆ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ವೃತ್ತಿಪರ ಶಿಕ್ಷಕರ ಹುದ್ದೆ ಖಾಲಿ ಇದೆ; ಈ ಹುದ್ದೆಯನ್ನು ತುಂಬಲು ಸರ್ಕಾರ ಏನು ಕ್ರಮ ಕೈಗೊಂಡಿದೆ? (ತಾಲ್ಲೂಕುವಾರು ವಿವರ ಕೊಡುವುದು)

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) + 2 ಹಂತದ ವೃತ್ತಿ ಶಿಕ್ಷಣ ಪದವಿ ಪೂರ್ವ ಕಾಲೇಜುಗಳಲ್ಲಿ 05 ಹುದ್ದೆಗಳು ಖಾಲಿ ಇರುತ್ತಿವೆ.

1) ವಿರಾಜಪೇಟೆ ತಾಲ್ಲೂಕು 04 ಹುದ್ದೆಗಳು

2) ಮಡಕೇರಿ ತಾಲ್ಲೂಕು 01 ಹುದ್ದೆ

ಆಯಾ ಕಾಲೇಜಿನಲ್ಲಿರುವ ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ಬೇಕಾಗುವ ವೃತ್ತಿ ಶಿಕ್ಷಣ ಸಿಬ್ಬಂಧಿಯನ್ನು ಆಯಾ ಕಾಲೇಜಿನ ಪ್ರಾಧಿಕಾರಿಗಳೇ ಸಂಭಾವನೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶವಿದೆ.

ಕೊಡಗು ಜಿಲ್ಲೆಯ ಶಾಲಾ ಕಾಲೇಜುಗಳಿಗೆ ಗಣಕ ಯಂತ್ರ ವಿತರಿಸುವುದು.

2490(3006) ಶ್ರೀ ಅಪ್ಪಚ್ಚು ರಂಜನ್ (ಸೋಮವಾರಪೇಟೆ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೊಡಗು ಜಿಲ್ಲೆಯ ಶಾಲಾ ಕಾಲೇಜುಗಳಿಗೆ ಎಷ್ಟು ಮೊತ್ತದ ಗಣಕ ಯಂತ್ರ ವಿತರಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

ಅ) ಕೊಡಗು ಜಿಲ್ಲೆಯಲ್ಲಿನ ಒಟ್ಟು 3 ತಾಲ್ಲೂಕುಗಳಲ್ಲಿನ 18 ಸರ್ಕಾರಿ ಪ್ರೌಢ ಶಾಲೆಗಳಿಗೆ ಮಾಹಿತಿ ಸಿಂಧು ಯೋಜನೆಯಡಿಯಲ್ಲಿ ಕಂಪ್ಯೂಟರ್‌ಗಳನ್ನು ವಿತರಿಸಲಾಗಿದೆ. ಶಾಲೆಗಳು ಮಕ್ಕಳ ಸಂಖ್ಯೆಗಳಿಗನುಸಾರವಾಗಿ ಎ, ಬಿ ಹಾಗೂ ಸಿ ಎಂದು ವರ್ಗೀಕರಿಸಿದ್ದು 5 ವರ್ಷದ ಈ ಯೋಜನೆಗೆ ಪ್ರತಿ ಶಾಲೆಗೆ ಕೆಳಕಂಡಂತೆ ಹಣ ವೆಚ್ಚ ಮಾಡಲಾಗುತ್ತಿದೆ. ಕೊಡಗು ಜಿಲ್ಲೆಯಲ್ಲಿನ 18 ಶಾಲೆಗಳ ವಿವರ ಈ ಕೆಳಕಂಡಂತಿದೆ.

ತಾಲ್ಲೂಕು	ಕೆಟಗರಿ-ಎ ರೂ. 14.69 ಲಕ್ಷ	ಕೆಟಗರಿ-ಬಿ ರೂ. 19.10 ಲಕ್ಷ	ಕೆಟಗರಿ-ಸಿ ರೂ. 24.20 ಲಕ್ಷ	ಒಟ್ಟು	5 ವರ್ಷಗಳಿಗೆ ತಗಲುವ ಆಯವ್ಯಯ
ಮಡಕೇರಿ	2	1	1	4	ರೂ. 72.68 ಲಕ್ಷ
ಸೋಮವಾರ ಪೇಟೆ	2	1	3	6	ರೂ.121.08 ಲಕ್ಷ
ವಿರಾಜಪೇಟೆ	2	4	2	6	ರೂ.154.18 ಲಕ್ಷ
	6	6	6	18	ರೂ.347.04 ಲಕ್ಷ

ಆದ್ದರಿಂದ ಕೊಡಗು ಜಿಲ್ಲೆಯ 3 ತಾಲ್ಲೂಕಿನ 18 ಶಾಲೆಗಳಿಗೆ ಒಟ್ಟು 347.94 ರೂ.ಗಳನ್ನು ಕಂಪ್ಯೂಟರ್ ಶಿಕ್ಷಣ ನೀಡಲು ವಿನಿಯೋಗಿಸಲಾಗುವುದು.

ರಾಜ್ಯದಲ್ಲಿ ಗುತ್ತಿಗೆ ಆಧಾರದ ಮೇಲೆ ವೈದ್ಯರ ನೇಮಕಾತಿ

2491(3007) ಶ್ರೀ ಅಪ್ಪಚ್ಚು ರಂಜನ್ (ಸೋಮವಾರಪೇಟೆ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಗುತ್ತಿಗೆ ಆಧಾರದ ಮೇಲೆ ಎಷ್ಟು ವೈದ್ಯರನ್ನು ನೇಮಕ ಮಾಡಲಾಗಿದೆ; ರಾಜ್ಯದಲ್ಲಿ ಎಷ್ಟು ವೈದ್ಯರ ಹುದ್ದೆ ಖಾಲಿ ಇವೆ, ಕೊಡಗು ಜಿಲ್ಲೆಯಲ್ಲಿ ಎಷ್ಟು ಹುದ್ದೆ ಖಾಲಿ ಇದೆ? (ತಾಲ್ಲೂಕುವಾರು ವಿವರ ನೀಡುವುದು)

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ವೈದ್ಯರ ಸಂಖ್ಯೆ	-	12253
ಖಾಲಿ ಇರುವ ವೈದ್ಯರ ಹುದ್ದೆಗಳು	-	608
ಕೊಡಗು ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳ ವಿವರ (ತಾಲ್ಲೂಕುವಾರು ವಿವರ)		
ವಿರಾಜಪೇಟೆ	-	18
ಸೋಮವಾರಪೇಟೆ	-	12
ಮಡಕೇರಿ	-	23

ಸೋಮವಾರಪೇಟೆ ಆಲೂರು ಸಿದ್ದಾಪುರ ಸರ್ಕಾರಿ ಕಿರಿಯ ಕಾಲೇಜಿನ ಉಪನ್ಯಾಸಕರ ಹುದ್ದೆಗಳ ಭರ್ತಿ

2493(3348) ಶ್ರೀ ಅಪ್ಪಚ್ಚು ರಂಜನ್ (ಸೋಮವಾರಪೇಟೆ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸೋಮವಾರ ಪೇಟೆ ತಾಲ್ಲೂಕು ಆಲೂರ ಸಿದ್ದಾಪುರ ಸರ್ಕಾರಿ ಕಿರಿಯ ಕಾಲೇಜಿಗೆ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

ಆ) ಈ ಪೈಕಿ ಖಾಲಿ ಇರುವ ಹುದ್ದೆಗಳೆಷ್ಟು? ಉಪನ್ಯಾಸಕರ ಹುದ್ದೆ ಖಾಲಿ ಇರುವುದರಿಂದ ಫಲಿತಾಂಶದ ಮೇಲೆ ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಹುದ್ದೆಗಳನ್ನು ಎಂದು ಭರ್ತಿ ಮಾಡಲಾಗುವುದು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ), ಆ) ಸದರಿ ಕಾಲೇಜಿಗೆ ಒಂದು ಪ್ರಾಚಾರ್ಯರ ಹುದ್ದೆ, 6 ಉಪನ್ಯಾಸಕರ ಹುದ್ದೆಗಳು ಮಂಜೂರಾಗಿರುತ್ತದೆ.

ಸದರಿ ಕಾಲೇಜಿನಲ್ಲಿ ಸಮಾಜಶಾಸ್ತ್ರ ಉಪನ್ಯಾಸಕರ 2 ಹುದ್ದೆಗಳು ಖಾಲಿ ಇರುತ್ತದೆ. ಈ ಹುದ್ದೆಗಳನ್ನು ಮುಂದಿನ ನೇಮಕಾತಿಯಲ್ಲಿ ಭರ್ತಿ ಮಾಡಲಾಗುವುದು. ಆದಾಗ್ಯೂ ಸದರಿ ಉಪನ್ಯಾಸಕರ ಕೊರತೆಯನ್ನು ನೀಗಿಸಲು ಸರ್ಕಾರಿ ಪದವಿ ಪೂರ್ವ ಕಾಲೇಜು, ಐಗೂರಿನಿಂದ ಸಮಾಜ ಶಾಸ್ತ್ರ ಉಪನ್ಯಾಸಕರನ್ನೂ ಮತ್ತು ಸರ್ಕಾರಿ ಪದವಿಪೂರ್ವ ಕಾಲೇಜು ಶಿರಂಗಾಲದಿಂದ ರಾಜ್ಯ ಶಾಸ್ತ್ರ ಉಪನ್ಯಾಸಕರನ್ನು ವಾರಕ್ಕೆ 3 ದಿನಗಳಿಗೆ ನಿಯೋಜನೆ ಮೇರೆಗೆ ನೇಮಿಸಿ ವಿದ್ಯಾರ್ಥಿಗಳಿಗೆ ಉಪನ್ಯಾಸಕರ ಕೊರತೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ.

ತೀರ್ಥಹಳ್ಳಿ ತಾಲ್ಲೂಕಿನ ಆರಗದಲ್ಲಿ ಜೂನಿಯರ್ ಕಾಲೇಜನ್ನು ಪ್ರಾರಂಭಿಸುವುದು.

2495(2943) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದಲ್ಲಿ ಇತ್ತೀಚೆಗೆ ಎಷ್ಟು ಸರ್ಕಾರಿ ಜ್ಯೂನಿಯರ್ ಕಾಲೇಜುಗಳನ್ನು ಮುಚ್ಚಲಾಗಿದೆ, ಇವುಗಳನ್ನು ಎಲ್ಲೆಲ್ಲಿಗೆ ಸ್ಥಳಾಂತರಿಸಲಾಗಿದೆ; (ಕಾಲೇಜುವಾರು ವಿವರ ನೀಡುವುದು)

2) ತೀರ್ಥಹಳ್ಳಿ ಸರ್ಕಾರಿ ಜ್ಯೂನಿಯರ್ ಕಾಲೇಜಿಗೆ ಪ್ರವೇಶ ಬಯಸಿಬಂದ ಅರ್ಜಿಗಳೆಷ್ಟು; ಎಲ್ಲಾ ವಿದ್ಯಾರ್ಥಿಗಳಿಗೆ ಪ್ರವೇಶ ಕೊಟ್ಟರೆ ಕೊಠಡಿಗಳ ಸಂಖ್ಯೆ ಮತ್ತು ಉಪನ್ಯಾಸಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

3) ತೀರ್ಥಹಳ್ಳಿಯಲ್ಲಿ ಜ್ಯೂನಿಯರ್ ಕಾಲೇಜಿಗೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿದ್ದು (ಪ್ರವೇಶ ಬಯಸಿರುವವರು) ಇದೇ ತಾಲ್ಲೂಕಿನ ಆಗರದಲ್ಲಿ ಒಂದು ಜ್ಯೂನಿಯರ್ ಕಾಲೇಜು ತೆರೆಯಲು ಸರ್ಕಾರಕ್ಕೆ ಮನವಿ ಏನಾದರೂ ಬಂದಿದೆಯೇ ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

1) ರಾಜ್ಯದಲ್ಲಿ ಪ್ರಸಕ್ತ ವರ್ಷ 16 ಕಾಲೇಜುಗಳನ್ನು ಮುಚ್ಚಲಾಗಿದೆ. ಇವುಗಳನ್ನು ಸ್ಥಳಾಂತರಿಸಿರುವ ವಿವರ ಲಗತ್ತಿಸಿದೆ.

2) ತೀರ್ಥಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಪ್ರಥಮ ಪಿಯುಸಿ ಪ್ರವೇಶ ಬಯಸಿ ಬಂದ ಅರ್ಜಿಗಳ ಸಂಖ್ಯೆ 249. ಪ್ರಥಮ ಪಿಯುಸಿಗೆ ಈಗಾಗಲೇ 294 ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ದ್ವಿತೀಯ ಪಿ.ಯು.ಸಿ.ಯಲ್ಲಿ 197 ವಿದ್ಯಾರ್ಥಿಗಳಿರುತ್ತಾರೆ. ಅಗತ್ಯವಿರುವಷ್ಟು ಉಪನ್ಯಾಸಕರಿದ್ದಾರೆ. 6 ಕೊಠಡಿಗಳಿದ್ದು ಹೆಚ್ಚುವರಿ 2 ಕೊಠಡಿಗಳ ಆವಶ್ಯಕತೆಯಿದೆ.

3) ಹೌದು. ತೀರ್ಥಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಅಗತ್ಯವಿರುವ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು. ಅರಗಕ್ಕೆ ಈ ವರ್ಷ ಪದವಿಪೂರ್ವ ಕಾಲೇಜಿನ ಆವಶ್ಯಕತೆ ಇಲ್ಲವೆಂದು ತೀರ್ಮಾನಿಸಲಾಗಿದೆ.

ಅನುಬಂಧ (ಪ್ರಶ್ನೆ 2943 / 2001)

ಕ್ರಮ ಸಂಖ್ಯೆ	ರದ್ದುಪಡಿಸಲಾದ ಕಾಲೇಜು	ವಿದ್ಯಾರ್ಥಿ ಸಂಖ್ಯೆ		ಹೊಸ ಕಾಲೇಜು ಪ್ರಾರಂಭಿಸಿದ ಸ್ಥಳ
1)	ಸರ್ಕಾರಿ ಪ.ಪೂ. ಕಾಲೇಜು ಮಂಠಾಳ, ಬಸವಕಲ್ಯಾಣ ತಾ: ಬಿದರ್ ಜಿಲ್ಲೆ.	08	17	ಸರ್ಕಾರಿ ಪದವಿ ಪೂರ್ವ ಕಾಲೇಜು, ಬೀಳಗಿ, ಬಾಗಲಕೋಟೆ ಜಿಲ್ಲೆ.
2)	ಸರ್ಕಾರಿ ಪ.ಪೂ. ಕಾಲೇಜು ಅರೆ ಮಲ್ಲಾಪುರ ರಾಣಿ ತಾ: ರಾಣಿಬೆನ್ನೂರು ತಾ: ಹಾವೇರಿ ಜಿಲ್ಲೆ	18	08	ಸರ್ಕಾರಿ ಪದವಿ ಪೂರ್ವ ಕಾಲೇಜು, ಮುಂಡರಗಿ, ಗದಗ ಜಿಲ್ಲೆ.
3)	ಸರ್ಕಾರಿ ಪ.ಪೂ. ಕಾಲೇಜು ದುತ್ತರಗಂವ್ ಆಳಂದ ತಾ: ಗುಲ್ಬರ್ಗ ಜಿಲ್ಲೆ	00	00	ಸರ್ಕಾರಿ ಪದವಿ ಪೂರ್ವ ಕಾಲೇಜು, ಪೋಲೀಸ್ ಕಾಲೋನಿ, ರಾಯಚೂರು (ವಿಜ್ಞಾನ ವಿಭಾಗ ಮಾತ್ರ)
4)	ಸರ್ಕಾರಿ ಪ.ಪೂ. ಕಾಲೇಜು ಮುಳಗಿ, ಮುಂಡಗೋಡು ತಾ: ದ.ಕ.	00	00	ಸರ್ಕಾರಿ ಪದವಿ ಪೂರ್ವ ಕಾಲೇಜು, ತೇರಗಾಂವ್ ಹಳಿಯಾಳ ತಾ: ದ.ಕ. ಜಿಲ್ಲೆ
5)	ಸರ್ಕಾರಿ ಪ.ಪೂ. ಕಾಲೇಜು ಹಿರೊಳ್ಳಿ, ಆಳಂದ ತಾ: ಗುಲ್ಬರ್ಗ ಜಿಲ್ಲೆ (ಈಗಾಗಲೇ ಮುಚ್ಚಿದ ಕಾಲೇಜು).	00	00	ಸರ್ಕಾರಿ ಪದವಿ ಪೂರ್ವ ಕಾಲೇಜು, ಗುರುಗುಂಟಾ, ಲಿಂಗಸೂಗೂರು ತಾ: ರಾಯಚೂರು
6)	ಸರ್ಕಾರಿ ಪ.ಪೂ. ಕಾಲೇಜು ಕರಡಿ, ಹುನಗುಂದ ತಾ: ಬಾಗಲಕೋಟೆ.	00	00	ಸರ್ಕಾರಿ ಪ.ಪೂ. ಕಾಲೇಜು ಹರದನ ಹಳ್ಳಿ, ಕೆ.ಆರ್.ನಗರ ತಾ: ಮೈಸೂರು ಜಿಲ್ಲೆ

F-15-II

1	2	3		4
7)	ಸರ್ಕಾರಿ ಪ.ಪೂ. ಕಾಲೇಜು ಕಂದಗಲ್, ಹುನಗುಂದ ತಾ: ಬಾಗಲಕೋಟೆ (ಈಗಾಗಲೇ ಮುಚ್ಚಿದ ಕಾಲೇಜು).	00	00	ಸರ್ಕಾರಿ ಪ.ಪೂ. ಕಾಲೇಜು, ಕಟಗೇರಿ, ಬಾದಾಮಿ ತಾ: ಬಾಗಲಕೋಟೆ ಜಿಲ್ಲೆ.
8)	ಸರ್ಕಾರಿ ಪ.ಪೂ. ಕಾಲೇಜು ಕಾನಗೋಡು, ಹೊಸನಗರ ತಾ: ಶಿವಮೊಗ್ಗ.	18	30	ಬಾಲಕರ ಸರ್ಕಾರಿ ಪ.ಪೂ. ಕಾಲೇಜು ದಾವಣಗೆರೆ.
9)	ಸರ್ಕಾರಿ ಪ.ಪೂ. ಕಾಲೇಜು, ನಾಗೂರು, ಹುನಗುಂದ ತಾ: ಬಾಗಲಕೋಟೆ (ಈಗಾಗಲೇ ಮುಚ್ಚಿದ ಕಾಲೇಜು).	00	00	ಸರ್ಕಾರಿ ಪ.ಪೂ. ಕಾಲೇಜು, ಬೋರ್ ಗಾಂವ್, ಚಿಕ್ಕೋಡಿ ತಾ: ಬೆಳಗಾಂ ಜಿಲ್ಲೆ.
10)	ಸರ್ಕಾರಿ ಪ.ಪೂ. ಕಾಲೇಜು, ಕಡಬಿ, ಸವದತ್ತಿ ತಾ: ಬೆಳಗಾಂ ಜಿಲ್ಲೆ.	25	11	ಸರ್ಕಾರಿ ಪ.ಪೂ. ಕಾಲೇಜು, ಸವದತ್ತಿ, ಬೆಳಗಾಂ ಜಿಲ್ಲೆ.
11)	ಸರ್ಕಾರಿ ಪ.ಪೂ. ಕಾಲೇಜು, ಭಾತ್ರಾಂಬ, ಭಾಲ್ಕಿ ತಾ: ಬೀದರ್ ಜಿಲ್ಲೆ.	16	19	ಸರ್ಕಾರಿ ಪ.ಪೂ. ಕಾಲೇಜು, ಭಾಲ್ಕಿ, ಬೀದರ್ ಜಿಲ್ಲೆ.
12)	ಸರ್ಕಾರಿ ಪ.ಪೂ. ಕಾಲೇಜು ಚಿಂಚನಸೂರು, ಆಳಂದ ತಾ: ಗುಲ್ಬರ್ಗ.	19	24	ಸರ್ಕಾರಿ ಪದವಿ ಪೂರ್ವ ಕಾಲೇಜು, ಶಹಬಾದ್, ಗುಲ್ಬರ್ಗ ಜಿಲ್ಲೆ.
13)	ಸರ್ಕಾರಿ ಪ.ಪೂ. ಕಾಲೇಜು ಇರಕಲ್, ಕೊಪ್ಪಳ ತಾ:	00	00	ಸರ್ಕಾರಿ ಪದವಿ ಪೂರ್ವ ಕಾಲೇಜು, ಕೌಜಲಗಿ, ಗೋಕಾಕ್ ತಾ: ಬೆಳಗಾಂ ಜಿಲ್ಲೆ.
14)	ಸರ್ಕಾರಿ ಪ.ಪೂ. ಕಾಲೇಜು ನಿರ್ದಾ ಹುಮ್ನಾಬಾದ್ ತಾ: ಬೀದರ್.	19	17	ಸರ್ಕಾರಿ ಪ್ರೌಢಶಾಲೆ ದುಗ್ಗನಹಳ್ಳಿ, ಮಳವಳ್ಳಿ ತಾ: ಮಂಡ್ಯ ಜಿಲ್ಲೆ
15)	ಸರ್ಕಾರಿ ಪ.ಪೂ. ಕಾಲೇಜು, ಮರಡಿಹಳ್ಳಿ, ಹಿರಿಯೂರು ತಾ: ಚಿತ್ರದುರ್ಗ ಜಿಲ್ಲೆ.	10	03	ಸರ್ಕಾರಿ ಪ.ಪೂ. ಕಾಲೇಜು, ಕೊಂಡ್ಲಹಳ್ಳಿ, ಮೊಳಕಾಲ್ಮೂರು ತಾ: ಚಿತ್ರದುರ್ಗ ಜಿಲ್ಲೆ.

15A-II

1	2	3		4
16)	ಸರ್ಕಾರಿ ಪ.ಪೂ. ಕಾಲೇಜು ಗಟ್ಟೀಹಳ್ಳಿ, ಮದ್ದೂರು ತಾ: ಮಂಡ್ಯ ಜಿಲ್ಲೆ.	19	17	ಬಾಲಕಿಯರ ಸರ್ಕಾರಿ ಪ್ರೌಢಶಾಲೆ ಅರ್ಕೇಶ್ವರ ನಗರ, ಮಂಡ್ಯ.
17)	ಸರ್ಕಾರಿ ಪದವಿ ಪೂರ್ವ ಕಾಲೇಜು, ಪರಸೂರು ಗುಲ್ಬರ್ಗಾ ತಾ: (ಈಗಾಗಲೇ ಮುಚ್ಚಿದ ಕಾಲೇಜು).	25	11	ಸರ್ಕಾರಿ ಪ್ರೌಢ ಶಾಲೆ, ಮುಳಬಾಗಿಲು, ಕೋಲಾರ ಜಿಲ್ಲೆ.
18)	ಸರ್ಕಾರಿ ಪದವಿ.ಪೂ. ಕಾಲೇಜು ಗುಂಡುಗುರ್ತಿ, ಗುಲ್ಬರ್ಗಾ ತಾ: (ಈಗಾಗಲೇ ಮುಚ್ಚಿದೆ).	00	00	ಬಾಲಕರ ಸರ್ಕಾರಿ ಪ್ರೌಢಶಾಲೆ, ಚಿಂತಾಮಣಿ, ಕೋಲಾರ ಜಿಲ್ಲೆ.
19)	ಸರ್ಕಾರಿ ಪದವಿ ಪೂರ್ವ ಕಾಲೇಜು, ಕ್ಯಾಲನೂರು, ಕೋಲಾರ ತಾ:	28	12	ನೂತನ ಸರ್ಕಾರಿ ಪ್ರೌಢಶಾಲೆ, ಕೋಲಾರ.
20)	ಸರ್ಕಾರಿ ಪ.ಪೂ. ಕಾಲೇಜು ದಂಗಾಪುರ ಆಳಂದ ತಾ: ಗುಲ್ಬರ್ಗ ಜಿಲ್ಲೆ.	00	00	ಸರ್ಕಾರಿ ಪ್ರೌಢಶಾಲೆ, ಕಾರವಾರ, ಉ.ಕ. ಜಿಲ್ಲೆ.
21)	ಸರ್ಕಾರಿ ಪದವಿ ಪೂರ್ವ ಕಾಲೇಜು, ನಗನೂರು ಸುರಪುರ ತಾ: ಗುಲ್ಬರ್ಗ (ಈಗಾಗಲೇ ಮುಚ್ಚಿದ ಕಾಲೇಜು).	25	11	ಸರ್ಕಾರಿ ಪ.ಪೂ. ಕಾಲೇಜು, ಒಂಟಿಕೊಪ್ಪಲು, ಮೈಸೂರು
22)	ಬಾಲಕಿಯರ ಸರ್ಕಾರಿ ಸ್ವತಂತ್ರ ಪ.ಪೂ. ಕಾಲೇಜು, ಹೊಳೆನರಸೀಪುರ ಹಾಸನ ಜಿಲ್ಲೆ (ತೆರೆಯದ ಕಾಲೇಜು).	25	11	ವಿಭಜಿತ ಸರ್ಕಾರಿ ಪ್ರೌಢಶಾಲೆ, ಹಾಸನ
23)	ಸರ್ಕಾರಿ ಪ.ಪೂ. ಕಾಲೇಜು ಜೆ.ಸಿ.ಪುರ, ಅರಸೀಕೆರೆ ತಾ: ಹಾಸನ ಜಿಲ್ಲೆ.	13	13	ಸರ್ಕಾರಿ ಪ್ರೌಢಶಾಲೆ, ಕೊಣನೂರು, ಅರಕಲಗೂಡು ತಾ: ಹಾಸನ ಜಿಲ್ಲೆ.
24)	ಸರ್ಕಾರಿ ಪ.ಪೂ. ಕಾಲೇಜು ಮುನ್ನಳ್ಳಿ, ಆಳಂದ ತಾ: ಗುಲ್ಬರ್ಗ.	19	30	ಸರ್ಕಾರಿ ಪ್ರೌಢಶಾಲೆ, ಆದರ್ಶನಗರ, ಗುಲ್ಬರ್ಗ.
25)	ಸರ್ಕಾರಿ ಪ.ಪೂ. ಕಾಲೇಜು ಕಲ್ಮಲಾ, ರಾಯಚೂರು ಜಿಲ್ಲೆ	00	00	ಸರ್ಕಾರಿ ಪ್ರೌಢಶಾಲೆ, ಅರಕೇರಾ, ದೇವದುರ್ಗ, ರಾಯಚೂರು
26)	ಸರ್ಕಾರಿ ಪ.ಪೂ. ಕಾಲೇಜು ಹುಡಗಿ, ಹುಮ್ನಾಬಾದ್ ತಾ: ಬೀದರ್ ಜಿಲ್ಲೆ.	00	00	ಸರ್ಕಾರಿ ಪ.ಪೂ. ಕಾಲೇಜು, ಕಾಡ್ಲೆ, ಮದ್ದೂರು ತಾ: ಮಂಡ್ಯ ಜಿಲ್ಲೆ.

ರಾಜ್ಯದಲ್ಲಿ ಹೊಸದಾಗಿ ಬಿ.ಎಡ್ ಹಾಗೂ ಬಿ.ಪಿ.ಇಡಿ ಕಾಲೇಜು ಮಂಜೂರಾತಿ

2497 (3349) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಹೊಸದಾಗಿ ಬಿಎಡ್ ಮತ್ತು ಬಿಪಿಇಡಿ ಶಿಕ್ಷಕರ ತರಬೇತಿ ಕೇಂದ್ರಗಳನ್ನು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಮಂಜೂರು ಮಾಡುವ ಪ್ರಸ್ತಾವ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಮತ್ತು ಎಷ್ಟು ಕೇಂದ್ರಗಳನ್ನು ಮಂಜೂರು ಮಾಡಲಾಗುವುದು;

ಇ) ಈ ತರಬೇತಿ ಕೇಂದ್ರಗಳನ್ನು ಮಂಜೂರು ಮಾಡುವಲ್ಲಿ ಸರ್ಕಾರ ಯಾವುದಾದರೂ ನೀತಿ ನಿಯಮಗಳನ್ನು ರೂಪಿಸಿದೆಯೇ; ಹಾಗಿದ್ದಲ್ಲಿ ಪ್ರತಿಯನ್ನು ಒದಗಿಸುವುದು;

ಈ) ಈ ತರಬೇತಿ ಕೇಂದ್ರಗಳನ್ನು ಮಂಜೂರು ಮಾಡುವಲ್ಲಿ ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳುವುದು?

ಡಾ: ಪರಮೇಶ್ವರಪ್ಪ (ಉನ್ನತ ಶಿಕ್ಷಣ ಸಚಿವರು) :—

ಅ) -ಇಲ್ಲ-
ಜಾರಿಯಲ್ಲಿರುವ ನಿಷೇಧವನ್ನು ದಿ.31-3-2006 ರವರೆಗೆ ಮುಂದುವರಿಸಲಾಗಿದೆ.

ಆ) ಉದ್ಭವಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ

ಈ) ಅನ್ವಯಿಸುವುದಿಲ್ಲ

ರಾಜ್ಯದಲ್ಲಿ ಹೊಸದಾಗಿ ಟಿ.ಸಿ.ಎಚ್./ಸಿ.ಪಿ.ಎಡ್ ಕಾಲೇಜು ಆರಂಭಿಸುವ ಬಗ್ಗೆ

2498 (3350) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಹೊಸದಾಗಿ *ಟಿ.ಸಿ.ಎಚ್.* ಮತ್ತು *ಸಿ.ಪಿ.ಇಡಿ* ಶಿಕ್ಷಕರ ತರಬೇತಿ ಕೇಂದ್ರಗಳನ್ನು ಖಾಸಗಿ ಕಾಲೇಜುಗಳಿಗೆ ಮಂಜೂರು ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಎಷ್ಟು ಕಾಲೇಜುಗಳನ್ನು ಮಂಜೂರು ಮಾಡಲಾಗುವುದು?

ಇ) ಈ ತರಬೇತಿ ಕೇಂದ್ರಗಳನ್ನು ಮಂಜೂರು ಮಾಡಲು ಸರ್ಕಾರ ಯಾವುದಾದರೂ ನೀತಿ ನಿಯಮವನ್ನೇನಾದರೂ ರೂಪಿಸಿದೆಯೇ; (ಹಾಗಿದ್ದಲ್ಲಿ ಪ್ರತಿಯನ್ನು ಒದಗಿಸುವುದು)

ಈ) ಈ ತರಬೇತಿ ಕೇಂದ್ರಗಳನ್ನು ಮಂಜೂರು ಮಾಡುವಲ್ಲಿ ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ರಾಜ್ಯದಲ್ಲಿ ಹೊಸದಾಗಿ ಶಿಕ್ಷಕ ತರಬೇತಿ ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾಪವಿದೆ.

ಆ), ಇ), ಈ) ಹೊಸದಾಗಿ ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಮಂಜೂರು ಮಾಡುವ ಬಗ್ಗೆ ಮಾರ್ಗಸೂಚಿಗಳನ್ನು ರಚಿಸಲಾಗುತ್ತಿದ್ದು, ಅದರಂತೆ ಕ್ರಮ ಕೈಗೊಳ್ಳಲಾಗುವುದು.

ಹಾಲಿ ಇರುವ ಶಾಲಾಬಿವೃದ್ಧಿ ಸಮಿತಿಗಳನ್ನು ಪುನರ್ ರಚನೆ ಮಾಡುವುದು

2499 (3353) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಾಲಿ ಇರುವ ಶಾಲಾಭಿವೃದ್ಧಿ ಸಮಿತಿಗಳನ್ನು ಪುನರ್ ರಚಿಸಲಾಗುವುದೇ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಇ) ಪುನರ್‌ರಚನೆ ಮಾಡಲು ಯಾವ ಮಾರ್ಗಸೂಚಿಗಳನ್ನು ಅನುಸರಿಸಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಈ ಹಿಂದೆ ಇದ್ದ ಶಾಲಾ ಅಭಿವೃದ್ಧಿ ಸಮಿತಿಗಳ ಬದಲು ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಗಳ ರಚನೆಗೆ ಸರ್ಕಾರವು ಆದೇಶ ಸಂಖ್ಯೆ : ಇಡಿ :೧ : ಪಿಬಿಎಸ್ : ೨೦೦೧ ದಿನಾಂಕ : ೨೮-೪-೨೦೦೧ರಲ್ಲಿ ಅನುಮತಿ ನೀಡಿದೆ.

ಆ) ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆ ತರಲು ಹಾಗೂ ಶಾಲಾ ಆಡಳಿತದಲ್ಲಿ ಸಮುದಾಯದ ಪಾತ್ರವನ್ನು ಖಚಿತಪಡಿಸಲು ಶಾಲಾಭಿವೃದ್ಧಿ ಸಮಿತಿಗಳನ್ನು ರಚಿಸಲಾಗುತ್ತಿದೆ.

ಇ) ಶಿಕ್ಷಣ ತಜ್ಞರ, ಸಂಘ-ಸಂಸ್ಥೆ ಹಾಗೂ ಗಣ್ಯ ವ್ಯಕ್ತಿಗಳೊಂದಿಗೆ ಸಮಾಲೋಚಿಸಿ ಸಲಹೆ ಮತ್ತು ಸೂಚನೆಗಳನ್ನು ಪರಿಗಣಿಸಿ ಅಂತಿಮ ಆದೇಶವನ್ನು ಹೊರಡಿಸಲಾಗಿದೆ.

ಗ್ರಾಮಾಂತರ ಪ್ರದೇಶದಲ್ಲಿನ ಪಿ.ಎಚ್.ಸಿ. ಮತ್ತು ಪಿ.ಎಚ್.ಯುಗಳಲ್ಲಿ ವೈದ್ಯರ ಸಮಯ ಪಾಲನೆ

2500 (3354) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗ್ರಾಮಾಂತರ ಪ್ರದೇಶದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಘಟಕಗಳಲ್ಲಿನ ವೈದ್ಯರು ನಿಗದಿತ ಸಮಯಕ್ಕೆ ನಿಯಮಿತವಾಗಿ ಹಾಜರಾಗದೇ ಇರುವುದನ್ನು ಸರ್ಕಾರ ಮನಗಂಡಿದೆಯೇ?

ಆ) ವೈದ್ಯರು ನಿಗದಿತ ಸಮಯಕ್ಕೆ ಕಡ್ಡಾಯವಾಗಿ ಹಾಜರಾಗಲು ಸರ್ಕಾರ ಏನಾದರೂ ಕಡ್ಡಾಯ ಕ್ರಮವನ್ನು ರೂಪಿಸಿ ಜಾರಿಗೊಳಿಸಲಾಗುವುದೇ?

ಇ) ಇದರ ವಿವರಗಳೇನು?

ಈ) ಡಾ: ಸುದರ್ಶನ್‌ರವರ ವರದಿ ಅನ್ವಯ ಸರ್ಕಾರಿ ಸೇವೆಯಲ್ಲಿನ ವೈದ್ಯರು ಖಾಸಗಿ ಪ್ರಾಕ್ಟೀಸ್ ಮಾಡುತ್ತಿರುವ ವಿಷಯದಲ್ಲಿ ಸರ್ಕಾರ ಯಾವುದಾದರೂ ನಿರ್ಧಾರವನ್ನು ತಳೆದಿದೆಯೇ?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಇಂತಹ ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈಗಾಗಲೇ ಜಾರಿಗೊಳಿಸಲಾಗಿದೆ.

ಇ) ಸರ್ಕಾರದ ನಿಯಮದ ಪ್ರಕಾರ ಪ್ರತಿಯೊಬ್ಬ ನೌಕರನು ಸಮಯಕ್ಕೆ ಸರಿಯಯಾಗಿ ಕಛೇರಿಗೆ ಹಾಜರಾಗತಕ್ಕದೆಂಬ ನಿಯಮ ಇರುತ್ತದೆ. ಈ ನಿಯಮವು ಸರ್ಕಾರಿ ವೈದ್ಯಾಧಿಕಾರಿಗಳಿಗೂ ಸಹ ಅನ್ವಯವಾಗುತ್ತದೆ. ಅಲ್ಲದೆ ವೈದ್ಯಾಧಿಕಾರಿಗಳು ಕೇಂದ್ರ ಸ್ಥಾನದಲ್ಲಿ ಇರುವುದನ್ನು ಕಡ್ಡಾಯಗೊಳಿಸುವ ಬಗ್ಗೆ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರಿಗೆ ಆದೇಶ ನೀಡಲಾಗಿದೆ.

ಈ) ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ.

ರಾಜ್ಯದಲ್ಲಿ ನಕಲಿ ವೈದ್ಯರ ಹಾವಳಿ ತಡೆಗಟ್ಟುವುದು

2501 (3355) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ನಕಲಿ ವೈದ್ಯರ ಹಾವಳಿ ದಿನೇ ದಿನೇ ಹೆಚ್ಚಾಗುತ್ತ ಇರುವುದನ್ನು ಸರ್ಕಾರ ಮನಗಂಡಿದೆಯೇ?

ಆ) ನಕಲಿ ವೈದ್ಯರನ್ನು ನಿರ್ಬಂಧಿಸಲು ಸರ್ಕಾರ ಕ್ರಮಗಳನ್ನೇನಾದರೂ ರೂಪಿಸಿದೆಯೇ?

ಇ) ಹಾಗಿದ್ದಲ್ಲಿ ಅದರ ವಿವರಗಳೇನು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಹೌದು

ಆ) ಹೌದು

ಇ) ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯಕೀಯ ವೃತ್ತಿದಾರರ ಅಧಿನಿಯಮ 1961ರ ಕಲಮು 34ರ ಪ್ರಕಾರ ವೈದ್ಯ ಪದ್ಧತಿಯ ವೈದ್ಯಕೀಯ ನೋಂದಣಿ ಹೊಂದದ ಯಾವುದೇ ವ್ಯಕ್ತಿಯು ವೈದ್ಯಕೀಯ ವೃತ್ತಿ ನಡೆಸುವುದನ್ನು ಅಪರಾಧ ಎಂಬುದಾಗಿ ಪರಿಗಣಿಸಿದೆ. ಇಂತಹ ಅಪರಾಧವನ್ನು ಎಸಗುವ ನಕಲಿ ವೈದ್ಯರುಗಳ ವಿರುದ್ಧ ಕಾನೂನು ಕ್ರಮ ಜರುಗಿಸಲು ಮೇಲ್ಕಂಡ ಅಧಿನಿಯಮದ ಕಲಮು 40(2) ಪ್ರಕಾರ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ಮಂಡಳಿಯಲ್ಲಿ ರಿಜಿಸ್ಟ್ರಾರ್‌ರವರಿಗೆ ಅಧಿಕಾರವನ್ನು ಸರ್ಕಾರವು ನೀಡಿದೆ. ಆದರಂತೆ ರಿಜಿಸ್ಟ್ರಾರ್‌ರವರು ನೋಂದಣಿ ಮಾಡದೇ ಇರುವ ನಕಲಿ ವೈದ್ಯರ ಮೇಲೆ ಕ್ರಮ ಜರುಗಿಸಲು ಅಧಿಕಾರವುಳ್ಳವರಾಗಿರುತ್ತಾರೆ. ಈ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಶಸ್ತ್ರಚಿಕಿತ್ಸಕರು, ತಾಲ್ಲೂಕು ಮಟ್ಟದ ವೈದ್ಯಾಧಿಕಾರಿಗಳು, ಹಾಗೂ ವಿಭಾಗೀಯ ಜಂಟಿ ನಿರ್ದೇಶಕರಿಗೆ ಅವರು ವ್ಯಾಪ್ತಿಯಲ್ಲಿ ಬರುವ ನಕಲಿ ವೈದ್ಯ ವೃತ್ತಿ ನಡೆಸುತ್ತಿರುವವರ ವಿರುದ್ಧ ದೂರು ಬಂದಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ತಿಳಿಸುವಂತೆ ಸೂಚನೆ ನೀಡಲಾಗಿದೆ.

ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಕಟ್ಟಡ ದುರಸ್ತಿ

2502 (3356) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಕೊಠಡಿಗಳ ಅವಶ್ಯಕತೆಯನ್ನು ಸರ್ಕಾರ ಮನಗಂಡಿದೆಯೇ;

ಆ) ಹಾಗೆಯೇ ಈ ಶಾಲೆಗಳ ದುರಸ್ತಿಗೆ ಆದ್ಯತೆ ನೀಡಬೇಕಾಗಿರುವುದನ್ನು ಸರ್ಕಾರವು ಅರಿತಿದೆಯೇ;

ಇ) ಹಾಗಿದ್ದಲ್ಲಿ ಈ ಎರಡೂ ಕಾರ್ಯ ಯೋಜನೆಗಳಿಗೆ ಸರ್ಕಾರವು ವಿಶೇಷವಾಗಿ ಆದ್ಯತೆಯ ಮೇರೆಗೆ ಪೂರೈಸಲು ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು)

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಮನಗಂಡಿದೆ.

ಆ) ಅರಿತಿದೆ.

ಇ) ರಾಜ್ಯದ ಆರ್ಥಿಕ ಸೌಲಭ್ಯ ಆದರಿಸಿ ಹಂತ ಹಂತವಾಗಿ ಈ ಎರಡೂ ಕಾರ್ಯ ಯೋಜನೆಗಳಿಗೆ ಸರ್ಕಾರವು ವಿಶೇಷ ಆದ್ಯತೆ ನೀಡಲಾಗುತ್ತಿದೆ.

ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಟ್ರಾಮಾ ಸೆಂಟರ್ ತೆರೆಯುವ ಬಗ್ಗೆ

2503(3357) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಹೆದ್ದಾರಿಗಳಲ್ಲಿನ ಆಸ್ಪತ್ರೆಗಳಲ್ಲಿ "ಟ್ರಾಮಾ ಸೆಂಟರ್" ತೆರೆಯಲು ಉದ್ದೇಶಿಸಲಾಗಿದೆಯೇ?

ಆ) ಬೆಂಗಳೂರು - ಮೈಸೂರು ಹೆದ್ದಾರಿಯಲ್ಲಿನ ಜಿಲ್ಲಾ ಆಸ್ಪತ್ರೆ ಮಂಡ್ಯದಲ್ಲಿ ತುರ್ತಾಗಿ "ಟ್ರಾಮಾ ಸೆಂಟರ್" ತೆರೆಯುವ ಅವಶ್ಯಕತೆಯನ್ನು ಸರ್ಕಾರ ಮನಗಂಡಿದೆಯೇ?

ಇ) ಜಿಲ್ಲಾ ಆಸ್ಪತ್ರೆ ಮಂಡ್ಯದಲ್ಲಿ ತುರ್ತಾಗಿ "ಟ್ರಾಮಾ ಸೆಂಟರ್" ತೆರೆಯಲು ಈವರೆವಿಗೆ ಕೈಗೊಂಡಿರುವ ಕ್ರಮಗಳೇನು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಹೌದು. ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ಧಿ ಯೋಜನೆಯಡಿ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಬರುವ ಒಟ್ಟು 44 ತುರ್ತು ಚಿಕಿತ್ಸಾ ಘಟಕ (ಟ್ರಾಮಾ ಸೆಂಟರ್) ತೆರೆಯಲು ಉದ್ದೇಶಿಸಲಾಗಿದ್ದು, ಅದು ಆಸ್ಪತ್ರೆ ವಿಸ್ತರಣಾ ಕಾಮಗಾರಿಯ ಒಂದು ಭಾಗವಾಗಿದೆ.

ಆ) ಹೌದು

ಇ) ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಟ್ರಾಮಾ ಸೆಂಟರ್ ತೆರೆಯಲು ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಿ ಜಿಲ್ಲಾ ಸರ್ಜನ್‌ಗೆ ಹಸ್ತಾಂತರಿಸಲಾಗಿದೆ.

ಸೇಡಂ ಕ್ಷೇತ್ರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಗಳ ಹಾಗೂ ಸಿಬ್ಬಂದಿಯ ಕೊರತೆ.

2504 (2984) ಶ್ರೀ ಬಸವರೆಡ್ಡಿ ಮೊತಕಪಲ್ಲಿ (ಸೇಡಂ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾಗೂ ಘಟಕಗಳಲ್ಲಿ ವೈದ್ಯಾಧಿಕಾರಿಗಳ ಹಾಗೂ ಇತರ ಸಿಬ್ಬಂದಿ ವರ್ಗದವರು ಇಲ್ಲದೇ ನಾಗರೀಕರಿಗೆ ಚಿಕಿತ್ಸೆಗಾಗಿ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಗ್ರಾಮಗಳು ಸೇರಿ ಸಂಖ್ಯೆ ಎಷ್ಟು; ಇವುಗಳಲ್ಲಿರುವ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗಗವರು ಯಾವ ಯಾವ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಾಗೂ ಹುದ್ದೆಗಳು ಖಾಲಿ ಇರುವ ಕೇಂದ್ರಗಳು ಯಾವುವು?

ಇ) ಈ ಕ್ಷೇತ್ರದವರು ಆರೋಗ್ಯ ಚಿಕಿತ್ಸೆಗಾಗಿ ಪರದಾಡುತ್ತಿರುವವರನ್ನು ತಪ್ಪಿಸಲು ಎಲ್ಲಾ ಹುದ್ದೆಗಳನ್ನು ತುಂಬಿ ಎಂದಿನಿಂದ ಅನುಕೂಲ ಮಾಡಿಕೊಡಲಾಗುವುದು?

ಶ್ರೀ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಆರೋಗ್ಯ ಕೇಂದ್ರಗಳಿಗೆ 12 ವೈದ್ಯರ ಹುದ್ದೆಗಳು ಮಂಜೂರಾಗಿದ್ದು 10 ಜನ ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ. 2 ಹುದ್ದೆಗಳು ಖಾಲಿ ಇವೆ. ಇದರಿಂದ ನಾಗರೀಕರಿಗೆ ಚಿಕಿತ್ಸೆಗೆ ಅನಾನುಕೂಲವಾಗುವ ಸಂಭವವಿರುವುದಿಲ್ಲ.

ಆ) ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಗ್ರಾಮಗಳು ಸೇರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು 9 ಮತ್ತು ಪ್ರಾಥಮಿಕ ಆರೋಗ್ಯ ಘಟಕ ಒಂದು ಇವೆ. 8 ಕೇಂದ್ರಗಳಲ್ಲಿ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. ಒಂದು ಕೇಂದ್ರ ಮತ್ತು ಒಂದು ಘಟಕದಲ್ಲಿ ಹುದ್ದೆ ಖಾಲಿ ಇವೆ.

ಇ) ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ವೈದ್ಯೇತರ ಕೆಲವು ಹುದ್ದೆಗಳಿಗೆ ನೇಮಕಾತಿ ಮಾಡಲು ವಿಶೇಷ ನಿಯಮಾವಳಿ ರಚಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಿಬ್ಬಂದಿಯ ಕೊರತೆ

2505(2985) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳು, ಸಿಬ್ಬಂದಿ ವರ್ಗದವರು ಇಲ್ಲದೆ ನಗರದ ಹಾಗೂ ಆ ಭಾಗದ ನಾಗರೀಕರಿಗೆ ಆರೋಗ್ಯ ಚಿಕಿತ್ಸೆಗಾಗಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿರುವ ಒಟ್ಟು ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು? ನಾಲ್ಕನೆ ವರ್ಗದ ಸಿಬ್ಬಂದಿ ಇಲ್ಲದಿರುವುದರಿಂದ ಆಸ್ಪತ್ರೆಯಲ್ಲಿ ಸ್ವಚ್ಛತೆ ಕಾಪಾಡಂತಹ ಅನಾನುಕೂಲವಾಗಿರುವುದು ನಿಜವಲ್ಲವೇ?

ಇ) ವೈದ್ಯಾಧಿಕಾರಿಗಳನ್ನು ಇತರೇ ಸಿಬ್ಬಂದಿ ವರ್ಗದವರನ್ನು ತುಂಬಿ ಈ ಆಸ್ಪತ್ರೆಯಲ್ಲಿ ಸ್ವಚ್ಛತೆಯನ್ನು ಕಾಪಾಡಿ ನಾಗರೀಕರಿಗೆ ಚಿಕಿತ್ಸೆಗಾಗಿ ಸುವ್ಯವಸ್ಥೆಯನ್ನು ಎಂದುನಿಂದ ಮಾಡಲಾಗುವುದು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಬಂದಿದೆ.

ಆ)	ಮಂಜೂರು	ಕಾರ್ಯನಿರತ	ಖಾಲಿ
ವೈದ್ಯರು	07	03	04
ಸಿಬ್ಬಂದಿ	31	07	24

ಹೌದು.

ಇ) ಖಾಲಿ ಇರುವ ವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಮತ್ತು 550 ವೈದ್ಯರ ನೇಮಕಾತಿ ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಕೆಲವು ವೈದ್ಯೇತರ ಹುದ್ದೆಗಳನ್ನು ತುಂಬಲು ವಿಶೇಷ ನೇಮಕಾತಿ ನಿಯಮಾವಳಿ ರಚಿಸಲು ಸರ್ಕಾರದ ಪರಿಶೀಲನೆಯಲ್ಲಿದೆ.

ಪಿರಿಯಾಪಟ್ಟಣ ಕ್ಷೇತ್ರದಲ್ಲಿ ವಿಶ್ವ ಬ್ಯಾಂಕ್ ಯೋಜನೆಯಡಿ ಕುಡಿಯುವ ನೀರಿನ ಸರಬರಾಜು ಯೋಜನೆಗಳು.

2508 (3009) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪಿರಿಯಾಪಟ್ಟಣ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕಣಗಾಲು ಗ್ರಾಮ ಹಾಗೂ ಕೆ.ಆರ್.ನಗರ ತಾಲ್ಲೂಕು, ಚುಂಚನಕಟ್ಟೆ ಹೋಬಳಿ ಹಳಿಯೂರು ಗ್ರಾಮದಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿ ನೀರಿನ ಸರಬರಾಜನ್ನು ಕಲ್ಪಿಸಲಾಗಿದೆಯೇ;

ಆ) ಹಾಗಿದ್ದಲ್ಲಿ ಇದು ಕಳಪೆ ಮಟ್ಟದ್ದಾಗಿದ್ದು, ಸದರಿ ಎರಡು ಗ್ರಾಮಗಳಿಗೂ ಸಮರ್ಪಕ ಕುಡಿಯುವ ನೀರಿನ ವಿತರಣೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಳಪೆ ಕಾಮಗಾರಿ ಹಾಗೂ ಅಸಮರ್ಪಕ ಸೌಲಭ್ಯ ಕೊರತೆಗೆ ಕಾರಣರಾರು ಅವರ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ.

ಈ) ವ್ಯವಸ್ಥಿತ ಕುಡಿಯುವ ನೀರಿನ ಸೌಕರ್ಯಕ್ಕಾಗಿ ಈ ಎರಡೂ ಗ್ರಾಮಕ್ಕೂ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಲಾಗಿದೆಯೇಯ (ವಿವರ ನೀಡುವುದು)

ಶ್ರೀ ಎಂ.ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :—

ಅ) ಹೌದು. ಕಣಗಾಲು ಮತ್ತು ಹಳಿಯೂರು ಗ್ರಾಮಗಳ ನೀರು ಸರಬರಾಜು ಯೋಜನೆಗಳು ಕಾರ್ಯಾಚರಣೆಯಲ್ಲಿರುತ್ತವೆ.

ಆ) ಕಾಮಗಾರಿಗಳು ಕಳಪೆಮಟ್ಟದ್ದಾಗಿರುತ್ತವೆಂಬುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೆ ಕಣಗಾಲು ಗ್ರಾಮಕ್ಕೆ ಯೋಜನೆಯಡಿಯಲ್ಲಿ ಕಲ್ಪಿಸಲಾದ ನೀರಿನ ಮೂಲಗಳು ಸಮರ್ಪಕವಾಗಿರುವುದಿಲ್ಲವೆಂದು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ನೀರಿನ ಗುಣಮಟ್ಟವನ್ನು ಮತ್ತೊಮ್ಮೆ ಮೈಸೂರಿನ ಎಸ್.ಜೆ.ಸಿ.ಇ. ಮತ್ತು ಎನ್.ಐ.ಇಗಳಲ್ಲಿ ಪರೀಕ್ಷೆಗೊಳಪಡಿಸಲಾಗಿದೆ ಮತ್ತು ಕುಡಿಯಲು ಯೋಗ್ಯವಾಗಿರುತ್ತದೆಂದು ಧೃಡಪಡಿಸಲಾಗಿದೆ. ಹಳಿಯೂರು ಗ್ರಾಮದಲ್ಲಿ ಯೋಜನೆಯನ್ನು ಎರಡು ಜಲಮೂಲಗಳೊಂದಿಗೆ ಕೈಗೊಳ್ಳಲಾಗಿದೆ. ಒಂದು ಹೊಸ ಜಲಮೂಲ ಮತ್ತೊಂದು ಹಾಲಿ ಇರುವ ಹೆಚ್ಚು ಇಳುವರಿ ಕೈಪಂಪಿನಿಂದ ಕೂಡಿದ ಕೊಳವೆಬಾವಿ ಯೋಜನೆಯನ್ನು ಹೊಸ ಜಲಮೂಲಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿ ಕಾರ್ಯಾರಂಭಗೊಳಿಸಲಾಗಿದೆ. ಇನ್ನೊಂದು ಹಾಲಿ ಇರುವ ಜಲ

ಮೂಲಕ್ಕೆ ಗ್ರಾಮಸ್ಥರು ವಿದ್ಯುತ್ ಸಂಪರ್ಕಕ್ಕೆ ಅವಕಾಶ ನೀಡಿರುವುದಿಲ್ಲ, ಮತ್ತು ಹೊಸ ಜಲಮೂಲಕ್ಕಾಗಿ ಒತ್ತಾಯಿಸುತ್ತಿದ್ದರು. ಗ್ರಾಮದಲ್ಲಿ ಮತ್ತೊಂದು ಕೊಳವೆಬಾವಿಯನ್ನು ಈಗ ಕೊರೆಯಲಾಗಿದೆ. ಹೊಸ ಕೊಳವೆಬಾವಿಗೆ ಹೊಸ ಕೈಪಂಪನ್ನು ಅಳವಡಿಸುವ ಬಗ್ಗೆ ಮತ್ತು ಯೋಜಿತ ಹೆಚ್ಚುವರಿ ಇಳುವರಿ ಕೈಪಂಪು ಇರುವ ಕೊಳವೆಬಾವಿಗೆ ಮೋಟಾರ್ ಅಳವಡಿಸುವುದಕ್ಕೆ ಗ್ರಾಮಸ್ಥರ ಮನವೊಲಿಸಲು ಪ್ರಯತ್ನಗಳನ್ನು ನಡೆಸಲಾಗುತ್ತಿದೆ.

ಇ) ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುತ್ತದೆಂಬುದಕ್ಕೆ ಯಾವುದೇ ವರದಿ ಇದುವರೆಗೂ ಬಂದಿರುವುದಿಲ್ಲ.

ಈ) ಯೋಜನೆಯಡಿ ಪರ್ಯಾಯ ವ್ಯವಸ್ಥೆಗೆ ಪ್ರಸ್ತಾಪ ಮಾಡಿರುವುದಿಲ್ಲ.

ಪಿರಿಯಾಪಟ್ಟಣ ತಾಲ್ಲೂಕಿನ ಗ್ರಾಮ ಪಂಚಾಯ್ತಿಯಲ್ಲಿ ಜಮಾಬಂದಿ ಕಾರ್ಯ ಪ್ರಗತಿ

2509 (3010) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ೨೦೦೦-೦೧ ಹಾಗೂ ೨೦೦೧-೦೨ನೇ ಸಾಲಿನಲ್ಲಿ ಪಿರಿಯಾಪಟ್ಟಣ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ೫ ಹೋಬಳಿಗಳಲ್ಲಿನ ಗ್ರಾಮ ಪಂಚಾಯ್ತಿಗಳಲ್ಲಿ ಜಮಾಬಂದಿ ಕೆಲಸವನ್ನು ಮಾಡಲಾಗಿದೆಯೇ;

ಆ. ಹಾಗಿದಲ್ಲಿ ತಪಾಸಣಾ ಸಮಯದಲ್ಲಿ ಹಣ ದುರುಪಯೋಗ ಪ್ರಕರಣವನ್ನು ಗುರುತಿಸಲಾಗಿದೆಯೇ?

ಇ. ಹಾಗಿದ್ದಲ್ಲಿ ಹಣ ದುರುಪಯೋಗಕ್ಕೆ ಕಾರಣರಾದವರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ? (ಹೋಬಳಿವಾರು ವಿವರವನ್ನು ಪಿರಿಯಾಪಟ್ಟಣ ತಾಲ್ಲೂಕಿಗೆ ಸಂಬಂಧಿಸಿದಂತೆ ವಿವರ ನೀಡುವುದು)

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :—

ಅ. ೨೦೦೦-೦೧ನೇ ಸಾಲಿನ ಜಮಾಬಂದಿಯನ್ನು ನಡೆಸಲಾಗಿದೆ.

೨೦೦೧-೦೨ನೇ ಸಾಲಿನ ಜಮಾಬಂದಿಯನ್ನು ಈ ಆರ್ಥಿಕ ವರ್ಷದಲ್ಲಿ ಮಾರ್ಗಸೂಚಿಯಂತೆ ನಡೆಸಲಾಗುವುದು.

ಆ. ಯಾವುದೇ ಹಣ ದುರುಪಯೋಗ ಪ್ರಕರಣ ಕಂಡು ಬರುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ರಾಜ್ಯದ ಪ್ರಾಥಮಿಕ ಶಾಲೆಗಳಿಗೆ ಸಂಗೀತ ಮತ್ತು ಚಿತ್ರಕಲಾ ಶಿಕ್ಷಕರ ನೇಮಕ

2510 (2945) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದ ಪ್ರಾಥಮಿಕ ಶಾಲೆಗಳಿಗಾಗಿ ಸಂಗಿತ ಮತ್ತು ಚಿತ್ರಕಲಾ ವಿಷಯಗಳ ಶಿಕ್ಷಕರು ಎಷ್ಟು ಶಾಲೆಗಳಿಗೆ ಇರುವರು ಹಾಗೂ ಇವರುಗಳ ಕಾರ್ಯವ್ಯಾಪ್ತಿ ಏನು; (ವಿವರ ನೀಡುವುದು)

2) ರಾಜ್ಯದ ಎಷ್ಟು ಪ್ರೌಢಶಾಲೆಗಳಿಗೆ ಚಿತ್ರಕಲಾ ಮತ್ತು ಸಂಗಿತ ವಿಷಯಗಳ ಬೋಧನೆಯ ಶಿಕ್ಷಕರು ಇರುವರೇ (ಮಾಹಿತಿ ನೀಡುವುದು)

3) ಪ್ರತಿಯೊಂದು ಪ್ರೌಢಶಾಲೆಗಳಿಗೆ ಸಂಗಿತ ಮತ್ತು ಚಿತ್ರಕಲೆ ವಿಷಯ ಕಡ್ಡಾಯವಾಗಿ ಅಭ್ಯಾಸ ಮಾಡಲು ಶಿಕ್ಷಕರ ಆವಶ್ಯಕತೆ ಇರುವುದನ್ನು ಸರಕಾರ ಗಮನಿಸಿದೆಯೆ;

4) ಈ ವರ್ಷದಲ್ಲಿ ಪ್ರೌಢಶಾಲೆಗಳ ಸಂಖ್ಯೆಗನುಗುಣವಾಗಿ ರಾಜ್ಯದ ಎಲ್ಲಾ ಬೇಡಿಕೆಯ ಹುದ್ದೆಗಳನ್ನು ತುಂಬಲಾಗುವುದೇ? ವಿವರ ನೀಡುವುದು.

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

1) ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ ಮಂಜೂರು ಆಗಿರುವ 228 ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ ಚಿತ್ರಕಲಾ ಶಿಕ್ಷಕರ ಹುದ್ದೆಗಳನ್ನು ತುಂಬಲಾಗಿದೆ.

2) ರಾಜ್ಯದ ಪ್ರಾಥಮಿಕ ಶಾಲೆಗಳಿಗಾಗಿ ಸಂಗೀತ ಶಿಕ್ಷಕರು 16 ಶಾಲೆಗಳಲ್ಲಿ ಮಾತ್ರ ಇರುವರು. ಶಾಲೆಗಳಲ್ಲಿ ಸಂಗೀತ ಶಿಕ್ಷಣ ನೀಡುವರು.

2) ಪ್ರೌಢಶಾಲೆಗಳಲ್ಲಿ 198 ಜನ ಚಿತ್ರಕಲಾ ಶಿಕ್ಷಕರು ಮತ್ತು 59 ಜನ ಸಂಗೀತ ಶಿಕ್ಷಕರು ಇರುತ್ತಾರೆ.

3) ಹೌದು, ಗಮನಿಸಿದೆ. ಐಚ್ಛಿಕ ಬೋಧನೆ ಅಗತ್ಯ ಎಂದು ಕಂಡು ವಿಭಾಗೀಯ ಮಟ್ಟದಲ್ಲಿ ಒಟ್ಟು 497 ಮತ್ತು 181 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಂಡಿದೆ.

4) ಹೌದು, ಖಾಲಿಯಿರುವ ಪ್ರೌಢಶಾಲಾ ಸಹ ಶಿಕ್ಷಕರ 2000 ಹುದ್ದೆಗಳನ್ನು ಹುದ್ದೆಯನ್ನು ಪ್ರೌಢಶಾಲಾ ವಿಶೇಷ ಶಿಕ್ಷಕರ 961 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗಿದೆ.

ರಾಜ್ಯದಲ್ಲಿ ಕನ್ನಡ ಮಾತೃಭಾಷೆ ಪ್ರಾಥಮಿಕ ಶಾಲೆಗಳಿಗೆ ಪ್ರೋತ್ಸಾಹ ನೀಡುವುದದು

2511(3361) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಆಡಳಿತ ಭಾಷೆ ಕನ್ನಡವಾಗಿರುವ ಕನ್ನಡ ಮಾತೃಭಾಷೆಯ ಪ್ರಾಥಮಿಕ ಶಾಲೆಗಳಿಗೆ ಸರ್ಕಾರ ಪ್ರೋತ್ಸಾಹಿಸಬೇಕಾಗಿರುವುದು ಸರ್ಕಾರದ ಆದ್ಯ ಕರ್ತವ್ಯವಲ್ಲವೇ?

ಆ) ಹಾಗಾದರೆ ಕನ್ನಡ ಪ್ರಾಥಮಿಕ ಶಾಲೆ ನಡೆಸುವ ಶಿಕ್ಷಣ ಸಂಸ್ಥೆಗಳು ನಿವೇಶನಗಳನ್ನು ಪಡೆದಿದ್ದರೆ ಶಾಲೆ ಕೊಠಡಿಗಳನ್ನು ಕಟ್ಟಿಸಲು ಸರ್ಕಾರವು ನೆರವು ನೀಡುವುದೇ?

ಇ) ಈ ಸೌಲಭ್ಯ ಕಲ್ಪಿಸುವುದರಿಂದ ಆಂಗ್ಲ ಮಾಧ್ಯಮ ಶಾಲೆಗಳಿಗೆ ಕಡಿವಾಣ ಹಾಕುವುದು ಸರ್ಕಾರದ ನೀತಿಯಾಗಬೇಕಲ್ಲವೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಹೌದು.

ಆ) ಖಾಸಗಿ ಸಂಸ್ಥೆಗಳ ಶಾಲಾ ಕಟ್ಟಡ ನಿರ್ಮಾಣ ಆಯಾ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.

ಇ) ಉದ್ಭವಿಸುವುದಿಲ್ಲ.

ಧಾರವಾಡ ನಗರದಲ್ಲಿ ಬಿ.ಇ.ಓ. ಅಧಿಕಾರಿ ವಲಯ ಸ್ಥಾಪನೆ

2512(3363) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಧಾರವಾಡ ನಗರದಲ್ಲಿ ಮೂರು ಬಿ.ಇ.ಓ. ಅಧಿಕಾರಿಗಳಿರುವುದು ನಿಜವೇ? ಹಾಗಾದರೆ ಒಬ್ಬರ ಆಡಳಿತದಲ್ಲಿ ಬರುವಂತೆ ಧಾರವಾಡ ಹುಬ್ಬಳಿಗೆ ಒಬ್ಬ ಬಿ.ಇ.ಓ. ಅಧಿಕಾರಿಯ ವಲಯ ಸ್ಥಾಪನೆಗೆ ಇರುವ ತೊಂದರೆ ಏನು;

ಆ. ಧಾರವಾಡ ನಗರ ಮತಕ್ಷೇತ್ರದಲ್ಲಿ ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಕೊಠಡಿಗಳು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ

ಬಂದಿದೆಯೆ? ಕೊಠಡಿಗಳ ಕೊರತೆಯು ಇರುವುದರಿಂದ ಪಾಳಿ ಪದ್ಧತಿ ಇರುವುದು ನಿಜವೇ? (ವಿವರ ನೀಡುವುದು)

ಇ. ನಗರ ಬೆಳದಂತೆ ಅನೇಕ ಹೊಸ ಬಡಾವಣೆಗೆ ಹೊಸ ಪ್ರಾಥಮಿಕ ಶಾಲೆ ತೆರೆಯಲು ಏನು ಯೋಜನೆ ಹಾಕಿಕೊಳ್ಳಲಾಗಿದೆ? (ವಿವರ ನೀಡುವುದು)

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಹೌದು. ಈ ವಲಯಗಳಲ್ಲಿ ಇರುವ ಶಾಲೆಗಳು ಹಾಗೂ ಶಾಲಾ ಮಕ್ಕಳ ಸಂಖ್ಯೆ ಹಾಗೂ ವಿಸ್ತೀರ್ಣವನ್ನು ಆಧರಿಸಿ ಶೈಕ್ಷಣಿಕ ಮತ್ತು ಆಡಳಿತ ಹಿತದೃಷ್ಟಿಯಿಂದ ವಲಯಗಳನ್ನು ಅಗತ್ಯಕ್ಕೆ ತಕ್ಕಂತೆ ರಚಿಸಲಾಗಿದೆ. ಒಂದೇ ವಲಯವಾಗಿ ರಚಿಸಿದ್ದಲ್ಲಿ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಅಡಚಣೆಗಳು ಉಂಟಾಗುತ್ತವೆ.

ಆ. ಬಂದಿದೆ. ಕೊಠಡಿಗಳ ಕೊರತೆ ಇರುವುದರಿಂದ ಹುಬ್ಬಳ್ಳಿಯಲ್ಲಿ 23 ಶಾಲೆಗಳು, ಧಾರವಾಡದಲ್ಲಿ 12 ಶಾಲೆಗಳು ಪಾಳಿ ಪದ್ಧತಿಯಲ್ಲಿ ನಡೆಯುತ್ತಿವೆ.

ಇ. ನಗರ ಬೆಳೆದಂತೆ ಅನೇಕ ಹೊಸ ಬಡಾವಣೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಹುಬ್ಬಳ್ಳಿ-ಧಾರವಾಡ ನಗರ ವಿಭಾಗದಲ್ಲಿ 12 ಹೊಸ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲಾಗಿದೆ. ಅಗತ್ಯವಿರುವ ಕಡೆ ಶಾಲೆಗಳನ್ನು ಪ್ರಾರಂಭಿಸಲಾಗುವುದು.

ಧಾರವಾಡದಲ್ಲಿ ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸುವುದು

2513 (3364) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಧಾರವಾಡ ನಗರದಲ್ಲಿ ಸರ್ಕಾರಿ ಪ್ರೌಢಶಾಲೆ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಧಾರವಾಡ ನಗರದಲ್ಲಿ ಎಲ್ಲಾ ಖಾಸಗಿ ಪ್ರೌಢಶಾಲೆಗಳು ಇರುವುದರಿಂದ ಡೊನೇಷನ್ ಹಾವಳಿ ಹೆಚ್ಚಿದ್ದು ಬಡ ಮಕ್ಕಳು ತೊಂದರೆ ಪಡುತ್ತಿರುವುದು ನಿಜವಲ್ಲವೇ?

ಇ) ಕಳೆದ ಸುಮಾರು ವರ್ಷಗಳಿಂದ ಪ್ರೌಢಶಾಲೆಗಳನ್ನು ಪ್ರಾರಂಭಿಸಿಲ್ಲದಿರುವುದು ಸರ್ಕಾರವು ಗಮನಿಸಿದೆಯೇ?

ಈ) ಹಾಗಿದ್ದಲ್ಲಿ ಈ ಕ್ಷೇತ್ರಕ್ಕೆ ಸರ್ಕಾರಿ ಪ್ರೌಢಶಾಲೆಗಳನ್ನು ತೆರೆಯಲು ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಹೌದು

ಆ) ಇಲ್ಲ. ಈ ಬಗ್ಗೆ ಯಾವುದೇ ದೂರು ಬಂದಿಲ್ಲ.

ಇ) ಹೌದು

ಈ) ಪರಿಶೀಲಿಸಲಾಗುವುದು.

ಬಸವನಬಾಗೇವಾಡಿ ವ್ಯಾಪ್ತಿಯಲ್ಲಿ ಬರುವ ಪುನರ್ವಸತಿ ಕೇಂದ್ರಗಳಲ್ಲಿ ಶಾಲೆಗಳ ಪ್ರಾರಂಭ

2514 (3375) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ (ಬಸವನ ಬಾಗೇವಾಡಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿಜಾಪುರ ಜಿಲ್ಲೆ ಬಸವನಬಾಗೇವಾಡಿ ವ್ಯಾಪ್ತಿಯಲ್ಲಿ ಬರುವ ಕೃಷ್ಣಾ ಮೇಲ್ದಂಡೆ ಯೋಜನೆಯ ಹಿನ್ನೀರಿನಲ್ಲಿ ಮುಳುಗಡೆಯಾಗುವ ಪ್ರದೇಶಗಳ ಪುನರ್‌ವಸತಿ ಕೇಂದ್ರಗಳಿಗೆ ಸರ್ಕಾರ ಹೊಸದಾಗಿ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ ಹಾಗೂ ಶಿಕ್ಷಕರ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರ ಮಂಜೂರಾತಿ ನೀಡಿದೆಯೇ?

ಆ) ಮಂಜೂರಾತಿ ನೀಡಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು? (ವಿವರ ನೀಡುವುದು)

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಹೌದು.

ಪ್ರಾಥಮಿಕ ಶಾಲೆ	-	1
ಪ್ರೌಢ ಶಾಲೆಗಳು	-	2

ಆ) 2001-2003 ನೇ ಶೈಕ್ಷಣಿಕ ವರ್ಷದಿಂದ

ಬಿಜಾಪುರ ಜಿಲ್ಲೆಯಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆಗಳ ಭರ್ತಿ

2515 (3376) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ (ಬಸವನ ಬಾಗೇವಾಡಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಖಾಲಿಯಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ಸಂಖ್ಯೆ?

ಆ) ಇದರಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ? (ವಿವರ ನೀಡುವುದು)

ಇ) ಖಾಲಿ ಇದ್ದಲ್ಲಿ ಇವುಗಳ ಭರ್ತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಸಂಖ್ಯೆ ೧೫೫೦೦ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಇರುವ ಶಿಕ್ಷಕರ ಸಂಖ್ಯೆ ೨೦೦೦.

ಆ) ಬಿಜಾಪುರ ಜಿಲ್ಲೆಯಲ್ಲಿ ಖಾಲಿ ಇರುವ ಶಿಕ್ಷಕರ ಸಂಖ್ಯೆ :

೧) ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ೫೮೭

೨) ಸರ್ಕಾರಿ ಪ್ರೌಢ ಶಾಲೆ ೩೩

ಇ) ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧದಲ್ಲಿ ಅಂತಿಮ ಹಂತದಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿ ತಿದ್ದುಪಡಿ ಆದೇಶ ಹೊರಬಂದ ನಂತರ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗುವುದು. ತುಂಬಲು ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ.

ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಶಾಲಾ ಕೊಠಡಿಗಳ ನಿರ್ಮಾಣ

2516(3377) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ (ಬಸವನ ಬಾಗೇವಾಡಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ವಿಜಾಪುರ ಜಿಲ್ಲೆ ಬಸವನ ಬಾಗೇವಾಡಿ ಮತಕ್ಷೇತ್ರ ವ್ಯಾಪ್ತಿಯಲ್ಲಿ ಇರುವ ಶಾಲೆಗಳಿಗೆ ಕೊರತೆ ಇರುವ ಶಾಲಾ ಕೊಠಡಿಗಳ ಸಂಖ್ಯೆ ಎಷ್ಟು ;

ಆ. ಸದರಿ ಶಾಲೆಗಳ ನಿರ್ಮಾಣಕ್ಕೆ ಸರ್ಕಾರ ಹಣ ಒದಗಿಸಿದೆಯೆ; ಹಾಗಿದ್ದಲ್ಲಿ ನಿರ್ಮಾಣದ ವೆಚ್ಚವೆಷ್ಟು ;

ಇ. ಎಲ್ಲೆಲ್ಲಿ ಶಾಲಾ ಕೊಠಡಿಗಳನ್ನು ನಿರ್ಮಿಸಬೇಕಾಗಿದೆ; (ವಿವರ ನೀಡುವುದು)

ಈ) ಈ ನಿರ್ಮಾಣ ಕಾಮಗಾರಿಯನ್ನು ಎಂದಿನಿಂದ ಕೈಗೊಳ್ಳಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಒಟ್ಟು 230 ಶಾಲಾ ಕೊಠಡಿಗಳು (208 ಪ್ರಾಥಮಿಕ ಶಾಲೆಗಳಿಗೆ, 22 ಪ್ರೌಢ ಶಾಲೆಗಳಿಗೆ)

ಆ. ಹೌದು ಒದಗಿಸಿದೆ. ಒಟ್ಟು ರೂ.25.50 ಲಕ್ಷಗಳು.

ಇ. ಅನುಬಂಧದಲ್ಲಿ ನೀಡಲಾಗಿದೆ.

ಈ. ಆಯವ್ಯಯದ ಲಭ್ಯತೆಯನ್ನಾಧರಿಸಿ 2001-2002ನೇ ಸಾಲಿನಲ್ಲಿ ಕಾಮಗಾರಿಯನ್ನು ಕೈಗೊತ್ತಿಕೊಳ್ಳಲಾಗುವುದು.

ಅನುಬಂಧ - 01

ಕ್ರ. ಸಂ.	ಶಾಲೆಯ ಹೆಸರು		ಬೇಕಾಗುವ ಕೋಣೆಗಳು	ಷರಾ
೧	ಕೆ.ಬಿ.ಎಂ.ಪಿ.ಎಸ್.	ಬ. ಬಾಗೇವಾಡಿ	೦೫	
೨	”	ಇಂಗಳೇಶ್ವರ	೦೨	
೩	”	ಕೋಲ್ಹಾರ್	೦೫	
೪	”	ಹುಸಗೂಳಿ	೦೫	
೫	”	ಉಕ್ಕಲ್	೦೫	
೬	ಕೆ.ಬಿ.ಎಸ್	ಅರಳಚಂಡಿ	೦೨	
೭	”	ಬಳ್ಳಾಪೂರ (ಇಂಗಳೇಶ್ವರ)	೦೨	
೮	”	ಬಸವನಹಟ್ಟಿ	೦೨	
೯	”	ಬ. ಬಾಗೇವಾಡಿ ಎಲ್.ಟಿ.೩	೦೨	
೧೦	”	ಬ. ಬಾಗೇವಾಡಿ ಎಲ್.ಟಿ.೫	೦೨	
೧೧	”	ಸಕಳಾಳ ತಾಂಡಾ ಎಲ್.ಟಿ.೪	೦೨	
೧೨	”	ಬಾಗಾನಗರ	೦೧	
೧೩	”	ಬೊಮ್ಮನಹಳ್ಳಿ	೦೧	
೧೪	”	ಹಳ್ಳನಗಣ್ಣೂರ	೦೧	
೧೫	”	ಹತ್ತಿರಕಿಹಾಳ	೦೧	

1	2		3	4
೧೬	ಕೆ.ಬಿ.ಎಸ್.	ಹಿರೇಅಸಂಗಿ	೦೧	
೧೭	”	ಜೈನಾಪುರ	೦೧	
೧೮	”	ಕಲಗುರ್ತಿ	೦೧	
೧೯	”	ಕಲಗುರ್ತಿಹಟ್ಟಿ	೦೨	
೨೦	”	ಕೊಡಗಿ ಇಲಟಿ	೦೩	
೨೧	”	ಕುನಗೂಳ ಕನಕ ನಗರ	೦೨	
೨೨	”	ಮುಳವಾಡ	೦೩	
೨೩	”	ರೋಣಿಹಾಳ	೦೨	
೨೪	”	ತದಲಗಿ	೦೨	
೨೫	”	ಟಕ್ಕಳಕಿ	೦೧	
೨೬	”	ತಲಗಿ ಆರ್.ಎಸ್.	೦೧	
೨೭	”	ಯರನಾಳ	೦೧	
೨೮	”	ಯಂಬತ್ನಾಳ	೦೪	
೨೯	ಕೆ.ಜಿ.ಎಲ್.ಪಿ.ಎಸ್.	ಬ.ಬಾಗೇವಾಡಿ	೦೫	
೩೦	”	ಹತ್ತರಕಿಹಾಳ	೦೩	
೩೧	ಕೆ.ಜಿ.ಎಲ್.ಪಿ.ಎಸ್.	ಕೊಡಗಿ	೦೨	
೩೨	ಕೆ.ಜಿ.ಹೆಚ್.ಪಿ.ಎಸ್.	ಕೋಲ್ಹಾರ	೦೩	
೩೩	ಕೆ.ಜಿ.ಎಸ್.	ಮನಬಿನಾಳ	೦೨	
೩೪	ಕೆ.ಜಿ.ಎಸ್.	ಮುತ್ತಗಿ	೦೨	
೩೫	”	ರೋಣಿಹಾಳ	೦೩	
೩೬	”	ತಲಗಿ	೦೨	
೩೭	ಕೆ.ಜಿ.ಎಲ್.ಪಿ.ಎಸ್.	ಬೂತಪ್ಪನ ಕೆರೆ	೦೨	
೩೮	ಕೆ.ಜಿ.ಎಸ್.	ಯರನಾಳ	೦೧	
೩೯	ಯು.ಬಿ.ಎಚ್.ಪಿ.ಎಸ್.	ಬ. ಬಾಗೇವಾಡಿ	೦೨	
೪೦	”	ಗುರುಜಿಕಟ್ಟಿ ಬ. ಬಾಗೇವಾಡಿ	೦೪	

1	2		3	4
೪೧	ಯು.ಬಿ.ಎಚ್.ಪಿ.ಎಸ್.	ಇಂಗಳೇಶ್ವರ	೦೩	
೪೨	”	ಕೂಡಗಿ	೦೩	
೪೩	”	ಕೋಲ್ಹಾರ	೦೩	
೪೪	”	ಮನಗೂಳಿ	೦೨	
೪೫	”	ಮಸಬಿನಾಳ	೦೧	
೪೬	”	ಮುಳ್ವಾಡ	೦೨	
೪೭	”	ಟಕ್ಕಳಕಿ	೦೨	
೪೮	”	ಉರ್ಕಲ್	೦೧	
೪೯	ಯು.ಬಿ.ಎಚ್.ಪಿ.ಎಸ್.	ಬ.ಬಾಗೇವಾಡಿ	೦೧	
೫೦	ಕೆ.ಜಿ.ಎಚ್.ಪಿ.ಎಸ್.	ಲಕ್ಷ್ಮಿನಗರ, ಬ.ಬಾಗೇವಾಡಿ	೦೨	
೫೧	” ಕರೂರ ನಗರ	ಬ.ಬಾಗೇವಾಡಿ	೦೨	
೫೨	”	ಕಾಡೇದವರ ತೋಟ	೦೧	
೫೩	”	ಹಳೇರೂಳ್ಳಿ ಎಲ್.ಟಿ.	೦೨	
೫೪	”	ಇಂಗಳೇಶ್ವರ ಹೊರಪೇಟೆ	೦೩	
೫೫	”	ಕೊಲ್ಹಾರ ತೋಟ	೦೨	
೫೬	”	ಮನಗೂಳಿ ಭೀಮನಗರ	೦೧	
೫೭	”	ಮುಳವಾಡ ಆರ್.ಎಸ್.	೦೧	
೫೮	”	ರೋಣಿಹಾಳ ಇಎಲ್.ಟಿ	೦೧	
೫೯	”	ಕೂಡಗಿ ಮಹಂತ ವನ	೦೨	
೬೦	”	ಮನಗೂಳಿ ತೋಟ	೦೨	
೬೧	”	ಮನಬಿನಾಳ (ಹಳೇಊರು)	೦೨	
೬೨	”	ಮುಳವಾಡ ಅಂಬೇಡ್ಕರ್ ಕಾಲನಿ	೦೨	
೬೩	ಕೆ.ಜಿ.ಎಲ್.ಪಿ.ಎಸ್.	ಮಸೂತಿ	೦೨	
೬೪	”	ತಳೇವಾಡ	೦೨	

1	2			3	4
೬೫	ಯು.ಬಿ.ಎಚ್.ಪಿ.ಎಸ್.		ಬಸವ ನಗರ ಬ.ಬಾಗೇವಾಡಿ	೦೨	
೬೬	”		ನಂದ್ಯಾಳ ಪಿ.ಯು	೦೧	
೬೭	”		ತಲಗಿ ಆರ್.ಎಸ್.	೦೧	
೬೮	ಕೆ.ಬಿ.ಎಲ್.ಪಿ.ಎಸ್.		ಮುಳ್ವಳ	೦೧	
೬೯	”		ನೇಗಿನಾಳ	೦೧	
೭೦	ಯು.ಬಿ.ಎಸ್. ಮುತ್ತಿಗಿ			೦೧	
				೧೪೫	
					ಅವಶ್ಯಕತೆ ಇರುವ ಕೊಠಡಿಗಳ ಸಂಖ್ಯೆ
೭೧	ಬಿಜಾಪುರ	೧.	ಕೆ.ಬಿ.ಎಸ್. ಮಮದಾಪೂರ		೦೩
೭೨		೨.	ಕೆ.ಬಿ.ಎಸ್. ಕಾಖಂಡಕಿ		೦೪
೭೩		೩.	ಕೆ.ಬಿ.ಎಸ್. ಬೆಳ್ಳುಬಿ		೦೩
೭೪		೪.	ಕೆ.ಬಿ.ಎಸ್. ಕುಪ್ಪಕಡ್ಡಿ		೦೩
೭೫		೫.	ಕೆ.ಬಿ.ಎಸ್. ಹೊಳೆ ಹಂಗರಗಿ		೦೩
೭೬		೬.	ಕೆ.ಬಿ.ಎಸ್. ಉಪ್ಪಲದಿನ್ನಿ		೦೨
೭೭		೭.	ಕೆ.ಬಿ.ಎಸ್. ದೇವರಗೆಣ್ಣೂರ		೦೨
೭೮		೮.	ಕೆ.ಬಿ.ಎಸ್. ಕಾರದೋಳ		೦೩
೭೯		೯.	ಕೆ.ಬಿ.ಎಸ್. ಗುಣದಾಳ		೦೨
೮೦		೧೦.	ಕೆ.ಬಿ.ಎಸ್. ಚಿಕ್ಕಗಲಗಲಿ		೦೩
೮೧		೧೧.	ಕೆ.ಬಿ.ಎಸ್. ಕೃಷ್ಣನಗರ (ಸಕ್ಕರೆಕಾರಖಾನೆ)		೦೩
೮೨		೧೨.	ಕೆ.ಬಿ.ಎಸ್. ಹೊನಗನಹಳ್ಳಿ		೦೩
೮೩		೧೩.	ಕೆ.ಬಿ.ಎಸ್. ಸರನಹಳ್ಳಿ		೦೩
೮೪		೧೪.	ಕೆ.ಬಿ.ಎಸ್. ಹೊಸಗನಹಳ್ಳಿ		೦೨
೮೫		೧೫.	ಕೆ.ಬಿ.ಎಸ್. ತೊನಶ್ಯಾಳ		೦೨
೮೬		೧೬.	ಕೆ.ಬಿ.ಎಸ್. ಕಂಬಾಗಿ		೦೨
೮೭		೧೭.	ಕೆ.ಬಿ.ಎಸ್. ಬೋಳಚಿಕ್ಕಲಗ		೦೨

1	2		3	4
೮೮	೧೮.	ಕೆ.ಬಿ.ಎಸ್. ಕಿಂಗಲಗುತ್ತಿ	೦.೨	
೮೯	೧೯.	ಕೆ.ಬಿ.ಎಸ್. ಹಣಮಸಾಗರ	೦.೨	
೯೦	೨೦.	ಕೆ.ಬಿ.ಎಸ್. ಸಿರಬೂರ	೦.೨	
೯೧	೨೧.	ಕೆ.ಬಿ.ಎಸ್. ಬಬಲಾದ	೦.೨	
೯೨	೨೨.	ಕೆ.ಬಿ.ಎಸ್. ಜಂಬಗಿ	೦.೨	
೯೩	೨೩.	ಕೆ.ಬಿ.ಎಸ್. ಕಿಲಾರಹಟ್ಟಿ	೦.೨	
೯೪	೨೪.	ಕೆ.ಬಿ.ಎಸ್. ನಂದ್ಯಾಳತೊಟ	೦.೨	
೯೫	೨೫.	ಕೆ.ಬಿ.ಎಸ್. ಕೊಡಬಾಗಿ	೦.೨	
೯೬	೨೬.	ಯು.ಬಿ.ಎಸ್. ಮಮದಾಪುರ	೦.೨	
	ಒಟ್ಟು		೬೩	

ಬಸವನ ಬಾಗೇವಾಡಿ ಮತಕ್ಷೇತ್ರದಲ್ಲಿ ಆರೋಗ್ಯ ಇಲಾಖೆಯಲ್ಲಿನ ವಿವಿಧ ದರ್ಜೆಯ ಹುದ್ದೆಗಳ ಭರ್ತಿ

2517(3379) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ (ಬಸವನ ಬಾಗೇವಾಡಿ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಸವನ ಬಾಗೇವಾಡಿ ಮತಕ್ಷೇತ್ರದಲ್ಲಿ ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳು ಯಾವುವು; (ವೈದ್ಯ ಮತ್ತು ವೈದ್ಯೇತರವಾಗಿ ಪ್ರತ್ಯೇಕ ವಿವರ ನೀಡುವುದು)

ಆ. ಸದರಿ ಹುದ್ದೆಗಳ ಭರ್ತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ವಿಜಾಪುರ ತಾಲ್ಲೂಕು ಕುಂಬಾರಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಲು ಮಂಜೂರಾತಿ ನೀಡಿದೆಯೇ? ನೀಡಿದ್ದಲ್ಲಿ ಎಂದಿನಿಂದ ಪ್ರಾರಂಭ ಮಾಡಲಾಗುವುದು?

ಶ್ರೀ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ)	ಮಂಜೂರು	ಕಾರ್ಯನಿರತ	ಖಾಲಿ
ವೈದ್ಯರು	16	12	4
ವೈದ್ಯೇತರ	195	137	58
ಒಟ್ಟು	211	149	62

ಆ) ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಹಾಗೂ 550 ವೈದ್ಯರ ನೇರ ನೇಮಕಾತಿ ಕಾರ್ಯ ಪ್ರಗತಿಯಲ್ಲಿದೆ. ಕೆಲವು ವೈದ್ಯೇತರ ಸಿಬ್ಬಂದಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ವಿಶೇಷ ನೇಮಕಾತಿ ನಿಯಮಾವಳಿ ರಚನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೌದು. ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದ್ದು ಹುದ್ದೆಗಳ ಮಂಜೂರಾತಿ ಆದ ನಂತರ ಪ್ರಾರಂಭ ಮಾಡಲಾಗುವುದು.

ನಾಗಮಂಗಲ ತಾಲ್ಲೂಕಿನಲ್ಲಿ ಪ್ರೌಢಶಾಲಾ ಕಟ್ಟಡದ ಕಾಮಗಾರಿ

2518(3133) ಶ್ರೀ ಚೆಲುವರಾಯ ಸ್ವಾಮಿ ಎನ್. (ನಾಗಮಂಗಲ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ನಾಗಮಂಗಲ ತಾಲ್ಲೂಕಿನಲ್ಲಿ ಹಲವು ಪ್ರೌಢಶಾಲಾ ಕಟ್ಟಡ ಕಾಮಗಾರಿಗಳು ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಬಂದಿದ್ದರೆ ಇದನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

1. ಒಂದು ಸರ್ಕಾರಿ ಪ್ರೌಢಶಾಲೆ ಅಪೂರ್ಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

2. ಸದರಿ ಸರ್ಕಾರಿ ಪ್ರೌಢಶಾಲೆ ತಟ್ಟಹಳ್ಳಿ ಇದರ ಕಟ್ಟಡವು ನಿರ್ಮಾಣವಾಗುತ್ತಿದ್ದು ಛಾವಣಿ ಹಂತದಲ್ಲಿದೆ. ಈ ಕಟ್ಟಡ ನಿರ್ಮಾಣಕ್ಕೆ 16.80 ಲಕ್ಷಗಳು ಅಂದಾಜು ಪಟ್ಟಿಗೆ 98-99 ರಲ್ಲಿ ಅನುಮೋದನೆ ದೊರೆತ್ತಿದ್ದು ಈವರೆಗೂ ರೂ.10.59 ಲಕ್ಷಗಳನ್ನು ಜಿಲ್ಲಾವಲಯ ಕಾರ್ಯಕ್ರಮದಲ್ಲಿ ಮಂಜೂರು ಮಾಡಿದೆ ಹಾಗೂ ಪ್ರಸಕ್ತ ಸಾಲಿನಲ್ಲಿ ರೂ. 5.91 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದ್ದು ಕಟ್ಟಡ ಕಾಮಗಾರಿ ಪೂರ್ಣಗೊಳಿಸಲಾಗುವುದು.

ನಾಗಮಂಗಲ ತಾಲ್ಲೂಕಿನಲ್ಲಿ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ಟೆಕ್ನಿಷಿಯನ್ ಕೊರತೆ

2519(3134) ಶ್ರೀ ಚೆಲುವರಾಯ ಸ್ವಾಮಿ ಎನ್. (ನಾಗಮಂಗಲ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನಾಗಮಂಗಲ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ಟೆಕ್ನಿಷಿಯನ್ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಎಕ್ಸರೇ ಯೂನಿಟ್ ಇದ್ದು ಇದನ್ನು ನಿರ್ವಹಿಸಲು ಎಕ್ಸರೆ ಟೆಕ್ನಿಷಿಯನ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ; ಬಂದಿದಲ್ಲಿ ಇದನ್ನು ನಿರ್ವಹಿಸಲು ಸರ್ಕಾರದ ಕ್ರಮವೇನು?

ಶ್ರೀ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ವೈದ್ಯರ ಹುದ್ದೆ ಖಾಲಿ ಇಲ್ಲ, ಎಕ್ಸರೆ ಟೆಕ್ನಿಷಿಯನ್ ಹುದ್ದೆ ಖಾಲಿ ಇರುವುದು ಗಮನಕ್ಕೆ ಬಂದಿದೆ.

ಆ) ಸದ್ಯಕ್ಕೆ ಸಾರ್ವಜನಿಕ ಆಸ್ಪತ್ರೆ, ನಾಗಮಂಗಲ ಇಲ್ಲಿ ಎಕ್ಸರೆ ಟೆಕ್ನಿಷಿಯನ್ ಹುದ್ದೆ ಖಾಲಿ ಇರುತ್ತದೆ. ಆದರೆ ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ಸೇವೆ ಸಲ್ಲಿಸಲು ಒಬ್ಬ ಎಕ್ಸರೆ ಟೆಕ್ನಿಷಿಯನನ್ನು ಪಾಂಡವಪುರದಿಂದ ನಿಯೋಜಿಸಲಾಗಿದೆ. ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಹಾಗೂ ನೇರ ನೇಮಕಾತಿಗೆ ವಿಶೇಷ ನೇಮಕಾತಿ ನಿಯಮಗಳನ್ನು ರಚಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಚಿಂತಾಮಣಿ ತಾಲ್ಲೂಕಿನಲ್ಲಿ ನೀರಿನ ಸಮಸ್ಯೆ.

2520(3011) ಶ್ರೀ ಚೌಡರೆಡ್ಡಿ (ಚಿಂತಾಮಣಿ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಂತಾಮಣಿ ಕ್ಷೇತ್ರ ಬೇಳೂರು ಹೋಬಳಿ, ನಿಮ್ಮಕಾಯಲಹಳ್ಳಿ, ನಲ್ಲಸಾನಪಲ್ಲಿ, ನಲ್ಲಗುಟ್ಟಪಳ್ಳಿಗಳಲ್ಲಿ ನೀರಿನ ಟ್ಯಾಂಕುಗಳು ರಿಪೇರಿಗೊಂಡಿದ್ದು ನೀರು ಬಿಡದೆ ಹಳ್ಳಿಯವರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಇದೇ ಹೋಬಳಿ ಗೊಲ್ಲಹಳ್ಳಿ, ವೆಂಕಟಾಪುರ, ಪುಲಗಲ್ಲು, ಪಾಳ್ಯಕೆರೆಗಳಲ್ಲಿ ನೀರಿನ ಟ್ಯಾಂಕುಗಳು ಮಂಜೂರಾಗಿದ್ದರೂ ಸಹ ಕಾಮಗಾರಿ ಕೈಗೊಳ್ಳದೆ ಈ ಹಳ್ಳಿಗಳಲ್ಲಿ ವಾಸವಾಗಿರುವ ಜನರಿಗೆ ಕುಡಿಯುವ ನೀರಿನ ಕೊರತೆ ತೀವ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಈ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಸರ್ಕಾರವೇನಾದರೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆಯೇ? (ವಿವರಗಳನ್ನು ನೀಡುವುದು)

ಶ್ರೀ ಎಂ.ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :—

ಅ) ನಿಮ್ಮಕಾಯಲಹಳ್ಳಿ, ನಲ್ಲಸಾನಂಪಲ್ಲಿ, ಮತ್ತು ನಲ್ಲಗುಟ್ಟಹಳ್ಳಿ ಗ್ರಾಮಗಳಲ್ಲಿ ಮೇಲ್ಮಟ್ಟದ ನೀರು ಸಂಗ್ರಹಾಲಯದ ನಿರ್ಮಾಣ ಕೆಲಸಗಳು ಮುಕ್ತಾಯ ಹಂತದಲ್ಲಿದ್ದು, ಸದರಿ ಗ್ರಾಮಗಳಲ್ಲಿ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳಲು ನೇರ ವಿತರಣಾ ಪದ್ಧತಿಯಿಂದ ನೀರು ಪೂರೈಕೆ ಮಾಡಲಾಗುತ್ತಿದೆ. ಸದರಿ ಟ್ಯಾಂಕ್‌ಗಳ ಕೆಲಸಗಳನ್ನು ಆದ್ಯತೆ ಮೇಲೆ ಪೂರ್ಣಗೊಳಿಸಿ ಗ್ರಾಮಗಳಿಗೆ ಸಮರ್ಪಕ ರೀತಿಯಲ್ಲಿ ನೀರು ಪೂರೈಕೆ ಮಾಡಲಾಗುವುದು.

ಆ) ಗೊಲ್ಲಹಳ್ಳಿ ಗ್ರಾಮಕ್ಕೆ ನೀರು ಸರಬರಾಜು ಯೋಜನೆ ಮಂಜೂರಾಗಿರುವುದಿಲ್ಲ. ವೆಂಕಟಾಪುರ ಗ್ರಾಮಕ್ಕಾಗಿ ಇತ್ತೀಚೆಗೆ ಜಲಮೂಲ ಸ್ಥಾಪಿಸಲಾಗಿದ್ದು, ಕೊಳವೆ ನೀರು ಸರಬರಾಜು ಯೋಜನೆ ಅನುಷ್ಠಾನಗೊಳಿಸಲು ಕ್ರಮ ಕೈಕೊಳ್ಳಲಾಗುತ್ತಿದೆ. ಪುಲಗಲ್ ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಪಾಳ್ಯಕೆರೆ ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆಯ ಕಾಮಗಾರಿಗಳ ನಿರ್ಮಾಣ ಕೆಲಸವನ್ನು ಟೆಂಡರ್ ಆಧಾರದ ಮೇಲೆ ವಹಿಸಲಾಗಿದೆ.

ಇ. ಯೋಜನೆಗಳನ್ನು ಶೀಘ್ರವಾಗಿ ಅನುಷ್ಠಾನಗೊಳಿಸಿ ಗ್ರಾಮಗಳಿಗೆ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅಥಣಿ ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳ ನಿರ್ಮಾಣ

2522(3149) ಶ್ರೀ ಡೊಂಗರಗಾಂವ್ ಶಹಜಹಾನ್ ಇಸ್ಮಾಯಿಲ್ ಖಾನ್ (ಅಥಣಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅಥಣಿ ತಾಲ್ಲೂಕಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಎಷ್ಟು ಸರ್ಕಾರಿ ಪ್ರಾಥಮಿಕ ಶಾಲಾ ಕೊಠಡಿಗಳ ಕೊರತೆಯಿದೆ;

ಆ) ಕೊರತೆಯಿರುವ ಶಾಲಾ ಕೊಠಡಿಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಒಟ್ಟು 444 ಸರ್ಕಾರಿ ಪ್ರಾಥಮಿಕ ಶಾಲಾ ಕೊಠಡಿಗಳ ಕೊರತೆಯಿದೆ.

೧. ಕಪ್ಪು ಹಲಗೆ ಕಾರ್ಯಕ್ರಮ ಯೋಜನೆಯಡಿಯಲ್ಲಿ 71 ಶಾಲಾ ಕೊಠಡಿಗಳನ್ನು ನಿರ್ಮಿಸಲಾಗಿದೆ.

೨. ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆಯಡಿ 3 ಕೊಠಡಿಗಳನ್ನು ನಿರ್ಮಿಸಲಾಗಿದೆ.

೩. 2000-01 ರಲ್ಲಿ ಬಿಡುಗಡೆಯಾದ ಅನುದಾನದಲ್ಲಿ 16 ಕೊಠಡಿಗಳನ್ನು ಅಥಣಿ ತಾಲ್ಲೂಕಿಗೆ ನೀಡಲಾಗಿದೆ.

ಅಥಣಿ ತಾಲ್ಲೂಕಿನ ಕೊಕಟನೂರು ಗ್ರಾಮಕ್ಕೆ ಪದವಿ ಪೂರ್ವ ಕಾಲೇಜು ಮಂಜೂರಾತಿ

2523(3150) ಶ್ರೀ ಡೊಂಗರಗಾಂವ್ ಶಹಜಾಹಾನ್ ಇಸ್ಮಾಯಿಲ್ ಖಾನ್ (ಅಥಣಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾಂ ಜಿಲ್ಲೆಯ ಅಥಣಿ ತಾಲ್ಲೂಕಿನಲ್ಲಿ ಜನರು ಶೈಕ್ಷಣಿಕ ಸೌಲಭ್ಯದಿಂದ ವಂಚಿತರಾಗಿ ಚಳುವಳಿಗೆ ಮುಂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅಥಣಿ ತಾಲ್ಲೂಕು ಕೊಕಟನೂರು ಗ್ರಾಮದಲ್ಲಿ ಅತೀ ಹೆಚ್ಚಿನ ವಿದ್ಯಾರ್ಥಿಗಳು ಇದ್ದು ಪದವಿ ಪೂರ್ವ ಕಾಲೇಜಿನ ಅವಶ್ಯಕಗತೆಗೆ ಬೇಡಿಕೆ ಇದ್ದು ಸರ್ಕಾರ ಇಲ್ಲಿ ಹೊಸ ಕಾಲೇಜು ಮಂಜೂರು ಮಾಡಲು ಯಾವ ಕ್ರಮ ಕೈಗೊಂಡಿದೆ. ಈ ವರ್ಷದಲ್ಲಿಯಾದರೂ ಮಂಜೂರಾತಿ ದೊರೆಯುವುದೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಇಲ್ಲ. ಆದರೆ ಅಥಣಿ ತಾಲ್ಲೂಕಿನಲ್ಲಿ ಅಗತ್ಯಕ್ಕೆ ಅನುಗುಣವಾಗಿ ಪದವಿ ಪೂರ್ವ ಕಾಲೇಜುಗಳಿರುತ್ತವೆ.

ಆ) ಅಥಣಿ ತಾಲ್ಲೂಕಿನಲ್ಲಿ 11 ಪದವಿ ಪೂರ್ವ ಕಾಲೇಜುಗಳಿರುತ್ತವೆ. ಈ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ ಕಡಿಮೆ ಇರುತ್ತದೆ. ಮತ್ತು ಇನ್ನಷ್ಟು ವಿದ್ಯಾರ್ಥಿಗಳ ದಾಖಲಾತಿಗೆ ಅವಕಾಶವಿರುತ್ತದೆ. ಆದ್ದರಿಂದ ಅಥಣಿ ತಾಲ್ಲೂಕು ಕೊಕಟನೂರು ಗ್ರಾಮಕ್ಕೆ ಪ್ರತ್ಯೇಕ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಅವಶ್ಯಕತೆ ಕಂಡುಬರುವುದಿಲ್ಲ.

ಅಥಣಿ ತಾಲ್ಲೂಕಿನ ಮಹಾರಾಷ್ಟ್ರ ಗಡಿಭಾಗದಲ್ಲಿ ಸರ್ಕಾರಿ ಪ್ರೌಢಶಾಲೆಗಳ ಅವಶ್ಯಕತೆ

2524 (3151) ಶ್ರೀ ಡೊಂಗರಗಾಂವ್ ಶಹಜಾಹಾನ್ ಇಸ್ಮಾಯಿಲ್ ಖಾನ್ (ಅಥಣಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಗಡಿಭಾಗದ ಕೋಹಳ್ಳಿ, ಜಂಭಗಿ, ಹಂಟಾಳ ಮತ್ತು ರಡ್ಡೇರಟ್ಟಿ ಗ್ರಾಮಗಳಲ್ಲಿನ ಜನರು ಶೈಕ್ಷಣಿಕವಾಗಿ ಸರ್ಕಾರಿ ಪ್ರೌಢ ಶಾಲೆಗಳ ತೀವ್ರ ಅವಶ್ಯಕತೆ ಹಾಗೂ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಪ್ರಸಕ್ತ ವರ್ಷದಲ್ಲಾದರೂ (2001-02) ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಹೌದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಪ್ರಸಕ್ತ ಸಾಲಿನಲ್ಲಿ ಅಥಣಿ ತಾಲ್ಲೂಕಿನ ಕೋಹಳ್ಳಿ ಗ್ರಾಮಕ್ಕೆ ಒಂದು ಸರ್ಕಾರಿ ಪ್ರೌಢಶಾಲೆಯನ್ನು ಮಂಜೂರು ಮಾಡಲಾಗಿದೆ.

ಅಥಣಿ ತಾಲ್ಲೂಕಿನಲ್ಲಿ ಸರ್ಕಾರಿ ಕಿರಿಯ ಮಹಾವಿದ್ಯಾಲಯವನ್ನು ಮಂಜೂರು ಮಾಡುವ ಬಗ್ಗೆ

2525(3152) ಶ್ರೀ ಡೊಂಗರಗಾಂವ್ ಶಹಜಾಹಾನ್ ಇಸ್ಮಾಯಿಲ್ ಖಾನ್ (ಅಥಣಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅಥಣಿ ತಾಲ್ಲೂಕು ಮಹಾರಾಷ್ಟ್ರ ಗಡಿಭಾಗದ ಹಳ್ಳಿಗಳ ಶಾಲೆಗಳಲ್ಲಿ ಶೈಕ್ಷಣಿಕ ವ್ಯವಸ್ಥೆ ಸರಿಯಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಅಥಣಿಯಲ್ಲಿ ಎಷ್ಟು ಸರ್ಕಾರಿ ಕಿರಿಯ ಮಹಾವಿದ್ಯಾಲಯಗಳು ಇವೆ; ಇಲ್ಲಿ ವಿದ್ಯಾರ್ಥಿಗಳ ಪ್ರಮಾಣ ಗಮನಿಸಿದರೆ ಮಹಾವಿದ್ಯಾಲಯ ಅವಶ್ಯಕತೆ ಇಲ್ಲವೆ?

ಇ) ಈ ಬಗ್ಗೆ ಸರ್ಕಾರಕ್ಕೆ ಬಂದಿರುವ ಪ್ರಸ್ತಾವನೆಗಳಿಗೆ ಕೈಗೊಂಡ ಕ್ರಮವೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಇಲ್ಲ. ಆದರೆ ಅಥಣಿ ತಾಲ್ಲೂಕಿನಲ್ಲಿ ಅಗತ್ಯಕ್ಕೆ ಅನುಗುಣವಾಗಿ ಪದವಿ ಪೂರ್ವ ಕಾಲೇಜುಗಳು ಇರುವುದರಿಂದ ಶೈಕ್ಷಣಿಕವಾಗಿ ವಿದ್ಯಾರ್ಥಿಗಳ ಬೋಧನೆಗೆ ಯಾವುದೇ ತೊಂದರೆಯಿರುವುದಿಲ್ಲ.

ಆ), ಇ) ಯಾವುದೇ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಇರುವುದಿಲ್ಲ. ಆದರೆ 11 ಖಾಸಗಿ ಪದವಿ ಪೂರ್ವ ಕಾಲೇಜುಗಳು ಈಗಾಗಲೇ ಇರುವುದರಿಂದ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ಉಂಟಾಗಿರುವುದಿಲ್ಲ. ಆದುದರಿಂದ ಇನ್ನೊಂದು ಕಾಲೇಜಿನ ಅವಶ್ಯಕತೆ ಕಂಡು ಬರುವುದಿಲ್ಲ.

ಪ್ರೌಢಶಾಲೆಗಳಿಗೆ ಗಣಕಯಂತ್ರದ ಶಿಕ್ಷಣದ ವ್ಯವಸ್ಥೆ

2526 (2995) ಶ್ರೀ ಗೋಪಾಲ ಪೂಜಾರಿ ಹೆಚ್. (ಕಾರ್ಕಳ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ಶೈಕ್ಷಣಿಕ ವರ್ಷದಲ್ಲಿ ಕೆಲವು ಪ್ರೌಢ ಶಾಲೆಗಳಿಗೆ ಕಂಪ್ಯೂಟರ್ ಒದಗಿಸಲಾಗಿದೆ; ಉಳಿದ ಪ್ರೌಢಶಾಲೆಗಳಿಗೆ ಕಂಪ್ಯೂಟರ್ ಶಿಕ್ಷಣದ ವ್ಯವಸ್ಥೆ ಮಾಡಲಾಗುತ್ತಿದೆಯೇ;

ಆ) ಖಾಸಗಿ ಶಾಲೆಗಳಲ್ಲಿ ಪ್ರಾಥಮಿಕ ಹಂತದಲ್ಲಿ ಕಂಪ್ಯೂಟರ್ ಜ್ಞಾನ ಕಲಿಯುತ್ತಿರುವುದರಿಂದ ಸರ್ಕಾರಿ ಶಾಲೆಗಳಲ್ಲಿ ಈ ವ್ಯವಸ್ಥೆ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೇ; ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) 2001-02ನೇ ಸಾಲಿನಲ್ಲಿ ಮಾಹಿತಿ ಸಿಂಧು ಯೋಜನೆಯಡಿಯಲ್ಲಿ ಸಾವಿರ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ಜಾರಿಗೊಳಿಸಲಾಗುತ್ತಿದ್ದು, ಈ ಯೋಜನೆಯನ್ನು ವಿಶ್ವಬ್ಯಾಂಕ್ ನೆರವಿನಿಂದ ಉಳಿದ 1667 ಸರ್ಕಾರಿ ಪ್ರೌಢಶಾಲೆಗಳಿಗೂ ವಿಸ್ತರಿಸುವ ಉದ್ದೇಶ ಸರ್ಕಾರಕ್ಕಿದೆ.

ಆ) ಪ್ರಾಥಮಿಕ ಹಂತದಲ್ಲಿ ಕಂಪ್ಯೂಟರ್ ಜ್ಞಾನವನ್ನು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಅಳವಡಿಸುವ ಕುರಿತಂತೆ ವಿಶ್ವಬ್ಯಾಂಕ್ ನೆರವಿನಿಂದ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಉಡುಪಿ ಮತ್ತು ಕಾರ್ಕಳ ತಾಲ್ಲೂಕುಗಳಲ್ಲಿ ಮಲೇರಿಯಾ ರೋಗ ಹಬ್ಬುತ್ತಿರುವ ಬಗ್ಗೆ

2528(3131) ಶ್ರೀ ಗೋಪಾಲ ಪೂಜಾರಿ ಹೆಚ್. (ಕಾರ್ಕಳ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಮಲೇರಿಯಾ ರೋಗವು ಪುನ: ಜಾಸ್ತಿಯಾಗಿದ್ದು ರಾಜ್ಯದ ಯಾವ ತಾಲ್ಲೂಕಿನಲ್ಲಿ ಈ ರೋಗ ಇರುವುದು ಪತ್ತೆಯಾಗಿದೆ;

ಆ) ಉಡುಪಿ ಜಿಲ್ಲೆಯಲ್ಲಿ ಮತ್ತು ಕಾರ್ಕಳ ತಾಲ್ಲೂಕಿನಲ್ಲಿ ಈ ರೋಗ ಇತ್ತೀಚೆಗೆ ಕಾಣಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಬಂದಿದ್ದಲ್ಲಿ, ಮಲೇರಿಯಾ ರೋಗ ನಿಯಂತ್ರಿಸಲು ವಿಶೇಷ ಕಾರ್ಯಕ್ರಮವೇನಾದರೂ ಪ್ರಾರಂಭಿಸಲಾಗುವುದೇ?

ಶ್ರೀ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಈ ಕೆಳಕಂಡ 24 ತಾಲ್ಲೂಕುಗಳಲ್ಲಿ ಮಲೇರಿಯಾ ರೋಗವು ಹೆಚ್ಚಾಗಿ ಕಂಡುಬಂದಿದೆ.

ಮುಳಬಾಗಿಲು, ಬಾಗೇಪಲ್ಲಿ, ಗುಡಿಬಂಡೆ, ಹಿರಿಯೂರು, ಹೊಸದುರ್ಗ, ಚಿಕ್ಕನಾಯಕನಹಳ್ಳಿ, ಶಿರಾ, ಗೋಕಾಕ್, ಮುದ್ದೇಬಿಹಾಳ್, ಶೋರಾಪುರ, ಲಿಂಗಸುಗೂರು, ದೇವದುರ್ಗ, ಕೆ.ಆರ್.ನಗರ, ಮಂಡ್ಯ ಪಾಂಡವಪುರ. ಕೆ.ಆರ್.ಪೇಟೆ, ಅರಸೀಕೆರೆ, ಕಡೂರು, ಬಾದಾಮಿ, ಹುನಗುಂದ, ಕುಷ್ಟಗಿ, ಯಲಬುರ್ಗ, ಉಡುಪಿ ಮತ್ತು ಕಾರ್ಕಳ.

ಆ) ಬಂದಿದೆ.

ಇ) ಉಡುಪಿ ಜಿಲ್ಲೆಯಲ್ಲಿ, ಮಲೇರಿಯಾ ರೋಗ ನಿಯಂತ್ರಣಕ್ಕೆ ಈಗಾಗಲೇ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಜ್ವರ ಪೀಡಿತರ ಸಮೀಕ್ಷೆಗಾಗಿ ಸಮಸ್ಯೆಯಲ್ಲದ ಪ್ರದೇಶಗಳಿಂದ ಸಿಬ್ಬಂದಿಯನ್ನು ನಿಯೋಜಿಸಿ ರಕ್ತಲೇಪನ ಸಂಗ್ರಹಣೆಗೆ ವ್ಯವಸ್ಥೆ ಮಾಡಲಾಗಿದೆ.
2. ಕಿರಿಯ ಪ್ರಯೋಗಶಾಲಾ ತಂತ್ರಜ್ಞರನ್ನು ಗುತ್ತಿಗೆ ಆಧಾರದ ಮೇಲೆ ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪ್ರಯೋಗಾಲಯಗಳಲ್ಲಿ ನೇಮಿಸಲಾಗಿದ್ದು ಸಂಗ್ರಹಿಸಿದ ರಕ್ತಲೇಪನಗಳನ್ನು ಶೀಘ್ರವಾಗಿ ಪರೀಕ್ಷೆಮಾಡಲಾಗುತ್ತಿದೆ.

3. ಎಲ್ಲಾ ಖಚಿತಪಟ್ಟ ಪ್ರಕರಣಗಳಿಗೆ ತೀವ್ರ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

4. 2001ನೇ ಸಾಲಿನಲ್ಲಿ ಮಾರ್ಚ್ ಸುತ್ತಿನಲ್ಲಿ ಡಿ.ಡಿ.ಟಿ. ಕೀಟನಾಶಕ ಸಿಂಪರಣೆಯನ್ನು ಮಲೇರಿಯಾ ಪೀಡಿತ ಗ್ರಾಮಗಳಲ್ಲಿ ಮಾಡಲಾಗಿದೆ. ಆಗಸ್ಟ್ ಸುತ್ತಿನಲ್ಲಿ ಈ ಕಾರ್ಯಕ್ರಮಕ್ಕಾಗಿ 5 ಮೆಟ್ರಿಕ್ ಟನ್ ಡಿ.ಡಿ.ಟಿ.ಯನ್ನು ಪೂರೈಸಲಾಗಿದೆ ಹಾಗೂ ಸಿಂಪಡಣಾ ವೆಚ್ಚಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆ.

5. ರೋಗವಾಹಕ ಸೊಳ್ಳೆ ನಿಯಂತ್ರಣಕ್ಕಾಗಿ ತುರ್ತು ಕ್ರಮ ಕೈಗೊಳ್ಳಲು ಸಮಸ್ಯಾತ್ಮಕ ಗ್ರಾಮಗಳಲ್ಲಿ ಕೀಟನಾಶಕ ಧೂಮೀಕರಣ ಮಾಡಲಾಗುತ್ತಿದೆ.

6. ಜೈವಿಕ ಪರಿಸರ ನಿಯಂತ್ರಣ ಕ್ರಮಗಳ ಮೂಲಕ ಸೊಳ್ಳೆ ಉತ್ಪತ್ತಿ ತಾಣಗಳಲ್ಲಿ ಲಾರ್ವಾಹಾರಿ ಮೀನುಗಳನ್ನು ಬಿಟ್ಟು ಸೊಳ್ಳೆ ಉತ್ಪತ್ತಿಯನ್ನು ತಡೆಗಟ್ಟಲಾಗತ್ತಿದೆ.

ಕುಂದಾಪುರ ತಾಲ್ಲೂಕಿನ ಉಪ್ಪಂಧ ಪ್ರೌಢ ಶಾಲೆಗಳಿಗೆ ಕಂಪ್ಯೂಟರ್ ತರಬೇತುದಾರರನ್ನು ನೇಮಿಸುವ ಬಗ್ಗೆ

2529 (2979) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) :— ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರಿ ಪ್ರೌಢ ಶಾಲೆಗಳಿಗೆ ಕಂಪ್ಯೂಟರ್ ಒದಗಿಸುತ್ತಿದ್ದು, ಎಷ್ಟು ವಿದ್ಯಾರ್ಥಿಗಳಿಗೆ ಎಷ್ಟು ಕಂಪ್ಯೂಟರ್ ಒದಗಿಸಲಾಗಿರುತ್ತದೆ. (ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಕಂಪ್ಯೂಟರ್ ಸಂಖ್ಯೆ ತಿಳಿಸುವುದು)

ಆ) ಪ್ರೌಢ ಶಾಲೆಗಳಲ್ಲಿ 850 ವಿದ್ಯಾರ್ಥಿಗಳಿದ್ದಲ್ಲಿ ಒದಗಿಸಲಾಗಿರುವ ಕಂಪ್ಯೂಟರ್ ಸಂಖ್ಯೆ ಎಷ್ಟು, ತರಬೇತುದಾರರ ಸಂಖ್ಯೆ ಎಷ್ಟು?

ಇ) ಕುಂದಾಪುರ ತಾಲ್ಲೂಕಿನ ಕುಂದಾಪುರ ತಾಲ್ಲೂಕಿನ. ಉಪ್ಪಂಧ ಪ್ರೌಢ ಶಾಲೆಯಲ್ಲಿ 850 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದು 15 ಕಂಪ್ಯೂಟರ್‌ಗಳನ್ನು ಒದಗಿಸಲಾಗಿದ್ದು ಇಬ್ಬರು ತರಬೇತುದಾರರನ್ನು ನೇಮಿಸಿದೆ, ಈ ಕಂಪ್ಯೂಟರ್ ಮತ್ತು ತರಬೇತುದಾರರ ಸಂಖ್ಯೆಯನ್ನು ಹೆಚ್ಚಿಸಬಹುದೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಒಟ್ಟು 2.24 ಲಕ್ಷ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ ನೀಡಲಾಗುತ್ತಿದ್ದು 11,286 ಕಂಪ್ಯೂಟರ್‌ಗಳನ್ನು 1000 ಸರ್ಕಾರಿ ಪ್ರೌಢ ಶಾಲೆಗಳಿಗೆ

ಸರಬರಾಜು ಮಾಡಲಾಗಿರುತ್ತದೆ. ಶಾಲೆಗಳು ಮಕ್ಕಳ ಸಂಖ್ಯೆಗಳಿಗನುಗುಣವಾಗಿ ಎ, ಬಿ, ಸಿ ಎಂದು ವರ್ಗೀಕರಿಸಿದ್ದು 5 ವರ್ಷದ ಈ ಯೋಜನೆಗೆ ಪ್ರತಿ ಶಾಲೆಗೆ ಈ ಕೆಳಕಂಡ ಹಣ ವೆಚ್ಚ ಮಾಡಲಾಗುತ್ತದೆ.

1) ಕ್ಯಾಟಗರಿ ಎ - ರೂ.14.69 ಲಕ್ಷ
(150 ರವರೆಗೆ ವಿದ್ಯಾರ್ಥಿಗಳಿರುವ ಶಾಲೆಗಳು)

2) ಕ್ಯಾಟಗರಿ ಬಿ - ರೂ.19.10 ಲಕ್ಷ
(151 ರಿಂದ 250 ರವರೆಗೆ ವಿದ್ಯಾರ್ಥಿಗಳಿರುವ ಶಾಲೆಗಳು)

3) ಕ್ಯಾಟಗರಿ ಸಿ - ರೂ. 24.20 ಲಕ್ಷ
(250 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳು)

ಆ) 850 ವಿದ್ಯಾರ್ಥಿಗಳಿರುವ ಪ್ರತಿ ಸರ್ಕಾರಿ ಪ್ರೌಢಶಾಲೆಗೆ ಒಟ್ಟು 1 ಸರ್ವರ್ ಮತ್ತು 14 ವರ್ಕ್ಸ್ ಸ್ಟೇಷನ್‌ಗಳನ್ನು ಒದಗಿಸುಲಾಗುತ್ತದೆ. ಪ್ರತೀ ಶಾಲೆಗೆ ಇಬ್ಬರು ಕಂಪ್ಯೂಟರ್ ತರಬೇತುದಾರರನ್ನು ನೇಮಿಸಲಾಗುತ್ತದೆ.

ಇ) ಚಾಲ್ತಿ ನಿಯಮಗಳಡಿಯಲ್ಲಿ ಅವಕಾಶವಿರುವುದಿಲ್ಲ.

ಬೈಂದೂರಿನಲ್ಲಿ ಶಿಕ್ಷಣಾಧಿಕಾರಿಗಳು ಕಛೇರಿಗೆ ಸಿಬ್ಬಂದಿ ನೇಮಕಾತಿ.

2530 (2980) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) :— ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಮಂಜೂರಾಗಿ ಪ್ರಾರಂಭಗೊಂಡಿದ್ದು ಇದಕ್ಕೆ ಸರಿಯಾದ ಸಿಬ್ಬಂದಿಗಳ ನೇಮಕಾತಿಯಾಗಿಲ್ಲದಿರುವುದಕ್ಕೆ ಕಾರಣವೇನು;

ಆ) ಹಾಗಿದ್ದಲ್ಲಿ ಸಿಬ್ಬಂದಿಗಳ ನೇಮಕಾತಿಯನ್ನು ಕೂಡಲೇ ಮಾಡಲಾಗುವುದೆ? ತೊಡಕುಗಳಿದ್ದಲ್ಲಿ ನಿಯೋಜನೆ ಮೂಲಕವಾದರೂ ಹುದ್ದೆಗಳನ್ನು ಭರ್ತಿಮಾಡಲಾಗುವುದೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಹೊಸದಾಗಿ ಬಿ.ಇ.ಓ. ಕಛೇರಿ ಪ್ರಾರಂಭವಾಗಿದ್ದು, ಈ ಕೆಳಕಂಡಂತೆ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ.

		ಮಂಜೂರಾಗಿರುವ ಹುದ್ದೆಗಳು	ಹಾಲಿ ಕಾರ್ಯ ನಿರ್ವ-ಹಿಸುತ್ತಿರುವವರ ಸಂಖ್ಯೆ	ಖಾಲಿ ಹುದ್ದೆಗಳು
1) ಕ್ಷೇತ್ರ ಶಿಕ್ಷಣಾಧಿಕಾರಿ	-	1	1	-
2) ಶಿಕ್ಷಣ ಸಂಯೋಜಕರು	-	5	4	1
3) ಅಧೀಕ್ಷಕರು	-	1	-	1
4) ಪ್ರ.ದ.ಸ.ರು	-	3	1	2
5) ದ್ವಿ.ದ.ಸ.ರು	-	2	1	1
6) ದ್ವಿ.ದಸ ಸಹಿತ ಬೆರಳಚ್ಚುಗಾರರು	-	1	-	1
7) ಡಿ-ದರ್ಜೆ	-	2	1	1

ಆ) ಈ ಹುದ್ದೆಗಳಲ್ಲದೆ ಇಬ್ಬರು ಪ್ರ.ದ.ಸ.ರು ಮತ್ತು ಒಬ್ಬರು ಗ್ರೂಪ್ ಡಿ ನೌಕರರು ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಖಾಲಿ ಇರುವ ಹುದ್ದೆಗಳನ್ನು ಶೀಘ್ರದಲ್ಲಿಯೇ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಬೈಂದೂರಿನಲ್ಲಿ ಸಮುದಾಯ ಆರೋಗ್ಯ ಕೇಂದ್ರ ಮಂಜೂರಾತಿ

2531(2961) ಶ್ರೀ ಗೋಪಾಲ ಪೂಜಾರಿ ಕೆ. (ಕಾರ್ಕಳ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಈ ಹಿಂದೆ 1994-95ನೇ ಇಸವಿಯಲ್ಲಿ ಕುಂದಾಪುರ ತಾಲ್ಲೂಕು ಉಡುಪಿ ಜಿಲ್ಲೆ ಬೈಂದೂರಿಗೆ ಸಮುದಾಯ ಆರೋಗ್ಯ ಕೇಂದ್ರ ಮಂಜೂರಾಗಿರುವುದು ನಿಜವೇ;

ಆ) ಹಾಗಿದ್ದಲ್ಲಿ ಅದು ಕಾರ್ಯರೂಪಕ್ಕೆ ಬರದಿರಲು ಕಾರಣಗಳೇನು;

ಇ) ಅತೀ ಅವಶ್ಯಕವಾಗಿರುವ ಈ ಸಮುದಾಯ ಆರೋಗ್ಯ ಕೇಂದ್ರ ಸ್ಥಾಪಿಸಲು ಏನಾದರೂ ತೊಡಕುಗಳಿವೆಯೇ;

ಈ) ತೊಡಕುಗಳಿದ್ದಲ್ಲಿ ಪರಿಹರಿಸಿ ಮಂಜೂರಾತಿ ನೀಡಬಹುದೇ?

ಶ್ರೀ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಹೌದು.

ಅ) ಬೈಂದೂರು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸುವ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಆಕುಕ 194ಆ.ಸಂ.94(ಭಾ) ದಿ.21.1.95ರಲ್ಲಿ ಹಲವು ಆಡಳಿತಾತ್ಮಕ ಕಾರಣಗಳಿಂದ ತಡೆಹಿಡಿಯಲಾಗಿರುವುದರಿಂದ ಈ ಸಮುದಾಯ ಆರೋಗ್ಯ ಕೇಂದ್ರವು ಇನ್ನೂ ಕಾರ್ಯರೂಪಕ್ಕೆ ಬಂದಿರುವುದಿಲ್ಲ.

ಇ) ಇದನ್ನು ತಿಳಿದುಕೊಳ್ಳಲಾಗುತ್ತಿದೆ.

ಈ) ಇದನ್ನು ತಿಳಿದುಕೊಳ್ಳಲಾಗುತ್ತಿದೆ.

ಬೈಂದೂರು ತಾಲ್ಲೂಕಿನ ಪದವಿಪೂರ್ವ ಕಾಲೇಜುಗಳಲ್ಲಿ ಶಿಕ್ಷಕರ ಕೊರತೆ

2532(2982) **ಶ್ರೀ ಗೋಪಾಲಪೂಜಾರಿ ಕೆ. (ಕಾರ್ಕಳ)** :— ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕುಂದಾಪುರ ತಾಲ್ಲೂಕಿನ ಬೈಂದೂರು ವಿಧಾನಸಭೆ ಕ್ಷೇತ್ರದಲ್ಲಿ ಪದವಿಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು ಅವು ಎಲ್ಲೆಲ್ಲಿವೆ. (ವಿವರ ನೀಡುವುದು)

ಆ) ಈ ಪದವಿಪೂರ್ವ ಕಾಲೇಜುಗಳಲ್ಲಿ ಯಾವ ಯಾವ ವಿಷಯಗಳಲ್ಲಿ ಶಿಕ್ಷಕರ ಕೊರತೆ ಇರುವುದು (ವಿವರ ನೀಡುವುದು)

ಇ) ಹಾಗಿದ್ದಲ್ಲಿ, ಕೊರತೆಯಿರುವ ಶಿಕ್ಷಕರ ಹುದ್ದೆಗಳನ್ನು ಎಂದಿನಿಂದ ಭರ್ತಿ ಮಾಡಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಆರು ಪದವಿಪೂರ್ವ ಕಾಲೇಜುಗಳು ಅವು ಬೈಂದೂರು, ಶಿರೂರು, ನಾವುಂದ, ಕಂಬದಕೋಣೆ, ವಂಡ್ಸೆ ಮತ್ತು ಉಪ್ಪುಂದಗಳಲ್ಲಿವೆ.

ಆ) ಈ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

1)	ಬೈಂದೂರು	-	ಇತಿಹಾಸ, ಅರ್ಥಶಾಸ್ತ್ರ
2)	ಶಿರೂರು	-	ಇತಿಹಾಸ, ಅರ್ಥಶಾಸ್ತ್ರ, ಇಂಗ್ಲೀಷ್, ರಾಜ್ಯಶಾಸ್ತ್ರ
3)	ನಾವುಂದ	-	ಇತಿಹಾಸ, ಜೀವಶಾಸ್ತ್ರ
4)	ಕಂಬದಕೋಣೆ	-	ಕನ್ನಡ, ರಾಜ್ಯಶಾಸ್ತ್ರ
2)	ವಂಡ್ಸೆ	-	ಕನ್ನಡ
3)	ಉಪ್ಪುಂದ	-	ಸಮಾಜಶಾಸ್ತ್ರ, ರಾಜ್ಯಶಾಸ್ತ್ರ.

ಇ) ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿನ ಅರೆಕಾಲಿಕ ಉಪನ್ಯಾಸಕರ ಸೇವೆಯನ್ನು (ಶೇಕಡ 55 ಅಂಕಗಳಿಗಿಂತ ಕಡಿಮೆ ಆದರೆ ಶೇಕಡ 50ಕ್ಕಿಂತ ಹೆಚ್ಚು ಇರುವವರು) ಸಕ್ರಮಗೊಳಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಹುದ್ದೆಗಳನ್ನು ಭರ್ತಿಮಾಡಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಬೈಂದೂರು ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಗಳ ಕರ್ತವ್ಯಲೋಪ

2533(2983) ಶ್ರೀ ಗೋಪಾಲ ಪೂಜಾರಿ ಕೆ. (ಕಾರ್ಕಳ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗಾಗಿ ಬರುವ ಸಾರ್ವಜನಿಕರಿಗೆ ಅಲ್ಲಿಯ ವೈದ್ಯಾಧಿಕಾರಿಗಳ ಗೈರುಹಾಜರಾತಿಯಿಂದ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ದಿನಾಂಕ : 20-6-2001 ರಂದು ಶಾಸಕರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡುವುದಾಗಿ ತಿಳಿಸಿದ್ದರೂ ಸಹ ಗೈರುಹಾಜರಾದ ವೈದ್ಯಾಧಿಕಾರಿಗಳ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಬಂದಿರುವುದಿಲ್ಲ.

ಆ) ವೈದ್ಯಾಧಿಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ಸರ್ಕಾರಿ ಸೇವೆಗೆ ಅನಧಿಕೃತ ಗೈರುಹಾಜರಿಯಾಗಿಲ್ಲ. ಆದರೆ ಪ್ರಾಥಮಿಕ ಆರೋಗ್ಯ ಕೇಂದ್ರ, ಹಕ್ಲಾಡಿಯ ಸಭೆಗೆ ಹಾಜರಾಗದೆ ಗೈರುಹಾಜರಾಗಿರುವುದು ತಿಳಿದುಬಂದಿರುತ್ತದೆ. ಸದರಿ ವೈದ್ಯರಿಂದ ವಿವರಣೆ ಕೇಳಲಾಗಿದೆ. ವಿವರಣೆ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಮೈಸೂರು ತಾಲ್ಲೂಕಿನಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳು

2534 (2964) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ಒಂದು ವರ್ಷ ಅವಧಿಯಲ್ಲಿ ಮೈಸೂರು ತಾಲ್ಲೂಕಿನ ಎಷ್ಟು ಜನರಿಗೆ ಕುಟುಂಬ ಯೋಜನೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. (ಕೇಂದ್ರವಾರು ಹಾಗೂ ಗಂಡಸರು ಮತ್ತು ಮಹಿಳೆಯರ ವಿವರ ಪ್ರತ್ಯೇಕವಾಗಿ ಕೊಡುವುದು)

ಆ) ಈ ರೀತಿ ಕುಟುಂಬ ಕಲ್ಯಾಣ ಯೋಜನೆಯನ್ನು ಅಳವಡಿಸಿಕೊಂಡ ಜನರಿಗೆ ಯಾವ ದರದಲ್ಲಿ ಎಷ್ಟು ಪ್ರೋತ್ಸಾಹಧನ ವಿತರಿಸಲಾಗಿದೆ. ಪ್ರೋತ್ಸಾಹಧನದಲ್ಲಿ ಗಂಡು ಮತ್ತು ಹೆಣ್ಣು ಎಂಬ ತಾರತಮ್ಯ ಏನಾದರೂ ಇದೆಯೇ, ಇದ್ದರೆ ಕಾರಣವೇನು;

ಇ) ಆರ್ಥಿಕ ಪ್ರೋತ್ಸಾಹವಲ್ಲದೆ ಬೇರೆ ಯಾವುದಾದದರೂ ರೀತಿಯ ಸೌಲಭ್ಯ ನೀಡಲಾಗಿದೆಯೆ;

ಈ) ನೀಡಲಾಗಿದ್ದಲ್ಲಿ ಎಷ್ಟು ಮಂದಿಗೆ ಯಾವ ರೀತಿಯ ಸೌಲಭ್ಯ ತಲುಪಿದೆ;

ಉ) ಈ ರೀತಿಯ ಸೌಲಭ್ಯ ಅರ್ಹರಿಗೆ ತಲುಪಿದ ಬಗ್ಗೆ ಯಾವ ಮೂಲದಿಂದ ಖಚಿತಪಡಿಸಿಕೊಳ್ಳಲಾಗಿದೆ, ಅಥವಾ ಖಚಿತಪಡಿಸಿಕೊಳ್ಳಲು ಅವಕಾಶ ಏನಾದರೂ ಇದೆಯೇ?

ಶ್ರೀ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :--

ಅ) 2000-2001ನೇ ವರ್ಷದಲ್ಲಿ ಮೈಸೂರು ತಾಲ್ಲೂಕಿನಲ್ಲಿ 2937 ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆಗಳಾಗಿದ್ದು ವಿವರಗಳು ಕೆಳಕಂಡಂತೆ ಇವೆ.

ಕ್ರಮ ಸಂಖ್ಯೆ	ಪ್ರಾಥಮಿಕ ಆರೋಗ್ಯ ಕೇಂದ್ರ	ಪುರುಷ ಶಸ್ತ್ರ ಚಿಕಿತ್ಸೆ	ಮಹಿಳಾ ಶಸ್ತ್ರ ಚಿಕಿತ್ಸೆ	ಒಟ್ಟು
1.	ಇಲವಾಲ	2	346	348
2.	ಬೀರಿಹುಂಡಿ	-	222	222
3.	ಜಯಪುರ	-	196	196
4.	ಸಾಗರಕಟ್ಟೆ	-	205	205
5.	ಸಿದ್ದರಾಮನಹುಂಡಿ	-	302	302
6.	ಕಡಕೋಳ	-	247	247
7.	ಕೀಳನಪುರ	-	318	318
8.	ಮಲ್ಲಹಳ್ಳಿ	-	182	182
9.	ಹುಚ್ಯ	-	158	158
10.	ದೂರ	-	278	278
11.	ಮೂಗನಹುಂಡಿ	-	181	181
12.	ನಾಗನಹಳ್ಳಿ	-	177	177
13.	ಮದ್ದೂರು ಕಲ್ಲಹಳ್ಳಿ	-	123	123
	ಒಟ್ಟು	2	2935	2937

ಆ) ಪುರುಷರಿಗೆ ತಲಾ 100 ರೂ.ನಂತೆ ಹಾಗೂ ಸ್ತ್ರೀಯರಿಗೆ ತಲಾ 70 ರೂ.ನಂತೆ ಪರಿಹಾರ ಧನ ನೀಡಲಾಗುತ್ತಿದೆ. ಇದನ್ನು ತಾರತಮ್ಯವೆಂದು ಭಾವಿಸಲು ಬರುವುದಿಲ್ಲ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಪ್ರಾಥಮಿಕ ಮಟ್ಟದಿಂದ ಪ್ರೌಢ ಶಿಕ್ಷಣದವರೆಗೂ ವೃತ್ತಿಪರ ಶಿಕ್ಷಣ

2535(2965) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಪ್ರಾಥಮಿಕ ಮಟ್ಟದಿಂದ ಪ್ರೌಢ ಶಿಕ್ಷಣದವರೆಗೆ ಯಾವ ಯಾವ ಇಲಾಖೆಗಳಲ್ಲಿ ವೃತ್ತಿಪರ ಶಿಕ್ಷಣ ನೀಡಲಾಗುತ್ತಿದೆ.

2) ಮೈಸೂರು ತಾಲ್ಲೂಕು ಸೇರಿದಂತೆ ಮೈಸೂರು ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಎಷ್ಟು ಕಡೆ ವೃತ್ತಿಪರ ಶಿಕ್ಷಣ ಕೊಡಲಾಗುತ್ತಿದೆ.

3) ಹಾಗಿದ್ದಲ್ಲಿ ಯಾವ ಯಾವ ವರ್ಗದ ಶಿಕ್ಷಣ ನೀಡಲಾಗುತ್ತಿದೆ.

4) ಪ್ರಾಥಮಿಕ ಮಟ್ಟದಲ್ಲಿಯೂ ಸಹ ಗ್ರಾಮೀಣ ಪ್ರದೇಶದ ವೃತ್ತಿಗಳಾದ ಬಡಗಿ, ಕುರಿ, ಕೋಣ, ಹಸು, ಹಂದಿ ಸಾಕಣೆ ಒಕ್ಕಲುತನ, ತೋಟಗಾರಿಕೆ, ಕಮ್ಮಾರಿಕೆ, ಕುಂಬಾರಿಕೆ ಮುಂತಾದ ವೃತ್ತಿಗಳಲ್ಲಿ ತರಬೇತಿಯನ್ನು ನೀಡಲು ಅಗತ್ಯ ತಾತ್ರಿಕ ಪರಿಣತಿಯುಳ್ಳ ಪಠ್ಯ ಕ್ರಮ ತಯಾರಿಸಿ ತರಬೇತಿಯನ್ನು ನೀಡಲು ಏನಾದರೂ ಯೋಜನೆಯನ್ನು ಹಾಕಿಕೊಳ್ಳಲಾಗಿದೆಯೆ;

5) ಇಲ್ಲವಾದಲ್ಲಿ ಈ ಯೋಜನೆ ಜಾರಿಗೆ ತರಲು ಇರುವ ಅಡಚಣೆಗಳೇನು ಎಂದಿನಿಂದ ಜಾರಿಗೆ ತರಲಾಗುವುದು.

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

1), 2), 3) ಪ್ರಾಥಮಿಕ ಶಿಕ್ಷಣದಲ್ಲಿ ವೃತ್ತಿಪರ ಶಿಕ್ಷಣ ನೀಡಲಾಗುತ್ತಿಲ್ಲ. ಪ್ರೌಢಶಾಲಾ ಹಂತದಲ್ಲಿ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಲ್ಲಿ ಚಿತ್ರಕಲೆ, ಸಂಗೀತ, ಹೊಲಿಗೆ ವಿಷಯಗಳಲ್ಲಿ ವೃತ್ತಿಪರ ಶಿಕ್ಷಣ ನೀಡಲಾಗುತ್ತಿದೆ.

4) ಇಲ್ಲ

5) ಅಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಉನ್ನತ ಶಿಕ್ಷಣಕ್ಕೆ ಸ್ವಯಂ ಆರ್ಥಿಕ ವ್ಯವಸ್ಥೆ

2536 (2966) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸ್ವಯಂ ಆರ್ಥಿಕ ವ್ಯವಸ್ಥೆ ಮಾಡಿಕೊಂಡು ಉನ್ನತ ಶಿಕ್ಷಣ ನೀಡಲು ಖಾಸಗಿಯವರು ಮುಂದೆ ಬಂದರೆ ಡೀಮ್ಡ್ ಯೂನಿವರ್ಸಿಟಿ ಮಾದರಿ ಅವಕಾಶ ನೀಡಲು ಸರ್ಕಾರ ಅನುಮತಿ ನೀಡಲು ಇಚ್ಛಿಸುವುದೇ;

ಆ) ಹೌದಾದಲ್ಲಿ, ಕೇಂದ್ರ ಸರ್ಕಾರದ ಸಲಹೆ ಸೂಚನೆ ಆದೇಶಗಳಿಗೆ ಒಳಪಟ್ಟಂತೆ ಜಾರಿಗೊಳಿಸಲು ಇರುವ ಅಡಚಣೆಗಳೇನು;

ಇ) ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರವೇನಾದರೂ ಸೂಚನೆ ನೀಡಿದೆಯೆ;

ಈ) ಹೊರ ದೇಶಗಳಲ್ಲಿ ಈ ರೀತಿಯ ಪದ್ಧತಿ ಜಾರಿಯಲ್ಲಿರುವಾಗ ನಮ್ಮಲ್ಲಿಯೂ ಸಹ ಪ್ರಯೋಗ ಮಾಡಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲು ಇರುವ ಅಡಚಣೆಗಳೇನು?

ಡಾ: ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :—

ಅ) ಪರಿಶೀಲನೆಯಲ್ಲಿದೆ.

ಆ) ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಸೂತ್ರಗಳ ಅನುಸಾರ ಕ್ರಮ ಕೈಗೊಳ್ಳಬೇಕಾಗಿದೆ.

ಇ) ಇಲ್ಲ

ಈ) ಸಾಧಕ ಬಾಧಕಗಳನ್ನು ವಿಶ್ಲೇಷಿಸಲಾಗುತ್ತದೆ.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸ್ಥಳೀಯ ನೌಕರರ ನೇಮಕ

2576 (2967) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗ್ರಾಮ ಪಂಚಾಯಿತಿ ಮಟ್ಟದಲ್ಲಿ ನೀರಗಂಟಿ, ಬಿಲ್ ಕಲೆಕ್ಟರ್ ಮುಂತಾದ ನೌಕರರನ್ನು ಅಲ್ಲಿಯೇ ಸ್ಥಳೀಯವಾಗಿ ನೇಮಕಾತಿ ಮಾಡಿಕೊಳ್ಳುವ ಅವಕಾಶ ಇರುವುದರಿಂದ ಅವರು ಅಲ್ಲಿಯೇ ನೇಮಕಗೊಂಡು ಅಲ್ಲಿಯೇ ಸೇವೆಯನ್ನು ಸಲ್ಲಿಸಿ ಅಲ್ಲಿಯೇ ನಿವೃತ್ತಿ ಹೊಂದುವ ಪ್ರವೃತ್ತಿ ಅನಪೇಕ್ಷಣೀಯ;

ಆ) ಈ ರೀತಿ ನೌಕರರು ಅದೇ ಊರಿನವರಾಗಿರುವ ಕಾರಣದಿಂದ ಸ್ವಹಿತಾಸಕ್ತಿ ಬೆಳೆಸಿಕೊಳ್ಳಲು ಅವಕಾಶವಾಗುವುದಿಲ್ಲವೆ;

ಇ) ಇವರನ್ನು ಅದೇ ತಾಲ್ಲೂಕಿನ ಒಳಗೆ ಬೇರೆ ಪಂಚಾಯಿತಿಗಳಿಗೆ ವರ್ಗಾವಣೆ ಮಾಡಲು ನಿಯಮಗಳಲ್ಲಿ ಅವಕಾಶ ಕಲ್ಪಿಸುವ ಇಚ್ಛೆ ಸರ್ಕಾರಕ್ಕೆ ಇದೆಯೆ;

ಈ) ಗ್ರಾಮ ಪಂಚಾಯಿತಿ ಆಡಳಿತವನ್ನು ಉತ್ತಮಪಡಿಸಲು ಇನ್ನೂ ಹೆಚ್ಚಿನ ಕ್ರಮಗಳ ಅವಶ್ಯಕತೆ ಇದೆ ಎಂಬುದು ಸರ್ಕಾರಕ್ಕೆ ಮನವರಿಕೆಯಾಗಿದೆಯೆ;

ಉ) ಹೌದಾದರೆ ಇದನ್ನು ಎಂದಿನಿಂದ ಜಾರಿಗೊಳಿಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್) :—

ಅ) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ೧೯೯೩ ಉಪಪ್ರಕರಣ ೧೧೩ರನ್ವಯ ೧೧೧ನೇ ಮತ್ತು ೧೧೨ನೇ ಪ್ರಕರಣಗಳ ಉಪಬಂಧಗಳಿಗೊಳಪಟ್ಟು ಗ್ರಾಮ ಪಂಚಾಯಿತಿಯ ಇತರ ನೌಕರರನ್ನು ನೇಮಕ ಮಾಡಿಕೊಳ್ಳಬಹುದು ಮತ್ತು ಗ್ರಾಮ ಪಂಚಾಯಿತಿಯ ನಿಧಿಯಿಂದ ಅವರ ಸಂಬಳವನ್ನು ಸಂದಾಯ ಮಾಡುವ ಅವಕಾಶ ಕಲ್ಪಿಸಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಗ್ರಾಮ ಪಂಚಾಯಿತಿ ನೌಕರರು ಸ್ಥಳೀಯ ನೌಕರರಾಗಿರುವುದರಿಂದ ಇವರುಗಳನ್ನು ಒಂದು ಪಂಚಾಯಿತಿಯಿಂದ ಇನ್ನೊಂದು ಪಂಚಾಯಿತಿಗೆ ವರ್ಗಾವಣೆ ಮಾಡಲು ಬರುವುದಿಲ್ಲ.

ಈ) ಹೌದು.

ಉ) ಈ ಬಗ್ಗೆ ತಜ್ಞರ ಸಮಿತಿಯನ್ನು (Working Group) ರಚಿಸಲಾಗಿದ್ದು ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು.

ಹೂವಿನ ಹಡಗಲಿ ತಾಲ್ಲೂಕಿನ ಕತ್ತೆಬೆನ್ನೂರು ಇನ್ನಿತರ ಗ್ರಾಮಗಳಿಗೆ ತುಂಗಭದ್ರಾ ನದಿಯಿಂದ ಕುಡಿಯುವ ನೀರಿನ ಯೋಜನೆ.

2538(3337) ಶ್ರೀ ಹಾಲಪ್ಪ ವಿ.ಬಿ. (ಹಡಗಲಿ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಕತ್ತೆಬೆನ್ನೂರು ಗ್ರಾಮಕ್ಕೆ ತುಂಗಭದ್ರ ನದಿಯಿಂದ ಕುಡಿಯುವ ನೀರಿನ ಯೋಜನೆಯ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದುದೆಯೇ; ಹಾಗಿದಲ್ಲಿ ಸರ್ಕಾರದ ಮುಂದಿನ ಕ್ರಮವೇನು;

ಆ. ಹೂವಿನ ಹಡಗಲಿ ತಾಲ್ಲೂಕಿನ ಇದೇ ಯೋಜನೆಗೆ ಜಿಲ್ಲಾ ಪಂಚಾಯಿತಿ ವತಿಯಿಂದ ಎಷ್ಟು ಗ್ರಾಮಗಳ ಪ್ರಸ್ತಾವನೆ ಸರ್ಕಾರಕ್ಕೆ ಬಂದಿರುತ್ತದೆ; ಆ ಗ್ರಾಮಗಳಾವುವು; ಹಾಗಿದ್ದಲ್ಲಿ ಸರ್ಕಾರದ ಮುಂದಿನ ಕ್ರಮವೇನು?

ಶ್ರೀ ಎಂ.ವೈ. ಘೋರ್ಪಡೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್) :—

ಅ) ಕತ್ತೆಬೆನ್ನೂರು ಗ್ರಾಮಕ್ಕೆ ತುಂಗಭದ್ರ ನದಿಯಿಂದ ನೀರು ಪೂರೈಕೆಗಾಗಿ ರೂ.೯೯.೦೦ ಲಕ್ಷ ಮೊತ್ತದ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಅಂದಾಜಿಪಟ್ಟಿಯು ತಾಂತ್ರಿಕ ಪರಿಶೀಲನೆಯಲ್ಲಿದೆ.

ಆ) ಹೂವಿನ ಹಡಗಲಿ ತಾಲ್ಲೂಕಿನ (೧) ಸೋದೇನಹಳ್ಳಿ (೨) ಕಾಲ್ವಿತಾಂಡಾ (೩) ಅಂಕ್ಲಿ ಮತ್ತು (೪) ಹಿರೇಮಲ್ಲಿನಕೆರೆ ಈ ನಾಲ್ಕು ಗ್ರಾಮಗಳಿಗೆ ನೀರು ಪೂರೈಕೆಗಾಗಿ ಅನುಕ್ರಮವಾಗಿ ರೂ. ೨೪.೨೨ ಲಕ್ಷ, ರೂ.೧೫.೫೧ ಲಕ್ಷ, ರೂ.೯.೭೦ ಲಕ್ಷ ಮತ್ತು ರೂ.೨೧.೮೫ ಲಕ್ಷ ಮೊತ್ತದ ಅಂದಾಜುಪಟ್ಟಿಯನ್ನು ತಯಾರಿಸಲಾಗುದ್ದು ಸದರಿ ಅಂದಾಜುಪಟ್ಟಿಗಳು ತಾಂತ್ರಿಕ ಪರಿಶೀಲನೆಯಲಿವೆ.

ಹೂವಿನ ಹಡಗಲಿ ತಾಲ್ಲೂಕಿನಲ್ಲಿ ಹೊಸ ಪ್ರೌಢಶಾಲೆ ಪ್ರಾರಂಭಿಸುವುದು

2540(3339) ಶ್ರೀ ಹಾಲಪ್ಪ ವಿ.ಬಿ. (ಹಡಗಲಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹೂವಿನ ಹಡಗಲಿ ತಾಲ್ಲೂಕಿನಲ್ಲಿ ಉರ್ದು ಬಾಲಕಿಯರ ಪ್ರೌಡಶಾಲೆಗಳನ್ನು ಇದೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಕೋರಿ ಬಂದ ಪ್ರಸ್ತಾವನೆಗಳು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದಲ್ಲಿ ಅವು ಯಾವುವು?

ಆ) ಎಷ್ಟು ಗ್ರಾಮಗಳಿಗೆ ನೂತನ ಪ್ರೌಢಶಾಲೆಗಳನ್ನು ತೆರೆಯಲು ಇಚ್ಛಿಸಲಾಗಿದೆ? ಅವುಗಳು ಯಾವುವು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಬಂದಿಲ್ಲ.

ಆ) ಸರ್ಕಾರಿ ಆದೇಶ ಸಂಖ್ಯೆ : ಇಡಿ 67 ಎಸ್.ಇ.ಎಸ್. 2001 ದಿ: 10.7.2001ರಲ್ಲಿ ಪಶ್ಚಿಮಕಾಲ್ದಿ ಮತ್ತು ನಂದೇಹಳ್ಳಿ ಗ್ರಾಮಗಳಿಗೆ ಹೊಸದಾಗಿ ತೆರೆಯಲು ಅನುಮತಿ ನೀಡಲಾಗಿದೆ.

ಸಿಂಧನೂರು ಕ್ಷೇತ್ರದಲ್ಲಿ ಸರ್ಕಾರಿ ಪ್ರೌಢಶಾಲೆ ಹಾಗೂ ಟಿ.ಸಿ.ಎಚ್ ತರಬೇತಿ ಕೇಂದ್ರಗಳ ಮಂಜೂರಾತಿ

2541 (2918) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) 2001-02 ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವ ಉದೇಶ ಸರ್ಕಾರಕ್ಕೆ ಇದೆಯಾ; ಹಾಗಿದ್ದಲ್ಲಿ ಸಿಂಧನೂರು ಕ್ಷೇತ್ರದ ರಾಗಲಪರ್ವಿ ಗ್ರಾಮ ಗಿಣ್ಣಿಗಿ ಗ್ರಾಮ, ಬೂದಿಹಾಳ್ ಕ್ಯಾಂಪ್ ಈ ಗ್ರಾಮಗಳಿಗೆ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡಲು ಇಲಾಖೆಯಿಂದ ಪ್ರಸ್ತಾವನೆ ಬಂದಿದೆಯೆ;

2) ರಾಜ್ಯದಲ್ಲಿ ಟಿ.ಸಿ.ಎಚ್ ಟಿ.ಸಿ.ಎಚ್ ತರಬೇತಿ ಕೇಂದ್ರಗಳನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೆ; ಇದ್ದಲ್ಲಿ ಪ್ರಸ್ತಾವನೆಗಳು ಯಾವ ಯಾವ ಜಿಲ್ಲೆಯಲ್ಲಿ ಬಂದಿವೆ; ಮಂಜೂರು ಮಾಡಲು ಹಾಕಿರುವ ಮಾನದಂಡವೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

1) ಹೌದು.

ಪ್ರಸ್ತಾವನೆ ಬಂದಿಲ್ಲ

2) ಇದೆ. ಬಹುತೇಕ ಜಿಲ್ಲೆಗಳಿಂದ ಪ್ರಸ್ತಾವನೆ ಬಂದಿದ್ದು ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸುವ ಬಗ್ಗೆ ಮಾರ್ಗ ಸೂಚಿಗಳನ್ನು ರೂಪಿಸಲಾಗುತ್ತಿದೆ.

ಹಾಸನ ವಿಧಾನಸಭಾ ಕ್ಷೇತ್ರದ ಶಾಲಾ ಕಟ್ಟಡಗಳ ದುರಸ್ತಿ

2542 (2921) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಹಾಸನ ವಿಧಾನಸಭಾ ಕ್ಷೇತ್ರದ ಕಸಬಾ, ಕಟ್ಟಾಯ, ಶಾಂತಿಗ್ರಾಮ ಹೋಬಳಿಗಳಲ್ಲಿ ಕಳೆದ ವರ್ಷದ ಅತಿವೃಷ್ಟಿಯಿಂದ ಎಷ್ಟು ಶಾಲಾ ಕಟ್ಟಡಗಳು ಜಖಂ ಆಗಿವೆ; ವಿವರ ನೀಡುವುದು;

(ಆ) ಇಂತಹ ಕಟ್ಟಡಗಳಲ್ಲಿ ಮಕ್ಕಳು ವಿದ್ಯಾಭ್ಯಾಸವನ್ನು ಮಾಡುವುದು ಅಪಾಯಕಾರಿ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

(ಇ) ಇಂತಹ ಕಟ್ಟಡಗಳನ್ನು ಆಧ್ಯತೆ ಮೇರೆಗೆ ದುರಸ್ತಿ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

(ಅ) ಹಾಸನ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅತೀವೃಷ್ಟಿಯಿಂದ ಜಖಂ ಆದ ಶಾಲಾ ಕಟ್ಟಡಗಳು ಯಾವುದು ಇರುವುದಿಲ್ಲ.

(ಆ) ಪ್ರಶ್ನೆ ಉದ್ಭವಿಸುವುದಿಲ್ಲ.

(ಇ) ಇಂತಹ ಯಾವುದೇ ಪ್ರಕರಣ ಇರುವುದಿಲ್ಲ.

ಹಾಸನ ತಾಲ್ಲೂಕಿನಲ್ಲಿ ಕೆರೆಗಳ ದುರಸ್ತಿ

2543(2922) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ವರ್ಷದ ಅತಿವೃಷ್ಟಿಯಿಂದ ಹಾಸನ ವಿಧಾನ ಸಭಾ ಕ್ಷೇತ್ರದ ಕಸಬಾ ಕಟ್ಟಾಯ ಶಾಂತಿಗ್ರಾಮ ಹೋಬಳಿಗಳಲ್ಲಿ ನೂರು ಎಕರೆಗೂ ಕಡಿಮೆ ಅಚ್ಚುಕಟ್ಟು ಇರುವ ಹಾಗೂ ಹಾಸನ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಸೇರಿದ 100ಕ್ಕೂ ಮೇಲ್ಪಟ್ಟ ಕೆರೆಗಳು ಒಡೆದು ಹೋಗಿರುವುದು ನಿಜವಲ್ಲವೇ;

ಆ) ಅವುಗಳ ಪೈಕಿ ಸುಮಾರು 60 ಕೆರೆಗಳನ್ನು ಹಾಸನ ಜಿಲ್ಲಾ ಪಂಚಾಯತ್ ರಿಪೇರಿ ಮಾಡಿ ರೈತರಿಗೆ ಅನುಕೂಲ ಕಲ್ಪಿಸಿಕೊಟ್ಟಿರುವುದು ನಿಜವಲ್ಲವೇ;

ಇ) ಕಳೆದ ವರ್ಷದ ಮಳೆಯಲ್ಲಿ ಒಡೆದು ಹೋಗಿರುವ ಕೆರೆಗಳ ಪೈಕಿ ಇನ್ನೆಷ್ಟು ಕೆರೆಗಳು ರಿಪೇರಿಯಾಗಬೇಕಾಗಿರುವುದು ನಿಜವಲ್ಲವೇ;

ಈ) ಈ ಕೆರೆಗಳ ರಿಪೇರಿಗೆ 15 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿ ತಕ್ಷಣ ರಿಪೇರಿ ಮಾಡಲು ಆದೇಶಿಸಿರುವುದು ನಿಜವಲ್ಲವೇ;

ಉ) ರೈತರ ಹಿತದೃಷ್ಟಿಯಿಂದ ಈ ಕೆರೆಗಳನ್ನು ತಕ್ಷಣ ದುರಸ್ತಿಮಾಡಿ ಈ ವರ್ಷ ಬೆಳೆ ಬೆಳೆಯಲು ಹಾಸನ ಜಿಲ್ಲಾ ಪಂಚಾಯತ್‌ರವರು ಕಲ್ಪಿಸಿಕೊಡುವರೆ?

F-20-ii

ಶ್ರೀ ಎಂ.ವೈ. ಘೋರ್ಪಡೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್) :—

ಅ) ನಿಜ. ಕಳೆದ ಸಾಲಿನಲ್ಲಿ ಅತಿವೃಷ್ಟಿಯಿಂದ ಹಾಸನ ವಿಧಾನ ಸಭಾ ಕ್ಷೇತ್ರದ ಕಸಬಾ ಕಟ್ಟಾಯ ಶಾಂತಿಗ್ರಾಮ ಹೋಬಳಿಯಲ್ಲಿ 107 ಕೆರೆಗಳು ಹಾನಿಗೊಳಗಾಗಿರುತ್ತವೆ.

ಆ) ನಿಜ. ಮೇಲಿನ ಕೆರೆಗಳ ಪೈಕಿ 67 ಕೆರೆಗಳ ದುರಸ್ತಿ ಕಾಮಗಾರಿಗಳನ್ನು ಕೈಗೊಂಡಿದ್ದು ಕಾಮಗಾರಿಯು ಬಹುತೇಕ ಮುಗಿಯುವ ಹಂತದಲ್ಲಿದೆ. (ಒಟ್ಟು ಅಂದಾಜು ಮೊತ್ತ ರೂ. 24.00 ಲಕ್ಷ)

ಇ) ನಿಜ. ಉಳಿದ 40 ಕೆರೆಗಳನ್ನು ದುರಸ್ತಿ ಮಾಡಬೇಕಾಗಿದೆ.

ಈ) ಈ ಕೆರೆಗಳ ದುರಸ್ತಿಗೆ ಸಂಬಂಧಿಸಿದಂತೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಈ ಕೆರೆಗಳ ದುರಸ್ತಿಗೆ ಸಂಬಂಧಿಸಿದಂತೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಹಾಸನ ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆ ಫಲಿತಾಂಶದಲ್ಲಿ ಇಳಿಮುಖ

2544(2923) ಶ್ರೀ ಹನುಮೇಗೌಡ ಕೆ.ಹೆಚ್. (ಹಾಸನ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಾಸನ ಜಿಲ್ಲೆಯಲ್ಲಿ ಎಷ್ಟು ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶ ಶೇ.೪೦ಕ್ಕಿಂತಲೂ ಕಡಿಮೆ ಬಂದಿರುವ ಶಾಲೆಗಳ ವಿವರ ನೀಡುವುದು;

ಆ) ಈ ರೀತಿ ಫಲಿತಾಂಶ ಕಡಿಮೆ ಬರಲು ಕಾರಣವೇನು, ವಿವರ ನೀಡುವುದು;

ಇ) ಈ ರೀತಿ ತೀರ ಕಡಿಮೆ ಫಲಿತಾಂಶ ಬಂದಿರುವ ಸರ್ಕಾರಿ ಪ್ರೌಢಶಾಲೆಗಳ ಉಪಾಧ್ಯಾಯರುಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು)

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ೧೦೭ ಸರ್ಕಾರಿ ಪ್ರೌಢಶಾಲೆಗಳಲ್ಲಿ ಶೇ.೪೦ ಕ್ಕಿಂತಲೂ ಕಡಿಮೆ ಫಲಿತಾಂಶ ಇದೆ. ಶಾಲೆಗಳ ವಿವರದ ಪಟ್ಟಿ ಲಗತ್ತಿಸಿದೆ.

ಆ) ಮಕ್ಕಳು ಅಭ್ಯಾಸದಲ್ಲಿ ಹಿಂದುಳಿಯುವಿಕೆ.

ಇ) ಶಿಕ್ಷಕರ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. ತೀರ ಕಡಿಮೆ ಫಲಿತಾಂಶ ಬಂದಿರುವ ಸರ್ಕಾರಿ ಪ್ರೌಢ ಶಾಲೆಗಳ ಉಪಾಧ್ಯಾಯರುಗಳಿಗೆ ಸಿ.ಟಿ.ಇ. ಹಾಗೂ ಪ್ರಶ್ನೆ ಬ್ಯಾಂಕ್ ಮುಖಾಂತರ ಉತ್ತಮ ತರಬೇತಿ ನೀಡಿ ಪರಿಣಾಮಕಾರಿಯಾಗಿ ಬೋಧನಾ ಗುಣಮಟ್ಟವನ್ನು ಉತ್ತಮಪಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಹಾಸನ ಜಿಲ್ಲೆಯಲ್ಲಿನ ಸರ್ಕಾರಿ ಪ್ರೌಢಶಾಲೆಗಳಲ್ಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ವಿವರ		
1)	ಸರ್ಕಾರಿ ಪ್ರೌಢಶಾಲೆ ಮಕೀನಹಳ್ಳಿ, ಹೊಳೇನರಸೀಪುರ	8.323
2)	ಸರ್ಕಾರಿ ಪ್ರೌಢಶಾಲೆ ಬೈಲಹಳ್ಳಿ, ಸಾಲಾಗಮೇ ಹೋಬಳಿ	8.895
3)	ಸರ್ಕಾರಿ ಪ್ರೌಢಶಾಲೆ, ಹರಿಹರಪುರ, ಹೊಳೇನರಸೀಪುರ	8.823
4)	ಸರ್ಕಾರಿ ಕಿರಿಯ ಕಾಲೇಜು, ಹಿರೀಸಾವೆ, ಚೆನ್ನರಾಯಪಟ್ಟಣ	8.974
5)	ಸರ್ಕಾರಿ ಪ್ರೌಢಶಾಲೆ, ಬೆನ್ನೂರು, ಬೇಲೂರು ತಾ:	9.259
6)	ಸರ್ಕಾರಿ ಪ್ರೌಢಶಾಲೆ, ಮಾವನೂರು, ಹೊಳೇನರಸೀಪುರ	9.302
7)	ಸರ್ಕಾರಿ ಪ್ರೌಢಶಾಲೆ, ಬೆಳವಾಡಿ, ಅರಕಲಗೂಡು	10.256
8)	ಸರ್ಕಾರಿ ಕಿರಿಯ ಕಾಲೇಜು, ಬೆಳಗುಂದ, ಅರಸೀಕೆರೆ	11.111
9)	ಸರ್ಕಾರಿ ಪ್ರೌಢಶಾಲೆ, ಹಿರಿಹಳ್ಳಿ, ಕೊಪ್ಪಲು, ಹೊಳೇನರಸೀಪುರ	11.764
10)	ಸರ್ಕಾರಿ ಪ್ರೌಢಶಾಲೆ, ತಾಸನಹಳ್ಳಿ, ಹೊಳೇನರಸೀಪುರ	12.195
11)	ಸರ್ಕಾರಿ ಪ್ರೌಢಶಾಲೆ, ಹನುಮಂತಪುರ, ಹಾಸನ ತಾ:	13.333

1	2	3
12)	ಸರ್ಕಾರಿ ಹೆಣ್ಣುಮಕ್ಕಳ ಪ್ರೌಢಶಾಲೆ, ಹೊಳೇನರಸೀಪುರ	13.559
13)	ಸರ್ಕಾರಿ ಪ್ರೌಢಶಾಲೆ ಹೆಬ್ಬಲೆ, ಅರಕಲಗೂಡು.	14.093
14)	ಸರ್ಕಾರಿ ಪ್ರೌಢಶಾಲೆ, ಕಟ್ಟೇಪುರ, ಅರಕಲಗೂಡು.	14.285
15)	ಸರ್ಕಾರಿ ಕಿರಿಯ ಕಾಲೇಜು, ಜಾವಗಲ್, ಅರಸೀಕೆರೆ	14.048
16)	ಸರ್ಕಾರಿ ಕಿರಿಯ ಕಾಲೇಜು, ಮಲ್ಲಿಪಟ್ನ, ಅರಕಲಗೂಡು.	15.384
17)	ಸರ್ಕಾರಿ ಪ್ರೌಢಶಾಲೆ, ಸಂತೇಕೊಪ್ಪಲು	15.789
18)	ಸರ್ಕಾರಿ ಕಿರಿಯ ಕಾಲೇಜು, ಕೊಳೇಕೋಟೆ, ಮಾವಿನಕೆರೆ	15.873
19)	ಸರ್ಕಾರಿ ಕಿರಿಯ ಕಾಲೇಜು, ಶ್ರೀನಿವಾಸಪುರ, ಚೆನ್ನರಾಯಪಟ್ಟಣ	16.216
20)	ಸರ್ಕಾರಿ ಪ್ರೌಢಶಾಲೆ, ಸಿದ್ದಾಪುರ ಗೇಟ್, ಕೊನ್ನೂರು ಹೊಬಳಿ	16.279
21)	ಸರ್ಕಾರಿ ಕಿರಿಯ ಕಾಲೇಜು, ಚಳ್ಳಿ, ಮೈಸೂರು, ಹೊಳೇನರಸೀಪುರ	16.379
22)	ಸರ್ಕಾರಿ ಹೆಣ್ಣುಮಕ್ಕಳ ಪ್ರೌಢಶಾಲೆ ಶ್ರವಣ ಬೆಳಗೊಳ	17.500

1	2	3
23)	ಸರ್ಕಾರಿ ಪ್ರೌಢಶಾಲೆ ಮುದ್ದಲ ಹಿಪ್ಪೆ, ಹೊಳೇನರಸೀಪುರ	18.421
24)	ಸರ್ಕಾರಿ ಕಿರಿಯ ಕಾಲೇಜು, ಮೊಬಾಸಳೆ ಹೊಸಳ್ಳಿ, ಹಾಸನ ತಾಲ್ಲೂಕು	18.584
25)	ಕಿರಿಯ ಕಾಲೇಜು, (ಗ್ರಾಮಾಂತರ) ಚಂದೇನಹಳ್ಳಿ ಗೇಟ್, ಅರಸೀಕೆರೆ ತಾ:	18.604
26)	ಸರ್ಕಾರಿ ಪ್ರೌಢಶಾಲೆ ನೇರಲಿಗಲ್ಲಿ ಅರಸೀಕೆರೆ	18.750
27)	ಸರ್ಕಾರಿ ಪ್ರೌಢಶಾಲೆ ತಾಲಾ ಕೋರೆ, ಅರಸೀಕೆರೆ	20.689
28)	ಸರ್ಕಾರಿ ಪ್ರೌಢಶಾಲೆ ಸಂಕನಹಳ್ಳಿ, ಹೊಳೇನರಸೀಪುರ	21.568
29)	ಸರ್ಕಾರಿ ಕಿರಿಯ ಕಾಲೇಜು ಅರಕಲಗೂಡು	23.255
30)	ಸರ್ಕಾರಿ ಪ್ರೌಢಶಾಲೆ, ಯಳ್ಳೇಶಪುರ, ಹೊಳೇನರಸೀಪುರ	23.728
31)	ಸರ್ಕಾರಿ ಕಿರಿಯ ಕಾಲೇಜು ಕುಂದೂರು ಮಟ, ಸಿ.ಎನ್.ಪಟ್ಟಣ	24.324
32)	ಸರ್ಕಾರಿ ಪ್ರೌಢಶಾಲೆ, ಜಟ್ಟೇನಹಳ್ಳಿ, ಸಂಧ್ಯಾ ಮೈದಾನ, ಸಿ.ಎನ್.ಪಟ್ಟಣ	24.509
33)	ಸರ್ಕಾರಿ ಕಿರಿಯ ಕಾಲೇಜು ಸಂತೇಪೇಟೆ, ಹಾಸನ	25.000

1	2	3
34)	ಸರ್ಕಾರಿ ಹೆಣ್ಣುಮಕ್ಕಳ ಕಿರಿಯ ಕಾಲೇಜು ಅರಕಲಗೂಡು	25.000
35)	ಸರ್ಕಾರಿ ಪ್ರೌಢಶಾಲೆ ಸಗರನಹಳ್ಳಿ, ಹೊಳೇನರಸೀಪುರ	25.000
36)	ಸರ್ಕಾರಿ ಕಿರಿಯ ಕಾಲೇಜು ಹಗರೆ, ಬೇಲೂರು	25.185
37)	ಸರ್ಕಾರಿ ಕಿರಿಯ ಕಾಲೇಜು ದೊಡ್ಡಮಗ್ಗೆ, ಅರಕಲಗೂಡು	25.490
38)	ಸರ್ಕಾರಿ ಪ್ರೌಢಶಾಲೆ ಬನ್ನೂರು, ಅರಕಲಗೂಡು	25.806
39)	ಹೆಚ್.ಎಂ.ಎಸ್ ಸರ್ಕಾರಿ ಕಿರಿಯ ಕಾಲೇಜು ಬಸವಾಪಟ್ಟಣ, ಅರಕಲಗೂಡು	26.000
40)	ಸರ್ಕಾರಿ ಪ್ರೌಢಶಾಲೆ ಅಟ್ಟೋಣಹಳ್ಳಿ ಕ್ರಾಸ್, ಚೆನ್ನರಾಯಪಟ್ಟಣ	26.086
41)	ಸರ್ಕಾರಿ ಪ್ರೌಢಶಾಲೆ ಹರವನಹಳ್ಳಿ, ಹೆಚ್.ಎನ್. ಪುರ ತಾ:	
42)	ಸರ್ಕಾರಿ ಪ್ರೌಢಶಾಲೆ ಸೋಮನಹಳ್ಳಿ, ಹೊಳೇನರಸೀಪುರ	26.666
43)	ಸರ್ಕಾರಿ ಪ್ರೌಢಶಾಲೆ ಕರಗುಂದ, ಅರಸೀಕೆರೆ ತಾ:	27.272
44)	ಸರ್ಕಾರಿ ಪ್ರೌಢಶಾಲೆ ಹಂಡ್ರಂಗಿ ಅರಕಲಗೂಡು ತಾ:	27.027

1	2	3
45)	ಸರ್ಕಾರಿ ಪ್ರೌಢಶಾಲೆ ದೊಮ್ಮಸಂಗಲ ಚೆನ್ನರಾಯಪಟ್ಟಣ ತಾ:	27.586
46)	ಸರ್ಕಾರಿ ಪ್ರೌಢಶಾಲೆ ಬೇಲೂರು	27.571
47)	ಸರ್ಕಾರಿ ಪ್ರೌಢಶಾಲೆ : ಸರ್ಕಾರಿ ಕಿರಿಯ ಕಾಲೇಜು ಹೊಳೇನರಸೀಪುರ	28.643
48)	ಸರ್ಕಾರಿ ಪ್ರೌಢಶಾಲೆ : ಸರ್ಕಾರಿ ಕಿರಿಯ ಕಾಲೇಜು ಹಳೇಬೀಡು	28.682
49)	ಸರ್ಕಾರಿ ಕಿರಿಯ ಕಾಲೇಜು ಹೆತ್ತುರ್, ಸಕಲೇಶಪುರ ತಾ:	28.846
50)	ಸರ್ಕಾರಿ ಪ್ರೌಢಶಾಲೆ ಕಾಲು ಇಲೂರು ತಾ:	29.166
51)	ಸರ್ಕಾರಿ ಜ್ಯೂನಿಯರ್ ಕಾಲೇಜು ಗಂಡಸಿ, ಸಂಡೆ ಮೇಡನ್ ಅರಸೀಕೆರೆ ತಾ:	29.268
52)	ಸರ್ಕಾರಿ ಜ್ಯೂನಿಯರ್ ಕಾಲೇಜು ಕಟ್ಟಾಯ್ಯ, ಹಾಸನ ತಾ:	30.392
53)	ಸರ್ಕಾರಿ ಪ್ರೌಢಶಾಲೆ ಕಲ್ಯಾಡಿ ಅರಸೀಕೆರೆ ತಾ:	30.434
54)	ಸರ್ಕಾರಿ ಜ್ಯೂನಿಯರ್ ಕಾಲೇಜು ಆಲೂರು	30.534
55)	ಸರ್ಕಾರಿ ಪ್ರೌಢಶಾಲೆ ಮುದುಡಿ, ಅರಸೀಕೆರೆ ತಾ:	30.952

1	2	3
56)	ಸರ್ಕಾರಿ ಪ್ರೌಢಶಾಲೆ ಆಂಕಾಪುರ, ಹಾಸನ ಜಿಲ್ಲೆ	30.952
57)	ಸರ್ಕಾರಿ ರೂರಲ್ ಜ್ಯೂನಿಯರ್ ಕಾಲೇಜು ಬೈಚನಹಳ್ಳಿ, ಅರಕಲಗೂಡು ತಾ:	30.985
58)	ಸರ್ಕಾರಿ ಜ್ಯೂನಿಯರ್ ಕಾಲೇಜು ರಾಯರಕೊಪ್ಪ, ಆಲೂರು ತಾ:	31.496
59)	ಸರ್ಕಾರಿ ಜ್ಯೂನಿಯರ್ ಕಾಲೇಜು (ಬಾಲಕರ) ಹೊಳೇನರಸೀಪುರ	31.707
60)	ಸರ್ಕಾರಿ ಜ್ಯೂನಿಯರ್ ಕಾಲೇಜು ನುಗ್ಗೆಹಳ್ಳಿ,	31.816
61)	ಸರ್ಕಾರಿ ಪ್ರೌಢಶಾಲೆ (ಬಾಯ್ಸ್) ಅಟ್ಟಾವರ ಹೊಸಹಳ್ಳಿ ಹಾಸನ ತಾ:	32.000
62)	ಸರ್ಕಾರಿ ಪ್ರೌಢಶಾಲೆ ಕಾಮತ್ ಕೂಡಿಗೆ ಆಲೂರು ತಾ:	32.432
63)	ಸರ್ಕಾರಿ ಪ್ರೌಢಶಾಲೆ ಚಿಕ್ಕಸಲು, ಹಾಸನ	32.500
64)	ಸರ್ಕಾರಿ ಪ್ರೌಢಶಾಲೆ ಶಿಗ್ಗೆ, ಹಾಸನ ತಾ:	33.333
65)	ಸರ್ಕಾರಿ ಪ್ರೌಢಶಾಲೆ ಎಲಚಿಗಹಳ್ಳಿ, ಹೊಳೇನರಸೀಪುರ ತಾ:	33.333
66)	ಸರ್ಕಾರಿ ಪ್ರೌಢಶಾಲೆ ದೊಡ್ಡಕಡಗಲ ಹಾಸನ ಜಿಲ್ಲೆ	34.148

1	2	3
67)	ಸರ್ಕಾರಿ ಪ್ರೌಢಶಾಲೆ ಗೆಂತೇಹಳ್ಳಿ, ಬೇಲೂರು ತಾ:	34.615
68)	ಸರ್ಕಾರಿ ಜ್ಯೂನಿಯರ್ ಕಾಲೇಜು ಸಕಲೇಶಪುರ	34.668
69)	ಸರ್ಕಾರಿ ಪ್ರೌಢಶಾಲೆ ದೊಡ್ಡಹಳ್ಳಿ,	35.105
70)	ಸರ್ಕಾರಿ ಪ್ರೌಢಶಾಲೆ ಚಿಕ್ಕಕಣಗಲು ಆಲೂರು ತಾ:	35.294
71)	ಸರ್ಕಾರಿ ಪ್ರೌಢಶಾಲೆ ಹುರುಡಿ ಸಕಲೇಶಪುರ ತಾ:	35.294
72)	ಸರ್ಕಾರಿ ಪ್ರೌಢಶಾಲೆ ಬಾಗೇಶಪುರ, ಅರಸೀಕೆರೆ ತಾ:	35.714
73)	ಸರ್ಕಾರಿ ಜ್ಯೂನಿಯರ್ ಕಾಲೇಜು (ಬಾಲಕರ) ಹಾಸನ	35862
74)	ಸರ್ಕಾರಿ ಪ್ರೌಢಶಾಲೆ ದೊಡ್ಡಕಣಗಲು ಆಲೂರು ತಾ:	37.037
75)	ಸರ್ಕಾರಿ ಪ್ರೌಢಶಾಲೆ ಬಿದರೆ, ಚನ್ನರಾಯಪಟ್ಟಣ ತಾ:	37.142
76)	ಸರ್ಕಾರಿ ಜ್ಯೂನಿಯರ್ ಕಾಲೇಜು ಪಡುವಲಹಿಪ್ಪೆ, ಹೊಳೇನರಸೀಪುರ ತಾ:	37.288
77)	ಸರ್ಕಾರಿ ಜ್ಯೂನಿಯರ್ ಕಾಲೇಜು ಶ್ರವಣಬೆಳಗೊಳ	37.500

1	2	3
78)	ಸರ್ಕಾರಿ ಪ್ರೌಢಶಾಲೆ ಅಲ್ಲೂರು, ಅರಕಲಗೂಡು ತಾ:	37.931
79)	ಸರ್ಕಾರಿ ಪ್ರೌಢಶಾಲೆ (ಹುಡುಗಿಯರು) ಅರಸೀಕೆರೆ	38.121
80)	ಸರ್ಕಾರಿ ಪ್ರೌಢಶಾಲೆ ಕೆನಿಕೆರೆ, ಅರಸೀಕೆರೆ ತಾ:	38.181
81)	ಜ್ಯೂನಿಯರ್ ಕಾಲೇಜು (ಸರ್ಕಾರಿ) ಸಾಲಿಗ್ರಾಮ, ಹಾಸನ ತಾ:	39.215
82)	ಸರ್ಕಾರಿ ಪ್ರೌಢಶಾಲೆ ಕೆರೆಗೋಡು, ಹೊಳೇನರಸೀಪುರ ತಾ:	40.909
83)	ಸರ್ಕಾರಿ ಪ್ರೌಢಶಾಲೆ ದೊಡ್ಡಬೆಮ್ಮತ್ತಿ, ಅರಕಲಗೂಡು ತಾ:	41.025
84)	ಸರ್ಕಾರಿ ಪ್ರೌಢಶಾಲೆ ಗುರಪುರನಹಳ್ಳಿ, ಚೆನ್ನರಾಯಪಟ್ಟಣ ತಾ:	41.170
85)	ಸರ್ಕಾರಿ ಪ್ರೌಢಶಾಲೆ ಚಿಕ್ಕೇರು, ಅರಸೀಕೆರೆ ತಾ:	41.379
86)	ಸರ್ಕಾರಿ ಪ್ರೌಢಶಾಲೆ ಹಂಗರಹಳ್ಳಿ, ಹೊಳೇನರಸೀಪುರ ತಾ:	41.686
87)	ಸರ್ಕಾರಿ ಜ್ಯೂನಿಯರ್ ಕಾಲೇಜು ಗಾರನಹಳ್ಳಿ, ಅರಸೀಕೆರೆ ತಾ:	41.791
88)	ಸರ್ಕಾರಿ ಪ್ರೌಢಶಾಲೆ, ಕೊಲಗುಂದ, ಅರಸೀಕೆರೆ ತಾ:	41.935

1	2	3
89)	ಸರ್ಕಾರಿ ಪ್ರೌಢಶಾಲೆ : ಜ್ಯೂನಿಯರ್ ಕಾಲೇಜು ಬಾಣಾವರ ಅರಸೀಕೆರೆ ತಾ:	42.105
90)	ಸರ್ಕಾರಿ ಪ್ರೌಢಶಾಲೆ ಬೇಲೂರು ತಾ:	42.105
91)	ಸರ್ಕಾರಿ ಪ್ರೌಢಶಾಲೆ, ಮುರಂಡಿ, ಅರಸೀಕೆರೆ ತಾ:	42.105
92)	ಸರ್ಕಾರಿ ಪ್ರೌಢಶಾಲೆ, ನಿಡುವಣಿ ಹೊಳೇನರಸೀಪುರ ತಾ:	42.372
93)	ಸರ್ಕಾರಿ ಪ್ರೌಢಶಾಲೆ ಚಿಕ್ಕಕಡಲೂರು ಹಾಸನ ತಾ:	43.243
94)	ಸರ್ಕಾರಿ ಪದವಿ ಪೂರ್ವ ಕಾಲೇಜು ಕಲ್ಲುಸಾದರ ಹಳ್ಳಿ, ಅರಸೀಕೆರೆ ತಾ:	43.323
95)	ಸರ್ಕಾರಿ ಪ್ರೌಢಶಾಲೆ (ಹುಡುಗರ) ಹಿರೀಸಾವೆ	43.396
96)	ಸರ್ಕಾರಿ ಪ್ರೌಢಶಾಲೆ ಚುಂಗಡಹಳ್ಳಿ	43.410
97)	ಸರ್ಕಾರಿ ಜ್ಯೂನಿಯರ್ ಕಾಲೇಜು ಉದಯಪುರ	43.529
98)	ಸರ್ಕಾರಿ ಪ್ರೌಢಶಾಲೆ ಗನ್ನಿವರ	43.750
99)	ಸರ್ಕಾರಿ ಪ್ರೌಢಶಾಲೆ ಬಸವನಘಟ್ಟ	43.902

1	2	3
100)	ಸರ್ಕಾರಿ ಪ್ರೌಢಶಾಲೆ ದೊಡ್ಡಕೋಡಿಹಳ್ಳಿ, ಬೇಲೂರು ತಾ:	44.444
101)	ಸರ್ಕಾರಿ ಪ್ರೌಢಶಾಲೆ ಪಡುವರಹಳ್ಳಿ, ಚೆನ್ನರಾಯಪಟ್ಟಣ ತಾ:	44.444
102)	ಸರ್ಕಾರಿ ಪ್ರೌಢಶಾಲೆ ಬಿ.ಎಂ. ರೋಡ್ ಹಾಸನ	44.897
103)	ಸರ್ಕಾರಿ ಪ್ರೌಢಶಾಲೆ ದಾಸರಕೊಪ್ಪಲು	45.101
104)	ಸರ್ಕಾರಿ ಪ್ರೌಢಶಾಲೆ, ಗವ್ವೇನಹಳ್ಳಿ,	46.666
105)	ಸರ್ಕಾರಿ ಪ್ರೌಢಶಾಲೆ ಕೂಡೂರು, ಆಲೂರು ತಾ:	47.540
106)	ಸರ್ಕಾರಿ ಪ್ರೌಢಶಾಲೆ ಹಂದೂರು ಆಲೂರು ತಾ:	47.619
107)	ಸರ್ಕಾರಿ ಪ್ರೌಢಶಾಲೆ ಕಲ್ಲಹಳ್ಳಿ	47.777

ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದು

2546 (2990) ಹೊನ್ನಳ್ಳಿ ಜಬ್ಬಾರ್ ಖಾನ್ ಹಯತ್ ಖಾನ್ (ಹುಬ್ಬಳ್ಳಿ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯದಲ್ಲಿರುವ ಎಷ್ಟು ಸರ್ಕಾರಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಲು ವಿಶ್ವಬ್ಯಾಂಕ್‌ನಿಂದ ಎಷ್ಟು ಹಣವನ್ನು ಪಡೆಯಲಾಗಿದೆ?

ಆ. ವಿಶ್ವಬ್ಯಾಂಕ್‌ನಿಂದ ಇದುವರೆವಿಗೆ ಬಿಡುಗಡೆಯಾಗಿರುವ ಹಣ ಎಷ್ಟು; ಈ ಆಸ್ಪತ್ರೆಗಳ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ?

ಇ. ಸರ್ಕಾರ ನಿರ್ಮಾಣ ಕಾರ್ಯ ಮುಗಿಸಲು ಏನಾದರೂ ಮಾರ್ಗಸೂಚಿ ಅನುಸರಿಸಿದೆಯೇ?

ಈ. ವಿಶ್ವಬ್ಯಾಂಕ್ ವಿಧಿಸಿರುವ ಷರತ್ತುಗಳಿಗೆ ಒಳಪಟ್ಟು ಯಾವುದೇ ಲೋಪವಿಲ್ಲದೆ ನಿರ್ಮಾಣ ಕಾರ್ಯ ನಡೆದಿದೆಯೇ?

ಡಾ. ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ. ರಾಜ್ಯದ ಬೆಂಗಳೂರು-ಮೈಸೂರು ಮತ್ತು ಬೆಳಗಾಂ ಕಂದಾಯ ವಿಭಾಗಗಳ 200 ಹಾಗೂ ಗುಲ್ಬರ್ಗ ವಿಭಾಗದ 4 ಒಟ್ಟು 204 ದ್ವಿತೀಯ ಹಂತದ ಆಸ್ಪತ್ರೆಗಳ ನವೀಕರಣ ಹಾಗೂ ವಿಸ್ತರಣೆಗಾಗಿ ವಿಶ್ವ ಬ್ಯಾಂಕಿನಿಂದ ರೂ.461.00 ಕೋಟಿ ನೆರವನ್ನು ಪಡೆಯಲಾಗುತ್ತಿದೆ.

ಆ. ಇದುವರೆಗೆ ವಿಶ್ವ ಬ್ಯಾಂಕ್‌ನಿಂದ ರೂ.296.57 ಕೋಟಿ (ರೂ.239.90 ಕೋಟಿಗಳು ಕಾಮಗಾರಿಗಳಿಗಾಗಿ) ಬಿಡುಗಡೆಯಾಗಿರುತ್ತದೆ. 140 ಆಸ್ಪತ್ರೆಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದವು ಪ್ರಗತಿಯಲ್ಲಿವೆ. ಯೋಜನಾ ಅವಧಿಯೊಳಗೆ ಇವುಗಳನ್ನು ಪೂರ್ಣಗೊಳಿಸಲಾಗುವುದು.

ಇ) ಕಟ್ಟಡಗಳ ನಿರ್ಮಾಣದ ಬಗ್ಗೆ ಮಾರ್ಗಸೂಚಿಗಳನ್ನು ಹಾಗೂ ಷರತ್ತುಗಳನ್ನು ಗುತ್ತಿಗೆ ಕರಾರು ಪತ್ರದಲ್ಲಿ ನಿಗದಿಪಡಿಸಲಾಗಿದೆ. ಗುತ್ತಿಗೆದಾರರು ಸದರಿ ಷರತ್ತುಗಳಿಗೆ ಒಳಪಟ್ಟು ನಿರ್ಮಾಣ ಕಾರ್ಯವನ್ನು ಮಾಡಬೇಕಾಗಿದೆ. ಹಾಗೂ ಗುತ್ತಿಗೆ ಕರಾರು ಪತ್ರದಲ್ಲಿ ನಿಗಧಿಪಡಿಸಿರುವ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿದೆ. ವುದರಲ್ಲಿ ತಡವಾದರೆ ಕರಾರಿನಂತೆ ದಂಡ ವಿಧಿಸಲಾಗುತ್ತಿದೆ ಹಾಗೂ ಇತರ ದಂಡನೆ ವಿಧಾನಗಳನ್ನು ಅನುಸರಿಸಲಾಗುತ್ತಿದೆ.

ಈ) ಹೌದು.

ಅಂಗವಿಕಲರ ಕಲ್ಯಾಣ ಆಸ್ಪತ್ರೆ ಪ್ರಾರಂಭಿಸುವುದು

2547 (2991) ಹೊನ್ನಳ್ಳಿ ಜಬ್ಬಾರ್ ಖಾನ್ ಹ್ಯಯತ್ ಖಾನ್ (ಹುಬ್ಬಳ್ಳಿ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೆ.ಹೆಚ್.ಎಸ್.ಡಿ.ಪಿ ಯೋಜನೆಯಡಿ ಹುಬ್ಬಳ್ಳಿ ನಗರದಲ್ಲಿ ಅಂಗವಿಕಲರ ಕಲ್ಯಾಣ ಆಸ್ಪತ್ರೆ ಪ್ರಾರಂಭಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಆ) ಇದ್ದಲ್ಲಿ ಯಾವ ವರ್ಷದಿಂದ ಈ ಕೆಲಸ ಪ್ರಾರಂಭ ಮಾಡಲಾಗುವುದು?

ಇ. ಈ ಆಸ್ಪತ್ರೆ ಪ್ರಾರಂಭಸಲಿಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು?

ಈ. ಇಲ್ಲವಾದಲ್ಲಿ ಕಾರಣವೇನು?

ಶ್ರೀ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆಯಡಿ ರಾಜ್ಯದ ಬೆಂಗಳೂರು, ಮೈಸೂರು ಮತ್ತು ಬೆಳಗಾಂ ಕಂದಾಯ ವಿಭಾಗಗಳಲ್ಲಿಯ 200 ಹಾಗೂ ಗುಲ್ಬರ್ಗಾ ವಿಬಾಗದಲ್ಲಿಯ 4 ದ್ವಿತೀಯ ಹಂತದ ಆಸ್ಪತ್ರೆಗಳನ್ನು ನವೀಕರಿಸಿ ಹಾಗೂ ವಿಸ್ತರಣೆಗೊಳಿಸಲಾಗುತ್ತಿದೆ. ಅಂಗವಿಕಲರ ಕಲ್ಯಾಣ ಆಸ್ಪತ್ರೆ ಪ್ರಾರಂಭಿಸುವುದಕ್ಕೆ ಈ ಯೋಜನೆ ಅಡಿಯಲ್ಲಿ ಆಸ್ಪದವಿರುವುದಿಲ್ಲ.

ರಾಜ್ಯದಲ್ಲಿ ಹೊಸದಾಗಿ ಟಿ.ಸಿ.ಹೆಚ್. ಮತ್ತು ಬಿ.ಎಡ್ ಕಾಲೇಜುಗಳ ಮಂಜೂರಾತಿ

2548(2992) ಹೊನ್ನಳ್ಳಿ ಜಬ್ಬಾರ್ ಖಾನ್ ಹ್ಯಯತ್ ಖಾನ್ (ಹುಬ್ಬಳ್ಳಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಹೊಸದಾಗಿ ಟಿ.ಸಿ.ಹೆಚ್. ಮತ್ತು ಬಿ.ಎಡ್ ಕಾಲೇಜುಗಳಿಗೆ ಬೇಡಿಕೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ ಈ ಕಾಲೇಜುಗಳಿಗೆ ಮಂಜೂರಾತಿ ನೀಡುವ ವಿಚಾರ ಸರ್ಕಾರದ ಮುಂದೆ ಇದೆಯೇ;

ಇ) ಇದುವರೆಗೂ ಯಾವ ಯಾವ ಸಂಸ್ಥೆಗಳಿಂದ ಬೇಡಿಕೆ ಬಂದಿರುತ್ತವೆ? (ವಿವರಗಳನ್ನು ನೀಡುವುದು)

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಹೌದು.

ಆ) ಈ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗುತ್ತಿದೆ.

ಇ) ಸಾವಿರಾರು ಸಂಸ್ಥೆಗಳಿಂದ ಬೇಡಿಕೆ ಬಂದಿರುತ್ತವೆ.

ರಾಜ್ಯದಲ್ಲಿ ವಯಸ್ಕರ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುವ ವಿದ್ಯಾಪೀಠಗಳನ್ನು ಪ್ರಾರಂಭಿಸುವುದು

2549(2993) ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) :— ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು ಮತ್ತು ಮುದ್ರಣ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಜಾರಿಗೆ ತರಲಾದ ವಯಸ್ಕರ ಶಿಕ್ಷಣ ಪದ್ಧತಿಯ ಉದ್ದೇಶಗಳೇನು;

ಆ) ಈ ಗುರಿ ಈಡೇರಿದೆಯೇ;

ಇ) ಈ ಪದ್ಧತಿಯನ್ನು ಹೆಚ್ಚು ಅರ್ಥಪೂರ್ಣವಾಗಿ ಜಾರಿಗೆ ತರಲು ಯೋಜನೆ ಸರ್ಕಾರಕ್ಕೆ ಇದೆಯೆ;

ಈ) ಈ ಯೋಜನೆಯಡಿಯಲ್ಲಿ ಎಷ್ಟು ವಿದ್ಯಾಪೀಠಗಳು ಕಾರ್ಯನಿರ್ವಹಿಸುತ್ತಿವೆ;

ಉ) ಈ ವಿದ್ಯಾಪೀಠಗಳನ್ನು ಪೂರ್ಣಕಾಲಿಕವಾಗಿ ಬಳಸಿಕೊಳ್ಳಲು ಅನುವಾಗುವಂತೆ ನಿರುದ್ಯೋಗಿ ಯುವಕರಿಗೆ ತರಬೇತಿ ನೀಡುವ ಆಲೋಚನೆ ಸರ್ಕಾರಕ್ಕೆ ಇದೆಯೇ;

ಊ) ಈ ವಿದ್ಯಾಪೀಠಗಳನ್ನು ಅಭಿವೃದ್ಧಿಪಡಿಸಿ ಉತ್ತಮ ಫಲ ಪಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಾಬುರಾವ್ ಚವ್ಹಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು ಮತ್ತು ಮುದ್ರಣ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು) :—

ಅ) ನಿರಕ್ಷರತೆಯನ್ನು ಹೋಗಲಾಡಿಸಿ ಸಾಕ್ಷರಸ್ತರಿಗೆ ಸ್ವಾವಲಂಬಿಗಳಾಗಿ ಬದುಕಲು ಗ್ರಾಮೀಣ ನಿರುದ್ಯೋಗಿ ಯುವಜನರಿಗೆ ವೃತ್ತಿ ಕೌಶಲ್ಯ ತರಬೇತಿಗೆ ಅವಕಾಶವನ್ನು ಕಲ್ಪಿಸಿ ಕೊಡುವುದು.

ಅ) ಈವರೆಂಕಿಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಇ) ಈ ಪದ್ಧತಿಯನ್ನು ಹೆಚ್ಚು ಅರ್ಥಪೂರ್ಣವಾಗಿ ಜಾರಿಗೆ ತರಲು ರಾಜ್ಯದಲ್ಲಿ ಸಾಕ್ಷರೋತ್ತರ, ಮುಂದುವರಿಕೆ ಶಿಕ್ಷಣ ಮತ್ತು ವೃತ್ತಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಈ) ಪ್ರಸ್ತುತ ಕರ್ನಾಟಕ ರಾಜ್ಯಾದ್ಯಂತ 16 ವಿದ್ಯಾಪೀಠಗಳು ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಉ) ಹೌದು.

ಊ) 1995-96ನೇ ಸಾಲಿನಿಂದ ಉತ್ತಮ ಫಲ ಪಡೆಯಲು ಸರ್ಕಾರವು ಯೋಜನಾ ಬಾಬ್ತಿನಡಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡುತ್ತಿದೆ.

ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಹೆಚ್ಚುವರಿ ಬೋಧನಾ ಕೊಠಡಿಗಳ ನಿರ್ಮಾಣ

2550(2994) ಹೊನ್ನಳ್ಳಿ ಜಬ್ಬಾರ್ ಖಾನ್ ಹ್ಯಯತ್ ಖಾನ್ (ಹುಬ್ಬಳ್ಳಿ) :— ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಬೋಧನಾ ಕೊಠಡಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ. ಹಾಗಿದ್ದಲ್ಲಿ ಹೆಚ್ಚುವರಿ ಬೋಧನಾ ಕೊಠಡಿಗಳನ್ನು ನಿರ್ಮಾಣ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು;

ಇ. 1999-2000, 2000-2001ನೇ ಸಾಲಿನಲ್ಲಿ ಎಷ್ಟು ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲಾಗಿದೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ. ಬಂದಿದೆ.

ಆ. ರಾಜ್ಯದ ಮುಂದುವರೆದ ಯೋಜನಾ ಕಾರ್ಯಕ್ರಮಗಳಡಿಯಲ್ಲಿ 1993-94 ರಿಂದ ಪ್ರತಿ ವರ್ಷವೂ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ.

ಇ. 1999-2000, 2000-2001ನೇ ಸಾಲಿನಲ್ಲಿ ನಿರ್ಮಿಸಲಾದ ಹೆಚ್ಚುರಿ ಕೊಠಡಿಗಳ ಸಂಖ್ಯೆ:

	1999-2000	2000-2001
ಪ್ರಾಥಮಿಕ ಶಿಕ್ಷಣ	4720	6705
ಪ್ರೌಢ ಶಿಕ್ಷಣ	130	21

ರಾಜ್ಯದಲ್ಲಿ ಸ್ವಚ್ಛಗ್ರಾಮ ಯೋಜನೆಯ ಅನುಷ್ಠಾನ

2551 (3001) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯ ಸರ್ಕಾರವು ಹಳ್ಳಿಗಳ ಸಂಪೂರ್ಣ ನೈರ್ಮಲ್ಯಕ್ಕೆ ಒತ್ತು ನೀಡಲು ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ.

ಆ) ಈ ಯೋಜನೆಯಡಿ ಯಾವ ಯಾವ ಕಾಮಗಾರಿಗಳು ಬರುತ್ತವೆ

ಇ) ಈ ಯೋಜನೆಗಾಗಿ ಈವರೆಗೂ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು)

ಈ) ಇಲ್ಲಿಯವರೆಗೂ ಖರ್ಚು ಮಾಡಿರುವ ಹಣದ ಜಿಲ್ಲಾವಾರು ವಿವರ ನೀಡುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :—

ಅ) ರಾಜ್ಯ ಸರ್ಕಾರವು ಗ್ರಾಮಗಳ ಸಂಪೂರ್ಣ ನೈರ್ಮಲೀಕರಣಕ್ಕಾಗಿ ಸ್ವಚ್ಛಗ್ರಾಮ ಯೋಜನೆಯನ್ನು ಹಮ್ಮಿಕೊಂಡಿದೆ.

ಆ) ಸ್ವಚ್ಛಗ್ರಾಮ ಯೋಜನೆಯಡಿ ಈ ಕೆಳಕಂಡ ೫ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತದೆ.

ಅ. ಗ್ರಾಮದ ಒಳರಸ್ತೆ ಮತ್ತು ಬೀದಿಗಳ ಮೇಲ್ಮೈಯನ್ನು ಉತ್ತಮಪಡಿಸುವುದು.

ಆ. ಹೊಳೆ ಮತ್ತು ಮಳೆ ನೀರಿನ ವಿಲೇವಾರಿಗಾಗಿ ಪ್ರತಿ ಬೀದಿಯಲ್ಲಿಯೂ ಚರಂಡಿಗಳ ನಿರ್ಮಾಣ

ಇ. ಸಾಮೂಹಿಕ ಮಿತ್ರ ಗೊಬ್ಬರದ ಅಂಗಳವನ್ನು (ಕಮ್ಯೂನಿಟಿ ಕಾಂಪೋಸ್ಟ್) ಒದಗಿಸಿ ಗ್ರಾಮದ ವಾಸಸ್ಥಳಗಳಿಂದ ತಿಪ್ಪೆಗುಂಡಿಗಳನ್ನು ಸ್ಥಳಾಂತರಿಸುವುದು

ಈ. ಗ್ರಾಮದ ಎಲ್ಲಾ ಮನೆಗಳಿಗೂ ಹೊಗೆರಹಿತ ಒಲೆಗಳನ್ನು ಒದಗಿಸುವುದು

ಉ. ಗ್ರಾಮದ ಎಲ್ಲಾ ಜನತೆಗಾಗಿ, ಕೌಟುಂಬಿಕ ಶೌಚಾಲಯಗಳ : ಶಾಲಾ ಶೌಚಾಲಯಗಳ ನಿರ್ಮಾಣ.

ಇ) ಈ ಯೋಜನೆಯಡಿ ಇಲ್ಲಿಯವರೆಗೆ ಪ್ರತಿ ಜಿಲ್ಲೆಗೆ ರೂ.೧.೦೦ ಕೋಟಿಯಂತೆ ಒಟ್ಟು ರೂ. ೨೭.೦೦ ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಈ) ಸ್ವಚ್ಛಗ್ರಾಮ ಯೋಜನೆಯಡಿ ಈವರೆಗೂ ರೂ. ೨೩.೭೫ ಲಕ್ಷಗಳು ವೆಚ್ಚವಾಗಿದ್ದು ಜಿಲ್ಲಾವಾರು ವೆಚ್ಚದ ವಿವರಗಳು ಕೆಳಕಂಡಂತಿವೆ.

೧.	ಚಿತ್ರದುರ್ಗ	ರೂ. ೧.೦೦ ಲಕ್ಷ
೨.	ಕೋಲಾರ	ರೂ. ೨.೦೦ ಲಕ್ಷ
೩.	ಶಿವಮೊಗ್ಗ	ರೂ. ೧.೭೫ ಲಕ್ಷ
೪.	ಹಾವೇರಿ	ರೂ. ೦.೨೫ ಲಕ್ಷ
೫.	ರಾಯಚೂರು	ರೂ. ೧.೫೦ ಲಕ್ಷ
೬.	ಬಳ್ಳಾರಿ	ರೂ. ೧೫.೦೦ ಲಕ್ಷ
೭.	ಗುಲ್ಬರ್ಗಾ	ರೂ. ೦.೭೫ ಲಕ್ಷ
೮.	ಕೊಪ್ಪಳ	ರೂ. ೧.೫೦ ಲಕ್ಷ

ರಾಜ್ಯದಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಶಾಲೆಗಳಲ್ಲಿ ಶಿಕ್ಷಕರ ಕೊರತೆ

2552 (3002) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಶಾಲೆಗಳಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪ್ರೌಢ ಶಾಲೆಗಳಲ್ಲಿ ಹಾಲಿ ಇರುವ ಶಿಕ್ಷಕರ ಕೊರತೆಯ ವಿಷಯವಾರು ಪಟ್ಟಿ ನೀಡುವುದು (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಶಿಕ್ಷಕರ ಕೊರತೆಯ ನೇಮಕಾತಿಯನ್ನು ಯಾವ ಆಧಾರದ ಮೇಲೆ ನೇಮಕ ಮಾಡಲು ನಿರ್ಧರಿಸಿದೆ? (ವಿವರ ನೀಡುವುದು)

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಬಂದಿದೆ. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು ೧೫,೫೦೦ ಶಿಕ್ಷಕರ ಹುದ್ದೆಗಳು ಹಾಗೂ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ೨೦೦೦ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

ಆ) ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ವಿಷಯವಾರು ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿರುವ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯನ್ನು ಎಸ್.ಎಸ್.ಎಲ್.ಸಿ. : ಪಿಯುಸಿ ಹಾಗೂ ಟಿ.ಸಿ.ಹೆಚ್ ಪರೀಕ್ಷೆಗಳಲ್ಲಿ ಪಡೆದ ಸರಾಸರಿ ಅಂಕಗಳ ಆಧಾರದ ಮೇಲೆ ಅರ್ಹತೆ ಮತ್ತು ಮೀಸಲಾತಿ ಅನ್ವಯ ಮಾಡಲಾಗುವುದು. ಪ್ರೌಢ ಶಾಲಾ ಶಿಕ್ಷಕರನ್ನು ಸಹ ಮೆರಿಟ್ ಮತ್ತು ಮೀಸಲಾತಿ ಅನ್ವಯ ಮಾಡಲಾಗುವುದು.

-ಅನುಬಂಧ- ಸರ್ಕಾರಿ ಪ್ರೌಢ ಶಾಲೆಗಳಲ್ಲಿರುವ ಸಹಶಿಕ್ಷಕರ ಮತ್ತು ಇತರ

ಕ್ರ ಸಂ.	ಜಿಲ್ಲೆಯ ಹೆಸರು	ಕಲೆ				ಪಿ.ಸಿ.ಎಂ.				
		ಕ	ಮ	ಉ	ತೆ	ಕನ್ನಡ	ಮರಾಠಿ	ಉರ್ದು	ತೆಲುಗು	ಕನ್ನಡ
01	02	03	04	05	06	07	08	09	10	11
01	ಬೆಳಗಾಂ	19	03	--	-	15	02	--	--	11
02	ಕಾರವಾರ	01	04	--	--	04	--	01	--	05
03	ಧಾರವಾಡ	05	--	01	--	04	--	01	--	04
04	ಗದಗ್	10	--	--	--	07	--	02	--	07
05	ಬಿಜಾಪುರ	05	--	--	--	08	--	--	--	04
06	ಹಾವೇರಿ	08	-	06	-	05	-	04	--	08
07	ಬಾಗಲಕೋಟೆ	01	-	01	-	08	-	--	--	05
08	ಗುಲ್ಬರ್ಗಾ	25	01	08	03	14	-	02	01	17
09	ರಾಯಚೂರು	12	--	--	--	03	--	--	--	--
10	ಕೊಪ್ಪಳ	01	--	02	--	05	--	--	--	01
11	ಬೀದರ್	11	--	05	--	05	--	01	--	08
12	ಬಳ್ಳಾರಿ	05	--	--	--	--	--	--	--	07
13	ಮೈಸೂರು	15	--	--	--	24	--	--	--	15
14	ಚಾಮರಾಜನಗರ	12	--	--	--	10	--	--	--	08
15	ಮಂಡ್ಯ	20	--	--	--	08	--	--	--	12
16	ಕೊಡಗು	05	--	--	--	--	--	--	--	03
17	ಹಾಸನ	29	--	05	--	43	--	--	--	12
18	ಚಿಕ್ಕಮಗಳೂರು	23	--	--	--	06	--	--	--	0
19	ದಕ್ಷಿಣ ಕನ್ನಡ	24	--	--	--	20	--	--	--	16
20	ಉಡುಪಿ	17	--	--	--	17	--	--	--	05
21	ಬೆಂಗಳೂರು ಉತ್ತರ	05	--	--	--	04	--	--	--	--
22	ಬೆಂಗಳೂರು ದಕ್ಷಿಣ	22	--	--	--	04	--	--	--	06
23	ಬೆಂಗಳೂರು ಗ್ರಾ	18	--	--	01	28	--	01	--	04
24	ತುಮಕೂರು	19	--	--	--	24	--	--	--	13
25	ಕೋಲಾರ	19	--	--	--	12	--	--	--	15
26	ಚಿತ್ರದುರ್ಗ	07	--	01	--	03	--	01	--	08
27	ದಾವಣಗೆರೆ	09	--	03	--	05	--	--	--	10
28	ಶಿವಮೊಗ್ಗ	11	--	06	--	07	--	04	--	13
	ಒಟ್ಟು	358	08	38	04	293	02-	17	01	216

ಸಂಖ್ಯೆ: ಇಡಿ ೧೦೧ ಪಿಎಂಎ ೨೦೦೧

ಶಿಕ್ಷಕರ ಖಾಲಿ ಹುದ್ದೆಗಳ ವಿವರ (ಜಿಲ್ಲಾವಾರು)

ಸಿ.ಬಿ.ಜಡ್			ಭಾಷೆ									
ಮರಾಠಿ	ಉರ್ದು	ತೆಲುಗು	ಕನ್ನಡ	ಆಂಗ್ಲ	ಹಿಂದಿ	ಉರ್ದು	ತೆಲುಗು	ತಮಿಳು	ಸಂಸ್ಕೃತ	ಮರಾಠಿ	ದೈಹಿಕ ಶಿಕ್ಷಕರು ಗ್ರೇಡ್-II	ಒಟ್ಟು
12	13	14	15	16	17	18	19	20	21	22	23	24
01	-	-	15	09	15	--	--	--	--	02	06	98
03	01	--	05	01	08	01	--	--	--	--	02	36
--	01	--	02	04	07	--	--	--	--	--	01	30
--	02	--	07	06	09	01	--	--	--	--	--	51
--	01	--	02	03	07	01	--	--	--	--	02	33
--	04	--	08	04	12	02	--	--	--	--	03	64
01	01	--	04	02	09-	--	--	--	--	--	--	32
01	01	01	16	12	19	03	01	--	--	--	41	166
--	--	--	01	--	01	--	--	--	--	--	11	28
--	--	--	07	--	18	--	--	--	01	--	--	35
04	03	--	11	05	18	01	--	--	--	--	09	81
--	--	--	11	02	14	02	--	--	--	--	06	47
--	--	--	27	09	27	--	--	--	--	--	06	123
--	--	--	16	04	08	01	--	--	--	-	04	63
--	--	--	15	06	12	02	--	--	01	-	06	87
--	--	--	--	--	10	--	--	--	--	-	04	22
--	01	--	13	14	07	06	--	--	02	-	15	147
--	--	--	14	05	14	--	--	--	--	-	03	65
--	--	--	17	02	31	01	--	--	--	--	01	112
--	--	--	09	04	17	--	--	--	01	--	04	74
--	--	--	03	01	13	01	--	--	--	--	02	29
--	--	--	04	01	03	--	--	--	01	--	06	47
--	--	01	08	02	06	02	--	--	--	--	30	101
--	--	--	15	10	16	05	--	--	01	--	21	124
--	--	--	15	09	15	03	--	01	--	--	25	117
--	--	--	08	01	08	02	--	01	--	--	08	47
--	--	--	10	01	09	01	--	--	01	--	04	52
--	--	--	09	03	17	05	--	--	--	--	13	94
10	17	02	274	118	350	43	01	02	08	02	236	2000

ಎಂ.ಸಿ. ಪೂಣಚ್ಚ
ಸರ್ಕಾರದ ಅಧೀನ ಕಾರ್ಯದರ್ಶಿ

ಪ್ರೌಢಶಾಲಾ ಶಿಕ್ಷಕರ ಹುದ್ದೆಗೆ ನಿರುದ್ಯೋಗಿ ಇಂಜನಿಯರ್ ಪದವೀಧರರ ನೇಮಕಾತಿ

2554 (3004) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಪ್ರೌಢಶಾಲಾ ಶಿಕ್ಷಕರ ಹುದ್ದೆಗೆ 30,000 ನಿರುದ್ಯೋಗಿ ಇಂಜನಿಯರ್ ಪದವೀಧರರ ನೇಮಕ ಮಾಡಲು ರಾಜ್ಯ ಸರ್ಕಾರವು ತೀರ್ಮಾನಿಸಿದೆಯೆ; ಈ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?

2) ರಾಜ್ಯದಲ್ಲಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ನಿರುದ್ಯೋಗಿ ಬಿ.ಎಡ್. ಪದವೀಧರರಿರುವಾಗ ಇಂಜನಿಯರಿಂಗ್ ಪದವಿಧರರನ್ನು ನೇಮಕ ಮಾಡುವ ಅವಶ್ಯಕತೆಯಾದರೂ ಏನು (ವಿವರ ನೀಡುವುದು)

3) ಇದು ಬಿ.ಎಡ್ ಪದವೀಧರರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೆ; ಈ ಅನ್ಯಾಯವನ್ನು ಪರಿಗಣಿಸಿ ಬಿ.ಎಡ್. ಪದವಿಧರರನ್ನು ಪ್ರೌಢಶಾಲಾ ಶಿಕ್ಷಕರ ಹುದ್ದೆಗೆ ನೇಮಕ ಮಾಡಲು ಯಾವ ಕ್ರಮ ತೆಗೆದುಕೊಂಡಿದೆ.

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

1), 2) ಇಲ್ಲ.

ಅಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಪ್ರಶ್ನೆ ಉದ್ಭವಿಸುವುದಿಲ್ಲ.

3) ವೃಂದ ಮತ್ತು ನೇಮಕಾತಿ ನಿಯಮಗಳಿಗಾನುಸಾರ ಬಿ.ಎಡ್. ಪದವಿಧರರನ್ನೇ ನೇಮಕ ಮಾಡುತ್ತಿರುವುದರಿಂದ ಅನ್ಯಾಯವಾಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿಮಾಡುವುದು

2565(2989) ಶ್ರೀ ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಕಾಲೇಜುಗಳ ಸಂಖ್ಯೆ ಎಷ್ಟು; ಎಲ್ಲಾ ಕಾಲೇಜುಗಳಲ್ಲಿ ಪ್ರಾಂಶುಪಾಲರ ಹುದ್ದೆಗಳು ಭರ್ತಿಯಾಗಿವೆಯೇ; ಇಲ್ಲವಾದಲ್ಲಿ ಕಾರಣಗಳೇನು;

ಆ) ಪ್ರಭಾರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪ್ರಾಂಶುಪಾಲರುಗಳ ಸಂಖ್ಯೆ ಎಷ್ಟು? ಎಷ್ಟು ವರ್ಷಗಳಿಂದ ಅವರುಗಳು ಪ್ರಭಾರ ಹುದ್ದೆಯಲ್ಲಿ ಮುಂದುವರೆಯುತ್ತಿದ್ದಾರೆ;

ಇ) ಪ್ರಭಾರ ಹುದ್ದೆಯಲ್ಲಿ ಕರ್ತವ್ಯನಿರತರಾದವರನ್ನು ಖಾಯಂಗೊಳಿಸಲು ಸಕಾಲಿಕ ಕ್ರಮವನ್ನು ಸರ್ಕಾರವು ಜರುಗಿಸುವುದೇ?

ಡಾ: ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :—

ಅ) ಸರ್ಕಾರಿ ಪಾಲಿಟೆಕ್ನಿಕ್‌ಗಳ ಸಂಖ್ಯೆ 38 ಪ್ರಾಂಶುಪಾಲರ ಹುದ್ದೆಗಳು ಭರ್ತಿಯಾಗಿರುವುದಿಲ್ಲ. ದಿನಾಂಕ 24-02-2000 ಸಂಖ್ಯೆ ಇಡಿ: 14 ಡಿಟೀಇ 98ರ ಸರ್ಕಾರಿ ಆದೇಶದಲ್ಲಿ ಪ್ರಾಂಶುಪಾಲರ ಹುದ್ದೆಗಳನ್ನು ಎಐಸಿಟೀಇ ವೇತನ ಶ್ರೇಣಿಯಲ್ಲಿ ಸೃಜಿಸಲಾಗಿರುವುದರಿಂದ ಮುಂಬಡ್ತಿ ಮೂಲಕ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಇಲ್ಲ, ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಎಸ್.ಎಸ್.ಎಲ್.ಸಿ. ಮೌಲ್ಯಮಾಪನದಲ್ಲಿನ ಅವ್ಯವಹಾರಗಳು

2556(2974) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ಮಾರ್ಚ್-ಏಪ್ರಿಲ್‌ನಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಆ) ಈ ಪರೀಕ್ಷೆಯ ಮೌಲ್ಯಮಾಪನದಲ್ಲಿ ವ್ಯಾಪಕ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕೆಲವು ಪ್ರಶ್ನೆ ಪತ್ರಿಕೆಗಳು ಬಯಲಾಗಿದ್ದು, ಅದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಅವ್ಯವಹಾರಗಳ ಬಗ್ಗೆ ಸರ್ಕಾರ ವಿಚಾರಣೆ ನಡೆಸಿದೆಯೇ;

ಉ) ಇನ್ನು ಮುಂದೆ ಇಂತಹ ಅವ್ಯವಹಾರಗಳನ್ನು ತಡೆಗಟ್ಟಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಒಟ್ಟು ೬,೭೩,೦೫೧ ಹಾಜರಾಗಿರುತ್ತಾರೆ.

ಆ) ಮೌಲ್ಯಮಾಪನದಲ್ಲಿ ಅವ್ಯವಹಾರಗಳು ನಡೆದಿರುವುದಿಲ್ಲ. ಆದರೆ ಕರ್ತವ್ಯಲೋಪವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಕರ್ತವ್ಯಲೋಪಕ್ಕೆ ಕಾರಣರಾದವರ ವಿರುದ್ಧ ನಿಯಮಗಳನ್ವಯ ಕ್ರಮ ಜರುಗಿಸಲಾಗಿದೆ.

ಇ), ಈ) ಪ್ರಶ್ನೆ ಪತ್ರಿಕೆ ಬಯಲಾಗಿರುವ ಬಗ್ಗೆ ಸತ್ಯತೆಯನ್ನು ಖಚಿತಪಡಿಸಿಕೊಳ್ಳಲು ಪ್ರಕರಣವನ್ನು ಸಿ.ಓ.ಡಿ. ತನಿಖೆಗೆ ಒಳಪಡಿಸಲಾಗಿದೆ.

ಈ) ಈ ರೀತಿಯ ಗೊಂದಲಗಳನ್ನು ಶಾಶ್ವತವಾಗಿ ತಡೆಗಟ್ಟಲು ಹಾಗು ಪರೀಕ್ಷಾ ಪದ್ಧತಿಯ ಲೋಪದೋಷಗಳನ್ನು ತಡೆಗಟ್ಟಲು ಹಾಗು ಪರೀಕ್ಷಾ ಪದ್ಧತಿಯನ್ನು ಸುಧಾರಿಸುವ ಸಲುವಾಗಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

ರಾಜ್ಯದಲ್ಲಿ ಹೊಸದಾಗಿ ಪ್ರಾರಂಭಿಸಿರುವ ವೈದ್ಯಕೀಯ ಹಾಗೂ ದಂತ ಕಾಲೇಜುಗಳು

2558 (2976) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) :— ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಈಗಿರತಕ್ಕ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಹಾಗೂ ದಂತ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಈ ಕಾಲೇಜುಗಳಲ್ಲಿರತಕ್ಕ ಒಟ್ಟು ಸೀಟುಗಳೆಷ್ಟು?

ಇ) ಜನವರಿ ೨೦೦೦ ರಿಂದ ಇಲ್ಲಿಯವರೆಗೆ ಎಷ್ಟು ಹೊಸ ವೈದ್ಯಕೀಯ ಹಾಗೂ ದಂತ ಖಾಸಗೀ ಕಾಲೇಜುಗಳನ್ನು ತೆರೆಯಲು ರಾಜ್ಯ ಸರ್ಕಾರ ಅನುಮತಿ ನೀಡಿದೆ?

ಈ) ಇವುಗಳ ಪೈಕಿ, ೨೦೦೦-೨೦೦೨ನೇ ಸಾಲಿನಲ್ಲಿ ಎಷ್ಟು ಹೊಸ ಪ್ರಾರಂಭಿಸಲಾಗಿದೆ?

ಶ್ರೀಮತಿ ನಫೀಸ್ ಫಜಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :—

ಅ)	೧.	ಸರ್ಕಾರಿ ವೈದ್ಯಕೀಯ ಕಾಲೇಜುಗಳು	-	೪
	೨.	ಖಾಸಗೀ ವೈದ್ಯಕೀಯ ಕಾಲೇಜುಗಳು	-	೨೦
	೩.	ಸರ್ಕಾರಿ ದಂತ ಕಾಲೇಜುಗಳು	-	೧
	೪.	ಖಾಸಗೀ ದಂತ ಕಾಲೇಜುಗಳು	-	೪೧

ಅ)	೧. ಸರ್ಕಾರಿ ವೈದ್ಯಕೀಯ ಕಾಲೇಜುಗಳು	-	೪೦೦
	೨. ಖಾಸಗೀ ವೈದ್ಯಕೀಯ ಕಾಲೇಜುಗಳು	-	೨೬೦೫
		ಒಟ್ಟು	೩೧೦೫
	೩. ಸರ್ಕಾರಿ ದಂತ ಕಾಲೇಜುಗಳು	-	೬೦
	೪. ಖಾಸಗೀ ದಂತ ಕಾಲೇಜುಗಳು	-	೨೨೦೧
		ಒಟ್ಟು	೨೨೬೧

ಇ) ಭಾರತೀಯ ವೈದ್ಯ ಪರಿಷತ್ತಿನ ತಿದ್ದುಪಡಿ ವಿಧೇಯಕ 1993 ರನ್ವಯ ಹೊಸ ವೈದ್ಯಕೀಯ ಪರಿಷತ್ತಿನ ತಿದ್ದುಪಡಿ ವಿಧೇಯಕ 1993 ರನ್ವಯ ಹೊಸ ಮಂಜೂರು ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರುವುದಿಲ್ಲ. ಆದರೆ, ರಾಜ್ಯ ಸರ್ಕಾರವು ಕೇವಲ ಅವಶ್ಯಕತಾ ಪ್ರಮಾಣ ಪತ್ರವನ್ನು ನೀಡಬಹುದಾಗಿದೆ. ಅದರಂತೆ, ಜನವರಿ 2000 ರಿಂದ 6 ವೈದ್ಯಕೀಯ ಕಾಲೇಜುಗಳು ಮತ್ತು ಒಂದು ದಂತ ಕಾಲೇಜಿಗೆ ಅವಶ್ಯಕತಾ ಪ್ರಮಾಣ ಪತ್ರ ನೀಡಿದೆ.

ಈ) ಇಲ್ಲ

ರಾಜ್ಯದಲ್ಲಿರುವ ಆಸ್ಪತ್ರೆಗಳಲ್ಲಿ ರೋಗ ಮಾಹಿತಿ ಪುಸ್ತಕ ವಿತರಣೆ

2559(2977) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿರುವ ಜಿಲ್ಲಾ, ತಾಲ್ಲೂಕು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು;

ಆ) ಜನ ಸಾಮಾನ್ಯರಿಗೆ ವಿವಿಧ ರೋಗಗಳ ಕುರಿತು ಸೂಕ್ತ ಮಾಹಿತಿ ನೀಡುವಂತಹ ಕನ್ನಡ ಪುಸ್ತಕಗಳನ್ನು ಸರ್ಕಾರಿ ಆಸ್ಪತ್ರೆಗಳಿಗೆ ಬರತಕ್ಕ ರೋಗಿಗಳಿಗೆ ವಿತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಜಿಲ್ಲಾ ಆಸ್ಪತ್ರೆಗಳು 24, ಸಾರ್ವಜನಿಕ 42, ತಾಲ್ಲೂಕು -111 ಪ್ರಾ.ಆ. ಕೇಂದ್ರಗಳು 1685, ಪ್ರಾ.ಆ. ಘಟಕಗಳು 567

F 23-II

ಆ) ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ಏಡ್ಸ್ , ಮಧುಮೇಹ, ಟ್ರಾಕೋಮಾ, ಮಲೇರಿಯಾ ಕ್ಷಯ, ಕುಷ್ಠ, ಆನೇಕಾಲು ರೋಗ, ಕರಳುಬೇನೆ, ಕಾಲರಾ, ಪೋಲಿಯೋ ಕಾಮಾಲೆ, ಮೆದಲು ಜ್ವರ, ಡೆಂಗುಜ್ವರ ಮುಂತಾದ ರೋಗಗಳಿಗೆಸಂಬಂಧಿಸಿದಂತೆ ಸರಳ ಮಾಹಿತಿ ನೀಡುವ ಕರಪತ್ರಗಳನ್ನು ಮತ್ತು ಮಡಿಕೆ ಪತ್ರಗಳನ್ನು ಆಕರ್ಷಣೀಯವಾಗಿ ಮುದ್ರಿಸಿ ಹಂಚುವ ಮೂಲಕ ಈ ರೋಗಗಳ ಬಗ್ಗೆ ಮಾಹಿತಿಯನ್ನು ಪರಿಣಾಮಕಾರಿಯಾಗಿ ಸಾರ್ವಜನಿಕರಿಗೆ ಮುಟ್ಟಿಸಲಾಗುತ್ತಿದೆ. ಅಲ್ಲದೇ ಈ ರೋಗಗಳಿಗೆ ಸಂಬಂಧಿಸಿದ ಮತ್ತು ಆರೋಗ್ಯ ಸಂಬಂಧದ ರಾಷ್ಟ್ರೀಯ ಮತ್ತು ರಾಜ್ಯ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡುವ ಫಲಕಗಳನ್ನು ರಾಜ್ಯದ ಆಸ್ಪತ್ರೆಗಳು, ಆರೋಗ್ಯ ಕೇಂದ್ರಗಳು, ಸರ್ಕಾರಿ ಕಛೇರಿಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಲಾಗುತ್ತಿದೆ. ಇದಲ್ಲದೆ ಇಲಾಖೆಯ ಕ್ಷೇತ್ರಕಾರ್ಯ ಸಿಬ್ಬಂದಿಯವರು ಈ ಎಲ್ಲಾ ಮಾಹಿತಿಯನ್ನು ಜನರಿಗೆ ನೇರವಾಗಿ ವಿವರಿಸಿ ಮುಟ್ಟಿಸುವ ಕಾರ್ಯಕ್ರಮ ನಡೆದಿದೆ. ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ಅವಶ್ಯ ಆರೋಗ್ಯ ಮಾಹಿತಿಗಳನ್ನು ಪುಸ್ತಕ ರೂಪದಲ್ಲಿ ಕೊಡಬಹುದಾದಕ್ಕಿಂತ ಪರಿಣಾಮಕಾರಿಯಾಗಿ ಈ ಮೇಲೆ ವಿವರಿಸಿದ ಕ್ರಮಗಳ ಮೂಲಕ ಮಾಹಿತಿಗಳನ್ನು ತಲುಪಿಸಲಾಗುತ್ತಿದೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿನ ಶವಾಗಾರದಲ್ಲಿ ಶವ ಸಂರಕ್ಷಣೆಗೆ ಕ್ರಮ

2560 (2978) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) :— ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪ್ರತಿದಿನ ಸರಾಸರಿ ಎಷ್ಟು ಹೆಣಗಳು ವಿಕ್ಟೋರಿಯಾ ಆಸ್ಪತ್ರೆಯಾ ಶವಾಗಾರಕ್ಕೆ ಮರಣೋತ್ತರ ಪರೀಕ್ಷೆಗಾಗಿ ಬರುತ್ತವೆ?

ಆ) ಈ ಹೆಣಗಳನ್ನು ಸಂರಕ್ಷಿಸಲು ಬೇಕಾದ ಮಂಜುಗಡೆ ಹಾಗೂ ಇತರ ಔಷಧಿಗಳಿಗೆ ಒದಗಿಸುತ್ತಿರುವ ಹಣವೆಷ್ಟು?

ಇ) ಅನಾಥ ಶವಗಳನ್ನು ಸಂರಕ್ಷಿಸಲು ಹಾಗೂ ಅವುಗಳನ್ನು ಕೂಡಲೇ ಶವ ಪರೀಕ್ಷೆ ನಡೆಸಿ, ಅಂತ್ಯ ಸಂಸ್ಕಾರ ಮಾಡುವ ಸಂಬಂಧದಲ್ಲಿ ಸರ್ಕಾರದಲ್ಲಿರುವ ವ್ಯವಸ್ಥೆ ಯಾವುದು?

ಈ) ಈ ಆಸ್ಪತ್ರೆಯ ಆವರಣದಲ್ಲಿ ಕೊಳೆತ ಶವಗಳು ಅನಾಥವಾಗಿ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಊ) ಈ ಆಸ್ಪತ್ರೆಯಲ್ಲಿ ಶವಗಳ ಮರಣೋತ್ತರ ಪರೀಕ್ಷೆಯನ್ನು ಕೂಡಲೇ ನಡೆಸಿ ಸಂಬಂಧಿಗಳಿಗೆ ಆಗುತ್ತಿರುವ ಕಿರುಕುಳ ಹಾಗೂ ತೊಂದರೆಯನ್ನು ತಪ್ಪಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀಮತಿ ನಫೀಸ್ ಫಜಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :—

ಅ) ಮರಣೊತ್ತರ ಪರೀಕ್ಷೆಗಾಗಿ ಸುಮಾರು ೧೫ ಶವಗಳು ಬರುತ್ತವೆ.

ಆ) ಶವಗಳನ್ನು ಸಂರಕ್ಷಿಸಲು ಮಂಜೂಗಡೆ ಹಾಗೂ ಇತರ ಔಷಧಿಗಳಿಗಾಗಿ ಆಸ್ಪತ್ರೆಗೆ ಬಿಡುಗಡೆ ಮಾಡುವ ಆಯವ್ಯಯದಲ್ಲಿಯೇ ಭರಿಸಲಾಗುತ್ತದೆ. ಇದಕ್ಕಾಗಿ ಪ್ರತ್ಯೇಕ ಆಯವ್ಯಯ ಇರುವುದಿಲ್ಲ.

ಇ) ಅನಾಥ ಶವಗಳನ್ನು ಸಂರಕ್ಷಿಸಿ ಕೆಡದಂತೆ ಇಡಲಾಗುವುದು. ಶವ ಪರೀಕ್ಷೆ ಮಾಡಿದ ನಂತರ ಸರ್ಕಾರ ನಿಗಧಿಪಡಿಸಿರುವ ರೂ.೨೫೦.೦೦ನ್ನು ನೀಡಿ ಶವ ಸಂಸ್ಕಾರಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ.

ಈ) ಯಾವುದೇ ಕೊಳೆತ ಶವವು ಆಸ್ಪತ್ರೆಯ ಆವರಣದಲ್ಲಿ ಅನಾಥವಾಗಿ ಬಿದ್ದಿರದಂತೆ ಗಮನಹರಿಸಲಾಗುತ್ತಿದೆ.

ಉ) ಸುವ್ಯವಸ್ಥೆಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಊ) ಪೋಲೀಸರಿಂದ ಮಹಜರ್ ವರದಿ ಬಂದ ತಕ್ಷಣ ಮರಣೋತ್ತರ ಪರೀಕ್ಷೆ ಮಾಡಿ ಸಂಬಂಧಿಸಿದವರಿಗೆ ನೀಡಲಾಗುತ್ತದೆ.

ಬೆಳವಡಿಯಲ್ಲಿ ಸರ್ಕಾರಿ ಡಿಪ್ಲೋಮಾ ಕಾಲೇಜನ್ನು ಪ್ರಾರಂಭಿಸುವುದು

2561 (2959) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವೀರ ಮಲಮ್ಮನ ಹೆಸರಿನಿಂದ ಬೆಳವಡಿಯಲ್ಲಿ ಸರ್ಕಾರಿ ಡಿಪ್ಲೋಮಾ ಕಾಲೇಜನ್ನು ಪ್ರಾರಂಭಿಸಲು ಎ.ಐ.ಸಿ.ಟಿ.ಇ ದೆಹಲಿದೆ ಪ್ರಸ್ತಾವನೆಯನ್ನು ಕಳುಹಿಸಲಾಗಿತ್ತು; ಈಗ ಆ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಆ) ಮುಖ್ಯಮಂತ್ರಿಗಳು ಬೆಳವಡಿ ಬಂದಾಗ ಡಿಪ್ಲೋಮಾ ಕಾಲೇಜನ್ನು ಪ್ರಾರಂಭಿಸಲು ಕಟ್ಟಿರುವ 06 ಕೋಣೆಗಳ ಕಟ್ಟಡ ಖಾಲಿ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಮೂಲಭೂತ ಸೌಲಭ್ಯ ಹೊಂದಿರುವ ಈ ಸರ್ಕಾರಿ ಕಟ್ಟಡ ಉಚಿತವಾಗಿ ಲಭ್ಯವಿದ್ದು, ಬೆಳವಡಿಯಲ್ಲಿ ಸರ್ಕಾರಿ ಡಿಪ್ಲೋಮಾ ಕಾಲೇಜನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಡಾ: ಜಿ. ಪರಮೇಶ್ವರ ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು) :—

ಅ) ಬೆಳಗಾಂ ಜಿಲ್ಲೆಯ ಬೆಳಮಾಡಿಯಲ್ಲಿ ಒಂದು ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸುವ ಕುರಿತು ಎ.ಐ.ಸಿ.ಟಿ.ಇ ನವದೆಹಲಿಗೆ ಪ್ರಸ್ತಾವನೆಯನ್ನು ಕಳುಹಿಸಲಾಗಿತ್ತು. ಈ ದಿಸೆಯಲ್ಲಿ ಸದರಿ ಪಾಲಿಟೆಕ್ನಿಕ್‌ಗೆ ಭೂಮಿ, ಕಟ್ಟಡ ಹಾಗೂ ಫಂಡ್ಸ್ ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಂಡು ವಿವರ ನೀಡಲು ಎ.ಐ.ಸಿ.ಟಿ.ಇ, ನವದೆಹಲಿ ರವರು ರಾಜ್ಯ ಸರ್ಕಾರಕ್ಕೆ ಕೇಳಿರುತ್ತಾರೆ. ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ತಾಂತ್ರಿಕ ಶಿಕ್ಷಣ ಇಲಾಖಾ ವತಿಯಿಂದ ಯಾವುದೇ ಕಟ್ಟಡ ನಿರ್ಮಿಸಿಲ್ಲ.

ಇ) ಉದ್ಭವಿಸುವುದಿಲ್ಲ.

ಬೆಳಗಾಂ ಜಿಲ್ಲೆಯಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಿಗೆ ಕುಡಿಯುವ ನೀರಿನ ಸೌಲಭ್ಯ

2562(2960) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಸರ್ಕಾರಿ ಹಾಗೂ ಖಾಸಗಿ ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ವಿದ್ಯಾರ್ಥಿಗಳಿಗೆ ಶುದ್ಧವಾದ ಕುಡಿಯುವ ನೀರನ್ನು ಪೂರೈಸಲು ಯಾವ ಯೋಜನೆಯನ್ನು ಹಾಕಿಕೊಂಡಿದೆ;

ಇ) ಪ್ರತಿಯೊಂದು ಶಾಲಾ ಆವರಣದಲ್ಲಿ ಕೊಳವೆಬಾವಿಗಳನ್ನು ತೋಡಿಸಿ, ವಿದ್ಯಾರ್ಥಿಗಳಿಗೆ ಶುದ್ಧವಾದ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ;

ಈ) ಬೆಳಗಾಂವ ಜಿಲ್ಲೆಯಲ್ಲಿ ಎಷ್ಟು ಶಾಲೆಯಲ್ಲಿ ಶುದ್ಧ ಕುಡಿಯುವ ನೀರಿನ ಅನುಕೂಲತೆ ಇರುವುದು ಹಾಗೂ ಎಷ್ಟು ಶಾಲೆಯಲ್ಲಿ ಈ ಸೌಲಭ್ಯ ಇರುವುದಿಲ್ಲ; (ತಾಲ್ಲೂಕುವಾರು ವಿವರ ನೀಡುವುದು)

ಉ) ಬೆಳಗಾಂವ ಜಿಲ್ಲೆ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಎಷ್ಟು ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇರುವುದು; ಎಷ್ಟು ಶಾಲೆಗಳಲ್ಲಿ ಈ ವ್ಯವಸ್ಥೆ ಇರುವುದಿಲ್ಲ; (ವಿವರ ನೀಡುವುದು)

ಊ) ಆದ್ಯತೆಯ ಮೇಲೆ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ತೋಡಲು ಕ್ರಮ ಕೈಗೊಳ್ಳಲಾಗುವುದೇ ಹಾಗೂ ಎಷ್ಟು ಹಣ ಬೇಕಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :-

ಅ) ರಾಜ್ಯದ ಹಲವಾರು ಸರ್ಕಾರಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಕುಡಿಯುವ ನೀರಿನ ಸೌಲಭ್ಯವಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ವಿದ್ಯಾರ್ಥಿಗಳಿಗೆ ಅವರ ಶಾಲೆಯ ಸಮೀಪದಲ್ಲಿ ಲಭ್ಯವಿರುವ ಮೂಲಗಳಿಂದ ಶುದ್ಧ ನೀರನ್ನು ಒದಗಿಸಲಾಗುತ್ತಿದೆ. ೧೯೯೫-೯೬ ರಿಂದ ೨೦೦೦-೦೧ ರವರೆವಿಗೂ ರಾಜ್ಯ ವಲಯ ಯೋಜನೆಯಡಿಯಲ್ಲಿ ಹಂತಹಂತವಾಗಿ ೧೨೦೭ ಶಾಲೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿದೆ.

ಇ) ಎಲ್ಲಾ ಶಾಲೆಗಳಲ್ಲಿ ಕೊಳವೆ ಬಾವಿ ತೋಡಿಸುವುದು ಕಾರ್ಯಸಾಧ್ಯವಿಲ್ಲ. ಆದರೂ ರಾಜ್ಯದ ಆರ್ಥಿಕ ಸ್ಥಿತಿ ಆಧರಿಸಿ ಹಂತಹಂತವಾಗಿ ಕುಡಿಯುವ ನೀರಿನ ಕೊರತೆ ಇರುವ ಶಾಲೆಗಳಿಗೆ ನೀರಿನ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ನೀರಿನ ವ್ಯವಸ್ಥೆ ಇರುವ ಶಾಲೆಗಳ ಸಂಖ್ಯೆ: ೧೮೭೭ ತಾಲ್ಲೂಕುವಾರು ಮಾಹಿತಿ ನೀರಿನ ವ್ಯವಸ್ಥೆ ಇಲ್ಲದಿರುವ ಶಾಲೆಗಳ ಸಂಖ್ಯೆ: ೧೦೪೨ ಅನುಬಂಧ - ೧ ರಲ್ಲಿ ಲಗತ್ತಿಸಿದೆ.

ಉ)	ತಾ: ಬೈಲಹೊಂಗಲ	ಸವದತ್ತಿ
ನೀರಿನ ವ್ಯವಸ್ಥೆ ಇರುವ ಶಾಲೆಗಳ ಸಂಖ್ಯೆ	೧೨೨	೧೬೧
ನೀರಿನ ವ್ಯವಸ್ಥೆ ಇಲ್ಲದಿರುವ ಶಾಲೆಗಳ ಸಂಖ್ಯೆ	೯೧	೪೭

ಊ) ಸಧ್ಯಕ್ಕೆ ಈ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಅಂದಾಜು ರೂ. ೭೦.೦೦ ಲಕ್ಷ ಹಣ ಬೇಕಾಗುತ್ತದೆ.

ಬೈಲಹೊಂಗಲ ತಾಲ್ಲೂಕಿನ ನೇಸರಗಿ ಗ್ರಾಮದಲ್ಲಿ ಹೆರಿಗೆ ಆಸ್ಪತ್ರೆಯ ಕಟ್ಟಡ ಕಟ್ಟಿಸುವುದು

2563 (2961) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಗ್ರಾಮದಲ್ಲಿ ಹೆಂಗೆ ಆಸ್ಪತ್ರೆಯ ಕಟ್ಟಡವನ್ನು ಎಷ್ಟು ವರ್ಷಗಳ ಹಿಂದೆ ಕಟ್ಟಲಾಗಿತ್ತು;

ಆ) ಈ ಆಸ್ಪತ್ರೆಯಲ್ಲಿ ಪ್ರತಿ ತಿಂಗಳು ಸರಾಸರಿ ಎಷ್ಟು ಹೆಂಗೆಗಳು ಆಗುತ್ತಿವೆ;

ಇ) ಈ ಆಸ್ಪತ್ರೆಯ ಕಟ್ಟಡವು ಬಹಳ ಹಳೆಯದಾಗಿದ್ದು ಅದನ್ನು ಕೆಡವಿ ಅದೇ ಸ್ಥಳದಲ್ಲಿ ಹೊಸ ಕಟ್ಟಡ ಕಟ್ಟಲು ಮುಖ್ಯ ವಾಸ್ತುಶಿಲ್ಪಿಗಳ ಪ್ರಕಾರ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದವರು ನೀಲಿ ನಕ್ಷೆಯನ್ನು ತಯಾರಿಸಿದ್ದು ಈಗ ಆ ಕಟ್ಟಡದ ಮಂಜೂರಾತಿ ಮಾಡುವ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಈ) ಈ ಕೆಲಸಕ್ಕೆ ಎಷ್ಟು ವೆಚ್ಚ ತಗಲುವುದು. ಇದಕ್ಕೆ ಯಾವ ರೀತಿಯಾಗಿ ಹಣಕಾಸಿನ ವ್ಯವಸ್ಥೆಯನ್ನು ಮಾಡಲಾಗಿದೆ.

ಉ) ಈ ಕೆಲಸಕ್ಕೆ ಸುಮಾರು 90 ಲಕ್ಷ ರೂಪಾಯಿಗಳು ಬೇಕಾಗುತ್ತಿದ್ದು ಅದು ಜಿಲ್ಲಾ ಪಂಚಾಯಿತಿಯಿಂದ ಒದಗಿಸಲು ಸಾಧ್ಯವಾಗದೇ ಇರುವುದರಿಂದ ಈ ಕೆಲಸವನ್ನು ರಾಜ್ಯದ ಬೇರೆ ಯಾವುದೇ ಯೋಜನೆ ಅಡಿಯಲ್ಲಿ ತೆಗೆದುಕೊಂಡು ಕಟ್ಟಡದ ಕೆಲಸವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಸುಮಾರು 50 ವರ್ಷಗಳ ಹಿಂದೆ ಕಟ್ಟಲಾಗಿರುತ್ತದೆ

ಆ) 32

ಇ) ಜಿಲ್ಲಾ ಪಂಚಾಯತ್‌ನಿಂದ ಪ್ರಸ್ತಾವನೆ ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಹಣದ ಕೊರತೆಯಿಂದ ಸಧ್ಯದಲ್ಲಿ ಸಾಧ್ಯವಾಗುವುದಿಲ್ಲ.

ಬೆಳಗಾಂ ಜಿಲ್ಲೆಯಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯಗಳ ನಿರ್ಮಾಣ

2564(2962) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯಗಳನ್ನು ಕಟ್ಟುವ ಸಲುವಾಗಿ ಯಾವ ಯಾವ ಸವಲತ್ತುಗಳನ್ನು ಸರ್ಕಾರದವರು ಕೊಡುತ್ತಿದ್ದಾರೆ;

ಆ. ಸರ್ಕಾರದವರು ಶೌಚಾಲಯಗಳಿಗೆ ಕೊಡುತ್ತಿರುವ ಹಣವು ಸಾಲದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ. ಹಾಗಿದ್ದಲ್ಲಿ, ಶೌಚಾಲಯ ಕಟ್ಟಲು ಈಗ ಕೊಡುತ್ತಿರುವ ಮೊತ್ತವನ್ನು ಹೆಚ್ಚಿಸಿ ಅದನ್ನು ಪ್ರತಿಯೊಂದು ಶೌಚಾಲಯಕ್ಕೆ 5000 ರೂಪಾಯಿಗೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದೇ;

ಈ. ಬೆಳಗಾಂವ ಜಿಲ್ಲೆಯಲ್ಲಿ ಕಳೆದ ವರ್ಷ ಎಷ್ಟು ಶೌಚಾಲಯಗಳನ್ನು ಕಟ್ಟಲು ಗುರಿ ನಿಗದಿಪಡಿಸಲಾಗಿತ್ತು; ಎಷ್ಟು ಶೌಚಾಲಯಗಳನ್ನು ಕಟ್ಟಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

ಉ. ಕಳೆದ ವರ್ಷ ಬೆಳಗಾಂವ ಜಿಲ್ಲೆ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಎಷ್ಟು ಶೌಚಾಲಯಗಳನ್ನು ಕಟ್ಟಲು ಗುರಿ ನಿಗದಿಪಡಿಸಲಾಗಿತ್ತು; ಎಷ್ಟು ಶೌಚಾಲಯಗಳನ್ನು ಕಟ್ಟಲಾಗಿದೆ?

ಶ್ರೀ ಎಂ.ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :—

ಅ. ಗ್ರಾಮೀಣ ಪ್ರದೇಶಗಳಲ್ಲಿ ವೈಯಕ್ತಿಕ ಕೌಟುಂಬಿಕ ಶೌಚಾಲಯಗಳನ್ನು ಕಟ್ಟಿಕೊಳ್ಳಲು ನಿರ್ಮಲ ಗ್ರಾಮ ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿನ ಫಲಾನುಭವಿಗಳಿಗೆ ಘಟಕ ಒಂದಕ್ಕೆ ರೂ.೨೦೦೦/- ಗಳ ಸಹಾಯಧನವನ್ನು ಮತ್ತು ಬಡತನ ರೇಖೆಗಿಂತ ಮೇಲಿನ ಫಲಾನುಭವಿಗಳಿಗೆ ಘಟಕ ಒಂದಕ್ಕೆ ರೂ.೧೨೦೦/- ಗಳ ಸಹಾಯಧನವನ್ನು ನೀಡಲಾಗುತ್ತಿದೆ.

ಆ. ಕಡಿಮೆ ವೆಚ್ಚದ ಕೌಟುಂಬಿಕ ಶೌಚಾಲಯದ ನಿರ್ಮಾಣಕ್ಕಾಗಿ ಘಟಕ ವೆಚ್ಚವನ್ನು ರೂ.೨೫೦೦/-ಗೆ ಸೀಮಿತಗೊಳಿಸಿದ್ದು ಸದರಿ ಘಟಕ ವೆಚ್ಚದ ಆಧಾರದ ಮೇಲೆ ಸಹಾಯಧನವನ್ನು ನಿಗದಿಪಡಿಸಲಾಗಿದೆ. ಇನ್ನುಳಿದ ಹಣವನ್ನು ಫಲಾನುಭವಿಗಳೇ ಭರಿಸಬೇಕಾಗುತ್ತದೆ.

ಇ. ಸಧ್ಯ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಈ. ವಿವರಗಳನ್ನು ಅನುಬಂಧ-೧ ರಲ್ಲಿ ನೀಡಲಾಗಿದೆ.

ಉ. ವಿವರಗಳನ್ನು ಅನುಬಂಧ-೧ ರಲ್ಲಿ ನೀಡಲಾಗಿದೆ.

ಅನುಬಂಧ -1

ವಿಧಾನ ಸಭೆ ಚುಕ್ಕೆರಹಿತ ಪ್ರಶ್ನೆ ಸಂಖ್ಯೆ 2962 ರ ಉತ್ತರದ ಲಗತ್ತು

ನಿರ್ಮಲ ಗ್ರಾಮ ಯೋಜನೆಯಡಿ 20001-01ನೇ ಸಾಲಿನಲ್ಲಿ ವೈಯಕ್ತಿಕ ಕೌಟುಂಬಿಕ ಶೌಚಾಲಯಗಳ ನಿರ್ಮಾಣಕ್ಕಾಗಿ ಬೆಳಗಾವಿ ಜಿಲ್ಲೆಗೆ ನಿಗದಿಪಡಿಸಿದ ತಾಲ್ಲೂಕುವಾರು ಗುರಿ ಮತ್ತು ಸಾಧನೆಯ ವಿವರಗಳು

ಕ್ರಮ ಸಂಖ್ಯೆ	ತಾಲ್ಲೂಕು	ಗುರಿ	ಸಾಧನೆ
1.	ಅಥಣಿ	590	856
2.	ಬೈಲಹೊಂಗಲ	590	829
3.	ಬೆಳಗಾವಿ	2840	2839
4.	ಚಿಕ್ಕೋಡಿ	745	855
5.	ಗೋಕಾಕ್	590	112
6.	ಹುಕ್ಕೇರಿ	590	139
7.	ಖಾನಾಪುರ	849	1259
8.	ರಾಮದುರ್ಗ	410	407
9.	ರಾಯಭಾಗ್	390	855
10.	ಸವದತ್ತಿ	305	504
	ಒಟ್ಟು	8093	8655

ಬೈಲಹೊಂಗಲ ತಾಲ್ಲೂಕಿನ ದೊಡವಾಡ ಗ್ರಾಮದಲ್ಲಿ ಸರ್ಕಾರಿ ಐ.ಟಿ.ಐ ಕಾಲೇಜು ಪ್ರಾರಂಭ

2565(2963) **ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) :—** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾಂವ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ದೊಡವಾಡ ಗ್ರಾಮದಲ್ಲಿ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಮಹಾ ವಿದ್ಯಾಲಯ ಇರುವ ಸಂಗತಿ ನಿಜವೇ, ಈ ಮಹಾ ವಿದ್ಯಾಲಯದಲ್ಲಿ ಕಲಾ ಮತ್ತು ವಿಜ್ಞಾನ ವಿಭಾಗಗಳು ನಡೆಯುತ್ತಿದ್ದ ಸಂಗತಿ ನಿಜವೇ?

ಆ) ಈ ಮಹಾ ವಿದ್ಯಾಲಯದಲ್ಲಿ ಕಲಾ ಹಾಗೂ ವಿಜ್ಞಾನ ವಿಭಾಗಗಳನ್ನು ನಡೆಸುವ ಸಲುವಾಗಿ ಸುಮಾರು 70 ಲಕ್ಷ ರೂಪಾಯಿಗಳ ಕಟ್ಟಡವನ್ನು ಕಟ್ಟಿದ ಸಂಗತಿ ನಿಜವೆ?

ಇ) ಇಲ್ಲಿನ ವಿಜ್ಞಾನ ವಿಭಾಗವನ್ನು ಬೇರೆ ಕಡೆಗೆ ಸ್ಥಳಾಂತರಿಸಿದ ಸಂಗತಿ ನಿಜವೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಹೌದು

ಆ) ಹೌದು

ಇ) ಹೌದು. ವಿದ್ಯಾರ್ಥಿಗಳ ಕೊರತೆಯಿಂದ ವಿಜ್ಞಾನ ವಿಭಾಗವನ್ನು ಸ್ಥಳಾಂತರಿಸಲಾಗಿದೆ.

ಕಡೂರು ತಾಲ್ಲೂಕಿನಲ್ಲಿ ದಶ ಲಕ್ಷ ಬಾವಿ ಯೋಜನೆ ವಿಫಲತೆ

2567 (3372) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1988-89ರಲ್ಲಿ ಕಡೂರು ತಾಲ್ಲೂಕಿನಲ್ಲಿ ದಶ ಲಕ್ಷ ಬಾವಿ ಯೋಜನೆಯಡಿಯಲ್ಲಿ ಎಷ್ಟು ಬಾವಿ ಮಂಜೂರು ಮಾಡಲಾಗಿದೆ.

ಆ) ಲಕ್ಕೇನಹಳ್ಳಿ ಮತಗಟ್ಟೆ ಕಡೂರು ತಾಲ್ಲೂಕು ಹಾಗೂ ಚೀರವಹಳ್ಳಿ ಫಲಾನುಭವಿಗಳಿಗೆ ದಶ ಲಕ್ಷ ಬಾವಿ ಯೋಜನೆಯು ಮಂಜೂರಾಗಿದೆಯೆ; ಹಾಗಿದ್ದಲ್ಲಿ ಮಂಜೂರಾಗಿರುವ ಬಾವಿಯಲ್ಲಿ ನೀರು ಬಂದಿದೆಯೆ;

ಇ) ಈ ಯೋಜನೆಯ ವಿಫಲದ ಬಗ್ಗೆ ಪಲಾನುಭವಿಗಳು ಸಂಬಂಧಪಟ್ಟ ಆಧಿಕಾರಿಗಳಿಗೆ ಮನವಿಕೊಟ್ಟಿರುವುದು ನಿಜವೆ;

ಈ) ಹಾಗಿದಲ್ಲಿ ಈ ಯೋಜನೆಯಿಂದ ಫಲಾನುಭವಿಗಳಿಗೆ ನೀಡಿದ ಸಾಲವೆಷ್ಟು ಹಾಗೂ ಇಲ್ಲಿಯವರೆಗೆ ಸಾಲದ ಮೇಲಿನ ಬಡ್ಡಿ ಎಷ್ಟು?

ಶ್ರೀ ಎಂ.ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :—

ಅ) 1988-89 ಸಾಲಿನಲ್ಲಿ ಕಡೂರು ತಾಲ್ಲೂಕಿಗೆ ದಶಲಕ್ಷ ಬಾವಿ ಯೋಜನೆಯಡಿ ಬಾವಿ ಮಂಜೂರಾಗಿರುವುದಿಲ್ಲ

ಆ) ಲಕ್ಕೇನಹಳ್ಳಿ ಮತಗಟ್ಟೆ ಕಡೂರು ತಾಲ್ಲೂಕು ಹಾಗೂ ಚೀರನಹಳ್ಳಿ ಫಲಾನುಭವಿಗಳಿಗೆ ದಶ ಲಕ್ಷ ಬಾವಿ ಯೋಜನೆಯಲ್ಲಿ ಬಾವಿ ಮಂಜೂರಾಗಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಕಡೂರು ತಾಲ್ಲೂಕಿನಲ್ಲಿ ಮಲೇರಿಯಾ ರೋಗ ನಿವಾರಣೆ

2568 (3373) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಡೂರು ತಾಲ್ಲೂಕಿನಲ್ಲಿ ಮಲೇರಿಯಾ ರೋಗಕ್ಕೆ ಎಷ್ಟು ಜನರು ತುತ್ತಾಗಿರುವರು; ಸೋಂಕು ಎಷ್ಟು ಸಾಬೀತಾಗಿದೆ. ಹಾಗಿದ್ದಲ್ಲಿ ನಿವಾರಣೆಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) 2001ನೇ ಸಾಲಿನಲ್ಲಿ ಕಡೂರು ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಒಟ್ಟು 51908 ರಕ್ತ ಲೇಪನಗಳನ್ನು ಸಂಗ್ರಹಿಸಿ ಪರೀಕ್ಷಿಸಿ ಅದರಲ್ಲಿ 9720 ಮಲೇರಿಯಾ ಪ್ರಕರಣಗಳು ಕಂಡುಬಂದಿರುತ್ತವೆ. ಇದೇ ಸಾಲಿನಲ್ಲಿ ಇಲ್ಲಿಯವರೆಗೆ ಒಟ್ಟು 3 ಮರಣ ಪ್ರಕರಣಗಳು ಮಲೇರಿಯಾದಿಂದ ಎಂದು ಧೃಡಪಟ್ಟಿರುತ್ತದೆ.

ಮಲೇರಿಯಾ ರೋಗ ನಿಟಹತ್ರಣಕ್ಕೆ ಕಡೂರು ತಾಲ್ಲೂಕಿನಲ್ಲಿ ಈ ಕೆಳಕಂಥ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಸಮಸ್ಯೆಯಲ್ಲದ ಮಲೆನಾಡು ಪ್ರದೇಶಗಳಿಂದ ಪುರುಷ ಆರೋಗ್ಯ ಸಹಾಯಕರು ಮತ್ತು ಪ್ರಯೋಗಶಾಲಾ ತಂತ್ರಜ್ಞರನ್ನು ನಿಯೋಜಿಸಿ ತೀವ್ರ ಜ್ವರ ಸಮೀಕ್ಷೆ ಶೀಘ್ರ ಪರೀಕ್ಷೆ ಮತ್ತು ತ್ವರಿತ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ.

2. 2001ನೇ ಸಾಲಿನಲ್ಲಿ ಮೊದಲನೇ ಸುತ್ತಿಗೆ 5 ಮೆಟ್ರಿಕ್ ಟನ್ ಮಲಾಥಿಯಾನ್ ಕೀಟನಾಶಕವನ್ನು ಸಮಸ್ಯಾತ್ಮಕ ಗ್ರಾಮಗಳಲ್ಲಿ ರೋಗ ವಾಹಕ ಸೊಳ್ಳೆಗಳ ನಿಯಂತ್ರಣಕ್ಕಾಗಿ

ಸಿಂಪಡಿಸಲಾಗಿದ್ದು ಆಗಸ್ಟ್ ತಿಂಗಳಿಗೆ 2ನೇ ಸುತ್ತಿಗೂ 5 ಮೆಟ್ರಿಕ್ ಟನ್ ಮೆಲಾಥಿಯನ್ ಮತ್ತು 440 ಕೆ.ಜಿ ಸಿಂಥಟಿಕ್ ಪೈರಿಥ್ರಾಯಿಡ್ ಕೀಟನಾಶಕವನ್ನು ಪೂರೈಸಲು ವ್ಯವಸ್ಥೆ ಮಾಡಲಾಗುತ್ತಿದೆ.

ಆ) ಕುಕ್ಕರಹಳ್ಳಿ ಮತ್ತು ವಸಂತನಗರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಈ ಶಾಲೆ ಕಟ್ಟಡಗಳ ದುರಸ್ಥಿ ಕಾಮಗಾರಿಕೆ ಕ್ರಮಕೈಗೊಂಡಿದೆ. ಸರ್ಕಾರಿ ಪ್ರೌಢಶಾಲೆ, ಮೇಜರ್ ಬ್ಲಾಕ್ ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕುಕ್ಕರ ಹಳ್ಳಿ ಇಲ್ಲಿಗೆ ಪೀಠೋಪಕರಣ ಸರಬರಾಜು ಮಾಡಿ ಕುಡಿಯುವ ನೀರು ಹಾಗೂ ಶೌಚಾಲಯ ಕಲ್ಪಿಸಲಾಗಿದೆ.

ಇ) ಹಂತ ಹಂತವಾಗಿ ಆರ್ಥಿಕ ಸೌಲಭ್ಯ ಆದರಿಸಿ ಈ ಸಮಸ್ಯೆ ಬಗೆಹರಿಸಲು ಕ್ರಮಕೈಗೊಳ್ಳಲಾಗುವುದು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪದವಿ ತರಗತಿಗಳ ಶುಲ್ಕ ಹೆಚ್ಚಳ

2610 (3147) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪದವಿ ತರಗತಿಗಳ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಶುಲ್ಕವನ್ನು ಹೆಚ್ಚಿಸಲಾಗಿದೆಯೆ;

ಆ) ಹಾಗಿದ್ದಲ್ಲಿ ಈ ಹಿಂದೆ ಇದ್ದ ಶುಲ್ಕದ ವಿವರವೇನು ಈಗ ಹೆಚ್ಚಿಸಿರುವ ಶುಲ್ಕದ ವಿವರಗಳೇನು;

ಇ) ಹೀಗೆ ಅವೈಜ್ಞಾನಿಕವಾಗಿ ಶುಲ್ಕ ಹೆಚ್ಚಿಸಿರುವುದರಿಂದ ವಿದ್ಯಾರ್ಥಿಗಳು ಹಾಗೂ ಪೋಷಕರು ಕಂಗಾಲಾಗಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಈ ರೀತಿಯಾಗಿ ಹೆಚ್ಚಿಸಿರುವ ಶುಲ್ಕವನ್ನು ಕಡಿಮೆ ಮಾಡುವ ಬಗ್ಗೆ ಸರ್ಕಾರದ ತೀರ್ಮಾನವೇನು?

ಡಾ: ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :—

ಅ) ಹೌದು.

ಆ) ಒಂದನೇ ಅನುಬಂಧದಲ್ಲಿದೆ.

ಇ) ಇಲ್ಲ.

ಈ) ವಿಶ್ವವಿದ್ಯಾಲಯಗಳು ತಮ್ಮದೇ ಆದ ಸಂಪನ್ಮೂಲಗಳನ್ನು ರೂಢಿಸಿಕೊಳ್ಳಲು ಶುಲ್ಕ ಪರಿಷ್ಕರಣೆ ಅನಿವಾರ್ಯವಾಗಿದೆ. ಆದ್ದರಿಂದ ಹೆಚ್ಚಿಸಿರುವ ಶುಲ್ಕವನ್ನು ಕಡಿಮೆ ಮಾಡಲು ಆಸ್ಪದವಿಲ್ಲ.

ಅನುಬಂಧ - 1 Annexure - 1

ಪದವಿ ಕೋರ್ಸುಗಳಿಗೆ Degree Courses

ವಿವರ Details	2000-2001ರಲ್ಲಿದ್ದಂತೆ Fees in the year 2001-2002	2001-2002ನೇ ಸಾಲಿಗೆ ನಿಗದಿಪಡಿಸಿರುವುದು Fees fixed for the year 2000-2001
(1) ಪ್ರವೇಶ ಶುಲ್ಕ Admission fee	30-00	50-00
(2) ನೊಂದಣಿ ಶುಲ್ಕ Registration fee	182-00	300-00
(3) ಕ್ರೀಡಾಭಿವೃದ್ಧಿ ಶುಲ್ಕ Sports fee	44-00	55-00
(4) ಸಾಂಸ್ಕೃತಿಕ ಚಟುವಟಿಕೆಗಾಗಿ ಶುಲ್ಕ Cultural Activities fee	12-00	20-00
(5) ಯು ಇ ಐ ಜಿ ಬಿ U E I G B	24-00	30-00
(6) ವಿದ್ಯಾರ್ಥಿಗಳ ಸಹಾಯ ನಿಧಿ Students help fund	20-00	25-00
(7) ವಿಶ್ವವಿದ್ಯಾನಿಲಯಗಳ ಶುಲ್ಕ University fee	--	50-00
(8) ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ Students Welfare	12-00	20-00
(9) ಮೂಲಭೂತ ಸೌಕರ್ಯಕ್ಕೆ For Infrastructural facilities	55-00	80-00
(10) ಸುವರ್ಣ ಮಹೋತ್ಸವ ನಿಧಿಗೆ Golden Jubilee Celebration fund	--	15-00

ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ P.G. Courses

2000-2001ದಲ್ಲಿದ್ದಂತೆ Fees in the year year 2000-2001	2001-2002ನೇ ಸಾಲಿಗೆ ನಿಗದಿಪಡಿಸಿರುವುದು Fees fixed for the year 2001-2002
30-00	50-00
182-00	300-00
44-00	50-00
12-00	20-00
24.30	30-00
20-00	25-00
--	41-00
12-00	20-00
165.00	80.00
--	15-00

ನಿವೃತ್ತಿ, ಅಕಾಲಿಕ ಮರಣ ಇತ್ಯಾದಿ ಕಾರಣಗಳಿಂದ ತೆರವಾಗುವ ಹುದ್ದೆಗಳನ್ನು ಅನುದಾನರಹಿತ ಹುದ್ದೆಗಳೆಂದು ಪರಿಗಣಿಸುತ್ತಿರುವುದು

2611(3148) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪದವಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ಅಕಾಲಿಕ ಮರಣ ಇತ್ಯಾದಿ ಕಾರಣಗಳಿಂದ ತೆರವಾಗುವ ಹುದ್ದೆಗಳನ್ನು ಅನುದಾನ ರಹಿತ ಹುದ್ದೆಗಳೆಂದು ಪರಿಗಣಿಸಲು ಸರ್ಕಾರ ತೀರ್ಮಾನಿಸಿದೆಯೆ;

ಆ) ಈ ಬಗ್ಗೆ ವಿರೋಧವಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ;

ಇ) ಈ ಹುದ್ದೆಗಳನ್ನು ಅನುದಾನ ಸಹಿತ ಹುದ್ದೆಗಳಾಗೇ ಇರುವಂತೆ ಬಿಡಲು ಸರ್ಕಾರದ ತೀರ್ಮಾನವೇನು?

ಡಾ: ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :—

ಅ) ಹೌದು

ಆ) ಬಂದಿದೆ

ಇ) ಉದ್ಭವಿಸುವುದಿಲ್ಲ

ರಾಜ್ಯದಲ್ಲಿ ಮಲೇರಿಯಾ ರೋಗ ನಿಯಂತ್ರಣ

2612(2969) ಸಿಂಧ್ಯ ಪಿ.ಜಿ.ಆರ್ (ಕನಕಪುರ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಮಲೇರಿಯಾ ರೋಗವು ಹರಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ ರೋಗವು ಯಾವ ಯಾವ ತಾಲ್ಲೂಕುಗಳಲ್ಲಿ ಇದುವರೆಗೆ ಹರಡಿದೆ;

ಇ) ಮಲೇರಿಯಾ ರೋಗದಿಂದ, ರಾಜ್ಯದಲ್ಲಿ ಕಳೆದ 2 ವರ್ಷಗಳಿಂದ ಸತ್ತವರ ಸಂಖ್ಯೆ ಎಷ್ಟು;

ಈ) ಈ ರೋಗವನ್ನು ತಡೆಗಟ್ಟಲು ರಾಜ್ಯ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಉ) ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಸಹಾಯಕ್ಕೇನಾದರೂ ಬಂದಿದೆಯೆ? (ವಿವರ ಒದಗಿಸುವುದು)

ಡಾ: ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):—

ಅ) ಈ ಕೆಳಕಂಡ 24 ತಾಲ್ಲೂಕುಗಳಲ್ಲಿ ಮಲೇರಿಯಾ ರೋಗ ಹೆಚ್ಚಾಗಿರುವುದು ಕಂಡುಬಂದಿದೆ.

ಮುಳಬಾಗಿಲು, ಬಾಗೇಪಲ್ಲಿ, ಗುಡಿಬಂಡೆ, ಹಿರಿಯೂರು, ಹೊಸದುರ್ಗ, ಚಿಕ್ಕನಾಯಕನಹಳ್ಳಿ, ಶಿರಾ, ಗೋಕಾಕ್, ಮುದ್ದೇಬಿಹಾಳ್, ಶೋರಾಪುರ, ಲಿಂಗಸುಗೂರು, ದೇವದುರ್ಗ, ಕೆ.ಆರ್.ನಗರ, ಮಂಡ್ಯ, ಪಾಂಡವಪುರ, ಕೆ.ಆರ್.ಪೇಟೆ ಅರಸೀಕೆರೆ, ಕಡೂರು, ಬಾದಾಮಿ, ಹುನಗುಂದ, ಕುಷ್ಟಗಿ, ಯಲಬುರ್ಗ, ಉಡುಪಿ ಮತ್ತು ಕಾರ್ಕಳ.

ಆ)	1999	: 11
	2000	: 14
	2001 (ಇಲ್ಲಿಯವರೆಗೆ)	: 7

ರಾಜ್ಯದಲ್ಲಿ ಮಲೇರಿಯ ರೋಗ ನಿಯಂತ್ರಣಕ್ಕಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ

1) ರಾಜ್ಯದಲ್ಲಿ 115 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪ್ರದೇಶಗಳನ್ನು "ಸಮಸ್ಯಾತ್ಮಕ" ಎಂದು ಗುರುತಿಸಲಾಗಿದೆ
2) ಜ್ವರ ನಿವಾರಣೆ, ರೋಗ ಪತ್ತೆ ಹಾಗೂ ತ್ವರಿತ ಚಿಕಿತ್ಸಾ ಕಾರ್ಯವನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದೆ.
3) ಸಮಸ್ಯಾತ್ಮಕ ಪ್ರದೇಶಗಳಲ್ಲಿ ಜ್ವರ ತೀವ್ರ ಚಿಕಿತ್ಸೆ ಮತ್ತು ತೀವ್ರ ಜ್ವರ ಸಮೀಕ್ಷಣಾ ಕಾರ್ಯವನ್ನು ಚುರುಕುಗೊಳಿಸಲಾಗಿದೆ.
4) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಪ್ರಯೋಗಾಲಯ ವ್ಯವಸ್ಥೆ ಮಾಡಲಾಗಿದ್ದು ಇದಕ್ಕಾಗಿ 378 ಕಿರಿಯ ಪ್ರಯೋಗಶಾಲಾ ತಂತ್ರಜ್ಞರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗಿದೆ.
5) ಎಲ್ಲಾ ಖಚಿತ ಮಲೇರಿಯ ಪ್ರಕರಣಗಳಿಗೆ ತೀವ್ರ ಚಿಕಿತ್ಸೆ ನೀಡಲಾಗುತ್ತಿದೆ ಹಾಗೂ ಸಮಸ್ಯಾತ್ಮಕ ಪ್ರದೇಶಗಳಲ್ಲಿ ಆದ್ಯತೆ ಮೇರೆಗೆ ಪರಿಷ್ಕೃತ ವಿಧಾನದಲ್ಲಿ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

6) ರೋಗ ವಾಹಕ ಸೊಳ್ಳೆಗಳ ನಿಯಂತ್ರಣಕ್ಕಾಗಿ ಆಯ್ದ ಪ್ರದೇಶಗಳಲ್ಲಿ ನಿಯಮಿತವಾಗಿ ಕೀಟನಾಶಕ ಸಿಂಪರಣಾ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದೆ.

7) ದೂರದ ಗ್ರಾಮಾಂತರ ಪ್ರದೇಶಗಳಲ್ಲಿ ಜ್ವರ ಪೀಡಿತರಿಗೆ ತುರ್ತಾಗಿ ಚಿಕಿತ್ಸೆ ಅನುಕೂಲವಾಗುವಂತೆ ಔಷಧಿ ವಿತರಣಾ ಕೇಂದ್ರಗಳು ಮತ್ತು ಜ್ವರ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

8) ಸೂಕ್ತ ಪ್ರದೇಶಗಳಲ್ಲಿ ರೋಗ ವಾಹಕ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಲು ಜೈವಿಕ ಪರಿಸರ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

9) ಇಲಾಖೆಯ ಹಿರಿಯ ಅಧಿಕಾರಿಗಳು ಎಲ್ಲಾ ಸಂಮಸ್ಯಾತ್ಮಕ ಪ್ರದೇಶಗಳಿಗೆ ಖುದ್ದಾಗಿ ಆಗಾಗ್ಗೆ ಭೇಟಿ ನೀಡಿ ಕಣ್ಗಾವಲು ನಡೆಸಿ, ಪ್ರಯೋಗಶಾಲಾ ಪರೀಕ್ಷೆಗಳನ್ನು ತೀವ್ರತರವಾಗಿ ತಪಾಸಣೆ ನಡಿಸಿ ಸತತವಾಗಿ ವಿಶೇಷ ಗಮನಹರಿಸಿ ಉಸ್ತುವಾರಿ ನಡೆಸುತ್ತಿದ್ದಾರೆ.

10) ಮಲೇರಿಯ ನಿಯಂತ್ರಣದ ಬಗ್ಗೆ ಜನಜಾಗೃತಿ ಮೂಡಿಸಲು ಆರೋಗ್ಯ ಶಿಕ್ಷಣವನ್ನು ನೀಡಲಾಗುತ್ತಿದ್ದು ಪ್ರತಿವರ್ಷ ಜೂನ್ ತಿಂಗಳಲ್ಲಿ ಮಲೇರಿಯ ಮಾಸಾಚರಣೆಯನ್ನು ರಾಜ್ಯಾದ್ಯಂತ ಆಚರಿಸಲಾಗುತ್ತಿದೆ.

ಉ) ಕೇಂದ್ರ ಸರ್ಕಾರವು ಮಲೇರಿಯಾ ವಿರೋಧ ಕಾರ್ಯಕ್ರಮದಡಿಯಲ್ಲಿ (ಗ್ರಾಮಾಂತರ ಮತ್ತು ನಗರ) ನಗದು ರೂಪದಲ್ಲಿ ಈ ಕೆಳಕಂಡ ಸಾಮಗ್ರಿಗಳನ್ನು ಪ್ರತಿವರ್ಷವೂ ಒದಗಿಸುತ್ತಿದೆ.

1) ಡಿ.ಡಿಟಿ. ಮತ್ತು ಮೆಲಾಥಿಯಾನ್ ಕೀಟನಾಶಕಗಳು

2) ಮಲೇರಿಯಾ ನಿರೋಧಕ ಗುಳಿಗೆಗಳು ಮತ್ತೆ ಚಿಕಿತ್ಸೆ ಮದ್ದುಗಳು

3) ಕೀಟನಾಶಕ ದ್ರಾವಣಗಳು (Larvicides)

2001-02ನೇ ಸಾಲಿನಲ್ಲಿ ಈ ಕೆಳಕಂಡ ಸಾಮಗ್ರಿಗಳನ್ನು ಕೇಂದ್ರ ಸರ್ಕಾರವು ಸರಬರಾಜು ಮಾಡಿದೆ.

ಅ) ಡಿ.ಡಿಟಿ. 25ಶೇ. ಕೀಟನಾಶಕ	-	110 ಮೆಟ್ರಿಕ್ ಟನ್
ಆ) ಕ್ಲೋರೋಕ್ವಿನ್ ಗುಳಿಗೆಗಳು	-	300 ಲಕ್ಷಗಳು
ಇ) ಪ್ರೈಮಾಕ್ವಿನ್ 7.5 ಎಂ.ಜಿ	-	16 ಲಕ್ಷಗಳು
ಈ) ಸಲ್ಫಾಡಾಕ್ಸಿನ್/ಪೈರೀಮಿಥಾಮಿನ್	-	50,000 ಗುಳಿಗೆಗಳು
ಉ) ಕ್ವಿನೈನ್ ಚುಚ್ಚುಮದ್ದು	-	3,000 ಅಂಪ್ಯೂಲ್‌ಗಳು

ರಾಜ್ಯದಲ್ಲಿ ಪ್ರೀಯೂನಿವರ್ಸಿಟಿ ಕಾಲೇಜುಗಳ ಪ್ರವೇಶ

2613(2970) ಸಿಂಧ್ಯ ಪಿ.ಜಿ.ಆರ್ (ಕನಕಪುರ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ಪ್ರೀಯೂನಿವರ್ಸಿಟಿ ತರಗತಿಗಳನ್ನು ನಡೆಸುವ ಕಾಲೇಜುಗಳ ಸಂಖ್ಯೆ ಎಷ್ಟು;

ಆ) ಕಳೆದ ವರ್ಷದಲ್ಲಿ ಈ ಎಲ್ಲಾ ಕಾಲೇಜುಗಳಲ್ಲೂ ಸರ್ಕಾರಿ ನಿಗಧಿಸಿದ ಸಂಖ್ಯೆ ಎಷ್ಟು; ಹಾಗೂ ಪ್ರವೇಶ ಆಗಿರುವುದೆಷ್ಟು;

ಇ) ಪ್ರೀಯೂನಿವರ್ಸಿಟಿಯಲ್ಲಿ ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಪ್ರವೇಶ ಸಿಕ್ಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಪ್ರವೇಶದ ಸಂದರ್ಭದಲ್ಲಿ ರೋಸ್ಟರ್ ಪದ್ಧತಿಯನ್ನು ಉಲ್ಲಂಘಿಸಿರುವುದು ಮತ್ತು ಡೊನೇಷನ್‌ನನ್ನು ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಉ) ಇವುಗಳನ್ನು ತಪ್ಪಿಸಲು ಸಿ.ಇ.ಟಿ. ಮಾದರಿಯಲ್ಲಿ ಪ್ರವೇಶ ಪರೀಕ್ಷೆಯನ್ನು ನಡೆಸಲು ಸರ್ಕಾರದ ಒಪ್ಪಿಗೆ ಇದೆಯೆ; ಒಪ್ಪಿದಲ್ಲಿ ಎಂದಿನಿಂದ ಜಾರಿಗೆ ತರಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ರಾಜ್ಯದಲ್ಲಿ ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದಲ್ಲಿ ಒಟ್ಟು 2095 ಶಿಕ್ಷಣವನ್ನು ಬೋಧಿಸುವ ಕಾಲೇಜುಗಳು ಇರುತ್ತವೆ.

ಆ) ಪದವಿಪೂರ್ವ ಶಿಕ್ಷಣದಲ್ಲಿ - ಒಂದು ತರಗತಿಗೆ 90 ವಿದ್ಯಾರ್ಥಿಗಳನ್ನು ನಿಗಧಿಪಡಿಸಲಾಗಿದೆ. ವಿವಿಧ ಕಾಲೇಜುಗಳಿಗೆ ಸಂಯೋಜನೆಗಳನ್ನು ಕೊಟ್ಟಿರುವ ಆಧಾರದ ಮೇಲೆ ಮತ್ತು ಮೂಲಭೂತ ಸೌಲಭ್ಯಗಳು ಇರುವುದರ ಮೇಲೆ ತರಗತಿಗಳನ್ನು ಕೊಡಲಾಗಿದೆ. ಎಲ್ಲಾ ಕಾಲೇಜುಗಳಲ್ಲಿ ಸುಮಾರು 4 ಲಕ್ಷ ವಿದ್ಯಾರ್ಥಿಗಳನ್ನು ಪ್ರಥಮ ಪಿ.ಯುಸಿಗೆ ತೆಗೆದುಕೊಳ್ಳಲು ಅವಕಾಶವಿರುತ್ತದೆ. 2000-01ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಪಿಯುಸಿಗೆ 3,22,039 ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ.

ಇ) ಬಂದಿದೆ. ಅನೇಕ ವಿದ್ಯಾರ್ಥಿಗಳು ಬೇರೆ ಬೇರೆ ರಾಜ್ಯಗಳಲ್ಲಿ 10ನೇ ತರಗತಿ ಮುಗಿಸಿಕೊಂಡು ಇಲ್ಲಿ ಬಂದಿ ಪ್ರಥಮ ಪಿಯುಸಿ ತರಗತಿಗೆ ದಾಖಲಾಗಿರುವುದು ಅನೇಕ ವರ್ಷಗಳಿಂದ ನಡೆದುಬಂದ ಪದ್ಧತಿಯಾಗಿದೆ. ಸಿಬಿಎಸ್‌ಇ/ಐಸಿಎಸ್‌ಇ ಹಾಗೂ ಬೇರೆ ರಾಜ್ಯಗಳು ಬೋರ್ಡ್ ನಡೆಸುವ ಪರೀಕ್ಷೆಗಳಿಂದ ಪಾಸಾದ ವಿದ್ಯಾರ್ಥಿಗಳು ಬರುತ್ತಾರೆ.

ಈ) ಈ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ. ಇಲಾಖೆಯ ಗಮನಕ್ಕೆ ನಿರ್ದಿಷ್ಟ ದೂರುಗಳು ಬಂದಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಇಲಾಖೆ ಹೊರಡಿಸಿರುವ ದಾಖಲಾತಿ ಸುತ್ತೋಲೆಯಲ್ಲಿ ರೋಸ್ಟರ್ ಪದ್ಧತಿಯನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ.

ಉ) ಇಂತಹ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣದ ಸೀಟುಗಳು

2614(2971) ಸಿಂಧ್ಯ ಪಿ.ಜಿ.ಆರ್ (ಕನಕಪುರ) :— ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣದ ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಸರ್ಕಾರ ಹಾಗೂ ಖಾಸಗಿ ವಲಯ ಮಂಜೂರಾತಿ ಮಾಡಿರುವ ಸೀಟುಗಳ ಸಂಖ್ಯೆ ಎಷ್ಟು? (ಕಾಲೇಜುವಾರು ವಿವರ ನೀಡುವುದು)

ಆ) ಕಳೆದ ವರ್ಷ ಎಲ್ಲಾ ಸೀಟುಗಳು ಭರ್ತಿಯಾಗಿವೆಯೇ? (ಕಾಲೇಜುವಾರು ವಿವರ ನೀಡುವುದು)

ಇ) ಸರ್ಕಾರದ ಇಲಾಖೆಯಲ್ಲಿರುವ ವೈದ್ಯರುಗಳಿಗೆ ಇನ್-ಸರ್ವೀಸ್ ಕೋಟಾ ಎಷ್ಟು? ಹಾಗೂ ಇವುಗಳು ಭರ್ತಿಯಾಗಿವೆಯೇ? (ಕಾಲೇಜುವಾರು ವಿವರ ನೀಡುವುದು)

ಶ್ರೀಮತಿ ನಫೀಸ್ ಫಜಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :—

ಅ) ಸರ್ಕಾರಿ ಮತ್ತು ಖಾಸಗೀ ವೈದ್ಯಕೀಯ ವಿದ್ಯಾಲಯಗಳಲ್ಲಿರುವ ಎಂಬಿಬಿಎಸ್ ಮತ್ತು ಸ್ನಾತಕೋತ್ತರ ಪದವಿ ಸೀಟುಗಳ ಕಾಲೇಜುವಾರು ವಿವರಣಾ ಪಟ್ಟಿ ಲಗತ್ತಿಸಲಾಗಿದೆ.

ಆ) ಎಲ್ಲಾ ಸೀಟುಗಳು ಭರ್ತಿಯಾಗಿರುವುದಿಲ್ಲ. ಕಾಲೇಜುವಾರು ವಿವರ ವಾದ ವಿತರಣಾ ಪಟ್ಟಿ ಲಗತ್ತಿಸಲಾಗಿದೆ.

ಇ) ಸರ್ಕಾರಿ ಸೇವಾ ವೈದ್ಯರುಗಳಿಗೆ ೨೦೦೦-೨೦೦೧ನೇ ಸಾಲಿನಲ್ಲಿ ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮೊ ಕೋರ್ಸುಗಳ ವಿವಿಧ ವಿಷಯಗಳಲ್ಲಿ ಒಟ್ಟಾರೆ ಇರುವ ಇನ್-ಸರ್ವೀಸ್ ಕೋಟಾ ಸ್ಥಾನಗಳು ಈ ಕೆಳಕಂಡಂತೆ ಇರುತ್ತವೆ.

ಪದವಿ ಸ್ಥಾನಗಳು (ಎಲ್ಲಾ ವಿಷಯಗಳು ಸೇರಿದಂತೆ)	--	೭೯
ಡಿಪ್ಲೊಮೊ ಸ್ಥಾನಗಳು (ಎಲ್ಲಾ ವಿಷಯಗಳು ಸೇರಿದಂತೆ)	--	೭೭
ಒಟ್ಟು		೧೫೬

ಕಾಲೇಜುವಾರು ಸ್ಥಾನಗಳ ಹಂಚಿಕೆ, ಭರ್ತಿಯಾದ ಸ್ಥಾನಗಳು, ಉಳಿದ ಸ್ಥಾನಗಳ ವಿವರಗಳನ್ನು ಅನುಬಂಧದಲ್ಲಿ ಕಾಣಿಸಿದೆ.

ANNEXURE - 1

Statement showing the No. of MBBS and Post Graduate Medical seats in Government and Private Medical Colleges for year 2000-2001

Sl. No.	Name of the College	No. of MBBS seats	No. of P.G. seats
1.	Bangalore Medical College, Bangalore	150	141
2.	Mysore Medical College, Mysore	150	141
3.	Karnataka Instt. of Med. Sciences, Hubli	50	103
4.	Vijayanagara Instt. of Med. Sciences, Bellary	50	103
5.	J.J.M. Medical College, Davangere	245	179
6.	J.N. Medical College, Belgaum	150	145
7.	M.S. Ramaiah Medical College, B'lore	150	59
8.	Devaraja Urs Medical College, Kolar	150	33
9.	Adi Chunchanagiri Institute of Medical Sciences, Bellur	100	44
10.	B.R. Ambedkar Medical College, B'lore	100	28
11.	J.S.S. Medical College, Mysore	150	84
12.	Kempegowda Instt. of Med. Sciences, B'lore	120	40
13.	M.R. Medical College, Gulbarga	100	109
14.	B.M. Patil Medical College, Bijapur	150	41
15.	Siddhartha Medical College, Tumkur	130	19
16.	K.S. Hegde Medical Academy, Mangalore	100	Nil
17.	Al-Ameen Medical College, Bijapur	100	08
18.	Yenepoya Medical College, Mangalore	100	Nil
19.	Father Muller's Medical College, Mangalore	100	23

F-32-II

1	2	3	4
20.	Kasturba Medical College, Mangalore	250	184
21.	Kasturba Medical College, Manipal	250	179
22.	St. John's Medical College, Bangalore	60	46
23.	Khaja Banda Nawaz Institute of Medical Sciences, Gulbarga	100	Nil

Statement showing the No. of vacant seats MBBS and Post Graduate Courses for year 2000-2001

Sl. No.	Name of the College	MBBS	Post Graduate
1.	Bangalore Medical College, Bangalore	2	22
2.	Mysore Medical College, Mysore	Nil	16
3.	Karnataka Instt. of Med. Sciences, Hubli	Nil	03
4.	Vijayanagara Instt. of Med. Sciences, Bellary	1	09
5.	J.J.M. Medical College, Davangere	Nil	20
6.	J.N. Medical College, Belgaum	Nil	12
7.	M.S. Ramaiah Medical College, B'lore	Nil	02
8.	Devaraja Urs Medical College, Kolar	3	Nil
9.	Adi Chunchanagiri Institute of Medical Sciences, Bellur	Nil	02
10.	Dr. B.R. Ambedkar Medical College, B'lore	Nil	Nil
11.	J.S.S. Medical College, Mysore	Nil	09
12.	Kempegowda Instt. of Med. Sciences, B'lore	Nil	Nil
13.	M.R. Medical College, Gulbarga	1	11
14.	B.M. Patil Medical College, Bijapur	Nil	06
15.	Siddhartha Medical College, Tumkur	Nil	Nil
16.	K.S. Hegde Medical Academy, Mangalore	Nil	03

1	2	3	4
17.	Al-Ameen Medical College, Bijapur	Nil	Nil
18.	Yenepoya Medical College, Mangalore	Nil	Nil
19.	Father Muller's Medical College, Mangalore	Nil	Nil
20.	Kasturba Medical College, Mangalore	Nil	04
21.	Kasturba Medical College, Manipal (National Academy of Higher Edn.,)	Nil	28
22.	St. John's Medical College, Bangalore (National Academy of Higher Edn.,)	Nil	28
23.	Khaja Banda Nawaz Institute of Medical Sciences, Gulbarga	Nil	Nil

ರಾಜ್ಯದಲ್ಲಿ ಮಂಜೂರಾತಿ ನೀಡಿರುವ ಇಂಜನಿಯರಿಂಗ್ ಕಾಲೇಜುಗಳ ವಿವರ

2615(2972) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ 2 ವರ್ಷಗಳಲ್ಲಿ ರಾಜ್ಯದಲ್ಲಿ ಮಂಜೂರಾತಿ ಮಾಡಿರುವ ಇಂಜನಿಯರಿಂಗ್ ಕಾಲೇಜುಗಳ ಸಂಖ್ಯೆ ಎಷ್ಟು; (ವಿವರಗಳನ್ನು ಒದಗಿಸುವುದು)

ಆ) ಮತ್ತೆ ಹೊಸದಾಗಿ ಈ ವರ್ಷ ಇಂಜನಿಯರಿಂಗ್ ಕಾಲೇಜುಗಳನ್ನು ಮಂಜೂರಾತಿ ಮಾಡಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ;

ಇ) ಇದ್ದಲ್ಲಿ ಎಐಸಿಟಿಇಯಿಂದ (ಆಲ್ ಇಂಡಿಯಾ ಟೆಕ್ನಿಕಲ್ ಎಜುಕೇಷನ್ ಕೌನ್ಸಿಲ್) ಮಂಜೂರಾತಿ ಸಿಕ್ಕಿದೆಯೇ? (ಮಾಹಿತಿ ಒದಗಿಸುವುದು)

ಡಾ: ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :—

ಅ) 1999-2000 - 07

2000-2001 - 07

ವಿವರಗಳು 1ನೇ ಮತ್ತು 2ನೇ ಅನುಬಂಧದಲ್ಲಿದೆ)

ಆ) ಹೌದು

ಇ) ಎಐಸಿಟಿಇಯು ಇದುವರೆವಿಗೂ 21 ಹೊಸ ಇಂಜನಿಯರಿಂಗ್ ಕಾಲೇಜುಗಳಿಗೆ ಅನುಮೋದನೆ ನೀಡಿದೆ. (ವಿವರಗಳು 3ನೇ ಅನುಬಂಧದಲ್ಲಿದೆ)

ಅನುಬಂಧ - 1

1999 - 2000ನೇ ಸಾಲಿನಲ್ಲಿ ಪ್ರಾರಂಭಿಸಲಾದ ಹೊಸ ಇಂಜಿನಿಯರಿಂಗ್ ಕಾಲೇಜುಗಳ ವಿವರ

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಕೋರ್ಸ್‌ಗಳು	ಇಂಟೇಕ್ ವಿವರ
1	ಈಸ್ಟ್ ಪಾಯಿಂಟ್ ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ, ಬೆಂಗಳೂರು.	ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		ಮೆಕ್ಯಾನಿಕಲ್ ಇಂಜಿನಿಯರಿಂಗ್	60
		ಇನ್‌ಫರ್ಮೇಷನ್ ಸೈನ್ಸ್	60
2	ವಮನ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಆನೇಕಲ್ ತಾಲ್ಲೂಕು, ಬೆಂಗಳೂರು ದಕ್ಷಿಣ	ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		ಟೆಲಿ ಕಮ್ಯೂನಿಕೇಷನ್	30
		ಇನ್‌ಫರ್ಮೇಷನ್ ಸೈನ್ಸ್	40
3	ಎ.ಎಂ.ಸಿ ಕಾಲೇಜ್ ಆಫ್ ಇಂಜಿನಿಯರಿಂಗ್, ಬನ್ನೇರುಘಟ್ಟ ರಸ್ತೆ ಬೆಂಗಳೂರು.	ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	90
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		ಮೆಕ್ಯಾನಿಕಲ್ ಇಂಜಿನಿಯರಿಂಗ್	60

೧	೨	೩	೪
4	ಕೆ.ಎಸ್. ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಕನಕಪುರ ರಸ್ತೆ, ಬೆಂಗಳೂರು	ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		ಮೆಕ್ಯಾನಿಕಲ್ ಇಂಜಿನಿಯರಿಂಗ್	60
		ಇನ್‌ಫರ್ಮೇಷನ್ ಸೈನ್ಸ್	60
5	ಬಸವಕಲ್ಯಾಣ ಕಾಲೇಜ್ ಆಫ್ ಇಂಜಿನಿಯರಿಂಗ್, ಬಸವಕಲ್ಯಾಣ, ಬೀದರ್ ಜಿಲ್ಲೆ	ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		ಟೆಲಿ ಕಮ್ಯೂನಿಕೇಷನ್	60
6	ಎಸ್.ಜಿ.ಇ.ಸಿ.ಇ. ರೂರಲ್ ಕಾಲೇಜ್ ಆಫ್ ಇಂಜಿನಿಯರಿಂಗ್, ತಾರಿಹಾಳ ಹುಬ್ಬಳ್ಳಿ	ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	40
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		ಟೆಲಿ ಕಮ್ಯೂನಿಕೇಷನ್	40
		ಇನ್‌ಫರ್ಮೇಷನ್ ಸೈನ್ಸ್	40
7	ಕೂರ್ಗ್ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಪೊನ್ನಂಪೇಟೆ	ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		ಮೆಕ್ಯಾನಿಕಲ್ ಇಂಜಿನಿಯರಿಂಗ್	60

ಅನುಬಂಧ - II

2000 - 2001ನೇ ಸಾಲಿನಲ್ಲಿ ಪ್ರಾರಂಭಿಸಲಾದ ಹೊಸ ಇಂಜಿನಿಯರಿಂಗ್ ಕಾಲೇಜುಗಳ ವಿವರ

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಕೋರ್ಸ್‌ಗಳು	ಇಂಟೇಕ್ ವಿವರ
1	ಏಟ್ರೀಯಾ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಆರ್.ಟಿ. ನಗರ ಬೆಂಗಳೂರು.	ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		ಮೆಕ್ಯಾನಿಕಲ್ ಇಂಜಿನಿಯರಿಂಗ್	60
		ಇನ್‌ಫರ್ಮೇಷನ್ ಸೈನ್ಸ್	60
2	ಪಿ.ಎ. ಕಾಲೇಜ್ ಆಫ್ ಇಂಜಿನಿಯರಿಂಗ್, ಕೈರಂಗಾಲಹಳ್ಳಿ ಮಂಗಳೂರು	ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		ಟೆಲಿ ಕಮ್ಯೂನಿಕೇಷನ್	60
		ಇನ್‌ಫರ್ಮೇಷನ್ ಸೈನ್ಸ್	60
3	ಆಚಾರ್ಯ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಸೋಲದೇವನಹಳ್ಳಿ, ಬೆಂಗಳೂರು.	ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		ಇನ್‌ಫರ್ಮೇಷನ್ ಸೈನ್ಸ್	60

1	2	3	4
4	ಆಕ್ಸ್‌ಫರ್ಡ್ ಕಾಲೇಜ್ ಆಫ್ ಇಂಜಿನಿಯರಿಂಗ್, ಹೊಸೂರು ರಸ್ತೆ, ಬೆಂಗಳೂರು	ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	90
		ಇನ್‌ಫರ್ಮೇಷನ್ ಸೈನ್ಸ್	60
5	ಸಿ.ಎಂ.ಆರ್. ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು.	ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		ಟೆಲಿ ಕಮ್ಯೂನಿಕೇಷನ್	60
		ಇನ್‌ಫರ್ಮೇಷನ್ ಸೈನ್ಸ್	
6	ಬೆಂಗಳೂರು ಕಾಲೇಜ್ ಆಫ್ ಇಂಜಿನಿಯರಿಂಗ್, ಚಂದಾಪುರ, ಬೆಂಗಳೂರು	ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	45
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	45
		ಮೆಕ್ಯಾನಿಕಲ್ ಇಂಜಿನಿಯರಿಂಗ್	45
		ಇನ್‌ಫರ್ಮೇಷನ್ ಸೈನ್ಸ್	45

ಅನುಬಂಧ - III

2001 2002ನೇ ಸಾಲಿನಲ್ಲಿ ಪ್ರಾರಂಭಿಸಲಾದ ಹೊಸ ಇಂಜಿನಿಯರಿಂಗ್ ಕಾಲೇಜುಗಳು

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಕೋರ್ಸ್‌ಗಳು	ಇಂಟೇಕ್ ವಿವರ
1	ನ್ಯೂ ಹೊರೈಜಾನ್ ಕಾಲೇಜ್ ಆಫ್ ಇಂಜಿನಿಯರಿಂಗ್, ವರ್ತೂರ್ ಬೆಂಗಳೂರು.	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
2	ಕೆ.ಎನ್.ಎಸ್. ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ಉತ್ತರ	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
3	ಶ್ರೀ ಚನ್ನಬಸವೇಶ್ವರ ಸ್ವಾಮಿ ರೂರಲ್ ಎಜುಕೇಷನ್ ಸೊಸೈಟಿ ಹೇರೂರು.	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
4	ಡಾನ್ ಬಾಸ್ಕೊ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ದಕ್ಷಿಣ	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60

1	2	3	4
5	ಗ್ಲೋಬಲ್ ಅಕಾಡಮಿ ಆಫ್ ಟೆಕ್ನಾಲಜಿ, ಬೆಂಗಳೂರು	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
6	ನಾಗಾರ್ಜುನ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು ರೂರಲ್	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
7	ನಿಟ್ಟೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ಉತ್ತರ	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
8	ಈಸ್ಟ್ ವೆಸ್ಟ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ಉತ್ತರ	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
9	ಬಿ.ಎಸ್.ಎಂ. ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ಉತ್ತರ	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60

1	2	3	4
10	ಸಪ್ತಗಿರಿ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು ಉತ್ತರ	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		ಮೆಕ್ಯಾನಿಕಲ್ ಇಂಜಿನಿಯರಿಂಗ್	30
11	ಸಿಟಿ ಇಂಜಿನಿಯರಿಂಗ್ ಕಾಲೇಜ್, ಬೆಂಗಳೂರು ದಕ್ಷಿಣ	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
12	ಎಲ್ಲಮ್ಮ ದಾಸಪ್ಪ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
13	ಶ್ರೀ ವೆಂಕಟೇಶ್ವರ ಕಾಲೇಜ್ ಆಫ್ ಇಂಜಿನಿಯರಿಂಗ್, ಬೆಂಗಳೂರು	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60

1	2	3	4
14	ಶ್ರೀ ಕೃಷ್ಣ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		ಮೆಡಿಕಲ್ ಎಲೆಕ್ಟ್ರಾನಿಕ್ಸ್	30
15	ಸಂಭ್ರಮ್ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
16	ಬಿ.ಎಂ. ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
17	ಶ್ರೀ ಜಗದ್ಗುರು ಬಾಲಗಂಗಾಧರನಾಥ ಸ್ವಾಮೀಜಿ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
18	ಆರ್.ಎಲ್. ಜಾಲಪ್ಪ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ದೊಡ್ಡಬಳ್ಳಾಪುರ	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
		ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60

1	2	3	4
18	ಆರ್.ಎಲ್. ಜಾಲಪ್ಪ	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
	ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ,	ಕಂಪ್ಯೂಟರ್ ಸೈನ್ಸ್	60
	ದೊಡ್ಡಬಳ್ಳಾಪುರ	ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
19	ಆಲ್ಫಾ ಕಾಲೇಜ್ ಆಫ್	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
	ಇಂಜಿನಿಯರಿಂಗ್	ಕಂಪ್ಯೂಟರ್ ಸೈನ್ಸ್	60
	ಬೆಂಗಳೂರು	ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		ಮೆಕ್ಯಾನಿಕಲ್ ಇಂಜನಿಯರಿಂಗ್	40
20	ಆರ್.ಎನ್.ಎಸ್. ಇನ್ಸಿಟ್ಯೂಟ್	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	60
	ಆಫ್ ಟೆಕ್ನಾಲಜಿ, ಬೆಂಗಳೂರು	ಕಂಪ್ಯೂಟರ್ ಸೈನ್ಸ್	60
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
21	ಕೆ.ಸಿ.ಟಿ. ಇಂಜಿನಿಯರಿಂಗ್	ಇನ್‌ಫರ್ಮೇಷನ್ ಸೈನ್ಸ್ ಇಂಜಿ.	45
	ಕಾಲೇಜ್, ಗುಲ್ಬರ್ಗಾ	ಕಂಪ್ಯೂಟರ್ ಸೈನ್ಸ್	45
		ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	45
		ಮೆಕ್ಯಾನಿಕಲ್ ಇಂಜನಿಯರಿಂಗ್	45

ರಾಜ್ಯದಲ್ಲಿ ವಿದ್ಯಾರ್ಥಿಗಳ ಕಡಿಮೆ ಹಾಜರಾತಿ ಕಾರಣದಿಂದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳನ್ನು ಮುಚ್ಚುತ್ತಿರುವುದು

2616(3341) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ವಿದ್ಯಾರ್ಥಿಗಳ ಕಡಿಮೆ ಹಾಜರಾತಿ ಕಾರಣದಿಂದ ಕೆಲವು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳನ್ನು ಮುಚ್ಚಲು ಸರ್ಕಾರ ಆದೇಶ ನೀಡಿರುವುದು ನಿಜವೇ;

ಆ) ಇಂತಹ ಆದೇಶದಿಂದ ಗ್ರಾಮಾಂತರ ಪ್ರದೇಶಗಳ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು? (ವಿವರಗಳನ್ನು ನೀಡುವುದು)

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ರಾಜ್ಯದ ಎಲ್ಲಾ ಪ್ರೌಢ ಶಾಲೆಗಳಲ್ಲಿ ಕನ್ನಡ ಉಪಾಧ್ಯಾಯರ ನೇಮಕಾತಿ

2617(2931) ಶ್ರೀ ಸೋಮಣ್ಣ (ಬಿನ್ನಿಪೇಟೆ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಎಲ್ಲಾ ಪ್ರೌಢ ಶಾಲೆಗಳಲ್ಲಿ ಕನ್ನಡ ಉಪಾಧ್ಯಾಯರ ನೇಮಕಾತಿಯನ್ನು ನಿಲ್ಲಿಸಲಾಗಿದೆಯೇ? ಎಷ್ಟು ಹುದ್ದೆಗಳು ಖಾಲಿ ಇವೆ (ಜಿಲ್ಲಾವಾರು ನೀಡುವುದು)

ಆ) ಈ ಕೊರತೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೋ? ಖಾಲಿ ಹುದ್ದೆಗಳನ್ನು ತುಂಬಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಇ) ಖಾಲಿ ಹುದ್ದೆಗಳನ್ನು ಎಷ್ಟು ದಿನಗಳೊಳಗೆ ತುಂಬಲಾಗುವುದು?

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಇಲ್ಲ

ಸರ್ಕಾರಿ ಪ್ರೌಢ ಶಾಲೆಗಳಲ್ಲಿ 274 ಕನ್ನಡ ಉಪಾಧ್ಯಾಯರ ಹುದ್ದೆಗಳು ಖಾಲಿ ಇವೆ. (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಆ) 2001-2002ನೇ ಸಾಲಿನಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಈಗಾಗಲೇ ನೇಮಕಾತಿ ಪ್ರಕ್ರಿಯೆ ಪ್ರಕಟಿಸಲಾಗಿದೆ. ಏತನ್ಮಧ್ಯೆ ಹೆಚ್ಚುವರಿ ಶಿಕ್ಷಕರನ್ನು ಅಗತ್ಯ ಶಾಲೆಗಳಿಗೆ ಸ್ಥಳಾಂತರಿಸುವ ಮೂಲಕ ತೊಂದರೆಯಾಗದಂತೆ ಕ್ರಮ ವಹಿಸಲಾಗಿದೆ.

ಇ) 2001-2002ನೇ ಸಾಲಿನಲ್ಲಿಯೇ ತುಂಬಲಾಗುವುದು.

ಕೋಲಾರ ಜಿಲ್ಲೆಯಲ್ಲಿ ಮಂಜೂರಾದ ನೇತಾಜಿ ಸುಭಾಷ್‌ಚಂದ್ರಬೋಸ್ ಶಾಲೆಯ ಕಟ್ಟಡದ ನಿರ್ಮಾಣ

2618(2919) ಕೆ. ಶ್ರೀನಿವಾಸಗೌಡ ಕುದುವನಹಳ್ಳಿ (ಕೋಲಾರ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೋಲಾರ ಜಿಲ್ಲೆಯಲ್ಲಿ ಮಂಜೂರಾದ ನೇತಾಜಿ ಸುಭಾಷ್‌ಚಂದ್ರಬೋಸ್ ಪ್ರೌಢ ಶಾಲಾ ಕಟ್ಟಡಗಳ ಸಂಖ್ಯೆ ಎಷ್ಟು;

ಆ) ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ;

ಇ) ಎಷ್ಟು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೇ;

ಈ) ಬಿಡುಗಡೆಯಾಗಿರುವ ಅನುದಾನವೆಷ್ಟು, ಖರ್ಚಾಗಿರುವ ಮೊತ್ತವೆಷ್ಟು;

ಉ) ಅಪೂರ್ಣಗೊಂಡಿರುವ ಕಾಮಗಾರಿಯನ್ನು ಪೂರ್ಣಗೊಳಿಸಲು ಎಷ್ಟು ಅನುದಾನ ಬೇಕಾಗುತ್ತದೆ; ಹಣ ಬಿಡುಗಡೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) 12

ಆ) 1

ಇ) 11

ಈ) ಬಿಡುಗಡೆಯಾಗಿರುವ ಮೊತ್ತ ರೂ.108.00 ಲಕ್ಷಗಳು
ಖರ್ಚಾದ ಮೊತ್ತ ರೂ.85,943 ಲಕ್ಷಗಳು

ಉ) ಸದರಿ ಯೋಜನೆಯಡಿ ಒಂದು ಪ್ರೌಢಶಾಲಾ ಕಟ್ಟಡಕ್ಕೆ ರೂ.9.00 ಲಕ್ಷದಂತೆ ಒಟ್ಟು 12 ಪ್ರೌಢಶಾಲೆಗೆ ರೂ.108.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಕೊರತೆ ಬರುವ ಮೊತ್ತವನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತ್‌ಗಳೇ ಭರಿಸಬೇಕೆಂದು ಸೂಚಿಸಲಾಗಿದೆ.

ಬೀದರ್ ಜಿಲ್ಲೆ ಹುಮ್ನಾಬಾದ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯಾಧಿಕಾರಿ ಕೊರತೆ

2619(2949) ಶ್ರೀ ಸುಭಾಶ್ ಕಲ್ಲೂರ್ (ಹಮ್‌ನಾಬಾದ್) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೀದರ್ ಜಿಲ್ಲೆ ಹುಮ್ನಾಬಾದ್ ಸಾರ್ವಜನಿಕ ಆಸ್ಪತ್ರೆಯನ್ನು ಪ್ರಾರಂಭ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಇದ್ದಲ್ಲಿ ಜರ್ಮನ್ ಅನುದಾನದಿಂದ ಎಷ್ಟು ಕೋಟಿ ಮೊತ್ತದಲ್ಲಿ ಈ ಆಸ್ಪತ್ರೆಯನ್ನು ನಿರ್ಮಿಸಲಾಗಿದೆ?

ಇ) ಈ ಆಸ್ಪತ್ರೆ ಎಷ್ಟು ಹಾಸಿಗೆಗಳುಳ್ಳ ಸಾಮರ್ಥ್ಯ ಹೊಂದಿದೆ; ಇದಕ್ಕೆ ಅನುಗುಣವಾಗಿ ವೈದ್ಯರಿದ್ದಾರೆಯೇ: (ವೈದ್ಯರ ಸಂಖ್ಯೆಯ ವಿವರ ನೀಡುವುದು)

ಈ) ಯಾವ ಯಾವ ವಿಷಯಗಳಲ್ಲಿ (ವಿಶೇಷ ತಜ್ಞರು) ಪರಿಣಿತಿ ಹೊಂದಿದ ವೈದ್ಯರಿದ್ದಾರೆ; ಇದರಲ್ಲಿ ಎಂ.ಡಿ ಮತ್ತು ಎಂ.ಎಸ್. ಮಾಡಿರುವವರ ಸಂಖ್ಯೆ ಎಷ್ಟು?

ಉ) ಈ ಆಸ್ಪತ್ರೆಯಲ್ಲಿ ಸ್ತ್ರೀರೋಗ ತಜ್ಞ ಮಹಿಳಾ ವೈದ್ಯರು ಇದ್ದಾರೆಯೇ; ಇಲ್ಲದಿದ್ದಲ್ಲಿ ಮಹಿಳಾ ವೈದ್ಯರ ನೇಮಕಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಇದೆ

ಆ) ಹುಮ್ನಾಬಾದ್ ಸಾರ್ವಜನಿಕ ಆಸ್ಪತ್ರೆಯನ್ನು 30 ಹಾಸಿಗೆಗಳಿಂದ 50 ಹಾಸಿಗೆಗಳಿಗೆ ವಿಸ್ತರಿಸಿ ನವೀಕರಿಸಿ ಅಭಿವೃದ್ಧಿಗೊಳಿಸುವ ಕಾಮಗಾರಿ ಜರ್ಮನಿ ನೆರವಿನ ಕೆಎಫ್‌ಡಬ್ಲ್ಯೂ ಯೋಜನೆ ಮೊದಲನೇ ಹಂತದಲ್ಲಿ ಸೇರಿದ್ದು, ರಾಷ್ಟ್ರೀಯ ಸ್ಪರ್ಧಾತ್ಮಕ ಗುತ್ತಿಗೆ ಕರೆದು ರೂ.135.66 ಲಕ್ಷಗಳಿಗೆ ಗುತ್ತಿಗೆ ನೀಡಲಾಗಿದೆ ಹಾಗೂ ದಿನಾಂಕ 18.3.2000 ರಂದು ಒಪ್ಪಂದ ಮಾಡಿಕೊಳ್ಳಲಾಗಿದೆ. ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಾವಧಿ 18 ತಿಂಗಳುಗಳು. ಕರಾರಿನಂತೆ ದಿನಾಂಕ: 17.9.2001 ರಂದು ಕಾಮಗಾರಿ ಪೂರ್ಣಗೊಳ್ಳಬೇಕಾಗುತ್ತದೆ.

ಇ) ಈ ಆಸ್ಪತ್ರೆಯು 50 ಹಾಸಿಗೆಗಳುಳ್ಳ ಸಾಮರ್ಥ್ಯ ಹೊಂದಿದೆ. 50 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಗೆ ಗೊತ್ತುಪಡಿಸಿರುವ ವೈದ್ಯರುಗಳ ಸಂಖ್ಯೆಯು 7 ಆಗಿದ್ದು, 6 ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವೈದ್ಯರುಗಳ ವಿವರ ಕೆಳಕಂಡಂತಿದೆ.

			ಸಂಖ್ಯೆ
1.	ಮಕ್ಕಳ ತಜ್ಞರು	-	2
2.	ಕಣ್ಣಿನ ತಜ್ಞರು	-	1
3.	ಇ.ಎನ್‌ಟಿ ತಜ್ಞರು	-	1
4.	ಮೂಳೆ ತಜ್ಞರು	-	1
5.	ಅರವಳಿಕೆ ತಜ್ಞರು ಗುತ್ತಿಗೆ ಆಧಾರದ ಮೇರೆಗೆ)	-	1

ಈ) ಎಂಡಿ/ಎಂ.ಎಸ್ ಮಾಡಿರುವವರು ಇರುವುದಿಲ್ಲ.

ಉ) ಇರುವುದಿಲ್ಲ.

ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ ಭರ್ತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ.

ಹುಮ್ನಾಬಾದ್ ತಾಲ್ಲೂಕಿನ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ವಿತರಿಸುವ ಆಹಾರ

2620(2950) ಶ್ರೀ ಸುಭಾಷ್ ಕಲ್ಲೂರ್ (ಹುಮ್ನಾಬಾದ್) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಮ್ನಾಬಾದ್ ತಾಲ್ಲೂಕಿನ ಯಾವ ಯಾವ ದರ್ಜೆಯ ಆಸ್ಪತ್ರೆಗಳಿಗೆ ದಾಖಲಾಗಿರುವ ಒಳರೋಗಿಗಳಿಗೆ ಹಾಲೂ-ಬ್ರೆಡ್ ಉಪಹಾರ ಊಟ ವಿತರಿಸುವ ಅವಕಾಶವಿದೆ; ವಿವರ ನೀಡುವುದು)

ಆ) ಹುಮ್ನಾಬಾದ್ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಒಳರೋಗಿಗಳಿಗೆ ಉಪಹಾರ ಹಾಗೂ ಮಧ್ಯಾಹ್ನದ ಊಟವನ್ನು ಒದಗಿಸಲಾಗುತ್ತಿದೆಯೇ;

ಇ) ವಿತರಿಸುತ್ತಿದ್ದಲ್ಲಿ ಎಷ್ಟು ಪ್ರಮಾಣದಲ್ಲಿ ವಿತರಿಸಲಾಗುತ್ತಿದೆ; (ವಿವರ ನೀಡುವುದು)

ಇ) ವಿತರಿಸದೇ ಇದ್ದಲ್ಲಿ ಕಾರಣಗಳೇನು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) 30 ಹಾಸಿಗೆಗಳುಳ್ಳ ಆಸ್ಪತ್ರೆಗಳಲ್ಲಿ ಮಾತ್ರ ಹಾಲು, ಬ್ರೆಡ್ ವಿತರಿಸಬಹುದು.

ಆ) ವಿತರಿಸುತ್ತಿಲ್ಲ.

ಇ) ಅನ್ವಯಿಸುವುದಿಲ್ಲ

ಈ) ವಿಷಯವನ್ನು ಜಿಲ್ಲಾ ಪಂಚಾಯತ್ ಪರಿಗಣಿಸಬೇಕಾಗುತ್ತದೆ.

೫ನೇ ತರಗತಿಯನ್ನು ಪ್ರಾಥಮಿಕ ಶಾಲೆಗೂ ೮ನೇ ತರಗತಿಯನ್ನು ಮಾಧ್ಯಮಿಕ ಶಾಲೆಗೂ ಸೇರಿಸುವುದು

2621(3013) ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ೫ನೇ ತರಗತಿಯನ್ನು ಪ್ರಾಥಮಿಕ ಶಾಲೆಗೂ ೮ನೇ ತರಗತಿಯನ್ನು ಮಾಧ್ಯಮಿಕ ಶಾಲೆಗೂ ಸೇರಿಸಲು ಯೋಚಿಸಿದೆಯೇ?

ಆ) ಇದರಿಂದ ಉಂಟಾಗುವ ಪ್ರಯೋಜನಗಳೇನು?

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ೨೦೦೧-೨೦೦೨ನೇ ಶೈಕ್ಷಣಿಕ ವರ್ಷದಲ್ಲಿ ೫ನೇ ತರಗತಿಯನ್ನು ಕಿರಿಯ ಪ್ರಾಥಮಿಕ ಶಾಲೆಗೆ ಸೇರಿಸಲಾಗಿದೆ. ೧ ರಿಂದ ೭ನೇ ತರಗತಿ ಹಾಗೆಯೇ ಮುಂದುವರಿದಿದೆ. ೮ನೇ ತರಗತಿಯನ್ನು ಹಿರಿಯ ಪ್ರಾಥಮಿಕ ಶಾಲೆಯೊಂದಿಗೆ ಸೇರಿಸುವ ವಿಷಯವು ಪರಿಶೀಲನೆಯಲ್ಲಿದೆ.

ಆ) ಪ್ರತ್ಯೇಕವಾಗಿ ನಡೆಯುವ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೧ ರಿಂದ ೪ನೇ ತರಗತಿಯವರೆಗೆ ಮಾತ್ರ ವ್ಯಾಸಂಗಕ್ಕೆ ಅವಕಾಶವಿದ್ದು, ೫ನೇ ತರಗತಿ ಶಿಕ್ಷಣವನ್ನು ಮುಂದುವರಿಸಲು ಗ್ರಾಮಾಂತರ ಪ್ರದೇಶದಲ್ಲಿ ವಿದ್ಯಾರ್ಥಿಗಳು ದೂರದ ಪ್ರದೇಶಗಳಿಗೆ ನಡೆದು ಹೋಗಬೇಕಾಗಿದೆ. ಈ ಕಾರಣದಿಂದಾಗಿ ಬಹುತೇಕ ಮಕ್ಕಳು ಅದರಲ್ಲೂ ಹೆಣ್ಣು ಮಕ್ಕಳು ಪ್ರಾಕೃತಿಕ ಅಡೆತಡೆಗಳಿಂದಾಗಿ ವ್ಯಾಸಂಗವನ್ನು ನಿಲ್ಲಿಸುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಈ ಬದಲಾವಣೆಯನ್ನು ಮಾಡಲಾಗಿದೆ. ಈ ಬದಲಾವಣೆಯು ಕೇಂದ್ರ ಮಾದರಿ ಪಠ್ಯ ಕ್ರಮದ ಮಾದರಿಯ ಅನುಸಾರ ಇದೆ.

ಸರ್ಕಾರಿ ವೈದ್ಯರು ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಕೆಲಸ ಮಾಡುತ್ತಿರುವುದು

2622(3014) ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರಿ ವೈದ್ಯರು ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಕೆಲಸ ಮಾಡುತ್ತಿರುವುದನ್ನು ಅಪರಾಧವೆಂದು ಪರಿಗಣಿಸಿದೆಯೇ;

ಆ) ಕಳೆದ 2 ವರ್ಷಗಳಲ್ಲಿ ಇಂತಹ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ;

ಇ) ಇದನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿರುವ ಶಾಲಾ ಕಾಲೇಜುಗಳಿಗೆ ಪ್ರವೇಶ

2623(3015) ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿರುವ ಖಾಸಗಿ ಶಾಲೆ ಕಾಲೇಜುಗಳಲ್ಲಿ ಪ್ರವೇಶ ಪಡೆಯುವುದಕ್ಕೆ ವಿದ್ಯಾರ್ಥಿಗಳು ಹಾಗೂ ಪೋಷಕರು ಪಡುತ್ತಿರುವ ಬವಣೆ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಈ ಬವಣೆ ತಪ್ಪಿಸಲು ಪ್ರವೇಶ ನೀತಿ ಘೋಷಿಸಲು ಸರ್ಕಾರ ಯೋಚಿಸಿದೆಯೇ;

ಇ) ಆಯಾ ಶಾಲಾ ಕಾಲೇಜುಗಳ ಸುತ್ತ ಮುತ್ತ ಇರುವ ಸ್ಥಳೀಯರಿಗೆ ಆದ್ಯತೆ ಕುರಿತು ಸರ್ಕಾರ ಯೋಚಿಸುತ್ತಿದೆಯೇ;

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಸಾಕಷ್ಟು ಸಂಖ್ಯೆಯ ಶಾಲಾ ಕಾಲೇಜುಗಳು ಇದ್ದು ಪ್ರವೇಶ ಅವಕಾಶಕ್ಕೆ ತೊಂದರೆಯಾಗುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಅಂತಹ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ.

ರಾಜ್ಯದ ಎಲ್ಲಾ ಪ್ರೌಢಶಾಲೆಗಳಿಗೂ ಕಂಪ್ಯೂಟರ್ ಶಿಕ್ಷಣ ವಿಸ್ತರಿಸುವುದು.

2624(2996) ಶ್ರೀ ಸಿ.ಬಿ. ಸುರೇಶ್ ಬಾಬು (ಚಿಕ್ಕನಾಯಕನ ಹಳ್ಳಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಎಷ್ಟು ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ವಿಭಾಗ ತೆರೆಯಲಾಗಿದೆ;

ಆ) ಎಷ್ಟು ಪ್ರೌಢಶಾಲೆಗಳಿಗೆ ಕಂಪ್ಯೂಟರ್ ಒದಗಿಸಲಾಗಿದೆ ಮತ್ತು ಕಂಪ್ಯೂಟರ್ ಶಿಕ್ಷಕರನ್ನು ನೇಮಕ ಮಾಡಲಾಗಿದೆ;

ಇ) ರಾಜ್ಯದ ಎಲ್ಲಾ ಅನುದಾನಿತ ಖಾಸಗಿ ಪ್ರೌಢಶಾಲೆಗಳಿಗೂ ಈ ಸೌಲಭ್ಯವನ್ನು ವಿಸ್ತರಿಸಲು ಸರ್ಕಾರ ಪರಿಶೀಲಿಸುವುದೇ?

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಮಾಹಿತಿ ಸಿಂಧು ಯೋಜನೆಯಡಿಯಲ್ಲಿ ರಾಜ್ಯ 1000 ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ವಿಭಾಗ ತೆರೆಯಲಾಗಿದೆ;

ಆ) ಎಲ್ಲಾ 1000 ಸರ್ಕಾರಿ ಪ್ರೌಢಶಾಲೆಗಳಿಗೆ ಕಂಪ್ಯೂಟರ್ ಒದಗಿಸಲಾಗಿದ ಮತ್ತು ಎಲ್ಲಾ 1000 ಶಾಲೆಗಳಿಗೂ ಕಂಪ್ಯೂಟರ್ ಶಿಕ್ಷಕರನ್ನು ಖಾಸಗಿ ನಿರ್ವಹಣಾ ಸಂಸ್ಥೆಗಳ ಮೂಲಕ ಪ್ರತಿ ಶಾಲೆಗೆ ಇಬ್ಬರಂತೆ ನೇಮಕ ಮಾಡಲಾಗುವುದು.

ಇ) ಸಧ್ಯದಲ್ಲಿ 1000 ಸರ್ಕಾರಿ ಪ್ರೌಢಶಾಲೆಗಳಲ್ಲಿ ಈ ಯೋಜನೆ ಜಾರಿಯಲ್ಲಿದ್ದು ಉಳಿದ ಸರ್ಕಾರಿ ಪ್ರೌಢಶಾಲೆಗಳಿಗೆ ಈ ಯೋಜನೆಯನ್ನು ವಿಸ್ತರಿಸಿದ ನಂತರ ಖಾಸಗಿ ಪ್ರೌಢಶಾಲೆಗಳಿಗೆ ಯೋಜನೆ ವಿಸ್ತರಿಸುವ ಬಗೆಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುವುದು.

ಚಿಕ್ಕನಾಯಕನ ಹಳ್ಳಿ ತಾಲ್ಲೂಕನ್ನು ಜಿಲ್ಲಾ ಉಪ ನಿರ್ದೇಶಕರ ಶೈಕ್ಷಣಿಕ ವ್ಯಾಪ್ತಿಯಲ್ಲಿ ಉಳಿಸುವ ಬಗ್ಗೆ

2625(2997) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನ ಹಳ್ಳಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ಮಧುಗಿರಿ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖಾ ವ್ಯಾಪ್ತಿಗೆ ಮರುವಿಂಗಡಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಚಿಕ್ಕನಾಯಕನ ಹಳ್ಳಿಗೆ ತುಮಕೂರು ಜಿಲ್ಲಾ ಕೇಂದ್ರವು 70 ಕಿ.ಮೀ. ದೂರದಲ್ಲಿದ್ದು, ಬಸ್ಸಿಗೆ ಸೌಕರ್ಯ ಹೆಚ್ಚಾಗಿರುವುದರಿಂದ ತುಮಕೂರು ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿಯೇ ಉಳಿಯಬಾರದೇಕೆ?

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ), ಆ) ತುಮಕೂರು ಚಿಕ್ಕನಾಯಕನ ಹಳ್ಳಿ ತಾಲ್ಲೂಕ್ ಅನ್ನು ಶೈಕ್ಷಣಿಕ ಜಿಲ್ಲಾ ಉಪ ನಿರ್ದೇಶಕರ ವ್ಯಾಪ್ತಿಯಲ್ಲಿಯೇ ಉಳಿಸಿ ದಿನಾಂಕ:26-3-2001ರ ತಿದ್ದುಪಡಿ ಆದೇಶ ಸಂಖ್ಯೆ ಇಡಿ 307 ಡಿಪಿಐ 2000ನಲ್ಲಿ ಹೊರಡಿಸಲಾಗಿದೆ.

ಚಿಕ್ಕನಾಯಕನ ಹಳ್ಳಿಯ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ

2626(2998) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕನಾಯಕನ ಹಳ್ಳಿಯ ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ನಿರ್ಮಾಣ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಕಾಲೇಜಿನ ಕಟ್ಟಡ ನಿರ್ಮಾಣದ ಕಾರ್ಯ ಪುನ: ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಕಾಲೇಜನ್ನು ಸ್ವಂತ ಕಟ್ಟಡದಲ್ಲಿ ಪ್ರಾರಂಭಿಸಲು ಬೇಕಾಗಿರುವ ಕಾಲಾವಕಾಶವೆಷ್ಟು;

ಶ್ರೀ ಡಾ: ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :—

ಅ) ಬಂದಿದೆ.

ಆ) ಈಗಾಗಲೇ ರೂ.12.00 ಲಕ್ಷದಲ್ಲಿ 3 ಕೊಠಡಿಗಳನ್ನು ಕಟ್ಟಲಾಗಿದ್ದು, ಇನ್ನು 3 ಕೊಠಡಿಗಳ ಅವಶ್ಯಕತೆ ಇದೆ. ಇಂತಹ ಅಪೂರ್ಣಗೊಂಡ ಕಟ್ಟಡಗಳನ್ನು ಗುರುತಿಸಿ ಹುಡ್ಕೊ ನೆರವಿನ ಯೋಜನೆ ರೂಪಿಸಲಾಗಿದ್ದು, ನೆರವು ದೊರೆತ ನಂತರ ಅವಶ್ಯಕತೆಗೆ ತಕ್ಕಂತೆ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲಾಗುವುದು.

ಇ) ಸ್ವಂತ ಕಟ್ಟಡ ಪೂರ್ಣಗೊಂಡ ತಕ್ಷಣ ಕಾಲೇಜನ್ನು ಸ್ಥಳಾಂತರಿಸಲಾಗುವುದು.

ಚಿಕ್ಕನಾಯಕನ ಹಳ್ಳಿ 'ಕಾಮಲಾಪುರ' ಗ್ರಾಮದಲ್ಲಿ ನೂತನ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾತಿ

2628(3000) ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನ ಹಳ್ಳಿ) :— ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕನಾಯಕನಹಳ್ಳಿ ಕ್ಷೇತ್ರದ ಕಾಮಲಾಪುರ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದಲ್ಲಿ ಯಾವಾಗ ಪ್ರಾರಂಭ ಮಾಡಲಾಗುವುದು;

ಇ) ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವಾಗ ಕಮಲಾಪುರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡುವ ಬಗ್ಗೆ ಆದ್ಯತೆ ನೀಡಲಾಗುವುದೇ?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಭಾರತ ಸರ್ಕಾರವು ಒಂಭತ್ತನೆ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಲು ಶೂನ್ಯಗುರಿ ನಿಗಧಿಪಡಿಸಿರುವುದರಿಂದ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸುವ ಯೋಜನೆಯಿರುವುದಿಲ್ಲ.

ಹುಕ್ಕೇರಿ ತಾಲ್ಲೂಕಿನ ಅವರಗೋಳ್ ಮತ್ತು ಬಸಾಪುರ ಮಾಧ್ಯಮಿಕ ಶಾಲಾ ಕಟ್ಟಡಗಳನ್ನು ಪೂರ್ಣಗೊಳಿಸುವ ಬಗ್ಗೆ

2629 (2936) ಶ್ರೀ ಉಮೇಶ್ ವಿಶ್ವನಾಥ್ ವಿ. ಕತ್ತಿ (ಹುಕ್ಕೇರಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಹುಕ್ಕೇರಿ ತಾಲ್ಲೂಕಿನ ಅವರಗೋಳ್, ಬಸಾಪುರ ಗ್ರಾಮದಲ್ಲಿ ಮಾಧ್ಯಮಿಕ ಶಾಲಾ ಕಟ್ಟಡ ನಿರ್ಮಾಣಕ್ಕೆ ಸರ್ಕಾರದ ಮಂಜೂರಾತಿ ದೊರೆತಿದೆಯೇ;

ಆ. ಈ ಗ್ರಾಮಗಳಲ್ಲಿ ಮಾಧ್ಯಮಿಕ ಶಾಲಾ ಕಟ್ಟಡ ನಿರ್ಮಾಣ ಪ್ರಾರಂಭಿಸಲಾಗಿದೆಯೇ ಪ್ರಾರಂಭಿಸಿದ್ದಲ್ಲಿ ಯಾವ ಹಂತದಲ್ಲಿದೆ;

ಇ. ಈ ಗ್ರಾಮಗಳ ಮಾಧ್ಯಮಿಕ ಶಾಲಾ ಕಟ್ಟಡ ನಿರ್ಮಾಣ ಪ್ರಾರಂಭಿಸಿ ಅಪೂರ್ಣವಾಗಲು ಕಾರಣಗಳೇನು;

ಈ. ಈ ಶಾಲಾ ಕಟ್ಟಡಗಳನ್ನು ಪೂರ್ಣಗೊಳಿಸಲು ಸರ್ಕಾರವು ಹಾಕಿಕೊಂಡಿರುವ ಕಾಲಮಿತಿಯೇನು?

ಶ್ರೀ ಹೆಚ್. ವಿಶ್ವನಾಥ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಹೌದು

ಆ) ಹೌದು. ಪ್ರಾರಂಭಿಸಲಾಗಿದೆ.

ಅ. ಸರ್ಕಾರಿ ಪ್ರೌಢಶಾಲೆ ಅವರಗೋಳ ಕಟ್ಟಡ ಲಿಂಟಲ್‌ವರೆಗೆ ಮುಗಿದಿದೆ.

ಆ. ಸರ್ಕಾರಿ ಪ್ರೌಢಶಾಲೆ ಬಸ್ಸಾಪುರ ಕಟ್ಟಡ ಕಾಮಗಾರಿ ಕೆಲಸದಲ್ಲಿ ಪ್ಲಾಸ್ಟರಿಂಗ್ ಕೆಲಸ ಬಾಕಿ ಇದ್ದು, ಪ್ರಗತಿ ಹಂತದಲ್ಲಿದೆ.

ಇ. ಆರ್ಥಿಕ ಮಿತಿಯಿಂದಾಗಿ ಕಟ್ಟಡದ ಕಾಮಗಾರಿ ಅಪೂರ್ಣಗೊಂಡಿದೆ.

ಈ. ಸದರಿ ಶಾಲಾ ಕಟ್ಟಗಳನ್ನು ಅನುದಾನದ ಲಭ್ಯತೆಯನ್ನಾದರಿಸಿ ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಳಗಾವಿಯ ಕೆ.ಎಲ್.ಇ ಆಸ್ಪತ್ರೆಯಲ್ಲಿ ಬಡ ರೋಗಿಗಳಿಗೆ ಸರ್ಕಾರದ ಸವಲತ್ತು

2632 (2939) ಶ್ರೀ ಉಮೇಶ್ ವಿಶ್ವನಾಥ್ ವಿ. ಕತ್ತಿ (ಹುಕ್ಕೇರಿ) :— ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಬೆಂಗಳೂರಿನ ಜಯದೇವ ಮತ್ತು ಕಿದ್ವಾಯಿ ಆಸ್ಪತ್ರೆಗಳಲ್ಲಿ ಹೃದಯ ಮತ್ತು ಕ್ಯಾನ್ಸರ್ ಚಿಕಿತ್ಸೆಗೆ ಬಂದ ಅತೀ ಕಡು ಬಡವ ರೋಗಿಗಳಿಗೆ ಸರ್ಕಾರದಿಂದ ಸವಲತ್ತುಗಳನ್ನು ಒದಗಿಸುತಿದ್ದು, ಉತ್ತರ ಕನ್ನಡ ಭಾಗದ ಅತೀ ಕಡು ಬಡವರು ಬೆಂಗಳೂರಿಗೆ ಬಂದು ಚಿಕಿತ್ಸೆ ಪಡೆಯಲು ಕಷ್ಟವಾಗಿ ಬೆಳಗಾಂನ ಕೆ.ಎಲ್.ಇ ಆಸ್ಪತ್ರೆಯಲ್ಲಿ ದಾಖಲಾಗಿ ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅಂತಹವರಿಗೆ ಸರ್ಕಾರದಿಂದ ಸವಲತ್ತುಗಳನ್ನು ಒದಗಿಸಲು ಇರುವ ತೊಂದರೆ ಏನು?

ಆ) ಕೆ.ಎಲ್.ಇ ಆಸ್ಪತ್ರೆಯಲ್ಲಿ ಹೃದಯ ಮತ್ತು ಕ್ಯಾನ್ಸರ್ ಕಾಯಿಲೆಯಿಂದಾಗಿ ದಾಖಲಾದ ಕಡು ಬಡ ರೋಗಿಗಳಿಗೂ ಸಹ ಈ ಸೌಲಭ್ಯವನ್ನು ಕಲ್ಪಿಸಲಾಗುವುದೇ?

ಇ) ಹಾಗಿದಲ್ಲಿ ಎಂದಿನಿಂದ ಅನುಷ್ಠಾನಕ್ಕೆ ತರಲಾಗುವುದು?

ಶ್ರೀಮತಿ ನಫೀಸ್ ಫಜಲ್ (ವೈದ್ಯಕೀಯ ಶಿಕ್ಷಣ ಸಚಿವರು) :—

ಅ) ಕರ್ನಾಟಕ ಮುಖ್ಯ ಮಂತ್ರಿಗಳ ವೈದ್ಯಕೀಯ ಪರಿಹಾರ ನಿಧಿಯ ಸಂಸ್ಥೆಯು ಸರ್ಕಾರದ ಆದೇಶ ಸಂಖ್ಯೆ: ಆಕುಕ ೯೮ ಎಂಎಸ್‌ಎಫ್ ೨೦೦೦, ದಿನಾಂಕ: ೩೦.೩.೨೦೦೦ರ ಪ್ರಕಾರ ರೋಗಿಯ ವಾರ್ಷಿಕ ವರಮಾನ ರೂ. ೨೦,೦೦೦ ಗಳಿದ್ದು, ಇವರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಪಂಗಡ ಹಾಗೂ ಅತಿ ಭೂರಹಿತ ಕಡು ಬಡವರಾಗಿದ್ದು. ರೋಗಿಗಳು ಅವರ ವಾರ್ಷಿಕ ವರಮಾನದ ದೃಢೀಕರಣದ ಪ್ರಮಾಣ ಪತ್ರವನ್ನು ತಹಸೀಲ್ದಾರರಿಂದ ಪಡೆದು ಹಾಗೂ ಹಸಿರು ಕಾರ್ಡು ಹೊಂದಿರುವ ರೋಗಿಗಳು ಅವರ ಕಾಯಿಲೆಯ ತೀಕ್ಷ್ಣತೆಯ ಆಧಾರದ ಮೇಲೆ ಸ್ವಾಯತ್ತೆಯ ಸಂಸ್ಥೆಗಳಿಗೆ ಮತ್ತು ಬೋಧಕ ಆಸ್ಪತ್ರೆಗಳಿಗೆ ಪರಿಹಾರವನ್ನು ನೀಡಿರುತ್ತದೆ. ಹಾಗೂ ಸರ್ಕಾರದ ಆದೇಶ ಸಂಖ್ಯೆ: ಆಕುಕ ೯೮ ಎಂಎಂಇ ೯೫ ದಿನಾಂಕ: ೧೮.೫.೯೫ರ ಅನ್ವಯ ಸ್ವಾಯತ್ತೆಯ ಸಂಸ್ಥೆಗಳಿಗೆ ಮತ್ತು ಬೋಧಕ ಆಸ್ಪತ್ರೆಗಳಿಗೆ ಸದಸ್ಯತ್ವ ಕಮಿಟಿಯಿಂದ ಪ್ರತಿ ರೋಗಿಯ ತೀಕ್ಷ್ಣತೆಯ ಕಾಯಿಲೆಯ ಆಧಾರದ ಮೇಲೆ ೨೫,೦೦೦ ಗಳನ್ನು ಮಂಜೂರು ಮಾಡಲು ಅಧಿಕಾರನವನ್ನು ಕೊಟ್ಟಿರುತ್ತದೆ. ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿಯೂ ರೋಗಿಗಳು ಇದರ ಸೌಲಭ್ಯಗಳನ್ನು ಪಡೆದುಕೊಳ್ಳಲು ಜಿಲ್ಲಾ ಶಸ್ತ್ರ ಚಿಕಿತ್ಸಕರು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಇವರ ಹೆಸರಿನಲ್ಲಿ ಜಂಟಿಯಾಗಿ ಪರಿಹಾರವನ್ನು ಕೊಡಲಾಗಿದ್ದು ರೋಗಿಗಳು ಜಿಲ್ಲಾ ಮಟ್ಟದಲ್ಲಿಯೂ ಇದರ ಸೌಲಭ್ಯಗಳನ್ನು ಪಡೆಯಲಾಗುತ್ತಿದ್ದು ಖಾಸಗಿ ಸಂಸ್ಥೆಯ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆದುಕೊಳ್ಳಲು ಉದರ ಸೌಲಭ್ಯವು ಉದ್ಭವಿಸುವುದಿಲ್ಲ.

ಆ) ಮುಖ್ಯ ಮಂತ್ರಿಗಳ ವೈದ್ಯಕೀಯ ಪರಿಹಾರ ನಿಧಿ ಸಂಸ್ಥೆಯಿಂದ ಬೋಧಕ ಆಸ್ಪತ್ರೆಗಳಿಗೂ ಪರಿಹಾರವನ್ನು ನೀಡಲಾಗುತ್ತಿದ್ದು, ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಮಟ್ಟದ ಸದಸ್ಯತ್ವ ಕಮಿಟಿಯಲ್ಲಿ ಸದಸ್ಯ ಕಾರ್ಯದರ್ಶಿಗಳಾಗಿದ್ದು ಇದರ ಸೌಲಭ್ಯವು ಖಾಸಗೀ ಆಸ್ಪತ್ರೆಗಳಿಗೆ ಕೊಡಲು ಉದ್ಭವವಾಗುವುದಿಲ್ಲ.

ಇ) ಈ ವಿಷಯವು ಕರ್ನಾಟಕ ಮುಖ್ಯ ಮಂತ್ರಿಗಳ ವೈದ್ಯಕೀಯ ಪರಿಹಾರ ಮಂಡಳಿಗೆ ಸಂಬಂಧಪಟ್ಟಿರುವುದರಿಂದ ಈ ಸೌಲಭ್ಯವು ಉದ್ಭವಿಸುವುದಿಲ್ಲ.

ರಾಜ್ಯ ವಲಯ ಹಾಗೂ ಕೇಂದ್ರ ವಲಯ ಕಾರ್ಯಕ್ರಮಗಳಿಗೆ ಹಣ ಬಿಡುಗಡೆ ಮಾಡುವುದು

2634 (3342) ಶ್ರೀ ಯಾವಗಲ್ ಬಿ.ಆರ್. (ನರಗುಂದ) :— ಮಾನ್ಯ ಯೋಜನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯ ವಲಯ ಹಾಗೂ ಕೇಂದ್ರ ವಲಯ ಕಾರ್ಯಕ್ರಮಗಳಿಗೆ ಹಣ ನೀಡುವಾಗ ತಾಲ್ಲೂಕುಗಳಿಗೆ ಯಾವ ಅಂಶವನ್ನು ಆಧರಿಸಿ ಹಣ ನೀಡಲಾಗುವುದು;

ಆ) ಗದಗ ಜಿಲ್ಲೆ ನರಗುಂದ ತಾಲ್ಲೂಕಿಗೆ ಹಣ ನಿಗಧಿಪಡಿಸುವಾಗ ಜನ ಸಂಖ್ಯೆ ಆಧಾರದ ಮೇಲೆ ನೀಡಲಾಗಿದೆಯೇ?

ಇ) ಜಿಲ್ಲೆಯ ಇತರ ತಾಲ್ಲೂಕುಗಳಿಗೆ ಹೋಲಿಸಿದಾಗ ನರಗುಂದ ತಾಲ್ಲೂಕಿಗೆ ನೀಡಲಾಗಿರುವ ಹಣದಲ್ಲಿ ತಾರತಮ್ಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಕಳೆದ 3 ವರ್ಷದ ವಿವರ ನೀಡುವುದು.

ಶ್ರೀಮತಿ ಸುಮಾ ವಸಂತ್ (ಯೋಜನಾ ರಾಜ್ಯ ಸಚಿವರು) :—

ಅ) ರಾಜ್ಯ ಯೋಜನೆಗಳಿಗೆ ಸಂಬಂಧಿಸಿದಂತೆ ಹಣವನ್ನು ರಾಜ್ಯ ಮಟ್ಟದ ಇಲಾಖಾ ಮುಖ್ಯಸ್ಥರುಗಳಾದ ಜಿಲ್ಲಾ ಮಟ್ಟದಲ್ಲಿನ ಸಂಬಂಧಿಸಿದ ಅಧಿಕಾರಿಗಳ ಮೂಲಕ ತಾಲ್ಲೂಕುಗಳಿಗೆ ಇಲಾಖಾ ಮಾರ್ಗಸೂಚಿ ಮತ್ತು ಕಮಿಟೆಡ್ ವೆಚ್ಚಗಳಿಗನುಗುಣವಾಗಿ ವಿತರಿಸಲಾಗುತ್ತಿದೆ.

ಜಿಲ್ಲಾ ವಲಯ ಯೋಜನೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕುಗಳಿಗೆ ಹಣವನ್ನು ವಿತರಿಸಲು ಸರ್ಕಾರವು ಸೂತ್ರವೊಂದನ್ನು ನಿಗಧಿಪಡಿಸಿದೆ. ಈ ಸೂತ್ರದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದ 6 ಸೂಚಕಗಳನ್ನು ಅಳವಡಿಸಿ ಅವುಗಳಿಗೆ ನೀಡಿದ weightage ಗಳು ಈ ರೀತಿ ಇವೆ. ಜನಸಂಖ್ಯೆ (50%) ಭೌಗೋಳಿಕ ವಿಸ್ತೀರ್ಣ (10%) ಸಾಕ್ಷರತೆ ((10%) ಒಣ ಭೂಮೀ ಪ್ರದೇಶ (10%) ಪ.ಜಾ. ಮತ್ತು ಪ.ವ. ಜನಸಂಖ್ಯೆಯ ಅನುಪಾತ (10%) ಮತ್ತು ಕೃಷಿ ಕಾರ್ಮಿಕರು (10%) ಈ ಸೂತ್ರದ ಮೂಲಕ ಹಣವನ್ನು ವಿತರಿಸಿದಾಗ ಬಹುತೇಕ ತಾಲ್ಲೂಕುಗಳಿಗೆ ಅಗತ್ಯಕ್ಕಿಂತ ಹೆಚ್ಚು ಹಾಗೂ ಕೆಲವು ತಾಲ್ಲೂಕುಗಳಿಗೆ ಕಡಿಮೆ ಹಣವು ಲಭ್ಯವಾದ ನಿಮಿತ್ತ ತಾಲ್ಲೂಕು ಪಂಚಾಯತ್ ಯೋಜನೆಗಳನ್ನು ಸ್ಥಳೀಯ ಬೇಡಿಕೆ ಹಾಗೂ ಇಲಾಖಾ ಮಾರ್ಗಸೂಚಿಯನ್ನು ಆಧರಿಸಿ ಅನುಷ್ಠಾನಗೊಳಿಸಲು ಸೂಚಿಸಿದೆ. ಈ ಸೂತ್ರದ ಬದಲಾಗಿ ತಾಲ್ಲೂಕುಗಳಿಗೆ ಹಣದ ವಿತರಣೆಯಲ್ಲಿ ಹಣದ ಅಭಾವವಿರುವುದರಿಂದ ಪರ್ಯಾಯ ಸೂತ್ರವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಇಲ್ಲ, ಸ್ಥಳೀಯ ಬೇಡಿಕೆಗಳು, ಕಮಿಟೆಡ್ ವೆಚ್ಚ ಮತ್ತು ಇಲಾಖಾ ಮಾರ್ಗಸೂಚಿಗಳನ್ನು ಆಧರಿಸಿ ನರಗುಂದ ತಾಲ್ಲೂಕಿಗೆ ಹಣವನ್ನು ವಿತರಿಸಲಾಗುತ್ತಿದೆ.

ಇ) ಇಲ್ಲ

ಗದಗ ಜಿಲ್ಲೆಯ ಇತರ ತಾಲ್ಲೂಕುಗಳಾದ ಗದಗ (34%) ಮುಂಡರಗಿ (12%) ರೋಣ (26%) ಮತ್ತು ಶಿರಹಟ್ಟಿ (18%) ಗಳಿಗೆ ಹೋಲಿಸಿದಾಗ ಪ್ರತಿಶತ 10 ರಷ್ಟು ಜನ ಸಂಖ್ಯೆಯನ್ನು ಹೊಂದಿರುವ ನರಗುಂದ ತಾಲ್ಲೂಕು ಅತಿ ಸಣ್ಣ ತಾಲ್ಲೂಕು ಆಗಿರುತ್ತದೆ. ಇದೇ ರೀತಿ ಜಿಲ್ಲೆಯ ಪ್ರತಿಶತ 9 ರಷ್ಟು ಭೌಗೋಳಿಕ ವಿಸ್ತೀರ್ಣವನ್ನು ಹೊಂದಿರುವ ನರಗುಂದ ತಾಲ್ಲೂಕು ಇತರ ತಾಲ್ಲೂಕುಗಳಾದ ಗದಗ (24%) ಮುಂಡರಗಿ (19%) ರೋಣ (28%) ಮತ್ತು ಶಿರಹಟ್ಟಿ (20%) ಗಳಿಗಿಂತ ಕಡಿಮೆ ಭೌಗೋಳಿಕ ಪ್ರದೇಶವನ್ನು ಹೊಂದಿರುತ್ತದೆ. ಮೇಲಾಗಿ ಜಿಲ್ಲೆಯು ಇತರ ತಾಲ್ಲೂಕುಗಳಿಗಿಂತ ನೀರಾವರಿಯಾದ ನಿವ್ವಳ ವಿಸ್ತೀರ್ಣವು ನರಗುಂದ ತಾಲ್ಲೂಕಿನಲ್ಲಿ ಅತಿ ಹೆಚ್ಚಾಗಿದ್ದು ಬಯಲು ಸೀಮೆ ಅಭಿವೃದ್ಧಿ ಕಾರ್ಯಕ್ರಮ ಮತ್ತು ರೇಷ್ಮೆ ಅಭಿವೃದ್ಧಿ ಕಾರ್ಯಕ್ರಮಗಳಿಂದ ಆವೃತವಾಗಿರುವುದಿಲ್ಲ. ಆದುದರಿಂದ ನರಗುಂದ ತಾಲ್ಲೂಕಿಗೆ ಲಭ್ಯವಾಗುವ ಅನುದಾನದ ಪ್ರಮಾಣವು ಇತರ ತಾಲ್ಲೂಕುಗಳಿಗಿಂತ ಕಡಿಮೆ ಇರುತ್ತದೆ.

ಗದಗ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ತಾಲ್ಲೂಕುವಾರು ನಿಗಧಿಪಡಿಸಿರುವ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

1999-2000 ರಿಂದ 2001-02 ವರೆಗೆ ಗದಗ ಜಿಲ್ಲೆಯ ವಿವಿಧ ತಾಲ್ಲೂಕುಗಳಿಗೆ ವಿತರಿಸಿದ ಹಣದ ವಿವರ

ಲಕ್ಷ ರೂ.ಗಳಲ್ಲಿ

	ತಾಲ್ಲೂಕು	1999-2000	2000-2001	2001-2002
1.	ಗದಗ	840.66	972.80	975.64
2.	ಮುಂಡರಗಿ	470.50	506.21	543.32
3.	ನರಗುಂದ	305.80	330.38	359.12
4.	ರೋಣ	689.66	809.99	867.70
5.	ಶಿರಹಟ್ಟಿ	553.86	629.40	663.14

ಸೂಚನೆ: ಅನುದಾನವು ರಾಜ್ಯ ಹಾಗೂ ಕೇಂದ್ರದ ಪಾಲುಗಳನ್ನೊಳಗೊಂಡಿರುತ್ತದೆ.

F-35-II

F-35 II

ನೆದರ್‌ಲ್ಯಾಂಡ್ ನೆರವಿನಿಂದ ಕುಡಿಯುವ ನೀರಿನ ಯೋಜನೆ

2635 (3343) ಶ್ರೀ ಬಿ.ಆರ್. ಯಾವಗಲ್ (ನರಗುಂದ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನೆದರ್‌ಲ್ಯಾಂಡ್ ನೆರವಿನಿಂದ ಕುಡಿಯುವ ನೀರಿನ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಆ) ಪ್ಯಾಕೇಜ್ 2 ರಲ್ಲಿ ಕೈಗೊಂಡಿರುವ ಕುಡಿಯುವ ನೀರಿನ ಯೋಜನೆಗಳನ್ನು ಯಾವಾಗ ಪ್ರಾರಂಭವಾಗಿದೆ? ಮತ್ತು ಅವುಗಳನ್ನು ಪೂರ್ಣಗೊಳಿಸಲು ಎಷ್ಟು ಸಮಯ ನಿಗಧಿಪಡಿಸಲಾಗಿತ್ತು?

ಇ) ಇವುಗಳ ಗುತ್ತಿಗೆದಾರರು ಇತ್ತೀಚೆಗೆ ಈ ಯೋಜನೆಗಳಿಗೆ ಬೀಗ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದಲ್ಲಿ ಇದಕ್ಕೆ ಕಾರಣಗಳೇನು? ಮತ್ತು ಸರಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :—

ಅ) ನೆದರ್‌ಲ್ಯಾಂಡ್ ನೆರವಿನಿಂದ ಕುಡಿಯುವ ನೀರೀನ ಯೋಜನೆಗಳನ್ನು ಫೆಬ್ರವರಿ 2001ಕ್ಕೆ ಮೂಲ ವಿನ್ಯಾಸದಂತೆ ಈಗಾಗಲೇ ಮುಗಿಸಲಾಗಿದೆ. ಆದರೆ ಕೆಲವೆಡೆ ಜಲಮೂಲ ಬದಲಿಯಾಗಿರುವುದರಿಂದ ಹೆಚ್ಚುವರಿ ಕಾಮಗಾರಿಗಳು ಅವಶ್ಯವಿದ್ದು ಅವು ಮುಕ್ತಾಯ ಹಂತದಲ್ಲಿದೆ. ಬಾಕಿ ಇರುವ ಎಲ್ಲಾ ಕೆಲಸಗಳನ್ನು ಸೆಪ್ಟೆಂಬರ್ 2001ರೊಳಗಾಗಿ ಮುಗಿಸಲಾಗುವುದು.

ಆ) ಪ್ಯಾಕೇಜ್ 2 (20 ಹಳ್ಳಿಗಳು) ರಲ್ಲಿ ಕೈಗೊಳ್ಳಲಾದ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು 15-5-1997 ರಂದು ಪ್ರಾರಂಭಿಸಲಾಗಿದೆ. ಸದರೀ ಯೋಜನೆಗಳನ್ನು ಮುಗಿಸಲು 31 ತಿಂಗಳ ಸಮಯ ನಿಗದಿಗೊಳಿಸಲಾಗಿತ್ತು.

ಇ) ಪ್ಯಾಕೇಜ್ 2 ರಲ್ಲಿ ಕೈಗೊಳ್ಳಲಾಗಿರುವ ಕುಡಿಯುವ ನೀರಿನ ಯೋಜನೆಗಳನ್ನು ಪ್ಯಾಕೇಜ್ 2ಎ ಮತ್ತು 2ಬಿ ಎಂದು ವಿಂಗಡಿಸಿ ಗುತ್ತಿಗೆಗಳನ್ನು ನೀಡಲಾಗಿದೆ. ಈ ಯೋಜನೆಗಳು ಬಹುಗ್ರಾಮ ಯೋಜನೆಗಳಾಗಿರುವುದರಿಂದ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ೬೧(ಬಿ)೩ ರ ಅನ್ವಯ ಈ ಯೋಜನೆಗಳ ಉಸ್ತುವಾರಿ ಹಾಗೂ

ನಿರ್ವಹಣೆಗಳನ್ನು ಯೋಜನಾ ಮಟ್ಟದ ಸಮಿತಿಗಳಿಗೆ ವಹಿಸುವುದು ಅಗತ್ಯವಿದ್ದು ಸಮಿತಿಗಳನ್ನು ರಚಿಸುವವರೆಗೆ ಈ ಯೋಜನೆಯನ್ನು ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್/ಗ್ರಾಮ ಪಂಚಾಯತ್‌ರವರು ವಹಿಸಿಕೊಳ್ಳುವಂತೆ ಸರ್ಕಾರದ ಆದೇಶ ಸಂಖ್ಯೆ ಆರ್‌ಡಿಪಿ 236 ಪಿಪಿಎಂ 99, ದಿನಾಂಕ 21.12.2000 ರಲ್ಲಿ ಸೂಚಿಸಲಾಗಿದೆ.

ಪ್ಯಾಕೇಜ್ 2ಬಿ ರಲ್ಲಿ ತೆಗೆದುಕೊಂಡಿರುವ ಕುಡಿಯುವ ನೀರು ಸರಬರಾಜು ಯೋಜನೆಯು ಮೊರಬ ಗೊಂಚಲಿನಲ್ಲಿ (6 ಗ್ರಾಮಗಳನ್ನು) ಹಾಗೂ ಶಿಶುವಿನಹಳ್ಳಿ ಗೊಂಚಲಿನಲ್ಲಿ (5 ಗ್ರಾಮಗಳನ್ನು) ಒಳಗೊಂಡಿದ್ದು ಈ ಗುತ್ತಿಗೆಯನ್ನು ಮೆ. ರಾವ್ ಕನ್ಸ್ಟ್ರಕ್ಷನ್, ಬೆಂಗಳೂರು ಇವರಿಗೆ ವಹಿಸಲಾಗಿತ್ತು. ಸದರಿ ಯೋಜನೆಯಡಿ ಕೆಲಸ ಮುಗಿದಿದ್ದು ನಿಯಮಿತವಾಗಿ ನೀರನ್ನು ಸಕಾಲಕ್ಕೆ ಗ್ರಾಮಸ್ಥರಿಗೆ ಸರಬರಾಜು ಮಾಡಲಾಗುತ್ತಿದೆ. ಈ ಯೋಜನೆಗಳನ್ನು ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್/ಗ್ರಾಮ ಪಂಚಾಯತ್‌ಗಳಿಗೆ ಇನ್ನೂ ಹಸ್ತಾಂತರಿಸಬೇಕಾಗಿದೆ.

ಪ್ಯಾಕೇಜ್ 2ಎ ರಲ್ಲಿ ತೆಗೆದುಕೊಂಡಿರುವ ಕುಡಿಯುವ ನೀರಿನ ಯೋಜನೆಯ ಅರೆಕುರಹಟ್ಟಿಯ ಗೊಂಚಲಿನಲ್ಲಿ (6 ಗ್ರಾಮಗಳಲ್ಲಿ) ಬನಹಟ್ಟಿ ಗೊಂಚಲಿನಲ್ಲಿ (5 ಗ್ರಾಮಗಳು) ಹಾಗೂ ಬೈರನಹಟ್ಟಿ ಗ್ರಾಮಗಳು ಸೇರಿದ್ದು ಕಾಮಗಾರಿಗಳ ನಿರ್ಮಾಣವನ್ನು ಮೆ. ಹರ್ವಿನ್ಸ್ ಕನ್ಸ್ಟ್ರಕ್ಷನ್ ಹೈದರಾಬಾದ್ ಇವರಿಗೆ ವಹಿಸಲಾಗಿದೆ. ಯೋಜನೆಗಳು ಕಾರ್ಯಾರಂಭವಾಗಿವೆ.

ಪ್ಯಾಕೇಜ್ 2ಎ ಕ್ಕೆ ಸಂಬಂಧಪಟ್ಟ 12 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಗೆ ಗುತ್ತಿಗೆದಾರರು ಬೀಗ ಹಾಕಿದ್ದು ಸತ್ಯ. ಗುತ್ತಿಗೆದಾರರು ಆರ್ಥಿಕ ಮುಗ್ಗಟ್ಟು ಕಾರಣದಿಂದಾಗಿ ನೀರು ಸರಬರಾಜು ನಿರ್ವಹಣೆ ಮಾಡಲು ಸಾಧ್ಯವಿಲ್ಲವೆಂದು ದಿನಾಂಕ: 16-6-2001 ರಂದು ಮನವಿ ಸಲ್ಲಿಸಿರುತ್ತಾರೆ. ಸೂಚಿಸಿದ ಎರಡು ಮೂರು ದಿನಗಳಲ್ಲಿ ಯೋಜನೆಯನ್ನು ಹಸ್ತಾಂತರಿಸುವುದಾಗಿ ತಿಳಿಸಿದ್ದು ಮತ್ತು ಯಾವುದಾದರೂ ನ್ಯೂನ್ಯತೆಗಳು ಇದ್ದಲ್ಲಿ ಹಸ್ತಾಂತರಿಸುವ ಸಮಯದಲ್ಲಿ ಸರಿಪಡಿಸುವುದಾಗಿ ತಿಳಿಸಿರುತ್ತಾರೆ.

ಸರ್ಕಾರವು ದಿನಾಂಕ: 15-6-2001ರಂದು ಜಿಲ್ಲಾ ಪಂಚಾಯತ್‌ರವರುಗಳಿಗೆ ಪತ್ರ ಬರೆದು ಕುಡಿಯುವ ನೀರಿನ ಯೋಜನೆಯನ್ನು ವಹಿಸಿಕೊಳ್ಳುವಂತೆ ಪುನ: ತಿಳಿಸಲಾಗಿದೆ. ಇದರ ಪ್ರಯತ್ನ ಈಗಾಗಲೇ ಜಿಲ್ಲಾ ಪಂಚಾಯತ್‌ರವರು ತಾಲ್ಲೂಕು ನಿರ್ವಾಹಣಾಧಿಕಾರಿಗಳಿಗೆ ಯೋಜನೆಗಳನ್ನು ವಹಿಸಿಕೊಳ್ಳುವಂತೆ ನಿರ್ದೇಶನ ಮಾಡುತ್ತಾರೆ.

ಈ ಮಧ್ಯೆ ಅವಶ್ಯವಿರುವ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡುವಂತೆ ಗುತ್ತಿಗೆದಾರರ ಪ್ರತಿನಿಧಿ ಸಮಕ್ಷಮ ಕ್ರಮ ಜರುಗಿಸಿದ ಪರಿಣಾಮವಾಗಿ ನವಲಗುಂದ ತಾಲ್ಲೂಕಿನ ಅರೆಕುರಹಟ್ಟಿ, ಚಿಲಕವಾಡ, ಹಾಗೂ ಕಾಲವಾಡ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಪುನ: ಪ್ರಾರಂಭಿಸಲಾಗಿದೆ.

ಬನಹಟ್ಟಿ ಮತ್ತು ಭೈರನಹಳ್ಳಿ ಗ್ರಾಮಸ್ಥರು ತಮ್ಮ ಕೆರೆಯಲ್ಲಿ ನೀರಿನ ಸಂಗ್ರಹಣ ಕಡಿಮೆ ಇರುವುದರಿಂದ ಶುದ್ಧೀಕರಣ ಘಟಕಕ್ಕೆ ನೀರು ಬಿಡಲು ಒಪ್ಪುತ್ತಿಲ್ಲ. ಆದಾಗ್ಯೂ ನೀರಿನ ಅತೀ ಸಮಸ್ಯೆಯಿರುವ ಸುರಕೋಡ ಗ್ರಾಮಕ್ಕೆ ಕುಡಿಯುವ ನೀರು ಒದಗಿಸುವದಕ್ಕೋಸ್ಕರ ಏರು ಕೊಲರೆ ರಿಪೇರಿ ಕಾರ್ಯ ಕೈಕೊಳ್ಳಲಾಗಿದೆ.

ಬನಹಟ್ಟಿ ಹಾಗೂ ಭೈರನಹಟ್ಟಿ ಗ್ರಾಮಸ್ಥರಿಗೆ ಮನ ಒಲಿಸಿ ಅಲ್ಲಿಯ ಶುದ್ಧೀಕರಣ ಘಟಕಕ್ಕೆ ನೀರು ಬಿಡುವುದರೊಂದಿಗೆ ಎಲ್ಲಾ ಗ್ರಾಮಗಳಿಗೆ ನೀರು ಒದಗಿಸುವ ಕಾರ್ಯ ಪ್ರಾರಂಭಿಸಲು ಪ್ರಯತ್ನಿಸಲಾಗುತ್ತಿದೆ.

ರಾಜ್ಯದಲ್ಲಿ ಗ್ರಾಮಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರ

2636 (3344) ಶ್ರೀ ಯಾವಗಲ್ ಬಿ.ಆರ್. (ನರಗುಂದ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

೧. ಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರ ನೀಡುವ ಪ್ರಸ್ತಾವನೆ ಸರಕಾರದ ಮಟ್ಟದಲ್ಲಿದೆಯೇ;

೨. ಪಂಚಾಯಿತಿ ಮಟ್ಟದಲ್ಲಿ ಇರುವ ಅಧಿಕಾರಗಳ ಮೇಲೆ ನಿಯಂತ್ರಣದ ಅಧಿಕಾರ ಪಂಚಾಯತಿಗಳಿಗೆ ನೀಡಲಾಗುವುದೆ?

೩. ಗ್ರಾಮೀಣ ಮಟ್ಟದಲ್ಲಿ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಹಾಗೂ ಇಲಾಖೆಗೆ ನೀಡುವ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಗ್ರಾಮ ಪಂಚಾಯತಿಗಳಿಗೆ ನೀಡಲಾಗಿದೆಯೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :—

೧. ಹೌದು ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಪಡಿಸುವ ಸಲುವಾಗಿ ಅಧ್ಯಯನ ಮಾಡಲು ವರ್ಕಿಂಗ್ ಗ್ರೂಪ್‌ನ್ನು ರಚಿಸಲಾಗಿದೆ.

೩. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳು ಸಂಬಂಧಪಟ್ಟ ಚುನಾಯಿತ ಸಂಸ್ಥೆಗಳ ನಿಯಂತ್ರಣ ಹಾಗೂ ಉಸ್ತುವಾರಿಗೊಳಪಟ್ಟಿರುತ್ತಾರೆ.

೩. ಪ್ರತಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾವಣೆಗೊಂಡ ಇಲಾಖೆಗಳು ಹಾಗೂ ಯೋಜನೆಗಳಿಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಅಧಿಕಾರವನ್ನು ಕ್ರಮವಾಗಿ ನೀಡಲಾಗಿದೆ.

ರಾಜ್ಯದಲ್ಲಿ ಫೇಲಾದ ಪಿಯುಸಿ ಎರಡನೇಯ ವರ್ಷದ ವಿದ್ಯಾರ್ಥಿಗಳಿಗೆ ಸಪ್ಲಿಮೆಂಟರಿ ಪರೀಕ್ಷೆ

2637 (3345) ಶ್ರೀ ಯಾವಗಲ್ ಬಿ.ಆರ್. (ನರಗುಂದ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ರಾಜ್ಯದಲ್ಲಿ ರಾಜ್ಯದಲ್ಲಿ ಫೇಲಾದ ಪಿಯುಸಿ ಎರಡನೇಯ ವರ್ಷದ ವಿದ್ಯಾರ್ಥಿಗಳು ಜುಲೈ ಒಳಗಡೆ ಪರೀಕ್ಷೆಯನ್ನು ತೆಗೆದುಕೊಳ್ಳುವ ಅವಕಾಶವನ್ನು ನೀಡುವ ಯೋಜನೆ ಸರಕಾರದ ಮಟ್ಟದಲ್ಲಿದೆಯೆ;

2) ಅವರಿಗೆ ಸಿ.ಇ.ಟಿ. ಹಾಗೂ ಇತರೆ ಮುಂದಿನ ಹಂತದ ಆಯ್ಕೆಯಲ್ಲಿ ಅನುವು ಮಾಡಿಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;

3) ಆಂಧ್ರ ಪ್ರದೇಶದಲ್ಲಿ ಈ ತರಗತಿಗಳಿಗೆ ಬೇಗನೆ ಪರೀಕ್ಷೆಯನ್ನು ತೆಗೆದುಕೊಂಡು ಪಾಸಾದ ಅಭ್ಯರ್ಥಿಗಳು ತಮ್ಮ ಒಂದು ವರ್ಷದ ಅವಧಿ ಬಳಸಿಕೊಳ್ಳುವ ಅವಕಾಶ ನೀಡುವುದು ನಿಜವೇ?

4) ಅಂತಹ ಎಷ್ಟು ವಿದ್ಯಾರ್ಥಿಗಳು ರಾಜ್ಯದ ವಿವಿಧ ವಿದ್ಯಾ ಸಂಸ್ಥೆಗಳಲ್ಲಿ ಸೇರಿದ್ದಾರೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಇಲ್ಲ

ಆ) ಇಲ್ಲ

ಇ) ಹೌದು

ಈ) ಈ ಮಾಹಿತಿ ತಕ್ಷಣವೇ ಲಭ್ಯವಿರುವುದಿಲ್ಲ.

ನರಗುಂದ ಮತ ಕ್ಷೇತ್ರದ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡುವ ಬಗ್ಗೆ

2638 (3346) ಶ್ರೀ ಯಾವಗಲ್ ಬಿ.ಆರ್. (ನರಗುಂದ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನರಗುಂದ ಮತಕ್ಷೇತ್ರದಲ್ಲಿ ಇರುವ ಸರ್ಕಾರಿ ಆಸ್ಪತ್ರೆಗಳ ಸಂಖ್ಯೆ ಎಷ್ಟು; ಹಾಗೂ ಇವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು;

ಆ) ಇವುಗಳನ್ನು ಯಾವಾಗ ತುಂಬಲಾಗುವುದು;

ಇ) ಹೊಳೆ ಆಲೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಯಾವಾಗ ಕಟ್ಟಡ ಒದಗಿಸಲಾಗುವುದು ಹಾಗೂ ಯಾವಾಗ ಮೇಲ್ದರ್ಜೆಗೆ ಏರಿಸಲಾಗುವುದು?

ಶ್ರೀ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ನರಗುಂದ ಮತಕ್ಷೇತ್ರದಲ್ಲಿ ಇರುವ ಸರ್ಕಾರಿ ಆಸ್ಪತ್ರೆಗಳ ವಿವರ

ಪ್ರಾ.ಆ. ಕೇಂದ್ರಗಳು	4
ಪ್ರಾ.ಆ. ಘಟಕ	1
ಸಮುದಾಯ ಆರೋಗ್ಯ ಕೇಂದ್ರ	1
ಒಟ್ಟು	6

ಇವುಗಳಲ್ಲಿ ಖಾಲಿ ಇರುವ ವೈದ್ಯರು ಮತ್ತು ಇತರೆ ಸಿಬ್ಬಂದಿಗಳ ಹುದ್ದೆಗಳ ವಿವರ :

ವೈದ್ಯರು	2
ಇತರೇ ಸಿಬ್ಬಂದಿ	39

ಆ) ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಪ್ರಯೋಗಶಾಲಾ ತಂತ್ರಜ್ಞ, ಮತ್ತು ವಾಹನ ಚಾಲಕರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿ ತುಂಬಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇತರೆ ನಿಬ್ಬಂದಿಗಳ ಹುದ್ದೆಗಳ ಪೈಕಿ ಆ. ಸಹಾಯಕರ ಮತ್ತು ಅರೆ ವೈದ್ಯಕೀಯ ಸಿಬ್ಬಂದಿ ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬಲು ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸುವ ಪ್ರಸ್ತಾವನೆ ಸರಕಾರದ ಪರಿಶೀಲನೆಯಲ್ಲಿದೆ.

ಇ) ಪ್ರಸ್ತುತ ಈ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಮಂಗಳೂರಿನಲ್ಲಿ ಸರ್ಕಾರಿ ಪದವಿಪೂರ್ವ ವಿಜ್ಞಾನ, ವಾಣಿಜ್ಯ ಹಾಗೂ ಕಲಾ ತರಗತಿಗಳನ್ನು ಪ್ರಾರಂಭಿಸುವುದು

2639 (3138) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಗಳೂರಿನಲ್ಲಿರುವ ಯೂನಿವರ್ಸಿಟಿ ಕಾಲೇಜಿನಲ್ಲಿ ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಪಿಯುಸಿಯಲ್ಲಿ ಅಧ್ಯಯನ ಮಾಡಲು ಪದವಿ ಪೂರ್ವ ಶಿಕ್ಷಣ ವ್ಯವಸ್ಥೆ ಆರಂಭಿಸುವ ಬಗ್ಗೆ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಇರುವ ತೊಂದರೆಗಳೇನು? ಹಾಗೂ ಎಂದಿನಿಂದ ಆರಂಭಿಸಲಾಗುವುದು?

ಆ) ಸರ್ಕಾರಿ ಪದವಿ ಪೂರ್ವ ವಿಜ್ಞಾನ, ವಾಣಿಜ್ಯ ಹಾಗೂ ಕಲಾ ತರಗತಿಗಳನ್ನು ಮಂಗಳೂರಿನಲ್ಲಿ ಆರಂಭಿಸುವ ತುರ್ತು ಅವಶ್ಯಕತೆಯಿದ್ದು ಈ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಮಂಗಳೂರು ನಗರದಲ್ಲಿ ಹಾಗೂ ಆಸುಪಾಸಿನಲ್ಲಿ ಸಾಕಷ್ಟು ಪದವಿಪೂರ್ವ ಕಾಲೇಜುಗಳಿರುವುದರಿಂದ ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಪಿಯುಸಿ ತರಗತಿಗಳನ್ನು ತೆರೆಯುವ ಅವಶ್ಯಕತೆ ಇರುವುದಿಲ್ಲ.

ಆ) ಮಂಗಳೂರು ನಗರದಲ್ಲಿ 02 ಸರ್ಕಾರಿ ಪಿಯುಸಿ ಕಾಲೇಜುಗಳು ಮತ್ತು 22 ಖಾಸಗಿ ಕಾಲೇಜುಗಳಿರುತ್ತವೆ. ಈ ಕಾಲೇಜುಗಳಲ್ಲಿ ಪ್ರಥಮ ಪಿಯುಸಿಗೆ ವಿದ್ಯಾರ್ಥಿಗಳ ದಾಖಲಾತಿ ನಡೆದಿರುತ್ತದೆ. ಹೆಚ್ಚಿನ ಬೇಡಿಕೆ ಬಂದಲ್ಲಿ ಹೆಚ್ಚು ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲು ಅನುಮತಿ ನೀಡಲಾಗುವುದು.

ಅಧ್ಯಕ್ಷರು :— ಮಂಡಿಸಲಾಯಿತು

(2) ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ (ಅ) ಪಿ.ಎಫ್. ಬಗ್ಗೆ ಸುಳ್ಳು ವದಂತಿಯಿಂದಾಗಿ ಪೀಣ್ಯದಲ್ಲಿ ಸಂಭವಿಸಿದ ಘಟನೆ ಬಗ್ಗೆ

ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) :— ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ಪೀಣ್ಯದಲ್ಲಿ ಆಗಿರತಕ್ಕಂತಹ ಘಟನೆ ಪತ್ರಿಕೆಯಲ್ಲಿ ಬಂದಿದೆ. ತುಮಕೂರು ರಸ್ತೆಯಲ್ಲಿ ಬರತಕ್ಕಂಥ ಪೀಣ್ಯ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡತಕ್ಕಂತಹ ಸಾವಿರಾರು ಕಾರ್ಮಿಕರು ಪಿ.ಎಫ್‌ನಲ್ಲಿ ಆಗಿರತಕ್ಕಂತಹ ಗೊಂದಲದ ಹೇಳಿಕೆ ಬಗ್ಗೆ ಧರಣಿ ಮಾಡುವ ಸಂಬಂಧದಲ್ಲಿ ಸುಮಾರು 150ಕ್ಕೂ ಹೆಚ್ಚು ವಾಹನಗಳಿಗೆ ಬೆಂಕಿ ಹಚ್ಚಿರುವುದರ ಬಗ್ಗೆ ಮತ್ತು ರಸ್ತೆ ಬದಿ ವ್ಯಾಪಾರ ಮಾಡತಕ್ಕಂತ ತರಕಾರಿ ಅಂಗಡಿಗಳನ್ನು ಹಾಗೂ ಬಟ್ಟೆ ಅಂಗಡಿಗಳನ್ನೂ ಲೂಟಿ ಮಾಡಿರುವುದರ ಬಗ್ಗೆ ಪೋಲಿಸ್‌ನವರು ಯಾವುದೇ ಕಾನೂನು ಸರಿಪಡಿಸದೆ ಈ ದುಷ್ಕರ್ಮಿಗಳು ಯಾರಿದ್ದಾರೆ ಅರು ಕಾನೂನನ್ನು ಕೈಗೆತ್ತಿಕೊಂಡು ನಿಷ್ಕ್ರಿಯವಾಗಿ ಕಾರ್ಯ ನಿರ್ವಹಿಸಿದ್ದಾರೆ. ಬೆಳಿಗ್ಗೆ ಸುಮಾರು 10 ಗಂಟೆಗೆ ಪ್ರಾರಂಭವಾದ ದಾಂಧಲೆ ರಾತ್ರಿ ಎಂಟು ಗಂಟೆಯವರೆಗೆ ನಡೆದಿದೆ. ಪೋಲಿಸ್‌ನವರು ಸರಿಯಾಗಿ ಕಾರ್ಯ ನಿರ್ವಹಿಸಿಲ್ಲವೆಂದು ಪತ್ರಿಕೆಯಲ್ಲಿ ಬಂದಿದೆ. ಆ ಮಾಹಿತಿಯನ್ನು ನಾನು ನಿಮಗೆ ಕೊಡುತ್ತಿದ್ದೇನೆ. `ನಿನ್ನೆ ತಾನೇ ನಾವು ಗೃಹಮಂತ್ರಿಗಳ ಕಛೇರಿ ಮುಂದೆ ಒಂದು ಭಾಷಣ ಮಾಡಿದ್ದೇವೆ. ಬೆಂಗಳೂರಿನಲ್ಲಿ ಪೋಲಿಸರ ವೈಫಲ್ಯ ಜಾಸ್ತಿಯಾಗಿದೆ, ಕೊಲೆ ಜಾಸ್ತಿಯಾಗಿದೆ.

12.10 ಪಿ.ಎಂ.

(ಗೊಂದಲ)

ಅಧ್ಯಕ್ಷರು :— ನೋಡಿ, ಮೊದಲು ಯಾರು ಈ ವಿಷಯದ ಬಗ್ಗೆ ಮಾತನಾಡಲು ನನ್ನ ಕಛೇರಿಯಲ್ಲಿ ಬೆಳಿಗ್ಗೆ 9-30ಕ್ಕೆ ಬರೆದುಕೊಟ್ಟಿದ್ದಾರೆ, ಅಂಥವರಿಗೆ ಮೊದಲು ಅವಕಾಶ ಮಾಡಿಕೊಟ್ಟು ನಂತರ ಬೇರೆಯವರಿಗೆ ಮಾತನಾಡಲು ಅವಕಾಶ ಕೊಡುತ್ತೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಅಶೋಕ್‌ರವರೇ, ತಾವು ಮುಂದುವರಿಸಿ.

ಶ್ರೀ ಆರ್. ಅಶೋಕ :— ಮಾನ್ಯ ಅಧ್ಯಕ್ಷರೆ, 45 ವರ್ಷಗಳಾದ ಮೇಲೆಯೇ ಪಿ.ಎಫ್. ಹಣ ಬರುವುದು ಎನ್ನುವ ವದಂತಿಯನ್ನು ಯಾರೋ ಕಿಡಿಗೇಡಿಗಳು ಹರಡಿದ್ದಾರೆ. ಇದನ್ನು ತಿಳಿದು ಆತಂಕವಾಗಿ ಕಾರ್ಮಿಕರುಗಳು ಸ್ಟ್ರೈಕ್ ಮಾಡಿದರು ಎಂದು ಹೇಳಿದ್ದಾರೆ. ಆದರೆ ಇದುವರೆಗೂ ಯಾರು ಆ ರೀತಿಯ ವದಂತಿಯನ್ನು ಹರಡಿದರು ಎನ್ನುವುದನ್ನು ಪೋಲಿಸ್ ಇಲಾಖೆ ಕಂಡುಹಿಡಿದಿಲ್ಲ. ಪಿ.ಎಫ್. ಬಗ್ಗೆ ಸುಳ್ಳು ವದಂತಿಯನ್ನು ಹರಡಿದವರನ್ನು ಟ್ರೇಸ್ ಮಾಡುವುದಕ್ಕೆ ಆಗಿಲ್ಲವೆಂದು ಪೋಲಿಸ್ ಕಮಿಷನರ್‌ರವರೇ ಹೇಳುತ್ತಾ ಇದೊಂದು ಆಶ್ಚರ್ಯಕರವಾದ ಸಂಗತಿಯಾಗಿದೆಯೆಂದು

ಹೇಳಿದ್ದಾರೆ. ಗಾರ್ಮೆಂಟ್ಸ್ ಕಾರ್ಮಿಕರಿಗೆ ಲೀಡರ್‌ಶಿಫ್ ಇಲ್ಲ. ಸಮಾಜ ಘಾತುಕ ವ್ಯಕ್ತಿಗಳು ಇದರಲ್ಲಿ ಸೇರಿಕೊಂಡು ದಾಂಧಲೆ ಪ್ರಾರಂಭ ಮಾಡಿದ್ದಾರೆ. ಬೆಳಿಗ್ಗೆ 9-30 ಗಂಟೆಯಿಂದ 12.00 ಗಂಟೆಯವರೆಗೆ ಕೇವಲ ಐದು ಪೋಲಿಸ್‌ರನ್ನು ಬಿಟ್ಟರೆ ಬೇರೆ ಯಾವ ದೊಡ್ಡ ಪೋಲಿಸ್ ಅಧಿಕಾರಿಗಳು ಅಲ್ಲಿರಲಿಲ್ಲ. ಸರ್ಕಾರ ಎಲ್ಲಾ ಪೋಲಿಸ್ ಸ್ಟೇಷನ್‌ಗಳಲ್ಲೂ ಕಂಪ್ಯೂಟರೈಸ್ಡ್ ಮಾಡಿದೆ, ಎಲ್ಲಾ ಎಸ್.ಐ., ಎ.ಸಿ.ಗಳ ಹತ್ತಿರ ಮೊಬೈಲ್ ಫೋನ್ ಕೊಟ್ಟಿದೆ. ಹೀಗಿದ್ದರೂ 9-30 ರಿಂದ 12.00 ಗಂಟೆಯವರೆಗೂ ಕೇವಲ 5 ಪೋಲಿಸ್‌ನವರು ಮಾತ್ರ ಅಲ್ಲಿ ಇದ್ದರು. ಇಂಟಲಿಜೆನ್ಸ್‌ರವರು ಏನು ಕೆಲಸ ಮಾಡಬೇಕಾಗಿತ್ತೋ ಆ ಕೆಲಸವನ್ನು ಮಾಡಿಲ್ಲ. ಪಿ.ಎಫ್. ಕಛೇರಿಗೆ ರಕ್ಷಣೆ ಕೊಡುವ ದೃಷ್ಟಿಯಿಂದಲೂ ಕೂಡ ಸರ್ಕಾರ ವಿಫಲವಾಗಿದೆ. ಪೋಲಿಸರು ನಿಷ್ಕ್ರಿಯರಾಗಿದ್ದಾರೆ. ತುಮಕೂರು ರಸ್ತೆಯಲ್ಲಿ ಬರುವ ಎಲ್ಲಾ ವಾಹನಗಳನ್ನು ತಡೆ ಹಿಡಿದಿದ್ದಾರೆ. ಸಣ್ಣ ಸಣ್ಣ ವ್ಯಾಪಾರಸ್ಥರ ಮಳಿಗೆಗಳನ್ನು ಲೂಟಿ ಮಾಡಿದ್ದಾರೆ. ಕಾರ್ಮಿಕರುಗಳ ಮೇಲೆ ಹಲ್ಲೆಯಾಗಿದೆ. ಇಷ್ಟಾದರೂ ಯಾವ ರೀತಿಯಲ್ಲಿ ಇಷ್ಟೊಂದು ಜನರು ಅಲ್ಲಿ ಸೇರಿದರು ಎಂಬುದೇ ಗೊತ್ತಾಗಿಲ್ಲರೆಂದು ಪೋಲಿಸ್‌ರವರುಗಳು ಹೇಳಿದ್ದಾರೆ. ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕೆಂದು ನಾನು ಸರ್ಕಾರಕ್ಕೆ ಆಗ್ರಹಪಡಿಸುತ್ತೇನೆ.

ಶ್ರೀ ಬಿ. ಸೋಮಶೇಖರ್:— ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು :— ನೋ, ನೋ, ನಾನು ಈಗ ಅವಕಾಶ ಕೊಡುವುದಿಲ್ಲ. ನೀವು ಬರವಣಿಗೆಯಲ್ಲಿ ಬರೆದುಕೊಟ್ಟಿಲ್ಲ. ಮೊದಲು ಬರವಣಿಗೆಯಲ್ಲಿ ಮಾತನಾಡಬೇಕೆಂದು ತಿಳಿಸಿದ ಸದಸ್ಯರಿಗೆ ಅವಕಾಶ ಕೊಟ್ಟು ನಂತರ ತಮಗೆ ಕೊಡುತ್ತೇನೆ.

ಶ್ರೀ ಆರ್. ಅಶೋಕ್:— ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು ಮತ್ತು ಯಾರ ಅಂಗಡಿಗಳಲ್ಲಿ ಲೂಟಿಯಾಗಿದೆ ಅವರಿಗೆ ಪರಿಹಾರವನ್ನು ಕೋಡಬೇಕು. ಖಾಸಗಿ ವಾಹನಗಳಿಗೂ ಹೆಚ್ಚು ಹಾನಿಯಾಗಿರುವುದರಿಂದ ಅವರಿಗೂ ಪರಿಹಾರ ಕೊಡಬೇಕೆಂದು ಮನನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ನಿನ್ನೆ ತಾನೇ ರಾಜ್ಯ ಸರ್ಕಾರದ ಪೋಲಿಸ್ ಇಲಾಖೆ ಬೆಂಗಳೂರಿನಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿದೆ ಎನ್ನುವ ಮಾತನ್ನು ಹೇಳಿದ್ದೇನೆ. ದರೋಡೆಗಳು ಹೆಚ್ಚು ಆಗುತ್ತಿವೆ, ಕೊಲೆಗಳು ಹೆಚ್ಚಾಗುತ್ತಿವೆ, ಪೋಲಿಸ್ ಅಧಿಕಾರಿಗಳ ಮೇಲೆ ಸರ್ಕಾರದ ನಿಯಂತ್ರಣ ಕಡಿಮೆಯಾಗಿದೆಯೆಂದು ಹೇಳಿದ್ದೇನೆ. ಅದೇಕೋ ಗೊತ್ತಿಲ್ಲ, ಶೂನ್ಯ ವೇಳೆಯಲ್ಲಿ ಇಷ್ಟೊಂದು ದೀರ್ಘವಾಗಿ ಪ್ರಸ್ತಾಪವಾಗಬಾರದು ಎಂದು ಮಾನ್ಯ ಧರ್ಮಸಿಂಗ್‌ರವರು ಹೇಳುತ್ತಿದ್ದಾರೆ.

ಶ್ರೀ ಧರ್ಮಸಿಂಗ್ :— ವಿಷಯವನ್ನು ಸರ್ಕಾರದ ಗಮನಕ್ಕೆ ಸದನದ ಮೂಲಕ ತಂದರೆ ಸಾಕು ಎಂದು ಹೇಳಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಧರ್ಮಸಿಂಗ್‌ರವರು ಏಳು ಬಾರಿ ವಿಧಾನಸಭೆಗೆ ಆಯ್ಕೆಯಾಗಿ ಬಂದವರಾಗಿದ್ದಾರೆ. ದುರಾದೃಷ್ಟವಶಾತ್ ಮೂರು ಬಾರಿ ಆರು ವಿರೋಧ ಪಕ್ಷದಲ್ಲಿಯೂ ಇದ್ದರು. ಮಾನ್ಯ ಚಂದ್ರೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದಾಗ ನಾನು ಉಪ ನಾಯಯಕನಾಗಿದ್ದಾಗ ಇಂಥ ಮಹತ್ವದ ವಿಚಾರಗಳ ಬಗ್ಗೆ ಗಂಟೆಗಟ್ಟಲೆ ಚರ್ಚೆ ಮಾಡಿದ್ದೇನೆ. ಮಾನ್ಯ ಮಹದೇವ ಪ್ರಸಾದ್‌ರವರ ಸಂಬಂಧಿಕರ ಶವವನ್ನು ನಿನ್ನೆಯ ದಿವಸ ಮುಷ್ಕರದಿಂದ ಉದ್ಭವಿಸಿದ ಟ್ರಾಫಿಕ್ ಸಮಸ್ಯೆಯಿಂದಾಗಿ ತೆಗೆದುಕೊಂಡು ಹೋಗಲು ಕಷ್ಟವಾಯಿತು ಎನ್ನುವ ಬಗ್ಗೆ ಅವರು ಸದನದಲ್ಲಿ ಹೇಳಬಯಸಿದ್ದರು.

ಅಧ್ಯಕ್ಷರು :— ತಾವು ಮಾತನಾಡಿದ ಮೇಲೆ ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ. ಈಗ ನೀವು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆಯಿಂದ ರಾತ್ರಿಯವರೆಗೆ ಸುಮಾರು ಎಂಟು ಗಂಟೆಗಳ ಕಾಲ ಹೈವೇಯಲ್ಲಿ ಟ್ರಾಫಿಕ್ ಕ್ಲೋಸ್ ಆಗಿದ್ದು ಇದೆ ಮೊದಲು. ನಾನು ಮತ್ತೊಮ್ಮೆ ಹೇಳುತ್ತಿದ್ದೇನೆ. ಬೆಂಗಳೂರಿನಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದರಲ್ಲಿ ಸರ್ಕಾರದ ಪೋಲಿಸ್ ಇಲಾಖೆ ವಿಫಲವಾಗಿದೆಯೆಂದು ನಾನು ಒತ್ತಿ ಒತ್ತಿ ಹೇಳುತ್ತಿದ್ದೇನೆ. ಯಾವುದಾದರೂ ಸನ್ನಿವೇಶದಲ್ಲಿ ಕೇವಲ ಅರ್ಧ ಗಂಟೆಯಲ್ಲಿ 10 ಸಾವಿರ ಕಾರ್ಮಿಕರು ಒಟ್ಟಿಗೆ ಸೇರಲು ಸಾಧ್ಯವಾಗುತ್ತದೆಯೆ? ಒಬ್ಬ ಪೊಲೀಸ್, ಕ್ರೈಮ್‌ಗೆ ಇರುತ್ತಾನೆ, ಒಬ್ಬ ಲಾ ಅಂಡ್ ಆರ್ಡರ್‌ಗೆ ಇರುತ್ತಾನೆ. ಒಬ್ಬ ಇಂಟಲಿಜೆನ್ಸ್‌ಗೆ ಇನ್‌ಫರ್ಮೇಷನ್ ಕೊಡುವುದಕ್ಕೆ ಇರುತ್ತಾನೆ. ಇದಲ್ಲದೆ ಈ ಬೆಂಗಳೂರು ನಗರದಲ್ಲಿ ಒಂದು ಸ್ಪೆಷಲ್ ಬ್ರಾಂಚ್ ಎಂದು ಇದೆ. ಒಂದು ಇಂಟಲಿಜೆನ್ಸ್ ವಿಂಗ್ ಎಂದು ಸ್ಟೇಟ್ ಇಂಟಲಿಜೆನ್ಸ್‌ಗೆ ಇನ್‌ಫರ್ಮೇಷನ್ ಕೊಡುವುದಕ್ಕೆಂದು ಇರುತ್ತದೆ. ಇದರ ಜೊತೆಗೆ ಪ್ರತಿ 24 ಗಂಟೆಗೆ ಒಂದು ಸಾರಿ ಮಾನ್ಯ ಗೃಹ ಮಂತ್ರಿಗಳಿಗೆ ರಾಜ್ಯದಲ್ಲಿ ಆಗುತ್ತಿರತಕ್ಕಂಥ ಎಲ್ಲಾ ವಿಷಯಗಳ ಬಗ್ಗೆ, ಅದು ಮರ್ಡರ್ ಇರಬಹುದು, ರೇಪ್ ಇರಬಹುದು, ಲೇಬರ್ ಫ್ರಂಟ್, ಸ್ಟೂಡೆಂಟ್ ಫ್ರಂಟ್ ಅಥವಾ ಯೂತ್ ಫ್ರಂಟ್ ಜೊತೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಮೇಲೆ ನಡೆಯುತ್ತಿರುವ ದೌರ್ಜನ್ಯ ಇವುಗಳ ಬಗ್ಗೆ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್‌ನವರು ಮಾನ್ಯ ಮುಖ್ಯಮಂತ್ರಿಯವರ ಜೊತೆಗೆ ಗೃಹ ಮಂತ್ರಿಯವರಿಗೂ ಮಾಹಿತಿಯನ್ನು 24 ಗಂಟೆ ಮುಂಚೆ ತಿಳಿಸುತ್ತಾರೆ. ಅದಕ್ಕೆ ಒಂದು ಸ್ಪೆಷಲ್ ವಿಂಗ್ ಇದೆ. ಅದಕ್ಕೋಸ್ಕರವೇ ಒಂದು ಸ್ಪೆಷಲ್ ಬ್ರಾಂಚ್ ಬೆಂಗಳೂರು

ನಗರದಲ್ಲಿ ಕೆಲಸ ಮಾಡುತ್ತಿದೆ. ಹಾಗಾದರೆ ನಿಮ್ಮ ಇಂಟಲಿಜೆನ್ಸ್ ವಿಂಗ್ ಫೇಲ್ಯೂರ್ ಆಯಿತಾ? ಸ್ಪೆಷಲ್ ಬ್ರಾಂಚ್ ಫೇಲ್ಯೂರ್ ಆಯಿತಾ? ನಿಮಗೆ ಇನ್‌ಫರ್ಮೇಷನ್ ಬಂದಿರಲಿಲ್ಲವೆ? ನಿನ್ನೆ ಆಗಿರತಕ್ಕಂಥ ಘಟನೆಗೆ ಮೊನ್ನೆ ದಿವಸವೇ ಇಲ್ಲಿರತಕ್ಕಂಥ ಸರ್ಕಲ್ ಇನ್ಸ್‌ಪೆಕ್ಟರ್ ಏಕೆ ಪ್ರಿಕಾಷನ್ ತೆಗೆದುಕೊಳ್ಳಲಿಲ್ಲ? ಹತ್ತು ಸಾವಿರ ಜನ ಸೇರುವುದಕ್ಕೆ ಏಕೆ ಅವಕಾಶ ಮಾಡಿಕೊಟ್ಟರು? ಅದು ಗುಲ್ಲು ಇರಬಹುದು, ಸುಳ್ಳು ಸುದ್ದಿ ಇರಬಹುದು, ಪ್ರಾವಿಡೆಂಟ್ ಫಂಡ್ ಕಮಿಷನರ್ ಅವರು ಇದಾದಮೇಲೆ ನಾವು ಯಾವುದೇ ರೀತಿಯ ಬದಲಾವಣೆ ಮಾಡಿಲ್ಲರೆಂದು ಹೇಳಿದ್ದಾರೆ. ತಮ್ಮ ಕಾರ್ಮಿಕ ಮಂತ್ರಿಗಳಾದ ಮಾನ್ಯ ಹಿಂಡಸಗೇರಿಯವರೂ ಸಹ ಸಮಯೋಚಿತವಾಗಿ ನಿನ್ನೆ ರಾತ್ರಿ ದೂರದರ್ಶನದ ಅನೇಕ ಚಾನಲ್‌ಗಳಿಗೆ ಇಂಟರ್‌ವ್ಯೂ ಕೊಟ್ಟು, ಈ ರೀತಿಯ ಯಾವುದೇ ಪ್ರಪೋಸಲ್ ರಾಜ್ಯ ಹಾಗೂ ಕೇಂದ್ರ ಸರ್ಕಾರದಲ್ಲಿ ಇಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆ ಏನೆಂದರೆ ರಾಜ್ಯ ಸರ್ಕಾರ ಸಾಮಾನ್ಯವಾಗಿ ಜನಗಳಿಗೆ ಸಂರಕ್ಷಣೆ ಕೊಡತಕ್ಕಂಥ ವಿಚಾರವಿದ್ದು, ಅಲ್ಲಿ ಪ್ರಾವಿಡೆಂಟ್ ಫಂಡ್ ಆಫೀಸ್ ನೌಕರರು ಅದರಲ್ಲೂ ಹೆಣ್ಣುಮಕ್ಕಳು, ನಮಗೆ ಎರಡು-ಮೂರು ತಿಂಗಳಿನಿಂದ ಈ ರೀತಿಯ ಘಟನೆಗಳಾಗುತ್ತಿವೆ; ನಮಗೆ ರಕ್ಷಣೆ ಸಿಕ್ಕಿಲ್ಲವೆನ್ನುವಂತಹ ಮಾತನ್ನು ಹೇಳಿದ್ದಾರೆ. ಹಾಗಾದರೆ ನೀವು ಏನಾದರೂ ಕೇಂದ್ರ ಸರ್ಕಾರದ ಮೇಲೆ ಯುದ್ಧಕ್ಕೆ ಹೊರಟ್ಟಿದ್ದೀರಾ? ಕೇಂದ್ರ ಸರ್ಕಾರದ ನೌಕರರಿಗೆ ನೀವು ರಕ್ಷಣೆ ಕೊಡುವುದಿಲ್ಲವೆ? ಅವರು ನಿಮಗೆ ಏನಾದರೂ ಕಂಪ್ಲೇಂಟ್ ಕೊಟ್ಟಿದ್ದಾರೋ? ಕಂಪ್ಲೇಂಟ್ ಕೊಟ್ಟಿದ್ದರೆ ನೀವು ಏಕೆ ಸುಮ್ಮನೆ ಇದ್ದೀರಿ? ಇದೆಲ್ಲಾ ಪ್ರಶ್ನೆ ಉದ್ಭವವಾಗುತ್ತದೆ. ಆಗುವುದಿಲ್ಲವೇ ಹೇಳಿ ಅಲ್ಲಿ ಒಂಭತ್ತು ಗಂಟೆಗೆ ಹತ್ತು ಸಾವಿರ ಜನ ಸೇರಿದ ಮೇಲೆ ಎರಡು ಗಂಟೆಯವರೆಗೂ ಸಹ ನೀವು ಮಾಬ್‌ನ್ನು ಕಂಟ್ರೋಲ್ ಮಾಡುವುದಕ್ಕೆ ಆಗಲಿಲ್ಲ. ಆ ನೌಕರರು ನಮ್ಮ ಒಂದು ಡೆಲಿಗೇಷನ್ ಅನ್ನು ಇಲ್ಲಿಗೆ ಕರೆದುಕೊಂಡು ಹೋಗಿ ಎಂದು ಹೇಳಿದ್ದಾರೆ. ಆ ಡೆಲಿಗೇಷನ್ ಅನ್ನು ಇಲ್ಲಿಗೆ ಕರೆದುಕೊಂಡು ಬರಬಹುದಾಗಿತ್ತು. ಅಥವಾ ಕಾರ್ಮಿಕ ಮಂತ್ರಿಗಳನ್ನು ಅಲ್ಲಿಯೇ ಒಂದು ಸೇಫ್ ಜಾಗಕ್ಕೆ ಕರೆದುಕೊಂಡು ಹೋಗಿ ಅವರನ್ನು ಕೇಳಬಹುದಾಗಿತ್ತು ಇದನ್ನೆಲ್ಲಾ ಕೇಳದೆ ಅಲ್ಲಿ ದಾಂಧಲೆ ಮಾಡಿ ಇವತ್ತು ಇಂತಹ ಸನ್ನಿವೇಶಗಳಲ್ಲಿ ಅಮಾಯಕರು ಸಿಕ್ಕಿಹಾಕಿಕೊಳ್ಳತಕ್ಕಂಥಾದ್ದು ಹೆಚ್ಚು ಅವಕಾಶ ಇದೆ. ನೂರಾರು ಜನರನ್ನು ಜೈಲಿಗೆ ಕಳುಹಿಸಿದ್ದೀರಿ. ಈಗ ಹೇಳುತ್ತಿದ್ದೀರಿ, ನಾನು ಅಭಯಹಸ್ತ ನೀಡುತ್ತೇನೆ, ಕಾನೂನು ಕಾಪಾಡುತ್ತೇನೆ ಎಂದು. ನಿಮ್ಮ ಮಾತಿಗೆ ಬೆಲೆ ಏನು? ನನಗೆ ನಂಬಿಕೆ ಇರಲಿ ಜನಗಳಿಗೆ ಹೇಗೆ ವಿಶ್ವಾಸ ಬರುತ್ತದೆ? ಈ ರೀತಿಯಾಗಿ ನಿಮ್ಮ ಸರ್ಕಾರ ಬಂದ ಮೇಲೆ ದಾಂಧಲೆಗಳು ಪ್ರಾರಂಭವಾದರೆ ಪೊಲೀಸರು ಮೂಕಪ್ರೇಕ್ಷಕರಾಗಿರಬೇಕಾದರೆ ಇದರ ಹಿಂದೆ ಯಾವ ಶಕ್ತಿಗಳು ಇದ್ದರು? ಇದೂ ಸಹ ಪ್ರಶ್ನೆ ಏಳುತ್ತದೆ. ತಾವು ಇದರ ಬಗ್ಗೆ ತನಿಖೆಯನ್ನು ನಡೆಸಬೇಕಾಗುತ್ತದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಎಲ್ಲಾ ಕಚೇರಿಗಳಿಗೆ ರಕ್ಷಣೆಯನ್ನು ಕೊಡಬೇಕು.

ನಿಮ್ಮ ಸ್ಪೆಷಲ್ ಬ್ರಾಂಚ್ ಆಫೀಸರ್, ನಿಮ್ಮ ಇಂಟಲಿಜೆನ್ಸ್ ಆಫೀಸರ್ ಯಾರಿದ್ದಾರೆ ಅವರು ಏಕೆ ನಿಮಗೆ ಮಾಹಿತಿ ಕೊಡಲಿಲ್ಲ? ಕೊಟ್ಟಿದ್ದರೆ ನಿಮಗೆ ಬಂದಿರತಕ್ಕಂಥ ರಿಪೋರ್ಟ್ ಏನಾಯಿತು? ಆ ಸತ್ಯಸಂಗತಿಗಳನ್ನು ಈ ಸದನಕ್ಕೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಅಧ್ಯಕ್ಷರೆ, ಕೇವಲ 48 ಗಂಟೆಯೊಳಗಡೆ ಮತ್ತೊಮ್ಮೆ ಬೆಂಗಳೂರು ನಗರದ ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ವಿಶೇಷವಾಗಿ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವ ಒಂದು ಸಂದರ್ಭ ಒದಗಿ ಬಂದಿರುವುದು ತುಂಬಾ ವ್ಯಸನಕರ. ಈಗಾಗಲೇ ಮಾನ್ಯ ಸಿಂಧ್ಯಾರವರು ಹಾಗೂ ಅಶೋಕ್‌ರವರು ಅದರ ಬಗ್ಗೆ ಸವಿಸ್ತಾರವಾಗಿ ಹೇಳಿದ್ದಾರೆ. ತುಮಕೂರು ರಸ್ತೆ ಒಂದು ಹೈವೇ. ಅದರ ಪಕ್ಕದಲ್ಲಿ ಇರುವುದು ಇಡೀ ಏಷಿಯಾದಲ್ಲೇ ದೊಡ್ಡದಾದ ಪೀಣ್ಯ ಇಂಡಸ್ಟ್ರೀಯಲ್ ಎಸ್ಟೇಟ್. ಇಂತಹ ಕಡೆ ಇಂತಹ ಒಂದು ಪ್ರಸಂಗ ಜರುಗಿದೆ. ಈ ರೀತಿ ಜರುಗಿರುವಾಗ ನೀವು ಮೂರು ಸಂಗತಿಗಳನ್ನು ನೋಡಬೇಕು. ಮೊದಲನೆಯದು ಕೇವಲ ವದಂತಿಯಿಂದ ಇಷ್ಟೆಲ್ಲಾ ಆಗುವುದಕ್ಕೆ ಸಾಧ್ಯವಿದೆಯೇ? It is just a romour. Abject failure on the part of the police intelligence ಒಂದು ವ್ಯವಸ್ಥೆ ಮಾಡಿಕೊಂಡು, ಅದು ಒಂದು ಅಂಗವಾಗಿ ಅಂಟಲಿಜೆನ್ಸ್ ಎಂದು ಅದಕ್ಕೆ ನೆಟ್‌ವರ್ಕ್ ಇಟ್ಟುಕೊಂಡು ಅವರೂ ಕೂಡ ಅದನ್ನು ಗ್ರಹಿಸದೆ ಇದ್ದರೆ ಏನಾಗಬಹುದು? ಈಗಾಗಲೇ ಬೆಂಗಳೂರು ನಗರದಲ್ಲಿ ಸಾಕಷ್ಟು ಅನುಭವಗಳಾಗಿವೆ. ಅದು ಜಯನಗರ ಇಷ್ಯೂ ಇರಬಹುದು, ಸಿಟಿ ಮಾರ್ಕೆಟ್‌ನಲ್ಲಿ ನಡೆದಿರುವುದು ಇರಬಹುದು, ಮತ್ತೆ ಮತ್ತೆ ಇಷ್ಟೆಲ್ಲಾ ಆದಮೇಲೆ ಈ ಗುಪ್ತಚಾರ ದಳದವರು ಯಾವಾಗ ಎಚ್ಚೆತ್ತು ಕೊಳ್ಳುತ್ತಾರೆ? ಇನ್ನು ಮೂರನೆಯದಾಗಿ ಈ ರೀತಿ ಗಲಾಟೆಯಾದಾಗ ರಯಟ್ ಕಂಟ್ರೋಲಿಂಗ್ ಮೆಷಿನರಿ ಇಲ್ಲವೇ? ಯಾವ ರೀತಿ ಇದನ್ನು ಕಂಟ್ರೋಲ್ ಮಾಡಬೇಕು? ಯಾವ ರೀತಿ ಚದುರಿಸಬೇಕು? ಅಮಾಯಕರಿಗೆ ಯಾವ ರೀತಿ ತೊಂದರೆ ಆಗದ ಹಾಗೆ ನೋಡಿಕೊಳ್ಳಬೇಕು ಇದರ ಬಗ್ಗೆ ಯೋಜನೆ ಮಾಡುವುದಕ್ಕಾಗುವುದಿಲ್ಲವೆ? ಅಲ್ಲಿ ಸೇರಿದವರೆಲ್ಲರೂ ಕೂಡ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವಂತಹ ಅದರಲ್ಲೂ ವಿಶೇಷವಾಗಿ ಮಹಿಳೆಯರು. ಮೊದಲೇ ಅವರು ಅಭದ್ರತೆಯಿಂದ ಒದ್ದಾಡುತ್ತಿರುವಂತಹ ಜನ. ಒಂದು ಕಡೆ ಮಾಲೀಕರ ಹಾವಳಿ. ನನ್ನ ಹತ್ತಿರ ಒಂದು ರಪೋರ್ಟ್ ಇದೆ, ಬೆಳಿಗ್ಗೆ 9-30ಕ್ಕೆ ವದಂತಿ ಬರುವುದಕ್ಕೆ ಪ್ರಾರಂಭ ಆಯಿತು. ಅದೇನೆಂದರೆ 45 ವರ್ಷಕ್ಕಿಂತ ಮೊದಲು ಪಿಎಫ್ ಹಣವನ್ನು ಕೊಡುವುದಿಲ್ಲ, 45 ವರ್ಷವಾಗಿರುಬೇಕು ಎಂದು. ಸಹಜವಾಗಿ 35 ವರ್ಷದಿಂದಲೇ ಅಲ್ಲಿ ಕೆಲಸದಿಂದ ಕಿತ್ತು ಹಾಕುತ್ತಾರೆ. ಯಾವುದೇ ರೀತಿಯ ಸೆಕ್ಯುರಿಟಿ ಇಲ್ಲ. ಆದ್ದರಿಂದ ಸಹಜವಾಗಿ ಭಯವಾಗುತ್ತದೆ. ಅಲ್ಲಿ

ಸುಮಾರು 150 ರಿಂದ 200 ಫ್ಯಾಕ್ಟರಿ ಇರಬಹುದು. ಅಲ್ಲಿ ಅಷ್ಟು ಫ್ಯಾಕ್ಟರಿಯವರು ಚಲಾವಣೆಯಾಗುತ್ತಿರುವಾಗ ಅದು ಇಂಟಲಿಜೆನ್ಸ್‌ನವರಿಗೆ ಗೊತ್ತಾಗುವುದಿಲ್ಲವೆ? They are paid for it. They are for that purpose. ಹತ್ತು ಗಂಟೆಗೆ ಬಹಳ ವ್ಯವಸ್ಥಿತವಾಗಿ ಒಂದೊಂದು ಫ್ಯಾಕ್ಟರಿಯಿಂದ ಜನರನ್ನು ಕರೆದುಕೊಂಡು ಹೋಗುವುದಕ್ಕೆ ಪ್ರಾರಂಭ ಮಾಡಿದರು. ಅವರನ್ನೆಲ್ಲಾ ಕರೆದುಕೊಂಡು ಹೋಗಿ ಜಾಲಹಳ್ಳಿ ಕ್ರಾಸ್‌ನಲ್ಲಿ ರೋಡ್ ಬ್ಲಾಕೇಡ್ ಪ್ರಾರಂಭವಾಯಿತು. ಎಷ್ಟು ಜನ ಬ್ಲಾಕೇಡ್‌ನಲ್ಲಿ ಸೇರಿದರು ಎಂದರೆ ಎಂಟು ಹತ್ತು ಸಾವಿರ ಜನ. ನಾವು ಅದನ್ನು ಕಲ್ಪನೆ ಮಾಡುವುದಕ್ಕೆ ಆಗುತ್ತದೆಯೇ? ಒಂದು, ಒಂದೂವರೆ ಗಂಟೆಯಲ್ಲಿ ಬೆಂಗಳೂರು ನಗರದಲ್ಲಿ ಎಂಟು ಹತ್ತು ಸಾವಿರ ಜನರನ್ನು ಸೇರಿಸುವುದು ಅಷ್ಟು ಸುಲುಭವಲ್ಲ. ಆರ್ಗನೈಸ್ಡ್ ಪೊಲಿಟಿಕಲ್ ಪಾರ್ಟಿಯವರಿಗೂ ಕೂಡ ಹೀಗೆ ಮಾಡುವುದಕ್ಕೆ ಆಗುವುದಿಲ್ಲ. ಆದರೆ It is not a joks. Even the organised political parties cannot do it. ಈ ಒಂದು ಅನ್‌ಆರ್ಗನೈಸ್ಡ್ ಸೆಕ್ಟಾರ್‌ನಲ್ಲಿ ಈ ರೀತಿ ಎಂಟು ಹತ್ತು ಸಾವಿರ ಜನರನ್ನು ಸೇರಿಸಿದರು. ಮೊರನೆಯದಾಗಿ 10.30ಕ್ಕೆ ಹಿಂಸೆ ಪ್ರಾರಂಭವಾಯಿತು. ಆ ಸಮಯದಲ್ಲೇ ಅವರು ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳನ್ನು ಕರೆದುಕೊಂಡು ಬನ್ನಿ, ಇಲ್ಲದೆ ಇದ್ದರೆ ನಮ್ಮನ್ನು ವಿಧಾನ ಸೌಧಕ್ಕೆ ಕರೆದುಕೊಂಡು ಹೋಗಿ ಎಂದು ಕೇಳಿದರು. ಇದೆಲ್ಲಾ ನೀವು ಯಾವ ರೀತಿ ಮ್ಯಾನೇಜ್ ಮಾಡುತ್ತೀರಿ ಎಂದು ಹೇಳುವುದಕ್ಕೆ ಒಂದು ಉದಾಹರಣೆ. ಒಂದು ಟೀಮ್ ಅನ್ನು ಕರೆದುಕೊಂಡು ಬರಬಹುದಾಗಿತ್ತು. ಕರೆದುಕೊಂಡು ಬಂದು ಗೃಹ ಸಚಿವರನ್ನು ಭೇಟಿ ಮಾಡಿಸಬಹುದಾಗಿತ್ತು. ಆದರೆ ಇಲ್ಲ, ನೀವು ವಿಧಾನ ಸೌಧಕ್ಕೆ ಹೋಗುವ ಹಾಗೆ ಇಲ್ಲ, ನಿಮ್ಮ ಡೆಲಿಗೇಷನ್ ಅನ್ನು ಕರೆದುಕೊಂಡು ಹೋಗುವ ಹಾಗೆ ಇಲ್ಲವೆಂದು 11.45ಕ್ಕೆ ಹೇಳಿದರು. ಇದೆಲ್ಲಾ ಪತ್ರಿಕೆಯವರಿಗೆ ಗೊತ್ತಾಗುತ್ತದೆ. ಪೊಲೀಸ್‌ನವರಿಗೆ ಗೊತ್ತಾಗುವುದಿಲ್ಲ. ಗಲಭೆ ಎರಡು ಗುಂಪುಗಳಾಗಿ ಡಿವೈಡ್ ಆದರು. ಒಂದು ಟೀಮ್ ಪಿ.ಎಫ್ ಆಫೀಸ್ ಕಡೆಗೆ ಹೋಯಿತು. ಇನ್ನೊಂದು ಟೀಮ್ ಅಲ್ಲೆ ನಿಂತುಕೊಂಡು ಬ್ಲಾಕೇಡ್ ಮುದುವರೆಸಿದರು. ಆಗಲೂ ಕೂಡ ಗೊತ್ತಾಗಲಿಲ್ಲವೇ? ಒಂದು ಗಂಟೆಗೆ ಪಿ.ಎಫ್ ಆಫೀಸ್ ಅನ್ನು ಧ್ವಂಸ ಮಾಡಿದರು ಆಗಲೂ ರಕ್ಷಣೆ ಕೊಡುವುದಕ್ಕಾಗಲಿಲ್ಲ. ಮಾನ್ಯ ಸಿಂಧ್ಯರವರು ಕರೆಕ್ಟಾಗಿ ಹೇಳಿದರು. ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲವೆ? ಇವರು ಇಲ್ಲಿ ಏನಾಗಬಹುದು ಎಂದು could they not foresee. ಇಷ್ಟು ಜನ ಸೇರಿದ್ದಾರೆ, ಪಿಎಫ್ ಆಫೀಸ್ ಒಂದು ದ್ವೇಷದ ಕೇಂದ್ರ ಮಾಡಬೇಕೆಂದು ಏಕೆ ಅನ್ನಿಸಲಿಲ್ಲ. ಜಾಲಹಳ್ಳಿ ಸರ್ಕಲ್ ಅಲ್ಲಿ ಇವತ್ತು ಮಾರಾಮಾರಿ ಹಿಂಸೆಯಾಯಿತು. ಪ್ರಶ್ನೆ ಇರುವುದು ಏನೆಂದರೆ ಇಂಟಲಿಜೆನ್ಸ್ ಏಕೆ ಇದನ್ನು ಗ್ರಹಿಸಲಿಲ್ಲ ಅಥವಾ ಗೊತ್ತಿದ್ದರೂ ಕೂಡ ಏಕೆ ಸೂಕ್ತವಾದ ಬಂದೋಬಸ್ತು ಮಾಡಲಿಲ್ಲ? ಬೆಂಗಳೂರುನಲ್ಲಿ ಪ್ರತಿದಿವಸ ಇದು ಆಗಬೇಕಾ? ಶ್ರೀಸಾಮಾನ್ಯನ ಅಭದ್ರತೆ ಜಾಸ್ತಿಯಾಗಬೇಕಾ? ಅದರ ಜೊತೆಗೆ

ಇವತ್ತು ರೂಮರ್ ಮಾಂಗರ್ಸ್ ಯಾರು ಇದ್ದಾರೆ, ಆ ಒಂದು ಸಣ್ಣ ಕಿಡಿ ಇವತ್ತು ಒಂದು ದೊಡ್ಡ ಬೆಂಕಿಯಾಯಿತು. ಅದನ್ನು ಪತ್ತೆ ಹಚ್ಚುವುದಕ್ಕೆ ಪ್ರಯತ್ನಪಟ್ಟಿದ್ದೀರಾ? ಇವತ್ತು ವಾಹನಗಳು, ಅಂಗಡಿಗಳು ಹಾಗೂ ಮನುಷ್ಯರಿಗೆ ನಷ್ಟವಾಗಿದೆ. ಕೊನೆಗೆ ಆರು ಗಂಟೆಗೆ ಪೊಲೀಸರು ಟ್ರಾಫಿಕ್ ಬಿಡುವುದಕ್ಕೆ ಅನುಕೂಲ ಮಾಡಿಕೊಟ್ಟರು. ಅದನ್ನು ಪೊಲೀಸ್‌ನವರು ಮಾಡಿಲ್ಲ. ಜನರೇ ಎಂಟು ಗಂಟೆ ಆದಮೇಲೆ ಹೊರಟು ಹೋದರೆಂದು ಕಾಣಿಸುತ್ತದೆ. ಯಾರು ಆ ಕಿಡಿಗೇಡಿಗಳು? ಈ ವದಂತಿಯನ್ನು ಹಬ್ಬಿಸಿ ಎಂಟು ಹತ್ತು ಸಾವಿರ ಜನರನ್ನು ಸೇರಿಸಿ ಅಲ್ಲಿ ಕರೆದುಕೊಂಡು ಹೋಗಿ ಈ ರೀತಿಯ ರಾದ್ಧಾಂತ ಮಾಡಿದವರು ಯಾರು? ಮೊದಲೇ ಅಭದ್ರತೆ ಇರುವ ಗಾರ್ಮೆಂಟ್ ಫ್ಯಾಕ್ಟರಿಗಳಲ್ಲಿ ಇನ್ನಷ್ಟು ಅಭದ್ರತೆ ಸೃಷ್ಟಿ ಮಾಡಿದವರು ಯಾರು? ಮೊನ್ನೆ ಇಲ್ಲಿ ಮಾತನಾಡಿದ್ದೇವೆ. 48 ಗಂಟೆಯೊಳಗೆ ಇವತ್ತು ಮತ್ತೆ ಮಾತನಾಡುತ್ತಿದ್ದೇವೆ. Bangalore City Police have miserably failed. ಬೆಂಗಳೂರು ಸಿಟಿ ಪೊಲೀಸ್‌ನವರಿಗಿಂತ ಯಾರು ಲೂಪ್ಸೆನ್ ಇದ್ದಾರೆ, they are having an upper hand ಎಂದು ಇವತ್ತು ರುಜುವಾತಾಗಿದೆ. ಈ ದೃಷ್ಟಿಯಿಂದ ರಾಜ್ಯ ಸರ್ಕಾರದಿಂದ ಮಾನ್ಯ ಕಾರ್ಮಿಕ ಸಚಿವರು ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ, ಏರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರು ಈ ರೀತಿ ಆಗುವುದಿಲ್ಲವೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ರೀತಿ ಮತ್ತೊಂದು ಸಾರಿ ಆಗದಂತೆ ಗುಪ್ತಚಾರ ವಿಭಾಗರನ್ನು ಯಾವ ರೀತಿಯಾಗಿ ತಾಕೀತು ಮಾಡುತ್ತೀರಿ? ಅವರನ್ನು ಯಾವ ರೀತಿಯಾಗಿ ಸಿದ್ಧಗೊಳ್ಳುವಂತೆ ಮಾಡುತ್ತೀರಾ? ಬೆಂಗಳೂರು ನಗರದಲ್ಲಿ ಟಿ.ವಿ. ಧಾರವಾಹಿಯ ರೀತಿಯಂತೆ ಮತ್ತೆ ಮತ್ತೆ ಈ ರೀತಿ ಆಗುತ್ತಾ ಹೋದರೆ ಏನು ಆಗಬಹುದು? ಆದುದರಿಂದ ತಾವು, ನಾರು ಕೇಳಿದಂತಹ ವಿಷಯಗಳ ಬಗ್ಗೆ ಸಂಪೂರ್ಣವಾದಂತಹ ಮಾಹಿತಿಯನ್ನು ಕೊಡಬೇಕು, ಮತ್ತೆ ಇದಕ್ಕೆ ಮೂಲಭೂತವಾಗಿ ಕಾರಣಕರ್ತರು ಯಾರು ಇದ್ದಾರೆ, ಅವರ ವಿರುದ್ಧ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಮತ್ತೆ ಈ ಗುಪ್ತಚಾರ ವಿಭಾಗದಲ್ಲಿ ಯಾರು ಫೇಲ್ಯೂರ್ ಆಗಿದ್ದಾರೆ, ಅವರ ಮೇಲೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ) :— ಮಾನ್ಯ ಅಧ್ಯಕ್ಷರೇ, ನಿನ್ನೆ ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಯ ವಿಚಾರವಾಗಿ ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ಹಾಗೂ ಮಾನ್ಯ ಎಸ್. ಸುರೇಶ್ ಕುಮಾರ್‌ರವರು ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಸೆಳೆದು ಅನೇಕ ವಿಚಾರ ವಿನಿಮಯ ಮಾಡಿದಾಗ, ನಾವು ಅಂತಹ ಕೆಲಸವನ್ನು ಮಾಡುವುದಕ್ಕೆ ಬಿಡುವುದಿಲ್ಲ, ಇದಕ್ಕೆ ತಕ್ಕ ಬಂದೋಬಸ್ತು ಮಾಡುತ್ತೇವೆಂದು ಮಾನ್ಯ ಗೃಹ ಸಚಿವರು ಆಶ್ವಾಸನೆಯನ್ನು ಸದನದಲ್ಲಿ ಕೊಟ್ಟರು. ಹೀಗೆ ಹೇಳಿ 24 ಗಂಟೆಯೊಳಗೆ ಕನಸಿನ ರೀತಿಯಲ್ಲಿ ನಿನ್ನೆ ಪೀಣ್ಯದಲ್ಲಿ ಆದಂತಹ ಘಟನೆಯನ್ನು ನೋಡಿದಾಗ ಅಲ್ಲಿ ಸುಮಾರು 10 ರಿಂದ 12 ಸಾವಿರ ಜನ ಬೆಳಿಗ್ಗೆ 9 ಗಂಟೆಗೆ ಫಿಎಫ್

ವಿಚಾರವಾಗಿ ಸುಳ್ಳು ವದಂತಿಯನ್ನು ಯಾರೋ ಕಿಡಿಗೇಡಿಗಳು ಹಬ್ಬಿಸಿದ ತಕ್ಷಣವೇ ಎಲ್ಲಾ ಜನರು ಒಟ್ಟಿಗೆ ಸೇರಿಕೊಂಡು ಅಲ್ಲಿ ವಾಹನಗಳು ಇರಬಹುದು, ಬಟ್ಟೆ ಅಂಗಡಿ ಇರಬಹುದು, ಎಲ್ಲವನ್ನೂ ಕೇವಲ ಎಂಟು ಗಂಟೆಗಳ ಅವಧಿಯಲ್ಲಿ ಲೂಟಿ ಮಾಡಿ ಸಾರ್ವಜನಿಕರು ಅಲ್ಲಿಗೆ ಹೋಗದಂತಹ ಪರಿಸ್ಥಿತಿ ನಿರ್ಮಾಣವಾಗಿ, ಇಲ್ಲಿ ಯಾರು ರಕ್ಷಣೆಗೆ ಪೊಲೀಸರು ಇಲ್ಲವೇ ಎಂದು ಅವರು ಮನಸ್ಸಿನಲ್ಲಿ ತೀರ್ಮಾನ ಮಾಡಿಕೊಂಡರು. ಇಂತಹ ಅನ್ಯಾಯ, ಅಕ್ರಮ ನಡೆದಂತಹ ಸಂದರ್ಭದಲ್ಲಿ ಪೊಲೀಸರ ಕರ್ತವ್ಯವೇನು? ಇವರು ಸಿಬ್ಬಂದಿಗಳನ್ನು ಎಷ್ಟರಮಟ್ಟಿಗೆ ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದಾರೆ, ಇವರಿ ಆಧುನಿಕ ಶಸ್ತ್ರಾಸ್ತ್ರಗಳನ್ನು ಕೊಟ್ಟು ವೈಯರ್‌ಲೆಸ್ ಕೊಟ್ಟು, ಮೊಬೈಲ್ ಕೊಟ್ಟು, ಇವತ್ತು ಸರ್ಕಾರ ಅವರಿಗೆ ಉತ್ತೇಜನವನ್ನು ಕೊಟ್ಟಿದೆ. ಆದರೆ ಕೆಲವು ಪೋಲೀಸ್ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಮಾಡುವಾಗ ರಕ್ಷಣೆ ಕೊಡುವಾಗ, ಜನರಿಗೆ ಕಾನೂನು ಸುವ್ಯವಸ್ಥೆಯನ್ನು ಕೊಡುವ ವಿಷಯದಲ್ಲಿ ನೂರಕ್ಕೆ ನೂರರಷ್ಟು ಫೇಲ್ಯೂರ್ ಆಗಿದ್ದಾರೆ. ಸರ್ಕಾರ ಪಿಎಫ್ ಅನ್ನು 45 ವರ್ಷಕ್ಕೆ ಕೊಡುತ್ತೇವೆಂದು ಹೇಳಿದಾಗ ಕೂಡಲೇ ಸಂಬಂಧಪಟ್ಟಂತಹ ಸಚಿವರು ಅಧಿಕಾರಿಗಳನ್ನು ಕರೆಸಿ ಮೀಟಿಂಗ್ ಮಾಡಿ ಆ ರೀತಿ ಮಾಡಿಲ್ಲವೆಂದು ಹೇಳಬಹುದಾಗಿತ್ತು. ಇಲ್ಲ, ಪೊಲೀಸ್ ನವರಿಗೆ ಮುಂಚಿತವಾಗಿಯೇ ರಕ್ಷಣೆಯನ್ನು ಕೊಡಿ ಎನ್ನುವ ಮಾತನ್ನು ಹೇಳಬಹುದಾಗಿತ್ತು.

ಅಧ್ಯಕ್ಷರು :— ಚಿನ್ನಗಪ್ಪನವರೇ, ತಾವು ಘಟನೆಯ ವಿಷಯವನ್ನು ಸಭೆಯ ಗಮನಕಕ್ಕೆ ತರಬೇಕು, ಇದನ್ನು ಹತ್ತು ಹನ್ನೆರಡು ಜನರು ಸಭೆಯ ಗಮನಕ್ಕೆ ತಂದರೂ ಒಂದೇ ಆಗುತ್ತದೆ. ತಾವು ಇದನ್ನು ದಯವಿಟ್ಟು ಅರ್ಥ ಮಾಡಿ ಕೊಳ್ಳಿ, ತಾವು ಹೇಳುವಂಥಾದ್ದು ಸಂಕ್ಷಿಪ್ತವಾಗಿ ಇರಲಿ, ತಾವು ಎಲ್ಲರೂ ಹೇಳಿದಂತಹ ವಿಷಯವನ್ನೆ ಹೇಳಿದರೆ ಹೇಗೆ?

ಶ್ರೀ ಸಿ. ಚೆನ್ನಿಗಪ್ಪ :— ಮಾನ್ಯ ಅಧ್ಯಕ್ಷರೇ, ಆಯಿತು. ನಮ್ಮ ಹಿರಿಯ ಸ್ನೇಹಿತರಾದಂತಹ ಬಿ.ಬಿ. ಶಿವಪ್ಪನವರ ಸಂಬಂಧಿಕರು ಶವವನ್ನು ತೆಗೆದುಕೊಂಡು ಹೋಗಲು ಸುಮಾರು ಹತ್ತು ಗಂಟೆಗಳ ಕಾಲ ಕಾಯುವಂತಹ ಪರಿಸ್ಥಿತಿ ಬಂತು. ಆದುದರಿಂದ ಎಷ್ಟರಮಟ್ಟಿಗೆ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿದೆ, ಇದರಿಂದ ಜನರಲ್ಲಿ ಭಯಭೀತಿಯ ವಾತಾವರಣ ನಿರ್ಮಾಣವಾಗಿದೆ. ಮತ್ತೆ ಸರ್ಕಾರಕ್ಕೆ ಇದರಿಂದ ಏನು ಲಾಸ್ ಆಗಿದೆ, ಅದರ ಬಗ್ಗೆ ಬಂದೋಬಸ್ತು ಮಾಡುವ ಬಗ್ಗೆ ಮಾನ್ಯ ಗೃಹ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಜನತೆಗೆ ವಚನವನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :— ಮಾನ್ಯ ಅಧ್ಯಕ್ಷರೇ, ನಿನ್ನೆ ಖಾಸಗಿ ನರ್ಸಿಂಗ್ ಹೋಂನಲ್ಲಿ ನಮ್ಮ ಬಂಧು ಒಬ್ಬರು ನಿಧನ ಹೊಂದಿದರು. ಅವರು 12

ಗಂಟೆಗೆ ಸಕಲೇಶಪುರಕ್ಕೆ ಶವವನ್ನು ತೆಗೆದುಕೊಂಡು ಹೋಗಲು ಹೊರಟರು. ಆದರೆ ಪೀಣ್ಯ ಹತ್ತಿರ ಮಧ್ಯಾಹ್ನ 12 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಅವರು ಊರಿಗೆ ಹೋಗಲು ಆಗದೇ ಅವರೆಲ್ಲರೂ ಬಹಳ ನರಕಯಾತನೆಯನ್ನು ಅನುಭವಿಸಿದರು. ಆದುದರಿಂದ ನಾನು ಹೇಳುವಂಥಾದ್ದು ಏನೆಂದರೆ ಹೀಗೆ ಮುಖ್ಯ ರಸ್ತೆಗಳಲ್ಲಿ ಈ ರೀತಿಯ ಘಟನೆಗಳು ಆದಾಗ ಅವರ ಸತ್ತ ಹೆಣವನ್ನು ಇಟ್ಟುಕೊಂಡು ಯಾವ ರೀತಿಯಾಗಿ ಪರಿಸ್ಥಿತಿಯನ್ನು ಅನುಭವಿಸಿರಬಹುದೆಂಬ ವಿಚಾರವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಆದೇ ರೀತಿಯಲ್ಲಿ ಬೀರೂರಿನಲ್ಲಿ ಶವ ಸಂಸ್ಕಾರಕ್ಕೆಂದು ಹೊರಟಿದ್ದಂತಹ ಮಾನ್ಯ ಸಿದ್ದನಗೌಡರು, ಮಾನ್ಯ ಸಿದ್ದಪ್ಪನವರು, ಮತ್ತು ಮಾನ್ಯ ಶಾಂತನ ಗೌಡರು ಕೂಡ ಅಲ್ಲಿದ್ದಂತಹ ಪೊಲೀಸ್‌ನವರನ್ನು ನಾವು ಸ್ಥಳಕ್ಕೆ ಹೋಗಬೇಕೆಂದು ಕೇಳಿಕೊಂಡರೂ ಅವರಿಗೆ ಹೋಗಲು ಅವಕಾಶವಾಗಲಿಲ್ಲ. ಆದುದರಿಂದ ಈ ರೀತಿಯಲ್ಲಿ ಪ್ರಮುಖ ರಸ್ತೆಗಳಲ್ಲಿ ಇಂತಹ ಪರಿಸ್ಥಿತಿಗಳು ಉದ್ಭವವಾದಾಗ ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಂಡು ಟ್ರಾಫಿಕ್ ಅನ್ನು ಕ್ಲಿಯರ್ ಮಾಡಿಕೊಡುವಂತಹ ವ್ಯವಸ್ಥೆಯಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಈಗ ತಾನೇ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಇದರ ಬಗ್ಗೆ ಪೂರ್ಣ ಮಾಹಿತಿಯನ್ನು ತರಿಸಿಕೊಂಡು ನಾಳೆ ಸದನದಲ್ಲಿ ಹೇಳಿಕೆ ಕೊಡುತ್ತೇನೆ. ಮಾನ್ಯ ಸದಸ್ಯರುಗಳು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ಪ್ರಾವಿಡೆಂಟ್ ಫಂಡ್‌ಗೆ ಅಮೆಂಡ್‌ಮೆಂಟ್ ಆಗಿದೆ, ಅದು 45 ವರ್ಷದೊಳಗಿನವರಿಗೆ ಪ್ರಾವಿಡೆಂಟ್ ಫಂಡ್ ಸಿಗುವುದಿಲ್ಲವೆನ್ನುವ ವದಂತಿ ಹಬ್ಬಿ ಅಲ್ಲಿ ಗಲಾಟೆ ಪ್ರಾರಂಭವಾಗಿದೆ. ಅದರಲ್ಲೂ ವಿಶೇಷವಾಗಿ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಆಗಿದೆ. ಈ ವಿಚಾರರೂ ಮಾನ್ಯ ಎಸ್. ಸುರೇಶ್ ಕುಮಾರ್‌ರವರಿಗೂ ಗೊತ್ತಿದೆ, ಇದು ಅವರಿಗೆ ಗೊತ್ತಿದ್ದು, ಅನೇಕ ಸಾರಿ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡುತ್ತಾರೆ. ನಾನು ಅದಕ್ಕೆ ಪ್ರತಿ ಉತ್ತರವನ್ನು ಕೊಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ವಿಷಯವೇನೆಂದರೆ ಆ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಸಾವಿರಾರು ಹೆಣ್ಣು ಮಕ್ಕಳು ಕೆಲಸ ಮಾಡುವಾಗ ಪೊಲೀಸ್‌ನವರು ಸಂಯಮದಿಂದ ಮತ್ತು ತಾಳ್ಮೆಯಿಂದ ಜನರಿಗೆ ಮತ್ತು ಆ ಹೆಣ್ಣು ಮಕ್ಕಳಿಗೆ ತೊಂದರೆಯಾಗಬಾರದೆಂಬ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಇದರ ಬಗ್ಗೆ ಅವರು ಹೇಳಿದ್ದರೆ ಒಳ್ಳೆಯದಾಗುತ್ತಿತ್ತೋ ಏನೋ ಎಂದು ನನಗನಿಸುತ್ತದೆ, ಏಕೆಂದರೆ ಅಮಾಯಕರ ಮೇಲೆ ಲಾಠಿ ಚಾರ್ಜ್ ಫಯರಿಂಗ್ ಇಂಥಾದ್ದು ಆದರೆ ನಾಳೆ ದಿವಸ ಇದೇ ಪ್ರಸ್ತಾಪವಾಗುತ್ತಿತ್ತು. ಅಲ್ಲಿ ಎಲ್ಲಾ ಹೆಣ್ಣುಮಕ್ಕಳೇ ಕೆಲಸ ಮಾಡುತ್ತಿದ್ದಾರೆ. ಅವರ ಮೇಲೆ ಸರ್ಕಾರದವರು ಫಯರಿಂಗ್ ಮಾಡಿದರು, ಲಾಠಿ ಚಾರ್ಜ್ ಮಾಡಿದರು, ಎನ್ನುವ ಮಾತು ಬರುತ್ತಾ ಇತ್ತು. ಆದರೆ ಅಲ್ಲಿ ಅವರು ಬಹಳ ತಾಳ್ಮೆಯಿಂದ, ಕೆಲಸವನ್ನು

ಮಾಡಿದ್ದಾರೆ. ನಾನು ಈ ಮಾಹಿತಿಗಳನ್ನು ತರಿಸಿಕೊಂಡು ನಾಳೆ ಹೇಳಿಕೆ ನೀಡುತ್ತೇನೆ, ಮತ್ತೆ ಪ್ರಾವಿಡೆಂಟ್ ವಿಚಾರವಾಗಿ ಎರಡು ಗಂಟೆಗೆ ಅವರನ್ನು ಕರೆದು ತಕ್ಷಣವೇ ದೂರದರ್ಶನದವರಿಗೆ ಒಂದು ಸ್ಟೇಟ್‌ಮೆಂಟ್ ಕೊಡಿ, ಏಕೆ ಹೀಗೆ ಮಾಡುತ್ತಿದ್ದೀರಿ, ಕ್ಲಾರಿಫಿಕೇಷನ್ ಕೊಡಿ ಎಂದು ಹೇಳಿದ್ದೇವೆ. ಈ ಎಲ್ಲಾ ವಿಷಯಗಳ ಬಗ್ಗೆ ನಾಳೆ ಹೇಳಿಕೆಯನ್ನು ಮಾಡುತ್ತೇನೆ.

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :— ಮಾನ್ಯ ಅಧ್ಯಕ್ಷರೇ, ನಿನ್ನೆ ಘಟನೆ ನಡೆದಂತಹ ಸಂದರ್ಭದಲ್ಲಿ ಮಾನ್ಯ ಗೃಹ ಸಚಿವರು ಮತ್ತು ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಸದನದಲ್ಲಿ ಕರೆದು ವಿಷಯವನ್ನು ನನ್ನ ಗಮನಕ್ಕೆ ತಂದ ಕೂಡಲೇ ಪಿ.ಎಫ್‌ಗೆ ಸಂಬಂಧಪಟ್ಟಹಾಗೆ ಅಸಿಸ್ಟೆಂಟ್ ಕಮೀಷನರ್ ಅವರನ್ನು ಕರೆದು ವಿಷಯವನ್ನು ಕೇಳಿದ್ದೇನೆ. ಅವರು ಸಹ ಯಾವುದೇ ಬದಲಾವಣೆ ಇಲ್ಲ, ಒಂದು ಶಬ್ದವೂ ಬದಲಾವಣೆ ಆಗಿಲ್ಲವೆಂದು ತಿಳಿಸಿದರು. ಈ ಕೃತ್ಯವನ್ನು ಯಾರೋ ದುಷ್ಕರ್ಮಿಗಳು ಮಾಡಿದ್ದಾರೆ, ಇದಕ್ಕೆ ನಾವು ವಿಷಾದವನ್ನು ವ್ಯಕ್ತಪಡಿಸುತ್ತೇವೆ. ಈ ವಿಷಯವಾಗಿ ಮಾನ್ಯ ಗೃಹ ಸಚಿವರು ಸಹ ತಕ್ಷಣವೇ ಕ್ರಮ ತೆಗೆದು ಕೊಂಡಿದ್ದಾರೆ. ನಾನು ಕೂಡ ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟಿದ್ದೇನೆ, ಮತ್ತೆ ಆಯುಕ್ತರ ವತಿಯಿಂದ ಟಿ.ವಿ. ಮುಖಾಂತರ ತಿಳಿಸಿದ್ದೇವೆ. ಈ ವಿಚಾರವಾಗಿ ಯೂನಿಯನ್ ಲೀಡರ್ಸ್, ಕಾರ್ಮಿಕರು, ಎಂ.ಎಲ್.ಎಗಳಾಗಲೀ, ಲೋಕಲ್ ಪೀಪಲ್ಸ್ ಆಗಲಿ ಯಾರು ಲಿಖಿತ ಮೂಲಕವಾಗಲಿ ಅಥವಾ ಫೋನ್ ಮುಖಾಂತರ ಏನೂ ತಿಳಿಸಿಲ್ಲ. ಆದರೂ ನಾವು ಇಷ್ಟು ಕ್ರಮವನ್ನು ತೆಗೆದುಕೊಂಡಿದೇವೆ. ಇದರ ಬಗ್ಗೆ ಮಾನ್ಯ ಗೃಹ ಸಚಿವರು ಸವಿಸ್ತಾರವಾದ ಸ್ಟೇಟ್ ಮೆಂಟ್ ಕೊಡುತ್ತಾರೆ. ನಾನು ಈ ಸದನದಲ್ಲಿ ಹೇಳುವುದೆನೆಂದರೆ ಪಿ.ಎಫ್.ನಲ್ಲಿ ಯಾವ ರೀತಿಯ ಬದಲಾವಣೆಯಾಗಿಲ್ಲ. ಇದರ ಬಗ್ಗೆ ಆಯುಕ್ತರು ಒಂದು ಪತ್ರವನ್ನು ಕೊಟ್ಟಿದ್ದಾರೆ, ಅದನ್ನು ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು :— ನಾಳೆ ಮಾನ್ಯ ಮಂತ್ರಿಯವರು ಇದರ ಬಗ್ಗೆ ದೀರ್ಘವಾದ ಉತ್ತರ ಕೊಡುತ್ತಾರೆ, ನಾಳೆ ಈ ವಿಷಯವಾಗಿ ಕೇಳಿ.

ವಿಷಯ: (ಅ) ಟಿ. ನರಸೀಪುರ, ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಆನೆಗಳಿಂದ ಆಗುತ್ತಿರುವ ಪ್ರಾಣಹಾನಿ ಬಗ್ಗೆ

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :— ಮಾನ್ಯ ಅಧ್ಯಕ್ಷರೇ, ಸುಮಾರು 8-10 ದಿವಸಗಳಿಂದ ಶೂನ್ಯ ವೇಳೆಯಲ್ಲಿ ಅರಣ್ಯ ಇಲಾಖೆಗೆ ಸಂಬಂಧಪಟ್ಟಹಾಗೆ ಮಂತ್ರಿಯವರನ್ನು ಒಂದು ವಿಚಾರ ಕೇಳಬೇಕೆಂದು ಹೇಳುತ್ತಿದ್ದೇನೆ. ಅದಕ್ಕೆ ಈಗ ತಾವು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ವಂದನೆಗಳು, ಸುಮಾರು 50-60 ಆನೆಗಳು

7-8 ಬ್ಯಾಚ್‌ಗಳಲ್ಲಿ ಟಿ. ನರಸೀಪುರ ಕೊಳ್ಳೇಗಾಲ, ಮುತ್ತತ್ತಿ, ಚಾಮರಾಜ ನಗರ ಕಡೆಗೆ ಅರಣ್ಯ ಪ್ರದೇಶದಿಂದ ನಮ್ಮ ತಾಲ್ಲೂಕಿನ ಜಮೀನುಗಳಿಗೆ, ಊರಿಗೆ ನುಗ್ಗಿ ಒಬ್ಬ ಮಹಿಳೆಯನ್ನು ತುಳಿದಿದೆ, ಈ ಮಹಿಳೆ ಮತ್ತು ಒಂದು ಹಸು ಸತ್ತಿದೆ, ಮತ್ತೆ ಅನೇಕ ಪ್ರಾಣಗಳಿಗೆ ಹಾನಿಯಾಗಿದೆ. ಬೆಳೆಗಳನ್ನು ತುಳಿದು ಲಕ್ಷಾಂತರ ರೂಪಾಯಿಗಳ ಬೆಲೆ ನಾಶವಾಗಿದೆ. ನಾನು ಈ ಸ್ಥಳಕ್ಕೆ ಹೋಗಿದ್ದೆ, ಅಲ್ಲಿನ ಜನರು ಏನು ಹೇಳುತ್ತಾರೆಂದರೆ ಇಲ್ಲಿಗೆ ಯಾವುದೇ ಅರಣ್ಯ ಸಿಬ್ಬಂದಿಗಳು ಬಂದು ನೋಡಿಲ್ಲರೆಂದು ಹೇಳಿದರು. ಇದನ್ನು ತಡೆಯುವಂಥಾದ್ದಕ್ಕೆ ಯಾವುದೇ ಕಾರ್ಯಕ್ರಮಗಳನ್ನೂ ಹಾಕಿಕೊಂಡಿಲ್ಲ. ಬೆಳೆ ಪರಿಹಾರಕ್ಕೆ ನೂರಾರು ಅರ್ಜಿಗಳು 3-8 ವರ್ಷಗಳಿಂದ ಬಂದಿದ್ದು, ಅದನ್ನು ಅವರಿಗೆ ಕೊಟ್ಟಿಲ್ಲರೆಂದು ಅಲ್ಲಿನ ಜನರು ಹೇಳಿದರು. ಒಬ್ಬ ಮಹಿಳೆ ಸತ್ತಿರತಕ್ಕದ್ದು ಇದೆ.

12.40 ಪಿ.ಎಂ.

ಇದಕ್ಕೆ ಸರ್ಕಾರ ಪರಿಹಾರ ಕೊಡಿಸಿಕೊಡಬೇಕೆಂದು ಹೇಳಿದರು. ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದುಕೊಂಡು ಹೋಗಿದ್ದೆ. ಅವರು ಏನು ಹೇಳುತ್ತಾರೆ ಎಂದರೆ ಕಂದಕಗಳನ್ನು ಮಾಡಬೇಕು. ಇಪಿಟಿ ಎಂದು ಹೇಳುತ್ತಾರೆ. ಕ್ಯಾಟಲ್ ಪ್ರೂಫ್ ಟ್ರೆಂಚ್, ಇದನ್ನು ಮಾಡಲು ಸರ್ಕಾರಕ್ಕೆ ಬರೆದಿದ್ದೇವೆ. ಹಣವನ್ನು ಬಿಡುಗಡೆ ಮಾಡಬೇಕೆಂದು ಬರೆದಿದ್ದೇರೆ. ಅದನ್ನೂ ಬಿಡುಗಡೆ ಮಾಡಿಲ್ಲ. ಏಕೆಂದರೆ ಪ್ರತಿ ವರ್ಷ ಇದು ನಡೆಯುತ್ತಲೇ ಇರುತ್ತಿದೆ. ಈ ವರ್ಷವಂತೂ ಜನ ಬಹಳ ಗಾಭರಿ ಆಗಿದ್ದಾರೆ. ಆ ದೃಷ್ಟಿಯಿಂದ ಇದಕ್ಕೆ ತಕ್ಷಣ ನಾನು ತಮ್ಮ ಗಮನಕ್ಕೆ ತರುತ್ತಿರತಕ್ಕದ್ದು ಏನೆಂದರೆ ಸರ್ಕಾರಕ್ಕೆ ಅವರೇನು ಈ ಮನವಿಯನ್ನು, ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ, ಅದರಂತೆ ಎಷ್ಟು ಕಿಲೋಮೀಟರ್ ವರೆಗೆ ಈ ಟ್ರೆಂಚ್‌ಗಳನ್ನು ತೆಗೆಯತಕ್ಕದ್ದಕ್ಕೆ ಹಣವನ್ನು ಬಿಡುಗಡೆ ಮಾಡಬೇಕು, ಮತ್ತು ಯಾರಿಗೆ ಬೆಳೆ ಹಾನಿ ಆಗಿದೆ, ಆ ಬೆಳೆಗೆ ಪರಿಹಾರವನ್ನು ಆದಷ್ಟು ಬೇಗ ಬಿಡುಗಡೆ ಮಾಡಿಕೊಡಬೇಕು ಮತ್ತು ಸತ್ತಿರತಕ್ಕದ್ದಕ್ಕೆ ಹಣವನ್ನು ಬಿಡುಗಡೆ ಮಾಡಬೇಕು, ಮತ್ತು ಯಾರಿಗೆ ಬೆಳೆ ಹಾನಿ ಆಗಿದೆ, ನಷ್ಟ ಆಗಿದೆ, ಆ ಬೆಳೆಗೆ ಪರಿಹಾರವನ್ನು ಆದಷ್ಟು ಬೇಗ ಬಿಡುಗಡೆ ಮಾಡಿ ಕೊಡಬೇಕು ಮತ್ತು ಸತ್ತಿರತಕ್ಕಂಥವರಿಗೆ ಆದಷ್ಟು ಬೇಗ ಪರಿಹಾರವನ್ನು ಬಿಡುಗಡೆ ಮಾಡಬೇಕು ಎನ್ನತಕ್ಕದ್ದು ನನ್ನ ಒಂದು ಮನವಿ. ಈ ಒಂದು ಪರಿಹಾರಕ್ಕೆ ಸುಮಾರು ಐದು ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಮತ್ತು ಸುಮಾರು 33 ಕಿಲೋ ಮೀಟರ್ ದೂರ-ಈ ಟ್ರೆಂಚ್ ನ್ನು ತೆಗೆಯುವುದಕ್ಕೆ ಪ್ರಸ್ತಾವನೆಯನ್ನು ಕೂಡ ಕಳಿಸಿದ್ದಾರೆ. ಆದ್ದರಿಂದ ಮುಂದಿನ ವರ್ಷಕ್ಕಾದರೂ ನೀವು ಈಗಿನಿಂದಲೇ ಕಾರ್ಯಕ್ರಮವನ್ನು ಹಾಕಿಕೊಳ್ಳದೇ ಇದ್ದರೆ ಇದೇ ಒಂದು ಪರಿಸ್ಥಿತಿಯು ಮುಂದಿನ ವರ್ಷವೂ ಪುನರಾವರ್ತನೆ ಆಗತಕ್ಕ ಸಂದರ್ಭ ಇದೆ. ಆದಕ್ಕೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ನಾನು ಸರ್ಕಾರದ ಗಮನವನ್ನು ತಮ್ಮ ಮುಖಾಂತರ ಸೆಳೆಯುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿ ಸಾಧುವಾಗಿರತಕ್ಕಂಥ ಕಳಕಳಿ, ಇವತ್ತು ಆನೇ ಹಾವಳಿ ಜಾಸ್ತಿ ಆಗಿದೆ. ಹೋದ ವರ್ಷದಲ್ಲಿ ಸುಮಾರು 116 ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ. 65 ಪ್ರಕರಣಗಳಲ್ಲಿ ಸುಮಾರು 57,250 ರೂಪಾಯಿಗಳನ್ನು ಪರಿಹಾರವಾಗಿ ಕೊಟ್ಟಿದ್ದೇವೆ. ಇನ್ನೂ ಕೊಡತಕ್ಕ ಪ್ರಕರಣಗಳು ಇವೆ. ಅದನ್ನು ಜಾಗ್ರತೆಯಾಗಿ ಇತ್ಯರ್ಥ ಮಾಡಲು ಪ್ರಯತ್ನ ಮಾಡುತ್ತೇನೆ. ಮತ್ತೆ ಒಂದು ವಿಚಾರ ಏನಾಗಿದೆ ಎಂದೆ ನಮ್ಮ ರಿಸರ್ವಾಯರ್‌ನ್ನು ಕಟ್ಟಲಿಕ್ಕೆ ಪ್ರಯತ್ನ ಪಟ್ಟಿದ್ದೇವೆ. ಆನೆ ಓಡಾಡುತ್ತಿದ್ದಂತಹ ದಾರಿಗೆ ನಾವು ಅಡ್ಡ ಬಂದಿದ್ದೇವೆ. ಹಾಗಾಗಿ ಅದಕ್ಕೆ ದಾರಿ ಇಲ್ಲದೆ ಇರತಕ್ಕ ದೃಷ್ಟಿಯಿಂದ ಮತ್ತು ಆಹಾರ ಹುಡುಕಿಕೊಂಡು ಊರಿನ ಸಮೀಪಕ್ಕೆ ಆನೆ ಬರುತ್ತದೆ. ಆದರೆ ಮಾನ್ಯ ಸದಸ್ಯರೇನು ಕಂದಕ ಕಟ್ಟಬೇಕೆಂದು ಪ್ರಸ್ತಾಪ ಮಾಡುತ್ತಿದ್ದಾರೆ, ಏದು ಬಹಳ ದುಬಾರಿ ಆಗತಕ್ಕಂಥಹ ಒಂದು ವಿಚಾರ. ಆದರ ಬದಲು ನಾವು ಹೇಗೆ ಸರ್ಕಾರದ ಹಣವನ್ನು ಉಳಿಸಿ ಈ ಹಾನಿಯೂ ಆಗದಂತೆ ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಒಂದು ಚಿಂತನೆ ಮಾಡುತ್ತಿದ್ದೇವೆ. ಒಂದು ಪ್ರಾಜೆಕ್ಟ್ ಏನಿದೆ ಅದಕ್ಕೆ ಕೋಟಿಗಟ್ಟಲೆ ಹಣ ಬೇಕು ಎನ್ನುವ ಅಭಿಪ್ರಾಯ ಕೂಡ ಇದೆ. ಆದದ್ದರಿಂದ ಇವತ್ತು ಈ ದೃಷ್ಟಿಯಿಂದ ನಾವೆಲ್ಲರೂ ಕೂಡ ಅಲ್ಲಿ ರಿಸರ್ವಾಯರ್ ಕಟ್ಟಬೇಕು, ಇಲ್ಲಿ ರಿಸರ್ವಾಯರ್ ಕಟ್ಟಬೇಕೆಂದು ಹೇಳಿ ಒತ್ತಾಯ ಮಾಡಿ ಈ ಪರಿಸ್ಥಿತಿಗೆ ಒಳಗಾಗಿದ್ದೇವೆ. ಇವತ್ತು ಹಾರಂಗಿ ಕಟ್ಟಿದ್ದೇವೆ, ಕಬಿನಿ ಕಟ್ಟಿದ್ದೇವೆ. ಇನ್ನೂ ಸಣ್ಣ ಪುಟ್ಟದರ ಜೊತೆಗೆ ದೊಡ್ಡ ದೊಡ್ಡ ರಿಸರ್ವಾಯರ್ ಕೂಡ ಈ ಪ್ರದೇಶದಲ್ಲಿ ಆಗಿದೆ. ಹೆಗ್ಗಡ ದೇವನ ಕೋಟೆ ಬಾಗದಲ್ಲಿ, ಹುಣಸೂರಿನ ಭಾಗದಲ್ಲಿ ಮೈಸೂರಿನ ಈ ಭಾಗದಲ್ಲಿ ಕೊಡಗಿನ ಭಾಗದಲ್ಲಿ ಇದೆಲ್ಲಾ ಆಗಿರುವುದರಿಂದ ಇದು ಜಾಸ್ತಿ ಆಗಿದೆ. ನಾನು ಕೂರ್ಗಿನಲ್ಲಿ ಪ್ರವಾಸ ಮಾಡುವಾಗ ಕಾಫಿ ತೋಟಕ್ಕೂ ಕೂಡ ಆನೆ ಬರುತ್ತಿದೆ, ಕಾಫಿ ಹಣ್ಣನ್ನೂ ಕೂಡ ತಿನ್ನುತ್ತಿದೆ ಎನ್ನುವ ಮಾತೂ ಕೂಡ ಬಂದಿದೆ. ಆನೆಗಳ ಒಂದು ಸಂಪ್ರದಾಯ ಏನು ಅಂದರೆ ಅದು ಈ ವರ್ಷ ಮಾನ್ಯ ಅಧ್ಯಕ್ಷರ ತೋಟಕ್ಕೆ ಬಂದರೆ ಮುಂದಿನ ವರ್ಷವೂ ಅಧ್ಯಕ್ಷರ ತೋಟಕ್ಕೆ ಬಂದು ಆ ಬಾಳೆ ಹಣ್ಣನ್ನೇ ತಿನ್ನುತ್ತದೆ. ಮಾನ್ಯ ಸೋಮಶೇಖರ್ ಅವರ ತೋಟ ಪಕ್ಕದಲ್ಲಿದ್ದರೂ ಹೋಗುವುದಿಲ್ಲ. ಆದ್ದರಿಂದ ನಾವು ಇದರ ಬಗ್ಗೆ ಹುಷಾರಾಗಿ ಇರಬೇಕಾಗುತ್ತದೆ. ಮತ್ತೆ ಇದನ್ನು ತಡೆಗಟ್ಟುವುದಕ್ಕೆ ಯಾವ ರೀತಿ ಕೆಲಸ ಮಾಡಬೇಕು ಎನ್ನುವುದರ ಬಗ್ಗೆ ಚಿಂತನೆ ಮಾಡುತ್ತೇವೆ. ಮತ್ತೆ ಈ ಕಂದಕಕ್ಕೆ ಹಣ ಖರ್ಚು ಮಾಡುವುದು ಬಹಳ ದುಬಾರಿ. ಅದರ ಬಗ್ಗೆ ಕೂಡ ಚಿಂತನೆ ಮಾಡಿ ಅನಿವಾರ್ಯವಾದಂತಹ ಪ್ರದೇಶದಲ್ಲಿ ಮಾಡತಕ್ಕದ್ದು ಇದೆ. ಅನಿವಾರ್ಯವಾಗದೇ ಹೋದರೆ ಮತ್ತೇನು ಮಾಡಬೇಕು ಎನ್ನುವ ಬಗ್ಗೆ ಅಂದರೆ ಪರ್ಯಾಯ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಮಹಿಳೆ ಸತ್ತಿರುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಮತ್ತು ಒಂದು ಹಸು ಸತ್ತಿರುವ ವಿಚಾರ ಪ್ರಸ್ತಾಪ ಮಾಡಿದ್ದಾರೆ. ನಾನು ಅದರ ಮಾಲೀಕರಿಗೆ ಶೀಘ್ರ ಪರಿಹಾರ ಕೊಡಿಸುತ್ತೇನೆ.

ಅಧ್ಯಕ್ಷರು :— ಪರಿಹಾರವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಮುಂದೆ ಮಾನ್ಯ ಎಸ್.ಎಸ್. ಪಾಟೀಲ್ ಅವರ ವಿಚಾರ

ಶ್ರೀ ಹಂಪನಗೌಡ ಬಾದರ್ಲಿ :— ನನ್ನದೂ ಒಂದು ರಿಚಾರ ಇದೆ. ನಿನ್ನೆ ಕೊಟ್ಟಿದ್ದೇನೆ.

ಅಧ್ಯಕ್ಷರು :— ನಿಮಗಿಂತ ಅವರು ಕೊಟ್ಟು ಒಂದು ವಾರ ಆಗಿದೆ. ನಿನ್ನೆ ಕೊಟ್ಟಿದ್ದು ಈ ವಾರ ಬರುವುದಿಲ್ಲ. ಎರಡು ಮೂರು ದಿವಸ ಆದ ಮೇಲೆ ಬರುತ್ತದೆ. ಒಂದು ದಿವಸಕ್ಕೆ 6-7 ವಿಷಯ ತೆಗೆದುಕೊಳ್ಳುತ್ತಿದ್ದೇವೆ. ಇವತ್ತು ಕೊಟ್ಟು ಇವತ್ತೆ ತೆಗೆದುಕೊಳ್ಳಬೇಕೆಂದರೆ ಆಗುವುದಿಲ್ಲ ಸ್ವಲ್ಪ ತಡೆಯಿರಿ. ನಿಮಗಿಂತ ಮೊದಲು ಕೊಟ್ಟವರು ಬೇಕಾದಷ್ಟು ಜನ ಇದ್ದಾರೆ. ನಾನು ದಿನಾಂಕದ ಪ್ರಕಾರ, ಸಿನಿಯಾರಿಟಿ ಪ್ರಕಾರ ಹೋಗುತ್ತೇನೆ.

ಶ್ರೀ ಪಿ.ಎಚ್. ಪೂಜಾರ್ :— ನಾವು ಒಂದು ವಾರದ ಕೆಳಗೆ ಕೊಟ್ಟಿದ್ದೇವೆ.

ಶ್ರೀ ಹಂಪನಗೌಡ ಬಾದರ್ಲಿ :— ನಾವು 18ನೇ ತಾರೀಖು ಕೊಟ್ಟಿದ್ದೇವೆ.

(ಗೊಂದಲ)

ವಿಷಯ: (ಇ) ಗದಗ್ ಜಿಲ್ಲೆಗೆ ವೈದ್ಯಕೀಯ ಕಾಲೇಜು ಮಂಜೂರು ಮಾಡಿರುವ ಬಗ್ಗೆ

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೆ, ಗದಗ್ ಜಿಲ್ಲೆಗೆ ಒಂದು ತೋಂಟದಾರ್ಯ ಎಜ್ಯುಕೇಷನ್ ಸೊಸೈಟಿಯವರು ಮೆಡಿಕಲ್ ಕಾಲೇಜು ಬೇಕು ಎಂದು ಕೇಳಿದ್ದರು. ಅದು ಸುಮಾರು ಎರಡು ಮೂರು ವರ್ಷದಿಂದ, ಹಿಂದಿನ ಸರ್ಕಾರ ಇದ್ದಾಗಲೂ ರೆಕ್ಮೆಂಡ್ ಮಾಡಿತ್ತು. ಆದರೆ ಇವತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಮಾನ್ಯ ಆರೋಗ್ಯ ಸಚಿವರಿಗೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಅದನ್ನು ಈಗಾಗಲೇ ಮಂಜೂರು ಮಾಡಿದ್ದಾರೆ ಎದು ನನಗೂ ಕೂಡ ಮೊನ್ನೆ ಅದರ ಬಗ್ಗೆ ಪತ್ರ ಮಾನ್ಯ ಮುಖ್ಯಮಂತ್ರಿಗಳ ಕಛೇರಿಯಿಂದ ಬಂದಿದೆ. ಆ ಕಾರಣದಿಂದ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಬಹಳ ಮಹತ್ವದ ವಿಚಾರ ಇನ್ನೊಂದು ಇದೆ. ಅದೇನೆಂದರೆ ಹೆಣ್ಣುಮಕ್ಕಳಿಗೆ ತೊಂದರೆ ಆಗುವುದು ಆಮೇಲೆ ಈ ಸದನದ ಹಕ್ಕಿನ ವಿಚಾರ

ಅಧ್ಯಕ್ಷರು :— ನೀವು ಈ ಸಬ್ಜೆಕ್ಟನ್ನು ನಾಳೆ ರೈಸ್ ಮಾಡಿ, ಅಥವಾ ನಾಡಿದ್ದು ನಿಮ್ಮ ಸೀನಿಯಾರಿಟಿ ಪ್ರಕಾರ ಮಾಡಿ.

ವಿಷಯ: (ಈ) ಸದನದ ಸದಸ್ಯರ ಹಕ್ಕುಬಾಧ್ಯತೆಯನ್ನು ಮೇಲ್ಮನೆಯಲ್ಲಿ ಚರ್ಚೆ ಮಾಡುವ ಬಗ್ಗೆ.

ಶ್ರೀ ಎಸ್.ಎಸ್. ಪಾಟೀಲ್ :— ಸದನದ ನಾಯಕರು ಬಂದಿದ್ದಾರೆ. ಈ ಸದನದ ಹಕ್ಕು ಬಾಧ್ಯತೆ ಚರ್ಚೆ ಮಾಡಲು ಅಲ್ಲಿ ಅವಕಾಶ ಇದೆ ಎನ್ನುವುದನ್ನು ಹೇಳುತ್ತಿದ್ದೇನೆ. ಅದನ್ನು ಇವತ್ತು ದಯವಿಟ್ಟು ತಾವು ತೆಗೆದುಕೊಳ್ಳಬೇಕು. ನಾನು ಬೇರೆಯವರನ್ನೂ ಒಪ್ಪಿಸುತ್ತೇನೆ. ಏಕೆಂದರೆ ಈ ಸದನದ ಹಕ್ಕು ಬಾಧ್ಯತೆಯನ್ನು ಚರ್ಚೆ ಮಾಡುವ ಅಧಿಕಾರ ಅವರಿಗೆ ಇದೆ.? ಸದಸ್ಯರ ಹಕ್ಕುಬಾಧ್ಯತೆಗಳನ್ನು ಆ ಸದನದಲ್ಲಿ ಚರ್ಚೆ ಮಾಡಿದ್ದಾರೆ. ತಾವು ಕೂಡ ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಳ್ಳಬೇಕು.

Mr. Speaker :— I have no comments on other House

ಶ್ರೀ ಪಿ.ಎಸ್. ಪೂಜಾರ್ :— ಸಾರ್ ಬಾಗಿಲಕೋಟೆ ಮುಳುಗಡೆಯಾಗುತ್ತಿದೆ.

ಅಧ್ಯಕ್ಷರು :— ತಾವು ದಯವಿಟ್ಟು ಕುಳಿತುಕೊಳ್ಳಿ. ಈಗ ಸೀನಿಯಾರಿಟಿ ಬಿಟ್ಟು ಹೋಗುವುದಾ? ದಯವಿಟ್ಟು ಹೇಳಿ. ಅವಕಾಶ ಕೊಡೋಣ.

ಶ್ರೀ ಅರಗ ಜ್ಞಾನೇಂದ್ರ :— ಬಾಗಲಕೋಟೆಯಲ್ಲಿ ನೀರು ಸೀನಿಯಾರಿಟಿ ಪ್ರಕಾರ ಮುಳುಗುತ್ತದೋ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಬಾಗಲಕೋಟೆ ಮುಳುಗಡೆಯಾಗುತ್ತಿರುವ ಬಗ್ಗೆ ನೀವು ಸೀನಿಯಾರಿಟಿ ಪ್ರಕಾರ ಕೊಡಿ. ಆದರೆ ಯಾವುದು ತುರ್ತು ಇದೆ ಎನ್ನುವುದು ತಾವು ಗಮನಕ್ಕೆ ತೆಗೆದುಕೊಳ್ಳಿ. ಅಲ್ಲಿ ಬಾಗಲಕೋಟೆ ಮುಳುಗಲು ಹೊರಟಿದೆ. ಹಿನ್ನೀರು ಬಂದು ಮುಳುಗುತ್ತಿದೆ. ಹಾಗಾದರೆ ನಾವು ಇನ್ನೊಂದು ವಾರ ತೆಗೆದುಕೊಳ್ಳೋಣವೇ? ಬಾಗಲಕೋಟೆ ಜನ ಹಾಗೆಯೇ ಇನ್ನೊಂದು ವಾರ ಮುಳುಗಡೆ ಆಗಿ ಇರು ಎಂದು ಹೇಳೋಣವೇ? ಮುಳುಗಡೆ ಆಗಿ ಹೋಗುತ್ತದೆ. ಅದನ್ನು ಪರಿಗಣನೆ ಮಾಡಬೇಕು.

ಅಧ್ಯಕ್ಷರು :— ಆಯಿತು, ಅವಕಾಶ ಕೊಡೋಣ.

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) :— ಮಾನ್ಯ ಅಧ್ಯಕ್ಷರೆ, ಇವತ್ತು ರಾಷ್ಟ್ರೀಯ ಕ್ರೀಡೆಗಳ ವಿಚಾರದಲ್ಲಿ ಮಾತನಾಡಲು ನಾನು ಸೂಚನೆ ಕೊಟ್ಟಿರುವುದು.

ಅಧ್ಯಕ್ಷರು :— ಇಲ್ಲ, ತಾವು ಮೊದಲು ಕೊಟ್ಟಿದ್ದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್ ಚಿಕ್ಕಬಳ್ಳಾಪುರದ ಬಗ್ಗೆ.

ಶ್ರೀ ಎನ್. ಸಂಪಂಗಿ :— ಇವತ್ತು ರಾಷ್ಟ್ರೀಯ ಕ್ರೀಡೆಗಳ ಬಗ್ಗೆ ಮಾತನಾಡಬೇಕಾಗಿದ್ದ, ಏಕೆಂದರೆ ಪತ್ರಿಕೆಯಲ್ಲೂ ಬಂದಿದೆ.

ಅಧ್ಯಕ್ಷರು :— ಮಾತನಾಡಿವ ಪ್ರಶ್ನೆ ಇಲ್ಲ. ಶೂನ್ಯ ವೇಳೆಯಲ್ಲಿ ನೀವು ರೈಸ್ ಮಾಡಬಹುದು. ಮಂತ್ರಿಗಳಿಗೆ ಇಷ್ಟ ಇದ್ದರೆ ಉತ್ತರ ಕೊಡಬಹುದು ಇಲ್ಲದೆ ಇದ್ದರೆ ಇಲ್ಲ.

ಶ್ರೀ ಎನ್. ಸಂಪಂಗಿ :— ಮಾನ್ಯ ಮಂತ್ರಿಗಳು ಇದ್ದಾರೆ, ನ್ಯಾಷನಲ್ ಗೇಮ್ಸ್‌ನಲ್ಲಿ ಅವ್ಯವಹಾರ ನಡೆದಿದೆ.

ಅಧ್ಯಕ್ಷರು :— ನಮ್ಮ ರೂಲ್ಸ್ ಪ್ರಕಾರ ಹಾಗೆಯೇ ಇರುವುದು. ನಿನ್ನೆ ನೀವೇ ಒಪ್ಪಿಕೊಂಡು ಬಂದಿದ್ದೀರಲ್ಲಾ, ನಮಗೆ ಆನ್ಸರ್ ಬೇಕಾಗಿಲ್ಲ ಎಂದು.

ಶ್ರೀ ಎನ್. ಸಂಪಂಗಿ :— 1997ನೇ ಇಸವಿಯಲ್ಲಿ ...

(ಗೊಂದಲ)

ಅಧ್ಯಕ್ಷರು :— ನೀವು ಹಾಗೆ ಹೇಳಲಿಲ್ಲ. ನಮಗೆ ಉತ್ತರ ಬೇಕಾಗಿಲ್ಲ. ಪುನ: ರೈಸ್ ಮಾಡುತ್ತೇವೆ ಎಂದು ಹೇಳಿದಿರಿ.

ಶ್ರೀ ಎ. ರಾಮದಾಸ್ :— ಉತ್ತರ ಇಲ್ಲದಿದ್ದರೆ ಹೇಗೆ.

ಅಧ್ಯಕ್ಷರು :— ನಿನ್ನೆ ನೀವು 10-12 ಜನ ಸದಸ್ಯರು ಬಂದು ಏನು ಹೇಳಿದಿರಿ ನಾವು ರೈಸ್ ಮಾಡುತ್ತೇವೆ ನಮಗೆ ಉತ್ತರ ಬೇಕಾಗಿಲ್ಲ ಎಂದು ಹೇಳಿದಿರಿ. ಅದನ್ನು ಏಕೆ ಇವತ್ತು ತಿರುಗಾ ಮುರುಗಾ ಮಾಡುತ್ತಿದ್ದೀರಿ? ಮಂತ್ರಿಗಳು ಇಷ್ಟಪಟ್ಟರೆ ಅವರು ಉತ್ತರ ಕೊಡಬಹುದು.

ವಿಷಯ: (ಉ) 1997ನೇ ಇಸವಿಯಲ್ಲಿ ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುವ ಸಂದರ್ಭದಲ್ಲಿ ಆಗಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ.

ಶ್ರೀ ಎನ್. ಸಂಪಂಗಿ :— 1997ನೇ ಇಸವಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಬಹಳ ಒಂದು ಸಂಭ್ರಮದಿಂದ ರಾಷ್ಟ್ರೀಯ ಕ್ರೀಡೆಗಳನ್ನು ನಡೆಸಿದರು. ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುವಂತಹ ಸಂದರ್ಭದಲ್ಲಿ ಬಹಳ ಅವ್ಯವಹಾರ ಆಗಿದೆ. ಮೇಲು

ನೋಟಕ್ಕೆ ಕಾಣಿಸತಕ್ಕದ್ದು ರಾಷ್ಟ್ರೀಯ ಕ್ರೀಡೆಗಳ ಹೆಸರಿನಲ್ಲಿ ಅನೇಕ ಅವ್ಯವಹಾರಗಳು ಆಗಿ, ಕೋಟ್ಯಾಂತರ ರೂಪಾಯಿಗಳನ್ನು ಅಧಿಕಾರಿಗಳು ಮತ್ತು ಕಂಟ್ರಾಕ್ಟದಾರರು ವಸೂಲಿ ಮಾಡಿಕೊಂಡಿದ್ದಾರೆ. ಇದರಿಂದ ನಮ್ಮ ಕ್ರೀಡಾಪಟುಗಳಿಗೆ ಗ್ರಾಮಾಂತರ ಪ್ರದೇಶದ ಕ್ರೀಡಾಪಟುಗಳಿಗೆ ಉತ್ತೇಜನ ಸಿಗದಂತಹ ಪರಿಸ್ಥಿತಿ ಇವತ್ತು ನಮ್ಮಲ್ಲಿ ಆಗಿದೆ. ರಾಷ್ಟ್ರೀಯ ಕ್ರೀಡೆಗಳ ಸಂದರ್ಭದಲ್ಲಿ ಯಾರನ್ನು ಯಾರೂ ಕೇಳಲಿಲ್ಲ. ಲಕ್ಷಾಂತರ ರೂಪಾಯಿ ಸರ್ಕಾರದ ಹಣ ಪೋಲಾಗಿದೆ. ಒಳ ಕ್ರೀಡಾಂಗಣ ವಿಚಾರದಲ್ಲಿ ಒಂದು ವಿಚಾರ ಹೇಳಲು ಬಯಸುತ್ತೇನೆ. ಒಳಾಂಗಣ ಕ್ರೀಡಾಂಗಣದಲ್ಲಿ ಸಿಂಥಟಿಕ್ ಫ್ಲೋರಿಂಗ್ ಅಳವಡಿಸುವುದಕ್ಕೋಸ್ಕರ ಸುಮಾರು 67 ಲಕ್ಷ ರೂಪಾಯಿಗಳನ್ನು ಫಾರಿನ್ ಕಂಟ್ರಿಗಳಿಂದ ತರಿಸಿದರು. ಇದಕ್ಕೆ ಯಾರೂ ಕೇಳಲಿಲ್ಲ. ಅವರಷ್ಟಕ್ಕೆ ಅವರೇ ಹೋಗರು. ಅಲ್ಲಿಂದ ಸಿಂಥಟಿಕ್ ಫ್ಲೋರಿಂಗ್ ತಂದರು. ತಂದು ಬೆಂಗಳೂರಿನ ಒಂದು ಗೋಡೌನಿನಲ್ಲಿ ಬಿಸಾಡಿ ಬಿಟ್ಟಿದ್ದಾರೆ. ಅದನ್ನು ಯಾವ ಒಳಾಂಗಣ ಕ್ರೀಡಾಂಗಣದಲ್ಲೂ ಹಾಕಿಸಲಿಲ್ಲ. ಕ್ರೀಡೆಗಳ ವಿಚಾರದಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರವಾಗಿದೆ. ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು :— ಸಂಪಂಗಿಯವರೆ, ಸ್ಪೋಟ್‌ಕ್ಸ್ ಡಿಮ್ಯಾಂಡ್ ಬಂದಾಗ ಚರ್ಚೆ ಮಾಡುವ ವಿಚಾರವನ್ನು ನೀರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೀರಿ.

ಶ್ರೀ ಎನ್. ಸಂಪಂಗಿ :— ಇವತ್ತು ಎ.ಜಿ.ಯರು ಅಬ್ಜೆಕ್ಷನ್ ಮಾಡಿ ಸುಮಾರು ಕೋಟಿ ರೂಪಾಯಿಗಳು ಅವ್ಯವಹಾರವಾಗಿರುವುದನ್ನು ಹೇಳಿದ್ದಾರೆ. ಅದರ ಬಗ್ಗೆ ತನಿಖೆ ಆಗಬೇಕಲ್ಲವೇ?

ಅಧ್ಯಕ್ಷರು :— ಬಹಳ ಅರ್ಜೆಂಟ್ ಇದ್ದರೆ, ಅವತ್ತೆ ತೀರ್ಮಾನವಾಗಬೇಕು, ಇಲ್ಲದಿದ್ದರೆ, ಅನಾಹುತವಾಗುತ್ತದೆಂದರೆ ಶೂನ್ಯವೇಳೆಯಲ್ಲಿ ಪ್ರಶ್ನೆ ಕೇಳಬೇಕು. ನೀವು ಸ್ಪೋಟ್‌ಕ್ಸ್ ಡಿಮ್ಯಾಂಡ್ ಬಂದಾಗ ವಿಚಾರ ಪ್ರಸ್ತಾಪಿಸಿ, ನಾನು ತಮಗೆ 15 ನಿಮಿಷ ಸಮಯ ಕೊಡುತ್ತೇನೆ. ಸ್ಪೋಟ್‌ಕ್ಸ್ ಡಿಮ್ಯಾಂಡ್ ಅನ್ನು ಇವತ್ತು ಮಂಡಿಸುತ್ತಾರೆ.

(ಈ ಹಂತದಲ್ಲಿ ಶ್ರೀ ಎನ್. ಸಂಪಂಗಿಯವರು ಬಾವಿಗೆ ತೆರಳಿದರು)

ಅಧ್ಯಕ್ಷರು :— ದಯವಿಟ್ಟು, ಸದಸ್ಯರು ಈ ರೀತಿಯ ಬೆಳವಣಿಗೆಯನ್ನು ಬೆಳೆಸಿಕೊಳ್ಳಬೇಡಿ. ಮಾತು ಮಾತಿಗೂ ನಾವು ಹೇಳಿದ್ದಕ್ಕೆ ಅವರು ಉತ್ತರಿಸಲಿಲ್ಲವೆಂದು ಈ ರೀತಿ ಬಾವಿಗೆ ಬರುವುದರಲ್ಲಿ ಅರ್ಥವೇನಿದೆ? ಈ ರೀತಿ ಬರುವುದು ನ್ಯಾಯಯುತವಲ್ಲ. ಸ್ಪೋಟ್‌ಕ್ಸ್ ಡಿಮ್ಯಾಂಡ್ ಬಂದಾಗ ಮಾತನಾಡುವ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದರೆ ಹೇಗೆ? ಇವತ್ತು ಸ್ಪೋಟ್‌ಕ್ಸ್ ಡಿಮ್ಯಾಂಡ್ ಮಂಡಿಸುತ್ತಾರೆ. ನಾಳೆ,

ನಾಡಿದ್ದು ನಿಮಗೆ ನಾನು ಸಮಯ ಕೊಡುತ್ತೇನೆ, ಆಗ ಮಾತನಾಡಿ. ತಾವು ತಮ್ಮ ಸ್ಥಳಕ್ಕೆ ದಯವಿಟ್ಟು ಹೋಗಬೇಕು.

ಅಧ್ಯಕ್ಷರು :— ಶೂನ್ಯ ವೇಳೆಯಲ್ಲಿ ಪ್ರತಿದಿನ 7-8 ವಿಷಯಗಳಿಗೆ ಅಲೋ ಮಾಡುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ನಾನೂ 17ನೇ ತಾರೀಖು ಸೂಚನೆ ಕೊಟ್ಟಿದ್ದೆ, ಇವತ್ತೂ ಬಂದಿಲ್ಲ.

ಅಧ್ಯಕ್ಷರು :— ಸರ್ಕಾರಿ ಕೆಲಸ ಆಗಬೇಡವೇ? ಸದನದಲ್ಲಿ ಬೇಕಾದಷ್ಟು ವರ್ಕ್ ನಡೆಯುತ್ತಿದೆ. ಅದಕ್ಕೆ ತಾವು ಅನುವು ಮಾಡಿಕೊಡಬೇಕು. You must co-operate with the government as well as the Chair. ನಾವು ಬರೀ ಶೂನ್ಯ ವೇಲೆ ವಿಷಯವನ್ನೇ ತೆಗೆದುಕೊಂಡರೆ ಹೇಗೆ? ಸರ್ಕಾರಿ ಕೆಲಸಗಳಿಲ್ಲವೇ?

ವಿಷಯ: *(ಊ) ಆಲಮಟ್ಟಿ ಜಲಾಶಯದ ಹಿನ್ನೀರಿನಿಂದುಂಟಾದ ದುಷ್ಪರಿಣಾಮಗಳ ಬಗ್ಗೆ*

ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) :— ಕಳೆದ ವರ್ಷ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದುಟಾಗುವ ದುಷ್ಪರಿಣಾಮಗಳು, ಬಾಗಲಕೋಟೆ ಸಂಪೂರ್ಣ ಮುಳುಗಡೆಯಾಗುವ ಕುರಿತಂತೆ ಮಾಡಬೇಕೇ ಅಥವಾ ಮಾಡಬೇಡವೆ ಎನ್ನುವ ಕುರಿತಂತೆ ಸರ್ಕಾರಿ ಸಮಿತಿ ರಚಿಸಿತ್ತು. ಅಜಿತ್ ಶೆಟ್ಟಿರವರರ ನೇತೃತ್ವದ ಆ ತಜ್ಞರ ಸಮಿತಿಗೆ ಆದೇಶ ಕೊಟ್ಟಿತ್ತು. ಆ ಹಿನ್ನಲೆಯಲ್ಲಿ ಇಂದು ನಾನು ಪ್ರಸ್ತಾಪಿಸುತ್ತಿದ್ದೇನೆ. ಬಾಗಲಕೋಟೆ ಆಲಮಟ್ಟಿ ಜಲಾಶಯದಲ್ಲಿ ಮುಳುಗಡೆಯಾಗುವಂಥ ಒಂದು ಬೃಹತ್ ನಗರ. ಅದರ ಜೊತೆಗೆ, ಗ್ರಾಮೀಣ ಭಾಗ ಕೂಡ ಮುಳುಗಡೆಯಾಗುವ ಹಿನ್ನಲೆಯಲ್ಲಿ ಬಾಗಲಕೋಟೆ ನಗರವನ್ನು ಇಡಿಯ.ಗಿ ಸ್ವಾಧೀನಪಡಿಸಿಕೊಳ್ಳಬೇಕೆ ಅಥವಾ ಗೋಡೆ ಕಟ್ಟಿ ಆ ನಗರವನ್ನು ಉಳಿಸಬೇಕೆ ಎಂಬ ಜಿಜ್ಞಾಸೆ 1970ರಿಂದ ಪ್ರಾರಂಭವಾಗಿ 1983 ರಲ್ಲಿ ಕೊನೆಗೊಂಡಿತು. ಆಗ ಹಿಂದಿನ ಸರ್ಕಾರ ತೀರ್ಮಾನಿಸಿ, ಬಾಗಲಕೋಟೆ ಇಡೀ ನಗರವನ್ನು ನಾವು ಮುಳುಗಡೆ ಮಾಡಬೇಕು, ಸ್ಥಳಾಂತರಿಸಬೇಕು, ಪುನರ್ ವಸತಿ ಕಲ್ಪಿಸಬೇಕು, ಚಂಢೀಗಢ ಮಾದರಿಯಲ್ಲಿ ಒಂದು ಸುಂದರ ನಗರವನ್ನು ಕಟ್ಟಿಕೊಡಲಾಗುವುದೆಂಬ ಭರವಸೆಯನ್ನು ಆಗಿನ ಸರ್ಕಾರ ನೀಡಿದ ನಂತರ, ಇವತ್ತಿನವರೆಗೂ ಮುಳುಗಡೇ ಕಾರ್ಯಕ್ರಮಗಳು ಪ್ರಾರಂಭವಾಗಿದ್ದವು. ಇತ್ತೀಚೆಗೆ ಈಗಿನ ಸರ್ಕಾರ, ಸುಪ್ರೀಂ ಕೋರ್ಟು 519.6 ರವರೆಗೆ ನೀರನ್ನು ನಿಲ್ಲಿಸಬೇಕೆಂದೇನು ಆದೇಶ ಕೊಟ್ಟಿತ್ತು, 521 ರವರೆಗೆ ಬಾಗಲಕೋಟೆಯನ್ನು ತೆಗೆದುಕೊಳ್ಳುವ ತೀರ್ಮಾನವನ್ನು ತೆಗೆದುಕೊಂಡಿದ್ದು, ಅದಕ್ಕೆ

ಅಲ್ಲಿಯ ಜನರು ರೊಚ್ಚಿಗೆದ್ದಿದ್ದಾರೆ. ಬಾಗಲಕೋಟೆ ಇಡೀ ನಗರವನ್ನು ಸ್ಥಳಾಂತರಿಸಬೇಕೆಂದು ಸರ್ಕಾರವೇನು ಭರವಸೆ ಕೊಟ್ಟಿತ್ತು, ಆ ರೀತಿ ಪುನರ್ ವಸತಿ ಕಲ್ಪಿಸಬೇಕೆನ್ನುವ ಒತ್ತಾಯ ಮಾಡಿದ ಹಿನ್ನಲೆಯಲ್ಲಿ ಈ ಸರ್ಕಾರ ಕಳೆದ ಮಾರ್ಚಿನಲ್ಲಿ ತಜ್ಞರ ಸಮಿತಿ ರಚಿಸಿತ್ತು. ಕಳೆದ ಮಾರ್ಚಿನಿಂದ ಇಲ್ಲಿಯವರೆಗೆ ಆ ಸಮಿತಿ ವರದಿ ಏನಾಯಿತೆಂಬುದು ಗೊತ್ತಾಗಲಿಲ್ಲ. ಬಾಗಲಕೋಟೆ ಅರ್ಧಂಬರ್ಧ ಮುಳುಗಡೆಯಾಗುವುದರಿಂದ ಮಲೇರಿಯಾ, ಕಾಲರದಂಥ ಸಾಂಕ್ರಾಮಿಕ ರೋಗಗಳು ಹರಡಿ, ಜನ ಜೀವನದ ಮೇಲೆ ದುಷ್ಪರಿಣಾಮ ಬೀರಬಹುದು, ಅದೇ ರೀತಿ ತೇವಾಂಶದಿಂದ ಮನೆಗಳು ಕುಸಿಯಬಹುದೆನ್ನುವ ಹಿನ್ನಲೆಯಲ್ಲಿ ಗ್ರಾಮೀಣ ಭಾಗದ ಜಮೀನುಗಳೂ ಕೂಡ, ಅಷ್ಟಕ್ಕೇ ನೀರು ನಿಂತು ಸ್ವಾಧೀನಪಡಿಸಿಕೊಳ್ಳುವ ಹಿನ್ನಲೆಯಲ್ಲಿ ಅವುಗಳು ಹಾಳಾಗಬಹುದೆಂಬ ಹಿನ್ನಲೆಯಲ್ಲಿ ಈ ಸಮಿತಿ ವರದಿ ನೀಡಬೇಕಾಗಿತ್ತು. ಇಲ್ಲಿಯ ವರೆಗೆ ಆ ವರದಿ ಸರ್ಕಾರದ ಕೈ ಸೇರಿದೆಯೋ, ಇಲ್ಲವೋ ಗೊತ್ತಿಲ್ಲ. ಜನರು ಆಸೆಯಿಂದ ಕಾಯುತ್ತಿದ್ದಾರೆ. ಈ ಸರ್ಕಾರದ ಮೇಲೆ ಹೆಚ್ಚಿನ ಕ್ಷೇತ್ರವನ್ನು ಸ್ವಾಧೀನಪಡಿಸಿಕೊಳ್ಳಬಹುದೆನ್ನುವ ವರದಿ ಕೊಟ್ಟಿರಬಹುದು. ಆ ಹಿನ್ನಲೆಯಲ್ಲಿ ನಾನು ಸರ್ಕಾರವನ್ನು ವಿನಂತಿಸುತ್ತೇನೆ, ಅಲ್ಲಿಯ ಜನರ ಆತಂಕವನ್ನು ದೂರ ಮಾಡಬೇಕು, ವರದಿ ಕೊಟ್ಟಿದ್ದಾರೆ, ಆ ವರದಿಯನ್ವಯ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಮತ್ತು ಆ ವರದಿಯನ್ನು ಬಹಿರಂಗಪಡಿಸಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :— ರಾಜ್ಯ ಸರ್ಕಾರ ಸನ್ಮಾನ್ಯ ಶ್ರೀ ಜಿ.ಹೆಚ್. ಶೆಟ್ಟಿ, ನಿವೃತ್ತ ಐಏಎಸ್ ಅಧಿಕಾರಿ, ಶ್ರೀ ಆರ್. ಬಲಿ. ಪಾಟೀಲ್ ಮತ್ತು ಶ್ರೀ ವಿ.ಬಿ. ಬೆಲ್ಲದ, ನಿವೃತ್ತ ಮುಖ್ಯ ಅಬಿಯಂತರರು, ಶ್ರೀ ಬಿ.ಹೆಚ್. ಪಾಟೀಲ್, ನಿವೃತ್ತ ಪ್ರಧಾನ ಅಭಿಯಂತರರು, ಪ್ರೋ ಎ.ಇ., ಪುನೀತ್, ನಿವೃತ್ತ ಕುಲಸಚಿವರು, ಡಾ: ಎಂ. ಮಹದೇವಪ್ಪ, ಉಪ ಕುಲಪತಿಗಳು, ಕೃಷಿ ವಿ.ವಿ. ಧಾರವಾಡ, ಶ್ರೀ ಕೆ.ಎಲ್ ನಾಡಗೌಡ, ನಿವೃತ್ತ ಬೇಸಾಯ ಶಾಸ್ತ್ರಜ್ಞರು, ಜಂಟಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ, ಶ್ರೀ ಪಾಟೀಲ್, ಸಹ ಪ್ರಾಧ್ಯಾಪಕರು ಶ್ರೀ ವಾಲ್ಮಿ, ಸಹ ಕಾರ್ಯದರ್ಶಿ ಇವರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿತ್ತು. ಆದರೆ, ತಾವು ಹೇಳಿದ ಹಾಗೂ, ಬಾಗಲಕೋಟೆಯನ್ನು ಪೂರ್ಣ ಮುಳುಗಡೆ ಮಡಬೇಕೆ ಅಥವಾ ಭಾಗಶ: ಮುಳುಗಡೆ ಮಾಡಬೇಕೆ ಎಂಬುದನ್ನು ಚಿಂತನೆ ಮಾಡುವುದಕ್ಕಲ್ಲ. ಅವರಿಗೆ ಕೊಟ್ಟಿರುವ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ತಮಗೆ ಗೊತ್ತಿರುವ ಹಾಗೆ, ಕೃಷ್ಣಾ ಮೇಲ್ದಂಡೆ ಯೋಜನೆ ಪೂರ್ಣಗೊಂಡಾಗ, ಇದರಡಿಯಲ್ಲಿ ಬರುವ ನಾರಾಯಣಪುರ ಮತ್ತು ಆಲಮಟ್ಟಿ ಅಣೆಕಟ್ಟಿನ ಹಿನ್ನೀರಿನಿದೆ, ಅದರಿಂದಾಗುವ ದುಷ್ಪರಿಣಾಮಗಳ ಬಗ್ಗೆ ತಾವು ಏನು ಆತಂಕ ವ್ಯಕ್ತಪಡಿಸಿದ್ದೀರಿ, ಮಲೇರಿಯಾದಂಥ ರೋಗಗಳು ಹೆಚ್ಚಾತ್ತವೆ ಎಂದು. ಆ ರೋಗಗಳು ಹೆಚ್ಚಾಗುವ ಬಗ್ಗೆ ಅಧ್ಯಯನ ಮಾಡಿ ಸೂಕ್ತ ಶಿಫಾರಸ್ಸು ಮಾಡಿ ಎಂದು ಹೇಳಲಾಗಿದೆ.

ಅದಲ್ಲದೆ, ಅಣೆಕಟ್ಟುಗಳು ಸುತ್ತಮುತ್ತಲಲ್ಲಿರುವ ಭೂಮಿಯ ತೇವಾಂಶ ಹೆಚ್ಚಾಗಿ ಹವಾಮಾನ ವೈಪರಿತ್ಯ ಆಗುವ ಬಗ್ಗೆ ಅಧ್ಯಯನ ಮಾಡಿ ಶಿಫಾರಸ್ಸು ಮಾಡಬೇಕು, ಅಣೆಕಟ್ಟೆಯಲ್ಲಿ ನೀರನ್ನು ಬೇರೆ ಬೇರೆ ಮಟ್ಟದಲ್ಲಿ ನಿಲ್ಲಿಸಿದರೆ ಯಾವ್ಯಾವ ಪ್ರದೇಶಗಳಲ್ಲಿ ಹಿನ್ನೀರು ಎಷ್ಟು ಮಟ್ಟದಲ್ಲಿ ನಿಲ್ಲುವುದು? ಅಲ್ಲಿಂದ ಎಷ್ಟು ದೂರದಲ್ಲಿ ಜನ ವಸತಿ ಇರಬೇಕು, ಎಂಬ ಬಗ್ಗೆ, ಅಣೆಕಟ್ಟೆಗಳಲ್ಲಿ ಬೇರೆ ಬೇರೆ ಮಟ್ಟದಲ್ಲಿ ನೀರು ನಿಲ್ಲಿಸಿದಾಗ ಪ್ರವಾಹದಿಂದ ಆಗುವ ಪರಿಣಾಮಗಳು, ಕೃಷಿ ಭೂಮಿಯ ಮೇಲಾಗುವ ಪರಿಣಾಮಗಳ ಬಗ್ಗೆ ಅಧ್ಯಯನ ಮಾಡಿ ಸೂಕ್ತ ಶಿಫಾರಸ್ಸು ಮಾಡಬೇಕೆಂದು ಟರ್ಮ್ಸ್ ಆಫ್ ರೆಫರೆನ್ಸ್ ಕೊಟ್ಟು ಸಮಿತಿ ರಚಿಸಲಾಗಿತ್ತು. ಆ ಸಮಿತಿಗೆ 6 ತಿಂಗಳ ಅವಧಿ ಸೂಚಿಸಿದ್ದು, 6 ತಿಂಗಳಲ್ಲಿ ಪೂರ್ಣ ಮುಗಿಸುವುದಕ್ಕೆ ಸಾಧ್ಯವಾಗಲಿಲ್ಲ, ಮತ್ತೆ ಸಮಯ ಕೇಳಿದರು. ಸಮಿತಿಯ ಕಾರ್ಯದರ್ಶಿಯವರು ಸರ್ಕಾರಕ್ಕೆ ಮೊನ್ನೆತಾನೆ ಪತ್ರ ಬರೆದು, ಅವರ ಸಮಿತಿಯ ಕೊನೆಯ ಸಭೆ ದಿ.22.07.2001ರಂದು ನಡೆದಿದ್ದು, ಸಮಿತಿಯು ತನ್ನ ಕೆಲಸವನ್ನು ಪೂರ್ಣಗೊಳಿಸಿದೆ. ಅಧ್ಯಯನಕ್ಕೆ ಸಂಬಂಧಪಟ್ಟಂತೆ ಎಲ್ಲಾ ದಾಖಲೆಗಳನ್ನು ಹಾಗೂ ಸಂಪೂರ್ಣ ವರದಿಯನ್ನು ರಾಜ್ಯ ಮತ್ತು ರಾಷ್ಟ್ರಗಳಿಂದ ಪಡೆದುಕೊಳ್ಳಬೇಕು, ಆದ್ದರಿಂದ ನಿಧಾನವಾಗಿದೆ, ಸಮಿತಿಯು ತನ್ನ ವರದಿಯನ್ನು ಸಧ್ಯದಲ್ಲೇ ಸಲ್ಲಿಸುತ್ತದೆಂದು ತಿಳಿಸಿದ್ದಾರೆ. ಸಮಿತಿಯು ವರದಿಯನ್ನು ಸಲ್ಲಿಸಿದ ಮೇಲೆ ನಾವು ಅದನ್ನು ಪರಿಶೀಲಿಸಿ ಮತ್ತೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಬಾಗಲಕೋಟೆ ವಿಚಾರದಲ್ಲಿ ತಾವು ಒಂದೆರಡು ಆತಂಕ ವ್ಯಕ್ತಪಡಿಸಿದ್ದೀರಿ. ಈಗಾಗಲೇ ತಮಗೆ ಗೊತ್ತಿದ್ದ ಹಾಗೆ, ಕಳೆದ ಸಲ 515 ಮೀಟರ್‌ವರೆಗೆ ನೀರನ್ನು ಆಲಮಟ್ಟಿ ಅಣೆಕಟ್ಟೆಯಲ್ಲಿ ನಿಲ್ಲಿಸಿದ್ದೆವು. ಆ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆ ತಾವೆಲ್ಲಾ ಶಾಸಕರು ಚರ್ಚೆ ಮಾಡಿದ ಮೇಲೆ ಅಕ್ವಿಜಿಷನ್ ಆಗಿರುವಂಥಾದ್ದನ್ನು, ಪರಿಹಾರ ನೀಡುವಂಥಾದ್ದನ್ನು ಗಮನದಲ್ಲಿಟ್ಟುಕೊಂಡು ಜನರಿಗೆ ತೊಂದರೆಯಾಗದಹಾಗೆ ಹಂತ ಹಂತವಾಗಿ ಆ ನೀರಿನ ಮಟ್ಟ ಎತ್ತರಿಸಬೇಕೆಂದು ಹೇಳಿದ್ದಿರಿ. 519.6 ಮೀಟರ್‌ವರೆಗೆ ನೀರನ್ನು ನಿಲ್ಲಬೇಕಾದುದು ನಮಗೆ ಸಾಧ್ಯತೆ ಇದೆ. ಆದರೆ, ಜನರಿಗೆ ಹೆಚ್ಚು ಅನಾನುಕೂಲವಾಗದ ಹಾಗೆ ಯಾವ್ಯಾವ ಮಟ್ಟಕ್ಕೆ ನೀರಿನ ಮಟ್ಟ ಏರಿಸಬೇಕೆಂಬ ಬಗ್ಗೆ ನಾವು ಚಿಂತಿಸುತ್ತಿದ್ದೇವೆ. ಆಗಸ್ಟ್ ಮಧ್ಯೆ ಅಥವಾ ಕೊನೆಯ ವಾರದಲ್ಲಿ ನಾವು ಎಲ್ಲಿಯವರೆಗೆ ನೀರಿನ ಮಟ್ಟವನ್ನು ಏರಿಸಬೇಕೆಂಬುದನ್ನು ನಿರ್ಣಯಿಸುತ್ತೇವೆ. ಆ ಸಂದರ್ಭದಲ್ಲಿ ಸಂಬಂಧಪಟ್ಟವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ.ಹೆಚ್. ಪೂಜಾರ್ :— ಟರ್ಮ್ಸ್ ಆಫ್ ರೆಫರೆನ್ಸ್ ಬಗ್ಗೆ ನಮ್ಮ ಅಭ್ಯಂತರವಿಲ್ಲ.

ಶ್ರೀ ಯು.ಆರ್. ಸಭಾಪತಿ :— ಶೂನ್ಯ ವೇಳೆಗೆ ಕ್ಲಾರಿಫಿಕೇಷನ್ ಇಲ್ಲ.

Mr. Speaker :— This is an important issue. I am allowing him.

ಶ್ರೀ ಪಿ.ಹೆಚ್. ಪೂಜಾರ್ :— ದುಷ್ಪರಿಣಾಮಗಳ ಕುರಿತಂತೆ ಚರ್ಚಿಸುವ ಹಿನ್ನಲೆಯಲ್ಲಿ......

ಶ್ರೀ ಸಿ.ಎಂ. ಲಿಂಗಪ್ಪ :— ಯು.ಆರ್. ಸಭಾಪತಿಯವರು ಎತ್ತಿರುವ ಕ್ರಿಯಾಲೋಪವೂ ಸರಿ ಇದೆ. ಇದೊಂದು ಕೆಟ್ಟ ಮೇಲ್ಪಂಕ್ತಿಯಾಗುತ್ತದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ :— ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಬೆಳೆ ಮೇಲಾಗುವ ಪರಿಣಾಮವೇನೆಂಬುದನ್ನು ಸೇರಿಸಿಲ್ಲ. ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಉತ್ಕೃಷ್ಟವಾದ ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಈಗಾಗಲೇ ದ್ರಾಕ್ಷಿ ತೋಟಗಳಿಗೆ ತೊಂದರೆಯಾಗಿದೆ. ಅವರು ಕಂಗಾಲಾಗಿದ್ದಾರೆ. ಈಗ ಅಲ್ಲಿನ ನೀರು ಮತ್ತು ವಾತಾವರಣ ಎರಡೂ ಕೂಡ ವ್ಯತ್ಯಾಸವಾಗಿ, ದ್ರಾಕ್ಷಿ ತೋಟಗಳು ಹಾಳಾಗುತ್ತಿವೆ, ರೈತರಿಗೆ ತೊಂದರೆಯಾಗುತ್ತಿದೆ. ಇದನ್ನು ನೀವು ಕೃಷಿ ವಿ.ವಿ. ಮೂಲಕ, ಯಾರ ಮೂಲಕವಾಗಲಿ ಸ್ಟಾನ್ಡರ್ಡ್ ರೀಸರ್ಚ್ ಅನ್ನು ಮಾಡಬೇಕು. ಬೆಳೆಗಳ ಮೇಲಾಗುವ ಪರಿಣಾಮವನ್ನು ಅಧ್ಯಯನ ಮಾಡುವಂತೆ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಸೇರಿಸಬೇಕೆಂದು ನಾನು ವಿನಂತಿಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :— ಆಣೆಕಟ್ಟೆಯಲ್ಲಿ ಬೇರೆ ಬೇರೆ ಮಟ್ಟದಲ್ಲಿ ನೀರನ್ನು ನಿಲ್ಲಿಸಿದಾಗ ಪ್ರವಾಹದಿಂದಾಗುವ ಪರಿಣಾಮಗಳ ಬಗ್ಗೆ ಹಾಗೂ ಕೃಷಿ ಭೂಮಿಯ ಮೇಲಾಗುವ ಪರಿಮಾಮಗಳ ಬಗ್ಗೆ ಸಮಿತಿ ಅಧ್ಯಯನ ಮಾಡಿದೆ. ಕೃಷಿ ವಿವಿಯ ಉಪ ಕುಲಪತಿಗಳೂ ಸಹ ಸಮಿತಿಯ ಸದಸ್ಯರಾಗಿದ್ದಾರೆ. ಈ ಸಮಿತಿಯಲ್ಲಿರುವ ಒಂಭತ್ತು ಜನರಲ್ಲಿ ನಾಲ್ವರು ಕೃಷಿ ತಜ್ಞರೇ ಇದ್ದಾರೆ. ಅವರೀಗ ವರದಿ ಕೊಟ್ಟಿದ್ದಾರೆ. ನಾವು ಅವರಿಗೆ ಸ್ಪಷ್ಟ ವಿಷಯ ಹೇಳಿದ್ದೇವು. ಇದಲ್ಲದೆ ಮತ್ತೆ ಲೆಜಿಸ್ಲೇಟರ್ಸ್ ಏನಾದರೂ ರೆಪ್ರೆಸೆಂಟೇಷನ್ ಕೊಡುವುದಿದ್ದರೆ, ಅದನ್ನೂ ಕನ್‌ಸಿಡರ್ ಮಾಡಿ, ತಮ್ಮ ಸಲಹೆ ಅಭಿಪ್ರಾಯಗಳನ್ನು ಕೊಡುವಂತೆ ಹೇಳಿದ್ದೇವೆ. ಅಭಿಪ್ರಾಯಗಳೇನಿವೆ, ಅವುಗಳನ್ನು ನೋಡಿಕೊಂಡ, ವರದಿ ಬಂದ ಮೇಲೆ ಅವಶ್ಯಕತೆ ಬಿಟ್ಟರೆ, ಅಧ್ಯಯನ ಮಾಡುವುದಿದ್ದರೆ ಮಾಡೋಣ. ಪೂಜಾರ್‌ರವರೇ, ವರದಿ ಸಲ್ಲಿಸಲಿ, ವರದಿಯ ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ ತಾವು ಹೇಳುವ ವಿಚಾರವನ್ನು ಮತ್ತೆ ಕೇಳೋಣ. ಆದರೆ, ಒಮ್ಮಿಂದೊಮ್ಮೆಲೆ 519.6 ಮೀಟರ್‌ವರೆಗೆ ಏರಿಸಿ ಬಾಗಲಕೋಟೆಯ ಜನರಿಗೆ ಅನಾನುಕೂಲ ಮಾಡುತ್ತೇವೆಂದಲ್ಲ. ಹೋದ ಸಲ ನಾವು, ನೀವೆಲ್ಲರೂ ಹೋಗಿ 515

ಮೀಟರ್‌ವರೆಗೆ ನೀರು ನಿಲ್ಲಿಸಲು ಎಲ್ಲಾ ಪ್ರಯತ್ನ ಹಾಗೂ ಅದಕ್ಕೆ ಬೇಕಾದ ಸಿದ್ಧತೆ ಮಾಡಿಕೊಳ್ಳಿ ಎಂದು ಹೇಳಿದ್ದೇವು. ಎಷ್ಟು ಸಿದ್ಧತೆಯಾಗಿದೆ, ಎಷ್ಟು ಪರಿಹಾರ ಬಿಡುಗಡೆಯಾಗಿದೆ ಇವೆಲ್ಲವುಗಳನ್ನೂ ಗಮನಿಸಿ, ನೀವು ಮುಂದಿನ ನಿರ್ಣಯಗಳನ್ನು ಕೈಗೊಳ್ಳುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಚಿಂಚೋಳಿಯಲ್ಲಿ ಶಿಶು ವ್ಯಾಪಾರದ ಬಗ್ಗೆ ಉತ್ತರ ಕೊಡುತ್ತೇವೆಂದು ಹೇಳಿದ್ದರು.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಚಾಮರಾಜನಗರದಲ್ಲಿ ರೈತರನ್ನು ಅರೆಸ್ಟ್ ಮಾಡಿ, ಅವರ ಮೇಲೆ ದೌರ್ಜನ್ಯ ಎಸಗಲಾಗಿದೆ. ಇದು ನಿನ್ನೆ ನಡೆದ ಘಟನೆ. ಇದು ಬಹಳ ತುರ್ತಿನ ವಿಷಯವಾಗಿದೆ.

ಅಧ್ಯಕ್ಷರು :— ಯಾವ ವಿಷಯ ತುರ್ತಿಲ್ಲ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— I am on a point of order.

Sri. C Byregowda :— This is no point of order in vaccum.

Sri D.B. Chandregowda :— We are bound by the Constitution. The framers of the Constitution have thought it fit that the entire discussion on Estimates / Demands should be completed and the matter should go to the President or Governor's concerned for assent.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮುಂಚೆಯೇ ಅಧಿವೇಶನ ಕರೆದಿದ್ದರೆ, ಈ ಸಮಸ್ಯೆ ಬರುತ್ತಿರಲಿಲ್ಲ.

ಶ್ರೀ ಡಿ.ಬಿ. ಚಂದ್ರಗೌಡ :— ಅಪ್ರೋಪ್ರಿಯೇಷನ್ ಬಿಲ್ ಈ ತಿಂಗಳ 30ನೇ ತಾರೀಖಿನೊಳಗಾಗಿ ಪಾಸ್ ಆಗಬೇಕು. ಬೇಡವೆಂದರೆ ಬಿಡೋಣ. ನನಗೆ ಸಂಬಂಧವಿಲ್ಲ. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಚಾರ.

ಶ್ರೀ ಜಗದೀಶ್ ಶೆಟ್ಟರ್ :— ಒಂದು ವಾರ ಮುಂಚೆಯೇ ಅಧಿವೇಶನವನ್ನು ಏಕೆ ಕರೆಯಲಿಲ್ಲ?

ಶ್ರೀ ಡಿ.ಬಿ. ಚಂದ್ರೇಗೌಡ :— ಒಂದು ತಿಂಗಳು ಸಭೆ ನಡೆಸಿದರೂ ಧರಣಿ ಕುಳಿತರೆ ನಾವೇನು ಮಾಡುವುದು?

(ಗೊಂದಲ)

ಶ್ರೀ ಸಿ. ಬೈರೇಗೌಡ :— ಲಘುವಾಗಿ ಮಾತಾಡುವುದು ಸರಿಯಲ್ಲ. ನಮ್ಮ ಬಾಯಿ ಮುಚ್ಚಿಸುವ ಪ್ರಯತ್ನ ಇವತ್ತು ನಡೆಯುತ್ತಿದೆ. ನಾವು ಇಲ್ಲ ಮಾತನಾಡುವುದಕ್ಕೆ ಬಂದಿದ್ದೇವೆ. ಬಾಯಿ ಮುಚ್ಚಿಸಿಕೊಳ್ಳುವುದಕ್ಕಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಶೂನ್ಯವೇಳೆಯಲ್ಲಿ ಪಾಯಿಂಟ್ ಆಫ್ ಆರ್ಡರ್ ಏನು?

ಶ್ರೀ ಡಿ.ಬಿ. ಚಂದ್ರೇಗೌಡ :— ರೂಲಿಂಗ್ ಪಾರ್ಟಿಯಿಂದ ಒಂದು ಝೀರೋ ಹವರ್‌ನಲ್ಲಿ ಎತ್ತಲು ನೀವು ಬಿಡುವುದಿಲ್ಲ. ಪ್ರತಿಯೊಂದು ಝೀರೋ ಹವರ್ ಕೂಡ. it is not the monopoly of the Opposition. The Government is bound to conduct its business.

(ಗೊಂದಲ)

ಅಧ್ಯಕ್ಷರು :— ಅವರೇನು ಹೇಳುತ್ತಾರೆ, ಕೇಳೋಣ.

Sri D.B. Chandre Gowda The Government is duty bound.

ಅಧ್ಯಕ್ಷರು :— ಕಾರು ಹೇಳಿದ್ದನ್ನೂ ಅವರು ಕೇಳುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಇಡೀ ಸದನ ಈ ಸಾರಿ ಅವರು ಹೇಳಿರುವುದನ್ನೆಲ್ಲ ಕೇಳಿದೆ.

ಶ್ರೀ ಡಿ.ವಿ. ಸದಾನಂದಗೌಡ :— ನಿಮ್ಮವರ ನಿಷ್ಕ್ರಿಯತೆ ಬಗ್ಗೆ ನಾವೇನು ಮಾಡಬೇಕು?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ :— ನಾಲ್ಕು ತಿಂಗಳ ಮಟ್ಟಿಗೆ ಈ ಸದನ ಈಗಾಗಲೇ ತೆಗೆದುಕೊಂಡಿರುವ ಒಂದು ಫೈನಾನ್ ಷಿಯಲ್ ಬಿಸಿನೆಸ್‌ಗೆ ಸಮಯವಿದೆ. 31ನೇ ತಾರೀಖು ಮುಗಿದರೆ, we cannot draw a cheque from the Consolidated Fund of India. ಇನ್ನೂ ನಮಗೆ ಬೇಡಿಕೆಗಳನ್ನು ಮಂಡನೆ ಮಾಡುವುದಕ್ಕೇ ಅವಕಾಶವಿಲ್ಲವೆಂದರೆ, ಇದು ನನ್ನ ಪ್ರಶ್ನೆಯಲ್ಲ. ಇದು ರಾಜ್ಯದ ಪ್ರಶ್ನೆ. ಅವರು ಇಲ್ಲಿಗೆ ನಮ್ಮನ್ನು ಕಳುಹಿಸಿರುವುದು ಬಜೆಟ್ ಪಾಸ್ ಮಾಡಿ ಎಂದು. ಅದನ್ನೇ ನಾವು ಮಾಡುವುದಕ್ಕೆ ಸಿದ್ಧರಿಲ್ಲವೆಂದರೆ, ಸರ್ಕಾರದ ಬಿಸಿನೆಸ್ ಆಗುವುದಿಲ್ಲವೆಂಬುದು ತಮ್ಮ

ತೀರ್ಮಾನವಾದರೆ ನನ್ನದೇನೂ ಅಭ್ಯಂತರವಿಲ್ಲ. ಸರ್ಕಾರದ ಬಿಸಿನೆಸ್ ಇನ್ನೂ ಪ್ರಾರಂಭವಾಗುವುದಕ್ಕೆ ಅವಕಾಶವಿದೆ. We have not placed all the Demands before the House. Please permit us to place them before the House. I am well within my limits. ಆರ್ಟಿಕಲ್ 200ರಲ್ಲಿ ಬಿಲ್ ಪಾಸ್ ಮಾಡುವುದಕ್ಕೆ ಏನಿದೆ, ಅದರ ಪ್ರಕಾರ ಕನಿಷ್ಟಪಕ್ಷ ಅದನ್ನು ಪಾಸ್ ಮಾಡುತ್ತೀರೋ, ಬಿಡುತ್ತೀರೋ ಅದು ಸದನಕ್ಕೆ ಬಿಟ್ಟ ವಿಚಾರ. ಕನಿಷ್ಟ ಪಕ್ಷ ಟೇಬಲ್ ಮೇಲೆ ಇಡುವ ಸ್ವಾತಂತ್ರ್ಯ, ಹಕ್ಕು ಸರ್ಕಾರಕ್ಕಿಲ್ಲವೇ? Then,, why should we be here? Please tell. therefore, my request to the Chair is.....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :— ಬೇಡಿಕೆಗಳನ್ನು ಮಂಡನೆ ಮಾಡುವುದಕ್ಕೆ ಯಾರು ಬೇಡವೆಂದಿದ್ದಾರೆ?

ಅಧ್ಯಕ್ಷರು :— ಬಡ್ಜೆಟ್ ಯಾವಾಗಲೂ ಫೇಲ್ಯೂರ್ ಆಗಿಲ್ಲ. ಪಾಸ್ ಮಾಡುತ್ತಾರೆ. ಸ್ವಲ್ಪ ಅಡ್ಜಸ್ಟ್ ಮಾಡಿಕೊಂಡು ಹೋಗಬೇಕು.

1.10 ಪಿ.ಎಂ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ನಾವು ಬೇಡಿಕೆಗಳನ್ನು ಮಂಡಿಸಲಿಕ್ಕೆ ಯಾವಾಗಲೂ ತಕರಾರು ಮಾಡಿಲ್ಲ. ಈಗಾಗಲೇ ಕೆಲವು ಬೇಡಿಕೆಗಳ ಮೇಲೆ ಚರ್ಚೆ ಕೂಡ ಪ್ರಾರಂಭವಾಗಿದೆ. 31ನೇ ತಾರೀಖಿನೊಳಗೆ ಅವುಗಳು ಪಾಸ್ ಆಗಿಯೇ ಆಗುತ್ತವೆ ಅದರ ಬಗ್ಗೆ ಬೇರೆ ಪ್ರಶ್ನೆಯೇ ಇಲ್ಲ. ಅವರು ಇದಕ್ಕೆ ಹೆದರುವಂತಹ ಪ್ರಶ್ನೆಯೇ ಇಲ್ಲ. ನಾವು ನಿಮಗೆ ಸಹಕಾರ ಕೊಡುತ್ತಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಇದು ಸಹಕಾರದ ಪ್ರಶ್ನೆಯಲ್ಲ. ಇದು ಈ ಸದನದ ಕರ್ತವ್ಯ. At least let us place the demands on the table of the House.

ಶ್ರೀ ಜಗದೀಶ್ ಶೆಟ್ಟರ್ :— ಇದು ಬಹಳ ಅರ್ಜೆಂಟ್ ವಿಷಯ. ಇದರ ಬಗ್ಗೆ ಅವಕಾಶ ಮಾಡಿ ಕೊಡಬೇಕು.

Mr. Speaker :— I will definitely allow tomorrow.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಚಂದ್ರೇಗೌಡರವರ ಪಾಯಿಂಟ್ ಆಫ್ ಆರ್ಡರ್ ಏನಾಯಿತು?

ಅಧ್ಯಕ್ಷರು :— ಪ್ರಜಾಪ್ರಭುತ್ವದಲ್ಲಿ ಎಲ್ಲಾ ಸಮಸ್ಯೆಗಳೂ ಇರುತ್ತವೆ. ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರು ಹೊಂದಾಣಿಕೆ ಮಾಡಿಕೊಂಡು ಹೋದರೇನೆ ನಮಗೆ ಉತ್ತರ ಸಿಕ್ಕುವುದು, ರೂಲ್ಸ್, ರೆಗ್ಯೂಲೇಷನ್ ಅಂದರೆ ಆಗುವುದಿಲ್ಲ. ಇದು ನನ್ನ ಮನವಿ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ :— ಹೊಂದಾಣಿಕೆ ಎನ್ನುವುದು ಬಹಳ ತಪ್ಪು ಪದ.

(ಗೊಂದಲ)

ಅಧ್ಯಕ್ಷರು :— 30ನೇ ತಾರೀಖಿನೊಳಗೆ ನಿಮಗೆ ಪಾಸ್ ಮಾಡಿಕೊಟ್ಟರೆ ಸರಿ ತಾನೆ?

(ಗೊಂದಲ)

ಶ್ರೀ ಕೆ.ಬಿ. ಮಲ್ಲಿಕಾರ್ಜುನ :— ಮಾನ್ಯ ಕಾನೂನು ಸಚಿವರು ಏನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದರು, ತಾವೇನು ರೂಲಿಂಗ್ ಕೊಟ್ಟಿರಿ; ಇದು ಯಾವುದೂ ನಮಗೆ ಗೊತ್ತಾಗಲಿಲ್ಲ, ಇದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು.

ಅಧ್ಯಕ್ಷರು :— ಪ್ರಜಾಪ್ರಭುತ್ವದಲ್ಲಿ ಎರಡೂ ಪಕ್ಷಗಳು ಹೊಂದಾಣಿಕೆ ಮಾಡಿಕೊಂಡು ಹೋಗಬೇಕು ಎನ್ನುವುದೇ ಅದಕ್ಕೆ ನನ್ನ ಉತ್ತರ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :— ನಿನ್ನೆ ಚಾಮರಾಜನಗರದಲ್ಲಿ ಒಂದು ಘಟನೆ ನಡೆದಿದೆ ಅದನ್ನು ಸರ್ಕಾರದ ಗಮನಕ್ಕೆ ತರುವುದು ಅವಶ್ಯವಿದೆ. ಮಾನ್ಯ ಗುರುಸ್ವಾಮಿಯವರು ಕೂಡ ಮಾತನಾಡುತ್ತಾರೆ.

ಅಧ್ಯಕ್ಷರು :— ಪ್ರಶ್ನೋತ್ತರ ಹಾಗೂ ಶೂನ್ಯವೇಳೆ ಎಂದು ಎರಡೂವರೆ ಗಂಟೆಗಳಾದರು, ನಾಳೆ ತೆಗೆದುಕೊಳ್ಳೋಣ. ಅದಕ್ಕೆ ನನ್ನದೇನೂ ತಕರಾರು ಇಲ್ಲ. ನಾಳೆಯೊಳಗೆ ಏನಾಗುತ್ತದೆ? ನನಗಿರುವ ತೊಂದರೆಯನ್ನೂ ಕೂಡ ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಕೆ. ಜಯಪ್ರಕಾಶ ಹೆಗಡೆ :— ತಾವು ಮನಗೆ ಒಂದು ಸಮಯವನ್ನಾದರೂ ಫಿಕ್ಸ್ ಮಾಡಿ, ಪ್ರತಿ ದಿವಸ ನಾವು ಕೈ ಎತ್ತುವುದು ನಾವು ನಾಳೆ ಎಂದು ಹೇಳುವುದಾದರೆ ಹೇಗೆ ನಮಗೆ ಮಾತನಾಡಲು ಒಂದು ಟೈಮ್ ಫಿಕ್ಸ್ ಮಾಡಿ. ನಾಳೆ ನಮಗೆ ಅವಕಾಶ ಕೊಡಿ, ನಮಗೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು :— ಆಯಿತು ನಾಳೆ ಅವಕಾಶ ಕೊಡೋಣ. ನೀವು ಹೀಗೆ ಹೇಳಿದ ಹಾಗೆ, 50 ಜನ ಕೊಟ್ಟಿದ್ದಾರೆ. ಪ್ರತಿದಿನ 8-10 ಜನರಿಗೆ ಅವಕಾಶ ಕೊಡುತ್ತೇನೆಂದು ನಾವು ಹೇಳಿತ್ತೇವೆ ಅಲ್ಲವೇ? ನೀವು ನನ್ನ ತೊಂದರೆಯನ್ನೂ ಕೂಡ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಕೆ.ಹೆಚ್. ರಂಗನಾಥ್ :— ನಮ್ಮ xxx ಆ ರೀತಿ ಆಯಿತಲ್ಲಾ ಇದು.

ಅಧ್ಯಕ್ಷರು :— ಮಾನ್ಯ ರಂಗನಾಥ್‌ರವರೇ ನಾನು ಗ್ರಾಮ ಪಂಚಾಯಿತಿ ಎಂದು ಹೇಳಿಲ್ಲ. ಕೋಆಪರೇಷನ್ ಎಂದು ಹೇಳಿದೆ ಅಷ್ಟೆ.

ಶ್ರೀ ಕೆ.ಹೆಚ್. ರಂಗನಾಥ್ :— ನಾನು ಬಹಳ ವಿಷಾದದಿಂದ ಹೇಳುತ್ತೇನೆ, ತಮ್ಮ ಮಾತೇ ಜಾಸ್ತಿಯಾಯಿತು, ತಮ್ಮ ಗದ್ದಲವೇ ಈ ಸಭೆಯಲ್ಲಿ ಜಾಸ್ತಿಯಾಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯ ದಯಮಾಡಿ ಕ್ಷಮಿಸಬೇಕು ನಾನು ಇದನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

Sri K.H. Ranganath :— Let him punish me, I don't mind. ರಾಜ್ಯಾಂಗ ಇದೆ, ಈ ಸಭೆ ಫ್ರೇಮ್ ಮಾಡಿರುವ ಕಾನೂನುಗಳು ಇವೆ. ಅದರ ಪ್ರಕಾರ ಸಭೆ ನಡೆಸಬೇಕೇ ವಿನಾ: ಪಂಚಾಯಿತಿ, ಹೊಂದಾಣಿಕೆ ಮಾಡಿಕೊಂಡು ಹೋಗಿ ಎಂದರೆ ಏನರ್ಥ?

ಅಧ್ಯಕ್ಷರು :— ನಾನು ಪಂಚಾಯಿತಿ ಎಂದು ಹೇಳಲಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ :— ತಾವು ಸಹನೆಯಿಂದ ಕೇಳಬೇಕು, ಇಂಥ ದಿವಸ ಇಂಥ ಬೇಡಿಕೆಯನ್ನು ಮಂಡಿಸಬಹುದು ಎಂದು ಅಜೆಂಡ್ ಬಂದಿತ್ತು. ಅದರ ಪ್ರಕಾರ ನಾವು ಇಲ್ಲ ಕಾದು ಕುಳಿತಿದ್ದೇವೆ. ಅದನ್ನು ಬಿಟ್ಟು ಪಂಚಾಯಿತಿ ತರಹ ಹೊಂದಾಣಿಕೆ ಮಾಡಿಕೊಂಡು ಹೋಗಿ ಎಂದರೆ ಏನರ್ಥ? ನಾಳೆ ಈ ರೆಕಾರ್ಡ್ಸ್‌ನ್ನು ಓದಿದವರಿಗೆ ಏನರ್ಥ ಬರುತ್ತದೆ... ಕಾರ್ಯದರ್ಶಿಯವರೇ ತಾವು ಈ ಕಡೆ ಬನ್ನಿ. ನಂತರ ತಾವು ನಿಧಾನವಾಗಿ ಅಡ್ವೈಸ್ ಮಾಡುವಿರಂತೆ. ತಾವು ಕೆಳಗಡೆ ಬನ್ನಿ. ಈ ಒಂದು ಸಂಪ್ರದಾಯ ತುಂಬಾ ಕೆಳಮಟ್ಟಕ್ಕೆ ಹೋಗುತ್ತಿದೆ.

(ಗೊಂದಲ)

ಅಧ್ಯಕ್ಷರು :— ಎಲ್ಲರೂ ಒಟ್ಟಿಗೆ ಮಾತನಾಡುತ್ತಿದ್ದಾರೆ. ಆದ್ದರಿಂದ ಬರೆದುಕೊಳ್ಳಬೇಡಿ

---

xxx ಈ ಪದಗಳನ್ನು ಸಭಾಧ್ಯಕ್ಷರ ಅನುಮತಿ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಕೆ.ಹೆಚ್. ರಂಗನಾಥ್ :— ನನ್ನ ಮಾತು ಅವಮಾನ ಎಂದು ಪರಿಗಣಿಸಿದರೆ ಈ ಸಭೆ punishment ಕೊಟ್ಟರೆ I do not mind. ಏಕೆಂದರೆ, ಈ ನಡವಳಿಕೆಯು ಮುಖಾಂತರ ಸಂಪ್ರದಾಯ ಇರಬೇಕಾಗುತ್ತದೆ. I have not committed any breach of privilege or anything. ತಾವು ಆ ರೀತಿ ಹೇಳಬಾರದು, ಹಾಗಾದರೆ xxx ಮಾಡಿಕೊಂಡು ಹೋಗಿ ಒಂದು ಹೇಳುತ್ತೀರಿ? ಹಾಗೆಂದರೆ ಏನರ್ಥ? I do not mind if I am punished by the House. ಸತ್‌ಸಂಪ್ರದಾಯ ರೆಕಾರ್ಡ್‌ಗೆ ಹೋಗಲಿ, ಮುಂದಿನ ಪೀಳಿಗೆಯವರು ಈ ರೀತಿ ಆಗಿದೆ ಎಂಬುದನ್ನು ಓದಿಕೊಳ್ಳಲಿ.

ಅಧ್ಯಕ್ಷರು :— ಮುಂದಿನ ವಿಷಯ, ವರದಿಯನ್ನು ಒಪ್ಪಿಸುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ :— ತಾವು ಅದನ್ನು ಅಲೋ ಮಾಡುವುದಕ್ಕಾಗುವುದಿಲ್ಲ. That cannot go on record.

Dri K.H. Ranganath :— Let the Leader of the Opposition move a resolution. I don't mind.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಕೆ.ಹೆಚ್. ರಂಗನಾಥ್‌ರವರು ಹಿರಿಯ ಸಚಿವರು. ಸಭಾಧ್ಯಕ್ಷರ ಹುದ್ದೆಯಲ್ಲಿದ್ದವರು. If he speaks like this, in a threatening tone ಹಾಗೆ ಮಾತನಾಡಿದರೆ ಅದು ಸಭೆಗೂ ಅವಮಾನ.

(ಗೊಂದಲ)

ಅಧ್ಯಕ್ಷರು :— ಅವರು ಅವರ ಅಭಿಪ್ರಾಯ ಹೇಳಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ :— ಸಭೆಯ ಮರ್ಯಾದೆ ಪ್ರಶ್ನೆ ಇದು. ಆ ಛೇರ್‌ಗೆ ಆಗಿರುವ ಅವಮಾನ, ಅದು ಯಾವುದೇ ವ್ಯಕ್ತಿಗಾಗಿರುವ ಅವಮಾನ ಅಲ್ಲ.

(ಗೊಂದಲ)

ಅವರು ಅದನ್ನು ವಾಪಸ್ ತೆಗೆದುಕೊಳ್ಳಬೇಕು. ಯಾವುದೇ ಕಾಲದಲ್ಲೂ ನಾವು ಛೇರ್‌ಗೆ ಅವಮಾನ ಮಾಡಿದರೆ ನಾವು ಸಹಿಸುವುದದಿಲ್ಲ.

(ಗೊಂದಲ)

---

xxx ಈ ಪದಗಳನ್ನು ಸಭಾಧ್ಯಕ್ಷರ ಅನುಮತಿ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ತಾವು ಇದರ ಬಗ್ಗೆ ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ, ಹಿಂದೆ ಕೂಡ ಇದೆ ರೀತಿ ಆಗಿದೆ.

ಅಧ್ಯಕ್ಷರು :— ಸದಸ್ಯರೆಲ್ಲರೂ ಒಟ್ಟಿಗೆ ಹೇಳುತ್ತಿರುವುದರಿಂದ ಏನೂ ಅರ್ಥವಾಗುತ್ತಿಲ್ಲ. ಆದ್ದರಿಂದ ಡೋಂಟ್ ಟೇಕ್ ಡೌನ್.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :— ತಾವು ಇದೇ ರೀತಿ ಅವಕಾಶ ಮಾಡಿಕೊಟ್ಟರೆ ನಾಳೆ ಈ ಅಧ್ಯಕ್ಷ ಸ್ಥಾನಕ್ಕೆ ಅವಮಾನ ಆಗುತ್ತದೆ.

ಶ್ರೀ ಡಿ.ವಿ. ಸದಾನಂದ ಗೌಡ :— ಈ ರೀತಿ ವಾತಾವರಣ ಸೃಷ್ಟಿಯಾದರೆ, ಈ ರೀತಿಯ ಥ್ರೆಟನಿಂಗ್ ಮಾಡುವುದಾದರೆ ಬಹುಶ: ನಾಳೆಯ ದಿವಸ ನಮ್ಮ ರಕ್ಷಣೆಗೆ ಯಾರು ಬರುತ್ತಾರೆ? xxx

(ಗೊಂದಲ)

ಅಧ್ಯಕ್ಷರು :— ಮಾನ್ಯ ಸದಸ್ಯರೆಲ್ಲರೂ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, xxx

(ಗೊಂದಲ)

ಅಧ್ಯಕ್ಷರು :— ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ

(ಗೊಂದಲ)

ಶ್ರೀ ಡಿ.ವಿ. ಸದಾನಂದ ಗೌಡ :— ಎಲ್ಲಾ ವಿಷಯವನ್ನು ಕಡತದಿಂದ ತೆಗೆಸುವುದಕ್ಕೆ ಸೂಚನೆ ಕೊಡಬೇಕು

MR Speaker :— Entire proceedings, you please remove it.

ಶ್ರೀ ಕೆ.ಹೆಚ್. ರಂಗನಾಥ್ :— ಕಡತದಿಂದ ಏಕೆ ತೆಗೆಯಬೇಕು?

ಅಧ್ಯಕ್ಷರು :— ಈ ವಿಷಯಕ್ಕೆ ಸಂಬಂಧಪಟ್ಟಂತೆ ರೂಲಿಂಗ್‌ನ್ನು ನಾಳೆ ಕೊಡುತ್ತೇನೆ.

---

xxx ಈ ಪದಗಳನ್ನು ಸಭಾಧ್ಯಕ್ಷರ ಅನುಮತಿ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

Sri K.H. Ranganath :— I will not allow. I will stand like this. I will not budge an inch.

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್ :— ನಾನು ಪ್ರಸ್ತಾಪ ಮಾಡಿರತಕ್ಕಂಥ ವಿಷಯದಲ್ಲಿ ಅನ್‌ಪಾರ್ಲಿಮೆಂಟರಿ ಶಬ್ದ ಇದೆಯೇ?

ಅಧ್ಯಕ್ಷರು :— ನಾಳೆ ರೂಲಿಂಗ್ ಕೊಡುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ :— ಮಾನ್ಯ ಅಧ್ಯಕ್ಷರೆ, ನಾನೇನಾದರೂ ಅನ್ ಪಾರ್ಲಿಮೆಂಟರಿ ಶಬ್ದವನ್ನು ಉಪಯೋಗ ಮಾಡಿದ್ದೇನೆಯೆ ಅಥವಾ ಆಡಬಾರದಂಥ ಮಾತನ್ನು ಏನಾದರೂ ಹೇಳಿದ್ದೇನೆಯೆ ಅಥವಾ ಈ ಸಭೆಗೆ ಏನಾದರೂ ಮಾಡಿದ್ದೇನೆಯೆ? ಏತಕ್ಕಾಗಿ ನಾನು ಮಾತನಾಡಿರತಕ್ಕಂಥ ಪದಗಳನ್ನು ರಿಮೂವ್ ಮಾಡಿಸುತ್ತಿದ್ದೀರಿ?

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್ :— ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಿರುವುದು ತಪ್ಪು ಎಂದು ಹೇಳುವುದಾದರೆ, suo-moto you can punish me. I am prepared to undergo that punishment' ನಾನು ಮಾತನಾಡಿದ್ದು ತಪ್ಪೆಂದು ಅವರು ಹೇಳುವುದಾದರೆ, ಇದಕ್ಕೆ ಸಂಬಂಧಪಟ್ಟಂತೆ ರೆಸಲ್ಯೂಷನ್ ಮೂವ್ ಮಾಡಲಿ; Let the House punish me. ಏಕೆಂಹದರೆ, ಸಂವಿಧಾನದ ಪ್ರಕಾರ ಇದು ಸರಿ ಇದೆಯೋ ಅಥವಾ ಇಲ್ಲರೋ ಎಂಬುದು ಮುಂದಿನ ಪೀಳಿಗೆಯವರು ಓದಲಿ. ನಾನು ಏನು ತಪ್ಪು ಮಾಡಿದ್ದೇನೆಂದು ತಾವು ಹೇಳುತ್ತಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಕಾನೂನು ಮತ್ತು ರಾಜ್ಯಾಂಗದ ಪ್ರಕಾರ ಸಭೆ ನಡೆಯಬೇಕೆಂದು ಹೇಳುವುದು ಅಪರಾಧವೇ?

(ಗೊಂದಲ)

Mr Speaker:— It is not unparliamentary, but it is not in good taste..

Sri K.H. Ranganath :— Then you cannot remove it; you cannot expunge it.

ಅಧ್ಯಕ್ಷರು :— ವಿಧಾನ ಸಭೆಯನ್ನು ತಾವು xxx ಹೇಗೆ? It is not in good taste. That is all I can say. ಈ ವಿಷಯವನ್ನು ಇನ್ನು ಇಲ್ಲಿಗೆ ಮುಗಿಸೋಣ. ಈಗ ಉನ್ನತ ಶಿಕ್ಷಣ ಸಚಿವರೇ ತಾವು ವರದಿಯನ್ನು ಒಪ್ಪಿಸಿ.

---

xxx ಈ ಪದಗಳನ್ನು ಸಭಾಧ್ಯಕ್ಷರ ಅನುಮತಿ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

3. ಉನ್ನತ ಶಿಕ್ಷಣ ಸಚಿವರಿಂದ ವರದಿ ಮಂಡನೆ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ವರದಿಯನ್ನು ಮಂಡನೆ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ಜಂಟಿ ಸದನ ಸಮಿತಿಯಲ್ಲಿ ಈ ವಿಷಯ ಸರಿಯಯಾಗಿ ಪರಿಶೀಲನೆ ಆಗಿಲ್ಲ. ಆದ್ದರಿಂದ ವರದಿ ಮಂಡನೆ ಮಾಡತಕ್ಕಂಥದ್ದಕ್ಕೆ ನಮ್ಮದು ಮೂಲಭೂತವಾದ ತಕರಾರು ಇದೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ನಾವು ನಮ್ಮ ಕಾರ್ಯ ಕಲಾಪಗಳನ್ನು ವಿಧಿವಿಧಾನಗಳ ಪ್ರಕಾರ ನಡೆಸಬೇಕೆ ಅಥವಾ ಬೇರೆ ಯಾವುದಾದರೊಂದು ಮಾರ್ಗದಲ್ಲಿ ಅನುಸರಿಸಬೇಕೇ ಎನ್ನತಕ್ಕಂಥದು ಇಲ್ಲಿನ ವಿಷಯವಾಗಿದೆ. ಮಾನ್ಯ ಸಚಿವರು ಜಂಟಿ ಸದನ ಸಮಿತಿಯ ವರದಿಯನ್ನು ಸಭೆಯ ಮುಂದೆ ಮಂಡನೆ ಮಾಡತಕ್ಕಂಥದ್ದು ನಮ್ಮ ಸದನದ ರೂಲ್ಸ್ ಆಫ್ ಪ್ರೊಸೀಜರ್‌ನ ಚೌಕಟ್ಟಿನಲ್ಲಿ ನಡೆಯಬೇಕಾಗಿರತಕ್ಕಂತ ಒಂದು ಪ್ರಕ್ರಿಯೆ ಆಗಿದೆ. ಆ ಪ್ರಕ್ರಿಯೆಗೆ ನಾವು ವಿರೋಧ ಮಾಡುತ್ತೇವೆ ಎಂದು ಹೇಳುವುದಾದರೆ ಜನತಂತ್ರ ಚೌಕಟ್ಟನ್ನು ನಾವು ವಿರೋಧ ಮಾಡಿದ ಹಾಗೆ ಆಗುತ್ತದೆ. ಈ ವರದಿ ಮಂಡನೆ ಮಾಡಿದ ನಂತರ ಈ ಸದನದಲ್ಲಿ ಚರ್ಚೆಗೆ ಬರುತ್ತದೆ. ಆಗಬೇಕಾದರೆ ತಾವೊಂದು ತಿದ್ದುಪಡಿಯನ್ನು ತರಬಹುದು ಅಥವಾ ಸರ್ಕಾರವೂ ಕೂಡ ಸ್ವಯಂಪ್ರೇರಿತವಾಗಿ ಮತ್ತೊಂದು ತಿದ್ದುಪಡಿಯನ್ನು ತರಬಹುದಾಗಿದೆ. ಈ ಎಲ್ಲಾ ಪ್ರಕ್ರಿಯೆಗಳು ಲೋಕಾರೂಢಿಯಾಗಿರತಕ್ಕಂಥದ್ದು ಮತ್ತು ನಮ್ಮ ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಮತ್ತು ರಾಜ್ಯಾಂಗದ ಪ್ರಕರಣ ನಡೆಯುತ್ತಿರುವಾಗ,,ವರದಿಯನ್ನು ಮಂಡಿಸುವುದು ಬೇಡವೆಂದು ಹೇಳುವಲ್ಲಿ ಏನಾದರೂ ಅರ್ಥ ಇದೆಯೇ ಎನ್ನತಕ್ಕಂಥದನ್ನು ಮಾನ್ಯ ವಿರೋಧಪಕ್ಷದ ನಾಯಕರು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ಸದನದ ಕಾರ್ಯಕಲಾಪಗಳು ಮತ್ತು ಕೆಲವೊಂದು ವರದಿಗಳು ಇಲ್ಲಿ ಮಂಡನೆ ಆಗತಕ್ಕಂಥದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಬಹುಶ: ಕಳೆದ ಒಂದೂವರೆ ವರ್ಷಗಳಿಂದ ಯಾವುದೇ ಒಂದು ವರದಿಯನ್ನು ಮಂಡನೆ ಮಾಡುವುದಕ್ಕೆ ಮತ್ತು ಬೇರೆ ಬೇರೆ ವಿಷಯಗಳನ್ನು ಮಂಡನೆ ಮಾಡುವುದಕ್ಕೆ ಸಾಮಾನ್ಯವಾಗಿ ಕೆಲವೊಂದು ಪ್ರಕ್ರಿಯೆಯನ್ನು ನಡೆಸುವುದಕ್ಕೆ ನಾವು ಯಾವತ್ತೂ ಕೂಡ ಅಡೆತಡೆ ಮಾಡಿಲ್ಲ. ನಾವು ಪ್ರತಿಪಕ್ಷದವರಾಗಿ ಒಳ್ಳೆಯ ರಚನಾತ್ಮಕವಾದಂಥ ಸಹಕಾರವನ್ನು ಈ ಸದನಕ್ಕೆ ಮೊದಲಿನಿಂದಲೂ ಸಹ ಕೊಡುತ್ತಾ ಬಂದಿದ್ದೇವೆ.

(ಗೊಂದಲ)

ಅಧ್ಯಕ್ಷರು :— ಮಾನ್ಯ ವಿರೋಧ ಪಕ್ಷ ನಾಯಕರು ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಿ ಆ ನಂತರ ನಾನು ಉತ್ತರ ಕೊಡುತ್ತೇನೆ. ಆಗ ಎಲ್ಲಾ ಸರಿ ಹೋಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. This is a formality. There cannot be a discussion on the presentation of a report. Even the Chair has no discretion.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ಮೊದಲು ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ. ಆ ನಂತರ ಅವರು ಮಾತನಾಡಲಿ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಹಾ ಪಂಡಿತರೆಂದು ಅವರು ಹೇಳುವುದನ್ನೆಲ್ಲಾ ಕೇಳಬೇಕೆ? ಈ ರೀತಿಯಾದಂಥ ಪದ್ಧತಿಗೆ ತಾವು ಅವಕಾಶ ಮಾಡಿಕೊಡುವುದು ಸರಿಯಲ್ಲ. ಸದರಿ ವಿಷಯದ ಬಗ್ಗೆ ನಾನು ಪ್ರಿಲಿಮಿನರಿಯಾಗಿ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು. ಈ ಬಿಲ್ ಇಲ್ಲಿ ಮಂಡನೆ ಆಗುವಂಥ ಸಂದರ್ಭದಲ್ಲಿ ಇದರ ಬಗ್ಗೆ ಸಾಕಷ್ಟು ವಿಷಯಗಳನ್ನು ಚರ್ಚೆ ಆಗದೇ ಇರುವುದರಿಂದ ಮತ್ತು ವಿವಾದ ಆಗಿದ್ದರಿಂದ ಇದರ ಬಗ್ಗೆ ಒಂದು ಜಂಟಿ ಸದನದ ಸಮಿತಿ ರಚನೆ ಮಾಡಿ ಇಲ್ಲಿ ಇದನ್ನು ರೆಫರ್ ಮಾಡಬೇಕು ಎನ್ನತಕ್ಕಂಥ ತೀರ್ಮಾನದ ಪ್ರಕಾರ ಸದರಿ ಬಿಲ್ ಅಲ್ಲಿಗೆ ಹೋಯಿತು. ಸಮಿತಿಯಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಸಮಿತಿಯಲ್ಲಿದಂಥ ಪ್ರತಿ ಪಕ್ಷದ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಅಲ್ಲಿ ಮಂಡನೆ ಮಾಡುವುದಕ್ಕೆ ಅವಕಾಶ ಆಗಲಿಲ್ಲ. ಹಾಗೆಯೇ ಡಿಸೆಂಟಿಂಗ್ ನೋಟನ್ನೂ ಸಹ ಕೊಟ್ಟಿದ್ದಾರೆ. ಇಷ್ಟೆಲ್ಲಾ ಆದರೂ ಕೂಡ ಸರ್ಕಾರ ಒಂದು ಸಮಾಧಾನವಾದ ವರದಿಯನ್ನು ಕೊಡಬಹುದಾಗಿತ್ತು. ಆದರೆ ಅದನ್ನೂ ಸಹ ಮಾಡಿಲ್ಲ. ಜಂಟಿ ಸದನದ ಮಸಿತಿಯಲ್ಲಿದಂಥ ಪ್ರತಿಪಕ್ಷದ ಶಾಸಕರು ರಾಜಿನಾಮೆ ಕೊಟ್ಟು ಸಮಿತಿಯಿಂದ ಹೊರಗಡೆ ಬಂದಿದ್ದಾರೆ. ಆದ್ದರಿಂದ ಇದು ಪೂರ್ಣಪ್ರಮಾಣದ ಒಂದು ಜಂಟಿ ಸದನ ಸಮಿತಿಯ ವರದಿಯಾಗಿರುವುದಿಲ್ಲ. ಹಾಗೆಯೇ ಇದು ಕಾನೂನು ಬದ್ಧತೆಯ ಆಧಾರದ ಮೇಲೆ ಇಲ್ಲ. ಆದ್ದರಿಂದ ಇದನ್ನು ಮಂಡನೆ ಮಾಡುವುದಕ್ಕೆ ನಮ್ಮದು ತಕರಾರು ಇದೆ. ಆದ್ದರಿಂದ ಇದನ್ನು ಮಂಡನೆ ಆಗಬಾರದು ಈ ಬಿಲ್‌ಗೆ ಇವರದೇ ಆದಂಥ ಒಂದು ಗುರಿಯನ್ನು ಇಟ್ಟುಕೊಂಡು ಇದನ್ನು xxx ಮಾಡುವುದಕ್ಕೆ ಹೊರಟಿದ್ದಾರೆ. ಇವತ್ತಿನ ದಿವಸ ರಾಜ್ಯಪಾಲರಲ್ಲಿ ಇರತಕ್ಕಂಥ ಅಧಿಕಾರವನ್ನು ಇವರು ಕಿತ್ತುಕೊಳ್ಳುತ್ತಿದ್ದಾರೆ.

---

xxx ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಅಧ್ಯಕ್ಷರೆ, ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ಮಾಡಬೇಕೆಂದು ಈ ಸದನದಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಒಂದು ಮಸೂದೆಯನ್ನು ಮಂಡಿಸಿರತಕ್ಕಂಥದು ನಿಜ. ಇದರಲ್ಲಿ ಮುಖ್ಯವಾಗಿ ಶಿಕ್ಷಣ ಕ್ಷೇತ್ರದಲ್ಲಿ ಇರತಕ್ಕಂಥದು ಎಲ್ಲವೂ ಕೂಡ ಬದಲಾವಣೆ ಆಗಬಾರದೆಂದು ನಾವು ಹೇಳುವುದಿಲ್ಲ. ಇವತ್ತಿನ ದಿವಸ ಸಾಕಷ್ಟು ಬದಲಾವಣೆ ಆಗಬೇಕಾಗಿದೆ. ಇದರಲ್ಲಿ ರಾಜ್ಯಪಾಲರಿಗೆ ಇರತಕ್ಕಂಥ ಅಧಿಕಾರವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಡತಕ್ಕಂಥ ವಿಚಾರದಲ್ಲಿ ಮತ್ತು ಸಿಂಡಿಕೇಟ್ ಮತ್ತು ಸೆನೆಟ್ ಆಡಳಿತಕ್ಕೆ ಸರ್ಕಾರದವರು ನೇರವಾಗಿ ನಾಮಕರಣ ಮಾಡತಕ್ಕಂಥ ಈ ಎರಡು ವಿಷಯದ ಬಗ್ಗೆ ನಮ್ಮದು ವಿರೋಧ ಇದೆ. ಇದಕ್ಕೋಸ್ಕರ ಒಂದು ಜಂಟಿ ಸದನದ ಸಮಿತಿಯನ್ನು ಮಾಡಬೇಕೆಂದು ಮತ್ತು ಬೇರೆಯವರ ಅಬಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿ ಆ ಕ್ಷೇತ್ರದಲ್ಲಿ ಕೆಲಸ ಮಾಡಿರತಕ್ಕಂಥ ಪರಿಣಿತ ಸದಸ್ಯರನ್ನು ಒಳಗೊಂಡಂಥ ದು ಸಮಿತಿ ಆಗಿತ್ತು. ಮಾನ್ಯ ಉನ್ನತ ಶಿಕ್ಷಣ ಸಚಿವರು ಸದರಿ ಕಮಿಟಿಯ ಅಧ್ಯಕ್ಷರಾಗಿದ್ದರು. ನಮ್ಮ ಕಡೆಯಿಂದ ಶ್ರೀ ಬಿ. ಸೋಮಶೇಖರ್ ಮತ್ತು ಶ್ರೀ ಕೆ.ಬಿ. ಮಲ್ಲಿಕಾರ್ಜುನ್ ಮತ್ತು ಬಿಜೆಪಿ ಕಡೆಯಿಂದ ಮಾನ್ಯ ಸುರೇಶ್ ಕುಮಾರ್ ಮಾನ್ಯ ರಾಮದಾಸ್‌ರವರು ವಿಧಾನ ಪರಿಷತ್ತಿನ ಮಾನ್ಯ ಬಸವರಾಜ ಹೊರಟಿಯವರು ಈ ಸಮಿತಿಯ ಸದಸಯ್ರಾಗಿ ಕೆಲಸ ಮಾಡಿದ್ದಾರೆ. ಕೇವಲ ವಿರೋದಪಕ್ಷದ ನಾಯಕರೇ ಅಷ್ಟೇ ಅಲ್ಲದೆ ಶಿಕ್ಷಣ ಕ್ಷೇತ್ರದಲ್ಲಿರತಕ್ಕಂಥ ಅನೇಕ ತಜ್ಞರೂ ಸಹಿತ ಇದನ್ನು ವಿರೋಧ ಮಾಡುತ್ತಾ ಇದರಿಂದ ಶೈಕ್ಷಣಿಕ ವಾತಾವರಣಕ್ಕೆ ಧಕ್ಕೆ ಬರುತ್ತದೆ. ಆದ್ದರಿಂದ ಸದರಿ ತಿದ್ದುಪಡಿಯನ್ನು ಕೈಬಿಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ತಿಳಿಸಿದ್ದಾರೆ. ಸದನ ನೇಮಕ ಮಾಡಿದ್ದಂಥ ಜಂಟಿ ಸಮಿತಿ ಪೂರ್ಣ ಪ್ರಮಾಣದಲ್ಲಿ ಜಂಟಿ ಸಮಿತಿ ಆಗಿಲ್ಲ. ಏಕೆಂದರೆ ಪ್ರತಿಪಕ್ಷದವರೆಲ್ಲೂ ರಾಜೀನಾಮೆ ಕೊಟ್ಟಿರುವುದರಿಂದ ಇದು ಕೇವಲ ಆಡಳಿತ ಪಕ್ಷದಲ್ಲಿರತಕ್ಕಂಥ ಸಮಿತಿಯಾಗಿದೆ. ಮಾನ್ಯ ಚಂದ್ರೇಗೌಡರು ಹೇಳಿದ ಹಾಗೆ ಬಿಲ್ಲನ್ನು ಮಂಡನೆ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಬಿಲ್ ಮಂಡನೆ ಮಾಡಲಿಕ್ಕೆ ನಾವು ಪ್ರತಿಭಟಿಸುತ್ತೇವೆಂದು ತೋರಿಸಬೇಕಲ್ಲವೇ? ಸರ್ಕಾರ, ಶಿಕ್ಷಣ ಕ್ಷೇತ್ರವನ್ನು XXX ಹೊರಟಿದೆ. ಆದ್ದರಿಂದ ಇದನ್ನು ವಿರೋಧ ಮಾಡುತ್ತಾ ಸದರಿ ವಿಧೇಯಕವನ್ನು ಮಂಡನೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಜನತಾದಳ-ಯು ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

XXX ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

Sri. D.B. Chandregowda :— He should not be allowed to discuss on the merits, or on the recommendations of the Committee.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಾರ್ವಜನಿಕವಾಗಿ ವಿರೋಧ ಇದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಕೂಡ ಬಂದಿದೆ, ಇದರ ಬಗ್ಗೆ ಹಠ ಮಾಡಿದರೆ ಶಿಕ್ಷಣ ರಂಗದಲ್ಲಿ ಅಲ್ಲೋಲ ಕಲ್ಲೋಲ ಆಗುತ್ತದೆ ಇವನ್ನು ಸಹ xxx ಮಾಡುವ ಸಾಧ್ಯತೆಗಳಿವೆ. ಇದನ್ನು ಪ್ರತಿಭಟಿಸಿ ನಾವು ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಬಿಜೆಪಿಯ ಎಲ್ಲಾ ಶಾಸಕರು ಸಭಾತ್ಯಾಗವನ್ನು ಮಾಡಿದರು)

(ಗೊಂದಲ)

ಶ್ರೀ ಆರ್. ರೋಷನ್ ಬೇಗ್ (ಪ್ರವಾಸ್ಯೋದ್ಯಮ ಹಾಗೂ ಹಜ್ ಸಚಿವರು) :— ಮಾನ್ಯ ಅಧ್ಯಕ್ಷರೆ, ಅವರು ಸಬಾತ್ಯಾಗ ಮಾಡುತ್ತಿದ್ದಾರೆ, ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡಬೇಡಿ.

ಅಧ್ಯಕ್ಷರು :— ಶ್ರೀ ವಿಶ್ವೇಶ್ವರ ಹೆಗಡೆಯವರೇ, ನೀವು ಬಿಲ್ ಬಂದಾಗ ಮಾತನಾಡಿ ಆಗ ಅಮೆಂಡ್‌ಮೆಂಟ್ಸ್ ಬೇಕಾದರೆ ತನ್ನಿ. You can't raise all these objections, not at this stage. ಬಿಲ್ ಬರುತ್ತದೆ, ನಿಮ್ಮ ಸಲಹೆಗಳನ್ನು ಕೊಡಿ ನೀವು ಅಮೆಂಡ್‌ಮೆಂಟ್ಸ್ ತನ್ನಿ ನಮ್ಮ ಅಭ್ಯಂತರ ಏನೂ ಇಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಇದರ ಬಗ್ಗೆ ನನ್ನ ವಿರೋಧವಿದೆ ಎಂದು ಸಭಾತ್ಯಾಗ ಮಾಡಿದರು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ನಿಯಮಗಳಂತೆ ಸದನ ನಡೆಸುವುದು ಬೇಡವೇ? ನಾವು ನೀವು ಸೇರಿ ಮಾಡಿರುವ ನಿಯಮಗಳು. ಇದನ್ನು ಮಂಡನೆ ಮಾಡಬೇಕು, ಜಂಟಿ ಸಲಹಾ ಸಮಿತಿಯಲ್ಲಿಯ ರಿಪೋರ್ಟ್ ಬಂದಿದೆ, ಅದು ತಪ್ಪೋ ಅಥವಾ ಸರಿ ಎನ್ನುವ ಬಗ್ಗೆ ಚರ್ಚೆ ಮಾಡೋಣ. ನಾವು ಹೇಳುವುದಕ್ಕೆ ತಾವು ಅವಕಾಶ ಮಾಡಿಕೋಡಬೇಕು. ಬರೀ ಪ್ರತಿಪಕ್ಷಗಳವರ ಮನಾಪಲಿಯಾಗಿ ಹೋಗಿದೆ. ಅವರು ಏನು ಬೇಕಾದರೂ ಹೇಳಬಹುದು, ಇದರ ಬಗ್ಗೆ ಬೆಳಿಗ್ಗೆ ಪತ್ರಿಕೆಯಲ್ಲಿ ವರದಿಯಾಗುತ್ತದೆ. ಸರ್ಕಾರದಲ್ಲಿ ಜವಾಬ್ದಾರಿ ಇಲ್ಲವೆನ್ನುವ ಅಭಿಪ್ರಾಯ ಈಗಾಗಲೇ

---

xxx ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಬಂದು ಬಿಟ್ಟಿದೆ. ಅದನ್ನು ಕೊಡುವುದಕ್ಕೆ ನಾವು ತಯಾರಾಗಿಲ್ಲ., as long as I am the Parliamentary Affairs Minister, I would like to make my point clear. Before the Committee was constituted, with the consent of the opposition, they moved the resolution; it was sent to the Joint Select Committee and the Government graciously accepted that. ಅವರು ಜಂಟಿ ಸಲಹಾ ಸಮಿತಿಯಲ್ಲಿ ಏನು ಮಾಡಿದ್ದಾರೆ ಎನ್ನುವದರ ಬಗ್ಗೆ ನಮಗೆ ಗೊತ್ತಿಲ್ಲ. ಅದನ್ನು ಇಲ್ಲಿ ಮಂಡಡನೆ ಮಾಡಿದ ಮೇಲೆ ಗೊತ್ತಾಗುತ್ತದೆ. ಸದನದ ಮುಂದೆ ಇಡುವುದದಕ್ಕೆಯೇ ಇವರು ಸಭಾತ್ಯಾಗ ಮಾಡುತ್ತೇವೆಂದರೆ, ಇವರಿಗೆ ಸಂವಿಧಾನದ ಬಗ್ಗೆ ಗೌರವ ಇಲ್ಲ. ನಾವು ಮಾಡಿಕೊಂಡಿರುವ ಶಾಸನದ ಬಗ್ಗೆ ಗೌರವ ಇಲ್ಲ, ನಾವು ದಿನನಿತ್ಯ ಸದನ ನಡೆಸಲು ಮಾಡಿಕೊಂಡಿರುವ ರೂಲ್ಸ್ ಅಂಡ್ ಪ್ರೊಸೀಜರ್ ಬಗ್ಗೆ ಇವರಿಗೆ ಗಮನವಿಲ್ಲ,, ಇದನ್ನು ನಾವು ಹೇಳದಿದ್ದರೆ, ಪ್ರತಿಪಕ್ಷದವರು ಹೇಳಿದ್ದೇ ಸರಿ ಎಂದು ರಾಜ್ಯದ ಜನರಿಗೆ ತಪ್ಪು ಕಲ್ಪನೆ ಬರುತ್ತದೆ. ಆದ್ದರಿಂದ ಇದು ಸದನದ ಹಕ್ಕು ಇದು ತಮ್ಮ ವ್ಯಾಪ್ತಿಯ ಇತಿಮಿತಿಯಲ್ಲಿ ಬರತಕ್ಕಂಥ ವಿಷಯ. ಇದನ್ನು ಇಲ್ಲಿಲೇ ಮಾಡುತ್ತಿದ್ದೇವಯೇ ಹೊರತು ಬಿಲ್ ಪಾಸ್ ಮಾಡಿಕೊಂಡು ಮನೆಗೆ ಹೋಗಿರುವುದಿಲ್ಲ. ಅವರು ಹೇಳಬೇಕಾಗಿದ್ದನ್ನು ಅವರು ಸಮಿತಿಯಲ್ಲಿ ಹೇಳಬಹುದು, ಸದನದಲ್ಲಿ ಈ ಜಂಟಿ ಸಲಹಾ ಸಮಿತಿ ವರದಿಯನ್ನು ಇಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಜಂಟಿ ಸಲಹಾ ಸಮಿತಿಗೆ ಯಾರು ಹೋಗುತ್ತೀರಿ ಎನ್ನುವ ಬಗ್ಗೆ ಅವರ ವ್ಯಕ್ತಿಗತವಾದ ಅಭಿಪ್ರಾಯವನ್ನು ತೆಗೆದುಕೊಂಡು ನಂತರ ಅವರನ್ನು ಸಲಹಾ ಸಮಿತಿಯ ಸದಸ್ಯರನ್ನಾಗಿ ಮಾಡಿ ನಾವು ಅವರನ್ನು ಹಾಕಿರುತ್ತೇವೆ. ಸಮಿತಿಯಲ್ಲಿ ತಮಗೆ ಅನುಕೂಲವಾಗುವ ರೀತಿಯಲ್ಲಿ ವರದಿ ಬರಲಿಲ್ಲವೆಂದು ಬೇಕಾಬಿಟ್ಟಿಯಾಗಿ ರಾಜೀನಾಮೆ ಕೊಟ್ಟುಕೊಂಡು ವರದಿಯನ್ನು ಸದನದಲ್ಲಿ ಮಂಡಿಸಬೇಡಿ ಎಂದು ಹೇಳುವುದು ಇದೆಯಲ್ಲಾ, ಅದು ಸಂವಿಧಾನದ ಬಾಹೀರವಾಗುತ್ತದೆ. ಅದು ನಮ್ಮ ನಿಯಮಗಳಿಗೆ ಬಾಹಿರವಾಗುತ್ತದೆ. ಆದ್ದರಿಂದ ಇದನ್ನು ಸದನದಲ್ಲಿ ಮಂಡಿಸುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

4. ಅಧ್ಯಕ್ಷರ ತೀರ್ಪು

ಅಧ್ಯಕ್ಷರು :— ದಯಮಾಡಿ ಎಲ್ಲರೂ ಎರಡು ನಿಮಿಷ ಆಲಿಸಬೇಕು. 2000ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾನಿಲಯದ ವಿಧೇಯಕವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಿರುವ ಜಂಟಿ ಸಲಹಾ ಸಮಿತಿಯು ದಿನಾಂಕ 2, 20, ಜನವರಿ 2, 22 ಹಾಗೂ ಫೆಬ್ರವರಿ 16, 27ನೇ ಏಪ್ರಿಲ್, ಜೂನ್ 28 ಹಾಗೂ ಜುಲೈ 5 ಹಾಗೂ 16ನೇ ಜುಲೈ 2001 ರಲ್ಲಿ ಸಭೆಯನ್ನು ನಡೆಸಿ ವರದಿಯನ್ನು ಅಂತಿಮವಾಗಿ ಅಂಗೀಕರಿಸಿರುತ್ತೇವೆ. 10ನೇ ಹಾಗೂ 11ನೇ ಮೇ ತಿಂಗಳಲ್ಲಿ ಈ ಎರಡು

ದಿನಾಂಕಗಳಂದು ಜಂಟಿ ಪರಿಶೀಲನಾ ಸಮಿತಿಯು ನವ ದೆಹಲಿ ಹಾಗೂ ಆಂಧ್ರ ಪ್ರದೇಶಕ್ಕೆ ಭೇಟಿ ನೀಡಿ ಜವಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಇತರೆ ಅಧಿಕಾರಿಗಳು ಹಾಗೂ ವಿಶ್ವವಿದ್ಯಾನಿಲಯದ ಪದಾಧಿಕಾರಿಗಳೊಂದಿಗೆ ಹಾಗೂ ಹೈದರಾಬಾದಿನ ಶಿಕ್ಷಣ ಸಚಿವರು ಹಾಗೂ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿರುತ್ತಾರೆ. ಜಂಟಿ ಪರಿಶೀಲನಾ ಸಮಿತಿಯು ಒಟ್ಟು 12 ಸಭೆಗಳನ್ನು ನಡೆಸಿರುತ್ತದೆ; ಜಂಟಿ ಪರಿಶೀಲನಾ ಸಮಿತಿಯ ಸದಸ್ಯರುಗಳಲ್ಲಿ ಮಾನ್ಯ ವಿಧಾನಸಭೆಯ ಸದಸ್ಯರುಗಳಾದ ಶ್ರೀ ಎಸ್. ಸುರೇಶ್ ಕುಮಾರ್, ಹಾಗೂ ಶ್ರೀ ಎ. ರಾಮದಾಸ್ ಇವರು 2-7-2001 ರಂದು ಜಾರಿಗೆ ಬರುವಂತೆ ತಮ್ಮ ರಾಜೀನಾಮೆಗಳನ್ನು ಮಾನ್ಯ ಸಭಾಧ್ಯಕ್ಷರಿಗೆ ಸಲ್ಲಿಸಿರುತ್ತಾರೆ. ಕೌಲ್ ಅಂಡ್ ಶಕ್ದರ್ ಪುಟ ಸಂಖ್ಯೆ: 666 ಸಂಸದೀಯ ಕಾರ್ಯವಿಧಾನ ಹಾಗೂ ನಡವಳಿಗಳ ಪ್ರಕಾರ ಸಮಿತಿಯ ಸದಸ್ಯರುಗಳ ನೀಡಿರುವ ರಾಜೀನಾಮೆ ಸ್ಪಷ್ಟವಾಗಿರುವುದರಿಂದ ಹಾಗೂ ಯಾವುದೇ ಸಂದಿಗ್ಧಗಳೂ ಇಲ್ಲದೆ ಇರುವುದರಿಂದ ಸದರಿ ರಾಜೀನಾಮೆಗಳು ಈ ಕಾರ್ಯದಲ್ಲಿ ಸ್ವೀಕರಿಸಿ ರಾಜೀನಾಮೆಯನ್ನು ಅಂಗೀಕರಿಸಲಾಗಿದೆ. ಮಾನ್ಯ ಸದಸ್ಯರುಗಳಾದ ಶ್ರೀ ಸುರೇಶ್ ಕುಮಾರ್ ಹಾಗೂ ಶ್ರೀ ಎ. ರಾಮದಾಸ್ ಒಟ್ಟು 12 ಸಭೆಗಳಲ್ಲಿ 10 ಸಭೆಗಳಿಗೆ ಹಾಜರಾಗಿರುತ್ತಾರೆ. ಮೇಲಿನ ಹಾಜರಾತಿಯಲ್ಲಿ ತೋರಿಸಿರುವಂತೆ ಜಂಟಿ ಸಲಹಾ ಸಮಿತಿಯು ನವ ದೆಹಲಿ ಹಾಗೂ ಆಂಧ್ರ ಪ್ರದೇಶಕ್ಕೆ ಕೈಗೊಂಡ ಪ್ರವಾಸದಲ್ಲಿಯೂ ಕೂಡ ಇದ್ದಾರೆ. ದಿನಾಂಕ 6ನೇ ಜುಲೈ ನಡೆದ ಸಭೆಯಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಸುರೇಶ್ ಕುಮಾರ್ ಹಾಗೂ ಶ್ರೀ ರಾಮದಾಸ್‌ರವರು ಸಮಿತಿಯ ಸಭೆಗೆ ಹಾಜರಾಗಿ ನಿರ್ಣಯಗಳ ಅಂಗೀಕಾರಕ್ಕೆ ಸಂಬಂಧಿಸಿದಂತೆ ವಿರೋಧವನ್ನು ವ್ಯಕ್ತಪಡಿಸಿ ಅಸಮ್ಮತಿಯ ಟಿಪ್ಪಣಿಯನ್ನು ಕೊಟ್ಟಿರುತ್ತಾರೆ, ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಜಂಟಿ ಪರಿಶೀಲನಾ ಸಮಿತಿಯು 16-7-2001 ರಲ್ಲಿ ನಡೆದ ಸಭೆಯಲ್ಲಿ ವರದಿಯನ್ನು ಅಂಗೀಕರಿಸಲಾಗಿರುತ್ತದೆ. ಈ ಸಭೆಯಲ್ಲಿ ಒಟ್ಟು 9 ಜನ ಸದಸ್ಯರುಗಳು ಹಾಜರಾಗಿದ್ದರು.

ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಮಾನ್ಯ ಸದಸ್ಯರುಗಳು ಜಂಟಿ ಪರಿಶೀಲನಾ ಸಮಿತಿಯಲ್ಲಿ ಡಿಸೆಂಬರ್‌ಗೆ ವೋಟನ್ನು [illegible]ಆಗುತ್ತದೆ. ಅವರು ಅಲ್ಲಿ ಪುನಃ ಅಬ್ಜೆಕ್ಷನ್ ಮಾಡಿ ಹೋಗಿರುತ್ತಾರಲ್ಲಾ, ಅದು ತಪ್ಪು. ಈ ರೀತಿ ಮಾಡಿರುವುದು ತಪ್ಪಾಗುತ್ತದೆ, ಅವು ಬೇಕಾಗಿದ್ದರೆ ವಾಕ್ ಔಟ್ ಮಾಡಿದಾಗ ಆಬ್ಜೆಕ್ಷನ್ ತರಬಹುದಾಗಿತ್ತು. ಏಕೆ ತರಬಾರದು? ಪ್ರತಿಯೊಂದನ್ನೂ ಸಭಾತ್ಯಾಗ [illegible] I cannot understand the attitude of the Opposition. That is why, I request the Hon.Minister to place the report.

ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :— ಮಾನ್ಯ ಅಧ್ಯಕ್ಷರೆ, ನಾನು ವರದಿಯನ್ನು ಒಪ್ಪಿಸುವುದಕ್ಕೆ ಮುಂದೆ ಮಾನ್ಯ ಸಿಂಧ್ಯಾರವರು ಹಾಗೂ ಮಾನ್ಯ ವಿರೋಧಪಕ್ಷದ ನಾಯಕರು ಒಂದು ಆಪಾದನೆಯನ್ನು ಮಾಡಿರುತ್ತಾರೆ. ಅದು ರೆಕಾರ್ಡ್‌ಗೆ ಹೋಗಿದೆ, ರಾಜ್ಯದ ಜನತೆಗೆ ಹೋಗುತ್ತದೆ. ಅದನ್ನು ಕಡತದಿಂದ ತೆಗೆಸಬೇಕು, ಅದಕ್ಕೆ ನಾನು ಸ್ಪಷ್ಟೀಕರಣವನ್ನು ಕೊಡುತ್ತಿದ್ದೇನೆ. ಯಾರನ್ನೂ ನಾವು ಕೇಳದೆ, ಜಂಟಿ ಪರಿಶೀಲನಾ ಸಮಿತಿಯಲ್ಲಿ ವರದಿಯನ್ನು ಮಾಡಿದ್ದಾರೆಂಬ ಆಪಾದನೆಯನ್ನೂ ಕೂಡ ಮಾಡಿದ್ದಾರೆ. ನಾನು ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಡಾ: ಡಿ.ಎಂ. ನಂಜುಂಡಪ್ಪನವರು ಛೇರ್ಮನ್, ಹೈಪವರ್ ಕಮಿಟಿ, ಆನ್ ರಿಡ್ರೆಸಲ್ ಅಂಡ್ ರೀಜನಲ್ ಇನ್‌ಬ್ಯಾಲೆನ್ಸ್ ಆಫ್ ಕರ್ನಾಟಕ, ಅವರು ವೈಸ್ ಚಾಲ್ಸಲರ್‌ರಾಗಿದ್ದರು ಹಾಗೂ ಅನುಭವವುಳ್ಳವರಾಗಿರುತ್ತಾರೆ. ಶ್ರೀ ಸವದತ್ತಿಯವರೂ ಕೂಡ ವೈಸ್ ಚಾನ್ಸಲರ್‌ರಾಗಿದ್ದವರು ಮತ್ತು ವಿಶ್ವವಿದ್ಯಾನಿಲಯದ ಟೀಚರ್ಸ್ ಅಸೋಸಿಯೇಷನ್ ಅಧ್ಯಕ್ಷರಾದ ನರಹರಿಯವರು, ಮತ್ತು ಸಬಾಸ್ಟಿನ್ ಜೋಸೆಫ್, ಪ್ರೆಸಿಡೆಂಟ್, ಫೇಡರೇಷನ್ ಆಫ್ ಯೂನಿವರ್ಸಿಟಿ ಟೀಚರ್ಸ್ ಅಸೋಸಿಯೇಷನ್ ಡಾ: ಷಡಾಕ್ಷರಿಸ್ವಾಮಿ, ಪ್ರೆಸಿಡೆಂಟ್, ಜಗದ್ಗುರು ರೇಣುಕಾಚಾರ್ಯ ಎಜ್ಯುಕೇಷನ್ ಸೊಸೈಟಿ, ಪಟ್ಟಣಶೆಟ್ಟಿ, ಪ್ರೆಸಿಡೆಂಟ್, ಕರ್ನಾಟಕ ಸ್ಟೇಟ್, ಲೈಬ್ರರಿ ಅಸೋಸಿಯೇಷನ್, ಮತ್ತು ಇನ್ನಿತರ ಅನೇಕ ಜನರನ್ನು ಪತ್ರಿಕೆಗಳ ಮೂಲಕ ಪ್ರಕಟಣೆಯನ್ನು ಕೊಟ್ಟು ಯಾರಾದರೂ ಕೂಡ ಇದರ ಬಗ್ಗೆ ಮಾಹಿತಿಯನ್ನು ಕೊಡಬೇಕೆಂದು ಕೇಳಿ ನಾವು ಎಲ್ಲರ ಸಲಹೆಯನ್ನು ತೆಗೆದುಕೊಂಡು ಚರ್ಚೆಯನ್ನು ಮಾಡಿ ಇದನ್ನು ತಯಾರು ಮಾಡಿರುತ್ತೇವೆ. ಆದ್ದರಿಂದ ಇದು ಸತ್ಯಕ್ಕೆ ದೂರವಾದುದು ಎನ್ನುವ ಮಾತನ್ನು ಹೇಳಿ, 2000ನೇ ಸಾಲಿನ ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು :— ಕಾಂಗ್ರೆಸ್ಸೀಕರಣ ಎಂಬ ಪದವನ್ನು ಕಡತದಿಂದ ತೆಗೆಯಲಾಗಿದೆ. ಈಗ ವರದಿಯನ್ನು ಮಂಡಿಸಲಾಗಿದೆ. ಮಾನ್ಯ ಗೃಹ ಸಚಿವರು ನಿಮ್ಮ ಬೇಡಿಕೆಯನ್ನು ವಿಲೇ ಮಾಡಬೇಕು.

5. ವಿತ್ತೀಯ ಕಾರ್ಯಕಲಾಪಗಳು

2000-2001 ನೇ ಸಾಲಿನ ಬೇಡಿಕೆಗಳ ಮಂಡನೆ.

ಅಭಿಯಾಚನೆ ಕ್ರಮಾಂಕ 28 - ಬಂದೀಖಾನೆ, ಗೃಹ ರಕ್ಷಕಾದಳ, ನಾಗರೀಕ ರಕ್ಷಣೆ ಮತ್ತು ಸೈನಿಕರ ಕಲ್ಯಾಣ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬಂದೀಖಾನೆ, ಗೃಹರಕ್ಷಕಾದಳ, ನಾಗರೀಕ ರಕ್ಷಣೆ ಮತ್ತು ಸೈನಿಕ

ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 69,12,01,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 35,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 32 - ಒಳಾಡಳಿತ (ಪೊಲೀಸ್ ಜಾಗೃತದಳ ಹೊರತುಪಡಿಸಿ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಒಳಾಡಳಿತ (ಪೊಲೀಸ್ ಜಾಗೃತದಳ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 777,26,90,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 26,38,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 57 - ಮೂಲಭೂತ ಸೌಕರ್ಯಗಳ ಅಭಿವೃದ್ಧಿ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೂಲಭೂತ ಸೌಕರ್ಯಗಳ ಅಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 29,16,67,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 58 - ನಾಗರೀಕ ವಿಮಾನಯಾನ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಾಗರೀಕ ವಿಮಾನಯಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 69,43,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,30,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

(ಪ್ರಸ್ತಾವನೆ ಮಂಡಿಸಲಾಗಿದೆ)

1.40 ಪಿ.ಎಂ.

ಅಭಿಯಾಚನೆ ಕ್ರಮಾಂಕ 42 - ಕಂದಾಯ (ವಕ್ಫ್ ಹಜ್ ಮತ್ತು ಮುಜರಾಯಿ ಹೊರತುಪಡಿಸಿ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) (ಕಂದಾಯ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಂದಾಯ (ವಕ್ಫ್ ಹಜ್ ಮತ್ತು ಮುಜರಾಯಿ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 48764,02,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 65,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 14 - ವರಮಾನ, ವ್ಯಕ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳ ಮೇಲಿನ ತೆರಿಗೆಗಳು

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವರಮಾನ, ವ್ಯಕ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳ ಮೇಲಿನ ತೆರಿಗೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 115,07,03,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 15 - ವಿಶ್ರಾಂತಿ ವೇತನ ಮತ್ತು ಇತರೆ ನಿವೃತ್ತಿ ಸೌಲಭ್ಯಗಳು

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿಶ್ರಾಂತಿ ವೇತನ ಮತ್ತು ಇತರೆ ನಿವೃತ್ತಿ ಸೌಲಭ್ಯಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ

ಖಾತೆಯಲ್ಲಿ 1809,35,40,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 16 - ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 18,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 13,73,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 17 - ಖಜಾನೆ ಮತ್ತು ಲೆಕ್ಕಗಳ ಆಡಳಿತ

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಖಜಾನೆ ಮತ್ತು ಲೆಕ್ಕಗಳ ಆಡಳಿತ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 63,84,85,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 18 - ಇತರ ವಿವಿಧ ಸೇವೆಗಳು

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಇತರ ವಿವಿಧ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 42,14,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 19 - ರಾಜ್ಯ ಅಬಕಾರಿ

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯ ಅಬಕಾರಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 41,41,67,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 20 - ಪೊಲೀಸ್ ಜಾಗೃತದಳ

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪೊಲೀಸ್ ಜಾಗೃತದಳ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 13,45,73,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 21 - ಬೆಂಗಳೂರು ಅಭಿವೃದ್ಧಿ ಯೋಜನೆಗಳು

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪೊಲೀಸ್ ಜಾಗೃತದಳ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 206,99,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 378,04,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 22 - ರಾಜ್ಯಪಾಲರು, ಮಂತ್ರಿಗಳು ಮತ್ತ ಲೋಕಸೇವಾ ಆಯೋಗ

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯಪಾಲರು, ಮಂತ್ರಿಗಳು ಮತ್ತ ಲೋಕಸೇವಾ ಆಯೋಗ"

ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10,51,68,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 23 - ಸಚಿವಾಲಯ

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಚಿವಾಲಯ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 69,70,94,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 24 - ಸಾಮಾನ್ಯ ಆಡಳಿತ

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಾಮಾನ್ಯ ಆಡಳಿತ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 42,91,36,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 25 - ವಿದ್ಯುಚ್ಛಕ್ತಿ ಯೋಜನೆಗಳು

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿದ್ಯುಚ್ಛಕ್ತಿ ಯೋಜನೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,342,55,55,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು

ಅಭಿಯಾಚನೆ ಕ್ರಮಾಂಕ 5 - ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಮಾ.ತಂ. ಬಿಟ್ಟು)

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಸಚಿವರು ಪರವಾಗಿ) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ವ್ಯಾ.ತಂ. ಬಿಟ್ಟು)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 117,47,34,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 203,29,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 7 - ಚಿಕ್ಕಪುಟ್ಟ ಉದ್ಯಮಗಳು

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಚಿಕ್ಕಪುಟ್ಟ ಉದ್ಯಮಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 20594,50,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 20,25,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 6 - ಗಣಿ ಮತ್ತು ಭೂ ವಿಜ್ಞಾನ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಸಚಿವರು ಪರವಾಗಿ) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗಣಿ ಮತ್ತು ಭೂ ವಿಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 11,97,22,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 56 - ಅಂತರ್ಜಲ (ಜಲಸಂಪನ್ಮೂಲ ಇಲಾಖೆಯಿಂದ)

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಅಂತರ್ಜಲ, ಜಲಸಂಪನ್ಮೂಲ ಇಲಾಖೆ ಸಚಿವರು ಪರವಾಗಿ) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಅಂತರ್ಜಲ (ಜಲಸಂಪನ್ಮೂಲ ಇಲಾಖೆಯಿಂದ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 11,97,22,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 8 - ರೇಷ್ಮೆ ವ್ಯವಸಾಯ ಮತ್ತು ವಸ್ತ್ರೋದ್ಯಮಗಳು

ಶ್ರೀ ಎಂ. ಮಹದೇವ (ರೇಷ್ಮೆ ವ್ಯವಸಾಯ ಮತ್ತು ವಸ್ತ್ರೋದ್ಯಮಗಳ ಸಚಿವರು) ಮಾನ್ಯ ಅಧ್ಯಕ್ಷರೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರೇಷ್ಮೆ ವ್ಯವಸಾಯ ಮತ್ತು ವಸ್ತ್ರೋದ್ಯಮಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 158,68,89,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,68,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 12 - ಯುವಜನ ಸೇವೆಗಳು

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ (ಮಾನ್ಯ ಯುವಜನ ಸೇವೆಗಳ ಸಚಿವರು) ಮಾನ್ಯ ಅಧ್ಯಕ್ಷರೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯುವಜನ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 35,49,84,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು

ಅಭಿಯಾಚನೆ ಕ್ರಮಾಂಕ 13 - ಕನ್ನಡ ಮತ್ತು ಸಂಸ್ಕೃತಿ

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕನ್ನಡ ಮತ್ತು ಸಂಸ್ಕೃತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 21,50,72,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 25 - ಸಣ್ಣ ಉಳಿತಾಯ, ರಾಜ್ಯ ಲಾಟರಿ ಮತ್ತು ವಿಮೆ

ಶ್ರೀ ಬಾಬುರಾವ್ ಚಿಂಚಂಸೂರ್ (ಸಣ್ಣ ಉಳಿತಾಯ, ರಾಜ್ಯ ಲಾಟರಿ ಮತ್ತು ವಿಮೆ ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಣ್ಣ ಉಳಿತಾಯ, ರಾಜ್ಯ ಲಾಟರಿ ಮತ್ತು ವಿಮೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 103,73,19,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು

ಅಭಿಯಾಚನೆ ಕ್ರಮಾಂಕ 29 - ಆಹಾರ ಮತ್ತು ನಾಗರೀಕ ಸರಬರಾಜು

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆಹಾರ ಮತ್ತು ನಾಗರೀಕ ಸರಬರಾಜು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 316,93,63,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 7,20,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 30 - ಅರಣ್ಯ, ಜೀವಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಜೀವಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಸಚಿವರು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಅರಣ್ಯ, ಜೀವಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 312,07,63,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10,70,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 31 - ಸಾರಿಗೆ ಸೇವೆಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಸಾರಿಗೆ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬಂದರುಗಳು ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 75,55,36,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 33 - ವಾರ್ತಾ ಮತ್ತು ಪ್ರಚಾರ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ವಾರ್ತಾ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ ಮತ್ತು ಪ್ರಚಾರ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 24,15,04,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಕೃಷಿ ಮಾರುಕಟ್ಟೆ ರಾಜ್ಯ ಸಚಿವರು

ಅಭಿಯಾಚನೆ ಕ್ರಮಾಂಕ 34 - ಪ್ರವಾಸೋದ್ಯಮ ಮತ್ತು ಹಜ್

ಶ್ರೀ ಆರ್. ರೋಷನ್‌ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪ್ರವಾಸೋದ್ಯಮ ಮತ್ತು ಹಜ್" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 14,65,80.000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 35 - ಕೃಷಿ ಮಾರುಕಟ್ಟೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಕೃಷಿ ಮಾರುಕಟ್ಟೆ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕೃಷಿ ಮಾರುಕಟ್ಟೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 42,77,63,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ಅಭಿಯಾಚನೆ ಕ್ರಮಾಂಕ 40 - ರಾಜ್ಯ ಶಾಸಕಾಂಗ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯ ಶಾಸಕಾಂಗ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 32,49,87,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 41 - ನ್ಯಾಯ ಪರಿಪಾಲನೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನ್ಯಾಯ ಪರಿಪಾಲನೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 138,01,01,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 46 - ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಸಚಿವರು) ಮಾನ್ಯ ಅಧ್ಯಕ್ಷರೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1097,24,92,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 104,27,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 43 - ಯೋಜನೆ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ (ವಿಜ್ಞಾನ ಮತ್ತು ತಂತ್ರಜ್ಞಾನ ಹೊರತುಪಡಿಸಿ)

ಶ್ರೀಮತಿ ಸುಮಾ ವಸಂತ್ (ಯೋಜನಾ ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯೋಜನೆ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ (ವಿಜ್ಞಾನ

ಮತ್ತು ತಂತ್ರಜ್ಞಾನ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 21,33,21,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 44 - ಲೋಕೋಪಯೋಗಿ ಕಾಮಗಾರಿ (ಬಂದರು ಮತ್ತು ಒಳನಾಡು ಸಾರಿಗೆ ಹೊರತುಪಡಿಸಿ) ಮಾನ್ಯ ಅಧ್ಯಕ್ಷರೆ,

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) ಮಾನ್ಯ ಅಧ್ಯಕ್ಷರೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೋಕೋಪಯೋಗಿ ಕಾಮಗಾರಿ (ಬಂದರು ಮತ್ತು ಒಳನಾಡು ಸಾರಿಗೆ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 637,84,52,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 475,53,52,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 45 - ಸಹಕಾರ (ಕೃಷಿ ಮಾರುಕಟ್ಟೆ ಹೊರತುಪಡಿಸಿ) ಮಾನ್ಯ ಅಧ್ಯಕ್ಷರೆ

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಹಕಾರ (ಕೃಷಿ ಮಾರುಕಟ್ಟೆ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ, 47,42,80,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ, 12,08,16,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಕಾರ್ಮಿಕ ಮತ್ತು ವಕ್ಫ್ ಸಚಿವರು

ಅಭಿಯಾಚನೆ ಕ್ರಮಾಂಕ 47 - ಕಾರ್ಮಿಕ ಮತ್ತು ವಕ್ಫ್

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಕಾರ್ಮಿಕ ಮತ್ತು ವಕ್ಫ್ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾರ್ಮಿಕ ಮತ್ತು ವಕ್ಫ್" ಸಂದಾಯ ಮಾಡುವಲ್ಲಿ ಬರತಕ್ಕಂಥ

ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 161,52,84,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 48 - ಸಮಾಜ ಕಲ್ಯಾಣ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಸಮಾಜ ಕಲ್ಯಾಣ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಮಾಜ ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 574,85,88,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 59,44,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಮಹಿಳಾ ಮತ್ತು ಶಿಶು ಕಲ್ಯಾಣ ಸಚಿವರು

ಅಭಿಯಾಚನೆ ಕ್ರಮಾಂಕ 49 - ಮಹಿಳಾ ಮತ್ತು ಶಿಶು ಕಲ್ಯಾಣ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಹಿಳಾ ಮತ್ತು ಶಿಶು ಕಲ್ಯಾಣ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಹಿಳಾ ಮತ್ತು ಶಿಶು ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 294,09,73,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 24,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ನಗರಾಭಿವೃದ್ಧಿ ಸಚಿವರು

ಅಭಿಯಾಚನೆ ಕ್ರಮಾಂಕ 60 - ನಗರ ಪುರಸಭೆಗಳು, ಪಟ್ಟಣ ಪುರಸಭೆಗಳು ಮತ್ತು ಟೌನ್ ಪಂಚಾಯತ್‌ಗಳು

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) (ಪೌರಾಡಳಿತ ರಾಜ್ಯ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2002 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರ ಪುರಸಭೆಗಳು, ಪಟ್ಟಣ ಪುರಸಭೆಗಳು ಮತ್ತು ಟೌನ್ ಪಂಚಾಯತ್‌ಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 11,59,58,000 ರೂ.ಗಳಿಗಿಂತ ಮೀರದ ಮೊತ್ತವನ್ನು

ಮತ್ತು ಬಂಡವಾಳ ಖಾತೆಯಲ್ಲಿ 700,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಬೇಡಿಕೆಗಳ ಸಂಖ್ಯೆ 32, 14, 15, 16, 17, 18, 191, 20, 21, 22, 23, 24, 25, 05, 07, 06, 56, 08, 12, 13, 26, 29, 30, 31, 32, 33, 34, 35, 40, 41, 37, 46, 43, 44, 45, 47, 48, 49 ಮತ್ತು 60 ಎಲ್ಲಾ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ. ಮಾನ್ಯ ಹನುಮೇಗೌಡರೆ, ತಮ್ಮ ವಿಚಾರವನ್ನು ಮಧ್ಯಾಹ್ನ 3-00 ಗಂಟೆಗೆ ತೆಗೆದುಕೊಳ್ಳೋಣ. ಈಗ ಸದನವನ್ನು ಮಧ್ಯಾಹ್ನ 3-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ

(ಸದನವು 1.56 ನಿಮಿಷಗಳಿಗೆ ಮುಂದೂಡಲ್ಪಟ್ಟು ಮಧ್ಯಾಹ್ನ 3-00 ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು

(ಸದನವು 3-10 ನಿಮಿಷಕ್ಕೆ ಸಮಾವೇಶಗೊಂಡಿತು) (ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ ತಹಸೀಲ್ದಾರ್)ರವರು ಅಧ್ಯಕ್ಷ ಪೀಠದಲ್ಲಿದ್ದರು)

6. ಗಮನ ಸೆಳೆಯುವ ಸೂಚನೆ.

ವಿಷಯ : ಹಾಸನ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿನ ವ್ಯವಹಾರಗಳ ಬಗ್ಗೆ

ಶ್ರೀ ಕೆ.ಎಚ್ ಹನುಮೇಗೌಡ (ಹಾಸನ) :— ಮಾನ್ಯ ಅಧ್ಯಕ್ಷರೇ, ಹಾಸನ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ನಡೆಯುತ್ತಿರುವ ಅಕ್ರಮಗಳಿಂದಾಗಿ ಹಾಲು ಉತ್ಪಾದಕರಿಗೆ ಉಂಟಾಗುತ್ತಿರುವ ತೊಂದರೆಗಳ ಬಗ್ಗೆ ಮಾನ್ಯ ಸಹಕಾರ ಸಚಿವರು ಗಮನ ಸೆಳೆಯುತ್ತೇನೆ.

+ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :— ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಉತ್ತರವನ್ನು ನೀಡುತ್ತೇನೆ.

ಹಾಸನ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ಬಂದ ದೂರುಗಳನ್ನು ಪರಿಶೀಲಿಸಲು ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಮೈಸೂರುರವರಿಗೆ ಸೂಚಿಸಿದ್ದು ಅವರು ತಮ್ಮ ವರದಿಯನ್ನು ದಿನಾಂಕ: 2-12-99ರ ಪತ್ರದಲ್ಲಿ ಸಲ್ಲಿಸಿರುತ್ತಾರೆ. ಈ ವರದಿಯನ್ನು ಪರಿಶೀಲಿಸಲಾಗಿ ಹಾಸನ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದಲ್ಲಿ ಮೇಲ್ನೋಟಕ್ಕೆ ನೇಮಕಾತಿ ಮತ್ತು ಮುಂಬಡ್ತಿಗಳಲ್ಲಿ ಅಕ್ರಮ ನಡೆದಿರುವುದು ಕಂಡು ಬಂದು ಈ ಬಗ್ಗೆ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64ರ ವಿಚಾರಣೆ ನಡೆಸಬೇಕೆಂದು ಸಂಯುಕ್ತ ನಿಬಂಧಕರು, ಮೈಸೂರು ವಿಭಾಗದವರು ಶಿಫಾರಸ್ಸು ಮಾಡಿರುತ್ತಾರೆ.

ಈ ಶಿಫಾರಸ್ಸಿನ ಮೇಲೆ ಅಪರ ನಿಬಂಧಕರು (ಕ್ರೆಡಿಟ್ ಮತ್ತು ಇತರೆ) ರವರು 3 ಆರೋಪಗಳ ಮೇಲೆ ವಿಚಾರಣೆ ನಡೆಸಲು ಸಹಕಾರ ಸಂಘಗಳ ಕಾಯ್ದೆ ಕಲಂ 64ರಡಿ ಆದೇಶ ಹೊರಡಿಸಿ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, (ಪಟ್ಟಣ ಬ್ಯಾಂಕು) ಕೇಂದ್ರ ಕಛೇರಿ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ದಿನಾಂಕ: 6-4-3000ದಲ್ಲಿ ಆದೇಶ ಹೊರಡಿಸಿರುತ್ತಾರೆ. ವಿಚಾರಣೆಗೆ ಒಳಪಟ್ಟ ಅಂಶಗಳು ಈ ಕೆಳಗಿನಂತೆ ಇರುತ್ತವೆ.

1) ಕಾನೂನುಬಾಹಿರವಾಗಿ ನೇಮಕಾತಿ ಮಾಡಿರುವ ಬಗ್ಗೆ
2) ಕಾನೂನುಬಾಹಿರವಾಗಿ ನೌಕರರಿಗೆ ಮುಂಬಡ್ತಿ ಕೊಟ್ಟಿರುವ ಬಗ್ಗೆ
3) ಸಿಬ್ಬಂದಿ ಸೇವಾ ನಿಯಮಗಳನ್ನು ರಚನೆ ಮಾಡಿ ಇಲಾಖಾ ಅನುಮೋದನೆ ಪಡೆಯದೆ ನೌಕರರಿಗೆ ಆರ್ಥಿಕ ಮತ್ತು ಇತರೆ ಸೌಲಭ್ಯಗಳನ್ನು ನೀಡುತ್ತಿರುವ ಬಗ್ಗೆ

ವಿಚಾರಣಾಧಿಕಾರಿಗಳಾದ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು (ಪಟ್ಟಣ ಬ್ಯಾಂಕು)ರವರು ತಮ್ಮ ಪತ್ರ ದಿನಾಂಕ: 26-2-2001ರಂದು ತಮ್ಮ ವಿಚಾರಣಾ ವರದಿಯನ್ನು ನೀಡಿರುತ್ತಾರೆ. ಈ ವಿಚಾರಣಾ ವರದಿಯಲ್ಲಿ ಪ್ರಕಟಣೆಗಿಂತ ಹೆಚ್ಚು ಸಂಖ್ಯೆಯಲ್ಲಿ ಹುದ್ದೆಗಳಿಗೆ ನೇಮಕಾತಿ ಮಾಡಿರುವುದು ಮತ್ತು ಈ ಅಧಿಕ ನೇಮಕಾತಿಗೆ ರೋಸ್ಟರ್ ಪದ್ಧತಿಯನ್ನು ಅನುಸರಿಸದೆ ಇರುವುದು ಕಂಡು ಬರುತ್ತದೆ. ಬಡ್ತಿ ನೀಡುವಾಗ ನಿಯಮಗಳನ್ನು ಪಾಲಿಸದೆ ಜೇಷ್ಠತೆ ಮತ್ತು ಸೇವೆಯನ್ನು ಪರಿಗಣಿಸದೆ ಆಯ್ಕೆ ವಿಧಾನದಿಂದ ಬಡ್ತಿ ನೀಡಿರುವುದು ಕಂಡು ಬರುತ್ತದೆ.

ಈ ರೀತಿ ಕಂಡುಬಂದ ಲೋಪದೋಷಗಳನ್ನು ಸರಿಪಡಿಸಲು ಕಾನೂನು ಅವಕಾಶದಂತೆ ಸಹಕಾರ ಸಂಘಗಳ ಕಾಯ್ದೆ ಕಲಂ 68ರಲ್ಲಿ 28-3-2001ರಲ್ಲಿ ಆದೇಶ ಕೊಡಲಾಗಿರುತ್ತದೆ. ಈ ಆದೇಶದಲ್ಲಿ ಈ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲು 30 ದಿವಸಗಳ ಕಾಲಾವಕಾಶವನ್ನು ಕೊಡಲಾಗಿತ್ತು. ಹಾಲು ಒಕ್ಕೂಟವು ಈ 30 ದಿವಸಗಳ ಕಾಲಾವಕಾಶವನ್ನು ಕೋರಿರುತ್ತಾರೆಅ ಅಧಿಕ ಕಾಲಾವಕಾಶವನ್ನು ನೀಡಲಾಗಿರುತ್ತದೆ. ಆಡಳಿತ ಮಂಡಳಿಯು 25-5-2001ರ ಆಡಳಿತ ಮಂಡಳಿ ಸಭೆಯಲ್ಲಿ ಈ ವಿಚಾರಣಾ ವರದಿಯನ್ನು ಮತ್ತು ಆದೇಶವನ್ನು ಪರಿಶೀಲಿಸಿ ತೀರ್ಮಾನ ಕೈಗೊಂಡಿದ್ದರ ಮೇಲೆ ಉತ್ತರವನ್ನು ಸಲ್ಲಿಸಿರುತ್ತಾರೆ.

ಈ ಉತ್ತರವನ್ನು ಪರಿಶೀಲಿಸಿದಾಗ ಅನೇಕ ವಿಷಯಗಳ ಬಗ್ಗೆ ಸ್ಪಷ್ಟೀಕರಣ ಕೋರಿರುತ್ತಾರೆ. ಈ ಸ್ಪಷ್ಟೀಕರಣ ಕೋರಿರುವ ಅಂಶಗಳ ಈ ವಿಚಾರಣಾ ವರದಿಯಲ್ಲಿನ ಅಂಶಗಳಿಗೆ ಅನೇಕ ಸಂದರ್ಭದಲ್ಲಿ ಇದ್ದುದು ಕಂಡುಬರುತ್ತದೆ. ಅಲ್ಲದೆ ಈ ವಿಚಾರಣಾ ವರದಿಯಲ್ಲಿ ತಿಳಿಸಲಾದ ಕೆಲವು ಅಂಶಗಳನ್ನು ಮತ್ತು ಲೋಪದೋಶಗಳನ್ನು ಸರಿ

ಎಂದು ಸಮರ್ಥಿಸಿಕೊಂಡು ಆರೋಪ ಕೈಬಿಡಲು ಕೋರಿರುವ ಮತ್ತು ಮತ್ತೆ ಈ ಸ್ಪಷ್ಟೀಕರಣ ಬರುವವರೆಗೂ ಮತ್ತೆ ಕಾಲಾವಕಾಶ ಕೋರಿರುತ್ತಾರೆ.

ಈ ಉತ್ತರಗಳನ್ನು ಪರಿಶೀಲಿಸಲಾಗಿ ಈ ಸ್ಪಷ್ಟೀಕರಣಗಳು ಅಸಂಬದ್ಧವಾದುದರಿಂದ ಅವುಗಳಿಗೆ ಸ್ಪಷ್ಟೀಕರಣ ಕೊಡುವ ಅಗತ್ಯವಿಲ್ಲವೆಂದು 13-7-2001ರಲ್ಲಿ ಸಂಘಕ್ಕೆ ಉತ್ತರವನ್ನು ಕೊಡಲಾಗಿದೆ ಮತ್ತು ಕಲಂ 68ರ ಆದೇಶವನ್ನು ಜಾರಿಗೊಳಿಸಲು ಸೂಚಿಸಿದೆ.

ಸಹಕಾರ ಸಂಘಗಳ ಕಾಯ್ದೆ ಕಲಂ 64ರ ವಿಚಾರಣಾ ವರದಿಯಲ್ಲಿ ಕಂಡುಬಂದ ನ್ಯೂನ್ಯತೆಗಳಿಗೆ ಕಾರಣರಾದವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಕಾಯ್ದೆ ಅಡಿಯಲ್ಲಿ ಅಧಿಕಾರ ದತ್ತವಾಗಿರುವ ಸಹಕಾರ ಸಂಘಗಳ ಸಂಯುಕ್ತ ನೀಬಂಧಕರು, ಮೈಸೂರು ರವರು ತಮ್ಮ ನೋಟೀಸು ದಿನಾಂಕ: 28-5-2001ರಲ್ಲಿ ಸಹಕಾರ ಸಂಘಗಳ ಕಾಯ್ದೆ ಕಲಂ 29(ಸಿ)ರಡಿ ಹಾಸನ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧ್ಯಕ್ಷರಿಗೆಸಹಕಾರ ಸಂಘದಲ್ಲಿ ಆಡಳಿತ ಮಂಡಳಿಯ ಸದಸ್ಯರಾಗಿ ಮುಂದುವರಿಯಲು ಏಕೆ ಅನರ್ಹವೆಂದು ಘೋಶಿಸಬಾರದು ಎಂದು ಕೇಳುವ ನೋಟೀಸನ್ನು ಜಾರಿ ಮಾಡಿ ಅವರು 18-6-2001ರಂದು ಹಾಜರಾಗಲು ಮತ್ತು ಉತ್ತರ ನೀಡಲು ಸೂಚಿಸಲಾಗಿತ್ತು. ಈ ನೋಟೀಸು ಜಾರಿಯಾಗದ ಕಾರಣ 26-6-2001ರಲ್ಲಿ ಮತ್ತೊಂದು ನೋಟೀಸನ್ನು ಜಾರಿ ಗೊಳಿಸಿ 7-7-2001 ಬೆಳಿಗ್ಗೆ 11.00 ಗಂಟೆಗೆ ಹಾಜರಾಗಲು ಸೂಚಿಸಲಾಗಿತ್ತು. ಇದೂ ಸಹ ಜಾರಿಯಾಗದ ಕಾರಣ ದಿನಾಂಕ: 12-7-2001 ರಂದು ಮತ್ತೊಂದು ನೋಟೀಸ್ ನೀಡಿ ದಿನಾಂಕ 20-8-2001ರಂದು ಹಾಜರಾಗಲು ಸೂಚಿಸಿರುತ್ತದೆ. ಈ ಬಗ್ಗೆ ಪ್ರಕ್ರಿಯೆ ಸಂಯುಕ್ತ ನಿಬಂಧಕರು, ಮೈಸೂರು ವಿಭಾಗದವರ ಮುಂದೆ ನಡೆಯುತ್ತಲಿದೆ.

ಸಹಕಾರ ಸಂಘಗಳ ಕಾಯ್ದೆ ಕಲಂ 68ರಡಿ ಕೊಟ್ಟ ಆದೇಶದಲ್ಲಿ ಕಂ 64ರ ವಿಚಾರಣಾ ವರದಿಯಲ್ಲಿ ಕಂಡುಬಂದ ನ್ಯೂನ್ಯತೆಗಳನ್ನು ಸರಿಪಡಿಸಲು ಹಾಸನ ಒಕ್ಕೂಟದ ಆಡಳಿತ ಮಂಡಳಿ ತಹಲ್‌ವರೆಗೂ ಕ್ರಮ ಕೈಗೊಳ್ಳದೇ ಇದ್ದುದರಿಂದ ಕಾನೂನು ಉಲ್ಲಂಘನೆಗೆ ಕಾರಣರಾದ ಅಧಿಕಾರಿಗಳ ಮೇಲೆ ದೋಷಾರೋಪವನ್ನು ತಯಾರಿಸಲು ಸಹಕಾರ ಸಂಘಗಳ ಸಂಯಕ್ತ ನಿಬಂಧಕರು, ಮೈಸೂರು ಇವರಿಗೆ ಸೂಚನೆ ನೀಡಲಾಗಿದೆ.

ಹೆಚ್ಚುವರಿ ಹುದ್ದೆಗಳ ನೇಮಕಾತಿಯಿಂದ ಒಕ್ಕೂಟಕ್ಕೆ ಆದ ನಷ್ಟವನ್ನು ಲೆಕ್ಕ ಹಾಕಿ ಅದಕ್ಕೆ ಕಾರಣರಾದವರ ಮೇಲೆ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 69ರಡಿ ಅಧಿಕಾರ ಪ್ರಕರಣವನ್ನು ಪ್ರಾರಂಭಿಸಲು ಅಧಿಕಾರ ದತ್ತವಾಗಿರುವ ಸಹಕಾರ ಸಂಘಗಳ ಸಂಯಕ್ತ ಬಂಧಕರು, ಮೈಸೂರು ಇವರಿಗೆ ಸೂಚನೆ ನೀಡಲಾಯಿತು.

ಸರ್ಕಾರ ಕಾನೂನು ರೀತಿ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಲಿದೆ.

+ಶ್ರೀ ಕೆ.ಹೆಚ್. ಹನುಮೇಗೌಡ :— ಮಾನ್ಯ ಅಧ್ಯಕ್ಷರೆ, ಅತ್ಯುತ್ತಮವಾದ ಯೋಜನೆ ಇದು. ಗ್ರಾಮೀಣ ಪ್ರದೇಶದ ವಿಧವೆಯರು, ಕೃಷಿ ಕಾರ್ಮಿಕರುಗಳು ಬ್ಯಾಂಕಿನಿಂದ ಬೇರೆಬೇರೆ ಸ್ಕೀಂಗಳಡಿಯಲ್ಲಿ ಸಾಲ ಎತ್ತಿ ಒಂದು ಹಸು ಎಮ್ಮೆ ಇಟ್ಟುಕೊಂಡು ಅದರಿಂದ ಉತ್ಪತ್ತಿಯಾಗುವ ಹಾಲಿನಿಂದ ಜೀವನ ಚೆನ್ನಾಗಿ ಸಾಗಿಸುತ್ತಿದ್ದಾರೆ. ಇದು ಮಕ್ಕಳಿಗೆ ಪೌಷ್ಟಿಕವಾದ ಆಹಾರವೂ ಹೌದು. ರೈತರಿಗೆ ಬೇಕಾದ ಗೊಬ್ಬರ ಕೂಡ ಸಿಕ್ಕಿ ಎಲ್ಲಾ ವಿಧದಲ್ಲೂ ಈ ಡೈರಿಯಿಂದ ರೈತ ಜನಾಂಗಕ್ಕೆ ಉಪಯುಕ್ತವಾಗಿದೆ. ಕಳೆದ 15-20 ದಿವಸದಿಂದ ದಿವಸಾ ಚರ್ಚೆಯಾಗುತ್ತಿದೆ, ಪೇಪರ್‌ನಲ್ಲಿ ಬರೀತಾ ಇದ್ದಾರೆ, ಶಾಸನಸಭೆಯಲ್ಲಿ ಕೂಡ ಪ್ರಸ್ತಾಪವಾಗುತ್ತಿದೆ. ನಾಲ್ಕೈದು ಜಿಲ್ಲೆ ಬಿಟ್ಟು ಇಡೀ ರೈತ ಸಮೂಹ ಮಳೆಯಿಲ್ಲದೆ ಹಾಹಾಕಾರ ಮಾಡುತ್ತಿದೆ. ಅನೇಕ ಕಡೆ ಊರಿಂದ ಊರಿಗೆ ವಲಸೆ ಹೋಗುತ್ತಿದ್ದಾರೆ. ಆದರೆ ಡೈರಿಯನ್ನು ಅವಲಂಬಿಸಿರುವ ಜನ ಜೀವನಕ್ಕೊಂದು ದಾರಿ ಸಿಕ್ಕಿರುವುದರಿಂದ ಅವರಿಗೆ ಇದ್ದುದ್ದರಲ್ಲೇ ನೆಮ್ಮದಿಯಾಗಿ ಜೀವನ ಮಾಡುವ ಅವಕಾಶ ಒದಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರಲು ನಾನು ಇಷ್ಟಪಡುತ್ತೇನೆ. ಇದಕ್ಕೆ ಮಾನ್ಯ ಸಚಿವರು ಉತ್ತರಿಸಬೇಕು. ಕಳೆದ ಒಂದೂವರೆ ತಿಂಗಳಿಂದ ಮಳೆಯಾಗದೆ ಬೆಳೆಯಾಗದೇ ತೊಂದರೆ ಇದ್ದರೂ ಕೂಡ ಹಾಲು ಶೇಖರಣೆ ಮೊದಲು ಎಷ್ಟು ಆಗುತ್ತಿತ್ತೋ ಅಷ್ಟೇ ಆಗುತ್ತಿದೆ. ಅಂದರೆ ಮಳೆಯನ್ನಾಶ್ರಯಿಸದೇಯೇ ಜನ ನೆಮ್ಮದಿಯಾಗಿ ಬಾಳು ನಡೆಸಲು ಸಹಕಾರಿಯಾದ ವೃತ್ತಿ ಇದು ಎಂದು ನಾನು ಹೇಳಬಯಸುತ್ತೇನೆ.

ಸರ್ಕಾರದ ಉದ್ದೇಶ, ಇಲಾಖೆ ಉದ್ದೇಶ ಮತ್ತು ಜನತಾ ಪ್ರತಿನಿಧಿಗಳ ಉದ್ದೇಶವೇನೆಂದರೆ ಇಂತಹ ಒಂದು ಉಪಯುಕ್ತವಾದ ಯೋಜನೆ ಪ್ರಾಮಾಣಿಕರ ಕೈಯಲ್ಲಿರಬೇಕು. ಅಧಿಕಾರಸ್ತರೂ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು, ಜನಗಳ ಬಗ್ಗೆ ಅನುಕಂಪವನ್ನು ಇಟ್ಟುಕೊಳ್ಳಬೇಕು. ಅಲ್ಲಿ ಬಂದ ಲಾಭ ಪುನ: ಡಿವಿಡೆಂಡ್ ರೂಪದಲ್ಲಿ ಜನಕ್ಕೆ ವಾಪಸ್ ಹೋಗಬೇಕು. ಅಥವಾ ಹೆಚ್ಚು ಹಣ ಬೇಕಾದರೆ ಬೇರೆ ಬೇರೆ ಸ್ಕೀಂಗಳನ್ನು ಅಳವಡಿಸಿ ಅವಕಾಶ ಮಾಡಿಕೊಳ್ಳಬೇಕು. ಇಡೀ ರಾಜ್ಯದಲ್ಲಿ ಮೂರ್ನಾಲ್ಕು ವರ್ಷಕ್ಕೆ ಮುಂಚೆ ಈ ಯೂನಿಯನ್‌ಗಳು ಕೆಎಂಎಫ್‌ಗಳು ಬಹಳ ಉತ್ತಮವಾದ ಕೆಲಸ ಮಾಡುತ್ತಾ ಇತ್ತು, ಯಾವತ್ತೂ ಈ ಶಾಸನ ಸಭೆಯಲ್ಲಿ ಡೈರಿ, ಕೆಎಂಎಫ್‌ಗಳ ಬಗ್ಗೆ ಒಂದು ಚಕಾರ ಶಬ್ದವನ್ನು ಯಾರೂ ಮಾತನಾಡಿರಲಿಲ್ಲ. ಜನಗಳಿಗೂ ಮೆಚ್ಚುಗೆ ಇತ್ತು, ಆದರೆ ಮೂರ್ನಾಲ್ಕು ವರ್ಷಗಳಿಂದ ಯಾವುದೋ ಗ್ರಹಗತಿ ಈ ಡೈರಿ, ಕೆಎಂಎಫ್‌ಗಳಿಗೆ ಬಂತು. ಹಾಲಿ ಇರುವ ಅಧಿಕಾರಿಗಳು ಅಧಿಕಾರಕ್ಕೆ ಬಂದ ಮೇಲೆ ಇವೆಲ್ಲಾ ಪ್ರಾರಂಭವಾದವು ಎಂದರೆ ತಪ್ಪಾಗಲಾರದು. ನಾನು ವೈಯಕ್ತಿಕ ದ್ವೇಶದಿಂದ ಹೇಳುತ್ತಿಲ್ಲ. ನಾನು ಜನಗಳಿಂದ ಚುನಾಯಿತನಾಗಿ ಬಂದವನು. ಹಾಸನ, ಕೊಡಗು, ಚಿಕ್ಕಮಗಳೂರು ಜಿಲ್ಲೆಗಳ ಲಕ್ಷಾಂತರ ರೈತರೂ ಇದರಿಂದ ಏನೋ ಒಂದು ನೆಮ್ಮದಿಯ ಜೀವನ ಮಾಡುತ್ತಿದ್ದಾರೆ. ಅವರೆಲ್ಲ ನನಗೆ ಮತ್ತಿತರ ಜಿಲ್ಲಾ ಪ್ರತಿನಿಧಿಗಳಿಗೆ ಮತ ನೀಡಿದವರು.

ಅವರು ನನ್ನಿಂದ ಇನ್ನೇನೂ ನಿರೀಕ್ಷೆ ಮಾಡುತ್ತಿಲ್ಲ. ಈ ಸಂಸ್ಥೆ ಲಾಭದಾಯಕವಾಗಿ ನಡೆದು ಅದರ ಪ್ರಯೋಜನ ಈ ಜನಗಳಿಗೆ ಸಿಕ್ಕಬೇಕೆಂದುದಷ್ಟೇ ಅವರ ಆಸೆ. ಅವರ ಆಸೆಯನ್ನು ಈಡೇರಿಸುವ ದೃಷ್ಟಿಯಿಂದ ಇದನ್ನು ಇಲ್ಲಿ ಗಮನ ಸೆಳೆಯುವ ಸೂಚನೆ ರೂಪದಲ್ಲಿ ಎತ್ತಿದ್ದೇನೆ. ಸರ್ಕಾರವೆಂದರೆ ಸಚಿವರು, ಸಾವಿರಾರು ಅಧಿಕಾರಿಗಳು, ಇವರೆಲ್ಲರ ಸೂಪರ್‌ವಿಷನ್‌ನಲ್ಲಿ ಇಲಾಖೆ ನಡೀತಾ ಇದೆ. ನಾನು ಇದನ್ನು ಪ್ರಸ್ತಾಪ ಮಾಡಲು ಶುರುಮಾಡಿಯೇ ಎರಡು ವರ್ಷವಾಯಿತು. ಈ ಅವಧಿಯಲ್ಲಿ ಇಲಾಖೆಯವರು ಸ್ಪಷ್ಟಾಗಿ ಕ್ರಮ ಜರುಗಿಸಿದ್ದರೆ ಅಥವಾ ಆ ಪಾರ್ಟಿಯವರು ಅಧ್ಯಕ್ಷರ ಕಡೆಯವರು ಯಾರಾದರೂ ಕರೆಕ್ಟಾಗಿ ವಿವೇಕ ಹೇಳಿ ಹೀಗಲ್ಲಾ ಹೀಗೆ ನಡೆದುಕೊಳ್ಳಬೇಕು, ಇದು ಬಡವರ ದುಡ್ಡು, ಇದಕ್ಕೇನಾದರೂ ಚ್ಯುತಿ ಬಂದರೆ ನಮಗೆ ಒಳ್ಳೆಯದಾಗುವುದಿಲ್ಲ ಎಂದು ಸರಿಪಡಿಸದಿದ್ದರೆ ನಾನು ಇದರ ಬಗ್ಗೆ ಮಾತನಾಡುತ್ತಿರಲಿಲ್ಲ. ಇಲ್ಲಿರುವ ನಮ್ಮ ಪಕ್ಷದ ಇತರ ಶಾಸಕರೂ ಇದರ ಬಗ್ಗೆ ಮಾತನಾಡುತ್ತಿರಲಿಲ್ಲ.

ನಾನು ಎರಡು ವರ್ಷದ ಹಿಂದೆ ಇಲ್ಲಿ ಇದನ್ನು ಪ್ರಸ್ತಾಪಿಸಿದಾಗ ಮಾನ್ಯ ಸಹಕಾರ ಸಚಿವರು ಶಾಸನಸಭೆಗೆ ಭರವಸೆ ಕೊಟ್ಟರು, ಅನ್ಯಾಯವಾಗಿದ್ದರೆ ವಿಚಾರಣೆ ಮಾಡುತ್ತೇನೆ, ತಕ್ಷಣ ನಾನು ಕ್ರಮ ತೆಗೆದುಕೊಳ್ಳುತ್ತೇನೆ, ನಾನು ಯಾರ ಪರವೂ ಇಲ್ಲ, ಎಂದು. ಈಗ ನನಗೆ ಅನುಮಾನ ಬರುತ್ತಿದೆ. ಇಲ್ಲಿ ಇಬ್ಬರೂ ಸಚಿವರು ಕೂತಿದ್ದಾರೆ ಇವರು ಪ್ರಾಮಾಣಿಕವಾಗಿ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸದಿದ್ದರೆ ಒಂದು ಒಂದೂವರೆ ವರ್ಷದ ಹಿಂದೆಯೇ ಇಲ್ಲಿ ನಾನು ಪುನಃ ಪ್ರಸ್ತಾಪ ಮಾಡಬೇಕಾಗಿರಲಿಲ್ಲ. ಅಲ್ಲಿಗೇ ಅದನ್ನು ಕೊನೆಗಾಣಿಸಬಹುದಾಗಿತ್ತು. ಯಾಕೋ ಏನೋ, ಏನೇನು ಒತ್ತಡವೋ, ಯಾರ್‍ಯಾರಿಗೆ ಏನೇನಾಯಿತೋ ಗೊತ್ತಾಗಲಿಲ್ಲ ಅಂತೂ ಇವರೆಲ್ಲಾ ಸೇರಿ ಈ ಬಡ ಮುಗ್ಧ ಜೀವಿಗಳ ಆಶೋತ್ತರಗಳಿಗೆ ಸ್ಪಂದಿಸಲಿಲ್ಲ. ಈ ಬಡವರು ಇದ್ದಾರಲ್ಲಾ ಹಳ್ಳಿ ಕಡೆ ರೈತರು ದೇಶಕ್ಕೆಲ್ಲಾ ಅನ್ನ ಕೊಡುತ್ತಾರೆ ಟ್ಯಾಕ್ಸ್ ಕೊಡುತ್ತಾರೆ, ಮಳೆ ಬಂದರೆ ದೇವರು ಒಳ್ಳೇದು ಮಾಡಿದ ಎಂದು ಹಗಲು ರಾತ್ರಿ ಹೆಂಡತಿ ಮಕ್ಕಳು ಎಲ್ಲಾ ಸೇರಿಕೊಂಡು ಕೃಷಿ ಮಾಡುತ್ತಾರೆ. ಬಟ್ಟೆ ಇಲ್ಲದೇ ಹೋದರೆ ಅವರೇನೂ ಇನ್ನೊಬ್ಬರ ಮನೆಗೆ ಕದಿಯಲು ಹೋಗುವುದಿಲ್ಲ. ಚಿಂದಿಬಟ್ಟೆಯನ್ನೇ ಹಾಕಿಕೊಳ್ಳುತ್ತಾರೆ. ಬೇರೆಯವರ ಹಾಗೆ ಇನ್ನ್ಯಾವುದಕ್ಕೂ ಹೋದವರಲ್ಲ. ಸ್ವಾಮಿ, ಈ ದೇಶದ ಇತಿಹಾಸವನ್ನು ನೋಡಿ. ಎಲ್ಲಾ ಜನ ವರ್ಗಗಳಿಗೂ ಒಂದು ಯೂನಿಯನ್ ಮಾಡಿಕೊಂಡು ಸಮಾಜದ ಮೇಲೆ ಒತ್ತಾಯ ತಂದು ಅವರ ಕೆಲಸಕಾರ್ಯಗಳನ್ನು ಮಾಡಿಸಿಕೊಂಡಿದ್ದಾರೆ. ನೂರಕ್ಕೆ 80ರಷ್ಟಿರುವ ಈ ಮುಗ್ಧ ಜನ ಎಂದಿಗೂ ಸರ್ಕಾರದ ವಿರುದ್ಧ ದಂಗೆಯೆದ್ದವರಲ್ಲ, ಹೋರಾಟ ಮಾಡಿದವರಲ್ಲ, ಟ್ಯಾಕ್ಸ್ ಕೊಡೋಲ್ಲ ಎಂದು ಹೇಳಿದವರಲ್ಲ., ಅವರ ಮೇಲೆ ಲೆವಿ ಎಂದು ಹಾಕುತ್ತಾರೆ. ಸ್ವಾಮಿ, ಸಾಹುಕಾರರು, ಕಾಫಿ ಟೀ ಬೆಳೆಯುವವರ ಫ್ಯಾಕ್ಟರಿ ಇಟ್ಟಿರುವವರು ಕೋಟಿಗಟ್ಟಲೆ ದುಡ್ಡು ಮಾಡಿದರೂ ಅವರನ್ನ್ಯಾರೂ ಮಾತನಾಡಿಸುವುದಿಲ್ಲ.

ಸರಿಯೋ ತಪ್ಪೋ ಸ್ವಲ್ಪ ಟ್ಯಾಕ್ಸ್ ಕಟ್ಟಬಿಟ್ಟರೆ ಅವರು ಮುಕ್ತರಾಗಿಬಿಡುತ್ತಾರೆ. ಈ ಬಡಪಾಯಿಗಳು ಬತ್ತ ಬೆಳೀಬೇಕು, ರಾಗಿ ಬೆಳೀಬೇಕು, ಅದನ್ನು ಸರ್ಕಾರಕ್ಕೆ ಕೊಡಬೇಕು ಬೇರೆಯವರು ಊಟ ಮಾಡುವುದಕ್ಕೆ. ಇಂತಹ ತ್ಯಾಗಮಯಿ ಜೀವಿಗಳವರು, ಅವರಿಗೆ ಅನ್ಯಾಯ ಮಾಡಿದರೆ ಯಾರಿಗೂ ಕೂಡ ಒಳ್ಳೆಯದಾಗುವುದಿಲ್ಲ. ಸರ್ಕಾರಕ್ಕೂ ಕೂಡ ಒಳ್ಳೆಯದಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ತಿಳಿಸಲು ನಾನು ಇಷ್ಟಪಡುತ್ತೇನೆ. ನಾನು ವೈಯಕ್ತಿಕವಾಗಿ ಎರಡು ಮೂರು ಸಾರಿ ಸಹಕಾರ ಸಚಿವರಿಗೆ ಹೇಳಿದೆ. ನಿಮಗೆ ದೇವರೊಂದು ಅವಕಾಶ ಕೊಟ್ಟಿದ್ದಾನೆ. ಬಡ ಜನಗಳಿಗೊಂದು ಅನುಕೂಲ ಮಾಡಬೇಕಾಗಿದೆ. ನಿಮ್ಮ ಕಾಲದಲ್ಲಿ ಕೆಎಂಎಫ್ ಹಾಳಾಗಿಹೋಯಿತು ಅಂತಂದರೆ ಆ ಪಾಪದಿಂದ ನೀವು ಬಿಡುಗಡೆಯಾಗಲು ಆಗುವುದಿಲ್ಲ. ನೀವು ಧೈರ್ಯವಾಗಿ ಕೆಲಸ ಮಾಡಿ, ಯಾರಿಗ್ಯಾಕೆ ನೀವು ಅಂಜಬೇಕು ಎಂದು ಹೇಳಿದೆ. ಅವರು ಹನುಮೇಗೌಡರೇ ಬಿಡೋದೆ ಇಲ್ಲ ಅಂದರು, ಈಗ ಬಿಟ್ಟೆ ಕೂತಿದ್ದಾರೆ, ಎರಡು ವರ್ಷ ಆಗಿದೆ. ಕೃಷ್ಣಪ್ಪನವರಿಗೂ ಹೇಳಿದೆ, ಪಶುಸಂಗೋಪನಾ ಸಚಿವರಿಗೆ, ಇಂತಹ ಒಳ್ಳೆಯ ಖಾತೆ ಸಿಕ್ಕಿದೆ, ಬಡವರಿಗೆ ಅನುಕೂಲವಾಗುತ್ತದೆ. ಆ ಬಡ ಜನತೆ ಆ ಸ್ವಾಮಿಗೆ ಒಳ್ಳೆಯದಾಗಲಿ ಅಂದರೆ ನಿಮಗೂ ಒಳ್ಳೆಯದಾಗುತ್ತದೆ, ನಿಮ್ಮ ಸರ್ಕಾರಕ್ಕೂ ಕೂಡ ಒಳ್ಳೆಯದಾಗುತ್ತದೆ ಎಂದು ಹೇಳಿದೆ. ಯಾಕೋ ಏನೋ ಮುಂದೆ ಹೋಗುವುದಿಲ್ಲ.

ಸ್ವಾಮಿ, ಅಲ್ಲಿ ಏನೇನು ಅನ್ಯಾಯವಾಗಿದೆ ಎಂಬ ಬಗ್ಗೆ ವಿಪುಲವಾಗಿ ಎರಡು ಸಲ ಹೇಳಿದೆ. ಕೆಲವರು ಕೇಳಿದರು, ಅಯ್ಯೋ, ಇಷ್ಟೊಂದು ಉಂಟಾ ಅಂತ. ಇನ್ನೂ ಇದೆ, ಪೂರ್ತಾ ಹೇಳಲು ಬಿಡಲಿಲ್ಲ. ನೀವು ಶಾಂತವಾಗಿದ್ದೀರಿ, ಪಾಪ, ವೆಂಕಟಪ್ಪನವರು ಇದ್ದಿದ್ದರೆ ಎಲ್ಲಾ ಕಾಲಮಿತಿಯೊಳಗೆ ಆಗಿಬಿಡಲಿ ಎಂಹದು 10 ಸಾರಿ ಬೆಲ್ ಹೊಡೆಯುತ್ತಿದ್ದರು. ಆದ್ದರಿಂದ ನಾನು ಸ್ವಲ್ಪ ವಿವರವಾಗಿ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು :— ಇದೆಲ್ಲಾ ಪೀಠಿಕೆಯಾಯಿತು, ಇನ್ನು ನೇರ ವಿಷಯಕ್ಕೆ ಬಂದುಬಿಡಿ.

ಶ್ರೀ ಕೆ.ಹೆಚ್. ಹನುಮೇಗೌಡ :— ನೇರವಾಗಿ ಬರಲು ಆಗುವುದಿಲ್ಲ, ಇದರ ಹಿನ್ನಲೆಯೇನು ಯಾರ ಕರ್ತವ್ಯಲೋಪವಾಗಿದೆ ಎಂಬುದೆಲ್ಲಾ ಚೂರು ಹೇಳಬೇಕು. ಚುನಾವಣೆಯಲ್ಲಿ ನಾನು ಗೆದ್ದೆ, ಹನುಮೇಗೌಡರು ಎಂದು ಅವರ ಸಂತೋಷಕ್ಕೆ ಪಾರವೇ ಇಲ್ಲ. ಆ ಜನಗಳ ಹತ್ತಿರ ಮತ ಪಡೆದು ಬಂದು ಆ ಜನಗಳ ಹಿತ ಕಾಪಾಡುವ ಶಕ್ತಿ ನನಗಿಲ್ಲದ ಮೇಲೆ ನಾನ್ಯಾಕೆ ಈ ಶಾಸನ ಸಭೆಯಲ್ಲಿರಬೇಕು? ಆದೊಂದೇ ದೃಷ್ಟಿಯಿಂದ ನಾನು ಇದರ ಬಗ್ಗೆ ಹೋರಾಟ ಮಾಡುತ್ತಿದ್ದೇನೆಯೇ ವಿನಾ ಬೇರೆ ಇನ್ನೇನೂ ಇಲ್ಲ. ಇಂತಿಂಥ ಅನ್ಯಾಯವಾಗಿದೆ ಎಂಬುದನ್ನು ಸಚಿವರ ಗಮನಕ್ಕೆ ನಾನು ತಂದಾಗ ಸೆಕ್ಷನ್ 64ರ ಪ್ರಕಾರ ತನಿಖೆ ಮಾಡುತ್ತೇನೆ, ಅದು ನಿಜವಿದ್ದರೆ ಕ್ರಮ

ತೆಗೆದುಕೊಳ್ಳುತ್ತೇನೆ ಅಂದರು ಪಾಪ, ಪುಣ್ಯಾತ್ಮ ಯಾರೋ ಕಾಣೆ. ಯಾವ ಒತ್ತಡಕ್ಕೂ ಒಳಗಾಗದೇ ನಿರ್ದಾಕ್ಷಿಣ್ಯವಾಗಿ ಮಾಡಿದರು. ಯಾರೋ ಪಾಟೀಲರು ಎಂದು ಹೆಸರು. ಅವರ ಹೆಸರನ್ನು ಹೇಳಬಾರದೋ ಏನೋ, ಆದರೂ ಹೇಳುತ್ತೇನೆ. ಈ ಶಾಸನ ಸಭೆಯ ಮುಖಾಂತರ ಆ ಒಬ್ಬ ಹಾನೆಸ್ಟ್ ಅಧಿಕಾರಿಗೆ ನಾನು ವಂದನೆಯನ್ನು ಸಲ್ಲಿಸುತ್ತೇನೆ. ಅವರು ವರದಿಯನ್ನು ಕೊಟ್ಟರು. ಈಗ ರೋಸ್ಟರ್ ಸಿಸ್ಟಂನ್ನು ಅನುಸರಿಸದೇ ಎರಡು ವರ್ಷದಿಂದ ಈಚೆಗೆ ಅಪಾಯಿಂಟ್‌ಮೆಂಟ್ ಆಗಿದೆ. ಕಾನೂನು ಪ್ರಕಾರ ಕಮಿಟಿಯನ್ನು ಕಾನಸ್ಟಿಟ್ಯೂಟ್ ಮಾಡಬೇಕಲ್ಲಾ, ಆ ಕಮಿಟಿಯನ್ನು ಕಾನೂನು ಬದ್ಧವಾಗಿ ಮಾಡಿಲ್ಲ. ಪ್ರಮೋಷನ್ಸ್ ಬಗ್ಗೆ, ಈಗ 70-80 ಜನರನ್ನು ಅಪಾಯಿಂಟ್‌ಮೆಂಟ್ ಮಾಡಿಕೊಂಡಿದ್ದಾರೆ. ಅದರಲ್ಲಿ ರೋಸ್ಟರ್ ಸಿಸ್ಟಂ ಇಲ್ಲ. ಇದು ಎಲ್ಲಾ ವರ್ಗದ ಜನರು ಇರುವ ಈ ದೇಶ. ಕೆಲವರಂತೂ ತಲೆತಲಾಂತರಗಳಿಂದ, ಯುಗ ಯುಗಗಳಿಂದ ಅವರಿಗೆ ನ್ಯಾಯವಾದ ಒಂದು ಅನುಕೂಲ ಸಿಕ್ಕದೆ ಅವರು ಕಷ್ಟದಲ್ಲಿ ಹೀಗೆ ಜೀವನ ಮಾಡಿಕೊಂಡು ಬಂದರು. ಈ ದೇಶ ಕೆಲವರದೇ ಸ್ವತ್ತಾಗಿತ್ತು. ಸ್ವಾತಂತ್ರ್ಯ ಬಂದು ಎಲ್ಲರೂ ಪ್ರಜಾಪ್ರಭುತ್ವ ಬಂದಮೇಲೆ ಎಲ್ಲಾ ಜನರೂ ಕೂಡ ಈ ಸರ್ಕಾರದಲ್ಲಿ ಭಾಗಿಯಾಗಬೇಕು ಪ್ರತಿಯೊಂದು ಜನಾಂಗಕ್ಕೂ ಕೂಡ ಈ ಸರ್ಕಾರ ನಮ್ಮದು ಎನ್ನುವ ಭಾವನೆ ಬರಬೇಕೆಂದು ಹೇಳಿ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಈ ಅಪಾಯಿಂಟ್ ಮೆಂಟ್‌ನಲ್ಲೂ ಕೂಡ ರೋಸ್ಟರ್ ಸಿಸ್ಟಂ ಎಂದು ಹೇಳಿ ಇಂಟ್ರಡ್ಯೂಸ್ ಮಾಡಿದರು. ಆ ರೋಸ್ಟರ್ ಸಿಸ್ಟಂನ್ನು ಕಟ್ಟುನಿಟ್ಟಾಗಿ ಬೇರೆ ಕಡೆ ಎಲ್ಲಾ ಮಾಡುತ್ತಾರೆ. ಸಾಮಾನ್ಯವಾಗಿ ನಾನು ತಿಳಿದಮಟ್ಟಿಗೆ ಯಾವ ದೂರುಗಳೂ ಇಲ್ಲ. ಆದರೆ ಈ ಯೂನಿಯನ್‌ನಲ್ಲಿ, ರೋಸ್ಟರ್ ಸಿಸ್ಟಂನ್ನು ಅನುಸರಿಸಿಯೇ ಇಲ್ಲ. ಇದು ಅಪಾಯಿಂಟ್‌ಮೆಂಟ್ ಆಗಿ ಎಷ್ಟು ವರ್ಷವಾಯಿತು ಎಂದರೆ ಮೂರು ವರ್ಷವಾಯಿತು. ಎಷ್ಟು ಜನ ಎಂದರೆ 80 ಜನರು. 80 ಜನರಲ್ಲಿ ಅಧ್ಯಕ್ಷರು ಅವರು ನೆಂಟರು ಬಂಧುಬಳಗದವರೇ ಜಾಸ್ತಿ ಇದ್ದಾರೆ. ಇನ್ನು ಅವರು ಇವರ ಅವರ ಗಣನೆಗೆ ಬಂದಿಲ್ಲ. ಇಂಥ ಅನ್ಯಾಯವಾಗಿದೆ. ಇದು ನಿಜವೆಂದು ಪ್ರೂವ್ ಆಗಿದೆ. ನಾನು ನಿಮ್ಮ ಮುಖಾಂತರ ಸಹಕಾರ ಮಂತ್ರಿಗಳಲ್ಲಿ, ಕೇಳುತ್ತೇನೆ. ಎರಡು ವರ್ಷದಲ್ಲಿ ಈ ರೀತಿಯ ಅಪಾಯಿಂಟ್‌ಮೆಂಟ್ ಆದರೂ ಕೂಡ ಸ್ವಾಮಿ ನೀವೇನು ಮಾಡುತ್ತಿದ್ದಿರಿ? ನೀವು ಇನ್ಸ್‌ಪೆಕ್ಷನ್ ಮಾಡಬಾರದೇ? ಈ ದೂರು ಬಂದ ತಕ್ಷಣ ಹೋಗಿ ನೋಡಬಾರದೇ? ಅಲ್ಲಿಯ ಕಾರ್ಮಿಕರು ಯೂನಿಯನ್ ಮಾಡಿಕೊಂಡು ಧರಣಿ ಹೂಡಿದರು. ಅವರನ್ನು ಹಿಡಿದುಕೊಂಡು ಹೋಗಿ ಬಡಿಸಿದರು ಸ್ವಾಮಿ. ಯೂನಿಯನ್ ಮಾಡಿಕೊಂಡು ಈ ರೀತಿ ಅನ್ಯಾಯವಾಗಿದೆ, ನಾವು ಬಡವರು. ನಾವು ಅಸಾಯಕ ಜನ. ದಯವಿಟ್ಟು ಸಹಾಯ ಮಾಡಿ ಎಂದು ಹೇಳಿ ಧರಣಿ ಮಾಡಿದರೆ ಅಂಥ ಅವರನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಬಡಿಕಿ ಕೇಸ್ ಹಾಕಿ ಇನ್ನೂ ಕೇಸ್ ನಡೆಯುತ್ತಿದೆ. ಅಂಥ ಅಸಹಾಯಕರಿಗೆ ಸಹಾಯ ಮಾಡತಕ್ಕ,

ಸಹೃದಯರಾದರು. ಮಂತ್ರಿಗಳು ಈ ಸರ್ಕಾರದಲ್ಲಿ ಇಲ್ಲವೇ? ಏಕೆ ಸ್ವಾಮಿ ಮಾಡಲಿಲ್ಲ? ದಯವಿಟ್ಟು ಯೋಚನೆ ಮಾಡಿ ನೋಡಿ. ನಿಮ್ಮ ಅಧಿಕಾರಿ ವಿಚಾರ ಮಾಡಿ ಈ ರೀತಿ ಸ್ವಜನ ಪಕ್ಷಪಾತ ರೋಸ್ಟರ್ ಪ್ರಕಾರ ಅಪಾಯಿಂಟ್‌ಮೆಂಟ್ ಆಗಿಲ್ಲವೆಂದು ವರದಿಯನ್ನು ಕೊಟ್ಟಿದ್ದಾರೆ. ನೀವು ಒಪ್ಪಿಕೊಂಡು ಕೊಟ್ಟಿದ್ದೀರಿ. ಇದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಆಗುವುದಿಲ್ಲ. ಆಮೇಲೆ ಅಪಾಯಿಂಟ್‌ಮೆಂಟ್‌ಗೆ ಕಮಿಟಿಯನ್ನು ಮಾಡಿದರು. ಕಮಿಟಿಯಲ್ಲಿ ಯಾರ್‍ಯಾರು ಇರಬೇಕಾಗಿತ್ತು ಎಂದರೆ ಅದರಲ್ಲಿ ನಿಯಮವಿದೆ. ಕೋ-ಆಪರೇಟೀವ್ ಆ್ಯಕ್ಟ್ ಎಂಥೆಂಥದೋ ಮಾಡಿಕೊಂಡು ಕುಳಿತ್ತಿದ್ದಾರೆ. ಆದರೆ ಅದನ್ನು ಕಣ್ಣುಬಿಟ್ಟು ನೋಡಿಲ್ಲ. ಕೆಎಂಎಫ್ ಉಪನಿಯಮಗಳು 21-2-13 ರಂತೆ ಅಪಾಯಿಂಟ್‌ಮೆಂಟ್‌ಗೆ ಈ ರೀತಿ ಕಮಿಟಿಯನ್ನು ಮಾಡಬೇಕಾಗಿತ್ತು. ಡೈರಿ ಯೂನಿಯನ್ ಅಧ್ಯಕ್ಷರು ಛೇರ್ಮನ್. ಚುನಾಯಿತ ಪ್ರತಿನಿಧಿಗಳು ಇಬ್ಬರು, ಅಂದರೆ ಆ ಯೂನಿಯನ್‌ಗೆ ಎಲೆಕ್ಟ್ ಆಗಿದ್ದರಲ್ಲಾ, ಅವರ ಪೈಕಿ ಇಬ್ಬರು. ಎನ್ ಡಿಡಿಬಿ ಪ್ರತಿನಿಧಿ ಅವರೊಬ್ಬರು. ಆಮೇಲೆ ಕೆಎಂಎಫ್ ಪ್ರತಿನಿಧಿ ಬೆಂಗಳೂರಿನಿಂದ ಒಬ್ಬರು ಹೋಗಬೇಕು. ಆಮೇಲೆ ಜಾಯಿಂಟ್ ರಿಜಿಸ್ಟ್ರಾರ್. ಇವರೆಲ್ಲಾ ಅರ್ಹ ವ್ಯಕ್ತಿಗಳು ಉನ್ನತ ಹುದ್ದೆಯಲ್ಲಿರುವವರು. ಆಮೇಲೆ ಕಾನೂನು ಕಟ್ಟಲೆಯನ್ನು ತಿಳಿದುಕೊಂಡಿರುವವರು. ಬಡವರ ಬಗ್ಗೆ ಅನುಕಂಪ ಇರುವವರು ಎಂದು ಹೇಳಿ ಸರ್ಕಾರದವರು ನಿರ್ಧಾರ ಮಾಡಿ ಈ ರೀತಿ ಕಮಿಟಿಯನ್ನು ಮಾಡಿದ್ದಾರೆ. ಈ ಕಮಿಟಿಯ ಮುಂದೆ ಇದು ಬಂದಿದ್ದರೆ ಈ ರೀತಿಯ ಅನ್ಯಾಯವಾಗುತ್ತಿರಲಿಲ್ಲ. ಇವರೇನು ಮಾಡಿದರು ಅಧ್ಯಕ್ಷರು ಎಂದರೆ ಯಾರನ್ನೇನು ಕೇಳುವುದು, ಅವರೇನು ಮಾಡುತ್ತಾರೆ, ನನಗೂ ಅವರಿಗೂ ಏನು ಸಂಬಂಧ ಎಂದು ಹೇಳಿ ಮಾಡಿದರು. ಒಂದು ಕಮಿಟಿಯನ್ನು ಮಾಡಿದರು. ಅವರೇ ಅಧ್ಯಕ್ಷರು ಆ ಕಮಿಟಿಗೆ. ಆಮೇಲೆ ಡೈರಿ ಅಧಿಕಾರಿಗಳು, ಡೈರಿ ಯೂನಿಯನ್ ಮೀಟಿಂಗ್ ಆಗುತ್ತಿತ್ತಂತೆ. ಪಾಪ ಒಳಗಡೆ ಬರುವವರು ಸಹಿ ಮಾಡುವುದಕ್ಕೆ ಪೆನ್ನನ್ನು ತೆಗೆದುಕೊಂಡೇ ಬರುತ್ತಿದ್ದರಂತೆ, ಲೇಟ್ ಆಗುತ್ತದೆಂದು. ನಮ್ಮ ಅಧ್ಯಕ್ಷರು ಎಲ್ಲಿ ಕೋಪಿಸುಕೊಳ್ಳುತ್ತಾರೋ ಎಂದು ಪೆನ್ನನ್ನು ತೆಗೆದುಕೊಂಡೇ ಬರುತ್ತಿದ್ದರಂತೆ. ಕುಳಿತು ಬಂದು ಸಹಿಯನ್ನು ಹಾಕುತ್ತಿರಲಿಲ್ಲವೆಂತೆ. ಸಾರ್ ಕೊಡಿ ಇಲ್ಲಿ, ಸಹಿಯನ್ನು ಹಾಕುತ್ತೇವೆಂದು ಹೇಳುತ್ತಿದ್ದರಂತೆ. ಅವರು ಕ್ಯಾಬಿನೆಟ್ ಮಂತ್ರಿ. ಯೂನಿಯನ್ ಛೇರ್ಮನ್. ಅಲ್ಲಿಗೆ ಮತ್ತೆ ಛೇರ್ಮನ್. ಹಳ್ಳಿಯವರು ಒಂದು ಮಾತನ್ನು ಹೇಳುತ್ತಾರೆ ಸ್ವಾಮಿ. 'ಅನ್ನಹಾರ ದರ್ಬಾರ್' ಎಂದು ಈ ದರ್ಬಾರ್ ಉಂಟಾ? ಕ್ಯಾಬಿನೆಟ್ ಮಂತ್ರಿಯಾಗಿದ್ದ ಮನುಷ್ಯ ಅಲ್ಲಿ ಕೆಎಂಎಫ್ ಪ್ರೆಸಿಡೆಂಟ್. ನೋಡಿ ಎಂಥಾ ಮುಲಾಜು? ಅಲ್ಲಿಂದ ಹಾಸನ ಯೂನಿಯನ್ ಅಲ್ಲಿಗೂ ಪ್ರೆಸಿಡೆಂಟ್. ಇನ್ನೂ ನಾಲ್ಕು ಜನ ಅಧಿಕಾರಿಗಳು ಏನು ಮಾಡುತ್ತಾರೆ ಸ್ವಾಮಿ. ನಾಲ್ಕು ಜನ ಅಧಿಕಾರಿಗಳು ಇದ್ದಾರಲ್ಲಾ, ಇವರೇ ಕೆಲಸಕ್ಕೆ ತೆಗೆದುಕೊಂಡಿರುವವರು. ಅವರು ಅವರ ಎದುರಿಗೆ ಕೂರುತ್ತಿದ್ದರೆ? ನಿಲ್ಲುತ್ತಿದ್ದರೆ? ಅವರೇನಾದೂ ಮಾಡುತ್ತಿದ್ದರೆ? ನೀವು ದಯವಿಟಟ್ಟು

ಆಲೋಚನೆ ಮಾಡಿ ನೋಡಿ. ಒಬ್ಬರಿಗೆ ಒಂದು ಅಧಿಕಾರ ಎಂದು ಈ ದೇಶದ ಜನರೆಲ್ಲಾ ಹೇಳುತ್ತಾರಲ್ಲಾ, ಇಲ್ಲಿ ಕ್ಯಾಬಿನೆಟ್, ಅಲ್ಲಿ ಕೆಎಂಎಫ್ ಛೇರ್ಮನ್, ಎನ್‌ಡಿಡಿಬಿ ರವರನ್ನು ಕರೆದರು. ಪಾಪದವರು ನಾಲ್ಕೈದು ಲಕ್ಷ ರೂ. ಖರ್ಚು ಮಾಡಿ ದುಡ್ಡು ಕೊಟ್ಟಿದ್ದರಲ್ಲಾ ಅದನ್ನೆಲ್ಲಾ ಸೇರಿಸಿ ಐದಾರು ಲಕ್ಷ ಜನರನ್ನು ಸೇರಿಸಿ ತಮಟೆ ಬಡಿದು ಸಂಗೀತಾ ಎಲ್ಲಾ ಹೇಳಿ ಅವರು ಸಂತೋಷ ಪಟ್ಟಿದ್ದೇ ಪಟ್ಟಿದ್ದು. ಬಹಳ ದೊಡ್ಡ ವ್ಯಕ್ತಿ ಎಂದು ಹೇಳಿ ಅವವೇ ಇವರಿಗೆ ಸರ್ಟಿಫಿಕೇಟ್ ಕೊಟ್ಟರಲ್ಲಾ, ಆ ಜನ ನೋಡಿ, ಆ ಅರೇಂಜ್‌ಮೆಂಟ್ ನೋಡಿ. ಅವರಿಗೆ ಗೊತ್ತಾಗಿದ್ದರೆ ಇದು ಪಾಪದವರ ದುಡ್ಡು ಎಂದು ಗೊತ್ತಿದ್ದರೆ, ಅವರು ಕೂರುತ್ತಿರಲಿಲ್ಲ. ಇದು ಕಾಂಟ್ರಿಬ್ಯೂಷನ್. ಹೀಗೆ ಮಾಡಿ ಅರೂ ಸರ್ಟಿಫಿಕೇಟ್ ಕೊಟ್ಟುಬಿಟ್ಟರು.

ಶ್ರೀ ಸಿ.ಬಿ. ಸುರೇಶ್ ಬಾಬು (ಚಿಕ್ಕನಾಯಕನಹಳ್ಳಿ) :— ಮಾನ್ಯ ಉಪಾಧ್ಯಕ್ಷರೇ, ಹನುಮೇಗೌಡರು ಪ್ರತಿವರ್ಷವೂ ಕಳೆದ ಸದನದಲ್ಲೂ ಕೂಡ ಇದನ್ನೇ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲೂ ಒಂದು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಏನು 20-3-2001 ರಲ್ಲಿ ಕಳೆದ ಸದನದಲ್ಲಿ ನಾನು ಯಾವುದೇ ರೀತಿ ಹಾಸನ ಜಿಲ್ಲೆ ಡೈರಿಯಲ್ಲಿ ಅವರು ಅಧ್ಯಕ್ಷರಾಗಿದ್ದಾಗ 1977 ರಿಂದ 2001ನೇ ಇಸವಿಯವರೆಗೂ ಅವರು ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ನಾನು ಯಾವುದೇ ಹಣಕಾಸನ್ನು ಉಪಯೋಗಿಸಿಲ್ಲ. ಅಲ್ಲಿ ಬರುವ ಗೌರವ ಧನವನ್ನು ಉಪಯೋಗಿಸಿಲ್ಲ ಎನ್ನುವ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಅದು ಕೂಡ ದಾಖಲೆ ಸಮೇತ ಇದೆ. ತಮಗೆ ಇದನ್ನು ಕಳುಹಿಸಿಕೊಡುತ್ತೇನೆ. ಇದನ್ನು ನೋಡಿ ಸದನವನ್ನು ತಪ್ಪು ದಾರಿಗೆ ಎಳೆಯಬಾರದು. ಇದರ ಬಗ್ಗೆ ಹಾಸನದ ಡೈರಿ ಬಗ್ಗೆ ಚರ್ಚೆ ಮಾಡುವುದಾದರೆ ಒಂದು ದಿವಸ ಅವಕಾಶ ತೆಗೆದುಕೊಳ್ಳಿ. ಅದರ ಬಗ್ಗೆ ಕೂಲಂಕೂಷವಾಗಿ ಸಹಕಾರ ಸಚಿವರೂ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಲಿ.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಉಪಾಧ್ಯಕ್ಷರೇ, ಯಾರು ಕಾಲಿಂಗ್ ಅಟೆನ್‌ಶನ್ನನ್ನು ಕಳುಹಿಸಿದ್ದಾರೆ, ಅವರಷ್ಟೇ ಮಾತನಾಡಬೇಕು. ತಾವು ಎಲ್ಲರಿಗೂ ಅಲೂ ಮಾಡುವುದಾದರೆ ಬೇರೆಯವರು ಕೂಡ ಇದರಲ್ಲಿ ಮಾತನಾಡುತ್ತಾರೆ. ಅವರು ಮಾತನಾಡಲಿ.

ಶ್ರೀ ಸಿ. ಚೆನ್ನಿಗಪ್ಪ :— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಇದ್ದಾರೆ, ಕಾನೂನು ಪ್ರಕಾರ ಯಾರು ತಪ್ಪು ಮಾಡಿದ್ದಾರೆ, ಅವರ ಮೇಲೆ ತನಿಖೆ ಮಾಡಲಿ. ಇವರು ಅಧ್ಯಕ್ಷರಾಗಿದ್ದಾಗ ಅದರ ಬಗ್ಗೆ ತನಿಖೆ ಮಾಡಲಿ. ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಲಿ. ಅವರು ತನಿಖೆ ಮಾಡುವುದಕ್ಕೆ ಹೇಳಿದ್ದಾರೆ. ಇವರ ಕಾಲದಲ್ಲಿ ಆದುದ್ದರ ಬಗ್ಗೆಯೂ ತನಿಖೆ ಮಾಡಲಿ. ತಪ್ಪಿತಸ್ಥರು ಇದ್ದರೆ ಸರ್ಕಾರ ಅವರಿಗೆ ಯಾವ

ರೀತಿ ಪನಿಶ್‌ಮೆಂಟ್ ಕೊಡುತ್ತದೆಯೋ ಕೊಡಲಿ. ಅದನ್ನು ನಾನು ಸಹಾ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ಅನ್ಯಥಾ ಭಾವನೆ ಮಾಡಿ ಒಬ್ಬ ವ್ಯಕ್ತಿಯನ್ನು ಯಾವುದೇ ಕಾರಣಕ್ಕೂ ಅವಹೇಳನಕ್ಕೆ ಈಡು ಮಾಡಬಾರದು ಎಂದು ಈ ಸದನದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಚ್. ಹನುಮೇಗೌಡ :— ರೂಲ್ಸ್ ಅನುಸರಿಸಿ ಮಾಡುವುದಾದರೆ ಮಾಡಿ. ಚರ್ಚೆ ನಡೆಯಬೇಕು. ಎಲ್ಲಾ ಒಟ್ಟಿಗೆ ಸೇರಿ ಭಾಗವಹಿಸಬೇಕು ಎಂದರೆ ಮಾಡಿಕೊಳ್ಳಿ. ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಒಂದು ವಿಚಾರವನ್ನು ಹೇಳುತ್ತೇನೆ. ಹಾಸನ ಹಾಲು ಒಕ್ಕೂಟದಲ್ಲಿ ಹಾಲು ಕೊಡತಕ್ಕ ರೈತರು ನನಗೆ ವೋಟನ್ನು ಕೊಟ್ಟವರು. ನನಗೆ ಜವಾಬ್ದಾರಿ ಇದೆ. ಅದರ ಬಗ್ಗೆ ನಾನು ಮಾತನಾಡುತ್ತೇನೆ. ಇವರಿಗೂ ಹಾಸನ ಒಕ್ಕೂಟದಲ್ಲಿರುವ ರೈತರಿಗ ಏನು ಸಂಬಂಧ?

ಶ್ರೀ ಸಿ. ಚೆನ್ನಿಗಪ್ಪ :— ನಾವು ದನಗಳನ್ನು ಸಾಕಿದ್ದೇವೆ. ನಾವು ಗೆದ್ದು ಬಂದಿದ್ದೇವೆ. ಈ ರೀತಿ ಮಾಡಬಾರದು.

ಶ್ರೀ ಅಪ್ಪಾಜಿ ಎನ್. ನಾಡಗೌಡ :— ಈ ರೀತಿ ಎಲ್ಲರೂ ಮಾತನಾಡಿದರೆ ಮಂತ್ರಿಗಳು ಹೇಗೆ ಉತ್ತರ ಕೊಡುವುದಕ್ಕಾಗುತ್ತದೆ? ಯಾರು ರಿಪ್ಲೈ ಮಾಡಬೇಕು ಎಂದು ಅರ್ಥವಾಗುತ್ತಿಲ್ಲ.

ಶ್ರೀ ಸಿ ಬೈರೇಗೌಡ (ವೇಮಗಲ್) :— ಕಾಲಿಂಗ್ ಅಟೆನ್‌ಷನ್‌ನಲ್ಲಿ ಅದು ಕಡಿಮೆ ಸ್ಕೋಪ್ ಇರುವುದು. ದಯವಿಟ್ಟು ತಾವು ನಿಯಮಾವಳಿ ಪ್ರಕಾರ ಸದನವನ್ನು ನಡೆಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಇದು ದೊಡ್ಡದಾಗಿ ಎರಡು ಗಂಟೆ ಮೂರು ಗಂಟೆ ಚರ್ಚೆಯಾಗತಕ್ಕ ಸಂದರ್ಭ ಬರುತ್ತದೆ. ಆದ್ದರಿಂದ ಕಾಲಿಂಗ್ ಅಟೆನ್‌ಷನ್ ಬಗ್ಗೆ ತಾವು ರೂಲ್ಸ್‌ನ್ನು ಓದಿದರೆ ಆ ಪ್ರಕಾರ ಅಷ್ಟಕ್ಕೆ ಮಾತ್ರ ಬಹಳ ಸೀಮಿತವಾಗಿ ಇದೆ. ಒಂದೋ ಎರಡೋ ಸಪ್ಲಿಮೆಂಟರಿ ಕೇಳಬಹುದು ಅಷ್ಟೇನೆ. ಅಷ್ಟು ಬಿಟ್ಟರೆ ಚರ್ಚೆಯನ್ನೇ ಪ್ರಾರಂಭ ಮಾಡಿ ಅವರು ಅಲ್ಲಿದ್ದರು, ಇವರು ಇಲ್ಲಿದ್ದರು, ಹಾಗೆ ಆಗಿದ್ದರು, ಹೀಗೆ ಆಗಿದ್ದರು ಎಂದು ಹೇಳಿದರೆ ಹೇಗೆ? ಈ ರೀತಿ ಆಗಿದ್ದರೆ ಕ್ರಮ ತೆಗೆದುಕೊಳ್ಳಿ. ಸರ್ಕಾರ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಹೇಳಿ ನಾನೂ ಕೂಡ ಆಗ್ರಹ ಮಾಡುತ್ತೇನೆ. ಅವರಿಗಿಂತ ವಿಚಾರದಲ್ಲಿ ನಾನೇನೂ ಕಡಿಮೆ

3.40 ಪಿಎಂ

ಇದ್ದೇನೆಂದು ಮಾನ್ಯ ಹನುಮೇಗೌಡಡರು ಭಾವಿಸುವುದು ಬೇಡ, ಆದರೆ ಅವರು ನಿಯಮಾವಳಿ ಪ್ರಕಾರ ಮಾತನಾಡಲಿ, ಏನಾದರೂ ಒಂದು ಮಿತಿ ಬೇಡವೆ?

ಶ್ರೀ ಡಿ.ಬಿ. ಚಂದ್ರೇಗೌಡ :— ಅವರು ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯಬೇಕಷ್ಟೆ. ಆದಾದ ಮೇಲೆ ಏನಾದರೂ ಸ್ಪಷ್ಟನೆ ಇದ್ದರೆ ಕೇಳಬಹುದು, ಈ ರೀತಿ ಮಾತನಾಡಲು ಬರುವುದಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ :— ನಾನು ದೇವರ ಮೇಲೆ ಆಣೆ ಮಾಡಿ ಹೇಳುತ್ತೇನೆ ನಾನೇನಾದರೂ ಒಂದು ತೊಟ್ಟು ಹಾಲನ್ನು ನನ್ನ ಮನೆಗೆ ತೆಗೆದುಕೊಂಡು ಹೋಗಿದ್ದರೆ ನನ್ನ ವಂಶ ಉಳಿಯುವುದು ಬೇಡ...

(ಗೊಂದಲ)

ಉಪಾಧ್ಯಕ್ಷರು :— ಮಾನ್ಯ ಹನುಮೇಗೌಡರೆ, ತಾವೇನಾದರೂ ಸದನವನ್ನು ಉದ್ದೇಶಿಸಿ ಮಾತನಾಡುವುದಿದ್ದರೆ, ಅಧ್ಯಕ್ಷರ ಪೀಠದ ಕಡೆ ನೋಡಿಕೊಂಡು ಮಾತನಾಡಿ ನೀವು ನೀವೇ ಮಾತನಾಡಿಕೊಂಡರೆ ಇಲ್ಲಿ ನಾವೇಕೆ ಕುಳಿತಿರುವುದು, ಸಭೆಯನ್ನು ಹೇಗೆ ನಡೆಸುವುದು? ನೀವು ನಿಯಮಾವಳಿ ಚೌಕಟ್ಟಿನೊಳಗೆ ಮಾತನಾಡಿ ಜಾಸ್ತಿ ಲಂಬಿಸಿ ಮಾತನಾಡುವುದು ಬೇಡ.

ಶ್ರೀ ಕೆ.ಹೆಚ್. ಹನುಮೇಗೌಡ :— ಅವರು ಚಾರ್ಜ್ ಮಾಡಿದರೆ ನಾನು ಮರು ಉತ್ತರ ಕೊಡುವುದ ಬೇಡವೇ?

ಉಪಾಧ್ಯಕ್ಷರು :— ಮಾನ್ಯ ಸಹಕಾರ ಸಚಿವರು ಉತ್ತರವನ್ನು ಕೊಡುತ್ತಾರೆ, ವಿಷಯಕ್ಕೆ ಬನ್ನಿ ನೀವು ನೀವೇ ಮಾತನಾಡುವುದು ಬೇಡ.

ಶ್ರೀ ಕೆ.ಹೆಚ್. ಹನುಮೇಗೌಡ :— ನಾಲ್ಕು ಜನ ಅಧ್ಯಕ್ಷರು, ಅವರೇ ಕಮಿಟಿಯ ಸದಸ್ಯರು. ಆಮೇಲೆ ನಿಯಮದ ಪ್ರಕಾರ ಸಮಾಜ ಕಲ್ಯಾಣ ಅಧಿಕಾರಿಯನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರವೇ ಇಲ್ಲ, ಅವರೂ ಕೂಡ ಸದಸ್ಯರು. ಬೈರೇಗೌಡರೆ, ತಲೆ ನಿಮಗೊಬ್ಬರಿಗೆ ಇರುವುದಿಲ್ಲ ನಮಗೂ ಇದೆ, ಸುಮ್ಮನೆ ಕುಳಿತು ಬಿಡಿ, ನಿಮ್ಮ ಸರದಿ ಬಂದಾಗ ಮಾತನಾಡಿ.

ಶ್ರೀ ಸಿ ಬೈರೇಗೌಡ :— ತಲೆ ಕೆಡಿಸಿಕೊಳ್ಳಬೇಡಿ...

(ಗೊಂದಲ)

ಉಪಾಧ್ಯಕ್ಷರು :— ಹನುಮೇಗೌಡರೆ, ನಮ್ಮನ್ನು ಉದ್ದೇಶಿಸಿ ಮಾತನಾಡಿ. ಅವರನ್ನು ನೋಡಿಕೊಂಡು ಏತಕ್ಕೆ ಮಾತನಾಡುತ್ತೀರಿ?

ಶ್ರೀ ಕೆ.ಹೆಚ್. ಹನುಮೇಗೌಡರು :— ಏನು ನಮಗೆ ಕಾಟ ಇದು, ಅಲ್ಲಿ ರೈತರೆಲ್ಲಾ ಹಾಳಾದರು ಅಲ್ಲಿ ನುಂಗಿ ನೀರು ಕುಡಿದು ಎಲ್ಲಾ ಕೊಳ್ಳೆ ಹೊಡೆದರು,

ಅಧಿಕಾರ ಮಾಡಿದರು, ಮಾಡಬಾರದೆಲ್ಲಾ ಮಾಡಿ, ನಾನು ಮಾತನಾಡುವುದಕ್ಕೆ ಹೋದರೆ ನನ್ನ ಪ್ರಾಮಾಣಿಕತೆಯ ಬಗ್ಗೆ ಮಾತನಾಡುತ್ತಾರೆ, ಇಬ್ಬರೂ ಧರ್ಮಸ್ಥಳಕ್ಕೆ ಹೋಗೋಣ, ಆತನನ್ನು ಕರೆದುಕೊಳ್ಳಿ, ಅಲ್ಲಿ ಪ್ರಮಾಣ ಮಾಡೋಣ ನಡೆಯಿರಿ. ಯೋಗ್ಯರು ಬಂದು ಕೆನ್ನೆಗೆ ಹೊಡೆದರೆ ಹೊಡೆಸಿಕೊಳ್ಳುತ್ತೇನೆ, ಕಾಲು ಮುಟ್ಟಿ ನಮಸ್ಕಾರ ಮಾಡಿಕೊಳ್ಳುತ್ತೇನೆ, ದರೋಡೆ ಕೋರರ ಬಗ್ಗೆ ಹೇಳುವುದಕ್ಕೆ ಬಂದರೆ ಹತ್ತು ಬಾರಿ ರೇಗ್ ಹತ್ತುತ್ತೆ ನನಗೆ. ಇನ್ನು ಪಶುಪಾಲನೆ ಇಲಾಖೆಯ ಉಪ ನಿರ್ದೇಶಕರು ಇವರ್‍ಯಾರು ನೇಮಕಾತಿ ಸಮಿತಿಯಲ್ಲಿರುವುದಕ್ಕೆ ಅರ್ಹರಲ್ಲ, ಕಾನೂನು ಬದ್ಧವಾಗಿಲ್ಲ. ಇದೊಂದು ಕಾನೂನು ಬಾಹಿರವಾದ ಸಮಿತಿ, ಆ ಸಮಿತಿಯನ್ನು ರಚನೆ ಮಾಡಿ ಕಾನೂನುಬಾಹಿರವಾಗಿ ನೇಮಕಾತಿ ಮಾಡಿಕೊಂಡರು, ಇದು ನ್ಯಾಯವೇ? ಕಾನೂನುಬಾಹಿರ ಸಮಿತಿ, ಕಾನೂನು ಬಾಹಿರ ಆಯ್ಕೆ, ಮೀಸಲಾತಿ ನಿಯಮವನ್ನು ಪಾಲಿಸಿಲ್ಲ, ಇಲ್ಲಿ ಅನ್ಯಾಯವಾಗಿದೆ. ಇದಕ್ಕೆಲ್ಲಾ ದೇವರು ಎನ್ನುವನೊಬ್ಬ ಇದ್ದಾನೆ, ಇಲ್ಲದಿದ್ದರೂ ಇವರು ಎಷ್ಟು ಕೋಟಿ ಹಣ ಹೊಡೆಯುತ್ತಿದ್ದರೂ, ಎಷ್ಟು ಸಾವಿರ ವರ್ಷ ಬದುಕುತ್ತೇವೆಂದು ಅಡ್ಡಾಡುತ್ತಿದ್ದರೊ ಗೊತ್ತಿಲ್ಲ, ಈಗ ಆರೋಗ್ಯ ಚೆನ್ನಾಗಿದೆ ನಮ್ಮ ಸಮಾನ ಯಾರೂ ಇಲ್ಲವೆಂದು ಮೆರೆದಿದ್ದು ಕಡೆಗೆ ನೆಗೆದು ನೆಲ್ಲಿಕಾಯಿ ಆಗಿ ಕೇಳುವವರಿಲ್ಲದಂತಾದರು. ಇನ್ನು ಬಡ್ತಿ ಕೊಡುವಾಗ ಸಮಿತಿಯವರು ಮನಸ್ಸಿಗೆ ಬಂದಂತೆ ಕೊಟ್ಟಿದ್ದಾರೆ. ಇನ್ನು ವೆಚ್ಚದ ಕುರಿತು ಹೇಳುವುದಾದರೆ, ಮನಸ್ವೇಚ್ಛೆಯಾಗಿ ವೆಚ್ಚ ಮಾಡಿದ್ದಾರೆ. ಇದಕ್ಕೆ ಹೇಳುವವರು-ಕೇಳುವವರು ಯಾರೂ ಇಲ್ಲ. ವೆಚ್ಚವನ್ನು ಹೇಗೆ ಮಾಡಿದ್ದಾರೆಂದರೆ, ಹಾಲು ಉತ್ಪಾದನೆಗೆ ಸಂಬಂಧಿಸಿದಂತೆ ಮೂರು ಘಟಕಗಳಿದ್ದು, ಹಾಸನ, ಬೀರೂರು ಮತ್ತು ಕೂಡಿಗೆಯಲ್ಲಿ ಈ ಘಟಕಗಳಿವೆ. ಈ ಘಟಕಗಳಲ್ಲಿ ಒಟ್ಟು ನಲವತ್ತು ಭದ್ರತಾ ಸಿಬ್ಬಂದಿಯಿದ್ದು ಕಳೆದ 15-20 ವರ್ಷಗಳಿಂದಲೂ ಕಾರ್ಯನಿರ್ವಹಿಸುತ್ತಿದ್ದು, ಇವರುಗಳ ಮೇಲೆ ಯಾವುದೇ ರೀತಿಯ ದೋಷಾರೋಪಣೆ ಇರಲಿಲ್ಲ. ಇವರಿಗೆ ಪ್ರೇರಣೆಯಾಯಿತು! ಪುನ: ನಲವತ್ತು ಭದ್ರತಾ ಸಿಬ್ಬಂದಿಯನ್ನು ಖಾಸಗಿ ಏಜೆನ್ಸಿಯಿಂದ ನೇಮಿಸಿಕೊಡರು. ಮೊದಲು ಇದ್ದ ನಲವತ್ತು ಭದ್ರತಾ ಸಿಬ್ಬಂದಿಗಳು ಕೆಲಸವಿಲ್ಲದೆ ಹಾಗೆಯೇ ಕುಳಿತ್ತಿದ್ದಾರೆ. ತಿಂಗಳಿಗೆ ಎಂಭತ್ತು ಸಾವಿರ ರೂಪಾಯಿಗಳು ಖರ್ಚಾಗುತ್ತಿದೆ. ಇದು ಯಾರ ಮನೆ ದುಡ್ಡು? ದುಡ್ಡು ಹೇಗೆ ನಷ್ಟವಾಗುತ್ತಿದೆಯೆಂಬುದನ್ನು ಹೇಳುತ್ತಿದ್ದೇನೆ. ಇನ್ನು ಡೇರಿಯಲ್ಲಿ ಪ್ಯಾಕ್ ಮಾಡುವ ಕಾರ್ಯಕ್ಕೆ 30-40 ಸಿಬ್ಬಂದಿಯಿದ್ದರೂ, ಪುನ: ನಲವತ್ತು ಸಿಬ್ಬಂದಿಯನ್ನು, ಅಂದರೆ, ತಮಗೆ ಬೇಕಾದವರಿಗೆ ಕೆಲಸ ಕೊಡಿಸುವುದಕ್ಕೋಸ್ಕರ ನೇಮಿಸಿಕೊಂಡರು. ಇದೊಂದು ಬಾಬ್ತಿನಿಂದ ಹೆಚ್ಚು-ಕಡಿಮೆ ಒಂದು ಲಕ್ಷ ರೂಪಾಯಿನಷ್ಟು ಹಣ ಹೆಚ್ಚಿಗೆ ಖರ್ಚಾಗುತ್ತಿದೆ. ಹಾಲನ್ನು ಬೇರೆಡೆಗೆ ಸಾಗಾಣಿಕೆ ಮಾಡುವುದಕ್ಕೆ ಬಾಡಿಗೆ ಖರ್ಚಿಂದು ಮೊದಲು 6-7 ಲಕ್ಷ ರೂಪಾಯಿಗಳು ವೆಚ್ಚವಾಗುತ್ತಿದ್ದರೆ, ಸಂಸ್ಥೆಗೆ ಅಧ್ಯಕ್ಷರು ಬಂದ ನಂತರ ಟೆಂಡರ್ ಕರೆಯುವ ಶಾಸ್ತ್ರ ಮಾಡಿದ ಬಳಿಕ ತಿಂಗಳಿಗೆ 40-50 ಲಕ್ಷ ರೂಪಾಯಿಗಳು ಖರ್ಚಾಗುತ್ತಿದೆ!

ಎಷ್ಟಾದರೂ ಇದು ಬೇರೆಯವರ ಮನೆ ದುಡ್ಡಲ್ಲವೇ? ತನ್ನ ಸ್ವಂತದ್ದಾಗಿದ್ದರೆ ಈ ರೀತಿ ಖರ್ಚು ಮಾಡುತ್ತಿದ್ದರೇ? ಇನ್ನು ಇಲ್ಲಿ ಎರಡು ಜೀಪುಗಳಿದ್ದು, 22 ಚಾಲಕರಿದ್ದಾರೆ! ನಾವು (ಸರ್ಕಾರದವರು) ಈ ರೀತಿ ಮಾಡುತ್ತಿದ್ದಿರಾ? ಸರ್ಕಾರದಲ್ಲಿ ಇಷ್ಟು ಜನ ಮಂತ್ರಿಗಳಿದ್ದು, ಅನೇಕ ಅಧಿಕಾರಿಗಳಿದ್ದಾರೆ, ಎರಡು ಕಾರುಗಳನ್ನು ಇಟ್ಟುಕೊಂಡು 22 ಜನ ಚಾಲಕರನ್ನು ಇಟ್ಟುಕೊಳ್ಳುತ್ತಿದ್ದಿರಾ? ಹಣ ಹೇಗೆ ದುರ್ವಿನಿಯೋಗವಾಗಿದೆಯೆಂದು ಹೇಳುತ್ತಿದ್ದೇನೆ. ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಅವರು ಎಂತಹವರೇ ಆಗಿದ್ದು, ತಮಗೆ ಫೋನ್ ಮಾಡಿದರೂ ಸಹ ತಾವು ಯಾವುದಕ್ಕೂ ಮಣಿಯದೇ ನಿರ್ದಾಕ್ಷಿಣ್ಯವಾಗಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕು. "ಶಿವಕುಮಾರ್ ಅವರಿಗೆ ದೇವರ ಒಳ್ಳೆಯದು ಮಾಡಲಿ" ಎಂದು ಹೇಳುವವರಲ್ಲ, ಅವರು ನಿಮ್ಮನ್ನು ಪಾತಾಳಕ್ಕೆ ತಳ್ಳುವುದಕ್ಕೋಸ್ಕರ ಅವರು ಬಂದು ಹೇಳುತ್ತಾರೆ. ಅವರ ಮಾತಿಗೆ ತಾವು ಕಿವಿಗೊಡಬೇಡಿ. ಕಾನೂನು ರೀತ್ಯ ತಾವು ಸರಿಯಾಗಿ ಕೆಲಸ ಮಾಡಬೇಕು. ಪ್ರಸ್ತಾಪಿಸಬೇಕಾಗಿರುವ ಇನ್ನು 7-8 ವಿಷಯಗಳಿರುವುದರಿಂದ, ಸಮಯಾವಕಾಶ ವಿಲ್ಲದಿರುವುದರಿಂದ ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ನಿಮ್ಮ ಇಲಾಖೆಯಲ್ಲಿರುವ ಅಧಿಕಾರಿಗಳ ಪೈಕಿ ಕೆಲವರು ಪ್ರಾಮಾಣಿಕರಿದ್ದಾರೆ. ಈಗಿನ ಜಂಟಿ ನಿರ್ದೇಶಕರ ಬಗ್ಗೆ ನಾನು ಹೇಳುತ್ತಿಲ್ಲ. ಈ ಹಿಂದೆ ಪಾಟೀಲ್ ಎನ್ನುವವರು ಪ್ರಾಮಾಣಿಕ ಅಧಿಕಾರಿಗಳಾಗಿದ್ದು ಅರು ನಿರ್ದಾಕ್ಷಿಣ್ಯವಾಗಿ ವರದಿ ಕೊಟ್ಟರು. ಇನ್ಯಾರೋ ಆಗಿದ್ದರೆ ಮೊದಲು ಪದ್ಮಶ್ರೀ ಅವರಿಗೆ ರೆಕ್ಮಂಡ್ ಮಾಡಿಬಿಡಿ. ಎಂತಹ ದೊಡ್ಡ ಮನುಷ್ಯರು ಎಂದು ರಿಪೋರ್ಟ್ ಬಂದುಬಿಡುತ್ತಿತ್ತು. ಆದುದರಿಂದ, ನಿಮ್ಮ ಇಲಾಖೆಯಲ್ಲಿ ಯೋಗ್ಯರೆನಿಕೊಂಡವರು ಇನ್ನೂ ಇದ್ದಾರೆ. ಅವರ ಮುಖಾಯಂತರ ವೆರಿಫೈ ಮಾಡಿಸಿ, ತಪ್ಪಿತಸ್ಥರನ್ನು ಹೇಗಾದರೂ ಹಿಡಿದು ಅವರಿಂದ ಹಣವನ್ನು ವಸೂಲು ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕು ಇನ್ನು ನೋಟೀಸ್ ತಲುಪಿಲ್ಲರೆಂದು ಹೇಳುತ್ತಾರೆ. ಅವರ ಮನೆಗೆ ಹದಿನಾಲ್ಕು ಜನ ಭದ್ರತಾ ಸಿಬ್ಬಂದಿ ಇದು ಅವರ ವಾಹನದ ಹಿಂದೆ- ಮುಂದೆ ಯಾವಾಗಲೂ 'ಕ್ಯೂ' ಇರುತ್ತದೆ. ಪ್ರತಿ ಗಂಟೆಗೊಮ್ಮೆ ಅವರ ಬಗ್ಗೆ ಎಸ್.ಪಿ.ಯವರಿಗೆ ರಿಪೋರ್ಟ್ ಹೋಗಬೇಕು. ಆ ರಿಪೋರ್ಟ್ ಏನೆಂದರೆ 'ಮಹನೀಯರು ಇಂತಹ ಕಡೆ ಹೋಗುತ್ತಿದ್ದಾರೆ'ಂಬುದು. ಇಷ್ಟೆಲ್ಲಾ ವ್ಯವಸ್ಥೆಯಿರುವಾಗ ಇಲಾಖೆಯಲ್ಲಿರುವ ಅಸಿಸ್ಟೆಂಟ್ ರಿಜಿಸ್ಟ್ರಾರ್, ಜಾಯಿಂಟ್ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್ ಅವರು ಅವರಿಗೆ ನೋಟೀಸ್ ಅನ್ನು ತಲುಪಿಸುವುದಕ್ಕಾಗುವುದಿಲ್ಲವೇ? ಎರಡು ತಿಂಗಳುಗಳಿಂದ ಒಂದು ನೋಟೀಸ್ ಜಾರಿಗೊಳಿಸುವುದಕ್ಕೆ ಆಗಿಲ್ಲವೆಂದು ಬರೆದಿದ್ದಾರೆ. ಇದು ಸಾಧ್ಯವಾಗುವುದಿಲ್ಲವೆ? ನೋಟೀಸ್ ಏಕೆ ಜಾರಿಗೊಳಿಸಿಲ್ಲ? ಈಗ ಮತ್ತೊಂದು ತಿಂಗಳು ಸಮಯಾವಕಾಶ ಕೊಡಲಾಗಿದೆ. ಇಂತಹ ಅಧಿಕಾರಿಗಳನ್ನು ಇಟ್ಟುಕೊಂಡು ದೇಶಕ್ಕೆ ಉತ್ತಮ ಆಡಳಿತ. ನ್ಯಾಯ ಕೊಡುತ್ತೀರಾ? ಜನರು ನಿಮ್ಮನ್ನು ಮೆಚ್ಚಿಕೊಳ್ಳುತ್ತಾರೆಯೇ? ರಾತ್ರಿ ಹೊತ್ತು ನೀವು ಮಲಗುವುದಕ್ಕಿಂಥ ಮುಂಚೆ 'ನಾನು

ಈ ದಿವಸ ಏನೇನು ಕೆಲಸ-ಕಾರ್ಯಗಳನ್ನು ಮಾಡಿದ್ದೇನೆ' ಎಂಬ ಪ್ರಶ್ನೆ ನಿಮಗೆ (ಸಹಕಾರ ಸಚಿವರು) ಹೊಳೆಯುವುದಿಲ್ಲವೇ? ಹೊಳೆದರೆ ಏಕೆ ಈ ರೀತಿ ಆಗುತ್ತಿದೆ?

ಉಪಾಧ್ಯಕ್ಷರು :— ತಮಗೆ ಇನ್ನೂ ಹೆಚ್ಚಿಗೆ ಸಮಯ ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ :— ಪ್ರಸ್ತಾಪಿಸಬೇಕಾಗಿರುವ ವಿಷಯ ಇನ್ನು ಕೆಲವು ಇದ್ದು, ಮೂರು ಜಿಲ್ಲೆಗಳ ರೈತರಿಗಾಗಿರುವ ಅನ್ಯಾಯದ ಕುರಿತು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು :— ಸದನದ ನಿಯಮಾವಳಿ ಇದ್ದು, ಅದರ ಪ್ರಕಾರ ತಾವು ನಡೆದುಕೊಳ್ಳಬೇಕಾಗುತ್ತದೆ. ಇಡೀ ದಿವಸ ಒಂದು ವಿಷಯದ ಮೇಲೆ ಚರ್ಚಿಸುವುದಕ್ಕಾಗುತ್ತದೆಯೇ ತಾವು ನಿಯಮಗಳಿಗೊಳಪಟ್ಟು ವರ್ತಿಸಬೇಕಾಗುತ್ತದೆ. ಆ ಕುರಿತು ಸ್ಪಷ್ಟೀಕರಣ ಬೇಕಿದ್ದರೆ ಮಂತ್ರಿಗಳು ಕೊಡುತ್ತಾರೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಅಧಿಕಾರದಲ್ಲಿದ್ದಾಗ ನೀವು ಎಷ್ಟು ವರ್ಷಗಳ ಕಾಲ ಮಂತ್ರಿಗಳಾಗಿದ್ದೀರೆಂದು ಜನರು ಲೆಕ್ಕಕ್ಕೆ ತೆಗೆದುಕೊಳ್ಳುದಿಲ್ಲ. ಮಂತ್ರಿಗಳಾಗಿದ್ದಾಗ ಹೇಗಿದ್ದೀರಿ? ಹೇಗೆ ನಡೆದುಕೊಂಡಿರಿ? ಯಾವ ರೀತಿ ಮಾದರಿಯಾಗಿದ್ದೀರಿ? ಎಷ್ಟು ಜನರಿಗೆ ಉಪಕಾರವೆಸಗಿದ್ದೀರಿ ಎಂಬುದನ್ನು ಜನರು ಪರಿಗಣಿಸುತ್ತಾರೆ. ಆದುದರಿಂದ, ತಾವು ತಪಿತಸ್ಥರನ್ನು ಹಿಡಿದು ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಿ, ಇನ್ನು ಕೆ.ಎಂ.ಎಫ್. ಕುರಿತು ಹೇಳುವುದಾದರೆ, ಅದೊಂದು ದೊಡ್ಡ ಕರ್ಮಕಾಂಡ.

ಉಪಾಧ್ಯಕ್ಷರು :— ಈ ಕುರಿತು ಇನ್ನೂ ಹೆಚ್ಚಿಗೆ ಬೆಳೆಸುವುದು ಬೇಡ. ಇಲ್ಲಿ ತಮ್ಮ ಮಾತನ್ನು ಮುಕ್ತಾಯಗೊಳಿಸಬೇಕು.

ಶ್ರೀ ಕೆ.ಹೆಚ್. ಹನುಮೇಗೌಡ :— ತಮಗೆ ಒಂದು ವಿಷಯ ಹೇಳುವುದಾದರೆ, ಇದರ ರಗಳೇ ಬೇಡವೆಂದುಕೊಂಡು ಯಾರಿಗೆ ಯಾರೋ ದಾನ ಕೊಟ್ಟಂತೆ ಸುಮ್ಮನೆ ದಾನ ಕೊಟ್ಟುಬಿಡಿ. ಬಡಪಾಯಿಗಳಾದವರು ಷೇರಿನ ಹಣ ಹೂಡಿ ಸಂಸ್ಥೆಯನ್ನು ಕಟ್ಟಿದ್ದು, ಅಲ್ಲಿ ಕೊಟ್ಯಾಂತರ ರೂಪಾಯಿಗಳಿರುವುದರಿಂದ ಇವೆಲ್ಲಾ ರಗಳೆ ಏಕೆ? ನಾವು ಇಲ್ಲಿಗೆ ಬಂದು ಬಡಿದುಕೊಳ್ಳುವುದು ಬೇಡ. ಬದಲಿಗೆ ಅವರ ಸ್ನೇಹಿತರಾದವರು, ಅವರಿಗೆ ಮೆಚ್ಚುಗೆಯಾಗಿರುವುವವರೆಲ್ಲರೂ ಸೇರಿಕೊಂಡು ಕಂಪನಿ ಮಾಡಿಕೊಂಡು ಚೆನ್ನಾಗಿ ದುಡ್ಡು ಮಾಡಿಕೊಳ್ಳುವುದಕ್ಕೋಸ್ಕರ ದಾನ ಕೊಡುತ್ತೀರಾ? ದಾನ ಕೊಡುವುದಿದ್ದರೆ ಕೊಡಿ, ಇಲ್ಲದಿದದ್ದರೆ ಯಾರು ತಪ್ಪೆಸಗಿದ್ದಾರೋ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಂಡು ಒದ್ದು ಒಳಗೆ ಹಾಕಿ. ಆ ಸಂಸ್ಥೆಯಲ್ಲಿ ಮೊದಲು ಹನುಮೇಗೌಡರು ಇದ್ದರೆಂದು ನನ್ನ ಬಗ್ಗೆ ಹೇಳಿದರು. ಆ ಕುರಿತು ನಾನು ಹೇಳುವುದಾದರೆ, ನಾನು ಎರಡೂವರೆ ವರ್ಷಗಳ ಕಾಲ ಆ ಸಂಸ್ಥೆಗೆ ಪ್ರೆಸಿಡೆಂಟ್ ಆಗಿದ್ದು, ಆ ಅವಧಿಯಲ್ಲಿ

ಒಂದು ಲೀಟರ್‌ನಷ್ಟು ಹಾಲನ್ನು ಮನೆಗೆ ತೆಗೆದುಕೊಂಡು ಹೋಗಿ ಉಪಯೋಗಿಸಿದ್ದರೆ, ನಾನು ಮಂಜುನಾಥ ಸ್ವಾಮಿ ಮೇಲೆ ಆಣೆಯಿಟ್ಟು ಹೇಳುತ್ತೇನೆ: 'ನನ್ನ ವಂಶ ಬದುಕುವುದು ಬೇಡ'. ಎರಡನೆಯದಾಗಿ, ನನಗೆ ಒಂದು ಹೊಸ ಕಾರು ಕೊಟ್ಟಿದ್ದರು. ಕೇವಲ ನಾಲ್ಕು ದಿವಸಗಳ ಕಾಲ ಮಾತ್ರ ಅದನ್ನು ನಮ್ಮ ಮನೆ ಹತ್ತಿರ ತೆಗೆದುಕೊಂಡು ಹೋಗಿದ್ದು ಜ್ಞಾಪಕ. ಉಳಿದ ದಿವಸಗಳಲ್ಲಿ ಕಾರನ್ನು ಕಛೇರಿ ಬಳಿಯೇ ನಿಲ್ಲಿಸಿ ಮನೆಗೆ ನಡೆದುಕೊಂಡು ಹೋಗಿದ್ದೇನೆ. ಇನ್ನು ಟಿ.ಎ. ತೆಗೆದುಕೊಂಡಿಲ್ಲದಿರುವುದಕ್ಕೆ ದಾಖಲೆಗಳಿವೆ.

ಶ್ರೀ ಸಿ.ಬಿ. ಸುರೇಶ್ ಬಾಬು :— ಉಪಾಧ್ಯಕ್ಷರೇ, ಅವರು ತಪ್ಪು ಮಾಹಿತಿ ಕೊಡುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಹೆಚ್. ಹನುಮೇಗೌಡ :— ಅವರು (ಚೆನ್ನಿಗಪ್ಪ) ಮತ್ತು ನಾನು, ಇಬ್ಬರೂ ಧರ್ಮಸ್ಥಳಕ್ಕೆ ಹೋಗಿ ಪ್ರಮಾಣ ಮಾಡೋಣ.

ಶ್ರೀ ಸಿ. ಚೆನ್ನಿಗಪ್ಪ :— ಹಾಗೆಯೇ ಆಗಲಿ, ಇಬ್ಬರೂ ಹೋಗಿ ಪ್ರಮಾಣ ಮಾಡೋಣ.

ಶ್ರೀ ಕೆ.ಹೆಚ್. ಹನುಮೇಗೌಡ :— ರಂಗನಾಥ್‌ರವರೆ, ತಾವು ಸಹ ಹಿಂದೆ ಸಹಕಾರ ಸಚಿವರಾಗಿದ್ದವರು. ನಾನು ಎರಡೂವರೆ ವರ್ಷಗಳ ಕಾಲ ಆ ಸಂಸ್ಥೆಯಲ್ಲಿ ನಿರ್ದೇಶಕನಾಗಿದ್ದೆ. ಆ ಕುರಿತು ದಾಖಲೆಗಳಿವೆ. ನಾನು ರಾಜೀನಾಮೆ ಕೊಡುವ ಕೊನೆಯ ದಿವಸದಂದು ಅಲ್ಲಿದ್ದ ಶ್ರೀನಿವಾಸ್ ಎಂಬುವವರು 'ಹನುಮೇಗೌಡರೇ, ಸ್ಯಾಂಪಲ್‌ಗೆ ಇರಲಿ' ಎಂದು 320 ರೂಪಾಯಿಗಳ ಕೊನೆಯ ಒಂದು ತಿಂಗಳ ಟಿ.ಎ. ಕೊಡಿಸಿದ್ದು ಜ್ಞಾಪಕ. ಅದಕ್ಕಿಂತ ಮುಂಚಿತವಾಗಿ ನಾನು ಟಿ.ಎ. ತೆಗೆದುಕೊಂಡಿದ್ದರೆ, ಅಲ್ಲಿಂದ ಒಂದು ಕೆ.ಜಿ. ತುಪ್ಪವನ್ನಾಗಲಿ, ಹಾಲನ್ನಾಗಲಿ ತೆಗೆದುಕೊಂಡು ಹೋಗಿ ದುರುಪಯೋಗಪಡಿಸಿಕೊಂಡಿದ್ದರೆ ನಾನು ದೇವರಲ್ಲಿ ನಂಬಿಕೆ ಇಟ್ಟಿರುವವನಾದ್ದರಿಂದ ಆತನೇ ಅದಕ್ಕೆಲ್ಲಾ ಸಾಕ್ಷಿ.

ಉಪಾಧ್ಯಕ್ಷರು :— ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಸಾಕಷ್ಟು ಚರ್ಚೆ ಆಗಿದೆ.

ಶ್ರೀ ಕೆ.ಹೆಚ್. ಹನುಮೇಗೌಡ :—ಮಾನ್ಯ ಅಧ್ಯಕ್ಷರೇ, ಅಲ್ಲಿ ನಡೆದಿರತಕ್ಕಂಥ ಅವ್ಯವಹಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಅವರು ಎಲ್ಲಾ ಕಾನೂನು ಕಟ್ಟಳೆಗಳನ್ನು ವೈಲೇಟ್ ಮಾಡಿದ್ದಾರೆ. ಇಂತಹ ಯೂನಿಯನ್‌ಗಳು ಅಧಿಕಾರದಲ್ಲಿರಲು ನಾಲಾಯಕ್ ತಕ್ಷಣ ಆಕ್ಷನ್ ತೆಗೆದುಕೊಳ್ಳಿ. ಅಕಸ್ಮಾತ್ ಏನಾದರೂ ನ್ಯಾಯವಾಗಿದ್ದರೆ

ಅವರಿಗೆ ಭಾರತ ರತ್ನ ಕೊಡಿಸಿ. ಆದರ ಜೊತೆಗೆ ಅವರಿಗೆ ದಾನ ಕೊಟ್ಟುಬಿಡಿ. ಇದರ ಮೇಲೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇದು ತಕ್ಷಣ ಆಗಬೇಕು. ಡಿಲೇ ಮಾಡಿದರೆ ಅವರು ರೆಕಾರ್ಡ್ ತಿದ್ದಿ ಅವರ ಕೈಯಲ್ಲಿ ಇವರ ಕೈಯಲ್ಲಿ ಫೋನ್ ಮಾಡಿಸಿ ಕೊಂಡು ಅಯ್ಯೋ ಪಾಪ ಎಂದರೆ ನಾನು ಒಪ್ಪುವುದಿಲ್ಲ. ತಾವು ಈ ಬಗ್ಗೆ ನ್ಯಾಯವಾಗಿ ಹೇಳದಿದ್ದರೆ ನಾನು ಇಲ್ಲಿ ಧರಣಿ ಮಾಡುತ್ತೇನೆ. ಇಡೀ ರಾಜ್ಯದಲ್ಲಿ ಚಳುವಳಿ ಮಾಡಿ ರೈತರು ಇರುವ ಜಾಗದಲ್ಲಿ ಹೋರಾಟ ಮಾಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :— ಮಾನ್ಯ ಉಪಾಧ್ಯಕ್ಷರೇ, ಸುಮಾರು ಹಿಂದೆಯೇ ಮಾನ್ಯ ಸದಸ್ಯರಾದ ಹನುಮೇಗೌಡರು ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದರು. ಆಗ ಸಹ ಇದೇ ರೀತಿಯಲ್ಲಿ ಪರಿಸ್ಥಿತಿ ಉದ್ವೇಕಕ್ಕೆ ಹೋಗಿತ್ತು. ನನ್ನ ಮನಸ್ಸಿಗೆ ನೋವಾಗುವಂತಹ ಕೆಲವು ಮಾತುಗಳನ್ನು ಮಾನ್ಯ ಹನುಮೇಗೌಡರು ಹೇಳಿದರು. ನಾನು ಅದಕ್ಕೆ ರಿಆಕ್ಟ್ ಮಾಡುವುದಕ್ಕೇ ಹೋಗಲಿಲ್ಲ. ಅವರು ಹೇಳಿದರು ನೀವು ಶಾಮೀಲಾಗಿದ್ದೀರಿ ಎಂದು. ನಾನು ಏಕೆ ಅವರ ಜೊತೆ ಶಾಮೀಲಾಗೋಣ? ಅವಕಾಶ ಬಂದಂತಹ ಸಂದರ್ಭದಲ್ಲಿ ಸರ್ಕಾರ ಬಂದಾಗ ಇವರು ಇದನ್ನು ಪ್ರಸ್ತಾವನೆ ಮಾಡಿದಾಗ ವಿಚಾರಣೆ ಮಾಡಿದ್ದೇವೆ, ನಮಗೆ ದಿನಾಂಕ 2-12ಕ್ಕೆ ಅರ್ಜಿ ಬಂತು. ಆಗ ತಕ್ಷಣ ವರದಿ ತರಿಸಿಕೊಂಡೆವು. ದಿನಾಂಕ 6-4ಕ್ಕೆ ನಿಯಮ 64ರ ಪ್ರಕಾರ ವಿಚಾರಣೆ ಮಾಡಲು ಆಜ್ಞೆ ಮಾಡಿದೆವು. ದಿನಾಂಕ 28-2ಕ್ಕೆ ವಿಚಾರಣಾ ವರದಿ ಬಂತು. ಅವರು ಮಾಡಿದ್ದು ಸರಿ ಎಂದು ನಾವು ಎಲ್ಲಿಯಾದರೂ ಸಮರ್ಥನೆ ಮಾಡಿ ಕೊಂಡಿದ್ದೇವೆಯೇ? ನಾವು ಒಂದು ವೇಳೆ ಸಮರ್ಥನೆ ಮಾಡಿಕೊಂಡಿದ್ದರೆ ಆಗ ನೀವು ನಮ್ಮ ಮೇಲೆ ಆರೋಪ ಮಾಡಬಹುದು. ನಾವು ಪ್ರತಿಯೊಂದು ಸಂದರ್ಭದಲ್ಲಿಯು ನೀವು ನಮ್ಮ ಮೇಲೆ ಆರೋಪ ಮಾಡಬಹುದು. ನಾವು ಆ ಯೂನಿಯನ್‌ಗೆ ಹೇಳಿದ್ದೇವೆ. ಅಲ್ಲಿ ರೋಸ್ಟರ್ ಮಿಸ್‌ಯೂಸ್ ಆಗಿರುವುದು ನಿಜ. ಕಮಿಟಿ ಮಿಸ್‌ಯೂಸ್ ಆಗಿರುವುದು ನಿಜ. ಕಾನೂನಿಗೆ ವಿರುದ್ಧವಾಗಿ ಕಮಿಟಿ ಫಾರ್ಮೇಷನ್ ಆಗಿರುವುದು ನಿಜ. ಸುಮಾರು 18 ಜನರ ಎಂಪ್ಲಾಯ್ ಮೆಂಟ್ ತೆಗೆದುಕೊಳ್ಳಬೇಕಾದರೆ 27 ಜನರನ್ನು ತೆಗೆದುಕೊಂಡಿರುವುದು ನಿಜ. ಈ ರೀತಿ ಬೇಕಾದಷ್ಟು ಆಗಿದೆ. ಇವತ್ತು ನಾವು ಅವರಿಗೆ ಯಾವ ಸಂದರ್ಭದಲ್ಲಿಯು ರಕ್ಷಣೆ ಕೊಡುವಂತಹ ವಿಚಾರಕ್ಕೆ ಹೋಗಿಲ್ಲ. ಆದರೆ ಏನು ಮಾಡುತ್ತೀರಿ? ಇರುವ ನಿಯಮಗಳ ಪ್ರಕಾರ ನಾವು ಕೆಲಸ ಮಾಡಬೇಕಾಗುತ್ತದೆ. ಅದನ್ನು ಮಾಡಿದರೆ ಇದರಲ್ಲಿ ರಾಜಕಾರಣ ಮಾಡುತ್ತೀರಿ ಎಂದು ಹೇಳುತ್ತೀರಿ. ನೀವು ಅಧಿಕಾರ ಇದೆ ಎಂದು ಹೇಳಿ ದುರುಪಯೋಗ ಮಾಡಿಕೊಳ್ಳುತ್ತೀರಿ ಅಂತ ಹೇಳುತ್ತಾರೆ. ಮೊನ್ನೆ ಹೇಳಿದರು ನಮ್ಮ ಸ್ನೇಹಿತರು ಪಾಪ. ಚನ್ನಿಗಪ್ಪನವರು ಬಹಳ ಒಳ್ಳೆಯ ವಿಚಾರವನ್ನು ಈಗ ಹೇಳಿದರು. ತನಿಖೆ ಆಗಬೇಕು, ಕ್ರಮ ಆಗಬೇಕೆಂದು ಹೇಳಿದರು. ಯಾವ ತರಹದ ತನಿಖೆ ಆಗಬೇಕು? ಮೊನ್ನೆ ತಾವು ತುಮಕೂರು ಡಿಸಿಸಿ ಬ್ಯಾಂಕ್ ವಿಚಾರದಲ್ಲಿ ರಾಜೀನಾಮ

ಕೊಡುತ್ತೇವೆ, ಈ ಸರ್ಕಾರ ಒಂದೂವರೆ ಕೋಟಿ ರೂಪಾಯಿಗಳು ಲೂಟಿ ಮಾಡಿಬಿಟ್ಟಿದ್ದೀರಿ, ನೀವು ಶಾಮೀಲಾಗಿದ್ದೀರಿ, ಇಲ್ಲದಿದ್ದರೆ ನಾನು ರಾಜೀನಾಮೆಯನ್ನು ಕೊಟ್ಟುಬಿಡುತ್ತೇನೆಂದು ಹೇಳಿದರು. ತಮಗೆ ಈ ತನಿಖೆ ಬೇಕಾ ಅಥವಾ ಇಲ್ಲಿ ಎಲ್ಲೋ ಒಂದು ಕಡೆ ಪ್ರಾಮಾಣಿಕತೆಯಿಂದ ನಡೆಯುತ್ತಿದೆಯಲ್ಲಾ ಈ ತರಹದ ತನಿಖೆ ಬೇಕಾ ಅಂತ ಹೇಳಬೇಕಾಗುತ್ತದೆ. ಏಕೆಂದರೆ ಸರ್ಕಾರ ಅದಕ್ಕೆ ಉತ್ತರ ಕೊಡುತ್ತಿದೆ...

ಶ್ರೀ ಸಿ. ಚೆನ್ನಿಗಪ್ಪ:— ಮಾನ್ಯ ಅಧ್ಯಕ್ಷರೇ, ಸರ್ಕಾರ ಯಾವುದೇ ರೀತಿಯ ತನಿಖೆಯನ್ನು ಮಾಡಬಹುದು. ಅವರು ತುಮಕೂರದ್ದು ಮಾಡಲಿ ಇದರದ್ದು ಮಾಡಲಿ ಸಂತೋಷ. ಅದಕ್ಕೆ ನಾವು ಅಡ್ಡ ಬರುವುದಿಲ್ಲಯ.

ಶ್ರೀ ಡಿ.ಕೆ. ಶಿವಕಮಾರ್:— ಮಾನ್ಯ ಅಧ್ಯಕ್ಷರೇ, ಅವರ ಜಿಲ್ಲೆಯವರು ಆ ಜಿಲ್ಲೆಯ ವಿಚಾರ ಹೇಳುತ್ತಿದ್ದಾರೆ. ಈ ವಿಚಾರ ಒಂದು ಸೀರಿಸ್ ಆಫ್ ವಿಚಾರ ಇದೆ. ತಾವು 18 ಜನರಿಗೆ ಕಾಲ್‌ಪರ್ ಮಾಡಿದರೆ 27 ಜನರನ್ನು ತೆಗೆದುಕೊಳ್ಳಿ ಎಂದು ಯಾರಾದರೂ ಹೇಳುತ್ತಾರಾ? ನಾನು ಒಂಜು ಸಣ್ಣ ಉದಾಹರಣೆ ಕೊಡುತ್ತೇನೆ. ನಿಮ್ಮದೆಲ್ಲಾ ದುಡ್ಡು ನಾಲ್ಕೂವರೆ ಕೋಟಿ ರೂಪಾಯಿ ಎಲ್ಲಾ ಯೂನಿಯನ್‌ಗಳು ಒಂದು ಪೌಂಚ್ ಫ್ಯಾಕ್ಟರಿ ಮಾಡಬೇಕೆಂದು ತೀರ್ಮಾನ ಮಾಡುತ್ತಾರೆ. ಒಂದು ಫ್ಯಾಕ್ಟರಿ ಇನಾಗರೇಷನ್ ಆಗುತ್ತದೆ ಇವತ್ತು. ನಾಳೆ ಬೆಳಗ್ಗೆ ಶಿವಪ್ಪನವರಿಗೆ ನಾನು ಲೀಸ್‌ಗೆ ಕೊಟ್ಟುಬಿಡುತ್ತೇನೆ. ಅದಕ್ಕೆ ಸರ್ಕಾರ ಅನುಮತಿ ಏನೂ ಇಲ್ಲ. ಆ ಫ್ಯಾಕ್ಟರಿ ಒಂದು ವರ್ಷಕ್ಕೆ ಒಂದೂವರೆ ಕೋಟಿ ರೂಪಾಯಿಗಳು ಲಾಸ್ ಆಗುತ್ತದೆ. ಆ ಲಾಸನ್ನು ಈ ಯೂನಿಯನ್ ಆಳವಡಿಸುತ್ತದೆ. ನಾನು ಇದು ಒಂದು ಉದಾಹರಣೆ ಹೇಳಿದೆ ಅಷ್ಟೇ. ಒಂದೊಂದಾಗಿ ಬಿಡಿಸಿ ಬಿಡಿಸಿ ಹೇಳಿದರೆ ದೊಡ್ಡ ಚರಿತ್ರೆ ಇದೆ. ಅದನ್ನು ನೀವು ಏಕೆ ಸಮರ್ಥನೆ ಮಾಡಿಕೊಳ್ಳುತ್ತೀರಿ? ಅವರಿಗೆ ನೋವು ಇದೆ ಅವರು ಮಾತನಾಡುತ್ತಾರೆ. ಕಾನೂನು ಪ್ರಕಾರ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ನಾವು ಕೈಗೊಳ್ಳುತ್ತೇವೆ. ಇಲ್ಲಿ ಹಾಲು ಮಿಕ್ಸ್ ಆಗಿರುವುದು, ಮತ್ತೊಂದು ಹೇಳಿಕೊಂಡು ಕುಳಿತುಕೊಂಡರೆ ನಮ್ಮ ಕೆಎಂಎಫ್ ಮರ್ಯಾದೆಯನ್ನು ನಾರು ಕಳೆದುಕೊಂಡಂತೆ ಆಗುತ್ತದೆ. ಇಲ್ಲಿ ರೈತ ಸಮುದಾಯದ ಮರ್ಯಾದೆಯನ್ನು ನಾವು ಕಳೆದುಕೊಂಡಂತೆ ಆಗುತ್ತದೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ನಾನು ಇಲ್ಲದೇ ಇರುವಾಗ ಅವರು ಏನೇನೋ ಮಾತನಾಡಿದರು. ರಾಜೀನಾಮೆ ಕೊಟ್ಟುಬಿಡುತ್ತೇನೆ ಅಂತ ಏನೇನೋ ಹೇಳಿದರು....

ಶ್ರೀ ಸಿ. ಚೆನ್ನಿಗಪ್ಪ:— ಮಾನ್ಯ ಅಧ್ಯಕ್ಷರೇ, ತುಮಕೂರು ವಿಷಯವಾಗಿ ಮಾನ್ಯ ಮಂತ್ರಿಗಳು ಆದೇಶ ಮಾಡಿದ್ದಾರೆ. 5 ಕೋಟಿ ರೂಪಾಯಿಗಳ ಲಾಸ್‌ನಲ್ಲಿದೆ ಅದಕ್ಕೆ ತಾವು ಅಪಾಯಿಂಟ್‌ಮೆಂಟ್ ಮಾಡಬಾರದು ಎಂದು ಆದೇಶ ಹೋಗಿದೆ.

ಶ್ರೀ ಡಿ.ಕೆ ಶಿವಕುಮಾರ್:— ತಾವು ಏನು ಹೇಳಿದಿರಿ, ಒಂದೂವರೆ ಕೋಟಿ ರೂಪಾಯಿ ಆಗಿದೆ ಅದರಲ್ಲಿ ಮಂತ್ರಿಗಳು ಶಾಮೀಲಾಗಿದ್ದಾರೆಂದು ಹೇಳಿದಿರಿ; ಇಲ್ಲಿ ಎಷ್ಟು ಶಾಮೀಲಾಗಿದೆ ಎಂದು ನಾನು ಹೇಳಬೇಕೆ? ಅವರು ಏನು ಹೇಳಿದರು ಗೊತ್ತಾ ನಿಮಗೆ?

ಶ್ರೀ ಸಿ. ಚೆನ್ನಿಗಪ್ಪ:— ನಾನು ಮಂತ್ರಿಗಳ ಬಗ್ಗೆ ಮಾತನಾಡಲಿಲ್ಲ. ನಾನು ಹೇಳಿದ್ದು ಇಷ್ಟೇ? ನಮ್ಮ ಜಿಲ್ಲೆಯಲ್ಲಿ ಅನ್ಯಾಯವಾಗಿ ಅಪಾಯಿಂಟ್‌ಮೆಂಟ್ಸ್ ಮಾಡುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ನಮ್ಮ ಡೈರೆಕ್ಟರ್ಸ್ ಹೇಳುತ್ತಾರೆ ಅನ್ಯಾಯ ಆಗಿದೆ ಎಂದು. ನಾನು ಮಂತ್ರಿಗಳಿಂದ ಆಗಿದೆ ಎಂದು ಹೇಳಿದ್ದೇನೆಯೇ? ದಯಮಾಡಿ ತಾವು ಅದನ್ನು ವಹಿಸಿಕೊಳ್ಳಬಾರದು?

ಶ್ರೀ ಡಿ.ಕೆ ಶಿವಕುಮಾರ್:— ಅವರು ಏನು ಹೇಳುದರು ಗೊತ್ತಾ? ಪ್ರಮೋಷನ್ ಕೊಟ್ಟಿದ್ದೀರಿ ಎಂದು ಹೇಳಿದರು. ಇನ್ನೂ ಅವರಿಗೆ ಪ್ರೊಬೇಷನರಿ ಪಿರಿಯಡ್ ಡಿಕ್ಲೇರ್ ಆಗಿಲ್ಲ 25 ಜನರನ್ನು ಓವರ್‌ಲುಕ್ ಮಾಡಿ 26ನೇಯವರಿಗೆ ಪ್ರಮೋಷನ್ ಕೊಡುತ್ತಾರೆ. ಅದನ್ನು ಅವರು ಹೇಳಿದರು. ಇದಕ್ಕೆ ಯಾವ ಶಿಕ್ಷೆ ಮಾಡಬೇಕು? ರೋಸ್ಟರ್ ಫಾಲೋ ಮಾಡಿಲ್ಲ ಯಾವ ಶಿಕ್ಷೆ ಕೊಡಬೇಕು? ಹೇಳಿ ನೀವು. ಅವರು ಏನೋ ಹೇಳುತ್ತಾರೆ, ಸರ್ಕಾರ ಇದೆ. ನಾವು ಉತ್ತರ ಕೊಡುತ್ತೇವೆ. ಮಧ್ಯೆ ತಾವು ಏಕೆ ಇಂಟರ್‌ಫಿಯರ್ ಆಗುವುದಕ್ಕೆ ಹೋಗುತ್ತೀರಿ? ಸುಮ್ಮನೆ ಬಿಡಿ ನಾವು ನಿಮಗೆ ಯಾವುದಲ್ಲಾದರೂ ಇಂಟರ್‌ಫಿಯರ್ ಆಗಿದ್ದೇವೆಯೇ? ಅವರು ಯಾರಾದರೂ ಇಂಟರ್‌ಫಿಯರ್ ಆಗಿದ್ದಾರಾ ಬಿಡಿ. ಇಲ್ಲಿ ಇಷ್ಟೇ ಅಧ್ಯಕ್ಷರೇ, ಬಹಳ ಸಿಂಪಲ್. ನಾವು ಇಲ್ಲಿ ಯಾರಿಗೂ ರಕ್ಷಣೆ ಕೊಡುವಂತಹ ವಿಚಾರ ಇಲ್ಲ. ನಾವು ಅವರಿಗೆ ಕಾನೂನು ಪ್ರಕಾರ ಅವಕಾಶ ಕೊಟ್ಟಿದ್ದೇವೆ. ಇಲ್ಲಿ ಏನಾಗಿದೆ ಅವರಿಗೆ ನೋಟಿಸ್ ಇಷ್ಯೂ ಮಾಡಿದೆವು ನಿಮ್ಮನ್ನು ಏಕೆ ವಜಾ ಮಾಡಬಾರದು ಎಂದು. ಅಧ್ಯಕ್ಷರಿಗೆ, ಪಾಪ ಅವರು ಸಿಗುತ್ತಿಲ್ಲ ನಮ್ಮ ಅಧಿಕಾರಿಗಳಿಗೆ ಅವರು ಸಿಗುತ್ತಿಲ್ಲ. ಪೋಸ್ಟ್ ಹೋಗಿದೆ ನಾಟ್ ಅವೈಲೆಬಲ್ ಎಂದು 3-4 ಸಲ ವಾಪಸ್ ಬಂದಿದೆ. ಅವರು ಸಾರ್ವಜನಿಕರ ಪ್ರತಿನಿಧಿ ಅವರಿಗೆ ಒಂದು ಅವಕಾಶ ಕೊಡಬೇಕೆಂದು ಹೇಳಿ ನೋಟೀಸ್ ಕೊಟ್ಟಿದ್ದೇವೆ. ನಮ್ಮ ಅಧಿಕಾರಿಗಳು ಇದರಲ್ಲಿ ಯಾವ ಕಾರಣಕ್ಕೂ ಶೀಲ್ಡ್ ಆಗಿಲ್ಲ. ಸರ್ಕಾರ ಶೀಲ್ಡ್ ಆಗುತ್ತಿಲ್ಲ. ನಾವು ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುತ್ತೇವೆ. ಅದು ಬಿಟ್ಟು ನಾವು ನಮ್ಮ ಶಕ್ತಿ ಮೀರಿ ಕಾನೂನು ವಿರುದ್ಧವಾಗಿ ಮಾಡಿದರೆ ಅವರು ನಮ್ಮನ್ನು ಸುಮ್ಮನೆ ಬಿಡುವುದಿಲ್ಲ. ಅವರು ರಾಜಕೀಯ ಮಾಡಿದ್ದೀರಿ ಎಂದು ಹೇಳುತ್ತಾರೆ. ನಾವು ರಾಜಕೀಯ ಮಾಡುವುದಕ್ಕೆ ಇಷ್ಟವಿಲ್ಲ. ಆದರೆ ಒಂದು ವಿಚಾರ ಏನೆಂದರೆ ಮಾನ್ಯ ಹನುಮೇಗೌಡರು ಏನು ಹೇಳುತ್ತಿದ್ದಾರೆ ಇದು ರೈತರ ವಿಚಾರ, ಇದು ರೈತರ ಸೊಸೈಟಿ ಇದನ್ನು ಉಳಿಸಬೇಕು,

ಇದನ್ನು ಉಳಿಸುವುದಕ್ಕೆ ನಮ್ಮ ಕೈಯಲ್ಲಿ ಸರ್ಕಾರದ ಕೈಯಲ್ಲಿ ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡುವುದಕ್ಕೆ ನಾವು ಈ ಸಂದರ್ಭದಲ್ಲಿ ಸಿದ್ಧವಾಗಿದ್ದೇವೆ. ಆದರೆ ನಾವು ಅವರಿಗೆ ಶಾಮೀಲಾಗಿದ್ದೇವೆ ಎನ್ನುವ ವಿಚಾರವನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು. ನಾನು ಕಾನೂನು ಚೌಕಟ್ಟಿನೊಳಗೆ ಕೆಲಸ ಮಾಡುತ್ತೇವೆ. ಕಾನೂನು ಚೌಕಟ್ಟು ಬಿಟ್ಟು ಮಾಡುವುದಕ್ಕೆ ಆಗುವುದಿಲ್ಲ. ನಾವು ಯಾರನ್ನೂ ರಕ್ಷಣೆ ಮಾಡುವಂತಹ ಪ್ರಶ್ನೆ ಇಲ್ಲಿ ಇಲ್ಲ.

ಉಪಾಧ್ಯಕ್ಷರು :— ಆಯಿತು.

ಶ್ರೀ ಕೆ.ಹೆಚ್. ಹನುಮೇಗೌಡ :— ಮಾನ್ಯ ಅಧ್ಯಕ್ಷರೇ, ಇವರು ಎರಡು ವರ್ಷಗಳಿಂದ ಈ ರೀತಿ ಹೇಳುತ್ತಿದ್ದಾರೆ.

ಶ್ರೀ ಎ. ದೊಡ್ಡೇಗೌಡ (ಹೊಳೆನರಸೀಪುರ) :— ಮಾನ್ಯ ಅಧ್ಯಕ್ಷರೇ, ಸರ್ಕಾರ ಕ್ರಮ ತೆಗೆದುಕೊಳ್ಳುವುದಾದರೆ ಒಂದು ಕಂಡೀಷನ್ ಆಗಿ ಉತ್ತರ ಬರಲಿ. ಅಲ್ಲಿ ಆಗಿರುವಂತಹ ಅನ್ಯಾಯವನ್ನು ಅವರು ನ್ಯಾಯವಾಗಿ ಹೇಳಿದರು. ಇದು ದೇಶಕ್ಕೆ ಗೊತ್ತಿರತಕ್ಕಂಥ ವಿಷಯ. ಇಲ್ಲಿ ನಮ್ಮ ಜಿಲ್ಲಾ ಮಂತ್ರಿಗಳು ಇದ್ದಾರೆ ಅವರು ಏಕೋ ಸುಮ್ಮನೆ ಇದ್ದಾರೆ. ಮಾನ್ಯ ಸಚಿವರು ಯಾವಾಗ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು.

ಉಪಾಧ್ಯಕ್ಷರು :— ಆದಷ್ಟು ಬೇಗ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಎ. ದೊಡ್ಡೇಗೌಡ :— ನೋಟೀಸ್ ಕೊಟ್ಟಿದ್ದೇವೆ ಅವರು ಸಿಗುತ್ತಿಲ್ಲ ಎಂದು ಹೇಳುವಂತಹ ಉತ್ತರ ಇದು ಮೂರನೇ ಸಲ

ಉಪಾಧ್ಯಕ್ಷರು :— ಇನ್ನೊಮ್ಮೆ ಸ್ಪಷ್ಟವಾಗಿ ಹೇಳಿ.

ಶ್ರೀ ಎ. ಮಂಜು (ಅರಕಲಗೂಡು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಹನುಮೇಗೌಡರು ಸದನಕ್ಕೆ ಪೂರ್ತಿ ಮಾಹಿತಿಯನ್ನು ಕೊಟ್ಟಿಲ್ಲ. ಇದರ ಚರಿತ್ರೆಯನ್ನು ಹೇಳುತ್ತಾ ಹೋದರೆ ಎರಡು ದಿವಸ ಬೇಕು. ಮಾನ್ಯ ಚೆನ್ನಿಗಪ್ಪನವರು ಹೇಳಿದರು. ಈ ಬಗ್ಗೆ ಗಮನ ಸೆಳೆಯುವ ಸೂಚನೆಗೆ ಅವಕಾಶ ಕೊಟ್ಟಂತೆ ಪ್ರತ್ಯೇಕವಾಗಿ ಒಂದು ದಿನ ಕೊಟ್ಟರೆ ಚರ್ಚೆ ಮಾಡೋಣ. ಅದರ ಬಗ್ಗೆ ಚಿಂತೆ ಇಲ್ಲ. ಅವರು ಹೇಳಿದ್ದನ್ನು ಬಿಟ್ಟು ಬೇರೆ ಹೇಳುವುದಕ್ಕೆ ನಾನೂ ಇಚ್ಛಿಸುತ್ತೇನೆ. ಕೆಎಂಎಫ್‌ನಲ್ಲಿ ಮೆಗಾ ಡೈರಿ ಎಂದು ಮಾಡಿದ್ದಾರೆ.

ಉಪಾಧ್ಯಕ್ಷರು :— ಈಗ ತಾವು ಈ ವಿಚಾರದಲ್ಲಿ ಮಾತನಾಡುತ್ತೀರಾ? ಈಗ ನೋಟಿಸ್ ಮಾತ್ರ ಅವಕಾಶ ಕೊಟ್ಟಿದ್ದೇನೆ. ಎಲ್ಲರಿಗೂ ಚರ್ಚೆ ಮಾಡಲು ಅವಕಾಶ ಇಲ್ಲ. ಈ ಗಮನ ಸೆಳೆಯುವ ಸೂಚನೆಯಲ್ಲಿ ನಾನು ಬೇರೆಯವರಿಗೆ ಅವಕಾಶ

ಕೊಡುವುದಿಲ್ಲ. ಈಗಾಗಲೇ ಒಂದು ಗಂಟೆ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಕ್ರಮ ತೆಗೆದುಕೊಳ್ಳಿ ಎಂದು ನಾನು ಹೇಳುತ್ತೇನೆ. ಅದು ಬಿಟ್ಟರೆ ಇಲ್ಲಿ ಹೆಚ್ಚು ಚರ್ಚೆಗೆ ಅವಕಾಶ ಇಲ್ಲ ದಯವಿಟ್ಟು ತಾವು ಕುಳಿತುಕೊಳ್ಳಬೇಕು.

4.10 ಪಿ.ಎಂ.

ಶ್ರೀ ಎ. ಮಂಜು :— ಮಾನ್ಯ ಉಪಾಧ್ಯಕ್ಷರೇ, ನನಗೂ ಕೂಡ ಮಾತನಾಡಲು ಐದು ನಿಮಿಷ ಕಾಲಾವಕಾಶ ಕೊಡಿ.

ಉಪಾಧ್ಯಕ್ಷರು :— ಅದಕ್ಕೆ ನಾನು ಅವಕಾಶ ಕೊಡುವುದಿಲ್ಲ, ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎ. ಮಂಜು :— ಬೇರೆಯವರಿಗೆ ಮಾತನಾಡಲು ಅವಕಾಶ ಕೊಟ್ಟಂತೆ ನಮಗೆ ಏಕೆ ನೀವು ಅವಕಾಶ ಕೊಡುವುದಿಲ್ಲ? ನಾವೂ ಕೂಡ ಮಾತನಾಡಬೇಕು.

ಉಪಾಧ್ಯಕ್ಷರು :— ನಿಮ್ಮಂತೆಯೇ ಎಲ್ಲರೂ ಮಾತನಾಡಲು ಅವಕಾಶ ಕೊಡುವಂತೆ ಕೇಳುತ್ತಾರೆ. ಆದ್ದರಿಂದ ಇದರ ಬಗ್ಗೆ ಚರ್ಚೆ ಮಾಡಲು ನಾನು ಅವಕಾಶ ಕೊಡುವುದಿಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎ. ಮಂಜು :— ಮಾನ್ಯ ಉಪಾಧ್ಯಕ್ಷರೇ, ನೀವು ಇಲ್ಲಿ ತಾರತಮ್ಯ ಮಾಡುತ್ತಿದ್ದೀರಿ. ನೀವು ಸೀನಿಯರ್‌ಗಳಿಗೆ ಅವಕಾಶ ಕೊಟ್ಟು ಜೂನಿಯರ್‌ಗಳಿಗೆ ಮಾತನಾಡಲು ಅವಕಾಶ ಕೊಡುತ್ತಿಲ್ಲ. ನಾವೂ ಮಾತನಾಡಬೇಕು, ನಮಗೂ ಅವಕಾಶ ಕೊಡಿ. ನಾವೂ ಕೂಡ ಇದೇ ಸದನದ ಸದಸ್ಯರಾಗಿದ್ದೇವೆ. ಐದು ನಿಮಿಷ ಮಾತನಾಡಲಿ ಅರಕಾಶ ಕೊಡಬೇಕು...

ಉಪಾಧ್ಯಕ್ಷರು :— ಮಾನ್ಯ ವಿಜಯಕುಮಾರ್ ಶೆಟ್ಟಿಯವರು ಮಂಗಳೂರು ತಾಲ್ಲೂಕಿನ ಕಟೀಲು ದುರ್ಗಾ ಪರಮೇಶ್ವರಿ ದೇವಸ್ಥಾನದ ಆಡಳಿತದಲ್ಲಿ ಉಂಟಾಗಿರುವ ತೊಂದರೆಗಳ ಬಗ್ಗೆ ಮುಜರಾಯಿ ರಾಜ್ಯ ಸಚಿವರು ಗಮನ ಸೆಳೆಯುವಂತೆ ಕೋರುತ್ತೇನೆ. ಮಾನ್ಯ ಸದಸ್ಯರು ಹಾಜರಿಲ್ಲ. ಆದ್ದರಿಂದ ನಾನು ಮುಂದಿನ ಕಾರ್ಯಕ್ರಮಕ್ಕೆ ಹೋಗುತ್ತಿದ್ದೇನೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಮಾನ್ಯ ಉಪಾಧ್ಯಕ್ಷರೇ, ದಯವಿಟ್ಟು ನಾನು ಒಂದು ಮಾತನ್ನು ಹೇಳಿ ವಿಷಯವನ್ನು ಕನ್‌ಕ್ಲೂಡ್ ಮಾಡುತ್ತೇನೆ. ಅದಕ್ಕೆ ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು :— ಆ ವಿಷಯದ ಚರ್ಚೆ ಮುಗಿದಿದೆ; ಮತ್ತೆ ನಾನು ಅದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ನಿಮಗೆ ಮಾತನಾಡಲು ನಾನು ಅವಕಾಶ ಮಾಡಿಕೊಟ್ಟರೆ ಇತರರಿಗೂ ಮಾಡಿಕೊಡಬೇಕಾಗುತ್ತದೆ. ಈಗ ಅನುದಾನ ಬೇಡಿಕೆಗಳ ಮೇಲೆ ಚರ್ಚೆ ಮುಂದುವರೆಯಲಿದೆ. ಮಾನ್ಯ ರಾಜುಗೌಡರು ದಯವಿಟ್ಟು ಈಗ ಮಾತನಾಡಬೇಕು.

೭. ವಿತ್ತೀಯ ಕಾರ್ಯಕಲಾಪಗಳು

2001-2002 ಅನುದಾನ ಬೇಡಿಕೆಗಳ ಮೇಲಿನ ಮುಂದುವರೆದ ಚರ್ಚೆ

+ಶ್ರೀ ಜಿ. ರಾಜುಗೌಡ (ಹನೂರು) :— ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಸದನದ ಮುಂದೆ ಸುಮಾರು 50 ಇಲಾಖೆಗಳ ಬೇಡಿಕೆಗಳು ಚರ್ಚೆಗೆ ಬಂದಿವೆ ಎಲ್ಲಾ ಇಲಾಖೆಗಳ ಬೇಡಿಕೆಗಳ ಬಗ್ಗೆ ಇಲ್ಲಿ ಮಾತನಾಡಲು ಸಾಧ್ಯವಾಗುವುದಿಲ್ಲ. ಕಾಲಾವಕಾಶದ ಕೊರತೆ ಇರುವುದರಿಂದ ನಾನು ಕೆಲವೇ ಕೆಲವು ಇಲಾಖಾ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಲು ಇಚ್ಛಿಪಡುತ್ತೇನೆ. ಮೊದಲನೆಯದಾಗಿ, ಕೃಷಿ ಬಗ್ಗೆ ಮತ್ತು ಕೃಷಿಕರ ಬವಣೆ ಬಗ್ಗೆ ಕೆಲವು ಮಾತುಗಳನ್ನಾಡಬೇಕೆಂದು ನಾನು ಸದನದ ಮುಂದೆ ನಿಂತಿದ್ದೇನೆ. ಜನ ಸಮುದಾಯದಲ್ಲಿ ಅತ್ಯಂತ ನಿಕೃಷ್ಟವಾಗಿರತಕ್ಕಂಥ ವರ್ಗ ಯಾವುದು ಎಂದರೆ, ಅದು ರೈತ ವರ್ಗ. ಸಮಾಜದ ಎಲ್ಲಾ ವರ್ಗಗಳಿಂದಲೂ ಕೂಡ ತಿರಸ್ಕರಿಸಲ್ಪಟ್ಟಂಥ ವರ್ಗ ಕೃಷಿಕ ವರ್ಗ. ಅವನು ಯಾವುದೇ ಇಲಾಖೆಗೆ ಹೋಗಿ ಅವನ ಕೋರಿಕೆ, ಬೇಡಿಕೆ, ಅಹವಾಲುಗಳನ್ನು ಮುಂದಿಟ್ಟಾಗ ಯಾರೂ ಸಹ ಅವನಿಗೆ ಗೌರವ ಕೊಡುತ್ತಿಲ್ಲ. ಬಹುಶ: ಒಬ್ಬ ಕೃಷಿಕ ತನ್ನ ಕೈಲಾದುದಕ್ಕಿಂತ ಹೆಚ್ಚಾಗಿ ಹತ್ತಾರು ಜನಗಳಿಗೆ ಕೆಲಸವನ್ನು ಕೊಟ್ಟು, ದಿನ ಬೆಳಿಗ್ಗೆ ಎದ್ದು ತನ್ನ ಬೆವರನ್ನು ಸುರಿಸಿ ಬೇರೆಯವರ ಹಸಿವನ್ನು ಇಂಗಿಸುವುದಕ್ಕೆ ಪ್ರಯತ್ನ ಪಟ್ಟರೂ ಕೂಡ ಅವನಿಗೆ ಗೌರವ ಇಲ್ಲ. ರೈತ ಎಂಬ ಎರಡಕ್ಷರ ಕಿವಿಗೆ ಬಿದ್ದಾಗ ಏನೋ ಒಂದು ರೀತಿಯ ಮೈಲಿಗೆ ಜನಗಳಿಗೆ ಆಗುತ್ತಿದೆ. ಇದು ಆಗಬಾರದು 'ನೇಗಿಲಯೋಗಿ' ಎಂದು ರೈತನಿಗೆ ನಾವು ಕರೆದರೂ ಕೂಡ ಅವನಿಗೆ ನಿಜವಾಗಿ ಪುರಸ್ಕಾರ ದೊರೆಯುತ್ತಿಲ್ಲ. ರಾಷ್ಟ್ರಕವಿ ಕುವೆಂಪುರವರು ರೈತನ ಬಗ್ಗೆ 'ನೇಗಿಲ ಗೆರೆಯೇ ತೋರುವುದೆನಗೆ ಮುಕ್ತಿಯ ಹಾದಿ' ಎಂಬ ಬಹಳ ಮೇಲ್ಪಟ್ಟದ ಮಾತನ್ನು ಹೇಳಿದ್ದಾರೆ. ಆದರೆ ಅದನ್ನು ಬೇರೆಯವರು ಅರಿತುಕೊಂಡಿಲ್ಲದಿರುವುದು ನಮ್ಮ ದೌರ್ಭಾಗ್ಯವೆಂದೇ ನಾವು ತಿಳಿದುಕೊಳ್ಳಬೇಕಾಗಿದೆ. ಏಕೆ ರೈತನ ಬಗ್ಗೆ ಅವರು ಹೆಚ್ಚು ಗೌರವ ಕೊಟ್ಟರು? ಇರುವ 80 ಕೋಟಿ ಲಕ್ಷ ಜೀವರಾಶಿಗಳಿಗೆ ಅನ್ನ ಕೊಡತಕ್ಕವನು ರೈತ. ಅವನು ಇವತ್ತು ಬಹಳ ಕಷ್ಟ ಪಡುತ್ತಿದ್ದಾನೆ. ರೈತ ಬೆವರು ಸುರಿಸಿ ದುಡಿಯುತ್ತಾನೆ. ತನಗೆ ಲಾಭವಾಗಲೀ, ನಷ್ಟವಾಗಲೀ ಅವನ ದೃಷ್ಟಿಯಿಂದಲೇ ಆತ ತನ್ನ ಕಾಯಕವನ್ನು ಮಾಡುತ್ತಿದ್ದಾನೆ. ಅಂತಹ ರೈತನಿಗೆ ಸಮಾಜದಲ್ಲಿ ಒಳ್ಳೆಯ

ಗೌರವ ಇಲ್ಲ ಎಂದರೆ ನಾವು ಏನು ಮಾಡಲಿಕ್ಕೆ ಸಾಧ್ಯ? ನನ್ನ ಬಗ್ಗೆಯೇ ಒಂದೆರಡು ಮಾತುಗಳನ್ನು ಹೇಳಿಕೊಳ್ಳಲಿಕ್ಕೆ ನಾನು ಇಚ್ಛೆಪಡುತ್ತಿದ್ದೇನೆ. ನಾನು ಒಬ್ಬ ಕೃಷಿಕ. ಸುಮಾರು ಒಂದೂವರೆ ದಶಕಗಳಿಂದ ನಾನು ಈ ಕೃಷಿಯನ್ನು ನಂಬಿದ್ದೇನೆ. ಈ ಕೃಷಿಯ ಮೇಲೆಯೇ ಅವಲಂಬಿತನಾಗಿ ಜೀವನ ಸಾಗಿಸುತ್ತಿದ್ದೇನೆ. ನನಗೆ ಸುಮಾರು 50 ಎಕರೆ ಖುಷ್ಕಿ ಜಮೀನು ಇದೆ, 12 ಎಕರೆ ತರಿ ಜಮೀನು ಇದೆ, 4 ಎಕರೆ ತೆಂಗಿನ ತೋಟ ಇದೆ.4 ಬಾವಿಗಳನ್ನು ಮತ್ತು 4 ಪಂಪ್‌ಸೆಟ್ಟುಗಳನ್ನು ನಾನು ಇಟ್ಟುಕೊಂಡಿದ್ದೇನೆ. ಪ್ರತಿ ವರ್ಷವೂ ವ್ಯವಸಾಯಕ್ಕಾಗಿ ನಾನು ಬಂಡವಾಳವನ್ನು ಹಾಕುತ್ತಲೇ ಇದ್ದೇನೆ. ಆದರೆ ನನ್ನ ಬಂಡವಾಳದಲ್ಲಿ ನನಗೆ ಅರ್ಧ ಭಾಗವೂ ಕೂಡ ಹಿಂದಕ್ಕೆ ಬರುತ್ತಿಲ್ಲ. ಇದರಿಂದಾಗಿ ನಾನು ಬಹಳ ವ್ಯಥೆ ಪಡುತ್ತಿದ್ದೇನೆ. ಮಳೆಯಿಲ್ಲದಂತಹ ಇವತ್ತಿನ ಪರಿಸ್ಥಿತಿಯನ್ನು ಕಳೆದ ಮೂರು ದಶಕಗಳಲ್ಲಿ ನಾನು ಕಂಡಿರಲೇ ಇಲ್ಲ. ಅಷ್ಟೊಂದು ಕನಿಷ್ಟ ಮಳೆ ಈ ಬಾರಿ ಬಿದ್ದಿದೆ. ಅಶ್ವಿನಿ, ಭರಣಿ, ಕೃತಿಕಾ, ರೋಹಿಣಿ, ಮೃಗಶಿರಾ, ಪುನರ್ವಸು ಮತ್ತು ಪುಷ್ಯ ಹೀಗೆ ಸತತವಾಗಿ ಏಳು ಮಳೆಗಳು ಬಂದಿಲ್ಲ. ಹಿಂದೆಂದಿಗಿಂತ ಹೆಚ್ಚು ಕಷ್ಟವನ್ನು ರೈತ ಇವತ್ತು ಪಡುತ್ತಿದ್ದಾನೆ. ನಾನು ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ನಾನು ಇಷ್ಟೊಂದು ಭೂಮಿಯನ್ನು ಹೊಂದಿದ್ದರೂ ಕೂಡ ಲಾಭ ಗಳಿಸುತ್ತಿಲ್ಲ. ಒಂದು ಹೋಟೇಲ್‌ನ ಮುಂದೆ ಬಹಳ ಅಲ್ಪ ಬಂಡವಾಳದಲ್ಲಿ ಯಾರು ಇವತ್ತು ಪಾನ್ ಬೀಡಾ, ಬಾಳೆಹಣ್ಣು ಅಥವಾ ಬೀಡಿ-ಸಿಗರೇಟ್ ಅಂಗಡಿ ಇಟ್ಟುಕೊಂಡು ವ್ಯಾಪಾರ ನಡೆಸುತ್ತಿದ್ದಾರೋ ಅವರಿಗಿಂತ ನನ್ನ ವಾರ್ಷಿಕ ವರಮಾನ ಕಡಿಮೆಯಾಗಿದೆ. ಇದು ಸತ್ಯವಾಗಿರತಕ್ಕಂಥ ವಿಷಯ. ಇದೇಕೆ ಹೀಗೆ ಎಂಬ ಬಗ್ಗೆ ನಾವೆಲ್ಲರೂ ಕೂಡ ಚಿಂತನೆ ಮಾಡಬೇಕಾಗಿದೆ. ಬಹುಶ: ಒಬ್ಬ ರೈತನ ಮನೆಗೆ ಇವತ್ತು ಯಾರೂ ಕೂಡ ಹೆಣ್ಣನ್ನು ಕೊಡುತ್ತಿಲ್ಲ. ರೈತನ ಮನೆಗೆ ಹೆಣ್ಣು ಮಗಳು ಕೊಟ್ಟರೆ ಅವರು ಅಲ್ಲಿ ಬಹಳ ದುಡಿಯಬೇಕು, ಅವಳಿಗೆ ಅಲ್ಲಿ ಬಹಳ ಕಷ್ಟವಿದೆ ಎಂಬ ಕಾರಣದಿಂ ಯಾರೂ ಹೆಣ್ಣನ್ನೂ ಕೊಡುತ್ತಿಲ್ಲ. ರೈತನ ಕುಟುಂಬದ ಹೆಣ್ಣು ಮಕ್ಕಳು ಅವರು ಲಗ್ನವಾಗತಕ್ಕಂಥ ಕಾಲದಲ್ಲಿ ಮತ್ತು ಅವರ ಸಾವಿನ ಕಾಲದಲ್ಲಿ ಮಾತ್ರ ತಲೆ ತುಂಬಾ ಹೂವು ಮುಡಿದುಕೊಳ್ಳತಕ್ಕಂಥಥ ಪರಿಸ್ಥಿತಿ ಇದೆ. ಬಾಕಿ ದಿನವೆಲ್ಲಾ ಅವರು ಕೆಲಸದಲ್ಲೇ ನಿರತಳಾಗಿರುತ್ತಾಳೆ. ಇದಕ್ಕಿಂತಲೂ ನಾನು ನಿಮಗೆ ಎಂತತಹ ಉದಾಹರಣೆ ಕೊಡಲಿ? ಮತ್ತೊಂದು ವಿಷಯವನ್ನು ನಾನು ಇಲ್ಲಿ ಉದಾಹರಣೆ ಮೂಲಕ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಒಬ್ಬ ರೈತ ಮೂರು ವರ್ಷಗಳ ಹಿಂದೆ ಬಹಳ ಚೆನ್ನಾಗಿ ವ್ಯವಸಾಯ ಮಾಡುತ್ತಿದ್ದ. ಸತತವಾಗಿ ಮೂರು ವರ್ಷಗಳ ಕಾಲ ಮಳೆ ಬರಲಿಲ್ಲ, ಆತ ಎಲ್ಲವನ್ನೂ ಮಾರಾಟ ಮಾಡಿದ. ಅವನು ಉಟ್ಟಿದ್ದ ಉಡುಪೆಲ್ಲಾ ಹೋಯಿತು. ಕೊನೆಗೆ ಆತನ ಬಳಿ ಅವನು ಹಾಕಿಕೊಂಡಿರತಕ್ಕಂಥ ನಿಕ್ಕರ್ ಮಾತ್ರ ಉಳಿಯಿತು. ಆತ ದೇಶಾಂತರ ಹೋಗುತ್ತಾ ಶ್ರವಣಬೆಳಗೊಳದ ಹತ್ತಿರ ಹೋದ. ಅಲ್ಲಿ ಗೋಮಟೇಶ್ವರನನ್ನು

ನೋಡಿ ಅವನಿಗೆ ಬಹಳ ಆಶ್ಚರ್ಯವಾಯಿತು. ಬಹುಶ: ಇವನು ನನಗಿಂತ ದೊಡ್ಡ ಜಮೀನ್ದಾರ ಇರಬಹುದು, ಇವನ ಹತ್ತಿರ ನನ್ನ ಹತ್ತಿರ ಇರುವುದು ಕೂಡ ಇಲ್ಲವಲ್ಲಾ ಎಂದು ಎರಡೂ ಕಾಲನ್ನು ತಬ್ಬಿಕೊಂಡು ಅತ್ತನಂತೆ. ಇದಕ್ಕಿಂತ ರೈತನ ಬಗ್ಗೆ ತಮಗೆ ಯಾವ ಉದಾಹರಣೆ ಬೇಕು? ಬಹಳ ಕಷ್ಟದಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ ಏಕೆ ಹೀಗಾಯಿತು ಎಂಬ ಬಗ್ಗೆ ನಾವು ಇವತ್ತು ಯೋಚನೆ ಮಾಡಬೇಕು. 1960ರಲ್ಲಿ ಈ ದೇಶದಲ್ಲಿ ಆಹಾರದ ಕೊರತೆ ಇತ್ತು. 1980ರಲ್ಲಿ ನಾವು ಆಹಾರದ ಕೊರತೆಯನ್ನು ನೀಗಿಕೊಂಡೆವು. ಈಗ ನಮ್ಮಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿದೆ. 'ಹಸಿರು ಕ್ರಾಂತಿ'ಯಿಂದಾಗಿ ಇದು ಸಾಧ್ಯವಾಯಿತು. ರಾಸಾಯನಿಕ ಗೊಬ್ಬರವನ್ನು ಬಳಸಿ ನಮ್ಮ ರೈತ ಕೆಟ್ಟಿದ್ದಾನೆ ಎಂದು ನಾನು ಇವತ್ತು ವಿಧಿಯಿಲ್ಲದೇ ಹೇಳಬೇಕಾಗಿದೆ. ನಾವು ರಾಸಾಯನಿಕ ಗೊಬ್ಬರ ಬಳಸಿದ್ದರಿಂದ ಉತ್ಪತ್ತಿ ಜಾಸ್ತಿಯಾದರೂ ಸತ್ವ ಮಾತ್ರ ಕಡಿಮೆಯಾಯಿತು. ಈ ವರ್ಷ ನಾನು 10 ಕ್ವಿಂಟಾಲ್ ಬೆಳೆಯಬೇಕಾದರೆ ಎಷ್ಟು ರಾಸಾಯನಿಕ ಗೊಬ್ಬರ ಬಳಸುತ್ತೇನೋ, ಮುಂದಿನ ವರ್ಷ ಅದೇ ಜಮೀನಿನಲ್ಲಿ 10 ಕ್ವಿಂಟಾಲ್ ಬೆಳೆಯಬೇಕಾದರೆ ಕಳೆದ ವರ್ಷಕ್ಕಿಂತ ಒಂದೂವರೆಯಷ್ಟು ರಾಸಾಯನಿಕ ಗೊಬ್ಬರವನ್ನು ಬಳಸಬೇಕಾಗುತ್ತದೆ. ಇವತ್ತು ರಾಸಾಯನಿಕ ಗೊಬ್ಬರದ ಬೆಲೆ ತುಂಬಾ ಜಾಸ್ತಿಯಾದವು. ಅವುಗಳನ್ನು ತಡೆಗಟ್ಟತಕ್ಕ ಶಕ್ತಿ ನಮ್ಮಲ್ಲಿ ಇಲ್ಲ. ಅದಕ್ಕೆ ಪರಿಹಾರ ಕಂಡುಹಿಡಿಯತಕ್ಕ ವಿಜ್ಞಾನಿಗಳು ನಮ್ಮಲ್ಲಿಲ್ಲ. ಚೈನಾ ದೇಶದಲ್ಲಿ ಒಂದು ಹೆಕ್ಟೇರ್ ಭೂಮಿಯಲ್ಲಿ 120 ಕ್ವಿಂಟಾಲ್ ಭತ್ತ ಬೆಳೆಯುತ್ತಿದ್ದಾರೆ. ಆದರೆ ಭಾರತದಲ್ಲಿ ಒಂದು ಹೆಕ್ಟೇರಿಗೆ ಕೇವಲ 32 ಕ್ವಿಂಟಾಲ್ ಮಾತ್ರ ಬೆಳೆಯಲಾಗುತ್ತಿದೆ. ಏಕೆ? ನಾವ್ಯಾಕೆ ಹೀಗೆ ಆಗಿದ್ದೇವೆ? ನಾವು ಚೈನಾದಷ್ಟು ಏಕೆ ಬೆಳೆಯಲು ಸಾಧ್ಯವಾಗುತ್ತಿಲ್ಲ? ನಮ್ಮಲ್ಲಿ ಏಕೆ ಸಂಶೋಧನೆಗಳು ಆ ದಿಸೆಯಲ್ಲಿ ಆಗಿಲ್ಲ? ನಮ್ಮ ವಿಜ್ಞಾನಿಗಳು ಎಲ್ಲಿದ್ದಾರೆ? ನಮ್ಮ ಸಂಶೋಧನೆಗೆ ನಾವು ಎಷ್ಟೆಲ್ಲಾ ಹಣವನ್ನು ಖರ್ಚು ಮಾಡುತ್ತಿದ್ದರೂ ಸಹ ನಾವು ಏಕೆ ಅವರ ಮಟ್ಟಕ್ಕೆ ಹೋಗುವುದಕ್ಕೆ ಆಗಿಲ್ಲ? ಜೈವಿಕ ತಂತ್ರಜ್ಞಾನದ ಮುಖಾಂತರವಾಗಿ ನಾವು ಸೃಷ್ಟಿ ಮಾಡಿರತಕ್ಕಂಥ ಬೀಜಗಳಿಗೆ ರೋಗವನ್ನು ತಡೆಯತಕ್ಕಂಥ ಶಕ್ತಿ ಉಂಟೇ ಎಂದರೆ ಇಲ್ಲವೆಂದು ನಾವು ಹೇಳಬೇಕಾಗುತ್ತದೆ. ನಾವು ಬಹಳ ಹಿಂದೆ ಬಿದ್ದಿದ್ದೇವೆ. ದಯಮಾಡಿ ಇದರ ಬಗ್ಗೆ ಮಾನ್ಯ ಕೃಷಿ ಮಂತ್ರಿಗಳು ಉತ್ತರ ಹೇಳಬೇಕು. ನಾವು ಏಕೆ ಅಮೇರಿಕಾದಂತೆ ಸಂಶೋಧನೆ ಮಾಡಲಿಕ್ಕೆ ಆಗಿಲ್ಲ? ನಾವು ಏಕೆ ರೋಗ ರುಜಿನಗಳನ್ನು ತಡೆಯತಕ್ಕಂಥ ಬೀಜಗಳನ್ನು ಅಥವಾ ತಳಿಗಳನ್ನು ಸೃಷ್ಟಿ ಮಾಡಲಿಕ್ಕೆ ಆಗುತ್ತಿಲ್ಲ? ನಮ್ಮ ರಾಸಾಯನಿಕ ಗೊಬ್ಬರದ ಬಳಕೆಯಿಂದ ನಾವು ಹಾಳಾಗಿಲ್ಲವೇ? ನೈಸರ್ಗಿಕ ಗೊಬ್ಬರಗಳಾದ ಹಟ್ಟಿ ಗೊಬ್ಬರ, ಸೊಪ್ಪಿನ ಗೊಬ್ಬರ, ಎರೆಹುಳುವಿನ ಗೊಬ್ಬರ ಬಳಸಿದಾಗ ಎಷ್ಟು ಪೋಷಕಾಂಶಗಳು ಬೀಜಕ್ಕೆ ದೊರೆಯುತ್ತಿದ್ದವೋ ಅಷ್ಟು ಪೋಷಕಾಂಶಗಳು ಇವತ್ತು ರಾಸಾಯನಿಕ ಗೊಬ್ಬರ ಬಳಸಿದಾಗ ಸಸಿಗಳಿಗೆ ದೊರಕುತ್ತಿಲ್ಲ.

ಇವತ್ತು ರಾಸಾಯನಿಕ ಗೊಬ್ಬರದ ಬೆಲೆ ಬಹಳ ಜಾಸ್ತಿಯಾಗಿದೆ. ಇದೇ ರೀತಿ ಬೆಲೆ ಜಾಸ್ತಿಯಾದರೆ ಮುಂದೆ ರೈತ ಕಂಗಾಲಾಗಿ ವ್ಯವಸಾಯವನ್ನೇ ಕೈಬಿಡುವ ಸಂದರ್ಭ ಬರುತ್ತದೆ. ದಯಮಾಡಿ ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ಆದಕ್ಕೆ ಪರ್ಯಾಯವಾಗಿ ಏನು ಮಾಡಬೇಕು ಎಂಬುದನ್ನು ಯೋಚಿಸಬೇಕು. ರೋಗಗಳನ್ನು ತಡೆಯತಕ್ಕಂಥ ತಳಿಗಳನ್ನು ಸೃಷ್ಟಿ ಮಾಡಬೇಕು. ಈ ಬಗ್ಗೆ ಕೃಷಿ ವಿಶ್ವವಿದ್ಯಾನಿಲಯವು ಏನು ಮಾಡುತ್ತಿದೆ ಎಂಬುದನ್ನು ನನಗೆ ತಿಳಿಸಿ. ಅವರು ಬರೀ ವೇತನ ಪಡೆಯುತ್ತಿದ್ದಾರೆಯೇ ಹೊರತು ಏನೊಂದು ಸಂಶೋಧನೆಯನ್ನೂ ಕೂಡ ಮಾಡಿಲ್ಲ. ಅರು ಹೋಸದಾಗಿ ಏನು ಕಂಡಿಹಿಡಿದಿದ್ದಾರೆ? ನಮಗೂ ಚೈನಾ ದೇಶಕ್ಕೂ ಎಷ್ಟೊಂದು ಅಂತರ ಇದೆ. ನಾವು ಯಾವತ್ತು ಹೆಕ್ಟೇರ್‌ಗೆ 120 ಕ್ವಿಂಟಾಲ್ ಬೆಳೆಯುವಂತಾಗುತ್ತದೆ? ವಿಶ್ವ ಮಾರುಕಟ್ಟೆಯ ಪೈಪೋಟಿಗೆ ನಮ್ಮ ರೈತರನ್ನು ನಾವು ಇವತ್ತು ಸಜ್ಜು ಮಾಡಬೇಕಾಗಿದೆ. ಇದಕ್ಕಾಗಿ ಯಾವ ರೀತಿಯ ರೀಸರ್ಚ್ ಮಾಡಲಾಗುತ್ತಿದೆ? ಏನೇನು ಕಾರ್ಯ ಕ್ರಮಗಳನ್ನು ಹಾಕಿಕೊಳ್ಳಲಾಗಿದೆ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುವಾಗ ಹೇಳಬೇಕಾಗುತ್ತದೆ. ನನ್ನ ಚಿಂತೆ ಇಷ್ಟೆ. ರಸಗೊಬ್ಬರ ಹಾಕತಕ್ಕಂಥದ್ದನ್ನು ಕೈಬಿಡಬೇಕು. ಎರೆಹುಳು, ನೈಸರ್ಗಿಕ ರಸಗೊಬ್ಬರ ಹಟ್ಟಿ ಗೊಬ್ಬರವನ್ನು ಮತ್ತು ಸೊಪ್ಪಿನ ಗೊಬ್ಬರವನ್ನು ಹಾಕಿದರೆ, ರೈತರು ಇದನ್ನು ಹೆಚ್ಚಿಗೆ ಉಪಯೋಗ ಮಾಡಿದಾಗ ಅವರ ಭೂಮಿಯ ಸತ್ವವನ್ನು ಸದಾ ಕಾಲ ಕಾಪಾಡುವುದಕ್ಕೆ ಸಾಧ್ಯವಾಗುತ್ತದೆ. ರೋಗಗಳು ಕಡಿಮೆಯಾಗುತ್ತವೆ. ರಸಗೊಬ್ಬರಕ್ಕಿಂತ ಹೆಚ್ಚಿನ ಗೊಬ್ಬರ ಹಾಕಬಹುದು ಅಷ್ಟೆ. ಇದು ಯಾವ ಕಾಲದಲ್ಲಿ ಮಾಡಿರತಕ್ಕಂತಹ ಕಾನೂನು? ಪ್ರಕೃತಿ ವಿಕೋಪಕ್ಕೆ ಒಳಗಾದಾಗ, ಕೀಟ ಬಾಧೆಗಳಿಗೆ ಒಳಗಾದಾಗ, ರೈತರಿಗೆ ಪರಿಹಾರ ಕೊಡುವುದು ಒಂದು ಹೆಕ್ಟೇರ್ ಗೆ 100 ರೂಪಾಯಿ, 200 ರೂಪಾಯಿ ಕೊಡುವುದು ಇದು ಸರಿಯಾ? ಇದು ನ್ಯಾಯವಾ? ಶೇಕಡಾ 80ರಷ್ಟು ಇರುವ ರೈತ ವರ್ಗದ ಬಗ್ಗೆ ನೀವು ತಾತ್ಸಾರ ವಹಿಸಿದರೆ ರೈತ ಹೇಗೆ ಬದಕುವುದಕ್ಕಾಗುತ್ತಧೆ? ಕೊನೆಪಕ್ಷ ಎಕರಿಗೆ 8000 ರೂಪಾಯಿ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತಿದ್ದೇನೆ. ಸಂಶೋಧನೆ ಜಾಸ್ತಿ ಮಾಡಬೇಕು. ಮಣ್ಣಿನ ಪರೀಕ್ಷೆ ಮಾಡಿ, ಯಾವ ರೀತಿಯ ಗೊಬ್ಬರ ಉಪಯೋಗಿಸಿದಾಗ, ಅವನು ಯಾವ ಬೆಳೆ ಬೆಳೆಯುವುದಕ್ಕೆ ಸಾಧ್ಯ ಎಂದು ತಿಳಿಯಬೇಕು. ಇಂದು ಗುಂಡುಸೂಜಿ ತಯಾರು ಮಾಡುವ ಕಾಲದಲ್ಲಿ ಆ ಸೂಜಿಗೆ ಆಗತಕ್ಕಂತಹ ಬೆಲೆ ಅವರ ಶ್ರಮ, ಆಗತಕ್ಕಂತಹ ಖರ್ಚು ಅವೆಲ್ಲವನ್ನೂ ಲೆಕ್ಕ ಹಾಕಿ ಲಾಭ ಮಾಡುವ ಶಕ್ತಿ ಅವರಿಗೆ ಇದೆ. ಆದರೆ ರೈತ ತಾನು ಉತ್ಪಾದನೆ ಮಾಡತಕ್ಕಂತಹ ಪದಾರ್ಥಗಳಿಗೆ ಬೆಲೆ ಕೊಡುವವರು ಯಾರು? ಅವರು ಎಲ್ಲಿದ್ದಾರೆ? ಅದು ಗೊತ್ತಿದ್ದರೆ ಬೆಲೆ ನಿಗದಿ ಮಾಡುವುದು ಸರಿ. ಉತ್ಪಾದನೆ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಿ, ಮಾರಾಟಕ್ಕೆ ಎಲ್ಲಿ ವ್ಯವಸ್ಥೆ ಮಾಡಿದ್ದೀರಿ? ಎಫ್-7 ಬಿಟ್ಟು ಬೇರೆ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಆವರ್ತ ನಿಧಿ 100 ಕೋಟಿ ರೂಪಾಯಿ ಇಟ್ಟುಕೊಂಡಿರುತ್ತೀರಿ, ಅದು ಸಾಲುವುದಿಲ್ಲ.

ಕೊನೆಪಕ್ಷ ಸಾವಿರ ಕೋಟಿ ರೂಪಾಯಿ ಮಾಡುವುದು ಒಳ್ಳೆಯದು. ರೈತ ಬೆಳೆದ ಪದಾರ್ಥಗಳನ್ನು ಮಾರಬೇಕೆಂದು ಇಚ್ಛೆ ಇಲ್ಲದೆ ಇದ್ದರೂ ಕೂಡ ವಿಧಿ ಇಲ್ಲದೆ ಮಾರಬೇಕಾಗುತ್ತದೆ. ಒಬ್ಬ ರೈತ ಹೂವು ತೆಗೆದುಕೊಳ್ಳಬೇಕೆಂದರೆ ಭತ್ತ ಮಾರಬೇಕು. ಒಂದು ಬೆಂಕಿಪೊಟ್ಟಣ ತೆಗೆದುಕೊಳ್ಳಬೇಕಾದರೂ ಭತ್ತ ಮಾರಬೇಕು. ಮನೆಯಲ್ಲಿ ಮದುವೆ ಮುಂಜಿ ಮಾಡಬೇಕಾದರೆ ಭತ್ತ ಮಾರಬೇಕು. ರೈತ ಬೆಳೆದ ಪದಾರ್ಥಗಳನ್ನು ತಾವು ಒತ್ತೆ ಇಟ್ಟುಕೊಂಡು ಅದರ ಮೇಲೆ ಶೇಕಡಾ ಇಂತಿಷ್ಟು ಎಂದು ಧನ ಸಹಾಯ ಮಾಡಿದರೆ ಅವನು ಬೆಲೆ ಬಂದಾಗ ಮಾರಿಕೊಳ್ಳುತ್ತಾನೆ. ಇದಕ್ಕೆ ಅವಕಾಶವಿಲ್ಲ, ಅಂತಹ ಅವಕಾಶ ಕಲ್ಪಿಸಿದ್ದೀರಾ? ಅಂತಹ ವಾತಾವರಣ ನಿರ್ಮಾಣ ಮಾಡಿದ್ದೀರಾ? ಏನೂ ನಿರ್ಮಾಣ ಮಾಡಿಲ್ಲ. ಶೇಕಡ 80ರಷ್ಟು ರೈತರು ಇರತಕ್ಕಂತಹ ಕ್ಷೇತ್ರ ಇದು. ಈ ಕ್ಷೇತ್ರದ ಬಗ್ಗೆ ನಾವು ಅಭಿವೃದ್ಧಿ ಕೆಲಸಗಳನ್ನು ಮಾಡಿದಾಗ ರೈತರ ಬಗ್ಗೆ ನಿಮ್ಮ ಚಿಂತನೆ ಏನು ಎಂಬುದು ಗೊತ್ತಾಗುತ್ತದೆ. ಅತಿ ಹೆಚ್ಚಿನ ಜನಸಂಖ್ಯೆ ಕೃಷಿ ಕ್ಷೇತ್ರದಲ್ಲಿ ಇದೆ. ವಾಣಿಜ್ಯ ಕ್ಷೇತ್ರ ಬೇರೆ ಯಾವುದೇ ಕ್ಷೇತ್ರವಲ್ಲ. ಈ ಕ್ಷೇತ್ರವನ್ನು ನೀವು ಸರ್ವ ವಿಧದಲ್ಲೂ ಒಳ್ಳೆಯದು ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಜಾಗತೀಕರಣದ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಯಾವಾಗ ಭಾರತ ಸರ್ಕಾರ, ವಿಶ್ವ ವಾಣಿಜ್ಯ ಸಂಸ್ಥೆ ಡಬ್ಲ್ಯೂಟಿಓಗೆ ಸಹಿಮಾಡಿದರು ಅಂದೇ ಈ ಭಾರತ ದೇಶದ ರೈತರ ಮರಣ ಗಂಟೆ ಬಾರಿಸಿತು. ವಿದೇಶದಿಂದ ಒಂದೊಂದು ವಸ್ತು ತಮ್ಮ ಈ ರಾಜ್ಯಕ್ಕೆ ಈ ದೇಶಕ್ಕೆ ಬಂತು, ಆಗ ಮಣ್ಣಿನ ಮಗ ಮಣ್ಣು ಪಾಲಾದ. ಏಕೆ ಸಹಿ ಮಾಡಿದಿರಿ. ಭಾರತ ಸರ್ಕಾರ ಮಾಡಿದ್ದು ಎಂಬುದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಮುಂದೆ ಅಕ್ಟೋಬರ್ ತಿಂಗಳಲ್ಲಿ ವಿಶ್ವ ವಾಣಿಜ್ಯ ಸಂಸ್ಥೆಯ ಸಂಘಟನೆ ಸಮಿತಿ ಬರುತ್ತದೆ, ಅದು ಬಂದಾಗ ಭಾರತ ಕೃಷಿ ಪ್ರದೇಶವನ್ನು ವಿಶ್ವ ವಾಣಿಜ್ಯ ಸಂಸ್ಥೆಯ ಸಮಿತಿಯಲ್ಲಿ ಇಡಬೇಕೆಂದು ರಾಜ್ಯ ಸರ್ಕಾರ ಶಿಫಾರಸ್ಸು ಮಾಡುತ್ತಾ? ಎಂದು ನಾನು ಇದರ ಬಗ್ಗೆ ಪ್ರಶ್ನೆ ಕೇಳಿದ್ದೆ, ನಮ್ಮ ತೋಟಗಾರಿಕಾ ಮಂತ್ರಿಗಳು ಮಾಡುವುದಕ್ಕಾಗುವುದಿಲ್ಲವೆಂದು ಉತ್ತರ ಹೇಳಿದರು. ನನಗೆ ಬಹಳ ಆಶ್ಚರ್ಯವಾಯಿತು. ಏಕೆ ಮಾಡುವುದಕ್ಕಾಗುವುದಿಲ್ಲ. ಮತ್ತೊಂದು ವಿಷಯ ತಮಗೆ ಕೇಳುತ್ತೇನೆ, ವಿದೇಶದಿಂದ ಬರತಕ್ಕಂತಹ ವಸ್ತುಗಳ ಪ್ರಮಾಣವನ್ನು ನಿಗದಿಪಡಿಸತಕ್ಕಂತಹ ಅಧಿಕಾರ ಆ ದೇಶಕ್ಕೆ ಇರಬೇಕು. ಎರಡನೆಯದು ವಿದೇಶಿ ಸಂಸ್ಥೆಗಳಿಂದ ಬರತಕ್ಕಂತಹ ಆಮದು ಸುಂಕವನ್ನು ನಿಗದಿ ಮಾಡುವ ಅಧಿಕಾರ ಆ ದೇಶದವರಿಗೆ ಇರಬೇಕು. ಇದನ್ನಾದರೂ ಮಾಡವುದಕ್ಕಾಗುತ್ತಾ? ಚೈನ ದೇಶದ ಅಕ್ಕಿ ನಮ್ಮ ಮಾರುಕಟ್ಟೆಗೆ ಬಂದಾಗ ನಮ್ಮ ಗತಿ ಏನು? ನಮ್ಮ ರೈತರ ಗತಿ ಏನು? ನಾವು ಉತ್ಪಾದನೆ ಮಾಡುವುದಕ್ಕಾಗುತ್ತಾ? ನಮಗೆ ಪರಿಹಾರ ಧನ ಸಿಗುತ್ತದೆಯಾ? ಏನೂ ಇಲ್ಲ. ವಿಶ್ವ ವಾಣಿಜ್ಯ ಮಾರುಕಟ್ಟೆಯಲ್ಲಿ ನಮ್ಮ ರೈತ ಪೈಪೋಟಿ ಮಾಡುವುದಕ್ಕಾಗುವುದಿಲ್ಲವೆಂದರೆ, ನಮ್ಮ ಗತಿ ಏನು ಇದನ್ನು ಅರ್ಥ ಮಾಡಿಕೊಳ್ಳಬೇಕೆಂದು ತಮಗೆ ವಿನಯಪೂರ್ವಕವಾಗಿ

ಕೇಳಿಕೊಳ್ಳುತ್ತೇನೆ. ಹೊಸ ಹೊಸದಾಗಿ ತಾವು ಸಂಶೋಧನೆ ಮಾಡುವುದು ಒಳ್ಳೆಯ ಬಿತ್ತನೆ ಬೀಜ ಕೊಡುವುದು, ಮನುಷ್ಯರಿಗೆ ಬರತಕ್ಕಂತಹ ರೋಗ ಬೀಜಗಳಿಗೆ ಬಂದಿದೆ. ವೈರಸ್ ರೋಗ ಕೂಡ ಬಂದಿದೆ. ಅದನ್ನು ತಡೆಗಟ್ಟತಕ್ಕಂತಹ ಔಷಧಿ ನಮ್ಮಲ್ಲಿ ಇಲ್ಲ. ಅದರ ಬಗ್ಗೆ ಸಂಶೋಧನೆ ಮಾಡಿಲ್ಲ. ರೈತರ ಬಗ್ಗೆ ಏನು ಆಸೆ ಇಟ್ಟುಕೊಂಡಿದ್ದೀರಿ. ಯಾವ ರೀತಿ ಅವನು ಸರ್ಚ್ ಮಾಡುತ್ತಾನೆಂದು ತಿಳಿದಿದ್ದೀರಿ, ಈ ರೀತಿಯಾಗಿ ತಾವು ಕಾಲ ಕಳೆಯುವುದಾದರೆ ಇನ್ನು ಕೆಲವೇ ವರ್ಷಗಳಲ್ಲಿ ರೈತ ವ್ಯವಸಾಯ ಬಿಟ್ಟು ಬೇರೆ ಬೇರೆ ಕಡೆ ಹೋಗುವ ವ್ಯವಸ್ಥೆ ನಿರ್ಮಾಣವಾಗುತ್ತದೆ. ಆ ವಾತಾವರಣ ನಿರ್ಮಾಣ ಮಾಡುವುದು ಬೇಡ, ಒಳ್ಳೆಯ ರೀತಿಯಲ್ಲಿ ಚಿಂತನೆ ಮಾಡಬೇಕೆಂದು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಿಂದೆ ಪ್ರಧಾನ ಮಂತ್ರಿಗಳು ನಮ್ಮ ರಸ ಗೊಬ್ಬರದ ಬಗ್ಗೆ ರೈತರಿಗೆ ಸಬ್ಸಿಡಿ ಕೊಟ್ಟರು, ಅದೂ ಕೂಡ ಈಗ ಇಲ್ಲ. ರಸ ಗೊಬ್ಬರಗಳ ಬೆಲೆ ಜಾಸ್ತಿಯಾಗಿದೆ. ಒಂದು ಎಕರೆ ಭೂಮಿಯಲ್ಲಿ ವಾಣಿಜ್ಯ ಬೆಳೆ ಬೆಳೆಯುವುದಕ್ಕೆ ಒಂದು ಲಕ್ಷ ರೂಪಾಯಿ ಖರ್ಚು ಬರುತ್ತದೆ. ಆ ಭೂಮಿ ಮಾರಿ ಒಂದು ಲಕ್ಷ ರೂಪಾಯಿ ಇಡುಗಂಟನಲ್ಲಿ ಬ್ಯಾಂಕಿನಲ್ಲಿ ಇಟ್ಟರೆ, ಎಷ್ಟು ಬಡ್ಡಿ ಬರುತ್ತದೆ ಅಷ್ಟು ಉತ್ಪತ್ತಿ ಕೂಡ ಆಗುತ್ತಿಲ್ಲ. ಇಂತಹ ಶೋಷಕವಾದ ಸ್ಥಿತಿಯಲ್ಲಿ ರೈತರಿದ್ದಾರೆ, ಇದರ ಬಗ್ಗೆ ಚಿಂತನೆ ಮಾಡಿ ಈ ಕಷ್ಟದಿಂದ ಕಂಗಾಲಾಗಿರತಕ್ಕಂತಹ ರೈತರನ್ನು ಯಾವ ರೀತಿ ಪಾರು ಮಾಡಬೇಕೆಂಬುದನ್ನು ತಾವು ಯೋಚನೆ ಮಾಡಬೇಕು. ರೈತ ಬದುಕಿಲ್ಲವೆಂದರೆ, ಈ ರಾಜ್ಯ ದಿವಾಳಿಯಾಗುವುದು ನಿಜ. ಪ್ರತಿ ವರ್ಷ ಮುಂಗಾರು ಫಸಲು ಬರುವುದಕ್ಕಿಂತ ಮೊದಲು ಕನಿಷ್ಠ ಬೆಲೆ ಮತ್ತು ಗರಿಷ್ಠ ಬೆಲೆ ಎರಡೂ ಗೊತ್ತು ಮಾಡಬೇಕು. ಈ ರೀತಿ ಗೊತ್ತು ಮಾಡಿದಾಗ ಯಾವ ರೈತ ಯಾವ ಬೆಳೆ ಬೆಳಯುತ್ತಾನೆ, ಎಂಬುದು ಗೊತ್ತಿಲ್ಲ. ಅವನು ಅನಿಶ್ಚಿತನಾಗಿರುತ್ತಾನೆ. ನಾನು ಬೆಳೆ ಬೆಳೆದರೂ ಕೂಡ ಸರ್ಕಾರ ಘೋಷಣೆ ಮಾಡತಕ್ಕಂತಹ ಬೆಲೆ ಕೊಟ್ಟಾಗ ನನಗೆ ಕೊನೆ ಪಕ್ಷ ಹಾಕಿರುವ ಬಂಡವಾಳ ಬರುತ್ತದೆ ಎಂದು ಅವನ ಮನಸ್ಸಿಗೆ ಬರಬೇಕು. ಮುಂಗಾರು ಫಸಲಿಗೆ ಮೊದಲು ಬೆಂಬಲ ಬೆಲೆ ಘೋಷಣೆ ಮಾಡಬೇಕೆಂದು ಒಂದು ಸಾವಿರ ಕೋಟಿ ರೂಪಾಯಿ ಆವರ್ತ ಧನ ಇಟ್ಟುಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಇಲಾಖೆಯ ಬಗ್ಗೆ ತಾವು ಹೇಳಿಕೆ ಕೊಡುವಾಗ ನಾನು ಏನು ಅಂಶಗಳನ್ನು ತಮ್ಮ ಮುಂದಿಟ್ಟದ್ದೇನೆ, ಆ ಅಂಶಗಳಿಗೆ ಉತ್ತರ ಕೊಡಬೇಕೆಂದು ಹೇಳುತ್ತೇನೆ. ನಮ್ಮದು ಚಾಮರಾಜನಗರ ಹೊಸ ಜಿಲ್ಲೆ. ಜಿಲ್ಲೆ ಅಸ್ತಿತ್ವಕ್ಕೆ ಬಂದು ನಾಲ್ಕು ವರ್ಷವಾಯಿತು, ಅಲ್ಲಿ ಡಿಗ್ರಿ ಕಾಲೇಜ್ ಇಲ್ಲ, ಒಂದು ಸಿವಿಲ್ ಜಡ್ಜ್ ಕೋರ್ಟ್ ಇಲ್ಲ. ಈ ಅಸಮತೋಲನವನ್ನು ಸರಿಪಡಿಸಬೇಕು. ನಾನು ಸಿವಿಲ್ ಜಡ್ಜ್ ಕೋರ್ಟಿಗೆ ಹೋಗಬೇಕಾದರೆ 200 ಕಿಮಿ ದೂರ ಹೋಗಬೇಕು. ಕೊನೆ ಪಕ್ಷ ನಮ್ಮ ಚಾಮರಾಜನಗರಕ್ಕೆ ಸಿವಿಲ್ ಕೋರ್ಟ್ ಕೊಡಿ ಎಂದರೆ ಅಲ್ಲಿಯೂ ಕೊಟ್ಟಿಲ್ಲ. ಡಿಗ್ರಿ ಕಾಲೇಜ್ ಇಲ್ಲ, ದಯಮಾಡಿ ಈ

ಅಸಮತೋಲನವನ್ನು ಸರಿಪಡಿಸುವುದಕ್ಕೆ ಸರ್ಕಾರ ಒಂದು ಕಮಿಟಿ ಮಾಡಿದೆ ಎಂದು ಕೇಳಿ ಸಂತೋಷವಾಯಿತು. ಇದನ್ನು ಏಕೆ ತೆಗೆದುಕೊಳ್ಳಬಾರದು? ಎಸ್‌ಡಿಎಂಸಿ ಕಮಿಟಿ ಎಂದು ನಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು ಮಾಡಿದರು. ಸ್ಕೂಲ್ ಬೆಟರ್‌ಮೆಂಟ್ ಕಮಿಟಿಯಲ್ಲಿ ಹಿಂದೆ ಸಂಬಂಧಪಟ್ಟಿರತಕ್ಕಂತಹ ಶಾಸಕರು ಅಧ್ಯಕ್ಷರಾಗಿದ್ದರು. ಬಹಳ ಸುಗಮವಾಗಿ ಕೆಲಸ ನಡೆದುಕೊಂಡು ಹೋಗುತ್ತಿತ್ತು. ಆ ಶಾಲೆಯಲ್ಲಿ ಏನು ಕುಂದು ಕೊರತೆಯನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಆದಷ್ಟು ಬೇಗ ಸರಿಪಡಿಸುವುದಕ್ಕೆ ವ್ಯವಸ್ಥೆ ಮಾಡಿದ್ದರು. ಇವತ್ತು ನಮ್ಮ ಶಿಕ್ಷಣ ಸಚಿವರು ನಮ್ಮನ್ನು ದೂರ ಇಟ್ಟಿದ್ದಾರೆ. ಯಾರೋ ಪೋಷಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಮಾಡಿದ್ದಾರೆ. ಆ ಪೋಷಕರಲ್ಲಿ ಒಬ್ಬರಿಗೊಬ್ಬರಿಗೆ ಪೈಪೋಟಿ ಬಂದು ಶಾಂತ ವಾತಾವರಣ ಕದಡಿ ಹೋಗಿದೆ ಎಂದು ತಮ್ಮ ಮುಖಾಂತರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲು ಯಾವ ಎಸ್‌ಡಿಎಂಸಿ ಕಮಿಟಿ ಮತ್ತು ಆ ಕಮಿಟಿ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ರೇಷ್ಮೆ ಬಗ್ಗೆ ಹೇಳುವುದಾದರೆ ನಮ್ಮಲ್ಲಿ ಏಳು ಸರ್ಕಾರಿ ಫಿಲೇಚರ್‌ಗಳು ಇವೆ. ಏಳು ಸರ್ಕಾರಿ ಫಿಲೇಚರ್‌ಗಳನ್ನು ನಾವು ನಡೆಸುತ್ತಿದ್ದೇವೆ. ಅವುಗಳನ್ನು ಮುಚ್ಚಿ ಅಲ್ಲಿರತಕ್ಕಂತಹ ನೌಕರರಿಗೆ ವೇತನ ಕೊಟ್ಟರೆ ಎಷ್ಟು ನಷ್ಟವಾಗುತ್ತದೆ ಅದಕ್ಕಿಂತ ಎರಡರಷ್ಟು ನಷ್ಟವಾಗುತ್ತಿದೆ. ಒಂದು ವೇಳೆ ಸರ್ಕಾರ ರೇಷ್ಮೆ ಕಾರ್ಖಾನೆ ಇಲ್ಲವೆಂದು ಹೇಳಿದಾಗ, ಸರ್ಕಾರದವರು ಮುಂದೆ ಬಂದು, ಗೂಡು ಮಾರುಕಟ್ಟೆಯಲ್ಲಿ ಗೂಡು ಪರ್ಚೇಸ್ ಮಾಡುವುದಿಲ್ಲ ಎಂದಾಗ. ವೀವರ್ಸ್ ಮತ್ತು ಖಾಸಗಿಯವರು ಎಲ್ಲಾ ಒಂದಾಗಿ ಬಿಟ್ಟರು. ಈ ರೀತಿ ಗೂಡಿನ ಬೆಲೆ ಕಡಿಮೆಯಾದರೆ ರೈತ ಗೂಡು ಬೆಳೆಯುವುದಕ್ಕೆ ಹೇಗೇ ಸಾಧ್ಯ? ಆದುದರಿಂದ ಇಂದು ಸರ್ಕಾರ ಗೂಡು ಮಾರುಕಟ್ಟೆಯಲ್ಲಿ ಗೂಡನ್ನು ಖರೀದಿಸುವ ಕಾರ್ಯದಲ್ಲಿ ಭಾಗವಹಿಸದೇ ಹೋದರೆ ಖಾಸಗಿ ಜನರು ಬಹಳ ಕಡಿಮೆ ಬೆಲೆಗೆ ಗೂಡನ್ನು ತೆಗೆದುಕೊಂಡು ರೈತರಿಗೆ ಬಹಳ ಅನ್ಯಾಯವಾಗುತ್ತದೆ. ಆದುದರಿಂದ ಈಗಾರುವ ಫಿಲೇಚರ್‌ಗಳನ್ನು ಉಳಿಸಿಕೊಳ್ಳುವುದಲ್ಲದೆ ಇನ್ನೂ ಹೆಚ್ಚಾಗಿ ಹೊಸದಾಗಿ ಫಿಲೇಚರ್‌ಗಳನ್ನು ಸರ್ಕಾರ ಮಾಡಬೇಕು. ಮುಖ್ಯವಾಗಿ ಗೂಡು ಮಾರುಕಟ್ಟೆಯಲ್ಲಿ ಸರ್ಕಾರ ಭಾಗವಹಿಸಿ ಪೈಪೋಟಿ ಕಡಿಮೆ ಆಗುವಂತೆ ನೋಡಿಕೊಳ್ಳಬೇಕೆಂದು ಮಾನ್ಯ ಕೃಷಿ ಸಚಿವರಿಗೆ ತಿಳಿಸಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ವಿ. ಪಾಪಣ್ಣ (ಹುಣಸೂರು) :— ಮಾನ್ಯ ಪೀಠಾಧ್ಯಕ್ಷರೆ, ನಮ್ಮದು ಕೃಷಿ ಪ್ರಧಾನವಾದ ರಾಷ್ಟ್ರ. ಈ ಕೃಷಿಯ ಅಭಿವೃದ್ಧಿಗಾಗಿ ಭೂಮಿಯ ಫಲವತ್ತತೆ, ನೀರಾವರಿ ಸೌಲಭ್ಯ ಹಾಗೂ ಅನುಕೂಲಕರ ಪರಿಸರವನ್ನು ರೈತರಿಗೆ ನಾವು ಒದಗಿಸಬೇಕಾಗುತ್ತದೆ. ನಮ್ಮ ರಾಷ್ಟ್ರದಲ್ಲಿ ಒಟ್ಟಾರೆ ಎಂಟು ಲಕ್ಷ ಕೆರೆಗಳಿವೆ. ಕರ್ನಾಟಕ ರಾಜ್ಯದಲ್ಲಿ 36698 ಕೆರೆಗಳು ಇದ್ದು ಇದರಲ್ಲಿ ಕೇವಲ 3322 ಕೆರೆಗಳಿಂದ ಮಾತ್ರ ನೀರಾವರಿ ಸೌಲಭ್ಯವನ್ನು

ವ್ಯವಸಾಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ಇನ್ನು 33326 ಕೆರೆಗಳನ್ನು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯಿತಿಗೆ ಸೇರಿಸಿ ಇವುಗಳಿಗೆ ಯಾವುದೇ ರೀತಿಯಲ್ಲೂ ಅನುದಾನವನ್ನು ಕೊಡದಿರುವುದರಿಂದ ಸಂಪೂರ್ಣವಾಗಿ ಈ ಎಲ್ಲಾ ಕೆರೆಗಳು ಹೂಳು ತುಂಬಿಕೊಂಡು ಹಾಳಾಗಿವೆ. ಹೂಳು ತುಂಬಿರುವುದಲ್ಲದೇ ಬಂಡು ಸರಿ ಇಲ್ಲ, ಛಾನಲ್ ಕೂಡ ಸರಿ ಇಲ್ಲ. ತೂಬು ಕೂಡ ಸರಿ ಇಲ್ಲವಾಗಿದೆ. ಒಟ್ಟಾರೆ 33326 ಕೆರೆಗಳು ನಮ್ಮ ರಾಜ್ಯದಲ್ಲಿ ಅವನತಿಯನ್ನು ಹೊಂದುತ್ತಿವೆ. ಕೇವಲ 3322 ಕೆರೆಗಳು ಮಾತ್ರ ಸಮಅಮ ನೀರಾವರಿ ಇಲಾಖೆ ನಿರ್ವಹಣೆಯನ್ನು ಮಾಡುತ್ತಿದೆ. 1960-61ರ ಅಂಕಿ ಅಂಶಗಳ ಪ್ರಕಾರವಾಗಿ ಹೇಳುವುದಾದರೆ ಒಟ್ಟು 9 ಲಕ್ಷ 44 ಸಾವಿರ ಎಕರೆ ಪ್ರದೇಶವನ್ನು ನೀರಾವರಿಗೆ ಒಳಪಡಿಸಬೇಕೆಂದು ಡಿಸೈನ್ ಮಾಡಲಾಗಿತ್ತು. ಅದಕ್ಕೆ ಅನುದಾನವನ್ನೂ ಕೂಡ ನೀಗದಿಮಾಡಲಾಗಿತ್ತು ಆದರೆ 1996-97 ರಲ್ಲಿ ಕೇವಲ 2 ಲಕ್ಷ 20 ಸಾವಿರ ಹೆಕ್ಟೇರ್ ಮಾತ್ರ ನೀರಾವರಿಯಾಗಿರುವುದು. ಆದರೆ ಡಿಸೈನ್ ಮಾಡಿದ್ದು 9 ಲಕ್ಷ 44 ಸಾವಿರ ಎಕರೆ ಪ್ರದೇಶ. 1960-61ರಲ್ಲಿಯೇ 3 ಲಕ್ಷ 44 ಸಾವಿರ ಎಕರೆ ವ್ಯವಸಾಯಕ್ಕೆ ಯೋಗ್ಯವಾಗಿತ್ತು. ಆದರೆ ಇವತ್ತು ಅದು ಕೇವಲ 2 ಲಕ್ಷ 40 ಸಾವಿರ ಹೆಕ್ಟೇರಿಗೆ ಇಳಿದಿದೆ ಮತ್ತು ಈ ಕೆರೆಗಳಿಂದ ನೀರಾವರಿ ಆಗುತ್ತಿರುವುದಾಗಿದೆ. ಅಂದರೆ ಒಟ್ಟಾರೆ ಕೆರೆಗಳಲ್ಲಿಶೇಕಡ 10ರಷ್ಟು ಕೆರೆಗಳಿಂದ ಉಪಯೋಗವಾಗುತ್ತಿದ್ದರೆ ಇನ್ನು ಶೇಕಡ 90ರಷ್ಟು ಕೆರೆಗಳು ಇವತ್ತಿಗೂ ಹಾಳಾಗಿವೆ. ಇನ್ನು ತೆರೆದ ಬಾವಿಗಳ ಬಗ್ಗೆ ಹೇಳುವುದಾದರೆ 1960-61ರಲ್ಲಿಯೇ ಇದರಿಂದ 1 ಲಕ್ಷ 33 ಸಾವಿರ ಹೆಕ್ಟೇರ್ ನೀರಾವರಿಯಾಗುತ್ತಿತ್ತು ಆದು ಈಗ ಸುಮಾರು 4 ಲಕ್ಷ 66 ಸಾವಿರ ಹೆಕ್ಟೇರಿಗೆ ಹೆಚ್ಚಾಗಿದೆ. ಇನ್ನು ಬೋರ್‌ವೆಲ್‌ಗಳಿಂದ ಕೃಷಿಗೆ ನೀರಾವರಿಯಾಗಿರುವ ಬಗ್ಗೆ ಹೇಳುವುದಾದರೆ 1960-61ರಲ್ಲಿ ಇದರಿಂದ ನೀರಾವರಿಯಾಗುತ್ತಿರಲಿಲ್ಲ. ಅಂದರೆ ಬೋರ್‌ವೆಲ್‌ನ್ನು ವ್ಯವಸಾಯಕ್ಕೆ ಉಪಯೋಗಮಾಡಿಕೊಂಡಿರಲಿಲ್ಲ. ಆದರೆ ಇಂದು 1996-97ರಲ್ಲಿ ಒಟ್ಟು 3 ಲಕ್ಷದ 60 ಸಾವಿರ ಹೆಕ್ಟೇರ್ ಪ್ರದೇಶ ಬೋರ್‌ವೆಲ್‌ನಿಂದ ನೀರಾವರಿಯಾಗುತ್ತಿದೆ. ಇನ್ನು ಭಾರಿ ನೀರಾವರಿ ಬಗ್ಗೆ ಹೇಳುವುದಾದರೆ 1960-61 ರಲ್ಲಿ ಇದರಿಂದ 2 ಲಕ್ಷ 36 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯಾಗುತಿತ್ತು. ಆದರೆ 1996-97ರಲ್ಲಿ ಭಾರಿ ನೀರಾವರಿ ಯೋಜನೆಯಿಂದ 9 ಲಕ್ಷ 19 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯಾಗುತ್ತಿದೆ. ಭಾರಿ ನೀರಾವರಿ ಯೋಜನೆಗಳಿಗೆ ಕೋಟ್ಯಾಂತರ ರೂ.ಗಳನ್ನು ಖರ್ಚು ಮಾಡಿದ್ದಾರೆ. ಪ್ರಕೃತಿದತ್ತವಾದ ಕೆರೆಗಳಿಂದ ಏನು ವ್ಯವಸಾಯವನ್ನು ಹಿಂದೆ ಮಾಡಲಾಗುತ್ತಿತ್ತೋ ಆ ಪ್ರಮಾಣದಲ್ಲಿ ಬೆಳೆಯನ್ನು ಬೆಳೆಯಲು ಈಗ ವಿಫಲರಾಗಿದ್ದೇವೆ. ಇದಕ್ಕೆ ಕಾರಣ ಸಣ್ಣ ನೀರಾವರಿಗೆ ಬಹಳಷ್ಟು ಕಡಿಮೆ ಅನುದಾನವನ್ನು ಕೊಟ್ಟಿರುವುದೇ ಆಗಿದೆ. ಈಗೇನು 33326 ಕೆರೆಗಳು ಇದೆ ಅದನ್ನು ಸಣ್ಣ ನೀರಾವರಿ ವ್ಯಾಪ್ತಿಗೆ ಸೇರಿಸದಿದ್ದರೆ, ಈ ಕೆರೆಗಳಲ್ಲಿ ನೀರು ತುಂಬದೇ ಹೋದರೆ ಇಡೀ ಪರಿಸರದ ಸುತ್ತಮುತ್ತಲೂ ಇರುವ ಬಾವಿಗಳಲ್ಲಿ

ಅಂತರ್ಜಲವೇ ಇರುವುದಿಲ್ಲ. ಇಂದು ಕೇವಲ ಭಾರಿ ನೀರಾವರಿಗೆ ಕೋಟಿ ಕೋಟಿ ಹಣವನ್ನು ಕೊಡುತ್ತಿದ್ದೀರಿ. ಇಡೀ ರಾಜ್ಯದಲ್ಲಿ ನನ್ನ ಕ್ಷೇತ್ರ ಒಂದರಲ್ಲಿಯೇ 35 ಸಾವಿರ ಎಕರೆ ಪ್ರದೇಶ ಸಣ್ಣ ನೀರಾವರಿ ವ್ಯಾಪ್ತಿಗೆ ಬರಲು ಮುಖ್ಯ ಕಾರಣರಾದವರು ದಿವಂಗತ ದೇವರಾಜ ಅರಸುರವರು. ಇವರು ವ್ಯವಸ್ಥಿತವಾಗಿ ಅಲ್ಲಿರುವ ಕೆರೆಗಳನ್ನು ಕಟ್ಟಿದ್ದಾರೆ. ಈಗ 35 ಸಾವಿರ ಎಕರೆಗಳಿಗೆ ನೀರುಣಿಸುವ ನಿರ್ವಾಹಣೆಗೆ ಕೇವಲ 8 ಲಕ್ಷ ರೂ.ಗಳನ್ನು ಮಾತ್ರ ಕೊಟ್ಟಿರುವುದು. ಈ ಹಣ ಒಂದು ವರ್ಷಕ್ಕೊಂದು ಕೊಡಲಾಗುತ್ತಿದೆ. ಅದೇ ಹಾರಂಗಿ ಸುತ್ತಮುತ್ತಲ ನೀರಾವರಿ ನಿರ್ವಹಣೆಗೆ ಒಂದು ಕೋಟಿ 20 ಲಕ್ಷ ರೂ.ಗಳನ್ನು ಕೊಡಲಾಗುತ್ತಿದೆ. ಇದರ ಕಾಮಗಾರಿ ವೆಚ್ಚ ಒಂದು ಕೋಟಿ ಎಂಭತ್ತು ಲಕ್ಷ ರೂ.ಗಳಾಗಿದೆ. ಅದೇ ಪ್ರಕೃತಿ ದತ್ತವಾದ ಕೆರೆಗಳಿಂದ ನನ್ನ ಕ್ಷೇತ್ರದಲ್ಲಿ 35 ಸಾವಿರ ಎಕರೆಗಳಿಗೆ ನೀರುಣಿಸುವ ನಿರ್ವಹಣೆಗೆ ಕೇವಲ 6 ಲಕ್ಷ ರೂ.ಗಳನ್ನು ಕೊಟ್ಟು ಇದರ ಕಾಮಗಾರಿಗಾಗಿ 28 ಲಕ್ಷ ರೂ. ಖರ್ಚಾಗಿದೆ. ಎಷ್ಟು ತಾರತಮ್ಯ ಇದೆ ಎನ್ನುವುದನ್ನು ತಾವು ಗಮನಿಸಬಹುದು. ಇಂದು ಪ್ರಕೃತಿ ದತ್ತವಾದ ಕೆರೆಗಳನ್ನು ಸರ್ವ ನಾಶ ಮಾಡಿಕೊಂಡರೆ ಹೇಗೆ? ಆದುದರಿಂದ ನಾನು ಈ ಸಭೆಯ ಮೂಲಕ ಕೇಳಿಕೊಳ್ಳುವುದೇನೆಂದರೆ ರಾಜ್ಯದಲ್ಲಿರುವ ಎಲ್ಲಾ ಕೆರೆಗಳನ್ನು ಸಣ್ಣ ನೀರಾವರಿ ವ್ಯಾಪ್ತಿಗೆ ಸೇರಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇನ್ನು ನೀರು ಬಳಕೆದಾರರ ಸಹಕಾರ ಸಂಘಗಳನ್ನು ಇವೊತ್ತು ನಾವು ಎಲ್ಲಾ ಕಡೆ ಮಾಡಿದ್ದೇವೆ. 500 ಹೆಕ್ಟೇರ್ ಪ್ರದೇಶ ಬರುವಂಥ ಎಲ್ಲಾ ಕೆರೆಗಳನ್ನು ಸೇರಿಸಿ ಅಂದರೆ ಸಣ್ಣ ನೀರಾವರಿಗೆ ಸಂಬಂಧಪಟ್ಟ ಕೆರೆಗಳನ್ನೂ ಕೂಡ ಸೇರಿಸಿದ್ದಾರೆ. ಅಂದರೆ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ನ ಎಲ್ಲಾ ಕೆರೆಗಳನ್ನು ಸೇರಿಸಿ ಒಂದೊಂದು ಸಹಕಾರ ಸಂಘಗಳನ್ನು ಮಾಡಿದ್ದಾರೆ. ನಾನು ಹೇಳುವುದೇನೆಂದರೆ ಈ ಎಲ್ಲಾ ಕೆರೆಗಳನ್ನು ಅಭಿವೃದ್ಧಿ ಪಡಿಸಿ ಸರ್ಕಾರ ಇದಕ್ಕೆ ಹೆಚ್ಚು ಅನುದಾನವನ್ನು ಕೊಟ್ಟು ಈ ಸಹಕಾರ ಸಂಘಗಳು ಉನ್ನತ ಸ್ಥಿತಿಯನ್ನು ತಲುಪಿದಾಗ ಮಾತ್ರ ಕೆರೆಗಳ ನಿರ್ವಹಣೆ ಮಾಡುವ ಕೆಲಸವನ್ನು ಸಹಕಾರ ಸಂಘಗಳಿಗೆ ಕೊಟ್ಟರೆ ಸೂಕ್ತ. ಆದರೆ ಈಗಿನ ಪರಿಸ್ಥಿತಿಯಲ್ಲಿ ಸಹಕಾರ ಸಂಘಗಳಿಗೆ ಕೆರೆಗಳ ನಿರ್ವಹಣೆ ಮಾಡುವ ಕೆಲಸವನ್ನು ಕೊಟ್ಟರೆ ಆಗುವುದಿಲ್ಲ. 33326 ಕೆರೆಗಳನ್ನು ನಿರ್ವಹಣೆ ಮಾಡುವುದು ಸುಲಭವಾದ ಕೆಲಸವೇನಲ್ಲ. ಇಂದು ಹಲವಾರು ಪ್ರಭಾವಿ ವ್ಯಕ್ತಿಗಳು ಕೆರೆಗಳನ್ನು ಎನ್‌ಕ್ರೋಚ್ ಮಾಡಿಕೊಂಡಿರುತ್ತಾರೆ. ತೋಟಗಳನ್ನು ಇಲ್ಲಿ ಮಾಡುಕೊಂಡಿದ್ದಾರೆ. ಇಂದಿನ ಮಾನ್ಯ ಮುಖ್ಯಮಂತ್ರಿಗಳು ಏನೇ ಆಗಲಿ ಕೆರೆಯಂಗಳ ಪ್ರದೇಶವನ್ನು ಎನ್‌ಕ್ರೋಚ್ ಮಾಡಿಕೊಂಡಿರುವುದನ್ನು ಬಿಡಿಸಬೇಕೆಂದು ಆದೇಶ ಮಾಡಿದ್ದಾರೆ. ಆದರೆ ಎನ್‌ಕ್ರೋಚ್ ಮಾಡಿರುವುದನ್ನು ತೆಗೆಸಲು ಹೋದಾಗ ಇದಕ್ಕೆ ಪ್ರಭಾವಿ ವ್ಯಕ್ತಿಗಳು ತಡೆಯನ್ನುಂಟುಮಾಡುತ್ತಿದ್ದಾರೆ. ನಾನು ಹೇಳುವುದೇನೆಂದರೆ ಈ ಕೃಷಿ ಪ್ರಧಾನವಾದ ರಾಷ್ಟ್ರದಲ್ಲಿ ರೈತರಿಗೆ ಭೂಮಿಯ ಫಲವತ್ತತೆ, ನೀರು ಮತ್ತು

ಉತ್ತಮವಾದ ಪರಿಸರವನ್ನು ಮಾಡಿಕೊಡದೇ ಹೋದರೆ ಬರಗಾಲ ದೇಶದಲ್ಲಿ ಬಂದೇ ಬರುತ್ತದೆ. ಈ ಹಿಂದೆ ರೈತರು ಯಾವುದೇ ರೀತಿಯ ಪೇಟೆಂಟ್ ಬೀಜಗಳನ್ನು ತರುತ್ತಿರಲಿಲ್ಲ. ಮನೆಯಲ್ಲಿ ರೈತ ಯಜಮಾನ ಅವನಿಗೆ ಬೀಜ ಬೇಕಾದರೆ ಕಟಾವಿನ

4.40 ಪಿ.ಎಂ.

ಸಮಯದಲ್ಲಿ ಹೊಲಕ್ಕೆ ಹೋಗಿ ಸರಿಯಾದ ತೆನೆಗಳನ್ನು ಆರಿಸಿ ಎತ್ತಿಕೊಂಡು ಬಂದು ಅದನ್ನು ಮನೆ ಅಂಗಳದಲ್ಲಿ ತೊಟ್ಟಿಯಲ್ಲಿ ತನಗೆ ಬೇಕಾದಂತಹ ಬೀಜಗಳನ್ನು ಶೇಖರಣೆ ಮಾಡಿ ಸ್ವಲ್ಪ ತೆನೆಗಳನ್ನು ಕಟ್ಟುತ್ತಿದ್ದರು. ಏಕೆ ಕಟ್ಟಬೇಕೆಂದರೆ ಅವುಗಳನ್ನು ಪಕ್ಷಿ ಸಂಕುಲಗಳು ತಿನ್ನಬೇಕು. ಆ ಪಕ್ಷಿಗಳು ಚೆನ್ನಾಗಿ ಇರಬೇಕು ಪರಿಸರದಲ್ಲಿ ಸಣ್ಣ ಹುಳ ಹುಪ್ಪಟೆಗಳನ್ನು ಅವು ತಿನ್ನಬೇಕೆನ್ನುವ ಮನೋಭಾವದಿಂದ ಆ ರೀತಿ ಮಾಡುತ್ತಿದ್ದರು. ಆದರೆ ಇವತ್ತು ನಾವು ಯಾವ ಮಟ್ಟಕ್ಕೆ ಹೋಗಿದ್ದೇವೆ ಎಂದರೆ ಆ ಪಕ್ಷಿ ಕುಲ ಏನಿದೆ, ಅದನ್ನು ಹೊಡೆದು ತಿಂದು ಪರಿಸರವನ್ನು ನಾಶ ಮಾಡುತ್ತಿದ್ದೇವೆ. ಯಾರೋ ಪೇಟೆಂಟ್ ತೆಗೆದುಕೊಂಡು ಬಂದರೆ ಬೀಜಕ್ಕೆ ಹಣ ಕೊಡುವಂತಹ ಪರಿಸ್ಥಿತಿ ಬಂದಿದೆ. ಹಿಂದೆ ಎಲ್ಲಿತ್ತು? ಈಗ ಇಂತಹ ಪರಿಸ್ಥಿತಿಯಲ್ಲಿ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಸರ್ಕಾರ ಅವರಿಗೆ ಅವಕಾಶ ಕೊಡಬೇಕಾದರೆ ಕೆರೆಗಳನ್ನು ಅಭಿವೃದ್ಧಿಪಡಿಸಿ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತು ಪ್ರೋಗ್ರಾಂ ಏನು ಮಾಡುತ್ತಾರೆ, ಅವರಿಗೆ ಮಾರ್ಚ್ ತಿಂಗಳು ವರ್ಷದ ಕೊನೆಯಾಗಿರುತ್ತದೆ. ಮಾರ್ಚ್ ತಿಂಗಳಲ್ಲಿ ರೇವತಿ ಮಳೆ ಪ್ರಾರಂಭವಾಗುತ್ತದೆ. ಯಾವಾಗ ಯುಗಾದಿ ಹಬ್ಬ ಬಂತು ಎಂದರೆ ರೇವತಿ ಮಳೆ ಬಂತೆಂದರೆ ನಮ್ಮ ಇಲಾಖಾ ಅಧಿಕಾರಿಗಳು ನವೆಂಬರ್-ಡಿಸೆಂಬರ್ ತಿಂಗಳಿನಲ್ಲಿ ಕೈಕಟ್ಟಿ ಕುಳಿತುಬಿಡುತ್ತಾರೆ. ನೀರು ಹಾಯಿಸಿದ ಮೇಲೆ, ಚಾನಲ್ ಎಲ್ಲಾ ಹೋದ ಮೇಲೆ ಭತ್ತ ಕಟಾವು ಮಾಡುತ್ತಾರೆ. ಡಿಸೆಂಬರ್‌ನಿಂದ ಏಪ್ರಿಲ್‌ನವರೆಗೂ ಈ ಐದು ತಿಂಗಳಿನಲ್ಲಿ ಅಧಿಕಾರಿಗಳಿಗೆ ಏನೂ ಕೆಲಸವಿಲ್ಲ. ಅವರು ಏನು ಹೇಳುತ್ತಾರೆಂದರೆ, ನಾವೇನಾದರೂ ತೂಬು ರೆಡಿ ಮಾಡಿಸಬೇಕು, ಕೆರೆ ಹೂಳು ಎತ್ತಬೇಕು, ಚಾನಲ್ ರೆಡಿ ಮಾಡಿಸಬೇಕೆಂದರೆ, ಇನ್ನು ಪ್ರೋಗ್ರಾಂಗೆ ಬಜೆಟ್ ಬಂದಿಲ್ಲ. ಬಜೆಟ್ ಬರಬೇಕು, ಅದು ಅಪ್ರೂವ್ ಆಗಬೇಕು ಎನ್ನುತ್ತಾರೆ. ಪ್ರೋಗ್ರಾಂ ಯಾವಾಗ ಅಪ್ರೂವ್ ಆಗುತ್ತದೆ ಎಂದರೆ ಎರಡು ಮೂರು ಬಾರಿ ಮಳೆ ಬಂದು ನೀರು ತುಂಬಿಕೊಳ್ಳುವುದಕ್ಕೆ ಪ್ರಾರಂಭವಾದಾಗ ಪ್ರೋಗ್ರಾಂಗೆ ಅಪ್ರೂವ್ ಆಗುತ್ತದೆ. ಆಗ ಅವರು ಸಿಲ್ಟ್ ತೆಗೆಯುವುದಕ್ಕೆ ಹೋಗುತ್ತಾರೆ. ಮುಂದೆ ಐದಾರೂ ಆಳುಗಳನ್ನು ಬಿಟ್ಟು ಕೊಯ್ದುಕೊಂಡು ಹೋಗುತ್ತಾರೆ, ಹಿಂದೆ ನೀರು ನುಗ್ಗಿಬಿಡುತ್ತದೆ. ನೀರೆಲ್ಲಾ ತುಂಬಿಕೊಂಡು ನಾಲಾ ಮೇಲೆ ಹೋಗುತ್ತಿರುತ್ತದೆ. ಆಗ ಚೆಕ್ ಮೆಷರ್‌ಮೆಂಟ್ ಮಾಡುತ್ತಾರೆ. ಆದಕ್ಕೆ ವಿಷಯ ಸಮಿತಿಯವರು ಒಂದು ಶಿಫಾರಸ್ಸು ಮಾಡಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಒಂದು ಪ್ಯಾರಾದಲ್ಲಿ

ಏನಿದೆ ಅದನ್ನು ನಾನು ಇಲ್ಲಿ ಓದುವುದಕ್ಕೆ ಇಷ್ಟ ಪಡುತ್ತೇನೆ. "ಅವಶ್ಯಕತೆ ಇದ್ದಲ್ಲಿ ಮಾತ್ರ ಮಾರ್ಚ್ ಕೊನೆ ಎಂಬುದರ ಬದಲು ಡಿಸೆಂಬರು ಕೊನೆ ಎಂದು ಪರಿಗಣಿಸಿ ಅದಕ್ಕೆ ತಾಂತ್ರಿಕ ಹಾಗೂ ಆಡಳಿತಾತ್ಮಕ ಮಂಜೂರಾತಿ ಮಾಡಿ, ಡಿಸೆಂಬರ್ ಕೊನೆಯಲ್ಲಿ ಹಣಕಾಸಿನ ಇಲಾಖೆಯಿಂದ ಪುನರ್ ವಿನಿಯೋಗಕ್ಕೆ ಅನುಮತಿ ಪಡೆಯಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ" ಇದು ಬಹಳ ಅತ್ಯಗತ್ಯ. ನೀರಾವರಿ ಹಾಗೂ ಕೃಷಿ ಇವೆರಡು ಬಹಳ ಉಪಯುಕ್ತವಾದುದು. ಮಳೆಗಾಲ ಪ್ರಾರಂಭವಾದ ಮೇಲೆ ನಾವು ಪ್ರೋಗ್ರಾಂ ಪ್ರಾರಂಭ ಮಾಡುತ್ತೇವೆ. ಮಳೆಗಾಲ ಪ್ರಾರಂಭವಾಯಿತು ಎಂದರೆ ಆಗ ನಾವು ಬೀಜ ಬಿತ್ತನೆಗೆ ಓಡಾಡುತ್ತೇವೆ ಇಂತಹ ಸಂದರ್ಭದಲ್ಲಿ ನಾನೇನು ಅಂಕಿಅಂಶಗಳನ್ನು ಹೇಳಿದ್ದೇನೆ ಈ 33,376 ಕೆರೆಗಳ ಬಗ್ಗೆ ನಾವು ಚಿಂತನೆ ಮಾಡದೇ ಹೋದರೆ ನಮ್ಮ ದೇಶ ಯಾವ ಕಾರಣಕ್ಕೂ ಕೂಡ ಉದ್ಧಾರವಾಗುವುದಿಲ್ಲ. ದಯಮಾಡಿ ಈ ಕೆರೆಗಳನ್ನು ಅಭಿವೃದ್ಧಿ ಮಾಡಿ, ಈ ಕೆರೆಗಳಿಗೆ ಹೆಚ್ಚಿನ ಅನುದಾನ ಕೊಡಿ. 35,000 ಎಕರೆಗೆ ನೀರು ಒದಗಿಸಬೇಕಾದರೆ, ನಮ್ಮ ತಾಲ್ಲೂಕು ಮತ ಕ್ಷೇತ್ರದಲ್ಲಿ ಇರುವಂತಹ ಸಮಸ್ಯೆ ಎಲ್ಲಾ ಕಡೆ ಇದೆಯೆಂದು ನಾನು ಭಾವಿಸುತ್ತೇನೆ. ಹತ್ತಾರು ವರ್ಷಗಳಿಂದ ಆ ಪ್ರಕೃತಿ ದತ್ತವಾಗಿ ಬಂದಂತಹ ಕೆರೆಗಳಿಗೆ ಏನೇನೂ ಅಭಿವೃದ್ಧಿ ಕೆಲಸ ಮಾಡಿಲ್ಲ. ಆದರೆ ಭಾರಿ ನೀರಾವರಿಗೆ ಕೋಟ್ಯಾಂತರ ರೂಪಾಯಿಗಳನ್ನು ಕೊಡುತ್ತೀರಿ. ಆದಕ್ಕೆ ಬೇಕಾದಷ್ಟು ಕಟ್ಟೆಗಳನ್ನು ಕಟ್ಟಬೇಕು, ಎಲೆಕ್ಟ್ರಿಕ್ ಕೊಡಬೇಕು, ಆದಕ್ಕೆ ಕೋಟಿಗಟ್ಟಲೆ ಖರ್ಚು ಮಾಡುತ್ತೀರಿ. ಆದರೆ ಈ ಸಣ್ಣ ನೀರಾವರಿ ಪ್ರಕೃತಿದತ್ತವಾಗಿ ಬಂದಿರುವುದನ್ನು ನಾವು ಅಭಿವೃದ್ಧಿಗೊಳಿಸಬೇಕಾಗಿದೆ. ನೋಡಿ ಸಣ್ಣ ನೀರಾವರಿಯಲ್ಲಿ ಒಂದು ವೆಹಿಕಲ್ ಇಲ್ಲ. ಈ 33,376 ಕೆರೆಗಳನ್ನು ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವುದಕ್ಕೆ ಹತ್ತು ರೂಪಾಯಿ ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ಇದೆಲ್ಲವನ್ನು ಸಣ್ಣ ನೀರಾವರಿ ಇಲಾಖೆಗೆ ಅಥವಾ ಭಾರಿ ನೀರಾವರಿಗೆ ಅಥವಾ ಜಲ ಸಂಪನ್ಮೂಲ ಇಲಾಖೆಗಾದರೂ ತೆಗೆದುಕೊಂಡು ಅದನ್ನು ಅಭಿವೃದ್ಧಿಪಡಿಸಿ. ಹಾಗೂ ಇವುಗಳನ್ನು ಸೊಸೈಟಿಗೆ ಕೊಡುವಂತಹ ವಿಚಾರ ಸೂಕ್ತವೆಂದು ಮತ್ತೊಮ್ಮೆ ಹೇಳುತ್ತೇನೆ. ಈಗ ನಾನು ಹೇಳುವಂತಹ ಅಂಕಿಅಂಶದಿಂದ ತಮಗೆ ತಿಳಿಯುವುದೇನೆಂದರೆ, 1960-61 ರಲ್ಲಿ ಕೆರೆಗಳಿಂದ ಅನುಕೂಲವಾಗುತ್ತಿದ್ದುದ್ದು 3,44,000 ಹೆಕ್ಟೇರ್‌ಗೆ ಇದ್ದದ್ದು ಈಗ 2,40,000 ಹೆಕ್ಟೇರ್‌ಗೆ ಇಳಿದಿದೆ. ನಮಗೆ ಪ್ರಕೃತಿ ಕೊಟ್ಟಿರತಕ್ಕಂಥ ಕೆರೆಗಳನ್ನು ನಾಶ ಮಾಡಿದ್ದೇವೆ. ಆದಕ್ಕೆ ಇದೇ ನಿದರ್ಶನ ಸಾಕು. ಶ್ರೀ ಎಂ. ಮಹದೇವ್ (ರೇಷ್ಮೆ ಸಚಿವರು) ಈಗ ಹೆಸರಿಗೆ ಏನೋ ಕೆರೆ ಎಂದು ಇರುತ್ತದೆ. ಬಹಳ ವರ್ಷಗಳಿಂದ ಎಲ್ಲಾ ತುಂಬಿ ಮಟ್ಟ ಬಂದುಬಿಟ್ಟು ಅಂತಹ ಕೆರೆಗಳನ್ನು ಹೆಸರಿಗೆ ಇಟ್ಟುಕೊಂಡಿದ್ದರೆ ಅದನ್ನು ಏನು ಮಾಡಬೇಕು ಹೇಳಿ?

ಶ್ರೀ ಎ. ಪಾಪಣ್ಣ:— ಮಾನ್ಯ ಸಚಿವರು, ಬಹಳ ವರ್ಷಗಳಿಂದ ಹೂಳು ತುಂಬಿಕೊಂಡು ಬಿಟ್ಟಿದೆ ಎಂದು ಹೇಳುತ್ತಾರೆ. ಅದನ್ನು ಅಭಿವೃದ್ಧಿ ಮಾಡದೇ ಹೋದರೆ ನೀವೇನು ಅದನ್ನು ತೋಟ ಮಾಡಿಕೊಳ್ಳಬೇಕೆಂದು ಇದ್ದೀರಾ? ಬಹಳ ಜನ ತೋಟ ಮಾಡಿಕೊಂಡಿದ್ದಾರೆ. 33,376 ಕೆರೆಗಳನ್ನು ನೀವು ಬಿಡಿಸಿ. ಇವತ್ತೂ ಮಾನ್ಯ ಮುಖ್ಯಮಂತ್ರಿಗಳು ಒಂದು ದಿಟ್ಟ ನಿಲುವು ತೆಗೆದುಕೊಂಡಿದ್ದಾರೆ. ಅದೇನೆಂದರೆ ಕೆರೆಗಳ ಒತ್ತುವರಿಯನ್ನು ಕಡ್ಡಾಯವಾಗಿ ಬಿಡಿಸತಕ್ಕದ್ದು. ಆ ದಿಟ್ಟ ನಿಲುವನ್ನು ತಾಳಿರುವುದಕ್ಕೆ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ದಯಮಾಡಿ ಇವತ್ತು ಅದನ್ನು ಮಾಡಿದರೆ, ದೇಶ ಉಳಿಯುತ್ತದೆ. ಇರುವಂತಹ 36,696 ಎಕರೆಯಲ್ಲಿ 3,000 ಎಕರೆಯಲ್ಲಿ ಮಾತ್ರ ನೀವು ನೀರಾವರಿ ಕೆಲಸ ಮಾಡುತ್ತಿದ್ದೀರಿ.33,000 ಸಾವಿರ ಎಕರೆ ಎನ್‌ಕ್ರೋಚ್‌ಮೆಂಟ್ ಆಗಿದೆ. ಬಂಡಿ ಸರಿಯಿಲ್ಲ, ತೂಬನ್ನು ಕಿತ್ತುಕೊಂಡು ಹೋಗಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):— ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಿಲುವನ್ನು ದಿಟ್ಟವಾಗಿ ತೆಗೆದುಕೊಂಡರೆ ಸಾಲದು. ಅದು ಕಾರ್ಯಗತವಾಗಬೇಕು. ಈ ವಿಚಾರದಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿರುವುದನ್ನು ತೆಗೆಯುವುದಕ್ಕೆ ತಹಸೀಲ್ದಾರ್ ಹೋಗಬೇಕಾ? ಇಂಜನಿಯರ್ ಹೋಗಬೇಕಾ? ಯಾರು ಹೋಗಬೇಕು? ಗೊತ್ತಿಲ್ಲ. ಅವರೆಲ್ಲರೂ ಕೂಡ ಈ ರಾಜಕಾರಣಿಗಳಿಗಿಂತ ಜನರ ಜೊತೆ ಬೆರೆತು ಹೋಗಿದ್ದಾರೆ. ಅವರ್‍ಯಾರು ಕೂಡ ನಿಷ್ಠುರರಾಗುವುದಕ್ಕೆ ತಯಾರಿಲ್ಲ. ಕೆರೆಯೊಳಗೆ ಸಾಗುವಳಿ ಮಾಡಿರುವವರನ್ನು ಒಕ್ಕಲು ಒಬ್ಬಿಸುವುದಕ್ಕೆ ಯಾವ ಅಧಿಕಾರಿ ತಯಾರಾಗಿಲ್ಲ. ಇದರ ಬಗ್ಗೆ ಸರ್ಕಾರಕ್ಕೆ ಬದ್ಧತೆ ಇಲ್ಲದೆ ಹೋದರೆ ಬಹಳ ಕಷ್ಟವಾಗುತ್ತದೆ. ಎಲ್ಲಾ ಕೆರೆಗಳ ಪರಿಸ್ಥಿತಿ ಇದೆ ರೀತಿಯಾಗಿದೆ. ಏನು ಕೆರೆ ಒತ್ತುವರಿಯಾಗಿದೆ ಅವುಗಳನ್ನು ಬಿಡಿಸುವುದಕ್ಕೆ ಯಾವುದಾದರೂ ಅಧಿಕಾರಿಯನ್ನು ಜವಾಬ್ದಾರಿಯನ್ನಾಗಿ ಮಾಡಿ. ಇದುವರೆಗೂ ಏನಾದರೂ ಪ್ರಗತಿ ಆಗಿದೆಯೇ? ಏನೂ ಆಗಲಿಲ್ಲ. ಒಂದು ವರ್ಷದಿಂದ ಇದು ಮಿಡಿಯಾದಲ್ಲಿ ಬರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಹೋದ ಕಡೆಯಲ್ಲೆಲ್ಲಾ ಅದನ್ನು ಬಿಡುವುದಿಲ್ಲವೆಂದು ಹೇಳುತ್ತಿದ್ದಾರೆ. ಕೃಷಿ ಹಾಗೂ ಸಣ್ಣ ನೀರಾವರಿ ಸಚಿವರು ಹೇಳುತ್ತಿದ್ದಾರೆ. ಕಾರ್ಯಗತ ಏನಾಗಿದೆ ಹೇಳುತ್ತೀರಾ? ಏನೇನೂ ಆಗಲಿಲ್ಲ. ಇಡೀ ರಾಜ್ಯದಲ್ಲಿ ಸಾಗುವಳಿ ಮಾಡಿರುವವರ ಒಂದು ಬಲಾಢ್ಯ ಪ್ರದರ್ಶನ ವಾಗುತ್ತಿದೆ.

ಶ್ರೀ ಎ. ಪಾಪಣ್ಣ:— 1960 ರಲ್ಲಿ ಈ ರಾಜ್ಯದಲ್ಲಿ ಇರುವಂತಹ ಕೆರೆಗಳ ಒಂದು ಡಿಸೈನ್ ಏನು ಮಾಡಿದರು, ಆಗ ಮೂರು ಲಕ್ಷ ಹೆಕ್ಟೇರಿಗೆ ನೀರಾವರಿಯಾಗುತ್ತಿತ್ತು. ಅದನ್ನು 9,44,000 ಎಕರೆಗೆ ತೆಗೆದುಕೊಂಡು ಹೋಗಬೇಕು ಈ ಸಣ್ಣ ನೀರಾವರಿಗೆ ಎಂದು ಹೇಳಿದರು. ಆದರೆ ಎಲ್ಲಿಗೆ ನಿಲ್ಲಿಸಿದಿರಿ? ಮೂರು ಲಕ್ಷ ಹೆಕ್ಟೇರ್ ಇದ್ದದ್ದನ್ನು ಎರಡು ಲಕ್ಷ ಹೆಕ್ಟೇರ್ ತಂದು ನಿಲ್ಲಿಸಿದಿರಿ. ಆದರೆ ಹಣ ಪೂರ್ತಿ ಖರ್ಚಾಯಿತು.

ಆದರೆ ಇನ್ನು 7,44,000 ಎಕರೆ ನೀರಾವರಿಯಾಗಿಲ್ಲ. ಕಾರಣವೇನು? ಸಣ್ಣ ನೀರಾವರಿ ಎಂದು ಕೆರೆಗಳನ್ನು ಏನು ಜಿಲ್ಲಾ, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗೆ ಕೊಟ್ಟಿರಿ, ಅವರಲ್ಲಿ ಒಂದು ರೂಪಾಯಿ ಹಣ ಇಲ್ಲ. 36,000 ಕೆರೆಗಳಲ್ಲಿ ಮೂರು ಸಾವಿರ ಎಕರೆ ಮಾತ್ರ ಸಣ್ಣ ನೀರಾವರಿ ಇಲಾಖೆಯಲ್ಲಿ ಮಾಡುತ್ತೀರಿ ಈ ಕೆರೆಗಳನ್ನು ನೀವು ಸಮೃದ್ಧಿಯಾಗಿ ಮಾಡಿ, ಒತ್ತುವರಿ ವಿಚಾರದಲ್ಲಿ ಏನು ದಿಟ್ಟ ನಿಲುವು ತೆಗೆದುಕೊಂಡಿದ್ದೀರಿ ಅದನ್ನು ಕಾರ್ಯಗತ ಮಾಡಿಸಿ ಮುಂದುವರೆಸಿ, ಆ ಕೆರೆಗಳನ್ನು ಹೂಳೆತ್ತಿಸಿ ಅಬಿವೃದ್ಧಿ ಮಾಡಿ, ಅದನ್ನು ಏನು ನೀರು ಬಳಕೆದಾರರ ಸಹಕಾರ ಸಂಘಗಳನ್ನು ಮಾಡಿದ್ದೀರಿ ಅದನ್ನು ಕಾರ್ಯಗತ ಮಾಡಿಸಿ ಮುಂದುವರೆಸಿ, ಆ ಕೆರೆಗಳನ್ನು ನೀವು ಹೂಳೆತ್ತಿಸಿ ಅಭಿವೃದ್ಧಿ ಮಾಡಿ, ಅದನ್ನು ಏನು ನೀರು ಬಳಕೆದಾರರ ಸಹಕಾರ ಸಂಘಗಳನ್ನು ಮಾಡಿದ್ದೀರಿ, ಅವರ ಕೈಗೆ ಅದನ್ನು ಕೊಟ್ಟಾಗ ಮಾತ್ರ ಈ ರಾಜ್ಯ ಸಮೃದ್ಧಿಯಾಗುವುದರಲ್ಲಿ ಎರಡು ಮಾತಿಲ್ಲ. ಹಿಂದೆ 1947 ರಲ್ಲಿ ಸ್ವಾತಂತ್ರ್ಯ ಬಂದಂತಹ ಸಮಯದಲ್ಲಿ ಗಂಗಾ-ಕಾವೇರಿ ಸಂಗಮ ಮಾಡಬೇಕು ಎಂದು ಒಂದು ಯೋಜನೆ ಮಾಡಿ, ಅವತ್ತು ಬಹಳ ಸುಲಭವಾಗಿ ಮಾಡಬೇಕೆಂದು ಸರ್ದಾರ್ ವಲ್ಲಭಬಾಯ್ ಪಟೇಲ್ ಅವರು ಅದನ್ನು ಮಂಡಿಸಿದಾಗ ಅದು ಏನೇನೋ ಕಾರಣದಿಂದ ಆಗಲಿಲ್ಲ. ಇವತ್ತು ಇಲ್ಲಿಂದ ತಮಿಳುನಾಡಿಗೆ ಹೋಗಬೇಕು ಬಸ್ಸು ಎಂದರೆ ಪರ್ಮಿಟ್ ಕೇಳಬೇಕು. ಇವತ್ತು ಉತ್ತರ ಪ್ರದೇಶದ ಕಡೆಗೆ ಮೀರತ್, ಡೆಹರಾಡೂನ್, ಮಸ್ಸೂರಿ, ಹೃಷಿಕೇಶ, ಹರಿದ್ವಾರ ಹತ್ತಿರ ಹೋದರೆ ಗಂಗಾ ಹರಿಯುವುದು, ಯಮುನೋತ್ರಿ, ಗಂಗೋತ್ರಿಯ ನೀರು ಬರುವದು ಒಂದು ಕಿಲೋಮೀಟರ್ ಅಗಲಕ್ಕೆ. 1.5 ಪರ್ಸೆಂಟ್ ಗಂಗೆ ನೀರನ್ನು ಈ ದೇಶದಲ್ಲಿ ಬಳಸಿಕೊಳ್ಳುತ್ತಿದ್ದಾರೆ. ಇನ್ನು ಉಳಿದಂತಹ 98.5 ಪರ್ಸೆಂಟ್ ನೀರು ಸಮುದ್ರಕ್ಕೆ ಹರಿದು ಹೋಗುತ್ತಿದೆ. ಈ ರಾಷ್ಟ್ರವನ್ನು ಸಂವೃದ್ಧಿ ಮಾಡುವಂಥಾದ್ದು, ನಮ್ಮ ಭಾರತ ದೇಶ ಕೃಷಿ ಪ್ರಧಾನವಾದದ್ದು, ಈ 98.5 ರಷ್ಟು ನೀರನ್ನು ಏಕೆ ಸಮುದ್ರಕ್ಕೆ ಕಳುಹಿಸುತ್ತಿದ್ದೀರೆಂಬ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ನಮ್ಮ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದವರಿಗೆ ಗಂಗಾ ಮತ್ತು ಕಾವೇರಿ ಕೆಲಸವನ್ನು ಕೈಗೊತ್ತಿಕೊಳ್ಳುವಂತೆ ಹೇಳಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಯವರು ಹೋಬಳಿಗೆ ಒಂದು ಕೆರೆಯನ್ನು ದುರಸ್ತಿ ಮಾಡುವ ಬಗ್ಗೆ ತೆಗೆದುಕೊಳ್ಳುತ್ತೇವೆಂದು ಹೇಳಿ, ಅವರು ಈ ಒಂದು ದಿಟ್ಟ ನಿಲುವನ್ನು ತೆಗೆದುಕೊಂಡಿರುವ ಜೊತೆಗೆ ಅವರು ಕೇಂದ್ರ ಸರ್ಕಾರದವರು ಹೂಳು ಎತ್ತುವ ಕೆಲಸಕ್ಕೆ ಅಡ್ಡಿಯನ್ನುಂಟು ಮಾಡುತ್ತಾರೆಂಬ ಮಾತನ್ನು ಹೇಳಿದರು. ತಮಿಳುನಾಡಿನ ಸರ್ಕಾರದವರು 1983ರಲ್ಲಿ ತಮ್ಮ ಕೆರೆಗಳ ಹೂಳು ತೆಗೆಯುವಂತಹ ಕೆಲಸದ ಬಗ್ಗೆ ಕೇಂದ್ರ ಸರ್ಕಾರದ ಮುಂದೆ ತಮ್ಮ ಯೋಜನೆಯನ್ನು ಮಂಡಿಸಿದಾಗ ಅಂದು ತಮ್ಮ ಕರ್ನಾಟಕ ರಾಜ್ಯದಲ್ಲಿದ್ದಂತಹ ಸರ್ಕಾರ ಇವರಿಗೆ ಕೆರೆಗಳಲ್ಲಿ ಹೂಳು ತೆಗೆಯುವುದಕ್ಕೆ

ಅನುಮತಿಯನ್ನು ಕೊಡಬಾರದೆಂದು ತೊಡರುಗಾಲು ಹಾಕಿತು. ಈಗ ಅದಕ್ಕೆ ತಮಿಳುನಾಡಿನವರು ನೀವು ಏನಾದರೂ ಇದರ ಬಗ್ಗೆ ಯೋಜನೆ ಹಾಕಿದರೆ ನಾವು ತೊಡರುಗಾಲು ಹಾಕುತ್ತೇವೆಂದು ಹೇಳಿದರು. ಅದಕ್ಕೆ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಯವರು ಯಾರೇ ತೊಡರುಗಾಲು ಹಾಕಿದರೂ ನಾವು ಮಾಡೇ ಮಾಡುತ್ತೇವೆನ್ನುವಂತಹ ದಿಟ್ಟ ನಿಲುವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಇಲ್ಲಿ ನಾವು ಅಂದು ತಮಿಳುನಾಡಿನವರಿಗೆ ಅಬ್ಜೆಕ್ಷನ್ ಹಾಕಿದ್ದಕ್ಕೆ ಈಗ ನಮಗೆ ಅಬ್ಜೆಕ್ಷನ್ ಹಾಕಿದ್ದು, ಅದಕ್ಕೆ ಏನೂ ಕಾನೂನು ಬದ್ಧವಿಲ್ಲ. ಇಲ್ಲಿ ನಮ್ಮ ಕೆರೆ ನಮ್ಮ ಹಕ್ಕು, ನಮ್ಮ ರಸ್ತೆ, ನಮ್ಮ ಹೊಲ ಇದು ಇನ್ನು ಜಾರಿಗೆ ಬಂದಿಲ್ಲ. ನಾನು ಮುಖ್ಯ ಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ನಮ್ಮ ರಸ್ತೆ ಊರಿನಿಂದ ಕೆರೆಕಟ್ಟೆಗಳಿಗೆ, ಊರಿನಿಂದ ಜಮೀನುಗಳಿಗೆ ಹೋಗುವ ರಸ್ತೆ, ದಿನನಿತ್ಯ ಜನ, ಜಾನುವಾರುಗಳು ಓಡಾಡುವಂತಹ ಒಣ ರಸ್ತೆ, ಇವುಗಳನ್ನು ಜಿಲ್ಲಾ ಪಂಚಾಯತ್‌ನವರು, ತಾಲ್ಲೂಕು ಪಂಚಾಯತ್‌ನವರು ತೆಗೆದುಕೊಳ್ಳುವುದಿಲ್ಲ, ಪಿ.ಡಬ್ಲ್ಯೂ.ಡಿ ಇಲಾಖೆಯವರು ತೆಗೆದುಕೊಳ್ಳುವುದಿಲ್ಲ. ಇವರನ್ನು ಕೇಳಿದರೆ ಇವು ನಮಗೆ ಸೇರಿಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಎರಡು, ಮೂರು ಸಾರಿ ಮನವಿಯನ್ನು ಕೊಟ್ಟು, ಎಲ್ಲರೂ ಸಾಕಷ್ಟು ಸಲ ಹೇಳಿದಾಗ ಅವರು ನಮ್ಮ ಹೊಲ, ನಮ್ಮ ರಸ್ತೆ, ಎಂದು ಬಜೆಟ್ ನಲ್ಲಿ ಮಾಡಿದ್ದಾರೆ. ಅದು ಕಾರ್ಯ ರೂಪಕ್ಕೆ ಬರುತ್ತಾ ಇಲ್ಲ, ದಯಮಾಡಿ ಅದನ್ನು ಕಾರ್ಯಗತ ಮಾಡಬೇಕೆಂದು ಮನವಿ ಮಾಡುತ್ತೇನೆ. ಇನ್ನು ಸಣ್ಣ ನೀರಾವರಿ ಇಲಾಖೆಯ ಬಗ್ಗೆ ಹೇಳುವುದಾದರೆ ರಾಜ್ಯದಲ್ಲಿ 35 ಸಾವಿರ ಕೆರೆಗಳು ಏನಿರೆ, ಅದರಲ್ಲಿ ನನ್ನ ಕ್ಷೇತ್ರಕ್ಕೆ ಹೆಚ್ಚಿಗೆ ಅನುದಾನವನ್ನು ಕೊಟ್ಟು ಈ ಎಲ್ಲಾ ಕೆರೆಗಳನ್ನು ಅಭಿವೃದ್ಧಿಪಡಿಸಬೇಕೆಂದು ಕೇಳಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಉಪಾಧ್ಯಕ್ಷರೇ, ನಾವು ಬೆಳಿಗ್ಗೆ ಎರಡು ವಿಚಾರಗಳನ್ನು ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೆವು, ಮಾನ್ಯ ಗೃಹ ಸಚಿವರು ಇವತ್ತು ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ಮೊದಲನೆಯದಾಗಿ ಮೂರು ದಿವಸಗಳ ಹಿಂದೆ ಚಿಂಚೋಳಿ ತಾಲ್ಲೂಕಿನಲ್ಲಿ ಆಗಿರುವಂತಹ ಶಿಶುಗಳ ಅಪಹರಣದ ಬಗ್ಗೆ ಎರಡು-ಮೂರು ದಿವಸಗಳಲ್ಲಿ ಹೇಳಿಕೆ ಕೊಡುತ್ತೇನೆಂದು ಹೇಳಿದ್ದರು. ಎರಡನೆಯದಾಗಿ ನಿನ್ನೆ ಬೆಂಗಳೂರು ನಗರದಲ್ಲಿ ಆಗಿರುವಂತಹ ಗಲಭೆ ಬಗ್ಗೆ, ಈಗ ಮಾನ್ಯ ಗೃಹ ಸಚಿವರು ಇದನ್ನು ಸದನಕ್ಕೆ ತಿಳಿಸಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

8) ಮಂತ್ರಿಗಳ ಹೇಳಿಕೆ

ವಿಷಯ: ಚಿಂಚೋಳಿ ತಾಲ್ಲೂಕಿನಲ್ಲಿ ಆಗಿರುವಂಥ ಶಿಶುಗಳ ಅಪಹರಣ ಕುರಿತು:

+ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಮಾನ್ಯ ಉಪಾಧ್ಯಕ್ಷರೇ, ನಾನು ಈ ವಿಷಯವನ್ನು ತಿಳಿಸಲು ಎರಡು ದಿವಸಗಳಿಂದ ಹೇಳಬೇಕೆಂದು ಕಾಯುತ್ತಿದ್ದೆ. ಮಾನ್ಯ ಸಿಂಧ್ಯರವರು ಈ ವಿಷಯಗಳನ್ನು ಪ್ರಸ್ತಾಪ ಮಾಡಿದ ಮೇಲೆ ಈ ಸದನದಲ್ಲಿ ಹೇಳಿಕೆಯನ್ನು ಕೊಟ್ಟು, ನಂತರ ಮೇಲ್ಮನೆಯಲ್ಲೂ ಇದರ ಬಗ್ಗೆ ಉತ್ತರವನ್ನು ಹೇಳಬೇಕಾಗಿದೆ. ಈಗ ಈ ಎರಡು ಪ್ರಶ್ನೆಗಳಿಗೂ ಉತ್ತರವನ್ನು ಕೊಟ್ಟ ನಂತರ ಮೇಲ್ಮನೆಗೆ ಹೋಗುತ್ತೇನೆ. ನಾನು ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ಸದನಕ್ಕೆ ನೀಡುತ್ತೇನೆ.

ಗುಲ್ಬರ್ಗ ಜಿಲ್ಲೆ, ಚಿಂಚೋಳಿ ತಾಲ್ಲೂಕಿನ ಲಂಬಾಣಿ ತಾಂಡಾಗಳಲ್ಲಿ ಹೆಣ್ಣು ಶಿಶುಗಳ ಮಾರಾಟ ನಡೆಯುತ್ತಿದೆ ಎನ್ನುವ ಬಗ್ಗೆ ವಿಷಯ ಗೊತ್ತಾಗಿ, ಕೊಂಚಾವರಂ ಪೊಲೀಸ್ ಠಾಣೆಯ ಪೊಲೀಸರು ಒಂಟಿಚಿಂತಾ ತಾಂಡಾದಲ್ಲಿ ವಾಸವಾಗಿರುವ ಚಾಂಗ್ಲಿಬಾಯಿ ಎಂಬುವವರನ್ನು ವಿಚಾರಿಸಿ ಅವರ ದೂರು ಹೇಳಿಕೆ ಪಡೆದುಕೊಂಡು, ಕೊಂಚಾವರಂ ಪೊಲೀಸ್ ಠಾಣೆ ಮೊಕದ್ದಮೆ ಸಂ.16/2001 ಕಲಂ 373 ರೆಡ್ ವಿತ್ 34 IPC ಪ್ರಕಾರ ದಿನಾಂಕ: 28.3.2001ರಂದು ಕೇಸನ್ನು ದಾಖಲಿಸಿಕೊಂಡಿರುತ್ತಾರೆ. ಅದೇ ದಿವಸ ಜವಾಹರ ತಾಂಡದ ವಾಸಿ ಮಾರವಾಣೀಬಾಯಿ ಎಂಬುವವರ ಇನ್ನೊಂದು ಫಿರ್ಯಾದು ಹೇಳಿಕೆ ತೆಗೆದುಕೊಂಡು, ಮೊಕದ್ದಮೆ ಸಂ.17/2001 ಕಲಂ 373 ರೆಡ್ ವಿತ್ 34 IPC ಪ್ರಕಾರ ಕೇಸು ದಾಖಲಿಸಿಕೊಂಡಿದ್ದು, ಈ ಎರಡೂ ಮೊಕದ್ದಮೆಗಳ ತನಿಖೆಯನ್ನು ಸ್ಥಳೀಯ ಪೊಲೀಸರೇ ಪ್ರಾರಂಭದಲ್ಲಿ ಕೈಗೊಂಡಿರುತ್ತಾರೆ.

ಈ ರೀತಿ ಹೆಣ್ಣು ಶಿಶುಗಳ ಮಾರಾಟದ ಬಗ್ಗೆ ಸುದ್ದಿ ಮಾಧ್ಯಮಗಳಲ್ಲಿ ವರದಿಯಾಗಿ ಸಾರ್ವಜನಿಕರ ಹಾಗೂ ಸರ್ಕಾರದ ಗಮನ ಸೆಳೆದಿದ್ದು, ಮಾನ್ಯ ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ ಬೆಂಗಳೂರು ಇವರು ಈ ಎರಡೂ ಮೊಕದ್ದಮೆಗಳ ಕೂಲಂಕುಷ ತನಿಖೆ ಮಾಡಲು ಸಿ.ಓ.ಡಿ.ಗೆ ವಹಿಸಿಕೊಟ್ಟಿರುತ್ತಾರೆ. ಸಿ.ಓ.ಡಿ.ಯಿಂದ ಹಿರಿಯ ಅಧಿಕಾರಿಗಳನ್ನು ಒಳಗೊಂಡ ತಂಡ ಸ್ಥಳಕ್ಕೆ ಭೇಟಿ ನೀಡಿ ಸಂಬಂಧಪಟ್ಟವರನ್ನು ವಿಚಾರಿಸಿದರಲ್ಲದೇ, ಆಂಧ್ರಪ್ರದೇಶದ ತಾಂಡೂರಿನಲ್ಲಿರುವ ಜಾನ್ ಅಬ್ರಾಹಂ ಮೆಮೋರಿಯಲ್ ಚಿತಾನಿ ಹೋಂ ಇಲ್ಲಿಗೂ ಭೇಟಿ ನೀಡಿ ತನಿಖೆ ಮಾಡಲಾಗಿದೆ. ತನಿಖೆ ಕಾಲದಲ್ಲಿ, ಚಿಂಚೋಳಿ ತಾಲ್ಲೂಕಿನ ಕೊಂಚಾವರಂ ಪೊಲೀಸ್ ಠಾಣೆಯ ಸರಹದ್ದಿನಲ್ಲಿರುವ ಒಂಟಿಚಿಂತಾ ತಾಂಡ, ಜವಾಹರನಗರ ತಾಂಡ, ಜೆಲ್ಲಾರ್ ಷಾ ತಾಂಡ, ಧರ್ಮನಗರ ತಾಂಡ, ಧರ್ಮಸಾಗರ ತಾಂಡ ಹಾಗೂ ಬಡಾ ತಾಂಡಗಳಲ್ಲಿ ತನಿಖೆ ನಡೆಸಿದ್ದು, ಈ ತಾಂಡಗಳಿಂದ ಒಟ್ಟು 17 ಹೆಣ್ಣು ಶಿಶುಗಳ ಮಾರಾಟ ಕಳೆದ ಎರಡು ವರ್ಷಗಳಿಂದೀಚೆಗೆ ಆಗಿದೆಯೆಂದು ತನಿಖೆಯಿಂದ ತಿಳಿದು ಬಂದಿದೆ.

ಈ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಒಟ್ಟು 11 ಜನ ಭಾಗಿಯಾಗಿದ್ದಾರೆಂದು ತನಿಖೆಯಿಂದ ತಿಳಿದು ಬಂದಿದ್ದು, ಅವರ ಪೈಕಿ 7 ಜನರನ್ನು ದಸ್ತಗಿರಿ ಮಾಡಿದ್ದು, ಅವರೆಲ್ಲಾ ನ್ಯಾಯಾಂಗ ಬಂಧನದಲ್ಲಿರುತ್ತಾರೆ. ಉಳಿದ 4 ಜನ ತಲೆಮರೆಸಿಕೊಂಡಿದ್ದು ಅವರನ್ನು ಹುಡುಕಿ ದಸ್ತಗಿರಿ ಮಾಡಲು ಪ್ರಯತ್ನ ನಡೆದಿದೆ. ಶ್ರೀ ಮತಿ ಸಾವಿತ್ರಿ, ವಾಸ ತಾಂಡೂರು, ರಂಗಾರೆಡ್ಡಿ ಜಿಲ್ಲೆ, ಆಂಧ್ರಪ್ರದೇಶ ಎಂಬುವವರು ಆ ಹನ್ನೊಂದು ಜನ ಆರೋಪಿತರ ಪೈಕಿ ಪ್ರಮುಖ ಆರೋಪಿಯಾಗಿದ್ದು. ಇವಳು ಇನ್ನೂ ತಲೆಮರೆಸಿಕೊಂಡಿದ್ದಾಳೆ. ಇವಳು ತಾಂಡೂರಿನಲ್ಲಿ ಇರುವ ಜಾನೆ ಅಬ್ರಾಹಂ ಮೆಮೋರಿಯಲ್ಲಿ ಬೆತಾನಿ ಹೋಂ ಎನ್ನುವ ಸಂಸ್ಥೆಯ ಮುಖ್ಯಸ್ಥಳಾಗಿದ್ದು, ಈ ಸಂಸ್ಥೆಗೆ ಸದರಿ 17 ಹಣ್ಣು ಶಿಶುಗಳನ್ನು ಮಾರಾಟ ಮಾಡಲಾಗಿದೆಯೆಂದು ತಿಳಿದು ಬಂದಿದೆ. ಸದರಿ 11 ಜನ ಆರೋಪಿಗಳ ಮೇಲೆ ದಿನಾಂಕ: 23.6.2001ರಂದು ಭಾರತೀಯ ದಂಡ ಸಂಹಿತೆ ಕಲಂ 363, 365, 268, 118, 420, 468, 465, 467, 471, 342, 343, 344 ಸಹ ಕಲು 34 IPC ಪ್ರಕಾರ ಎರಡೂ ಪ್ರಕರಣಗಳಲ್ಲಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲಾಗಿದೆ. ಉಳಿದ ತನಿಖೆಯನ್ನು ಸಿ.ಆರ್.ಪಿ.ಸಿ. 173 (8) ಕಲಂ ಪ್ರಕಾರ ಮುಂದುವರಿಸಿದೆ.

ಸದರಿ ಪ್ರಮುಖ ಆರೋಪಿಯಾದ ಶ್ರೀಮತಿ ಸಾವಿತ್ರಿ ಎಂಬುವವರು ಗುಲ್ಬರ್ಗ ಅಪರ ಸತ್ರ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಿದ್ದು, ಅದು ವಜಾ ಆಗಿದೆ. ನಂತರ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಮತ್ತೆ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಿದ್ದು, ಅದೂ ಸಹ ದಿನಾಂಕ: 11.7.2001ರಂದು ವಜಾ ಆಗಿದೆ.

ಈ ಪ್ರಕರಣವು ಅಂತರ ರಾಜ್ಯ ಅಪರಾಧಕ್ಕೆ ಸಂಬಂಧಪಟ್ಟಿರುವುದರಿಂದ ಕರ್ನಾಟಕ ಪೊಲೀಸ್ ಅಧಿಕಾರಿಗಳ ಕೆಲಸವನ್ನು ಮೇಲುಸ್ತುವಾರಿ ನೋಡಿಕೊಳ್ಳುವುದು ಅಷ್ಟೇ ಅಲ್ಲದೇ ಕರ್ನಾಟಕ ಮತ್ತು ಆಂಧ್ರಪ್ರದೇಶದ ಪೊಲೀಸರ ನಡುವಿನ ಒಡಂಬಡಿಕೆ ಹಾಗೂ ಸಾಮರಸ್ಯಗಳಿಗೆ ಸಂಬಂಧಿಸಿದಂತೆ ರಾಜ್ಯದ ಒಬ್ಬ ಉನ್ನತ ಮಟ್ಟದ ಅಧಿಕಾರಿಯನ್ನು ಸಹ ನೇಮಕಾತಿ ಮಾಡಲು ಸರ್ಕಾರ ನಿರ್ಧಾರವನ್ನು ತೆಗೆದುಕೊಂಡಿದೆ. ಇದರಂತೆ ಸರ್ಕಾರಿ ಆದೇಶ ಸಂಖ್ಯೆ: ಡಿ.ಪಿ.ಎ.ಆರ್. 75 SPS 2001 ದಿನಾಂಕ: 23.6.2001 ರಂತೆ ವಿಚಾರಣಾ ಅಧಿಕಾರಿಯನ್ನು ನೇಮಕಾತಿ ಮಾಡಿ ಆದೇಶ ಹೊರಡಿಸಲಾಗಿದೆ.

ಚಿಂಚೋಳಿ ತಾಲ್ಲೂಕಿನ ಕೊಂಚಾವರಂ ಹೋಬಳಿಯ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಹಿನ್ನಲೆಯಲ್ಲಿ ಸರ್ಕಾರವು ಈ ಕೆಳಕಂಡ ಹಲವು ವಿಧವಾದ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

1. ಕೊಂಚಾವರಂ ಹೋಬಳಿಯ ವ್ಯಾಪ್ತಿಯಲ್ಲಿ ಬರುವ 26 ಗ್ರಾಮ ಮತ್ತು ತಾಂಡಗಳಲ್ಲಿ ಈಗಿರುವ ಕುಡಿಯುವ ನೀರಿನ ಸರಬರಾಜು ಯೋಜನೆಗಳ ಜೊತೆಗೆ ಹೆಚ್ಚುವರಿಯಾಗಿ 20 ಲಕ್ಷ ರೂಪಾಯಿಗಳ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ.

2. ಈ ಪ್ರದೇಶದಲ್ಲಿ ಬರುವ ಹಳ್ಳಿಗಳಲ್ಲಿ ಗ್ರಾಮೀಣ ಜನರಿಗೆ ಉದ್ಯೋಗ ನೀಡುವ ಸಲುವಾಗಿ ಡಂಗುರ ಸಾರಲಾಗಿದೆ ಹಾಗೂ 50 ಲಕ್ಷ ರೂಪಾಯಿಗಳ ವಿವಿಧ ಕಾರ್ಯಕ್ರಮಗಳನ್ನು ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆಯಡಿ ಹಮ್ಮಿಕೊಳ್ಳಲಾಗಿದೆ.

3. ಈ ತಾಂಡಗಳಲ್ಲಿ ಮಕ್ಕಳ ಆರೋಗ್ಯ (RTH) ಯೋಜನೆಯಡಿ ವಿಶೇಷ ಪ್ರಚಾರ ಆಂದೋಲನ ಕಾರ್ಯಕ್ರಮ ನಡೆಸಲಾಗುತ್ತಿದೆ. ಇದಕ್ಕಾಗಿ ವೈದ್ಯಾಧಿಕಾರಿ ಮತ್ತು ವೈದ್ಯಕೀಯ ಶುಶ್ರೂಷಕರ ತಂಡಗಳನ್ನು ರಚಿಸಿ ವಾಹನ ಸೌಲಭ್ಯಗಳನ್ನು ಒದಗಿಸಿ ಉಪಚಾರ ನೀಡಲಾಗಿದೆ. ಅಲ್ಲದೇ ಕೊಂಚಾವರಂ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರ ಎಂದು ಉನ್ನತೀಕರಿಸಲಾಗುತ್ತಿದೆ.

4. ಈ ಪ್ರದೇಶದಲ್ಲಿ ಪಶು ಸಂಗೋಪನೆ ಮತ್ತು ಹೈನುಗಾರಿಕೆಗೆ ವಿಶೇಷ ಒತ್ತನ್ನು ನೀಡಲಾಗುತ್ತಿದ್ದು, ಹೆಚ್ಚುವರಿ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ.

5. ತಾಂಡದ ಮಕ್ಕಳಿಗೆ ಅನುಕೂಲವಾಗುವ ರೀತಿಯಲ್ಲಿ ಆಶ್ರಮ ಶಾಲೆಯನ್ನು ಹಾಗೂ ಒಂದು ಕಾಲೇಜು ವಸತಿ ನಿಲಯವನ್ನು ಪ್ರಾರಂಭಿಸಲಾಗಿದೆ.

6. ಕುಟೀರ ಜ್ಯೋತಿ ಯೋಜನೆಯಡಿಯಲ್ಲಿ 100 ಮನೆಗಳ ವಿದ್ಯುದ್ದೀಕರಣ ಕೆಲಸವನ್ನು ತೆಗೆದುಕೊಳ್ಳಲಾಗಿದೆ.

7. ರಾಜೀವ್‌ಗಾಂಧಿ ವಸತಿ ಯೋಜನೆಯಡಿಯಲ್ಲಿ ತಾಂಡಗಳಲ್ಲಿ ವಾಸಿಸುವ ಫಲಾನುಭವಿಗಳಿಗಾಗಿ ಮನೆಗಳ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳರಾಗಿದೆ.

8. ವಿಶೇಷ ಘಟಕ ಯೋಜನೆಯಡಿ ವಾಸಿಸುವ ಶೇ.25ರಷ್ಟು ತಾಂಡದ ಜನರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

9. ಕೊಂಚಾವರಂ ವಲಯದಲ್ಲಿ ಬರುವ ಎಲ್ಲಾ ಹಳ್ಳಿ ಮತ್ತು ತಾಂಡಗಳಲ್ಲಿ 23 ಅಂಗನವಾಡಿ ಕೇಂದ್ರಗಳು ನಡೆಯುತಕ್ಕದ್ದು. ಹೆಚ್ಚುವರಿಯಾಗಿ 6 ತಾಂಡಗಳಲ್ಲಿ ಹೊಸ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಿ, ಉಪಹಾರ ಕೇಂದ್ರಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

10. ಸ್ತ್ರೀಶಕ್ತಿ ಯೋಜನೆಯಡಿ ಈ ತಾಂಡಗಳಲ್ಲಿ 53 ಸ್ವಸಹಾಯ ಗುಂಪುಗಳನ್ನು ಪ್ರಾರಂಭಿಸಲಾಗಿದೆ. ಇದರಲ್ಲಿ ಒಟ್ಟು ಮಹಿಳೆಯರ ಸಂಖ್ಯೆ 893 ಜನ ಇದ್ದು, ಎಲ್ಲಾ ಸದಸ್ಯರು ಬ್ಯಾಂಕಿನಲ್ಲಿ ಖಾತೆ ತೆರೆದಿದ್ದು, ಈ ಹಣವನ್ನು ಅವರ ಆಂತರಿಕ ಸಮಸ್ಯೆಗಳಿಗೆ ವಿನಿಯೋಗಿಸಲಾಗುವುದು.

11. ಮನೆ ಬೆಳಕು ಯೋಜನೆಯಡಿ 25 ಜನ ಫಲಾನುಭವಿಗಳಿಗೆ ಸಾಲ ಮಂಜೂರಾತಿಯನ್ನು ನೀಡಲಾಗಿದ್ದು, ಫಲಾನುಭವಿಗಲಿಗೆ ಹಣ ಮಂಜೂರಾತಿ ಪ್ರಕ್ರಿಯೆ ನಡೆದಿದೆ.

12. ಈ ವಲಯ ಶಾಧಿಪೂರ ಗ್ರಾಮ ಮತ್ತು ಇತರ ತಾಂಡಗಳಲ್ಲಿ ಬೃಹತ್ ಪ್ರಮಾಣದ ಜಾಗೃತ ಶಿಬಿರ ಏರ್ಪಡಿಸಿ, ವಿವಿಧ ಯೋಜನೆಗಳ ಕುರಿತು ತಿಳುವಳಿಕೆ ನೀಡಲಾಗಿದೆ.

13. ಪ್ರಕರಣದ ಎಲ್ಲಾ ಹದಿನೆಂಟು ನೊಂದ ಕುಟುಂಬಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಪ್ರೋತ್ಸಾಹಿಸಲಾಗುತ್ತಿದೆ.

14. ಎರಡು ಗಂಗಾ ಕಲ್ಯಾಣ ಯೋಜನೆ ಘಟಕಗಳನ್ನು ಸ್ಥಾಪಿಸಲು ಹಾಗೂ ಪರಿಶಿಷ್ಟ ಜಾತಿ ವರ್ಗದವರಿಗೆ 135 ಕೊಳವೆ ಬಾವಿಗಳನ್ನು ಕೊರೆಯುವ ಸಲುವಾಗಿ ಕಾರ್ಯಕ್ರಮವನ್ನು ಯೋಜಿಸಲಾಗಿದೆ.

ಇದಿಷ್ಟೇ ಅಲ್ಲದೇ ಎಲ್ಲಾ ವಿವಿಧ ಇಲಾಖೆಗಳಿಂದ ದೊರೆಯುವ ಸೌಲಭ್ಯಗಳನ್ನು ಈ ವಲಯದಲ್ಲಿ ಇರುವ ಫಲಾನುಭವಿಗಳಿಗೆ ಆದ್ಯತೆಯ ಮೇರೆಗೆ ವಿತರಿಸಲು ಸರ್ಕಾರ ಕಟ್ಟುನಿಟ್ಟಿನ ಸೂಚನೆಗಳನ್ನು ಕೊಟ್ಟಿದೆ.

ಇದಲ್ಲದೆ ಅರಣ್ಯ ಮಂತ್ರಿಗಳೂ ಕೂಡ ಏನು ಹೇಳಿದ್ದಾರೆಂದರೆ, ಅರಣ್ಯ ಪ್ರದೇಶದಲ್ಲಿ ದೊರೆಯುವ ಉತ್ಪಾದನೆ ಏನಿದೆ, ಏನು ಅವರ ದಿನನಿತ್ಯ ಬಳಕೆಗೆ ಬರುತ್ತದೆ ಹಾಗೂ ಏನಾದರೂ ಸಣ್ಣ ಕೈಗಾರಿಕೆಗೆ ಉಪಯೋಗವಾಗುವುದಿದ್ದರೆ ಅದನ್ನು ಹರಾಜು ಮಾಡುವುದಕ್ಕಿಂತ ನೇರವಾಗಿ ಅವರಿಗೆ ಆ ಉತ್ಪಾದನೆಯನ್ನು ಕೊಡಲು ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಅದರ ದುರುಪಯೋಗವಾಗದ ರೀತಿಯಲ್ಲಿ ನೋಡಿಕೊಳ್ಳಬೇಕಾಗುತ್ತದೆ. ಕೊಂಚಾವರಂ ಗಡಿ ಪ್ರದೇಶದಲ್ಲಿರುವುದರಿಂದ ನಾಳೆ ಆ ನೆಪದಲ್ಲಿ ಹೆಚ್ಚಿನ ಕಟ್ಟಿಗೆ, ಗಿಡಮರಗಳು ಹೋಗುವುದಾಗಬಾರದೆಂದು ಎಚ್ಚರವಹಿಸಿ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಅವರು ಹೇಳಿದ್ದಾರೆ. ಹೀಗೆ ಇಷ್ಟೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ, ಮಾನ್ಯ ಸಿಂಧ್ಯಾ ರವರಿಗೆ ಸಮಾಧಾನಕರ ಉತ್ತರವನ್ನ ಕೊಟ್ಟಿದ್ದೇನೆಂದು ನಾನು ಭಾವಿಸುತ್ತೇನೆ.

ಮಾನ್ಯ ಅಧ್ಯಕ್ಷರೆ ಇನ್ನೊಂದು ವಿಷಯ ಅದೇನೆಂದರೆ ಮೊನ್ನೆ 24-7-2001 ರಂದು ಯಶವಂತಪುರದ ಎನ್‌ಹೆಚ್ ರಸ್ತೆಯಲ್ಲಿ ಗಾರ್ಮೆಂಟ್ ವರ್ಕರ್ಸ್ ಧರಣದ ಸಂದರ್ಭದಲ್ಲಿ ಆದ ವಯಲೆನ್ಸ್‌ಗೆ ಸಂಬಂಧಿಸಿದಂತೆ ಮಾನ್ಯ ಸಿಂಧ್ಯರವರು, ಸುರೇಶ್ ಕುಮಾರ್ ಹಾಗೂ ಅಶೋಕ್‌ರವರು ಒಂದು ಹೇಳಿಕೆಯನ್ನು ಕೊಡಬೇಕೆಂದು ಹೇಳಿದ

ಹಿನ್ನಲೆಯಲ್ಲಿ, ಮೊದಲು ಈ ಸದನದಲ್ಲಿ ಹೇಳಿ ಮತ್ತೆ ಮೇಲ್ಮನೆಯಲ್ಲಿಯ ಸದನದಲ್ಲೂ, ಮಂಡಿಸುವವನಿದ್ದೇನೆ, ಹೇಳಿಕೆ ಆಂಗ್ಲ ಹಾಗೂ ಕನ್ನಡ ಎರಡರಲ್ಲೂ ಇದೆ, ಆಂಗ್ಲ ಪ್ರತಿಯನ್ನು ಈಗ ಓದುತ್ತೇನೆ.

ವಿಷಯ: (ಅ) ಪೀಣ್ಯದಲ್ಲಿರುವ ಗಾರ್ಮೆಂಟ್ ವರ್ಕರ್ಸ್ ಧರಣಿ ಮಾಡಿದ ಸಂದರ್ಭದಲ್ಲಿ ನಡೆದಂಥ ಘಟನೆ ಬಗ್ಗೆ.

There was no prior information or any programme by garment workers for any kind of agitation on 24.7.2001. Since they had no plans themselves no prior arrangements were made for Police bandobast for the agitation on 24.7.2001. However, on 24 7.01, around 9.30 a.m. when it was known that some garment workers are coming out of the factories and planning some agitation the local officers mobilised the force and senior officers immediately rushed. At the initial stage one 1 ACP, 3 Police Inspectors along with Sub Inspectors and staff from neighbouring Police Stations, 3 platoons of Armed Police also joined them. Dy. Commissioner of Police, North also came to the spot. As the number of the crowd started inccasing more and more officers and platoons were rushed. Finally Joint Commissioner of Police, Deputy Commissioner of Police, 2 Asst. Commissioners of Police, 8 Police Inspectors and over 500 Police man were deployed in the area.

The area extending from RMC Yard up to Peenya covers a vast stretch of raod and Industrial area. Police Officers and staff were posted in all the places.

At no stage there was any inadequacy of Police Officers and staff felt by supervisory officers. Police had not resorted to use of force either because there was a large number of ladies, young women and other workers who would have otherwise received serious injuries in stampede etc. Therefore the Police used as much restraint and persuasive methods as possible before finally using the force.

By the time the Police used the force atleast 50% of the crowd had already gone back.

Since the crowd had neither any leaders nor any specific programme it was difficult for the police to plan any specific action on regulating the crowd, Since it was a spontaneous agitation there is no failure in the intelligence. As far as maintenance of law and order is concerned under the circumstances best possible action was taken by the Police.

5.10 ಪಿ.ಎಂ.

ಈ ರೀತಿಯಾಗಿ ಅಲ್ಲಿರತಕ್ಕಂಥ ಪೊಲೀಸರು ಬಹಳ ಸಂಯಮದಿಂದ ವರ್ತನೆ ಮಾಡದೇ ಇದ್ದಿದ್ದರೆ ದೊಡ್ಡ ಅನಾಹುತ ಆಗತಕ್ಕಂಥ ಸಾಧ್ಯತೆ ಇತ್ತು. ಏಕೆಂದರೆ ಅಲ್ಲಿ ಒಂದು ಕಡೇ ಸಾಕಷ್ಟು ಗಾರ್ಮೆಂಟ್ ಫ್ಯಾಕ್ಟರಿಗಳಿದ್ದು ಅಲ್ಲಿ ಕೆಲಸ ಮಾಡತಕ್ಕಂಥ ಸಾವಿರಾರು ಹೆಣ್ಣುಮಕ್ಕಳು ಒಂದೇ ಕಡೆ ಸೇರಿದ್ದರಿಂದ ಅವರು ಅಲ್ಲಿಂದ ಚದುರಿ ಹೋಗುವ ಸಲುವಾಗಿ ಅವರ ಮನವೊಲಿಸುವಲ್ಲಿ ಬಹಳ ತಾಳ್ಮೆಯಿಂದ ವರ್ತನೆ ಮಾಡಿದ್ದಕ್ಕಾಗಿಯೇ ಅಲ್ಲಿ ಆಗತಕ್ಕಂಥ ಅನಾಹುತ ತಪ್ಪಿತ್ತು ಅಲ್ಲದೆ ಯಾವುದೇ ಕೆಟ್ಟ ಹೆಸರೂ ಕೂಡ ಇವತ್ತು ಅಲ್ಲಿ ಪೊಲೀಸರ ಮೇಲೆ ಇಲ್ಲ. ಒಂದು ವೇಳೆ ಅಲ್ಲಿ ತರಾತುರಿಯಲ್ಲಿ ರೋಡ್ ಕ್ಲಿಯರ್ ಮಾಡಲಿಕ್ಕೆ, ದೊಡ್ಡ ಕ್ರೌಡ್ ಇದೆ ಡಿಸ್‌ಪೋಸ್ ಮಾಡಬೇಕು ಅಥವಾ ವಾಹನಗಳು ಹೋಗುವುದಕ್ಕೆ ಅನುಕೂಲ ಮಾಡಬೇಕೆಂದು ತಕ್ಷಣ ಲಾಠಿ ಚಾರ್ಜ್, ಟಿಯರ್ ಗ್ಯಾಸ್ ಅಥವಾ ಫೈರಿಂಗ್ ಮಾಡುವುದಕ್ಕೆ ಮುಂದಾಗಿದ್ದರೆ ದೊಡ್ಡ ಅನಾಹುತ ಆಗತಕ್ಕಂಥ ಸಾಧ್ಯತೆ ಇತ್ತು. ಆ ಅನಾಹುತ ಆಗಬಾರದು ಎನ್ನುವ ದೃಷ್ಟಿಯಿಂದಲೇ ಪೊಲೀಸರು ತಾಳ್ಮೆಯಿಂದ ವರ್ತನೆ ಮಾಡಿದ್ದಾರೆ. ನಿಜವಾಗಿಯೂ ಈ ತಾಳ್ಮೆಯನ್ನು ಪೊಲೀಸರು ಪ್ರದರ್ಶಿಸಿದಕ್ಕಾಗಿಯೇ ನಾವು ಅವರನ್ನು ಮೆಚ್ಚಬೇಕು. ಏಕೆಂದರೆ ಅಲ್ಲಿ ಒಬ್ಬ ಸಬ್ ಇನಸ್ಪೆಕ್ಟರ್‌ಗೆ ಏಟು ಬಿದ್ದಿದೆ, ಸುಮಾರು 25 ರಿಂದ 30 ಪೊಲೀಸರಿಗೆ ಗಾಯವಾಗಿದೆ, ಒಬ್ಬ ಎ.ಸಿ.ಪಿ.ಗೆ ಏಟ ಬಿದ್ದಿದೆ, ಮಲ್ಲೇಶ್ವರಂನ ಒಬ್ಬ ಇನ್ಸ್‌ಪೆಕ್ಟರ್ ಕಣ್ಣಿಗೆ ದೊಡ್ಡ ಗಾಯವಾಗಿದೆ, ಇದು ತಮಗೆಲ್ಲ ಗೊತ್ತಿದೆ. ಅಲ್ಲಿ ಚಳುವಳಿಗಾರರು ಇರಿಟೇಟ್ ಮಾಡಿದರೂ ಕೂಡ ಪೊಲೀಸರು ಬಹಳ ತಾಳ್ಮೆಯಿಂದಿದ್ದು ಅವರಾಗಿಯೇ ಯಾರ ಮೇಲೂ ಕೈಮಾಡಲಿಲ್ಲ. ಏಕೆಂದರೆ ಇದು ಸೂಕ್ಷ್ಮವಾದಂಥ ವಿಷಯವಾದ ಕಾರಣ ಇದರಲ್ಲಿ ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳು ಜಾಸ್ತಿ ಇದ್ದರು, ಪ್ರಾವಿಡೆಂಟ್ ಫಂಡ್ ರೂಲ್ಸ್‌ನ್ನು ಸರ್ಕಾರ ಅಮೆಂಡ್‌ಮೆಂಟ್ ಮಾಡಿ 45 ವರ್ಷಗಳಿಗಿಂತ ಕೆಳಗಿರುವ ನೌಕರರಿಗೆ ಪ್ರಾವಿಡೆಂಟ್ ಫಂಡ್ ಕೊಡುವುದಿಲ್ಲ ಎನ್ನುವಂಥ ಒಂದು ಸುದ್ದಿ

ಹಬ್ಬಿರುವುದರಿಂದ, ಅಲ್ಲಿ ಅಕ್ಕಪಕ್ಕದಲ್ಲಿ ಸಾಕಷ್ಟು ಗಾರ್ಮೆಂಟ್ ಫ್ಯಾಕ್ಟರಿಗಳು ಇದ್ದು ಒಂದೊಂದು ಫ್ಯಾಕ್ಟರಿಗಳಲ್ಲಿ 500 ರಿಂದ 2000ದ ವರೆಗೆ ಎಂಪ್ಲಾಯಿಸ್ ಕೆಲಸ ಮಾಡುತ್ತಿದ್ದುದರಿಂದ ಸ್ವಾಭಾವಿಕವಾಗಿ ಟೆಲಿಫೋನ್ ಮೂಲಕ ಅವರೆಲ್ಲರೂ ಒಬ್ಬರನ್ನೊಬ್ಬರು ಕರೆದುಕೊಂಡು ಬಂದು ಈ ರೀತಿಯಾದಂಥ ವಾತಾವರಣವನ್ನು ಸೃಷ್ಟಿಮಾಡಿದರು. ಆದರೆ ಇಂಥ ಒಂದು ಗಲಭೆಯಲ್ಲಿ ಆ ಹೆಣ್ಣುಮಕ್ಕಳು ನಮಗೆ ಏನೋ ತೊಂದರೆ ಆಗುತ್ತದೆಂದು ತಿಳಿದುಕೊಂಡು ಅವರು ಮತ್ತು ಅವರ ಪಕ್ಕದಲ್ಲಿ ಇರತಕ್ಕಂಥ ಅನೇಕ ಗಂಡಸರೂ ಕೂಡ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ಕೆಲವು ಕಡೆ ಕಲ್ಲು ಎಸೆಯುವುದು, ಕೆ.ಎಸ್.ಆರ್.ಟಿ.ಸಿ. ಬಸ್ಸುಗಳನ್ನು, ಪೊಲೀಸ್ ಜೀಪನ್ನು ಸುಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಅದನ್ನು ನಾವೆಲ್ಲರೂ ಖಂಡಿಸಬೇಕು, ಖಂಡಿಸೋಣ. ಮತ್ತು ಅಂಥವರನ್ನು ಪತ್ತೆಹಚ್ಚತಕ್ಕಂಥ ಕೆಲಸವನ್ನು ಕಮಿಷನರ್‌ರವರು ಮಾಡುತ್ತಿದ್ದಾರೆ. ಮತ್ತು ಸ್ಥಳದಲ್ಲಿಯೇ ಜಾಯಿಂಟ್ ಕಮಿಷನರ್‌ರವರ ಸಮೇತ ಎಲ್ಲಾ ಅಧಿಕಾರಿಗಳೂ ಕೂಡ ಇದ್ದರು. ಹಾಗೆಯೇ ಅಲ್ಲಿ ಸಾಯಂಕಾಲ 5 ರಿಂದ 5-30 ಗಂಟೆಯೊಳಗೆ ರಸ್ತೆಯನ್ನು ಕ್ಲಿಯರ್ ಮಾಡಿ ಜನರಿಗೆ ಬರುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಹೇಳುವುದಾದರೆ ಶ್ರೀ ರಮಾನಾಥ್ ರೈ ಅವರ ರಿಲೇಟೀವ್ ಒಬ್ಬರು ಅಂಬಾಸಿಡರ್ ಆಗಿ ಬಂದಿದ್ದಕ್ಕಾಗಿ ನಿನ್ನೆಯ ದಿವಸ ಅವರ ಮನೆಯಲ್ಲಿ ಒಂದು ಟೀ ಪಾರ್ಟಿಯನ್ನು ಇಟ್ಟಿದ್ದರು. ಅವರ ಸಿಸ್ಟರ್ ಸಕಲೇಶಪುರದಲ್ಲಿ ಇದ್ದು ನಿನ್ನೆಯ ದಿವಸ ಪೀಣ್ಯ ರಸ್ತೆಯಲ್ಲಿ ಬಂದಿರುತ್ತಾರೆ. ಅವರ ರಿಲೇಟೀವ್ ಮಾತನಾಡುತ್ತಾ -'ನಾವು 6-30 ಗಂಟೆಗೆ ಬರುವುದಕ್ಕೆ ಕಾರಣವೇನೆಂದರೆ ಸುಮಾರು 5 ಗಂಟೆಯ ಹೊತ್ತಿನಲ್ಲಿ ರೋಡ್ ಬ್ಲಾಕ್ ಆಗಿತ್ತು, ಅಲ್ಲಿ ಸುಟ್ಟಂಥ ವಾಹನಗಳನ್ನು ತೆಗೆಯುವುದಕ್ಕೆ ಸುಮಾರು ಒಂದರಿಂದ ಒಂದೂವರೆ ಗಂಟೆಯ ಕಾಲ ಬೇಕಾಯಿತು, ನಂತರ 5 ಗಂಟೆಗೆ ರಸ್ತೆ ಕ್ಲಿಯರ್ ಮಾಡಿ ಬಿಟ್ಟರು' ಎಂದು ಹೇಳಿರುವ ವಿಷಯ ನನಗೆ ಗೊತ್ತಾಯಿತು. ಹೀಗಾಗಿ ಹೆಚ್ಚು ಕಡಿಮೆ ನಮ್ಮ ಅಧಿಕಾರಿಗಳು ಬಹಳ ಸಂಯಮದಿಂದ, ತಾಳ್ಮೆಯಿಂದ ವರ್ತನೆ ಮಾಡಿದಕ್ಕಾಗಿ ಈ ಸಿಚ್ಯುಯೇಷನ್‌ನ್ನು ಹತೋಟಿಯಲ್ಲಿ ಇಟ್ಟುಕೊಂಡಿದ್ದಾರೆ. ಅಲ್ಲಿ ಪೊಲೀಸರಿಗೆ ಸ್ವಲ್ಪ ತೊಂದರೆಯಾಗಿದೆಯೇ ಹೊರತು ಜನರಿಗೆ ತೊಂದರೆ ಮಾಡದಂತೆ, ಹೆಣ್ಣುಮಕ್ಕಳಿಗೆ ತೊಂದರೆಯಾಗದಂತೆ ಅಥವಾ ಗಾರ್ಮೆಂಟ್ ವರ್ಕರ್ಸ್‌ಗೆ ಅವರ ರಕ್ಷಣೆ ಮಾಡುವುದಕ್ಕೋಸ್ಕರ, ಅಲ್ಲಿಯ ಆಸ್ತಿಪಾಸ್ತಿಗಳ ರಕ್ಷಣೆ ಮಾಡುವುದಕ್ಕೋಸ್ಕರ ಎಲ್ಲಾ ಪ್ರಯತ್ನವನ್ನು ಮಾಡಿದ್ದಾರೆ. ಈ ಬಗ್ಗೆ ಈಗಾಗಲೇ ಮೀಟಿಂಗ್ ಕೂಡ ಮಾಡಿದ್ದೇನೆ. ಅಲ್ಲಿ ಕಳ್ಳತನ ಆಗಿದೆ ಅಥವಾ ಅಂಗಡಿ ಲೂಟಿ ಆಗಿದೆ ಎಂದು ಇಲ್ಲಿಯವರೆಗೆ ಒಂದು ಅಪ್ಲಿಕೇಷನ್ ಕೂಡ ಯಾರೂ ಕೊಟ್ಟಿಲ್ಲ. ಇನ್ನು ಮೇಲೆ ಗೊತ್ತಿಲ್ಲ. ಆದರೆ ಅಲ್ಲಿರತಕ್ಕಂಥ ವಾಹನಗಳಿಗೆ ಡ್ಯಾಮೇಜ್ ಮಾಡತಕ್ಕಂಥದ್ದು ಆಗಿದೆ ಎನ್ನುವ ದೂರು ಇದೆ. ಸಹಜವಾಗಿ ಇಂಥ ಸಿಚ್ಯುಏಷನ್‌ನಲ್ಲಿ ಮುಗ್ಧ ಜನರಿಗೆ ಕೂಡ ತೊಂದರೆಯಾಗುತ್ತದೆ. ಆದರೆ

ಯಾವುದೇ ರೀತಿಯಿಂದ ಪೊಲೀಸರು ಇದರಲ್ಲಿ ವಿಫಲರಾಗಿಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಏಕೆಂದರೆ ಹೊಡೆಸಿಕೊಂಡು, ಬಡಿಸಿಕೊಂಡು ತಾಳ್ಮೆಯಿಂದ ಇದ್ದು ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದರಲ್ಲಿ ಯಶಸ್ವಿಯಾಗಿರುವವರಿಗೆ ನಾವು ಒಳ್ಳೆಯ ಮಾತನ್ನು ಹೇಳಬೇಕಾಗುತ್ತದೆ ಹೊರತಾಗಿ ಪ್ರತಿಯೊಂದಕ್ಕೂ ನಾವು ಕಂಡೆಮ್ ಮಾಡುತ್ತಾ ಹೋದರೆ ಪೊಲೀಸ್ ಇಲಾಖೆಯಲ್ಲಿ ಮೊರೇಲ್ ಇರುವುದಿಲ್ಲ. ಆ ಮೊರೇಲ್‌ನ್ನು ಬೂಸ್ಟ್ ಮಾಡಬೇಕಾದರೆ ಅವರಿಗೆ ನೀವು ನಾವು ಸಹರಿಸಬೇಕು. ಎಲ್ಲಿ ತಪ್ಪು ಮಾಡುತ್ತಾರೋ ಅಲ್ಲಿ ಎಲ್ಲರೂ ಕಂಡೆಂಮ್ ಮಾಡೋಣ. ಆದರೆ ಒಳ್ಳೆಯ ಕೆಲಸ ಮಾಡಿದಾಗ ಮಾತ್ರ ನಾವು ನೀವು ಅವರಿಗೆ ಒಳ್ಳೆಯ ಮಾತನ್ನು ಹೇಳದಿದ್ದರೆ, ಶಹಬಾಸ್‌ಗಿರಿ ಕೊಡದಿದ್ದರೆ ತೊಂದರೆಯಾಗುತ್ತದೆ. ಆದಕ್ಕಾಗಿ ಅವರು ಒಳ್ಳೆಯ ಕೆಲಸ ಮಾಡಿದಾಗ ನಾವು ಮೆಚ್ಚೋಣ. ನಾನು ಮೊನ್ನೆಯ ದಿವಸ ಹೇಳಿದ ಹಾಗೆ ತಪ್ಪು ಆಗಿದ್ದರೆ, ಯಾವ ಅಧಿಕಾರಿ ತಪ್ಪು ಮಾಡಿದ್ದಾರೆ ಅಂಥ ಅಧಿಕಾರಿಗಳ ಮೇಲೆ ಧೈರ್ಯವಾಗಿ ಆಕ್ಷನ್ ತೆಗೆದುಕೊಳ್ಳುತ್ತೇನೆಂದು ಇವತ್ತೂ ಕೂಡ ಆ ಮಾತನ್ನು ಹೇಳುತ್ತೇನೆ. ಆದರೆ ಈ ಒಂದು ಸಂದರ್ಭದಲ್ಲಿ ಬಹಳ ಸಂಯಮದಿಂದ ನಡೆದುಕೊಂಡಿದ್ದಾರೆ. ಪ್ರಾವಿಡೆಂಟ್ ಫಂಡ್ ರೂಲ್ಸ್ ವಿಚಾರದಲ್ಲಿ ಇಷ್ಟೊಂದು ಗಲಾಟೆಯಾಗಿ ಈ ರೀತಿಯಾಗಿರುವುದನ್ನು ತಮಗೆಲ್ಲಾ ತಿಳಿಸಬೇಕೆನ್ನುವ ದೃಷ್ಟಿಯಿಂದ ನಾನು ಹೇಳಿದೆ ಎಂದು ತಮ್ಮ ಮೂಲಕ ಸದನಕ್ಕೆ ತಿಳಿಸಬಯಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್:— ಮಾನ್ಯ ಉಪಾಧ್ಯಕ್ಷರೆ, ಪೊಲೀಸರು ಸಂಯಮದಿಂದ ನಡೆದುಕೊಂಡಿರುವುದು, ಪೊಲೀಸರೇ ಜಾಸ್ತಿ ಏಟ ತಿಂದಿರುವುದು ಈ ಬಗ್ಗೆ ನಮಗೆಲ್ಲಾ ಗೊತ್ತಿದೆ. ಇದರಲ್ಲಿ ಎರಡು ಮಾತಿಲ್ಲ. ಆದರೆ ಬೆಳಿಗ್ಗೆ 8-30 ಗಂಟೆಗೆ ಒಂದೊಂದು ಫ್ಯಾಕ್ಟರಿಗೆ ಹೋಗಿ ಜನರನ್ನು ಕರೆದುಕೊಂಡು ಬರುವ ಕೆಲಸ ಪ್ರಾರಂಭವಾಯಿತು. 11.45 ಗಂಟೆಯವರೆಗೆ ಇದು ನಡೆಯುತ್ತಲೇ ಇತ್ತು. ಈ ವಿಚಾರದಲ್ಲಿ there was a failure on the part of the police intelligence ಎಂದು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಇದು ಮುಂಚೆಯೇ ಗೊತ್ತಿರಲಿಲ್ಲ, ಗೊತ್ತಾಗಿದ್ದರೆ ಹಿಂದಿನ ದಿನವೇ ನಾವು ಅರೇಂಜ್‌ಮೆಂಟ್ ಮಾಡುತ್ತಿದ್ದೆವು ಎಂದು ತಾವು ಹೇಳಿದಿರಿ. ಇದು ಮುಂಚೆ ಗೊತ್ತಾಗುವುದಿಲ್ಲ. ಇದು ಗೊತ್ತಾಗುರುವಾಗಲೇ ಇಂಡಸ್ಟ್ರೀಯಲ್ ಏರಿಯಾದಲ್ಲಿ ನಮ್ಮ ಇಂಟೆಲಿಜೆನ್ಸ್ ಪರ್ಸನ್ಸ್ ಯಾರಿದ್ದಾರೆ ಅವರು ತಮ್ಮ ಕೆಲಸ ಮಾಡುವುದರಲ್ಲಿ ವಿಫಲರಾಗಿದ್ದಾರೆ ಎನ್ನುವುದು ನಮ್ಮ ಮೊದಲನೆಯ ಆಬ್ಜೆಕ್ಷನ್. ಇನ್ನು ಅಲ್ಲಿ ಚಳುವಳಿ ಮಾಡಿದವರೆಲ್ಲ ಗಾರ್ಮೆಂಟ್ಸ ಫ್ಯಾಕ್ಟರಿಯವರು. ನನಗೆ ಗೊತ್ತಿರುವ ಪ್ರಕಾರ ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಇರುವಂಥವರು ಶೇಕಡ 80 ರಷ್ಟು ಮಹಿಳೆಯರು. ಶೇಕಡ 80ಕ್ಕಿಂತ ಜಾಸ್ತಿ ಮಹಿಳೆಯರು ಇರುವ ಕಡೆ ಪಿ.ಎಫ್. ಆಫೀಸ್‌ಗೆ ಹೋಗಿ ಧ್ವಂಸ ಮಾಡುತ್ತಾರೆ, ಬಸ್ಸುಗಳಿಗೆ ಬೆಂಕಿ ಇಡುತ್ತಾರೆ, ಯಾವುದೋ ಅಂಗಡಿಗೆ ಹೋಗಿ ಲೂಟಿ ಹೊಡೆಯುತ್ತಾರೆ ಎಂದು

ಹೇಳುವುದು ಇದು ನನಗೆ ಅರ್ಥವಾಗದೇ ಇರುವ ಅಂಶ. ಮಹಿಳೆಯರು ಹೋಗಿ ಧ್ವಂಸ ಮಾಡುವುದನ್ನು ಊಹೆ ಮಾಡುವುದಕ್ಕೆ ಆಗುವುದಿಲ್ಲ. ಇವರಿಂದ ಬಸ್ಸುಗಳಿಗೆ ಬೆಂಕಿ ಇಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ ಗಲಾಟೆಯ ಕಾರಣ ಪುರುಷರು ಯಾರು? ನಮ್ಮ ಗುಪ್ತಚಾರ ವಿಭಾಗ ಇದನ್ನು ಯಾರ್‍ಯಾರು ಮಾಡಿದರು ಎಂಬುದನ್ನು ಗಮನಿಸದೇ ಇದ್ದರೆ ಪ್ರಾಯಶ: ಮುಂದೆ ಬಹಳ ಕಷ್ಟವಾಗುತ್ತದೆ. ಇದಕ್ಕೆ ತಾವು ಉತ್ತರ ಕೊಡಬೇಕು. ಮಹಿಳೆಯರೇ ಜಾಸ್ತಿ ಇದ್ದ ಕಡೆ ಈ ರೀತಿ ಎರಡು ಭಾಗ ಆಗಿ ಒಂದು ಜಾಲಹಳ್ಳಿ ಕ್ರಾಸ್ ಹತ್ತಿರ ರಸ್ತೆ ತಡೆ ಮಾಡುತ್ತಾರೆ. ಇನ್ನೊಂದು ಗುಂಪು ಪಿ.ಎಫ್. ಆಫೀಸ್ ಹತ್ತಿರ ಹೋಗುತ್ತಾರೆ. ಹೋಗಿ ಧ್ವಂಸ ಮಾಡಿರುವುದನ್ನು ನೋಡಿದರೆ ಇದು ಸಾಮಾನ್ಯವಾಗಿ ಅರ್ಥವಾಗದೇ ಇರುವ ವಿಚಾರ. ಇದು ಹೇಗೆ ಆಗಲಿಕ್ಕೆ ಸಾಧ್ಯ ಈ ಎರಡು ವಿಚಾರದಲ್ಲಿ ಪೊಲೀಸ್ ಇಲಾಖೆ ಅಗತ್ಯ ಗಮನ ಕೊಟ್ಟಿಲ್ಲವೆನ್ನುವುದು ನನ್ನ ಆಕ್ಷೇಪವಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಉಪಾಧ್ಯಕ್ಷರೆ, ಪೊಲೀಸರು ತಾಳ್ಮೆಯಿಂದ, ಸಂಯಮದಿಂದ ವರ್ತಿಸಿದ್ದಾರೆನ್ನುವುದು ಒಪ್ಪತಕ್ಕಂಥ ವಿಚಾರ ಮತ್ತು ಇದು ವಾಸ್ತವಾಂಶ. ನಾನು ಬೆಳಿಗ್ಗೆ ಮಾತನಾಡುವಾಗ ಪುನ: ಈ ರೀತಿಯ ಘಟನೆಗಳು ಪುನರಾವರ್ತನೆಯಾಗಬಾರದು ಎನ್ನುವ ದೃಷ್ಟಿಯಿಂದ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೆ. ಅದಕ್ಕೆ ನನಗೆ ಉತ್ತರ ಸಿಗಲಿಲ್ಲ. ಏನೆಂದರೆ ಈ ಪ್ರಾವಿಡೆಂಟ್ ಫಂಡ್‌ನ ಆಫೀಸ್‌ನಲ್ಲಿ ಕೆಲಸ ಮಾಡಿರತಕ್ಕಂಥ ಎಂಪ್ಲಾಯೀಸ್ ನಿನ್ನೆಯ ದಿವಸ ಈ ಇನ್ಸಿಡೆಂಟ್ ಆದ ಮೇಲೆ ಅವು ಟೆಲಿವಿಷನ್ ಇಂಟರ್‌ವ್ಯೂ ಕೊಟ್ಟಿದ್ದಾರೆ. ಪ್ರಾವಿಡೆಂಟ್ ಫಂಡ್ ಬಗ್ಗೆ ಅನುಮಾನ ಬಂದು ಈ ತರಹ ಇನ್ಸಿಡೆಂಟ್ ಮಾಡಿ ನಮಗೆಲ್ಲ ತೊಂದರೆ ಕೊಟ್ಟಿರತಕ್ಕಂಥದ್ದು ಇದು ಮೊದಲನೆ ಸಲ ಅಲ್ಲ. ಇದು ಹಿಂದೆ ಕೂಡ ಆಗಿದೆ. ಇದು ನಿಮ್ಮ ಗಮನಕ್ಕೆ ಬಂದಿಲ್ಲ ಎಂದರೆ ಪೊಲೀಸ್ ಇಂಟೆಲಿಜೆನ್ಸ್ ಫೇಲ್ಯೂರ್ ಆಗಿದೆ ಎನ್ನುವುದಕ್ಕೆ ಇದು ಒಂದು ಪುರಾವೆಯಾಗಿದೆ. ಈ ತರಹ ಎಂಪ್ಲಾಯೀಸ್ ಏಕೆ ಹೇಳಿದರು? ಅದರ ಬಗ್ಗೆ ಎಚ್ಚರಿಕೆಯನ್ನು ಇವರು ತೆಗೆದುಕೊಳ್ಳಬಹುದಾಗಿತ್ತು. ನಿಮಗೆ ಗೊತ್ತಿರುವ ಹಾಗೆ ಬೆಳಿಗ್ಗೆ 9 ಗಂಟೆಗೆ 10 ಸಾವಿರ ಜನ ಸೇರಬಹುದೆಂದಾರೆ ಕನಿಷ್ಠ ಪಕ್ಷ ಒಂದರಿಂದ ಒಂದೂವರೆ ಫೋರ್ಸ್‌ನ್ನು ತಾವು ಡಿಪ್ಲಾಯ್ ಮಾಡಬೇಕಾಗುತ್ತದೆ. ಇಷ್ಟು ಫೋರ್ಸ್‌ನ್ನು ನೀವು ಡಿಪ್ಲಾಯ್ ಮಾಡಬೇಕಾದರೆ ನಿಮಗೆ ಹಿಂದಿನ ದಿವಸ ಮಾಹಿತಿ ಬರುವುದಿಲ್ಲವೇ? ನಾಳೆ ಎಲ್ಲಿ ಏನಾಗುತ್ತದೆ, ಲೇಬರ್ ಫ್ರಂಟ್ ಏನಾಗುತ್ತದೆ, ಚಳುವಳಿ ಏನಾಗುತ್ತದೆ ಹೀಗೆ ಪ್ರತಿಯೊಂದು ಸಹ ದಿನದ 24 ಗಂಟೆ ಸಹ ನಿಮಗೆ ಮಾಹಿತಿ ಸಿಗುತ್ತದೆ, ಸಿಗಬೇಕು. ಮುನ್ಸೂಚನೆ ಇಲ್ಲದೆ 10 ಸಾವಿರ ಜನ ಹೇಗೆ ಸೇರುತ್ತಾರೆ? ಆದ್ದರಿಂದ there is definitely a failure on the part of the intelligence reporting. ಇದರ ಬಗ್ಗೆ ನೀವು ಒಂದು ತನಿಖೆಯನ್ನು ಮಾಡಿಸಬೇಕೆಂದು ನಾನು ಕೇಳುತ್ತಿದ್ದೇನೆ.

ನೀವು ಈ ವಿಚಾರದ ಬಗ್ಗೆ ಗಮನ ಹರಿಸಲೇಬೇಕು. ಇದು ಬಹಳ ಮುಖ್ಯವಾದ ವಿಚಾರವಾಗಿದೆ. ಇನ್ನೊಂದು ಬಹಳ ಸೂಕ್ಷ್ಮವಾದ ವಿಚಾರವೇನೆಂದರೆ, ಬೆಂಗಳೂರು ಸಿಟಿ ಪೊಲೀಸ್ ವಿಭಾಗದಲ್ಲಿ ಎರಡು ಗುಂಪುಗಳಾಗಿ ವಿಭಜನೆಯಾಗಿದೆ. ದಯವಿಟ್ಟು ಮೇಲ್ಪಟ್ಟದ ಅಧಿಕಾರಿಗಳನ್ನು ಕರೆಸಿ ಮಾತನಾಡಿ ಅದನ್ನು ಸರಿಮಾಡಲಿಕ್ಕೆ ನೀವು ಪ್ರಯತ್ನ ಮಾಡಿ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಪುನ: ಕಷ್ಟವಾಗುತ್ತದೆ. ಇದು ಸರ್ಕಾರಕ್ಕೆ ನನ್ನ ಕಿವಿಮಾತು. ಇನ್ನು ಗಾರ್ಮೆಂಟ್ಸ್ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡತಕ್ಕಂಥ ಹೆಣ್ಣು ಮಕ್ಕಳು ಯಾರಿದ್ದಾರೆ they are harassed by many sections of the society. ಅವರಿಗೆ ಇಂಟರ್ನಲಿ ಬಹಳ ಅಜಿಟೇಷನ್, ಕಿರುಕುಳ ಇದೆ. They are harassed. They are up against the police. This has been there tradionally. ಅದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳಬೇಕೆನ್ನುವುದು ನನ್ನ ಆಗ್ರಹ. ಜೊತೆಗೆ ಮುಖ್ಯವಾಗಿ ಇಂಟೆಲಿಜೆನ್ಸ್ ಫೇಲ್ಯೂರ್ ಬಗ್ಗೆ ನೀವು ದಯವಿಟ್ಟು ತನಿಖೆಯನ್ನು ಮಾಡಿಸಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಉಪಾಧ್ಯಕ್ಷರೆ, ಇದು ಸ್ಪಾಂಟೇನಿಯಸ್ ಆಗಿ ಪ್ರಾರಂಭವಾದಂಥ ಒಂದು ಅಜಿಟೇಷನ್ ಆಗಿರುತ್ತದೆ. ಇದು ಪ್ರಿಪ್ಲಾನ್ ಆಗಿ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಆಗಿರುವಂಥದ್ದು ಅಲ್ಲ. ನಮಗೆ ಇರತಕ್ಕಂಥ ಇಂದಿನ ಮಾಹಿತಿ ಪ್ರಕಾರ ಸ್ಪಾಂಟೇನಿಯಸ್‌ಆಗಿ ಅದಕ್ಕೆ ಅಜಿಟೇಷನ್ ನಡೆದಾಗ ನ್ಯಾಚುರಲ್ ಆಗಿ ಇಷ್ಟೊಂದು ಅಂಟಿಸಿಪೇಟ್ ಯಾರೂ ಕೂಡ ಮಾಡುವುದಕ್ಕಾಗುವುದಿಲ್ಲ. ಇದ ಮಾನ್ಯ ಸಿಂಧ್ಯಾರವರಿಗೂ ಕೂಡ ಗೊತ್ತಿದೆ. ಪುನ: ನಾನು ಅದನ್ನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಅಲ್ಲಿ ಇಷ್ಟೊಂದು ಜನ ಹೇಗೆ ಸೇರಿದರು ಎನ್ನುವುದು ತಮಗೆ ಗೊತ್ತಿದೆ. ಲೇಬರ್ ಫೋರ್ಸ್ ಜಾಸ್ತಿ ಇರುವುದು ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ. ಸುಮಾರು 20 ರಿಂದ 25 ಸಾವಿರ ಲೇಬರು ಫೋರ್ಸ್ ಇದೆ. ಅದರಲ್ಲಿ 8 ರಿಂದ 10 ಸಾವಿರ ಗಾರ್ಮೆಂಟ್ಸ್ ವರ್ಕರ್ಸ್ ಇದ್ದಾರೆ. ಅಲ್ಲಿ ಹೆಚ್ಚುಕಡಿಮೆ ಒಂದು ಕಿ.ಮಿ. ಅಂತಹದರೊಳಗೆ ಆ ಎಲ್ಲಾ ಫ್ಯಾಕ್ಟರಿಗಳು ಇರೆ. ಸ್ವಾಭಾವಿಕವಾಗಿಯೇ ಅನ್-ಆರ್ಗನೈಸ್ಡ್ ಸೆಕ್ಟಾರ್ ಇದ್ದರೂ ಕೂಡ ಅವರು ಒಂದೇ ಕಡೆ 500 ರಿಂದ 1000 ಜನ ಸೇರುವುದರಿಂದ ಈ ಪ್ರಾವಿಡೆಂಟ್ ಫಂಡ್ ವಿಚಾರದಲ್ಲಿ ಸಡನ್ ಆಗಿ ಯಾರೋ ಕಿಡಿಗೇಡಿಗಳು ಅದನ್ನು ಸ್ಪ್ರೆಡ್ ಮಾಡಿದರು. ಅದಕ್ಕೆ ಎಲ್ಲರೂ ಒಂದು ಕಡೆ ಬಂದು ಸೇರತಕ್ಕಂಥದ್ದು ಮತ್ತು ರಾಷ್ಟ್ರೀಯ ಹೆದ್ದಾರಿಯನ್ನು ಬ್ಲಾಕ್ ಮಾಡತಕ್ಕಂಥದ್ದನ್ನು ಮಾಡಿದ್ದಾರೆ. ಇದರ ಹಿನ್ನಲೆ ಏನು? ಏಕೆಂದರೆ ಹೆಣ್ಣುಮಕ್ಕಳಂತೂ ಎಜಿಟೇಷನ್ ಮಾಡುವುದಿಲ್ಲ ಅಥವಾ ಕಲ್ಲುಗಳನ್ನು ಹೊಡೆಯುವುವುದಿಲ್ಲ, ಬಸ್ಸುಗಳನ್ನು ಸುಡುವಂಥ ಕೆಲಸಗಳಿಗೆ ಹೋಗುವುದಿಲ್ಲ, ಇದರ ಹಿಂದೆ ಯಾರೋ ಸಮಾಜಘಾತುಕ ಶಕ್ತಿಗಳು ಇರಬೇಕು ಅಥವಾ ಬೇರೆ ಜನರೇ ಇರಬೇಕು, ಇದರ ಪತ್ತೆ ಹಚ್ಚತಕ್ಕಂಥದ್ದು ಹೇಗೆ? ಅದನ್ನು ನೀವು ಕಂಡುಹಿಡಿದಿಲ್ಲ

ಎನ್ನತಕ್ಕಂಥ ಮಾತನ್ನು ತಾವು ಹೇಳಿದ್ದೀರಿ. ಅಲ್ಲಿ ಬೆಳಿಗ್ಗೆ 8-30 ಗಂಟೆಗೆ ಗಲಾಟೆ ಪ್ರಾರಂಭವಾಗಿದೆ ಎಂದು ತಾವು ಹೇಳಿದಿರಿ. ಹೆಚ್ಚು ಕಡಿಮೆ 9 ರಿಂದ 9-30 ಗಂಟೆಯೊಳಗೆ ಪ್ರಾರಂಭವಾಯಿತು ಎಂದು ನಮ್ಮಲ್ಲಿ ವರದಿ ಇದೆ. ಆದ್ದರಿಂದ ಬೇಕಾದರೆ ಇದರ ಬಗ್ಗೆ ಒಂದು ಎನ್‌ಕ್ವಯರಿಯನ್ನು ಮಾಡುವುದಕ್ಕೆ ಕಮಿಷನರ್ ಅವರಿಗೆ ಹೇಳಿ ಆದರ ಹಿಂದೆ ಯಾರ್‍ಯಾರು ಸಮಾಜಘಾತುಕ ಶಕ್ತಿಗಳು ಮಹಿಳಾ ಗಾರ್ಮೆಂಟ್ಸ್ ವರ್ಕರ್ಸ್ ಹೊರತುಪಡಿಸಿ ಇದ್ದಾರೆ, ಬೆಳಿಗ್ಗೆ 9-30ರಿಂದ 11-30 ಗಂಟೆಯೊಳಗಾಗಿ ಯಾರ ಯಾವ ಎಲಿಮೆಂಟ್ಸ್ ಕಾನೂನನ್ನು ಕೈಯಲ್ಲಿ ತೆಗೆದುಕೊಂಡು ಅಥವಾ ಬ್ರೇಕ್ ಆದಮೇಲೆ ಬಸ್ಸು, ಜೀಪು ಸುಡುವುದು, ಕಲ್ಲು ಹೊಡೆಯುವುದು, ಆಫೀಸನ್ನು ಧ್ವಂಸ ಮಾಡುವುದರಲ್ಲಿ ಯಾರ್‍ಯಾರ ಕೈವಾಡ ಇದ್ದು ಇವರಲ್ಲಿ ಎಂಥ ಎಲಿಮೆಂಟ್ಸ್ ಇದ್ದಾರೆನ್ನುವ ಬಗ್ಗೆ ನಮ್ಮ ಹೈಯರ್ ಆಫೀಸರ್ಸ್ ಮುಖಾಂತರ ತನಿಖೆಯನ್ನು ಮಾಡಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ: (ಇ) ಹೆಣ್ಣುಮಕ್ಕಳ ಮಾರಾಟದ ಬಗ್ಗೆ

+ ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ) :— ಮಾನ್ಯ ಉಪಾಧ್ಯಕ್ಷರೆ, ಹೆಣ್ಣುಮಕ್ಕಳ ಮಾರಾಟದ ವಿಚಾರವು ಮಾನ್ಯ ಸದಸ್ಯರುಗಳಿಗೆಲ್ಲ ಅರ್ಥವಾಗಬೇಕೆನ್ನುವ ದೃಷ್ಟಿಯಿಂದ ಮತ್ತು ನಾನು ಅಲ್ಲಿಗೆ ಭೇಟಿ ಕೊಟ್ಟಿದ್ದರಿಂದ ಒಂದೆರಡು ಮಾತುಗಳಗನ್ನು ಹೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ ನಾನು ಭೇಟಿ ಮಾಡಿ ಅಲ್ಲಿ ಅಧ್ಯಯನ ಮಾಡಿದ ಪ್ರಕಾರ ಬಡತನಕ್ಕೋಸ್ಕರ ಅವರೇನೂ ಮಕ್ಕಳನ್ನು ಮಾರುತ್ತಿಲ್ಲ. ಬಡತನಕ್ಕೋಸ್ಕರ ಮಕ್ಕಳನ್ನು ಮಾರುವ ಹಾಗಿದ್ದರೆ ಗಂಡು ಮಕ್ಕಳನ್ನು ಸಹ ಮಾರಬೇಕಲ್ಲವೇ. ಅಲ್ಲಿ ಕೇವಲ ಹೆಣ್ಣುಮಕ್ಕಳ ಮಾರಾಟ ಮಾತ್ರ ಆಗಿದೆ. ಇದರ ಜೊತೆಗೆ ಎಲ್ಲಾ ಸೌಲಭ್ಯವನ್ನು ಅವರಿಗೆ ಒದಗಿಸಿದರೆ ಅವರ ಬಡತನ ನಿವಾರಣೆಯಾಗಿ ಮಕ್ಕಳ ಮಾರಾಟ ಆಗುವುದಿಲ್ಲವೆನ್ನುವ ಅಭಿಪ್ರಾಯ ನಮ್ಮೆಲ್ಲರದ್ದಾಗಿದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಅಲ್ಲಿ ಆಗಿರುವುದೇ ಬೇರೆ. ಅಲ್ಲಿ ಒಬ್ಬೊಬ್ಬ ಲಂಬಾಣಿ ತಾಂಡದ ನಾಯಕ 2-3 ಮದುವೆಗಳನ್ನು ಮಾಡಿಕೊಂಡಿದ್ದಾನೆ. 2-3 ಮದುವೆ ಮಾಡಿಕೊಂಡಾಗ ಒಬ್ಬಳು ಹೆಂಡತಿಗೆ 3-4 ಮಕ್ಕಳಾದರೂ ಸಹ 10-12 ಮಕ್ಕಳಾಗುತ್ತವೆ. ಇದರಿಂದಾಗಿ ಬಡತನ ಹೆಚ್ಚಾಗುತ್ತದೆ. ಹಾಗೆಯೇ ಅಲ್ಲಿ ಕುಟುಂಬ ಕಲ್ಯಾಣ ಯೋಜನೆಯನ್ನೂ ಸಹ ಕಡ್ಡಾಯವಾಗಿ ಜಾರಿಗೆ ತರಲಿಕ್ಕೆ ನಾವು ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ನಾವು ಎಲ್ಲಾ ಸೌಲಭ್ಯಗಲನ್ನು ಕೊಟ್ಟರೂ ಸಹ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅದರ ಬದಲು ಪುನ: ಅದು ಪುನರಾವರ್ತನೆಯಾಗುತ್ತದೆಂದು ನನಗನ್ನಿಸುತ್ತದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು ಸದನದಲ್ಲಿದ್ದಾರೆ, ನನ್ನ ಇಲಾಖೆಯ ಪರವಾಗಿ ನಾನು ಒತ್ತಾಯಪೂರ್ವಕವಾಗಿ ಹೇಳುವುದೇನೆಂದರೇ ಮ್ಯಾರೇಜ್ ಆಕ್ಟನ್ನು

ಕಂಪಲ್ಸರಿಯಾಗಿ ಮಾಡದಿದ್ದರೆ ಇಂಥ ಅನಾಹುತಗಳು ಸಮಾಜದಲ್ಲಿ ನಡೆಯುವುದಕ್ಕೆ ಸಾಧ್ಯವಾಗುತ್ತದೆ. ಬಹಳಷ್ಟು ಹೆಣ್ಣುಮಕ್ಕಳು ಬೀದಿಪಾಲಾಗಿದ್ದಾರೆ. ಆ ಹೆಣ್ಣು ಮಕ್ಕಳ ಬಗ್ಗೆ ತಾತ್ಸಾರ ಕೂಡ ಜಾಸ್ತಿಯಾಗುತ್ತದೆ. ಆಂಧ್ರಪ್ರದೇಶದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿರ್ದೇಶಕರ ಕಚೇರಿಗೆ ಹೋದಾಗ 159 ಹೆಣ್ಣುಮಕ್ಕಳನ್ನು ಅದರಲ್ಲಿ 5 ದಿನದ ಮಗು, 10 ದಿನದ ಮಗು, 3 ತಿಂಗಳ ಮಗು, 6 ತಿಂಗಲ ಮಗು ಹೀಗೆ ಬೇರೆ ಬೇರೆ ವಯಸ್ಸಿನ ಮಕ್ಕಳನ್ನು ಪ್ರತ್ಯೇಕ ಪ್ರತ್ಯೇಕವಾದ ಕೊಠಡಿಗಳಲ್ಲಿ ಇಟ್ಟಿದ್ದರು. ಮಕ್ಕಳೆಲ್ಲಾ ಬಹಳ ಆರೋಗ್ಯವಾಗಿದ್ದವು. ಅದರಲ್ಲಿ ಐದಾರು ಗಂಡು ಮಕ್ಕಳು ಮಾತ್ರ ಇದ್ದರು. ಹೀಗೆ ಏಕೆ ಆಗಬೇಕು ಅದಕ್ಕಾಗಿ ನಾವು ಇಲ್ಲಿ 2-3 ಮದುವೆ ಮಾಡಿಕೊಳ್ಳುವವರ ಬಗ್ಗೆ ಕಡಿವಾಣ ಹಾಕಬೇಕಾಗುತ್ತದೆ,. ಅಂಥ ಭಾಗದಲ್ಲಿ ಕುಟುಂಬ ಯೋಜನೆಯನ್ನು ಕಡ್ಡಾಯವಾಗಿ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಇಂಥ ಪ್ರಕರಣಗಳನ್ನು ನಿಲ್ಲಿಸಲಿಕ್ಕೆ ಕಷ್ಟವಾಗುತ್ತದೆ ಏನೋ ಎಂದೆನಿಸುತ್ತದೆ. ಈಗ ನನ್ನ ಇಲಾಖೆಯಿಂದಲೂ ಟ್ರೈನಿಂಗ್ ಪ್ರೋಗ್ರಾಂ, ಲೇನ್ ಫೆಸಿಲಿಟೀಸ್ ಎಲ್ಲವನ್ನೂ ಕೊಡುತ್ತಿದ್ದೇನೆ.

—

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಉಪಾಧ್ಯಕ್ಷರೆ, ಪೊಲೀಸರು ಬೆಂಗಳೂರು ಸಿಟಿಯಲ್ಲಿ ಡಿವೈಡ್ ಆಗಿದ್ದಾರೆ, ಆದಕ್ಕೆ ಇಂಥ ಘಟನೆಗಳೆಲ್ಲಾ ನಡೆಯುತ್ತಿವೆ, ಆದಕ್ಕೆ ಸ್ವಲ್ಪ ಹುಷಾರಾಗಿರಿ ಎನ್ನುವಂಥ ಮಾತನ್ನು ಮಾನ್ಯ ಸಿಂಧ್ಯಾರವರು ಹೇಳಿದರು. ಖಂಡಿತವಾಗಿ ಅದನ್ನು ಗಮನದಲ್ಲಿಟ್ಟುಕೊಂಡು ಅಧಿಕಾರಿಗಳನ್ನು ಕರೆಸಿ ಏನು ವಿಚಾರ ಮಾಡಬೇಕೋ ಅದನ್ನು ಅವರ ಜೊತೆ ಮಾತನಾಡುತ್ತೇನೆ. ಅನುಭವದ ಆಧಾರದ ಮೇಲೆ ಅವರು ಏನೇನು ಹೇಳುತ್ತಾರೆ ಅವೆಲ್ಲದರ ಬಗ್ಗೆ ಗಮನಹರಿಸುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ :— ಹಾಗಲ್ಲ, ಅವರದು ಅನುಭವ ಇರಬಹುದು ಆದರೆ ಇದು ವಾಸ್ತವಾಂಶ. It is a fact. I don't want to mention the officers' name, because of one or two officers in Bangalore City Police. ಬೆಂಗಳೂರು ಸಿಟಿಯಲ್ಲಿ ಈ ಎರಡು ಅಂಕಿ, ಮೂರು ಅಂಕಿ ಲಾಟರಿಗಳು ನಡೆಯುತ್ತಿರುವುದು, they are the shield. ಬೆಂಗಳೂರಿನಲ್ಲಿ ಎಲ್ಲೂ ಕೂಡ ಈ ಎರಡು ಅಂಕಿ ಮೂರು ಅಂಕಿ ಲಾಟರಿಗಳನ್ನು ನಾವು ಅಲೋ ಮಾಡುವುದಿಲ್ಲವೆಂದು ಇವತ್ತು ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡಿದೆಯೇ? ಇನ್‌ಸ್ಟೆಂಟ್ ಲಾಟರಿಗಳನ್ನು ಮಾರಾಟ ಮಾಡುವುದಕ್ಕೆ ಅಲೋ ಮಾಡುವುದು ಕಾನೂನು ಬಾಹಿರವೆಂದು ನಮಗೆಲ್ಲರಿಗೂ ಕೂಡ ಗೊತ್ತು How they are being allowed? ಪೊಲೀಸ್ ಸ್ಟೇಷನ್‌ನ ಆಸುಪಾಸುನಲ್ಲಿ ಏನು ಹೇಗೆ ಮಾಡುತ್ತಿದ್ದಾರೆ? It is becuse of the protection from these one or two officers. ಅದರ ಬಗ್ಗೆ ದಯವಿಟ್ಟು ಗಮನಹರಿಸಿ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಉಪಾಧ್ಯಕ್ಷರೆ ನಿಮ್ಮ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಒಂದು ಸ್ಟೇಟ್‌ಮೆಂಟ್‌ನ್ನು ಮಾಡಿದರು. ಮಾನ್ಯ ಗೃಹ ಸಚಿವರು, ಇವರು ಮತ್ತು ಸಮಾಜ ಕಲ್ಯಾಣ ಸಚಿವರು ಇದರ ಸತ್ಯಾಸತ್ಯತೆಯನ್ನು ಇನ್ನೂ ಕೂಡ ಅರ್ಥ ಮಾಡಿಕೊಳ್ಳಬೇಕೆಂದು ನನ್ನ ಭಾವನೆ. ಆ ಭಾಗದ ನಮ್ಮ ಅನೇಕ ಮಿತ್ರರು ಪತ್ರ ಬರೆಯುತ್ತಾರೆ, ಟೆಲಿಫೋನ್ ಮೂಲಕ ಹೇಳುತ್ತಾರೆ, ನಮ್ಮ ಇಡೀ ರಾಜ್ಯದಲ್ಲಿ 3 ಮದುವೆ 4 ಮದುವೆ ಮಾಡಿಕೊಂಡಿರುವವರ ಬಹಷ್ಟು ಜನ ಇದ್ದಾರೆ. ಆದರೆ ಅವರ್‍ಯಾರು ಮಕ್ಕಳನ್ನು ಮಾರಾಟ ಮಾಡುತ್ತಿಲ್ಲ. ಆದರೆ ಇದರ ಹಿಂದೆ ಒಂದು ವಿದೇಶಿ ಮಿಷನರಿಯ ಷಡ್ಯಂತ್ರ ಇದೆ. ರಾಜ್ಯದ ಮೂಲೆ ಮೂಲೆಯಲ್ಲಿ ಎಲ್ಲಿ ದಲಿತರು ಇದ್ದಾರೆ, ಎಲ್ಲಿ ಬಡವರು ಇದ್ದಾರೆ, ಸೇವೆಯ ಹೆಸರಿನಲ್ಲಿ ಎಲ್ಲಾ ಕಡೆ ಹೋಗಿ ಷಡ್ಯಂತರ ಮಾಡುತ್ತಿದ್ದಾರೆ. ಇದು ಇವತ್ತು ನನ್ನ ತಾಲ್ಲೂಕಿನಲ್ಲಿ ಕೂಡ ಇದೆ, ಮಾನ್ಯ ಸಚಿವರು ತಾಲ್ಲೂಕಿನಲ್ಲಿ ಕೂಡ ಈ ಮಿಷಿನರಿ ಇದೆ ಎಂದು ಹೇಳಿದ್ದೇನೆ. ಇದು ಇಲಾಖೆಗೂ ಕಡ ಗೊತ್ತಿದೆ. ಈ ರೀತಿಯ ಸೇವೆಯ ಹೆಸರಿನಲ್ಲಿ ವಿದೇಶಿ ಮಿಷನರಿಗೆ ಯಾವ ಯಾವ ದೇಶದಿಂದ ಎಷ್ಟೆಷ್ಟು ಹಣ ಬರುತ್ತದೆ ಎನ್ನುವುದನ್ನು ತಮ್ಮ ಇಂಟೆಲಿಜೆನ್ಸಿಯಿಂದ ದಯವಿಟ್ಟು ವರದಿ ತರಿಸಿಕೊಳ್ಳಬೇಕು. ಈ ಬಗ್ಗೆ ಅನೇಕ ಸಾರಿ ತಮ್ಮ ಜೊತೆಯಲ್ಲಿ ಕೂಡ ಮಾತನಾಡಿದ್ದೇನೆ. ಬಹಳ ಪ್ರಾಮಾಣಿಕವಾಗಿ ಇದರ ಬಗ್ಗೆ ಏನಾದರೂ ಪ್ರಯತ್ನ ಮಾಡಬೇಕಾಗುತ್ತದೆ. ದಲಿತರನ್ನು, ಬಡವರರನ್ನು ಡೆವಲಪ್ ಮಾಡುವ ದೃಷ್ಟಿಯಿಂದ ನಮ್ಮ ಅಧಿಕಾರಿಗಳು, ನಾವು ಯಾರೂ ಹೋಗದೇ ಇರುವಂಥ ದಿಕ್ಕಿನಲ್ಲಿ ಆ ಮಿಶಿನರಿಗಳು ನುಗ್ಗಿ ಇವತ್ತು ಏನೇನು ಮಾಡುತ್ತಿದ್ದಾರೆಂದು ಹೇಳಲಿಕ್ಕೆ ಸಾಧ್ಯವಿಲ್ಲ. ಇಡೀ ವ್ಯವಸ್ಥೆಯನ್ನು ತಲೆಕೆಳಗೆ ಮಾಡಲಿಕ್ಕೆ ವಿಶೇಷವಾಗಿರತಕ್ಕಂಥ ಷಡ್ಯಂತರವನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ವಿಶೇಷವಾದಂತ ಗಮನ ಇರಬೇಕು. ಅಧಿಕಾರಿಗಳು ಕೊಟ್ಟ ವರದಿಯನ್ನೇ ನಾವು ಸತ್ಯವೆಂದು ನಂಬುವುದು ಅಲ್ಲ. ಸಾಮಾಜಿಕವಾಗಿ ಅನೇಕ ಸ್ಥಿತ್ಯಂತರಗಳನ್ನು ನಾವು ಹೊಂದುತ್ತಿದ್ದೇವೆ. ಈ ದೃಷ್ಟಿಯಿಂದ ವಿದೇಶಿ ಮಿಷನರಿಗಳು ನಮ್ಮ ಮೇಲೆ ಮಾಡುತ್ತಿರತಕ್ಕಂಥ ದಬ್ಬಾಳಿಕೆ, ಅರುಗಳಿಗೆ ಎಲ್ಲೆಂಲ್ಲಿಂದ ಹಣ ತರುತ್ತಿದ್ದಾರೆ, ಯಾವ ರೀತಿ ಹಣ ಶೇಖರಣೆಯಾಗುತ್ತಿದೆ, ಯಾವ ಉದ್ದೇಶಕ್ಕೋಸ್ಕರ ಅವರು ಬಳಸುತ್ತಿದ್ದಾರೆ ಇದನ್ನು ಸರ್ಕಾರ ದಯವಿಟ್ಟು ಗಮನಿಸಬೇಕು, ಇಡೀ ರಾಜ್ಯದಲ್ಲಿ ಒಂದು ವ್ಯವಸ್ಥಿತವಾದಂಥ ಜಾಲ ನಿರ್ಮಾಣವಾಗಿದೆ. ಅದನ್ನು ಭೇದಿಸಬೇಕಾಗುತ್ತದೆ ಇಲ್ಲದಿದ್ದರೆ ಇನ್ನೂ ಇಂಥ ಅನೇಕ ಜಾಲ ಹುಟ್ಟಿಕೊಳ್ಳುತ್ತದೆ. ವಿದೇಶಗಳಿಗೆ ನಮ್ಮ ಹೆಣ್ಣು ಶಿಶುಗಳನ್ನು ಕರೆದುಕೊಂಡು ಹೋಗಿ ಅಲ್ಲಿ ವೇಶ್ಯಾವಾಟಿಕೆಗೆ ಸೇರಿಸುವಂಥ ಷಡ್ಯಂತರ ನಡೆಯುತ್ತಿದೆ. ಈ ದೃಷ್ಟಿಯಿಂದ ದಯಮಾಡಿ ಅದನ್ನು ಗಮನಿಸಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ ಹೆಗಡೆ (ಬ್ರಹ್ಮಾವರ) :— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಒಂದು ಹೇಳಿಕೆಯನ್ನು ಕೊಡುತ್ತಾ ಬರೀ ಹೆಣ್ಣು ಮಕ್ಕಳನ್ನು ಮಾರಾಟ ಮಾಡುತ್ತಿದ್ದಾರೆಂದು ಹೇಳಿದರು. ಶ್ರೀ ಆರಗ ಜ್ಞಾನೇಂದ್ರ ರವರು ಹೇಳಿದ್ದೆಲ್ಲವನ್ನು ನಾನು ಒಪ್ಪುವುದಿಲ್ಲ. ಆದರೇ ಬರೀ ಹೆಣ್ಣು ಮಕ್ಕಳನ್ನು ಮಾರಾಟ ಮಾಡಿದ್ದಾರೆಂದರೆ ವೇಶ್ಯಾವಾಟಿಕೆಗೆ ಅವರನ್ನೇನಾದರೂ ಉಪಯೋಗ ಮಾಡುತ್ತಾರೆಯೇ ಎನ್ನುವುದರ ಬಗ್ಗೆ ತಾವು ಆಲೋಚನೆ ಮಾಡಬೇಕಾಗುತ್ತದೆ. ಗಂಡು ಮಕ್ಕಳನ್ನು ಎಲ್ಲೂ ಮಾರಾಟ ಮಾಡಿಲ್ಲವೆಂದಾಗ ಇಷ್ಟು ವರ್ಷಗಳ ಕಾಲ ಆ ಹೆಣ್ಣು ಮಕ್ಕಳನ್ನು ಮಾರಾಟ ಮಾಡಿದ್ದು ಎಲ್ಲೆಲ್ಲಿ ಹೇಗಿದ್ದಾರೆ ಆದರ ಬಗ್ಗೆ ತಾವು ಗಂಭೀರವಾಗಿ ಆಲೋಚನೆಯನ್ನು ಮಾಡಿ ತಾವು ಒಂದು ವರದಿಯನ್ನು ತರಿಸಿಕೊಳ್ಳಬೇಕಾಗುತ್ತದೆ.

ಶ್ರೀ ಕೈಲಾಸ್‌ನಾಥ್ ಪಾಟೀಲ್ (ಚಿಂಚೋಳಿ) :— ಮಾನ್ಯ ಉಪಾಧ್ಯಕ್ಷರೆ, ನಾನು ಕೂಡ ಒಂದೆರಡು ವಿಚಾರಗಳನ್ನು ಮಾತನಾಡಲಿಚ್ಛಿಸುತ್ತೇನೆ. ಇದರ ಬಗ್ಗೆ ಪೊಲೀಸರ ಕಡೆಯಿಂದ ತನಿಖೆ ನಡೆಯುತ್ತಿದೆ. ಈ ಭಾಗದಲ್ಲಿ ಹೆಣ್ಣು ಶಿಶು ಮಾರಾಟದ ಬಗ್ಗೆ ಕೇವಲ ಕರ್ನಾಟಕ ಅಷ್ಟೇ ಅಲ್ಲದೆ ಪಕ್ಕದ ಆಂಧ್ರ ಪ್ರದೇಶದಲ್ಲೂ ಕೂಡ ನಡೆದಿದ್ದು, ಹೆಚ್ಚಿನ ಮಾರಾಟ ನಡೆದಿರುವುದು ಆಂಧ್ರ ಪ್ರದೇಶದಲ್ಲಿ. ನಮ್ಮ ಭಾಗದ ಕೆಲವು ತಾಂಡಗಳಿಂದ ಮಕ್ಕಳು ಹೋಗಿವೆ ಆದರೆ ಅವು ಮಾರಾಟ ಆಗಿ ಅಲ್ಲಿ ಬೆಳೆಸಿರುವುದು, ಸೇಲ್ ಆಗಿರುವುದು ಎಲ್ಲವೂ ಆಂಧ್ರಪ್ರದೇಶದಲ್ಲಿ, ಹೀಗಾಗಿ ಎರಡು ರಾಜ್ಯಗಳ ಪೊಲೀಸರು ಇದರ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಹೇಳಿದಂತೆ ಈ ಭಾಗಗಳಲ್ಲಿ ಕುಟುಂಬ ಯೋಜನೆಯ ಬಗ್ಗೆ ಮಾಹಿತಿ ಕೊಡುವುದು ಅವಶ್ಯಕತೆ ಇದೆ. ಏಕೆಂದರೆ, ಈ ಭಾಗಗಳಲ್ಲಿ ನಾವು ಹೋದಾಗ ಒಂದೊಂದು ಕುಟುಂಬದಲ್ಲಿ ಸುಮಾರು 9-10 ಮಕ್ಕಳು ಇರುವುದನ್ನು ನಾವು ನೋಡುತ್ತಿದ್ದೇವೆ. ಇದರ ಜೊತೆಗೆ ಹೆಚ್ಚಿನ ಪ್ರಮಾಣದಲ್ಲಿ ಹೆಣ್ಣು ಶಿಶುಗಳು ಇರುವುದನ್ನು ನಾವು ನೋಡಿದ್ದೇವೆ, ಗಂಡು ಶಿಶುಗಳ ಬಗ್ಗೆ ಇವರಿಗಿರುವ ಅಪಾರ ಪ್ರೀತಿ ಇದಕ್ಕೆ ಕಾರಣವೆಂದು ನಾನು ಭಾವಿಸುತ್ತೇನೆ. ಸರ್ಕಾರದ ವತಿಯಿಂದ ನಮ್ಮ ಕುಂಚಾವರ ಪ್ರದೇಶಕ್ಕೆ ಸೌಲಭ್ಯ ಸಿಕ್ಕರೆ ಬಹಳ ಒಳ್ಳೆಯದು, ಏಕೆಂದರೆ, ತಾಂಡದಲ್ಲಿರುವ ಅನೇಕ ಜನ ಬಹಳ ಬಡವರು ಇರುವುದರಿಂದ ನಾನು ಕೂಡ ಈ ಬಗ್ಗೆ ಸರ್ಕಾರಕ್ಕೆ ಮನವಿ ಮಾಡಿದ್ದೇನೆ. ಈ ಪ್ರದೇಶಗಳಲ್ಲಿ ಹೆಚ್ಚಿನ ನೀರಾವರಿ ವ್ಯವಸ್ಥೆಯನ್ನು ಮಾಡುವುದರ ಜೊತೆಗೆ ಎಲ್ಲೆಲ್ಲಿ ಸಣ್ಣ ಕೆರೆಗಳನ್ನು ಮಾಡುವುದಕ್ಕೆ ಸಾಧ್ಯವಿದೆಯೋ ಅಲ್ಲಿ ಆ ಕೆರೆಗಳನ್ನು ಮಾಡುವುದರ ಮುಖೇನ ಅನೇಕ ಜನರಿಗೆ ಉದ್ಯೋಗವನ್ನು ಕೊಡುವಂತಹ ಕೆಲಸ ಮಾಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿದ್ದೇನೆ, ಸರ್ಕಾರ ಈ ಕೆಲಸ ಮಾಡುತ್ತದೆ ಎನ್ನುವ ಭರವಸೆಯನ್ನು ನಾನು ಇಟ್ಟುಕೊಂಡಿದ್ದೇನೆ.

9. ವಿತ್ತೀಯ ಕಾರ್ಯ ಕಲಾಪಗಳು

ಅನುದಾನ ಬೇಡಿಕೆಗಳ ಮೇಲಿನ ಚರ್ಚೆ (ಮುಂದು..)

+ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :— ಮಾನ್ಯ ಉಪಾಧ್ಯಕ್ಷರೆ, ಮೊದಲನೆಯದಾಗಿ ನಾನು ಬಸವಣ್ಣನವರ ವಚನ ಹೇಳುವುದರ ಮುಖೇನ ಈ ಚರ್ಚೆಯನ್ನು ಪ್ರಾರಂಭಿಸುತ್ತೇನೆ.

"ಕಾಂಚನವೆಂಬ ನಾಯ ನಚ್ಚಿ, ನಿಮ್ಮ ನಾನು ಮರೆದೆನಯ್ಯಾ ಕಾಂಚನಕ್ಕೆ ವೇಳೆಯಲ್ಲದೆ, ಲಿಂಗಕ್ಕೆ ವೇಳೆಯಲ್ಲಿಹುದು; ಹಡಕೆಗೆ ಮೆಚ್ಚಿದ ಸೊಣಗನನ್ನು ಅಮೃತದ ರುಚಿಯ ಬಲ್ಲುದೇ ಕೂಡಲ ಸಂಗಮದೇವ?"

ಇದೇ ರೀತಿ ದಾಸರೂ ಕೂಡ "ದುಗ್ಗಾಣಿ ಬಲು ಕೆಟ್ಟದಣ್ಣಾ, ದುಗ್ಗಾಣಿ ಬಲು ಕೆಟ್ಟದಣ್ಣಾ" ಎಂದು ಹೇಳುತ್ತಾರೆ. ಇದು ಏಕೆ ಹೇಳಿದೆ, ಏನು ನಡೆದಿದೆ, ಏನಿದರ ಅರ್ಥ ಎಲ್ಲವನ್ನೂ ನಂತರದಲ್ಲಿ ಹೇಳುತ್ತೇನೆ. ಬಹಳ ಸಂತೋಷದಿಂದ ಹಾಗೂ ಹೆಮ್ಮೆಯಿಂದ ನಾನು ಹೇಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಅವರು ಅಧಿಕಾರ ಸ್ವೀಕರಿಸಿದ ನಂತರ ಪ್ರಾಮಾಣಿಕವಾದ ಒಂದು ಶ್ವೇತಪತ್ರ ಹೊರಡಿಸಿದರು, ನಂತರದಲ್ಲಿ ನಿನ್ನೆ ದಿವಸ ಮಧ್ಯಾವಧಿಯ ಆರ್ಥಿಕ ಯೋಜನೆಯನ್ನು ಮಂಡಿಸಿದ್ದಾರೆ. ನಾನು ಆ ದಿವಸವೇ ಈ ಶ್ವೇತಪತ್ರದ ಬಗ್ಗೆ ಮಾತನಾಡುವಾಗ, ಇದನ್ನು ನೀವು ಬಹಳ ಪ್ರಾಮಾಣೀಕವಾಗಿ ಹೊರಡಿಸಿದಿರಿ, ಇದನ್ನು ನೋಡಿದರೆ ಬಹುಶ: ಇನ್ನೆದು ವರ್ಷಗಳಲ್ಲಿ ಈ ರಾಜ್ಯದಲ್ಲಿ ನೌಕರರಿಗೆ ಸಂಬಳ ಕೊಡುವುದಕ್ಕಾಗದ ಸ್ಥಿತಿ ಬರುತ್ತದೆಂದು ಹೇಳಿದ್ದೆ. ಆಗ ಎಲ್ಲರೂ ಅದನ್ನು ಒಪ್ಪಿದರು. ಈಗ ಅದೇ ಮಾತನ್ನು ಇದರಲ್ಲಿ ಹೇಳಿದ್ದಾರೆ. ಮೊನ್ನೆ ಕೆಲವು ಪತ್ರಿಕೆಗಳಲ್ಲಿ ಬಂದಂಥ ವಿಚಾರದ ಬಗ್ಗೆ ಹೇಳುವುದಾದರೆ ಕೇರಳದಲ್ಲಿನ ಮುಖ್ಯಮಂತ್ರಿಗಳು ದೆಲ್ಲಿಗೆ ಹೋಗಿ ಬರುವುದಕ್ಕೆ ವಿಮಾನದ ಟಿಕೆಟ್ ತೆಗೆದುಕೊಳ್ಳುವುದಕ್ಕೆ ದುಡ್ಡು ಇಲ್ಲ ಎನ್ನುವ ಅಂಶ ಬಂದಿತ್ತು. ಇದದಕ್ಕಿಂತ ಕೆಟ್ಟ ಸ್ಥಿತಿ ನಮ್ಮ ರಾಜ್ಯಕ್ಕೆ ಬರುವ ಪರಿಸ್ಥಿತಿ ಇದೆ. ಆದ್ದರಿಂದ ಇದರ ಬಗ್ಗೆ ಕಠಿಣವಾದ ನಿರ್ಧಾರ ತೆಗೆದುಕೊಳ್ಳದಿದ್ದರೆ ಬಹಳ ಕಷ್ಟವಾಗುತ್ತದೆ, ನಾವು ಸುಮ್ಮನೆ ಇಲ್ಲಿ ಬೇಡಿಕೆಗಳ ಮೇಲೆ ಚರ್ಚಿಸುವುದು, ರೈತರ ಬಡ್ಡಿ ಮನ್ನಾ ಮಾಡಿ ಎಂದು ನಾವು ಹೇಳುವುದು, ಇಷ್ಟೆಲ್ಲ ನಡೆಯುತ್ತದೆಯೇ ವಿನಾ: ಏನೂ ಆಗುವುದಿಲ್ಲ. ಆದ್ದರಿಂದ, ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳದೇ ಹೋದರೆ ಮುಂದಿನ ಪೀಳಿಗೆ ನಮ್ಮನ್ನು ಶಾಪಿಸುತ್ತದೆ. ಮಾನ್ಯ ಮುಖ್ಯಮಂತ್ರಿಗಳು 2005ನೇ ಇಸವಿಯವರೆಗೆ ಇರುವ ಪರಮಾವಧಿ ಆರ್ಥಿಕ ಯೋಜನೆಯನ್ನು ಮಂಡಿಸಿದ್ದಾರೆ. ಈ ಎರಡನ್ನೂ ನಾವು ತುಲನೆ ಮಾಡಿ ನೋಡಿದಾಗ ಇನ್ನೈದು ವರ್ಷಗಳಲ್ಲಿ ಬಹಳ ಕೆಟ್ಟ ಪರಿಸ್ಥಿತಿ ಈ ರಾಜ್ಯಕ್ಕೆ ಬರುತ್ತದೆ. ಇದಕ್ಕೆ ನಾವು ಕಡಿವಾಣ ಹಾಕದೆ ಹೋದರೆ

ನಮ್ಮ ಯಾವ ಯೋಜನೆಗಳು ನಡೆಯುವುದಿಲ್ಲ, ಇದರ ಬಗ್ಗೆ ಚರ್ಚೆ ಇಟ್ಟುಕೊಂಡರೆ ಎರಡು ದಿವಸ ಮಾತನಾಡಬಹುದು ಆದರೆ ಸಮಯವಿಲ್ಲ, ತಾವು ಇನ್ನೈದು ಹತ್ತು ನಿಮಿಷಗಳಲ್ಲಿ ಬೆಲ್ ಹೊಡೆಯುತ್ತೀರಿ, 10 ನಿಮಿಷದಲ್ಲಿ ಏನೂ ಮಾತನಾಡುವುದಕ್ಕಾಗುವುದಿಲ್ಲ. ಈಗಷ್ಟೇ ಬಹಳ ಗಂಭೀರವಾಗಿ ಮಾನ್ಯ ದೇವೇಗೌಡರ ಬಗ್ಗೆ ಚರ್ಚೆಯಾಯಿತು. ನಾನು 10ನೇ ಸಲ ಈ ಚರ್ಚೆಯನ್ನು ನೋಡುತ್ತಿದ್ದೇನೆ, ಇದರ ಮೇಲೆ ಎರಡು ಗಂಟೆಗಳ ಕಾಲ ಚರ್ಚೆ ನಡೆಯಿತು ಹೊಸ ಚರ್ಚೆ ಏನೂ ನಡೆಯುವುದಿಲ್ಲ, ಇದು ಎಷ್ಟು ಆಗಬೇಕು ಅಷ್ಟು ಆಗಲಿ ನಾವು ಇಲ್ಲವೆಂದು ಹೇಳುವುದಿಲ್ಲ ಆದರೆ, ಯಾವುದಕ್ಕೆ ನಾವು ಹೆಚ್ಚು ಮಹತ್ವ ಕೊಡಬೇಕೋ ಅದಕ್ಕೆ ನಾವು ಹೆಚ್ಚು ಮಹತ್ವ ಕೊಡುತ್ತಿಲ್ಲ. ನನಗಿಂತ ಅನೇಕ ಮಾನ್ಯ ಹಿರಿಯರು ಇಲ್ಲಿ ಮಾತನಾಡುವವರು ಇದ್ದಾರೆ, ಮಾನ್ಯ ರಾಮಯ್ಯನವರು ಹಾಗೂ ಅನೇಕ ಹಿರಿಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಬಹಳ ಚೆನ್ನಾಗಿ ಇರುತ್ತದೆ. ಆರ್ಥಿಕ ಸಬಲತೆ ಈ ರಾಜ್ಯಕ್ಕೆ ಬಹಬೇಕಾದರೆ ಏನು ಮಾಡಬೇಕು ಎಂಬುದರ ಬಗ್ಗೆ ಒಂದೆರಡು ಮಾತುಗಳನ್ನು ನಾನು ಹೇಳಿ ಮುಗಿಸುತ್ತೇನೆ. ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾದ ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಮೊನ್ನೆ ಬೆಳಗಾವಿನಲ್ಲಿ ಒಂದು ಹೇಳಿಕೆ ನೀಡಿದ್ದಾರೆ ಬಹುಶ: ನೀವೂ ಕೂಡ ಓದಿರಬಹುದು, ಏನೆಂದರೆ, 30 ಭಾಗ ಆಡಳಿತ ವೆಚ್ಚ ಕಡಿಮೆ ಮಾಡಿದರೆ ನಾವು ಉಳಿಯುತ್ತೇವೆ ಎಂದು ಹೇಳಿದ್ದಾರೆ. ಇದು ಪ್ರಾಮಾಣೀಕವಾದ ಮಾತಾಗಿದೆ. ನಾನೂ ಕೂಡ ಹಿಂದೆ ಮಾನ್ಯ ಮುಖ್ಯಮಂತ್ರಿಗಳಿಗೆ ಇದೇ ಮಾತನ್ನು ಹೇಳಿದ್ದೆ. ಉನ್ನತ ಶಿಕ್ಷಣಕ್ಕೆ 15 ಪರ್ಸೆಂಟ್ ಕಟ್ ಮಾಡಿದಾಗ ಅವರಿಗೊಬ್ಬರಿಗಲ್ಲದೆ ಎಲ್ಲರಿಗೂ ಕಟ್ ಮಾಡಿ ಒಂದು ಹೇಳಿದೆ. ಎಂಎಲ್‌ಎಗಳ ವೇತನ ಏರಿಸುವ ಸಂಬಂಧವಾಗಿ ನಾನು ಒಬ್ಬನೇ ವಿರೋಧಿಸಿದೆ ಆಗ ಎಲ್ಲರೂ ಬಹಳ ಸಿಟ್ಟಾಗಿದ್ದರು. ನಾನು ಏಕೆ ವಿರೋಧಿಸಿದೆ ಎಂದರೆ, ನಮ್ಮ ಎಂಎಲ್‌ಎಗಳ ಸಂಬಳದಲ್ಲಿ 15 ಪರ್ಸೆಂಟ್ ಕಟ್ ಮಾಡಿದಾಕ್ಷಣ ರಾಜ್ಯ ಏನೂ ಉದ್ಧಾರ ಆಗುವುದಿಲ್ಲ. ಮೊದಲು ಅದೊಂದು ಮಾರ್ಗವಾಗಲಿ ಎನ್ನುವ ದೃಷ್ಟಿಯಿಂದ ಹೇಳಿದನೇ ಹೊರತು ಬೇರೆ ಏನೂ ಇಲ್ಲ. ಮೊದಲು ನಾವು ಅದನ್ನು ಆಚರಣೆಗೆ ತಂದು ಮಾಡದೇ ಇದ್ದರೆ ಈ ರಾಜ್ಯದ ಪರಿಸ್ಥಿತಿ ಬಹಳ ಕೆಡುತ್ತದೆ. ನಾನು ಆ ದಿವಸ ಹೇಳಿದ್ದೆ, ಈ ಸಿಂಗಾಪುರ ಆ ರೀತಿ ಬೆಳೆಯಬೇಕಾದರೆ ಕಡ್ಡಾಯವಾಗಿ 20 ಪರ್ಸೆಂಟ್ ಕಟ್ ಮಾಡಿದರಂತೆ. ಹೀಗಾಗಿ ಅದು ಈ ಜಗತ್ತಿನಲ್ಲಿ ಒಂದು ಅಚ್ಚರಿಯ ದೇಶವಾಗಿ ಅಭಿವೃದ್ಧಿ ಹೊಂದಲು ಕಾರಣವಾಗಿದೆ. ಆದ್ದರಿಂದ ಈ ಶ್ವೇತ ಪತ್ರ ಹಾಗೂ ಮಧ್ಯಮಾವಧಿ ಆರ್ಥಿಕ ಯೋಜನೆ ಈ ಎರಡೂ ವಿಚಾರಗಳ ಬಗ್ಗೆ ಎಲ್ಲಾ ಸದಸ್ಯರು ಮಾತನಾಡಿದರೆ ಕನಿಷ್ಠ ಒಂದು ವಾರಗಳ ಕಾಲ ಬೇಕಾಗುತ್ತದೆ. ಬಹುಶ: ಈ ಅಧಿವೇಶನ ಮುಗಿದ ನಂತರ ಮತ್ತೊಂದು ಸಾರಿ ಕರೆಯಿರಿ ಆಗ ಮಾತನಾಡೋಣ. ಏಕೆಂದರೆ ಈಗ ಬರಗಾಲ ಬಂದಿರುವುದರಿಂದ

ನಾವು ಎಲ್ಲರೂ ತಮ್ಮ ತಮ್ಮ ಕ್ಷೇತ್ರಗಳಿಗೆ ಹೋಗಿ ಅಲ್ಲಿನ ಜನಗಳ ಸುಖ ದು:ಖಗಳಲ್ಲಿ ಮಾವು ಭಾಗವಹಿಸಬೇಕಾಗುತ್ತದೆ. ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೆಲವು ಒಳ್ಳೆಯ ಸಲಹೆ ಮಾಡಿದ್ದೀರಿ, ಆದರೆ ಇದರಲ್ಲಿ ನನಗೆ ಸಂಶಯ ಏನೆಂದರೆ ಇದು ಸಾಧ್ಯವೇ? ತಾವು ಶಿಕ್ಷಣಕ್ಕೆ ಹಾಗೂ ಇತರೆ ಇಲಾಖೆಗೆ ಕಟ್ ಮಾಡುತ್ತೇವೆ ಮುಂದೆ ನೌಕರರುಗಳನ್ನು ಅಪಾಯಿಂಟ್ ಮಾಡಿಕೊಳ್ಳುವುದಿಲ್ಲ ಎಂದು ಹೀಗೆ ಅನೇಕ ಸಲಹೆ ಮಾಡಿದಿರಿ, ಆದರೆ, ಆದೇ ರೀತಿಯಾಗಿ ನಡೆದರೆ ಬಹಳ ಒಳ್ಳೆಯದು, ಆದರೂ ಸಂಪೂರ್ಣವಾಗಿ ಸುಧಾರಿಸಲಿಕ್ಕೆ ಸಾಧ್ಯವಿದೆ ಎನ್ನುವ ಹೇಳಿಕೆ ಇಲ್ಲಿ ಇಲ್ಲ. ಹಾಗಾದರೆ ಏನು ಮಾಡುವುದು? ಇದೊಂದು ನಮ್ಮ ಮುಂದೆ ಇರುವ ದೊಡ್ಡ ಪ್ರಶ್ನೆಯಾಗಿದೆ. ಹಿಂದೆ ತಾವು ಎರಡು ಪರ್ಸೆಂಟ್ ಬಡ್ಡಿ ಕಟ್ ಮಾಡುತ್ತೇವೆಂದು ಹೇಳಿದಾಗ ನಾವು ಇದು ಆಗುವುದಿಲ್ಲವೆಂದು ಹೇಳಿದೆ, ಆಗ ನೀವು ಇಲಾಖೆ ನಡೆಸಿದಂಥವರು ನೀವು ಈ ರೀತಿ ಹೇಳಿದರೆ ಹೇಗೆ ಎಂದು ಹೇಳಿದಿರಿ, ಇಲ್ಲಾ ಈ ರೀತಿ ಆಗುತ್ತದೆ ಆ ಸಂಸ್ಥೆಗಳು ಉಳಿಯುವುದಿಲ್ಲವೆಂದು ನಾನು ಹೇಳಿದ ಮೇಲೆ ನೀವು ನಿಮ್ಮ ಅಧಿಕಾರಿಗಳನ್ನು ಕೇಳಿ, ಯಾವುದೇ ದೃಷ್ಟಿಯಿಂದ ರೈತರಿಗೆ ಎರಡು ಪರ್ಸೆಂಟ್ ಮಾಡುತ್ತೇವೆಂದು ಹೇಳಿದರೂ ಕೂಡ ಇವತ್ತಿಗೂ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇದು ಆಗುವುದಿಲ್ಲ. ಅದೇರೀತಿ ತಾರು ರೈತರಿಗೆ 12 ಗಂಟೆ ವಿದ್ಯುತ್ ಕೊಡುತ್ತೇವೆಂದು ಹೇಳಿದಾಗ ನಾನು ಇದು ಆಗುವುದಿಲ್ಲವೆಂದು ಹೇಳಿದಾಗ ಎಲ್ಲರೂ ನನ್ನ ಮೇಲೆ ಬಿದ್ದು, ಅವರು ಮಾಡುತ್ತೇರೆಂದು ಹೇಳಿದರೆ ನೀವು ಏಕೆ ಆಗುವುದಿಲ್ಲವೆಂದು ಹೇಳುತ್ತೀರಿ ಎಂದರು, ಆಯಿತು ಮಾಡಿ ಎಂದು ನಾನು ಹೇಳಿದೆ. ನಾವು ಸುಮ್ಮನೆ ಇಲ್ಲಿ ಹೇಳುವುದರಲ್ಲಿ ಅರ್ಥವಿಲ್ಲ, ಏಕೆಂದರೆ ಪರಿಸ್ಥಿತಿ ನಮ್ಮ ಕಣ್ಣಿಗೆ ಕಾಣುತ್ತದೆ, ಆದರೆ ಆಗುವಂಥದ್ದನ್ನು ಮಾತ್ರ ನಾವು ಹೇಳಬೇಕಾಗುತ್ತದೆ. ತಾವು ಇನ್ನು ಮುಂದೆ ಹೋಗಿ ರೈತರ ರೈತರ ಮೇಲೆ ಟ್ಯಾಕ್ಸ್ ಹಾಕಿ ವಸೂಲಿ ಮಾಡುತ್ತೇರೆಂದು .ಹೇಳಿದಿರಿ, ಆದರೆ ಇದು ಆಗುವುದಿಲ್ಲ ಏಕೆಂದರೆ ನಾನು ಇದಕ್ಕೊಂದು ಉದಾ: ಹೇಳಿಬಿಡುತ್ತೇನೆ. ಅದರಲ್ಲಿ ರಾಜಕೀಯ ಪ್ರಾರಂಭರವಾಗುತ್ತದೆ,, ಎಲ್ಲಾ ಪಕ್ಷಗಳು ಏನೋ ಒಂದು ಮಾಡುವುದಕ್ಕೆ ಹೋಗುತ್ತೇನೆ, ನಾವು ಎಲ್ಲಾ ಹೀಗೆ ಮಾಡಿಯೇ ಈ ಪರಿಸ್ಥಿತಿ ಬಂದಿರುವುದು, ಜನಪ್ರಿಯ ಯೋಜನೆಗಳನ್ನು ನಾವು ಜಾರಿ ಮಾಡುವುದಕ್ಕೆ ಹೋಗಿ ಈ ರಾಜ್ಯದ ಸ್ಥಿತಿಯನ್ನು ಈ ಮಟ್ಟಕ್ಕೆ ನಾವು ತಂದಿದ್ದೇವೆ. ತಾವು ಇದರಲ್ಲಿ ರೈತರ ಮೇಲೆ ತೆರಿಗೆ ಹಾಕಿ ವಸೂಲಿ ಮಾಡುತ್ತೇವೆ, ಇಂಥವುಗಳಿಗೆ ಕಟ್ ಮಾಡುತ್ತೇವೆ, ಕಟ್ಟುನಿಟ್ಟಾಗಿ ವಸೂಲಿ ಮಾಡುತ್ತೇವೆಂದು ನೀವು ಹೇಳಿದಿರಿ. ಹೆಚ್ಚಿಗೆ ಸಮಯ ಇಲ್ಲದೇ ಇರುವುದರಿಂದ

5.40 ಪಿ.ಎಂ.

ನಾನು ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಕುಟೀರ ಜ್ಯೋತಿಯನ್ನು ತಾವು ಮನ್ನಾ ಮಾಡಿದ್ದೀರಿ. ಆದೇ ರೀತಿಯಾಗಿ ಮುಂದೆ ಇದನ್ನು ಸಹ ಮನ್ನಾ ಮಾಡಬಹುದೆಂದು

ತಿಳಿದುಕೊಂಡಿದ್ದಾರೆ. ನಮ್ಮ ಸರ್ಕಾರ ಬಂದಾಗ 136 ಕೋಟಿ ರೂಪಾಯಿ ಬಡ್ಡಿ ಮನ್ನಾ ಮಾಡಿದೆವು. ಇದು ಯಾವ ರೀತಿ ಆಗುತ್ತದೆ ಎಂದರೆ, "ಕೊಟ್ಟವನು ಕೋಡಂಗಿ, ಈಸುಕೊಂಡವನು ವೀರಭದ್ರ" ಎನ್ನುವ ರೀತಿಯಾಗುತ್ತದೆ. ಈಗಾಗಲೇ ಕುಟೀರ ಜ್ಯೋತಿ ಪಡೆದುಕೊಂಡಿದವರೆಲ್ಲರೂ ಹುಚರಾಗಿದ್ದಾರೆ. ಈಗ ಇದನ್ನು ತಾವು ಮನ್ನಾ ಮಾಡಿದ್ದೀರಿ. ಈ ರೀತಿಯಾದಂಥ ವ್ಯವಸ್ಥೆಯಿಂದ ನಮ್ಮ ಸ್ಥಿತಿ ಖಂಡಿತವಾಗಿಯೂ ಕೂಡ ಇಲ್ಲಿಗೆ ಬಂದಿದೆ ಈ ವಿಷಯದ ಬಗ್ಗೆ ಯಾವ ರೀತಿಯಾದ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುವುದರ ಬಗ್ಗೆ ತಾವು ಆರ್ಥಿಕ ತಜ್ಞರ ಅಭಿಪ್ರಾಯವನ್ನು ಕೇಳಿಕೊಂಡು ಬರಬೇಕೆಂದು ಸ್ವಲ್ಪ ಮಟ್ಟಿಗಾದರೂ ಸಲಹೆ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ಇದರ ಬಗ್ಗೆ ಮುಂದೆ ವಿವರವಾಗಿ ಮಾತನಾಡುವಂಥ ಸಂದರ್ಭದಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆ. ಕನ್ನಡ ಮತ್ತು ಸಂಸ್ಕೃತಿ ಸಚಿವರ ಇಲಾಖೆಗೆ ಸಂಬಂಧಪಟ್ಟಂತೆ ನಾನೊಂದು ಪ್ರಶ್ನೆಯನ್ನು ಕೇಳಿದ್ದೆ. ಇದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಕಳುಹಿಸಿರತಕ್ಕಂಥ ಪ್ರಶ್ನೆ ದುರ್ದೈವದಿಂದ ಚುಕ್ಕೆ ರಹಿತ ಪ್ರಶ್ನೆಯಾಗಿ ಬಂದಿರುವುದರಿಂದ ನಾನು ಏನೂ ಮಾತನಾಡುವುದಕ್ಕೆ ಆಗಲಿಲ್ಲ. ಮಾನ್ಯ ಸಚಿವರು ಉತ್ತರವನ್ನು ಕಳುಹಿಸಿದ್ದಾರೆ. ಆದರೆ ಇದರಲ್ಲಿ 97 ಪರ್ಸೆಂಟ್ ಮತ್ತು 98 ಪರ್ಸೆಂಟ್, ಈ ರೀತಿಯಾಗಿ ಹೇಳಿದ್ದಾರಷ್ಟೆ. ನಮ್ಮ ರಾಜ್ಯದಲ್ಲಿ ಇವತ್ತಿನ ದಿವಸ ಕನ್ನಡ ಎಷ್ಟರ ಮಟ್ಟಿಗೆ ಆಚರಣೆ ತರಲಾಗುತ್ತಿದೆ ಎಂಬುದರ ಬಗ್ಗೆ ಈ ಸಂದರ್ಭದಲ್ಲಿ ಒಂದು ಉದಾಹರಣೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಶಾಸಕರ ನಿಧಿ ಎಂದು ಸರ್ಕಾರ 25 ಲಕ್ಷ ರೂಪಾಯಿ ನಿಗದಿ ಮಾಡಿದೆ. ಇದರಲ್ಲಿ ಈಗಾಗಲೇ 12.5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಿಕ್ಕೆ ಹೊರಡಿಸಿರುವ ಆದೇಶ ಕೂಡ ಇಂಗ್ಲೀಷ್ ಭಾಷೆಯಲ್ಲಿದೆ. ಹಾಗೆಯೇ ಮುನಿಸಿಪಾಲಿಟಿಗೆ ಸಂಬಂಧಪಟ್ಟ ಮೀಸಲಾತಿ ಆದೇಶ ಕೂಡ ಇಂಗ್ಲೀಷ್ ಭಾಷೆಯಲ್ಲಿದೆ. ಕರ್ನಾಟಕ ರಾಜ್ಯಪತ್ರ ಕೂಡ ಇಂಗ್ಲೀಷ್‌ನಲ್ಲಿ ಪ್ರಿಂಟ್ ಆಗುತ್ತಿದೆ. ಎಲ್ಲಾ ಇಲಾಖೆಗಳಲ್ಲಿ ಸಾಮಾನ್ಯವಾಗಿ 70 ಭಾಗದಷ್ಟು ವ್ಯವಹಾರ ಇಂಗ್ಲೀಷ್‌ನಲ್ಲಿ ನಡೆಯುತ್ತಿದೆ. ಉಳಿದ 30 ಭಾಗದಷ್ಟು ಮಾತ್ರ ಕನ್ನಡದಲ್ಲಿ ನಡೆಯುತ್ತಿದೆ. ಕೆಲವೊಂದು ಇಲಾಖೆಗಳಲ್ಲಿ 90 ಭಾಗದಷ್ಟು ವ್ಯವಹಾರ ಇಂಗ್ಲೀಷ್‌ನಲ್ಲಿಯೆ ನಡೆಯುತ್ತಿದೆ. ಕನ್ನಡ ಸಂಸ್ಕೃತಿ ಇಲಾಖೆಯವರು ಇದನ್ನು ಹೋಗಿ ನೋಡಿದ್ದಾರೆ. ಇದನ್ನು ಸರ್ವೆ ಮಾಡುವುದಕ್ಕೆ ಬೇಕಾದ ಒಂದು ಆಯೋಗವನ್ನು ರಚನೆ ಮಾಡಿ. ಅವತ್ತಿನ ದಿವಸ ನಾವು ಕಟ್ಟುನಿಟ್ಟಾಗಿ ಕನ್ನಡವನ್ನು ಆಚರಣೆಗೆ ತರದೇ ಇದ್ದರೆ ಈ ರಾಜ್ಯದಲ್ಲಿ ಮುಂದಿನ ದಿವಸಗಳಲ್ಲಿ ಕನ್ನಡವೇ ಇರುವುದಿಲ್ಲ. ನನ್ನ ಕಾರಿನ ನಂಬರ್ ಪ್ಲೇಟ್‌ನಲ್ಲಿ ಕನ್ನಡ ಸಂಖ್ಯೆಯಲ್ಲಿ ನಂಬರ್ ಬರೆಸಿದ್ದೇನೆ. ಇದು ತಪ್ಪೆಂದು ಕೇಸ್ ಹಾಕುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ನಾವು ಕನ್ನಡಲ್ಲಿ ಬರೆದುಕೊಂಡು ಓಡಾಡುವುದು ತಪ್ಪು ಎನ್ನತಕ್ಕಂಥ ಪರಿಸ್ಥಿತಿ ನಮಗೆ ಬಂದಿದೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ

ಮಾನ್ಯ ಸಾರಿಗೆ ಸಚಿವರಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆನು. ಕನ್ನಡದಲ್ಲಿ ನಂಬರ್ ಪ್ಲೇಟ್ ಅನ್ನು ಬರೆದುಕೊಳ್ಳಬಹುದು ಅಥವಾ ಬಿಡಬಹುದು ಆದರೆ ಇಂಗ್ಲೀಷ್‌ನಲ್ಲಿ ಕಡ್ಡಾಯವಾಗಿ ಬರೆಯಬೇಕೆಂದು ಉತ್ತರ ಕೊಟ್ಟಿದ್ದಾರೆ. ಕನ್ನಡದಲ್ಲಿ ಬರೆಸಿದರೆ ಕೇಸ್ ಹಾಕುತ್ತಾರೆ. ಆದರೆ ಇಂಗ್ಲೀಷ್‌ನಲ್ಲಿ ಬರೆದರೆ ಯಾವುದೇ ರೀತಿಯ ಕೇಸ್ ಹಾಕುವುದಿಲ್ಲ.

ಉಪಾಧ್ಯಕ್ಷರು :— ಮುಂದೆ ಕನ್ನಡದಲ್ಲಿ ಬರೆಸಿ, ಹಿಂದೆ ಇಂಗ್ಲೀಷ್‌ನಲ್ಲಿ ಬರೆಸಿ.

ಶ್ರೀ ಎಸ್.ಎಸ್. ಪಾಟೀಲ್ :— ನಾವು ಸಂಪೂರ್ಣವಾಗಿ ಕನ್ನಡದಲ್ಲಿಯೇ ಬರೆಯುತ್ತೇನೆ ಇದರಿಂದ ತಪ್ಪೇನು ಆಗುತ್ತದೆ?

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ :— ನಮ್ಮ ರಾಜ್ಯ ಬಿಟ್ಟು ಬೇರೆ ರಾಜ್ಯಗಳಿಗೆ ಹೋದಾಗ ಅಲ್ಲಿ ಇರತಕ್ಕಂಥವರಿಗೆ ಕನ್ನಡ ಗೊತ್ತಾಗುವುದಿಲ್ಲ. ಆದ್ದರಿಂದ ಕನ್ನಡದ ಜೊತೆಗೆ ಇಂಗ್ಲೀಷ್ ಕೂಡ ಇರಬೇಕೆಂದು ಹೇಳಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಉಪಾಧ್ಯಕ್ಷರೆ, ನಾನು ನಮ್ಮ ರಾಜ್ಯ ಬಿಟ್ಟು ಬೇರೆ ರಾಜ್ಯಕ್ಕೆ ಹೋಗುವುದಿಲ್ಲ. ನಾನು ಒಂದು ವೇಳೆ ಬೇರೆ ರಾಜ್ಯಕ್ಕೆ ಹೋದರೆ ಕೇಸ್ ಹಾಕಲಿ. ಆದರೆ ಕರ್ನಾಟಕ ರಾಜ್ಯದಲ್ಲಿ ಇವರೇಕೆ ಕೇಸ್ ಹಾಕುತ್ತಿದ್ದಾರೆ? ನಾನು ಈಗಾಗಲೇ ಹೇಳಿದಂತೆ ನನ್ನ ಕಾರಿಗೆ ಕನ್ನಡದಲ್ಲಿಯೆ ನಂಬರ್ ಪ್ಲೇಟ್ ಬರೆಸಿದ್ದೇನೆ. ನನ್ನ ಮೇಲೆ ಕೇಸ್ ಹಾಕಲಿ ಆ ನಂತರ ಕೋರ್ಟಿಗೆ ಹೋಗಿ ಮಾತನಾಡೋಣವೆಂದು ನಾನು ಸುಮ್ಮನೆ ಇದ್ದೇನೆ. ಆದ್ದರಿಂದ ಕನ್ನಡದಲ್ಲಿ ನಂಬರ್ ಪ್ಲೇಟ್ ಬರೆಯುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಸೂಚಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕಡ್ಡಾಯವಾಗಿ ಇಂಗ್ಲೀಷ್‌ನಲ್ಲಿ ಬರೆಯಬೇಕು, ಕನ್ನಡದಲ್ಲಿ ಬರೆಯುವುದು ಅಥವಾ ಬಿಡುವುದು ತಮಗೆ ಬಿಟ್ಟಿದ್ದು ಎಂದು ಮಾನ್ಯ ಸಾರಿಗೆ ಸಚಿವರು ಉತ್ತರ ಕೊಟ್ಟಿದ್ದಾರೆ. ಈ ರೀತಿ ಇರುವಾಗ ಕನ್ನಡವನ್ನು ಯಾವ ರೀತಿಯಾಗಿ ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಕನ್ನಡವನ್ನು ಓದುವವರು ಏನು ಮಾಡಬೇಕು? ಅದೇ ರೀತಿ ನಾವು ಮಾಡುತ್ತಾ ಹೋದರೆ ಮುಂದೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಕನ್ನಡ ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ ಕನ್ನಡ ಮತ್ತು ಸಂಸ್ಕೃತಿ ಸಚಿವರು ಆಸಕ್ತಿ ವಹಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಸದನದಲ್ಲಿ ಕೆಲವು ದಾಖಲೆಗಳನ್ನು ಕನ್ನಡದಲ್ಲಿ ಒದಗಿಸಬೇಕೆಂದು ನಾನು ಒತ್ತಾಯ ಮಾಡುತ್ತಿರುವುದರಿಂದ ಮತ್ತು ಮಾನ್ಯ ಸಭಾಧ್ಯಕ್ಷರಿಗ ಇದರ ಬಗ್ಗೆ ಆಸಕ್ತಿ ಇರುವುದರಿಂದ ಕೆಲವು ದಾಖಲೆಗಳು ಕನ್ನಡದಲ್ಲಿ ಬರುತ್ತಿವೆ. ಇನ್ನು ಮುಂದೆಯಾದರೂ ಕಟ್ಟುನಿಟ್ಟಾಗಿ ಕನ್ನಡ ಆಡಳಿತ ಭಾಷೆಯನ್ನಾಗಿ ಜಾರಿಗೆ ತರುವುದಕ್ಕೆ ನಾವು ಪ್ರಯತ್ನ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ

ಬಗ್ಗೆ ಹೇಳುವುದಾದರೆ, ಹೆಣ್ಣುಮಕ್ಕಳನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಮಾನ್ಯ ಸಚಿವರು ಈಗಾಗಲೇ ಇಲ್ಲಿ ಪ್ರಸ್ತಾಪ ಮಾಡಿದರು. ನಿಜವಾಗಿಯೂ ಕಡ ಇದ ಎಲ್ಲರೂ ಒಪ್ಪಂವತಹ ಮಾತು. ಇವತ್ತಿನ ದಿವಸ ಹೆಣ್ಣುಮಕ್ಕಳನ್ನು ಕೇವಲ ವೇಶ್ಯವಾಟಿಕೆ ಮಾರಾಟ ಮಾಡುತ್ತಿಲ್ಲ. ಇದರ ಹಿನ್ನಲೆ ಏನು ಇದೆ ಎಂಬುದನ್ನು ತಾವು ನೋಡಬೇಕಾಗುತ್ತದೆ. ಇವತ್ತಿನ ದಿವಸ ವರದಕ್ಷಣೆಯ ಪಿಡುಗು ಜಾಸ್ತಿಯಾಗಿದೆ. ಹಾಗೆಯೇ ಹೆಣ್ಣು ಶಿಶುವಿನ ಭ್ರೂಣ ಹತ್ಯೆಯೂ ಕೂಡ ನಡೆಯುತ್ತಿದೆ. ಮೊನ್ನೆ ನಡೆದಂಥ ಜನಗಣತಿಯಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಾಗಿರುವುದು ಗೊತ್ತಾಗಿದೆ. ಇವತ್ತಿನ ದಿವಸ ವರದಕ್ಷಿಣೆ ಪಿಡುಗನ್ನು ಕಡ್ಡಾಯವಾಗಿ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕು. ಮಾನ್ಯ ಸಚಿವರು ಈಗಾಗಲೇ ಹೇಳಿದಂತೆ ಕಡ್ಡಾಯವಾಗಿ ರಿಜಿಸ್ಟ್ರೇಷನ್ ಮದುವೆ ಮಾಡಿಕೊಂಡರೆ ಇದನ್ನು ಸ್ವಲ್ಪಮಟ್ಟಿಗೆ ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಇವತ್ತಿನ ದಿವಸ ದೊಡ್ಡದೊಡ್ಡ ಮನುಷ್ಯರು ಮಾಡತಕ್ಕಂಥ ಲಗ್ನ ನೋಡಬೇಕು. ಲಗ್ನ ವದಂತಿಯೇ ಇವತ್ತಿನ ದಿವಸ ಸಾಕಷ್ಟು ಬದಲಾವಣೆಯಾಗಿದೆ. ಹಾಗೆಯೇ ಈಗ ರಿಸಿಪ್ಶನ್ ಮಾಡುವುದು ಕೂಡ ಒಂದು ದೊಡ್ಡ ಲಗ್ನ ರೀತಿಯಲ್ಲಿ ನಡೆಯುತ್ತಿದೆ. ಕನ್ಯೆ ಹಡದಿರತಕ್ಕಂಥವನ ತಲೆಯ ಮೇಲೆ ಈ ಎಲ್ಲಾ ಖರ್ಚನ್ನು ಹಾಕುತ್ತಿದ್ದಾರೆ.

ಶ್ರೀ ಎಚ್.ಎಂ. ಚಂದ್ರಶೇಖರಪ್ಪ :— ನಿಮ್ಮ ಮಗನಿಗೆ ಮದುವೆ ಮಾಡುವಂಥ ಸಂದರ್ಭದಲ್ಲಿ ನೀವು ವರದಕ್ಷಣೆ ತೆಗೆದುಕೊಂಡಿರಲಿಲ್ಲವೆ?

ಶ್ರೀ ಎಸ್.ಎಸ್. ಪಾಟೀಲ್ :— ನಾನು ಪ್ರಾಮಾಣಿಕವಾಗಿ ತೆಗೆದುಕೊಂಡಿಲ್ಲ. ನನ್ನ ಮಗ ಎಂಬಿಬಿಎಸ್ ಆಗಿದ್ದರೂ ಕೂಡ ನೀನು ವರದಕ್ಷಿಣೆ ತೆಗೆದುಕೊಂಡರೆ ನಾನು ಲಗ್ನ ಆಗುವುದಿಲ್ಲವೆಂದ. ನಾನು ವರದಕ್ಷಿಣೆ ತೆಗೆದುಕೊಂಡಿಲ್ಲವೆಂದು ಪ್ರಾಮಾಣಿಕವಾಗಿ ಇಲ್ಲಿ ಇರತಕ್ಕಂಥ ಗಾಂಧೀಜಿ ಫೋಟೋ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಜಿ. ನಂಜಯ್ಯನಮಠ್ :— ವರೋಪಚಾರವನ್ನು ತೆಗೆದುಕೊಂಡಿದ್ದೀರಾ?

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಉಪಾಧ್ಯಕ್ಷರೆ, ಅವರೇ ನಮ್ಮ ಸ್ವಾಮಿಗಳು. ಅವರ ಕಡೆಯಿಂದ ಜಾಸ್ತಿ ವರದಕ್ಷಿಣೆ ಬರುತ್ತದೆ ತಾವು ತೆಗೆದುಕೊಳ್ಳಿ ಎಂದು ಅವರೇ ಹೇಳಿಕೊಡುತ್ತಾರೆ. ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ವರದಕ್ಷಿಣೆ ಎಂದು ಕೇವಲ 5 ಸಾವಿರ ರೂಪಾಯಿ ಇಟ್ಟಿದ್ದೀರಿ. ಇದು ವರದಕ್ಷಿಣೆ ಎಂದು ಆಗಬಾರದು. ಮಾನ್ಯ ಮುಖ್ಯಮಂತ್ರಿ ಯಾರು ಇಲ್ಲಿ ಇರುವುದರಿಂದ ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. 'ಕುಡುಕ ಗಂಡನ ಕಾಟ' ಈ ವಿಷಯದ ಬಗ್ಗೆ ಬಹಳ ಚರ್ಚೆ ಆಗಿದೆ. ಆದರೆ ಇವತ್ತಿನ ದಿವಸ ಹೆಣ್ಣುಮಕ್ಕಳ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದಾರೆ. ಅಲ್ಲಿಗೆ ಒಂದು ಸಾರಿ ಭೇಟಿ ಕೊಡಿ, ನಿಮ್ಮ ಜೊತೆಗೆ ನಾನು

ಸಹ ಬರುತ್ತೇನೆಂದು ಮಾನ್ಯ ಸಚಿವರಿಗೆ ತಿಳಿಸಿದ್ದೆನು. ಅಲ್ಲಿನ ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡಬೇಕೆಂದು ಹೇಳಿದರೂ ಕೂಡ ಮಾನ್ಯ ಸಚಿವರು ಅಲ್ಲಿಗೆ ಹೋಗಲಿಲ್ಲ. ಅಲ್ಲಿ ದೊಡ್ಡ ಗಲಭೆ ಆಗಿ ಹೆಣ್ಣುಮಕ್ಕಳು ನನ್ನ ಹತ್ತಿರ ಬಂದು ಕುಡಿಯುವುದನ್ನು ಬಂದ್ ಮಾಡಿಸಬೇಕೆಂದು ಕೇಳಿಕೊಂಡಿದ್ದರು.

ಶ್ರೀ ಎಚ್.ಎಂ. ಚಂದ್ರಶೇಖರಪ್ಪ:— ಮಾನ್ಯ ಸದಸ್ಯರು ಕನ್ನಡ ಭಾಷೆಯ ಜೊತೆಗೆ ಇಂಗ್ಲೀಷ್ ಪದಗಳನ್ನು ಸಹ ಬಳಕೆ ಮಾಡುತ್ತಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್:— ಇವತ್ತಿನ ದಿವಸ ಎಷ್ಟೋ ಜನರಿಗೆ ಪೊಲೀಸ್ ಎಂದರೆ ಮಾತ್ರ ತಿಳಿಯುತ್ತದೆ. ಆದರೆ ರೂಢಿಯಲ್ಲಿ ಇಲ್ಲದೇ ಇರತಕ್ಕಂಥ ಆರಕ್ಷರ ಎಂದರೆ ಯಾರಿಗೂ ತಿಳಿಯುವುದಿಲ್ಲ. ಇಂಥ ಸ್ಥಿತಿಯಲ್ಲಿ ನಾವು ಇದ್ದೇವೆ. ಆದ್ದರಿಂದ ರೂಢಿಯಲ್ಲಿರತಕ್ಕಂಥ ಪದಗಳನ್ನು ನಾವು ಮಾತನಾಡುವಾಗ ಉಪಯೋಗ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇವತ್ತಿನ ದಿವಸ ಮನೆಗಳಲ್ಲಿ ಮಕ್ಕಳು ತಂದೆ-ತಾಯಿಗೆ ಡ್ಯಾಡಿ ಮತ್ತು ಮಮ್ಮಿ ಎಂದು ಹೇಳುವುದು ರೂಢಿಯಲ್ಲಿ ಬಂದುಬಿಟ್ಟಿದೆ. ಹಾಗೆಯೇ ನಮ್ಮ ಕಡೆಯೂ ಬೇರೆ ಬೇರೆ ಭಾಷೆಗಳನ್ನು ಸಾಕಷ್ಟು ಉಪಯೋಗ ಮಾಡುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಅತ್ತಿಗೆಗೆ ವೈನಿ ಎಂಬ ಶಬ್ದವನ್ನು ಉಪಯೋಗ ಮಾಡುತ್ತಾರೆ. ಅತ್ತಿಗೆ ಎನ್ನತಕ್ಕ ಕನ್ನಡ ಶಬ್ದವನ್ನು ಯಾರೂ ಉಪಯೋಗ ಮಾಡುತ್ತಿಲ್ಲ. ಇವತ್ತಿನ ದಿವಸ ಸ್ವಸಹಾಯ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಇವತ್ತಿನದಿವಸ ಮನೆ ತೆಗೆದುಕೊಳ್ಳುವುದಕ್ಕೆ ಪ್ರತಿದಿವಸ 5 ರಿಂದ 10 ರೂಪಾಯಿ ತುಂಬುವಂಥ ಈ ಯೋಜನೆ ನಿಜವಾಗಿಯೂ ಚೆನ್ನಾಗಿದೆ. ಇವತ್ತಿನ ದಿವಸ ನನ್ನ ತಾಲ್ಲೂಕಿನಲ್ಲಿರುವ ಹೆಣ್ಣುಮಕ್ಕಳು ಸುಮಾರು 10 ಲಕ್ಷ ರೂಪಾಯಿ ಕೂಡಿಸಿದ್ದಾರೆ. ಇಷ್ಟೊಂದು ಹಣವನ್ನು ಕೂಡಿಸಿರುವುದನ್ನು ನೋಡಿ ನನಗೆ ಆಶ್ಚರ್ಯವಾಯಿತು.

ಶ್ರೀಮತಿ ಮೋಟಮ್ಮ:— ಸ್ವಸಹಾಯ ಗುಂಪುಗಳು ಬೇರೆ ಬೇರೆ ರೀತಿಯಲ್ಲಿ ಇವೆ. ಇದರಲ್ಲಿ ತಾವು ಹೇಳುತ್ತಿರುವ ಸ್ತ್ರೀ ಶಕ್ತಿ ಸ್ವಸಹಾಯ ಗುಂಪೂ ಸಹ ಸೇರಿದೆ. ಗಂಡಸರು ಕುಡಿದು ಎಲ್ಲಾ ಹಾಳು ಮಾಡುತ್ತಿದ್ದಾರೆ ಅದು ಬೇರೆ. ಸ್ತ್ರೀಶಕ್ತಿ ಮುಖಾಂತರ ಸ್ವಸಹಾಯ ಗುಂಪುಗಳನ್ನು ಮಾಡಿದ್ದೀರಿ, ಇದು ಒಳ್ಳೆಯ ಯೋಜನೆಯಾಗಿದೆ. ಇದನ್ನು ಇನ್ನಷ್ಟು ಒಳ್ಳೆಯ ರೀತಿಯಲ್ಲಿ ಜಾರಿಗೆ ತರಬೇಕು. ಹೆಣ್ಣುಮಕ್ಕಳನ್ನು ನೀವು ಜಾಗ್ರತೆ ಮಾಡಬೇಕಾದರೆ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಕೇಳಬೇಕು. ಮೀಸಲಾತಿಯನ್ನು ಮಾಡಿದ್ದೇವೆಂದು ಹೇಳುತ್ತೀರಿ, ಜಿಲ್ಲಾ ಪಂಚಾಯಿತಿ ಅಧ್ಯಕ್ಷರನ್ನಾಗಿ ಮಾಡಿದರೆ ಅದರ ಆಡಳಿತವನ್ನು ಅವರ ಪತಿ ಮಾಡುತ್ತಾನೆ. ತಾಲ್ಲೂಕು ಪಂಚಾಯಿತಿಯಲ್ಲಿಯೂ ಕೂಡ ಇದೇ ರೀತಿ ಇರುತ್ತದೆ. ಇಂತಹ ಪರಿಸ್ಥಿತಿ ಇವತ್ತು ಇರುತ್ತದೆ, ಎಷ್ಟೋ ಹಿಂದುಳಿದ ವರ್ಗಗಳನ್ನು ತುಳಿಯಲ್ಪಟ್ಟಿವೆಯೋ ಅದೇ ರೀತಿ ಈ ಹೆಣ್ಣುಮಕ್ಕಳ ಪರಿಸ್ಥಿತಿಯಾಗಿದೆ.

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ಎಲ್ಲಾ ಮಹಿಳೆಯರ ಅಧಿಕಾರವನ್ನು ಅವರ ಗಂಡನು ನಡೆಸುತ್ತಾನೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದರು. ಇದು ಒಂದು ದಿವಸದಲ್ಲಿ ಮಾಡುವುದಕ್ಕಾಗುವುದಿಲ್ಲ, ಯಾವುದೇ ಒಂದು ವ್ಯವಸ್ಥೆಯಲ್ಲಿ ಹಂತಹಂತವಾಗಿ ಮಹಿಳೆಗೆ ಅವಕಾಶ ಕೊಡತಕ್ಕಂಥದ್ದು, ಅವಳ ಕೆಲಸದಲ್ಲಿ ಆತ್ಮವಿಶ್ವಾಸ ಬರತಕ್ಕಂತಹ ರೀತಿಯಲ್ಲಿ ಪುರುಷರು ಮಾಡಬೇಕು. ತಾವು ಯಾವ ವರ್ಗಕ್ಕೆ ಈ ಮಾತನ್ನು ಹೇಳುತ್ತಿದ್ದೀರಿ, ತಾವು ಅದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಉಪಾಧ್ಯಕ್ಷರೆ, ನೀವು ಇದೇ ರೀತಿಯಾಗಿ ಹೇಳಿಕೊಂಡು ಹೋದರೆ, ನಾವು ಇನ್ನೂ 50 ವರ್ಷ ಮುಂದುವರಿಯುವುದಕ್ಕೆ ಬಿಡುವುದಿಲ್ಲ. ಗಂಡಸರು ಬಿಟ್ಟುಕೊಡುವುದಿಲ್ಲ, ಬಿಟ್ಟುಕೊಡಬೇಕೆಂದರೆ ಬಹಳ ಕಷ್ಟವಿದೆ, ಆದಕ್ಕಾಗಿ ನೀವು ಸ್ವತ: ತಯಾರಾಗಬೇಕು. ಅದನ್ನು ನಾವು ಇಲ್ಲಿ ಹೇಳಬಾರದು, ಮಾನ್ಯ ಸಚಿವರು ತಮ್ಮ ಪತಿಯನ್ನು ಸಮೀಪಕ್ಕೆ ಬರದಂತೆ ನೋಡಿಕೊಳ್ಳುತ್ತಾರೆ. ನೀವು ಯಾವ ರೀತಿಯಾಗಿ ಮುಂದುವರಿಯುತ್ತೀರೋ ಅದೇ ರೀತಿಯಾಗಿ ಎಲ್ಲಾ ಹೆಣ್ಣುಮಕ್ಕಳಿಗೂ ತರಬೇತಿಯನ್ನು ತಾವು ಕೊಡಬೇಕು. ನಾನು ನಿಮಗೆ ಆ ರೀತಿ ಮಾಡಿ ಎಂದು ಒಳ್ಳೆಯ ಉದ್ದೇಶದಿಂದ ಹೇಳುತ್ತಿದ್ದೇನೆ. ಹೆಣ್ಣುಮಕ್ಕಳಿಗೆ ಅಧಿಕಾರವನ್ನು ಬಿಟ್ಟುಕೊಟ್ಟರೆ ಅವರು ಅಧಿಕಾರವನ್ನು ಬಹಳ ಚೆನ್ನಾಗಿ ನಡೆಸುತ್ತಾರೆ. ನಮ್ಮ ನಿಮ್ಮ ತಾಯಿಯವರು ಅನಕ್ಷರಸ್ಥರು, ಅವರು ಮನೆಯನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದರು. ಇವತ್ತು ನನ್ನ ಹೆಂಡತಿ ಓದಿಲ್ಲರೀ, ಅದಕ್ಕಾಗಿ ನಾನು ಅಧಿಕಾರ ನಡೆಸುವುದಕ್ಕೆ ಹೋಗುತ್ತೇನೆ ಎನ್ನುವ ರೀತಿಯಲ್ಲಿ ಹೇಳುತ್ತಾನೆ. ಅಲ್ಲಿಯೂ ಕೂಡ ಹೆಣ್ಣುಮಕ್ಕಳ ಹೆಸರಿನಿಂದ ಭ್ರಷ್ಟಾಚಾರ ನಡೆಯುತ್ತಿದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :— ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಸಪೋರ್ಟಿಂಗ್ ಆಗಿ ಒಂದು ಕೆಲಸವನ್ನು ನಾವು ಮಾಡಬಹುದು. ಕಛೇರಿಯು ನಡೆಯುವ ಸಮಯದಲ್ಲಿ ಯಾರ್ಯಾರು ಮಹಿಳೆಯರು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿರುತ್ತಾರೋ ಮತ್ತು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿರುತ್ತಾರೋ ಅವರನ್ನು ಕಛೇರಿಯಲ್ಲಿ ಬಿಟ್ಟು ಅವರ ಗಂಡನು ಹೊರಗಡೆ ಇರುವ ವ್ಯವಸ್ಥೆಯನ್ನು ಮಾಡಿದರೆ ಎಷ್ಟೋ ಮಹಿಳೆಯರನ್ನು ಜಾಗೃತರನ್ನಾಗಿ ಮಾಡುವುದಕ್ಕೆ ಸಾಧ್ಯವಿದೆ. ಇವರ ಗಂಡಂದಿರೆಲ್ಲಾ ಕಛೇರಿಯ ಕ್ಯಾಷಿಯರ್ ಪಕ್ಕ ಬಂದು ಕೂಡುವುದರಿಂದ ಇಲ್ಲಿ ಅದೇ ಸಮಸ್ಯೆಯಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ :— ನೀವು ಹೇಳಿದಂತೆ ಇದು ಬಹಳ ಕಷ್ಟವಿದೆ, ಒಂದೇ ಸಲಕ್ಕೆ ಇದು ಸುಧಾರಣೆಯಾಗುವುದಿಲ್ಲ. ನಮ್ಮದು ಇನ್ನು ಪುರುಷ ಪ್ರಧಾನವಾದ

ಸಮಾಜವಿದೆ, ಇವತ್ತು ಗಂಡನ ಆಧೀನದಲ್ಲಿ ಹೆಣ್ಣು ಮಕ್ಕಳು ಇರುತ್ತಾರೆ. ಇದು ಎಷ್ಟೋ ಕಡಿಮೆಯಾಗಿದೆ, ಹೆಣ್ಣುಮಕ್ಕಳು ಯಾರೂ ಅಧ್ಯಕ್ಷರು ಹಾಗೂ ಸದಸ್ಯರಾಗಿರುತ್ತಾರೆ, ಅವರಿಗೆ ತರಬೇತಿಯನ್ನು ಈ ದೃಷ್ಟಿಯಿಂದ ಕೊಡಿ ಎನ್ನುವ ಮಾತನ್ನು ಹೇಳಿದ್ದೇನೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮಹಿಳೆಯರಿಗೆ ಮೀಸಲಾತಿ ಏನು ಇದೆ ಅವರಿಗೆ ನಾಮೀನೇಷನ್ ಹಾಕುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿಲ್ಲ. ಅದನ್ನು ತನಿಖೆ ಮಾಡಲಿ, ಇವತ್ತಿನವರೆಗೆ ಕ್ರಮವನ್ನು ತೆಗೆದುಕೊಂಡಿಲ್ಲ. ಇವರು ಇನ್ನೇನು ಮಾಡುತ್ತಾರೆ ಹೇಳಿ? ನಾನು ಹೇಳುತ್ತಿರುವುದು ಗ್ರಾಮಪಂಚಾಯಿತಿ ಅಧ್ಯಕ್ಷ ಹುದ್ದೆಗೆ ಸಂಬಂಧಿಸಿದ್ದಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ :— ನೀವು ಹೇಳಿರುವಂತೆ ಎಲ್ಲಾ ಕಡಿಮೆಯಾಗಿರುವುದಿಲ್ಲ. ಎಲ್ಲೋ ಒಂದೊಂದು ಕಡೆ ಈ ರೀತಿಯಾಗಿರಬಹುದು.

ಶ್ರೀ ಮತಿ ಮೋಟಮ್ಮ:— ಮಾನ್ಯ ಅಧ್ಯಕ್ಷರೆ, ಮಹಿಳೆಯರು ಕ್ರಮವನ್ನು ತೆಗೆದುಕೊಳ್ಳಿ ಎಂದು ಕೇಸ್ ಬುಕ್ ಮಾಡಿದರೆ ಆಗುತ್ತದೆ; ಇದರ ಜೊತೆಗೆ ದಬ್ಬಾಳಿಕೆಯೂ ಕೂಡ ಇರುತ್ತದೆ. ದಬ್ಬಾಳಿಕೆ ಇದ್ದಾಗಲೇ ಈ ರೀತಿಯಾಗುತ್ತದೆ. ನಿಮ್ಮಂತಹ ಸಭ್ಯಸ್ಥರು ದಬ್ಬಾಳಿಕೆಯಾಗದಂತೆ ನೋಡಿಕೊಳ್ಳಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ದಬ್ಬಾಳಿಕೆಯಾಗದಂತೆ ಅವಾಯಿಡ್ ಮಾಡಬೇಕು.

ಶ್ರೀ ಎಸ್.ಎಸ್. ಪಾಟೀಲ್ :— ಸಣ್ಣ ನೀರಾವರಿ ಇಲಾಖೆ. ಇದು ಬಹಳ ಮಹತ್ವದ ಇಲಾಖೆಯಾಗಿದೆ. ಭಾರಿ ನೀರಾವರಿ ಇಲಾಖೆಗಿಂತ ಎಲ್ಲಾ ತಾಲ್ಲೂಕಿಗೆ ಅನುಕೂಲವಾಗುವಂತಹದ್ದು, ಈ ಸಣ್ಣ ನೀರಾವರಿ ಇಲಾಖೆ. ದಯಮಾಡಿ ಈ ಇಲಾಖೆಗೆ ಹೆಚ್ಚು ಹಣವನ್ನು ಕೊಡಬೇಕು, ಏನು ಹೇಳಿದರೂ ಹಣವಿಲ್ಲರೆಂದು ಹೇಳುತ್ತೀರಿ, ಒಂದೊಂದು ಯೋಜನೆ ಹೆಸರಿಗೆ ಮಾತ್ರವಿದೆ. ಈಗ ರಾಜ್ಯದಲ್ಲಿ ಬರಗಾಲ ಬಂದಿದೆ, ರಾಣಿಬೆನ್ನೂರಿನಿಂದ ಕೊಪ್ಪಳದವರೆಗೆ ತುಂಗಭದ್ರಾ ನದಿಗೆ ಲಿಫ್ಟ್ ಇರಿಗೇಷನ್ ಇರುತ್ತದೆ. ಇವರಿಗೆ ಹಣವನ್ನು ತುಂಬುವದಕ್ಕೆ ಸಾಧ್ಯವಿಲ್ಲ, ಕೊಟ್ಟಿರುವ ಹಣಕ್ಕೆ ನಿಮ್ಮವರು ಮೊದಲು ಪೈಪನ್ನು ಖರೀದಿ ಮಾಡಿರುತ್ತಾರೆ. ಇದರ ಬಗ್ಗೆ ತಾವು ಗಮನಿಸಬೇಕು. ಸರ್ಕಾರ ತುಂಬತಕ್ಕಂತಹ ಹಣ, ಕೆಪಿಟಿಸಿಎಲ್‌ನವರು ಡಿಸ್‌ಕನೆಕ್ಟ್ ಮಾಡಿದ್ದಾರೆ. ಇದು ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಡಿಸ್‌ಕನೆಕ್ಟ್ ಮಾಡಿರುವುದರಿಂದ ನಮ್ಮ ಜನರು ಎರಡು ತಿಂಗಳುಗಳಿಂದ ಬಿತ್ತನೆ ಮಾಡಿರುವುದಿಲ್ಲ. ನನ್ನ ತಾಲ್ಲೂಕಿನಲ್ಲಿ ಸುಮಾರು 10 ರಿಂದ 15 ಸಾವಿರ ಎಕರೆ ಸಣ್ಣ ನೀರಾವರಿ ಸಂಬಂಧಪಟ್ಟಿದ್ದಾಗಿರುತ್ತದೆ. ಡಿಸ್‌ಕನೆಕ್ಟ್ ಮಾಡಿದ ಮೇಲೆ ನಾನು ಜಿಲ್ಲಾಧಿಕಾರಿಗಳಿಗೆ ಹೇಳಿದೆ, ನಂತರ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಹೇಳಿ ಫ್ಯೂಸ್ ಹಾಕಿಸಿದರು. ಮಾನ್ಯ ಮುಖ್ಯಮಂತ್ರಿಗಳೇ, ಒಂದು ದಿನ ಹಾಕಿ ಮರುದಿವಸ ಕಿತ್ತುಹಾಕಿದರು.

ಶ್ರೀ ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ನಿರ್ದೇಶನವನ್ನು ಕೊಟ್ಟಿದ್ದಾರೆ, ಕರ್ನಾಟಕದಲ್ಲಿ ಸಣ್ಣ ನೀರಾವರಿಗೆ ಸಂಬಂಧಪಟ್ಟಂತೆ ಎಲ್ಲೆಲ್ಲಿ ಲಿಫ್ಟ್ ಇರಿಗೇಷನ್ ಇದೆ, ಯಾವುದೇ ಕಾರಣಕ್ಕೂ ಅಲ್ಲಿ ಡಿಸ್‌ಕನೆಕ್ಟ್ ಮಾಡಬಾರದೆಂದು ಹೇಳಿದ್ದಾರೆ. ಕೆಪಿಟಿಸಿಎಲ್‌ಗೆ ಇಲಾಖೆಯಿಂದ ನೇರವಾಗಿ ಹಣ ಕಟ್ಟಬೇಕೆಂದು ನಿರ್ದೇಶನ ನೀಡಿದ್ದಾರೆ. ಎಲ್‌ಐಎಸ್‌ನಲ್ಲಿ ಯಾವುದೇ ರೀತಿಯ ತೊಂದರೆಯಾಗದಂತೆ ನಾವು ನಿಭಾಯಿಸಿಕೊಂಡು ಹೋಗುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ :— ಅಧಿವೇಶನದಲ್ಲಿ ಇದರ ಬಗ್ಗೆ ಚರ್ಚೆಯಾದ ನಂತರ ಅದು ಹೋಯಿತು. ಆದರೆ ಬಿತ್ತಿದ ಮೇಲೆ ಇಷ್ಟು ಹೊತ್ತಿಗೆ ಒಂದು ಪೀಕ್ ಬರುತ್ತಿತಲ್ಲಾ. ಒಂದ ವೇಳೆ ಬರುತ್ತದೆಂದು ಶೇಂಗಾ, ಅಥವಾ ಗೋವಿನ ಜೋಳವನ್ನು ಹಾಕಿಕೊಂಡು ಒಂದು ಫಸಲು ತೆಗೆದುಕೊಳ್ಳುತ್ತಿದ್ದನು. ಆ ಬೆಳೆ ಬಿತ್ತನೆ ಮಾಡಿದ್ದರೆ ಸುಮಾರು ಜನರಿಗೆ ಕೂಲಿ ಸಿಗುತ್ತಿತ್ತು. ಖಂಡಿತವಾಗಿ ಅಲ್ಲಿರುವ ಜನರಿಗೆ ಅನುಕೂಲವಾಗುತ್ತಿತ್ತು. ದನಕರುಗಳಿಗೆ ಮೇವು ಬರುತ್ತಿತ್ತು, ಇವತ್ತು ರೈತ ಹಾಳಾಗಿ ಹೋಗಿದ್ದಾನೆ. ಇದು ಆಗದಂತೆ ನೀವು ಮುಂಜಾಗ್ರತೆವಹಿಸಿರಲಿಲ್ಲರೆಂದು ನಾನು ಹೇಳುತ್ತಿದ್ದೇನೆ. ಅವರು ಏಕೆ ಡಿಸ್‌ಕನೆಕ್ಟ್ ಮಾಡಿದರು? ಅದು ರೈತರು ತುಂಬಬೇಕಾದ ಹಣವೇ? ಇಲಾಖೆಯವರು ತುಂಬಬೇಕಾದ ಹಣವಾಗಿದೆ. ಕೆಪಿಟಿಸಿಎಲ್ ಸರ್ಕಾರದ ಒಂದು ಅಂಗವಾಗಿರುತ್ತದೆ, ಡಿಸ್‌ಕನೆಕ್ಟ್ ಮಾಡಿ ಇವತ್ತು ರಾಜ್ಯದ ರೈತರನ್ನು ಹಾಳುಮಾಡಿರುತ್ತೀರಿ. ಈ ಕಾರಣದಿಂದ ಹೇಳುತ್ತಿದ್ದೇನೆ, ಸರ್ಕಾರದಿಂದ ಆಗಿರುವ ಇದೊಂದು ತಪ್ಪಾಗಿದೆ. ಇದರಿಂದ ನಮ್ಮ ರೈತರಿಗೆ ದೊಡ್ಡ ಧಕ್ಕೆಯಾಗಿದೆ, ಇದರ ಬಗ್ಗೆ ಮುಂಜಾಗ್ರತೆಯನ್ನು ವಹಿಸಬೇಕು. ಇವತ್ತು ನೀವು ಒಂದು ಹೇಳಿಕೆಯನ್ನು ಕೊಡಬೇಕು. ನೀವು ಯಾವುದೇ ರೀತಿಯಿಂದ ಡಿಸ್‌ಕನೆಕ್ಟ್ ಮಾಡುವುದಿಲ್ಲವೆಂದು ಹೇಳಬೇಕು, ಏಕೆಂದರೆ, ರೈತರು ಬಿತ್ತನೆ ಮಾಡುವುದಕ್ಕೆ ಹಿಂದೆ-ಮುಂದೆ ನೋಡುತ್ತಿದ್ದಾರೆ. ಏಕೆಂದರೆ ಬಿತ್ತನೆ ಮಾಡಿದ ಮೇಲೆ ಡಿಸ್‌ಕನೆಕ್ಟ್ ಮಾಡಿದರೆ ಏನು ಮಾಡಬೇಕು. ರೈತರು ಡಿಸ್‌ಕನೆಕ್ಟ್ ಮಾಡುವುದಿಲ್ಲವೆಂದು ಯಾರು ನಮಗೆ ಗ್ಯಾರಂಟಿಯನ್ನು ಕೊಡುತ್ತಾರೆಂದು ನನ್ನನ್ನು ಕೇಳಿದರು. ನಿಮ್ಮಲ್ಲಿ ಹಣವಿರುವುದಿಲ್ಲ, ಕೇಳಿದ ತಕ್ಷಣ ಎಲ್ಲಾ ಮಾಡಿಬಿಡುತ್ತೇವೆಂದು ಹೇಳಿಬಿಡುತ್ತೀರಿ. ಯುವಕರಿಗೆ ಸಚಿವ ಸ್ಥಾನವನ್ನು ಕೊಟ್ಟಿರುತ್ತೀರಿ, ಅವರಿಗೆ ಕೆಲಸವನ್ನು ಮಾಡುವುದಕ್ಕೆ ಹುರುಪು ಇದೆ. ಕಾಲುವೆಯೂ ಕೂಡ ಸರಿಯಾಗಿರುವುದಿಲ್ಲ. ಅಧಿಕಾರಿಗಳ ಹತ್ತಿರ ರಿಪೇರಿ ಮಾಡಲು ಹಣವಿರುವುದಿಲ್ಲ. ಅವರು ನಮ್ಮ ಮುಂದೆ ಸುಮ್ಮನೆ ಒಪ್ಪಿಕೊಳ್ಳುತ್ತಾರೆ, ಇಲ್ಲವೆಂದು ಅವರಿಗೆ ಹೇಳುವುದಕ್ಕಾಗುವುದಿಲ್ಲ. ಇರುವ ಪರಿಸ್ಥಿತಿಯನ್ನು ನಾನು ಹೇಳುತ್ತಿದ್ದೇನೆ. ಕಾಲುವೆ ಸರಿಯಾಗಿಲ್ಲದೆ ಇರುವುದರಿಂದ ನೀರು ಹರಿದು ಎಲ್ಲಿಯೋ ಹೋಗುತ್ತದೆ. ಈಗ ಅದನ್ನು ಮಾಡುವುದಿಲ್ಲ, ಅದರ ಬಗ್ಗೆ ಮುಂಜಾಗ್ರತೆಯನ್ನು ವಹಿಸಿ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು, ಸಣ್ಣ ನೀರಾವರಿ ಇಲಾಖೆಗೆ ಹೆಚ್ಚಿನ ಹಣವನ್ನು ತಾವು

ಮುಂದಿನ ವರ್ಷದಿಂದ 200-300 ಕೋಟಿ ರೂಪಾಯಿಗಳನ್ನು ಬರಗಾಲವಿರುವುದರಿಂದ ಕೊಡಬೇಕು. ಪ್ರತಿಯೊಂದು ತಾಲ್ಲೂಕಿನಲ್ಲಿ ಚಿಕ್ಕ ನೀರಾವರಿ ಇದೆ, ಚಿಕ್ಕ ನೀರಾವರಿಯ ಬಗ್ಗೆ ರಾಜ್ಯದಲ್ಲಿ ಸರ್ವೆ ಮಾಡಿಸಿದರೆ ದೊಡ್ಡ ನೀರಾವರಿಗಿಂತಲೂ ಜಾಸ್ತಿ ಇರುತ್ತದೆ. ಇದರ ಅಂಕಿಅಂಶವನ್ನು ಹಿಂದಿನ ಸಚಿವ ಸಂಪುಟಕ್ಕೆ ತರಿಸಿನೋಡಿರುತ್ತೇವೆ. 2-3 ವರ್ಷದಲ್ಲಿಯೇ ಈ ಯೋಜನೆಯನ್ನು ತೀವ್ರದಲ್ಲಿ ಮಾಡುವುದಕ್ಕೆ ಸಾಧ್ಯವಿದೆ. ಸಿಂಗಟಲೂರು ಲಿಫ್ಟ್ ಇರಿಗೇಷನ್ ಸುಮಾರು 5 ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಇದಕ್ಕೆ ಹಣವನ್ನು ಕೊಡಿಸಿದ್ದೇವೆ, ಎಲ್ಲಾ ಮೆಟೀರಿಯಲ್ಸ್‌ಗಳು ಬಂದು ಬಿದ್ದದೆ, ಎರಡು ವರ್ಷಗಳಾಯಿತು, ಅವರು ಕೆಲಸವನ್ನು ಮಾಡುತ್ತಿಲ್ಲ. ಅನೇಕ ತರಹದ ಉದಾಹರಣೆಗಳಿವೆ, ಅವನಿಗೆ ರೊಕ್ಕ ಕೊಡಲಿಲ್ಲವೆಂದು ಬರಲಿಲ್ಲ, ಅವನನ್ನು ಕರೆಸಿ ನಿಮಗೆ ಪತ್ರವನ್ನು ಕೊಟ್ಟಿದ್ದೇನೆ; ಅನಂತರ ತಾವು ಹಣವನ್ನು ಕೊಟ್ಟಿದ್ದೀರಿ, ಇಲ್ಲವೆಂದು ನಾನು ಹೇಳುತ್ತಿಲ್ಲ. ಅವರವರೊಳಗೆ ಏನು ನಡೆಯಿತು, ಎಷ್ಟು ಕೊಟ್ಟರೋ ಅವನು ಮತ್ತೆ ಮಾಡಲಿಲ್ಲ. ಸುಮಾರು 5000 ಎಕರೆಗೆ ಅಲ್ಲಿ ನೀರಾವರಿಯಾಗುತ್ತಿದೆ, ಮುಂಡರಗಿ ಎಂಬ ಬರಗಾಲವಿರುವ ತಾಲ್ಲೂಕಿನಲ್ಲಿ ಇದ್ದಂತಹ ಯೋಜನೆ, ಅಲ್ಲೇನೂ ಹೊಸದಾಗಿ ಮಾಡುವುದಿಲ್ಲ, ಸುಮ್ಮನೆ ಅಲ್ಲಿ ಮೋಟಾರನ್ನು ಕೂರಿಸಿ ಅದನ್ನು ಸರಿ ಮಾಡಿ 10 ರಿಂದ 15 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ, ಆ ಯೋಜನೆಯು ಪೂರ್ಣಗೊಳ್ಳುತ್ತಿತ್ತು, ಆದರೆ ಆ ಯೋಜನೆಯು ಎರಡು ವರ್ಷಗಳಾದರೂ ಇನ್ನೂ ಚಾಲನೆಯಾಗಿಲ್ಲ. ಈ ಕಾರಣಗಳಿಂದಾಗಿ ಇನ್ನೂ ಹಲವಾರು ಯೋಜನೆಗಳೂ ಕೂಡ ರಾಜ್ಯದ ತುಂಬಾ ಸಣ್ಣ ನೀರಾವರಿಗೆ ಹಣವಿಲ್ಲದೆ ಈ ರೀತಿಯಾಗಿದೆ. ಬಹುಶ: ಅವೆಲ್ಲವೂ ಸರಿಯಾಗಿ ನಡೆಯದೆ ಇದ್ದುದ್ದರಿಂದ ಈ ಒಂದು ಪರಿಸ್ಥಿತಿಯಾಗಿದೆ, ಮಾನ್ಯ ಸಣ್ಣ ನೀರಾವರಿ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ, ಎಲ್ಲೆಲ್ಲಿ ಈ ರೀತಿಯಾಗಿದೆ ಅಲ್ಲಿ ತಕ್ಷಣ ಕ್ರಮವನ್ನು ಕೈಗೊಳ್ಳಬೇಕು. ಈಗ ಅದನ್ನು ಚಾಲೂ ಮಾಡಿದರೂ ಕೂಡ ಅಲ್ಲಿ ನೀರಾವರಿಯಾಗುವುದಿಲ್ಲ, ಅಲ್ಲಿ ಕಾಲುವೆಯೂ ಸರಿಯಾಗಿರುವುದಿಲ್ಲ, ಬರೀ ವಿದ್ಯುಚ್ಛಕ್ತಿಯನ್ನು ಕೊಟ್ಟರೂ ಸಾಧ್ಯವಾಗುವುದಿಲ್ಲ. ಅದನ್ನೂ ಕೂಡ ತಾವು ಸರಿಪಡಿಸಬೇಕೆಂದು ಹೇಳುತ್ತೇನೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ ಸಣ್ಣ ನೀರಾವರಿಗೆ ತಾವು ಹೆಚ್ಚು ಒತ್ತನ್ನು ಕೊಡಬೇಕೆಂದು ಹೇಳುತ್ತೇನೆ. ಯು.ಕೆ.ಪಿ.ಗೆ ತಾವು ಹಣವನ್ನು ಒದಗಿಸಿದ್ದೀರಿ, ನಮ್ಮ ಸರ್ಕಾರವು ಅಧಿಕಾರದಲ್ಲಿದ್ದಾಗ ನಾವು ಹಣವನ್ನು ಒದಗಿಸಿದ್ದೇವೆ, ಅಲ್ಲಿಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಒದಗಿಸಿರುವುದರಿಂದ ಇವತ್ತು ಸಣ್ಣ ನೀರಾವರಿಗೆ ಕಡಿಮೆಯಾಗಿರುವುದು ಸರಿಯಾಗಿದೆ. ಇನ್ನಾದರೂ ಅಪ್ಪರ್ ಕೃಷ್ಣಾಗೆ ಎಷ್ಟೋ ಕಡಿಮೆಯಾಗಿದೆ, ತಾವೂ ಕೂಡ ಸಣ್ಣ ನೀರಾವರಿಗೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ಹೇಳುತ್ತೇನೆ. ಇನ್ನು ಕಂದಾಯ ಇಲಾಖೆಯ ಬಗ್ಗೆ ಹೇಳುವುದಾದರೆ, ಮಾನ್ಯ ಕಂದಾಯ ಸಚಿವರು ಈ ಕಡೆ ಲಕ್ಷ್ಯ ಕೊಡಬೇಕು, ನಮ್ಮ ಚಿಕ್ಕ ನೀರಾವರಿ

ಸಚಿವರು ಮತ್ತು ಮಾನ್ಯ ಮಂಖ್ಯಮಂತ್ರಿಗಳು ಹೋಬಳಿಗೆ ಒಂದು ಕೆರೆಯನ್ನು ತೆಗೆದುಕೊಳ್ಳಬೇಕೆಂದು ಒಂದು ಆದೇಶವನ್ನು ಹೊರಡಿಸಿದ್ದಾರೆ. ನಮ್ಮಲ್ಲಿ ಹೋಬಳಿಗಳೇ ಇಲ್ಲ, ನಮ್ಮಲ್ಲಿ ರೆವಿನ್ಯೂ ಸರ್ಕಲ್ ಎಂದು ಮಾಡಿದ್ದಾರೆ, ಉದಾಹರಣೆಗೆ ನಮ್ಮ ಗದಗ್ ತಾಲ್ಲೂಕಿನ ಬಗ್ಗೆ ಹೇಳುತ್ತೇನೆ. ಗದಗ ತಾಲ್ಲೂಕಿನಲ್ಲಿ ಗದಗ್‌ಗೆ ಒಂದು ಬೆಟಗೇರಿಗೆ ಒಂದು ಕೆರೆಯನ್ನು ಕೊಟ್ಟಿದ್ದಾರೆ; ಇವು ನಮ್ಮ ರೆವಿನ್ಯೂ ಸರ್ಕಲ್ ಆಗಿದೆ, ಅದೇ ಸರ್ಕಲ್‌ನಲ್ಲಿ ಒಂದು ಕೆರೆಯನ್ನು ಕೊಡಿ ಎಂದು ಹೇಳಿದರೆ ಆಗುವುದಿಲ್ಲವೆಂದು ಹೇಳುತ್ತಾರೆ. ಹೋಬಳಿಗೆ ಒಂದೊಂದು ಕೆರೆ ಎಂದು ಹೇಳಿದರೆ ಒಂದು ತಾಲ್ಲೂಕಿಗೆ 10 ಕೆರೆಗಳು ಆಗುತ್ತವೆಂದು ಅವರೇ ಹೇಳಿದ್ದಾರೆ. ನಮ್ಮಲ್ಲಿ ಒಂದೊಂದು ತಾಲ್ಲೂಕಿಗೆ 3 ರಿಂದ 4 ಕೆರೆಗಳಿವೆ; ಅದಕ್ಕಿಂತ ಹೆಚ್ಚು ಕೆರೆಗಳಿಲ್ಲ, ಹೋಬಳಿಗೆ ಒಂದರಂತೆ ಕೆರೆ ಇರುವುದಿಲ್ಲ, ಕಾರ್ಯಪಾಲಕ ಅಭಿಯಂತರರವರು ನಿನ್ನೆ ದಿನ ಬಂದಿದ್ದರು, ಹೋಬಳಿಗೆ ಒಂದು ಕೆರೆ ಎಂದು ಹೇಳಿದ್ದಾರೆ, ಪಕ್ಕದ ಹೋಬಳಿಯಲ್ಲಿ ಕೆರೆಯಿರುವುದಿಲ್ಲವೆಂದು ಹೇಳಿದ ಮೇಲೆ ಹಾಗಾದರೆ ಒಂದೇ ತೆಗೆದುಕೊಂಡು ಹೋಗಿ ಎಂದು ತಿಳಿಸಿದೆನು. ನಮ್ಮ ಉತ್ತರ ಕರ್ನಾಟಕದಲ್ಲಿ ಸಾಮಾನ್ಯವಾಗಿ ಎಲ್ಲಾ ತಾಲ್ಲೂಕಿನಲ್ಲಿಯೂ ಕೂಡ ಹೋಬಳಿಗಳು ಇಲ್ಲ. ಆದ್ದರಿಂದ ಮಾನ್ಯ ಕಂದಾಯ ಸಚಿವರು ನಮಗೆ ಹೋಬಳಿಯನ್ನು ಮಾಡಿಕೊಡಬೇಕು. ಮಾನ್ಯ ಕೃಷಿ ಸಚಿವರು ಈ ಕಡೆ ಗಮನವನ್ನು ಹರಿಸಬೇಕು, ನಾವು ಮಾತನಾಡಿದ್ದನ್ನು ಸಚಿವರು ಕೇಳಿಸಿಕೊಂಡು ಉತ್ತರವನ್ನ ಕೊಡಬೇಕಾಗುತ್ತದೆ. ಇದು ರೈತರ ಪ್ರಶ್ನೆಯಾಗಿರುತ್ತದೆ, ತಾವು ಇನ್ಸೂರೆನ್ಸ್‌ನ ಬಗ್ಗೆ ಹೇಳಿರುತ್ತೀರಿ, ಹೋಬಳಿವಾರು ಇನ್‌ಷೂರೆನ್ಸ್‌ನ್ನು ಮಾಡಿದ್ದಾರೆ, ಕ್ರಾಪ್ ಕಟಿಂಗ್‌ನ್ನು ಕೂಡ ಮಾಡುತ್ತಿದ್ದಾರೆ, ಗದಗ್ ದೊಡ್ಡ ತಾಲ್ಲೂಕಾಗಿರುವುದರಿಂದ ಅಲ್ಲಿ 10 ಹೋಬಳಿಗಳು ಇರಬೇಕಾಗಿತ್ತು. ಗದಗ್ ಹಾಗೂ ಬೆಟಗೇರಿಯಲ್ಲಿ ಒಂದೆಂದು ಹೋಬಳಿಗಳಿವೆ. ಕಳೆದ ಸಲ ನಮ್ಮ ಮುಂಡರಗಿ ತಾಲ್ಲೂಕಿಗೆ ಇನ್‌ಷೂರೆನ್ಸ್ ಸಿಕ್ಕಿದೆ, ಮುಂಡರಗಿ ತಾಲ್ಲೂಕಿನಿಂದ 2 ಕಿ.ಮೀ. ನಂತರ ನನಗೆ ಸಂಬಂಧಪಟ್ಟ ಹಳ್ಳಿಗಳಿದ್ದು ಅವರಿಗೆ ಇನ್‌ಷೂರೆನ್ಸ್ ಇರುವುದಿಲ್ಲ. ಏಕೆಂದರೆ, ಅವರು ತಾಲ್ಲೂಕುವಾರು ಯೂನಿಟ್ ಹಿಡಿದುಕೊಂಡು ಮಾಡಿದರು. ತಮ್ಮ ಕ್ಷೇತ್ರದಲ್ಲಿ 3-4 ಪಂಚಾಯಿತಿಗಳನ್ನು ಕೂಡಿಸಿ ಒಂದು ಹೋಬಳಿ ಎಂದು ಯಾವ ರೀತಿಯಾಗಿ ಮಾಡಿರುತ್ತೀರಿ, ಅದೇ ರೀತಿ ನಮ್ಮ ಉತ್ತರ ಕರ್ನಾಟಕದ ಭಾಗದಲ್ಲಿಯೂ ಮಾಡಿದರೆ ನಮಗೂ ಕೂಡ ಇನ್‌ಷೂರೆನ್ಸ್ ಈ ವರ್ಷ ಸಿಗುತ್ತದೆ. ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ನಮಗೆ ಹೋಬಳಿಯನ್ನು ಮಾಡಿಕೊಡಬೇಕು. ಮಾನ್ಯ ಕಂದಾಯ ಸಚಿವರು ಸಾಕಷ್ಟು ಹಣ ಬಿಡುಗಡೆ ಮಾಡಿದ್ದೇನೆಂದು ಹೇಳಿರುತ್ತಾರೆ, ಹಣ ಬಿಡುಗಡೆ ಮಾಡುವುದು ಕಷ್ಟವಿದೆ, ಏಕೆಂದರೆ ನಾವೂ ಕೂಡ ಸರ್ಕಾರ ನಡೆಸಿದವರು, ನಮಗೆ ಗೊತ್ತಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿರುವುದರಿಂದ ಒಂದು ಮಾತನ್ನು ಹೇಳುತ್ತೇನೆ, ಒಂದು ವಾರದಲ್ಲಿ ಮಳೆಯಾದರೆ ನಾವೆಲ್ಲಾ ಪಾರಾಗುತ್ತೇವೆ, ಇಲ್ಲದಿದ್ದರೆ

ಯಾವ ಸರ್ಕಾರ ಉಳಿಯುವುದಕ್ಕೆ ಸಾಧ್ಯವಿಲ್ಲ. ಮಳೆಯಾಗದೆ ಹೋದರೆ ನಮ್ಮ ರಾಜ್ಯಕ್ಕೆ ಕನಿಷ್ಟ ಪಕ್ಷ 300 ಕೋಟಿ ರೂಪಾಯಿಗಳವರೆಗೆಯಾದರೂ ಬೇಕಾಗುತ್ತದೆ; ಎಲ್ಲಿಂದ ಕೊಡುವುದಕ್ಕೆ ಸಾಧ್ಯವಾಗುತ್ತದೆ? ನಿಮ್ಮ ಮಂಡ್ಯ ಜಿಲ್ಲೆಗೆ ಒಂದೂವರೆ ಕೋಟಿ ರೂಪಾಯಿಗಳ ಜೆಜಿಎಸ್‌ವೈಗೆ ಮತ್ತು ಇಎಎಸ್ ಸುಮಾರು 10 ರಿಂದ 20 ಕೋಟಿ ರೂಪಾಯಿಗಳವರೆಗೆ ನಮ್ಮ ಅಧಿಕಾರಿಗಳು ಸರಿಯಾಗಿ ವರದಿಯನ್ನು ಕಳುಹಿಸದೆ ಇರುವುದರಿಂದ ಹಣ ಬಂದಿರುವುದಿಲ್ಲ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಗೂ ಇದರ ಬಗ್ಗೆ ಜವಾಬ್ದಾರಿ ಇದೆ, ಜೆಜಿಎಸ್‌ವೈದಲ್ಲಿ ನೇರವಾಗಿ ಪಂಚಾಯಿತಿಗಳಿಗೆ ಹಣವನ್ನು ಕೊಡುತ್ತಾರೆ. ಇಎಎಸ್‌ನಿಂದ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗೆ ಹಣವನ್ನು ಕೊಡುತ್ತಾರೆ. ಇವರು ಯಾರೂ ಕೆಲಸವನ್ನು ಮಾಡಲಿಲ್ಲ. ನಮ್ಮ ರಾಜ್ಯಕ್ಕೆ ಬರಬೇಕಾದ ಇಎಎಸ್ ಹಣ 50 ರಿಂದ 60 ಕೋಟಿ ರೂಪಾಯಿಗಳು ಬಂದಿರುವುದಿಲ್ಲ. ಹೋದ ವರ್ಷದ ಹಣ, ಇದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಈ ಹಣವನ್ನು ತೆಗೆದುಕೊಂಡು ಬರುವುದಕ್ಕೆ ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರೂ ಕೂಡ ಹೋಗಿ ಬರಬೇಕಾಗಿತ್ತು. ಕೇಂದ್ರದ ಗ್ರಾಮೀಣಾಭಿವೃದ್ಧಿ ಸಚಿವರು ನಮ್ಮ ರಾಜ್ಯದ ಲೆಕ್ಕದಲ್ಲಿರುತ್ತಾರೆ. ಅವರನ್ನು ನಾವು ನಮ್ಮ ರಾಜ್ಯದಿಂದ ಚುನಾಯಿಸಿ ಕಳುಹಿಸಿರುತ್ತೇವೆ, ಆದ್ದರಿಂದ ನಾವು ಅವರನ್ನು ನಮ್ಮವರೆಂದು ಹಿಡಿಯುತ್ತೇವೆ. ಅವನ್ನು ನಾರು ನಮ್ಮವರೆಂದು ತಿಳಿದು ಕೊಳ್ಳೋಣ, ನಾವು ಸರ್ಕಾರದಲ್ಲಿದ್ದೇವೆ ದೂರವಾಗುವುದು ಬೇಡ, ನಾವು ಬರೀ ಕಾಂಗ್ರೆಸ್‌ನವರನ್ನು ಬೈಯುವುದು ಬೇಡ. ನಾವೂ ಕೂಡ ಸ್ವಲ್ಪ ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾಗುತ್ತದೆ. ಅವರಿಗೆ ನಾವೆಲ್ಲಾ ಹೇಳಬೇಕಾಗುತ್ತದೆ, ಆ ನಾಲ್ಕೈದು ಮಂತ್ರಿಗಳೂ ಕೂಡ ಓಡಾಡಬೇಕಾಗುತ್ತದೆ. ಇಲ್ಲಿಗೆ ಗ್ರಾಮೀಣಾಭಿವೃದ್ಧಿ ಸಚಿವರು ಪ್ರವಾಸವನ್ನು ಮಾಡಬೇಕು, ಅವರು ಅಧಿವೇಶನ ಪ್ರಾರಂಭವಾಗುವುದಕ್ಕೆ ಮುಂಚೆಯೇ ಬರಬೇಕಾಗಿತ್ತು. ಆದರೂ ಅವರು ಬರಲಿಲ್ಲ. ಇದೇ ಪರಿಸ್ಥಿತಿ ಆಂಧ್ರಪ್ರದೇಶದಲ್ಲಿ ಆಗಿದ್ದರೆ ಅಷ್ಟರೊಳಗಾಗಿ ಅವರು ಬಂದು ಹೋಗುತ್ತಿದ್ದರು. ಅವರು ನೂರಾರು ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯಕ್ಕೆ ಸಹಾಯ ಮಾಡಲು ಸಾಧ್ಯವಿದೆ. ಇದನ್ನು ಬರೀ ರಾಜ್ಯ ಸರ್ಕಾರದವರು ಮಾಡುವುದಿಲ್ಲ. ಅವರೂ ಕೂಡ ವಿಫಲರಾಗಿದ್ದಾರೆ, ರಾಜ್ಯ ಸರ್ಕಾರದ ವಿಫಲತೆಯೂ ಕೂಡ ಇದೆ, ಸರ್ಕಾರ ಇದನ್ನು ಮಾಡಬಹುದಾಗಿತ್ತು. ಕುಡಿಯುರ ನೀರಿನ ಬಗ್ಗೆ ಹಾಗೂ ಇನ್ನಿತರ ವಿಷಯಗಳ ಬಗ್ಗೆ ನಮಗೆ ವಿಷಯ ಸಮಿತಿಯಲ್ಲಿ ಎಲ್ಲಾ ಗೊತ್ತಾಗಿರುತ್ತದೆ. ಅನು ಅವಶ್ಯಕತೆ ಇದೆ, ಅದರ ಬಗ್ಗೆ ಹೇಳಿರುತ್ತೇವೆ, ಅದನ್ನೆಲ್ಲವನ್ನೂ ಇಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಅಧಿಕಾರಿಗಳಿಗೆ ಆದೇಶವನ್ನು ನೀಡಿ ಕೇಂದ್ರ ಸರ್ಕಾರದಿಂದ ಹಣವನ್ನು ತರುವುದಕ್ಕೆ ಪ್ರಯತ್ನ ಮಾಡಬೇಕು. ಬಾಕಿ ಇರುವ ಹಣವನ್ನು ಅವರು ಕೊಡಬೇಕು, ಗ್ರಾಮೀಣಾಭಿವೃದ್ಧಿಗೆ ಅಡ್ವಾನ್ಸ್ ಹಣವನ್ನು ಕೊಡಬಹುದು. ಹಿಂದೆ ನಮ್ಮ

ಸರ್ಕಾರವಿದ್ದಾಗ ನಾವು ಹೋಗಿ ಕೇಳಿದಾಗ ಅಡ್ವಾನ್ಸ್‌ನ್ನು ಕೊಟ್ಟಿದ್ದಾರೆ, ಡಿಸೆಂಬರ್-ಜನವರಿಗೆ ಕೊಡಬೇಕಾದ ಹಣವನ್ನು ಈಗಲೇ ಕೊಡುತ್ತಾರೆ. ಆ ಹಣವನ್ನು ಕೂಡ ತರುವುದಕ್ಕೆ ನಿಮಗೆ ಸಾಧ್ಯವಿದೆ. ಆ ಹಣವನ್ನು ತಂದರೆ ರಾಜ್ಯದ ಜನತೆಗೆ ಅನುಕೂಲವಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ವೈ.ಕೆ. ರಾಮಯ್ಯನವರಂತೆ ರೈತರ ಬಡ್ಡಿ ಮನ್ನಾ ಮಾಡಬಾರದೆಂದು ಹೇಳುವವನು. ಬಡ್ಡಿ ಮನ್ನಾ ಮಾಡುವುದರ ಬಗ್ಗೆ ನನಗೂ ಕೂಡ ಒಲವು ಇಲ್ಲ; ಆದರೆ ಅನಿವಾರ್ಯವಾಗಿ ಮಾಡಬೇಕಾಗುತ್ತದೆ; ಮಾನ್ಯ ಸಚಿವರಾದ ರಂಗನಾಥ್‌ರವರೇ, ನೀವು ಆಗಲೇ ಏನು ಹೇಳುವುದಕ್ಕೆ ಹೋಗಿ, ಏನು ಅನ್ನಿಸಿಕೊಂಡು ಬಿಟ್ಟಿದ್ದೀರಿ. ನೀವು ಹೇಳುವುದು ಸರಿಯಾಗಿತ್ತು, ಆದರೆ ಹೇಳುವ ಧಾಟಿ ತಪ್ಪಾಗಿತ್ತು. ನಮ್ಮವರು ಇಬ್ಬರು ನಿಮಗೆ ಸಪೋರ್ಟ್ ಮಾಡುವುದಕ್ಕೆ ಹೊರಟಿದ್ದರು. ಇಲ್ಲವೆಂದು ನಾನು ಹೇಳುವುದಿಲ್ಲ. ನಾವು ಹಿರಿಯರಾಗಿ ಯಾವ ರೀತಿಯಾಗಿ ಹೇಳಬೇಕಾಗಿತ್ತೋ, ಆ ರೀತಿಯಾಗಿ ಹೇಳಲಿಲ್ಲ, ಅದಕ್ಕಾಗಿ ನಾನು ಹೇಳುವುದನ್ನು ಪೂರ್ಣವಾಗಿ ಕೇಳಬೇಕು. ಏಕೆ ನಾವು ರೈತರ ಬಗ್ಗೆ ಬಡ್ಡಿಯನ್ನು ಮನ್ನಾ ಮಾಡಿ ಎಂದು ಹೇಳುತ್ತೇವೆಂದರೆ, ಹೋದ ವರ್ಷ ಸ್ವಲ್ಪ ಬೆಳೆ ಬಂದಿದೆ ಇಲ್ಲವೆಂದು ಹೇಳುವುದಿಲ್ಲ, ಆದರೆ ಧಾರಣೆ ಬಂದಿಲ್ಲ. ಅವರು ಬೆಳೆದ ಮಾಲನ್ನು ಖರೀದಿ ಮಾಡಿದ್ದಕ್ಕೆ ನಾವು ಅವರಿಗೆ ರೊಕ್ಕವನ್ನು ಕೊಟ್ಟಿರುವುದಿಲ್ಲ. 70 ಪರ್ಸೆಂಟ್ ಸಹಕಾರ ಸಂಘಕ್ಕೆ ಹಣ ವಸೂಲಿಯಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ, ಯಾವ ರೀತಿಯಾಗಿ ಆಗಿದೆ. ಬುಕ್ ಅಡ್ಜಸ್ಟ್‌ಮೆಂಟ್ ಕೂಡ ಅಲ್ಲ, ನಮಗೆ ಹಾಗೂ ಅವರಿಗೆ ಯಾವ ರೀತಿಯಾಗಿದೆ ಎನ್ನುವುದು ಗೊತ್ತಾಗುತ್ತೆ. 'ಕಳ್ಳನ ಹೆಜ್ಜೆಯನ್ನು ಕಳ್ಳನೇ ಬಲ್ಲನೆಂದು' ಅರ್ಥವಿದೆ. ಇದು ಏನಾಗುತ್ತದೆಂದರೆ, ಆ ಸಹಕಾರ ಸಂಘದ ಛೇರ್ಮನ್ 5 ಲಕ್ಷ ರೂಪಾಯಿಗಳನ್ನು ಬಡ್ಡಿ ಮುಖಾಂತರ ತೆಗೆದುಕೊಂಡು ಬರುತ್ತಾನೆ, ಅವರ ಹೆಸರಿನಲ್ಲಿ ತುಂಬಿದಂತೆ ಮಾಡುತ್ತಾನೆ, ಪೂರ್ಣ ಹಣವನ್ನು ತುಂಬಿದ 8 ದಿನದಲ್ಲಿ ಮತ್ತೆ ವಾಪಸ್ಸು ತೆಗೆದುಕೊಳ್ಳುತ್ತಾನೆ. 4 ರೂನಂತೆ ಬಡ್ಡಿಗೆ ತೆಗೆದುಕೊಂಡು, ಆ ಕಡೆಗೆ ಕೊಟ್ಟುಬಿಡುತ್ತಾನೆ. ಮಾನ್ಯ ಕೈಗಾರಿಕಾ ಸಚಿವರು ಲ್ಯಾಂಡ್ ಬ್ಯಾಂಕ್ ಅಧ್ಯಕ್ಷರಾಗಿದ್ದಾರೆ ಇದರ ಬಗ್ಗೆ ಅವರಿಗೆಲ್ಲಾ ಗೊತ್ತಿದೆ.

ಶ್ರೀ ವೈ.ಕೆ. ರಾಮಯ್ಯ :— ಮಾನ್ಯ ಎಸ್.ಎಸ್.ಪಾಟೀಲ್ ರವರೆ, ತಾವು ಬಡ್ಡಿ ಮನ್ನಾ ಬಗ್ಗೆ ಮಾತನಾಡಿರುವುದನ್ನು ಅಷ್ಟಕ್ಕೆ ನಿಲ್ಲಿಸಿದ್ದೀರಿ, ನೀವು ಅವತ್ತಿನಿಂದ ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಹೇಳುತ್ತಿದ್ದೀರಾ? ನಮ್ಮ ಜನರಿಗೆ ಭಿಕ್ಷೆ ಬೇಡ, ರೈತರ ಬಡ್ಡಿ ಮನ್ನಾ ಬೇಡ, ನಿಮ್ಮ ಅನುದಾನ ಬೇಡ, ರೈತರು ಬೆಳೆದಿರುವ ಮಾಲಿಗೆ ಧಾರಣೆಯನ್ನು ಕೊಡಬೇಕೆಂದು ಹೇಳುತ್ತೇನೆ. ನನ್ನ ಅನಿಸಿಕೆ ಇಷ್ಟೆ, ನಾಳೆ ಪತ್ರಿಕೆಯಲ್ಲಿ ರೈತರ ಬಡ್ಡಿ ಮನ್ನಾ ಮಾಡುವುದಕ್ಕೆ ಮಾನ್ಯ ಎಸ್.ಎಸ್. ಪಾಟೀಲರ ವಿರೋಧವಿದೆ ಎಂದು ಬರಬೇಕು. ಈಗ ನೀವು ಏನು ಹೇಳುತ್ತೀರೋ, ಹೇಳಿ. ಬಡ್ಡಿ ಮನ್ನಾ ಮಾಡುವುದರ ಬಗ್ಗೆ ನಿಮ್ಮ ಖಚಿತವಾದ ಅಭಿಪ್ರಾಯವೇನು?

ಶ್ರೀ ಎಸ್.ಎಸ್. ಪಾಟೀಲ್:— ಬಡ್ಡಿ ಮನ್ನಾ ಮಾಡುವುದರಲ್ಲಿ ನನ್ನ ಖಚಿತವಾದ ವಿರೋಧವಿದೆ. ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಈ ವರ್ಷ ಬಡ್ಡಿ ಮನ್ನಾ ಮಾಡಬೇಕಾಗಿತ್ತು. ನಿಮಗೆ ಕಾರಣರವನ್ನು ಹೇಳುತ್ತೇನೆ, ನಾನೂ ಹಾಗೂ ನೀವೂ ಕೂಡ ರೈತರೇ. ಮಾನ್ಯ ರಾಮಯ್ಯನವರೆ, ನೀವು ಮೊನ್ನೆ ಮಾತನಾಡುವಾಗ ಏನು ಹೇಳಿರುತ್ತೀರೆಂದರೆ, ರೈತನಿಗೆ ಸರಿಯಾಗಿ ಇನ್‌ಷೂರೆನ್ಸ್ ಕೊಡಬೇಕು. ಅವನಿಗೆ

6.10 ಪಿ.ಎಂ.

ಸರಿಯಾದ ಇನ್ಷೂರೆನ್ಸ್ ಕೊಡಬೇಕು. ಅವನಿಗೆ ಯೋಗ್ಯ ಬೆಲೆಯನ್ನು ಕೊಡಬೇಕು. ಅದು ಎಲ್ಲಾ ಆದಮೇಲೆ ಬೇಡ. ಮಾಡಿದ್ದೀರಾ? ಮಾಡಿದ್ದೇವೆಂದು ಹೇಳಿರಿ. ಯೋಗ್ಯ ಬೆಲೆಯನ್ನು ಕೊಟ್ಟಿದ್ದೀರಾ? ಇನ್ಷೂರೆನ್ಸ್ ಕೊಟ್ಟಿದ್ದೇವೆಯೇ? ಈ ಕಾರಣದಿಂದ ಮಾಡಬೇಕಾಯಿತು ಬೆಳೆ ಹೋದವರ್ಷ ಬಂದಿದೆ ಅಂದರೂ ಕೂಡ ಧಾರಣೆ ಬರಲಿಲ್ಲ. ಉದಾಹರಣೆಗೆ ನಮ್ಮ ಸಹಕಾರ ಮಂತ್ರಿಗಳು ಹೇಳಿದರು. ಹೋದ ವರ್ಷ ಬೆಳೆ ಬಂದಿದೆ ಅಂದರು. ಹೌದು ಹೋದ ವರ್ಷ ಬೆಳೆ ಬಂದಿದೆ. ಬೆಳೆ ಬಂದರೂ ಕೂಡ ಧಾರಣೆ ಬರಲಿಲ್ಲ. ಆಮೇಲೆ ಮಾರಾಟ ಮಾಡಿದ್ದು ಇನ್ನೂ ರೊಕ್ಕ ಕೊಟ್ಟಿಲ್ಲ. ಐದು ಕೋಟಿ ಮಾಡುತ್ತೇವೆಂದು ಮೊನ್ನೆ ಹೇಳಿದರು. ಮೊದಲು ಅಲ್ಲಿಗೆ ದುಡ್ಡು ಹೋಗಬೇಕು. ಮೊದಲು ಹಾಳೆ ಹೋಗುತ್ತವೆ, ಆಮೇಲೆ ಟ್ರೆಜರಿಯವರಿಗೆ ಫೋನ್ ಮಾಡಿ ಇಟ್ಟಿರುತ್ತಾರೆ. ಸಧ್ಯ ಎಂಟು ದಿವಸ ಅವುಗಳನ್ನು ಕ್ಯಾಷ್ ಮಾಡಬೇಡಿರೆಂದು. ಸರ್ಕಾರ ನಡೆಸುವವರಿಗೆ ಇದೆಲ್ಲಾ ಆಗತಕ್ಕದ್ದು ಇದರಲ್ಲಿ ಏನೂ ಪ್ರಶ್ನೆಯಿಲ್ಲ. ಚೆಕ್ ಕಳುಹಿಸುತ್ತೇವೆ ಎಂದು ಹೇಳುತ್ತಿರುತ್ತೇವೆ, ಎಂಟು ದಿವಸ ತಡೆಯಿರಿಯೆಂದು ಜಿಲ್ಲಾಧಿಕಾರಿಗಳಿಗೆ ಹೇಳುತ್ತೇವೆ. ಇದು ಗೊತ್ತಿದೆ, ವ್ಯವಹಾರ ಮಾಡುವ ಮುಂದೆ ಇದೆಲ್ಲ ಇರುತ್ತದೆ ಇಲ್ಲವೆನ್ನುವುದಿಲ್ಲ. ಆದರೆ ಇವತ್ತು ರೈತನಿಗೆ ತ್ರಾಸ್ ಇರುವುದರಿಂದ ಈ ವರ್ಷ ಬಡ್ಡಿ ಮನ್ನಾ ಮಾಡಬೇಕಾಗಿತ್ತು. ಸರ್ಕಾರ ಅದರಲ್ಲಿ ಬಹಳ ದೂರ ಸರಿಯಿತ. ನಾವು ಹಿಂದೆ 126 ಕೋಟಿ ರೂಪಾಯಿ ಬಡ್ಡಿ ಮನ್ನಾ ಮಾಡಿದ್ದೇವೆ. ಏಕೆ ಮಾಡಿದ್ದೇವೆಂದರೆ, ಒನ್ ಟೈಮ್ ನಾವು ಹಾಗೆ ಮಾಡಿದ್ದರಿಂದ ಸಹಕಾರಿ ಸಂಘಗಳು ಮೇಲೆ ಬಂದವು. ಶೇಕಡ 80ರಷ್ಟು ರಿಕವರಿ ಆಯಿತು. ಆಗಲೂ ಪ್ರಾಮಾಣಿಕವಾಗಿ ರಿಕವರಿಯಾಗಿಲ್ಲ. ಲೆಕ್ಕವನ್ನು ತೆಗೆದು ನೋಡಿರಿ. ಐದು ಲಕ್ಷ ತೆಗೆದುಕೊಂಡು ಬರುವುದಿಲ್ಲ. ಪ್ರಾಮಾಣಿಕವಾಗಿ ಶೇಕಡ 80ರಷ್ಟು ರಿಕವರಿಯಾದರೂ ನಾವು ಬಡ್ಡಿ ಕಟ್ಟಿದ್ದೇವೆ, ಸಹಕಾರ ಸಂಘಗಳು ಮೇಲೆ ಬಂದವು. ದುರ್ದೈವದಿಂದ ಸರ್ಕಾರದವರು ಏನು ಮಾಡುತ್ತಾರೆಂದರೆ, ನೀವು ನಿಮ್ಮ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿದರೆ ಏನೂ ಅನ್ನುವುದಿಲ್ಲ. ಬಜೆಟ್‌ನಲ್ಲಿ ರೈತರಿಗೆ ಬಡ್ಡಿ ಮನ್ನಾ ಮಾಡಲಿಕ್ಕೆ 200 ಕೋಟಿ ರೂಪಾಯಿ ತೆಗೆಯುತ್ತೇವೆಂದರೆ ಆಗಲಿಯೆಂದು ಹೇಳುತ್ತಾರೆ. ಆಗ ತುಂಬಿರಿ ಅನ್ನುತ್ತಾರೆ. ನಾವು ತುಂಬುವುದಿಲ್ಲ. ಸಹಕಾರ ಸಂಘಗಳು

ಹಾಳಾಗಿ ಹೋಗುತ್ತವೆ. ನಾವು ಮಾಡಿದ್ದು ಕೊನೆಗೆ ನಿಮ್ಮ ಸರ್ಕಾರ ಬಂದಾಗ5-10 ಕೋಟಿ ರೂ. ನೀವು ತುಂಬುವ ಮಟ್ಟಕ್ಕೆ ಹೋಯಿತು. ಹೀಗಾಗಿ ಸಂಘಗಳು ಹಾಳಾಗಿವೆ. ಈ ದೃಷ್ಟಿಯಿಂದ ರಿಸರ್ವ್ ಬ್ಯಾಂಕಿನವರು ಬೇಡವೆಂದು ಹೇಳುತ್ತಾರೆ. ಆದರೆ ಪರಿಸ್ಥಿತಿ ಏನಾಗುತ್ತದೆಂದರೆ ಆ ಸಂಘಗಳು ಸಂಪೂರ್ಣ ಮೂಲಿಕೆಗೆ ಬಿದ್ದಾಗ ಸರ್ಕಾರ ಸಹಾಯಕ್ಕೆ ಹೋಗಬೇಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್ :— ಮಾನ್ಯ ಪಾಟೀಲರೇ, ಒಂದು ನಿಮಿಷ. ತಾವು ಬಡ್ಡಿ ಮನ್ನಾ ಮಾಡಬೇಕೆಂದು ಹೇಳುವುದು ಬರೇ ಸಹಕಾರ ಸಂಘಗಳ ಸಾಲಕ್ಕೆ ಮಾತ್ರ ಬಡ್ಡಿ ಮನ್ನಾ ಮಾಡಬೇಕೆಂದು ಹೇಳುತ್ತೀರಾ? ಅದರೊಳಗೆ ಸಾಲ ಕೊಟ್ಟಿರುವುದು ಎಷ್ಟು ಮಂದಿ ರೈತರಿಗೆ ಕೊಟ್ಟಿದ್ದೇವೆ? 15-16 ಪರ್ಸೆಂಟ್ ರೈತರಿಗೆ ಸಾಲ ಕೊಟ್ಟಿದ್ದೇವೆ. ಆ 15-16 ಪರ್ಸೆಂಟ್ ರೈತರೊಳಗೆ ಗೌಡರು, ಶ್ಯಾನುಭೋಗರು ನಾವು ಬಹಳ ಮಂದಿ. ಬಡವರು ಅದರಲ್ಲಿ ಕಡಿಮೆ. ಇದು ಸಾಮಾಜಿಕ ನ್ಯಾಯಾದ ದೃಷ್ಟಿಯಿಂದ ನೀವು ಹೇಳುವ ಬೇಡಿಕೆ ಯೋಗ್ಯವೇ ಇದನ್ನು ವಿಚಾರ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್ :— ನಾವು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಎಲ್ಲೆಲ್ಲಿ ಯಾವ್ಯಾವ ಬ್ಯಾಂಕುಗಳಿವೆ ಅಲ್ಲೆಲ್ಲಾ ಮನ್ನಾ ಮಾಡಿರಿಯೆಂದು ಮೊನ್ನೆ ಹೇಳಿದ್ದೇನೆ. ನಾವು ಬರೀ ಸಹಕಾರ ಸಂಘಕ್ಕೆ ಹೇಳಿಲ್ಲ. ಸೊಸೈಟಿಯಲ್ಲಿ ಬರೇ ಗೌಡರೇ ಇಲ್ಲ.

ಶ್ರೀ ಡಿ.ಆರ್. ಪಾಟೀಲ್ :— ನೀವು ಬೆಂಬಲ ಕೊಟ್ಟಿರತಕ್ಕ ಪಕ್ಷ ಕೇಂದ್ರದೊಳಗೆ ಅಧಿಕಾರದಲ್ಲಿದೆ ಅಲ್ಲಿ ಮಾಡಿಸಿ, ಆಮೇಲೆ ಇಲ್ಲಿಯೂ ಮಾಡೋಣವಂತೆ.

ಶ್ರೀ ಎಸ್.ಎಸ್. ಪಾಟೀಲ್ :— ದಯವಿಟ್ಟು ನಿಮಗೊಂದು ವಿಚಾರ ಹೇಳುವುದಾದರೆ, ಹಿಂದೆ ಸಾಲಮೇಳ ಎಂದು ಮಾಡಿ ಬ್ಯಾಂಕುಗಳು ಎಲ್ಲರಿಗೂ ಸಾಲ ಕೊಟ್ಟು ಹಾಳಾಗಲಿಕ್ಕೆ ಹತ್ತಿದವು. ವಿ.ಪಿ. ಸಿಂಗ್‌ರವರು ಬಂದು ಆ ಸಾಲವನ್ನು ಮನ್ನಾ ಮಾಡಿದರು. ಆಗ ಬ್ಯಾಂಕುಗಳು ಉಳಿದವು. ಇಲ್ಲದಿದ್ದರೆ ಬ್ಯಾಂಕುಗಳು ಸಂಪೂರ್ಣವಾಗಿ ಹಾಳಾಗಿ ಹೋಗುತ್ತಿದ್ದವು. ಸಾಲ ಅಂದರೆ ಆ ರೀತಿ ಕೊಡುವುದಲ್ಲ. ತಾವು ಅದನ್ನೆಲ್ಲಾ ನೋಡಿದ್ದೀರಿ. ಅದಕ್ಕೆಲ್ಲಾ ನಾನು ಒಪ್ಪುವುದಿಲ್ಲ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೇ, ಬ್ಯಾಂಕುಗಳ ರಾಷ್ಟ್ರೀಕರಣ ಮಾಡಿದ ಉದ್ದೇಶ ಗ್ರಾಮಾಂತರ ಪ್ರದೇಶದ ಜನರಿಗೆ ಆರ್ಥಿಕ ಚೈತನ್ಯ ಕೊಡುವ ಉದ್ದೇಶದಿಂದ ಮಾಡಿದರು. ಆಗ ರಾಷ್ಟ್ರೀಕರಣ ಮಾಡುವಾಗ, ಈಗ ನೀವೆಲ್ಲಾ ಇದ್ದೀರಲ್ಲಾ ದೊಡ್ಡ ದೊಡ್ಡವರು; ಮಾನ್ಯ ವಾಜಪೇಯಿಯವರು, ಅಡ್ವಾಣಿಯವರು ವಿರೋಧ ಮಾಡಿದರು. ಈಗ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಯಾವ ರಾಷ್ಟ್ರೀಕೃತ ಬ್ಯಾಂಕಿನಿಂದ ಒಂದೇ ಒಂದು ಸಾಲ ಸಿಗುವುದಿಲ್ಲ. ರಾಷ್ಟ್ರೀಕರಣದ ಉದ್ದೇಶವನ್ನು ಸರ್ವನಾಶ ಮಾಡಿದೆ ನಿಮ್ಮ ಎನ್‌ಡಿಎ ಸರ್ಕಾರ.

ಶ್ರೀ ಎ. ರಾಮದಾಸ್ :— ಮಾನ್ಯ ಪಾಟೀಲರೇ, ಒಂದು ನಿಮಿಷ. ಬಹಳ ಪ್ರಮುಖವಾದ ಅಂಶವನ್ನು ಹೇಳಿದಿರಿ ಬ್ಯಾಂಕುಗಳ ರಾಷ್ಟ್ರೀಕರಣವಾಯಿತು. ಅವೊತ್ತಿನಿಂದ ಇವೊತ್ತಿನವರೆಗೂ ಕಳೆದ ವರ್ಷ ಬಂದಿರತಕ್ಕ ಅಂಕಿಅಂಶಗಳ ಪ್ರಕಾರ ರಾಷ್ಟ್ರೀಕೃತವಾದ ಬ್ಯಾಂಕುಗಳಲ್ಲಿ ಇಂಟಸ್ಟ್ರೀಯಲಿಸ್ಟ್‌ಗಳಿಗೆ ಎಂದು ಕೊಟ್ಟಂತಹ ಸಾಲ ಸುಮಾರು 36 ಸಾವಿರ ಕೋಟಿ ರೂಪಾಯಿಗಳನ್ನು ಯಾರೂ ರೀಪೇಮೆಂಟ್ ಮಾಡಲಿಕ್ಕೆ ಆಗದೇ ವಸೂಲಿ ಮಾಡಲಿಕ್ಕೆ ಆಗದಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದವರು ಯಾರು? ಅದರ ಕರ್ತೃ ಯಾರು ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಿದರೆ ಎಲ್ಲವೂ ಸರಿಹೋಗುತ್ತದೆ.

ಶ್ರೀ ಯು.ಆರ್. ಸಭಾಪತಿ :— ನಾವು ಹೇಳಿದ್ದು ಇಂಡಸ್ಟ್ರೀಯಲಿಸ್ಟ್‌ಗಳ ಬಗ್ಗೆ ಅಲ್ಲ. ಒಬ್ಬ ಚಮ್ಮಾರನಿಗೆ ಚಮ್ಮಾರ ಕೆಲಸ ಮಾಡಲಿಕ್ಕೆ 5 ಸಾವಿರ 10 ಸಾವಿರ ಲೋನ್ ಸಿಗುತಿತ್ತು. ಒಬ್ಬ ಬೀಡಿ ಬೀಡಾ ಅಂಗಡಿ ಮಾಡುವವನಿಗೆ 10 ಸಾವಿರ ರೂಪಾಯಿ ಲೋನ್ ಸಿಗುತ್ತಿತ್ತು. ಒಬ್ಬ ಹಸು ಎಮ್ಮೆ ಸಾಕುತ್ತೇನೆಂದರೆ ರಾಷ್ಟ್ರೀಕೃತ ಬ್ಯಾಂಕುಗಳು 5-10 ಸಾವಿರ ಸಾಲ ಕೊಡುತ್ತಿದ್ದರು. ಇವತ್ತು ಬಡ ರೈತರಿಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದ ಒಂದೇ ಒಂದು ಸಾಲವನ್ನು ಕೊಡುತ್ತಿದ್ದೀರಾ? ಅದಕ್ಕೆ ಸ್ಪಷ್ಟೀಕರಣ ಕೊಡಿ.

ಶ್ರೀ ಎಸ್.ಎಸ್. ಪಾಟೀಲ್ :— ಈಗ ಕೆಲವು ವಿಷಯಗಳನ್ನು ತೆಗೆಯುತ್ತಾರೆ. ನಿನ್ನೆ ಆ ಛೇರ್‌ನಲ್ಲಿ ಕುಳಿತಾಗ ಏನು ಮಾತನಾಡಿದಿರಿ ಅದನ್ನು ಹೇಳುತ್ತೇನೆ ಅದಕ್ಕೆ ಒಪ್ಪಿಕೊಳ್ಳಿ ನೋಡೋಣ. ಇವತ್ತು ಏನು ಮಾತನಾಡುತ್ತೀರಿ?

ಶ್ರೀ ಯು.ಆರ್. ಸಭಾಪತಿ :— ನನ್ನ ಪ್ರಶ್ನೆಗೆ ಉತ್ತರ ಕೊಡಿ. ಅಲ್ಲಿ ಕುಳಿತಾಗ ಹೇಳಿದ್ದು ಬೇಡ. ಈಗ ನಾನು ಹೇಳಿದ್ದಕ್ಕೆ ಉತ್ತರ ಕೊಡಿ.

ಶ್ರೀ ಎಸ್.ಎಸ್. ಪಾಟೀಲ್ :— ಇನ್‌ಷೂರೆನ್ಸ್ ಬಗ್ಗೆ ದಯವಿಟ್ಟು ಸರಿಯಾದ ರೀತಿಯಲ್ಲಿ ರೈತರಿಗೆ ವಿಮಾ ಸೌಲಭ್ಯಗಳನ್ನು ಒದಗಿಸಿ ಕೊಡದಿದ್ದರೆ ಬಹುಶ: ನಾವು ಎಂದೂ ರೈತರನ್ನು ಉದ್ಧಾರ ಮಾಡಲಿಕ್ಕಾಗುವುದಿಲ್ಲ. ಈ ವಿಮಾ ಸೌಲಭ್ಯವನ್ನು ಒದಗಿಸಿ ಕೊಟ್ಟರೆ, ಬಡ್ಡಿ ಮನ್ನಾ ಬೇಡ, ಸರ್ಕಾರ ಅವರು ಬೆಳೆದ ಬೆಳೆಯನ್ನು ಖರೀದಿ ಮಾಡುವುದು ಬೇಡ, ಏನೂ ಬೇಡ ಎಲ್ಲವನ್ನೂ ಅವನೇ ಮಾಡುತ್ತಾನೆ. ಸರ್ಕಾರ ಖರೀದಿ ಮಾಡಬೇಕೆಂದರೆ ಎಲ್ಲಿ ಹೋಗುತ್ತದೆಂದರೆ, ಖರೀದಿ ಮಾಡಿದ್ದನ್ನು ಇಡಲಿಕ್ಕೆ ಜಾಗವಿಲ್ಲ, ಇವೆಲ್ಲಾ ಸಮಸ್ಯೆಗಳು ಬರುತ್ತವೆ. ಆಮೇಲೆ ಚಿಕ್ಕಮಗಳೂರಿನ ಬಗ್ಗೆ ಮಾನ್ಯ ಕೆ.ಬಿ. ಮಲ್ಲಿಕಾರ್ಜುನ್‌ರವರು ಹೇಳಿದರು. ಚಿಕ್ಕಮಗಳೂರಿನಲ್ಲಿ ಏನು ಖರೀದಿ ಮಾಡಿದ್ದರು ಅವೆಲ್ಲಾ ಹುಳ ಹತ್ತಲಿಕ್ಕೆ ಶುರುವಾಗಿದೆಯಂತೆ. ಗೋವಿನ ಜೋಳ ಹುಳ ಹತ್ತಿ ಹೋಗುತ್ತಿದೆ. ನೀವು ಇನ್ಶೂರೆನ್ಸ್ ಸರಿಯಾಗಿ ಕೊಟ್ಟರೆ ಸರಿಯಾಗುತ್ತದೆ. ಇನ್ಶೂರೆನ್ಸ್ ಮಾಡಿದ ಕೀರ್ತಿ ಯಾರಿಗೆ ಹೋಗಬೇಕು? ಇನ್ಶೂರೆನ್ಸ್ ಹೋಬಳಿ ವೈಸ್ ಮಾಡಿದಂತಹ ಕೀರ್ತಿ ವಾಜಪೇಯಿಯವರಿಗೆ ಹೋಗಬೇಕಾಗುತ್ತದೆ. ಎನ್‌ಡಿಎ ಸರ್ಕಾರಕ್ಕೆ ಹೋಗಬೇಕಾಗುತ್ತದೆ

ಒಳ್ಳೆಯದನ್ನು ಮಾಡಿದ್ದನ್ನು ನಾವು ಹೇಳೋಣ ನಿಮ್ಮ ಹಾಗೆ ಎಲ್ಲದಕ್ಕೂ ಹೊಗಳುವುದಿಲ್ಲ. ನೀವು ಮಾಡಿದರೂ ಹೊಗಳಿಕೊಳ್ಳುತ್ತೀರಿ. ಅಲ್ಲಿ ಲಿಫ್ಟ್ ಇರಿಗೇಷನ್ ಚಾಲೂ ಆಗಿಲ್ಲವೆಂದರೆ ಹೊಗಳಿಕೊಳ್ಳುತ್ತೀರಿ. ನಾವು ಹಾಗಲ್ಲ, ಮಂತ್ರಿಗಳು ಬರಬೇಕಾಗಿತ್ತು ಅಲ್ಲೆಲ್ಲಾ ಅಡ್ಡಾಡಬೇಕಾಗಿತ್ತು ಎಂದು ಹೇಳುತ್ತೇನೆ. ಮಾಡಿದ್ದೂ ಹೊಗಳುತ್ತೇವೆ. ಇದು ಮಾನ್ಯ ವಾಜಪೇಯಿಯವರಿಗೆ ಹೋಗಬೇಕಾಗುತ್ತದೆ. ಹೌಸಿಂಗ್ ಇವೆಲ್ಲಾ ಬರುತ್ತವೆ. ಈ ದೃಷ್ಟಿಯಿಂದ ಇನ್ಶೂರೆನ್ಸ್ ಬಗ್ಗೆ ಕಂದಾಯ ಸಚಿವರು ಮತು ಕೃಷಿ ಸಚಿವರು ಇಬ್ಬರೂ ಕೂಡಿ ಮಾತನಾಡಿಕೊಂಡು ತಕ್ಷಣದಲ್ಲಿ ನೀವು ಮಾಡದಿದ್ದರೆ ನಮ್ಮ ಉತ್ತರ ಕರ್ನಾಟಕ ಭಾಗದ ರೈತರಿಗೆ ಅನ್ಯಾಯವಾಗುತ್ತೆ ಇಲ್ಲಯ ಹಾಗೆ ನಮ್ಮಲ್ಲಿ ಹೋಬಳಿಗಳು ಇಲ್ಲ. ಗದಗ ಒಂದು ತಾಲ್ಲೂಕು ಆಗುತ್ತದೆ, ಮುಂಡರಗಿ ಒಂದು ತಾಲ್ಲೂಕು ಆಗುತ್ತದೆ ರೋಣ ಒಂದು ತಾಲ್ಲೂಕು ಆಗಿ ಬಿಡುತ್ತದೆ, ನರಗುಂದ ಒಂದು ತಾಲ್ಲೂಕು ಆಗುತ್ತದೆ. ಮತ್ತೆ ಎಲ್ಲಿ ಬಿದ್ದವೋ ಅಲ್ಲಿ ಬಿದ್ದವು ನಾವು. ಈ ಕಾರಣದಿಂದ ನಾವು ಅದನ್ನು ಹೋಬಳಿ ಮಾಡಬೇಕು. ಮೊನ್ನೆ ನಾನು ಹೇಳಿದ್ದೇನೆ. ಕೆಲವು ರೈತರು ಇನ್ಶೂರೆನ್ಸ್ ಹಣ ತುಂಬಲಿಕ್ಕೆ ಹೋದರೆ ಬ್ಯಾಂಕಿನವರು ಫಾರಂ ಇಲ್ಲವೆಂದು ಹೇಳಿದ್ದಾರೆ. ಕೃಷಿ ಇಲಾಖೆಯವರು ಎಲ್ಲಾ ಬ್ಯಾಂಕಿನವರ ಜೊತೆ ಮಾತನಾಡಬೇಕಾಗುತ್ತದೆ. ರೈತರು ಇನ್ಶೂರೆನ್ಸ್ ಸಿಗುತ್ತದೆಂದು ತುಂಬುತ್ತಾರೆ. ಬೇಕಾಗಿ ಇನ್ಶೂರೆನ್ಸ್ ತುಂಬುವುದನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಉಪಾಧ್ಯಕ್ಷರು :— ಮಾನ್ಯ ಸದಸ್ಯರು ಬೇಗ ಮುಗಿಸಿ, ಇಲ್ಲದಿದ್ದರೆ ನಾಳೆ ಮಾತನಾಡಿ.

10. ಪ್ರಕಟಣೆ

ಸನ್ಮಾನ್ಯ ಉಪಾಧ್ಯಕ್ಷರು :— ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ಈ ದಿನ ಅಂದರೆ ದಿನಾಂಕ: 25ನೇ ಜುಲೈ 2001 ರಂದು ಸಭೆ ಸೇರಿ ವಿಧಾನಸಭೆಯ ಕಾರ್ಯಕಲಾಪಗಳನ್ನು ದಿನಾಂಕ: 4ನೇ ಆಗಸ್ಟ್ 2001ವರೆಗೂ ನಡೆಸಲು ತೀರ್ಮಾನಿಸಲಾಗಿದೆ.

ದಿನಾಂಕ: 30ನೇ ಜುಲೈ 2001ರ ಸೋಮವಾರದಂದು ಸದನವು ಬೆಳಿಗ್ಗೆ 9.30 ಗಂಟೆಗೆ ಸಭೆ ಸೇರಿ 2001-2002ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ಹಾಗೂ ಧನವಿನಿಯೋಗ ಹಾಗೂ ತೆರಿಗೆ ವಿಧೇಯಕಗಳನ್ನು ಪರ್ಯಾಲೋಚಿಸಿ ಅಂಗೀಕರಿಸಲಾಗುವುದು.

ಇದಕ್ಕೆ ಸದನದ ಸಹಮತಿ ಇದೆಯೆಂದು ಭಾವಿಸುತ್ತೇನೆ. ಈಗ ಸದನವನ್ನು ನಾಳೆ ಬೆಳಿಗ್ಗೆ 10.30 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 6.18ಕ್ಕೆ ಮುಂದೂಡಲ್ಪಟ್ಟು ದಿನಾಂಕ: 26-7-01ರಂದು ಬೆಳಿಗ್ಗೆ 10.30 ಗಂಟೆಗೆ ಸಭೆ ಸೇರಲು ನಿರ್ಧರಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕರ್ನಾಟಕ ವಿಧಾನಸಭೆ

ಗುರುವಾರ 26ನೇ ಜುಲೈ 2001 ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10.40 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ರವರು ಪೀಠವನ್ನು ಅಲಂಕರಿಸಿದ್ದರು.

(1) ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಅಧ್ಯಕ್ಷರು :— ಡಿಮ್ಯಾಂಡ್ಸ್ ಮೇಲೆ ಮಾತನಾಡುವುದಕ್ಕೆ ನಮಗೆ ಇವತ್ತು ನಾಳೆ ಸಮಯ ಇದೆ. ಜೊತೆಗೆ ಇವತ್ತು 4-40 ಗಂಟೆಗೆ ಸಭೆಯನ್ನು ಮುಂದೂಡಬೇಕು. ಕಾರಣ ಕಾನ್ಫರೆನ್ಸ್ ಹಾಲ್‌ನಲ್ಲಿ WTO ಮೇಲೆ ಲೆಕ್ಚರ್ ಇದೆ. ಇದು ಬಹಳ ಮುಖ್ಯವಾದ ವಿಷಯ. ಆದ್ದರಿಂದ ನಾವು ಪ್ರಶ್ನೋತ್ತರ ವೇಳೆಯನ್ನು ಒಂದು ಗಂಟೆ ಕಾಲಮಿತಿಯಲ್ಲಿ ಮುಗಿಸೋಣ. ಎಲ್ಲಾ ಮಾನ್ಯ ಸದಸ್ಯರು ಈ ವಿಚಾರದಲ್ಲಿ ಸಹಕರಿಸಬೇಕು.

ಬಸವಕಲ್ಯಾಣ ಯೋಜನಾ ಪ್ರಾಧಿಕಾರವನ್ನು ಮೇಲ್ದರ್ಜೆಗೆ ಏರಿಸುವುದು

288(3177) ಶ್ರೀ ಎಂ.ಜಿ.ಮುಳೆ (ಬಸವಕಲ್ಯಾಣ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೀದರ್ ಜಿಲ್ಲೆಯಲ್ಲಿ ಬೀದರ್ ಪಟ್ಟಣದ ನಂತರ ಬಸವ ಕಲ್ಯಾಣ ಪಟ್ಟಣವು ತೀವ್ರಗತಿಯಲ್ಲಿ ಅಭಿವೃದ್ಧಿಯಾಗುತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ, ಈಗಿರುವ ಪಟ್ಟಣ ಯೋಜನಾ ಪ್ರಾಧಿಕಾರವನ್ನು ಮೇಲ್ದರ್ಜೆಗೆ ಏರಿಸಿ ಬಸವಕಲ್ಯಾಣ ನಗರಾಭಿವೃದ್ಧಿ ಪ್ರಾಧಿಕಾರ ಸ್ಥಾಪಿಸಲು ಅವಶ್ಯಕವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಹಾಗಿದ್ದರೆ ಯಾವಾಗ ಮೇಲ್ದರ್ಜೆಗೆ ಏರಿಸಲಾಗುವುದು?

ನಗರಾಭಿವೃದ್ಧಿ ಸಚಿವರ ಪರವಾಗಿ ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :—

ಅ) -ಹೌದು-

ಆ) ಕೆಳಕಂಡ ಕಾರಣಗಳಿಂದ ಬಸವಕಲ್ಯಾಣವನ್ನು ನಗರ ಯೋಜನಾ ಪ್ರಾಧಿಕಾರವನ್ನಾಗಿಯೇ ಮುಂದುವರೆಸಲು ಸರ್ಕಾರ ತೀರ್ಮಾನಿಸಿದೆ.

(1) 1991ರ ಜನಗಣತಿ ಪ್ರಕಾರ ಬಸವಕಲ್ಯಾಣ ಪಟ್ಟಣದ ಜನಸಂಖ್ಯೆಯು 42,748 ಮಾತ್ರ ಇರುತ್ತದೆ.

(2) ಬಸವಕಲ್ಯಾಣ ನಗರ ಯೋಜನಾ ಪ್ರಾಧಿಕಾರದ ಹಾಲಿ ಆರ್ಥಿಕ ಸ್ಥಿತಿ ಉತ್ತಮವಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಬಸವಕಲ್ಯಾಣ ನಗರ ಯೋಜನಾ ಪ್ರಾಧಿಕಾರವನ್ನು ಈಗಿನ ಹಂತದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರವನ್ನಾಗಿ ಮೇಲ್ದರ್ಜೆಗೆ ಏರಿಸದಿರಲು ನಿರ್ಧರಿಸಲಾಗಿದೆ.

ಶ್ರೀ ಎಂ.ಜಿ. ಮುಳೆ :— ಮಾನ್ಯ ಅಧ್ಯಕ್ಷರೇ, ಬಸವಕಲ್ಯಾಣ ಜನಸಂಖ್ಯೆ 60 ಸಾವಿರ ಆಗಿದೆ. ನಮ್ಮಲ್ಲಿರುವ ಟೌನ್ ಪ್ಲಾನಿಂಗ್ ಅಥಾರಿಟಿಯನ್ನು ಅಪ್‌ಗ್ರೇಡ್ ಮಾಡಿ ಅದನ್ನು ಡೆವಲಪ್‌ಮೆಂಟ್ ಅಥಾರಿಟಿಯನ್ನಾಗಿ ಮಾಡುವ ಅವಶ್ಯಕತೆ ಬಹಳ ಇದೆ. ಮಾನ್ಯ ಮಂತ್ರಿಗಳು ಏನು ಉತ್ತರ ಕೊಟ್ಟಿದ್ದಾರೆ ಅದು ಸಮಂಜಸವಾಗಿಲ್ಲ. ಅವರು ಅಲ್ಲಿನ ಜನಸಂಖ್ಯೆಯನ್ನು 19991ರ ಜನಗಣತಿ ಪ್ರಕಾರ ಕೊಟ್ಟಿದ್ದಾರೆ. ಈಗ ಲೇಟೆಸ್ಟ್ ಜನಗಣತಿ ಆಗಿದೆ. ಆ ಪ್ರಕಾರ ಅಲ್ಲಿನ ಜನಸಂಖ್ಯೆ 60 ಸಾವಿರಕ್ಕೆ ತಲುಪಿದೆ. ಆದ್ದರಿಂದ ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ ಈಗಿರುವ ಟೌನ್ ಪ್ಲಾನಿಂಗ್ ಅಥಾರಿಟಿಯು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಆಗಬೇಕು. ಬಸವಕಲ್ಯಾಣ ಪಟ್ಟಣವು ಬಹಳ ಬೇಗ ಬೆಳೆಯುತ್ತಿರುವ ನಗರವಾಗಿದೆ. ಅಲ್ಲಿ ಟೌನ್ ಪ್ಲಾನಿಂಗ್ ಅಥಾರಿಟಿಯಿಂದ ಕೆಲಸ ಆಗುತ್ತಿಲ್ಲ. ಅಲ್ಲಿ ಬಹಳ ಅವ್ಯವಹಾರವಾಗುತ್ತಿದೆ. ಆದ್ದರಿಂದ ಸರ್ಕಾರ ದೊಡ್ಡ ಮನಸ್ಸು ಮಾಡಿ ಇದನ್ನು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯನ್ನಾಗಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ಈಗ ನನ್ನ ಹತ್ತಿರ ಇರುವ ಅಂಕಿಅಂಶಗಳ ಪ್ರಕಾರ 1991ರ ಜನಗಣತಿಯ ಆಧಾರದ ಮೇಲೆ ಇಲ್ಲಿ 42,748 ಜಂಸಂಖ್ಯೆ ಇದೆ. ಈಗ ನಾವು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯನ್ನು ಹೆಚ್ಚಾಗಿ ಡಿಸ್ಟ್ರಿಕ್ಟ್ ಪ್ಲೇಸಸ್ ಎಲ್ಲಿವೆ ಅಲ್ಲಿ ಮಾಡಿದ್ದೇವೆ. ಮತ್ತು ಎಲ್ಲಿ ಒಂದು ಲಕ್ಷಕ್ಕಿಂತ ಮೇಲ್ಪಟ್ಟು ಜನಸಂಖ್ಯೆ ಇದೆ ಅಂತಹ ನಗರಗಳಲ್ಲಿ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಮಾಡಿದ್ದೇವೆ. ಎರಡನೆಯದು, ನಾವು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಮಾಡಿದ ಮೇಲೆ ಅಲ್ಲಿನ ನೌಕರರಿಗೆ ಸಂಬಳ ಕೊಡುವುದಕ್ಕೆ ಹಣ ಬೇಕು. ಸರ್ಕಾರ ಇವರಿಗೆ ಅನುದಾನ ಕೊಡುವುದಿಲ್ಲ. ಅವರೇ ಸ್ವಂತ ಸ್ಕೀಮ್ಸ್ ಮಾಡಿ ಹಣವನ್ನು ಕ್ರೋಢೀಕರಿಸಬೇಕು. ಈಗ ಅಲ್ಲಿ ಹಣದ ಕೊರತೆ ಇದೆ. ಅದನ್ನು ನಾವು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಎಂದು ಮಾಡಿ ಅಲ್ಲಿ ಸಂಬಳ ಸಾರಿಗೆ ಕೊಡುವುದಕ್ಕೆ ಹಣ ಇಲ್ಲದಿದ್ದರೆ ತೊಂದರೆಯಾಗುತ್ತದೆ. ಒಂದು ವೇಳೆ 2001ರ ಜನಗಣತಿಯ ವರದಿ ಬಂದ ಮೇಲೆ ಜನಸಂಖ್ಯೆ ಹೆಚ್ಚಾಗಿದ್ದು ಮತ್ತು ಅವರ ಆಧಾಯ ಹೆಚ್ಚಾಗಿದ್ದರೆ ಆಗ ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಎಂ.ಜಿ. ಮುಳೆ :— ಮಾನ್ಯ ಅಧ್ಯಕ್ಷರೇ, ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಮಾಡಿದರೆ ಇನ್‌ಕಮ್ ಕ್ರೈಟೀರಿಯಾ ಹೇಗೆ ಬರುತ್ತದೆ? ಟೌನ್ ಪ್ಲಾನಿಂಗ್ ಅಥಾರಿಟಿಯವರು ಆಧಾಯ ಕ್ರೋಢೀಕರಿಸುವುದಿಲ್ಲ. ಅವರು ಪ್ಲಾನಿಂಗ್ ಮಾತ್ರ ಮಾಡುತ್ತಾರೆ. ಅವರದ್ದು ಡೆವಲಪ್‌ಮೆಂಟ್ ಆಕ್ಟೀವಿಟಿ ಏನೂ ಇಲ್ಲ. ಅಲ್ಲಿನ ಜನಸಂಖ್ಯೆ ಈಗ 60 ಸಾವಿರ ಆಗಿದೆ. ಬೀದರ್ ಬಿಟ್ಟ ಮೇಲೆ ನೆಕ್ಸ್ಟ್ ಬಸವಕಲ್ಯಾಣ ಅದು ರೆವಿನ್ಯೂ ಸಬ್ ಡಿವಿಜನ್ ಇದೆ. ಆದ್ದರಿಂದ ಅಲ್ಲಿ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯ ಅವಶ್ಯಕತೆ ಇದೆಯೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿರತಕ್ಕಂಥ ಜನಸಂಖ್ಯೆ 1991ರ ಜನಗಣತಿ ಆಧಾರದ್ದು. ಈಗ 2001ರ ಜನಗಣತಿಯ ಜನಸಂಖ್ಯೆ ಬಂದ ಮೇಲೆ ಅದನ್ನು ನೋಡಿಕೊಂಡು ನಾವು ಈ ವಿಷಯದ ಬಗ್ಗೆ ಪರಿಶೀಲನೆ ಮಾಡೋಣ.

ರಾಜ್ಯದ ಮಹಾ ನಗರಪಾಲಿಕೆ ಹಾಗೂ ನಗರಸಭೆಗಳ ಕಂಪ್ಯೂಟರೀಕರಣ

295(3516) ಶ್ರೀ ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಮಹಾ ನಗರಪಾಲಿಕೆಗಳು ಮತ್ತು ನಗರಸಭೆಗಳ ನ್ನು ಕಂಪ್ಯೂಟರೀಕರಣಗೊಳಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

ಆ) ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನ ಅಳವಡಿಕೆಯು ರಾಜ್ಯ ಸರ್ಕಾರದ ನೀತಿಯಾದುದರಿಂದ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಕಂಪ್ಯೂಟರೀಕರಣಗೊಳಿಸಬೇಕಾಗಿದ್ದು ಈ ಹಿನ್ನಲೆಯಲ್ಲಿ ನಗರಾಭಿವೃದ್ಧಿ ಸಚಿವಾಲಯ ಯಾವ ಪ್ರಗತಿಯನ್ನು ಸಾಧಿಸಿದೆ?

ನಗರಾಭಿವೃದ್ಧಿ ಸಚಿವರ ಪರವಾಗಿ ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :—

ಅ) ಎಲ್ಲಾ 5 ನಗರಪಾಲಿಕೆಗಳನ್ನು ಕಂಪ್ಯೂಟರೀಕರಣಗೊಳಿಸಲಾಗುತ್ತಿದೆ. ಇದಕ್ಕಾಗಿ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಗೆ ನೂರು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಸಾಫ್ಟ್‌ವೇರ್ ಅಭಿವೃಧಿಯು ಕಾರ್ಯಗತಿಯಲ್ಲಿದೆ.

ಪ್ರಸ್ತುತ ನಗರಸಭೆಗಳನ್ನು ಕಂಪ್ಯೂಟರೀಕರಣಗೊಳಿಸುವ ಪ್ರಸ್ತಾವನೆಯು ಸರ್ಕಾರದಲ್ಲಿರುತ್ತದೆ. ಆದಾಗ್ಯೂ ಪೌರಾಡಳಿತ ನಿರ್ದೇಶನಾಲಯವು ಈಗಾಗಲೇ ಕಂಪ್ಯೂಟರೀಕರಣಗೊಂಡಿದ್ದು ಎಲ್ಲಾ ನಗರಸಭೆ : ಪುರಸಭೆಗಳ ಮಾಹಿತಿಗಳನ್ನು ಕ್ರೋಢೀಕರಿಸಲಾಗಿದೆ.

ಆ) ರಾಜ್ಯದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಕೆಲವು ಪ್ರಾಧಿಕಾರಗಳು ಈಗಾಗಲೇ ಕಂಪ್ಯೂಟರೀಕರಣಗೊಳಿಸಿದ್ದು, ಉಳಿದ ಪ್ರಾಧಿಕಾರಗಳು ಕಂಪ್ಯೂಟರ್‌ಗಳನ್ನು ಅಳವಡಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೇ, ರಾಜ್ಯದ ಮಹಾನಗರಪಾಲಿಕೆಗಳು ಮತ್ತು ನಗರಸಭೆಗಳನ್ನು ಕಂಪ್ಯೂಟರೀಕರಣಗೊಳಿಸಲಾಗಿದೆಯೇ ಎಂದು ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಐದು ನಗರಪಾಲಿಕೆಗಳಲ್ಲಿ ಕಂಪ್ಯೂಟರೀಕರಣಗೊಳಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಮತ್ತು ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಗೆ ನೂರು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆಂದು ಸಹಾ ಹೇಳಿದ್ದಾರೆ. ನನ್ನ ಪ್ರಶ್ನೆ ಇಷ್ಟೆ. ಕಂಪ್ಯೂಟರೀಕರಣವೆಂದರೆ ಕಂಪ್ಯೂಟರ್ ಕೊಂಡುಕೊಳ್ಳುವುದಲ್ಲ. ಜನರಿಗೆ ಕಂಪ್ಯೂಟರ್ ಸೇವಾ ಸೌಲಭ್ಯವನ್ನು ಪ್ರಾರಂಭಿಸಲು ಏನಾದರೂ ನಿರ್ದಿಷ್ಟ ದಿನಾಂಕವನ್ನು ನಿಗದಿಪಡಿಸಿದ್ದೀರಾ? ರಾಜ್ಯದ ಐದು ಮಹಾನಗರಪಾಲಿಕೆಗಳಲ್ಲಿ ಜನರಿಗೆ ಕಂಪ್ಯೂಟರ್ ಸೇವಾ ಸೌಲಭ್ಯವನ್ನು ಯಾವಾಗ ಒದಗಿಸುತ್ತೀರಿ? ನೂರು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ ಎಂದು ಹೇಳಿದ್ದೀರಿ. ಯಾವ ಯಾವ ನಗರಪಾಲಿಕೆಗೆಷ್ಟು ಹಣ? ಯಾವ ಕಾರ್ಯಕ್ಕಾಗಿ ಈ ಹಣವನ್ನು ಬಿಡುಗಡೆ ಗೊಳಿಸಲಾಗಿದೆ ಎಂದು ನನ್ನ ಪ್ರಶ್ನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ ಐದು ಮಹಾನಗರ ಪಾಲಿಕೆಗಳಲ್ಲಿ ಈ ಕಂಪ್ಯೂಟರೀಕರಣ ಮಾಡಬೇಕೆನ್ನುವ ಯೋಜನೆ ಇದೆ. ಇದಕ್ಕೆ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಸರ್ಕಾರ ಒದಗಿಸಿಕೊಟ್ಟಿದೆ. ಬೆಂಗಳೂರು ನಗರ ಒಂದು ಬಿಟ್ಟರೆ ಉಳಿದ ಐದು ಮಹಾನಗರ ಪಾಲಿಕೆಗಳಲ್ಲಿ ಇದು ಇನ್ನೂ ಪ್ರಾರಂಭವಾಗಬೇಕು. ಒಂದು ಕೋಟಿ ರೂಪಾಯಿಗಳನ್ನು ನಾವು ಒದಗಿಸಿದ್ದೇವೆ. ಆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಇನ್ನುಳಿದ 211 ಮುನಿಸಿಪಾಲಿಟಿಗಳಲ್ಲಿ ಈ ಕೆಲಸ ಪ್ರಾರಂಭ ಮಾಡುವುದಕ್ಕೆ ಸುಮಾರು 9 ಕೋಟಿ ರೂಪಾಯಿಗಳು ಬೇಕು. ಅದರಲ್ಲಿ ಕೇವಲ ಒಂದು ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಿದೆ. ಆ ಕೆಲಸ ಕೂಡ ಇನ್ನೂ ಪ್ರಾರಂಭವಾಗಿಲ್ಲ. ನಮ್ಮ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಿನಿಸ್ಟರ್ ಮಲ್ಲಿಕಾರ್ಜುನ್ ಅವರಿಗೆ ಈ ಪ್ರಶ್ನೆ ಬರುತ್ತದೆ. 211 ಮುನಿಸಿಪಾಲಿಟಿಗಳಲ್ಲಿ ಯಾವ ರೀತಿಯಾಗಿ ಮಾಡುತ್ತಾರೆ ಎನ್ನುವುದನ್ನು ಪ್ರತ್ಯೇಕ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಬರುತ್ತದೆ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೇ, ಮಾಹಿತಿ ತಂತ್ರಜ್ಞಾನ ಅಳವಡಿಕೆ ಸರ್ಕಾರದ ನೀತಿಯಾಗಿರುವುದರಿಂದಾಗಿ ಈ ನೀತಿಯನ್ನು ಜಾರಿಗೆ ತರುವಲ್ಲಿ ಆಗಿಂದಾಗ್ಗೆ ನೀವು ಪ್ರಗತಿ ಪರಿಶೀಲನಾ ಸಭೆಗಳನ್ನು ಮಾಡುತ್ತಿದ್ದೀರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಹೇಳಿದ ಹಾಗೆ ಇನ್ನೂ ಅದು ಪ್ರಾರಂಭವೇ ಆಗಿಲ್ಲ. ನಾವು ಒಪ್ಪಿಕೊಂಡಿದ್ದೇವಲ್ಲಾ. ಏಕೆಂದರೆ 5 ಮಹಾನಗರಪಾಲಿಕೆಗಳಲ್ಲಿ ಇದನ್ನು ಮಾಡಬೇಕೆಂದು ಒಪ್ಪಿಕೊಂಡಿದ್ದೇವೆ. ಆ

ನೀತಿಯನ್ನು ಒಪ್ಪಿಕೊಂಡೇ ಇವತ್ತು ಅದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಆ ಕೆಲಸವನ್ನು ಮುಂದಿನ ದಿವಸಗಳಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೇನೆ.

ಪ್ರಶ್ನೆ ಸಂಖ್ಯೆ : 298 (2468)

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹಯಾತ್ ಖಾನ್ :— ಮಾನ್ಯ ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಯೇ ಬೇರೆ. ಸರ್ಕಾರದವರು ಉತ್ತರ ಕೊಟ್ಟಿರುವುದೇ ಬೇರೆ. ಇದರ ಬಗ್ಗೆ ಅವರು ಇಂಟಿಮೇಷನನ್ನು ಕೊಟ್ಟಾಗ ನಾನು ಉಪಕಾರ್ಯದರ್ಶಿಗಳಿಗೆ ಹೋಗಿ ಹೇಳಿದ್ದೇನೆ. ನಾನು ಹುಬ್ಬಳ್ಳಿ ಧಾರವಾಡ ಮಹಾ ನಗರಪಾಲಿಕೆಯನ್ನು ಸಂಯುಕ್ತೀಕರಿಸುವ ಬಗ್ಗೆ ಕೇಳಿದರೆ ಇವರು ಕಟ್ಟಡದ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇಳಿದ ಪ್ರಶ್ನೆಗೆ ಉತ್ತರ ಬೇಕು. ನಾನು ಹೋಗಿ ಇಂಟಿಮೇಷನ್ ಕೊಟ್ಟರೂ ಸಹಿತ ಅವರು ತಿಳಿದುಕೊಳ್ಳುವುದಕ್ಕೆ ತಯಾರಾಗಿಲ್ಲ. ತಾವು ಈ ಪ್ರಶ್ನೆಯನ್ನು ಪೋಸ್ಟ್‌ಪೋನ್ ಮಾಡಿ.

ಅಧ್ಯಕ್ಷರು :— ಹಾಗಾದರೆ ಈ ಪ್ರಶ್ನೆಯನ್ನು ಪೋಸ್ಟ್‌ಪೋನ್ ಮಾಡುತ್ತೇನೆ. ನೀವೇ ಹೇಳುತ್ತಿದ್ದೀರಿ. ನಾನು ಕೇಳಿದ ಪ್ರಶ್ನೆಯೇ ಬೇರೆ. ಅವರು ಕೊಟ್ಟಿರುವ ಉತ್ತರ ಬೇರೆ ಎಂದು. ಆಯಿತು ಮುಂದಿನ ವಾರ ಇದನ್ನು ತೆಗೆದುಕೊಳ್ಳೋಣ.

ಮೈಸೂರು ನಗರದ ಪಡುವಾರಹಳ್ಳಿ, ಗೋಕುಲಂ, ಆಟೋನಗರದಲ್ಲಿ ಲೇಔಟ್ ಪ್ಲಾನ್ ಮತ್ತು ಪ್ರಾಜೆಕ್ಟ್ ಎಸ್ಟಿಮೇಟ್ ತಯಾರು ಮಾಡುವ ಬಗ್ಗೆ

300 (3620) ಶ್ರೀ ಕೋಳಿವಾಡ್ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರು ಮೈಸೂರು ನಗರದಲ್ಲಿ ಪಡುವಾರಹಳ್ಳಿ, ಗೋಕುಲ ಮತ್ತು ಆಟೋನಗರ ಈ 3 ಸ್ಥಳಗಳಲ್ಲಿ ಲೇಔಟ್ ಪ್ಲಾನ್ ಮತ್ತು ಪ್ರಾಜೆಕ್ಟ್ ಎಸ್ಟಿಮೇಟ್ ಮಾಡಲು ನಿರ್ಧರಿಸಲಾಗಿದೆಯೇ;

ಆ) ಈ ಲೇಔಟ್ ಪ್ಲಾನ್ ಮತ್ತು ಪ್ರಾಜೆಕ್ಟ್ ಎಸ್ಟಿಮೇಟ್ ತಯಾರು ಮಾಡಲು ಯಾವ ಏಜೆನ್ಸಿಗೆ ನೀಡಲಾಗಿದೆ;

ಇ) ಏಜೆನ್ಸಿಯವರಿಗೆ ಎಷ್ಟು ಹಣವನ್ನು ಕೊಡಲು ನಿರ್ಧರಿಸಲಾಗಿತ್ತು;

ಈ) ಲೇಔಟ್ ಪ್ಲಾನ್ ಮತ್ತು ಪ್ರಾಜೆಕ್ಟ್ ಎಸ್ಟಿಮೇಟ್ ತಯಾರುಮಾಡಿ ಪ್ರಾಧಿಕಾರಕ್ಕೆ ಸಲ್ಲಿಸಿರುವರೆ;

ಉ) ಸಲ್ಲಿಸಿದ್ದರೆ ಎಂದು ಸಲ್ಲಿಸಲಾಯಿತು;

ಊ) ಏಜೆನ್ಸಿಗೆ ಕೊಡಬೇಕಾದ ಕನ್ಸಲ್ಟೆನ್ಸಿ ಫೀ ಕೊಟ್ಟಿರುವರೇ;

ಋ) ಒಂದು ವೇಳೆ ಕೊಡದೇ ಇದ್ದರೆ ಕಾರಣಗಳೇನು?

ನಗರಾಭಿವೃದ್ಧಿ ಸಚಿವರ ಪರವಾಗಿ ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :—

ಅ) -ಹೌದು-

ಆ) ಸಮ್ಮುದ್ ಆರ್ಕಿಟೆಕ್ಟ್, ಬೆಂಗಳೂರು.

ಇ) - ಋ) ಸಂಸ್ಥೆಯವರೊಂದಿಗೆ ಯೋಜನೆಗಳನ್ನು ತಯಾರು ಮಾಡುವ ಸಂಬಂಧ ಸೇವಾ ಶುಲ್ಕವನ್ನು ನೀಡುವ ಬಗ್ಗೆ ಯಾವುದೇ ಒಪ್ಪಂದವನ್ನು ಮಾಡಿಕೊಂಡಿಲ್ಲದ ಪ್ರಯುಕ್ತ ತಜ್ಞರೊಂದಿಗೆ ಸಮಾಲೋಚಿಸಿ ಈ ಯೋಜನೆ ತಯಾರು ಮಾಡುವ ಕೆಲಸಕ್ಕೆ ವಾಸ್ತವವಾಗಿ ತಗಲುವ ವೆಚ್ಚವನ್ನೇ ನಿಗಧಿಪಡಿಸಿ ಹಣ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಕೆ.ಬಿ. ಕೋಳಿವಾಡ್ :— ಮಾನ್ಯ ಅಧ್ಯಕ್ಷರೇ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರು ಮೂರು ಸ್ಥಳಗಳಲ್ಲಿ ಲೇಔಟ್ ಮತ್ತು ಪ್ರಾಜೆಕ್ಟ್ ಎಸ್ಟಿಮೇಟನ್ನು ಮಾಡುವುದಕ್ಕೆ ಅವರು ರೆಸಲ್ಯೂಷನನ್ನು ಮಾಡಿದ್ದಾರೆಯೇ ಎಂದು ಕೇಳಿದ್ದಕ್ಕೆ ಅವರು ಹೌದು ಎಂದು ಹೇಳಿದ್ದಾರೆ. ಲೇಔಟ್ ಮತ್ತು ಪ್ರಾಜೆಕ್ಟ್ ಎಸ್ಟಿಮೇಟ್ ತಯಾರು ಮಾಡಿ ಯಾರಿಗೆ ಕೊಟ್ಟಿದ್ದೀರಿ ಎಂದರೆ ಅವರು ಆರ್ಕಿಟೆಕ್ಟ್‌ಗೆ ಕೊಟ್ಟಿದ್ದೇವು ಎಂದು ಹೇಳುತ್ತಾರೆ. ಇಲ್ಲಿಯವರೆಗೂ ಅವರಿಗೆ ಏಕೆ ದುಡ್ಡು ಕೊಟ್ಟಿಲ್ಲವೆಂದರೆ ತಜ್ಞರೊಂದಿಗೆ ಸಮಾಲೋಚಿಸಿ ಈ ಹಣವನ್ನು ಬಿಡುಗಡೆ ಮಾಡಲಾಗುವುದು ಎಂದು ಹೇಳಿದ್ದಾರೆ. ತಜ್ಞರು ಎಂದರೆ ಅವರು ಯಾರು? ಗೌರ್ನಮೆಂಟ್ ಆರ್ಕಿಟೆಕ್ಟ್‌ನೊಂದಿಗೆ ಎನ್‌ಕ್ವೈರಿ ಮಾಡಿ ಅವರು 85 ಲಕ್ಷ 21 ಸಾವಿರ ರೂಪಾಯಿಗಳನ್ನು ಕೊಡಬೇಕು, ಆ ಪ್ರಾಜೆಕ್ಟ್ ಇಂಪ್ಲಿಮೆಂಟ್ ಆಗಲಿ ಬಿಡಲಿ ಅವರು ಜವಾಬ್ದಾರಿಯಲ್ಲ ಎಂದು ಆರ್ಕಿಟೆಕ್ಟ್ ಈಗಾಗಲೇ ತಿಳಿಸಿದ್ದರೂ ಸಹಿತ ಮತ್ತು ಸರ್ಕಾರದ ಮಂತ್ರಿಗಳು ಈ ಕೂಡಲೇ ಹಣವನ್ನು ಬಿಡುಗಡೆ ಮಾಡಬೇಕೆಂದು ಪತ್ರವನ್ನು ಬರೆದಿದ್ದರೂ ಸಹಿತ ಅಲ್ಲಿಯವರೆಗೂ ಹಣವನ್ನು ಏಕೆ ಬಿಡುಗಡೆ ಮಾಡಲ್ಲ? ಇದಕ್ಕೆ ಕಾರಣಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ಇದು ಎಂದು ವಿಚಿತ್ರವಾದ ಪರಿಸ್ಥಿತಿ ಇದೆ. ಇದೇನೆಂದರೆ ಸಮ್ಮುದ್ ಎನ್ನುವ ಆರ್ಕಿಟೆಕ್ಟ್ ಫರ್ಮ ಏನು ಇದೆ, ಇವರಿಗೆ ಮೂರು ಹಂತದಲ್ಲಿ ಕೆಲಸಗಳನ್ನು ಮಾಡಬೇಕೆಂದು ಹೇಳಿ ಕೆಲಸವನ್ನು ರೆಸಲ್ಯೂಷನ್ ಮುಖಾಂತರ ಒಪ್ಪಿಸಿದರು ಎಂದು ಹೇಳಿ ವರದಿ ಇದೆ. ಆದರೆ

ಬರವಣಿಗೆಯಲ್ಲಿ ಯಾವುದೂ ಕೂಡ ಆ ಆರ್ಕಿಟೆಕ್ಟ್‌ಗೆ ಕೊಡಲಿಲ್ಲ. ಅದಕ್ಕೇನಾಯಿತು ಎಂದರೆ ಮುಂದೆ ನಮ್ಮ ಫೀಯನ್ನು ಕೊಡಿ ಎಂದು ಹೇಳಿ ಅವರು ಒತ್ತಾಯ ಮಾಡುತ್ತಿದ್ದಾರೆ. ಒತ್ತಾಯಮಾಡಿದ ಮೇಲೆ ಏನಾಯಿತು ಎಂದರೆ ಮೊದಲನೇ ಬಿಲ್ಲನ್ನು ಅವರು 40,54,500 ರೂಪಾಯಿಗಳನ್ನು ಕೊಡಿ ಎಂದು ಅಲ್ಲಿನ ಮೂಡಾಗೆ ಕೇಳಿದ್ದರು. ತದನಂತರ ಇದು ಜಾಸ್ತಿಯಾಗುತ್ತದೆ, ಇಷ್ಟೊಂದು ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳಿ ಮೂಡಾ ಅಧಿಕಾರಿಗಳು ಪುನ: ಅಲ್ಲಿನ ಪ್ರೊಫೆಸರ್ ಡಾಕ್ಟರ್ ಸೈಯದ್ ರೆಹಮಾನ್ ಅವರಿಗೆ ಕೇಳಿಕೊಂಡರು. ಇದು ಜಾಸ್ತಿಯಾಗುತ್ತದೆ ನೀವು ಅಸೆಸ್‌ಮೆಂಟ್ ಮಾಡಿಕೊಡಿ, ಎಷ್ಟು ಇವರಿಗೆ ಫೀಯನ್ನು ಕೊಡಬೇಕೆಂದು ಹೇಳಿ ಒಂದು ಅವರಿಗೆ ಕೇಳಿಕೊಂಡರು. ಕೊನೆಗೆ ಅವರು ಇದಕ್ಕೆ 60 ಸಾವಿರದಿಂದ 75 ಸಾವಿರ ರೂಪಾಯಿವರೆಗೆ ಕೊಡಬಹುದು ಎಂದು ಹೇಳಿದರು. ಪುನ: ಅವರು ಇದು ಕಡಿಮೆಯಾಗುತ್ತದೆ, ನಾನು ಕೇಳಿದ್ದು 40,54,500 ರೂಪಾಯಿಗಳನ್ನು ಕೊಡಿ ಎಂದು ಕೇಳಿದ್ದು. ನೀವು 75 ಸಾವಿರ ರೂಪಾಯಿ. ಕೊಡುತ್ತೇವೆಂದು ಹೇಳುತ್ತಿದ್ದೀರಿ, ಇದು ಕಡಿಮೆಯಾಗುತ್ತದೆ. ಅದಕ್ಕೆ ನಾನು ಒಪ್ಪುವುದಿಲ್ಲ ಎಂದು ಹೇಳಿ ಅವರು ಡಿವಿಜನಲ್ ಕಮಿಷನರ್ ಮುಖಾಂತರ ಚೀಫ್ ಆರ್ಕಿಟೆಕ್ಟ್‌ಗೆ ಬರೆದರು. ಆ ಚೀಫ್ ಆರ್ಕಿಟೆಕ್ಟ್‌ರವರು 85 ಲಕ್ಷ ರೂಪಾಯಿಗಳನ್ನು ಮಾಡಿದರು. 42 ಲಕ್ಷ ರೂ. ಅವರು ಕೇಳಿದರೆ ಈ ಚೀಫ್ ಆರ್ಕಿಟೆಕ್ಟ್ ಆಫೀಸ್‌ನಿಂದ 85 ಲಕ್ಷ ರೂಪಾಯಿ ಎಂದು ಬಂತು. ಇದು ಬಹಳಷ್ಟು ವ್ಯತ್ಯಾಸ ಇದೆ. ಯಾರೇ ನೋಡಿದರೂ ಇದೊಂದು ದೊಡ್ಡ ಹಗರಣದ ರೀತಿ ಆಗುತ್ತದೆ. ಏಕೆಂದರೆ ಸ್ವತ: ಆರ್ಕಿಟೆಕ್ಟ್‌ರವರೇ 40,54,500 ರೂಪಾಯಿ ಎಂದು ಹೇಳಿ ಕೊಟ್ಟ ಮೇಲೆ 85 ಲಕ್ಷ ರೂ. ಕೊಡಬಹುದು ಎನ್ನುವ ಅಭಿಪ್ರಾಯವನ್ನು ಕೊಟ್ಟರೆ ಇದರಲ್ಲೇನೋ ಇದೆ ಎನ್ನುವ ಅಭಿಪ್ರಾಯ ಬರುತ್ತದೆ. ಅದಕ್ಕೆ ಈ ಪೇಮೆಂಟ್‌ನ್ನು ಕೊಡಬಾರದು ಎಂದು ಆಯಿತು. ಎರಡನೆಯದಾಗಿ, ಅಗ್ರಿಮೆಂಟ್ ಕೂಡ ಆಗಿರಲಿಲ್ಲ. In the absence of any agreement ಇಷ್ಟೊಂದು ಹಣವನ್ನು ಕೂಡ ಬಿಡುಗಡೆ ಮಾಡುವುದಕ್ಕೂ ಸಾಧ್ಯವಿಲ್ಲ. ಮೂರನೆಯದು, ಆ ಮೂರೂ ಪ್ರಾಜೆಕ್ಟ್ ಪೂರ್ವ ಭಾಗದಲ್ಲಿರುವ ವಾಣಿಜ್ಯ ಸಂಕೀರ್ಣ, ಗೋಕುಲ್ 3ನೇ ಹಂತದಲ್ಲಿ ವಸತಿ ಸಂಕೀರ್ಣ ನಿರ್ಮಾಣ ಮತ್ತು ನಂಜನಗೂಡು ರಸ್ತೆಯಲ್ಲಿ ಆಟೋನಗರ ಈ ಮೂರಕ್ಕೂ ಕೂಡ ಸುಮಾರು 103 ಕೋಟಿ ರೂಪಾಯಿಗಳು ಈ ಯೋಜನೆಗೆ ಬೇಕು. ಆದಕ್ಕೆ ಹಣದ ಕೊರತೆ ಇರುವುದರಿಂದ ಈ ಮೂರು ಯೋಜನೆಗಳನ್ನು ಅವರು ತೆಗೆದುಕೊಳ್ಳುತ್ತಿಲ್ಲ. ಮತ್ತು ಈ ಆರ್ಕಿಟೆಕ್ಟ್ ಕೊಟ್ಟಿರುವ ಸಲಹೆ ಏನು ಇದೆ ಅದನ್ನೂ ಕೂಡ ಅವರು ತೆಗೆದುಕೊಳ್ಳುತ್ತಿಲ್ಲ. ಆದಕ್ಕೆ ಈ ರೀತಿಯ ಒಂದು ತಕರಾರಿನಲ್ಲಿ ಇದು ಉಳಿದಿದೆ. ಆದಕ್ಕೆ ಆದನ್ನು ಪುನ: ಪರಿಶೀಲನೆ ಮಾಡಿ ಅವರಿಗೆ ನಮ್ಮ ಪ್ರೊಫೆಸರ್ ಡಾ: ಸೈಯದ್ ರೆಹಮಾನ್ ಏನು ಇದ್ದಾರೆ, ಅವರ ಸಲಹೆಯ ಪ್ರಕಾರ ಎಷ್ಟು ಹಣ ಬಿಡುಗಡೆ ಮಾಡಬೇಕೋ ಅಷ್ಟನ್ನೂ ಮಾಡಬಹುದು.

ಇಲ್ಲದಿದ್ದರೆ ಮುಂದೆ ಬರತಕ್ಕ ಮೂಡಾ ಛೇರ್ಮನ್ ಯಾರೇ ಇರಲಿ ಅವರು ಪುನರ್ ಪರಿಶೀಲನೆ ಮಾಡಿ ಕೊಡತಕ್ಕದ್ದು ಉತ್ತಮ ಆದ್ದರಿಂದ ಇದನ್ನು ಪುನರ್ ಪರಿಶೀಲನೆ ಮಾಡಿ ಕೊಡುವುದು ಉತ್ತಮ. ಏಕೆಂದರೆ ಇಷ್ಟೊಂದು ಹಣವನ್ನು ಇದರ ಬಗ್ಗೆ ಸರ್ಕಾರ ಒಪ್ಪಿಗೆ ಕೊಡತಕ್ಕದ್ದು ಅಷ್ಟೊಂದು ಸರಿಯಾಗುವುದಿಲ್ಲ ಎಂದು ಹೇಳಲಿಕ್ಕೆ ನಾನು ಸ್ಪಷ್ಟಪಡಿಸುತ್ತಿದ್ದೇನೆ.

ಶ್ರೀ ಕೆ.ಬಿ. ಕೋಳಿವಾಡ್ :— ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರಿಗೆ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಒದಗಿಸಿದ್ದಾರೆ. ಇವರು ಯಾರೋ ಸೈಯದ್ ಎನ್ನುವವರನ್ನು ಕೇಳಿ ಈ ನಿರ್ಣಯಕ್ಕೆ ಬರುವುದಕ್ಕಿಂತಲೂ ಸರ್ಕಾರದವರೇ ನೇಮಿಸಿದಂಥ ಆರ್ಕಿಟೆಕ್ಟ್ ಇದ್ದು ಅವರ ಅಭಿಪ್ರಾಯವನ್ನು ಡಿವಿಜನಲ್ ಕಮೀಶನರ್, ಬೆಳಗಾಂ ಇವರಿಗೆ ಕೇಳಿದಾಗ ಅವರು ಕೊಟ್ಟಿದ್ದನ್ನು ನಂಬಬೇಕೆ ಹೊರತಾಗಿ ಯಾರೋ ಡಾ: ಸೈಯದ್ ರೆಹಮಾನ್ ಹೇಳಿದ್ದನ್ನು ನಂಬುತ್ತಿದ್ದಾರೆಂದರೆ ಹೇಗೆ? ಚೀಫ್ ಆರ್ಕಿಟೆಕ್ಟ್ ಆಫ್ ಕರ್ನಾಟಕ ಅವರು ಹೀಗೆ ಬರೆಯುತ್ತಾರೆ: ಇವರು ಯಾವುದೋ ಒಂದು ಸ್ಟೇಜನ್ನು ಅವರಿಗೆ ಕೊಟ್ಟು ಒಂದು ಸ್ಟೇಜ್‌ಗೆ 44 ಲಕ್ಷ ರೂಪಾಯಿಗಳನ್ನು ಕೇಳಿದರೆ ಅನ್ಯಾಯವಾಗುತ್ತಿತ್ತು. 4 ಸ್ಟೇಜ್‌ಗಳನ್ನು ಮಾಡಿ ಲಕ್ಷಾಂತರ ರೂಪಾಯಿಗಳನ್ನು ಒಬ್ಬ ಆರ್ಕಿಟೆಕ್ಟ್ ಖರ್ಚು ಮಾಡಿ ಅದನ್ನು ಅವನನ್ನು ಒಂದು ಬಾಂಡೆಡ್ ಲೇಬರ್ ರೀತಿ ಟ್ರೀಟ್ ಮಾಡಿದ್ದಾರೆ ಎನ್ನುವ ಮಾತನ್ನು ಗೌರ್ನಮೆಂಟ್ ಆರ್ಕಿಟೆಕ್ಟರವರು ಬರೆಯುತ್ತಾರೆ. ಇದನ್ನು ನೋಡಲಾಗಿ ಈ ಸರ್ಕಾರದ ಮಂತ್ರಿಗಳೂ ಸಹಿತ ಪತ್ರವನ್ನು ಬರೆದಿದ್ದಾರೆ. ತಕ್ಷಣವೇ ಹಣವನ್ನು ಅವರಿಗೆ ಬಿಡುಗಡೆ ಮಾಡಬೇಕೆಂದು ಹೇಳಿ ಬರೆದಿದ್ದಾರೆ. ಇಲ್ಲಿಯವರೆಗೂ ಏಕೆ ಬಿಡುಗಡೆ ಮಾಡಲಿಲ್ಲ ಎಂದು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಒಬ್ಬರು ಕಮೀಷನರ್ ಮತ್ತು ಈ ಆರ್ಕಿಟೆಕ್ಟ್ ಭಿನ್ನಾಭಿಪ್ರಾಯದಿಂದ ಕಮಿಷನರ್ ಇದರಲ್ಲಿ ಎಷ್ಟೋ ಪರ್‌ಸೆಂಟ್ ಹಣವನ್ನು ಕೇಳಿದ್ದರಿಂದ ಈ ಆರ್ಕಿಟೆಕ್ಟರವರು ಹಣವನ್ನು ಕೊಡುವುದಿಲ್ಲ ಎಂದು ಹೇಳಿದ್ದರಿಂದ ಈ ರೀತಿ ಅವರಿಗೆ ಬಹಳ ತೊಂದರೆ ಕೊಟ್ಟಿರುವುದು ನನ್ನ ಗಮನಕ್ಕೆ ಬಂದಿದೆ. ಇದನ್ನು ಪುನ: ವಾಸ್ತುಶಿಲ್ಪಿ ಯಾರೇ ಇರಲಿ ಅವರಿಂದ ಇದನ್ನು ಪುನರ್ ಪರಿಶೀಲಿಸಿ ಅತಿ ಶೀಘ್ರದಲ್ಲೇ ಹಣವನ್ನು ಬಿಡುಗಡೆ ಮಾಡಲು ಸರ್ಕಾರ ಕಾರ್ಯಕ್ರಮ ಕೈಗೊಳ್ಳುವುದೋ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಆ ವಾಸ್ತುಶಿಲ್ಪಿಗಳಿಗೆ ನಿಮ್ಮ ಫೀಸು ಎಷ್ಟು ಎಂದು ಕೇಳಿದರೆ 40,54,500 ರೂಪಾಯಿ ಎಂದು ಕೋರಿರುತ್ತಾರೆ, ಅವರೇ 40 ಲಕ್ಷ ಕೇಳಬೇಕಾದರೆ ಮುಖ್ಯವಾಸ್ತುಶಿಲ್ಪಿ 85,21,000 ರೂಪಾಯಿ ಹೇಗೆ ಮಾಡಿದರೆಂಬುದೇ ಇಲ್ಲಿರುವ ಪ್ರಶ್ನೆ. ನಾವಿದನ್ನೂ ನೋಡಬೇಕಲ್ಲ. ಕೊಡಿ ಎಂದವರೆ ಎಂದ ತಕ್ಷಣ ಕೊಡಲೂ ಆಗುವುದಿಲ್ಲ. ಮತ್ತೆ ಡಾ: ಸೈಯದ್ ಎಂಬುವರು ಯಾರೋ ಒಬ್ಬರಲ್ಲ,

ಅವರು ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಪ್ರೊಫೆಸರ್. ಅವರಿಗೂ ಜವಾಬ್ದಾರಿ ಇರುತ್ತದೆ, ಅದೂ ರೆಪ್ಯೂಟೆಡ್ ಇಂಜಿನಿಯರಿಂಗ್ ಕಾಲೇಜಿದೆ. ಇಲ್ಲಿ ಪ್ರಶ್ನೆ ಇರುವುದು, ಕೇಳಿದ್ದಕ್ಕಿಂತಲೂ ಡಬಲ್ ಕೊಡಬೇಕೆಂದು ಶಿಫಾರಸಿದ್ದರೆ ಆಗ ಸಂಶಯಾಸ್ಪದವಾಗುತ್ತದೆ. ಆದ್ದರಿಂದ ಇದನ್ನು ತನಿಖೆ ಮಾಡಿಸಿ ಸೂಕ್ತ ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ :— ಅಧ್ಯಕ್ಷರೇ ಅವರು ನಾಲ್ಕು ಸ್ಟೇಜ್ ಪೈಕಿ ಎರಡು ಸ್ಟೇಜ್‌ಗಳ ಮೊಬಲಗು ಮೊದಲು ಕೇಳಿದ್ದಾರೆ. ಇವರು ಕಂಪ್ಲೀಟ್ ಕೆಲಸಕ್ಕಾಗಿ ಕೇಳಿದ್ದಾರೆಂದು ಮಾಹಿತಿ ಕೊಟ್ಟಿರುವುದು ತಪ್ಪು. ಒಂದು, ಇಂಜಿನಿಯರಿಂಗ್ ಕಾಲೇಜ್ ಆರ್ಕಿಟೆಕ್ಟ್‌ರವರನ್ನು ನಂಬುತ್ತೇವೆ; ಆದರೆ ಸರ್ಕಾರಿ ಮುಖ್ಯ ವಾಸ್ತುಶಿಲ್ಪಿಯನ್ನು ನಂಬುವುದಿಲ್ಲವೆಂದರೆ, ಸರ್ಕಾರಿ ವಾಸ್ತುಶಿಲ್ಪಿ ತಪ್ಪು ವರದಿ ಹಾಕಿದ್ದಾರೆ ಅಂದರೆ ಅವರ ಮೇಲೆ ನೀವು ಏಕೆ ಕ್ರಮ ತೆಗೆದುಕೊಳ್ಳಬಾರದು? 44 ಲಕ್ಷ ರೂ. ಕೇಳಿದರೆ 85 ಲಕ್ಷ ರೂ. ಇವರು ಬರೆಯುತ್ತಾರೆಂದರೆ ಸರ್ಕಾರಿ ಮುಖ್ಯ ವಾಸ್ತುಶಿಲ್ಪಿಯನ್ನು ತಕ್ಷಣ ನೀವು ಯಾಕೆ ಸಸ್ಪೆಂಡ್ ಮಾಡಬಾರದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಇದನ್ನು ತನಿಖೆ ಮಾಡಿಸುತ್ತೇನೆ. ಸೂಕ್ತವಾದ ಕ್ರಮ ಜರುಗಿಸುತ್ತೇವೆ.

ಜಿಲ್ಲಾ ಮಟ್ಟದಲ್ಲಿದ್ದ ಹೊಲಿಗೆ ಉತ್ಪಾದನಾ ಕೇಂದ್ರಗಳನ್ನು ಮುಚ್ಚಿರುವುದು.

286(3547) ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ (ರೋಣ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ 15 ವರ್ಷಗಳಿಂದ ಜಿಲ್ಲಾ ಮಟ್ಟದಲ್ಲಿದ್ದ ಹೊಲಿಗೆ ಉತ್ಪಾದನಾ ಕೇಂದ್ರಗಳನ್ನು ಮುಚ್ಚಿ ಅಲ್ಲಿ ಕೆಲಸ ನಿರ್ವಹಿಸುತ್ತಿದ್ದ ಮಹಿಳೆಯರನ್ನು ಉದ್ಯೋಗ ವಂಚಿತರನ್ನಾಗಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕೆಲಸದಿಂದ ವಂಚಿತರಾದ ಕೆಲಸಗಾರರಿಗೆ ಕುಟುಂಬ ನಿವೃತ್ತ ವೇತನ ನೀಡುವ ವಿಚಾರದಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ?

ಇ) ಅವರಿಗೆ ಪರ್ಯಾಯ ಕೆಲಸ ನೀಡುವ ವಿಚಾರವನ್ನು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ಹೌದು.

ಆ) ಈ ಘಟಕಗಳಲ್ಲಿ ಕೆಲಸ ಮಾಡುತ್ತಿದ್ದ ಮಹಿಳಾ ಕಾರ್ಮಿಕರು ಖಾಯಂ ನೌಕರರಾಗಿರಲಿಲ್ಲವಾದ್ದರಿಂದ ಮತ್ತು ಇವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗೆ ಒಳಪಟ್ಟಿರಲಿಲ್ಲವಾದ್ದರಿಂದ ಅವರಿಗೆ ಕುಟುಂಬ ನಿವೃತ್ತಿ ವೇತನ ನೀಡಲು ನಿಯಮಾನುಸಾರ ಅವಕಾಶವಿರುವುದಿಲ್ಲ.

ಇ) ಇಲ್ಲ.

ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್:— ಅಧ್ಯಕ್ಷರೇ, ಸರ್ಕಾರಿ ಹೊಲಿಗೆ ಉತ್ಪಾದನಾ ಕೇಂದ್ರಗಳಲ್ಲಿ ದಲಿತರು, ವಿಧವೆಯರು, ಗಂಡಸರು ಹೊಲಿಗೆ ಕೆಲಸ ಮಾಡಿ ವಿವಿಧ ಇಲಾಖೆಗಳಿಗೆ ವಿದ್ಯಾರ್ಥಿಗಳಿಗೆ ಬಟ್ಟೆಗಳನ್ನು ಪೂರೈಸುತ್ತಿದ್ದರು. ಇದು 15 ವರ್ಷದಿಂದ ನಡೆಯುತ್ತಿತ್ತು. ಇವತ್ತು ಧಿಡೀರನೆ ಇಲಾಖೆ ಅವರನ್ನು ತೆಗೆದುಹಾಕಿ, ಅವರಿಗೆ ಯಾವುದೇ ಪರಿಹಾರವನ್ನೂ ಕೊಡದೆ ಇದ್ದಾರೆ. ಇದರಿಂದ ಅಲ್ಲಿದ್ದ ಮಹಿಳೆಯರು ಈಗಾಗಲೇ ಸ್ಟ್ರೈಕ್ ವಗೈರೆ ಮಾಡಿ, ಸರ್ಕಾರ ಅವರಿಗೆ ಕೆಲವೊಂದು ಸಂಭಾವನೆ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಉತ್ತರದಲ್ಲಿ ಸಚಿವರು ಪರಿಹಾರ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಈ ಕೇಂದ್ರಗಳು ಧಾರವಾಡ, ಶಿವಮೊಗ್ಗ, ದಕ್ಷಿಣ ಕನ್ನಡ, ಗುಲ್ಬರ್ಗ, ಚಿತ್ರದುರ್ಗ, ಬೆಂಗಳೂರು ನಗರ, ಮೈಸೂರುಗಳಲ್ಲಿದ್ದು ಅವರಿಗೆ ಏನು ವೇತನ ವಂಚನೆಯಾಗಿದೆ ಅಥವಾ ಪೆನ್ಷನ್ ಆಗಲಿ ಕೊಡಬೇಕೆಂದು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:— ಅಧ್ಯಕ್ಷರೇ ಈ ಘಟಕಗಳನ್ನು ಮುಚ್ಚುವ ಮೂಲ ಉದ್ದೇಶವೇನಿತ್ತು ಅಂದರೆ ಇಡೀ ರಾಜ್ಯದಲ್ಲಿ 8 ಜಿಲ್ಲೆಗಳಲ್ಲಿವೆ. ಇವು ಸಕಾಲದಲ್ಲಿ ಮಕ್ಕಳಿಗೆ ಹೊಲಿದು ಬಟ್ಟೆ ಕೊಡಬೇಕು, ಇದು ಆಗುತ್ತಿರಲಿಲ್ಲ, ಇಡೀ ವರ್ಷ ತೆಗೆದುಕೊಳ್ಳುತ್ತಿದ್ದರು. ಜೂನ್ ಜುಲೈನಲ್ಲಿ ಬಟ್ಟೆಗಳನ್ನು ಪೂರೈಸಬೇಕೆಂದು ತೀರ್ಮಾನ ಮಾಡಿದ ಮೇಲೆ ಈ ಘಟಕಗಳಿಗೆ ಎರಡು ಮೂರು ತಿಂಗಳಿಗಿಂತ ಹೆಚ್ಚಾಗಿ ಕೆಲಸ ಕೊಡಲು ಸಾಧ್ಯವೇ ಇರಲಿಲ್ಲ. ಹಾಗಾಗಿ ಮುಚ್ಚಬೇಕಾದ ಅನಿವಾರ್ಯತೆ ಬಂದಿದೆ. ಹಿಂದೆ ಹೈಕೋರ್ಟಿನಲ್ಲಿ ಇವರು ಕೈಗಾರಿಕಾ ತಕರಾರು ಕಾಯಿದೆ ಕೆಳಗೆ ಕೈಗಾರಿಕಾ ಕಾರ್ಮಿಕರು ಎಂದು ತೀರ್ಮಾನವೂ ಆಗಿದೆ. ಆ ಕಾಯಿದೆ ಪ್ರಕಾರ ಅವರಿಗೆ ಏನೆಲ್ಲಾ ಸವಲತ್ತು ಕೊಡಬೇಕೋ ಅದನ್ನೆಲ್ಲ ಕೊಡಲು ಈಗಾಗಲೇ ಕ್ರಮ ಜರುಗಿಸಿದ್ದೇವೆ. ಹಣಕಾಸು ಇಲಾಖೆಯಿಂದ ಹಣ ಬಿಡುಗಡೆ ಆದ ತಕ್ಷಣ ಅವರಿಗೆಲ್ಲ ಸೌಲಭ್ಯ ಕೊಡುತ್ತೇವೆ. ಮತ್ತೆ ಹೈಕೋರ್ಟ್ ಇವರಿಗೆ ಒಂದು ಪುನರ್ವಸತಿ ಕಾರ್ಯಕ್ರಮ ಮಾಡಬೇಕೆಂದು ಒಂದು ನಿರ್ದೇಶನ ನೀಡಿದೆ. ಅದನ್ನೂ ನಾವು ಕೈಗೊಳ್ಳುತ್ತಿದ್ದೇವೆ. ಮನೆ ಇಲ್ಲದವರಿಗೆ ಮನೆ ಕೊಡಿಸುವುದು, ಎಸ್‌ಸಿ : ಎಸ್‌ಟಿಯವರಿದ್ದರೆ ಅವರಿಗೆ ದುಡಿಮೆ ಬಂಡವಾಳವನ್ನು ಕಾರ್ಪೋರೇಷನಿಂದ ಕೊಡಿಸುವುದು ಹೀಗೆ- ಎಲ್ಲವನ್ನೂ ಹಣಕಾಸು ಬಿಡುಗಡೆ ಆದ ತಕ್ಷಣ ಅವರಿಗೆ ಪುನರ್ವಸತಿ ಮಾಡಿಕೊಡುತ್ತೇನೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ :— ಅಧ್ಯಕ್ಷರೇ, ಆ ಜನ ಅವನ್ನೆ ಉದ್ಯೋಗ ಮಾಡುತ್ತಿದ್ದವರು ಅವರಿಗೆ ಸಹಾಯ ಕೊಡಬೇಕಾದ್ದು ಸರ್ಕಾರದ ಕರ್ತವ್ಯ. ಈಗ ಘಟಕಗಳು ಬಂದ್ ಮಾಡಿಬಿಟ್ಟದೀರಿ, ಹಣಕಾಸಿನ ವ್ಯವಸ್ಥೆಯನ್ನು ಶೀಘ್ರವಾಗಿ ಮಾಡಿ ಅವರ ಉದ್ಯೋಗಕ್ಕೆ ದಾರಿ ಮಾಡಿಕೊಡಬೇಕು. ಅವರೆಲ್ಲ ಬಡವರು, ಮಾತ್ರ ಅವರಿಗೆ ದುಡಿಯಲು ಏನಾದರೂ ಕೆಲಸಕ್ಕೂ ಅವಕಾಶ ಮಾಡಿ ಕೊಡಬೇಕು. ಇದು ಬಹಳ ಅವಶ್ಯವಿದೆ. ಆ ಘಟಕಗಳನ್ನು ಮುಚ್ಚಿದ್ದೇ ಸರಿಯಾದ್ದಲ್ಲವೆಂದು ನಾವು ಹೇಳಬೇಕಾಗುತ್ತದೆ. ಅವರಿಗೆ ಪುನರ್ವಸತಿ ಮಾಡಿಕೊಡಿ ಒಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಅಧ್ಯಕ್ಷರೇ, ಅವರಿಗೆ ದುಡಿಯುವ ಬಂಡವಾಳ, ಮಷೀನ್ ಎಲ್ಲವನ್ನೂ ಹಣಕಾಸು ಬಿಡುಗಡೆಯಾದ ತಕ್ಷಣ ಹೆಚ್ಚು ಸಮಯ ತೆಗೆದುಕೊಳ್ಳದೆ ಪುನರ್ವಸತಿ ಕಾರ್ಯಕ್ರಮ ಜರಗಿಸುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :— ಅಧ್ಯಕ್ಷರೇ, ಅವರು ಸರಿಯಾಗಿ ವೇಳೆಗೆ ಕೊಡಲಿಲ್ಲ, ನಾವು ಅದರಿಂದ ಮಕ್ಕಳಿಗೆ ವೇಳೆಗೆ ಸರಿಯಾಗಿ ಬಟ್ಟೆ ಕೊಡುವುದಕ್ಕಾಗಲಿಲ್ಲವೆಂದು ಸಚಿವರು ಏನು ಹೇಳಿದರು ಅದು ಒಪ್ಪತಕ್ಕ ಮಾತಲ್ಲ. ಇವರು ವೇಳೆಗೆ ಸರಿಯಾಗಿ ಬಟ್ಟೆಕೊಡುವುದಿಲ್ಲ, ನಿಮಗೆ ಇಲ್ಲಿ ದುಡ್ಡು ಬಿಡುಗಡೆ ಯಾಗದಿದ್ದುದಕ್ಕೆ ಹೀಗೆಲ್ಲಾ ಆಗುತ್ತದೆ. ಅದನ್ನು ಅವರ ಮೇಲೆ ಹಾಕಬಾರದು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಇದರ ಕಡೆ ಲಕ್ಷ ಹರಿಸಬೇಕು, ನೀವೂ ಕೂಡ ಮಂತ್ರಿಗಳಿಗೆ ಇದನ್ನು ಹೇಳಬೇಕು. ಯಾಕೆಂದರೆ ರಾಜ್ಯದಲ್ಲಿ ಮಹಿಳೆಯರು ಬಹಳ ಕಷ್ಟದ ಸ್ಥಿತಿಯಲ್ಲಿದ್ದಾರೆ. ಅದೂ ಇವತ್ತು ಬರಗಾಲ ಪ್ರದೇಶ. ದಯವಿಟ್ಟು ಕೂಡಲೇ ಅದನ್ನು ಪ್ರಾರಂಭ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ :— ಸಕಾಲದಲ್ಲಿ ಬಟ್ಟೆಗಳನ್ನು ಕೊಟ್ಟು ಕಟ್ಟು ಅಂದರೆ ಎರಡು ಮೂರು ತಿಂಗಳ ಮೇಲೆ ಕೆಲಸ ಆಗುವುದಿಲ್ಲ. ಆಮೇಲೇನು ಮಾಡೋಣ? ಜೊತೆಗೆ ಇವರು ಕೈಗಾರಿಕಾ ಕಾರ್ಮಿಕರು ಎಂದು ಇತ್ಯರ್ಥವಾಗಿದೆ. ಹಾಗಾಗದೇ ಇದ್ದಿದ್ದರೆ ಸರ್ಕಾರೀ ಎನ್‌ಎಂಆರ್ ಎಂದು ತೆಗೆದುಕೊಳ್ಳಬಹುದಿತ್ತು, ಆ ತರಹ ಮಾಡಲು ಬರುವುದಿಲ್ಲ. ನಾನು ಕಳೆದ ವರ್ಷ ಅನೇಕ ಕಡೆ ಹೋದಾಗ ಜುಲೈ ತಿಂಗಳಲ್ಲಿ ಕೊಡಬೇಕಾದ ಬಟ್ಟೆಯನ್ನು ಇಡೀ ವರ್ಷವೆಲ್ಲಾ ಹೊಲಿಯುತ್ತಿದ್ದರು. ಇದರಿಂದ ಪ್ರಯೋಜನವಾಗುವುದಿಲ್ಲವೆಂದು ಆಯಾ ತಾಲ್ಲೂಕಿನಲ್ಲೇ ಅಧಿಕಾರಿಗಳು ಬಟ್ಟೆ ಒದಗಿಸುವ ಕೆಲಸ ಮಾಡಿಬಿಟ್ಟದ್ದಾರೆ. ಆದ್ದರಿಂದ ಎರಡು ಮೂರು ತಿಂಗಳು ಅವರ ಕೈಲಿ ಬಟ್ಟೆ ಹೊಲಿಸಿಕೊಂಡು ಆಮೇಲೆ ಸುಮ್ಮನಿಟ್ಟರೆ ನಾವು ಅವರನ್ನು ಕೈಗಾರಿಕಾ ಕಾರ್ಮಿಕರು ಎಂದು ನಡೆಸಿಕೊಳ್ಳಬೇಕಲ್ಲಾ. ಹಾಗೆ ಮಾಡಿದರೆ ಕೆಲಸವಿಲ್ಲದಿದ್ದರೂ ಸಂಬಳ ಕೊಡಬೇಕಾಗುತ್ತದೆ. ಅದಕ್ಕೆ ಅವರ ಪುನರ್ವಸತಿಗೆ ಏನೂ ತೊಂದರೆಯಾಗದಂತೆ ಕನಿಷ್ಟ

25 ಸಾವಿರ ರೂ. ಬಂಡವಾಳ ಅವರಿಗೆ ಸಿಗುವ ರೀತಿ ಮಾಡಿದರೆ ಒಳ್ಳೆಯದು. ಅವರಿಗೆ ಯಾವ ತೊಂದರೆಯೂ ಆಗದಂತೆ ಪುನರ್ವಸತಿ ಕಾರ್ಯಕ್ರಮವನ್ನು ನಾನು ಖಂಡಿತ ಮಾಡುತ್ತೇನೆ. ಮತ್ತು ಅವರಿಗೆ ಪಿಎಫ್ ವಗ್ಗೆರೆ ಇದುವರೆಗೆ ಕೊಟ್ಟೇ ಇರಲಿಲ್ಲ. ಈಗ ನಾನು ಅದನ್ನು ರಿಲೀಸ್ ಮಾಡಿಸಿ ಆ ಹಣವೂ ಅವರಿಗೆ ಸಿಗುವಂತೆ ಮಾಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್:— ಅಧ್ಯಕ್ಷರೇ, ಮಂಗಳೂರಿನ ಘಟಕವನ್ನು ನಾನು ಆಗಾಗ ನೋಡುತ್ತಿದ್ದೆ. ಅವರ ಮುಖ್ಯ ಸಮಸ್ಯೆಗಳೇನಿದ್ದವು ಅಂದರೆ ತಮ್ಮಿಂದ ಯಾವ ಸಮಯದಲ್ಲಿ ಬಟ್ಟೆಗಳು ವಿತರಣೆಯಾಗಬೇಕಾಗಿತ್ತೋ ಅದು ಆಗುತ್ತಿರಲಿಲ್ಲ. ಅದೂ ಅಲ್ಲದೆ ಎರಡು ತಿಂಗಳಲ್ಲೇ ಇಷ್ಟೊಂದು ಮಾಡಬೇಕೆಂದು ಟಾರ್ಗೆಟ್ ಕೊಟ್ಟು, ಪ್ರೈವೇಟ್ ಲಾಬಿಯ ಹಿಡಿತಕ್ಕೆ ಸರ್ಕಾರ ಏನಾದರೂ ಬಲಿ ಬಿದ್ದಿದೆಯೋ? ಅವರೆಲ್ಲಾ ನಿರ್ಗತಿಕರು, ಯಾವ ಬೇರೆ ಕೆಲಸವನ್ನೂ ಮಾಡುವ ಸ್ಥಿತಿಯಲ್ಲಿ ಅವರಿಲ್ಲ. ಬೇರೆ ಎಲ್ಲಾ ಕಡೆ ಹೋರಾಟ ಮಾಡುತ್ತಾರೆ, ಅವರನ್ನು ನೀವು ಪರ್ಮನೆಂಟ್ ಮಾಡುತ್ತೀರಿ, ಇಲ್ಲಿ 15 ವರ್ಷ ದುಡಿದವರನ್ನು ಖಾಯಂ ಮಾಡಲು ಆಗುವುದಿಲ್ಲವೆಂದರೆ ಇದು ನಿಜವಾಗಿಯೂ ನಾಚಿಕೆಗೇಡಿನ ಸಂಗತಿ.

ಶ್ರೀ ಕಾಗೋಡು ತಿಮ್ಮಪ್ಪ:— ನಾಚಿಕೆಯಲ್ಲಿ, ವ್ಯಾವಹಾರಿಕವಾಗಿ ನಾವು ಆಲೋಚನೆ ಮಾಡಬೇಕು. ಮಂಗಳೂರು ಜಿಲ್ಲೆಯಲ್ಲೇ ತೆಗೆದುಕೊಳ್ಳಿ, ಸಕಾಲದಲ್ಲಿ ಅಲ್ಲಿನ ಮಕ್ಕಳಿಗೆ ಇವರು ಬಟ್ಟೆ ಹೊಲಿದು ಕೊಡಲಿಲ್ಲವೆಂದರೆ ಏನು ಪ್ರಯೋಜನವಾಗುತ್ತದೆ?

11.10 ಎ.ಎಂ.

ನಾನು ಇನ್ನು ಅನೇಕ ಕಡೆ ನೋಡಿದ್ದೇನೆ. ಮಾರ್ಚ್ ತಿಂಗಳಲ್ಲಿ ಇನ್ಸ್‌ಪೆಕ್ಷನ್ ಮಾಡಿದರೂ ಮಾರ್ಚ್ ತಿಂಗಳಲ್ಲೂ ಇನ್ನೂ ಬಟ್ಟೆ ಬಂದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಆ ರೀತಿ ಆಗುವುದಿಲ್ಲ. ಜೂನ್ ಅಥವಾ ಜುಲೈ ತಿಂಗಳಲ್ಲಿ ಎಲ್ಲಾ ಮಕ್ಕಳಿಗೂ ಬಟ್ಟೆಯನ್ನು ಕೊಡಲೇಬೇಕು ಎನ್ನುವ ಕಡ್ಡಾಯ ತೀರ್ಮಾನವನ್ನು ಮಾಡಿದ ಮೇಲೆ ಈ ಬಟ್ಟೆಯನ್ನು ತರಿಸುವುದು ಮತ್ತು ಹೊಲಿಸಿ ಕೊಡುವ ಜವಾಬ್ದಾರಿಯನ್ನು ಆಯಾ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಹೀಗಾಗಿ ಇವತ್ತು ಹೆಚ್ಚೆಂದರೆ ಜುಲೈ ತಿಂಗಳಲ್ಲಿ ಬಟ್ಟೆ ಸಿಗುತ್ತದೆ. ಹೆಚ್ಚೆಂದರೆ ಮೂರು ತಿಂಗಳ ಮೇಲೆ ಹೆಚ್ಚಿಗೆ ಕೆಲಸ ಕೊಡುವುದಕ್ಕೆ ಆಗುವುದೇ ಇಲ್ಲ. ತಾವು ಹೇಳಿದ ರೀತಿಯಲ್ಲಿ ಅವರು ಸರ್ಕಾರದ ಎನ್.ಎಂ.ಆರ್. ಎಂಪ್ಲಾಯೀಸ್ ಆಗಿದ್ದರೆ ನಾವು ತೆಗೆಯುತ್ತಿರಲಿಲ್ಲ. ಇವರು ಹೈಕೋರ್ಟಿನಲ್ಲಿ ಕೈಗಾರಿಕಾ ಕಾರ್ಮಿಕರು ಎಂದು ತೀರ್ಮಾನವಾಗಿ ಕೈಗಾರಿಕಾ ಕಾನೂನು ಪ್ರಕಾರ ಅವರಿಗೆ ಎಲ್ಲಾ ಸೌಲಭ್ಯಗಳನ್ನು ಕೊಡಬೇಕೆಂದು ಆದೇಶವನ್ನು ನೀಡಿದ ಆಧಾರದ ಮೇಲೆ ಅದು

ಬಂದಾದ ಮೇಲೆ ಅವರಿಗೆ ಕೊಡಲೇಬೇಕು ಎಂದು ಹೇಳಿ ಹೈಕೋರ್ಟಿನ ಆದೇಶದ ಆಧಾರದ ಮೇಲೆ ತೀರ್ಮಾನ ಕೈಗೊಂಡು ಅವರಿಗೆ ಪ್ರಾವಿಡೆಂಟ್ ಫಂಡ್, ರಿಟ್ರೆಂಚ್‌ಮೆಂಟ್ ಕಾಂಪೆನ್‌ಸೇಷನ್, ಗ್ರಾಚ್ಯುಯಿಟಿ ಇವೇನು ಕೊಡಬೇಕೊ ಅವಷ್ಟನ್ನೂ ಕೊಡುವುದಕ್ಕೆ ತೀರ್ಮಾನವನ್ನು ಮಾಡಿದ್ದೇವೆ. ಈಗಾಗಲೇ ಪಾವತಿ ಮಾಡುತ್ತಿದ್ದೇವೆ. ಹಣ ಬಿಡುಗಡೆಯಾಗದ ಕಾರಣಕ್ಕಾಗಿ ತೊಂದರೆಯಾಯಿತು. ಹೆಚ್ಚುಕಡಿಮೆ 3 ಕೋಟಿ ರೂ.ಗಳನ್ನು ಪುನರ್ ವಸತಿಗೆ ಮತ್ತು ಅವರಿಗೆ ಕೊಡಬೇಕಾದ ಎಲ್ಲವನ್ನು ಕೊಡುತ್ತೇವೆ. 300 ಚಿಲ್ಲರೆ ಜನ ಈ ರಾಜ್ಯದಲ್ಲಿದ್ದಾರೆ. ಅವರು ಮುಂದೆ ಉದ್ಯೋಗ ಮುಂದುವರೆಸಿಕೊಂಡು ಹೋಗುವುದಕ್ಕೆ ಅವರಿಗೆ ಬೇಕಾದ ಸವಲತ್ತುಗಳನ್ನು ಖಂಡಿತವಾಗಿಯೂ ಕೊಡುತ್ತೇವೆ.

ಪ್ರಶ್ನೆ ಸಂಖ್ಯೆ 287 (3552)

ಅಧ್ಯಕ್ಷರು :— ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿಯವರ ಪ್ರಶ್ನೆಯನ್ನು ಕಂದಾಯ ಇಲಾಖೆಗೆ ವರ್ಗಾಯಿಸಲಾಗಿದೆ.

ತೆಲುಗು ಜನಾಂಗದವರ ಸಮೀಕ್ಷೆ

289 (3441) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತೆಲುಗು ಜನಾಂಗದವರು ಕರ್ನಾಟಕದ ಯಾವ ಯಾವ ಜಿಲ್ಲೆಯಲ್ಲಿ ಇದ್ದಾರೆ ಪ್ರಸ್ತುತ ಅವರುಗಳನ್ನು ಯಾವ ಪಂಗಡಕ್ಕೆ ಸೇರ್ಪಡೆ ಮಾಡಲಾಗಿದೆ

ಆ) ಈ ಜನಾಂಗದವರನ್ನು ಹಿಂದುಳಿದ ಜನಾಂಗವೆಂದು ಪರಿಗಣಿಸಲು ಸರ್ಕಾರವೇನಾದರೂ ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ತೆಲುಗು ಮಾತನಾಡುವ ಸಂಪೂರ್ಣ ಜನಾಂಗವನ್ನು ಹಿಂದುಳಿದ ವರ್ಗಕ್ಕೆ ಸೇರಿಸಲು ಪರಿಗಣಿಸುವ ಯಾವುದೇ ಪ್ರಸ್ತಾವನೆ ಅಥವಾ ಮನವಿ ಇರುವುದಿಲ್ಲ. ಆದರೆ 'ತೆಲುಗುಗೌಡ' ಜನಾಂಗವನ್ನು ಹಿಂದುಳಿದ ವರ್ಗಕ್ಕೆ ಸೇರಿದ ಜನಾಂಗವೆಂದು ಪರಿಗಣಿಸುವ ಮನವಿಗಳು ಬಂದಿರುತ್ತವೆ. ಸದರಿ ಮನವಿಗಳು ಪರಿಶೀಲನೆಯಲ್ಲಿರುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕರ್ನಾಟಕದಲ್ಲಿ ತೆಲುಗು ಭಾಷೆ ಮಾತನಾಡತಕ್ಕವರೆಲ್ಲಾ ಹಿಂದುಳಿದ ವರ್ಗದವರು ಎಂದು ಹೇಳುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ಅವರಿಗೆ ತೆಲುಗು ಭಾಷೆಯೇ ಗೊತ್ತಿಲ್ಲ. ಅವರ ಸಾಮಾಜಿಕ ನೀತಿಯನ್ನು ನೋಡಿದರೆ ಅವರು

ಕುರಿ ಸಾಕುತ್ತಾರೆ. ದನವನ್ನು ಸಾಕುತ್ತಾರೆ. ಒಕ್ಕಲುತನವನ್ನು ಮಾಡುತ್ತಾರೆ. ಅವರಲ್ಲಿ ವಿದ್ಯಾವಂತರ ಸಂಖ್ಯೆ ಕಡಿಮೆ. ಅವರಿಗೆ ಇನ್ನೊಂದು ಹೆಸರು ತೆಲುಗು ಗೌಡರು ಎಂದು ಹೇಳುತ್ತಾರೆ. ಅವರಿಗೆ ತೆಲುಗು ಗೌಡರು ಎಂದು ಹೆಸರಿದ್ದರೂ ಕೂಡ ಯಾವುದೇ ಈ ರಾಜ್ಯದ ಒಕ್ಕಲಿಗರ ಸಮಾಜದಲ್ಲಾಗಲಿ ಗೌಡರ ಸಮಾಜದಲ್ಲಾಗಲಿ, ಯಾವುದೇ ಸಂಬಂಧವನ್ನೂ ಬೆಳಸಿಲ್ಲ. ಈ ದೇಶಕ್ಕೆ ಸ್ವತಂತ್ರ್ಯ ಬಂದು 50 ವರ್ಷ ಕಳೆದರೂ ಕೂಡ ಅವರಿಗೆ ಯಾವುದೇ ಸೌಕರ್ಯ ಸಿಕ್ಕಿಲ್ಲ. ಇವರು ಅವರು ಮುಂದುವರೆದ ಜನಾಂಗದೊಂದಿಗೆ ಹೋರಾಟ ಮಾಡಬೇಕಾಗಿದೆ. ಇವತ್ತು ವಿದ್ಯಾರ್ಥಿನಿಲಯದಲ್ಲಿ ಒಂದು ಸೀಟಾಗಲಿ, ಅವರಿಗೆ ಶಾಲೆಯಲ್ಲಾಗಲಿ ಯಾವುದೇ ಇಲ್ಲ. ಬೇರೆ ಯಾವುದೇ ಸರ್ಕಾರದ ಸವಲತ್ತುಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಈ ಉತ್ತರವನ್ನು ನೋಡಿದರೆ ಏನೋ ಅಧಿಕಾರಿಗಳು ಬೇಜವಾಬ್ದಾರಿಯಿಂದ ಕೊಟ್ಟಿದ್ದಾರೆ. ಇದರ ಬಗ್ಗೆ ವಿಧಾನಸಭೆಯಲ್ಲಿ ಹಿಂದೆ ಎರಡು-ಮೂರು ಸಲ ಪ್ರಸ್ತಾಪಮಾಡಿದ್ದೇನೆ. ಸಮಾಜ ಕಲ್ಯಾಣ ಇಲಾಖಾ ಸಚಿವರು ಕಡೂರಿಗೆ ಬಂದಂಥ ಸಂದರ್ಭದಲ್ಲಿ ತೆಲುಗು ಗೌಡರು ಆ ಜನಾಂಗದವರು ಅವರಿಗೆ ಮನವಿಯನ್ನು ಕೊಟ್ಟಿದ್ದಾರೆ. ರವಿವರ್ಮ ಕುಮಾರ್‌ರವರ ಆಯೋಗ ಬಂದಂಥ ಸಂದರ್ಭದಲ್ಲಿ ಆ ಜನಾಂಗದವರು ಮತ್ತು ಜನಪ್ರತಿನಿಧಿಗಳಾದ ನಾನು ಮತ್ತು ಕೆ.ಬಿ. ಮಲ್ಲಿಕಾರ್ಜುನ್‌ರವರು ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ನಾನು ಶಾಸಕನಾಗಿ ಏಳು ವರ್ಷವಾಯಿತು. ಏಳು ವರ್ಷದಿಂದಲೂ ಈ ಪ್ರಶ್ನೆಯನ್ನು ಹಾಕುತ್ತಲೇ ಇದ್ದೇನೆ. ನಮ್ಮ ಸರ್ಕಾರದಲ್ಲೂ ಹಾಕಿದ್ದೇನೆ. ಅವರಿಗೆ ಏನಾದರೂ ಪರಿಹಾರವನ್ನು ಕೊಡಿ, ಅವರಿಗೆ ಏನಾದರೂ ಸವಲತ್ತು ಕೊಡಿ ಎಂದು ಕೇಳಿದ್ದೇನೆ. ಅವರಲ್ಲಿ ಅಕ್ಷರಸ್ಥರ ಸಂಖ್ಯೆಯೂ ಕಡಿಮೆ. ಅವರಿಗೆ ರಾಜಕೀಯವಾಗಿ ಮೇಲೆ ಬರುವುದಕ್ಕೆ ಸಾಧ್ಯವಾಗುತ್ತಿಲ್ಲ. ಸರ್ಕಾರ ಯಾವುದೇ ಕಾರ್ಯಕ್ರಮಗಳನ್ನು ಇಲ್ಲಿ ಮಾಡಿದರೂ ಕೂಡ ಆ ಸವಲತ್ತು ಅವರಿಗೆ ಸಿಗುತ್ತಿಲ್ಲ. ನನಗೆ ಮಾನ್ಯ ಸಚಿವರು ಭರವಸೆಯನ್ನು ಕೊಡಬೇಕು. ಅವರನ್ನು ಏನಾದರೂ ಈ ಸಾರಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸುವುದಕ್ಕೆ ಸಾಧ್ಯವೇ? ಅವರನ್ನು ತೆಲುಗು ಗೌಡರು ಎಂದು ಹೇಳುತ್ತಾರೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ :— ಮಾನ್ಯ ಅಧ್ಯಕ್ಷರೇ, ಈ ಉತ್ತರವನ್ನು ನೋಡಿದರೆ ಕಾಗೋಡು ತಿಮ್ಮಪ್ಪನವರ ಉತ್ತರ ಕಂಡಂತೆ ಕಾಣುತ್ತಿಲ್ಲ. ಮೊದಲನೇ ಪ್ರಶ್ನೆಗೆ ಉತ್ತರವನ್ನೇ ಹೇಳಿಲ್ಲ. ಮಾನ್ಯ ಸಚಿವರನ್ನು ಸ್ವದೇಶಕ್ಕೆ ಸ್ವಾಗತ ಮಾಡುತ್ತಾ ಮೊದಲನೇ ಪ್ರಶ್ನೆ ಕೇಳುತ್ತಿದ್ದೇನೆ. ಇದನ್ನು ಟಾಪ್ ಪ್ರೈಯಾರಿಟಿ ಮೇಲೆ ಕನ್‌ಸಿಡರ್ ಮಾಡಬೇಕೆಂದು ಹೇಳುತ್ತೇನೆ. ತೆಲುಗು ಜನಾಂಗದವರು ಕರ್ನಾಟಕದ ಯಾವ ಜಿಲ್ಲೆಯಲ್ಲಿದ್ದಾರೆ, ಅವರನ್ನು ಯಾವ ವರ್ಗಕ್ಕೆ ಸೇರ್ಪಡೆ ಮಾಡಲಾಗಿದೆ ಎಂದಿದ್ದಕ್ಕೆ ಉತ್ತರವನ್ನೇ ಹೇಳಿಲ್ಲ. ಬೇರೆ ಉತ್ತರವನ್ನು ಹೇಳಿದ್ದಾರೆ. ಕಳೆದ 10-15 ವರ್ಷಗಳಿಂದಲೂ ಇದರ ಬಗ್ಗೆ ನಾವು ಮನವಿಯನ್ನು ಕೊಡುತ್ತಲೇ ಬಂದಿದ್ದೇವೆ. ರವಿವರ್ಮ ಕುಮಾರ್ ಆಯೋಗ ಏನಿತ್ತು,

ನಾವು ಆ ಕಮಿಟಿ ಮೆಂಬರ್ಸ್‌ಗಳನ್ನೆಲ್ಲಾ ಕರೆದುಕೊಂಡು ಹೋಗಿ ಎಲ್ಲಾ ಜಾಗಗಳನ್ನೂ ತೋರಿಸಿ ಅವರಿಗೆ ಸೂಕ್ತವಾಗಿರುವ ಹಾಗೆ ಮನವರಿಕೆಯನ್ನು ಮಾಡಿಕೊಟ್ಟಿದ್ದೇವೆ. ನನ್ನ ಪ್ರಶ್ನೆ ಏನೆಂದರೆ ಇದು ರವಿವರ್ಮ ಕುಮಾರ್‌ರವರ ವರದಿಯಲ್ಲಿ ತೆಲುಗು ಗೌಡ ಜನಾಂಗವನ್ನು ಹಿಂದುಳಿದ ವರ್ಗಕ್ಕೆ ಸೇರಿಸುವುದಕ್ಕೆ ಅವರು ಶಿಫಾರಸ್ಸು ಮಾಡಿದ್ದೀರಾ? ಎರಡನೆಯದು ಆ ಶಿಫಾರಸ್ಸನ್ನು ಯಾವಾಗ ತಾವು ಜಾರಿಗೆ ತರುತ್ತೀರಿ ಎನ್ನುವುದು. ಎರಡಕ್ಕೂ ಉತ್ತರ ಹೇಳಿದ ಸಂದರ್ಭದಲ್ಲಿ ಇದನ್ನು ಅತೀ ಶೀಘ್ರವಾಗಿ ತರಬೇಕೆನ್ನುವ ಒತ್ತಾಯ ಏಕೆ ಎಂದರೆ ಈ ಜನಾಂಗದವರಿಗೆ ಯಾವುದೇ ರೀತಿಯ ಸವಲತ್ತುಗಳೂ ಸಿಗುತ್ತಿಲ್ಲ. ಅವರಿಗೆ ಹಾಸ್ಟೆಲ್‌ನಲ್ಲಿ ಸೀಟ್ ಕೊಡುವುದಕ್ಕೆ ಆಗುತ್ತಿಲ್ಲ. ಅವರನ್ನು ಕಾಲೇಜುಗಳಿಗೆ ಸೇರಿಸುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಇದನ್ನು ಟಾಪ್ ಪ್ರೈಯಾರಿಟಿ ಮೇಲೆ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಕೇಳಿ ಕೊಳ್ಳುತ್ತೇನೆ.

ಶ್ರೀ ಸಿ. ಗುರುಸ್ವಾಮಿ :— ಮಾನ್ಯ ಅಧ್ಯಕ್ಷರೇ, ನಮ್ಮ ಚಾಮರಾಜನಗರ ತಾಲ್ಲೂಕಿನಲ್ಲೂ ಒಂದು ಬಡಗಲಪುರ ಎನ್ನುವ ಒಂದು ಗ್ರಾಮ ಇದೆ. ಅವರು ಜಂಗಾಲಿಗರು. ಬಹಳ ಮೈನರ್ ಮೈಕ್ರೋಸ್ಕೋಪಿಕ್ ಬ್ಯಾಕ್‌ವರ್ಡ್ ಎಂತಲೂ ಹೇಳಬಹುದು. ಅವರನ್ನು ಈ ವರ್ಗದಲ್ಲಿ ಕೈಬಿಟ್ಟಿದ್ದಾರೆ. ಅವರಗೆ ಯಾವುದೇ ರೀತಿಯ ಸವಲತ್ತು ಇಲ್ಲ. ಹಾಸ್ಟೆಲ್‌ಗಳಲ್ಲೂ ಸೀಟ್ಸ್ ಇಲ್ಲ. ಅಪಾಯಿಂಟ್‌ಮೆಂಟ್ ಬಗ್ಗೆ ಇಲ್ಲ. ಇದರ ಬಗ್ಗೆ ಅನೇಕ ಮನವಿಗಳನ್ನು ಕೂಡ ಕೊಟ್ಟಿದ್ದಾರೆ. ಅಲ್ಲಿ ಒಂದೇ ಒಂದು ಗ್ರಾಮದಲ್ಲಿರತಕ್ಕಂಥವರು. ಅವರ ಬಗ್ಗೆಯೂ ತಾವು ಕನ್‌ಸಿಡರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬಹಳ ಹಿಂದುಳಿದ ಜನ ಅವರು.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೇ, ಮೊದಲನೇ ಪ್ರಶ್ನೆಯನ್ನು ಕೇಳುವ ಸ್ವರೂಪದಿಂದಲೇ ಅದಕ್ಕೆ ಬೇಕಾದ ಉತ್ತರವನ್ನು ನಾವು ಕೊಟ್ಟಿದ್ದೇವೆ. ಏಕೆಂದರೆ ತೆಲುಗು ಜನಾಂಗ ಎಂದರೆ ಯಾರನ್ನು ಸೇರಿಸಬೇಕು ಎಂದು ಹೇಳುವುದಕ್ಕಾಗುವುದಿಲ್ಲ. ಅಲ್ಲಿ ಪ್ರಶ್ನೆ ಇರುವುದು ತೆಲುಗು ಗೌಡರು ಎಂದು ಇದೆ.

ಶ್ರೀ ಕೆ.ಬಿ. ಕೃಷ್ಣಮೂರ್ತಿ :— ನಮ್ಮ ಆಡು ಭಾಷೆಯಲ್ಲಿ ಅವರಿಗೆ ತೆಲುಗರು ಎಂದು ಹೇಳುತ್ತೇವೆ. ಒಂದೊಂದು ಸಾರಿ ತೆಲುಗು ಗೌಡರು ಎಂದು ಹೇಳುತ್ತಾರೆ. ಅಲ್ಲಿ ಆಡು ಭಾಷೆ ಏನಿದೆ, ಆ ರೀತಿ ನಾನು ಕೊಟ್ಟಿದ್ದೇನೆ. ಅವರು ನಿಮಗೆ ಮನವಿಯನ್ನೂ ಕೂಡ ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷ್ಣಮೂರ್ತಿಯವರ ಪ್ರಶ್ನೆ ಇದಕ್ಕೇ ಆಗಿರಬೇಕೆಂದು ಊಹಿಸಿಕೊಂಡು ತೆಲುಗು ಗೌಡರು ಎನ್ನುವ ಜಾತಿಯ ಪ್ರಶ್ನೆಯ ಬಗ್ಗೆಯೇ ನಾವು ಉತ್ತರವನ್ನು ಕೊಟ್ಟಿದ್ದೇವೆ. ನಮ್ಮ ಹಿಂದುಳಿದ ವರ್ಗದ

ಆಯೋಗ ಏನು ಇದೆ, ಅದನ್ನು ಶಿಫಾರಸ್ಸು ಮಾಡಿದ್ದಾರೆ. ಸರ್ಕಾರ ಪರಿಶೀಲನೆಯಲ್ಲಿ ಇದೆ. ಅದಷ್ಟು ಬೇಗ ಇದರ ಬಗ್ಗೆ ಒಂದು ಅಂತಿಮ ತೀರ್ಮಾನವನ್ನು ಮಾಡುತ್ತೇವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ತೆಲುಗು ಗೌಡರನ್ನು ಹಿಂದುಳಿದ ವರ್ಗಕ್ಕೆ ಸೇರಿಸಿದರೆ ಈಗೇನು 30-32 ಪರ್ಸೆಂಟ್ ಇದೆಯೋ, ಆ ಜನಸಂಖ್ಯೆ ಕೂಡ ಒಂದೂವರೆ ಎರಡು ಲಕ್ಷ ಇರುವುದರಿಂದ ಆಗ ಹಿಂದುಳಿದ ವರ್ಗದ ಮೀಸಲಾತಿಯನ್ನೂ ಕೂಡ ಜಾಸ್ತಿ ಮಾಡಬೇಕಾಗುತ್ತದೆ. ಆದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾದ ಭರವಸೆಯನ್ನು ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ :— ಈಗ ಸರ್ಕಾರಕ್ಕೆ ವರದಿ ಬಂದಿದೆ. ಅದನ್ನು ನಾವು ಪರಿಷ್ಕರಣೆ ಮಾಡುತ್ತಿದ್ದೇವೆ. ಅದು ಸಚಿವ ಸಂಪುಟದ ಮುಂದೆ ಹೋಗುತ್ತದೆ. ಅದು ಅಂತಿಮವಾಗಿ ತೀರ್ಮಾನವಾದ ಮೇಲೆ ಕಾರ್ಯರೂಪಕ್ಕೆ ಬಂದೇ ಬರುತ್ತದೆ. ವರದಿ ಬಂದಿದೆ. ಪರಿಷ್ಕರಣೆ ನಡೆಯುತ್ತಿರಬಹುದು. ಗುರುಸ್ವಾಮಿಯವರು ಚಾಮರಾಜನಗರದಲ್ಲಿ ಇರುವ ಜನಾಂಗದ ಬಗ್ಗೆ ಪ್ರಶ್ನೆ ಕೇಳಿದರು, ಆ ಜನಾಂಗದ ಪ್ರಶ್ನೆ ಇಲ್ಲಿ ಇಲ್ಲ. ಅದು ಇಲ್ಲದೇ ಇರುವುದರಿಂದ ಇಲ್ಲಿ ಹೇಳುವುದು ಕಷ್ಟವಾಗುತ್ತದೆ.

ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಯ ಮಂಜೂರಾತಿ

290 (3622) ಶ್ರೀಮತಿ ಅನುಸೂಯಮ್ಮ ನಟರಾಜ್ ಕೆ.ವಿ. (ಚಿಕ್ಕಬಳ್ಳಾಪುರ) :— ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚಿನ ನಿರುದ್ಯೋಗಿಗಳಿದ್ದು ಸಮಸ್ಯೆ ಪರಿಹಾರವಾಗುವಂತೆ ಯಾವುದಾದರೂ ಸಣ್ಣ ಕೈಗಾರಿಕೆಯನ್ನು ಪ್ರಾರಂಭಿಸಲು ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವರೇ?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :—

ಅ) ಸಣ್ಣ ಕೈಗಾರಿಕೆಗಳನ್ನು ರಾಜ್ಯ ಸರ್ಕಾರದಿಂದ ನೇರವಾಗಿ ಸ್ಥಾಪಿಸಲಾಗುವುದಿಲ್ಲ. ಆದರೆ, ಉದ್ಯಮಗಳನ್ನು ಸ್ಥಾಪಿಸಲಾಗುವುದಿಲ್ಲ. ಆದರೆ, ಉದ್ಯಮಗಳನ್ನು ಸ್ಥಾಪಿಸುವವರಿಗೆ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಹೊಸ ಕೈಗಾರಿಕಾ ನೀತಿಯ ಪ್ರಕಾರ ನೀಡಲಾಗುತ್ತಿದೆ. ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ 2000-2001 ನೇ ಸಾಲಿನಲ್ಲಿ 67 ಸಣ್ಣ ಪ್ರಮಾಣದ ಕೈಗಾರಿಕೆಗಳು ನೋಂದಣಿಯನ್ನು ಪಡೆದಿದ್ದು, ರೂ.185.72 ಲಕ್ಷ ಬಂಡವಾಳವನ್ನು ತೊಡಗಿಸಿದ್ದು 260 ಮಂದಿಗೆ ಉದ್ಯೋಗಾವಕಾಶ ದೊರೆತಂತಾಗಿದೆ.

ಶ್ರೀಮತಿ ಕೆ.ವಿ. ಅನುಸೂಯಮ್ಮ ನಟರಾಜನ್ :— ಮಾನ್ಯ ಅಧ್ಯಕ್ಷರೇ, ನಮ್ಮ ಚಿಕ್ಕಬಳ್ಳಾಪುರದಲ್ಲಿ ಅನೇಕ ವಿದ್ಯಾಸಂಸ್ಥೆಗಳಿವೆ. 1,65,000 ರಷ್ಟು ಜನಸಂಖ್ಯೆ ಇದ್ದು 45 ಸಾವಿರ ವಿದ್ಯಾವಂತರಿದ್ದಾರೆ. ಆದರಲ್ಲಿ ಹತ್ತು ಜನ ಯುವಕರು, ಹತ್ತು ಜನ ಯುವತಿಯವರಿಗೆ ಮಾತ್ರ ಕೆಲಸ ಸಿಗುತ್ತದೆ. ಆದರೆ ಇನ್ನು ಕೆಲವರು ವಿದ್ಯಾವಂತರ ಸಿಗಲಿಲ್ಲವೆಂದು ಹೇಳಿ ಲೋನ್ ಕೊಡುವುದೇ ತುಂಬಾ ಕಡಿಮೆಯಾಗಿದೆ. ಆದರೂ 50 ಜನರಿಗೆ ಸ್ವರ್ಣಜಯಂತಿ ರೋಜ್‌ಗಾರ್ ಯೋಜನೆನಲ್ಲಿ ಮತ್ತೆ ಪಿಎಂಆರ್‌ವೈನಲ್ಲಿ ಕೆಲಸ ದೊರಕುತ್ತದೆ. ಇನ್ನೂ ಕೆಲವರು ಇದೇ ರೀತಿ ಎಸ್‌ಎಸ್‌ಎಲ್‌ಸಿ ಪಾಸಾದರರು, ಫೇಲ್ ಆದವರು ಪೇಪರ್ ಹಾಕುವುದು, ಹಾಲನ್ನು ಮಾರುವುದು, ಈ ರೀತಿ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಂಡೇ ಇದ್ದಾರೆ. ನಮ್ಮ ವಿಶ್ವೇಶ್ವರಯ್ಯನವರು ಚಿಕ್ಕಬಳ್ಳಾಪುರದಲ್ಲಿ ಜನ್ಮ ತಾಳಿದ್ದಾರೆ. ಅನೇಕ ಕಾರ್ಖಾನೆಗಳನ್ನು ದೇಶವಿದೇಶಗಳಲ್ಲಿ ಮಾಡಿಕೊಟ್ಟಿದ್ದಾರೆ. ಆದರೆ ನಮ್ಮ ಚಿಕ್ಕಬಳ್ಳಾಪುರದಲ್ಲಿ ಯಾವುದೊಂದು ಕಾರ್ಖಾನೆಯೂ ಸ್ಥಾಪನೆಯಾಗಿಲ್ಲ. ವಿಶ್ವೇಶ್ವರಯ್ಯನವರ ಜನ್ಮಸ್ಥಳವಾದ ಮುದ್ದೇನಹಳ್ಳಿಯಲ್ಲಿ ಐದು ಕೊಠಡಿಗಳು ಇದೆ.

ಅಧ್ಯಕ್ಷರು :— ಡಿಮ್ಯಾಂಡ್ಸ್ ಬಂದಾಗ ಅದರ ಬಗ್ಗೆ ಮಾತನಾಡಿ. ಈಗ ಸಪ್ಲಿಮೆಂಟ್ರಿ ಪ್ರಶ್ನೆಯನ್ನು ಕೇಳಿ. ಅಲ್ಲಿ ಸಣ್ಣ ಪ್ರಮಾಣದ ಕಾರ್ಖಾನೆಯಾಗಬೇಕು ಎಂದು ಹೇಳಿ.

ಶ್ರೀಮತಿ ಕೆ.ವಿ. ಅನುಸೂಯಮ್ಮ ನಟರಾಜನ್ :— ಅಲ್ಲಿ ಸಣ್ಣ ಕೈಗಾರಿಕಾ ಕಾರ್ಖಾನೆಯೊಂದನ್ನು ಮಾಡಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಅಧ್ಯಕ್ಷರು :— ಅಲ್ಲಿ ಸಣ್ಣ ಪ್ರಮಾಣದ ಕಾರ್ಖಾನೆಯನ್ನು ಪ್ರಾರಂಭಮಾಡಲು ಏರ್ಪಾಟು ಮಾಡಿ.

ಶ್ರೀ ಎಸ್.ಆರ್. ಕಾಶಪ್ಪನವರ್ :— ಮಾನ್ಯ ಸದಸ್ಯೆಯರು ಕೇಳಿರತಕ್ಕ ಪ್ರಶ್ನೆಗೆ ಈ ಕೈಗಾರಿಕಾ ಉದ್ಯಮಗಳನ್ನು ಸರ್ಕಾರ ನೇರವಾಗಿ ಸ್ಥಾಪನೆ ಮಾಡುವುದಿಲ್ಲ. ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಮುಂದೆ ಬಂದವರಿಗೆ ಪ್ರೋತ್ಸಾಹ, ಸಹಾಯ ಸೌಲಭ್ಯಗಳನ್ನು, ರಿಯಾಯಿತಿಗಳನ್ನು ನೀಡುತ್ತೇವೆ. ಈಗಾಗಲೇ ಅಲ್ಲಿ 2000-01 ಇಸವಿಯಲ್ಲಿ 67 ಕೈಗಾರಿಕಾ ಯೂನಿಟ್‌ಗಳು 186 ಲಕ್ಷ ರೂಪಾಯಿಗಳ ಬಂಡವಾಳ ಹೂಡಿಕೆಯೊಂದಿಗೆ ಪ್ರಾರಂಭ ಆಗಿದೆ. ಅಲ್ಲಿ 260 ಜನ ಇವತ್ತು ಕೆಲಸ ಮಾಡುತ್ತಿದ್ದಾರೆ ಮತ್ತು ಹೊಸ ಕೈಗಾರಿಕಾ ಪಾಲಿಸಿ ಪ್ರಕಾರ ಅಲ್ಲಿ ಉದ್ಯಮಗಳನ್ನು ಸ್ಥಾಪನೆ ಮಾಡುವವರಿಗೆ ನಾವು ರಿಯಾಯಿತಿ ಮತ್ತು ಸವಲತ್ತುಗಳನ್ನು ಕೊಡುತ್ತೇವೆ. ಅವರು ಹೇಳಿದ ಹಾಗೆ ನಿರುದ್ಯೋಗೀ ಪದವಿಧರರಿಗೆ ಪಿಎಂಆರ್‌ವೈನಲ್ಲಿ ಕೂಡ ಅವಕಾಶ ಇದೆ. "ವಿಶ್ವದಲ್ಲಿ" ಕೂಡ ಉದ್ಯೋಗಕ್ಕಾಗಿ ತರಬೇತಿ ಮಾಡುವ ಒಂದು ಅವಕಾಶ ಇದೆ. ಅದಕ್ಕೆ ಅವರ

ಕ್ಷೇತ್ರದ ಜನ ಮುಂದೆ ಬಂದರೆ ಅಂಥವರಿಗೆ ಅವಕಾಶವನ್ನು ಕಲ್ಪಿಸಿಕೊಡುತ್ತೇವೆನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ.

ಶ್ರೀಮತಿ ಕೆ.ವಿ. ಅನಸೂಯಮ್ಮ ನಟರಾಜನ್ :— ಮಾನ್ಯ ಅಧ್ಯಕ್ಷರೆ, ಅವರು ಕೈಗಾರಿಕೆಯಲ್ಲಿ ಸುಮಾರು 260 ಜನಕ್ಕೆ ಕೆಲಸ ಕೊಡುತ್ತೇವೆಂದು ಹೇಳಿದ್ದಾರೆ. ಇನ್ನೂ ಅದು ಕಾರ್ಯಗತಕ್ಕೆ ಬಂದಿಲ್ಲ. ಹಾಗೂ ಪಿಎಂಆರ್‌ವೈನಲ್ಲಿ ಸುಮಾರು 70 ಜನರಿಗೆ ಉದ್ಯೋಗಾವಕಾಶ ಕೊಡುತ್ತಾರೆ ಅಷ್ಟೇ. ಇಲ್ಲಿ ಸುಮಾರು ವಿದ್ಯಾ ಸಂಸ್ಥೆಗಳು ಇವೆ. ನಮ್ಮ ಚಿಕ್ಕಬಳ್ಳಾಪುರದಲ್ಲಿ ಪಿಯುಸಿ ಇದೆ. ಸಿಪಿಎಡ್ ಇದೆ. ಬಿಎಡ್ ಇದೆ, ಫಾರ್ಮಸಿ ಇದೆ ಡಿಪ್ಲೊಮಾ ಇದೆ. ಅನೇಕ ವಿದ್ಯಾವಂತರು ಇದ್ದಾರೆ. ಸುಮಾರು 200-300 ಜನಕ್ಕೆ ಮಾತ್ರ ಅನುಕೂಲ ಆಗುತ್ತಿದೆ. ಮಿಕ್ಕ ಜನರಿಗೆ ವಿಶ್ವೇಶ್ವರಯ್ಯನವರ ಜನ್ಮಸ್ಥಳದಲ್ಲಿ ಒಂದು ರೇಷ್ಮೆಯ ಐದು ಕೊಠಡಿಯ ಕಾರ್ಖಾನೆ ಆಗಿ ನಿಂತು ಹೋಗಿದೆ. ಅದನ್ನು ಮೊದಲು ನಡೆಸುತ್ತಿದ್ದರು. ಈಗ ಯಾವುದಾದರೂ ತಕ್ಷಣ ಒಂದು ಕಾರ್ಖಾನೆ ನಡೆಸುವುದಕ್ಕೆ ಅವಕಾಶವನ್ನು ಸಂಬಂಧಪಟ್ಟ ಸಚಿವರು ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

ಅಧ್ಯಕ್ಷರು :— ರೇಷ್ಮೆಗೆ ಸಂಬಂಧಪಟ್ಟ ಹಾಗೆ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಇದೆಯಲ್ಲಾ, ಇಲ್ಲಿ ರೇಷ್ಮೆ ಜಾಸ್ತಿ ಬೆಳೆಯುತ್ತಾರೆ. ರೇಷ್ಮೆಗೆ ಸಂಬಂಧಪಟ್ಟ ಹಾಗೆ ಯಾವುದಾದರೂ ಕಾರ್ಖಾನೆ ಪ್ರಾರಂಭ ಮಾಡಲು ಏರ್ಪಾಡು ಮಾಡಿ. ಇದಕ್ಕೆ ಉತ್ತರ ಹೇಳಿ.

ಶ್ರೀ ಎಸ್.ಆರ್. ಕಾಶಪ್ಪನವರ್ :— ಮಾನ್ಯ ರೇಷ್ಮೆ ಸಚಿವರ ಗಮನಕ್ಕೆ ಈ ವಿಷಯವನ್ನು ತರುತ್ತೇನೆ.

ಶ್ರೀ ಎ.ಎಸ್. ಗುರುಸ್ವಾಮಿ :— ಒಂದೇ ಒಂದು ಪ್ರಶ್ನೆ ಏನೆಂದರೆ ಇವರು ಹೊಸ ಕೈಗಾರಿಕಾ ನೀತಿ ಪ್ರಕಾರ ಒಂದು ಹೇಳುತ್ತಿದ್ದಾರೆ. ಆ ಹೊಸ ಕೈಗಾರಿಕಾ ನೀತಿ ಏನು ಎನ್ನುವುದನ್ನು ದಯಮಾಡಿ ಮಾನ್ಯ ಸಚಿವರು ತಿಳಿಸಬೇಕು.

ಅಧ್ಯಕ್ಷರು :— ಈಗ ಬೇಡ, ಇನ್ನೊಂದು ದಿವಸ ಕೇಳಿ, ಈಗ ಸಮಯ ಇಲ್ಲ.

ಶ್ರೀ ಎ.ಎಸ್. ಗುರುಸ್ವಾಮಿ :— ಹೊಸ ಕೈಗಾರಿಕಾ ನೀತಿ ಏನು ಎಂದು ಅವರು ವಿವರಣೆ ನೀಡಲಿ.

ಅಧ್ಯಕ್ಷರು :— ಅವರು ವಿವರಣೆ ನೀಡಲು ಶುರು ಮಾಡಿದರೆ 20 ನಿಮಿಷ ಆಗುತ್ತದೆ. ನಮಗೆ ಈಗ ಸಮಯ ಇಲ್ಲ.

ಶ್ರೀ ಎ.ಎಸ್. ಗುರುಸ್ವಾಮಿ :— ಶಾರ್ಟ್ ಆಗಿ ರಿಪ್ಲೈ ಕೊಡಲಿ ಎಂದು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :— ಇದು ಪ್ರಶ್ನೋತ್ತರ ವೇಳೆ. ನೀವು ಡಿಮ್ಯಾಂಡ್ಸ್ ಮೇಲೆ ಮಾತನಾಡುವಾಗ ಆಗ ಹೇಳಿ. ದಯವಿಟ್ಟು ಬೇಡ.

ಶ್ರೀ ಎ.ಎಸ್. ಗುರುಸ್ವಾಮಿ :— ಇದು ನನ್ನ ವಿಚಾರ ಅಲ್ಲ. ಅವರು ಉತ್ತರದಲ್ಲಿಯೇ ಹೇಳಿದ್ದಾರೆ. ಹೊಸ ಇಂಡಸ್ಟ್ರೀಯಲ್ ಪಾಲಿಸಿ ಪ್ರಕಾರ ಎಂದು ಹೇಳುತ್ತಾರಲ್ಲಾ, ಯಾವುದು ಹೊಸ ಇಂಡಸ್ಟ್ರೀಯಲ್ ಪಾಲಿಸಿ? ದಯವಿಟ್ಟು ಒಂದು ಸೆಂಟೆನ್ಸ್ ಹೇಳುವುದಕ್ಕೆ ಹೇಳಿ.

ಅಧ್ಯಕ್ಷರು :— ನಾನು ಸಮಯ ಇಲ್ಲ ಎಂದು ಹೇಳುತ್ತಿದ್ದೇನೆ. ನೀವು ಪ್ರತಿ ಒಬ್ಬರೂ ಹೊಸ ರೀತಿ ಪ್ರಶ್ನೆ ಕೇಳಿ, ಅದರ ಮೇಲೆ ಮತ್ತೆ ಸಪ್ಲಿಮೆಂಟರಿ ಪ್ರಶ್ನೆ ಕೇಳುತ್ತಾ ಹೋದರೆ ಏನು ಉಪಯೋಗ? ನೀವು ನನ್ನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎ.ಎಸ್. ಗುರುಸ್ವಾಮಿ :— ಹೊಸ ಕೈಗಾರಿಕಾ ನೀತಿ ಏನು ಎನ್ನುವುದು ಎಲ್ಲರಿಗೂ ಗೊತ್ತಾಗಲಿ. ನನ್ನ ಒಬ್ಬನಿಗೇ ಅಲ್ಲ.

ಅಧ್ಯಕ್ಷರು :— ಈಗ ನಮ್ಮ ಹತ್ತಿರ ಇನ್ನೂ 8 ಪ್ರಶ್ನೆಗಳು ಇವೆ. 20 ನಿಮಿಷ ಸಮಯ ಇದೆ. ನಾನು ಹೇಗೆ ಮ್ಯಾನೇಜ್ ಮಾಡಲಿ ಎಂಬುದನ್ನು ತಾವೇ ಹೇಳಿ. ನೀವು ನನ್ನನ್ನು ಅರ್ಥ ಮಾಡಿಕೊಳ್ಳಿ. ನೀತಿ ಹೇಳುವುದಕ್ಕೆ ಹೋದರೆ ಇನ್ನೂ 20 ನಿಮಿಷ ಸಮಯ ಆಗುತ್ತದೆ. ದಯವಿಟ್ಟು ಬೇಡಿ. ಇನ್ನೊಂದು ದಿವಸ ಮಾತನಾಡಿ.

ಡಿ. ಡಿ. ದೇವರಾಜು ಅರಸ್ ಸಂಶೋಧನಾ ಸಂಸ್ಥೆ

291 (3174) ಶ್ರೀ ರೇವಣ್ಣ ಹೆಚ್.ಎಂ. (ಮಾಗಡಿ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಾನ್ಯ ಮುಖ್ಯಮಂತ್ರಿಗಳಾದ ಡಿ. ಡಿ. ದೇವರಾಜ ಅರಸುರವರ ಸಂಶೋದನಾ ಸಂಸ್ಥೆಯು ಯಾವಾಗ ಅಸ್ತಿತ್ವಕ್ಕೆ ಬಂದಿತ್ತು;

ಆ) ಈ ಸಂಸ್ಥೆಯ ಧ್ಯೇಯೋದ್ದೇಶಗಳಾವುವು;

ಇ) ಈ ಸಂಸ್ಥೆಗೆ ಕಳೆದ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ.

ಈ) ಯಾವ ಯಾವ ಉದ್ದೇಶಕ್ಕಾಗಿ ಎಷ್ಟೆಷ್ಟು ಹಣ ಈವರೆಗೆ ಖರ್ಚಾಗಿದೆ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ದಿನಾಂಕ: 20-8-1993 ರಂದು.

ಅ) ಈ ಸಂಸ್ಥೆಯ ಧ್ಯೇಯೋದ್ದೇಶಗಳು ಈ ಕೆಳಗಿನಂತಿವೆ:

1. ಪ್ಲಾನ್ ಮಾನಿಟರಿಂಗ್.
2. ಸಿಂಪೋಸಿಯಂ, ವರ್ಕ್‌ಶಾಪ್ ಹಾಗೂ ಸೆಮಿನಾರ್‌ಗಳನ್ನು ಏರ್ಪಾಡಿಸುವುದು.
3. ಹಿಂದುಳಿದ ವರ್ಗಗಳ ಸಮಸ್ಯಗಳ ಬಗ್ಗೆ ಅಧ್ಯಯನ ಕೈಗೊಳ್ಳುವುದು ಹಾಗೂ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುವುದು.
4. ಯೋಜನೆಗಳ ಬಗ್ಗೆ ಸರ್ವೆ ಕೈಗೊಳ್ಳುವುದು.
5. ವಿವಿಧ ಹಿಂದುಳಿದ ವರ್ಗಗಳ ಆಯೋಗಗಳ ವರದಿಗಳ ಬಗ್ಗೆ ಅಧ್ಯಯನ ಕೈಗೊಂಡು ಸರ್ಕಾರಕ್ಕೆ ಸಲಹೆಗಳನ್ನು ನೀಡುವುದು.

2000-01 ನೇ ಸಾಲಿನಲ್ಲಿ ಈ ಸಂಸ್ಥೆಗೆ ಬಿಡುಗಡೆಯಾದ ಹಣದ ವಿವರಗಳು

(ರೂ. ಲಕ್ಷಗಳಲ್ಲಿ)

	ಮಂಜೂರಾದ ಮೊತ್ತ	ಖರ್ಚಾಗಿರುವ ಮೊತ್ತ
1. ಲಂಪ್‌ಸಂ (ಯೋಜನೆ)	18.40	18.40
2. ಯೋಜನೆ (ವೇತನ)	6.60	6.63
3. ಯೋಜನೇತರ (ವೇತನ)	6.06	5.70
ಒಟ್ಟು	31.06	30.73
ಉಳಿಕೆ	0.33	

2000-01ನೇ ಸಾಲಿನಲ್ಲಿ ಈ ಕೆಳಕಂಡ ಉದ್ದೇಶಗಳಿಗೆ ಖರ್ಚು ಮಾಡಿದ ಹಣದ ವಿವರಗಳು

(ರೂ. ಲಕ್ಷಗಳಲ್ಲಿ)

1. ದೇವರಾಜ್ ಅರಸುರವರ 85ನೇ ಜನ್ಮ ದಿನಾಚರಣೆಯ ಆಚರಣೆ 6.00
2. ಯೋಜನಾ ಕಾರ್ಯಕ್ರಮಗಳ ಸಮೀಕ್ಷೆ (ಮೌಲ್ಯಮಾಪನ)
   - ಅ) ಬೆಳ್ಳಿಬೆಳಕು ಯೋಜನೆಯು ಸಮೀಕ್ಷೆ (ಶಿವಮೊಗ್ಗ, ಉಡುಪಿ, ಮೈಸೂರು)
   - ಆ) ಗಂಗಾ ಕಲ್ಯಾಣ ಯೋಜನೆಯ ಸಮೀಕ್ಷೆ (ಉಡುಪಿ, ಗುಲ್ಬರ್ಗಾ)
   - ಇ) ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ತಪಾಸಣೆ (ಚೆನ್ನಪಟ್ಟಣ, ಉಡುಪಿ)

ಈ) ಅಲ್ಪಸಂಖ್ಯಾತರಿಗಾಗಿ ಬಹುಮುಖಿ ಅಭಿವೃದ್ಧಿ ಯೋಜನೆಯ ಬಗ್ಗೆ ಸೆಮಿನಾರ್ ಮತ್ತು ಕಾರ್ಯಾಗಾರ (ಗುಲ್ಬರ್ಗಾ)	
ಉ) ಅಲ್ಪಸಂಖ್ಯಾತರ ಸಾಂಪ್ರದಾಯಿಕ ವೃತ್ತಿಗಳು ಒಂದು ಅಧ್ಯಯನ (ಚನ್ನಪಟ್ಟಣ)	4.00
ಊ) ಇತರೇ ವೆಚ್ಚಗಳು	
3. ಕಛೇರಿ ಕಟ್ಟಡದ ಬಾಡಿಗೆ ಮತ್ತು ಮುಂಗಡ	8.40
ಒಟ್ಟು	18.40

ಶ್ರೀ ಹೆಚ್.ಎಂ. ರೇವಣ್ಣ :— ಮಾನ್ಯ ಅಧ್ಯಕ್ಷರೆ, ದೇವರಾಜ ಅರಸುರವರ ಸಂಶೋದನಾ ಸಂಸ್ಥೆಯು 1993 ರಲ್ಲಿ ಪ್ರಾರಂಭವಾಗಿದ್ದರೂ ಕೂಡ ಇಲ್ಲಿಯವರೆಗೆ ಅದರ ಧ್ಯೇಯೋದ್ದೇಶಗಳ ಬಗ್ಗೆ ಸರ್ಕಾರದವರು ಕೊಟ್ಟಿರುವ ಉತ್ತರದಲ್ಲಿ ನೋಡಿದಾಗ, ಸಿಂಪೋಸಿಯಂ, ವರ್ಕ್‌ಷಾಪ್ ಸೆಮಿನಾರ್‌ಗಳನ್ನು ಮಾಡತಕ್ಕದ್ದು ಆ ಕಾರ್ಯಕ್ರಮದಲ್ಲಿದ್ದರೂ ಕೂಡ ಇಲ್ಲಿಯವರೆಗೂ ಯಾವುದೇ ಸೆಮಿನಾರ್‌ಗಳೂ ಆಗಿಲ್ಲ. ದೇವರಾಜ ಅರಸು ಅವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಹಿಂದುಳಿದ ವರ್ಗದವರ ಏಳಿಗಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ್ದರು. ರೂಪಿಸಿದ್ದಂತಹ ಸಂದರ್ಭದಲ್ಲಿ ಅವುಗಳ ಬಗ್ಗೆ ಮೌಲ್ಯಮಾಪನ ಮಾಡತಕ್ಕದ್ದು. ಅವುಗಳನ್ನು ಅಧ್ಯಯನ ಮಾಡಿ ಸರಿಯಾಗಿ ಆಗುತ್ತಿದೆಯೇ ಇಲ್ಲವೇ ಎನ್ನತಕ್ಕ ಕೆಲಸ ಈ ಒಂದು ಸಂಸ್ಥೆ ಮಾಡುತ್ತಿಲ್ಲ. ಅದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ಈ ಸಂಸ್ಥೆಗೆ ಬಿಡುಗಡೆ ಆಗಿರತಕ್ಕಂಥಹ ಹಣ 6 ಲಕ್ಷ ರೂಪಾಯಿ ಯೋಜನೆಗೆ ಮತ್ತು ಇನ್ನು 6 ಲಕ್ಷ ರೂಪಾಯಿ ಯೋಜನೇತರ. ಈ ರೀತಿ ಅವರು ಕೊಟ್ಟಿರತಕ್ಕಂಥಹ ಹಣದಲ್ಲಿ ದೇವರಾಜ್ ಅರಸು ಅವರ ಜನ್ಮ ದಿನಾಚರಣೆಗೆ 6 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಬೇರೆ ಕೆಲಸ ಇದರಲ್ಲಿ ಆಗಿಲ್ಲ. ಇನ್ನು ಮೌಲ್ಯಮಾಪನ ಪಟ್ಟಿಯನ್ನು ನೋಡಿದಾಗ ಬರೀ ಉಡುಪಿ, ಚನ್ನಪಟ್ಟಣ, ಗುಲ್ಬರ್ಗಾ ಬಿಟ್ಟರೆ ಬೇರೆ ಭಾಗಗಳಲ್ಲಿ ಈ ಒಂದು ಕಾರ್ಯಕ್ರಮ ನಡೆದಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಸಮೀಕ್ಷೆ ಕೂಡ ಆಗಿಲ್ಲ. ಮತ್ತು ಹಿಂದುಳಿದ ವರ್ಗಗಳ ಆಯೋಗಗಳ ಬಗ್ಗೆ ವಿಚಾರ ಇಲ್ಲ, ಎಷ್ಟು ಆಯೋಗಗಳು ಈ ರಾಜ್ಯದಲ್ಲಿ ಇಲ್ಲಿಯವರೆಗೆ ವರದಿಯನ್ನು ಕೊಟ್ಟಿವೆ. ಅದರಲ್ಲೂ ಕೂಡ ಮೊನ್ನೆ ವರದಿ ಕೊಟ್ಟಿರತಕ್ಕಂಥ ರವಿವರ್ಮ ಕುಮಾರ್ ಅವರ ವರದಿ ಎಲ್ಲಿದೆ? ಸರ್ಕಾರಕ್ಕೆ ಅದು ಯಾವತ್ತು ಬಂದಿದೆ? ಅದನ್ನು ಸರ್ಕಾರ ಸಭೆಯಮುಂದೆ ಮಂಡಿಸುತ್ತದೆಯೇ ಅಥವಾ ಅದರ ಬಗ್ಗೆ ಕಾಳಜಿ ಇದ್ದರೆ ಮುಂದಿನ ದಿನಗಳಲ್ಲಿ ಏನು ಮಾಡುತ್ತಾರೆ ಎನ್ನುವ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) :— ಮಾನ್ಯ ಸಭಾಧ್ಯಕ್ಷರೇ, ಮಾಜಿ ಮುಖ್ಯಮಂತ್ರಿ ದೇವರಾಜ್ ಅರಸುರವವರ ಸಂಶೋಧನಾ ಅಧ್ಯಯನ ಸಂಸ್ಥೆ ಪ್ರಾರಂಭ ಆಗಿ ಸುಮಾರು 8 ವರ್ಷ ಆಗಿದೆ. ಅದರ ಬೆಳವಣಿಗೆ ನೋಡಿದರೆ ಇನ್ನೂ ಬೆಳವಣಿಗೆ ಆಗಿಲ್ಲ. ಬಹಳ ಕುಂಠಿತವಾಗಿದೆ. ಅಲ್ಲಿಗೆ ಆ ಒಂದು ಸಂಸ್ಥೆ ಏನು ಇದೆ, ನಿಜಕ್ಕೂ ಅಲ್ಲಿ ಯಾವ ಸಂಶೋಧನೆಯೂ ಆಗಿಲ್ಲ. ಇವತ್ತು ಬೆಳ್ಳಿ ಬೆಳಕಾಗಲೀ ಗಂಗಾ ಕಲ್ಯಾಣ ಆಗಲೀ ಆಗಿಲ್ಲ. ದೇವರಾಜ್ ಅರಸ್ ಅವರ ಹೆಸರನ್ನು ಯಾಕೆ ಇಟ್ಟಿದ್ದಾರೆ ಎಂದು ಹೇಳಿದರೆ ಅವರು ಹಿಂದುಳಿದ ವರ್ಗದವರಿಗೆ ಸ್ಫೂರ್ತಿ ಆಗಿದ್ದರು. ಹಿಂದುಳಿದ ವರ್ಗದವರ ಬಗ್ಗೆ ಅವರಿಗೆ ಕಳಕಳಿ ಇತ್ತು. ಹಿಂದುಳಿದ ಜನಾಂಗದವರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿಯೂ ಮೇಲೆ ತರಬೇಕು ಎನ್ನುವ ಉದ್ದೇಶ ಇತ್ತು. ಅದಕ್ಕೋಸ್ಕರ ಈ ಸಂಸ್ಥೆ ಸ್ಥಾಪನೆ ಆಗಿದ್ದರೂ ಕೂಡ ಇಷ್ಟು ನಿಧಾನವಾಗಿ ಅದರ ಚಟುವಟಿಕೆ ನಡೆಯುತ್ತಿದೆಯಲ್ಲಾ ಇದಕ್ಕೆ ಕಾರಣಕರ್ತರು ಯಾರು? ಇಲ್ಲ ಇದಕ್ಕೇನಾದರೂ ಹಣದ ತೊಂದರೆ ಇದೆಯಾ? ಅದನ್ನು ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಸಭೆಗೆ ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾಗಿ ಮಾನ್ಯ ರೇವಣ್ಣನವರು ಅನೇಕ ಪ್ರಶ್ನೆಗಳನ್ನು ಕೇಳಿದ್ದಾರೆ. ನಾನು ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಿಗೆ ಕೇಳುವುದು ಇದೊಂದೇ. ಪ್ರೈವೆಟೈಸೇಷನ್, ಗ್ಲೋಬಲೈಸೇಷನ್ ಆದ ಮೇಲೆ ಈ ರಿಸರ್ವೇಷನ್ ಥಿಯರಿಗೆ ಅರ್ಥವೇ ಇಲ್ಲ. According to me, the privitisation and the globalisation are anti-Constitutional. ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ, ಹಿಂದುಳಿದ ವರ್ಗದವರಿಗೆ ಏನು ಮೀಸಲಾತಿ ಮಾಡಿದ್ದೇವೆ ಅದಕ್ಕೆ ಮಾಡುತ್ತಿರತಕ್ಕ ಒಂದು ಅಪಚಾರ. ಈ ದೃಷ್ಟಿಯಲ್ಲಿ ಈ ಸಂಸ್ಥೆ ಈ ವರ್ಷ ಈ ರಾಜ್ಯದಲ್ಲಿರತಕ್ಕಂಥ ಹಿಂದುಳಿದ ವರ್ಗದವರಿಗೆ ಕೊಡತಕ್ಕಂಥ ಸವಲತ್ತುಗಳು ಮತ್ತು ಈ ಖಾಸಗೀಕರಣದಿಂದ ಆಗುತ್ತಿರತಕ್ಕ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗದವರಿಗೆ ಆಗತಕ್ಕಂಥ ಅನಾಹುತಗಳ ಬಗ್ಗೆ ಒಂದು ವಿಶೇಷವಾದ ಅಧ್ಯಯನವನ್ನು ಮಾಡಲಿಕ್ಕೆ ತಾವು ಆಜ್ಞೆಯನ್ನು ಮಾಡಲಿಕ್ಕೆ ಸಾಧ್ಯವಾ? ಇದು ಮೊದಲನೆಯದು. ಎರಡನೆಯದು, ದೇವರಾಜ್ ಅರಸು ಅವರ 50 ವರ್ಷದ ರಾಜಕೀಯ ಜೀವನದ ಬಗ್ಗೆ ಒಂದು ಪುಸ್ತಕವನ್ನು ಪ್ರಕಟಣೆ ಮಾಡಲಿಕ್ಕೆ ಈ ಸಂಸ್ಥೆಗೆ ಸಾಧ್ಯವಾ?

ಶ್ರೀ ಅಂಜನ ಮೂರ್ತಿ (ನೆಲಮಂಗಲ) :— ಮಾನ್ಯ ಸಭಾಧ್ಯಕ್ಷರೆ, ಇಡೀ ರಾಜ್ಯಕ್ಕೆ ಗೊತ್ತಿರುವ ಪ್ರಕಾರ ದಿವಂಗತ ಡಿ. ದೇವರಾಜ ಅರಸ್ ಅವರು ಹಿಂದುಳಿದ ವರ್ಗದವರ ಏಳಿಗಾಗಿ ಅದೂ ಸಾಮಾಜಿಕವಾಗಿ ಇರಬಹುದು, ಆರ್ಥಿಕವಾಗಿ ಇರಬಹುದು,

ಶೈಕ್ಷಣಿಕವಾಗಿ ಇರಬಹುದು. ಅಂತಹ ಒಬ್ಬ ಮಹಾನ್ ವ್ಯಕ್ತಿಯ ಒಂದು ಚಿಂತನೆ ಬರೀ ಬೆಂಗಳೂರು ಪಟ್ಟಣದಲ್ಲೇ ಇದ್ದರೆ ಸಾಲದು. ಅದೂ ಕಾರ್ಯಗತ ಆಗುತ್ತಿಲ್ಲ. ಆದ್ದರಿಂದ ಕೊನೆಯ ಪಕ್ಷ ತಾಲ್ಲೂಕು ಮಟ್ಟದಲ್ಲಿ ಚಿಂತನೆ ಬಗ್ಗೆ ಯೋಚನೆ ಮಾಡಲಿಕ್ಕೆ ಜಿಲ್ಲಾ ಮಟ್ಟದಲ್ಲಿಯಾದರೂ ಈ ಸಂಸ್ಥೆಯನ್ನು ಸ್ಥಾಪಿಸಿ ಜನ ಜಾಗೃತಿ ಬರಿಸುವುದಕ್ಕೆ ಮಾನ್ಯ ಸಚಿವರು ಇದಕ್ಕೆ ಮುಂದಾಗುತ್ತಾರೆ, ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ಕೇಳಬಯಸುತ್ತೇನೆ.

ಶ್ರೀ ವಿ. ಪಾಪಣ್ಣ (ಹುಣಸೂರು) :— ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಧೀಮಂತ ನಾಯಕರು ದೇವರಾಜ್ ಅರಸ್ ಅವರು. ಅವರ ಒಂದು ಸಂಶೋಧನಾ ಸಂಸ್ಥೆಯನ್ನು ಮಾಡಿದ್ದಾರೆ. ವರ್ಷಕ್ಕೊಮ್ಮೆ ಅವರ ಹುಟ್ಟು ಹಬ್ಬ ಆಚರಿಸುವುದು ಮತ್ತು ಅವರ ಹೆಸರು ಹೇಳುವುದು. ಅದನ್ನು ಬಿಟ್ಟರೆ ಮತ್ತೆ ಇನ್ನೇನೂ ಆಗಿಲ್ಲ. ದಯಮಾಡಿ ನಾನು ಈ ಸಭೆಯಲ್ಲಿ ಮನವಿ ಮಾಡುತ್ತೇನೆ. ನಾನು ಈಗಾಗಲೇ 2-3 ಸಾರಿ ಮನವಿ ಮಾಡಿದ್ದೇನೆ. ಬೇಡಿಕೆಗಳ ಮೇಲೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಸಹ ಆ ಕುರಿತು ಪ್ರಸ್ತಾಪಿಸಿದ್ದೇನೆ. ಅವರ ಜೀವನದ ಗುರಿ, ಧ್ಯೇಯೋದ್ದೇಶವೇನಿತ್ತು, ಅದನ್ನು ಈಡೇರಿಸಿದರೆ ಸಾಕು ಈಗಾಗಲೇ ಸ್ಥಗಿತಗೊಂಡಿದ್ದ 2-3 ಕಾರ್ಯಗಳನ್ನು ಕೈಗೆತ್ತಿಕೊಂಡು ಪೂರ್ತಿಗೊಳಿಸಿಕೊಡಬೇಕೆಂದು ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪನವರು ನಮ್ಮ ಕ್ಷೇತ್ರಕ್ಕೆ ಬಂದಂಥ ಸಂದರ್ಭದಲ್ಲಿ ಮನವಿ ಮಾಡಿಕೊಂಡಿದ್ದು, ಈ ಕೆಲಸಗಳನ್ನು ಈಗ ಸಂಪೂರ್ಣ ಕಾರ್ಯಗತಗೊಳಿಸಿಕೊಟ್ಟಿರುವುದರಿಂದ ನಾನು ಅವರಿಗೆ ವಂದನೆಗಳನ್ನರ್ಪಿಸುತ್ತೇನೆ. ದಿವಂಗತ ದೇವರಾಜ್ ಅರಸುರವರ ಸಂಶೋಧನಾ ಸಂಸ್ಥೆಯಲ್ಲಿ ಇದುವರೆವಿಗೂ ಏನೇನು ಸಂಶೋಧನೆ ನಡೆದಿದೆಯೆಂದು ಗಮನಿಸುವುದಾದರೆ, ಸಂಶೋಧನೆಯ ಮುಖಾಂತರ ಅವರ ಧ್ಯೇಯೋದ್ದೇಶ, ಗುರಿ, ಆಸೆ-ಆಕಾಂಕ್ಷೆಗಳಾವುವೂ ಕಾರ್ಯಗತವಾಗುವುದಿಲ್ಲ. ಆದುದರಿಂದ, ಸರ್ಕಾರ ಈ ಕುರಿತು ಚಿಂತನೆ ನಡೆಸಿ ಅವರ ಉದ್ದಾತ್ತ ಧ್ಯೇಯೋದ್ದೇಶಗಳನ್ನು ಜಾರಿಗೊಳಿಸಿ ಸಮಾಜಕ್ಕೆ ತಲುಪಿಸುವಂಥ ವ್ಯವಸ್ಥೆ ಮಾಡಬೇಕು ಮತ್ತು ಅವರ ಚಿಂತನೆಗಳನ್ನು ಜಾರಿಗೊಳಿಸಲು ಪ್ರತ್ಯೇಕವಾದ ಒಂದು ಇಲಾಖೆಗೆ ವಹಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಗುಂಡ್ಲುಪೇಟೆ) :— ಮಾನ್ಯ ಅಧ್ಯಕ್ಷರೆ, ದೇವರಾಜ್ ಅರಸು ಸಂಶೋಧನಾ ಸಂಸ್ಥೆಗೆ ಕೇವಲ ಮೂವತ್ತು ಲಕ್ಷ ರೂಪಾಯಿಗಳಷ್ಟು ಅನುದಾನ ನೀಡಿರುವುದು ಬಹಳ ಕಡಿಮೆಯಾಗಿದೆ. ಅವರು ರಾಜ್ಯಕ್ಕೆ ಸಲ್ಲಿಸಿರುವ ಸೇವೆ ಅಪಾರವಾದುದು. 'ಸಾಮಾಜಿಕ ಪರಿವರ್ತನೆಯ ಹರಿಕಾರ'ನೆಂದು ಇಡೀ ಕರ್ನಾಟಕದಾದ್ಯಂತ ಅವರ ಹೆಸರನ್ನು ಕೊಂಡಾಡುತ್ತಿರುವಾಗ ಅವರ ಹೆಸರಿನಲ್ಲಿ ಒಂದು ಸಂಸ್ಥೆ ಸ್ಥಾಪಿಸಿ ಅದನ್ನು ಸೀಮಿತ ವ್ಯಾಪ್ತಿಯಲ್ಲಿಟ್ಟಿರುವುದು ಅಷ್ಟು ಸಮಂಜಸವಲ್ಲ. ಆದಕಾರಣ, ಅವರ

ಹೆಸರಿನಲ್ಲಿ ಸ್ಥಾಪಿಸಿರುವ ಸಂಶೋಧನಾ ಸಂಸ್ಥೆಗೆ ಹೆಚ್ಚು ಅನುದಾನ ಬಿಡುಗಡೆ ಮಾಡಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಉತ್ತಮ ಕೆಲಸ-ಕಾರ್ಯಗಳಾಗುವಂತೆ ಕ್ರಮ ಕೈಗೊಳ್ಳಬೇಕು. ಆಗಸ್ಟ್ 20ನೇ ತಾರೀಖು ಅವರ ಜನ್ಮದಿನವಾಗಿದ್ದು ಅದೇ ದಿನ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅವರ ಜನ್ಮ ದಿನಾಚರಣೆಯನ್ನು ಆಚರಿಸುವಂತಾಗಬೇಕು ವಿನಾ ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಇಲ್ಲವೇ ಬೆಂಗಳೂರಿನಲ್ಲಿ ಎಲ್ಲಿಯೋ ಒಂದೆಡೆ ಮಂತ್ರಿಗಳ ಸಮಾವೇಶದ ರೀತ್ಯ ಅವರ ಹುಟ್ಟು ಹಬ್ಬವನ್ನು ಆಚರಿಸುವಂತಾಗಬಾರದು. ವಿಧಾನಸೌಧದ ಮುಂದೆ ಅವರ ಪ್ರತಿಮೆಯನ್ನು ಸ್ಥಾಪಿಸಿದ್ದು ಆ ಪ್ರತಿಮೆ ಅವರನ್ನು ಹೋಲುತ್ತಿಲ್ಲದಿರುವುದರಿಂದ ಅದನ್ನು ಬದಲಾವಣೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಗೋಪಾಲ್ ಭಂಡಾರಿ (ಕಾರ್ಕಳ) :— ಮಾನ್ಯ ಅಧ್ಯಕ್ಷರೆ, ದಿವಂಗತ ದೇವರಾಜ್ ಅರಸು ಸಂಶೋಧನಾ ಸಂಸ್ಥೆ 1993ರಲ್ಲಿ ಉನ್ನತ ಧ್ಯೇಯೋದ್ದೇಶವಿಟ್ಟುಕೊಂಡು ಪ್ರಾರಂಭವಾಯಿತು. ಅಂದು ಮುಖ್ಯಮಂತ್ರಿಗಳಾಗಿದ್ದ ಶ್ರೀ ವೀರಪ್ಪ ಮೊಯಿಲಿಯವರು ಈ ಸಂಸ್ಥೆಯನ್ನು ಪ್ರಾರಂಭ ಮಾಡಿದರು. ಸಂಸ್ಥೆಯ ಧ್ಯೇಯೋದ್ದೇಶ ಹಾಗೂ ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು ಗಮನಿಸಿದಾಗ ಅತ್ಯಂತ ಕಷ್ಟದ ಪರಿಸ್ಥಿತಿ ಹಾಗೂ ಸಮಸ್ಯೆಗಳನ್ನು ಎದುರಿಸುತ್ತಿರುವಂಥ ಹಿಂದುಳಿದ ವರ್ಗಗಳಿದ್ದು, ಈ ವರ್ಗದವರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ವಿಚಾರ ಸಂಕೀರ್ಣಗಳು ಹಾಗೂ ಮತ್ತಿತರ ಕಾರ್ಯಕ್ರಮಗಳನ್ನು ರೂಪಿಸುವ ವ್ಯವಸ್ಥೆ ಇದೆ. ಉದಾಹರಣೆಗೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಕುಡುಬಿ' ಜನಾಂಗವಿದ್ದು, ಈ ಜನಾಂಗ ಸಾಕಷ್ಟು ಹಿಂದುಳಿದಿದ್ದು ಸರ್ಕಾರದ ಎಲ್ಲಾ ರೀತಿಯ ಸವಲತ್ತುಗಳಿಂದ ವಂಚಿತವಾಗಿದೆಯಲ್ಲದೆ, ಇನ್ನಷ್ಟು ಸಣ್ಣ-ಪುಟ್ಟ ಜನಾಂಗಗಳೂ ಸಹ ಇದೆ. ಆದುದರಿಂದ, ಈ ಜನಾಂಗಗಳ ಬಗ್ಗೆ ಸಂಸ್ಥೆಯು ಅಧ್ಯಯನ ನಡೆಸಿ ಅವರ ಏಳಿಗೆಗೆ ಸರ್ಕಾರ ಶ್ರಮಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಅಧ್ಯಕ್ಷರೆ, ದಿವಂಗತ ದೇವರಾಜ್ ಅರಸುರವರ ಹೆಸರಿನಲ್ಲಿ ಒಂದು ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಲಾಗಿದ್ದು, ಸದರಿ ಸಂಸ್ಥೆಯನ್ನು ಮುಚ್ಚುವುದು ಒಳ್ಳೆಯದು ಎಂಬುದು ನನ್ನ ಭಾವನೆಯಾಗಿದೆ. ಸಂಸ್ಥೆಗೆ ಹೆಚ್ಚು ಅನುದಾನ ನೀಡಿ ಬಲಪಡಿಸುವುದಕ್ಕಾಗುವುದಿಲ್ಲವೆಂದಾಗ ಇಂತಹ ಸಂಸ್ಥೆಯನ್ನು ಮುಚ್ಚುವುದು ಒಳ್ಳೆಯದೆಂದು ನನಗನಿಸುತ್ತದೆ. ಮಾನ್ಯ ಸಚಿವರು ಮಾತನಾಡುತ್ತಾ ಸಂಸ್ಥೆಯ ಐದು ಧ್ಯೇಯೋದ್ದೇಶಗಳನ್ನು ತಿಳಿಸಿದ್ದು, ಸಂಸ್ಥೆ ಪ್ರಾರಂಭವಾದಂದಿನಿಂದ ಇವೊತ್ತಿನವರೆವಿಗೂ ಏನೇನು ಕೆಲಸ ಕಾರ್ಯಗಳನ್ನು ಹಮ್ಮಿಕೊಂಡಿದೆ ಎಂಬುದರ ಬಗ್ಗೆ ಒಮ್ಮೆ ರಿವ್ಯೂ ಮಾಡುವುದು ಒಳ್ಳೆಯದು. ಇಲ್ಲದಿದ್ದರೆ, ಉನ್ನತ ಧ್ಯೇಯೋದ್ದೇಶವಿಟ್ಟುಕೊಂಡು ಪ್ರಾರಂಭವಾದ ಸಂಸ್ಥೆಯಿಂದ ಸಮಾಜದಲ್ಲಿ ಸಾಕಷ್ಟು ಬದಲಾವಣೆಯಾಗುತ್ತದೆಂದು

ಸಾಕಷ್ಟು ನಿರೀಕ್ಷೆಯಿಟ್ಟುಕೊಂಡಿರುವ ಅವರ ಅಭಿಮಾನಿಗಳಿಗೆ ಭ್ರಮನಿರಶನವುಂಟಾಗುತ್ತದೆ. ಕಾರಣ, ಕಟ್ಟಡದ ಬಾಡಿಗೆಗೆ 8,40,000 ರೂಪಾಯಿ, ದೇವರಾಜ್ ಅರಸುರವರ ಜನ್ಮ ದಿನೋತ್ಸವದ ಆಚರಣೆಗಾಗಿ 6 ಲಕ್ಷ ರೂಪಾಯಿ, ಸಂಬಳಕ್ಕೆ 8 ಲಕ್ಷ ರೂ. ಹಾಗೂ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಏಳಿಗೆ ಕುರಿತು ಅಧ್ಯಯನ ಹಾಗೂ ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳುವುದಕ್ಕೆ 4 ಲಕ್ಷ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದು ಒಟ್ಟಾರೆ 30 ಲಕ್ಷ ರೂಪಾಯಿಗಳನ್ನು ವ್ಯಯ ಮಾಡುವ ಅವಶ್ಯಕತೆ ಇತ್ತೆ? ಇದರ ಹೊರತಾಗಿ ಅನೇಕ ಧ್ಯೇಯೋದ್ದೇಶಗಳನ್ನಿಟ್ಟುಕೊಂಡು ಸ್ಥಾಪನೆಯಾದ ಸಂಸ್ಥೆ ಇಷ್ಟು ವರ್ಷಗಳಾದರೂ ಅದನ್ನು ಈಡೇರಿಸುವುದಕ್ಕೆ ಏಕೆ ಸಾಧ್ಯವಾಗಲಿಲ್ಲ? ತಾವು ಸಮಾಜ ಕಲ್ಯಾಣ ಸಚಿವರಾಗಿ ಅಧಿಕಾರ ವಹಿಸಿಕೊಂಡು ಎರಡು ವರ್ಷಗಳಾಗಿದ್ದು, ಸಂಸ್ಥೆಯನ್ನು ಬಲಪಡಿಸುವ ದಿಸೆಯಲ್ಲಿ ತಾವು ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೀರೆಂದು ವಿವರಿಸಬೇಕು.

ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ) :— ಮಾನ್ಯ ಅಧ್ಯಕ್ಷರೆ, 1993ರಲ್ಲಿ ದೇವರಾಜ್ ಅರಸು ಸಂಶೋಧನಾ ಸಂಸ್ಥೆ ಪ್ರಾರಂಭವಾಗಿದ್ದು, ಸಂಸ್ಥೆಯ ಕಾರ್ಯ ಚಟುವಟಿಕೆ ಹಾಗೂ ಸಂಶೋಧನೆ ಕುರಿತಂತೆ ಇವೊತ್ತಿನವರೆವಿಗೆ ಆಗಿರುವ ಕೆಲಸ-ಕಾರ್ಯಗಳ ಕುರಿತು ವಿವರವಾದ ಮಾಹಿತಿಯನ್ನು ಮಾನ್ಯ ಸದಸ್ಯರುಗಳಿಗೆ ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರರಲ್ಲಿ ವಿನಂತಿಸಿಕೊಳ್ಳುತ್ತೇನೆ. ಇದಲ್ಲದೆ, ಸಂಸ್ಥೆಯ ಅಧ್ಯಕ್ಷರು, ಸದಸ್ಯರು ಯಾರು? ಇಷ್ಟು ವರ್ಷಗಳಿಂದ ಸಂಸ್ಥೆಯು ಏನೇನು ಸಾಧಿಸಿದೆ? ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ, ಮುಂತಾದ ವಿಷಯಗಳ ಕುರಿತಂತೆ ಮಾಹಿತಿ ಒದಗಿಸಿಕೊಡಬೇಕು. ದೇವರಾಜ್ ಅರಸುರವರು ಹಿಂದುಳಿದವರ ಏಳಿಗೆಯ 'ಹರಿಕಾರ'ರಾಗಿದ್ದು ಅವರ ಹೆಸರಿನಲ್ಲಿ ಯಾವುದಾದರೊಂದು ಯೋಜನೆಯನ್ನು ಸರ್ಕಾರ ರೂಪಿಸಿ ಸದರಿ ವರ್ಗದರ ಸರ್ವಾಂಗೀಣ ಏಳಿಗೆಗೆ ಕ್ರಮ ಕೈಗೊಂಡರೆ ತನ್ಮೂಲಕ ಅವರಿಗೆ ನಿಜವಾದ ರೀತಿಯಲ್ಲಿ ಗೌರವ ಸೂಚಿಸಿದಂತಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) :— ಮಾನ್ಯ ಅಧ್ಯಕ್ಷರೆ, ಇವೊತ್ತಿನ ಬದಲಾದ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಸನ್ನಿವೇಶದಲ್ಲಿ ಆ ಮೆಮೊರ್ಯಾಂಡಮ್ ಆಫ್ ಆರ್ಟಿಕಲ್ಸ್‌ನಲ್ಲಿರತಕ್ಕ ಆಬ್ಜೆಕ್ಟೀವ್ಸ್ ಅನ್ನು ತಲುಪಲಿಕ್ಕೆ ಅಥವಾ ಸಾಧನೆ ಮಾಡಲಿಕ್ಕೆ ಈ ಸಂಸ್ಥೆಗೆ ಸಾಧ್ಯವಿದೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೆ, ಇದುವರೆವಿಗೂ ಅನೇಕ ಮಾನ್ಯ ಸದಸ್ಯರುಗಳು ಸಂಸ್ಥೆಯ ಕುರಿತು ಮಾತನಾಡಿದ್ದು, ಅವರು ಪ್ರಸ್ತಾಪಿಸಿರುವ ಪ್ರಶ್ನೆಗಳಿಗೆ ಉತ್ತರಿಸುವುದಾದರೆ ದಿವಂಗತ ದೇವರಾಜ್ ಅರಸುರವರ ಹೆಸರಿನಲ್ಲಿ ಸ್ಥಾಪನೆಯಾಗಿರುವ ಸಂಶೋಧನಾ ಸಂಸ್ಥೆ ಅರ್ಥಪೂರ್ಣವಾದ, ಅಪೂರ್ವವಾದ ಅಧ್ಯಯನ

ಕೇಂದ್ರವಾಗಬೇಕೆಂಬುದು ನನಗೂ ಸಂಪೂರ್ಣ ಮನವರಿಕೆಯಾಗಿದೆ. ಸಂಸ್ಥೆಗೆ ಪೂರ್ಣ ಪ್ರಮಾಣದ ನಿರ್ದೇಶಕರೊಬ್ಬರು ಇಲ್ಲದಿರುವುದರಿಂದ ಸಂಸ್ಥೆ ಮೂಲಕ ಹಮ್ಮಿಕೊಳ್ಳುವ ಕಾರ್ಯಕ್ರಮಗಳು ಕುಂಠಿತಗೊಳ್ಳಲು ಕಾರಣವಾಗಿದೆ. ಆದುದರಿಂದ, ಇದನ್ನು ಎಂದು ಅರ್ಥಪೂರ್ಣ ಸಂಸ್ಥೆಯನ್ನಾಗಿಸಲು ನಾನು ಎಲ್ಲಾ ರೀತಿಯ ಪ್ರಯತ್ನ ಮಾಡುತ್ತೇನೆ. ಮಾನ್ಯ ಹಿರಿಯ ಸದಸ್ಯರಾದ ಸಿಂಧ್ಯರವರು ಪ್ರಸ್ತಾಪಿಸಿರುವಂಥ ರೀತಿಯಲ್ಲಿ ಇವೊತ್ತಿನ ಬದಲಾಗಿರುವ ಆರ್ಥಿಕ ಪರಿಸ್ಥಿತಿ ಹಿನ್ನಲೆಯಲ್ಲಿ ಸಮಾಜದಲ್ಲಿರುವ ದರ್ಬಲ ವರ್ಗದವರ ಮೇಲೆ ಯಾವ ರೀತಿಯ ದುಷ್ಪರಿಣಾಮಗಳುಂಟಾಗಬಹುದೆಂಬ ಬಗ್ಗೆ ಅಧ್ಯಯನ ನಡೆಸುವುದು ಅತ್ಯಂತ ಜರೂರಾಗಿದ್ದು, ಈ ಕೆಲಸವನ್ನು ಸಂಸ್ಥೆ ವತಿಯಿಂದ ನಾನು ಖಂಡಿತವಾಗಿಯೂ ಮಾಡಿಸುತ್ತೇನೆ. ಇದರ ಜೊತೆಗೆ ಕೆಲವು ಆದ್ಯತೆಯ ಕಾರ್ಯಕ್ರಮಗಳನ್ನು ಸಂಸ್ಥೆಗೆ ವಹಿಸಿಕೊಟ್ಟಿದ್ದೇನೆ. ಉದಹರಣೆಗೆ, ಗಂಗಾ ಕಲ್ಯಾಣ ಯೋಜನೆ ಸೇರಿದಂತೆ ಇನ್ನಿತರ ಅನೇಕ ಆರ್ಥಿಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದು, ಇದು ಜನರ ಮೇಲೆ ಯಾವ ರೀತಿಯಾದ ಪರಿಣಾಮ ಬೀರಿದೆ ಹಾಗೂ ಜನರು ಎಷ್ಟರಮಟ್ಟಿಗೆ ಕಾರ್ಯಕ್ರಮಗಳ ಪ್ರಯೋಜನ ಪಡೆದಿದ್ದಾರೆ ಎಂಬುದನ್ನು ಸಮೀಕ್ಷೆ ನಡೆಸುವ ಜವಾಬ್ದಾರಿಯನ್ನೂ ಸಹ ವಹಿಸಿಕೊಡಲಾಗಿದೆ. ಇನ್ನು ಪುಸ್ತಕ ಪ್ರಕಟಿಸುವ ವಿಚಾರವಾಗಿ ಪ್ರಸ್ತಾಪಿಸಿದ್ದು, ಈ ಕುರಿತು ಪುಸ್ತಕವನ್ನು ಪ್ರಕಟಿಸಿ ಹೊರತರುವ ಅವಶ್ಯಕತೆಯಿದೆಯೆಂದು ಹೇಳುತ್ತಾ , ಇವೆರಡೂ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದರ ಜೊತೆಗೆ ಸಂಸ್ಥೆಗೆ ಒದಗಿಸಿರುವ ಅನುದಾನ ಬಹಳ ಕಡಿಮೆಯಿದ್ದು, ಏನೂ ಕೆಲಸವಾಗಿಲ್ಲವೆಂದು ತಿಳಿಸಿರುವುದಕ್ಕೆ ಹೇಳುವುದಾದರೆ, ದೇವರಾಜ್ ಅರಸುರಂತಹ ಒಬ್ಬ ವ್ಯಕ್ತಿ ಈ ರಾಜ್ಯದ ಮುಖ್ಯಮಂತ್ರಿಯಾಗಿ ಜಾರಿಗೆ ತಂದಂಥ ವಿಶಿಷ್ಟ ಕಾರ್ಯಕ್ರಮಗಳು, ಹೊಸ ವಿಚಾರಧಾರೆಗಳು ಜನರ ಹೃದಯದಲ್ಲಿ ಸದಾ ಹಸಿರಾಗಿರಲೆಂಬ ಕಾರಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅವರ ಹೆಸರಿನಲ್ಲಿ ನಿರ್ಮಿಸಿರುವ ವಿದ್ಯಾರ್ಥಿನಿಲಯಗಳು ದೇವಸ್ಥಾನಗಳಲ್ಲವೇ? ಇದನ್ನು ಕಂಡಾಗ ಇದು 'ದೇವರಾಜ್ ಅರಸುರವರ ಪ್ರತೀಕ'ವೆಂದು ನಿಮಗೆ ಕಾಣಬೇಕು. ಬರೀ ದುಡ್ಡು ಕಡಿಮೆ ಆಯಿತು ಎಂದು ಹೇಳುವುದಲ್ಲ. ಹಾವನೂರ್ ಆಯೋಗದ ವರದಿಯನ್ನು ರಾಜ್ಯದಲ್ಲಿ ಜಾರಿಗೆ ತಂದು ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ಸರ್ವಾಂಗೀಣ ಏಳಿಗೆಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಲ್ಲದೆ, ಇಂದಿಗೂ ಸಹ ಸದರಿ ವರ್ಗದವರ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಹಿನ್ನಲೆಯಲ್ಲಿ ಅವರ ವಿಚಾರಧಾರೆ, ವ್ಯಕ್ತಿತ್ವ ಅಡಗಿದೆಯೆಂಬ ಭಾವನೆ ನಿಮ್ಮ ಹೃದಯಹೊಕ್ಕರೆ ಸಾಕು, ಸಂಸ್ಥೆಗೆ ಪೂರ್ಣಾವಧಿಯ ನಿರ್ದೇಶಕರೊಬ್ಬರನ್ನು ಖಂಡಿತವಾಗಿಯೂ ನೇಮಿಸಿ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸುವ ದಿಕ್ಕಿನಲ್ಲಿ ಉತ್ತಮ ರೀತಿಯಲ್ಲಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುವುದಕ್ಕೆ ಕ್ರಮ ಕೈಗೊಳ್ಳುವುದಾಗಿ ಈ ಸದನಕ್ಕೆ ತಿಳಿಸಬಯಸುತ್ತೇನೆ.

11.40 ಎಂ.ಎಂ

ಶ್ರೀ ಅಂಜನಮೂರ್ತಿ :— ಮಾನ್ಯ ಅಧ್ಯಕ್ಷರೆ, ಜಿಲ್ಲಾ ಮಟ್ಟದಲ್ಲಿ ಈ ಸಮಿತಿಗಳನ್ನು ರಚನೆ ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬ ಬಗ್ಗೆ ಹೇಳಲಿಲ್ಲ. ಜಿಲ್ಲಾ ಮಟ್ಟದಲ್ಲಿ ವಿಚಾರವೇದಿಕೆಯನ್ನು ಸ್ಥಾಪನೆ ಮಾಡುತ್ತೀರೋ ಎಂಬ ಬಗ್ಗೆ ಹೇಳಲಿಲ್ಲ.

ಶ್ರೀ ಹೆಚ್.ಎಂ. ರೇವಣ್ಣ :— ಮಾನ್ಯ ಅಧ್ಯಕ್ಷರೆ, ರವಿವರ್ಮ ಕುಮಾರರವರ ಹಿಂದುಳಿದ ವರ್ಗದ ಬಗ್ಗಿನ ವರದಿ ಸರ್ಕಾರದ ಮುಂದಿದೆ. ವರದಿಯಲ್ಲೇನಿದೆ ಎಂಬ ಬಗ್ಗೆ ನಮಗೆ ಇದುವರೆಗೆ ಮಾಹಿತಿ ಸಿಕ್ಕಿಲ್ಲ. ಇದರ ಜೊತೆಗೆ ಶ್ರೀ ಮುನಿರಾಜುರವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿ ರಚನೆಯಾಗಿದೆ. ಅದಕ್ಕೆ ಇನ್ನೂ ಸದಸ್ಯರುಗಳನ್ನು ನೇಮಕಮಾಡಿರುವುದಿಲ್ಲ. ಹಿಂದೆ ಸರ್ಕಾರ ಈ ಸಮಿತಿಗೆ ಏನು ಕಾರ್ಯವ್ಯಾಪ್ತಿ ಕೊಟ್ಟಿತ್ತೋ ಅದು ಬದಲಾಗುತ್ತಿದೆ ಎಂಬ ಚಿಂತನೆ ಇದೆ, ಹಿಂದೆ ಇದ್ದ ಕಾರ್ಯವ್ಯಾಪ್ತಿಯೇ ಇರುತ್ತದೋ ಅಥವಾ ಬದಲಾವಣೆಯಾಗುತ್ತದೋ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ :— ತಮ್ಮ ಮೂಲ ಪ್ರಶ್ನೆಯಲ್ಲಿ ಅದು ಬರುವುದಿಲ್ಲ. ಇದಕ್ಕೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದು, ಇನ್ನು ದಿವಂಗತ ದೇವರಾಜ್ ಅರಸ್‌ರವರ ಪ್ರತಿಮೆ ಬದಲಾವಣೆ ಮಾಡುತ್ತೇವೆ, ಅದಕ್ಕೆ ಬೇಕಾಗಿರುವಂಥ ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ಅಂಜನಮೂರ್ತಿಯವರು ಕೇಳಿದ ಪ್ರಶ್ನೆಯ ಬಗ್ಗೆ ಹೇಳುವುದಾದರೆ, ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ, ವಿಚಾರವೇದಿಕೆಯನ್ನು ಹಮ್ಮಿಕೊಳ್ಳುವುದೇ ಇಲ್ಲ. ಎಲ್ಲೆಲ್ಲಿ ವಿಚಾರವೇದಿಕೆ ಮಾಡಬಹುದೋ ಅದನ್ನು ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಮಾಡಬಹುದು. ಮಾನ್ಯ ಸದಸ್ಯರಿಗೆ ಆಸಕ್ತಿ ಇದ್ದರೆ ಅವರ ಕ್ಷೇತ್ರದಲ್ಲೂ ಮಾಡಬಹುದು. ಆದ್ದರಿಂದ ಎಲ್ಲೆಲ್ಲಿ ಆಹ್ವಾನ ಬರುತ್ತಿದೆ ಅಂಥ ಕಡೆ ಅವಕಾಶ ಸಿಗುತ್ತದೆ.

ಶ್ರೀ ಅಂಜನಮೂರ್ತಿ :— ಇದರ ಬಗ್ಗೆ ಸರ್ಕಾರದಿಂದ ಸುತ್ತೋಲೆ ಬಂದರೆ ನಾವು ಸ್ಪಂದಿಸುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ :— ತಮ್ಮ ಕ್ಷೇತ್ರದಲ್ಲೂ ಮಾಡಬೇಕೆಂದು ಆಹ್ವಾನ ಬಂದರೆ ವಿಚಾರ ವೇದಿಕೆಯನ್ನು ಏರ್ಪಡಿಸುತ್ತೇವೆ. ಅದಕ್ಕೆ ಸರ್ಕಾರ ಹಿಂದು ಮುಂದು ನೋಡುವುದಿಲ್ಲ.

ಮಂಗಳೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಪ್ರದೇಶಾಭಿವೃದ್ಧಿ ಕಾಮಗಾರಿಗಳಿಗೆ ಎ.ಡಿ.ಬಿ. ನೆರವು.

292 (3034) ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿಗೆ ನಗರಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಪ್ರದೇಶಾಭಿವೃದ್ಧಿ ಕಾಮಗಾರಿಗಳಿಗಾಗಿ ಏಷ್ಯಾ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಮಂಜೂರಾಗಿರುವ ನೆರವಿನ ಮೊತ್ತವೆಷ್ಟು?

ಆ) ಮೇಲ್ಕಂಡ ಎ.ಡಿ.ಬಿ. ನೆರವನ್ನು ಉಪಯೋಗಿಸಿಕೊಳ್ಳದಿರಲು ಇರುವ ಕಾರಣಗಳೇನು;

ಇ) ಮೇಲ್ಕಂಡ ನೆರವನ್ನು ಯಾವ ಬಾಬಿಗಾಗಿ ಈವರೆಗೆ ಖರ್ಚು ಮಾಡಲಾಗಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) ರೂ. 306.27 ಕೋಟಿ

ಆ) ಈ ಯೋಜನೆಯನ್ನು ಡಿಸೆಂಬರ್ 2000ರಂದು ಉದ್ಘಾಟಿಸಲಾಗಿದೆ. ಹಾಗೂ 2001 ಜನವರಿಯಿಂದ 3 ಕರಾವಳಿ ಜಿಲ್ಲೆಗಳಲ್ಲಿ ಯೋಜನಾ ತಯಾರಿಕಾ ಚಟುವಟಿಕೆಯು ಪ್ರಾರಂಭಗೊಂಡಿರುತ್ತದೆ. ಸಮೀಕ್ಷೆ ಮತ್ತು ತಾಂತ್ರಿಕ ವಿನ್ಯಾಸಗಳ ತಯಾರಿಕೆ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಈವರೆಗೆ ಈ ಯೋಜನೆಯಡಿ ಅವಶ್ಯಕ ಭೂ ಸ್ವಾಧೀನಕ್ಕಾಗಿ ಮತ್ತು ಯೋಜನಾ ತಯಾರಿಕೆಗಳಿಗೆ ಮತ್ತು ಮೇಲಿನಂತೆ ಕಾರ್ಯಗಳಿಗಾಗಿ ಹಣವನ್ನು ವ್ಯಯ ಮಾಡಲಾಗಿದೆ.

ಶ್ರೀ ವಿಜಯಕುಮಾರ್ ಶೆಟ್ಟಿ :— ಮಾನ್ಯ ಅಧ್ಯಕ್ಷರೆ, ಇದು ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಬಹಳ ಗಹನವಾದ ವಿಚಾರವಾಗಿದೆ. With due respect to Sri. D.B. Chandregowda Hon'ble Law Minister, ನನ್ನ ಪ್ರಶ್ನೆಗೆ ನಗರಾಭಿವೃದ್ಧಿ ಸಚಿವರೇ ವಿವರವಾದ ಉತ್ತರವನ್ನು ಕೊಟ್ಟರೆ ಒಳ್ಳೆಯದೆಂದು ವಿನಂತಿ. ಮಾನ್ಯ ಚಂದ್ರೇಗೌಡರು ಕೇವಲ ಬರೆದ ಉತ್ತರವನ್ನು ಕೊಡಬಹುದು. 306 ಕೋಟಿ ರೂಪಾಯಿಗಳನ್ನು ಈ ಪ್ರಾಜೆಕ್ಟ್‌ನಲ್ಲಿ ಖರ್ಚು ಮಾಡಲು ವ್ಯವಸ್ಥೆಗಳು ಆಗುತ್ತಿದೆ. ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಸಚಿವರೇ ಇದ್ದು ಉತ್ತರ ಕೊಟ್ಟಿದ್ದರೆ ಒಳ್ಳೆಯದಿತ್ತು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೆ, ಅವರಿಗೆ ಉತ್ತರ ಬೇಕಾದರೆ ಎಲ್ಲಾ ಮಾಹಿತಿ ಇದೆ ಕೊಡುತ್ತೇನೆ. ಬೇಡವಾದರೆ ಮುಂದಕ್ಕೆ ಹಾಕಿ, ನನ್ನ ಅಭ್ಯಂತರವೇನಿಲ್ಲ. ಜಾಯಿಂಟ್ ರೆಸ್ಪಾನ್ಸಿಬಿಲಿಟಿಯಾಗಿ ಯಾವುದೇ ಸಚಿವರು ಉತ್ತರವನ್ನು ಕೊಡಬಹುದು, ಈ ತತ್ವ ಅವರಿಗೆ ಗೊತ್ತಾಗದಿದ್ದರೆ ನಾವೇನೂ ಮಾಡಲು ಆಗುವುದಿಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ :— ಸಚಿವರು ಈ ಕಾಮಗಾರಿಯನ್ನು ಉದ್ಘಾಟನೆ ಮಾಡಿ ಬಂದಿದ್ದಾರೆ, ಆದರೆ ಅದರ ಬಗ್ಗೆ ಇದುವರೆಗೆ ಯಾವುದೇ ಕ್ರಮವನ್ನೂ ಹಮ್ಮಿಕೊಂಡಿಲ್ಲ. 306 ಕೋಟಿ ರೂಪಾಯಿ ವೆಚ್ಚದ ಈ ಯೋಜನೆಯಿಂದ ನಮ್ಮ ತೆರಿಗೆ ಎಲ್ಲಿ ಜಾಸ್ತಿಯಗುತ್ತದೋ ಎಂದು ದಕ್ಷಿಣ ಕನ್ನಡ ಜಿಲ್ಲೆಯ ನಾಗರೀಕರು ಕಾತುರರಾಗಿದ್ದಾರೆ. ಆದ್ದರಿಂದ ಇದರ ಬಗ್ಗೆ ವಿವರವಾದ ಮಾಹಿತಿ ಬೇಕಾಗಿದೆ. ಆದ್ದರಿಂದ ನಾನು ಪ್ರಾರಂಭದಲ್ಲೇ with due respect to the Hon'ble Law Minister ಎಂದು ಹೇಳಿದ್ದೇನೆ. ತಾವು ಉತ್ತರ ಕೊಡುವುದಾದರೆ ನನ್ನ ಅಭ್ಯಂತರವೇನಿಲ್ಲ. ನೀರು ಸರಬರಾಜಿಗೆ, ಒಳಚರಂಡಿ ವ್ಯವಸ್ಥೆಗೆ, ಮಾರುಕಟ್ಟೆ ಕಟ್ಟಡಕ್ಕೆ ಈ ರೀತಿ ಯಾವ್ಯಾವುದಕ್ಕೆ ಎಷ್ಟೆಷ್ಟು ಖರ್ಚು ಮಾಡುತ್ತಾರೆ ಎಂಬ ಬಗ್ಗೆ ವಿವರವಾದ ಮಾಹಿತಿ ಕೊಡಬೇಕು. ನಮ್ಮ ಮಂಗಳೂರು ನಗರ ಪಾಲಿಕೆಯ ವಾರ್ಷಿಕ ವರಮಾನ ಕೇವಲ 32 ಕೋಟಿ ರೂ.ಗಳು 2006ನೇ ಇಸವಿಯಿಂದ ಈ ಯೋಜನೆಯ ರೀಪೇಮೆಂಟ್ ರೂಪದಲ್ಲಿ 27 ಕೋಟಿ ರೂ. ಕೊಡಬೇಕಾಗಿದೆ. ಇಷ್ಟೊಂದು ಮೊಬಲಗನ್ನು ನಾವು ಯಾವ ರೀತಿಯಲ್ಲಿ ಕ್ರೋಢೀಕರಿಸಲು ಸಾಧ್ಯವಿದೆ? ಇದರ ಬಗ್ಗೆ ಮಂಗಳೂರಿನ ಜನರು ಕಾತುರರಾಗಿದ್ದಾರೆ.

ಅಧ್ಯಕ್ಷರು :— ತಾವು ಅದರ ಬಗ್ಗೆ ವಿವರಣೆಯನ್ನು ಕೇಳಿಲ್ಲ. ಮೊತ್ತವೆಷ್ಟು ಎಂದು ಮಾತ್ರ ಪ್ರಶ್ನೆ ಕೇಳಿದ್ದೀರಿ.

ಶ್ರೀ ವಿಜಯಕುಮಾರ್ ಶೆಟ್ಟಿ :— ಮಾನ್ಯ ಮುಖ್ಯಮಂತ್ರಿಯವರು ಈ ಪ್ರಾಜೆಕ್ಟನ್ನು ನಮ್ಮ ಜಿಲ್ಲೆಗೆ ಕೊಡುತ್ತಿರುವುದು ಬಹಳ ಸಂತೋಷ. ಕೆಲಸ ಪ್ರಾರಂಭವಾಗುತ್ತಿದೆ. ಆದ್ದರಿಂದ ಇದರ ಬಗ್ಗೆ ಪೂರ್ಣವಾದ ವಿವರಣೆ ಕೊಟ್ಟಿದ್ದರೆ ಒಳ್ಳೆಯದಿತ್ತು.

ಅಧ್ಯಕ್ಷರು :— ತಾವು ಉಪ ಪ್ರಶ್ನೆಯನ್ನು ಕೇಳದೆಯೇ ಉತ್ತರವನ್ನು ಕೊಡಲು ಹೇಗೆ ಸಾಧ್ಯವಾಗುತ್ತದೆ?

ಶ್ರೀ ವಿಜಯಕುಮಾರ್ ಶೆಟ್ಟಿ :— ನಾನು ಕೇಳದಿದ್ದರೂ ಅದರ ಬಗ್ಗೆ ಮಾಹಿತಿ ಇದ್ದರೆ ಕೊಟ್ಟುಬಿಡಲಿ.

ಶ್ರೀ ಡಿ.ಬಿ. ಚಂದ್ರೇಗೌಡ :— ಏಷಿಯನ್ ಅಬಿವೃದ್ಧಿ ಬ್ಯಾಂಕ್‌ನಿಂದ ಕರಾವಳಿಯ ಮೂರು ಜಿಲ್ಲೆಗಳಿಗೆ ಹತ್ತು ಪಟ್ಟಣಗಳಿಗೆ ಬೇಕಾದಂಥ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ತರುತ್ತಿರುವ ಹಣ ಇದಾಗಿದೆ. ಒಟ್ಟು ಹಣ 1057 ಕೋಟಿ ರೂಪಾಯಿಗಳು. ಈ 1057 ಕೋಟಿ ಸಾಲದಲ್ಲಿ 60 ಪರ್‌ಸೆಂಟ್ ಅನುದಾನ 40 ಪರ್‌ಸೆಂಟ್ ಸಾಲ. ಆದರಲ್ಲಿ ಮಂಗಳೂರು ನಗರಕ್ಕೆ 306 ಕೋಟಿ ರೂ.ಗಳು ಇದರಲ್ಲಿ 180 ಕೋಟಿ ರೂ.

ಅನುದಾನ ಉಳಿದ ಹಣ ಸಾಲದ ರೂಪದ್ದು. ಸಾಲದ ಹಣಕ್ಕೆ ಮಾತ್ರ 13 ಪರ್ಸೆಂಟ್ ಬಡ್ಡಿ ಕೊಡಬೇಕಾಗುತ್ತದೆ. ಅಭಿವೃದ್ಧಿಯೂ ಆಗಬೇಕು ಸಾಲವೂ ಆಗಬಾರದು ಬಡ್ಡಿ ಕೊಡದಂತಾಗಬೇಕು' ಎಂದರೆ ಹೇಗೆ? ಅಕ್ಕನ ಮನೆಗೆ ಊಟಕ್ಕೆ ಹೋಗಿ ಅಕ್ಕಿ ಖರ್ಚಾಗಬಾರದು ಎಂದರೆ ಆಗುವುದಿಲ್ಲ. ಆಧುನಿಕ ವ್ಯವಸ್ಥೆಗಳು ಬೇಕು ಎನ್ನುವುದಾದರೆ ಸಾಲವನ್ನು ಮಾಡಬೇಕು. ರಾಜ್ಯ ಸರ್ಕಾರ ಈ ಕೆಲಸವನ್ನು ಮಾಡಿದೆ. ಈ ಯೋಜನೆ ಡಿಸೆಂಬರ್ 2000 ರಲ್ಲಿ ಪ್ರಾರಂಭವಾಗಿದೆ. 19.5.2000ದಲ್ಲಿ ಒಪ್ಪಂದಕ್ಕೆ ಸಹಿಯಾಗಿದೆ. ಸೆಪ್ಟೆಂಬರ್ 21, 2000 ರಂದು ಸಾಲವನ್ನು ಘೋಷಣೆ ಮಾಡಿದ್ದಾರೆ. ಅಧಿಕಾರಯುತ ಸಮಿತಿಯನ್ನು 17.10.2000 ರಲ್ಲಿ ಮಾಡಿದ್ದಾರೆ. ಸಚಿವ ಸಂಪುಟ 7.12.2000ದಂದು ಇದಕ್ಕೆ ಒಪ್ಪಿಗೆ ನೀಡಿದೆ. 11.1.2001 ರಂದು ಇದರ ಬಗ್ಗೆ ಮಂಗಳೂರಿನಲ್ಲಿ ಮೂರು ಗಂಟೆಗಳ ಕಾಲ ಸುದೀರ್ಘ ಚರ್ಚೆ ಮಾಡಿದ್ದೇವೆ. ಕುಂದಾಪುರ, ಮಂಗಳೂರು, ಉಡುಪಿ, ಉಳ್ಳಾಳದಲ್ಲಿ, ಪುತ್ತೂರಿನಲ್ಲಿ ಎಲ್ಲಾ ಕಡೆ ಸಭೆಗಳು ನಡೆದಿದೆ. ಇನ್ನೂ ವಿವರ ಅವರಿಗೆ ಬೇಕಾಗಿದ್ದರೆ ಒದಗಿಸಲು ಸಿದ್ಧನಾಗಿದ್ದೇನೆ. ಈ ಹಣವನ್ನು ವಾಪಸ್ ಮಾಡಲು 25 ವರ್ಷ ಅವಕಾಶವಿದೆ. ಅದರಲ್ಲಿ ಮೊದಲ ಐದು ವರ್ಷ ಹಣವನ್ನು ಕೊಡಬೇಕಾಗಿಲ್ಲ. ಮಾನ್ಯ ಸದಸ್ಯರೇ ಹೇಳಿದಂತೆ 2006ರಿಂದ ಹಣವನ್ನು ಪಾವತಿ ಮಾಡಬೇಕಾಗುತ್ತದೆ. ಅವರಿಗೆ ಇನ್ನೂ ಏನಾದರೂ ಮಾಹಿತಿ ಬೇಕಾದಲ್ಲಿ ಒದಗಿಸುತ್ತೇನೆ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೆ, ನನಗೆ ಒಂದು ಕ್ಲಾರಿಫಿಕೇಷನ್ ಸಚಿವರಿಂದ ಬೇಕು. ಮಾನ್ಯ ಸಚಿವರು ಏಷಿಯನ್ ಅಭಿವೃದ್ಧಿ ಬ್ಯಾಂಕಿನಿಂದ ಪಡೆದಿರುವ ಒಟ್ಟು ಹಣದಲ್ಲಿ 60 ಪರ್ಸೆಂಟ್ ಅನುದಾನ, 40 ಪರ್ಸೆಂಟ್ ಸಾಲವೆಂದು ಹೇಳಿದರು. ನನ್ನ ಉಡಿಪಿ ಕ್ಷೇತ್ರಕ್ಕೆ 108 ಕೋಟಿ ಇದರಲ್ಲಿ ಬಂದಿದೆ. ಆದರೆ ನನಗೆ ಬಂದಿರುವ ಮಾಹಿತಿಯ ಪ್ರಕಾರ ಕೇಂದ್ರ ಸರ್ಕಾರಕ್ಕೆ ಎ.ಡಿ.ಬಿ.ನವರು 6 ಪರ್ಸೆಂಟ್ ಬಡ್ಡಿಯ ದರದಲ್ಲಿ ಸಾಲವನ್ನು ಕೊಡುತ್ತಿದ್ದಾರೆ, ಕೇಂದ್ರ ಸರ್ಕಾರದವರು ನಮಗೆ ಅಂದರೆ ರಾಜ್ಯ ಸರ್ಕಾರಕ್ಕೆ 13 ಪರ್ಸೆಂಟ್ ಬಡ್ಡಿಯಂತೆ ಸಾಲ ಕೊಡುತ್ತಿದ್ದಾರೆ. ಅದರಲ್ಲಿ 30 ಪರ್ಸೆಂಟ್ ಮಾತ್ರ ಅನುದಾನದ್ದು ಎಂದು ಎ.ಡಿ.ಬಿ.ಯಿಂದ ಲಿಖಿತ ಮೂಲಕ ನಮಗೆ ಕೊಟ್ಟಿದ್ದಾರೆ. ಮಾನ್ಯ ಸಚಿವರು ಇದರಲ್ಲಿ 60 ಪರ್ಸೆಂಟ್ ಅನುದಾನ 40 ಪರ್ಸೆಂಟ್ ಸಾಲ ಎಂದು ಹೇಳುತ್ತಿರುವುದರಿಂದ ನಮಗೆ ಬಹಳ ಸಂತೋಷವಾಗಿದೆ. ಹಾಗಿದ್ದರೆ ನಾವು ಇದನ್ನು ಖಂಡಿತವಾಗಿ ಒಪ್ಪಿಕೊಳ್ಳಲು ತಯಾರಾಗಿದ್ದೇವೆ. ಕೆಲಸ ಪ್ರಾರಂಭವಾದ ಮೊದಲ ಐದು ವರ್ಷ ಬಡ್ಡಿಯಲ್ಲಿ ರಿಯಾಯಿತಿ ಇದೆ. ಸಾಲದ ಮರುಪಾವತಿ ಐದು ವರ್ಷಗಳ ನಂತರ ಪ್ರಾರಂಭವಾಗುತ್ತದೆ. ಆದರೆ ಅನುದಾನ 60 ಪರ್ಸೆಂಟ್ ಎಂಬ ಬಗ್ಗೆ ಅವರು ಕ್ಲಾರಿಫಿಕೇಷನ್ ಕೊಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ :— ಶೇಕಡ 58 ಪರ್ಸೆಂಟ್ ಅನುದಾನ 42 ಪರ್ಸೆಂಟ್ ಸಾಲವೆಂದು ಮಾಹಿತಿ ಇದೆ. ನಾನು ದಾಮಶದ ಲೆಕ್ಕದಲ್ಲಿ 60 ಪರ್ಸೆಂಟ್ ಅನುದಾನ, 40 ಪರ್ಸೆಂಟ್ ಸಾಲವೆಂದು ಹೇಳಿದ್ದೇನೆ. ಇದರ ಬಗ್ಗೆ ಕಂಪ್ಯಾರಿಟೀವ್ಲಿ ಅನಾಲಿಸಿಸ್‌ನ ಸ್ಟೇಟ್‌ಮೆಂಟೇ ಬೇಕೆಂದರೆ ಕೊಡುತ್ತೇನೆ. ಆದರೆ ಏಷಿಯನ್ ಬ್ಯಾಂಕ್‌ನಲ್ಲಿ ಒಟ್ಟು ಸಾಲವನ್ನು ಮಾಡಿದಂಥ ಸಂದರ್ಭದಲ್ಲಿ ಇದು ಕ್ರಮವಾಗಿ 70 ಮತ್ತು 30 ಆಗುತ್ತದೆ.

ಶ್ರೀ ಯು.ಆರ್. ಸಭಾಪತಿ :— ಹಾಗಾದರೆ ನಮ್ಮ ನಗರ ಸಭೆಗಳಿಗೆ, ಮಹಾನಗರಪಾಲಿಕೆಗಳಿಗೆ 60 ಪರ್ಸೆಂಟ್ ಅನುದಾನದ ರೂಪದ್ದೇ?

ಶ್ರೀ ಡಿ.ಬಿ. ಚಂದ್ರೇಗೌಡ :— ಹೌದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿರುವುದು 60 ಪರ್ಸೆಂಟ್ ಅನುದಾನ, 40 ಪರ್ಸೆಂಟ್ ಸಾಲ

ಶ್ರೀ ಎನ್. ಯೋಗೇಶ್ ಭಟ್ :— ಮಾನ್ಯ ಅಧ್ಯಕ್ಷರೆ, ಎ.ಡಿ.ಬಿ.ನವರು ಕೇಂದ್ರ ಸರ್ಕಾರಕ್ಕೆ 6 ಪರ್ಸೆಂಟ್ ಬಡ್ಡಿಯಂತೆ ಕೊಡುತ್ತದೆ, ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ 9 ಪರ್ಸೆಂಟ್‌ನಂತೆ ಕೊಡುತ್ತದೆ. ರಾಜ್ಯ ಸರ್ಕಾರ ಕರ್ನಾಟಕ ಅರ್ಬನ್ ಡೆವಲಪ್‌ಮೆಂಟ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ವತಿಯಿಂದ ಮಂಗಳೂರು ಮಹಾ ನಗರಪಾಲಿಕೆಗೆ 13 ಪರ್ಸೆಂಟ್‌ನಂತೆ ಕೊಡುತ್ತದೆ. ಇಲ್ಲಿರುವ ತಾರತಮ್ಯದ ಬಗ್ಗೆ ನಾನು ಪ್ರಶ್ನೆ ಮಾಡುತ್ತಿದ್ದೇನೆ. ಇದು ಏಕೆ?

ಶ್ರೀ ಯು.ಆರ್. ಸಭಾಪತಿ :— ಕೇಂದ್ರ ಸರ್ಕಾರದವರು 14 ಪರ್ಸೆಂಟ್‌ನಂತೆ ರಾಜ್ಯ ಸರ್ಕಾರಕ್ಕೆ ಕೊಡುತ್ತಿದ್ದಾರೆ. ರಾಜ್ಯ ಸರ್ಕಾರ ಯಾವುದೇ ಚಾರ್ಜನ್ನು ಮಾಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು :— ಒಬ್ಬೊಬ್ಬರಾಗಿ ಮಾತನಾಡಿ.

ಶ್ರೀ ವಿಜಯಕುಮಾರ್ ಶೆಟ್ಟಿ :— ಮಾನ್ಯ ಅಧ್ಯಕ್ಷರೇ, ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಕೇಂದ್ರ ಸರ್ಕಾರಕ್ಕೆ ಶೇಕಡ 6 ರ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದೆ. ಗ್ರಾಂಟ್ ಅನ್ನು ಹೊರತುಪಡಿಸಿ ನಮಗೆ ರಾಜ್ಯ ಸರ್ಕಾರ ಶೇಕಡ 9.1 ರಷ್ಟು ಬಡ್ಡಿ ವಿಧಿಸುತ್ತಿದೆ. ಮಾನ್ಯ ಸಚಿವರಲ್ಲಿ ನನ್ನ ಒಂದು ಕಳಕಳಿ ಏನೆಂದರೆ, ನಮಗೆ ಇಷ್ಟೊಂದು ಮೊತ್ತವನ್ನು ಮರುಪಾವತಿ ಮಾಡಲು ಸಾಧ್ಯವಿಲ್ಲ. ಕನ್‌ಸ್ಟ್ರಕ್ಷನ್ ಪೀರಿಯಡ್ 3-4 ವರ್ಷಗಳಾಗುತ್ತದೆ. 2006 ರಿಂದ ನಾವು ಲೋನ್ ರೀಪೇಮೆಂಟ್ ಮಾಡುವುದನ್ನು ಶುರು ಮಾಡಬೇಕಾಗುತ್ತದೆ. ಪ್ರಥಮ ವರ್ಷದಲ್ಲಿ ನಾವು 27 ಕೋಟಿ ರೂಪಾಯಿಗಳಷ್ಟು ದೊಡ್ಡ ಮೊಬಲಗನ್ನು ಪಾವತಿಸಬೇಕಾಗಿರುತ್ತದೆ. ಮಂಗಳೂರು ಮಹಾ ನಗರಪಾಲಿಕೆಗೆ ಪ್ರಸ್ತುತ

ಇರುವಂತಹ ಇನ್‌ಕಂ ಕೇವಲ 31-32 ಕೋಟಿ ರೂಪಾಯಿಗಳು ಮಾತ್ರ. ನಾವು ಇಷ್ಟೊಂದು ವ್ಯತ್ಯಾಸವನ್ನು ಜನರಿಗೆ ಹೇರಲಿಕ್ಕೆ ಪ್ರಾರಂಭದಲ್ಲಿ ಕಷ್ಟವಾಗಬಹುದು. ಇದು ನಮ್ಮ ಕಳಕಳಿಯಾಗಿದೆ. ಇಡೀ ಜಿಲ್ಲೆಯಲ್ಲಿ ....

ಅಧ್ಯಕ್ಷರು :— ಏನಾದರೂ ಮಾಹಿತಿ ಪಡೆಯುವುದಕ್ಕಾಗಿ ಮಾತ್ರ ಉಪ ಪ್ರಶ್ನೆಗಳನ್ನು ಕೇಳಬೇಕು. ಆದರೆ ನೀವು ಯೋಜನೆ ಬಗ್ಗೆಯೇ ಇಲ್ಲಿ ಚರ್ಚೆ ಮಾಡುತ್ತಿದ್ದೀರಿ. ಪ್ರಶ್ನೋತ್ತರ ಅವಧಿಯಲ್ಲಿ ಯೋಜನೆ ಬಗ್ಗೆ ಚರ್ಚೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೇ, ನಮಗೆ ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು :— ತಾವು ಅದರ ಬಗ್ಗೆ ಬರೆದು ಕಳುಹಿಸಿ. ನಾನು ಅದನ್ನು ಪರಿಶೀಲಿಸುತ್ತೇನೆ. ಪ್ರಶ್ನೋತ್ತರ ಅವಧಿಯಲ್ಲಿ ಸಪ್ಲಿಮೆಂಟರೀಸ್ ಮಾತ್ರ ಕೇಳಬೇಕು, ಚರ್ಚೆ ಮಾಡಬಾರದು.

ಶ್ರೀ ವಿಜಯಕುಮಾರ್ ಶೆಟ್ಟಿ :— ಅರ್ಧ ಗಂಟೆ ಚರ್ಚೆಗೆ ನಮಗೆ ಅವಕಾಶ ಮಾಡಿ ಕೊಡುತ್ತೀರಾ?

ಅಧ್ಯಕ್ಷರು :— ತಾವು ಅದರ ಬಗ್ಗೆ ಬರೆದು ಕಳುಹಿಸಿ.

ಶ್ರೀ ಎನ್. ಯೋಗೀಶ್ ಭಟ್ :— ಮಾನ್ಯ ಅಧ್ಯಕ್ಷರೇ, ಬರುವಂತಹ ಸಾಲ ಡಾಲರ್ ರೂಪದಲ್ಲಿ ಬರುವುದರಿಂದ 25 ವರ್ಷಗಳ ನಂತರ 44 ರೂಪಾಯಿ ಇದ್ದದ್ದು 75 ರೂಪಾಯಿಗಳಾದರೂ ಕೂಡ ಕೇಂದ್ರ ಸರ್ಕಾರವೇ ಭರಿಸಬೇಕಾದ್ದರಿಂದ ಆ ಶೇಕಡ 3 ರಷ್ಟನ್ನು ಅವರೇ ಇಟ್ಟುಕೊಂಡಿದ್ದಾರೆ. ಕೇಂದ್ರ ರಾಜ್ಯ ಸರ್ಕಾರಕ್ಕೆ ಶೇಕಡ 9 ರಂತೆ ಕೊಟ್ಟರೂ ಕೂಡ ರಾಜ್ಯ ಸರ್ಕಾರ ಮಹಾನಗರ ಪಾಲಿಕೆಗೆ ಶೇಕಡ 13 ½ ರಷ್ಟು ಏಕೆ ಚಾರ್ಜ್ ಮಾಡುತ್ತಿದೆ? ಕಂಟಿಜೆನ್ಸಿ ಎಕ್ಸಪೆನ್ಸಸ್‌ಗೆ ಎಂದು ಶೇಕಡ 30-40 ರಷ್ಟು ಇಟ್ಟಿದ್ದಾರೆ. ಪಿಡಬ್ಲ್ಯೂಡಿಯಲ್ಲಿ ಕೂಡ ಶೇಕಡ 10ಕ್ಕಿಂತ ಹೆಚ್ಚು ಇಡುವುದಿಲ್ಲ. ಇಷ್ಟೊಂದು ಏಕೆ ನಿಗದಿ ಮಾಡಿದ್ದೀರಿ? ಇದರಲ್ಲಿ ಪಾರದರ್ಶಕತೆ ಏಕೆ ಇಲ್ಲ ...

ಅಧ್ಯಕ್ಷರು :— ನೀವು ಮತ್ತೆ ಯೋಜನೆ ಬಗ್ಗೆ ಡೀಟೈಲ್ಲಾಗಿ ಚರ್ಚೆಗೆ ಹೋಗುತ್ತಿದ್ದೀರಿ. ಕೇವಲ ಸಪ್ಲಿಮೆಂಟರಿ ಪ್ರಶ್ನೆಗಳನ್ನು ಮಾತ್ರ ಕೇಳಿ.

ಶ್ರೀ ಎನ್. ಯೋಗೀಶ್ ಭಟ್ :— ಇಲ್ಲಿ ಇಪ್ಲಿಮೆಂಟ್ ಮಾಡುವುದು ಕರ್ನಾಟಕ ಇನ್‌ಫ್ರಾಸ್ಟಕ್ಚರ್ ಡೆವಲಪ್‌ಮೆಂಟ್ ಕಾರ್ಪೋರೇಷನ್. ಮಹಾನಗರ ಪಾಲಿಕೆಯನ್ನಾಗಲೀ, ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಬೋರ್ಡ್‌ನ್ನಾಗಲೀ ಯಾರನ್ನೂ

ಕೂಡ ಕಾನ್ಫಿಡೆನ್ಸ್‌ಗೆ ತೆಗೆದುಕೊಂಡಿಲ್ಲ. ಈ ರೀತಿ ಮಾಡಿದರೆ ಹೇಗೆ? ನಾಳೆ ಹಣ ಕಟ್ಟುವವರು ಮಹಾನಗರಪಾಲಿಕೆ. ಇವರನ್ನು ಏಕೆ ವಿಶ್ವಾಸಕ್ಕೆ ತೆಗೆದುಕೊಳ್ಳುವುದಿಲ್ಲ. ಇದರಲ್ಲಿ ನಮಗೆ ಪಾರದರ್ಶಿಕತೆ ಬೇಕು.

ಅಧ್ಯಕ್ಷರು :— ನೀವು ಮತ್ತೆ ಮತ್ತೆ ಯೋಜನೆ ಬಗ್ಗೆಯೇ ಚರ್ಚೆ ಮಾಡುತ್ತಿದ್ದೀರಿ.

ಶ್ರೀ ವಿಜಯಕುಮಾರ್ ಶೆಟ್ಟಿ :— ಮಾನ್ಯ ಅಧ್ಯಕ್ಷರೇ, ಇಷ್ಟೊಂದು ದೊಡ್ಡ ಪ್ರಾಜೆಕ್ಟ್ ಅನ್ನು ಮಾನ್ಯ ಮುಖ್ಯಮಂತ್ರಿಗಳು ನಮಗೆ ಕೊಟ್ಟಿರುವುದು ನಿಜಕ್ಕೂ ನಮಗೆ ಬಹಳ ಸಂತೋಷಕರವಾದ ವಿಷಯವಾಗಿದೆ. ಆದರೆ ರಾಜ್ಯ ಸರ್ಕಾರದಿಂದ ಇದಕ್ಕೆ ಕೊಡುವಂತಹ ಗ್ರಾಂಟ್ ಅನ್ನು ಹೆಚ್ಚು ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ :— ಇಲ್ಲಿ ನಾನೊಂದು ಸ್ಪಷ್ಟೀಕರಣ ಕೊಡಬಯಸುತ್ತೇನೆ. ಈ ಯೋಜನೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಲ್ಲ. ಹಿಂದಿನ ಸರ್ಕಾರ ಅಧಿಕಾರದಲ್ಲಿ ಇರುವಾಗಲೇ ಅದರ ಬಗ್ಗೆ ಎಲ್ಲಾ ...

(ಗೊಂದಲ)

ಶ್ರೀ ವಿಜಯಕುಮಾರ್ ಶೆಟ್ಟಿ :— ಅದರ ಮೊದಲಿನ ಸರ್ಕಾರದಿಂದಲೇ ಅದಕ್ಕೆ ಪ್ಲಾನ್ ಎಸ್ಟಿಮೇಷನ್ ಮಾಡಲಿಕ್ಕೆ ನಾವು ಪ್ರಾರಂಭ ಮಾಡಿದ್ದೇವೆ .....

ಅಧ್ಯಕ್ಷರು :— ಮಾನ್ಯ ವಿಜಯಕುಮಾರ್ ಶೆಟ್ಟಿರವರೇ, ನಾನು ಆಗಲೇ ಹೇಳಿದಂತೆ ಇದರ ಬಗ್ಗೆ ಅರ್ಧ ಗಂಟೆ ಚರ್ಚೆ ಮಾಡಲಿಕ್ಕೆ ತಾವು ಬರೆದು ಕೊಡಿ. ಆಗ ನೀವು ಎಲ್ಲಾ ಚರ್ಚೆ ಮಾಡುವಿರಂತೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯೂ ಸಹ ಈ ಎ.ಡಿ.ಬಿ. ಯೋಜನೆಯಲ್ಲಿ ಸೇರಿದೆ. ನನ್ನ ಕ್ಷೇತ್ರವಾದ ಅಂಕೋಲಾ ಸಹಾ ಈ ಯೋಜನೆಯಲ್ಲಿ ಸೇರಿದೆ. ಮಾನ್ಯ ಸದಸ್ಯರಾದ ಯೋಗೀಶ್ ಭಟ್‌ರವರು ಬಹಳ ಗಂಭೀರವಾದಂತಹ ಕೆಲವೊಂದು ಪ್ರಶ್ನೆಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆ ಬಗ್ಗೆ ಸರ್ಕಾರದಿಂದ ಸಮಗ್ರವಾದಂತಹ ಉತ್ತರವನ್ನು ನಾನು ಬಯಸುತ್ತೇನೆ. ಅಲ್ಲಿ ಒಂದು ಸಲಹಾ ಸಮಿತಿ ಎಂದು ಮಾಡಿದ್ದಾರೆ. ಆದರೆ ಸಲಹಾ ಸಮಿತಿಯ ಯಾವ ಅಭಿಪ್ರಾಯಕ್ಕೂ ಮನ್ನಣೆ ಇಲ್ಲ. ಇವರು ನಾರ್ಮ್ಸ್ ಅನ್ನು ಇಲ್ಲಿಂದಲೇ ಸೆಟ್ ಮಾಡಿ ಕಳುಹಿಸಿದ್ದಾರೆ. ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನಿಂದಲೇ ನಾರ್ಮ್ಸ್ ಬಂದಿದೆ. ಏನೋ ನನಗೆ ಗೊತ್ತಿಲ್ಲ. ನಾರ್ಮ್ಸ್ ಪ್ರಕಾರ ಒಳಚರಂಡಿ ಮಾಡಲೇಬೇಕು. ನಮ್ಮ ಊರಿನಲ್ಲಿ ಒಳಚರಂಡಿ ಮಂಡಳಿ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ಟ್ರೀಟ್‌ಮೆಂಟ್

ಪ್ಲಾಂಟ್ ಅನ್ನು ಮಾಡಲಿಕ್ಕೇ ಜಾಗವಿಲ್ಲ. ಇವರು ಒಳಚರಂಡಿ ಮಾಡಿಬಿಡುತ್ತಾರೆ. ಏಕೆಂದರೆ ಇವರಿಗೆ ದುಡ್ಡು ಖರ್ಚಾಗಬೇಕಲ್ಲವೇ? ಇವರು ತನ್ಮೂಲಕ ತಮ್ಮ ಸಾಧನೆ ಇದು ಎಂಬುದನ್ನು ತೋರಿಸಿಕೊಳ್ಳಬೇಕಲ್ಲವೇ? ಹೀಗಾಗಿ ಅರ್ಥಹೀನವಾದಂತಹ ಅಭಿವೃದ್ಧಿಯನ್ನು ನಾವು ಮಾಡುತ್ತಿದ್ದೇವೆ. ಅಲ್ಲಿ ...

ಅಧ್ಯಕ್ಷರು :— ಅಲ್ಲಿ ಕೆಲಸವಿನ್ನೂ ಪ್ರಾರಂಭವೇ ಆಗಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ನೀವು ಸಲಹಾ ಸಮಿತಿಯ ಅಭಿಪ್ರಾಯವನ್ನು ತೆಗೆದುಕೊಳ್ಳಿ ಅದರ ಅಭಿಪ್ರಾಯವನ್ನು ನೀವು ತೆಗೆದುಕೊಳ್ಳದೆ ಅವರ್‍ಯಾರೋ ನಾಮ್ಸ್ ಸೆಟ್ ಮಾಡಿದ್ದನ್ನು ಏತಕ್ಕಾಗಿ ಇಂಪ್ಲಿಮೆಂಟ್ ಮಾಡಲು ಹೊರಟಿದ್ದೀರಿ ? ...

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೇ, ಅವರಿಗೆ ಪ್ರಶ್ನೆಗಳಿಗೆ ಉತ್ತರ ಬೇಕು ಎನ್ನುವುದಾದರೆ ನಾವು ಅದನ್ನು ಕೊಡಬಹುದು. ಅವರಿಗೆ ಈ ಪ್ರಾಜೆಕ್ಟಿನ ಅಗತ್ಯವಿಲ್ಲ ಎಂದೆನಿಸಿದರೆ ಅವರು ಆ ಬಗ್ಗೆ ಸರ್ಕಾರಕ್ಕೆ ಬರೆದು ತಿಳಿಸಬಹುದು. ...

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಸ್ಥಳೀಯ ಸಲಹಾ ಸಮಿತಿಯ ಅಭಿಪ್ರಾಯ ಪಡೆದುಕೊಳ್ಳಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಜನಾಭಿಪ್ರಾಯ ಪಡೆದು ಈ ಯೋಜನೆಗಳನ್ನೆಲ್ಲಾ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವ ಯಾವ ಅಭಿವೃದ್ಧಿ ಕಾರ್ಯಗಳು ಯಾವ ಯಾವ ಕಾಲಕ್ಕೆ ಆಗಬೇಕೋ ಅದು ಆಗಲೇಬೇಕು. ನಮ್ಮ ಉತ್ಪತ್ತಿ ಇವತ್ತು 5 ರೂಪಾಯಿ ಇದೆ. ನಾವು ಸಾಲ ಮಾಡುವುದಕ್ಕೆ ತಯಾರಾಗಿಲ್ಲ ಎಂದರೆ, ಅದು 4½ ರೂಪಾಯಿಗಳಿಗೆ ಇಳಿಯುತ್ತದೆಯೇ ಹೊರತು 6 ರೂಪಾಯಿಗಳಿಗೆ ಏರುವುದಿಲ್ಲ. ಒಟ್ಟಾರೆಯಾಗಿ ಬೇಕಾಗಿರತಕ್ಕಂಥ ಆಸ್ತಿ ನಿರ್ಮಾಣ ಆಗಬೇಕು. ಅಭಿವೃದ್ಧಿ ಆಗಬೇಕೆಂದರೆ ಆಸ್ತಿ ನಿರ್ಮಾಣವಾಗಬೇಕು. ಆ ಆಸ್ತಿಯೇ ಸಾಮಾಜಿಕ ವ್ಯವಸ್ಥೆ ಮತ್ತು ಅಲ್ಲಿಯ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಇಷ್ಟೊಂದು ದೊಡ್ಡ ಪ್ರಮಾಣದ ಸಾಲವನ್ನು ತಂದು ಸರ್ಕಾರ ಅದಕ್ಕೆ ಗ್ಯಾರಂಟಿ ಕೊಟ್ಟು ನಾವು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದಂತಹ ಪ್ರಮಾಣದಲ್ಲಿ ಅನುದಾನ ಕೊಟ್ಟು, ನಂತರ ಇದು ನಮಗೆ ಬೇಡ, ಈ ಪ್ರಾಜೆಕ್ಟ್ ಕಾಸ್ಟ್ ಜಾಸ್ತಿಯಾಗುತ್ತದೆ ಎಂದರೆ ಹೇಗೆ? ನಿಮ್ಮ ಅಭಿಪ್ರಾಯಗಳನ್ನೂ ಕೂಡ ನಾವು ಕೇಳಿದ್ದೇವೆ. ಇದಕ್ಕಾಗಿ ನಡೆಸಿದ ಸಭೆಗಳ ದಿನಾಂಕಗಳನ್ನೂ ಸಹಿತ ನಾನು ಆಗಲೇ ಕೊಟ್ಟೆ. ಈಗ ಪುನ: ಅದನ್ನು ಓದಿ ಹೇಳಬೇಕೇ? ಪ್ರತಿಯೊಂದು ಸಮಯದಲ್ಲಿ ಚರ್ಚೆಯಾಗಿದೆ. ಮಂಗಳೂರಿನಲ್ಲಿ

ಮೂರು ಗಂಟೆ ಚರ್ಚೆಯಾಗಿದೆ. ಬೇರೆ ಬೇರೆ ತಾಲ್ಲೂಕುಗಳಲ್ಲಿ ಯಾವ ಸಂಸ್ಥೆ ಇದನ್ನು ಜಾರಿಗೆ ಕೊಡಬೇಕೆಂದಿದ್ದಾರೋ ಆ ಸಂಸ್ಥೆಯವರೊಂದಿಗೆ ಚರ್ಚೆ ಮಾಡಿದ್ದಾರೆ. 'ಹಿಂದೂ' ಪತ್ರಿಕೆಯಲ್ಲಿ ಒಂದು ಆರ್ಟಿಕಲ್ ಕೂಡ ಬಂದಿತ್ತು. ಅದರ ಬಗ್ಗೆ ನಾನು ಓದಿದ್ದೇನೆ. ಒಟ್ಟಾರೆಯಾಗಿ ರಾಜ್ಯದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು, ರಾಜಕೀಯ ಬೆರಸದೇ ಯೋಜನೆ ಜಾರಿಗೊಳಿಸಬೇಕಾಗುತ್ತದೆ. ಯಾವ ಸರ್ಕಾರವಾದರೂ ಇದನ್ನು ಮಾಡಿರಲಿ, ಸರ್ಕಾರ ಯಾವಾಗಲೂ ಒಂದೇ ಇರುತ್ತದೆ. ಮಂತ್ರಿಮಂಡಲ ಬದಲಾವಣೆ ಆಗಿರಬಹುದು ಆಲೋಚನೆಗಳನ್ನು ನಾವು ಬದಲಾವಣೆ ಮಾಡಿಲ್ಲ. ಆ ಕೆಲಸ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಸಾವಿರಾರು ಕೋಟಿ ರೂಪಾಯಿಗಳನ್ನು ಸರ್ಕಾರ ತಂದು ಹಾಕುತ್ತಿದೆ. ಮಂಗಳೂರನಂತಹ ಒಂದು ದೊಡ್ಡ ನಗರಕ್ಕೆ 306 ಕೋಟಿ ರೂಪಾಯಿಗಳ ಅಭಿವೃದ್ಧಿಯನ್ನು ಒಳಕ್ಕೆ ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ ಎನ್ನುವುದಾದರೆ ಅಭಿವೃದ್ಧಿ ಮಾಡಲಿಕ್ಕೂ ಕೂಡ ಸಾಧ್ಯವಿಲ್ಲ. ಹೀಗಾದರೆ ಬಾಕಿ ಪ್ರಾಜೆಕ್ಟ್‌ಗಳು ಏಕೆ ಬೇಕು? ಇರತಕ್ಕಂಥ ಎಲ್ಲಾ ಮಾಹಿತಿಯನ್ನೂ ಕೂಡ ನಾನು ಒದಗಿಸಿದ್ದೇನೆ. ಇದನ್ನು ಈಗ ತಾನೇ ಯಾರು ಪ್ರಶ್ನೆಯನ್ನು ಎತ್ತಿದ್ದಾರೋ ಅವರೂ ಕೂಡ ಸರ್ಕಾರದ ಜೊತೆಗೆ ಬಂದು ಚರ್ಚೆ ಮಾಡಬಹುದು ಇಲ್ಲಿ ಯಾರನ್ನೂ ಕೇಳಿಲ್ಲ, ಹಣ ಖರ್ಚು ಮಾಡಿದ್ದಾರೆ, ಹಣ ಖರ್ಚಾದರೆ ಅವರಿಗೆ ಲಾಭ ಬರುತ್ತದೆ, ಇಂತಹ ಮಾತುಗಳನ್ನು ನಾನು 'ಕುಯುಕ್ತಿ' ಎಂದು ಕರೆಯುತ್ತೇನೆ. ಅಭಿವೃದ್ಧಿಯ ಪರವಾದಂತಹ ವಾದ ಇದಲ್ಲ. ಇಂತಹ ವಾದವನ್ನು ....

(ಗೊಂದಲ)

ಅಧ್ಯಕ್ಷರು :— ದಯವಿಟ್ಟು ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಮಾನ್ಯ ಪಾಪಣ್ಣನವರೇ ಮುಂದಿನ ಪ್ರಶ್ನೆ ಕೇಳಿ.

ಪ್ರಶ್ನೆ ಸಂಖ್ಯೆ 293 (3444)

(ಮಾನ್ಯ ನಗರಾಬಿವೃದ್ಧಿ ಸಚಿವರ ಪರವಾಗಿ ಮಾನ್ಯ ಸಾರಿಗೆ ಸಚಿವರಾದ

ಶ್ರೀ ಸಿ.ಆರ್. ಸಗೀರ್ ಅಹಮದ್‌ರವರು)

ಶ್ರೀ ಎಸ್. ಸುರೇಶ್‌ಕುಮಾರ್ :— ಮಾನ್ಯ ಅಧ್ಯಕ್ಷರೇ, ಎಷ್ಟು ಜನ ನಗರಾಭಿವೃದ್ಧಿ ಸಚಿವರಿದ್ದಾರೆ? ಮೊದಲು ಮಲ್ಲಿಕಾರ್ಜುನ ಖರ್ಗೆಯವರು, ನಂತರ ಚಂದ್ರೇಗೌಡರು, ಈಗ ಸಗೀರ್ ಅಹಮದ್‌ರವರು ಉತ್ತರಿಸುತ್ತಿದ್ದಾರೆ.

ಅಧ್ಯಕ್ಷರು :— ಮಾನ್ಯ ಸುರೇಶ್ ಕುಮಾರ್‌ರವರೇ, ಅವರಿಗೆ ಏನೋ ಅರ್ಜೆಂಟ್ ಕೆಲಸ ಇದ್ದದ್ದರಿಂದ ಅವರು ಬೇರೆಯವರಿಗೆ ಆಥರೈಸ್ ಮಾಡಿ ಹೋಗಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ :— ಯಾರೋ ಒಬ್ಬರಿಗೆ ಮಾತ್ರ ಆಥರೈಸ್ ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೇ ಕಾಗೇರಿ :— ಉತ್ತರ ಕೊಡದೇ (xxx) ಮಾಡುವವರು ಆಡಳಿತ ಪಕ್ಷದವರು ...

ಅಧ್ಯಕ್ಷರು :— ಮಧ್ಯೆ ಮಧ್ಯೆ ಹೀಗೆ ನಿಂತು ಮಾತನಾಡಿದರೆ ಹೇಗೆ? ಯಾವುದನ್ನೂ ಬರೆದುಕೊಳ್ಳಬೇಡಿ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೇ (xxx) ಎಂಬ ಪ್ರಶ್ನೆ ಇಲ್ಲಿ ಬರುವುದಿಲ್ಲ. ಅವರು ಅದನ್ನು ವಾಪಸ್ ತೆಗೆದುಕೊಳ್ಳಬೇಕು

(ಗೊಂದಲ)

ಅಧ್ಯಕ್ಷರು :— ಈ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆ ಮುಕ್ತಾಯಗೊಂಡಿದೆ. ಮಾನ್ಯ ಸಗೀರ್ ಅಹಮದ್‌ರವರೇ, ಮಾನ್ಯ ಪಾಪಣ್ಣನವರ ಪ್ರಶ್ನೆಗೆ ಈಗ ಉತ್ತರ ಕೊಡಿ.

ಹುಣಸೂರು ಟೌನ್ ಬೈಪಾಸ್ (ರಾಜ್ಯ ಹೆದ್ದಾರಿ) ರಸ್ತೆಯಲ್ಲಿ ಅನಧಿಕೃತವಾಗಿ ವಾಣಿಜ್ಯ ಮಳಿಗೆ, ಹೋಟೆಲ್, ಬಾರ್‌ಗಳಿಂದ ತೊಂದರೆ

293 (3444) ಶ್ರೀ ಪಾಪಣ್ಣ ವಿ. (ಹುಣಸೂರು) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಣಸೂರು ಟೌನ್ ಬೈ-ಪಾಸ್ ರಸ್ತೆಯಾದ ಬೆಂಗಳೂರು-ಭಂಟ್ವಾಳ್ ರಾಜ್ಯ ಹೆದ್ದಾರಿ ರಸ್ತೆಯಾಗಿದ್ದು ಮತ್ತು ಅತಿ ಮುಖ್ಯ ರಸ್ತೆಯಾಗಿ ಈ ರಸ್ತೆಯಲ್ಲಿ ವಾಹನ ಸಂಚಾರವು ಹೆಚ್ಚು ಇದ್ದು, ರಸ್ತೆಯ ಪಕ್ಕ ಅನಧಿಕೃತ ಹೋಟೆಲ್, ಬಾರ್ ಮತ್ತು ರೆಸ್ಟೋರೆಂಟ್‌ಗಳಿಂದ, ರಸ್ತೆಬದಿ ವಾಣಿಜ್ಯ ಕೇಂದ್ರವಾಗುತ್ತಿರುವುದರಿಂದ ಈ ಹಿಂದೆ ಇಲ್ಲಿ ಒಂದು ಕೊಲೆಯೂ ಸಹ ನಡೆದು ಆಗಾಗ್ಗೆ ಅಪಘಾತಗಳು ಈ ಸ್ಥಳದಲ್ಲಿ ಸಂಭವಿಸಿದ್ದು, ಇದನ್ನು ತಪ್ಪಿಸಲು ಸರ್ಕಾರವು ಅನಧಿಕೃತವಾಗಿ ಆಕ್ರಮಿಸಿಕೊಂಡಿರುವ ಈ ಸ್ಥಳಗಳನ್ನು ತೆರವುಗೊಳಿಸಲು ಆದೇಶಿಸಿರುವುದು ನಿಜವೇ?

ಪೌರಾಡಳಿತ ಸಚಿವರ ಪರವಾಗಿ ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :—

ಅ) ಹೌದು.

---

xxx ಈ ಪದವನ್ನು ಅಧ್ಯಕ್ಷರ ಅನುಮತಿ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಎ. ಪಾಪಣ್ಣ:— ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಏನೆಂದರೆ, ಹುಣಸೂರು ಟೌನ್ ಬೈ-ಪಾಸ್ ರಸ್ತೆಯಾದ ಬೆಂಗಳೂರು ಭಂಟ್ವಾಳ ರಸ್ತೆ ರಾಜ್ಯ ಹೆದ್ದಾರಿ ರಸ್ತೆಯಾಗಿದ್ದು ಮತ್ತು ಅತಿ ಮುಖ್ಯ ರಸ್ತೆಯಾಗಿ, ಈ ರಸ್ತೆಯಲ್ಲಿ ವಾಹನ ಸಂಚಾರವು ಹೆಚ್ಚು ಇದ್ದು ರಸ್ತೆಯ ಪಕ್ಕ ಅನಧಿಕೃತ ಹೋಟೆಲ್, ಬಾರ್ ಮತ್ತು ರೆಸ್ಟೋರೆಂಟ್‌ಗಳಿಂದ ರಸ್ತೆ ಬದಿ ವಾಣಿಜ್ಯ ಕೇಂದ್ರವಾಗುತ್ತಿರುವುದರಿಂದ ಈ ಹಿಂದೆ ಒಂದು ಕೊಲೆಯೂ ಸಹ ಇಲ್ಲಿ ನಡೆದು ಆಗಾಗ್ಗೆ ಅಪಘಾತಗಳು ಈ ಸ್ಥಳದಲ್ಲಿ ಸಂಭವಿಸಿದ್ದು, ಇದನ್ನು ತಪ್ಪಿಸಲು ಸರ್ಕಾರವು ಅನಧಿಕೃತವಾಗಿ ಆಕ್ರಮಿಸಿಕೊಂಡಿರುವ ಈ ಸ್ಥಳಗಳನ್ನು ತೆರವುಗೊಳಿಸಲು ಆದೇಶಿಸಿರುವುದು ನಿಜವೆ? ನನ್ನ ಪ್ರಶ್ನೆಗೆ "ಹೌದು" ಎಂದು ಹೇಳಿದ್ದಾರೆ. ಆದರೆ ಯಾವುದೇ ತೆರವುಗೊಳಿಸುವ ಕ್ರಮ ತೆಗೆದುಕೊಂಡಿಲ್ಲ. ಈ ರಸ್ತೆ ಪಿಡಬ್ಲ್ಯೂಡಿಗೆ ಸೇರುತ್ತದೆ, ಲೈಸನ್ಸ್ ಕೊಡುವುದು ನಗರಾಭಿವೃದ್ಧಿ ಇಲಾಖೆಗೆ ಸೇರುತ್ತದೆ. ಕಂದಾಯ ಇಲಾಖೆಯವರು ಯಾವುದೇ ಕಾಲದಲ್ಲಿ ಯಾವುದೇ ಕೆಎಸ್‌ಆರ್‌ಟಿಸಿ ಬಸ್ ನಿಲ್ಲಿಸಬಾರದು ಎಂದು ಬೋರ್ಡ್ ಹಾಕುತ್ತಾರೆ. ಕೆಎಸ್‌ಆರ್‌ಟಿಸಿಯವರು ಬಸ್ ನಿಲ್ಲಿಸುತ್ತಾರೆ. ಗೃಹ ಇಲಾಖೆಯವರು ಪೋಲಿಸ್‌ನವರು ಅದನ್ನು ತೆರವು ಮಾಡಬೇಕು. ನನ್ನ ಪ್ರಶ್ನೆಯಲ್ಲಿ ಇನ್ನೂ ಎರಡು ಪ್ರಶ್ನೆಗಳನ್ನು ಸೇರಿಸಿದ್ದೆ, ಅದನ್ನು ಕಡಿತ ಮಾಡಿ ಈ ಪ್ರಶ್ನೆ ಕಳುಹಿಸಿದ್ದಾರೆ. ಈ ಐದು ಇಲಾಖೆಗಳು ಸೇರಿದರೆ ಮಾತ್ರ ಆ ರಸ್ತೆ ಸುಗಮವಾಗಿ ನಡೆಯುತ್ತದೆ. ಕ್ರಮ ತೆಗೆದುಕೊಳ್ಳಲು ನಾವು ಆದೇಶಿಸಿದ್ದೇವೆಂದು ಹೇಳಿದರು. ಆದರೆ ಗೃಹ ಇಲಾಖೆ ಅದನ್ನು ಸರಿಯಾಗಿ ಕಾರ್ಯಗತಗೊಳಿಸುತ್ತಿಲ್ಲ. ಕೆಎಸ್‌ಆರ್‌ಟಿಸಿ ಬಸ್ ಕೂಡ ನಿಲ್ಲಿಸಬಾರದು ಎಂದು ಆದೇಶವಿದ್ದರೂ ಕೂಡ ಅಲ್ಲಿಯೇ ನಿಲ್ಲಿಸುತ್ತಿದ್ದಾರೆ. ಇಲ್ಲಿ ಒಂದು ಕೊಲೆ ಮತ್ತು ಎರಡು ಆಕ್ಸಿಡೆಂಟ್‌ಗಳಾಗಿವೆ. ದಯಮಾಡಿ ಇದನ್ನು ಯಾವ ಕಾರಣದಿಂದಲಾದರೂ ಆ ಬೈ-ಪಾಸ್ ರಸ್ತೆ ಸುಗಮವಾಗಿ ಸಂಚಾರವಾಗುವುದಕ್ಕೆ ಸರ್ಕಾರದಿಂದ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್:— ಈ ವಿಷಯದಲ್ಲಿ ಪರವಾನಗಿ ನೀಡುವುದು ನಾಲ್ಕೈದು ಇಲಾಖೆಗೆ ಸಂಬಂಧಪಟ್ಟ ವಿಚಾರ. ಲೋಕೋಪಯೋಗಿ ಇಲಾಖೆ ಯಾವ ಯಾವ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿಗಳಿವೆ, ರಾಜ್ಯ ಹೆದ್ದಾರಿಗಳು ಹಾದು ಹೋಗುವ ಹಳ್ಳಿಗಳಿರಬಹುದು, ಪಟ್ಟಣಗಳಿರಬಹುದು ರಸ್ತೆಯನ್ನು ವಿಸ್ತೀರ್ಣ ಮಾಡುವ ಸಂದರ್ಭದಲ್ಲಿ ರಸ್ತೆ ಮಧ್ಯ ಭಾಗದಿಂದ ಎಷ್ಟು ಅಡಿ, ಎಷ್ಟು ಮೀಟರ್ ಒಳಗೆ ಹೊಸ ಕಟ್ಟಡ ನಿರ್ಮಾಣ ಮಾಡಬೇಕೆಂದು ಏನು ನಿಯಮ ಇದೆ, ಆ ನಿಯಮದಂತೆ ರಸ್ತೆ ಮಧ್ಯ ಬಾಗದಿಂದ 150 ಅಡಿ ಬಿಟ್ಟು ಮನೆಗಳು ನಿರ್ಮಾಣ ಮಾಡುವುದರ ಬಗ್ಗೆ ಸರ್ಕಾರದ ನೇರವಾದ ಆದೇಶ ಇದೆ. ನಗರಾಭಿವೃದ್ಧಿ ಪ್ರಾಧಿಕಾರದವರೂ ಕೂಡ ಪಿಡಬ್ಲ್ಯೂಡಿಯವರ ಒಪ್ಪಿಗೆ ಮೇರೆಗೆ ಪರವಾನಗಿ ನೀಡಬೇಕೆ ವಿನಹ ನೇರವಾಗಿ ಅವರಿಗೆ ಪರವಾನಗಿ ನೀಡುವುದಕ್ಕೆ ಬರುವುದಿಲ್ಲ. ಶಾಸಕರು ಹಾಕಿರುವ ಪ್ರಶ್ನೆ

ಅನಧಿಕೃತ ಕಟ್ಟಡಗಳ ಬಗ್ಗೆ ಇದೆ, ಇದು ಅನಧಿಕೃತವೆಂದು ಸರ್ಕಾರಕ್ಕೆ ಮನವರಿಕೆಯಾಗಿದೆ, ಆದುದರಿಂದ ತಕ್ಷಣವೇ ಇದನ್ನು ತೆರವುಗೊಳಿಸುವುದರ ಬಗ್ಗೆ ನಿರ್ದೇಶನ ಕೊಡುತ್ತೇವೆ. ನಮ್ಮ ರಸ್ತೆಯ ಮಾರ್ಜಿನ್ ಒಳಗಡೆ ಇರುವ ಕಟ್ಟಡಗಳನ್ನು ತೆರವುಗೊಳಿಸುವುದಕ್ಕೆ ಸರ್ಕಾರ ತಕ್ಷಣ ತೀರ್ಮಾನ ತೆಗೆದುಕೊಳ್ಳುತ್ತದೆ.

ಶ್ರೀ ವಿ. ಪಾಪಣ್ಣ:— ಪಿಡಬ್ಲ್ಯೂಡಿಯವರು ಎನ್‌ಓಸಿ ಕೊಟ್ಟಿಲ್ಲ, ನಗರಾಭಿವೃದ್ಧಿ ಸಚಿವರು ಪುರಸಭೆಯವರೂ ಕೂಡ ಎನ್‌ಓಸಿ ಕೊಟ್ಟಿಲ್ಲ. ಕಂದಾಯ ಇಲಾಖೆಯವರು ತಹಸೀಲ್ದಾರ್‌ರವರೂ ಕೂಡ ಈ ರಸ್ತೆಯಲ್ಲಿ ಯಾವುದೇ ಸಮಯದಲ್ಲಿ ಬಸ್ ನಿಲ್ಲಿಸಬಾರದು ಎಂದು ಬೋರ್ಡ್ ಹಾಕಿದ್ದಾರೆ. ತಾವೂ ಕೂಡ ಆದೇಶ ಮಾಡಿದ್ದೀರಿ. ಪೋಲಿಸ್‌ನವರೂ ಕೂಡ ಇಲ್ಲಿ ಯಾವುದಾದರೂ ಬಸ್ ನಿಂತರೆ ದಂಡ ವಿಧಿಸಲಾಗುವುದು ಎಂದು ಬೋರ್ಡ್ ಹಾಕಿದ್ದಾರೆ. ಈ ಐದು ಆದೇಶಗಳಿದ್ದರೂ ಕೂಡ ಕಾರ್ಯಗತವಾಗಿಲ್ಲ. ದಯಮಾಡಿ ಈ ಆದೇಶಗಳನ್ನು ಕಾರ್ಯಗತಗೊಳಿಸುವುದಕ್ಕೆ ತಾವು ವ್ಯವಸ್ಥೆ ಮಾಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್:— ಮಾನ್ಯ ಅಧ್ಯಕ್ಷರೆ, ಅನಧಿಕೃತ ಕಟ್ಟಡಗಳು ನಿರ್ಮಾಣವಾಗಿವೆ ಎನ್ನುವುದು ಮಾನ್ಯ ಸದಸ್ಯರ ಮೂಲಭೂತವಾದ ಪ್ರಶ್ನೆ. ಇದು ಸರ್ಕಾರಕ್ಕೆ ಮನದಟ್ಟಾಗಿದೆ, ಅನಧಿಕೃತವಾಗಿ ಕಟ್ಟಲಾಗಿರುವ ಕಟ್ಟಡಗಳನ್ನು ತೆರವುಗೊಳಿಸುತ್ತೇವೆ.

ಶ್ರೀ ವಿ. ಪಾಪಣ್ಣ:— ತಮ್ಮ ಬಸ್‌ಗಳನ್ನು ನಿಲ್ಲಿಸಬಾರದು ಎಂದು ಆದೇಶ ಕೊಟ್ಟರೂ ನಿಮ್ಮ ಆದೇಶಕ್ಕೆ ವಿರುದ್ಧವಾಗಿ ಅಲ್ಲಿ ಬಸ್‌ಗಳನ್ನು ನಿಲ್ಲಿಸುತ್ತಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್:— ನಾನು ಅಧಿಕಾರಿಗಳಿಗೆ ಸೂಚನೆ ಕೊಡುವುದರ ಮೂಲಕ ಬಸ್‌ಗಳನ್ನು ಅಲ್ಲಿ ನಿಲ್ಲಿಸಲು ಅವಕಾಶವಿಲ್ಲದ ಹಾಗೆ ವ್ಯವಸ್ಥೆ ಮಾಡುತ್ತೇನೆ.

ಅಂಬೇಡ್ಕರ್ ವಸತಿ ಯೋಜನೆ.

294(3051) ಶ್ರೀ ಪುಟ್ಟರಂಗನಾಥ್ ಎಸ್.ಹೆಚ್. (ಬೇಲೂರು):— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ ನಿರ್ಮಾಣ ಮಾಡುವ ಮನೆಗಳಿಗೆ 20,000 ರೂ. ಮಂಜೂರು ಮಾಡಿದ್ದು ಅದನ್ನು ಕನಿಷ್ಠ 35,000 ರೂ.ಗಳಿಗೆ ಏರಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):—

ಅ) ಇಲ್ಲ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ :— ಮಾನ್ಯ ಅಧ್ಯಕ್ಷರೆ, ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ ನಿರ್ಮಾಣ ಮಾಡಿದ ಮನೆಗಳಿಗೆ 25,000 ರೂಪಾಯಿಗೆ ಬದಲಾಗಿ 35,000 ರೂಪಾಯಿ ಬಿಡುಗಡೆ ಮಾಡಬೇಕೆಂದು ಕೇಳಿದ್ದೇನೆ, ಪ್ರತಿಯೊಂದು ತಾಲ್ಲೂಕಿನಲ್ಲೂ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಿಂದ ಒಂದೊಂದು ಹಳ್ಳಿ ತೆಗೆದುಕೊಂಡಿದ್ದೀರಿ. ಅಲ್ಲಿ ಡಾ: ಅಂಬೇಡ್ಕರ್ ಹೆಸರಿನಲ್ಲಿ ಮನೆ ಕಟ್ಟುತ್ತಿದ್ದೀರಿ. ಆ ಮನೆಗಳಿಗೂ 20,000 ರೂಪಾಯಿ ಮತ್ತು ಜನತಾ ಮನೆಗಳಿಗೂ 20,000 ರೂಪಾಯಿ ಕೊಡುತ್ತೀರಿ. ನೀವು ನಿರ್ಮಾಣ ಮಾಡತಕ್ಕಂತಹ ಮನೆಗಳು ಹುಳು ಬೀಳಬಾರದು. ಅವರ ಹೆಸರು ಉಳಿಸಬೇಕು. ರಸ್ತೆ ಮಾಡುತ್ತೀರಿ, ಸಾಮೂಹಿಕ ಭವನಗಳನ್ನು ಮಾಡುತ್ತೀರಿ, ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೀರಿ. ವಿದ್ಯುತ್ ವ್ಯವಸ್ಥೆ ಮಾಡುತ್ತೀರಿ. ಇವೆಲ್ಲವನ್ನೂ ಮಾಡಿ ಮನೆ ಬಿದ್ದು ಹೋದರೆ ಅದನ್ನು ಉಪಯೋಗಿಸುವವರು ಯಾರು? ಆದುದರಿಂದ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ 35,000 ರೂಪಾಯಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಉತ್ತರದಲ್ಲಿ ಇಲ್ಲವೆಂದು ತಿಳಿಸಿದ್ದೀರಿ. ಆ ರೀತಿ ಯೋಜನೆ ಮಾಡಿದರೆ ಒಳ್ಳೆಯದು ಎಂದು ನಾನು ನನ್ನ ಅಭಿಪ್ರಾಯವನ್ನು ತಿಳಿಸುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೆ, ಹಣ ಹೆಚ್ಚು ಮಾಡಿದರೆ ಒಳ್ಳೆಯದು ಎಂದು ನಾನು ಸಹ ಒಪ್ಪುತ್ತೇನೆ. ಸರ್ಕಾರಕ್ಕೆ ಇರುವ ಹಣಕಾಸಿನ ಪರಿಸ್ಥಿತಿಯನ್ನು ನೋಡಿ ಇದರ ಬಗ್ಗೆ ನಾವು ತೀರ್ಮಾನ ಮಾಡಬೇಕಾಗುತ್ತದೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ :— ಜನತಾ ಮನೆಗಳಿಗೂ ಇದಕ್ಕೂ ಏನು ವ್ಯತ್ಯಾಸ ಇದೆ?

ಶ್ರೀ ಪಿ.ಜಿ.ಆರ್. ಸಿಂಧ್ಯ :— ಇದು ಬಹಳ ಪ್ರಮುಖವಾದ ವಿಚಾರ. ಅಂಬೇಡ್ಕರ್ ಯೋಜನೆಗೆ ನಾವು ಸಂಪೂರ್ಣವಾಗಿ ರಾಜ್ಯ ಸರ್ಕಾರದ ಹಣ ಕೊಡುವುದಿಲ್ಲ. a portion of it comes from the Government of India also. As I know ಎಸ್‌ಸಿಪಿ ಪ್ರೋಗ್ರಾಂನಲ್ಲಿ ಇದನ್ನು ತೆಗೆದುಕೊಳ್ಳುತ್ತೇವೆ ಯೂನಿಟ್ ಕಾಸ್ಟ್ ಜಾಸ್ತಿಯಾಗಿದೆ ಎಂದು ಹೇಳುವುದರಲ್ಲಿ Why not we take more money? ಪ್ರಾಕ್ಟಿಕಲ್ಲಾಗಿ ನಾನು ಹೇಳುತ್ತಿದ್ದೇನೆ. ಆ ಕಡೆ ಶಾಸಕರು ಮತ್ತು ಈ ಕಡೆ ಶಾಸಕರು ಎರಡೂ ಕಡೆಯ ಶಾಸಕರಿಗೂ ಇರತಕ್ಕಂತಹ ಸಮಸ್ಯೆ ಇದು. ಆಶ್ರಯ ಯೋಜನೆಯಲ್ಲಿ 600 ರಿಂದ 700 ಮನೆಗಳನ್ನು ನಾವು ನಮ್ಮ ನಮ್ಮ ಕ್ಷೇತ್ರಗಳಲ್ಲಿ ನಿರ್ಮಾಣ ಮಾಡುತ್ತೇವೆ. 20 ಪರ್ಸೆಂಟ್ 25 ಪರ್ಸೆಂಟ್ ಎಸ್‌ಸಿ : ಎಸ್‌ಟಿ ಜನಾಂಗದವರಿಗೆ ಕಟ್ಟುತ್ತೇವೆ. ಇತರರಿಗೆ 80 ಪರ್ಸೆಂಟ್ ಮನೆ ಕಟ್ಟುತ್ತೇವೆ. 20 ಪರ್ಸೆಂಟ್ ಮನೆಗಳನ್ನು ನಾವು ಕಟ್ಟುವುದಕ್ಕಾಗುವುದಿಲ್ಲ. ನಾಲ್ಕು ಸ್ಟೇಜ್‌ಗಳಲ್ಲಿ ನಾವು ಚೆಕ್ ಕೊಡುತ್ತೇವೆ. ಅವರು ಕೂಲಿ ಬಿಟ್ಟು ಬಂದು ಪಾಯ ಹಾಕಿ, ನಂತರ ಫೌಂಡೇಷನ್ ಸ್ಟೋನ್ ಹಾಕಿಕೊಳ್ಳಬೇಕು. ಅವನ ಹತ್ತಿರ

2000 ರೂಪಾಯಿಗಳು ಎಲ್ಲಿಂದ ಬರುತ್ತವೆ. This is the practical problem. You kindly consider it. Using the union government's SCP component ಇದು ಮಾಡುವುದಕ್ಕಾಗುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದಿಂದ ಈ ಯೋಜನೆಗೆ ಯಾವುದೇ ರೀತಿಯ ಹಣ ಬರುವುದಿಲ್ಲ. ಇಂದಿರಾ ಆವಾಸ್ ಯೋಜನೆಗೆ ಮಾತ್ರ ಹಣ ಬರುತ್ತದೆ. ಅಂಬೇಡ್ಕರ್ ಮನೆ ಮತ್ತು ಆಶ್ರಯ ಮನೆಗಳಿಗೆ ಕೊಡತಕ್ಕಂತಹ ಹಣವನ್ನು ನಾವು ಕ್ರೋಢೀಕರಣ ಮಾಡುವ ಹಣದಿಂದ ಎಲ್ಲಾ ಇಲಾಖೆಗಳಿಂದ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಕ್ರೋಢೀಕರಿಸಿ ಆ ಹಣದಿಂದ ಕೊಡತಕ್ಕಂತಹ ಹಣ ಇದು. ಬೇರೆ ಏನೂ ಬರುವುದಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದಿಂದ ಹೆಚ್ಚು ಹಣ ಕೇಳುವ ಪ್ರಶ್ನೆ ಬರುವುದಿಲ್ಲ. ಒಂದು ಮಾತನ್ನು ನಾನು ಹೇಳಬಯಸುತ್ತೇನೆ. ಮಂಗಳೂರಿಗೆ ಬೆಳ್ಳಿ ಬೆಳಕು ಯೋಜನೆಯಲ್ಲಿ 20 ಮನೆ ಕಟ್ಟಿ ಬಡವರಿಗೆ ಕೊಟ್ಟಿದ್ದೇವೆ. ಮನುಷ್ಯ ತನ್ನ ಮನೆ ಎನ್ನುವ ಕಾರಣಕ್ಕಾಗಿ ತನ್ನ ದೇಶದ ಶ್ರಮವನ್ನು ತೊಡಗಿಸಿದರೆ ಹೇಗೆ ಮಾಡಿಕೊಳ್ಳಬಲ್ಲ ಎನ್ನುವುದಕ್ಕೆ ಅದು ಒಂದು ನಿದರ್ಶನವೆಂದು ನಾನು ಕಂಡಿದ್ದೇನೆ. ಹಣ ಇದ್ದರೆ ಕೊಡಬಹುದು, ಕೊಡುವುದಕ್ಕಾಗುವುದಿಲ್ಲವೆಂದು ಹೇಳುವುದಿಲ್ಲ. ತನ್ನ ಶಾಶ್ವತವಾದ ಮನೆಯನ್ನು ಕಟ್ಟುವ ಸಂದರ್ಭದಲ್ಲಿ ಇವತ್ತು ಈ ಹಣವನ್ನು ಸದುಪಯೋಗ ಪಡಿಸಿಕೊಂಡು ಉತ್ತಮ ಮನೆ ಕಟ್ಟುವುದಕ್ಕೆ ಜನರನ್ನು ಪ್ರಚೋದನೆ ಮಾಡತಕ್ಕಂತಹ ಕಾಲ ಅತ್ಯಂತ ಸನ್ನಿಹಿತವಾಗಿದೆ. ಮಾನ್ಯ ಪುಟ್ಟರಂಗನಾಥ್‌ರವರಿಗೆ ಹೇಳುತ್ತೇನೆ, ಸರ್ಕಾರದಲ್ಲಿ ಹಣ ಒದಗಿ ಬಂದರೆ ಹೆಚ್ಚು ಮಾಡುವುದಕ್ಕೆ ಏನೂ ತೊಂದರೆ ಇಲ್ಲ. ಜೊತೆಗೆ ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ನನಗೆ ಇದನ್ನು ತಿಳಿಸಿದ್ದಾರೆ. ಮುಂದೆ ಬರತಕ್ಕಂತಹ ಎರಡು - ಮೂರು ವರ್ಷಗಳಲ್ಲಿ ಕೊನೆಪಕ್ಷ ಹರಿಜನ ಗಿರಿಜನರಿಗೆ, ಮನೆ ಇಲ್ಲದವರಿಗೆ ನಾವು ಮನೆ ಕಟ್ಟತಕ್ಕಂತಹ ಕಾರ್ಯಕ್ರಮ ವ್ಯಾಪಕವಾಗಿ ಮಾಡೋಣವೆಂದು ಆಲೋಚನೆ ಇಟ್ಟುಕೊಂಡು ಹೆಚ್ಚು ಹಣವನ್ನು ಅದಕ್ಕೆ ಕೊಡಬೇಕೆಂದಿದ್ದೇವೆ. ಆದ್ದರಿಂದ ಹೆಚ್ಚು ಜನರಿಗೆ ಕೊಡಬೇಕಾದ ಸಂದರ್ಭ ಇರುವುದರಿಂದ ಸಧ್ಯಕ್ಕೆ ಈ ಹಣವನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಾಗದೆ ಇರುವ ಪರಿಸ್ಥಿತಿ ಇದೆ. ಆದರೆ ನಾವು ಜನರಿಗೆ ಸ್ವಲ್ಪ ಪ್ರೇರೇಪಣೆ ನೀಡಿ ಈ ಕೆಲಸದಲ್ಲಿ ತೊಡಗಿಸುವ ಅಗತ್ಯ ಇದೆ. ಆದಕ್ಕೆ ನಾವೆಲ್ಲರೂ ತಯಾರಾಗಬೇಕು.

12.10 ಪಿ.ಎಂ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ ಕಟ್ಟುವ ಮನೆಯ ಕಾಸ್ಟನ್ನು ಸ್ವಲ್ಪ ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಯೋಜನೆಯ ಫಲಾನುಭವಿಗಳಿಗೆ ಹಣ ತೊಡಗಿಸಲು ಸಾಧ್ಯತೆಗಳು

ಇಲ್ಲದೇ ಇರುವುದರಿಂದ ಅಂಬೇಡ್ಕರ್ ಯೋಜನೆಯಲ್ಲಿ ಮನೆಯ ಕಾಸ್ಟನ್ನು ಪೂರ್ಣವಾಗಿ ಸರ್ಕಾರವೇ ಕೊಡಬೇಕೆಂದು ಕೇಳಿಕೊಳ್ಳುತ್ತೇನಲ್ಲದೇ ಮನೆಯ ಕಾಸ್ಟನ್ನು ಕೂಡ ಸ್ವಲ್ಪ ಹೆಚ್ಚು ಮಾಡಬೇಕೆಂದು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ. ಆರ್ಥಿಕ ಸಂಪನ್ಮೂಲದ ಕೊರತೆ ಕಾರಣವೊಡ್ಡಿ ಮನೆಯ ಕಾಸ್ಟನ್ನು ಹೆಚ್ಚು ಮಾಡುವುದಕ್ಕೆ ಆಗುವುದಿಲ್ಲವೆನ್ನುವ ಮಾತನ್ನು ಸರ್ಕಾರ ಹೇಳಬಾರದು. ಯಾವುದಾದರೂ ರೀತಿಯಿಂದ ಇದನ್ನು ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್:— ಮಾನ್ಯ ಅಧ್ಯಕ್ಷರೆ, ಈ ಯೋಜನೆಯಲ್ಲಿ ಕೇವಲ ಒಂದೂವರೆ ಸೆಂಟ್ಸ್ ಜಾಗದಲ್ಲಿ ಮನೆ ಕಟ್ಟಬೇಕಾಗಿದೆ. ಸುಮಾರು 660 square feet ಬರಬಹುದು. ಇಷ್ಟು ಚಿಕ್ಕ ಜಾಗದಲ್ಲಿ ಮನೆಕಟ್ಟಿದಾಗ ಬಾತ್ ರೂಮ್ ಕಡೆ ಬರುವ ನೀರು ಎಲ್ಲಿಗೆ ಹೋಗುತ್ತದೆ ಎನ್ನುವುದೇ ಗೊತ್ತಾಗುವುದಿಲ್ಲ. ಒಂದು ರೀತಿಯಲ್ಲಿ ಆಶ್ರಯ ಮತ್ತು ಅಂಬೇಡ್ಕರ್ ಮನೆಗಳನ್ನು ನಗರ ಪ್ರದೇಶದಲ್ಲಿ ಚಿಕ್ಕ ಜಾಗದಲ್ಲಿ ಕಟ್ಟುವುದರಿಂದ ಒಂದು ರೀತಿಯಲ್ಲಿ ಸ್ಲಮ್ ಅನ್ನು ಕ್ರಿಯೇಟ್ ಮಾಡಿದಂತಾಗುತ್ತದೆ ಎನ್ನುವ ಸಂಶಯ ಬರತೊಡಗಿದೆ. ಆದುದರಿಂದ ನಾನು ಕೊಡುವ ಸಲಹೆ ಎಂದರೆ ಈ ಮನೆಯನ್ನು 3 ಸೆಂಟ್ಸ್ ಜಾಗದಲ್ಲಿ ಕಟ್ಟಲು ಪರಿಶೀಲನೆ ಮಾಡಿ ಈ ನಿಟ್ಟಿನಲ್ಲಿ ವಿಶೇಷವಾದ ಆದೇಶವನ್ನು ಹೊರಡಿಸಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಯು.ಟಿ. ಫರೀದ್:— ಮಾನ್ಯ ಅಧ್ಯಕ್ಷರೆ ಯೋಗೀಶ್‌ಭಟ್‌ರವರು ಹೇಳಿದ ವಿಷಯಕ್ಕೆ ಸಂಬಂಧಪಟ್ಟಂತೆ ನಾವೂ ಕೂಡ ರೆಸಲ್ಯೂಷನ್ ಮಾಡಿ ಡಿ.ಸಿ.ಯವರಿಗೆ ಕಳುಹಿಸಿದ್ದೇವೆ. ಈಗ ಒಂದೂವರೆ ಸೆಂಟ್ಸನಲ್ಲಿ ಮನೆ ಕಟ್ಟುವುದೇ ಆದರೆ ಒಂದು ರೀತಿಯಲ್ಲಿ ಸ್ಲಮ್ ಆಗುವುದು ಖಂಡಿತ. ಇದರಿಂದಾಗಿ ನಾಳೆ ಏನೆಲ್ಲಾ ಅನಾಹುತಗಳಿಗೆ ಕಾರಣವಾಗುತ್ತದೆಯಾದ ಕಾರಣ ಕನಿಷ್ಟ ಮೂರು ಸೆಂಟ್ಸ್ ಜಾಗವನ್ನು ನಗರ ಪ್ರದೇಶದಲ್ಲಿ ಡಿವೈಡ್ ಮಾಡಿ ಕೊಡಬೇಕಾದ ಅಗತ್ಯತೆ ಇದೆಯೆಂದು ಹೇಳಬಯಸುತ್ತೇನೆ.

ಶ್ರೀ ಎ. ಕೃಷ್ಣಪ್ಪ:— ಮಾನ್ಯ ಅಧ್ಯಕ್ಷರೆ, ಈಗೇನು 20 ಸಾವಿರ ರೂ. ನಿಗಧಿ ಮಾಡಲಾಗಿದೆ ಆದರಲ್ಲಿ ಬಾತ್ ರೂಮ್‌ಗೆ ಎಂದು 2 ಸಾವಿರ ರೂಪಾಯಿಗಳನ್ನು ಹಿಡಿದುಕೊಳ್ಳುತ್ತಾರೆ. ಇಂದಿನ ದಿನಗಳಲ್ಲಿ ಸಿಮೆಂಟ್ ಬೆಲೆ, ಇಟ್ಟಿಗೆ, ಶೀಟ್‌ಗಳ ಬೆಲೆ ಜಾಸ್ತಿಯಾಗಿರುವುದು ತಮಗೂ ಗೊತ್ತಿದೆ. ಅತಿ ಕಡು ಬಡವರಿಗೆ ಈ ಯೋಜನೆಯಿಂದ ಮನೆ ಕಟ್ಟಿಕೊಡಬೇಕೆಂದು ಗೈಡ್‌ಲೈನ್ಸ್ ಇರುವುದು. ಇದರಲ್ಲಿ ಕೂಲಿ ಮಾಡತಕ್ಕಂಥ ಜನಗಳೇ ಹೆಚ್ಚು. ಅವನಿಗೆ ಹೊಲವಾಗಲಿ, ಮನೆಯಾಗಲಿ ಇರುವುದಿಲ್ಲ. ಬೆಳಗ್ಗಿನಿಂದ ಸಂಜೆಯವರೆಗೂ ಕೂಲಿ ಮಾಡಿಯೇ ಜೀವನ ಮಾಡಬೇಕಾದ ಇವನಿಗೆ 5 ಸಾವಿರ ರೂಪಾಯಿಗಳು ಎಲ್ಲಿಂದ ಸಿಗುತ್ತದೆ. ಇವನಿಗೆ ಯಾರೂ ಕೂಡ ಸಾಲ ಕೊಡುವುದಿಲ್ಲ.

ಆದುದರಿಂದ ಯೂನಿಟ್ ಕಾಸ್ಟ್‌ನ್ನು ದಯವಿಟ್ಟು ಇನ್ನೂ ಹತ್ತು ಸಾವಿರ ಜಾಸ್ತಿ ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎ. ನಾರಾಯಣ ಸ್ವಾಮಿ :— ಅಧ್ಯಕ್ಷರೆ, ಅಂಬೇಡ್ಕರ್ ಮನೆಗಳಿಗೆ ಎಸ್‌ಸಿಪಿ (SCP)ಯಲ್ಲಿ ಹಣವನ್ನು ಪೂಲ್ ಮಾಡಿ ಕೊಡುತ್ತಾರೆ. ಆಶ್ರಯ ಮನೆಗಳಿಗೆ ಹತ್ತು ಸಾವಿರ ರೂಪಾಯಿಗಳನ್ನು ರಿಟರ್ನ್ ಮಾಡಬೇಕೆನ್ನುವ ಕಂಡೀಷನ್ ಹಾಕುತ್ತಾರೆ. ಆದರೆ ಇದುವರೆಗೂ ಯಾವ ಫಲಾನುಭವಿಯೂ ಕೂಡ ಸರ್ಕಾರಕ್ಕೆ ಹತ್ತು ಸಾವಿರ ರೂಪಾಯಿಗಳನ್ನು ರಿಟರ್ನ್ ಮಾಡಿಲ್ಲ. ಅಂಬೇಡ್ಕರ್ ಯೋಜನೆಯಲ್ಲಿ ರಿಟರ್ನ್ ಮಾಡುವ ಹಾಗೆ ಇಲ್ಲ. ಆಶ್ರಯ ಯೋಜನೆಯಲ್ಲಿ ಹಣವನ್ನು ರಿಟರ್ನ್ ಮಾಡದೇ ಇರುವುದನ್ನು ಗಮನದಲ್ಲಿಟ್ಟುಕೊಂಡು ಅಂಬೇಡ್ಕರ್ ಯೋಜನೆಯಲ್ಲಿ ಮನೆಯ ಕಾಸ್ಟನ್ನು 5 ಸಾವಿರ ರೂಪಾಯಿಗಳಷ್ಟು ಹೆಚ್ಚು ಮಾಡಿದರೆ ತಪ್ಪೇನಾಗುತ್ತದೆ? ಸರ್ಕಾರ ಇದರ ಬಗ್ಗೆ ಯೋಚನೆ ಮಾಡಬೇಕು. ಇಂದು ಮೆಟೀರಿಯಲ್ ಕಾಸ್ಟ್ ಕೂಡ ಹೆಚ್ಚಾಗುತ್ತಿರುವುದರಿಂದ ಹಂದಿಗೂಡಿಗಳ ತರಹ ಮನೆಗಳನ್ನು ಕಟ್ಟಿಕೊಂಡು ಜೀವನ ಮಾಡುವುದಕ್ಕೆ ಆಗುವುದಿಲ್ಲ. ಈ ಯೋಜನೆಯ ಫಲಾನುಭವಿಗಳಿಗೂ ಕೂಡ ಉತ್ತಮವಾಗ ಗಾಳಿ, ಬೆಳಕು ಬರುವ ರೀತಿಯಲ್ಲಿ ಮನೆಗಳನ್ನು ಕಟ್ಟಿಕೊಂಡು ಜೀವನ ನಡೆಸಲು ವ್ಯವಸ್ಥೆ ಮಾಡಬೇಕೆಂದು ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೆ, ಈ ಯೋಜನೆಯ ಫಲಾನುಭವಿಗಳು ಕೂಲಿಯಿಂದಲೇ ಜೀವನ ನಡೆಸುತ್ತಿರುವುದು ಮತ್ತು ಅತ್ಯಂತ ಬಹಳ ಬಡತನದಲ್ಲಿರುವವರು ಮತ್ತು ಇವರು ತಮ್ಮ ಸಂಪಾದನೆಯಿಂದಲೇ ಮನೆ ಕಟ್ಟಿಕೊಳ್ಳುವುದಕ್ಕೆ ಆಗುವುದಿಲ್ಲವೆನ್ನುವ ವಿಚಾರಗಳೆಲ್ಲವೂ ಸರ್ಕಾರಕ್ಕೆ ಗೊತ್ತಿದೆ. ಆದರೆ ಅತಿ ದೊಡ್ಡ ಪ್ರಮಾಣದ ಜನಸಂಖ್ಯೆಗೆ ಈ ಮನೆಯನ್ನು ಕೊಡಬೇಕಾಗಿರುವ ಕಾರಣಕ್ಕಾಗಿ ಸಧ್ಯಕ್ಕೆ ನಾವು ಒಂದು ಘಟಕಕ್ಕೆ 20 ಸಾವಿರ ರೂಪಾಯಿಗಳನ್ನು ನಿಗದಿ ಮಾಡಿದ್ದೇವೆ. ಆಶ್ರಯ ಹಾಗೂ ಅಂಬೇಡ್ಕರ್ ಯೋಜನೆಗಳೆರಡಕ್ಕೂ ಅಷ್ಟೇ ನಿಗದಿ ಮಾಡಿದ್ದೇವೆ. ಆದರೆ ಈ ಹಂತದಲ್ಲಿ ಹಣಕಾಸಿನ ಲಭ್ಯತೆ ನೋಡಿಕೊಳ್ಳದೇ ಯುನಿಟ್ ಕಾಸ್ಟ್ ಹೆಚ್ಚು ಮಾಡುತ್ತೇವೆ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಮುಂದಿನ ದಿನಗಳಲ್ಲಿ ಆರ್ಥಿಕ ಸ್ಥಿತಿ ಉತ್ತಮಗೊಂಡರೆ ಆಗ ಮಾನ್ಯ ಸದಸ್ಯರು ಕೊಟ್ಟ ಸಲಹೆಯ ಬಗ್ಗೆ ಪರಿಶೀಲನೆ ಮಾಡೋಣ.

ಶ್ರೀ ಜಿ. ರಾಜೂಗೌಡ :— ಮಾನ್ಯ ಅಧ್ಯಕ್ಷರೆ, ಇಂದಿರಾ ಆವಾಸ್ ಯೋಜನೆ ಮನೆಗಳಿಗೆ ಕೇಂದ್ರ ಸರ್ಕಾರದಿಂದ ಹಣ ಬರುವುದರಿಂದ ಆ ಯೋಜನೆಯ ಯೂನಿಟ್ ಕಾಸ್ಟ್‌ನ್ನಾದರೂ ಹೆಚ್ಚಿಸಬಹುದಲ್ಲಾ. ಇದಕ್ಕೆ ದಯಮಾಡಿ ಸಚಿವರು ಉತ್ತರ ಕೊಡಬೇಕು. ಇದಕ್ಕೆ 30 ಸಾವಿರ ನಿಗದಿ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ :— ಇನ್ನು ಎರಡು ಮೂರು ವರ್ಷಗಳಲ್ಲಿ ಈ ಯೋಜನೆಯಲ್ಲಿ ಬರುವ ಎಲ್ಲಾ ಜನರಿಗೆ ಮನೆಯನ್ನು ಕೊಡಬೇಕೆನ್ನುವ ಉದ್ದೇಶ ಸರ್ಕಾರಕ್ಕಿದೆ. ಸರ್ಕಾರದ ಹಣಕಾಸಿನ ಸ್ಥಿತಿಗತಿಗಳನ್ನು ನೋಡಿಕೊಳ್ಳದೇ ಯುನಿಟ್ ಕಾಸ್ಟ್ ಜಾಸ್ತಿ ಮಾಡುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ. ಆಶ್ರಯ ಯೋಜನೆಯ ಮನೆಯ ಕಾಸ್ಟನ್ನೂ ಕೂಡ ಹೆಚ್ಚು ಮಾಡಬೇಕು ಎನ್ನುವ ಒತ್ತಾಯವಿದೆ. ಏಕೆಂದರೆ ಈ ಯೋಜನೆಯಲ್ಲೂ ಕೂಡ ಬಡವರಿಗೆ ಮನೆಯನ್ನು ಕೊಡುತ್ತಿರುವುದು. ಇನ್ನು 3 ಸೆಂಟ್ಸ್ ಜಾಗದಲ್ಲಿ ಕಟ್ಟಬೇಕು ಎಂದು ಏನು ಮಾನ್ಯ ಸದಸ್ಯರು ಹೇಳಿದರು ಅದಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದೇನೆಂದರೆ 25 x 30 ಜಾಗದಲ್ಲಿ ಮನೆ ಕಟ್ಟಬೇಕೆಂದು ಹಿಂದೆಯೇ ತೀರ್ಮಾನವಾಗಿದ್ದು ಅದು ಕಾರ್ಯಗತ ಕೂಡ ಆಗುತ್ತಿದೆ. ನಗರ ಪ್ರದೇಶದಲ್ಲಿ ಹೆಚ್ಚು ಜಾಗ ಲಭ್ಯವಾದ್ದಲ್ಲಿ ಮನೆ ಕಟ್ಟುವ ಜಾಗವನ್ನೂ ಕೂಡ ಹೆಚ್ಚು ಮಾಡಲು ತೊಂದರೆ ಏನೂ ಆಗುವುದಿಲ್ಲ. ಆದರೆ ಇಂದು ನಗರ ಪ್ರದೇಶದಲ್ಲಿ ನಿವೇಶನ ಸಿಗುವುದು ಬಹಳ ಕಷ್ಟಕರವಾದ ಪರಿಸ್ಥಿತಿಗೆ ಬಂದಿದೆ.

ಒಬ್ಬ ಮಾನ್ಯ ಸದಸ್ಯರು :— ನಗರ ಪ್ರದೇಶದಲ್ಲಿ ಹೆಚ್ಚು ಜಾಗ ಸಿಕ್ಕರೆ ಮನೆ ಕಟ್ಟುವ ಜಾಗವನ್ನು ಹೆಚ್ಚು ಮಾಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ :—ಇದು ನನ್ನ ವ್ಯಾಪ್ತಿಗೆ ಬರುವುದಿಲ್ಲ. ಹೌಸಿಂಗ್ ಮಿನಿಸ್ಟರ್‌ರವರ ಗಮನಕ್ಕೆ ಇದನ್ನು ತರುತ್ತೇನೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಜೇನು ತಳಿಗಳಿಗೆ ತಗುಲಿರುವ ರೋಗ ನಿವಾರಣೆಗಾಗಿ ಕ್ರಮ ಜರುಗಿಸುವ ಬಗ್ಗೆ.

296 (1868)ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) :— ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಾಗೂ ರಾಜ್ಯದ ಇತರ ಭಾಗಗಳಲ್ಲಿ ಜೇನುತಳಿಗೆ ರೋಗ ತಗುಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ರೋಗ ನಿವಾರಣೆ ಮತ್ತು ಇದನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು?

ಆ) ರಾಜ್ಯದಲ್ಲಿ ಜೇನುತಳಿ ಸಂಶೋಧನಾ ಕೇಂದ್ರವನ್ನು ತೆರೆಯುವ ಯೋಜನೆ ಸರ್ಕಾರದ ಮುಂದಿದೆಯೇ? ಇದ್ದಲ್ಲಿ ವಿವರಗಳೇನು?

ಇ) ರಾಜ್ಯದಲ್ಲಿ ಪ್ರಸ್ತುತ ಉತ್ಪಾದನೆಯಾಗುತ್ತಿರುವ ಜೇನಿನ ಪ್ರಮಾಣ ಎಷ್ಟು?

ಶ್ರೀ ಎಸ್.ಆರ್ ಕಾಶಪ್ಪನವರ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :—

ಅ) ಹೌದು. ಜೇನುತಳಿಗೆ ಥಾಯ್‌ಸ್ಯಾಕ್ ಬ್ರೂಡ್ ವೈರಸ್ ಖಾಯಿಲೆ ತಗಲಿದ್ದು, ಈ ಖಾಯಿಲೆಯನ್ನು ಸಂಪೂರ್ಣವಾಗಿ ತಡೆಗಟ್ಟಲು ಯಾವುದೇ ರೀತಿಯ ಔಷಧಿ ಇರುವುದಿಲ್ಲವೆಂದು ಸಂಶೋಧನೆಯಿಂದ ಕಂಡು ಬಂದಿದೆ. ಆದಾಗ್ಯೂ ಖಾಯಿಲೆ ಹರಡದಂತೆ ಜೇನು ಕೃಷಿಕರಿಗೆ ತರಬೇತಿ ನೀಡುವುದು, ಪ್ರೇರಣ ಶಿಬಿರಗಳನ್ನು ನಡೆಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲದೆ ಆಯುರ್ವೇದಿಕ್ ಔಷದಿಯನ್ನು ಬಳಕೆ ಮಾಡಲಾಗುತ್ತಿದೆ.

ಆ) ಇಲ್ಲ.

ಇ) ವಾರ್ಷಿಕ ಸುಮಾರು 450 ಟನ್.

ಶ್ರೀ ಕೆ. ಪ್ರಭಾಕರ ಬಂಗೇರ :— ಮಾನ್ಯ ಅಧ್ಯಕ್ಷರೆ, ಜೇನುತಳಿಗೆ ಏನು ರೋಗ ಬಂದಿದೆ ಅದನ್ನು ಇದುವರೆಗೆ ಸಂಶೋಧನೆಯಿಂದ ತಡೆಗಟ್ಟುವುದಕ್ಕೆ ಆಗಿಲ್ಲವೆಂದಿದ್ದಾರೆ. ಆದರೆ ಆಯುರ್ವೇದಿಕ್ ಔಷಧವನ್ನು ಬಳಕೆ ಮಾಡಲಾಗುತ್ತಿದೆಯೆಂದು ಹೇಳಿದ್ದಾರೆ. ಆ ಆಯುರ್ವೇದಿಕ್ ಔಷಧ ಯಾವುದು ಎಂಬುದನ್ನು ಹೇಳಬೇಕು. ಇನ್ನೊಂದು ಪ್ರಶ್ನೆ ಬೇರೆ ದೇಶಗಳಲ್ಲೂ ವೈರಸ್ ಕಾಯಿಲೆ ಈ ಜೇನಿಗೆ ಹರಡಿದೆಯೇ? ಒಂದು ವೇಳೆ ಅಲ್ಲಿ ಹರಡಿ ಅದನ್ನು ತಡೆಗಟ್ಟಲು ಕ್ರಮ ತೆಗೆದುಕೊಂಡಿದ್ದರೆ ಅದೇ ರೀತಿಯಲ್ಲಿ ಇಲ್ಲೂ ಕೂಡ ಒಂದು ಸಂಶೋಧನೆಯನ್ನು ಏಕೆ ಪ್ರಾರಂಭ ಮಾಡಬಾರದು? ಇನ್ನು ಮೂರನೆಯದಾಗಿ ಹೇಳುವುದೇನೆಂದರೆ ಬಾಳೆಹೊನ್ನೂರಿನಲ್ಲಿ ಕಾಫಿ ಸಂಶೋಧನಾ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದು ಈಗ ನಿವೃತ್ತರಾದ ಕುಮಾರ್ ಎಂಬುವವರು ಇದಕ್ಕೆ ಒಂದು ಔಷಧಿಯನ್ನು ಕಂಡು ಹಿಡಿದಿದ್ದಾರೆ ಎನ್ನುವ ಮಾತನ್ನು ನಾನು ಕೇಳಿದ್ದೇನೆ. ಇದು ನಿಜವೇ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಎಸ್.ಆರ್. ಕಾಶಪ್ಪನವರ್ :— ಮಾನ್ಯ ಅಧ್ಯಕ್ಷರೆ, 1991-92ನೇ ಸಾಲಿನಲ್ಲಿ ಈ ಥಾಯ್‌ಸ್ಯಾಕ್ ಬ್ರೂಡ್ ವೈರಸ್ ಎಂಬ ರೋಗ ಜೇನು ಕೈಗಾರಿಕೆಗೆ ಕರ್ನಾಟಕದಲ್ಲಿ ತೊಂದರೆಯನ್ನುಂಟುಮಾಡಿತು. ಇದರಿಂದಾಗಿ ಶೇಕಡ 90ಕ್ಕೂ ಹೆಚ್ಚು ಜೇನು ಕುಟುಂಬಗಳು ಸ್ಥಳೀಯವಾಗಿ ನಾಶವಾದವು. 1992-93 ಹಾಗೂ 1993-94ರಲ್ಲಿ ಈ ಥಾಯ್‌ಸ್ಯಾಕ್ ಖಾಯಿಲೆಯಿಂದ ಜೇನನ್ನು ಕಳೆದುಕೊಂಡಂಥ ಜೇನು ಕುಟುಂಬದ ಕೈಗಾರಿಕೆಯ ಕೃಷಿಕರಿಗೆ ಇಲಾಖೆಯಿಂದ ಪ್ರತಿ ಕುಟುಂಬಕ್ಕೆ 50-00 ರೂಪಾಯಿಗಳಂತೆ ಒಟ್ಟು 12.5 ಲಕ್ಷ ರೂಪಾಯಿಗಳನ್ನು ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗೆ ನೀಡಲಾಗಿದೆ. ಈ ಖಾಯಿಲೆ ಯಾವ ಯಾವ ಭಾಗಗಳಿಂದ ಹರಡಿದೆ ಹಾಗೂ ಇದನ್ನು ನಿಯಂತ್ರಿಸುವ ಸಲುವಾಗಿ ಸಂಶೋಧನೆಯನ್ನು ಮಾಡಲು ಜೇನು ಕೃಷಿ ವಿಭಾಗ, ಪ್ರಾಣಿ

ಶಾಸ್ತ್ರ ಇಲಾಖೆ, ಬೆಂಗಳೂರು ವಿಶ್ವವಿದ್ಯಾಲಯದ ಕೀಟಶಾಸ್ತ್ರ ಇಲಾಖೆ, ಕೃಷಿ ವಿಶ್ವವಿದ್ಯಾಲಯಗಳಿಗೆ ವಹಿಸಿಕೊಡಲಾಗಿತ್ತು. ಆದರೆ ಇದುವರೆಗೆ ಪ್ರಪಂಚದಲ್ಲಿಯೇ ಈ ಖಾಯಿಲೆ ನಿಯಂತ್ರಣಕ್ಕೆ ಯಾವುದೇ ರೀತಿಯ ಔಷಧವಿರುವುದಿಲ್ಲವೆನ್ನುವ ವಿಷಯ ತಿಳಿದು ಬಂದಿದೆ. ಸನ್ಮಾನ್ಯ ಸದಸ್ಯರು ಈಗಾಗಲೇ ಯಾರೋ ಒಬ್ಬರು ಔಷಧಿಯನ್ನು ಕಂಡಿಹಿಡಿದಿದ್ದಾರೆ ಎನ್ನುವುದನ್ನು ಹೇಳಿದ್ದಾರೆ. ಅದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ಇದುವರೆಗೆ ಇಲಾಖೆಗೆ ಈ ವಿಷಯ ಗೊತ್ತಿಲ್ಲವಾದ್ದರಿಂದ ಅದನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಪ್ರಭಾಕರ ಬಂಗೇರ :— ಅಧ್ಯಕ್ಷರೆ, ಆಯುರ್ವೇದಿಕ್ ಔಷಧಿ ಉಂಟು ಎಂದಿದ್ದಾರೆ. ಅದು ಯಾವುದು ಎಂದುದನ್ನು ತಿಳಿಸಬೇಕು.

ಶ್ರೀ ಎಸ್.ಆರ್. ಕಾಶಪ್ಪನವರ್ :— ಅಧ್ಯಕ್ಷರೆ, ಈಗ ಆಯುರ್ವೇದಿಕ್ ಔಷಧಿಯನ್ನು ಉಪಯೋಗ ಮಾಡುತ್ತಿರುವ ಬಗ್ಗೆ ನಮಗೆ ತಿಳಿದುಬಂದಿದೆ. ಆದರೆ ಸ್ಪಷ್ಟವಾಗಿ ಔಷಧಿಯ ಹೆಸರಿನ ಬಗ್ಗೆ ತಿಳಿದುಕೊಂಡು ಮಾನ್ಯ ಸದಸ್ಯರಿಗೆ ಅದನ್ನು ಲಿಖಿತವಾಗಿ ತಿಳಿಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ಬೇರೆ ಬೇರೆ ಜಿಲ್ಲೆಗಳಲ್ಲಿ ಜೇನು ಕೃಷಿಕರ ಸಹಕಾರ ಸಂಘಗಳಿವೆ. ತಾವೇನು ತರಬೇತಿ ನೀಡುತ್ತೇವೆ ಮತ್ತು ಪ್ರೇರಣಾ ಶಿಬಿರಗಳನ್ನು ನಡೆಸುತ್ತೇವೆಂದು ಹೇಳಿದ್ದೀರಿ ಅದನ್ನು ನೇರವಾಗಿ ಸರ್ಕಾರದ ವತಿಯಿಂದ ನಡೆಸುತ್ತೀರಾ ಅಥವಾ ಸಹಕಾರಿ ಸಂಘಗಳ ಮೂಲಕ ಇದನ್ನು ನಡೆಸುತ್ತೀರಾ ಎಂಬ ಬಗ್ಗೆ ಹೇಳಬೇಕು. ಏಕೆಂದರೆ ಈ ಸಹಕಾರಿ ಸಂಘಗಳು ಅತ್ಯಂತ ಉತ್ಕೃಷ್ಟವಾಗಿ ಕೆಲಸವನ್ನು ಮಾಡಿ ಈಗೇನು ಜೇನು ಕುಟುಂಬ ನಾಶವಾಗಿದೆ ಅಲ್ಲಿ ಬದಲಿ ವ್ಯವಸ್ಥೆಗಳನ್ನು ಕೂಡ ಈ ಸಹಕಾರ ಸಂಘಗಳು ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಉದಾಹರಣೆಗೆ ಹೇಳಬೇಕೆಂದರೆ ದಕ್ಷಿಣ ಕನ್ನಡ ಜಿಲ್ಲೆಯ ಜೇನು ಕೃಷಿಕರ ಸಹಕಾರ ಸಂಘದವರು ಹೊಸ ತಳಿಗಳನ್ನೂ ಕೂಡ ತಯಾರು ಮಾಡುವ ಕೆಲಸವನ್ನು ಮಾಡುತ್ತಿರುವುದನ್ನು ನಾವು ನೋಡಿದ್ದೇವೆ. ಆದ್ದರಿಂದ ನಾನು ಕೇಳುವುದೇನೆಂದರೆ ಶಿಬಿರಗಳನ್ನು ಮಾಡುತ್ತೇವೆ ಎಂದಿದ್ದೀರಿ ಅದನ್ನು ಸರ್ಕಾರದ ವತಿಯಿಂದ ಮಾಡುತ್ತೀರೋ ಅಥವಾ ಸಹಕಾರ ಸಂಘಗಳ ಮೂಲಕ ಮಾಡುತ್ತೀರೋ ಎಂಬುದನ್ನು ಹೇಳಬೇಕು. ಈ ಒಂದು ಹೊಸ ತಳಿಗಳನ್ನು ತಯಾರು ಮಾಡುವುದಕ್ಕೆ ಸರ್ಕಾರದಿಂದ ಏನು ಕ್ರಮ ಕೈಗೊಂಡಿದ್ದೀರಿ?

ಶ್ರೀ ಎಸ್.ಆರ್. ಕಾಶಪ್ಪನವರ್ :— ಮೊದಲು ಇದು ಐದು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿತ್ತು. ಆದನ್ನು ನಾವು ಇಡೀ ಕರ್ನಾಟಕ ರಾಜ್ಯದಲ್ಲಿ ಜೇನು ಕೃಷಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು ಅದರಲ್ಲಿ ಅವರಿಗೆ ಒದಗಿಸತಕ್ಕಂಥ ಪೆಟ್ಟಿಗೆಗಳಲ್ಲಿ

ಐವತ್ತು ಪರ್ಸೆಂಟ್ ಸಬ್ಸಿಡಿ ಕೊಡುವುದರ ಮೂಲಕ ಇಡೀ ರಾಜ್ಯವನ್ನು ಕಾರ್ಯಕ್ಷೇತ್ರವನ್ನಾಗಿ ಮಾಡಿದ್ದೇವೆ. ಹೀಗೆ ಕಾರ್ಯಕ್ಷೇತ್ರವನ್ನು ವಿಸ್ತರಿಸಿದ ನಂತರ ಬಹುತೇಕ ಉತ್ತರ ಕರ್ನಾಟಕದಲ್ಲಿ ಬೆಳೆಯತಕ್ಕಂಥ ಇಪ್ಪತ್ತಾರು ತಳಿಗಳ ಬೆಳೆಯ ಇಳುವರಿ ಕೂಡ ಅಧಿಕವಾಗಿದೆ. ಸುಮಾರು 20 ರಿಂದ 70 ಪರ್ಸೆಂಟ್‌ವರೆಗೂ ರೈತರ ಇಳುವರಿ ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿದೆ. ಖಾಸಗಿ ಸಂಸ್ಥೆಗಳಿಂದ ಇವರಿಗೆ ಟ್ರೈನಿಂಗ್ ಹಾಗೂ ಇನ್ನಿತರ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಎನ್‌ಜಿಓಗಳು ಇವರ ಸಹಾಯಕ್ಕೆ ಬರುತ್ತಾರೆ. ಖಾಸಗಿಯಾಗಿ ಯಾರು ಈ ಕೆಲಸವನ್ನು ಮಾಡಲು ಮುಂದೆ ಬರುತ್ತಾರೆ, ರೈತರಾಗಲಿ ಅಥವಾ ಯಾವುದೇ ವ್ಯಕ್ತಿಯಾಗಲಿ, ಇಂತಹವರೇ ಎಂದು ನಿರ್ದಿಷ್ಟವಾಗಿ ಇಲ್ಲ, ಯಾರೇ ಮುಂದೆ ಬಂದರೂ ಅವರಿಗೆ ಆ ಸಹಾಯ ಸೌಲಭ್ಯಗಳನ್ನು ಕೊಡತಕ್ಕಂಥ ಕೆಲಸವನ್ನು "ವಿಶ್ವ" ಇಲಾಖೆಯ ಅಧಿಕ ನಿರ್ದೇಶಕರು ಮಾಡುತ್ತಾರೆ. ಇದಕ್ಕಾಗಿ ಮುಕ್ತವಾದ ವ್ಯವಸ್ಥೆಯನ್ನು ನಾವು ಮಾಡಿದ್ದೇವೆಂದು ತಮ್ಮ ಮೂಲಕ ತಿಳಿಯಪಡಿಸುತ್ತೇನೆ.

ರಾಜ್ಯದಲ್ಲಿ ನದಿಗಳಿಂದ ಮರಳು ತೆಗೆಯುವುದನ್ನು ತಡೆಗಟ್ಟುವುದು.

297 (3428) ಶ್ರೀ ಸಿಂಧ್ಯ ಪಿ.ಜಿ.ಆರ್. (ಕನಕಪುರ) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ನದಿಗಳಿಂದ ಮರಳು ತೆಗೆಯುವುದರಿಂದ ಹೊಳೆಯ ಪಕ್ಕದ ತೋಟಗಳಿಗೆ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ (ಸೇತುವೆ, ರಸ್ತೆಗಳು ಇತ್ಯಾದಿ) ಅಪಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :—

ಮರಳು ಗಣಿ ಗುತ್ತಿಗೆಯನ್ನು ನೀಡುವಾಗ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ (ಸೇತುವೆ, ರಸ್ತೆ ಇತ್ಯಾದಿ) ಇವುಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಅವುಗಳಿಗೆ ಅಪಾಯವಾಗದಂತೆ ಅವುಗಳ ಸುರಕ್ಷತೆಯ ಬಗ್ಗೆ ಗಮನ ಇಟ್ಟುಕೊಂಡು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ 1994ರ ನಿಯಮ 6(2) ರ ಅನುಸಾರವೇ ಗುತ್ತಿಗೆಯನ್ನು ನೀಡಲಾಗುತ್ತಿದೆ. ಈ ನಿಯಮದಂತೆ ಕನಿಷ್ಠ 50 ಮೀಟರ್‌ದಲ್ಲಿ ಯಾವುದೇ ಗಣಿಗಾರಿಕೆಯನ್ನು ಮಾಡಲು ಅವಕಾಶ ಇರುವುದಿಲ್ಲ.

ಈಗ ಬಹಿರಂಗ ಹರಾಜಿನ ಮುಖಾಂತರ ಮರಳು ಗುತ್ತಿಗೆಯನ್ನು ನೀಡುವುದರಿಂದ ಅದಕ್ಕಾಗಿಯೇ ನೇಮಕಗೊಂಡಿರುವ ಸಮಿತಿಯು ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡೇ ಹರಾಜು ಮಾಡಲಾಗುತ್ತಿದೆ.

ಆದಾಗ್ಯೂ ಸಾರ್ವಜನಿಕರಿಂದ ಕೆಲವೊಮ್ಮೆ ಇಂತಹ ಸಾರ್ವಜನಿಕರಿಗೆ ಸಂಬಂಧಪಟ್ಟ ಸ್ಥಳಗಳಲ್ಲಿ (ಸೇತುವೆ, ದೇವಸ್ಥಾನ ಇತ್ಯಾದಿ) ಅನಧಿಕೃತವಾಗಿ ಮರಳನ್ನು ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಅವುಗಳ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಆ) ದೂರು ಬಂದ ಪ್ರದೇಶಗಳನ್ನು ತಪಾಸಣೆ ಮಾಡಿ ಅಂತಹ ಕಡೆ ಅನಧಿಕೃತವಾಗಿ ಮರಳನ್ನು ತೆಗೆಯುತ್ತಿದ್ದಲ್ಲಿ, ಅಂತಹವರ ಮೇಲೆ ಕ್ರಮ ತೆಗೆದುಕೊಂಡಿರುವುದಲ್ಲದೆ ಅವುಗಳಲ್ಲಿ ಗಣಿ ಗುತ್ತಿಗೆ ಇದ್ದಲ್ಲಿ ಅವುಗಳನ್ನು ರದ್ದುಪಡಿಸಿ ಅಂತಹ ಕಡೆ ಮರಳು ತೆಗೆಯುವುದನ್ನು ನಿಷೇಧಿಸುವ ಕಾಯ್ದೆಯನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಹೊರಡಿಸುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ಕಳೆದ ವರ್ಷದ ಅಧಿವೇಶನದಲ್ಲಿ ಸಹ ಇದೇ ಪ್ರಶ್ನೆ ಬಂದಿದೆ. ನಾನು ಏಕೆ ಈ ಪ್ರಶ್ನೆ ಕೇಳುತ್ತಿದ್ದೇನೆ ಎಂದರೆ ಇದೊಂದು ಬಹಳ ಗಂಭೀರವಾದಂತಹ ಪರಿಸ್ಥಿತಿ ಎಲ್ಲಾ ಕಡೆಗಳಲ್ಲಿ ಉದ್ಭವವಾಗುತ್ತಿದೆ. ಇದು ಯಾವ ಮಟ್ಟಕ್ಕೆ ಹೋಗಿದೆಯೆಂದರೆ ನಾನು ಮೊನ್ನೆ ಬೆಳಗಾಂ ಹಾಗೂ ಬಿಜಾಪುರ ಜಿಲ್ಲೆಗೆ ಹೋದಾಗ ಕೃಷ್ಣ ನದಿಯಲ್ಲಿ ಗುಜರಾತ್‌ನಿಂದ ಡ್ರೆಡ್ಜಿಂಗ್ ಮೆಷಿನ್‌ಗಳನ್ನು ತೆಗೆದುಕೊಂಡು ಬಂದು ಅದನ್ನು ಬೋಟ್ ಮೇಲೆ ಇಟ್ಟು, ಹೊಳೆಯೊಳಗಡೆ ಡ್ರೆಡ್ಜಿಂಗ್ ಅನ್ನು ಬಿಟ್ಟು ಮರಳನ್ನು ತೆಗೆದುಬಿಟ್ಟು ಹೊರಗಡೆ ದಂಡೆ ಮೇಲೆ ಇಟ್ಟುಕೊಳ್ಳುತ್ತಿದ್ದಾರೆ. ಇದಾದ ಮೇಲೆ ಬೇರೆ ಬೇರೆ ರಾಜ್ಯಗಳಿಗೆ ಮರಳನ್ನು ಸಾಗಿಸುತ್ತಿದ್ದಾರೆ. ಇದೊಂದು ದೊಡ್ಡ ದಂಧೆಯಾಗಿದೆ. ಇದನ್ನು ಬ್ಯಾನ್ ಮಾಡಬೇಕೆಂದು ನಾವು ಕಳೆದ ಸಾರಿಯೇ ಹೇಳಿದ್ದೇವೆ. ಆದರೆ ಸರ್ಕಾರದವರು ಇದನ್ನು ಬ್ಯಾನ್ ಮಾಡಿಲ್ಲ. ಇನ್ನು ಎರಡನೆಯದಾಗಿ, ಸೇತುವೆಗಳಿಗೆ ಅಪಾಯವಾಗುತ್ತಿರುವುದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಈ ಬಗ್ಗೆ 19994ರ ಅಧಿನಿಯಮದ ಪ್ರಕಾರ ನೀವು ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಅದೇನೆಂದರೆ ಲೀಸ್ ಅನ್ನು ಕ್ಯಾನ್ಸಲ್ ಮಾಡಬಹುದು ಅಷ್ಟೇ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ ನೀವು ಒಂದು ಅಮೆಂಡ್‌ಮೆಂಟ್ ತೆಗೆದುಕೊಂಡಿಬನ್ನಿ. ಯಾರು ಈ ರೀತಿಯಾಗಿ ಸಾರ್ವಜನಿಕ ಕಟ್ಟಡಗಳಿಗೆ, ರಸ್ತೆಗಳಿಗೆ ಹಾಗೂ ಸೇತುವೆಗಳಿಗೆ ಅಪಾಯ ತರುವ ರೀತಿಯಲ್ಲಿ ಮರಳನ್ನು ತೆಗೆಯುತ್ತಿದ್ದಾರೆ ಅವರಿಗೆ ಶಿಕ್ಷೆಯಾಗಬೇಕು. ಆ ರೀತಿ ಮಾಡಿದರೆ ಮಾತ್ರ ಇವತ್ತು ಅದನ್ನು ನಿಲ್ಲಿಸಬಹುದು ಇಲ್ಲದೇ ಇದ್ದರೆ ಅದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ನೂರಾರು ಸೇತುವೆಗಳು ಇವತ್ತು ಕೊಲಾಪ್ಸ್ ಆಗತಕ್ಕಂಥ ಸ್ಥಿತಿಯಲ್ಲಿ ಇವೆ. ಅದನ್ನು ತಾವೂ ಸಹ ನೋಡಿರಬಹುದು. ಇದು ಒಂದು ಕಡೆಯಾಯಿತು. ಇನ್ನೊಂದು ಕಡೆ ಮಾನ್ಯ ಸಚಿವರು ಬಹಳ ದೂರ ಏನೂ ಹೋಗುವುದು ಬೇಡ. ರಾಮನಗರದಿಂದ ಸಾತನೂರಿನವರೆಗೂ ಸಹ ನೀವು ಪ್ರವಾಸ ಮಾಡಿ. ಅರ್ಕಾವತಿ ಹೊಳೆ ಪಕ್ಕದಲ್ಲಿ ನೋಡಿದರೆ, ಅದು ಹೊಳೆ ಯಾವ ಕಡೆ ಇದೆ

ಎಂದು ಗೊತ್ತಾಗುವುದಿಲ್ಲ. ಸಂಪೂರ್ಣವಾಗಿ ರಸ್ತೆಯನ್ನು ಕೊಚ್ಚಿಕೊಂಡು ಹೋಗುತ್ತಿದೆ. ಅಂತಹ ಸ್ಥಿತಿಯಲ್ಲಿ ಇರುವಾಗ ನಾವು ಏನು ಮಾಡಬೇಕು? ರೈತರಿಗೂ ಸಹ ನಾವು ತಿಳುವಳಿಕೆ ಕೊಡಬೇಕಾಗುತ್ತದೆ. ಇಲ್ಲದೇ ಇದ್ದರೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಇದರ ಬಗ್ಗೆ ಸರ್ಕಾರ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ತಾವು ಶಿಕ್ಷಾರ್ಹ ಅಪರಾಧವನ್ನಾಗಿ ಕಾನೂನು ಮಾಡುವುದಕ್ಕೆ ಇರುವಂತಹ ತೊಂದರೆ ಏನು? ಇನ್ನು ಎರಡನೆಯದಾಗಿ ಡ್ರೆಡ್ಜಿಂಗ್ ಮೆಷಿನ್ ಬೋಟ್‌ನಲ್ಲಿ ಇಟ್ಟುಕೊಂಡು ಉತ್ತರ ಕರ್ನಾಟಕದಲ್ಲಿ ಮರಳು ತೆಗೆಯುತ್ತಿರುವುದನ್ನು ಬ್ಯಾನ್ ಮಾಡುವುದಕ್ಕೆ ನಿಮಗೆ ತೊಂದರೆ ಏನು? ಎಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ (ಗೌರಿಬಿದನೂರು) :— ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿಯೂ ಸಹ ಇದೇ ರೀತಿಯ ಸಮಸ್ಯೆಯಾಗಿದೆ. ಉತ್ತರ ಪಿನಾಕಿನಿ ನದಿಯಲ್ಲಿ ಸಾಕಷ್ಟು ಮರಳು ಅನಧಿಕೃತವಾಗಿ ಹೊರಗಡೆ ಹೋಗುತ್ತಿತ್ತು. ಆದರೆ ಅದನ್ನು ಸುಮಾರು ಹತ್ತು ವರ್ಷದ ಹಿಂದೆ ಡಿ.ಸಿಯವರು ಬ್ಯಾನ್ ಮಾಡಿದರು. ಮೊನ್ನೆ ಆ ಬ್ಯಾನ್ ತೆರವು ಮಾಡಿ ಸುಮಾರು 8-10 ಗುತ್ತಿಗೆದಾರರಿಗೆ ಕೊಟ್ಟಿದ್ದಾರೆ. ಅಲ್ಲಿ ಪ್ರತಿದಿವಸ ಮರಳು ಸಾಗಿಸುತ್ತಿದ್ದಾರೆ. ಈ ಮರಳನ್ನು ಎಲ್ಲಿಂದ ತೆಗೆದು ಸಾಗಿಸಿದರೂ, ಸೇತುವೆಗಳು ಅದರ ಹತ್ತಿರ ಅಥವಾ ದೂರ ಇದ್ದರೂ ಕೂಡ ಮಟ್ಟ ಕಡಿಮೆಯಾದಾಗ ತಕ್ಷಣ ಕನಸ್ಟ್ರಕ್ಷನ್ ಎಕ್ಸ್‌ಪೋಸ್ ಆಗುತ್ತದೆ. ಕಾಲಕ್ರಮೇಣ ಆ ಬ್ರಿಡ್ಜ್‌ಗಳು ಹೊರಟು ಹೋಗುತ್ತವೆ. ಆದುದರಿಂದ ನಮ್ಮ ತಾಲ್ಲೂಕಿನಲ್ಲಿ ಉತ್ತರ ಪಿನಾಕಿನಿ ನದಿಯಲ್ಲಿ ಇದನ್ನು ಬ್ಯಾನ್ ಮಾಡುವ ಕ್ರಮ ತೆಗೆದುಕೊಳ್ಳಬೇಕು. ಈಗ ಕೊಟ್ಟಿರತಕ್ಕಂಥ ಲೈಸೆನ್ಸ್ ರದ್ದು ಮಾಡಬೇಕು. ಇದರಿಂದ ಬಹಳ ತೊಂದರೆಯಾಗುತ್ತಿದೆ. ಅದರ ಜೊತೆಗೆ ಅಜುಬಾಜಿನಲ್ಲಿ ಅಂತರ್ಜಲ ಇಲ್ಲದೆ ಬಾವಿ ಬತ್ತಿಹೋಗಿದೆ. ದಯವಿಟ್ಟು ಅಂತರ್ಜಲವನ್ನು ಉಳಿಸುವ ದೃಷ್ಟಿಯಿಂದ ತಕ್ಷಣ ಇದನ್ನು ಬ್ಯಾನ್ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ :— ಮಾನ್ಯ ಅಧ್ಯಕ್ಷರೆ, ಈ ಮರಳು ವಿತರಣೆ ವ್ಯವಸ್ಥೆಯನ್ನು ತಮಗೆ ಗೊತ್ತಿದ್ದ ಹಾಗೆ ಹಿಂದಿನ ಸರ್ಕಾರ ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಟ್ಟಿತ್ತು. ಆದರೆ ವ್ಯವಸ್ಥಿತವಾಗಿ ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲಿಲ್ಲ. ನಮ್ಮ ಸರ್ಕಾರ ಬಂದಮೇಲೆ ಇದರ ಬಗ್ಗೆ ಒಂದು ದೊಡ್ಡ ಗೊಂದಲವುಂಟಾಯಿತು. ಇದನ್ನು ಯಾವರೀತಿ ನಿಯಂತ್ರಣ ಮಾಡಬೇಕೆಂದು ಸಮಸ್ಯೆಯಾಯಿತು. ಇದರ ಬಗ್ಗೆ ನಾವು ಇಲಾಖೆಯವರ ಹತ್ತಿರ ಚರ್ಚೆ ಮಾಡಿ, ನಾಲ್ಕು ಕಡೆಯಿಂದ ಬೆಂಗಳೂರು ನಗರಕ್ಕೆ ಬರತಕ್ಕಂಥ ಹತ್ತಾರು ಲಾರಿಗಳನ್ನು ನೋಡಿ ಸಂಬಂಧಪಟ್ಟ ಲಾರಿಗಳನ್ನು ಸೀಜ್ ಮಾಡಿ, ಅದಕ್ಕೆ ದಂಡ ವಿಧಿಸಬೇಕೆಂದು ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟೆ. ತಮಗೆ ಗೊತ್ತಿದೆ 20-25 ದಿವಸ ಬೆಂಗಳೂರು ಸುತ್ತಮುತ್ತ ಧರಣಿ ಮಾಡಿದರು.

ತದನಂತರ ಅವರನ್ನೆಲ್ಲಾ ಕರೆದು ಇದರ ಬಗ್ಗೆ ಚರ್ಚೆ ಮಾಡಿದೆವು. ಮರಳು ವಿತರಣೆ ಮಾಡುವ ವ್ಯವಸ್ಥೆಗೆ ಹೊಸ ಕಾನೂನು ತರಬೇಕೆಂದು ಆಯಿತು. ಈ ಮರಳು ಅತ್ಯಾವಶ್ಯಕವಾದಂತಹ ವಸ್ತುವಾಗಿದೆ. ಕಾರಣ ಇವತ್ತು ಬಡವರ ಮನೆಯನ್ನು ಕಟ್ಟಬೇಕಾದರೂ ಸಿಮೆಂಟ್ ಹಾಕಿ ಕಟ್ಟಬೇಕೆಂದು ಸೂಚನೆ ಕೊಟ್ಟಿದ್ದೇವೆ. ಇಂತಹ ಒಂದು ಸಂದರ್ಭದಲ್ಲಿ ಈ ಮರಳನ್ನು ಯಾವರೀತಿಯಾಗಿ ವ್ಯವಸ್ಥಿತವಾಗಿ ವಿತರಣೆ ಮಾಡಬೇಕೆಂದು ಸಮಸ್ಯೆ ಬಂತು. ದಿನಾಂಕ: 16.10.2000ದಂದು ಒಂದು ಹೊಸ ಸರ್ಕಾರಿ ಆದೇಶವನ್ನು ಹೊರಡಿಸಿ, ನಿರ್ದಿಷ್ಟವಾಗಿ ಅದರಲ್ಲಿ ಎಲ್ಲೆಲ್ಲಿ ಪರಿಸರಕ್ಕೆ, ಅಂತರ್ಜಲಕ್ಕೆ, ಸಾರ್ವಜನಿಕವಾದಂತಹ ಕಟ್ಟಡ ಹಾಗೂ ಸೇತುವೆ, ರಸ್ತೆಗಳಿಗೆ ಧಕ್ಕೆ ಬರುತ್ತೆ ಅಂತಹ ಕಡೆ ನಿರ್ಬಂಧ ಮಾಡಬೇಕು ಹಾಗೂ ಮುಖ್ಯವಾಗಿರತಕ್ಕಂಥ ಪ್ರದೇಶಗಳನ್ನು ಹರಾಜು ಮುಖಾಂತರ ಕೊಡಬೇಕೆಂದು ಆ ಹೊಸ ಆಜ್ಞೆಯಲ್ಲಿ ಕೊಟ್ಟಿದ್ದೇವೆ. ಮತ್ತು ಮಾನ್ಯ ಸದಸ್ಯರು ಹೇಳಿದ ಹಾಗೆ ಡ್ರೆಡ್ಜಿಂಗ್ ಮೆಷಿನ್ ಹಾಗೂ ಜೆಸಿಬಿಗಳಲ್ಲಿ ಏನು ಮರಳು ಲಿಫ್ಟ್ ಮಾಡುತ್ತಾರೆ ಅದನ್ನು ಯಾವುದೇ ಕಾರಣಕ್ಕೂ ಉಪಯೋಗಿಸಬಾರದು, ಮೆಕ್ಯಾನಿಕಲ್ ಮೆಥೆಡ್‌ನಿಂದ ತೆಗೆಯಬಾರದೆಂದೂ ಸಹ ಆ ಹೊಸ ಆಜ್ಞೆಯಲ್ಲಿ ಸೂಚನೆಯನ್ನು ಕೊಟ್ಟಿದ್ದೇವೆ. ತಾವು ಹೇಳಿದ ಹಾಗೆ ಮಂಗಳೂರು, ಬೆಳಗಾಂ ಈ ಕಡೆಯಿಂದ ನಮಗೆ ಅನೇಕ ದೂರುಗಳು ಬಂತು. ಅದಕ್ಕೋಸ್ಕರ ನಾವು ಆ ಸರ್ಕಾರಿ ಆಜ್ಞೆಯಲ್ಲಿ ಅದನ್ನು ನಿರ್ದಿಷ್ಟವಾಗಿ ಸೇರಿಸಿದ್ದೇವೆ. ಜೊತೆಗೆ ಇವತ್ತು ಏನು ಹರಾಜು ಮೂಲಕ ಮರಳನ್ನು ಕೊಟ್ಟಾಗ ಬರತಕ್ಕಂಥ ಹಣದಲ್ಲಿ ಅರ್ಧ ಸರ್ಕಾರಕ್ಕೆ ಹಾಗೂ ಇನ್ನರ್ಧ ಹಣವನ್ನು ಸಂಬಂಧಪಟ್ಟ ಪಂಚಾಯಿತಿಗಳಿಗೆ ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಕಾರಣ ಇಷ್ಟೆ, ಎಲ್ಲೆಲ್ಲಿ ಅಕ್ರಮವಾಗಿ ಮರಳು ತೆಗೆಯುತ್ತಾರೆ ಅದನ್ನು ತಡೆಗಟ್ಟುವುದಕ್ಕೆ ಸಹಕಾರ ಮಾಡಲಿ ಎಂದು ಅಂತಹ ಒಂದು ಅನುಕೂಲವನ್ನು ಆ ಪಂಚಾಯಿತಿಗಳಿಗೆ ಮಾಡಿಕೊಟ್ಟಿದ್ದೇವೆ. ಪಂಚಾಯಿತಿಗಳಿಗೆ ಅರ್ಧ ಕೊಟ್ಟರೆ ಅವರು ನಮಗೆ ಸಪೋರ್ಟ್ ಮಾಡುತ್ತಾರೆ ಎನ್ನುವ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ. ಆದರ ಜೊತೆಗೆ ನೀವು ಎಲ್ಲೆಲ್ಲಿ ಕ್ರಮ ತೆಗೆದು ಕೊಂಡಿದ್ದೀರಿ ಎಂದು ಕೇಳಿದ್ದಿರಿ. ಇವತ್ತು ಅರ್ಕಾವತಿ ನದಿಗೆ ಸೇತುವೆಗಳು ಇರತಕ್ಕಂಥ ಸಂದರ್ಭದಲ್ಲಿ ಐವತ್ತು ಮೀಟರ್ ದೂರ ಇರುವಂತಹ ಕಡೆ ಗಣಿಗೆ ಗುತ್ತಿಗೆ ಕೊಟ್ಟಿದ್ದೆವು. ಆದರೆ ಅಲ್ಲಿಂದ ಬಂದಂತಹ ದೂರುಗಳ ಆಧಾರದ ಮೇಲೆ ನಾವು ಅದನ್ನು ಈಗಾಗಲೇ ವಜಾ ಮಾಡಿದ್ದೇವೆ. ಅಲ್ಲಿ ಗಣಿಗಾರಿಕೆಗೆ ಲೀಸ್ ಮೇಲೆ ಏನು ಕೊಟ್ಟಿತ್ತು, ಅದನ್ನು ಕ್ಯಾನ್ಸಲ್ ಮಾಡಿದ್ದೇವೆ. ಅದೇರೀತಿ ಕಣ್ವ ನದಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ಇಲ್ಲಿಂದ ಬಂದಂತಹ ದೂರುಗಳ ಆಧಾರದ ಮೇಲೆ ಅಲ್ಲಿ ಕೊಟ್ಟಂತಹ ಗುತ್ತಿಗೆಯನ್ನು ರದ್ದುಮಾಡಿದ್ದೇವೆ. ಶಿಂಷಾ ನದಿ ಮದ್ದೂರು ತಾಲ್ಲೂಕಿನಲ್ಲಿ ನೀಡಿರುವಂತಹದನ್ನು ಈಗಾಗಲೇ ಕ್ಯಾನ್ಸಲ್ ಮಾಡಿದ್ದೇವೆ. ಇದೆಲ್ಲಕ್ಕೂ ಮಿಗಿಲಾಗಿ ಈ ಹೊಸ ಆಜ್ಞೆ ಏನು ಮಾಡಿದ್ದೇವೆ, ಅದರಲ್ಲಿ, ಒಂದು ಕಮಿಟಿ ಮಾಡಿ ಅದಕ್ಕೆ

ಅಸಿಸ್ಟೆಂಟ್ ಕಮಿಷನರ್ ಅಧ್ಯಕ್ಷರಾಗಿರುತ್ತಾರೆ. ಸಂಬಂಧಪಟ್ಟ ತಹಸೀಲ್ದಾರ್ ಆ ತಾಲ್ಲೂಕು ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಯಾಲಜಿಸ್ಟ್ ಎಂದರೆ ಭೂವಿಜ್ಞಾನಿಗಳು ಆ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಈ ನಾಲ್ಕು ಜನ ಸೇರಿ ಯಾವ್ಯಾವ ಪ್ರದೇಶಗಳಲ್ಲಿ ನಿರ್ಬಂಧ ಮಾಡಬೇಕು, ಯಾವ್ಯಾವ ಪ್ರದೇಶವನ್ನು ಹರಾಜು ಮಾಡಿ ಮರಳು ವಿತರಣೆ ಮಾಡಬೇಕೆಂದು ಆ ಆಜ್ಞೆಯಲ್ಲಿ ಸೇರಿಸಿದ್ದೇವೆ. ಆ ಸಮಿತಿಯವರು ಎಲ್ಲೆಲ್ಲಿ ನಿರ್ಬಂಧ ಮಾಡಬೇಕು, ಎಲ್ಲೆಲ್ಲಿ ವಿತರಣೆ ಮಾಡಬೇಕೆಂದು ಸಮೀಕ್ಷೆ ಮಾಡಿ, ಅಂತಿಮವಾಗಿ ಹರಾಜು ಮಾಡತಕ್ಕಂಥ ವ್ಯವಸ್ಥೆಯನ್ನು ಜಾರಿಗೊಳಿಸಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಮಂತ್ರಿಗಳು ಹೇಳಿರತಕ್ಕಂಥ ವಿಚಾರವೆಲ್ಲಾ ಸತ್ಯ. ಆದರೆ ನಾವು ಏನು ಹೇಳಿದ್ದೇವೆ, ನಿಮ್ಮ ಜಿಲ್ಲೆಯಲ್ಲೇ ಬಾಗೇಪಲ್ಲಿಯಲ್ಲಿ ನೋಡಿ ನಾವು ಬೇರೆ ಕಡೆ ಹೋಗುವುದಿಲ್ಲ. ನೀವು ವೃಷಭಾವತಿ ನದಿ ತೀರ ನೋಡಿ. ಕೃಷ್ಣ ನದಿ ತೀರದಲ್ಲಿ ನೀವು ಹೋಗಿ ನೋಡಿಕೊಂಡು ಬನ್ನಿ. ಅರ್ಕಾವತಿ ನದಿಗೆ ಸಾಯಂಕಾಲ ಹೋಗಿ ನೋಡಿಕೊಂಡು ಬನ್ನಿ ಇವತ್ತು ಅವರು ಏನು ಹೇಳಿದ್ದಾರೆ ಅದರ ವಿರುದ್ಧ ಅಲ್ಲಿ ನಡೆಯುತ್ತಿದೆ. ನೀವು ಅಸಿಸ್ಟೆಂಟ್ ಕಮಿಷನರ್ ಅಧ್ಯಕ್ಷತೆಯಲ್ಲಿ ಕಮಿಟಿ ಮಾಡಿರುವುದು ನಿಜ. ಅದರ ಜೊತೆಗೆ ಮರಳು ಅತ್ಯಾವಶ್ಯಕ ವಸ್ತು, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಆ ಮರಳು ತೆಗೆದು ಸಂಪೂರ್ಣವಾಗಿ ಕಟ್ಟಡಗಲು ಕೋಲಾಪ್ಸ್ ಆಗುವಂತಹ ಪರಿಸ್ಥಿತಿಗೆ ಬಂದಿದೆ. ಒಂದು ಕಡೆ ಎರಡು ಮೂರು ಕೋಟಿ ರೂಪಾಯಿ ಖರ್ಚು ಮಾಡಿ ಸೇತುವೆಗಳನ್ನು ಮಾಡಿದ್ದೀರಿ. ಮತ್ತೊಂದು ಕಡೆಯಿಂದ ಬೀಳಿಸಿಕೊಂಡು ಬರುತ್ತೀರಿ ಎಂದರೆ ಹೇಗೆ? ಮಾನ್ಯ ಅಧ್ಯಕ್ಷರೆ, ಎಲ್ಲಾ ಕಡೆಗಳಲ್ಲಿ ನೋಡಿ. ಎಲ್ಲೆಲ್ಲಿ ಸೇತುವೆಗಳನ್ನು ಕಟ್ಟಿದ್ದಾರೆ ಅಲ್ಲಿ ಮರಗಳು ತೆಗೆದು ಮೂರ್‍ನಾಲ್ಕು ಅಡಿ ಇಳಿಯುತ್ತಿದೆ. ನಾಲ್ಕೈದು ವರ್ಷವಾದರೆ ಕರ್ನಾಟಕ ರಾಜ್ಯದಲ್ಲಿ ಏನು ಪರಿಸ್ಥಿತಿ ಬರುತ್ತದೆ ಎಂಬುದನ್ನು ಯೋಚನೆ ಮಾಡಿ. ಇದು ಒಂದು. ಬಹಳ ಪ್ರಮುಖವಾಗಿ ನದಿ ತನ್ನ ಪಾತ್ರವನ್ನು ಬದಲಾವಣೆ ಮಾಡುತ್ತಿದೆ. ಎಲ್ಲಾ ಕಡೆಗಳಲ್ಲಿ ಬಹಳ ಫಲವತ್ತಾದ ತೋಟಗಳು ಹಾಳಾಗಿ ಹೋಗುತ್ತಿವೆ. ಅದು ತಮಗೆ ಕಣ್ಣಿಗೆ ಕಾಣಿಸುತ್ತಿದೆ. ಅದಕ್ಕೆ ನಾನು ಹೇಳುವಂಥಾದ್ದು ಏನೆಂದರೆ ಈ ಪಂಚಾಯತ್‌ಗಳಿಗೆ ಕೊಡುವುದರಿಂದ ಎಫೆಕ್ಟೀವ್ ಆಗಿ ಆಗುತ್ತದೆಂದು ನನಗನ್ನಿಸುವುದಿಲ್ಲ. ಆದರೆ ಆದಾಯದ ದೃಷ್ಟಿಯಿಂದ ಇವುಗಳನ್ನು ಪಂಚಾಯತ್‌ಗಳಿಗೆ ಕೊಡಿ, ಅದಕ್ಕೆ ನನ್ನದು ಏನು ತಕರಾರು ಇಲ್ಲ. ಆದರೆ ಇದು ಶಿಕ್ಷಾರ್ಹವಾದಂತಹ ಅಪರಾಧರೆಂದು ತಾವು ಕಾನೂನಿನಲ್ಲಿ ಏಕೆ ತಿದ್ದುಪಡಿಯನ್ನು ತರಬಾರದು?

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :— ಮಾನ್ಯ ಅಧ್ಯಕ್ಷರೇ, ಸರ್ಕಾರ ಮರಳು ತೆಗೆಯುವಂತಹ ವಿಚಾರದಲ್ಲಿ ಏನೇನು ನಿಯಮಗಳನ್ನು ಹಾಕಿದೆ, ಆ ಎಲ್ಲಾ

ನಿಯಮಗಳು ಕಾಗದದ ಮೇಲೆ ಮಾತ್ರ ಇದೆ. ಇಲ್ಲಿ ನಿಯಮಗಳು ಇರುವಂಥಾದ್ದೇ ಬೇರೆ, ಅಲ್ಲಿ ನಡೆಯುತ್ತಿರುವಂತಹ ವಿಧಾನವೇ ಬೇರೆ. ನೀವು ಯಾವ ಸರ್ವೆ ನಂಬರ್‌ಗೆ ಲೀಸ್ ಕೊಟ್ಟಿರುತ್ತೀರಿ, ಆ ಸರ್ವೆ ನಂಬರ್‌ನಲ್ಲಿ ಮರಳನ್ನು ತೆಗೆಯುವುದಿಲ್ಲ, ಬೇರೆ ಕಡೆಗಳಲ್ಲಿ ತೆಗೆಯುತ್ತಿದ್ದಾರೆ. ಅಲ್ಲಿ ಏನಾಗುತ್ತಿದೆ ಎಂದರೆ ಸ್ಥಳೀಯ ಸಬ್ ಇನ್ಸ್‌ಪೆಕ್ಟರ್ ಮತ್ತು ರೆವಿನ್ಯೂ ಅಧಿಕಾರಿಗಳು ಹೊಂದಾಣಿಕೆಯನ್ನು ಮಾಡಿಕೊಂಡು ಅವರಿಗೆ ಬೇಕಾದ ರೀತಿಯಲ್ಲಿ ಈ ಕೆಲಸವನ್ನು ಮಾಡುತ್ತಿದ್ದಾರೆ, ಮತ್ತೆ ಇವರಿಗೆ ಯಾವ ಟೈಮ್ ಇಲ್ಲ, ರಾತ್ರಿ ಎನ್ನುವುದಿಲ್ಲ. ರಸ್ತೆಗಳು ಹಾಳಾಗುತ್ತಿವೆ. ನಾನು ಈ ವಿಷಯವಾಗಿ ಉದಾಹರಣೆಗೆ ಹೇಳುವುದಾದರೆ ನಮ್ಮ ಕೊಳ್ಳೇಗಾಲ, ಮಳವಳ್ಳಿಯ ಪಕ್ಕದಲ್ಲಿ ಊರು ಕಾವೇರಿ ನದಿಯ ಪಕ್ಕದಲ್ಲಿ ಇದೆ. ಈ ನದಿಯ ಪಕ್ಕದಲ್ಲೇ ಊರು ಇದ್ದು ಇವರು ಮರಳನ್ನು ತೆಗೆಯುತ್ತಿದ್ದರೆ, ನೀರು ಊರಿಗೆ ನುಗ್ಗುತ್ತಿದೆ. ಇದನ್ನು ಊರಿನ ಎಲ್ಲಾ ಜನರು ಬಂದು ತಿಳಿಸಿದರು. ಇವರ ಲೈಸನ್ಸ್ ಇರುವಂಥಾದ್ದು ಬೇರೆ ಸರ್ವೆ ನಂಬರ್‌ನದ್ದು, ಅದು ನನ್ನ ಕ್ಷೇತ್ರದಲ್ಲಿ ಇರುವಂಥಾದ್ದು, ಇವರು ತೆಗೆಯುತ್ತಿರುವಂಥಾದ್ದು ಕೊಳ್ಳೇಗಾಲದಲ್ಲಿ, ಇದನ್ನು ನಾವು ಹೇಳಿ ರದ್ದು ಮಾಡಿದರೆ ಮತ್ತೆ ನಿರ್ದೇಶಕರು ರೀನ್ಯೂ ಮಾಡಿದ್ದಾರೆ. ಈ ರೀತಿ ಕಾವೇರಿ ನದಿಯಿಂದ ಮತ್ತು ಶಿಂಷಾದಿಂದ ಮರಳು ಬರುವಂಥಾದ್ದು ಇದು ಎರಡು ನನ್ನ ಕ್ಷೇತ್ರದಲ್ಲಿರುವುದರಿಂದ ಬಹಳ ಅವ್ಯವಹಾರ ನಡೆಯುತ್ತಿದೆ. ತಾವು ಯಾವ್ಯಾವ ಸರ್ವೆ ನಂಬರ್‌ನಲ್ಲಿ ಕೊಟ್ಟಿದ್ದೀರಿ ಅದನ್ನು ಬಿಟ್ಟು ಬೇರೆ ಕಡೆಗಳಲ್ಲಿ ಮಾಡಿದ್ದಾರೆ. ತಾವು ಅದನ್ನು ರದ್ದು ಮಾಡಬೇಕು, ಮತ್ತೆ ರಸ್ತೆಗಳು ಏನು ಹಾಳಾಗುತ್ತಿವೆ, ಅದನ್ನು ಈ ದುಡ್ಡಿನಿಂದಲೇ ರಿಪೇರಿ ಮಾಡುವಂತಹ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಯು.ಆರ್. ಸಬಾಪತಿ (ಉಡುಪಿ) :— ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಸುಮಾರು ಇನ್ನೂರು ಕುಟುಂಬಗಳು ಕಳೆದ ಐವತ್ತು ವರ್ಷಗಳಿಂದ ದೋಣಿಯಲ್ಲಿ ಹೋಗಿ ಮುಳುಗಿ ಮರಳನ್ನು ತೆಗೆಯುತ್ತಿದ್ದರು. ಇವರಿಗೆ ವಾರ್ಷಿಕ ಶುಲ್ಕವನ್ನು ನಿಗದಿ ಮಾಡಲಾಗಿತ್ತು. ಈಗ ಹೊಸದಾಗಿ ಡ್ರೆಡ್ಜಿಂಗ್ ಮಿಷನ್ ಬಂದು ದೊಡ್ಡ ಅಧಿಕಾರಿಗಳಿಗೆ ದುಡ್ಡಿನ ಗಂಟು ಸಿಗುವಂತೆ ಆಗಿದೆ. ಈ ಅಧಿಕಾರಿಗಳು ಈ ಇನ್ನೂರು ಬಡ ಕುಟುಂಬಗಳನ್ನು ಶೋಷಣೆ ಮಾಡಿ ಅವರಿಂದ 500-600 ರೂಪಾಯಿಗಳ ಲಂಚವನ್ನು ತೆಗೆದುಕೊಳ್ಳುತ್ತಿದ್ದಾರೆ. ಇಲ್ಲಿ ಹರಾಜಿಗೆ ಭಾಗವಹಿಸುವವರು ಶ್ರೀಮಂತರು ಆಗಿರುತ್ತಾರೆ, ಡ್ರೆಡ್ಜಿಂಗ್ ಮಿಷನ್ ಇರುವವರೇ ಬರುತ್ತಾರೆ. ಆದುದರಿಂದ ತಾವು ಇಲ್ಲಿ ಡ್ರೆಡ್ಜಿಂಗ್ ಮಿಷನ್‌ನಿಂದ ಮರಳನ್ನು ತೆಗೆಯುವಂಥಾದನ್ನು ಕಟ್ಟುನಿಟ್ಟಾಗಿ ನಿಲ್ಲಿಸಬೇಕು. ಹಿಂದೆ ಇದ್ದಂತೆ ಈ ಬಡ ಕುಟುಂಬದವರು ನೀರಿನಲ್ಲಿ ಮುಳುಗಿ ಮರಳನ್ನು ಏನು ತೆಗೆಯುತ್ತಿದ್ದರು, ಆ ಪದ್ಧತಿಯನ್ನೇ ಮುಂದುವರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹೊಸದಾಗಿ ಕಾರ್ಯಕ್ರಮಗಳನ್ನು ತಂದರೆ ಅದರಿಂದ ಅಧಿಕಾರಿಗಳಿಗೆ ಲಾಭವಾಗುತ್ತಿಯದೆಯೇ, ಏನು ಜನಸಾಮಾನ್ಯರಿಗೆ ಲಾಭವಾಗುವುದಿಲ್ಲ.

ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ (ಸದಲಗ) :— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಏನು ಹೇಳಿದರೆಂದರೆ ಮಿಷನ್ ಮುಖಾಂತರ ಮರಳನ್ನು ತೆಗೆಯಬಾರದೆಂದು ಆದೇಶವನ್ನು ಮಾಡಿದ್ದೇವೆಂದು ಹೇಳಿದರು. ಆದರೆ ಇದು ಬೆಳಗಾವಿ ಜಿಲ್ಲೆಯಲ್ಲಿ ಈ ರೀತಿಯಾದ ಆದೇಶವಿಲ್ಲ, ಕರಾವಳಿ ಪ್ರದೇಶದಲ್ಲಿ, ಮಂಗಳೂರಿನಲ್ಲಿ ಮಾತ್ರ ಮಿಷನ್‌ನಿಂದ ಮರಳನ್ನು ತೆಗೆಯಬಾರದೆಂದು ನಿರ್ಬಂಧ ಹಾಕಿದ್ದಾರೋ? ಹಾಗೆಯೇ ತಾವು ಬೆಳಗಾವಿ ಜಿಲ್ಲೆಗೂ ಕೂಡ ಮಿಷನ್‌ನಿಂದ ಮರಳನ್ನು ತೆಗೆಯಬಾರದೆಂದು ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಂ. ಚಿಕ್ಕಮಾದ ನಾಯ್ಕ (ಬನ್ನೂರು) :— ಮಾನ್ಯ ಅಧ್ಯಕ್ಷರೇ, ಈ ಮರಳಿನಿಂದ ಎಷ್ಟು ಅವಾಂತರವಾಗಿದೆ ಎಂದರೆ ಒಂದೇ ಲಾರಿಯಲ್ಲಿ ಡಬಲ್ ಲೋಡ್ ಮರಳು ತುಂಬಿ ರಸ್ತೆಗಳು ಹಾಳಾಗಿವೆ. ಇದರ ಜೊತೆಗೆ ನನ್ನ ಕ್ಷೇತ್ರದಲ್ಲಿ 8-10 ಕೊಲೆಗಳು ಆಗಿರಬಹುದು, ಮೊನ್ನೆ ವರಣಾವಿಪುರದಲ್ಲಿ ಕೊಲೆಯಾಯಿತು, ಕಬಿನಿ ಮತ್ತು ಕಾವೇರಿ ನದಿಗಳಿಗೆ ರಾಜ ಮಹಾರಾಜರ ಕಾಲದಲ್ಲಿ ಬ್ರಿಡ್ಜ್ ಕಟ್ಟಿರುವಂಥಾದ್ದು, ಇವು ಬಿರುಕು ಬಿಟ್ಟಿದೆ. ಈ ಸ್ಥಳಕ್ಕೆ ಲೋಕೋಪಯೋಗಿ ಮಂತ್ರಿಯವರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇವೆ. ಈಗ ಹೊಸದಾಗಿ ಬ್ರಿಡ್ಜ್ ಆಗುತ್ತಿದೆ. ಈ ರೀತಿ ಬ್ರಿಡ್ಜ್‌ಗಳು ಕುಸಿಯುವುದರಿಂದ ರಸ್ತೆಗಳು ಹಾಳಾಗುತ್ತಿವೆ. ಮಾನ್ಯ ಸೋಮಶೇಖರ್‌ರವರು ಹೇಳಿದ ಹಾಗೆ ಪೋಲೀಸ್‌ನವರು ಮತ್ತು ಅಧಿಕಾರಿಗಳು ಹೊಂದಾಣಿಕೆ ಮಾಡಿಕೊಂಡು ರಾತ್ರಿಯ ವೇಳೆಯಲ್ಲಿ ಮರಳನ್ನು ತೆಗೆಯುತ್ತಾರೆ. ಇಲ್ಲಿ ಯಾವುದೇ ರೀತಿಯ ಕಟ್ಟುನಿಟ್ಟಾದ ಕ್ರಮವಿಲ್ಲ, ಇದರಿಂದ ಅನಾಹುತಗಳು ಆಗುತ್ತಿವೆ. ತಾವು ದಯಮಾಡಿ ಇದನ್ನು ತಡ ಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :— ಮಾನ್ಯ ಅಧ್ಯಕ್ಷರೇ, ನದಿಗಳಲ್ಲಿ ಮರಳನ್ನು ತೆಗೆಯುವಂತಹ ವಿಚಾರದಲ್ಲಿ ಕರಾವಳಿ ಪ್ರದೇಶಗಳಲ್ಲಿ ತಾವು ನೋಡಿರಬೇಕು. ಕರಾವಳಿಯಲ್ಲಿ sea erosion ನಿಂದ ಇನ್ನೊಂದು ಪ್ರಾಬ್ಲಂ ಏನೆಂದರೆ ಪ್ರತಿವರ್ಷ ರಸ್ತೆಗಳು ಹಾಳಾಗುತ್ತಿವೆ. ಇವರು ರೋಡ್ ಲೆವೆಲ್‌ಗೆ ತೆಗೆಯುವುದಿಲ್ಲ, ಅದಕ್ಕಿಂತ ಹಳ್ಳವನ್ನು ತೆಗೆಯುತ್ತಾರೆ. ಇದರಿಂದ ರೋಡ್ ಎಲ್ಲಾ ಕಿತ್ತುಹೋಗುತ್ತಿದೆ. sea erosion ಜಾಸ್ತಿಯಾಗುತ್ತಿದೆ. ತಾವು ಇದರ ಬಗ್ಗೆ ಹೆಚ್ಚಿನ ಗಮನಹರಿಸಬೇಕಾಗುತ್ತದೆ. ಮತ್ತೆ ಡ್ರೆಜ್ಜಿಂಗ್‌ನಿಂದ ಮರಳನ್ನು ತೆಗೆಯುವುದರ ಬಗ್ಗೆ ನನ್ನದೆ ಆದಂತಹ ಒಂದು ಅಭಿಪ್ರಾಯವಿದೆ; ಅದು ಏನೆಂದರೆ ಬ್ರಿಡ್ಜ್‌ಗಳ ಹತ್ತಿರ, ವೆಂಟೆಡ್ ಡ್ಯಾಮ್‌ಗಳ ಹತ್ತಿರ ತೆಗೆಯುವಂಥಾದ್ದು ಇದೆ, ಆದರೆ ಸಮುದ್ರದ ಹತ್ತಿರವಿರುವ ಅಳಿವೆಯಲ್ಲಿ ಆಗಾಗ ಡ್ರೆಜ್ ಮಾಡದಿದ್ದರೆ ಅಲ್ಲಿ ಸಿಲ್ಟೇಷನ್ ಆಗಿ ನೀರು ಫ್ಲಷ್ ಆಗಿ ಹೋಗುತ್ತಿಲ್ಲ. ಇದರಿಂದಾಗಿ ಊರಿಗೆ ನೀರು ಹೋಗುವಂಥಾದಕ್ಕೆ ಅವಕಾಶವಾಗಿದೆ. ಇದರ ಬಗ್ಗೆ ತಾವು ವೈಜ್ಞಾನಿಕವಾಗಿ ಅಧ್ಯಯನವನ್ನು

ಮಾಡಿಸಬೇಕು, ಮತ್ತೆ ಇದರಿಂದ ಎಲ್ಲಿ ಕೊಡಬೇಕು ಮತ್ತೆ ಎಲ್ಲಿ ಕೊಡಬಾರದೆಂಬ ತೀರ್ಮಾನವನ್ನು ಮಾಡಲು ಸಾಧ್ಯವಾಗುತ್ತದೆ.

ಶ್ರೀ ವಿ. ಮುನಿಯಪ್ಪ :— ಮಾನ್ಯ ಅಧ್ಯಕ್ಷರೇ, ನಾವು ಈ ಎಲ್ಲಾ ಸಮಸ್ಯೆಗಳನ್ನು ಅಧ್ಯಯನ ಮಾಡಿದ್ದೇವೆ, ಆ ನಂತರ ಇದಕ್ಕೆ ಅಸಿಟೆಂಟ್ ಕಮಿಷನರ್ ಮತ್ತು ಸ್ಥಳೀಯವಾಗಿರುವಂತಹ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್‌ಗಳು ಇವರ ಅಧ್ಯಕ್ಷತೆಯಲ್ಲಿ ಅಕ್ರಮವಾಗಿ ಹೋಗುವಂತಹ ಮರಳನ್ನು ಹಿಡಿದು ತಕ್ಷಣ ಕ್ರಮವನ್ನು ತೆಗೆದುಕೊಳ್ಳುವಂತಹ ಪವರ್ ಇವರಿಗೆ ಇರುತ್ತದೆ. ಮತ್ತು ತಹಸೀಲ್ದಾರ್, ತಾಲ್ಲೂಕು ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ, ಮತ್ತೆ ಜಿಯಾಲಜಿಸ್ಟ್‌ಗಳೆಲ್ಲರನ್ನು ಸೇರಿಸಿ ಒಂದು ಸಮಿತಿಯನ್ನು ಮಾಡಿ ಇದನ್ನು ಹೇಗಾದರೂ ಮಾಡಿ ನಿಯಂತ್ರಣ ಮಾಡಬೇಕೆಂದು ಇದೆ. ನಮ್ಮ ಇಲಾಖೆಯಲ್ಲಿ ಸಿಬ್ಬಂದಿಯ ಸಂಖ್ಯೆ ಬಹಳ ಕಡಿಮೆ ಇದೆ. ನಾವು ಇದನ್ನು ಉಸ್ತುವಾರಿ ಮಾಡುವಂಥಾದ್ದು ಬಹಳ ಕಷ್ಟವಾಗಿದೆ. ಇದಕ್ಕೆ ಚೆಕ್‌ಪೋಸ್ಟ್ ಮಾಡುವಂತಹ ಪ್ರಯತ್ನವನ್ನು ಮಾಡಿದೆವು, ಆದರೆ ಅದು ಇನ್ನೊಂದು ರೀತಿಯಲ್ಲಿ ಅಕ್ರಮವಾಗುವ ಅವಕಾಶವಾಗುತ್ತದೆಂದು ಇದರ ಬಗ್ಗೆ ಸಾಕಷ್ಟು ಅಭಿಪ್ರಾಯಗಳು ವ್ಯಕ್ತವಾದವು. ಆದುದರಿಂದ ಈ ಚೆಕ್ ಪೋಸ್ಟ್ ಮಾಡುವಂತಹ ಕೆಲಸವನ್ನು ನಿಲ್ಲಿಸಿದೆವು. ಈಗ ಅಂತಿಮವಾಗಿ ಎಲ್ಲೆಲ್ಲಿ ಅಕ್ರಮವಾಗಿ ಮರಳನ್ನು ಸಾಗಾಣಿಕೆ ಮಾಡುತ್ತಾರೆಂಬ ದೂರುಗಳು ಬರುತ್ತದೆ ಆ ದೂರನ್ನು ಅಸಿಸ್ಟೆಂಟ್ ಕಮೀಷನರ್‌ಯವರಿಗಾಗಲಿ, ತಹಸೀಲ್ದಾರ್ ರವರಿಗಾಗಲೀ ಅಥವಾ ಸಂಬಂಧಪಟ್ಟಂತಹ ಕಾರ್ಯ ನಿರ್ವಾಹಣಾಧಿಕಾರಿಗಳಿಗೆ ಕೊಟ್ಟರೆ ಅವರು ತಕ್ಷಣ ಸ್ಥಳಕ್ಕೆ ಭೇಟಿ ಕೊಟ್ಟು ಈ ಅಕ್ರಮವಾಗಿ ಸಾಗಾಣೆ ಮಾಡುವಂತಹ ಮರಳನ್ನು ತಡೆಗಟ್ಟುವಂತಹ ಕೆಲಸವನ್ನು ಮಾಡುತ್ತಾರೆ, ಮತ್ತೆ ಸಾರ್ವಜನಿಕ ಸ್ಥಳಗಳಲ್ಲಿ ಇದರಿಂದ ಧಕ್ಕೆಯಾಗುತ್ತದೆ, ಅದು ಹರಾಜಾದಂತಹ ಸ್ಥಳವಾಗಿದ್ದರೂ ಸಹಿತ ಅದನ್ನು ನಿಲ್ಲಿಸುವಂಥಾದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ತೀರ್ಥಹಳ್ಳಿ ಪುರಪಂಚಾಯಿತಿ ನಿವೇಶನ ಹಗರಣದ ತನಿಖಾ ವರದಿ

299 (3442) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತೀರ್ಥಹಳ್ಳಿ ಪುರಪಂಚಾಯಿತಿ ನಿವೇಶನ ಪ್ರಕರಣದ ತನಿಖಾ ಕಾರ್ಯ ಮುಗಿದಿದೆಯೇ?

ಆ) ಈ ತನಿಖಾ ವರದಿಯ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಪೌರಾಡಳಿತ ರಾಜ್ಯ ಸಚಿವರ ಪರವಾಗಿ ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :—

ಅ) ಇಲ್ಲ, (ವಿಚಾರಣೆಯಲ್ಲಿದೆ)

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೇ, ನಾನು ತೀರ್ಥಹಳ್ಳಿ ಪುರಪಂಚಾಯಿತಿ ನಿವೇಶನ ಪ್ರಕರಣದ ತನಿಖಾ ಕಾರ್ಯ ಮುಗಿದಿದೆಯೇ ಎಂದು ಪ್ರಶ್ನೆ ಕೇಳಿದ್ದೇನ. ಅದಕ್ಕೆ ಸರ್ಕಾರದಿಂದ ಇಲ್ಲ, ವಿಚಾರಣೆಯಲ್ಲಿದೆ ಎಂಬ ಉತ್ತರವನ್ನು ಕೊಟ್ಟಿದ್ದಾರೆ. ಈ ವಿಚಾರವಾಗಿ ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ ಜಿಲ್ಲಾಧಿಕಾರಿಯವರಿಂದ ವಿಚಾರಣಾ ವರದಿ ಬಂದು ಮೂರು ತಿಂಗಳುಗಳಾಗಿದೆ. ಈಗ ಅದು ನಿಮ್ಮ ಅಧಿಕಾರಿಗಳ ಕೈಯಲ್ಲಿ ಇದೆ. ತಾವು ಯಾವ ಕಾರಣಕ್ಕಾಗಿ ಈ ವಿಚಾರಣಾ ವರದಿಯ ಆಧಾರದ ಮೇಲೆ ಕ್ರಮ ಕೈಗೊಳ್ಳುತ್ತಿಲ್ಲವೆಂಬುದು ಗೊತ್ತಾಗುತ್ತಿಲ್ಲ. ಈ ತೀರ್ಥಹಳ್ಳಿ ಪುರಪಂಚಾಯಿತಿಯೊಳಗೆ ಸುಮಾರು 45 ನಿವೇಶನಗಳು ಬಹಳ ಬೆಲೆ ಬಾಳುವಂತಹ ನಿವೇಶನಗಳಾಗಿದ್ದು, ಇದಕ್ಕೆ ಕೆಲವು ಜನರು ಸೇರಿಕೊಂಡು ನಕಲು ಸಾಗುವಳಿ ಚೀಟಿಗಳನ್ನು ಪ್ರಿಂಟ್ ಮಾಡಿ ಹಣವಂತರಿಗೆ ಹಂಚಿ ಕೋಟಿಗಟ್ಟಲೆ ಹಣವನ್ನು ಪಡೆದಿದ್ದಾರೆ. ಇದನ್ನು ಪುರ ಪಂಚಾಯಿತಿಯಲ್ಲಿ ಅಧಿಕಾರದಲ್ಲಿರುವಂತಹ ಜನರು ಇದನ್ನು ಕಂಡು ಹಿಡಿದಿದ್ದಾರೆ. ಹಿಂದೆ ಅಧಿಕಾರದಲ್ಲಿದ್ದಂತಹ ಅಧ್ಯಕ್ಷರು ಸತ್ತು ಹೋಗಿದ್ದಾರೆ, ಇವರ ಸಕಲಿ ಸಹಿಯನ್ನು ಸಹ ಮಾಡಲಾಗಿದೆ. ಇಲ್ಲಿ ಇಷ್ಟೊಂದು ದೊಡ್ಡ ಹಗರಣವಾಗಿದೆ, ಇದರ ಬಗ್ಗೆ ನಾನೇ ಸ್ವತ: ಮಾನ್ಯ ಮುಖ್ಯಮಂತ್ರಿಯವರಿಗೂ ಹೇಳಿದಾಗ ಇದನ್ನು ಶೀಘ್ರವಾಗಿ ತನಿಖೆ ಮಾಡಿ ವರದಿಯನ್ನು ಕೊಡಬೇಕೆಂದು ಅವರು ನೋಟ್ ಹಾಕಿ ಕೊಟ್ಟಿದ್ದಾರೆ. ಅದರಂತೆ ಜಿಲ್ಲಾಧಿಕಾರಿಗಳು ತನಿಖೆಯನ್ನು ಮಾಡಿ ವರದಿಯನ್ನು ಕೊಟ್ಟಿದ್ದಾರೆ, ಅದು ನಿಮ್ಮ ಕಡೆಗೆ ಬಂದಿದೆ. ಇದು ಆಗಿ ಮೂರು ತಿಂಗಳಾದರೂ ಸದನದಲ್ಲಿ ಇನ್ನು ವಿಚಾರಣೆಯಲ್ಲಿದೆ ಎಂದು ಹೇಳುತ್ತಿದ್ದೀರಿ. ಇಲ್ಲಿ ಈ ರೀತಿ ನಿವೇಶನಗಳನ್ನು ಯಾರು ಕದ್ದಿರುವಂತಹ ಕಳ್ಳರು ಇದ್ದಾರೆ, ಇವರಿಗೆ ಅಪ್ರತ್ಯಕ್ಷವಾಗಿ ಸರ್ಕಾರದ ಅಧಿಕಾರಿಗಳು ಏನಾದರೂ ಸಹಾಯ ಮಾಡಿದ್ದಾರೆಯೇ ಎಂಬುದನ್ನು ನೋಡಬೇಕಾಗುತ್ತದೆ. ಇವತ್ತು ತೀರ್ಥಹಳ್ಳಿಯಲ್ಲಿ ಲಾ ಅಂಡ್ ಆರ್ಡರ್ ಹಾಳಾಗುತ್ತಿದೆ. ಅಲ್ಲಿ ನಿವೇಶನಗಳನ್ನು ತೆಗೆದುಕೊಂಡಿರುವವರು ಮನೆಗಳನ್ನು ಕಟ್ಟಲು ಬರುತ್ತಿದ್ದಾರೆ. ಆದುದರಿಂದ ಈ ತನಿಖೆ ಯಾವಾಗ ಮುಗಿಯುತ್ತದೆ? ಇದು ಮುಂದುವರೆಯುವುದಾದರೆ ಯಾವ ಅಧಿಕಾರಿ ಇದನ್ನು ವಿಚಾರಣೆ ಮಾಡುತ್ತಿದ್ದಾರೆಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೆ, ತೀರ್ಥಹಳ್ಳಿ ಪುರಪಂಚಾಯಿತಿಯಲ್ಲಿ 45 ನಿವೇಶನಗಳ ಪ್ರಕರಣವಾಗಿರುವಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ನಗರಾಭಿವೃದ್ಧಿ ಇಲಾಖೆಯ ವತಿಯಿಂದ ಅಲ್ಲಿನ ಉಪ ವಿಭಾಗಾಧಿಕಾರಿಯವರ ಮುಖಾಂತರ ತನಿಖೆ ನಡೆಸುವಂತೆ ಆದೇಶವನ್ನು ನೀಡಿದ್ದೇನೆ. ಅವರೂ ಸಹ ಪ್ರಥಮ ವರದಿಯನ್ನು ಇಲಾಖೆಗೆ ಕೊಟ್ಟಿದ್ದಾರೆ.

12.40 ಪಿ.ಎಂ.

ಈ 45 ಜನರಲ್ಲಿ 12 ಜನರು ತೀರ್ಥಹಳ್ಳಿಯಲ್ಲೇ ವಾಸವಾಗಿದ್ದು, ಈಗಾಗಲೇ ಅಲ್ಲಿರುವ ಮುಖ್ಯಾಧಿಕಾರಿಗಳು ಇತರೆಯವರನ್ನು ಅಲ್ಲಿಂದ ತೆಗೆದುಹಾಕಿ ಈಗ ಹೊಸ ಮುಖ್ಯಾಧಿಕಾರಿಗಳ ಮುಖಾಂತರ ನಡೆದಿರುವ ಎಲ್ಲಾ ವ್ಯವಹಾರದ ಮಾಹಿತಿಯನ್ನು ಕೇಳಿದ್ದಾರೆ ಅದು ಸರ್ಕಾರದ ಗಮನಕ್ಕೆ ಬಂದಿದೆ. ಪ್ರಾಯಶ: ಇನ್ನು ಮೂರು ತಿಂಗಳೊಳಗಾಗಿ ಈ ವರದಿಯನ್ನು ಪರಿಶೀಲಿಸಿ ಆ ಅಧಿಕಾರಿಗಳ ವಿರುದ್ಧ ಕೂಡ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಡಿ.ವಿ. ಸದಾನಂದಗೌಡ :— ತಾವು ವಿಚಾರಣೆಯನ್ನು ನಿಧಾನಮಾಡುವುದರಿಂದ ಇಂತಹ ಭೂಕಬಳಿಕೆದಾರರಿಗೆ ಪರೋಕ್ಷವಾಗಿ ಬೆಂಬಲಕೊಟ್ಟಂತಾಗುತ್ತದೆ. ಮೂರು ತಿಂಗಳಾದರೂ ಆಗಲಿಲ್ಲ, ಈ ಸರ್ಕಾರಕ್ಕೆ ಕ್ರಮ ತೆಗೆದುಕೊಳ್ಳಲು. ಇನ್ನೂ ಮೂರು ತಿಂಗಳ ಅವಶ್ಯಕತೆ ಇದೆ ಎಂದು ಹೇಳಿದರೆ ಸರ್ಕಾರ ಪರೋಕ್ಷವಾಗಿ ಅಂತಹವರಿಗೆ ಬೆಂಬಲ ಕೊಟ್ಟಂತಾಗುತ್ತದೆ; ಶೀಘ್ರವಾಗಿ ತನಿಖೆ ಮಾಡಿ ಅಂತಹವರಿಗೆ ಶಿಕ್ಷೆ ಕೊಟ್ಟಿದ್ದರೆ ಮತ್ತೊಬ್ಬರು ಮತ್ತೆ ಇಂತಹ ಕೆಲಸ ಮಾಡದಂತಹ ಎಚ್ಚರಿಕೆ ಬರುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಸದಸ್ಯರು ತಮ್ಮ ಪ್ರಶ್ನೆಯಲ್ಲಿ ಏನು ಹೇಳಿದ್ದಾರೆಂದರೆ, ಅಧ್ಯಕ್ಷರು ಹಾಗೂ ಅಲ್ಲಿ ಆಡಳಿತ ನಿರ್ವಹಿಸುವಂತಹ ಅಧಿಕಾರಿ ಇಬ್ಬರು ಫೋರ್ಜರಿ ದಸ್ಕತ್ತನ್ನು ಹಾಕಿದ್ದಾರೆಂದು ಸ್ವತ: ಅವರೇ ಹೇಳಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ:— [illegible]
ಹೇಳಲಿಲ್ಲ, ಕಂಡು ಹಿಡಿದವರನ್ನು ಇವರು ಅಪರಾಧಿಗಳನ್ನಾಗಿ ಮಾಡುತ್ತಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಅಲ್ಲಿ ಏನಿದೆ ಎಂದರೆ, ಅಧ್ಯಕ್ಷರ ಹಾಗೂ ಅಧಿಕಾರಿಗಳ ಫೋರ್ಜರಿ ದಸ್ಕತ್ತು ಹಾಕಿದ್ದಾರೆಂದು ನೀವು ಹೇಳಿದ್ದಿರಿ, ಈಗ ಅಲ್ಲಿ ಚುನಾಯಿತ ಪ್ರತಿನಿಧಿಗಳಿದ್ದಾರೆ, ಚುನಾವಣೆ ನಡೆದಿದೆ, ಮುಖ್ಯಾಧಿಕಾರಿಗಳು ಒಂದು ವರದಿಯನ್ನು ನೀಡಿದ ನಂತರವೇ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ಕನಿಷ್ಠ ವರದಿ ಸಲ್ಲಿಸುವುದಕೋಸ್ಕರವಾದರೂ ಸಮಯ ನಿಗದಿಪಡಿಸಲು ಮೂರು ತಿಂಗಳು ಎಂದು ಹೇಳಿದೆ, ವರದಿ ಬಂದ ತಕ್ಷಣ ಆ ರೀತಿಯ ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಆರಗ ಜ್ಞಾನೇಂದ್ರ :— ಅಧ್ಯಕ್ಷರೆ, ಈಗ ಅವರು ತಪ್ಪಾಗಿ ಹೇಳಿಬಿಟ್ಟಿದ್ದಾರೆ, ದಾಖಲೆಗೆ ಹೋಗಿದೆ, ಮುಖ್ಯಾಧಿಕಾರಿಯನ್ನು ತೆಗೆದು ಹಾಕಿದ್ದೇವೆಂದು ಹೇಳಿದ್ದಾರೆ,

ನಿನ್ನೆಯವರೆಗೆ ಅವರನ್ನು ತೆಗೆದು ಹಾಕಿಲ್ಲ, ಇವತ್ತು ಅವರಿಗೆ ನಾನು ದೂರವಾಣಿ ಮಾಡಲಿಲ್ಲ, ನಿನ್ನೆ ರಾತ್ರಿಯವರೆಗೆ ಅವರು ಇದ್ದರು, ತೀರ್ಥಹಳ್ಳಿ ಮುಖ್ಯಾಧಿಕಾರಿಗಳನ್ನು ತೆಗೆದುಹಾಕಿದ್ದೇವೆಂದು ಮಂತ್ರಿಗಳು ಇಲ್ಲಿ ಉತ್ತರ ಕೊಟ್ಟಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಉಪ ವಿಭಾಗಾಧಿಕಾರಿಗಳು ಸಂಪೂರ್ಣವಾಗಿ ನಡೆದಿರುವ ಘಟನೆಯ ಮಾಹಿತಿಯನ್ನು ಸರ್ಕಾರಕ್ಕೆ ರವಾನಿಸಿದ್ದಾರೆ. ಅದನ್ನು ಆಧಾರವಾಗಿಟ್ಟುಕೊಂಡು ಅಲ್ಲಿರುವ ಮುಖ್ಯಾಧಿಕಾರಿಗಳು ಸಂಪೂರ್ಣವಾದ ಮಾಹಿತಿಯನ್ನು ಒದಗಿಸಿಕೊಡುವಂತೆ ಉಪ ವಿಭಾಗಾಧಿಕಾರಿಗಳು ಕೇಳಿದ್ದಾರೆ, ಆ ಮಾಹಿತಿ ಬಂದ ತಕ್ಷಣ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಅರಗಜ್ಞಾನೇಂದ್ರ :— ಉಪ ವಿಭಾಗಾಧಿಕಾರಿಗಳು ಒಂದು ಸಾರಿ ಸಂಪೂರ್ಣವಾಗಿ ತನಿಖೆ ನಡೆಸಿದ್ದಾರೆ, ಯಾರ್‍ಯಾರು ಸಹಕರಿಸಬೇಕೋ ಅವರು ಸಹಕರಿಸಿದ್ದಾರೆ. ನಿರ್ಣಯ ಪುಸ್ತಕವನ್ನು ಯಾರದೋ ಮನೆಯಲ್ಲಿಟ್ಟುಕೊಂಡು ತಿದ್ದಿ 20-30 ಹೆಸರುಗಳನ್ನು ಸೇರಿಸಿದ್ದಾರೆ. ಸಾಗುವಳಿ ಚೀಟಿಯನ್ನು ಫೋರ್ಜರಿಯಾಗಿ ಸತ್ತುಹೋದ ಅಧ್ಯಕ್ಷರ ಸಹಿ ಮಾಡಿ ಹಂಚಿದ್ದಾರೆ. ಅದರ ಆಧಾರದ ಮೇಲೆ ಜನರು ಈಗ ನನಗೆ ರಿಜಿಸ್ಟ್ರೇಷನ್ ಮಾಡಿಕೊಡಿ, ಲೈಸನ್ಸ್ ಕೊಡಿಸಿ ಎಂದು ಅರ್ಜಿಯನ್ನು ಕೊಟ್ಟಿದ್ದಾರೆ. ಆ ಅರ್ಜಿದಾರನನ್ನು ಹಿಡಿದುಕೊಂಡು ತನಿಖೆ ಮಾಡಿದರೆ ಎಲ್ಲಾ ಸಿಗುತ್ತದೆ, ಅಲ್ಲಿ ತನಿಖೆಯನ್ನೇ ಮುಂದುವರೆಸುತ್ತಿಲ್ಲ, ನಾವೊಂದು ತನಿಖೆ ಮಾಡಿ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದೇವೆ. ಸರ್ಕಾರದಿಂದ ಏನು ಆದೇಶ ಬರಲಿಲ್ಲವೆಂದು ಕೈಚೆಲ್ಲಿಕೊಂಡು ಕುಳಿತ್ತಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ನಿವೇಶನದ ಹಗರಣ ತನಿಖೆ ಆ ಪಂಚಾಯಿತಿಯ ಬಗ್ಗೆ ನಡೆಯುತ್ತಿದೆ. ಯಾರೆ ಪರವಾನಿಗೆಗಾಗಿ ಅರ್ಜಿ ಸಲ್ಲಿಸಿರುವವರಿದ್ದರೂ ಕೂಡ ಪರವಾನಿಗೆ ನೀಡಲಾಗುವುದಿಲ್ಲ, ತನಿಖೆ ಬೇಗ ಮುಗಿಸುವಂತೆ ಸರ್ಕಾರ ಎಲ್ಲಾ ರೀತಿಯ ಕ್ರಮವನ್ನು ತೆಗೆದುಕೊಳ್ಳುವುದು.

I. (ಅ) ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :— ಮಾನ್ಯ ಅಧ್ಯಕ್ಷರೆ, 2(ನೇ ಪಟ್ಟಿಯಲ್ಲಿ ಲಿಖಿತ ಮೂಲಕ ಉತ್ತರಿಸುವ 70 ಪ್ರಶ್ನೆಗಳ ಪೈಕಿ 60 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ಕೊಡಗು ಜಿಲ್ಲೆಯಲ್ಲಿ ಕಲ್ಲುಗಣಿಗಾರಿಕೆ ಪ್ರಾರಂಭಿಸಲು ಅನುಮತಿ ನೀಡಿಕೆ.

2641 (3061) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ):— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ಜನಂಗೆ ಹೊಸದಾಗಿ ಕಲ್ಲುಗಣಿಗಾರಿಕೆ ಪ್ರಾರಂಭಿಸಲು ಅನುಮತಿ ನೀಡಲಾಗಿದೆ, ಯಾವ ಮೌಲ್ಯಮಾಪನ ಆಧಾರದ ಮೇಲೆ ಯಾರು ಯಾರಿಗೆ ಪರವಾನಗಿ ನೀಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು).

ಶ್ರೀ ಎ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :—

ಅ) ಕೊಡಗು ಜಿಲ್ಲೆಯಲ್ಲಿ ಹೊಸದಾಗಿ ಈ ಕೆಳಕಂಡ 3 ಜನರಿಗೆ ಕಲ್ಲು ಗಣಿಗಾರಿಕೆ ಪ್ರಾರಂಭಿಸಲು ಅನುಮತಿ ನೀಡಲಾಗಿದೆ. ಕಲ್ಲು ಗಣಿಗಾರಿಕೆ ಪ್ರಾರಂಭಿಸಲು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು 1994ರ ನಿಯಮ 23 ಹಾಗೂ ಇದರಡಿಯ ಉಪ ನಿಯಮಗಳು (1) (2) (3) (4) ರಂತೆ ಮಂಜೂರಾತಿ ನೀಡಲಾಗಿದೆ.

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ವಿಳಾಸ	ಸರ್ವೆ ಸಂಖ್ಯೆ	ಗ್ರಾಮ	ವಿಸ್ತೀರ್ಣ	ಮಂಜೂರಾದ ದಿನಾಂಕ
1.	ಶ್ರೀ ಹೆಚ್. ದಸನಬ ಮಾದಪಟ್ಣ ಅಂಚೆ ಕುಶಾಲನಗರ ಸೋಮವಾರಪೇಟೆ ತಾ: ಕೊಡಗು ಜಿಲ್ಲೆ	43	ಗೊಂದಿ ಬಸವನಹಳ್ಳಿ	0-20 ಎಕರೆ	07-05-2001
2.	ಶ್ರೀ ಕೆ.ಹೆಚ್. ಉತ್ತಯ್ಯ ಹೆರೂರು ಅಂಚೆ ಮತ್ತು ಗ್ರಾಮ ಸೋಮವಾರಪೇಟೆ ತಾ: ಕೊಡಗು ಜಿಲ್ಲೆ	45	ದಡ್ಡ ಗ್ರಾಮ	0-10 ಎಕರೆ	21-05-2001
3.	ಶ್ರೀ ಸಿ.ಬಿ. ಗಣಪತಿ ಬಿನ್ ಬೂಪಣ್ಣ ಹೊಡೂರ್ ಗ್ರಾಮ ಮತ್ತು ಅಂಚೆ ಮಡಿಕೇರಿ ತಾಲ್ಲೂಕು ಕೊಡಗು ಜಿಲ್ಲೆ	45	ಹೊದೂರು ಗ್ರಾಮ	1-00 ಎಕರೆ	01-06-2001

ನಗರ ಪ್ರದೇಶದಲ್ಲಿ ಅಭಿವೃದ್ಧಿ ಶುಲ್ಕ ವಸೂಲಿ

2642 (3418) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನಗರ ಪ್ರದೇಶದಲ್ಲಿ ಅಭಿವೃದ್ಧಿ ತೆರಿಗೆ ವಸೂಲಿ ಮಾಡುವ ಬಗೆಗೆ ನಗರ ಸಭೆ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಗಳ ನಡುವೆ ಜಿಜ್ಞಾಸೆ ಇದ್ದು ನಗರ ಸಭೆ ಅಭಿವೃದ್ಧಿ ಶುಲ್ಕ ವಸೂಲಿ ಮಾಡಲು ಕಾನೂನು ತೊಡಕು ಇರುವುದನ್ನು ಪರಿಹರಿಸಲು ಈ ಹಿಂದೆ ಸರ್ಕಾರವು ಆಶ್ವಾಸನೆ ನೀಡಿತ್ತೆ?

ಆ) ಹಾಗಿದ್ದಲ್ಲಿ ಈ ಕಾನೂನು ತೊಡಕನ್ನು ನಿವಾರಿಸುವ ದಿಸೆಯಲ್ಲಿ ಈ ವರೆವಿಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ), ಆ) ಹೌದು, ಆದಾಗ್ಯೂ ಸರ್ಕಾರ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ 76(2)ಕ್ಕೆ ತಿದ್ದುಪಡಿ ತರಲು ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆ.

2642 (3418) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನಗರ ಪ್ರದೇಶಗಳಲ್ಲಿನ ಬಹುತೇಕ ವಾಣಿಜ್ಯ ಸಂಕೀರ್ಣಗಳಲ್ಲಿ ವಾಹನಗಳ ನಿಲುಗಡೆಗಾಗಿ ಸ್ಥಳಾವಕಾಶ ಮಾಡದೇ ಇರುವುದನ್ನು ಸರ್ಕಾರ ಗಮನಿಸಿದೆಯೇ;

ಆ) ಸಾರ್ವಜನಿಕ ರಸ್ತೆಗಳೇ ವಾಹನ ನಿಲುಗಡೆ ಪ್ರದೇಶವಾಗಿರುವದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿರುವುದನ್ನು ಸರ್ಕಾರ ಮನಗಂಡಿದೆಯೇ;

ಇ) ಹಾಗಿದ್ದಲ್ಲಿ ವಾಣಿಜ್ಯ ಸಂಕೀರ್ಣಗಳಲ್ಲಿ ವಾಹನ ನಿಲುಗಡೆ ಅವಕಾಶವನ್ನು ಕಡ್ಡಾಯಪಡಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :—

ಅ) ನಗರ ಪ್ರದೇಶಗಳಲ್ಲಿನ ಬಹುತೇಕ ವಾಣಿಜ್ಯ ಸಂಕೀರ್ಣಗಳಲ್ಲಿ ವಾಹನಗಳ ನಿಲುಗಡೆಗಾಗಿ ಸ್ಥಳ ಅವಕಾಶ ಮಾಡಿಕೊಟ್ಟಿಲ್ಲದೇ ಇರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹೌದು.

ಇ) ವಾಣಿಜ್ಯ ಸಂಕೀರ್ಣದಲ್ಲಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸುವುದರ ಸಂಬಂಧದಲ್ಲಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಅ) ನಕ್ಷೆ ಮಂಜೂರಾತಿ ಸಮಯದಲ್ಲಿ ಕಟ್ಟಡದ ವಿಸ್ತೀರ್ಣಕ್ಕನುಗುಣವಾಗಿ ವಲಯ ನಿಯಮ ಹಾಗೂ ಬೈಲಾನುಸಾರ ಅಗತ್ಯ ವಾಹನ ನಿಲುಗಡೆಯನ್ನು ನಿಗಧಿಪಡಿಸಲಾಗಿರುತ್ತದೆ.

ಆ) ಸ್ವಾಧೀನಾನುಭವ ಪ್ರಮಾಣ ಪತ್ರ ನೀಡುವ ಸಮಯದಲ್ಲಿ ಕಟ್ಟಡದ ವಿಸ್ತೀರ್ಣಕ್ಕನುಗುಣವಾಗಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಿದಲ್ಲಿ ಮಾತ್ರ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ನೀಡಲಾಗುತ್ತಿದೆ. ಹಾಗೂ ಈ ಸಂಬಂಧ ಮುಚ್ಚಳಿಕೆ ಪತ್ರವನ್ನು ಸಹ ಅರ್ಜಿದಾರರಿಂದ ಪಡೆಯಲಾಗುತ್ತಿದೆ.

ಇ) ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯುವ ಸಮಯದಲ್ಲಿ ವಾಹನ ನಿಲುಗಡೆ ಮೀಸಲಿಟ್ಟ ಪ್ರದೇಶವನ್ನು ನಂತರದ ದಿನಗಳಲ್ಲಿ ಇತರೇ ಬಳಕೆಗೆ ಬಳಸುತ್ತಿರುವುದು ಗಮನಿಸಿದ ಕೂಡಲೇ ಕೆ.ಎಂ.ಸಿ. ಕಾಯ್ದೆಯನ್ವಯ ನೋಟೀಸ್ ಜಾರಿ ಮಾಡಿ ತಳಮಾಳಿಗೆಯಲ್ಲಿನ ಅನಧಿಕೃತ ನಿರ್ಮಾಣವನ್ನು ಒಡೆದುಹಾಕಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಅನೇಕ ಪ್ರಕರಣಗಳಲ್ಲಿ ಅಪೀಲುಗಳ ಸ್ಥಾಯಿ ಸಮಿತಿ ಮತ್ತು ನ್ಯಾಯಾಲಯಗಳಿಂದ ತಡೆಯಾಜ್ಞೆಯನ್ನು ತಂದಿದ್ದು ಈ ತಡೆಯಾಜ್ಞೆಗಳನ್ನು ತೆರವುಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಉ) ವಾಹನ ನಿಲುಗಡೆಗೆ ಮೀಸಲಿಟ್ಟ ಪ್ರದೇಶಗಳನ್ನು ಇತರೇ ಉಪಯೋಗಗಳಿಗೆ ಬಳಸುವುದನ್ನು ತಡೆಗಟ್ಟಲು ಕಠಿಣ ಕ್ರಮ ತೆಗೆದುಕೊಳ್ಳುವಂತೆ ಸ್ಥಳೀಯ ಅಭಿಯಂತರುಗಳಿಗೆ ಸೂಚಿಸಲಾಗಿದ್ದು, ಇದನ್ನು ಕಾರ್ಯಗತಗೊಳಿಸದ ಅಭಿಯಂತರುಗಳ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿನ ನಗರ ಪ್ರದೇಶದಲ್ಲಿ "ಹುಡ್ಕೊ"ನೆರವಿನ ಸಾಲ ಸೌಲಭ್ಯದ ಅನ್ವಯ ನಗರಸಭೆ ವ್ಯಾಪ್ತಿಯ ಅಭಿವೃದ್ಧಿ ಕಾರ್ಯಕ್ರಮಗಳು

2644 (೨೪೨೦) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿನ ನಗರಸಭೆಗಳಿಗೆ ಹುಡ್ಕೋ ಅನುದಾನಿತ ಸಹಾಯ ಧನವನ್ನಾಗಿ ತಲಾ ಒಂದು ಕೋಟಿ ರೂ.ಗಳನ್ನು ನೀಡಲಾಗಿದೆಯೇ;

ಆ) ಹಾಗೆ ನೀಡಲಾದ ಹಣದಲ್ಲಿ ನಗರ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದೆಯೇ; (ವಿವರ ನೀಡುವುದು)

ಇ) ಈ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ ಹಾಗೂ ಉಸ್ತುವಾರಿಯ ಜವಾಬ್ದಾರಿ ಯಾವ ಇಲಾಖೆಯ ವ್ಯಾಪ್ತಿಗೆ ಬರುತ್ತದೆ;

ಈ) ಈ ಕಾಮಗಾರಿಗಳಲ್ಲಿನ ಗುಣಮಟ್ಟ ಕಾಯ್ದುಕೊಳ್ಳದೇ ಇರುವ ಸಂಗತಿ ಸರ್ಕಾರಕ್ಕೆ ತಿಳಿದಿದೆಯೆ;

ಉ) ಈ ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡಲು ಸರ್ಕಾರದ ಕ್ರಮಗಳು ಏನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :—

ಅ) ಹೌದು.

ಆ) ಹೌದು. ರಾಜ್ಯದ ವಿವಿಧ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಸ್ಥಳೀಯ ಸಂಸ್ಥೆಗಳು ಆಯ್ಕೆ ಮಾಡಿದ ರಸ್ತೆಗಳ ಸುಧಾರಣೆ, ಅಗಲೀಕರಣ ದುರಸ್ತಿ, ಇಕ್ಕೆಲಗಳಲ್ಲಿ ಚರಂಡಿಗಳ ನಿರ್ಮಾಣ, ಚಿಕ್ಕ ಕಲ್ವರ್ಟ್ ನಿರ್ಮಾಣ, ಬೀದಿ ದೀಪಗಳನ್ನು ಅಳವಡಿಸುವುದು ಮಂತಾದ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೊಳ್ಳಲಾಗುತ್ತಿದೆ.

ಇ) ಈ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದ ಸಲುವಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯನ್ನು ನೋಡಲ್ ಏಜೆನ್ಸಿಯಾಗಿ ನೇಮಿಸಲಾಗಿದ್ದು. ಇದು ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

ಈ) ಈ ಕಾರ್ಯಕ್ರಮವು ರಾಜ್ಯದ ಸುಮಾರು ೨00 ಪಟ್ಟಣ ಪ್ರದೇಶಗಳಲ್ಲಿ ಕೈಗೊಳ್ಳಬೇಕಾದ ಬೃಹತ್ ಯೋಜನೆಯಾಗಿರುವುದರಿಂದ ನಿರೀಕ್ಷಿತ ಗುಣಮಟ್ಟವು ಇರದೇ ಇರುವ ಸ್ಥಳಗಳಲ್ಲಿ ಕಾಮಗಾರಿಗಳನ್ನು ಸರಿಪಡಿಸಲು ಹಾಗೂ ಗುಣಮಟ್ಟ ಕಾಯ್ದುಕೊಳ್ಳಲು ಈಗಾಗಲೇ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಉ) ಈ ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡಲು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉಸ್ತುವಾರಿ ಸಮಿತಿಯನ್ನು ನೇಮಿಸಲಾಗಿದೆ. ಈ ಕಾಮಗಾರಿಗಳ ಗುತ್ತಿಗೆಯನ್ನು ಗುತ್ತಿಗೆದಾರರ ಪೂರ್ವಾಹತೆಯನ್ನು ಪರಿಗಣಿಸಿ ವಹಿಸಿಕೊಡಲಾಗಿದ್ದು, ಕೆಲಸಗಳ ಉಸ್ತುವಾರಿ ಹಾಗೂ ನಿಗದಿತ : ಉತ್ತಮ ಗುಣಮಟ್ಟದಲ್ಲಿ ನಿರ್ವಹಿಸಲು ಮೆ: ಸಿ.ಇ.ಎಸ್ (ಇಂಡಿಯಾ) ಲಿ., ಸಂಸ್ಥೆಯನ್ನು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್‌ಟೆಂಟ್ ಆಗಿ ನೇಮಿಸಲಾಗಿದೆ.

ರೇಷ್ಮೆ ಸಂಪತ್ತು ಯೋಜನೆ

2645 (3421) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) :— ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ "ರೇಷ್ಮೆ ಸಂಪತ್ತು" ಯೋಜನೆ ಜಾರಿಯಲ್ಲಿ ಇದೆಯೇ;

ಆ) ಈ ಯೋಜನೆಯ ಮುಖ್ಯಾಂಶಗಳೇನು ಈ ಯೋಜನೆ ಅನ್ವಯ ಪ್ರಸ್ತುತ ಸೌಲಭ್ಯ ಹೊಂದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ;

ಇ) ಸದರಿ ಯೋಜನೆಗೆ ಸರ್ಕಾರವು ನೀಡಿರುವ ಹಣವೆಷ್ಟು;

ಈ) ಈವರೆವಿಗೂ ಎಷ್ಟು ಹಣ ಖರ್ಚು ಮಾಡಲಾಗಿದೆ?

ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) :—

ಅ) "ರೇಷ್ಮೆ ಸಂಪತ್ತು" ಯೋಜನೆಯನ್ನು ಜಾರಿಗೆ ತರುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಈ ಯೋಜನೆಯ ಮುಖ್ಯಾಂಶಗಳು:

1. ಹಿಪ್ಪುನೇರಳೆ ವಿಸ್ತೀರ್ಣ ಹೆಚ್ಚಿಸುವುದು.
2. ರೇಷ್ಮೆ ಉತ್ಪಾದನೆಯನ್ನು ಅಧಿಕಗೊಳಿಸುವುದು.
3. ರೇಷ್ಮೆ ಉತ್ಪಾದಕತೆ ಹೆಚ್ಚಿಸುವುದು.
4. ಅಂತರರಾಷ್ಟ್ರೀಯ ಗುಣಮಟ್ಟದ ರೇಷ್ಮೆ ಉತ್ಪಾದಿಸುವುದು.
5. ಉತ್ಪಾದನಾ ವೆಚ್ಚ ಕಡಿಮೆ ಮಾಡಿ ಗುಣಮಟ್ಟದ ರೇಷ್ಮೆ ಉತ್ಪಾದಿಸುವುದು.

ರೇಷ್ಮೆ ಬೆಳೆಗಾರರು, ಖಾಸಗಿ ಮೊಟ್ಟೆ ತಯಾರಿಕರು, ಚಾಕಿ ಸಾಕಾಣಿಕೆದಾರರು, ರೀಲರುಗಳ ಸಹಕಾರ ಸಂಘಗಳಿಗೆ ಸಹಾಯಧನ ಒದಗಿಸುವುದು ಮತ್ತು ತರಬೇತಿ ಕಾರ್ಯಕ್ರಮಗಳಿಂದ ರಾಜ್ಯದಲ್ಲಿ ರೇಷ್ಮೆ ಉತ್ಪಾದನೆ, ಉತ್ಪಾದಕತೆ ಮತ್ತು ಗುಣಮಟ್ಟ ಹೆಚ್ಚಿಸುವುದು. ಈ ಯೋಜನೆಯನ್ನು ತಯಾರಿಸಿ ಸರ್ಕಾರದ ಮಂಜೂರಾತಿ ಕೋರಲಾಗಿದ್ದು, ರಾಜ್ಯದ 2.50 ಲಕ್ಷ ರೇಷ್ಮೆ ಬೆಳೆಗಾರರು, 120 ಖಾಸಗಿ ರೇಷ್ಮೆ ಮೊಟ್ಟೆ ತಯಾರಿಕರು, 120 ಚಾಕಿ ಸಾಕಾಣಿಕೆದಾರರು ಮತ್ತು 3 ಸಾವಿರ ರೀಲರುಗಳು ಈ ಕಾರ್ಯಕ್ರಮದಿಂದ ಪ್ರಯೋಜನ ಪಡೆಯಲಿದ್ದಾರೆ.

ಇ) ಈ ಯೋಜನೆಗೆ 2001-02ನೇ ಸಾಲಿಗೆ ರೂ. 23.00 ಲಕ್ಷಗಳ ಪ್ರತ್ಯೇಕ ವಂಟನೆ ಇದೆ.

ಈ) ಯೋಜನೆ ಜಾರಿಗೆ ಬಂದಿರುವುದಿಲ್ಲ.

ಮಂಡ್ಯ ನಗರಸಭೆಯಲ್ಲಿ ನಕಲಿ ಖಾತೆಗಳ ತನಿಖೆ ಹಾಗೂ ನಗರ ಸ್ವಚ್ಛ ಮಾಡುವ ಬಗೆಗಿನ ಟೆಂಡರ್

2646(3422) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಡ್ಯ ನಗರಸಭೆಯಲ್ಲಿ ನಕಲಿ ಖಾತೆಗಳನ್ನು ಮಾಡಲಾಗಿದ್ದು ಅದನ್ನು ತನಿಖೆ ನಡೆಸಬೇಕೆಂದು ಮಂಡ್ಯ ನಗರಸಭೆ ನಿರ್ಣಯಿಸಿ ತನಿಖೆಗಾಗಿ ಸರ್ಕಾರಕ್ಕೆ ಮನವಿ ಮಾಡಲಾಗಿದೆಯೇ?

ಆ) ಹಾಗೆ ಮನವಿ ಮಾಡಿದ್ದಲ್ಲಿ ಸರ್ಕಾರ ಈವರೆವಿಗೆ ಯಾವ ಕ್ರಮ ಕೈಗೊಂಡಿದೆ?

ಇ) ಮಂಡ್ಯ ನಗರಸಭೆಯಲ್ಲಿ ನಗರವನ್ನು ಚೊಕ್ಕಟ ಮಾಡುವುದಕ್ಕಾಗಿ ಖಾಸಗಿಯವರಿಗೆ ಟೆಂಡರ್ ನೀಡಿದ್ದು ಟೆಂಡರ್ ಅವಧಿ ಮುಗಿದಿದ್ದರೂ ಸಹ ಮರು ಟೆಂಡರ್ ಕರೆಯದೆ ಇರುವುದಕ್ಕೆ ಕಾರಣಗಳೇನು?

ಈ) ಮರು ಟೆಂಡರ್ ಕರೆಯುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :—

ಅ) ಇಲ್ಲ. ಆದಾಗ್ಯೂ ಸಂಬಂಧಪಟ್ಟ ಅಧಿಕಾರಿಗಳು ಯಾರು ಎಂಬುದನ್ನು ಪತ್ತೆ ಹಚ್ಚಲು ಪ್ರಕರಣವನ್ನು ಫೋರೆನ್ಸಿಕ್ ತಂತ್ರಜ್ಞರಿಂದ ತನಿಖೆ ನಡೆಸಲು ಹಾಗೂ ಈ ಸದರಿ ಪ್ರಕರಣದ ಬಗ್ಗೆ ತನಿಖೆ ನಡೆಸಲು ತೀರ್ಮಾನಿಸಿ ಮಂಡ್ಯ ಜಿಲ್ಲಾಧಿಕಾರಿಗಳಿಗೆ ಕೋರಿರುತ್ತಾರೆ.

ಆ) ಈ ಬಗ್ಗೆ ವರದಿ ಬಂದ ನಂತರ ಕಾನೂನು ರೀತಿಯಲ್ಲಿ ಕ್ರಮ ಜರುಗಿಸಲಾಗುವುದು.

ಇ) ಮಂಡ್ಯ ನಗರಸಭೆ ವ್ಯಾಪ್ತಿಯ ವಾರ್ಡ್ ನಂ. 2, 4, 6, 7ನೇ ವಿಭಾಗ ನೈರ್ಮಲ್ಯ ಕೆಲಸವನ್ನು ನಿರ್ವಹಿಸಲು ದಿನಾಂಕ: 24-3-2001ರಂದು ಮರು ಟೆಂಡರ್ ಪ್ರಕಟಿಸಲಾಗಿತ್ತು. ಆದರೆ ಪ್ರಸ್ತುತ ಚುನಾವಣೆ ಘೋಷಿಸಿದ್ದುದ್ದರಿಂದ ಹಾಲಿ ಕಾರ್ಯ ನಿರ್ವಹಿಸುತ್ತಿದ್ದ ಗುತ್ತಿಗೆದಾರರರನ್ನು ಆಡಳಿತ ಹಿತದೃಷ್ಟಿಯಿಂದ ಮುಂದುವರಿಸಲಾಗಿತ್ತು. ಹಾಗೂ ದಿನಾಂಕ: 17-8-2001ರವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ.

ಈ) ಸ್ಥಗಿತಗೊಳಿಸಲಾಗಿದ್ದ ಟೆಂಡರ್ ಪ್ರಕ್ರಿಯೆ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಕುಂಬಾರರ ಕೋಮಿನ ಗುರುತಿಸುವಿಕೆ

2647 (3435) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಕುಂಬಾರರು ಎಂದು ಜಾತಿ ನಮೂದಿಸಿಕೊಂಡಿರುವವರ ಸಂಖ್ಯೆ ಎಷ್ಟು; (ಹಿಂದುಳಿದ ವರ್ಗಗಳ ಆಯೋಗದ ವರದಿ ಅಥವಾ ಜನಗಣತಿ 2001ರ ಆಧಾರದಲ್ಲಿ)

ಆ) ಕುಂಬಾರ ಜಾತಿಯನ್ನು ಸಮಾನಾಂತರವಾಗಿ ಸಂಬೋಧಿಸುವ ಪರ್ಯಾಯ ಶಬ್ದಗಳು ಅಥವಾ ಜಾತಿ ಪದಗಳು ಇದೆಯೇ; ಹಾಗಿದ್ದರೆ ಅವು ಯಾವುವು; (ವಿವರ ಒದಗಿಸುವುದು)

ಇ) ರಾಜ್ಯದ ಬೇರೆ ಬೇರೆ ಜಿಲ್ಲೆಯ ಪ್ರಾದೇಶಿಕ ವ್ಯಾಪ್ತಿಗಳಲ್ಲಿ ಮೇಲ್ಕಂಡ ಜಾತಿಯವರು ಯಾವ ಯಾವ ಪಂಗಡದೊಂದಿಗೆ ತಮ್ಮ ಜಾತಿ ಹೆಸರನ್ನು (ಈ ಭಾಗದ ಸಂಪ್ರದಾಯ ಬುಡಕಟ್ಟು ರೂಢಿಯಾನುಸಾರ) ಗುರುತಿಸಿಕೊಂಡಿರುತ್ತಾರೆ ಉದಾ: ಶೆಟ್ಟಿ, ಕುಂಬಾರ್, ಕುಲಾಲ್, ಮೂಲ್ಯ, ಗುಂಡಾಭಕ್ತ, ಇತ್ಯಾದಿಯಂತೆ)

ಈ) ಜಿಲ್ಲಾವಾರು ವಿವರವಾದ ಮಾಹಿತಿಗಳನ್ನು ಒದಗಿಸುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

3ನೇ ಹಿಂದುಳಿದ ವರ್ಗಗಳ ಆಯೋಗದ ವರದಿಯ ಮೇರೆಗೆ 1988 ರಲ್ಲಿ ಕುಂಬಾರ ಜನಾಂಗದ ಜನಸಂಖ್ಯೆಯನ್ನು 2.79 ಲಕ್ಷಕ್ಕೆ ಅಂದಾಜಿಸಲಾಗಿದೆ.

ಚಕ್ರಸಾಲಿ, ಗುನಗ, ಗನಗಿ, ಕೊಯವ, ಕೂಲಾಲ್, ಕುಂಬಾರ್, ಕುಂಬಾರ್ಡ್, ಕಮ್ಮಾರ, ಕುಸವಾನ, ಮೂಲ್ಯ, ಸಜ್ಜನ, ಕುಂಬಾರ, ಕುಂಭಾರೆ, ಕುಲಾಲರ್, ಖುಮಾರ. ಸರ್ಕಾರದ ಆದೇಶದ ದಿನಾಂಕ: 17-9-94ರ ಪಟ್ಟಿಯಲ್ಲಿ ಪ್ರವರ್ಗ-2ಎ ನಲ್ಲಿ ಸೇರ್ಪಡೆಯಾಗಿದೆ.

ಇ) ಯಾವುದೇ ಒಂದು ಜಿಲ್ಲೆಗೆ ಈ ಪರ್ಯಾಯ ಜಾತಿಗಳು ಸೀಮಿತವಾಗಿರುವುದಿಲ್ಲ.

ಈ) -ಉದ್ಭವಿಸುವುದಿಲ್ಲ-

ಬಸವನ ಬಾಗೇವಾಡಿ ಮತಕ್ಷೇತ್ರದಲ್ಲಿನ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ನಿಲಯಗಳು

2648 (3436) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಬಸವನ ಬಾಗೇವಾಡಿ ಮತಕ್ಷೇತ್ರದಲ್ಲಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಬಿ.ಸಿ.ಎಂ. ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು;

2) ಪ್ರಸಕ್ತ ಸಾಲಿನಲ್ಲಿ ಈ ಕ್ಷೇತ್ರ ವ್ಯಾಪ್ತಿಗೆ ಹೊಸದಾಗಿ ವಿದ್ಯಾರ್ಥಿನಿಲಯಗಳನ್ನು ಸರ್ಕಾರ ಮಂಜೂರು ಮಾಡಲಾಗಿದೆಯೇ;

3. ಮಂಜೂರು ಮಾಡಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು; ಮಂಜೂರು ಮಾಡಬೇಕಾಗಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

1. ಬಸವನ ಬಾಗೇವಾಡಿ ಮತಕ್ಷೇತ್ರದಲ್ಲಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಹಾಗೂ ಬಿ.ಸಿ.ಎಂ. ವಿದ್ಯಾರ್ಥಿನಿಲಯಗಳ ವಿವರ ಕೆಳಕಂಡಂತಿದೆ.

	ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳು		ಮೆಟ್ರಿಕ್-ನಂತರ ವಿದ್ಯಾರ್ಥಿನಿಲಯಗಳು	
	ಸರ್ಕಾರಿ	ಅನುದಾನಿತ	ಸರ್ಕಾರಿ	ಅನುದಾನಿತ
ಪರಿಶಿಷ್ಟ ಜಾತಿ	3	1	-	-
ಪರಿಶಿಷ್ಟ ವರ್ಗ	-	-	-	-
ಹಿಂದುಳಿದ ವರ್ಗ	3	-	1	-

2. ಇಲ್ಲ

3. ಉದ್ಭವಿಸುವುದಿಲ್ಲ.

ಕೃಷ್ಣ ಮೇಲ್ದಂಡೆ ಯೋಜನೆಯಡಿ ಹಿನ್ನೀರಿನಿಂದ ಮುಳುಗಡೆಯಾದ ಸಂತ್ರಸ್ಥರಿಗೆ ಔದ್ಯಮಿಕ ತರಬೇತಿ ಕೇಂದ್ರಗಳ ಸ್ಥಾಪನೆ

2649 (3437) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) :— ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಸವನ ಬಾಗೇವಾಡಿ ಮತಕ್ಷೇತ್ರವು ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಹಿನ್ನೀರಿನಿಂದ ಮುಳುಗಡೆಯಾಗಲಿರುವ ಸಂತ್ರಸ್ಥರಿಗೆ ಪುನರ್ವಸತಿ ಪ್ರದೇಶಗಳಲ್ಲಿ ಇಲಾಖೆಯ ವತಿಯಿಂದ ಔದ್ಯಮಿಕ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ತೀರ್ಮಾನದಲ್ಲಿದೆಯೇ;

ಆ) ಹಾಗಿದ್ದಲ್ಲಿ ಈ ಯೋಜನೆ ಯಾವ ಹಂತದಲ್ಲಿದೆ; ಯಾವಾಗ ಪ್ರಾರಂಭಿಸಲಾಗುವುದು? (ವಿವರ ನೀಡುವುದು)

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :—

ಇಲ್ಲ. ಆದರೆ ರಾಜ್ಯದ ಮಹತ್ವದ ನೀರಾವರಿ ಯೋಜನೆಯಲ್ಲಿ ಹಿನ್ನೀರಿನಿಂದ ಮುಳುಗಡೆಯಾದ ಸಂತ್ರಸ್ಥರು ಕೈಗಾರಿಕಾ ತರಬೇತಿ ಪಡೆಯಲು ಮುಂದೆ ಬಂದಲ್ಲಿ ಅವರುಗಳಿಗೆ ಆದ್ಯತೆ ಮೇರೆಗೆ ತರಬೇತಿ ನೀಡಲಾಗುವುದು.

ಆ) ಉದ್ಭವಿಸುವುದಿಲ್ಲ.

ಹಟ್ಟಿ ಚಿನ್ನದ ಗಣಿಯ ಚಿನ್ನದ ಅದಿರಿನ ಪ್ರಮಾಣ

2650 (3438) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ಹಣಕಾಸಿನ ವರ್ಷದಲ್ಲಿ ರಾಯಚೂರು ಜಿಲ್ಲೆ ಹಟ್ಟಿ ಚಿನ್ನದ ಗಣಿಯಲ್ಲಿ ಹೊರತೆಗೆದ ಚಿನ್ನದ ಅದಿರಿನ ಪ್ರಮಾಣ ಎಷ್ಟು; ಇದರಿಂದ ಉತ್ಪಾದನೆಯಾದ ಪರಿಶುದ್ಧ ಚಿನ್ನವೆಷ್ಟು;

ಆ) ಸದರಿ ಗಣಿಯ ಉತ್ಪಾದನಾ ವೆಚ್ಚಕ್ಕೂ ಗಣಿಗಾರಿಕಾ ವೆಚ್ಚಕೂ ವ್ಯತ್ಯಾಸ ಕಂಡಿದೆಯೇ; ಇದರಿಂದ ಕಂಪನಿಗೆ ಲಾಭ ಬಂದಿದೆಯೇ;

ಇ) ಪ್ರಸಕ್ತ ಸಾಲಿನಲ್ಲಿ ಚಿನ್ನದ ನಿಕ್ಷೇಪವನ್ನು ತೆಗೆಯಲುದ್ದೇಶಿಸಿರುವ ಅಂದಾಜು ಎಷ್ಟು;

ಈ) ಈ ಕಂಪನಿ ಪ್ರಸ್ತುತ ಉತ್ತಮ ಸ್ಥಿತಿಯಲ್ಲಿ ನಡೆಯುತ್ತಿದೆಯೇ; ಇಲ್ಲಿ ಚಿನ್ನದ ನಿಕ್ಷೇಪವಿಲ್ಲದೆ ಬೇರೆ ಇತರೆ ಖನಿಜಗಳನ್ನು ತೆಗೆಯಲಾಗುವುದೇ?

ಶ್ರೀ ಎ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :—

ಅ) ಕಳೆದ ಹಣಕಾಸಿನ ವರ್ಷ 2000-2001 ರಲ್ಲಿ ಹಟ್ಟಿ ಚಿನ್ನದ ಗಣಿಯಲ್ಲಿ 3,35,845 ಮೆಟ್ರಿಕ್ ಟನ್ ಅದಿರನ್ನು ಹೊರತೆಗೆದು 1785 ಕಿಲೋ ಗ್ರಾಮ್ ಪರಿಶುದ್ಧ ಚಿನ್ನವನ್ನು ಉತ್ಪಾದಿಸಿದೆ.

ಆ) ಉತ್ಪಾದನಾ ವೆಚ್ಚಕ್ಕೂ, ಗಣಿಗಾರಿಕೆ ವೆಚ್ಚಕ್ಕೂ ಯಾವುದೇ ಗಮನಾರ್ಹ ವ್ಯತ್ಯಾಸ ಕಂಡುಬಂದಿರುವುದಿಲ್ಲ. ಕಳೆದ ಹಣಕಾಸಿನ ವರ್ಷ 2000-2001ರ ಲೆಕ್ಕ ಪರಿಶೋಧನೆಯು ಪ್ರಗತಿಯಲ್ಲಿರುತ್ತದೆ. ಹಟ್ಟಿ ಚಿನ್ನದ ಗಣಿಯಿಂದ ರೂ.4.00 ಕೋಟಿ ನಗದು ಲಾಭ ಬಂದಿರುತ್ತದೆ. ಚಿತ್ರದುರ್ಗ ಚಿನ್ನದ ಗಣಿಯಲ್ಲಿ ನಗದು ನಷ್ಟವನ್ನು ಅನುಭವಿಸಿದೆ.

ಇ) ಪ್ರಸಕ್ತ ಸಾಲಿನಲ್ಲಿ ನಿಗಮದ ಮಂಡಳಿಯ ಪ್ರಕಾರ ಹಟ್ಟಿ ಚಿನ್ನದ ಗಣಿಯಲ್ಲಿ 4,78,500 ಟನ್‌ಗಳಷ್ಟು ಅದಿರನ್ನು ಸಂಸ್ಕರಿಸಿ 2,423 ಕೆಜಿ ಪರಿಶುದ್ಧ ಚಿನ್ನ ಉತ್ಪಾದನೆಯ ಗುರಿಯನ್ನು ಹಾಕಿಕೊಂಡಿರುತ್ತದೆ.

ಈ) ಕಳೆದ ಹಣಕಾಸಿನ ವರ್ಷದಿಂದ ಹಟ್ಟಿ ಚಿನ್ನದ ಗಣಿ ನಿಗಮವು ನಗದು ಲಾಭವನ್ನು ಗಳಿಸಲು ಸಾಧ್ಯವಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ನಿಗಮದ ಯೋಜನೆಯ ಪ್ರಕಾರ ಸುಮಾರು 790 ಲಕ್ಷ ರೂ.ಗಳ ನಗದು ಲಾಭವನ್ನು ಗುರಿಯಲ್ಲಿ ಇಟ್ಟುಕೊಂಡಿರುತ್ತದೆ. ಏಪ್ರಿಲ್ 2001ರಿಂದ ದಿನಾಂಕ: 17-7-2001 ರವರೆಗೆ ಈಗಾಗಲೇ 681.76 ಕೇಜಿ ಪರಿಶುದ್ಧ ಚಿನ್ನವನ್ನು ಉತ್ಪಾದಿಸಿದೆ. ಜೂನ್ 2001ರ ಮಾಹೆಯಲ್ಲಿ 225 ಕೇಜಿ ಪರಿಶುದ್ಧ ಚಿನ್ನವನ್ನು ಉತ್ಪಾದಿಸಿದೆ.

ಚಿನ್ನದ ನಿಕ್ಷೇಪವಲ್ಲದೆ ಬೇರೆ ಇತರೆ ಖನಿಜಗಳನ್ನು ನಿಗಮವು ತೆಗೆಯುತ್ತಿರುವುದಿಲ್ಲ.

ಚಿಂತಾಮಣಿ ಪಟ್ಟಣದ ವರ್ತುಲ ರಸ್ತೆ ನಿರ್ಮಾಣ

2651 (3057) ಶ್ರೀ **ಚೌಡರೆಡ್ಡಿ (ಚಿಂತಾಮಣಿ)** :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಂತಾಮಣಿ ಪಟ್ಟಣದ ವರ್ತುಲ ರಸ್ತೆ ಸರ್ಕಾರದ ಆದೇಶ ಸಂಖ್ಯೆ: ನಯೋಪ್ರಾ : ಚಿ : ಸ್ಥೂ : ಅಯೋ : ಅಂತಿಮ : 2000-2001 ದಿನಾಂಕ : 7-9-2000ರ ಮೇರೆಗೆ ಮಂಜೂರಾಗಿ ಈ ಬಗ್ಗೆ ನಕ್ಷೆ ತಯಾರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ವರ್ತುಲ ರಸ್ತೆ ಪ್ರದೇಶದಲ್ಲಿ ಸ್ಥಳವನ್ನು ಸ್ವಾಧೀನ ಮಾಡಿಕೊಳ್ಳಲು ವಿಳಂಭವಾದ್ದರಿಂದ ಈ ಪ್ರದೇಶಗಳಲ್ಲಿ ಅನಧಿಕೃತ ಕಟ್ಟಡಗಳು ಬಂದು ಈ ಕಾಮಗಾರಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ತೊಂದರೆಯನ್ನು ನಿವಾರಿಸಲು ಕೈಗೊಳ್ಳುವ ಕ್ರಮವೇನು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಚಿಂತಾಮಣಿ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಸ್ಥೂಲಾಬಿವೃದ್ಧಿ ಯೋಜನೆಗೆ ಸರ್ಕಾರವು ಕಾಯ್ದೆ 1961ರ ಪ್ರಕರಣ 13(3) ರನ್ವಯ ಆದೇಶ ಸಂಖ್ಯೆ ನಆಇ 312 ಎಂಆಟಿ 2000 ಬೆಂಗಳೂರು ದಿನಾಂಕ: 22-7-2000ರಲ್ಲಿ ಅಂತಿಮ ಅನುಮೋದನೆ ನೀಡಿದೆ. ಸದರಿ ಯೋಜನೆಯಲ್ಲಿ ವರ್ತುಲ ರಸ್ತೆಯನ್ನು ರೂಪಿಸಲು ಸಹ ಪ್ರಸ್ತಾಪಿಸಲಾಗಿದೆ.

ಆ) ಇಲ್ಲ

ಇ) ಅನಧಿಕೃತ ಬೆಳವಣಿಗೆಗಳನ್ನು ತೆರವುಗೊಳಿಸಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಲ್ಲಿ ಅವಕಾಶವಿದೆ. ಆದರಂತೆ ಕ್ರಮ ಕೈಗೊಳ್ಳಲಾಗುವುದು.

ಕಾರ್ಕಳ ಪುರಸಭೆಯಲ್ಲಿ ಒಳಚರಂಡಿ ವ್ಯವಸ್ಥೆ

2653 (3049) ಶ್ರೀ ಗೋಪಾಲ ಬಂಡಾರಿ ಹೆಚ್. (ಕಾರ್ಕಳ) :— ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಕಾರ್ಕಳ ಪುರಸಭೆಗೆ ಕೆಲವು ವರ್ಷಗಳ ಹಿಂದೆ ಮಂಡಳಿಯ ವತಿಯಿಂದ ಒಳಚರಂಡಿ ಕಾಮಗಾರಿ ಮಾಡಿದ್ದು ಅದು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸದೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಈ ದುರವ್ಯವಸ್ಥೆಯ ಒಳಚರಂಡಿ ಪೈಪುಗಳು ಮ್ಯಾನ್‌ಹೋಲ್‌ಗಳು ಸೋರುತ್ತಿದ್ದು, ಕೊಳಕು ನೀರೆಲ್ಲ ನದಿಗೆ ಸೇರಿ ನದಿಯೇ ಕಲುಷಿತವಾಗುತ್ತಿದ್ದು ಇದನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :—

1. ಬಂದಿದೆ.

2. ಕಾರ್ಕಳ ಒಳಚರಂಡಿ ಯೋಜನೆಯನ್ನು 1993ರಲ್ಲಿ ಚಾಲನೆಗೊಳಿಸಿದ್ದು, ಪುರಸಭೆಗೆ ನಿರ್ವಹಣೆಗೆ ಹಸ್ತಾಂತರಿಸಲಾಗಿದ್ದು, ಹಾಲಿ ಪುರಸಭೆಯವರೇ ಒಳಚರಂಡಿ ವ್ಯವಸ್ಥೆಯನ್ನು ನಿರ್ವಹಿಸುತ್ತಿರುತ್ತಾರೆ. 1995ನೇ ಇಸವಿಯಲ್ಲಿ ಅಂದಿನ ಮುಖ್ಯಮಂತ್ರಿಗಳು ಮಂಡಳಿಯ ಅಧಿಕಾರಿಗಳೊಂದಿಗೆ ಜಂಟಿ ಪರಿವೀಕ್ಷಣೆ ನಡೆಸಿ, ಮ್ಯಾನ್‌ಹೋಲ್‌ಗಳನ್ನು ದುರಸ್ಥಿಗೊಳಿಸುವ ಹಾಗೂ 350 ಮತ್ತು 500 ಮಿ.ಮಿ.ವ್ಯಾಸದ ಆರ್.ಸಿ.ಸಿ. ಗ್ರಾಮ ಸಾರ ಪೈಪುಗಳ ಜೋಡಣೆಯನ್ನು ಸ್ಥಳಾಂತರಿಸುವ ಕಾಮಗಾರಿಯನ್ನು ರೂ.30,000.00 ವೆಚ್ಚದಲ್ಲಿ ಕೈಗೊಂಡು ಏಪ್ರಿಲ್ 97ರಲ್ಲಿ ಪೂರ್ಣಗೊಳಿಸಿ ಗ್ರಾಮಸಾರವನ್ನು ಆಕ್ಸಿಡೇಷನ್ ಪಾಂಡ್‌ರವರೆಗೆ ಸರಾಗವಾಗಿ ಹರಿಯುವಂತೆ ಮಾಡಲಾಯಿತು.

ಆಕ್ಸಿಡೇಷನ್ ಪಾಂಡನ್ನು ಸೇರುವ 500 ಮಿ.ಮಿ. ವ್ಯಾಸದ ಕೊಳವೆಯು ಗದ್ದೆಗಳ ಮುಖಾಂತರ ಹಾದು ಹೋಗಿದ್ದು, ಸ್ಥಳೀಯ ರೈತರು ಹಾಗೂ ಇತರರು ಈ ಪೈಪುಗಳನ್ನು ಒಡೆದು ಗದ್ದೆಗೆ ಗ್ರಾಮಸಾರವನ್ನು ಹಾಯಿಸಿರುವುದರಿಂದ, ಅಲ್ಲಲ್ಲಿ, ಸೋರುವಿಕೆ ಉಂಟಾಗಿರುತ್ತದೆ. ಇದನ್ನು ಸರಿಪಡಿಸುವ ಸಲುವಾಗಿ ರೂ.9.70 ಲಕ್ಷಗಳ ಅಂದಾಜನ್ನು ತಯಾರಿಸಿ ಮಂಡಳಿಯ ಮಂಗಳೂರು ವಿಭಾಗದಿಂದ ಕಾರ್ಕಳ ಪುರಸಭೆಗೆ

9.7.99ರಲ್ಲಿ ಕಳುಹಿಸಲಾಗಿದೆ. ಸದರಿ ಅಂದಾಜಿನ ಮೊತ್ತವನ್ನು ಪುರಸಭೆಯು ಮಂಡಳಿಗೆ ಠೇವಣಿ ಮಾಡಿದ ನಂತರ ಈ ಕಾಮಗಾರಿಯನ್ನು ಕೈಗೊತ್ತಿಕೊಳ್ಳಲಾಗುವುದು.

ಮಂಗಳೂರು, ಉಡುಪಿ ಜಿಲ್ಲೆಗಳಲ್ಲಿ ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ

2654 (3050) ಶ್ರೀ ಗೋಪಾಲ ಬಂಡಾರಿ ಹೆಚ್. (ಕಾರ್ಕಳ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಉಡುಪಿ ಮತ್ತು ಮಂಗಳೂರು ಜಿಲ್ಲೆಯಲ್ಲಿನ ವಿದ್ಯಾರ್ಥಿನಿಲಯ ಮೇಲ್ವಿಚಾರಕರ, ಅಡಿಗೆಯವರ ಮತ್ತು ಕಾವಲುಗಾರರ ಹುದ್ದೆಗಳೆಷ್ಟು? ಅವುಗಳಲ್ಲಿ ತೆರವಾಗಿರುವ ಹುದ್ದೆಗಳೆಷ್ಟು. (ತಾಲ್ಲೂಕುವಾರು ಒದಗಿಸುವುದು)

ಆ) ಇವುಗಳನ್ನು ಭರ್ತಿ ಮಾಡಲು ಅಥವಾ ತಾತ್ಕಾಲಿಕವಾಗಿಯಾದರೂ ತುಂಬಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ ಪರಿಶಿಷ್ಟ ವರ್ಗಗಳ ಇಲಾಖೆ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವತಿಯಿಂದ ಉಡುಪಿ ಹಾಗೂ ಮಂಗಳೂರು ಜಿಲ್ಲೆಗಳಲ್ಲಿರುವ ವಿದ್ಯಾರ್ಥಿನಿಲಯಗಳಲ್ಲಿರುವ ನಿಲಯ ಮೇಲ್ವಿಚಾರಕರು, ಅಡಿಗೆಯವರು ಅಡಿಗೆ ಸಹಾಯಕರು, ಮತ್ತು ಕಾವಲುಗಾರರ ಹುದ್ದೆಗಳ ವಿವರ ಹಾಗೂ ಅವುಗಳಲ್ಲಿ ತೆರವಾಗಿರುವ ಹುದ್ದೆಗಳ ತಾಲ್ಲೂಕುವಾರು ವಿವರಗಳನ್ನು ಅನುಬಂಧ-1, 2, 3, ಮತ್ತು 4ರಲ್ಲಿ ಲಗತ್ತಿಸಲಾಗಿದೆ.

ಆ) ಗ್ರೂಪ್ 'ಸಿ' ಹುದ್ದೆಗಳಾದ ನಿಲಯ ಮೇಲ್ವಿಚಾರಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಸರ್ಕಾರದ ಪತ್ರ ಸಂಖ್ಯೆ: ಎಸ್‌ಡಬ್ಲ್ಯೂಡಿ 380 ಎಸ್‌ಇಟಿ 98: ದಿನಾಂಕ: 18-7-2001ರಲ್ಲಿ ಸರ್ಕಾರವು ಅನುಮತಿ ನೀಡಲಾಗಿದ್ದು, ಈ ಹುದ್ದೆಗಳನ್ನು ಆದಷ್ಟು ಬೇಗ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಹಾಲಿ ಈ ಹುದ್ದೆಗಳನ್ನು ತಾತ್ಕಾಲಿಕವಾಗಿ ಶಿಕ್ಷಣ ಇಲಾಖೆಯ ಶಿಕ್ಷಕರನ್ನು ಹೆಚ್ಚಿನ ಪ್ರಭಾರದಲ್ಲಿ ಇರಿಸಲು ಸೂಚನೆ ನೀಡಿದ್ದು, ಆಯಾ ಜಿಲ್ಲೆಗಳಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಗ್ರೂಪ್ 'ಡಿ' ಹುದ್ದೆಗಳಾದ ಅಡಿಗೆಯವರು, ಅಡಿಗೆ ಸಹಾಯಕರು, ರಾತ್ರಿ ಕಾವಲುಗಾರರ ಹುದ್ದೆಗಳನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಗ್ರೂಪ್ ಡಿ ಹುದ್ದೆಗಳ ನೇಮಕಾತಿ ಸಮಿತಿಯ ಮುಖಾಂತರ ನೇಮಕಾತಿ ನಿಯಮಗಳ ಪ್ರಕಾರ ಹುದ್ದೆಗಳನ್ನು ಭರ್ತಿ ಮಾಡಲು ಆಯಾ ಜಿಲ್ಲೆಗಳಿಗೆ ಸೂಚನೆ ನೀಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 3050ಕ್ಕೆ ಅನುಬಂಧ - 1

ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುವಾರು

ಕ್ರ. ಸಂ.	ಜಿಲ್ಲೆಯ ಹಾಗೂ ತಾಲ್ಲೂಕು ಹೆಸರು	ಮಂಜೂರಾದ ಹುದ್ದೆ		
		ವಿದ್ಯಾರ್ಥಿ ನಿಲಯದ ಮೇಲ್ವಿಚಾರಕರು	ಅಡಿಗೆಯವರು	ಅಡಿಗೆ ಸಹಾಯಕರು
ಅ)	ದಕ್ಷಿಣ ಕನ್ನಡ ಜಿಲ್ಲೆ			
1)	ಮಂಗಳೂರು ತಾಲ್ಲೂಕು	4	8	4
2)	ಸುಳ್ಯ ತಾಲ್ಲೂಕು	4	9	4
3)	ಬಂಟ್ವಾಳ ತಾಲ್ಲೂಕು	3	10	5
	2) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ	ರೂ. 900.00 ಲಕ್ಷ
ಆ)	1) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ	ರೂ. 26.83 ಲಕ್ಷ
	2) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ	ರೂ. 3.72 ಲಕ್ಷ
ಇ)	1) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ	122
	2) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ	14

ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಗಣಕೀಕರಣ

2689 (3542) ಶ್ರೀ ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನ ಅಳವಡಿಕೆಯು ಸರ್ಕಾರದ ನೀತಿಯಾಗಿದ್ದು ಗಣಿ ಮತ್ತು ಭೂವಿಜ್ಞಾನ ಇಲಾಖೆಯನ್ನು ಗಣಕೀಕರಣಗೊಳಿಸಲಾಗಿದೆಯೇ; ಇಲ್ಲವಾದಲ್ಲಿ ವಿಳಂಬಕ್ಕೆ ಕಾರಣಗಳೇನು;

ಆ) ಗಣಕೀಕರಣಗೊಂಡ ಮಂತ್ರಿಗಳ ಮತ್ತು ಕಾರ್ಯದರ್ಶಿಗಳ ಕಛೇರಿ ಹಾಗೂ ಜಿಲ್ಲಾ ಇಲಾಖಾ ಕೇಂದ್ರಗಳಿಗೆ ಅಳವಡಿಸಿದ ಸಾಫ್ಟ್‌ವೇರ್ ವಿವರ ಹಾಗೂ ಈಮೈಲ್ ವಿಳಾಸವನ್ನು ಒದಗಿಸುವುದು.

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :—

ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಗಣಕೀಕರಣ ಕಾರ್ಯವನ್ನು ಕಳೆದ 5-6 ವರ್ಷಗಳಿಂದ ಹಂತ ಹಂತವಾಗಿ ಕೈಗೊಳ್ಳಲಾಗುತ್ತಿದೆ.

ಆ) ಇಲಾಖೆಯ ಜಿಲ್ಲಾ ಅಂತರ್ಜಾಲ ಕಛೇರಿಗಳಲ್ಲಿ ಹಾಗೂ ನಾಲ್ಕು ರಸಾಯನ ಪ್ರಯೋಗ ಶಾಲೆಗಳಲ್ಲಿ ವಿಂಡೋಸ್-98 ಮತ್ತು ಆಫೀಸ್-97 ಗಳಲ್ಲದೆ ವಿಶ್ವ ಬ್ಯಾಂಕ್

ನೆರವಿನ ಜಲಶಾಸ್ತ್ರ ಯೋಜನೆಯಡಿಯಲ್ಲಿ ಜಿ.ಡಬ್ಲ್ಯೂ.ಡಿ.ಇ.ಎಸ್. ಸಾಫ್ಟ್‌ವೇರ್‌ಗಳನ್ನು ಅಳವಡಿಸಲಾಗಿದೆ. ಕೇಂದ್ರ ಕಛೇರಿಯ ಈ-ಮೈಲ್ ವಿಳಾಸವು ಈ ಕೆಳಕಂಡಂತಿದೆ.

ಶಿವಮೊಗ್ಗ	geosmg@satyam.net.in
ತುಮಕೂರು	geotmk@bsnl.net.in
ದಕ್ಷಿಣ ಕನ್ನಡ	geomng@bsnl.net.in
ಬೆಂಗಳೂರು	nhari@blr.vsnl.net.in

ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕಛೇರಿಗಳೊಂದಿಗೆ ಮಂತ್ರಿಗಳ ಮತ್ತು ಕಾರ್ಯದರ್ಶಿಗಳ ಕಛೇರಿಗಳು ಲೋಕಲ್ ಏರಿಯಾ ನೆಟ್‌ವರ್ಕ್ ಮೂಲಕ ಸಂಪರ್ಕ ಹೊಂದಿರುವುದಿಲ್ಲ.

ಸಣ್ಣ ಕೈಗಾರಿಕಾ ಮಂತ್ರಿಗಳು ಮತ್ತು ಇಲಾಖಾ ಕಾರ್ಯದರ್ಶಿಗಳ ಕಛೇರಿ ಗಣಕೀಕರಣ

2690 (3543) ಶ್ರೀ ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನ ಅಳವಡಿಕೆ ಸರ್ಕಾರದ ನೀತಿಯಾಗಿದ್ದು; ಸಣ್ಣ ಕೈಗಾರಿಕಾ ಇಲಾಖಾ ಮಂತ್ರಿಗಳ ಮತ್ತು ಇಲಾಖಾ ಕಾರ್ಯದರ್ಶಿಗಳ ಕಛೇರಿಗಳನ್ನು ಗಣಕೀಕರಣಗೊಳಿಸಲಾಗಿದೆಯೇ; ಇಲ್ಲವಾದಲ್ಲಿ ಕಾರಣಗಳೇನು;

ಆ) ಈ ಬಗ್ಗೆ ಸರಕಾರ ತೆಗೆದುಕೊಂಡ ಮತ್ತು ತೆಗೆದುಕೊಳ್ಳುವ ಕ್ರಮಗಳ ವಿವರಗಳೊಂದಿಗೆ ಮಂತ್ರಿಗಳ ಹಾಗೂ ಇಲಾಖಾ ಕಾರ್ಯದರ್ಶಿಗಳ ಈಮೆಲ್ ವಿಳಾಸವನ್ನು ಒದಗಿಸುವುದು

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :—

ಸಣ್ಣ ಕೈಗಾರಿಕಾ ಮಂತ್ರಿಗಳ ಕಛೇರಿಯನ್ನು ಗಣಕೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇಲಾಖಾ ಕಾರ್ಯದರ್ಶಿಗಳಿಗೆ ಈಗಾಗಲೇ ಈ ಮೇಲೆ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ.

ಸಣ್ಣ ಕೈಗಾರಿಕಾ ಸಚಿವರ ಕಚೇರಿಯನ್ನು ಇನ್ನೂ ಗಣಕೀಕೃತಗೊಳಿಸಿರುವುದಿಲ್ಲ-ವಾದ್ದರಿಂದ ಇನ್ನೂ ಈಮೈಲ್ ಸೌಲಭ್ಯ ಒದಗಿಸಿರುವುದಿಲ್ಲ. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಕಾರ್ಯದರ್ಶಿಗಳ ಇ-ಮೈಲ್ ವಿಳಾಸ.

``secyin@secretariat2.kar.nic.in"

ನಗರಾಭಿವೃದ್ಧಿ ಸಚಿವರ ಹಾಗೂ ಕಾರ್ಯದರ್ಶಿಗಳ ಕಛೇರಿಗಳ ಕಂಪ್ಯೂಟರೀಕರಣ

2692 (3545) ಶ್ರೀ ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಆಡಳಿತ ಮಾಹಿತಿ ತಂತ್ರಜ್ಞಾನ ಅಳವಡಿಕೆ ರಾಜ್ಯ ಸರ್ಕಾರದ ನೀತಿಯಾಗಿದ್ದು ಈ ಹಿನ್ನಲೆಯಲ್ಲಿ ಸನ್ಮಾನ್ಯ ನಗರಾಭಿವೃದ್ಧಿ ಸಚಿವರ ಹಾಗೂ ಇಲಾಖಾ ಕಾರ್ಯದರ್ಶಿಗಳ ಕಛೇರಿಯನ್ನು ಯಾವ ರೀತಿಯಲ್ಲಿ ಕಂಪ್ಯೂಟರೀಕರಣಗೊಳಿಸಲಾಗಿದೆ;

ಆ) ಸಚಿವರ ಹಾಗೂ ಕಾರ್ಯದರ್ಶಿಗಳ ಕಛೇರಿ ಕಂಪ್ಯೂಟರೀಕರಣಗೊಳಿಸುವ ಬಗ್ಗೆ ಸಿದ್ಧಪಡಿಸಿದ ಸಾಫ್ಟ್‌ವೇರ್ ಹಾಗೂ ಈ-ಮೇಲ್ ವಿಳಾಸಗಳ ವಿವರ ಒದಗಿಸುವುದು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :—

ಅ) ನಗರಾಭಿವೃದ್ಧಿ ಸಚಿವರ ಹಾಗೂ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಇವರ ಕಛೇರಿಗಳಲ್ಲಿ ಕಂಪ್ಯೂಟರ್‌ಗಳನ್ನು ಅಳವಡಿಸಲಾಗಿದೆ.

ಆ) ಕಂಪ್ಯೂಟರ್‌ಗಳಿಗೆ ಇಂಟರ್‌ನೆಟ್ ಸೌಲಭ್ಯವನ್ನು ಒದಗಿಸುವ ಕುರಿತು ನ್ಯಾಷನಲ್ ಇನ್‌ಫಾರ್ಮೆಟಿಕ್ ಸೆಂಟರ್‌ನೊಂದಿಗೆ ವ್ಯವಹರಿಸಲಾಗುತ್ತಿದೆ. ಪ್ರಧಾನ ಕಾರ್ಯದರ್ಶಿಗಳ ಇ-ಮೆಲ್ ವಿಳಾಸವು: pscud @ secretariat2.Kar. nic.in

ಸಣ್ಣ ಕೈಗಾರಿಕೆಗಳಿಗೆ ರಾಜ್ಯದ ಸಹಾಯಧನ ಬಾಕಿ

2693 (3037) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸಣ್ಣ ಕೈಗಾರಿಕೆಗಳಿಗೆ ರಾಜ್ಯದ ಸಹಾಯಧನ (ಸಬ್ಸಿಡಿ) ನೀಡಲು ಬಾಕಿ ಇರುವ ಹಣವೆಷ್ಟು;

ಆ) ಇದು ಎಷ್ಟು ಕೈಗಾರಿಕೆಗಳಿಗೆ ಎಷ್ಟು ವರ್ಷಗಳಿಂದ ಬಾಕಿ ಇದೆ; (ವಿವರ ನೀಡುವುದು)

ಇ) ಬಾಕಿಯಿರುವ ಸಹಾಯಧನವನ್ನು ಎಂದು ನೀಡಲಾಗುವುದು?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :—

31-3-2001 ರ ಅಂತ್ಯಕ್ಕೆ ರೂ. 338.57 ಕೋಟಿ ಸಹಾಯಧನ ನೀಡಲು ಬಾಕಿ ಇದ್ದು ಇತ್ತೀಚೆಗೆ ಇದರಲ್ಲಿ ರೂ. 10.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಇನ್ನು ರೂ.328.57 ಕೋಟಿ ಸಹಾಯಧನ ನೀಡಲು ಬಾಕಿ ಇರುತ್ತದೆ.

ಇದುವರೆವಿಗೂ ಬಿಡುಗಡೆ ಮಾಡಿದ ಸಹಾಯಧನ ವಿವರ ಈ ಕೆಳಗಿನಂತಿದೆ:

1. ವಿಶೇಷ ವರ್ಗ: ಡಿಸೆಂಬರ್ 98 ರವರೆವಿಗೆ ಶೇಕಡ 100 ರಷ್ಟು ಬಿಡುಗಡೆ ಆಗಿದೆ ಆಗಸ್ಟ್ 99 ರವರೆವಿಗೆ ಶೇಕಡ 50 ರಷ್ಟು ಬಿಡುಗಡೆ ಆಗಿದೆ.
2. ಸಾಮಾನ್ಯ ವರ್ಗ: ಡಿಸೆಂಬರ್ 98 ರವರೆವಿಗೆ ಶೇಕಡ 100 ರಷ್ಟು ಬಿಡುಗಡೆ ಆಗಿದೆ ಆಗಸ್ಟ್ 99ರವರೆವಿಗೆ ಶೇಕಡ 50 ರಷ್ಟು ಬಿಡುಗಡೆ ಆಗಿದೆ.

(ಬೆಂಗಳೂರು ನಗರ ಬೆಂಗಳೂರು ಗ್ರಾಮಾಂತರ, ಮೈಸೂರು ಮಂಗಳೂರು ಕೊಪ್ಪಳ, ಧಾರವಾಡ ಹೊರತುಪಡಿಸಿ)

3. ಸಾಮಾನ್ಯ ವರ್ಗದಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮೈಸೂರು, ಮಂಗಳೂರು ಕೊಪ್ಪಳ, ಧಾರವಾಡ ಜಿಲ್ಲೆಗಳಿಗೆ ಜೂನ್ 99 ವರೆಗೆ ಶೇಕಡ 50 ರಷ್ಟು ಸಹಾಯಧನ ಬಿಡುಗಡೆ ಮಾಡಲಾಗಿದೆ.

31-3-2001ರ ಅಂತ್ಯಕ್ಕೆ ಇನ್ನು 13130 ಕೈಗಾರಿಕೆಗಳಿಗೆ ಸಹಾಯಧನ ನೀಡಲು ಬಾಕಿ ಇರುತ್ತದೆ. (ವಿವರಗಳನ್ನು ಲಗತ್ತಿಸಲಾಗಿದೆ)

ಇ) 2001-2002ರ ಆರ್ಥಿಕ ಸಾಲಿನಲ್ಲಿ ರೂ.25.00 ಕೋಟಿಗಳನ್ನು ಆಯವ್ಯಯದಲ್ಲಿ ನಿಗದಿಪಡಿಸಲಾಗಿದೆ. ಈಗಾಗಲೇ ಇದರಲ್ಲಿ ರೂ.10.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಬಾಕಿ ಉಳಿದ ರೂ.15.00 ಕೋಟಿಗಳನ್ನು ಶೀಘ್ರದಲ್ಲಿ ಬಿಡುಗಡೆ ಮಾಡಲಾಗುವುದು ಪೂರ್ಣ ಸಹಾಯಧನ ಬಾಕಿಯನ್ನು ಬಿಡುಗಡೆ ಮಾಡಲು ಸರ್ಕಾರವು ವಿಶೇಷ ಪ್ರಯತ್ನವನ್ನು ಮಾಡುತ್ತಿದೆ.

District wise details of State Investment subsidy pendency available as on 31-03-2001.

Sl. No.	Name of the District	No. of Units	Amount (Rs.in lakhs)
1.	Dakshina Kannada	687	1733.82
2.	Bellary	451	1361.79
3.	Mercara	108	262.46
4.	Shimoga	255	553.89
5.	Hassan	390	640.34

1	2	3	4
6.	Mandya	245	377.30
7.	Raichur	161	315.69
8.	Dharwar	539	1036.32
9.	Bangalore (Urban)	1048	5644.61
10.	Mysore	682	2368.02
11.	Tumkur	955	2214.08
12.	Chickmagalur	219	431.89
13.	Gulbarga	315	929.43
14.	Belgaum	925	1526.78
15.	Chitradurga	330	75.46
16.	Kolar	1209	314.704
17.	Bijapur	302	551.485
18.	Bangalore (Rural)	1503	451.96
19.	Bidar	454	403.88
20.	Karwar	811	1400.34
21.	Davanagere	214	585.9
22.	Chamrajnagar	168	237.
23.	Haaveri	104	150.
24.	Gagag	195	208.
25.	Koppal	113	501.8
26.	Udupi	550	1222.
27.	Bagalkot	197	365.
	Total	13130	2384.046

ರಾಜ್ಯದ ಕರಾವಳಿ ಪ್ರದೇಶದ ಮೂರು ಜಿಲ್ಲೆಯ ಪಟ್ಟಣಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸುವುದು

2694 (3038) ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಕರಾವಳಿ ಪ್ರದೇಶದ ಮೂರು ಜಿಲ್ಲೆಗಳ ವ್ಯಾಪ್ತಿಯ ಎಷ್ಟು; ಪಟ್ಟಣಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ.

ಆ) ಇದಕ್ಕೆ ಯಾವ ಬ್ಯಾಂಕ್‌ನಿಂದ ಎಷ್ಟು ಹಣದ ನೆರವು ಪಡೆಯಲಿದೆ;

ಇ) ಈ ನೆರವಿಗಾಗಿ ಪಡೆಯಲಿರುವ ಹಣಕ್ಕೆ ಬಡ್ಡಿ ಎಷ್ಟು ಮರುಪಾವತಿಗೆ ಕಾಲಮಿತಿ ಹಾಕಲಾಗಿದೆಯೇ;

ಈ) ಈ ಯೋಜನೆಯ ಅನುಷ್ಠಾನದ ವ್ಯಾಪ್ತಿಯಲ್ಲಿ ಬರುವ ಪಟ್ಟಣಗಳಾವುವು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) :—

ಅ) -10 ಪಟ್ಟಣಗಳು

ಆ) ಈ ಯೋಜನೆಗೆ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನವರು 175 ಮಿಲಿಯನ್ ಯು.ಎಸ್. ಡಾಲರ್‌ಗಳನ್ನು (ರೂ.780 ಕೋಟಿ, 1998ರ ದರದಂತೆ) ನೆರವನ್ನು ಒದಗಿಸಿರುತ್ತಾರೆ.

ಇ) ಶೇ.13.5

ಮರುಪಾವತಿಯ ಅವಧಿಯು 25 ವರ್ಷಗಳಿಗೆ ವಿಸ್ತರಿಸಲಾಗಿದ್ದು, ಇದರಲ್ಲಿ5 ವರ್ಷಗಳ ಕಾಲ ಮಾರಟೋರಿಯಂ ಅವಧಿಯು ಒಳಗೊಂಡಿರುತ್ತದೆ.

ಈ) ಮಂಗಳೂರು, ಪುತ್ತೂರು, ಉಳ್ಳಾಳ, ಕುಂದಾಪುರ, ಉಡುಪಿ, ಕಾರವಾರ, ಸಿರ್ಸಿ ದಾಂಡೇಲಿ, ಭಟ್ಕಳ್ ಮತ್ತು ಅಂಕೋಲ.

ಮೈಸೂರು ನಗರದಲ್ಲಿ ಎ.ಡಿ.ಬಿ ವತಿಯಿಂದ ರಸ್ತೆ ಕಾಮಗಾರಿಗಳು

2695 (3166) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ನೆರವಿನಿಂದ ಮೈಸೂರು ನಗರದ ಅನೇಕ ರಸ್ತೆಗಳ ಡಾಂಬರೀಕರಣ ಕಾರ್ಯ ಕೈಗೊಳ್ಳಲಾಗುತ್ತಿರುವುದು ನಿಜವೇ; ಹಾಗಿದ್ದಲ್ಲಿ ಯಾವ ಯಾವ ರಸ್ತೆಗಳ ಡಾಂಬರೀಕರಣ ಪೂರ್ಣಗೊಂಡಿದೆ.

ಆ) ಯಾವ ಯಾವ ರಸ್ತೆಗಳ ಡಾಂಬರೀಕರಣ ಕಾರ್ಯ ಪೂರ್ಣಗೊಳ್ಳಬೇಕಾಗಿದೆ;

ಇ) ಇವುಗಳ ಡಾಂಬರೀಕರಣ ಕಾರ್ಯ ಎಂದು ಪೂರ್ಣಗೊಳ್ಳುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) ಹೌದು. ಎ.ಡಿ.ಬಿ. ನೆರವಿನಿಂದ ಎರಡು ಪ್ಯಾಕೇಜ್‌ಗಳಲ್ಲಿ ಕೈಗೊಳ್ಳಲಾಗುತ್ತಿದೆ. ಡಾಂಬರೀಕರಣ ಪೂರ್ಣಗೊಂಡಿರುವ ರಸ್ತೆಗಳ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

ಆ) ಡಾಂಬರೀಕರಣ ಪೂರ್ಣಗೊಳಿಬೇಕಾಗಿರುವ ರಸ್ತೆಗಳ ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ.

ಇ) ಮಧ್ಯಂತರ ವರ್ತುಲ ರಸ್ತೆ 2001ನೇ ಆಗಸ್ಟ್ ತಿಂಗಳ ಕೊನೆಗೆ ಪೂರ್ಣಗೊಳ್ಳುವ ಸಂಭವವಿದೆ. ನಗರ ರಸ್ತೆಗಳು 2001ನೇ ಡಿಸೆಂಬರ್ ಮಾಹೆಯ ಕೊನೆಗೆ ಪೂರ್ಣಗೊಳ್ಳುವ ಸಂಭವವಿದೆ.

ಅನುಬಂಧ-1

ಈ ಕೆಳಕಂಡ ರಸ್ತೆಗಳ ಡಾಂಬರೀಕರಣ ಪೂರ್ಣಗೊಂಡಿದೆ.

<u>ಮಧ್ಯಂತರ ವರ್ತುಲ ರಸ್ತೆ</u>

1. ಕಾಂತರಾಜ್ ಅರಸ್ ರಸ್ತೆ (ಬಲ್ಲಾಲ್ ವೃತ್ತದಿಂದ ಕೆ.ಜಿ. ಕೊಪ್ಪಲ್ ವೃತ್ತದ ವರೆಗೆ)
2. ಕಾಂತರಾಜ್ ಅರಸ್ ರಸ್ತೆ (ಆದಿಚುಂಚನಗಿರಿ ರಸ್ತೆಯಿಂದ ವಿಶ್ವಮಾನವ ಜೋಡಿ ರಸ್ತೆವರೆಗೆ)
3. ವಿಶ್ವಮಾನವ ಜೋಡಿ ರಸ್ತೆ (ಬೋಗಾಧಿ ರಸ್ತೆವರೆಗೆ)
4. ವಿಶ್ವವಿದ್ಯಾನಿಲಯ ರಸ್ತೆ (ಹುಣಸೂರು ರಸ್ತೆಯವರೆಗೆ)
5. ದೇವಸ್ಥಾನ ರಸ್ತೆ (ಪ್ರಿನ್ಸೆಸ್ ರಸ್ತೆವರೆಗೆ)
6. ಪ್ರಿನ್ಸೆಸ್ ರಸ್ತೆ (ಆಕಾಶವಾಣಿ ವೃತ್ತದವರೆಗೆ)
7. ಸಯ್ಯಾಜಿರಾವ್ ರಸ್ತೆ (ಹೈವೆ ಸರ್ಕಲ್‌ವರೆಗೆ)
8. ನ್ಯೂ ಬನ್ನಿಮಂಟಪ ರಸ್ತೆ (ಬೆಂಗಳೂರು ಮೈಸೂರು ರಸ್ತೆವರೆಗೆ)
9. ಬೆಂಗಳೂರು ಮೈಸೂರು ರಸ್ತೆ (ಟಿಪ್ಪು ವೃತ್ತದವರೆಗೆ)

10. ಅಬ್ಬಾ ರಸ್ತೆ (ರೂರಲ್ ಎಸ್.ಪಿ. ಆಫೀಸ್‌ವರೆಗೆ)
11. ರೇಸ್ ಕೋರ್ಸ್ ರಸ್ತೆ (ಮೃಗಾಲಯ ವೃತ್ತದವರೆಗೆ)
12. ರೇಸ್ ಕೋರ್ಸ್ ರಸ್ತೆ (ಲಾರಿ ನಿಲ್ದಾಣದವರೆಗೆ)
13. ಸ್ಮಶಾನ ರಸ್ತೆ (ಊಟಿ ರಸ್ತೆವರೆಗೆ)
14. ಝಾನ್ಸಿ ಲಕ್ಷ್ಮೀ ಬಾಯಿ ರಸ್ತೆ (ಸೆಂಟ್ ಮೇರಿಸ್ ವೃತ್ತದವರೆಗೆ)
15. ಝಾನ್ಸಿ ಲಕ್ಷ್ಮೀ ಬಾಯಿ ರಸ್ತೆ (ಚಾಮುಂಡಿಪುರಂ ವೃತ್ತದವರೆಗೆ)
16. ಝಾನ್ಸಿ ಲಕ್ಷ್ಮೀ ಬಾಯಿ ರಸ್ತೆ (ಕಾಂತರಾಜ ಅರಸ್ ರಸ್ತೆವರೆಗೆ)
17. ಕಾಂತರಾಜ ಅರಸ್ ರಸ್ತೆ (ಬಲ್ಲಾಳ್ ವೃತ್ತದವರೆಗೆ)

<u>48 ನಗರ ರಸ್ತೆಗಳು</u>

1 ರಾಜೇಂದ್ರನಗರ ರಸ್ತೆ
2 ಶಿವಾಜಿ ಮುಖ್ಯ ರಸ್ತೆ
3 ಮಿಷನ್ ಆಸ್ಪತ್ರೆ ರಸ್ತೆ
4 ಕಾಳಮ್ಮ ಗುಡಿ ರಸ್ತೆ
5 ನಜರ್ ಬಾದ್ ರಸ್ತೆ
6 ಲೋಕರಂಜನ್ ಮಹಲ್ ರಸ್ತೆ
7 ವಿನಯಮಾರ್ಗ ರಸ್ತೆ
8 ಶಾಲಿವಾಹನ ರಸ್ತೆ
9 ರಮಾವಿಲಾಸ ರಸ್ತೆ
10 ಚಾಮರಾಜ ಜೋಡಿ ರಸ್ತೆ
11 ವಿದ್ಯಾರಣ್ಯಪುರಂ 16ನೇ ಮುಖ್ಯ ರಸ್ತೆ
12 ಜೆ.ಎಲ್.ಬಿ ರಸ್ತೆ
13 ಕಾಮಾಕ್ಷಿ ಆಸ್ಪತ್ರೆ ರಸ್ತೆ
14 ಕಾಂತರಾಜ್ ಅರಸ್ ರಸ್ತೆ
15 ಸರಸ್ವತಿಪುರಂ 5ನೇ ಕ್ರಾಸ್ ರಸ್ತೆ
16 ರಾಜುಕೊಳದ ರಸ್ತೆ (ಸರಸ್ವತಿಪುರಂ)
17 ಧನ್ವಂತ್ರಿ ರಸ್ತೆ

18 ತ್ಯಾಗರಾಜ ರಸ್ತೆ
19 ನಾರಾಯಣ ಶಾಸ್ತ್ರಿ ರಸ್ತೆ
20 ಕುಂಬಾರ ಕೊಪ್ಪಲು ಮುಖ್ಯ ರಸ್ತೆ
21 ಕಾಂಟೂರು ರಸ್ತೆ
22 ಆದಿ ಚುಂಚನಗಿರಿ ರಸ್ತೆ
23 ಇಂಡಸ್ಟ್ರಿಯಲ್ ಸಬರ್ಬ್
24 ವಾಲ್ಮೀಕಿ ರಸ್ತೆ
25 ಆದಿಪಂಪ ರಸ್ತೆ
26 ಡಿ. ಸುಬ್ಬಯ್ಯ ರಸ್ತೆ
27 ಅನಿಕೇತನ ರಸ್ತೆ
28 ಕೆಸರೆಕೂಡು ರಸ್ತೆ
29 ಥಿಯೋಬಾಲ್ಡ್ ರಸ್ತೆ

ಅನುಬಂಧ-2

ಈ ಕೆಳಕಂಡ ರಸ್ತೆಗಳ ಡಾಂಬರೀಕರಣ ಪೂರ್ಣಗೊಳ್ಳಬೇಕಾಗಿದೆ.

ಮಧ್ಯಂತರ ವರ್ತುಲ ರಸ್ತೆ

1 ಕಾಂತರಾಜಅರಸ್ ರಸ್ತೆ (ಆದಿಚುಂಚನಗಿರಿ ರಸ್ತೆ ವೃತ್ತದವರೆಗೆ)
2 ಹುಣಸೂರು ರಸ್ತೆ (ದೇವಸ್ಥಾನ ರಸ್ತೆವರೆಗೆ)
3 ಅಂಡರ್ ಬ್ರಿಡ್ಜ್ ರಸ್ತೆ (ಸಯ್ಯಾಜಿರಾವ್ ರಸ್ತೆವರೆಗೆ)
4 ಬೆಂಗಳೂರು - ಮೈಸೂರು ರಸ್ತೆ (ಟಿಪ್ಪುವೃತ್ತದಿಂದ ಸರ್ಕಾರಿ ಅತಿಥಿ ಗೃಹದವರೆಗೆ)
5 ವಸಂತಮಹಲ್ ರಸ್ತೆ (ನಜರ್‌ಬಾದ್ ವೃತ್ತದವರೆಗೆ)
6 ಕಾರಂಜಿ ಕೆರೆ ದಂಡೆಯ ರಸ್ತೆ (ರೇಸ್‌ಕೋರ್ಸ್ ರಸ್ತೆವರೆಗೆ)

ನಗರ ರಸ್ತೆ

1 ಕಾಳಮ್ಮ ಗುಡಿ ಬೀಡಿ
2 ನಜರ್‌ಬಾದ್ ರಸ್ತೆ
3 ಲೋಕರಂಜನ್ ಮಹಲ್ ರಸ್ತೆ
4 ಜೆ.ಎಲ್.ಬಿ ರಸ್ತೆ

5 ಅದಿಪಂಪ ರಸ್ತೆ

6 ಬನ್ನಿಮಂಟಪ ಇಂಡಸ್ಟ್ರಿಯಲ್ ರಸ್ತೆ

7 ಚಂದ್ರಗುಪ್ತ ರಸ್ತೆ

8 ಹರ್ಷ ರಸ್ತೆ

9 ವಿನೋಬಾ ರಸ್ತೆ

10 ರಾಮಾನುಜ ರಸ್ತೆ

11 ಕಾಳಿದಾಸ ರಸ್ತೆ

12 ಗೊಕುಲಂ ರಸ್ತೆ

13 ಜಾವಾ ಫ್ಯಾಕ್ಟರಿ ರಸ್ತೆ

14 ಮೆಟಗಳ್ಳಿ ಮುಖ್ಯ ರಸ್ತೆ

15 ಬಸವೇಶ್ವರ ರಸ್ತೆ

16 ನಾಡಿ ರಸ್ತೆ

17 ಸೆಂಟ್ ಮೇರಿಸ್ ರಸ್ತೆ

18 ಅಕ್ಬರ್ ರಸ್ತೆ

19 ಕಬೀರ್ ರಸ್ತೆ

20 ಬೆಂಕಿ ನವಾಬ್ ರಸ್ತೆ

21 ಕೆ.ಆರ್. ಆಸ್ಪತ್ರೆ ರಸ್ತೆ

22 ಮಾಸ್ಕ್ ರಸ್ತೆ

23 ಗಾಯಿತ್ರಿಪುರಂ ಮುಖ್ಯ ರಸ್ತೆ

24 ಆನೆ ಸಾರೋಟ್ ರಸ್ತೆ

ಮೈಸೂರು ಮಹಾನಗರಪಾಲಿಕೆ ನಿವೃತ್ತ ನೌಕರರಿಗೆ ಐದನೇ ವೇತನ ಆಯೋಗದ ಶಿಫಾರಸ್ಸಿನಂತೆ ನಿವೃತ್ತ ವೇತನ ನೀಡುವ ಬಗ್ಗೆ

2696 (3167) **ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :—** ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ಮಹಾನಗರಪಾಲಿಕೆ ನಿವೃತ್ತ ನೌಕರರುಗಳಿಗೆ 5ನೇ ವೇತನ ಆಯೋಗದ ಶಿಫಾರಸ್ಸಿನಂತೆ ನಿವೃತ್ತ ವೇತನವನ್ನು ಜಾರಿಗೊಳಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಇದರ ಪ್ರಯೋಜನವನ್ನು ಎಷ್ಟು ಮಂದಿ ಪಡೆದುಕೊಳ್ಳುತ್ತಿರುವರು?

ಇ) ಹಾಗಿಲ್ಲದಿದ್ದಲ್ಲಿ ಈ ನಿವೃತ್ತ ನೌಕರರುಗಳಿಗೆ 5ನೇ ವೇತನ ಆಯೋಗದ ಶಿಫಾರಸ್ಸಿನಂತೆ ನಿವೃತ್ತಿ ವೇತನವನ್ನು ಜಾರಿಗೊಳಿಸಲು ಸರ್ಕಾರ ನಿಲುವೇನು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) ಹೌದು.

ಆ) 228 ಮಂದಿ.

ಇ) ಉದ್ಭವಿಸುವುದಿಲ್ಲ.

ಮೈಸೂರು ಮಹಾನಗರಪಾಲಿಕೆಯಲ್ಲಿ ಪೌರ ಕಾರ್ಮಿಕರ ಕೊರತೆ

2697 (3168) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ಮಹಾನಗರಪಾಲಿಕೆಯಲ್ಲಿ ಪೌರ ಕಾರ್ಮಿಕರ ಕೊರತೆಯಿಂದಾಗಿ ನಗರ ನೈರ್ಮಲ್ಯ ಕಾರ್ಯ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ನಗರ ನೈರ್ಮಲ್ಯ ಕಾರ್ಯವನ್ನು ನಗರದಲ್ಲೆಡೆ ದಿನವು ಕೈಗೊಳ್ಳುವಂತಾಗಲು ಯಾವ ರೀತಿಯ ಕ್ರಮ ಕೈಗೊಂಡಿದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) ಪೌರ ಕಾರ್ಮಿಕರ ಕೊರತೆ ಇದ್ದರೂ ನೈರ್ಮಲ್ಯ ಕಾರ್ಯ ಕುಂಠಿತಗೊಂಡಿರುವುದಿಲ್ಲ.

ಆ) ನಗರ ನೈರ್ಮಲ್ಯ ಕಾರ್ಯವನ್ನು ಕೈಗೊಳ್ಳಲು 18 ವಾರ್ಡ್‌ಗಳನ್ನು 4 ಮಾರುಕಟ್ಟೆಗಳನ್ನು ಹಾಗೂ ನಗರದ ಮುಖ್ಯ ರಸ್ತೆಗಳ ಸ್ವಚ್ಛತೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡಲಾಗಿದೆ.

ಗಣಿಗಾರಿಕೆಗಾಗಿ ವಹಿಸಿಕೊಟ್ಟ ಜಮೀನು

2699 (3020) ಶ್ರೀ ಶಿವಣ್ಣ ಎಸ್. (ತುಮಕೂರು) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 2000-01ನೇ ಸಾಲಿನಲ್ಲಿ ಗಣಿಗಾರಿಕೆಗಾಗಿ ವಹಿಸಿಕೊಡಲಾಗಿರುವ ಜಮೀನಿನ ವಿಸ್ತೀರ್ಣ ಎಷ್ಟು;

ಆ) ವಹಿಸಿಕೊಡಲಾಗಿರುವ ಗಣಿಗಾರಿಕೆಯಿಂದ ರಾಜ್ಯದ ಬೊಕ್ಕಸಕ್ಕೆ ಬಂದ ಆದಾಯವೆಷ್ಟು; ಬಾಕಿ ಎಷ್ಟು; ಬಾಕಿ ವಸೂಲಿಗೆ ಕೈಗೊಂಡ ಕ್ರಮಗಳಾವುವು; (ಜಿಲ್ಲಾವಾರು ಮಾಹಿತಿ ನೀಡುವುದು)

ಶ್ರೀ ಎ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :—

ಅ) ಗಣಿ ಗುತ್ತಿಗೆ 644.19 ಹೆಕ್ಟೇರ್

ಅಲಂಕಾರಿಕ ಶಿಲೆ 568.20 ಹೆಕ್ಟೇರ್

ಕಲ್ಲುಗಣಿ ಗುತ್ತಿಗೆ 1078.67 ಹೆಕ್ಟೇರ್

ಆ) 2000-01ನೇ ಸಾಲಿನಲ್ಲಿ ವಹಿಸಿಕೊಡಲಾಗಿರುವ ಗಣಿಗಾರಿಕೆಯಿಂದ ರಾಜ್ಯದ ಬೊಕ್ಕಸಕ್ಕೆ ರೂ.98,00,598.00 ಆದಾಯ ಬಂದಿರುತ್ತದೆ.

2000-01ನೇ ಸಾಲಿನಲ್ಲಿ ಒಟ್ಟಾರೆ ರೂ.29,16,077.00 ಬಾಕಿ ಇರುತ್ತದೆ. ಪ್ರಸ್ತುತ ಸಾಲಿನಲ್ಲಿ ಈ ಬಾಕಿಯನ್ನು ವಸೂಲಿ ಮಾಡಲು ಕ್ರಮ ಜರುಗಿಸಲಾಗುವುದು.

ಜಿಲ್ಲಾವಾರು ಮಾಹಿತಿಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.

ಕ್ರ.ಸಂ.	ಜಿಲ್ಲೆ : ವಿಭಾಗೀಯ ಕಛೇರಿ	ಒಟ್ಟು ಆದಾಯ ರೂ.	ಬಾಕಿ ರೂ.
1.	ಬೆಂಗಳೂರು ಉತ್ತರ	314037	314037
2.	ಬೆಂಗಳೂರು ದಕ್ಷಿಣ	260792	260792
3.	ಚಾಮರಾಜನಗರ	1283063	99690
4.	ಚಿಕ್ಕಮಗಳೂರು	114141	26436
5.	ದಕ್ಷಿಣ ಕನ್ನಡ	441594	341915
6.	ಹಾಸನ	1125229	11719
7.	ಕನಕಪುರ	1187961	1094976
8.	ಕೋಲಾರ	91713	91711
9.	ಮಂಡ್ಯ	90315	0

1	2	3	4
10.	ಮೈಸೂರು	76410	76410
11.	ಶಿವಮೊಗ್ಗ	156786	67413
12.	ತುಮಕೂರು	70991	60145
13.	ಬೆಳಗಾಂ	212021	0
14.	ಬಳ್ಳಾರಿ	10451	34120
15.	ಬಿಜಾಪುರ	46400	47500
16.	ಚಿತ್ರದುರ್ಗ	29920	17620
17.	ಧಾರವಾಡ	76515	219066
18.	ಗುಲಬರ್ಗಾ	213630	27236
19.	ಹೊಸಪೇಟೆ	101250	101250
20.	ಇಳಕಲ್	1016956	0
21.	ಕೊಪ್ಪಳ	906783	0
22.	ಸೇಡಂ	1971300	23452
23.	ಉತ್ತರ ಕನ್ನಡ	2340	589
	ಒಟ್ಟು	9800598	2916077

ತುಮಕೂರು ನಗರಸಭೆಯ ಪರಿಶಿಷ್ಟ ಜಾತಿ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲು ಹಣ

2701 (೩೦೨೨) ಶ್ರೀ ಶಿವಣ್ಣ ಎಸ್. (ತುಮಕೂರು) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಮಕೂರು ನಗರ ವ್ಯಾಪ್ತಿಯಲ್ಲಿ ೧೯೯೮-೯೯, ೯೯-೨೦೦೦, ಹಾಗೂ ೨೦೦೦-೦೧ನೇ ಸಾಲಿನಲ್ಲಿ ನಗರಸಬೆಯ ಅನುದಾನದಲ್ಲಿನ ಶೇಕಡ ೧೮ರ ಪರಿಶಿಷ್ಟ ಜಾತಿ ಕಲ್ಯಾಣ ಕಾರ್ಯಕ್ರಮಗಳಿಗೆ ಅಳವಡಿಸಲಾದ ಮೊತ್ತವೆಷ್ಟು; (ವರ್ಷವಾರು ಮಾಹಿತಿ ನೀಡುವುದು)

ಅ) ನಗರಸಭೆ ಆದಾಯದ ರೀತ್ಯಾ ಮೇಲ್ಕಂಡ ವರ್ಷಗಳಲ್ಲಿ ಶೇಕಡ ೧೮ರ ಕಲ್ಯಾಣ ಕಾರ್ಯಕ್ರಮಕ್ಕೆ ಖರ್ಚು ಮಾಡಬೇಕಾದ ಮೊಬಲಗೆಷ್ಟು; ಖರ್ಚು ಮಾಡಲಾದ ಮೊಬಲಗೆಷ್ಟು; (ವರ್ಷಾವಾರು ಮಾಹಿತಿ ಒದಗಿಸುವುದು)

ಇ) ಮೇಲ್ಕಂಡ ವರ್ಷಗಳಲ್ಲಿ ಶೇಕಡ ೧೮ರ ಯೋಜನೆಯಲ್ಲಿ ಯಾವ ಯಾವ ಕಾರ್ಯಕ್ರಮಕ್ಕೆ ಹಣ ಖರ್ಚು ಮಾಡಲಾಗಿದೆ (ವರ್ಷವಾರು ಕಾರ್ಯಕ್ರಮವಾರು ಖರ್ಚಿನ ಮಾಹಿತಿ ಒದಗಿಸುವುದು);

ಈ) ಶೇಕಡ ೧೮ರ ಪರಿಶಿಷ್ಟ ಜಾತಿ ಕಲ್ಯಾಣ ಕಾರ್ಯಕ್ರಮದಲ್ಲಿ ನಿಗದಿತ ಗುರಿಗಿಂತ ಕಡಿಮೆ ಹಣ ಖರ್ಚು ಮಾಡಲಾಗಿದೆಯೇ; ಹಾಗಿದ್ದಲ್ಲಿ, ಕಾರಣವೇನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :—

ಅ) ರೂ.೧,೨೦,೧೪,೪೪೦-೦೦

ವರ್ಷ	ಮೀಸಲಾತಿ ಹಣ (ರೂ.)
೧೯೯೮-೯೯	೨೯,೬೦,೧೨೦-೦೦
೧೯೯೯-೨೦೦೦	೪೧,೦೦,೧೬೦-೦೦
೨೦೦೦-೨೦೦೧	೪೯,೫೪,೧೬೦-೦೦

ಆ) ಖರ್ಚು ಮಾಡಬೇಕಾದ ಹಣ ರೂ.೧,೨೦,೧೪,೪೪೦-೦೦

ವರ್ಷ	ಖರ್ಚು ಮಾಡಿರುವ ಮೊತ್ತ (ರೂ.)
೧೯೯೮-೯೯	೧೬,೧೪,೦೦೦-೦೦
೧೯೯೯-೨೦೦೦	೨೦,೮೦,೦೦೦-೦೦
೨೦೦೦-೨೦೦೧	೨೨,೩೬,೦೦೦-೦೦

ಇ) ವಿವರಗಳನ್ನು ಅನುಬಂಧ-ಅ ನಲ್ಲಿ ಲಗತ್ತಿಸಿದೆ.

ಈ) ೨೦೦೦-೦೧ನೇ ಸಾಲಿನಲ್ಲಿ ಆರ್ಥಿಕ ಪರಿಸ್ಥಿತಿ ಕುಂಠಿತವಾಗಿರುವುದರಿಂದ, ನಿಗದಿಪಡಿಸಿದ ಗುರಿಯಂತೆ ವೆಚ್ಚಮಾಡಲು ಸಾಧ್ಯವಾಗಿರುವುದಿಲ್ಲ. ಉಳಿಕೆ ಹಣವನ್ನು ಪ್ರಸ್ತುತ ಸಾಲಿನಲ್ಲಿ ವೆಚ್ಚಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ 'ಅ'

1998-99ರ ಶೇಕಡ 18ರ ಯೋಜನೆಯಡಿ ಖರ್ಚಿನ ವಿವರಗಳು

ಕ್ರಮ ಸಂಖ್ಯೆ	ಯೋಜನೆಗಳು	1998-99 ಅಂದಾಜು	ಖರ್ಚು
1)	ವೈಯಕ್ತಿಕ ಮನೆ ನಿರ್ಮಾಣಕ್ಕೆ	2,00,000-00	3,000-00
2)	ಶಾಲಾ ಕಟ್ಟಡ ರಿಪೇರಿ ವಂತಿಕೆ (ಅಭಿವೃದ್ಧಿ)	3,00,000-00	--
3)	ರುದ್ರಭೂಮಿ ಒದಗಿಸುವ ಬಗ್ಗೆ	4,00,000-00	--
4)	ಸಾಂಕ್ರಾಮಿಕ ರೋಗಕ್ಕೆ ಭಯಾನಕ ರೋಗ ಗಳಿಂದ ನರಳುತ್ತಿರುವವರಿಗೆ ಧನ ಸಹಾಯ	25,000-00	--

1	2	3	4
5)	ನಿರುದ್ಯೋಗಿಗಳಿಗೆ ಉದ್ಯೋಗ ಸಂದರ್ಶನಕ್ಕೆ ಹೋಗಿ ಬರಲು (ಧನ ಸಹಾಯ)	25,000-00	--
6)	ನರ್ಸರಿ ಶಾಲೆ ಅಭ್ಯುದಯಕ್ಕಾಗಿ	1,25,000-00	6,600-00
7)	ಪ್ರತಿಭಾವಂತ ಮಕ್ಕಳಿಗೆ ಶಾಲಾ ಪುಸ್ತಕ ಒದಗಿಸಲು	50,000-00	29,750.00
8)	ಪೌರ ಕಾರ್ಮಿಕರಿಗೆ ನಿವೇಶನ ಒದಗಿಸಲು	3,50,000-00	--
9)	ಸಮುದಾಯ ಭವನಕ್ಕೆ ಕಾಂಪೌಂಡ್: ವಿದ್ಯುತ್ ದೀಪ ಹಾಗೂ ನೀರು ಸರಬರಾಜು	7,00,000-00	4,22,172-00
10)	ಗ್ರಂಥಾಲಯಗಳ ಸಮುದಾಯ ಭವನಗಳಿಗೆ ವೃತ್ತ ಪತ್ರಿಕೆ ಒದಗಿಸಲು ವೇತನ ಮತ್ತು ಬಾಲವಾಡಿ ವೇತನ	1,00,000-00	2,35,939-00
11)	ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ	50,000-00	11,500-00
12)	ಎಸ್‌ಸಿ: ಎಸ್‌ಟಿ ವಾಸದ ಮನೆಗಳಿಗೆ ಭಾಗ್ಯಜ್ಯೋತಿ	2,00,000-00	--
13)	ಎ.ಡಿ.ಬಿ ಯೋಜನೆಯನ್ವಯ (ಸ್ಲಂನಲ್ಲಿ) ಪ್ರಾರಂಭಿಕ ಹಣ ಕಟ್ಟಲು (ಸಹಾಯ ಧನ) ಮತ್ತು ಸುಲಭ ಶೌಚಾಲಯ ಯೋಜನೆಯಡಿ ಶೇಕಡ 18ರ	7,50,000-00	1,05,850-00
14)	ಎಸ್‌ಸಿ: ಎಸ್‌ಟಿ ವರ್ಗದವರಿಗೆ ಹೊಲಿಗೆ ಯಂತ್ರ ವಿತರಣೆ	4,50,000-00	3,84,400-00
15)	ಅಂತರ್‌ಜಾತಿ ವಿವಾಹ ಪ್ರೋತ್ಸಾಹಿಸಲು	25,000-00	--
16)	ಸೋಡಿಯಂ ದೀಪ ಅಳವಡಿಕೆ	2,50,000-00	--
17)	ದೇವಸ್ಥಾನ ನಿರ್ಮಾಣ ಅಭಿವೃದ್ಧಿಗಾಗಿ	5,00,000-00	4,15,302-00
	ಒಟ್ಟು	45,50,000-00	16,14,413-00

1999-2000ರ ಶೇಕಡ 18ರ ಯೋಜನೆಯಡಿ ಖರ್ಚಿನ ವಿವರಗಳು

ಕ್ರಮ ಸಂಖ್ಯೆ	ಯೋಜನೆಗಳು	99-2000 ಅಂದಾಜು	ಖರ್ಚು
1)	ವೈಯಕ್ತಿಕ ಮನೆ ನಿರ್ಮಾಣಕ್ಕೆ	2,50,000-00	--
2)	ಶಾಲಾ ಕಟ್ಟಡ ರಿಪೇರಿ ವಂತಿಕೆ (ಅಭಿವೃದ್ಧಿ)	3,00,000-00	--
3)	ರುದ್ರಭೂಮಿ ಒದಗಿಸುವ ಬಗ್ಗೆ	6,00,000-00	--

1	2	3	4
4)	ಸಾಂಕ್ರಾಮಿಕ ರೋಗಕ್ಕೆ ಭಯಾನಕ ರೋಗ ಗಳಿಂದ ನರಳುತ್ತಿರುವವರಿಗೆ ಧನ ಸಹಾಯಕ್ಕೆ	25,000-00	1,000-00
5)	ನಿರುದ್ಯೋಗಿಗಳಿಗೆ ಉದ್ಯೋಗ ಸಂದರ್ಶನಕ್ಕೆ ಹೋಗಿ ಬರಲು (ಧನ ಸಹಾಯ)	25,000-00	--
6)	ನರ್ಸರಿ ಶಾಲೆ ಅಭ್ಯುದಯಕ್ಕಾಗಿ	1,25,000-00	--
7)	ಪ್ರತಿಭಾವಂತ ಮಕ್ಕಳಿಗೆ ಶಾಲಾ ಪುಸ್ತಕ ಒದಗಿಸಲು	1,00,000-00	--
8)	ಪೌರ ಕಾರ್ಮಿಕರಿಗೆ ನಿವೇಶನ ಒದಗಿಸಲು	4,00,000-00	--
9)	ಸಮುದಾಯ ಭವನಕ್ಕೆ ಕಾಂಪೌಂಡ್ : ವಿದ್ಯುತ್ ದೀಪ ಹಾಗೂ ನೀರು ಸರಬರಾಜು	7,00,000-00	63,500-00
10)	ಗ್ರಂಥಾಲಯಗಳ ಸಮುದಾಯ ಭವನಗಳಿಗೆ ವೃತ್ತ ಪತ್ರಿಕೆ ಒದಗಿಸಲು ವೇತನ ಮತ್ತು ಬಾಲವಾಡಿ ವೇತನ	2,50,000-00	1.72,000-00
11)	ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ	50,000-00	29,000-00
12)	ಎಸ್‌ಸಿ : ಎಸ್‌ಟಿ ವಾಸದ ಮನೆಗಳಿಗೆ ಭಾಗ್ಯಜ್ಯೋತಿ	2,00,000-00	--
13)	ಎ.ಡಿ.ಬಿ ಯೋಜನೆಯನ್ವಯ (ಸ್ಲಂನಲ್ಲಿ) ಹಣ ಕಟ್ಟಲು (ಸಹಾಯ ಧನ) ಮತ್ತು ಸುಲಭ ಶೌಚಾಲಯ ಯೋಜನೆಯಡಿ ಶೇಕಡ 18ರ	10,00,000-00	3,13,000-00
14)	ಎಸ್‌ಸಿ : ಎಸ್‌ಟಿ ವರ್ಗದವರಿಗೆ ಹೊಲಿಗೆ ಯಂತ್ರ ವಿತರಣೆ	6,00,000-00	--
15)	ಅಂತರ್‌ಜಾತಿ ವಿವಾಹ ಪ್ರೋತ್ಸಾಹಿಸಲು	25,000-00	5,000-00
16)	ಸೋಡಿಯಂ ದೀಪ ಅಳವಡಿಕೆಗೆ	2,50,000-00	4,78,600-00
17)	ದೇವಸ್ಥಾನ ನಿರ್ಮಾಣ ಅಭಿವೃದ್ಧಿಗಾಗಿ	5,00,000-00	10,17,400-00
18)	ಅಭಿವೃದ್ಧಿ ಕಾಮಗಾರಿಗಳು	5,00,000-00	--
19)	ಎಸ್‌ಸಿ : ಎಸ್‌ಟಿ ನಿರುದ್ಯೋಗಿಗಳಿಗೆ ವಾಹನ ತರಬೇತಿಗಾಗಿ ಚಾಲನೆ ಪರವಾನಗಿ	2,00,000-00	--
20)	ಎಸ್‌ಸಿ : ಎಸ್‌ಟಿ ವರ್ಗಗಳ ಜನತೆಯ ಇತರೇ ಅಭಿವೃದ್ಧಿಗಾಗಿ	8,40,000-00	--
	ಒಟ್ಟು	69,00,000-00	20,80,000-00

2000-2001ನೇ ಸಾಲಿನ ಶೇಕಡ 18ರ ಯೋಜನೆಗಳ ವಿವರ

ಕ್ರ. ಸಂ.	ಯೋಜನೆಗಳು	ಕಾಯ್ದಿರಿಸಿದ ಮೊಬಲಗು ಲಕ್ಷಗಳಲ್ಲಿ	ಖರ್ಚು ಮಾಡಿದ ಹಣ
1)	ಮನೆಗಳ ನಿರ್ಮಾಣ : ರಿಪೇರಿ ಪ್ರತಿ ಮನೆಗೆ ನಿರ್ಮಾಣ - ೦.೨೮ ಪ್ರತಿ ಮನೆಗೆ ರಿಪೇರಿ - ೦.೧೦	5.00	0.10
2)	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನತೆಗೆ ದೈನಂದಿನ ಉಪಯೋಗಕ್ಕಾಗಿ ಶೌಚಾಲಯ ನಿರ್ಮಾಣ	14.00	7.00
3ಎ)	ರುದ್ರಭೂಮಿಗಳ ಅಭಿವೃದ್ಧಿಗೆ ಭೂ ಸ್ವಾದೀನ	5.00	--
3)	ಅಂಬೇಡ್ಕರ್ ಭವನ ನಿರ್ಮಾಣ	5.00	2.50
4)	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಮನೆಗಳಿಗೆ ಭಾಗ್ಯಜ್ಯೋತಿ	2.00	--
5)	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಮನೆಗಳಿಗೆ ನಲ್ಲಿ ವ್ಯವಸ್ಥೆ	2.00	--
6)	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಶಾಲಾ ಕಟ್ಟಡ ನಿರ್ಮಾಣ (ಬಾಲವಾಡಿ)	2.00	0.71
7)	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಅನುಕೂಲವಾಗುವಂತ ಸಮುದಾಯ ಭವನ ಮತ್ತು ಕಾಂಪೌಂಡ್ ನಿರ್ಮಾಣ	5.00	0.64
8)	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾ ಸಂಸ್ಥೆಗಳಿಗೆ ಪೀಠೋಪಕರಣಗಳು ಪುಸ್ತಕಗಳು	1.00 --	--
9)	ಅಂತರ್‌ಜಾತಿ ವಿವಾಹ ಪ್ರೋತ್ಸಾಹಿಸಲು	0.25	0.05
10)	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನಿರುದ್ಯೋಗಿಗಳಿಗೆ ಸ್ವಾವಲಂಬನೆಗಾಗಿ ಕೈಗೊಳ್ಳಲು ಸ್ವಯಂ ಉದ್ಯೋಗಕ್ಕೆ ಕಾರ್ಯಕ್ರಮಗಳನ್ನು ರೂಪಿಸುವುದು	8.00	--
11)	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಕೀಲರುಗಳಿಗೆ ಪುಸ್ತಕಗಳನ್ನು ಒದಗಿಸುವುದು (ಒಬ್ಬರಿಗೆ 5,000.00)	0.50	--

1	2	3	4
12)	ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಅಂಗವಿಕಲರ ಕಲ್ಯಾಣ ಕಾರ್ಯಕ್ರಮ	1.00	--
13)	ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಜನತೆಗೆ ಉಪಯೋಗವಾಗುವ ಅಭಿವೃದ್ಧಿ ಕಾರ್ಯಕ್ರಮಗಳು (ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ದೇವಸ್ಥಾನ ಹಾಗೂ ಸಮುದಾಯ ಭವನಗಳಿಗೆ ಮೈಕ್‌ಸೆಟ್ ಒದಗಿಸುವುದು	0.65	1.20
	ಒಟ್ಟು	54.58	22.28

ಪೂರಕ ಟಿಪ್ಪಣಿ

ತುಮಕೂರು ನಗರಸಭೆಯಲ್ಲಿ ಪರಿಶಿಷ್ಟ ಜಾತಿ : ವರ್ಗಗಳ ಕಲ್ಯಾಣ ಕಾರ್ಯಕ್ರಮಕ್ಕೆ 1998-99 ರಿಂದ 2000-01ನೇ ಸಾಲಿನವರೆಗೆ ವಾಸ್ತವಿಕ ಅಂಕಿಅಂಶಗಳ ಅನ್ವಯ ವರ್ಷವಾರು ಹಣವನ್ನು ಮೀಸಲಾತಿ ಮಾಡಲಾಗುತ್ತಿದ್ದು ಮೀಸಲಾತಿ ಮಾಡಿದ ಹಣದ ವಿವರಗಳು ಈ ಕೆಳಕಂಡಂತೆ ಇದೆ.

ವರ್ಷ	ಮೀಸಲಾತಿ ಹಣ
1998-1999	24,60,160-00
1999-2000	41,00,160-00
2000-2001	49,54,160-00

ತುಮಕೂರು ನಗರಸಭೆಯಲ್ಲಿ ಪರಿಶಿಷ್ಟ ಜಾತಿ : ವರ್ಗದ ಕಲ್ಯಾಣ ಕಾರ್ಯಗಳಿಗೆ ಖರ್ಚು ಮಾಡಿರುವ ವಿವರಗಳು ಈ ಕೆಳಕಂಡಂತೆ ಇದೆ.

ವರ್ಷ	ಮೀಸಲಾತಿ ಹಣ
1998-1999	16,14,000-00
1999-2000	20,80,000-00
2000-2001	22,28,000-00

ವಿವಿಧ ಕಾರ್ಯಕ್ರಮಗಳಿಗೆ ಖರ್ಚು ಮಾಡಿದ್ದರ ಬಾಬ್ತು ಅಲಾಯಿದ ತಃಖ್ತೆಯನ್ನು ಲಗತ್ತಿಸಿದೆ.

ಸರ್ಕಾರದ ಆದೇಶದ ಸಂಖ್ಯೆ : ವಸಇ ಡಿಎಂಡಿ 95 ಬೆಂಗಳೂರು ದಿನಾಂಕ: 18-2-95 ರ ಪ್ರಕಾರ ಪ್ರತಿ ವರ್ಷ ಆಯವ್ಯಯದಲ್ಲಿ ಶೇಕಡ 18ರ ಮಿಸಲಾತಿಗಾಗಿ

ಕಾಯ್ದಿರಿಸಿದ ಹಣಕ್ಕೆ ಅನುಗುಣವಾಗಿ ಆಯಾ ವರ್ಷದ ವಾಸ್ತವಿಕ ಅಂಕಿ ಅಂಶಗಳ ಆದಾರದ ಮೇರೆಗೆ ಪುನರ್ ನಿಗಧಿಪಡಿಸಿಕೊಂಡು, ವೆಚ್ಚ ಮಾಡಲಾಗುತ್ತಿದೆ.

2000-2001ನೇ ಸಾಲಿನಲ್ಲಿ ಆರ್ಥಿಕ ಪರಿಸ್ಥಿತಿ ಕುಂಠಿತವಾಗಿರುವುದರಿಂದ ನಿಗಧಿಪಡಿಸಿದ ಗುರಿಯಂತೆ ವೆಚ್ಚ ಮಾಡಲು ಸಾಧ್ಯವಾಗಿರುವುದಿಲ್ಲ. ಉಳಿಕೆ ಹಣವನ್ನು ಪ್ರಸ್ತುತ ಸಾಲಿನಲ್ಲಿ ವೆಚ್ಚ ಮಾಡಲು ಕೈಗೊಳ್ಳಲಾಗುತ್ತಿದೆ.

1998-99ರಿಂದ ತುಮಕೂರು ನಗರಸಭೆಗೆ ಬಂದ ಆದಾಯ

2702(3023) ಶ್ರೀ ಶಿವಣ್ಣ ಎಸ್. (ತುಮಕೂರು) :— ಮಾನ್ಯ ಪೌರಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಮಕೂರು ನಗರಸಭೆಗೆ ೧೯೯೮-೯೯, ೧೯೯೯-೨೦೦೦ ಹಾಗೂ ೨೦೦೦-೦೧ನೇ ಸಾಲಿನಲ್ಲಿ ವಿವಿಧ ಮೂಲಗಳಿಂದ ಬಂದ ಆದಾಯವೆಷ್ಟು ; (ಕಂದಾಯ, ಸ್ಟಾಂಪ್ ಡ್ಯೂಟಿ, ಸರ್ಕಾರದ ಅನುದಾನ ಇತ್ಯಾದಿ ವರ್ಷಾವಾರು ಶೀರ್ಷಿಕೆವಾರು ಮಾಹಿತಿ ಒದಗಿಸುವುದು)

ಆ) ಕಂದಾಯದ ಮುಖೇನ ಸರ್ಕಾರ ನಿಗಧಿಪಡಿಸಿದ ರೀತಿ ಶೇಕಡಾವಾರು ತೆರಿಗೆ ವಸೂಲು ಮಾಡಲಾಗಿದೆಯೆ; ಆಯಾಯ ಲೆಕ್ಕ ಶೀರ್ಷಿಕೆಗೆ ತೆರಿಗೆ ಜಮಾ ಮಾಡಲಾಗಿದೆಯೆ; ಮಾಡಿದ್ದಲ್ಲಿ ವರ್ಷಾವಾರು ಶೀರ್ಷಿಕೆವಾರು ಮಾಹಿತಿ ಒದಗಿಸುವುದು;

ಇ) ಕಂದಾಯದ ಮುಖೇನ ವಸೂಲ್ಮಾಡಿದ ತೆರಿಗೆಯನ್ನು ಕಾಮಗಾರಿಗೆ ಹಾಗೂ ಇತರೆ ಬಾಬಿಗೆ ಖರ್ಚು ಮಾಡಲಾಗಿದೆಯೇ;

ಈ) ಖರ್ಚು ಮಾಡಿದ್ದಲ್ಲಿ ಸರ್ಕಾರದ ಅನುಮತಿ ಪಡೆದುಕೊಳ್ಳಲಾಗಿದೆಯೇ; ಇಲ್ಲವಾದಲ್ಲಿ ಸರ್ಕಾರದ ತೆರಿಗೆಯನ್ನು ದುರುಪಯೋಗಿಸಿದಂತಾಗುವದಲ್ಲವೇ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಡಳಿತ ರಾಜ್ಯ ಸಚಿವರು) :—

ಅ) ರೂ.೨,೨೭೬.೯೬ ಲಕ್ಷಗಳು

ವಿವರಗಳನ್ನು ಅನುಬಂಧ - 'ಅ'ನಲ್ಲಿ ತೋರಿಸಲಾಗಿದೆ.

ಆ) ವಿವರಗಳನ್ನು ಅನುಬಂಧ - 'ಆ'ನಲ್ಲಿ ತೋರಿಸಲಾಗಿದೆ.

ಇ) ಹೌದು.

ಈ) ಸರ್ಕಾರದ ಅನುಮತಿ ಪಡೆಯಲಾಗಿದೆ.

ಅನುಬಂಧ 'ಅ'

ಕ್ರ.ಸಂ.		೧೯೯೮-೯೯	೧೯೯೯-೨೦೦೦	೨೦೦೦-೦೧	ಒಟ್ಟು
೧.	ನಗರಸಭೆಯ ಕಂದಾಯ ಮತ್ತು ಕರಗಳ ಮೂಲದಿಂದ (ಮನೆ ಕಂದಾಯ, ನೀರಿನ ಕರ ವಿದ್ಯುತ್ ದೀಪದ ಕರ, ನೈರ್ಮಲೀಕರಣ ಕರ, ನೀರಿನ ಕಂದಾಯ ಇತ್ಯಾದಿ	೧೧೯.೪೪	೧೪೮.೨೮	೧೬೦.೮೪	೪೩೩.೫೬
೨.	ವಿಶೇಷ ಮೂಲಗಳಿಂದ ಬರುವ ಆದಾಯ (ಮನರಂಜನಾ ತೆರಿಗೆ ಮೇಲೆ ಪರಿಹಾರ ಧನ, ವಾಹನ ತೆರಿಗೆ ಮೇಲೆ ಪರಿಹಾರ ಧನ) ಅಧಿಭಾರ ಶುಲ್ಕ (ಸ್ಟಾಂಪ್ ಡ್ಯೂಟಿ). ೧೯೯೮-೯೯ರ ಬಾಕಿ ಹಣ ೯೯-೨೦೦೦ನೇ ಸಾಲಿನಲ್ಲಿ ಹೊಂದಾಣಿಕೆ ಆಗಿದೆ)	—	೮೫.೧೮	೨೬.೨೦	೧೧೨.೩೩
೩.	ನಗರಸಭೆ ಆಸ್ತಿ ಹಾಗೂ ಅಧಿಕಾರದಿಂದ ಬರುವ ಆದಾಯಗಳು (ಜಮೀನು, ಅಂಗಡಿ ಬಾಡಿಗೆ, ಅಭಿವೃದ್ಧಿ ಶುಲ್ಕ, ಮಾರುಕಟ್ಟೆ ಶುಲ್ಕ ಉದ್ದಿಮೆ ಪರವಾನಗಿ ಇತ್ಯಾದಿ)	೬೬.೦೦	೮೯.೧೩	೬೬.೮೫	೨೪೦.೯೮
೪.	<u>ಸರ್ಕಾರದ ಅನುದಾನಗಳು</u> :				
	(೧) ಎಸ್.ಎಫ್.ಸಿ. (ಅಭಿವೃದ್ಧಿ ಅನುದಾನ)	೨೨.೦೦		೧೮.೬೫	೪೦.೬೫
	(೨) ಎಸ್.ಎಫ್.ಸಿ. (ವೇತನ ಅನುದಾನ)	೧೨೨.೪೬	೧೮೧.೮೦	೨೧೮.೧೬	೫೨೨.೪೬
	(೩) ೧೦ನೇ ಹಣಕಾಸು ಯೋಜನೆಯಡಿ ಅನುದಾನ	೧೪.೦೦	೧೨.೦೦	೩೮.೬೨	೬೪.೬೨
	(೪) ಸಂಸತ್ ಸದಸ್ಯರ ಪ್ರವೇಶಾಭಿವೃದ್ಧಿ ಅನುದಾನ	೧೦.೦೦	—	೦೪.೪೦	೧೪.೪೦

ಕ್ರ.ಸಂ.	೧೯೯೮-೯೯	೧೯೯೯-೨೦೦೦	೨೦೦೦-೦೧	ಒಟ್ಟು
೫. ಎಸ್.ಎಫ್.ಸಿ. ಅನುದಾನದ ಪೈಕಿ				
(೧) ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮಕ್ಕೆ ಹೊಂದಾಣಿಕೆ ಆದ ಬಗ್ಗೆ	೭೨.೧೫	೧೧೬.೨೭	೧೬೭.೯೪	೩೫೬.೩೬
(೨) ಕರ್ನಾಟಕ ನಗರ ನೀರು ಸರಬರಾಜು ಮಂಡಳಿಗೆ ಹೊಂದಾಣಿಕೆ ಆದ ಬಗ್ಗೆ	೬೮.೭೨	೨೬೧.೧೫	೭೬.೯೯	೪೦೬.೮೬
೬. ಇತರೆ ಬಾಬುಗಳು				
(೧) ಕರಗಳ ವಸೂಲಿಯ ಸಂಗ್ರಹಣ ಶುಲ್ಕ ಇತ್ಯಾದಿ	೦.೩೦	೦.೨೭	೨.೧೮	೨.೭೯
(೨) ಭಾಗ-೩ ಅಮಾನತ್ ಖಾತೆಗಳು (ಸೆಸ್‌ಗಳ ವಸೂಲಾತಿ- ಆರೋಗ್ಯ, ವಿದ್ಯಾಭ್ಯಾಸ, ಗ್ರಂಥಾಲಯ ಮತ್ತು ನೀರಿನ ಕರ	೨೯.೧೬	೨೬.೩೦	೨೬.೪೬	೮೧.೯೩
ಒಟ್ಟು	೫೩೯.೨೩	೯೧೨.೩೩	೮೨೯.೪೦	೨೨೭೬.೯೬

ಅನುಬಂಧ 'ಆ'

ಕ್ರ.ಸಂ.	ಕರಗಳು	ಲೆಕ್ಕ ಶೀರ್ಷಿಕೆ	೧೯೯೮-೯೯	೧೯೯೯-೨೦೦೦	೨೦೦೦-೨೦೦೧	ಒಟ್ಟು
೧	ಆರೋಗ್ಯ ಕರ	೦೨೧೦	೨,೧೧,೭೮೩	೧,೮೨,೭೪೭	೯,೫೨೧೩೨	೧೩,೪೬,೬೬೨
೨	ವಿದ್ಯಾಭ್ಯಸದ ಕರ	೦೨೦೨	೧,೨೩,೪೬೯	೧,೪೦.೩೪೦	೬,೪೧,೧೮೬	೯,೦೪,೯೯೫
೩	ಗ್ರಂಥಾಲಯ ಕರ	೧೨೯೫೬	೧,೯೪,೮೪೦	೭೭,೧೬೯	೩,೮೩,೬೮೫	೬,೧೫,೬೯೪
೪	ಸ್ಲಂ ಸೆಸ್	—	೪೨,೩೨೦	೩೭,೦೩೫	೨೯,೧೩೨	೧,೦೮,೩೯೭
		ಒಟ್ಟು	೫,೩೨,೨೯೧	೪,೩೭,೨೯೧	೨೦,೦೬,೧೩೫	೨೯,೭೯,೭೪೮

ರಾಜ್ಯದಲ್ಲಿನ ಕೈಗಾರಿಕಾ ಸಬ್ಸಿಡಿ

2703 (3053) ಶ್ರೀ ಸುಬ್ಬಾರೆಡ್ಡಿ ಕೆ.ಎನ್. (ಬಸವನಗುಡಿ):— ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿನ ಕೈಗಾರಿಕೆಗಳಿಗೆ ಸಬ್ಸಿಡಿ ನೀಡಲಾಗುತ್ತಿದೆಯೇ?

ಆ) ಹಾಗಿದ್ದಲ್ಲಿ ಸಬ್ಸಿಡಿ ನೀಡುವ ಬಗ್ಗೆ ಯಾವ ಮಾನದಂಡ ಅಳವಡಿಸಲಾಗಿದೆ?

ಇ) ಸಣ್ಣ ಕೈಗಾರಿಕೆಗಳಿಗೆ ಹಣ ಬಿಡುಗಡೆಯಾಗದ ಬಾಕಿ ಉಳಿದಿದೆಯೇ ಹಾಗಿದ್ದಲ್ಲಿ ಅದರ ಮೊತ್ತವೆಷ್ಟು?

ಈ) ಪ್ರಸಕ್ತ ವರ್ಷದಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ಈವರೆಗೆ ಸಬ್ಸಿಡಿ ನೀಡಲಾಗಿದೆ?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :—

ಅ. ಹೌದು. ಕರ್ನಾಟಕ ಸರ್ಕಾರದ ಹೊಸ ಕೈಗಾರಿಕಾ ನೀತಿ 2001-06 ರ ಪ್ರಕಾರ "ಬಿ" ಮತ್ತು "ಸಿ" ವಲಯಗಳಲ್ಲಿ ಅತೀ ಸಣ್ಣ ಕೈಗಾರಿಕೆಗಳಿಗಾಗಿ ಹಾಗೂ "ಡಿ" ವಲಯದಲ್ಲಿರುವ ಅತೀ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ನೀಡಲಾಗುತ್ತಿದೆ.

ಆ. ಸ್ಥಿರಾಸ್ತಿ ಮೇಲೆ ಹೂಡಿದ ಬಂಡವಾಳದ ಮೊತ್ತಕ್ಕೆ ಅತೀ ಸಣ್ಣ ಕೈಗಾರಿಕೆಗಳಿಗೆ ವಲಯ "ಬಿ"ಗೆ ಶೇ.10ರಂತೆ ಗರಿಷ್ಠ 5.00 ಲಕ್ಷ ಮತ್ತು "ಸಿ"ಗೆ ಶೇ.20ರಂತೆ ಗರಿಷ್ಠ 10.00 ಲಕ್ಷ ಹಾಗೂ ವಲಯ "ಡಿ"ನಲ್ಲಿ ಸ್ಥಾಪಿತವಾದ ಅತೀ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಶೇ.25ರಂತೆ ಗರಿಷ್ಠ 12.50 ಲಕ್ಷ ಸಹಾಯಧನ ನೀಡಲಾಗುತ್ತಿದೆ.

ಇ. ಹೌದು 328.57 ಕೋಟಿಗಳು ನೀಡಲು ಬಾಕಿ ಇರುತ್ತದೆ.

ಈ. ಪ್ರಸಕ್ತ ಸಾಲಿನಲ್ಲಿ (2001-02) 808 ಸಣ್ಣ ಕೈಗಾರಿಕೆಗಳಿಗೆ ರೂ.10.00 ಕೋಟಿ ಸಬ್ಸಿಡಿ ನೀಡಲಾಗಿದೆ.

ರೇಷ್ಮೆ ಇಲಾಖೆಯ ನೌಕರರ ಸಂಖ್ಯೆಯನ್ನು ಕಡಿತಗೊಳಿಸುವ ಬಗ್ಗೆ

2704 (3054) ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) :— ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರೇಷ್ಮೆ ಇಲಾಖೆಯಲ್ಲಿ ಇರುವ ಒಟ್ಟು ನೌಕರ ಸಂಖ್ಯೆ ಎಷ್ಟು?

2) ಸರ್ಕಾರದ ಆದೇಶದಂತೆ ಈ ಇಲಾಖೆಯಲ್ಲಿ ಎಷ್ಟು; ಹುದ್ದೆಗಳನ್ನು ಕಡಿತಗೊಳಿಸಲಾಗಿದೆ?

3) ಇದರಿಂದ ಸರ್ಕಾರಕ್ಕೆ ಎಷ್ಟು ಉಳಿತಾಯವಾಗುತ್ತದೆ?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :—

1) 4910

2) ರೇಷ್ಮೆ ಇಲಾಖೆಯಲ್ಲಿ ಒಟ್ಟು 396 ಹುದ್ದೆಗಳು ಖಾಲಿ ಇದ್ದು, ಇವುಗಳಲ್ಲಿ ಶೇ.80 ರಷ್ಟು ಖಾಲಿ ಹುದ್ದೆಗಳನ್ನು ರದ್ದುಗೊಳಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

3) ವಾರ್ಷಿಕ ಅಂದಾಜು
ರೂ.123.96 ಲಕ್ಷ

ಸರ್ಕಾರಿ ರೇಷ್ಮೆ ಕ್ಷೇತ್ರ ಖಾಸಗೀಕರಣ

2705 (3055) ಶ್ರೀ ಸುಬ್ಬಾರೆಡ್ಡಿ ಕೆ.ಎನ್. (ಬಸವನಗುಡಿ) :— ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರಿ ರೇಷ್ಮೆ ಕ್ಷೇತ್ರಗಳನ್ನು ಖಾಸಗೀಕರಣಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ, ಯಾವಾಗ ಈ ಯೋಜನೆಯನ್ನು ಜಾರಿಗೊಳಿಸಲಾಗುವುದು?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :—

ಅ) ಸರ್ಕಾರಿ ರೇಷ್ಮೆ ಕ್ಷೇತ್ರಗಳ ಅಭಿವೃದ್ಧಿ ಕಂಪನಿ ಪ್ರಾರಂಭಿಸುವುದು. ರೇಷ್ಮೆ ಕ್ಷೇತ್ರಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡುವುದು ಹಾಗೂ ಕೃಷಿ ಕ್ಷೇತ್ರಗಳನ್ನು ಖಾಸಗೀಕರಣಗೊಳಿಸುವುದು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದ್ದು ಆದಷ್ಟು ಶೀಘ್ರವಾಗಿ ಜಾರಿಗೊಳಿಸಲಾಗುವುದು.

ಬೆಂಗಳೂರು ನಗರದಲ್ಲಿ ಭಿಕ್ಷಾಟನಾ ಶುಲ್ಕದಿಂದ ಬಂದ ಹಣ

2706 (3059) ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿ ಭಿಕ್ಷಾಟನಾ ಶುಲ್ಕ ಸಂಗ್ರಹವಾಗುತ್ತಿರುವುದು ನಿಜವೇ?

3) ಈ ಹಣವನ್ನು ಸಂಗ್ರಹ ಮಾಡುತ್ತಿರುವ ಉದ್ದೇಶವೇನು?

3) ಸಂಗ್ರಹವಾದ ಈ ಹಣವನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸಿಲ್ಲದಿರುವುದು ನಿಜವೇ? ಈ ಬಾಬ್ತಿನಲ್ಲಿ ಬಾಕಿ ಇರುವ ಹಣವೆಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

1) ಹೌದು

2) ಕರ್ನಾಟಕ ಭಿಕ್ಷಾಟಣೆ ನಿಷೇದ ಅಧಿನಿಯಮ 1975ರ ಈ ಕಾಯಿದೆಯ ಅನ್ವಯ ನಗರದಲ್ಲಿ ಬಂಧಿಸಿ ತರುವ ಭಿಕ್ಷುಕರಿಗೆ ಉಚಿತ ಊಟ, ಹಾಸಿಗೆ ಮತ್ತು ಹೊದಿಕೆ ಮುಂತಾದವುಗಳಿಗೆ ನೀಡಲು ವೆಚ್ಚ ಮಾಡಲಾಗುತ್ತಿದೆ. ಅಲ್ಲದೆ ಅವರಿಗೆ ವೃತ್ತಿಪರ ತರಬೇತಿಯನ್ನು ಸಹ ನೀಡಲಾಗುತ್ತಿದೆ.

3) ಬೆಂಗಳೂರು ಮಹಾನಗರ ಪಾಲಿಕೆಯು ಸಂಗ್ರಹಿಸುವ ಭಿಕ್ಷುಕರ ಕರದ ಹಣವನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸುವುದಿಲ್ಲ, ಆದರೆ ಈ ಇಲಾಖೆಯು ನಿಧಿಗೆ ಒಳಪಟ್ಟಿರುವ ಕೇಂದ್ರ ಪರಿಹಾರ ಸಮಿತಿಯ ನಿಧಿಗೆ ಅಲ್ಪ ಪ್ರಮಾಣದಲ್ಲಿ ವರ್ಗಾಯಿಸಲಾಗುತ್ತಿದೆ. ಈ ಬಾಬ್ತಿನಲ್ಲಿ ಬರಬೇಕಾಗಿರುವ ಬಾಕಿ ಭಿಕ್ಷುಕರ ಕರದ ಮೊಬಲಗು ಜೂನ್ 2000 ರ ಅಂತ್ಯದವರೆಗೆ ರೂ.7,28,52,326-00 ಗಳು ಇರುತ್ತದೆ.

ಪಶ್ಚಿಮ ಘಟ್ಟದ ಪರ್ವತ ಶ್ರೇಣಿಯಲ್ಲಿ ಗಣಿಗಾರಿಕೆಗೆ ನೀಡಿರುವ ಅನುಮತಿಯನ್ನು ರದ್ದು ಮಾಡುವುದು

2707 (3058) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪಶ್ಚಿಮಘಟ್ಟದ ಪರ್ವತ ಶ್ರೇಣಿ ಪರಿಸರದಲ್ಲಿ ಹೊಸದಾಗಿ ಗಣಿಗಾರಿಕೆ ಅನುಮತಿ ನೀಡಬಾರದೆಂದು ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರ ತಂಡ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆಯೇ;

ಅ) ಪಶ್ಚಿಮ ಘಟ್ಟದ ಯಾವ ಯಾವ ಪ್ರದೇಶಗಳಲ್ಲಿ ಎಷ್ಟು ಎಕರೆ ಜಾಗದಲ್ಲಿ ಗಣಿಗಾರಿಕೆ ಅನುಮತಿ ನೀಡಲಾಗಿದೆ;

ಇ) ಗಣಿಗಾರಿಕೆಯನ್ನು ತಡೆಯಲು ಸರ್ಕಾರ ಏನು ಕ್ರಮ ಕೈಗೊಂಡಿದೆ? (ವಿವರ ನೀಡುವುದು)

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ) :—

ಅ) ಹೌದು. ಪಶ್ಚಿಮ ಘಟ್ಟದ ಪರ್ವತ ಶ್ರೇಣಿ ಪರಿಸರದಲ್ಲಿ ಹೊಸದಾಗಿ ಗಣಿಗಾರಿಕೆಗೆ ಅನುಮತಿ ನೀಡಬಾರದೆಂದು ಶಿಫಾರಸ್ಸು ಮಾಡಿದೆ.

ಆ) ಮೆ: ಕುದರೆಮುಖ ಕಬ್ಬಿಣ ಅದಿರು ಸಂಸ್ಥೆಗೆ ಅರೋಲಿ ಮತ್ತು ಮಲ್ಲೇಶ್ವರ ಗ್ರಾಮಗಳಲ್ಲಿ 4605 ಹೆಕ್ಟೇರ್ ಪ್ರದೇಶವನ್ನು 30 ವರ್ಷಗಳ ಅವಧಿಗೆ ದಿನಾಂಕ: 25-07-1969 ರಿಂದ ಅನ್ವಯವಾಗುವಂತೆ ಗಣಿ ಗುತ್ತಿಗೆ ನೀಡಲಾಗಿತ್ತು. ಅರಣ್ಯ ಇಲಾಖೆ ಪತ್ರ ದಿನಾಂಕ: 16-07-1999ರ ಅನ್ವಯ ದಿನಾಂಕ: 25-07-1999ರಿಂದ ಒಂದು ವರ್ಷದ ಅವಧಿಗೆ ಹಾಗೂ ದಿನಾಂಕ: 25-07-2000ದ ಪತ್ರದನ್ವಯ ದಿನಾಂಕ: 25-07-2000ರಿಂದ ಮತ್ತೊಂದು ವರ್ಷಕ್ಕೆ ತಾತ್ಕಾಲಿಕ ಅನುಮೋದನೆ ನೀಡಿದೆ.

ಇ) ಕರ್ನಾಟಕ ರಾಜ್ಯದ ಖನಿಜ ನೀತಿಯಂತೆ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಗಣಿಗಾರಿಕೆಗಾಗಿ ಯಾವುದೇ ಹೊಸ ಗಣಿ ಗುತ್ತಿಗೆಗಳನ್ನು ಮಂಜೂರು ಮಾಡುವುದಿಲ್ಲ.

ನರಗುಂದ ನಗರಕ್ಕೆ IDSMT ಯೋಜನೆ ಜಾರಿ

2708 (3423) ಶ್ರೀ ಬಿ.ಆರ್ ಯಾವಗಲ್ (ನರಗುಂದ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಐ.ಡಿ.ಎಸ್.ಎಂ.ಟಿ. ಯೋಜನೆಗಳು ಎಷ್ಟು ನಗರಗಳಲ್ಲಿ ಜಾರಿಗೊಳಿಲಾಗಿದೆ.

ಆ) ಉಳಿದ ನಗರಗಳಿಗೆ ಎಂದಿನಿಂದ ಈ ಯೋಜನೆಗಳನ್ನು ಮಂಜೂರು ಮಾಡಲಾಗುವುದು;

ಇ) ಮಂಜೂರು ಮಾಡುವಾಗ ಯಾವ ಮಾನದಂಡವನ್ನು ಅನುಸರಿಸಲಾಗುವುದು;

ಈ) ನರಗುಂದ ನಗರಕ್ಕೆ ಈ ಯೋಜನೆಯನ್ನು ಮಂಜೂರು ಮಾಡುವುದು ಯಾವಾಗ.

C.19-D

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :—

ಅ) 85 ಪಟ್ಟಣಗಳಿಗೆ ಜಾರಿಗೊಳಿಸಲಾಗಿದೆ.

ಆ) ಹಂತ ಹಂತವಾಗಿ ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಅನುಮೋದನೆ ನೀಡಿದ ನಂತರ ಉಳಿದ ನಗರಗಳಿಗೂ ಯೋಜನೆಗಳನ್ನು ಮಂಜೂರು ಮಾಡಲಾಗುವುದು.

ಇ) ನಗರ ಸ್ಥಳೀಯ ಸಂಸ್ಥೆಗಳಲ್ಲಿ 5 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪಟ್ಟಣಗಳನ್ನು ಆಯ್ಕೆ ಮಾಡಲಾಗುವುದು ಹಾಗೂ ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆಯಡಿ ರಾಜ್ಯ ಸರ್ಕಾರವು ಪಟ್ಟಣಗಳನ್ನು ಆಯ್ಕೆ ಮಾಡಲಾಗುವುದು.

ಈ) ನರಗುಂದ ಪಟ್ಟಣವನ್ನು ಐ.ಡಿ.ಎಸ್.ಎಂ.ಟಿ. ಯೋಜನೆಯಡಿ ರಾಜ್ಯ ಮಟ್ಟದ ಮಂಜೂರಾತಿ ಸಮಿತಿ ಈವರಗೂ ಆಯ್ಕೆ ಆಗಿರುವುದಿಲ್ಲ. ರಾಜ್ಯ ಮಟ್ಟದ ಮಂಜೂರಾತಿ ಸಮಿತಿ ಆಯ್ಕೆ ಮಾಡಿ ಕೇಂದ್ರ ಸರ್ಕಾರವು ಅನುಮೋದನೆ ನೀಡಿದ ನಂತರ ನರಗುಂದ ನಗರಕ್ಕೆ ಈ ಯೋಜನೆಯನ್ನು ಮಂಜೂರು ಮಾಡಲಾಗುವುದು.

ಪೋಸ್ಟ್ ಮೆಟ್ರಿಕ್ ಹಾಸ್ಟೆಲ್ ಪ್ರಾರಂಭಿಸುವುದು

2709 (3425) ಶ್ರೀ ಯಾವಗಲ್ ಬಿ.ಆರ್ (ನರಗುಂದ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳನ್ನು ಮಂಜೂರು ಮಾಡುವಾಗ ಯಾವ ಅಂಶಗಳನ್ನು ಸರ್ಕಾರ ಗಣನೆಗೆ ತೆಗದುಕೊಳ್ಳುವುದು;

ಆ) ರಾಜ್ಯದಲ್ಲಿ ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳು ಮಂಜೂರು ಮಾಡಲಾಗಿದೆಯೆ;

ಇ) ನರಗುಂದ ನಗರಕ್ಕೆ ಪೋಸ್ಟ್ ಮೆಟ್ರಿಕ್ ಹಾಸ್ಟೆಲ್ ಮಂಜೂರು ಮಾಡುವ ವಿಚಾರ ಸರ್ಕಾರಕ್ಕೆ ಇದೆಯೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡುವಾಗ ಕೆಳಕಂಡ ಅಂಶಗಳನ್ನು ಸರ್ಕಾರ ಗಣನೆಗೆ ತೆಗದುಕೊಳ್ಳಲಾಗುತ್ತಿದೆ.

1) ಮಂಜೂರು ಮಾಡುವ ಸ್ಥಳದಲ್ಲಿ ಸಾಕಷ್ಟು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿರಬೇಕು.

2) ಸರ್ಕಾರದಿಂದ ಮಾನ್ಯತೆ ಪಡೆದು ನಡೆಸುತ್ತಿರುವ ಪೂರ್ವ ಪದವಿ : ಸ್ನಾತಕೋತ್ತರ ಪದವಿ ಕಾಲೇಜುಗಳು ಇರಬೇಕು.

3) ಸದರಿ ಕಾಲೇಜುಗಳಿಗೆ ಕನಿಷ್ಠ 5 ಕಿ.ಮೀಟರ್ ಅಂತರದಿಂದ ಬರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ವಿದ್ಯಾರ್ಥಿನಿಲಯಕ್ಕೆ ಪ್ರವೇಶಕ್ಕೆ ಬೇಡಿಕೆ ಇರಬೇಕು.

4) ವಿದ್ಯಾರ್ಥಿನಿಲಯ ಮಂಜೂರು ಮಾಡುವ ಸ್ಥಳದಲ್ಲಿ ಶೌಚಾಲಯ, ಸ್ನಾನಗೃಹ, ವಿದ್ಯುತ್, ಕುಡಿಯುವ ನೀರು, ಇತ್ಯಾದಿ ಮೂಲಭೂತ ಸೌಕರ್ಯ ಇರುವ ಸೂಕ್ತ ಕಟ್ಟಡದ ಲಭ್ಯತೆ ಇರಬೇಕು.

5) ಸದರಿ ಸ್ಥಳದಲ್ಲಿ ವಿದ್ಯಾರ್ಥಿನಿಲಯಕ್ಕೆ ಸ್ವಂತ ಕಟ್ಟಡ ಕಟ್ಟಲು ಮುಂದೆ ನಿವೇಶನ ದೊರೆಯುವಂತಿರಬೇಕು.

ಆ) 2001-02ನೇ ಸಾಲಿನಲ್ಲಿ ಯಾವ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಿಲ್ಲ.

ಇ) ಸರ್ಕಾರದಲ್ಲಿ ಪ್ರಸ್ತಾವನೆ ಸ್ವೀಕರಿಸಿದ್ದಲ್ಲಿ ಇದನ್ನು ಪರಿಶೀಲಿಸಲಾಗುವುದು.

ಅಧ್ಯಕ್ಷರು :— ಉತ್ತರಗಳನ್ನು ಮಂಡಿಸಲಾಗಿದೆ

(2) ಅಧ್ಯಕ್ಷರ ಅಪ್ಪಣೆ ಮೇರೆಗೆ

(i) ರಾಜ್ಯದಲ್ಲಿ ತೆಂಗಿನ ಬೆಳೆಗೆ ನುಸಿರೋಗ ತಗಲಿರುವುದರಿಂದ ನೀರಾ ಇಳಿಸಲು ಅನುಮತಿ ಕೋರಿಕೆ

+ ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) :— ಮಾನ್ಯ ಅಧ್ಯಕ್ಷರೇ ಒಂದು ಗಂಭೀರವಾದ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಲು ಅನುಮತಿ ನೀಡಿದಕ್ಕಾಗಿ ತಮಗೆ ವಂದನೆಗಳು, ಬಹುಶ: ರಾಜ್ಯದಲ್ಲಿ ಇಡೀ ರೈತ ಕಂಗಾಲಾಗಿದ್ದಾನೆ, ಇವತ್ತು ಒಂದು ಕಡೆ ಬರ ಇನ್ನೊಂದು ಕಡೆ ರೈತ ಬೆಳೆದ ಬೆಳೆಗಳ ಬೆಲೆ ಕುಸಿತ ಇನ್ನೊಂದು ಕಡೆ ನುಸಿರೋಗದ ಬಾದೆ. ಈ ರೀತಿ ರೈತನಿಗೆ ತೊಂದರೆಯಾದಾಗ ರೈತನ ನೆರವಿಗೆ ಬರುವುದು ಸರ್ಕಾರದ ಕರ್ತವ್ಯವಾಗಿದೆ. ಒಂದು ವಾರದ ಕಾಲ ಸುದೀರ್ಘವಾಗಿ ಬರಗಾಲದ ಬಗ್ಗೆ ಚರ್ಚೆ ಮಾಡಿದ್ದೇವೆ, ಸರ್ಕಾರ ಏನೇನು ಕೆಲಸಕಾರ್ಯಗಳನ್ನು ಕೈಗೊಳ್ಳಬೇಕೆನ್ನುವ ಬಗ್ಗೆ ಸಲಹೆ ಸೂಚನೆಗಳನ್ನು ಕೊಟ್ಟಿದ್ದೇವೆ. ಸರ್ಕಾರವೂ ಕೂಡ ಅದನ್ನು ಒಪ್ಪಿಕೊಂಡಿದೆ, ಆ ರೀತಿ ಕೆಲಸ ಮಾಡುತ್ತೇವೆಂದು ಎಲ್ಲರ ಸಮಸ್ಯೆಯನ್ನು ನಿಮ್ಮ ಜೊತೆ ಸೇರಿಕೊಂಡು ಬಗೆಹರಿಸೋಣ. ನಾವೆಲ್ಲಾ ಒಟ್ಟಿಗೆ ಸೇರಿ ಕೆಲಸ ಮಾಡೋಣವೆನ್ನುವ ಮಾತನ್ನು ಸರ್ಕಾರ ಹೇಳಿದೆ. ಅದನ್ನು ನಾನು ಖಂಡಿತವಾಗಿ

ಸ್ವಾಗತ ಮಾಡುತ್ತೇನೆ. ಅದೇ ರೀತಿ ನುಸಿರೋಗ ಕೂಡ ತುಂಬಾ ಗಂಭೀರರಾದ ವಿಚಾರವಾಗಿದೆ. ರಾಜ್ಯದಲ್ಲಿ ಸುಮಾರು 16 ಜಿಲ್ಲೆಗಳಲ್ಲಿ ತೆಂಗು ಪ್ರಮುಖ ಬೆಳೆಯಾಗಿದೆ, ಸುಮಾರು 5 ಲಕ್ಷ ಹೆಕ್ಟೇರ್‌ಗಳಲ್ಲಿ ಸುಮಾರು 80 ಲಕ್ಷ ತೆಂಗಿನಮರಗಳಿಂದ ಫಸಲನ್ನು ಪಡೆಯುತ್ತಿದ್ದೇವೆ. ಇದನ್ನು ಅವಲಂಬಿಸಿ ಸಾಕಷ್ಟು ಜನ ರೈತರು ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಇಂತಹ ತೆಂಗಿನ ಬೆಳೆಗೆ ಇವತ್ತು ನುಸಿರೋಗ ಬಂದಿರುವುದು ಇಡೀ ರೈತನ ಬದುಕನ್ನೇ ಬುಡಮೇಲು ಮಾಡುವ ಪರಿಸ್ಥಿತಿಯಾಗಿದೆ. ಒಂದು ಕಡೆ ಅತಿವೃಷ್ಟಿ ಅನಾವೃಷ್ಟಿಗಳು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ, ಇಂತಹ ಸಂದರ್ಭದಲ್ಲಿ ಅವನು ಬೆಳೆಸಿದ ತೆಂಗಿನಮರಕ್ಕೆ ನುಸಿರೋಗ ತಗುಲಿ ಆ ಬೆಳೆ ಸರ್ವನಾಶವಾಗಿ ಅವನ ಬದುಕು ಮತ್ತಷ್ಟು ದುಸ್ತರವಾಗುವ ಪರಿಸ್ಥಿತಿಯನ್ನು ಇವತ್ತು ನಾವು ನೋಡುತ್ತಿದ್ದೇವೆ. ಈ ವಿಚಾರವನ್ನು ಸುಮಾರು ಎರಡು ವರ್ಷಗಳಿಂದಲೂ ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ, ಇದಕ್ಕೆ ಪರಿಹಾರವನ್ನು ಕಂಡಿಹಿಡಿಯಬೇಕೆನ್ನುವ ಆಗ್ರಹವನ್ನು ಮಾಡುತ್ತಿದ್ದೇವೆ. ಆದರೆ ಇದುವರೆವಿಗೂ ಈ ನುಸಿರೋಗಕ್ಕೆ ಶಾಶ್ವತವಾದ ಪರಿಹಾರನ್ನು ಕಂಡುಕೊಳ್ಳುವುದಕ್ಕೆ ಈ ಸರ್ಕಾರದಿಂದ ಆಗಿಲ್ಲ. ಕಳೆದ ವರ್ಷ ಇದಕ್ಕಾಗಿ ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ಎನ್ನುವ ಬಗ್ಗೆ ನಾವು ಒಪ್ಪಿಕೊಳ್ಳುತ್ತೇವೆ. ಸರ್ಕಾರ ಅಷ್ಟು ಹಣವನ್ನು ಖರ್ಚುಮಾಡಿದರೂ ಯಾವುದೇ ಫಲ ಸಿಗದಿದ್ದಾಗ ಇವತ್ತು ಫಲಪ್ರದವಾಗುವ ಯಾವುದೇ ಒಂದು ಯೋಜನೆ ಇದೆ ಎಂದರೆ, ಸರ್ಕಾರ ಅದಕ್ಕೆ ಒತ್ತು ಕೊಡಲೇಬೇಕು. ಕಳೆದ ವರ್ಷ ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಸಿಂಪಡಣೆ ಮಾಡತಕ್ಕಂತಹ ಕೆಲಸವನ್ನು ಮಾಡಿದ್ದೀರಿ. ಇದರಿಂದ ನುಸಿರೋಗವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗಲಿಲ್ಲ. ಬದಲಾಗಿ ರೈತಮಿತ್ರರಾಗಿರತಕ್ಕಂತಹ ಹಲವಾರು ಕೀಟಗಳು ನಾಶವಾಗುವಂತಹ ಸಂದರ್ಭಗಳು ನಿರ್ಮಾಣವಾಗಿವೆ. ತೋಟಗಾರಿಕೆ ಇಲಾಖೆಯವರು ಅಲ್ಲಲ್ಲಿ ಹೇಳಿಕೆಗಳನ್ನು ಕೊಡುವುದನ್ನು ಬಿಟ್ಟರೆ ಈ ರೋಗದ ಬಗ್ಗೆ ಗಂಭೀರವಾದ ಚಿಂತನೆಯನ್ನು ಮಾಡಲೇ ಇಲ್ಲ. ಈ ವರ್ಷವೂ ಮಾನ್ಯ ಮುಖ್ಯಮಂತ್ರಿಗಳು 10 ಕೋಟಿ ರೂಪಾಯಿಗಳನ್ನು ಈ ನುಸಿರೋಗವನ್ನು ತಡೆಗಟ್ಟಲು ಖರ್ಚು ಮಾಡುತ್ತೇವೆ ಎಂದು ಮೊನ್ನೆ ಕೂಡ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. 2 ಕೋಟಿ ರೂಪಾಯಿಗಳ ಕೆಲಸ ಯಾವ ರೀತಿಯಲ್ಲಿಯೂ ಕೂಡ ಸಹಾಯವಾಗಲಿಲ್ಲವಾದಾಗ ಅದೇ ದಾರಿಯಲ್ಲಿ ಮುಂದುವರಿಯುವುದು ಈ ರೈತನಿಗೆ ಯಾವುದೇ ರೀತಿಯಲ್ಲಿ ನೆರವಾಗಲಾರದು. ಈ ರೋಗ ಅಡಿಕೆ ಮರಗಳಿಗೂ ಹಬ್ಬುತ್ತಿದೆ ಎಂದು ಕೃಷಿ ಸಚಿವರು ಮೊನ್ನೆ ಹೇಳಿದ್ದಾರೆ. ತುಮಕೂರಿನಲ್ಲಿ ಇದಾಗುತ್ತಿದೆ ಎಂದೂ ಸಹ ಹೇಳಿದ್ದಾರೆ, ಬಹುಶಃ ನೀರಾ ಇಳಿಸುವುದರಿಂದ ಇದಕ್ಕೆ ಪರ್ಯಾಯ ವ್ಯವಸ್ಥೆ ಆಗಬಹುದು ಎನ್ನುವ ವಾತಾವರಣ ಸಾರ್ವಜನಿಕ ವಲಯದಲ್ಲಿ ಇದೆ, ವೈಜ್ಞಾನಿಕವಾಗಿಯೂ ಕೂಡ ಹಲವಾರು ಜನರು ಒಪ್ಪಿಕೊಂಡಿದ್ದಾರೆ. ಈ ರೋಗಗಳನ್ನು ತಡೆಗಟ್ಟಲು ಸರ್ಕಾರ ನೀರಾ ಇಳಿಸುವ

ಬಗ್ಗೆ ಸರ್ಕಾರ ಅನುಮತಿಯನ್ನು ಕೊಡಬೇಕು. ನೀರಾ ಇಳಿಸುವುದರಿಂದ ಈ ನುಸಿ ಪೀಡೆ ಹೇಗೆ ಕಡಿಮೆಯಾಗುತ್ತದೆಂದರೆ, ಮರದಿಂದ ಹೊಂಬಾಳೆ ಬರುವುದಕ್ಕಿಂತ ಮೊದಲೇ ಅದನ್ನು ಕತ್ತರಿಸಿ ಅದರಿಂದ ನೀರಾ ಇಳಿಸತಕ್ಕಂತಹ ಕೆಲಸವನ್ನು ಮಾಡಬೇಕಾಗುತ್ತದೆ.

ಅಧ್ಯಕ್ಷರು :— ನಾನು ಇನ್ನು ಪೂರ್ಣ ಚರ್ಚೆಗೆ ಅನುಮತಿಯನ್ನು ಕೊಟ್ಟಿಲ್ಲ, ನಾನು ಒಪ್ಪಿಗೆ ಕೊಟ್ಟ ನಂತರ ಇದರ ಬಗ್ಗೆ ದೀರ್ಘವಾಗಿ ಮಾತನಾಡಿ.

ಶ್ರೀ ಡಿ.ವಿ. ಸದಾನಂದಗೌಡ :— ಈ ಸರ್ಕಾರ ಹಲವಾರು ನಿರ್ಧಾರಗಳನ್ನು ಪೂರ್ವಾಗ್ರಹ ಪೀಡಿತ ರೀತಿಯಲ್ಲಿ ಮಾಡುತ್ತಿದೆ. ಅದಕ್ಕೆ ನನಗೆ ಬೇಸರವಾಗುತ್ತಿದೆ. ನೀರಾ ಬಗ್ಗೆ ಕಳೆದ ಹಲವಾರು ದಿನಗಳಿಂದ ಚರ್ಚೆಗಳಾಗಿದ್ದರೂ ಕೂಡ ಸರ್ಕಾರದಿಂದ ಬೇರೆ ಬೇರೆ ಹೇಳಿಕೆಗಳು ಬರುತ್ತಿವೆ. ನೀರಾ ಇಳಿಸುವುದಕ್ಕೆ ಅನುಮತಿಯನ್ನು ಕೊಡುವುದಿಲ್ಲ ಎಂಬ ಹೇಳಿಕೆಗಳು ಬರುತ್ತಿವೆ. ಅದರಲ್ಲೂ ಸದನದಲ್ಲಿ ಮಲ್ಲಿಕಾರ್ಜುನಖರ್ಗೆಯವರು ನೀರಾ ಇಳಿಸುವುದಕ್ಕೆ ಅತ್ಯಂತ ಗಂಭೀರವಾಗಿ ಅದನ್ನು ನಿಲ್ಲಿಸುತ್ತೇವೆ ಎಂದು ಗಂಭೀರವಾಗಿ ವಿವಿಧ ಹೇಳಿಕೆಗಳನ್ನು ನೀಡುವ ಧಾಟಿಯನ್ನು ನೋಡಿದರೆ ಇದನ್ನು ಮಾಡುವುದಕ್ಕೆ ಬಿಡುವುದಿಲ್ಲವೆಂದು ಮೊದಲೇ ಇವರು ತೀರ್ಮಾನವನ್ನು ಮಾಡಿದ್ದಾರೆ. ನಿನ್ನೆ ಚನ್ನರಾಯಪಟ್ಟಣದಲ್ಲಿ, ಚಾಮರಾಜನಗರದಲ್ಲಿ ಗಲಾಟೆಯಾಗಿದೆ. ಮೊನ್ನೆ ಹಾಸನದಲ್ಲೂ ಸಹ ಅರಸೀಕೆರೆಯಲ್ಲಿಯೂ ಸಹ ಗಲಾಟೆಯಾಗಿದೆ. ಸಾರ್ವಜನಿಕ ವಲಯದಲ್ಲಿ ಯಾರು ರೈತರು ಕೃಷಿ ಮಾಡುತ್ತಿದ್ದಾರೆ ಅವರ ಜನರ ಬದುಕಿನ ಪ್ರಶ್ನೆ ಬಂದಾಗ ಅವರು ಈ ರೀತಿ ಮಾಡಿದರೆ ಒಳ್ಳೆಯದೆಂದು ಹೇಳಿದಾಗ, ಅದಕ್ಕೆ ಸರ್ಕಾರ ಒಪ್ಪುತ್ತಿಲ್ಲ. ಅದಕ್ಕಾಗಿ ಈ ಬಗ್ಗೆ ಚರ್ಚೆಯನ್ನು ಮಾಡಬೇಕೆನ್ನುವ ಆಗ್ರಹವನ್ನು ಮಾಡುತ್ತಿದ್ದೇನೆ.

Mr. Speaker :— I will allow you to raise the subject next week. I know this is an important subject.

ಶ್ರೀ ಡಿ.ವಿ. ಸದಾನಂದಗೌಡ :— ಈ ವಿಚಾರದ ಸಾಧಕಬಾಧಕಗಳನ್ನು ಇವತ್ತು ನಾವು ಚರ್ಚೆ ಮಾಡಬೇಕಾಗುತ್ತದೆ. ಇವತ್ತು ನೀರಾ ಇಳಿಸುವುದರಿಂದ ನುಸಿರೋಗವನ್ನು ತಡೆಗಟ್ಟುವುದರ ಜೊತೆ ರೈತನ ಆದಾಯ ಜಾಸ್ತಿಯಾಗುತ್ತದೆ, ಸುಮಾರು ಶೇಕಡ 12-15ರವರೆಗೆ ಒಂದು ಎಕರೆಗೆ 20 ಕ್ವಿಂಟಾಲ್ ಬೆಲ್ಲ ಬೆಳೆಸುವುದಕ್ಕಾಗುತ್ತದೆ, ನೂರಾರು ಜನರಿಗೆ ಉದ್ಯೋಗ ಕೊಡುವುದಕ್ಕಾಗುತ್ತದೆ. ಈ ರೀತಿಯಾಗಿ ಅವರ ಸಾಧಕಗಳು ಚೆನ್ನಾಗಿರುವ ಸಂದರ್ಭದಲ್ಲಿ ಬರೀ ಬಾಧಕಗಳನ್ನೇ ಸಣ್ಣ ಓರೆ ಕಣ್ಣಿನಿಂದ ನೋಡುವುದು ಸರಿಯಲ್ಲ. ಅದಕ್ಕಾಗಿ ಈ ನೀರಾ ಇಳಿಸುವ ಬಗ್ಗೆ ಪೂರ್ಣ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಅಧಿಕಾರಿಗಳ ಲಾಬಿಗೆ, ಲಿಕ್ಕರ್ ಲಾಬಿಗೆ ಮಣಿದಂಥ ಈ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇಲ್ಲ. ಆ ಕಾರಣಕ್ಕಾಗಿ ನಾವು ಸರ್ಕಾರವನ್ನು ಎಚ್ಚೆತ್ತುಕೊಳ್ಳುವಂತೆ ಮಾಡುತ್ತಿದ್ದೇವೆ.

ಈ ಲಿಕ್ಕರ್ ಲಾಬಿ ಜೊತೆ ಹೋಗುವಂಥ ಈ ಸರ್ಕಾರ ರೈತರಿಗೆ ತೊಂದರೆ ಮಾಡುತ್ತಿದೆ. ಈ ನೀರಾ ಇಳಿಸಿದ ನಂತರ ಅದು ಮದ್ಯ ಆಗುತ್ತದೆ, ಅಮಲು ಪದಾರ್ಥ ಆಗುತ್ತದೆ, ಇದರಿಂದ ಬಡ ಜನರಿಗೆ ತೊಂದರೆಯಾಗುತ್ತದೆ ಎಂದು ಸರ್ಕಾರದವರು ಹೇಳಿತ್ತಿದ್ದಾರೆ. ಇವತ್ತು ಪ್ರತಿ ಅಂಗಡಿಗಳಲ್ಲಿ ಸರಾಯಿ ಸ್ಯಾಚೆಟ್ ದೊರೆಯುತ್ತಿದೆ, ಈ ಸರ್ಕಾರ ಜನರಿಗೆ ಬೀರ್ ಕುಡಿಸಲು ಹೊರಟಿದ್ದರು. ಆದರೆ ಈಗ ನೀರಾ ಇಳಿಸಲಿಕ್ಕೆ ಇವರು ಅನುಮತಿ ಕೊಡುವುದಿಲ್ಲ ಇದು ಎಂಥ ಸರ್ಕಾರ? ಹಾಗಾಗಿ ಇದರ ಸಾಧಕಬಾಧಕಗಳ ಬಗ್ಗೆ ಇವತ್ತು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು

ಅಧ್ಯಕ್ಷರು :— ನಮ್ಮ ನಿಯಮದ ಪ್ರಕಾರ ಸರ್ಕಾರದವರನ್ನು ಕೇಳಿ ನಾನು ಚರ್ಚೆಗೆ ಅನುಮತಿಯನ್ನು ಕೊಡಬೇಕಾಗುತ್ತದೆ. ಅನುಮತಿ ಕೊಡುತ್ತೇನೆಂದು ಹೇಳುತ್ತಿದ್ದೇನೆ. ನಾನು ಸರ್ಕಾರವನ್ನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ :— ಅವರು ಅನುಮತಿ ಕೊಡದಿದ್ದರೆ ಕೊನೆಯ ಪಕ್ಷ ನಾವು ಈ ಬಗ್ಗೆ ಪೂರ್ತಿ ವಿಚಾರಗಳನ್ನು ಹೇಳಲಿಕ್ಕಾದರೂ ಅವಕಾಶ ಕೊಡಿ.

ಅಧ್ಯಕ್ಷರು :— ನಾನು ಸರ್ಕಾರಕ್ಕೆ ಕನ್‌ವಿನ್ಸ್ ಮಾಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೆ, ಸರ್ಕಾರ ಅವಕಾಶ ಕೊಡುವುದಿಲ್ಲ, ಬೇಡ ಎಂದು ಹೇಳಿದರೂ ನೀವು ನಮಗೆ ಅವಕಾಶ ಕೊಡದಿರುವುದಕ್ಕೆ ಆಗುತ್ತದೆಯೇ? ಸದನದಲ್ಲಿ ಭಾವನೆಗಳನ್ನು ವ್ಯಕ್ತಮಾಡುವುದಕ್ಕೆ ತಾವು ನಮಗೆ ಸಹಾಯ ಮಾಡಬೇಕಲ್ಲವೇ? ನೀವು ಸೂಚನೆ ಕೊಡಬೇಕಾಗುತ್ತದೆ. ಅವರು ಒಪ್ಪುವುದು ಏನಿದೆ?

ಅಧ್ಯಕ್ಷರು :— ನಿಯಮ 69ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕಾದರೆ ಸರ್ಕಾರವನ್ನು ಕನ್ಸಲ್ಟ್ ಮಾಡಬೇಕೆಂದು ನಿಯಮ ಇದೆ. ಆದ್ದರಿಂದ ನಾನು ಸರ್ಕಾರವನ್ನು ಕೂಡ ಕನ್ಸಲ್ಟ್ ಮಾಡುತೇನೆ. ಮತ್ತು ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ಹೇಳುತ್ತಿದ್ದೇನೆ. ಇವತ್ತು ಮತ್ತು ನಾಳೆ ಆಗುವುದಿಲ್ಲ. ಇವತ್ತು ಬಹಳಷ್ಟು ಜನರು ಮಾತನಾಡುವುದಿದೆ. ಮತ್ತು ಇವತ್ತು ಸದನವನ್ನು ಸಾಯಂಕಾಲ 4-40 ಗಂಟೆಗೆ ಮುಂದೂಡಬೇಕಾಗುತ್ತದೆ. ಆದ್ದರಿಂದ ಮುಂದಿನ ವಾರದಲ್ಲಿ ಯಾವುದಾದರೂ ಒಂದು ದಿನ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ನಾನು ಚಟಕ್ಕಾಗಿ ಮಾತನಾಡುತ್ತಿಲ್ಲ. ರೈತರು ಚಟ್ಟಕ್ಕೆ ಏರಬಾರದೆನ್ನುವ ದೃಷ್ಟಿಯಿಂದ ಮಾತ್ರ ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಇದಕ್ಕಾಗಿ ತಾವು ಅನುಮತಿ ಕೊಡಬೇಕು ಮತ್ತು ನಿಯಮ 69ರ ಅಡಿಯಲ್ಲಿ ಡೀಟೈಲ್ ಡಿಸ್ಕಷನ್‌ಗೆ ತಾವು ಒಪ್ಪಿದರೆ ಖಂಡಿತ ನಾನು ಅದನ್ನು ಸ್ವಾಗತ ಮಾಡುತ್ತೇನೆ.

+ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) :— ಮಾನ್ಯ ಅಧ್ಯಕ್ಷರೆ, ನಮ್ಮ ಪಕ್ಷದ ವತಿಯಿಂದ ಕೂಡ ನೀರಾ ಇಳಿಸುವುದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅನುಮತಿ ಕೋರಿ ಈಗಾಗಲೇ ತಮಗೆ ಮನವಿಯನ್ನು ಸಲ್ಲಿಸಿದ್ದೇವೆ. ತಮಗೆಲ್ಲಾ ಗೊತ್ತಿರುವಂತೆ ನಾಲ್ಕಾರು ತಿಂಗಳಿನಿಂದ ರಾಜ್ಯಾದ್ಯಂತ ಸುಮಾರು 13 ಜಿಲ್ಲೆಗಳಲ್ಲಿ ಪ್ರಮುಖ ಬೆಳೆಯಾಗಿರುವ ತೆಂಗಿನ ಬೆಳೆ ಬೆಳೆಯುವಂಥ ಜಿಲ್ಲೆಗಳಲ್ಲಿ ಸುಮಾರು 8 ಕೋಟಿ ತೆಂಗಿನ ಮರಗಳ ಪೈಕಿ ಸುಮಾರು 3 ಕೋಟಿ ಮರಗಳಿಗೆ ನುಸಿರೋಗ ತಗಲಿ ಹಾನಿಯಾಗಿದೆ ಮತ್ತು ತೆಂಗಿನ ಬೆಳೆಯ ಬೆಲೆ ಕುಸಿತದಿಂದ ರೈತರು ಕಂಗಾಲಾಗಿರುವ ಪರಿಸ್ಥಿತಿ ಕಂಡುಬಂದಿದೆ. ಈ ಬಗ್ಗೆ ಕಳೆದ ಅಧಿವೇಶನದಲ್ಲಿ ಅನೇಕ ಬಾರಿ ಸದನದಲ್ಲಿ ಚರ್ಚೆಯಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೆ, ನನಗೊಂದು ಕ್ಲಾರಿಫಿಕೇಷನ್ ಬೇಕು. ಇಲ್ಲಿ ಏನು ಚರ್ಚೆ ನಡೆಯುತ್ತಿದೆ ಎನ್ನುವುದು ನಮಗೆ ಗೊತ್ತಾಗಬೇಕು.

ಅಧ್ಯಕ್ಷರು :— ಅವರು ನಿಳುವಳಿ ಸೂಚನೆ ನೋಟೀಸ್ ಕೊಟ್ಟಿದ್ದಾರೆ

ಶ್ರೀ ಡಿ.ಬಿ. ಚಂದ್ರೇಗೌಡ :— ಹಾಗಂತ ಅವರು ಹೇಳಲಿಲ್ಲ. ಈಗ ಅವರೇ ಹೇಳಿದ ಹಾಗೆ ಅನೇಕ ಸಲ ಈ ಸದನದಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ ಅದನ್ನು ಅವರೇ ಒಪ್ಪಿಕೊಂಡಿದ್ದಾರೆ. ಹಾಗಾಗಿ ಇದು ನಿಳುವಳಿ ಸೂಚನೆ ಹೇಗೆ ಆಗುತ್ತದೆ?

ಅಧ್ಯಕ್ಷರು :— ಅದಕ್ಕೋಸ್ಕರವೇ ನಾನು ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಡುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :— ಅದನ್ನು ತಾವು ಹೇಳಬೇಕಲ್ಲವೇ? ಹೇಳಿಬಿಟ್ಟರೆ ಇಲ್ಲಿ ಏನು ನಡೆಯುತ್ತಿದೆ ಎನ್ನುವುದು ನಮಗೆ ಗೊತ್ತಾಗುತ್ತದೆ.

ಅಧ್ಯಕ್ಷರು :— ಸರ್ಕಾರದವರನ್ನು ಕನ್ಸಲ್ಟ್ ಮಾಡಿ ಆಮೇಲೆ ನಿಮಗೆ ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನೆ. I have not straight away agreed.

ಶ್ರೀ ಎಸ್.ಎಸ್. ಪಾಟೀಲ್ :— ನಿನ್ನೆಯ ದಿವಸ ಕಾಲಿಂಗ್ ಅಟೆನ್ಷನ್ ಮೇಲೆ ಎಷ್ಟು ಹೊತ್ತು ಚರ್ಚೆ ನಡೆಯಿತು ಎನ್ನುವುದು ತಮಗೆ ಗೊತ್ತಿದೆ. ಅದನ್ನು ನೀವು ಒಪ್ಪಿಕೊಳ್ಳುತ್ತೀರಾ? ಇದನ್ನು ನಾನು ಕೇಳುತ್ತಿದ್ದೇನೆ. ರೈತರ ವಿಚಾರ ಬಂದಾಗ ಸರ್ಕಾರವನ್ನು ಕನ್ಸಲ್ಟ್ ಮಾಡಬೇಕೆಂದು ಹೇಳುತ್ತಾರೆ. ಇಲ್ಲಿ ಒಂದೂವರೆ ಗಂಟೆ ಕಾಲ ಕಾಲಿಂಗ್ ಅಟೆನ್ಷನ್ ಮೇಲೆ ಚರ್ಚೆ ನಡೆದಿದೆ. ಇದು ಯಾವ ನ್ಯಾಯ?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ :— ನಾನು ಸಂಸದೀಯ ವ್ಯವಹಾರಗಳ ಸಚಿವನಾಗಿ ನನಗೆ ಈ ಬಗ್ಗೆ ಏನೂ ಕಾಪಿ ಬಂದಿಲ್ಲ. ಸದನದಲ್ಲಿ ಏನು ನಡೆಯುತ್ತಿದೆ ಎಂದು ನಾನು ಕೇಳಬಾರದೇ? ನೀವು ಬೇಕಾಬಿಟ್ಟಿ ಚರ್ಚೆ ನಡೆಸಿಕೊಂಡು ಹೋಗುತ್ತೇವೆಂದು ಹೇಳಿದರೆ ನನ್ನದೇನೂ ಅಭ್ಯಂತರವಿಲ್ಲ. ಕೊನೆಯ ಪಕ್ಷ ಆ ನೋಟೀಸ್‌ನ ಕಾಪಿಯನ್ನಾದರೂ ನಮಗೆ ಕೊಟ್ಟು ಕಳಿಸಿ. ನನಗೆ ಬೇಕಾಗಿರುವುದು ಯಾವ ನಿಯಮದಡಿ ಚರ್ಚೆಯಾಗುತ್ತಿದೆ ಎನ್ನುವುದು.

ಶ್ರೀ ಎಸ್.ಎಸ್. ಪಾಟೀಲ್ :— ನಾನು ನಿಮಗೆ ಸಪೋರ್ಟ್ ಮಾಡುತ್ತೇನೆ. ಸದನದಲ್ಲಿ ನಿಯಮದ ಪ್ರಕಾರ ಕಾರ್ಯಕಲಾಪ ನಡೆಯಬೇಕು. ನಾನು ಇಲ್ಲ ಎಂದು ಹೇಳುವುದಿಲ್ಲ. ಕೆಲವು ವಿಚಾರಗಳು ಚರ್ಚೆಗೆ ಬಂದಾಗ ಅವುಗಳಿಗೆ ಬೇಕಾದಷ್ಟು ಸಮಯಾವಕಾಶವನ್ನು ಕೊಡುತ್ತೀರಿ. ರೈತರ ಸಮಸ್ಯೆ ವಿಚಾರ ಇಲ್ಲಿ ಚರ್ಚೆಗೆ ಬಂದಾಗ ಮಾತ್ರ ನಿಯಮಾವಳಿಯನ್ನು ಹೇಳುತ್ತೀರಿ ಎನ್ನುವದೇ ನನ್ನ ಪ್ರಶ್ನೆಯಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಅದು ನಿಮ್ಮ ಕಲ್ಪನೆ ಅಷ್ಟೆ. ಈ ಸಲ ಸದನ ಸೇರಿದ ಮೇಲೆ ಏನೇನು ಚರ್ಚೆಯಾಗಿದೆ ಅವೆಲ್ಲವೂ ರೈತರ ಸಮಸ್ಯೆಯ ಬಗ್ಗೆ ಆಗಿರುವಂಥದ್ದು. ಪ್ರಶ್ನೋತ್ತರ ವೇಳೆ ಬಿಟ್ಟರೆ ಉಳಿದೆಲ್ಲಾ ಸಮಯದಲ್ಲಿ ರೈತರ ವಿಚಾರವಾಗಿ ಚರ್ಚೆಯಾಗಿದೆ.

ಶ್ರೀ ಡಿ.ವಿ. ಸದಾನಂದಗೌಡ :— ಬೇರೆ ಬೇರೆ ಕಡೆ ಗಲಾಟೆ ಆಗಿರುವ ಬಗ್ಗೆ ಚರ್ಚೆಯಾಗಿದೆ, ಪೋಲೀಸರ ನಿಷ್ಕ್ರಿಯತೆಯ ಬಗ್ಗೆ ಚರ್ಚೆಯಾಗಿದೆ, ಈ ಸರ್ಕಾರ ಯಾವುದೇ ಕೆಲಸವನ್ನು ಮಾಡುತ್ತಿಲ್ಲವೆನ್ನುವುದರ ಬಗ್ಗೆ ಚರ್ಚೆಯಾಗಿದೆ, ಹೀಗೇ ಬೇರೆ ಬೇರೆ ವಿಷಯದ ಬಗ್ಗೆ ಕೂಡ ಚರ್ಚೆಯಾಗಿದೆ. ಇಷ್ಟು ಚರ್ಚೆ ಆಗಿದ್ದರೂ ಸಹ ನೀವು ಕೇವಲ ರೈತರ ಬಗ್ಗೆ ಮಾತ್ರ ಚರ್ಚೆಯಾಗಿದೆಯೆಂದು ಹೇಳುತಿದ್ದೀರಲ್ಲಾ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) :— ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ನುಸಿ ರೋಗ ತಡೆಗಟ್ಟುವುದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಆದರೆ ಈ ನುಸಿರೋಗ ಪೀಡೆಯನ್ನು ತಡೆಗಟ್ಟುವುದಕ್ಕೆ ಸರ್ಕಾರ ತೆಗೆದುಕೊಂಡಿರತಕ್ಕಂಥ ಕ್ರಮಗಳಿಂದ ಯಾವುದೇ ಮರಗಳಲ್ಲಿ ಸುಧಾರಣೆ ಆಗಿಲ್ಲ. ಯಥಾಸ್ಥಿತಿ ಮುಂದುವರೆದಿದೆ. ಕಳೆದ ಸಲ ಯಾರೂ ಕೂಡ ನೀರಾ ಇಳಿಸುವುದರ ಬಗ್ಗೆ ಇಲ್ಲಿ ಚರ್ಚೆಗೆ ಅನುಮತಿ ಕೋರಿರಲಿಲ್ಲ. ನುಸಿ ರೋಗ ತಡೆಗಟ್ಟುವುದಕ್ಕೆ ನಾವೆಲ್ಲಾ ಒತ್ತಾಯ ಮಾಡಿದ್ದವು. ಆದರೆ ನುಸಿರೋಗವನ್ನು ಕಳೆದ ನಾಲ್ಕಾರು ತಿಂಗಳಿಂದ ತಡೆಗಟ್ಟುವುದಕ್ಕೆ ಸರ್ಕಾರ ವಿಫಲವಾಗಿರುವುದರಿಂದ ಪರ್ಯಾಯ ಮಾರ್ಗವಾಗಿ ನೀರಾ ಇಳಿಸುವುದಕ್ಕೆ ಅನುಮತಿ ಕೋರುತ್ತಿದ್ದೇವೆ. ನಾವು ರೈತರಿಗೆ ಪರಿಹಾರ ಕೊಡಿ ಎಂದು ಕೇಳುತ್ತಿಲ್ಲ. ಇದಕ್ಕೆ

ಅವಕಾಶ ಕೊಟ್ಟರೆ ಸಾಕು. ನೀರಾ ಇಳಿಸುವುದಕ್ಕೆ ಅನುಮತಿ ಕೋರಿ ಸಾಕಾಗಿ ಚಾಮರಾಜನಗರ, ಮೈಸೂರು, ಹಾಸನ, ಬೆಂಗಳೂರು ಗ್ರಾಮಾಂತರ, ತುಮಕೂರು ಜಿಲ್ಲೆಗಳಲ್ಲಿ ನೀರಾ ಇಳಿಸತಕ್ಕಂಥ ಕಾರ್ಯವನ್ನು ರೈತರೇ ಪ್ರಾರಂಭಿಸಿಕೊಂಡಿದ್ದಾರೆ. ಅಲ್ಲಿ ರೈತರನ್ನು ತಡೆಗಟ್ಟುವುದಕ್ಕೆ, ಆ ನೀರಾ ಇಳಿಸುವುದನ್ನು ತಡೆಗಟ್ಟುವ ಸಲುವಾಗಿ ಅಬಕಾರಿ ಇಲಾಖೆಯವರು ಧಾಳಿ ಮಾಡುವುದಕ್ಕೆ ಹೋದಾಗ ರೈತರಿಂದ ಪ್ರತಿಭಟನೆ ಎದುರಿಸಬೇಕಾಯಿತು ಮತ್ತು ಪ್ರತಿ ಜಿಲ್ಲೆಯಲ್ಲೂ ಚಳುವಳಿ ಮಾರ್ಗಗಳು ನಡೆಯುತ್ತಿವೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ಕೂಡ ಸರ್ಕಾರ ಮೌನವಾಗಿ ಕುಳಿತಿರುವುದನ್ನು ನೋಡಿದರೆ ಇದಕ್ಕೆ ಅನುಮತಿ ಕೊಡುವುದಕ್ಕೆ ಒಲವು ಇದೆಯೋ ಅಥವಾ ಇಲ್ಲವೋ ಎನ್ನುವುದು ಒಂದೂ ಕೂಡ ಅರ್ಥವಾಗುತ್ತಿಲ್ಲ. ನೀರಾ ಇಳಿಸುವವರ ಚಳುವಳಿ ಬಗ್ಗೆ ಪ್ರತಿ ದಿನ ಪತ್ರಿಕೆಗಳಲ್ಲಿ ವರದಿ, ಫೋಟೋ ಬರುತ್ತಿದೆ. ಈಗ ಶ್ರೀ ಬೈರೇಗೌಡರು ನೀರಾ ಇಳಿಸುವುದರ ಬಗ್ಗೆ ಚಳುವಳಿ ಪ್ರಾರಂಭ ಮಾಡಿದ್ದಾರೆ. ಶ್ರೀ ಸೋಮಶೇಖರ್ ಅವರು, ಶ್ರೀ ಲಕ್ಷ್ಮಿನಾರಾಯಣ ಅವರು ಚಳುವಳಿ ಮಾಡುವುದಕ್ಕೆ ಹೋಗಿದ್ದಾರೆ. ಆಡಳಿತ ಪಕ್ಷದ ಶ್ರೀ ಗುರುಸ್ವಾಮಿಯವರೂ ಸಹ ಚಳುವಳಿಯಲ್ಲಿ ಭಾಗವಹಿಸಿದ ಫೋಟೋ ಬಂದಿದೆ. ಅನೇಕ ಕಡೆ ರಸ್ತೆ ತಡೆ ಚಳುವಳಿಗಳು ಆಗುತ್ತಿದ್ದು ಲಾ ಅಂಡ್ ಆರ್ಡರ್ ಪ್ರಾಬ್ಲಂ ಆಗಿದೆ. ಪ್ರತಿ ದಿನ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ರೈತರು ಚಳುವಳಿ ಮಾಡುತ್ತಿದ್ದರೂ ಕೂಡ ಸರ್ಕಾರ ಮೌನವಾಗಿ ಕುಳಿತಿರುವುದರಿಂದ ಇದರ ಬಗ್ಗೆ ನಾವು ನಿಲುವಳಿ ಸೂಚನೆಯನ್ನು ತಂದು ಚರ್ಚೆಗೆ ಅನುಮತಿ ಕೋರಿದ್ದೇವೆ. ದಯಮಾಡಿ ಅನುಮತಿ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :— ನೀರಾ ಇಳಿಸುವ ಬಗ್ಗೆ ಶ್ರೀ ಸದಾನಂದಗೌಡ ಮತ್ತು ಶ್ರೀ ಮಹದೇವ ಪ್ರಸಾದ್ ಅವರು ಮಾತನಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿದ್ದಾರೆ. ಇವತ್ತು ಮತ್ತು ನಾಳೆಯ ದಿವಸ ಇಲಾಖಾ ಬೇಡಿಕೆ ಮೇಲೆ ಮಾತನಾಡುವವರು ಬಹಳಷ್ಟು ಜನ ಇದ್ದಾರೆ. ಮುಂದಿನ ವಾರ 6 ದಿವಸ ವರ್ಕಿಂಗ್ ಡೇಸ್ ಇದೆ. ನಮ್ಮ ರೂಲ್ಸ್ ಪ್ರಕಾರ ಸರ್ಕಾರವನ್ನು ಕನಲ್ಟ್ ಮಾಡಿ ಅವಕಾಶ ಕೊಡಬೇಕೆಂದಿದೆ. ಮುಂದಿನ ವಾರ ಯಾವುದಾದರೂ ಒಂದು ದಿವಸ ಸರ್ಕಾರದ ಮನ: ಒಪ್ಪಿಸಿ ಚರ್ಚೆಗೆ ನಾನು ಎರ್ಪಾಟು ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :— ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆ ರೂಪದಲ್ಲಿ ಇದನ್ನು ತೆಗೆದುಕೊಂಡು ಬಂದಿದ್ದೇವೆ. ನಿಯಮಾವಳಿಗಳ ಪ್ರಕಾರವಾಗಿ ನಿಲುವಳಿ ಸೂಚನೆಯನ್ನು ತರಲಿಕ್ಕೆ ಸರ್ಕಾರಕ್ಕೆ ಅಥವಾ ವಿರೋಧ ಪಕ್ಷದ ಸದಸ್ಯರುಗಳಿಗೆ ಅಥವಾ ಸದನದ ಯಾವುದೇ ಸದಸ್ಯರುಗಳಿಗೆ ಅವಕಾಶವಿದೆ. ಆದ್ದರಿಂದ ನಿಯಮ 69ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವ ಸಲುವಾಗಿ ಇದನ್ನು ಕನ್‌ವರ್ಟ್ ಮಾಡುವುದಕ್ಕೆ

ಸರ್ಕಾರದ ಒಪ್ಪಿಗೆ ಬೇಕಾಗುವುದಿಲ್ಲ. ಎರಡನೆಯದಾಗಿ ನಿನ್ನೆಯ ದಿವಸ ಬಿ.ಎ.ಸಿ. ಅಜೆಂಡಾದಲ್ಲಿ ಸಹ ಇದನ್ನು ಸೇರಿಸಿದ್ದೇವೆ. ಆದರಿಂದಾಗಿ ಚರ್ಚೆ ಮಾಡುವುದಕ್ಕೆ ಸಮಯವನ್ನು ನಿಗದಿ ಮಾಡಿ ಹೇಳಿ

ಅಧ್ಯಕ್ಷರು :— ಮುಂದಿನ ವಾರ ಸಮಯಾವಕಾಶ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಆಗಬಹುದು.

ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) :— ಮಾನ್ಯ ಅಧ್ಯಕ್ಷರೆ, ತಾವು ಕೊಟ್ಟಂಥ ಆದೇಶವನ್ನು ತಮಗೆ ಜ್ಞಾಪಿಸುತ್ತಿದ್ದೇನೆ. ನೀರಾ ಇಳಿಸುವ ವಿಚಾರವಾಗಿ ಚಾಮರಾಜನಗರದಲ್ಲಿ ಅಬಕಾರಿ ಅಧಿಕಾರಿಗಳು ಗೂಂಡಾಗಳನ್ನು ಕರೆದುಕೊಂಡು ಬಂದಾಗ ಆದಂಥ ಗಲಾಟೆ ವಿಚಾರವಾಗಿ ಮೊನ್ನೆಯ ದಿವಸ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೇಳಿದಾಗ ಇವತ್ತು ಮಾತನಾಡಿ ಎಂದು ಹೇಳಿದ್ದಿರಿ. ಆದರೆ ಇವತ್ತು ಮತ್ತು ನಾಳೆ ಶೂನ್ಯ ವೇಲೆಯನ್ನು ರದ್ದುಮಾಡಿದ್ದೀರಿ. ಇಲ್ಲಿ ಸಬ್‌ಮಿಷನ್ ಮಾಡುವುದಕ್ಕೆ ತಾವು ಅವಕಾಶ ಕೊಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು :— ನಿಮ್ಮ ನಾಯಕರು ಮಾತನಾಡಿಲ್ಲವೇ? ನಿಮಗೆ ಅವಕಾಶ ಕೊಟ್ಟರೆ ಪುನ: ಎಲ್ಲರಿಗೂ ಅವಕಾಶ ಕೊಡಬೇಕಾಗುತ್ತದೆ. ಎಲ್ಲರಿಗೂ ಅವಕಾಶ ಕೊಡದುತ್ತೇನಲ್ಲಾ, ಅದು ನನ್ನ ತಪ್ಪು. ನಿಮಿಷ್ಟ. ನಾನು ಇನ್ನು ಏನು ಹೇಳಬೇಕು. ನನ್ನ ತಾಳ್ಮೆಯನ್ನು ಏಕೆ ಪರೀಕ್ಷೆ ಮಾಡುತ್ತೀರಿ?

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ಕೋಪ ಮಾಡಿಕೊಳ್ಳಬೇಡಿ. ನಿಮಗೆ ಇಷ್ಟು ತಾಳ್ಮೆ ಇದ್ದ ಕಾರಣ ನಮಗೆ ಈ ಸದನದಲ್ಲಿ ಇಷ್ಟು ಗೌರವ ಬಂದಿದೆ. ಇಲ್ಲದಿದ್ದರೆ ನಮಗೆ ಇಲ್ಲಿ ಕಷ್ಟ ಆಗುತ್ತಿತ್ತು. ತಾವು ನಮಗೆಲ್ಲಾ ಬಹಳಷ್ಟು ಅವಕಾಶಗಳನ್ನು ಕೊಟ್ಟಿದ್ದೀರಿ. ಆದರೂ ಗುರುಸ್ವಾಮಿಯವರ ಕ್ಷೇತ್ರದಲ್ಲಿ ನಿನ್ನೆಯ ದಿವಸ ಒಂದು ಸಣ್ಣ ಸಂಗತಿ ನಡೆದಿದೆ. ಅದರ ಬಗ್ಗೆ ನಿನ್ನೆ ಪ್ರಸ್ತಾಪ ಮಾಡಬೇಕೆಂದು ಆಲೋಚನೆ ಮಾಡಿದ್ದರೆ. ದಯಮಾಡಿ ಅವಕಾಶ ಮಾಡಿಕೊಡಿ.

ಶ್ರೀ ಸಿ. ಗುರುಸ್ವಾಮಿ :— ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ತಾವು ಮೀನಮೇಷ ಎಣಿಸತಕ್ಕಂಥದ್ದು ಅಲ್ಲವೇ ಅಲ್ಲ. ಕಳೆದ ಎರಡು ವರ್ಷಗಳಿಂದ ತೆಂಗು ಬೆಳೆಯುವ ರೈತರು 16 ಜಿಲ್ಲೆಗಳಲ್ಲಿ ಎಷ್ಟು ಸಂಕಟ ಪಡುತ್ತಿದ್ದಾರೆನ್ನುವುದನ್ನು ತಾವು ಗಮನಿಸಬೇಕು. ಈ ನೀರಾ ಇಳಿಸುವ ಚರ್ಚೆಯನ್ನು ಮಾಡುವುದಕ್ಕೆ ನೇರವಾಗಿ ಅವಕಾಶ ಕೊಡುವಂಥಾದ್ದು ಆಗಬೇಕು. ಎಲ್ಲಾ ಕಡೆಯೂ ನೀರಾ ಇಳಿಸುವುದು ಅಪರಾಧವೇ. ಯಾವ ಕಾಯಿದೆಯಲ್ಲಿ ಅಪರಾಧವಿಲ್ಲ ಎನ್ನುವುದನ್ನು ಹೇಳಬೇಕು. ಕನಿಷ್ಟ ಪಕ್ಷ ಅದಾದರೂ ನಮಗೆ ಗೊತ್ತಾಗಬೇಕಲ್ಲವೇ? ನಮ್ಮ ನಮ್ಮ ತೆಂಗಿನ ತೋಟಗಳಲ್ಲಿ

ನೀರಾ ಇಳಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಏಕೆಂದರೆ ಎಲ್ಲಾ ಜಿಲ್ಲೆಗಳಲ್ಲಿ ನುಸಿ ರೋಗದಿಂದ ಬರ್ನಿಂಗ್ ಪ್ರಾಬ್ಲಮ್ ಆಗಿದೆ. ರೈತರಿಗೆ ದೊಡ್ಡ ಸಮಸ್ಯೆಯಾಗಿದೆ. ಅದರಲ್ಲೂ ಚಾಮರಾಜನಗರ ಜಿಲ್ಲೆಯಲ್ಲಿ ಅಬಕಾರಿ ಇಲಾಖೆಯವರು, ಪೋಲೀಸ್ ಇಲಾಖೆಯವರು, ಜಿಲ್ಲಾಧಿಕಾರಿಗಳು, ಎಲ್ಲರೂ ಕೂಡ ಈ ಅಬಕಾರಿ ಲಾಬಿಯವರ ಜೊತೆಗೆ ಶಾಮೀಲಾಗಿ ರೈತರ ಕಷ್ಟವನ್ನು ಕೇಳುವವರೇ ಇಲ್ಲ. ರೈತರು ಕಣ್ಣೀರು ಸುರಿಸುತ್ತಿದ್ದಾರೆ. ಆ ಸಮಸ್ಯೆಗಳನ್ನು ನಾವು ಚರ್ಚೆ ಮಾಡದೆ ಇನ್ನು ಯಾರ ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕಾಗುತ್ತದೆ? ಬರೀ ಅಬಕಾರಿಯವರಿಗೆ ಪ್ರೊಟೆಕ್ಷನ್ ಕೊಡುತ್ತಾ ಹೋದರೆ ರೈತರ ಕಷ್ಟ ಕೇಳುವವರು ಯಾರು? ದಯಮಾಡಿ ತಾವು ಕೂಡ ರಾತರ ಕುಟುಂಬದಿಂದ ಬಂದಿರತಕ್ಕಂಥವರು. ನಿಯಮ 69ರ ಕೆಳಗಡೆ ಚರ್ಚೆ ಮಾಡುವುದಕ್ಕೆ ಸರ್ಕಾರದ ಜೊತೆಯಲ್ಲಿ ಚಿಂತನೆ ಮಾಡುವ ಅವಶ್ಯಕತೆಯಿಲ್ಲ. ತಾವು ನೇರವಾಗಿ ಚರ್ಚೆ ಮಾಡುವುದಕ್ಕೆ ಆದೇಶ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. Speaker :— After consulting the Governmentm I will take a decision in the next week.

(ii) ಗಂಗಾ ಕಲ್ಯಾಣ ಯೋಜನೆಯನ್ನ ಬೆಳಗಾವಿ ವಿಭಾಗದಲ್ಲಿ ಅನುಷ್ಠಾನಗೊಳಿಸುವ ಬಗ್ಗೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :— ಮಾನ್ಯ ಅಧ್ಯಕ್ಷರೇ, ನಾನು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇನೆ ನಮ್ಮ ಬೆಳಗಾಂ ವಿಭಾಗಕ್ಕೆ ಬಹಳ ಅನ್ಯಾಯವಾಗುತ್ತದೆ, ಅಲ್ಲಿ ಹಣ ತೆಗೆದುಕೊಳ್ಳಲು ಆಗುವುದಿಲ್ಲ, ಅಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಅಲ್ಲಿ 10 ಸಾವಿರ ರೂಪಾಯಿ ತೆಗೆದುಕೊಳ್ಳುವುದಕ್ಕೆ ಸುಮಾರಾಗಿ 4-5 ಸಾವಿರ ರೂಪಾಯಿಗಳು ಖರ್ಚಾಗುತ್ತದೆ, ಕಷ್ಟವಾಗುತ್ತದೆ, ಅದ್ದೇನಾದರೂ ವ್ಯವಸ್ಥೆಯನ್ನು ಬದಲಾಯಿಸಿ ಎಂದು ನಾನು ಪ್ರಾರಂಭದಿಂದಲೂ ಹೇಳಿದ್ದೇನೆ. ಅದನ್ನು ಮಾಡಲು ಏನೋ ಪ್ರಪೋಸಲ್ ಕಳುಹಿಸುತ್ತೇನೆಂದರು, ಅದನ್ನು ಇನ್ನೂ ಮಾಡಲಿಲ್ಲ. ಅದನ್ನು

(ಈ ಹಂತದಲ್ಲಿ ಉಪಾಧ್ಯಕ್ಷರ್ (ಶ್ರೀ ಮನೋಹರ್ ಹೆಚ್. ತಹಸೀಲ್ದಾರ್‌ರವರು) ಪೀಠವನ್ನಲಂಕರಿಸಿದರು)

ಹೇಗೆ ಮಾಡುತ್ತೀರೋ ಮಾಡಿ. ಆದರೆ ಆ ಉಳಿದಂಥ ಹಣ ನಮ್ಮ ಬೆಳಗಾಂ ವಿಭಾಗಕ್ಕೆ ಕೊಟ್ಟಂತಹ 40 ಲಕ್ಷ ರೂಪಾಯಿಗಳು ಉಳಿದರೆ, ಅದನ್ನು ಈ ಸಲ ಬೇರೆ ಬೇರೆ ಜಿಲ್ಲೆಗಳಿಗೆ ಕೊಟ್ಟಿದ್ದಾರೆ. ಏಕೆ ಕೊಟ್ಟಿದ್ದೀರಿ? ಬೆಳಗಾಂ ಧಾರ್ಮಿಕ ಸಂಸ್ಥೆಗಳಿಗೆ 1998-99ನೇ ಸಾಲಿನಲ್ಲಿ ಮಂಜೂರಾದ ಅನುದಾನದಲ್ಲಿ ಬಿಡುಗಡೆಯಾಗಿ ಉಳಿದ ಮೊತ್ತ 36 ಲಕ್ಷ 10 ಸಾವಿರ ರೂಪಾಯಿಗಳಿದ್ದು, ಬಡ್ಡಿ ಮೊತ್ತ 46 ಲಕ್ಷ 7 ಸಾವಿರದ 468 ರೂಪಾಯಿಗಳಿರುತ್ತದೆಂದು ಹೇಳಲಾಗಿದೆ. ಅದನ್ನು ಬೆಳಗಾಂ ಜಿಲ್ಲೆಗೆ ಹಂಚಬೇಕಾಗಿತ್ತು. ನೀವು ಬೆಂಗಳೂರು, ಶಿವಮೊಗ್ಗ, ಹಾಸನ, ಗದಗ ತಾಲ್ಲೂಕು, ಚಿಕ್ಕಮಗಳೂರು, ಮಂಗಳೂರು, ಗುಲಬರ್ಗಾ ಜಿಲ್ಲೆಗಳಿಗೆ ಆ ಹಣವನ್ನು ಹಂಚಿದ್ದೀರಿ. ಆ ಹಣವನ್ನೂ

ತೆಗೆದುಕೊಂಡು ಬಿಡಿ. ನಮಗೆ ಬೇಡ ಬಿಡಿ. ಇದನ್ನು ರದ್ದುಪಡಿಸಬೇಕು. ಇದನ್ನು ಮತ್ತು ಅದರ ಮೇಲೆ ಬಂದಿರುವ ಬಡ್ಡಿಯನ್ನು ಬೆಳಗಾಂ ಡಿವಿಜನ್‌ಗೆ ಮಾತ್ರ ಹಂಚಬೇಕು. ನೀವು ಗುಲಬರ್ಗಾ ಡಿಸಿಗೆ ಕೊಟ್ಟಿದ್ದೀರಿ. ಕೊಪ್ಪಳ ಡಿಸಿ ಇದ್ದಾರೆ. ಬೆಳಗಾಂ ಡಿವಿಜನ್‌ಗೆ ಮಾತ್ರ ತೊಂದರೆ ಇದೆ. ಜನರು ಅಲ್ಲಿಗೆ ಹೋಗಿ ತರಲಾಗುವುದಿಲ್ಲ. ಅದನ್ನು ಬದಲಾವಣೆ ಮಾಡಿ ಅದನ್ನು ಜಿಲ್ಲಾಧಿಕಾರಿಗಳಿಗೆ ಕೊಡಬೇಕೆಂದು ಕೇಳುತ್ತಿದ್ದೇನೆ. ಗದಗ್ ಜಿಲ್ಲೆಗೆ ಸಮಿತಿಯನ್ನೇ ರಚಿಸಿಲ್ಲ. ಆರಾಧನಾ ಯೋಜನೆಗೆ ಹಣ ಬರಲಿಲ್ಲ. ಎರಡು ವರ್ಷಗಳಾದರೂ ಹಣ ಹಂಚಿಲ್ಲ. ಹಾಗಾದರೆ ಹರಿಜನ-ಗಿರಿಜನರು ಗುಡಿ ಹೇಗೆ ಕಟ್ಟುತ್ತಾರೆ? ಹಾಗಾದರೆ, ಈ ಯೋಜನೆ ಏಕೆ ಬೇಕು? ತಮ್ಮ ಇಲಾಖಾ ಸೆಕ್ರೆಟರಿ ಇರುತ್ತಾರೆ. ಮಾನ್ಯ ಸಚಿವರಿಗೆ ಅದು ಹೋಗಿದೆ. ಹಾಗಾದರೆ, ಒಬ್ಬ ಮಂತ್ರಿ, ದೊಡ್ಡ ಇಲಾಖೆ ಏಕಿರಬೇಕು? ಅದಕ್ಕೇನು ಕೆಲಸ? ಈ ಕೂಡಲೇ ಮಾನ್ಯ ಸಚಿವರು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ನಮ್ಮ ಭಾಗಕ್ಕೆ ಬರುವ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು ಮತ್ತು ಆರಾಧನ ಸಮಿತಿ ರಚಿಸಬೇಕು ಎಂದು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಭಾರಿ ಉದ್ಯಮ ಸಚಿವರೇ 28 ಸಾವಿರ ಕೋಟಿ ರೂಪಾಯಿಗಳನ್ನು ನಿಮ್ಮ ಮೇಲೆ ಹಾಕಿ ಅದರ ಮೇಲೆ ನಾವು ಸಾಯುತ್ತಿದ್ದೇವೆ. ಸಮಾಜ ಕಲ್ಯಾಣ ಸಚಿವರೇ, ತಾವು ಕಳೆದ ಅಧಿವೇಶನದಲ್ಲಿ ಹೇಳಿದ್ದಿರಿ. ನಿಮ್ಮ ನಿಮ್ಮ ಇಲಾಖೆಯನ್ನು ಚೆನ್ನಾಗಿ ನಿರ್ವಹಿಸುತ್ತಿದ್ದೀರಿ. ಒಬ್ಬ ಹಿರಿಯ ಸಚಿವರಿಗೆ ಖಾತೆ ಕೊಟ್ಟಿದ್ದಾರೆ. ಆದರೆ, ತಾವು ಹರಿಜನ-ಗಿರಿಜನರಿಗೆ ಬೋರ್ ಹಾಕಿಸಿದ್ದೀರಿ. ಗಂಗಾ ಕಲ್ಯಾಣ ಯೋಜನೆ ಬಹಳ ಮಹತ್ವದ ಯೋಜನೆ.ಒಂದೊಂದು ಕ್ಷೇತ್ರಕ್ಕೆ 5-6, 8-10 ಬೋರ್‌ವೆಲ್ ಕೊಡುತ್ತಿದ್ದೀರಿ. ಇದು ಯಾವಾಗ ಮುಗಿಯುತ್ತದೆ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :— ನಿಜ. ಜಾಸ್ತಿ ಹಣ ಕೊಡಬೇಕೆಂಬ ಅಪೇಕ್ಷೆ ನನಗಿದೆ. ಆದರೆ, ಅದಕ್ಕೆ ಹಣಕಾಸು ಬೇಕಲ್ಲವೇ? ಆದರೂ ಕೂಡ ಈ ಸಾರಿ ಪ್ರತಿಯೊಂದು ಶಾಸನಸಭಾ ಕ್ಷೇತ್ರಕ್ಕೆ ಹರಿಜನ-ಗಿರಿಜನರಿಗೆ ಕನಿಷ್ಠ 20 ಬೋರ್‌ವೆಲ್‌ಗಳನ್ನು ಜೊತೆಗೆ ಹಿಂದುಳಿದವರು, ಅಲ್ಪಸಂಖ್ಯಾತರು ಸೇರಿದಂತೆ ಕನಿಷ್ಠ 10-10 ಬೋರ್‌ವೆಲ್ ಕೊಟ್ಟು, ಒಟ್ಟಿಗೆ ಒಂದು ಕ್ಷೇತ್ರದಲ್ಲಿ ಕನಿಷ್ಠ 40 ಬೋರ್‌ವೆಲ್ ಕೊಡಬೇಕೆಂಬ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈಗಾಗಲೇ ಪರಿಶಿಷ್ಟ ಜಾತಿ : ಪಂಗಡದವರಿಗೆ 20 ಬೋರ್‌ವೆಲ್ ಅನ್ನು ಆಯ್ಕೆ ಮಾಡುವುದಕ್ಕೆ ತಮ್ಮ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಗೆ ಹೇಳಿದೆ. ಉಳಿದುದ್ದಕ್ಕೆ ಇರುವ ಹಣದಲ್ಲಿಯೇ ಹೊಂದಿಸಬೇಕಲ್ಲವೆ?

ಶ್ರೀ ಎಸ್.ಎಸ್. ಪಾಟೀಲ್ :— ನಿಜವಾಗಲೂ 20 ಎಂದರೂ ಕಡಿಮೆಯಾಗುತ್ತದೆ.

ಒಂದೊಂದು ಕ್ಷೇತ್ರಕ್ಕೆ 100-200 ಅರ್ಜಿ ಇದ್ದಾಗ ನಾವು ಹೇಗೆ ಕೊಡುವುದು? ಈ ಸರ್ಕಾರ ಬಂದ ಮೇಲೆ ನನಗನ್ನಿಸುವ ಹಾಗೆ ಸಾಮಾನ್ಯವಾಗಿ ಹಣವಿಲ್ಲದೆ ಎಲ್ಲವನ್ನೂ ಸಾಲ ತೆಗೆದುಕೊಂಡು ಬಂದು ಕೊಡುತ್ತಿದೆ. ಅದಕ್ಕೂ ಸಾಲ ತೆಗೆದುಕೊಳ್ಳಿ. ಹರಿಜನ-ಗಿರಿಜನರಿಗೆ ಸಾಲ ಮಾಡುವುದು ತಪ್ಪೇನೂ ಅಲ್ಲ, ನಬಾರ್ಡ್, ಮತ್ತೊಂದರಿಂದ ತೆಗೆದುಕೊಂಡು ಬನ್ನಿ. ಹುಡ್ಕೋ ಅಂತೂ ಕರ್ನಾಟಕಕ್ಕೆ ಬಾಗಿಲನ್ನೇ ತೆರೆದಿದೆ. ಅಲ್ಲಿಂದ ಸಾಲ ತೆಗೆದುಕೊಂಡು ಬನ್ನಿ. ಅದು 10-20 ವರ್ಷ ಮಾಡುವ ಯೋಜನೆಯಲ್ಲ. ಒಂದೆರಡು ವರ್ಷಗಳಲ್ಲಿ ಎಲ್ಲವನ್ನೂ ಮುಗಿಸಬೇಕು. ಒಂದೊಂದು ಕ್ಷೇತ್ರಕ್ಕೆ 100-200 ಅರ್ಜಿ ಇರುವುದರಿಂದ, ಅದನ್ನು 4-6 ವರ್ಷ ಮಾಡುವುದಕ್ಕಿಂತ ಒಂದೇ ಸಾರಿ ಮಾಡಲು ಬೇಕಾದ ಕಾರ್ಯಕ್ರಮ ಹಾಕಿಕೊಳ್ಳಬೇಕು.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) :— ಗಂಗಾ ಕಲ್ಯಾಣ ಯೋಜನೆಯ ಬಗ್ಗೆ ಶ್ರೀ ಎಸ್.ಎಸ್. ಪಾಟೀಲ್‌ರವರು ಒಂದು ಪ್ರಪೋಸಲ್ ಕೊಟ್ಟರು. ಅದಕ್ಕೆ ತಾವು ಒಂದು ಕ್ಷೇತ್ರಕ್ಕೆ 20 ಬೋರ್‌ವೆಲ್‌ಗಳನ್ನು ಕೊಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆಂದು ಕೇಳಿದೆ. ಕಳೆದ ಬಾರಿಗಿಂತ ಈ ಸಾರಿ ಹೆಚ್ಚು ಮಾಡಿ, ಅದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಪವರ್ ಕನೆಕ್ಷನ್ ಕೊಡುವ ಬಗ್ಗೆ ಡಿಪಾಸಿಟ್ ಅನ್ನು ಬೆನಿಫಿಷಿಯರ್ಸ್ ಕಟ್ಟಬೇಕೊ ಅಥವಾ ಇಲಾಖೆಯವರು ಕಟ್ಟುತ್ತಾರೆಯೋ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಇದುವರೆಗೆ ಏನಿತ್ತೆಂದರೆ, ಪವರ್ ಕನೆಕ್ಷನ್‌ಗೆ ಹಣವನ್ನು ಫಲಾನುಭವಿಗಳೇ ಕಟ್ಟಬೇಕಾಗಿತ್ತು. ಅದರಿಂದಾಗಿ, ಬಡವರು ಹಣವನ್ನು ಕಟ್ಟುವುದಕ್ಕಾಗುತ್ತಿರಲಿಲ್ಲ. ಆದುದರಿಂದ, ನಮ್ಮ ನಿಗಮದಿಂದಲೇ ಪೂರಾ ಹಣವನ್ನು ಕಟ್ಟಬೇಕೆಂದು ತೀರ್ಮಾನಿಸಿದ್ದೇವೆ. ಈಗ ಯೂನಿಟ್ ಕಾಸ್ಟ್ 65 ಸಾವಿರ ರೂಪಾಯಿಗಳಿದ್ದು, ಒಂದು ವೇಳೆ ಅದಕ್ಕಿಂತಲೂ ಜಾಸ್ತಿಯಾಗುವುದಾದರೆ, ಆ ಹೆಚ್ಚಾದ ಹಣವನ್ನು ಸಾಲವನ್ನಾಗಿ ಪರಿವರ್ತಿಸಿ, ಪೂರಾ ಹಣವನ್ನು ನಾವೇ ಪ್ರಾರಂಭದಲ್ಲಿ ಕಟ್ಟಿ ಪೂರ್ಣ ಮಾಡುವ ಕೆಲಸ ಮಾಡುತ್ತೇವೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ :— ಕಳೆದ ಬಾರಿ ನಾನೊಂದು ವಿಷಯ ಪ್ರಸ್ತಾಪಿಸಿದ್ದೆ. ತಾಲ್ಲೂಕಿಗೊಂದು ಘಟಕ ಮಾಡಿದ್ದು, ಅದು ನಮಗಿನ್ನೂ ಬಂದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :— ಹೋಗಿದೆ. ಕಳುಹಿಸಿಕೊಡುತ್ತೇನೆ.

3. ವಿತ್ತೀಯ ಕಾರ್ಯಕಲಾಪ

2001-2002ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ

1.10 ಪಿ.ಎಂ.

+ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :— ಮಾನ್ಯ ಉಪಾಧ್ಯಕ್ಷರೆ, ನಾನು ತೋಟಗಾರಿಕೆ ಹಾಗೂ ಸಹಕಾರ ಇಲಾಖೆಗಳ ಮೇಲೆ ಮಾತನಾಡಬಯಸುತ್ತೇನೆ. ಮೊದಲನೇಯದಾಗಿ, ನಮ್ಮ ತೋಟಗಾರಿಕೆ ಸಚಿವವರು ಇದೀಗ ತಾನೇ ಸದನಕ್ಕೆ ಬರುತ್ತಿದ್ದಾರೆ ಅವರ ಇಲಾಖೆಗೆ ಸಂಬಂಧಪಟ್ಟಂತೆ ನಾನು ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ನಾನು ದಿನಾಂಕ: 26ನೇ ತಾರೀಖಿನ ದಿನ ಒಂದು ಪ್ರಶ್ನೆ ಕೇಳಿದ್ದೆ ಅದು 27ಕ್ಕೆ ಉತ್ತರ ಬರಬೇಕಾಗಿತ್ತು, ಆದರೆ ಉತ್ತರ ಇನ್ನು ಬಂದಿಲ್ಲ. 10-20 ಎಕರೆ ವಿಸ್ತೀರ್ಣವುಳ್ಳ ಮುಂಡರಗಿ ತೋಟಗಾರಿಕೆ ಫಾರ್ಮ್ ತುಂಗಭದ್ರ ನದಿಯ ಮಗ್ಗುಲಲ್ಲಿ ಇದೆ, ನೀವು ತರುವಂಥ ವ್ಯವಸ್ಥೆಯಿದೆ ದುಡ್ಡೂ ಕೂಡ ಕೊಟ್ಟಿದ್ದೇವೆ ಆದರೆ ಇದನ್ನು ಮಾಡಿ ಮುಗಿಸಲಿಕ್ಕೆ ಇವರಿಗೆ ಇರುವ ತೊಂದರೆಯಾದರೂ ಏನು? ನನ್ನ ಪ್ರಶ್ನೆ ಈ ರೀತಿ ಇದೆ.

(1) ಮುಂಡರಗಿ ಸರ್ಕಾರಿ ಬೆಲಮಾಡಿ ತೋಟಗಾರಿಕೆ ಫಾರ್ಮ್‌ನ ವಿಸ್ತೀರ್ಣ ಎಷ್ಟು? ಸದರಿ ತೋಟದಲ್ಲಿ ಯಾವ್ಯಾವ ತರಹದ ಗಿಡಗಳು ಇವೆ? ಇವುಗಳು ನೀರು ಇಲ್ಲದೇ ಒಣಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(2) ಸದರಿ ಫಾರ್ಮ್‌ಗೆ ತುಂಗಭದ್ರ ನದಿಯಿಂದ ನೀರು ತರುವ ಯೋಜನೆ ಎಷ್ಟು ವರ್ಷಗಳಿಂದ ಇದೆ? ಯಾವ್ಯಾವ ಹಂತದಲ್ಲಿದೆ?

(3) ಸದರಿ ಯೋಜನೆಗೆ ಎಷ್ಟು ಅಂದಾಜು ಮಾಡಲಾಗಿತ್ತು? ಈಗ ಎಷ್ಟು ಆಗಿದೆ.

(4) ಇಷ್ಟು ದೀರ್ಘಕಾಲಗಳ ಕಾಲ ವಿಳಂಬವಾಗಲು ಏನು ಕಾರಣ? ಇದಕ್ಕೆ ಕಾರಣರಾದವರ ವಿವರ ನೀಡುವುದು ಹಾಗೂ ಅವರ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು?

(5) ಸದರಿ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಇಷ್ಟನ್ನು ನಾನು ಕೇಳಿದ್ದೆ. ರಾಜ್ಯದಲ್ಲಿ ಏನು ನಡೆಯುತ್ತದೆ ಎಂಬುದನ್ನು ನಾನು ಈಗ ಹೇಳಬಯಸುತ್ತೇನೆ.

ಶ್ರೀ ಲಮಾಣಿ ರುದ್ರಪ್ಪ ಮಾನಪ್ಪ :— ನೀವು ಮಂತ್ರಿಗಳಾಗಿದ್ದೀರಿ. ನೀವು ಏಕೆ ಇದನ್ನು ಮಾಡಲಿಲ್ಲ?

ಶ್ರೀ ಎಸ್.ಎಸ್. ಪಾಟೀಲ್ :— ಅದನ್ನು ನಾನು ಹೇಳುತ್ತೇನೆ, ನಾನು ಯಾವ ಸರ್ಕಾರವನ್ನು ಬಯ್ಯುತ್ತಿಲ್ಲ. ಇದು ಒಬ್ಬರಿಗೆ, ಸಂಬಂಧಪಟ್ಟಿದ್ದಲ್ಲ ಸರ್ಕಾರ ಬದಲಾವಣೆಯಾದರೆ ಏನಂತೆ ಅಧಿಕಾರಿಗಳು ಇರುತ್ತಾರಲ್ಲವೇ ಅವರನ್ನು ನಾವು ಕೇಳಬೇಕಾಗುತ್ತದೆ.

ಸರ್ಕಾರದವರು ತೋಟಗಾರಿಕಾ ಫಾರ್ಮ್‌ಗಳಿಗೆ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಾರೆ. ತುಂಗಭದ್ರದಿಂದ ನೀರಾವರಿಯನ್ನು ತರಬೇಕೆಂದು ಜಿಲ್ಲಾಪಂಚಾಯಿತಿಯಿಂದ

ದುಡ್ಡು ಉಳಿಸಿ ಅಂದಾಜು ಮಾಡಿ ಕಳುಹಿಸಿದರೆ ಅದು ಮುಖ್ಯ ಅಭಿಯಂತರರ ಕಛೇರಿಗೆ ಹೋಗಬೇಕಂತೆ, ಸಣ್ಣ ನೀರಾವರಿ ಇಲಾಖೆಯ ಮಂತ್ರಿಗಳು ಇಲ್ಲ, ಅವರ ಕಛೇರಿ ಯಾವ ರೀತಿ ನಡೆಯುತ್ತದೆಂಬುದನ್ನು ಹೇಳುತ್ತೇನೆ. ಮುಖ್ಯ ಅಭಿಯಂತರರವರ ಕಛೇರಿಗೆ ಅದು ಹೋದರೆ ಮಾರ್ಚ್ ಅಂತ್ಯದವರೆಗೆ ಹಾಗೆಯೇ ಇಟ್ಟುಕೊಳ್ಳುತ್ತಾರೆ ನಂತರದಲ್ಲಿ ಅದಕ್ಕೆ ಏನಾದರೂ ಡೀಟೆಲ್ಸ್ ಕೇಳಿ ವಾಪಸ್ ಕಳುಹಿಸಿಬಿಡುತ್ತಾರೆ ಹೀಗಾಗಿ ಅದು 8 ಲಕ್ಷ ರೂಪಾಯಿ ಅಂದಾಜು ಇದ್ದದ್ದು 70 ಲಕ್ಷ ರೂಪಾಯಿವರೆಗೆ ಹೋಗಿದೆ. ಈಗಾಗಲೇ ಮಾರ್ಚ್ ಹೋಯಿತು ಪುನ: ರೇಟ್ ಜಾಸ್ತಿ ಮಾಡುತ್ತಾರೆ, ನಾನು ಈಗಾಗಲೇ ಹೇಳಿದ ಹಾಗೆ ಸರ್ಕಾರ ಮಾಡುವ ಕೆಲಸವಲ್ಲ, ಇದು ಅಧಿಕಾರಿಗಳು ಮಾಡುವ ಕೆಲಸ. ಯಾವುದೇ ಸರ್ಕಾರ ಹಾಗೂ ಮಂತ್ರಿಗಳನ್ನು ಟೀಕೆ ಮಾಡುವುದಕ್ಕೆ ನಾನು ನಿಂತಿಲ್ಲ. ಅಧಿಕಾರಿಗಳಿಂದ ನಡೆಯುವಂಥ ವ್ಯವಸ್ಥೆಯನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಇದಕ್ಕಾಗಿ ನಾನು ಬಸವಣ್ಣನವರ ವಚನದ ಬಗ್ಗೆ ಕೊನೆಗೆ ಹೇಳುವುದರಲ್ಲಿ ಅರ್ಥ ಬರುತ್ತದೆ. ಏಕೆಂದರೆ, ಆ ಅಧಿಕಾರಿಯನ್ನು ಭೇಟಿಯಾಗಿ ದುಡ್ಡು ಕೊಟ್ಟು ಬಂದರೆ ಸರಿ ಇಲ್ಲರೆಂದರೆ ಆ ಕಡತ ವಾಪಸ್ ಬರುತ್ತದೆ. ಮಂತ್ರಿಗಳಿಗೆ ಹಾಗೂ ಇತರರಿಗೂ ತಿಳಿಯತಕ್ಕಂಥ ವ್ಯವಸ್ಥೆಯಲ್ಲ, ಇದು ನಡೆಯತಕ್ಕಂಥ ವ್ಯವಸ್ಥೆ. ಹೀಗಾಗಿ ನಾನು ನಿಮಗೆ ಸುಮಾರು 10 ಸಲ ಹೇಳಿದ್ದರೂ ಈ ಕಡೆಗೆ ನಾವು ಗಮನಹರಿಸಲೇ ಇಲ್ಲ. ಆದ್ದರಿಂದ, ಈ ಅಧಿವೇಶನ ಮುಗಿಯುವುದರೊಳಗಾಗಿ ಆ ಅಧಿಕಾರಿಯ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡುವಂತೆ ತಾವು ಸಂಬಂಧಪಟ್ಟ ಮಂತ್ರಿಗಳಿಗೆ ಆದೇಶಿಸಬೇಕು. ಇನ್ನು ಹಣಕಾಸಿನ ಪರಿಸ್ಥಿತಿಯ ಬಗ್ಗೆ ಹೇಳುವುದಾದರೆ, ಈ ಶ್ವೇತಪತ್ರದ ಪ್ರಕಾರ ನಮ್ಮ ರಾಜ್ಯದ ಸಾಲ 23,884 ಕೋಟಿ ರೂಪಾಯಿ ಎಂದು ಇಲ್ಲಿ ಹೇಳಿದ್ದಾರೆ, ಮೊನ್ನೆ ನಮ್ಮ ಜಗದೀಶ್ ಶೆಟ್ಟರ್‌ರವರು ಕೇಳಿದ್ದಕ್ಕೆ 18,000 ಸಾವಿರ ಕೋಟಿ ರೂಪಾಯಿ ಎಂದು ಹೇಳಿದ್ದಾರೆ. ಇದರಲ್ಲಿ ಯಾವುದು ನಿಜ? ಇದರ ಜೊತೆಗೆ ಮೊನ್ನೆ 26 ಕೋಟಿ ಅಥವಾ 12 ಕೋಟಿ ರೂಪಾಯಿ ಸಾಲ ತೆಗೆದುಕೊಂಡಿದ್ದೀರಿ, ಅಂದರೆ ಒಟ್ಟಾರೆಯಾಗಿ 40 ಕೋಟಿ ರೂಪಾಯಿ ಸಾಲ ಈ ರಾಜ್ಯದ ಮೇಲೆ ಇದೆ. ಇದಕ್ಕೆ ಬಡ್ಡಿ ಎಷ್ಟು? ನಮ್ಮ ಬಜೆಟ್ 8000 ಕೋಟಿ ಎಂದು ಮಾಡಿದ್ದೇವೆ, ಅಂದರೆ ಅದು ಎಲ್ಲಾ ಬಡ್ಡಿಗೆ ಹೋದರೆ, ಹಾಗಾದರೆ ಈ ರಾಜ್ಯ ನಡೆಸುವುದು ಹೇಗೆ? ಇದಕ್ಕೇನು ಯೋಜನೆಗಳನ್ನು ಹಾಕಿಕೊಂಡಿದ್ದೀರಿ? ನೀವು ಇಲ್ಲಿ ಕೊಟ್ಟಿರುವ ಯೋಜನೆ ಇದು ಏನೂ ಆಗದಂಥ ಯೋಜನೆ, ಇದೇ ರೀತಿ ಇವರು ಇನ್ನು 2-3 ವರ್ಷ ಸರ್ಕಾರ ನಡೆಸಿದರೆ ನಿರ್ವಹಣೆ ಮಾಡಲಿಕ್ಕೆ ಸಾಧ್ಯವಾಗದೆ ಖಂಡಿತವಾಗಿ ಈ ರಾಜ್ಯ ಕತ್ತಲಲ್ಲಿ ಮುಳುಗುತ್ತದೆ. ಈ ರಾಜ್ಯದ ಜನ ಹಾಗೂ ರೈತ ಯಾವ ಅಭಿವೃದ್ಧಿಯಿಲ್ಲದೆ ವಂಚಿತರಾಗುತ್ತಾರೆ. ಆದ್ದರಿಂದ, ಇನ್ನು ಮುಂದೆ ದಯಮಾಡಿ ಸಾಲ ತರುವುದನ್ನು ಬಂದ್ ಮಾಡಿ. ನಾನು ಈಗಾಗಲೇ ಹೇಳಿದಂತೆ ಎಲ್ಲದಕ್ಕೂ ಕಟ್

ಮಾಡಿ, ಇದೇನು ನೀವೇ ಮಾಡಿದ ಸಾಲ ಎಂದು ನಾನು ಹೇಳುತ್ತಿಲ್ಲ. ಹಿಂದಿನಿಂದಲೂ ಸಾಲ ಮಾಡಿಕೊಂಡು ಬಂದಿರುವುದು ಇದೆ. ಈ ರೀತಿ ಸಾಲ ಮಾಡಿಕೊಂಡು ಎಲ್ಲಿಗೆ ಹೋಗಿದೆ ಎಂದರೆ ತುಂಬಾ ಅಪಾಯಕರವಾದ ಸ್ಥಿತಿಗೆ ತಲುಪಿದ್ದೇವೆ. ನಾವು ಬಂದಾಗ ನಾವೊಂದು 20 ಸಾವಿರ ಕೋಟಿ ಸಾಲ ಮಾಡಿಕೊಂಡು ಹೋಗುವುದು, ಮತ್ತೊಬ್ಬರು ಬಂದಾಗ ಮತ್ತಷ್ಟು ಸಾವಿರ ಕೋಟಿ ಸಾಲ ಮಾಡುವುದು, ಹೀಗೆ ಈ ರಾಜ್ಯದ ಪರಿಸ್ಥಿತಿ ನಡೆದಿದೆ.

ಶ್ರೀ ಬಿ.ಆರ್. ಯಾವಗಲ್ :— ಈ ಸಾಲ ತರುವ ಕ್ರಮ ಏನಿದೆ ಇದು ಹಿಂದೆ ನೀವು ಇದ್ದ ಜನತಾದಳ ಸರ್ಕಾರ ಇದ್ದಾಗಲೇ ಪ್ರಾರಂಭವಾಗಿರುವುದು.

ಶ್ರೀ ಎಸ್.ಎಸ್. ಪಾಟೀಲ್ :— ನಾನು ಎಲ್ಲರೂ ಸೇರಿ ಮಾಡಿರುವುದು ಎಂದು ಹೇಳಿದ್ದು, ಸ್ವಾತಂತ್ರ ಬಂದ ಮೇಲೆ ದೇಶದಲ್ಲಿ ನೀವು ಮಾಡಿಲ್ಲವೇ? ಈಗ ನೆನಪಾಗಿದೆ.

ಶ್ರೀ ಯು.ಆರ್. ಸಭಾಪತಿ :— ನೀವು ಇರುವಾಗ ಸಾಲ ಮಾಡಿರಲಿಲ್ಲವೇ?

ಶ್ರೀ ಎಸ್.ಎಸ್. ಪಾಟೀಲ್ :— ಈಗ ನನ್ನನ್ನು ಕೇಳಿದವರೇ ಸಾಲ ಮಾಡಿದ್ದಾರೆ, ಅವರೇ ಆಗ ಆ ಸರ್ಕಾರದಲ್ಲಿ ಇದ್ದರು.

ಶ್ರೀ ಬಿ.ಆರ್. ಯಾವಗಲ್ :— ಸರ್ಕಾರದೊಳಗೆ ತಾವು ಇದ್ದದ್ದು. ತಾವು ಅದನ್ನು ಪಡೆದುಕೊಂಡಿದ್ದು..

ಶ್ರೀ ಎಸ್.ಎಸ್. ಪಾಟೀಲ್ :—ರಾಷ್ಟ್ರದ್ದು ಹಾಗೂ ರಾಜ್ಯದ ಪರಿಸ್ಥಿತಿ ಹಾಗೆಯೇ ಇದೆ. ಇದಕ್ಕೆ ನಾವು ಏನಾದರೊಂದು ಕಠೋರವಾದ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ಮುಂದೆ ಆಡಳಿತ ನಡೆಸತಕ್ಕಂಥ ಜನ ಖಂಡಿತವಾಗಿ ನಮ್ಮನ್ನು ಶಾಪಿಸುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಉಪಾಧ್ಯಕ್ಷರೆ, ಈಗ ಮಾಡಿರುವ ಸಾಲಗಳು ಹೆಚ್ಚಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕಾಗಿಯೇ ಮಾಡಿರುವುದು. ಕುಡಿಯುವ ನೀರು ಇದರಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳು ಸೇರಿದಂತೆ, ರಸ್ತೆ, ವಿದ್ಯುತ್, ನೀರಾವರಿ, ಇಂಥ ಪ್ರಮುಖವಾದ ಕ್ಷೇತ್ರಕ್ಕೆ ಹೆಚ್ಚು ಹಣವನ್ನು ಕೊಟ್ಟಿರುವುದು, ನಾವೇನೂ ಮನೆ ಕಟ್ಟುವುದಕ್ಕೆ ಕೊಟ್ಟಿಲ್ಲ. ಇತರೆ ಅಭಿವೃದ್ಧಿಗೇನು ಉಪಯೋಗಿಸಿಲ್ಲ. ಜನರ ಅಪೇಕ್ಷೆಯಂತೆ ಕುಡಿಯುವ ನೀರು, ವಿದ್ಯುತ್, ನೀರಾವರಿ, ರಸ್ತೆ, ಇದಕ್ಕೆ ವಿಶೇಷವಾದ ಬೇಡಿಕೆಯಿರುವುದರಿಂದ ಇವುಗಳನ್ನು ಪೂರೈಸಬೇಕಾದರೆ ತಮ್ಮ ಹತ್ತಿರ ಹಣ ಇಲ್ಲದಿದ್ದರೆ ಸಾಲವನ್ನಾದರೂ ಮಾಡಬೇಕಾಗುತ್ತದೆ. ಸಾಲ ಕಡಿಮೆ ಮಾಡಬೇಕು ಎನ್ನುವುದಾದರೆ ಯಾವ ಕ್ಷೇತ್ರದಲ್ಲಿ ಕಡಿಮೆ ಮಾಡುವುದಕ್ಕೆ ಸಾಧ್ಯತೆ ಇದೆ ಎನ್ನುವ ಸಲಹೆ ರೂಪದಲ್ಲಿ ಕೊಟ್ಟರೆ ಸರ್ಕಾರ ಕೂಡ ಅದರ ಬಗ್ಗೆ ಗಂಬೀರವಾಗಿ ಯೋಚಿಸುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ :— ಆದಕ್ಕಾಗಿ ನೀವು ನೇಮಿಸಿರುವ ಆಯೋಗದವರು ಏನು ಮಾಡಬೇಕು ಎಂಬುದನ್ನು ಈಗಾಗಲೇ ಹೇಳಿರುವುದರಿಂದ ಪುನ: ನಾನು ಹೇಳಬೇಕಾದ ಅವಶ್ಯಕತೆ ಇಲ್ಲ. ಬಹುಶ: ತಾವು ವಿದೇಶದಿಂದ ಇದೀಗ ತಾನೇ ಬಂದಿರುವುದರಿಂದ ಇದನ್ನು ನೋಡಲಿಲ್ಲವೆಂದು ಕಾಣುತ್ತದೆ. ಯಾರ ಉದ್ದೇಶಕ್ಕೆ ಸಾಲ ತಂದಿರಿ ಅದು ಆ ಉದ್ದೇಶಕ್ಕೆ ಖರ್ಚು ಆಗಿಲ್ಲ. ಹಿಂದೆ ಪಿಯರ್‌ಲೆಸ್ ಎನ್ನುವ ಕಂಪನಿಯಿಂದ 250 ಕೋಟಿ ರೂಪಾಯಿ ತಂದಿದ್ದಾಗ ಆದನ್ನು ನೌಕರರ ಸಂಬಳಕ್ಕಾಗಿಯೇ ಕೊಟ್ಟಿದ್ದೀರಿ ಅದನ್ನೇ ಇವರು ಅದರಲ್ಲಿ ಪ್ರಾಮಾಣಿಕವಾಗಿ ಹೇಳಿದ್ದಾರೆ. ಬೇಕಾದರೆ ತಾವು ಇದನ್ನು ಓದಿ ನೋಡಿ. ಇದು ಯಾರ ಕಾಲಕ್ಕಾದರೂ ಆಗಿರಬಹುದು. ಇದಕ್ಕೆ ನಾನು ಏನು ಹೇಳುತ್ತೇನೆಂದರೆ, ಇದಕ್ಕೆ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇನ್ನು ಕೈಗಾರಿಕೆಗಳು ಇದರಲ್ಲಿ ಎಷ್ಟು ಹಾನಿಗಳಿಂದ ಕೂಡಿದೆ, ಏಕೆ ನಾವು ಅವುಗಳನ್ನು ಉಳಿಸಬೇಕು? ಅದರಿಂದ ಏನು ಕೆಲಸ ಇದೆ? ಬಡ ಬೋರೇಗೌಡ ಕೊಟ್ಟಂಥ ತೆರಿಗೆಯನ್ನು ಬೇರೆ ಯಾರ ಮೇಲೆ ಚೆಲ್ಲುವುದು ಎಂದರೆ ಏನರ್ಥ? ಯಾವ ರಸ್ತೆ ಮಾಡುವುದಕ್ಕೆ ನಮ್ಮಲ್ಲಿ ದುಡ್ಡು ಇದೆ? ಮಾನ್ಯ ಹಾರ್‍ನಳ್ಳಿ ರಾಮಸ್ವಾಮಿಯವರು ಹೇಳಿದ ಹಾಗೆ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು, 30 ಭಾಗದಷ್ಟು ಕಟ್ ನೀವು ಯಾವ ರೀತಿ ಮಾಡುತ್ತಿರೋ ಒಟ್ಟಿನಲ್ಲಿ ಅದನ್ನು ಮಾಡಬೇಕು. ಇದಕ್ಕಾಗಿ ನೀವು ಕಠಿಣವಾದ ನಿಲುವು ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ನಾವೆಲ್ಲರೂ ತಮಗೆ ಬೆಂಬಲ ಕೊಡುತ್ತೇವೆ. ಇನ್ನು ಕೊನೆಯದಾಗಿ ಸಹಕಾರ ಇಲಾಖೆಗೆ ಬರುತ್ತೇನೆ. ನಿನ್ನೆ ತಾನೇ ಬಹಳ ಚರ್ಚೆಯಾಯಿತು. ಮಾನ್ಯ ಉಪಾಧ್ಯಕ್ಷರೆ, ತಾವೂ ಕೂಡ ಸಹಕಾರಿಗಳೇ. ಈ ಸಹಕಾರ ಇಲಾಖೆ ಎಂದರೆ ಮನುಷ್ಯನ ದಿನನಿತ್ಯದಲ್ಲಿ ಇದು ಹಾಸುಕೊಕ್ಕಾಗಿದೆ. ಇದು ಎಲ್ಲಾ ಇಲಾಖೆಗಳಿಗೂ ಪಸರಿಸಿದೆ. ಇಲ್ಲಿರುವ ಎಲ್ಲಾ ಮಂತ್ರಿಗಳ ಕಡೆಯೂ ಸಹಕಾರ ಇಲಾಖೆ ಇದೆ. ರಾಜ್ಯದಲ್ಲಿ 28,000 ಸಹಕಾರಿ ಸಂಘಗಳಿದ್ದು 5 ಸಾವಿರ ಸಹಕಾರ ಸಂಘಗಳು ಮಾತ್ರ ಹಾನಿಯಲ್ಲಿ ಇದ್ದು ಉಳಿದ ೨೩ ಸಾವಿರ ಸಹಕಾರ ಸಂಘಗಳು ಬಹಳ ಚೆನ್ನಾಗಿ ಕೆಲಸ ನಿರ್ವಹಿಸುತ್ತಿವೆ. ಇಷ್ಟೊಂದು ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದರೂ ಸಹ ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಎಂದರೆ ಯಾರು ಒಪ್ಪುತ್ತಾರೆ? ಇವತ್ತಿನ ದಿವಸ ಸರ್ಕಾರದ ಹಸ್ತಕ್ಷೇಪದಿಂದ ಸಹಕಾರ ಸಂಘಗಳು ಕೆಡುತ್ತಿವೆ. ನಮ್ಮ ಕಾಲದಲ್ಲಿಯೂ ಕೂಡ ಇತ್ತು. ಇಲ್ಲರೆಂದು ನಾನು ಹೇಳುವುದಿಲ್ಲ. ಹಿಂದಿನ ಕಾಲದಲ್ಲಿ ಸ್ವಸಹಾಯ ಗುಂಪುಗಳನ್ನು ಮಾಡಿಕೊಂಡು ಇದರಲ್ಲಿ ಸಮಾನ ಮನಸ್ಕರು ಸೇರಿಕೊಂಡು ಸಹಕಾರ ಸಂಘಗಳನ್ನು ಪ್ರಾರಂಭ ಮಾಡಿ, ಇವುಗಳನ್ನು ಅಭಿವೃದ್ಧಿಪಡಿಸಬೇಕೆಂಬ ದೃಷ್ಟಿಯನ್ನು ಇಟ್ಟುಕೊಂಡಿದ್ದರು. ಹಾಗೆಯೇ ಸಹಕಾರ ಸಂಘಗಳಿಗೆ ನೌಕರರನ್ನು ನೇಮಕ ಮಾಡಿಕೊಳ್ಳುವುದು ಮತ್ತು ಲಾಭ ಹೆಚ್ಚು ಬಂದಾಗ ಹೆಚ್ಚು ಹಣ ಕೊಡುತ್ತಿದ್ದರು ಮತ್ತು ಕಡಿಮೆ ಲಾಭ ಬಂದಾಗ ಕಡಿಮೆ ಹಣ ಕೊಡತಕ್ಕಂಥ ವ್ಯವಸ್ಥೆ

ಇತ್ತು. ಈಗ ಈ ಎಲ್ಲಾ ಪದ್ಧತಿ ಜಾರಿಯಲ್ಲಿ ಇಲ್ಲ. ಸರ್ಕಾರದ ಹಸ್ತಕ್ಷೇಪದಿಂದ ಮುಂದೆ ಇದಕ್ಕೂ ಕೂಡ ಕಾಯಿದೆ ತರಲಾಯಿತು. ಆ ನಂತರ ಇದು ಚೆನ್ನಾಗಿ ನಡೆಯುತ್ತಿದೆ ಎಂದು ತಿಳಿದು ಬಂದಾಗ ಇದಕ್ಕೆ ರಾಜಕೀಯ ಲೇಪನ ಹಚ್ಚಲಾಯಿತು. ಸಹಕಾರ ಸಂಘಗಳ ಕಾಯಿದೆಗೆ ಆಗಾಗ ತಿದ್ದುಪಡಿ ಮಾಡುತ್ತಾ ಬಂದಿರುವುದರಿಂದ ಇವತ್ತಿನ ಪರಿಸ್ಥಿತಿಗೆ ಸಹಕಾರ ಸಂಘಗಳು ಬಂದಿವೆ. ಬಹುಶ: ಸಹಕಾರ ಸಂಘಗಳು ಈಗ ಯಾವ ರೀತಿ ಇದೆ ಎಂದರೆ, ಸಹಕಾರ ಇಲಾಖೆ ಇವತ್ತಿನ ದಿವಸ ಸರ್ಕಾರಿ ಇಲಾಖೆ ಆಗುವಂಥ ಮಟ್ಟಿಗೆ ಬಂದಿದೆ. ಹಿರಿಯ ಸಹಕಾರಿಯಾಗಿರತಕ್ಕಂಥ ಸನ್ಮಾನ್ಯ ಹನುಮೇಗೌಡರು ತಮ್ಮ ವರದಿಯಲ್ಲಿ ಅನೇಕ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ೧೯೭೬ರ ತಿದ್ದುಪಡಿಯಿಂದ ಸಹಕಾರ ಕ್ಷೇತ್ರದಲ್ಲಿ ಭಾರಿ ಅವ್ಯವಹಾರ ಜಾಸ್ತಿ ಆಯಿತೆಂದು ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ತಮಗೆ ಯಾರೋ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ತಾವು ಅಧ್ಯಕ್ಷರಾಗಿರುವುದರಿಂದ ಇದನ್ನು ಮತ್ತೊಮ್ಮೆ ತರಿಸಿಕೊಂಡು ನೋಡಬೇಕೆಂದು ಕೇಳಿಕೊಳ್ಳುತ್ತೇನೆ. ನಾವು ಎಲ್ಲಿಯವರೆಗೆ ಇವುಗಳನ್ನು ಸ್ವತಂತ್ರವಾಗಿ ನಡೆಯುವುದಕ್ಕೆ ಬಿಡುವುದಿಲ್ಲವೋ, ಅಲ್ಲಿಯವರೆಗೆ ಇವು ಸುರಕ್ಷಿತವಾಗಿ ನಡೆಯುವುದಕ್ಕೆ ಸಾಧ್ಯವಿಲ್ಲ. ಇವುಗಳನ್ನು ಸ್ವತಂತ್ರವಾಗಿ ನಡೆಯಬೇಕೆಂಬ ಉದ್ದೇಶದಿಂದ ನಾವು ಸಹಕಾರಿ ಸೌಹಾರ್ದ ಕಾಯಿದೆಯನ್ನು ತಂದೆವು. ಈ ನಿಯಮಾವಳಿಯನ್ನು ಆಚರಣೆಗೆ ತರುವುದಕ್ಕೆ ಸರ್ಕಾರಕ್ಕೆ ಆಸಕ್ತಿ ಇಲ್ಲವೆಂದು ಕಾಣುತ್ತದೆ. ಹೋದ ವರ್ಷ ಅಲ್ಲಿ ಚುನಾವಣೆಗಳು ಆಗಿವೆ. ಚನಾವಣೆ ಆದಮೇಲೆಯೂ ಕೂಡ ಅವರು ಬರುವುದಕ್ಕೆ ಹಿಂದು-ಮುಂದು ನೋಡುತ್ತಿದ್ದಾರೆ. ಏತಕ್ಕಾಗಿ ಹಿಂದು-ಮುಂದು ನೋಡುತ್ತಿದ್ದಾರೆಂದರೆ, ಇವರು ಬಂದರೆ ಪುನ: ಚುನಾವಣೆ ಮಾಡಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಸೆಕ್ಷನ್ ೭೦ರ ಪ್ರಕಾರ ಏನಾದರೂ ತೊಂದರೆಗಳು ಆಗಿದ್ದರೆ, ಅದನ್ನು ನಿವಾರಣೆ ಮಾಡುವುದಕ್ಕೆ ಒಂದು ಕಲಂ ಇದೆ. ಸದರಿ ಕಲಂ ಪ್ರಕಾರ ಈಗ ಚುನಾಯಿತರಾದವರು ೫ ವರ್ಷಗಳವರೆಗೆ ಮುಂದುವರಿಯಬಹುದೆಂದು ಆದೇಶ ಹೊರಡಿಸಬಹುದು. ಮೊನ್ನೆ ದಿವಸ ಡಾ: ಕುರಿಯನ್‌ರವರು ಬಂದಾಗ ಈ ವಿಷಯದ ಬಗ್ಗೆ ನಾನು ಹೇಳಿದ್ದೇನೆ. ತೀವ್ರವಾಗಿ ಈ ಆದೇಶವನ್ನು ಹೊರಡಿಸಿದರೆ ಖಂಡಿತವಾಗಿಯೂ ಇದರಲ್ಲಿ ಎಲ್ಲರೂ ಮುಂದೆ ಬರುತ್ತಾರೆ. ಈ ಒಂದು ಕಾರಣಗಳಿಂದ ಆದೇಶವನ್ನು ಹೊರಡಿಸಬೇಕೆಂದು ಹೇಳಿದ್ದೇನೆ. ಆದರೆ ಇದುವರೆಗೂ ಆದೇಶವನ್ನು ಹೊರಡಿಸಿಲ್ಲ. ಈ ಆದೇಶ ಹೊರಡಿಸಿದರೆ ಎಲ್ಲರೂ ಇದರ ಅಡಿಯಲ್ಲಿ ಬರುತ್ತಾರೆ. ಆಗ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವುದಕ್ಕೆ ಆಗುತ್ತದೆ. ಹಾಗೆಯೇ ಇದರಲ್ಲಿ ಸರ್ಕಾರದ ಹಸ್ತಕ್ಷೇಪ ಮತ್ತು ಸರ್ಕಾರದ ಹಣ ಇರುವುದಿಲ್ಲ. ಆದ್ದರಿಂದ ಈ ಒಂದು ಹಿನ್ನಲೆಯಲ್ಲಿ ಸೌಹಾರ್ದ ಸಹಕಾರ ಕಾಯಿದೆಯನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಸಹಕಾರ ಉದ್ದಿಮೆಗಳು ಸಾಕಷ್ಟು ಇವೆ. ಈಗ ಉದ್ದಿಮೆ ಬಗ್ಗೆ ಮಾತನಾಡಬೇಕೆಂದು ಇರುವಾಗ ಮಾನ್ಯ

ಕೈಗಾರಿಕಾ ಸಚಿವರು ಹೊರಗಡೆ ಹೋಗಿದ್ದಾರೆ. ಹೀಗಾದರೆ ನಾವೇನು ಮಾಡುವುದು? ಸುಮ್ಮನೆ ನಾವು ಹೀಗೇ ಮಾತನಾಡುವುದರಲ್ಲಿ ಅರ್ಥವಿಲ್ಲವೆಂದು ಕಾಣುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಮಾನ್ಯ ಉಪಾಧ್ಯಕ್ಷರೆ, ಈ ಎಲ್ಲಾ ಬೇಡಿಕೆಗಳ ಮೇಲೆ ಸನ್ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವಂಥ ಸಂದರ್ಭದಲ್ಲಿ ಕೆಲವು ಇಲಾಖೆಗಳ ವಿಷಯವನ್ನು ಮಾತ್ರ ಟಚ್ ಮಾಡುತ್ತಾರೆ. ಆದ್ದರಿಂದ ಉಳಿದ ಎಲ್ಲಾ ಸಚಿವರು ಆರಾಮವಾಗಿ ಕುಳಿತುಕೊಂಡಿದ್ದಾರೆ. ಇವರೇನೂ ಕಡ್ಡಾಯವಾಗಿ ಇಲ್ಲಿಗೆ ಬರಬೇಕೆಂದು ಏನೂ ಇಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :— ತಾವು ಮಾತನಾಡತಕ್ಕಂಥ ಎಲ್ಲಾ ವಿಷಯಗಳು ರೆಕಾರ್ಡ್ ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ರೆಕಾರ್ಡ್ ಆಗಿರುವಂತ ಕಡತವನ್ನು ಒಂದು ಸಾರಿ ನೋಡಿಕೊಂಡು ಉತ್ತರ ಕೊಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ :— ನಮ್ಮ ಪಕ್ಷ ಅಧಿಕಾರದಲ್ಲಿ ಇದ್ದಂಥ ಸಂದರ್ಭದಲ್ಲಿ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ವಿರೋಧಪಕ್ಷದ ನಾಯಕರು ನಮಗೆ ಹುಚ್ಚು ಹಿಡಿಸಿದ್ದರು. ಆ ಸಂದರ್ಭದಲ್ಲಿ ತಾವು ಇರಲಿಲ್ಲ. ಆದರೆ ನಾವು ನಿಮ್ಮನ್ನು ಸುಮ್ಮನೆ ಬಿಟ್ಟು ಎಲ್ಲಾ ವಿಷಯವನ್ನು ಸಮಾಧಾನವಾಗಿ ತೆಗೆದುಕೊಳ್ಳುತ್ತಿದ್ದೆವೆ. ಯಾರು ಇಲ್ಲದೇ ಇದ್ದರೂ ಸಹ ಸದನ ನಡೆಯುತ್ತದೆ. ಯಾರೇನೂ ಮಾಡುವುದಕ್ಕೆ ಆಗುವುದಿಲ್ಲ. ಹಳೆಯ ಧಾರವಾಡ ಜಿಲ್ಲೆಯಲ್ಲಿರತಕ್ಕಂಥ ಸಹಕಾರಿ ಕೈಗಾರಿಕೆಗಳಾದ ಟೆಕ್ಸ್‌ಟೈಲ್ಸ್ ಮತ್ತು ಎಣ್ಣೆ ಗಿರಣಿಗಳು ಇವತ್ತಿನದಿವಸ ಯಾವ ಸ್ಥಿತಿಯಲ್ಲಿ ಇರೆ ಎಂದರೆ, ಬಹುಶ: ಅದನ್ನು ನೋಡಿದರೆ ನನಗೆ ಗಾಬರಿಯಾಗುತ್ತದೆ. ಇದಕ್ಕೇ ನಾವೇನಾದರೂ ಮಾಡದೇ ಇದ್ದರೆ ಮುಂದಿನ ದಿವಸಗಳಲ್ಲಿ ಇವೆಲ್ಲವೂ ಕೂಡ ಮುಚ್ಚಿ ಹೋಗುತ್ತವೆ. ಸುಮಾರು ೧೩೧ ಕೈಗಾರಿಕೆಗಳು ಹಾನಿಯಲ್ಲಿವೆ. ಈ ಎಲ್ಲಾ ಕೈಗಾರಿಕೆಗಳು ಡಿ.ಸಿ.ಸಿ. ಬ್ಯಾಂಕಿನವರಿಗೆ ಸುಮಾರು ೬೦ ರಿಂದ ೭೦ ಕೋಟಿ ರೂಪಾಯಿ ಕೊಡಬೇಕಾಗಿದೆ. ಈ ಹಣ ಬರದೇ ಇದ್ದರೆ ಡಿ.ಸಿ.ಸಿ. ಬ್ಯಾಂಕಿನವರು ಸಹ ಮುಚ್ಚಬೇಕಾಗುತ್ತದೆ. ಇವೆಲ್ಲಾ ರೈತರ ಇಂಡಸ್ಟ್ರಿಗಳಾಗಿರುವುದರಿಂದ ಇವುಗಳನ್ನು ಮುಚ್ಚುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ಒಂದಾವರ್ತಿ ಸೆಟ್ಲ್‌ಮೆಂಟ್ ಮಾಡಿ ದುಡ್ಡು ತುಂಬದಿದ್ದರೆ ಖಂಡಿತವಾಗಿ ಎಲ್ಲಾ ಕೈಗಾರಿಕೆಗಳು ಮುಚ್ಚುತ್ತವೆ. ಇವತ್ತಿನ ದಿವಸ ಹೊಸದಾಗಿ ಒಂದು ಟೆಕ್ಸ್‌ಟೈಲ್‌ನ್ನು ಪ್ರಾರಂಭಮಾಡಬೇಕಾದರೆ ಸುನಮಾರು ೫೦ ರಿಂದ ೬೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇವುಗಳನ್ನು ಅಭಿವೃದ್ಧಿಪಡಿಸುವ ಕಡೆ ಸರ್ಕಾರ ಲಕ್ಷ ಕೊಡುತ್ತಿಲ್ಲ. ನನಗೆ ತಿಳಿದ ಮಟ್ಟಿಗೆ ಇವರ ಹತ್ತಿರ ಹಣ ಇಲ್ಲವೆಂದು ಕಾಣುತ್ತದೆ ರೈತರಿಗೋಸ್ಕರವಾದರೂ ಇವುಗಳನ್ನು ಉಳಿಸಿಕೊಳ್ಳಿ ಎಂದು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ರಾಜ್ಯದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ಒಂದೆರಡು

ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಲೋಕಾಯುಕ್ತಕ್ಕೆ ವೆಂಕಟಾಚಲ ಎಂಬ ಒಳ್ಳೆಯ ಮತ್ತು ಪ್ರಾಮಾಣಿಕ ಅಧಿಕಾರಿಯನ್ನು ನೇಮಕ ಮಾಡಿದ್ದಾರೆ. ಇದನ್ನು ನಾವೂ ಕೂಡ ಮೆಚ್ಚುತ್ತೇವೆ. ಭ್ರಷ್ಟಾಚಾರ ಇರುವಂಥ ಕಡೆ ಇವರು ಹೋಗುವುದಕ್ಕೆ ಹೇಳಬೇಕು. ಇವತ್ತಿನದಿವಸ ನಮ್ಮ ರಾಜ್ಯದಲ್ಲಿ ಭ್ರಷ್ಟಾಚಾರ ಶಿಷ್ಟಾಚಾರವಾಗಿದೆ. ಹಿಂದೆ ನಾವು ಎಂದೂ ಕಾಣದಂಥ ಭ್ರಷ್ಟಾಚಾರವನ್ನು ನಮ್ಮ ರಾಜ್ಯದಲ್ಲಿ ಕಾಣುತ್ತಿದ್ದೇವೆ. ಇದಕ್ಕೊಂದು ಕಡಿವಾಣ ಹಾಕದೇ ಇದ್ದರೆ ನಾವು ಹಾಕಿಕೊಂಡಿರತಕ್ಕಂಥ ಯೋಜನೆಗಳು ಸಫಲವಾಗುವುದಿಲ್ಲ. ಈಗಾಗಲೇ ಶೇಕಡ ೭೦ ಭಾಗದಷ್ಟು ಹಣ ನೌಕರರಿಗೋಸ್ಕರ ಮತ್ತು ನಮಗೂ ಕೊಡತಕ್ಕಂಥ ಸಂಬಳವೂ ಸೇರಿದಂತೆ ಖರ್ಚಾಗುತ್ತಿದೆ. ಉಳಿದ ೩೦ ಭಾಗದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕಾಗಿದ್ದು ಇದರಲ್ಲಿ ೧೫ ಭಾಗ ತಿಂದು ಹಾಕುತ್ತಿದ್ದಾರೆ. ಉಳಿದ ೧೫ ಭಾಗದಲ್ಲಿ ಮಾತ್ರ ನಾವು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗ ಮಾಡುತ್ತಿದ್ದೇವೆ. ಈ ಒಂದು ಹಿನ್ನಲೆಯಲ್ಲಿ ಬಸವಣ್ಣನವರು ಏನು ಹೇಳಿದ್ದಾರೆಂದರೆ,

"ಕಾಂಚನವೆಂಬ ನಾಯ ನಚ್ಚಿ, ನಿಮ್ಮ ನಾನು ಮರೆದೆನಯ್ಯಾ ಕಾಂಚನಕ್ಕೆ ವೇಳೆಯಲ್ಲದೇ, ಲಿಂಗಕ್ಕೆ ವೇಳೆಯಿಲ್ಲಹುದು ಹಡಕೆಗೆ ಮೆಚ್ಚಿದ ಸೊಣಗನನು ಅಮೃತದ ರುಚಿಯ ಬಲ್ಲುದೆ ಕೂಡಲ ಸಂಗಮದೇವ?" ಹಡಿಕೆ ಎಂದರೆ ನಮ್ಮ ರಾಜ್ಯದಲ್ಲಿ ಲಂಚ ತಿನ್ನುವವರು ಎಲುಬು ತಿನ್ನುವ ನಾಯಿಯಾಗಿದ್ದಾರೆಂದು ಬಸವಣ್ಣನವರು ಹೇಳಿದ್ದಾರೆ. ಇದರಲ್ಲಿ ಅಧಿಕಾರೇತರರು ಇರಬಹುದು ಅಥವಾ ಅಧಿಕಾರಿಗಳು ಇರಬಹುದು. ಇದೇ ರೀತಿಯಾಗಿ ದಾಸರೂ ಕೂಡ ಒಂದು ಪದವನ್ನು ಹೇಳಿದ್ದಾರೆ.

ಶ್ರೀಮತಿ ಮೋಟಮ್ಮ (ಮಕ್ಕಳ ಮತ್ತು ಮಹಿಳೆಯರ ಕಲ್ಯಾಣ ಇಲಾಖಾ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ಈ ಸಂದರ್ಭದಲ್ಲಿ ನಾನೊಂದು ವಚನವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ,

"ಇದಿರ ಹಳಿಯಬೇಡ ತನ್ನ ಬಣ್ಣಿಸಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ"

ಇದಾಗುತ್ತದೆ ನಿಮ್ಮ ಚರ್ಚೆಯಿಂದ

ಶ್ರೀ ಎಸ್.ಎಸ್. ಪಾಟೀಲ್ :— ಇದೇ ಬಸವಣ್ಣನವರು ಏನು ಹೇಳಿದ್ದಾರೆಂದರೆ,

"ಬೈದವರನ್ನು ನಿಮ್ಮ ಬಂಧುಗಳೆನ್ನಯ್ಯಾ :
ನಿಂದಿಸುವವರನ್ನು ತಂದೆ-ತಾಯಿಗಳೆನ್ನಯ್ಯಾ :
ಜರಿದವರನ್ನು ಜನ್ಮ ಬಂಧುಗಳೆನ್ನಯ್ಯಾ :"

ಇದನ್ನೆಲ್ಲಾ ತಾವು ಓದಬೇಕು. ಇದು ನಿಂದನೆ ಅಲ್ಲ. ನೇರವಾಗಿ ಇರುವಂಥದನ್ನು ಹೇಳುತ್ತಿದ್ದೇನಷ್ಟೆ. ನಿಂದನೆ ಮಾಡಿಕೊಳ್ಳುವವರ ಬಗ್ಗೆ ದಾಸರು ಏನು ಹೇಳಿದ್ದಾರೆಂದರೆ

"ಹಂದಿ ಬೇಕು ಹಂದಿ ಬೇಕು, ಕೇರಿಗೊಂದು ಹಂದಿ ಬೇಕು" ನಿಂದಕರ ಬಗ್ಗೆ ಬಸವಣ್ಣನವರು ಮತ್ತು ದಾಸರು ಹೇಳಿರುವುದನ್ನು ತಮ್ಮ ಮುಂದೆ ಹೇಳಿದ್ದೇನೆ. ಹಾಗೆಯೇ ದಾಸರು ಹೇಳಿರುವಂಥದನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಅದೇನೆಂದರೆ,

"ದುಗ್ಗಾಣಿ ಬಲು ಕೆಟ್ಟದಣ್ಣ, ದುಗ್ಗಾಣಿ ಬಲು ಕೆಟ್ಟದು :
ಆಚಾರ ಹೇಳುವುದು ದುಗ್ಗಾಣಿ :
ಬಹು ನೀಚರನ್ನಾಗಿ ಮಾಡುವುದು ದುಗ್ಗಾಣಿ :"

ಇವತ್ತಿನದಿವಸ ಈ ದುಗ್ಗಾಣಿ ನಮ್ಮನ್ನೆಲ್ಲಾ ನೀಚರನ್ನಾಗಿ ಮಾಡಿಸಿದೆ. ನಮ್ಮ ರಾಜ್ಯದಲ್ಲಿ ಹಿಂದೆ ಕಾಣದಂಥ ಬರಗಾಲ ಈ ಸಾರಿ ಕಾಣುತ್ತಿದ್ದೇವೆ. ಹಾಗೆಯೋ ಹಿಂದೆ ಕಾಣದಂಥ ಭ್ರಷ್ಟಾಚಾರ ಈಗ ಇದೆ. ಎನ್ನತಕ್ಕಂಥದನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವೆಲ್ಲರೂ ಕೂಡ ಇದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಆದೆ ಇದರಲ್ಲಿ ಆಡಳಿತ ನಡೆಸತಕ್ಕಂಥವರ ಜವಾಬ್ದಾರಿ ನೇರವಾಗಿರುತ್ತದೆ. ಭ್ರಷ್ಟಾಚಾರ ನಿಲ್ಲಿಸುವುದಕ್ಕೆ ಅಥವಾ ಕಂಟ್ರೋಲ್ ತಾವು ಪ್ರಯತ್ನ ಮಾಡಬೇಕು. ಇದನ್ನು ತಾವು ಮಾಡದೇ ಹೋದರೆ ಮುಂದಿನ ದಿನಗಳಲ್ಲಿ ಯಾರು ಯಾರು ಭ್ರಷ್ಟಾಚಾರ ಮಾಡುತ್ತಿದ್ದಾರೆ ಎಂದು ನೇರವಾಗಿ ಹೇಳುವಂಥ ಮಟ್ಟಿಗೆ ನಾವು ಮುಟ್ಟುತ್ತೇವೆ ಎನ್ನತಕ್ಕಂಥದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಉಪಾಧ್ಯಕ್ಷರೆ ಎಲ್ಲರೂ ಭ್ರಷ್ಟಾಚಾರಿಗಳೆಂದರೆ ಹೇಗೆ?

ಶ್ರೀ ಎಸ್.ಎಸ್. ಪಾಟೀಲ್ :— ನಾನು ಆ ರೀತಿಯಾಗಿ ಹೇಳಿಲ್ಲ, ಭ್ರಷ್ಟಾಚಾರ ರಾಜ್ಯದಲ್ಲಿ ಇದೆಯೆಂದು ಹೇಳಿದ್ದೇನೆ. 'ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡರಂತೆ' ಪ್ರಸಂಗ ಬಂದಾಗ ಅದನ್ನು ಮುಂದೆ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್ ಸಿಂಧ್ಯಾ :— ಮಾನ್ಯ ಉಪಾಧ್ಯಕ್ಷರೆ, ಆತರಹ ಕ್ಲೀನ್ ಚಿಟ್ ಅನ್ನು ಯಾರೂ ಕೊಡುವುದಕ್ಕೆ ಬರುವುದಿಲ್ಲ. ನಿಮಗೆ ಅಷ್ಟೊಂದು ಸೆನ್ಸಿಟೀವ್ ಆಗಿದ್ದರೆ ಈವತ್ತು ಪ್ರಮುಖವಾದ ಪತ್ರಿಕೆಗಳಲ್ಲಿ ಒಂದು ವಿಚಾರ ಪ್ರಸ್ತಾಪವಾಗಿದೆ. ಯಾರೋ ಒಬ್ಬ ಹಿರಿಯ ಮಂತ್ರಿಗಳ 25 ಲಕ್ಷ ರೂಪಾಯಿಗಳನ್ನು ಅಮೇರಿಕಕ್ಕೆ ತಮ್ಮ ಸಂಬಂಧಿಕರಿಗೆ ಕಳುಹಿಸುವುದಕ್ಕೆ ಹವಾಲಾಗಿ ಕಳುಹಿಸುತ್ತಿದ್ದರು. ಡಕಾಯಿತಿಗಳು ಹೋಗಿ ಟಾಟಾ ಸುಮೋದಿಂದ ಆ 25 ಲಕ್ಷ ರೂಪಾಯಗಳನ್ನು ಎತ್ತಿಕೊಂಡು ಹೋದರು. ಮೋಬೈಲ್‌ನಿಂದ

ಮಂತ್ರಿಗಳಿಗೆ ದೂರವಾಣಿಯನ್ನು ಮಾಡಿದರು, ಅದು ಬ್ಲಾಕ್ ಮನಿ ಆಗಿರುವುದರಿಂದ ಪೊಲೀಸ್ ಕಂಪ್ಲೆಂಟ್ ಕೊಡುವುದಕ್ಕೆ ಹೋಗಬೇಡಿ ಎಂದು ಹೇಳಿದ್ದು ಅದು ಪತ್ರಿಕೆಗಳಲ್ಲಿ ವರದಿಯಾಗಿದೆ ಇಂದಿರಾನಗರದ ಪೋಲೀಸ್ ಠಾಣೆಯಲ್ಲಿ ಇದಾಯಿತು. ನಿನ್ನೆ ಸಂಜೆ ಪತ್ರಿಕೆಯಲ್ಲೂ ಸಹ ವರದಿಯಾಗಿದೆ. ನಾನು ನನ್ನ ಭಾಷಣವನ್ನು ಪೂರ್ಣಗೊಳಿಸುತ್ತೇನೆ, ತಾವು ದಯಮಾಡಿ ಕೇಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ :— ತಾವು ದಾಖಲೆಯನ್ನು ಕೊಡಬೇಕು. ತಾವು ಅಧ್ಯಕ್ಷರಿಗೆ ಒಂದು ನೋಟೀಸನ್ನಾದರೂ ಕೊಡಬೇಕಲ್ಲವೇ? ಹಾಗೆಯೇ ಹೇಳಿಬಿಡುವುದೇ?

ಶ್ರೀ ಪಿ.ಜಿ.ಆರ್ ಸಿಂಧ್ಯಾ :— ತಾವು ನನಗೆ ವಿಷಯವನ್ನು ಹೇಳುವುದಕ್ಕೆ ಸಹಕಾರವನ್ನು ಕೊಡಬೇಕು. ನಾನು ಏನು ಹೇಳುತ್ತಿದ್ದೇನೆಂದರೆ, ಅಷ್ಟೊಂದು ಸೆನ್ಸಿಟೀವ್ ಆಗಿ ಮಾನ್ಯ ಚಂದ್ರೇಗೌಡರು ಹಾಗೂ ಅವರ ಸರ್ಕಾರ ಇರುವುದಾದರೆ, ನಾನು ವೈಯಕ್ತಿಕವಾಗಿ ಹೇಳುತ್ತಿದ್ದೇನೆ. ನಾನು ನೋಟೀಸ್ ಕೊಟ್ಟು ಭ್ರಷ್ಟಾಚಾರದ ಬಗ್ಗೆ ಮಾತನಾಡಬಹುದುತ್ತು. ಆದರೆ ನಾನು ಅದಷ್ಟು ಭ್ರಷ್ಟಾಚಾರದ ಬಗ್ಗೆ ಕಡಿಮೆ ಮಾತನಾಡುತ್ತೇನೆ. ಏಕೆಂದರೆ, ನಮ್ಮ ವ್ಯವಸ್ಥೆ ಏನು ಎಂಬುದು ನನಗೆ ಗೊತ್ತಿದೆ. ಅವರು ವೇಗ್‌ಆಗಿ ಹೇಳಿದರು, ಟರ್ಮನ್ನು ಅವರು ಜನರಲೈಸ್ ಆಗಿ ಮಾಡಿದರು. ಸದನ ಹಾಗೂ ನಾವು ಎಲ್ಲರೂ ಎಂದ ಮಾನ್ಯ ಎಸ್.ಎಸ್. ಪಾಟೀಲರು ಮಾತನಾಡಿದರು. ನೀವು ಅಷ್ಟೊಂದು ಸೆನ್ಸಿಟೀವಾಗಿದ್ದರೆ ಒಂದು ಕ್ಲಾರಿಫಿಕೇಷನ್ ಕೊಟ್ಟು ಯಾವ ಮಂತ್ರಿಗಳು ಭ್ರಷ್ಟಾಚಾರಿಗಳಲ್ಲವೆಂದು ಹೇಳಬೇಕು. ನಾನೇಕೆ ನೋಟೀಸನ್ನು ಕಳುಹಿಸಿಕೊಡಲಿ, ಪತ್ರಿಕೆಗಳಲ್ಲಿ ಬಂದಿದೆ. ಯಾರೋ ಮಂತ್ರಿ ಎಂದು ಜನರು ಗುಸುಗುಸು ಮಾತನಾಡುತ್ತಿದ್ದಾರೆ. ಅಂದು ಯಾರು ಎಂದು ನೀವೇ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ :— ಪತ್ರಿಕೆಗಳಲ್ಲಿ ಬಂದಿರುವುದೆಲ್ಲದಕ್ಕೂ ಪ್ರತಿಕ್ರಿಯಿಸುವುದು ಸರ್ಕಾರದ ಕರ್ತವ್ಯವಲ್ಲ. ಮಾನ್ಯ ಸದಸ್ಯರು ಏನಾದರೂ ವಿಷಯ ಎತ್ತಿದರೆ ಹೇಳಬಹುದು ಏನು ಎನ್ನುವುದು ನಮಗೆ ಗೊತ್ತಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಉಪಾಧ್ಯಕ್ಷರೆ, ಅವರ ಪ್ರಕಾರ ನಡೆದುಕೊಳ್ಳೋಣ. ಆ ಮಾತು ಬೇರೆ. ಯಾರ್‍ಯಾರು ಏನು ಇದ್ದಾರೆಂದು ಬಯಲಿಗೆ ಬೀಳುತ್ತದೆ. ನೋಟೀಸ್ ಕೊಟ್ಟು ಯಾವ ಮಂತ್ರಿಗಳು ಎಷ್ಟು ಹಣ ಹೊಡೆಯುತ್ತಾರೆ ಎನ್ನುವುದರ ಬಗ್ಗೆ ಹೇಳುವ ಕಾಲ ಬಹಳ ದೂರವಿಲ್ಲ. ರಾಜ್ಯದಲ್ಲಿ ಇವತ್ತು ಭ್ರಷ್ಟಾಚಾರವಿದೆ ಎಂದು ಹೇಳಿದ್ದೇನೆ.

ಉಪಾಧ್ಯಕ್ಷರು :— ಮಾನ್ಯ ಪಾಟೀಲರೆ, ಆ ವಿಷಯದ ಬಗ್ಗೆ ಮಾತನಾಡುವುದು

ಅವಶ್ಯಕತೆ ಇಲ್ಲ. ಮಾತನಾಡುವುದನ್ನು ಮಾತನಾಡಿ ಬಿಟ್ಟಿದ್ದೀರಿ. ಒಂದೂವರೆ ಗಂಟೆಯಿಂದ ಮಾತನಾಡಿದ್ದೀರಿ, ನೀವು ಇನ್ನು ಎಷ್ಟು ಗಂಟೆ ಮಾತನಾಡುತ್ತೀರಿ. ನಿಮ್ಮ ಸಮಯ ಮುಗಿದು ಹೋಗಿದೆ. ನಾನು ಮಾನ್ಯ ಜಯಪ್ರಕಾಶ್ ಹೆಗಡೆಯವರನ್ನು ಮಾತನಾಡಲು ಕರೆದಿರುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ :— ನಾನು ಎಲ್ಲವನ್ನೂ ಹೇಳಿದ್ದೇನೆ.

ಉಪಾಧ್ಯಕ್ಷರು :— ಹಾಗಾದರೆ ನೀವು ಮತ್ತೆ ಏಕೆ ಮಾತನಾಡುತ್ತೀರಿ, ನಿಮ್ಮ ಭಾಷಣದ ಸಮಯ ಮುಗಿದಿದೆ. ಬೇರೆಯವರಿಗೆ ಅವಕಾಶವನ್ನು ಮಾಡಿಕೊಡಬೇಕಾಗಿದೆ. ನಿಮ್ಮ ನಾಯಕರು ನಿಮಗೆ ಹೆಚ್ಚಿಗೆ ಸಮಯವನ್ನು ಕೊಡಿ ಎಂದು ಹೇಳಿದ್ದಕ್ಕಾಗಿ ನಿಮಗೆ ಒಂದೂವರೆ ಗಂಟೆಗಳ ಕಾಲಾವಕಾಶವನ್ನು ಕೊಡಲಾಗಿದೆ. ನಾವು ಕಡಿಮೆ ಮಾತನಾಡುತ್ತೇವೆ, ನಿಮಗೆ ಹೆಚ್ಚು ಅವಕಾಶ ಕೊಡಿ ಎಂದು ಹೇಳಿದ್ದರು. ಶ್ರೀ ಪಾಟೀಲರೇ ತಾವು ದಯಮಾಡಿ ಕುಳಿತುಕೊಳ್ಳಬೇಕು. ಶ್ರೀ ಜಯಪ್ರಕಾಶ್ ಹೆಗಡೆಯವರೇ, ನೀವು ಮಾತನಾಡಿ.

ಶ್ರೀ ಎಸ್.ಎಸ್. ಪಾಟೀಲ್ :— ನಿಮಗೆ ನಾನು ವಂದನೆಯನ್ನು ಹೇಳಬಾರದೇ? ಏನು ಎನ್ನುವುದರ ಬಗ್ಗೆ ನಾನು ಕೊನೆಯಲ್ಲಿ ಹೇಳಬೇಕಲ್ಲವೇ? ಬೇಡವೆಂದರೆ ನಾನು ಹೇಳುವುದನ್ನು ಬಿಡುತ್ತೇನೆ.

ಉಪಾಧ್ಯಕ್ಷರು :— ತಾವು ಬೇಗ ಕುಳಿತುಕೊಂಡರೆ ನಮಗೆ ವಂದನೆಯನ್ನು ಹೇಳಿದಂತಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ :— ಅಂದರೆ ಇದನ್ನು ಕೇಳುವುದಕ್ಕೆ ತಮಗೂ ಮನಸಿಲ್ಲ.

ಉಪಾಧ್ಯಕ್ಷರು :— ಇಲ್ಲವೆಂದು ತಿಳಿದುಕೊಳ್ಳಿ

+ ಶ್ರೀ ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) :— ಮಾನ್ಯ ಉಪಾಧ್ಯಕ್ಷರೆ, ಅವರು ಕೊನೆಯಲ್ಲಿ ಪ್ರಾರಂಭ ಮಾಡಿದ ವಿಷಯದ ಬಗ್ಗೆ ನಾನು ಒಂದು ಮಾತನ್ನು ಹೇಳಿ ಮುಗಿಸಿ ಬಿಡುತ್ತೇನೆ. ಎಲ್ಲಾ ಬುಡದಲ್ಲಿ ಲೀಕ್ ಆದರೆ, ಗೌರ್ನಮೆಂಟ್ ಮಾತ್ರ ಟಾಪ್‌ನಲ್ಲಿ ಲೀಕ್ ಆಗುವುದು. ಆದರೆ ಯಾವಾಗಲೂ ಸತ್ಯವನ್ನು ಹೇಳಿದರೆ ನೋವಾಗುತ್ತದೆ. ಅದನ್ನು ನಿಯಂತ್ರಣ ಮಾಡುವುದಕ್ಕೆ ಎಷ್ಟು ಸಾಧ್ಯವಾಗುತ್ತದೆ ಅಷ್ಟು ಮಾಡಬೇಕು. ಪ್ರತಿ ಸದನದಲ್ಲಿ ಅನೇಕ ವಿಷಯಗಳ ಬಗ್ಗೆ ನಾವು ಚರ್ಚೆಯನ್ನು ಮಾಡುತ್ತೇವೆ. ಯಾವ ಒಬ್ಬ ಮಂತ್ರಿಗಳಿಗೂ ಉತ್ತರವನ್ನು ಹೇಳುವುದಕ್ಕೆ ಅವಕಾಶ ಸಿಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಎಲ್ಲವನ್ನೂ ಉತ್ತರಿಸುವುದರಿಂದ ಸಂಬಂಧಪಟ್ಟ ಮಂತ್ರಿಗಳು ಸದನಕ್ಕೆ

ಬರಬೇಕೆಂದು ಏನೂ ಇಲ್ಲ. ಈ ಒಂದು ಪರಿಸ್ಥಿತಿ ನಿರ್ಮಾಣವಾಗಿಬಿಟ್ಟಿದೆ. ನಾನು ಮುಖ್ಯಮಂತ್ರಿಗಳಲ್ಲಿ ಕೇಳಿಕೊಂಡಿದ್ದೆ. ಮುಂದಿನ ಸದನದಲ್ಲಾದರೂ ಸಂಬಂಧಪಟ್ಟ ಇಲಾಖಾ ಮಂತ್ರಿಗಳಿಂದ ಉತ್ತರವನ್ನು ಕೊಡಿಸಿದರೆ, ಅವರು ಏನೇನು ಮಾಡಿದ್ದಾರೆಂದು ನಮಗೆ ಹಾಗೂ ರಾಜ್ಯದ ಜನತೆಗೆ ವಿಷಯ ತಿಳಿಯುವುದಕ್ಕೆ ಗೊತ್ತಾಗುತ್ತದೆ. ಮಾನ್ಯ ಮೀನುಗಾರಿಕೆ ಸಚಿವರು ಇಲ್ಲೇ ಇರುತ್ತಾರೆ. ನಾನೂ ಕೂಡ ಹಿಂದಿನ ಸರ್ಕಾರದಲ್ಲಿ ಮೀನುಗಾರಿಕೆ ಸಚಿವನಾಗಿ ಕೆಲಸವನ್ನು ಮಾಡಿರುತ್ತೇನೆ. ಕಳೆದ ಎರಡು ವರ್ಷಗಳಲ್ಲಿ ಏನು ಹೊಸ ಕಾರ್ಯಕ್ರಮಗಳನ್ನು ಹಾಕಿ ಕೊಂಡಿದ್ದಾರೆ? ಏನು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಿದ್ದಾರೆಂದು ಅವರು ಉತ್ತರವನ್ನು ಹೇಳಿದರೆ, ನನಗೆ ಸಮಾಧಾನವಾಗುತ್ತಿದೆ. ಏಕೆಂದರೆ, ನಾವು ಹಿಂದೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೆವು, ಅದರ ಬಗ್ಗೆ ಎರಡು ವರ್ಷದಿಂದ ಇವರು ಹೇಳಿಕೆಯನ್ನು ಕೊಡುವುದನ್ನು ಬಿಟ್ಟರೆ ಯಾವುದೇ ಒಂದು ಹೊಸ ಕಾರ್ಯಕ್ರಮವನ್ನೂ ಇವರು ಹಾಕಿಲ್ಲ. ಮಲ್ಪೆ ಎರಡನೇ ಹಂತದ ಬಗ್ಗೆ ಹೇಳಿದ್ದಾರೆ, ಡೀಸಲ್ ಸಬ್ಸಿಡಿ ಬಗ್ಗೆ ಹೇಳಿದ್ದಾರೆ. ಸೇಲ್ಸ್ ಟ್ಯಾಕ್ಸ್ ವಿನಾಯಿತಿಯ ಬಗ್ಗೆ ಹೇಳಿದ್ದಾರೆ. ಮಾನ್ಯ ಸಚಿವರಿಗೆ ನಾನು ಒಂದು ಕಿವಿ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೀನುಗಾರರಿಗೆ ಡೀಸಲ್ ಮೇಲೆ ಸೇಲ್ಸ್ ಟ್ಯಾಕ್ಸ್ ವಿನಾಯಿತಿ ಕೊಡಲಾಯಿತು. ಪ್ರತಿವರ್ಷ ಅವರು ಅದೇ ಬೇಡಿಕೆಯನ್ನು ಇಡುವುದಕ್ಕಿಂತ ಇದೊಂದು ತಮ್ಮ ಇಲಾಖೆಯ ಕಾರ್ಯಕ್ರಮವೆಂದು ಹಾಕಿಕೊಂಡು ಬಿಟ್ಟರೆ, ಅವರು ಮುಂದಿನ ವರ್ಷದಿಂದ ಇದನ್ನು ಕೊಡಿ ಎಂದು ಕೇಳುವ ಪ್ರಸಂಗ ಉದ್ಭವವಾಗುವುದಿಲ್ಲ. ದಯಮಾಡಿ, ಅವರು ಪ್ರತಿವರ್ಷ ಬಂದು ನಿಮ್ಮನ್ನು ಕೇಳುವುದು, ಹೇಳಿಕೆ ಕೊಟ್ಟು ಪುನ: ಧನ್ಯವಾದಗಳನ್ನು ನೀವು ಹೇಳುವುದನ್ನು ನಿಲ್ಲಿಸಬೇಕು. ಇದೊಂದು ಶಾಶ್ವತವಾದ ಕಾರ್ಯಕ್ರಮವೆಂದು ನಿಮ್ಮ ಇಲಾಕೆಯ ಒಂದು ಪ್ಲಾನ್‌ನಲ್ಲಿ ಬಂದು ಬಿಡಲಿ. ಮಲ್ಪೆ ಎರಡನೆ ಹಂತವಾಗಲಿ, ಅಳವೆಕೋಡಿದಾಗಲಿ ಮಂಗಳೂರು ಅಥವಾ ಕಾರವಾರದ್ದಾಗಲಿ ಏನಾದರೂ ಇದ್ದರೆ ಹೇಳಿ. ಹಿಂದಿನ ಸರ್ಕಾರದಲ್ಲಿ ಮಂಜೂರಾತಿಗಾಗಿ ಕೇಂದ್ರದ ಅನುಮೋದನೆಯನ್ನು ನೀಡಿ ನಿಮ್ಮ ಸಚಿವ ಸಂಪುಟದಲ್ಲಿ ಅನುಮೋದನೆಯನ್ನು ಕೊಟ್ಟು ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದು, ನೀವು ಏನೂ ಮಾಡಿಲ್ಲವೆಂದು ಹೇಳುತ್ತೇನೆ. ನೀವು ಹೊಸದಾಗಿ ಪ್ರಾರಂಭ ಮಾಡಿದ್ದು "ಮತ್ಸ್ಯ ವಾಹಿನಿ" ಕಾರ್ಯಕ್ರಮ. ಅದನ್ನು ಸಹ ನಾವು ಹಾಕಿಕೊಂಡಿದ್ದೆವು. ನೀವು ಅದನ್ನು ಮಾಡಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಉಪಾಧ್ಯಕ್ಷರೆ, ಇವರು ಮೀನುಗಾರಿಕೆ ಸಚಿವರಾಗಿದ್ದರು ಎನ್ನುವುದು ನಮಗೆ ಗೊತ್ತೇ ಆಗಲಿಲ್ಲ. ಇವರು ಆಗಿದ್ದರು ಎನ್ನುವದಕ್ಕೆ ಇವರು ಮೀನಿನ ಊಟ ಹಾಕಿಸಿದ್ದರಿಂದ ಗೊತ್ತಾಯಿತು.

+ ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ತಾವು ಆಗ ಈ ಸದನದಲ್ಲಿ ಇರಲಿಲ್ಲ, ತಾವು ಇದ್ದರೆ ನಾನು ದಿನನಿತ್ಯ ಊಟವನ್ನು ಹಾಕಿಸುತ್ತಿದ್ದೆನು. ನಾವು ಹಿಂದೆ ದಿನಾಲೂ ಮೀನನ್ನು ತರಿಸಿ ಊಟವನ್ನು ಮಾಡುತ್ತಿದ್ದೆವು.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಉಪಾಧ್ಯಕ್ಷರೆ, ಹಿಂದಿನ ಸರ್ಕಾರದಲ್ಲಿ ಒಂದು ಒಳ್ಳೆಯ ಸಂಪ್ರದಾಯವಿತ್ತು. ಶಾಸಕರು ಒಳ್ಳೆಯ ಕರ್ತವ್ಯವನ್ನು ಮಾಡಬೇಕು, ಅವರು ಊಟಕ್ಕೆ ಹೋಗಿ ಸಮಯವನ್ನು ಹಾಳು ಮಾಡಿಕೊಳ್ಳಬಾರದೆಂದು ಎಲ್ಲಾ ಮಂತ್ರಿಗಳು ಇಲ್ಲಿಯೇ ಊಟದ ವ್ಯವಸ್ಥೆಯನ್ನು ಮಾಡಿದ್ದರು. ಆದರೆ ಈ ಸರ್ಕಾರದ ಮಂತ್ರಿಗಳು ಅದನ್ನು ಮರೆತುಬಿಟ್ಟಿದ್ದಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :— ರಾಜ್ಯದಲ್ಲಿ ಬರಗಾಲ ಬಂದಿರುವುದರಿಂದ ಮಂತ್ರಿಗಳಿಗೂ ಕೂಡ ಬರ ಬಂದಿರುತ್ತದೆ. ಒಂದು ದಿನ ಕೂಡ ಊಟದ ಸಂಪ್ರದಾಯ ಈ ಸಾರಿಯ ಸದನದಲ್ಲಿ ಕಾಣಲಿಲ್ಲ.

ಶ್ರೀ ಜಯಪ್ರಕಾಶ್ ಹೆಗಡೆ :— ಮಾನ್ಯ ಉಪ್ಯಾಕ್ಷರೆ, ಇನ್ನೊಂದು ವಿಷಯ ಸಮುದ್ರದ ತಡೆಗೋಡೆಯ ಬಗ್ಗೆ 141 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಹಿಂದೆ ನಾವು ನಮ್ಮ ಸರ್ಕಾರ ಇದ್ದಾಗ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದೆವು. ಕಳೆದ ತಿಂಗಳಿನವರೆಗೆ ಇವರು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆಂದು ಹೇಳಿಕೊಂಡು ಬಂದರು. ಇದರಲ್ಲಿ ನಮ್ಮ ಸಂಸದರ ಒಂದು ಹೇಳಿಕೆ ಇದೆ. 141 ಕೋಟಿ ರೂಪಾಯಿಗಳ ಶಾಶ್ವತ ತಡೆ ಗೋಡೆಯ ಬಗ್ಗೆ ಕೇಂದ್ರದ ಅನುಮತಿ ಎಂದು ಇದೆ. ಮಾನ್ಯ ಮೀನುಗಾರಿಕೆ ಸಚಿವರ ಇನ್ನೊಂದು ಹೇಳಿಕೆಯನ್ನು ಓದುತ್ತೇನೆ. ``The State Government had sent Rs.175 crores proposal to the Union Government for construction of Sea Wall in the coastal districts" ಈ ಎರಡರಲ್ಲಿ ನಾವು ಯಾವುದನ್ನು ನಂಬಬೇಕು, ಸಚಿವರು ತಮ್ಮ ಪವರ್‌ನ್ನು ಸಂಸದರಿಗೆ ಡೆಲಿಗೇಟ್ ಮಾಡಿ, ಅವರನ್ನು ಸರ್ಕಾರದ ಸ್ಪೋಕ್ಸ್‌ಮೆನ್ ಎಂದು ಮಾಡಿದ್ದಾರೆಯೇ? ಇದರ ಬಗ್ಗೆ ಸ್ವಲ್ಪ ಮಾಹಿತಿಯನ್ನು ಕೊಡಬೇಕು. ಮೀನುಗಾರಿಕೆ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಹೇಳಿಕೆಗಳನ್ನು ಸಂಸದರು ಕೊಡುತ್ತಿದ್ದಾರೆ. ಹಿಂದಿನ ಸರ್ಕಾರ ಮಾಡಿದ ಕೆಲಸಗಳ ಬಗ್ಗೆ ಅವರು ಹೇಳಿಕೆಯನ್ನು ಕೊಡುತ್ತಾರೆ. ಈ ಇಲಾಖೆಯ ಬಗ್ಗೆ ಏನಾದರೂ ಹೇಳಿಕೆಯನ್ನು ಕೊಡಬೇಕಾದರೆ, ಮಾನ್ಯ ಮೀನುಗಾರಿಕೆ ಇಲಾಖೆಯ ಸಚಿವರು ಕೊಡುವುದು ಸೂಕ್ತವೆಂದು ಹೇಳುತ್ತೇನೆ. ಇದರ ಬಗ್ಗೆ ಬೇರೆ ಯಾರಿಂದಲಾದರೂ ಹೇಳಿಕೆಯನ್ನು ಕೊಡಿಸುವುದು ಅದು ಸರಿಯಲ್ಲವೆಂದು ನಾನು ಮಾನ್ಯ ಸಚಿವರಿಗೆ ಹೇಳುತ್ತೇನೆ. ವಾರಾಹಿ ಯೋಜನೆಯ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಸಂಸದರು ಹೇಳಿಕೆಯನ್ನು ಕೊಡುತ್ತಿದ್ದಾರೆ. ಮಾನ್ಯ ಸಚಿವರು ಹೇಳಿಕೆಯನ್ನು ಕೊಡುತ್ತಿಲ್ಲ. ಸಂಸದರು ಕೊಡುತ್ತಿರುವ ಹೇಳಿಕೆಯ ಬಗ್ಗೆ ನಾನು ಕೇಳುತ್ತಿರುವುದು. ವಾರಾಹಿ ಯೋಜನೆಗೆ ಏಳು ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಡಿಸೆಂಬರ್ 2000ಕ್ಕೆ ಮುಗಿಯುತ್ತದೆಂದು ಹೇಳಿದ್ದರು. ಅದು 2001ನೇ ಇಸ್ವಿ ಪ್ರಾರಂಭವಾಯಿತು ಆದರೂ ಕೆಲಸ ಪ್ರಾರಂಭವಾಗಲಿಲ್ಲ. ಇದರ ಬಗ್ಗೆ ಗಂಭೀರವಾಗಿ

71

ಆಲೋಚನೆಯನ್ನು ಮಾಡಬೇಕಾಗುತ್ತದೆ. ಇದರ ಬಗ್ಗೆ ಹೇಳಿಕೆಯನ್ನು ಕೊಡುವಾಗ ಸಂಬಂಧಪಟ್ಟ ಮಂತ್ರಿಗಳು ಹೇಳಿಕೆಯನ್ನು ಕೊಡಬೇಕು, ಬೇರೆ ಯಾರೂ ಹೇಳಿಕೆಯನ್ನು ಕೊಡಬಾರದು ಅದು ಸೂಕ್ತವಲ್ಲವೆಂದು ಹೇಳುತ್ತೇನೆ. ಮಾನ್ಯ ಸಚಿವರು ತಮ್ಮ ಪವರ್‌ನ್ನು ಸಂಸದರಿಗೆ ಡೆಲಿಗೇಟ್ ಮಾಡಿದ್ದರೆ ಅವರು ಕೊಡುವ ಹೇಳಿಕೆಯನ್ನು ನಾವು ನಂಬುತ್ತೇವೆ.

1.40 ಪಿ.ಎಂ.

ಇನ್ನು ಮೀನುಗಾರಿಕೆ ರಸ್ತೆಯ ಬಗ್ಗೆ ಹೇಳುವುದಾದರೆ, ಇಡೀ ಕರಾವಳಿ ಪ್ರದೇಶದಲ್ಲಿರುವ ಮೀನುಗಾರಿಕೆಯ ರಸ್ತೆಗಳು ಹಾಳಾಗಿವೆ, ಇದರ ದುರಸ್ಥಿಗೆಂದು 5 ಲಕ್ಷ ರೂಪಾಯಿಗಳನ್ನಿಟ್ಟಿದ್ದಾರೆ. ಖಂಡಿತವಾಗಿ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟರೆ ಎಲ್ಲಾ ರಸ್ತೆಗಳನ್ನು ದುರಸ್ಥಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈವರೆವಿಗೂ ಹೇಳಿಕೆಯನ್ನು ಕೊಡುತ್ತಿದ್ದಾರೆಯೇ ವಿನ: ಅನುದಾನವನ್ನು ಒದಗಿಸಿಲ್ಲ. ಈಗ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಒಂದು ಹೇಳಿಕೆಯನ್ನು ಕೊಟ್ಟರೆ ನಾವು ತಮಗೆ ಅಭಿನಂದನೆಯನ್ನು ಹೇಳುವುದಕ್ಕೆ ಸಾಧ್ಯವಾಗುತ್ತದೆ. ಮಂಗಳೂರು ನಗರಾಭಿವೃದ್ಧಿಯ ಬಗ್ಗೆ ಹೇಳುವುದಾದರೆ, ನಾನು ಒಂದು ವಿಷಯ ಸಮಿತಿಯಲ್ಲಿ ವರದಿಯನ್ನು ಓದಿದ್ದೇನೆ, 1.27 ಕಿ.ಮಿ. ರಸ್ತೆಯನ್ನು ಕಾಂಕ್ರೀಟ್ ಮಾಡುವುದಕ್ಕೆ 2.13 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನಾನು ಇಂಜಿನಿಯರ್ ಅಲ್ಲ, ನಾನು ಈ ಬಗ್ಗೆ ಇಂಜಿನಿಯರ್‌ರವರನ್ನು ಇದಕ್ಕೆ ಎಷ್ಟು ವೆಚ್ಚವಾಗಬಹುದು ಎಂದು ಕನ್‌ಸಲ್ಟ್ ಮಾಡಿದೆ. ಈ ಡ್ರೈನೇಜ್‌ಗೆ ಲೆವೆಲ್‌ಗೆ ಎಲ್ಲದಕ್ಕೂ ಲೆಕ್ಕವನ್ನು ಹಾಕಿದರೆ 4 ಲೈನ್ ಅಂದರೆ 14 ಮೀಟರ್ ಮಾಡಿರಬಹುದು. 1.3 ರೂಪಾಯಿಗಳು ಹೆಚ್ಚೆಂದರೆ 1.50 ಕೋಟಿ ರೂ.ಗಳು ಖರ್ಚಾಗಬಹುದು ಎಂದು ಹೇಳಿದ್ದಾರೆ. ಕಾರ್ಕಳದಿಂದ ಮಂಗಳೂರಿಗೆ ಜಲ್ಲಿ ತರುವುದಕ್ಕೆ ಲೀಡ್‌ನ್ನು ತೆಗೆದುಕೊಂಡಿದ್ದಾರೆ. ಕುಂದಾಪುರದಲ್ಲಿಯೂ ಸಹ ಜಲ್ಲಿಯಿರುತ್ತದೆ, ಅದನ್ನು ಕಳುಹಿಸಿದ್ದರೆ ನಮ್ಮಲ್ಲಿರುವವರಿಗೆ ಸ್ವಲ್ಪ ಆದಾಯ ಹೆಚ್ಚಾಗುತ್ತಿತ್ತು. ಇದರ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು, ಇದರ ಬಗ್ಗೆ ಸರ್ಕಾರದವರು ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಈ ವಿಷಯ ಬಂರುವುದರಿಂದ ಈಗಾಗಲೇ ನಾವು ಗಮನ ಸೆಳೆಯುವ ಸೂಚನೆಯ ಮೂಲಕ ಮೂವ್ ಮಾಡಿದ್ದೇವೆ. ಸರ್ಕಾರದ ಗಮನವನ್ನು ಸೆಳೆಯುವ ಪ್ರಯತ್ನವನ್ನು ಮಾಡಿದ್ದೇವೆ. ಇಷ್ಟೆಲ್ಲಾ ವ್ಯವಸ್ಥೆಗಳನ್ನು ಮಾಡಿದರೂ ಕೂಡ ಮಳೆ ನೀರು ಹರಿದು ಹೋಗುವುದಕ್ಕೆ ಡ್ರೈನೇಜ್ ಆಗಲಿ, ಫುಟಪಾತ್ ವ್ಯವಸ್ಥೆಯಾಗಲಿ, ಇಲ್ಲದಿರುವ ಬಗ್ಗೆ ಸಮಸ್ಯೆಯನ್ನು ಹಾಗೂ ಅಲ್ಲಿ ಆಗುತ್ತಿರುವ ತೊಂದರೆಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ಇದರ ಬಗ್ಗೆ ಎಷ್ಟು ಎಕ್ಸ್‌ಪೆನ್ಸಸ್ ಆಗಿದೆ ಬಿಲ್ಲಿಂಗ್ ಎಷ್ಟು ಆಗಿದೆ, ಮತ್ತು ಎಷ್ಟು ಖರ್ಚಾಗಿದೆ ಇಲ್ಲಿ ಓವರ್ ಬಿಲ್ಲಿಂಗ್ ಆಗಿದೆ ಎನ್ನುವುದರ

ಬಗ್ಗೆ ಸಮಗ್ರವಾಗಿ ತನಿಖೆಯನ್ನು ಮಾಡಬೇಕೆಂದು ಒತ್ತಾಯವನ್ನು ಮಾಡಿದ್ದೇವೆ, ಈ ಒತ್ತಾಯದ ಬಗ್ಗೆ ಸನ್ಮಾನ್ಯ ಸದಸ್ಯರು ವಿಷಯ ಎತ್ತಿರುವುದರಿಂದ ಇದರ ಬಗ್ಗೆ ನಾನು ಆಗ್ರಹಪೂರ್ವಕವಾಗಿ ಸರ್ಕಾರ ಕೂಲಂಕಷವಾಗಿ ತನಿಖೆಯನ್ನು ನಡೆಸಬೇಕು. ವಿಷಯ ಸಮಿತಿಯಲ್ಲೂ ಕೂಡ ಸೂಚಿಸಿ ಹೇಳಿದ್ದಾರೆ. ಈ ಹಿನ್ನಲೆಯಲ್ಲಿ ಸರ್ಕಾರವು ಸಮಗ್ರವಾದ ತನಿಖೆಯನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಮಾನ್ಯ ಉಪಾಧ್ಯಕ್ಷರೆ, ಗೃಹ ಇಲಾಖೆ ಬಗ್ಗೆ ನಿನ್ನೆ ಮತ್ತು ಮೊನ್ನೆ ಇದರ ಬಗ್ಗೆ ಬಹಳಷ್ಟು ಚರ್ಚೆ ನಡೆಯಿತು. ನಾನು ಮಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂದೆ ಹೇಳಿದ್ದೇನೆ. ಮೀನುಗಾರಿಕೆ ಸಚಿವರ ಬಗ್ಗೆ ನಾನು ಯಾವ ಆರೋಪವನ್ನು ಮಾಡಿರುವುದಿಲ್ಲ. ಅಧಿಕಾರಿಗಳನ್ನು ಖಾಯಂ ಆಗಿ ಒಂದೇ ಸ್ಥಳದಲ್ಲಿರುವವರನ್ನು ಗುರುತಿಸಿ ಅವರ ಆ್ಯಂಟಿಸಿಟೆಂಟ್ಸ್ ತಿಳಿದುಕೊಂಡು ವರ್ಗಾವಣೆಯನ್ನು ಮಾಡುವಂತದ್ದು ಬಹಳ ಅವಶ್ಯಕವಾಗಿರುತ್ತದೆ. ಏಕೆಂದರೆ, ಯಾರ್‍ಯಾರು ಎಲ್ಲೆಲ್ಲಿ ಸೇರಿಕೊಂಡಿದ್ದಾರೆನ್ನುವ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳಬೇಕು. ಮಾನ್ಯ ಸುರೇಶ್ ಕುಮಾರ್‌ರವರು ಮೊನ್ನೆ ದಿನ ಮಾತನಾಡುವಾಗ ಹೇಳಿದರು, ಕನ್ವಿಕ್ಷನ್‌ಗೆ 5 ಪರ್ಸೆಂಟ್ ಎನ್ನುವ ಬಗ್ಗೆ ಮಾಹಿತಿಯನ್ನು ಕೊಟ್ಟರು. ಇದಕ್ಕೆ ಒಂದು ಕಾರಣವಿದೆ, ನಮ್ಮಲ್ಲಿ ಒಂದು ಫೋರೆನ್ಸಿಕ್ ಲ್ಯಾಬೋರೋಟರಿ ಇದೆ (ಎಫ್‌ಎಸ್‌ಎಲ್) ಅದು ಈಗ ಸಿಕ್ ಆಗಿದೆ. ಒಂದು ಘಟನೆಯನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಬಳ್ಳಾರಿಯಲ್ಲಿ ನನ್ನ ಕ್ಷೇತ್ರದ ಒಬ್ಬ ಹುಡುಗ ನೀರಿಗೆ ಬಿದ್ದು ಸತ್ತನು. ಅವನ ತಲೆಬುರುಡೆಯನ್ನು 1996 ರಲ್ಲಿ ಫೋರೆನ್ಸಿಕ್ ಲ್ಯಾಬೋರೆಟರಿಗೆ ಕಳುಹಿಸಿದರು. ಕೊನೆಯಪಕ್ಷ ಸಂಸದೀಯ ವ್ಯವಹಾರಗಳ ಸಚಿವರು ಇದನ್ನು ಗಮನಿಸಬೇಕು. ನೀರಿಗೆ ಬಿದ್ದಿದ್ದಾನೆ ಎಂಬ ಬಗ್ಗೆ ಒಂದು ವರದಿಯಿದೆ, ಇನ್ನೊಂದು ಕಡೆ ಕೊಲೆ ಎಂದು ವರದಿಯಾಗಿದೆ. 1994 ರಲ್ಲಿ ಖರೀದಿ ಮಾಡಿದ ಎಲೆಕ್ಟ್ರಾನಿಕ್ ಸ್ಕಲ್ ಐಡೆಂಟಿಫಿಕೇಷನ್ ಡಿವೈಸ್ 1998 ರಲ್ಲಿ ಕೆಟ್ಟುಹೋಗಿದೆ. ಅದನ್ನು ಇವತ್ತಿನವರೆಗೂ ಕೂಡ ದುರಸ್ತಿ ಮಾಡಿರುವುದಿಲ್ಲ. ನಾನು ಇದರ ಬಗ್ಗೆ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಇವರಿಗೆ ದೂರವಾಣಿಯ ಮೂಲಕ ಮಾತನಾಡಿದೆ. ಇದನ್ನು ತಕ್ಷಣ ಇಲ್ಲಿ ದುರಸ್ತಿ ಮಾಡುವುದಕ್ಕಾಗುವುದಿಲ್ಲ. ಹೊರಗಡೆ ಕಳುಹಿಸಿ ದುರಸ್ತಿ ಮಾಡಿಸುತ್ತೇನೆಂದು ಹೇಳಿದರು. ಆದರ ಬಗ್ಗೆ ಇವತ್ತಿನವರೆಗೂ ಕೂಡ ರಿಪೋರ್ಟ್ ಬಂದಿರುವುದಿಲ್ಲ. ಇದಕ್ಕೆ ಒಂದು ಸ್ಪೇರ್ ಇನ್‌ಸ್ಟ್ರುಮೆಂಟ್ ತರಬೇಕು, ಹಾಗೂ ಅಲ್ಲಿ ಇಡಬೇಕೆಂದು ಸರ್ಕಾರದ ಅಧಿಕಾರಿಗಳು ಅಲ್ಲಿರಬೇಕೆಂದು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇವತ್ತಿನವರೆಗೂ ಅಲ್ಲಿ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಅಲ್ಲಿ ಮೋಹನ್ ಎನ್ನುವ ಒಬ್ಬ ಡೈರೆಕ್ಟರ್ ಇದ್ದಾರೆ, ಅವರಿಗೆ ಇನ್ನೂ ಒಂಬತ್ತು ವರ್ಷ ಸರ್ವೀಸ್ ಇದೆ. ಆದರೆ ಬೇರೆ ರಾಜ್ಯದಲ್ಲಿ 400 ರಿಂದ 500 ಜನರಿರುವ ಸಂಸ್ಥೆಯಲ್ಲಿ ಇಲ್ಲಿ ಕೇವಲ 17 ಜನರು ಇದ್ದಾರೆ. 17 ಜನರಲ್ಲಿ

ಗುಂಪುಗಾರಿಕೆಯಾಗಿ ಕೇವಲ ಏಳು ಜನರಿಗೆ ಮಾತ್ರ ಕೆಲಸವನ್ನು ಕೊಡುತ್ತಿದ್ದಾರೆ. ಉಳಿದ 12 ಜನರಿಗೆ ಕೆಲಸವನ್ನು ಕೊಡುತ್ತಿಲ್ಲ. ಇದುವರೆಗೂ ಸರ್ಕಾರ ಈ ಬಗ್ಗೆ ಗಮನವನ್ನು ಹರಿಸಿಲ್ಲ. ಬೇರೆ ಬೇರೆ ಪೆಟ್ರೋಲ್ ಸ್ಯಾಂಪಲ್‌ನ್ನು ಕಳುಹಿಸುತ್ತಾರೆ, ಲಿಕ್ಕರ್ ಸ್ಯಾಂಪಲ್‌ಗಳನ್ನೂ ಸಹ ಕಳುಹಿಸುತ್ತಾರೆ. ಡೌರಿ ಡೆತ್ ಕೇಸ್‌ನಲ್ಲಿ ಇವೆಲ್ಲದರ ಬಗ್ಗೆ ಸ್ಯಾಂಪಲ್‌ಗಳನ್ನು ಕಳುಹಿಸುತ್ತಾರೆ. ಆದರೆ ಒಂದೇ ಒಂದು ರಿಪೋರ್ಟ್ ಇಲಾಖೆಗೆ ಬರದಿದ್ದರೆ ನಮ್ಮ ನ್ಯಾಯಾಲಯಕ್ಕೆ ಕೊಡದಿದ್ದರೆ ಇದರ ಬಗ್ಗೆ ಕನ್‌ವಿಕ್ಷನ್ ಆಗುವುದು ಹೇಗೆ? ಕನ್‌ವಿಕ್ಷನ್ ಆಗದುವುದೇ ಇಲ್ಲ. ಶ್ರೀ ಅಶ್ವತ್ಥಪ್ಪ ಎನ್ನುವವರು, ಕೊಶ್ಚನ್ ಡಾಕ್ಯುಮೆಂಟ್ ಎಕ್ಸ್‌ಪರ್ಟ್ ಅವರ ಮೇಲೆ ನ್ಯಾಯಾಲಯ ಸ್ಟ್ರಿಕ್ಚರ್ಸ್ ಪಾಸ್ ಮಾಡಿದೆ. ಇವತ್ತಿನವರೆಗೆ ಅವರ ಮೇಲೆ ಏನೂ ಕ್ರಮವನ್ನು ಕೈಗೊಂಡಿರುವುದಿಲ್ಲ. ಇಷ್ಟು ವರ್ಷಗಳವರೆವಿಗೆ ಏನು ರಿಪೋರ್ಟ್ ಕೊಟ್ಟಿದ್ದಾರೆ, ಇದನ್ನು ಬೇರೆಯಾವುದಾದರೂ ಒಂದು ಸೆಂಟರ್‌ಗೆ ಕಳುಹಿಸಿದರೆ ಅಲ್ಲಿಂದ ತಾವು ರಿಪೋರ್ಟ್‌ನ್ನು ತರಿಸಿಕೊಂಡರೆ ಪ್ರಾಯಶ: ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ಫೋರೆನ್ಸಿಕ್ ಲ್ಯಾಬ್ ತಿಂಗಳಿಗೆ ಎಷ್ಟು ರಿಪೋರ್ಟ್‌ನ್ನು ಕಳುಹಿಸುತ್ತಿದೆ? ಏಕೆಂದರೆ ಬಹಳಷ್ಟು ರಿಪೋರ್ಟ್‌ಗಳನ್ನು ಕಳುಹಿಸುತ್ತಿದ್ದೇವೆಂದು ಹೆಗ್ಗಳಿಕೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ಏಕೆಂದರೆ ಅವರೇನೂ ಇನ್ಸ್‌ಪೆಕ್ಷನ್ ಮಾಡುತ್ತಿಲ್ಲ ಇನ್‌ವೆಸ್ಟಿಗೇಷನ್ ಮಾಡುತ್ತಿಲ್ಲ. ಕುಳಿತಲ್ಲೇ ರಿಪೋರ್ಟ್ ಬರೆಯುತ್ತಿದ್ದಾರೆ. ಆದುದರಿಂದ ರಿಪೋರ್ಟ್ ಕೊಡಲು ಇವರಿಗೇನೂ ತೊಂದರೆಯಿಲ್ಲ. ಇಂತಹ ಸಂಸ್ಥೆಯಲ್ಲಿ ತಾವು ಗೃಹಸಚಿವರು ಸ್ವತ: ಹೋಗಿ ನೋಡಿ ತನಿಖೆ ಮಾಡಿ ಏನಾದರೂ ಕ್ರಮವನ್ನು ಕೈಗೊಳ್ಳಬೇಕು, ಏಕೆಂದರೆ, ಅಲ್ಲಿ ಒಬ್ಬರು ಎಲ್. ಪ್ರಕಾಶ್ ಎಂಬುವರು ಇದ್ದಾರೆ. ಅವರ ಮೇಲೆ ಮೆಮೋ ಇಷ್ಯೂ ಮಾಡಿದ್ದು, ಅವರು ಯಾವ ರಿಪೋರ್ಟ್‌ಗೂ ಸಹಿ ಮಾಡಬಾರದೆಂದು ಡೈರೆಕ್ಟರ್‌ರವರು ಆದೇಶ ಕೊಟ್ಟಿದ್ದಾರಂತೆ. ಇನ್ನೊಬ್ಬರು ಲೇಡಿ ಡಾಕ್ಟರ್ ಇದ್ದಾರಂತೆ, ಅವರಿಗೂ ಸಹ ಯಾವುದೇ ಪೇಪರ್ ಸಹ ಹೋಗುತ್ತಿಲ್ಲ, ಎಲ್ಲರನ್ನೂ ಬೈಪಾಸ್ ಮಾಡಿದ್ದಾರೆ. ಇತ್ತೀಚೆಗೆ ಯಾವುದೋ ಒಂದು ಕಂಪ್ಯಾರಿಸನ್ ಮೈಕ್ರೋಸ್ಕೋಪ್‌ನ್ನು 85 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಖರೀದಿಸಿದ್ದಾರೆ. ಸ್ಕ್ಯಾನಿಂಗ್ ಎಲೆಕ್ಟ್ರಾನಿಕ್ ಮೈಕ್ರೋಸ್ಕೋಪ್‌ನ್ನು ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಖರೀದಿಸಿದ್ದಾರೆ. ಇವೆಲ್ಲವನ್ನು ಖರೀದಿಸಿ ಏನೊಂದು ಕೆಲಸವನ್ನು ಮಾಡುತ್ತಿಲ್ಲ. ಫೋರೆನ್ಸಿಕ್ ಲ್ಯಾಬೋರೇಟರಿ ಏನು ಸಿಕ್ ಆಗಿದೆ ಅದಕ್ಕೆ ಸ್ವಲ್ಪ ಔಷಧಿಯನ್ನು ಕೊಟ್ಟು ಸರಿಮಾಡುವಂತಹ ಕಾರ್ಯಕ್ರಮವನ್ನು ಸರ್ಕಾರವು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. 1998ರಿಂದ ಇಲ್ಲಿಯವರೆಗೆ ಏನು ನಡೆದಿದೆ ಅದರ ಬಗ್ಗೆ ತಾವು ಸಮಗ್ರವಾಗ ತನಿಖೆಯನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ.

ಇನ್ನು ಕೃಷಿಯ ಬಗ್ಗೆ ನಾನು ಕೆಲವು ವಿಷಯಗಳನ್ನು ಮಾತನಾಡಲಿಚ್ಛಿಸುತ್ತೇನೆ. ಕೃಷಿಯಲ್ಲಿ ನೀರಾದ ಬಗ್ಗೆ ಪ್ರಾಯಶ: ಮಾನ್ಯ ಅಧ್ಯಕ್ಷರು ರೂಲ್ 69ರಲ್ಲಿ ಮುಂದಿನ

ವಾರ ಸಭೆಯಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದಾರೆ. ನಮ್ಮ ಭಾಗದಲ್ಲಿ ನುಸಿರೋಗದ ಸಮಸ್ಯೆಯಿದೆ, ನಾನು ಸರ್ಕಾರವನ್ನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ನೀರಾವನ್ನು ತೆಗೆಯುವುದರಿಂದ ನುಸಿರೋಗಕ್ಕೆ ಪರಿಹಾರವಲ್ಲದಿದ್ದರೂ ಸಹ ರೈತನಿಗೆ ಅದರಿಂದ ಆದಾಯವು ಬರುವುದಾದರೆ ಸರ್ಕಾರಕ್ಕೆ ಏತಕ್ಕೆ ಅವಕಾಶವನ್ನು ಕೊಡಬಾರದು? ಇದು ಶರಾಬ್ ಅಭಿವೃದ್ಧಿ ಅಲ್ಲ. ಶೇಕಡ 100ರಷ್ಟು ಸರ್ಕಾರದವರು ಸಪ್ಲೈ ಮಾಡಿರುವಂಥದ್ದು, ಎಲ್ಲಾ ಶರಾಬು ಅಂಗಡಿಯಲ್ಲಿ ಇದೆಯೇ? ಇದರ ಬಗ್ಗೆ ಒಂದು ವಿಷಯವನ್ನು ಸರ್ಕಾರವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಒಬ್ಬ ಗುತ್ತಿಗೆದಾರ ಎಷ್ಟು ಹಣವನ್ನು ಸರ್ಕಾರಕ್ಕೆ ಕಿಸ್ತು ಕಟ್ಟುತ್ತಾನೆ? ಅವನು ಎಷ್ಟು ಶರಾಬನ್ನು ಡ್ರಾ ಮಾಡುತ್ತಾನೆ? ಇದನ್ನು ತೆಗೆದುಕೊಂಡಾಗ, ಅವನು ಹಣವನ್ನು ಎಷ್ಟು ಸರ್ಕಾರಕ್ಕೆ ಕಟ್ಟುತ್ತಾನೆ ಅದಕ್ಕೆ ಸರಿಯಾಗಿ ಶರಾಬನ್ನು ಡ್ರಾ ಮಾಡುತ್ತಿಲ್ಲ. ಆದರೆ ಅವನು ಬೇರೆ ಎಲ್ಲಿಯೋ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾನೆ. ಹಾಗಾದರೆ ನೀರಾ ಯಾಕೇ? ಪ್ರಾಯಶ: ನೀರಾಕ್ಕೆ ಅವಕಾಶವನ್ನು ಕೊಟ್ಟಾಗ, ಇದರ ಬಗ್ಗೆ ನನ್ನ ಅಭಿಪ್ರಾಯವೇನೆಂದರೆ, ಈ ಡ್ಯೂಪ್ಲಿಕೇಟ್ ಟ್ಯಾಡಿಯನ್ನು ಯಾರು ಉತ್ಪಾದನೆ ಮಾಡುತ್ತಾರೆ ಅವರಿಗೆ ಇದರಿಂದಾಗಿ ತೊಂದರೆಯಾಗುತ್ತದೆ. ಆದ್ದರಿಂದ ಈ ಎಕ್ಸೈಸ್ ಲಾಬಿಗೆ ಮಣಿಯದೆ ಸರ್ಕಾರದವರು ನೀರಾವನ್ನು ತೆಗೆಯುವುದಕ್ಕೆ ರೈತರಿಗೆ ಅವಕಾಶವನ್ನು ಮಾಡಿಕೊಡಬೇಕು. ಕಮರಿಪೇಟೆ, ಹುಬ್ಬಳ್ಳಿದ್ದು ವಿಸ್ಕಿ ಮತ್ತು ಬ್ರಾಂದಿ ಬರುತ್ತದೆ, ಅದರ ಬಗ್ಗೆ ಸರ್ಕಾರದವರು ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಇಂತಹ ಡ್ಯೂಪ್ಲಿಕೇಟ್ ವಿಸ್ಕಿ ಮತ್ತು ಬ್ರಾಂದಿ ಬರುವಾಗ ಅದು ಅಧಿಕಾರಿಗಳ ಗಮನಕ್ಕೆ ಬಾರದೇ ಬರುವುದಕ್ಕೆ ಸಾಧ್ಯವಿದೆಯೇ? ಇಲ್ಲಾ, ಇದನ್ನು ನಿಲ್ಲಿಸಬೇಕಾದರೆ positive will ಬೇಕಾಗುತ್ತದೆ. ಎಕ್ಸೈಸ್ ಕಾಂಟ್ರಾಕ್ಟರ್‌ಗೆ ಈಲ್ಡ್ ಆದಾಗ ಇದು ಯಾವುದನ್ನೂ ಮಾಡಲಿಕ್ಕೆ ಖಂಡಿತ ಸಾಧ್ಯವಾಗುವುದಿಲ್ಲ. ಇನ್ನು ಪವರ್ ಸೆಕ್ಟಾರ್ ಬಗ್ಗೆ ಹೇಳುವುದಾದರೆ, ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದ್ದೇನೆ. ಹಿಂದಿನ ಆಯವ್ಯಯ ಪತ್ರವನ್ನು ಮಂಡಿಸಿದಾಗ ಮಾತನಾಡಿದ್ದೇನೆ. ಅನೇಕ ವಿಷಯಗಳನ್ನು ಚರ್ಚೆ ಮಾಡಿದ್ದೇನೆ. ಆದರೆ ಸದನದಲ್ಲಿ ನನಗೆ ಉತ್ತರ ಸಿಕ್ಕಿಲ್ಲ. ನಾನು ನೇರವಾಗಿ ಕೆಲವು ವಿಷಯಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇನೆ. ಆದರೆ ಅದಕ್ಕೂ ಉತ್ತರ ಬಂದಿಲ್ಲ. ಕೊನೆಯದಾಗಿ ಈಗ ಕೇಇಆರ್‌ಸಿಗೆ ಪತ್ರವನ್ನು ಬರೆದಿದ್ದೇನೆ. ಯಾವುದಾದರೂ ಪ್ರಾಜೆಕ್ಟನ್ನು ಕ್ಲಿಯರ್ ಮಾಡುವಾಗ ನಮಗೊಂದು ಅವಕಾಶವನ್ನು ಕೊಡಬೇಕೆಂದು. ಆದರೆ ಮೊನ್ನೆ ದಿವಸ ಹೊಸ ಒಂದು ಪ್ರಾಜೆಕ್ಟ್‌ಗೆ ಇದು ವಿಶೇಷವಾಗಿ ಟ್ರಾನ್ಸ್‌ಪರೆನ್ಸಿ ಆಕ್ಟ್‌ನಲ್ಲಿ ಬರುತ್ತದೋ ಏನೋ ನನಗೆ ಗೊತ್ತಿಲ್ಲ. ಸರ್ಕಾರ ಇದಕ್ಕೆ ಉತ್ತರವನ್ನು ಹೇಳಬೇಕಾಗುತ್ತದೆ. ಯಾವುದೇ ಒಂದು ಹೊಸ ಪ್ರಾಜೆಕ್ಟನ್ನು ಕೊಡಬೇಕಾದರೆ, ಬಿಡ್ ರೂಟ್‌ನಲ್ಲಿ ಕೊಡಬೇಕಾಗುತ್ತದೆ. ಮಂಗಳೂರಿನಲ್ಲಿ ಒಂದು ಬಾರ್ಜ್ ಮೌಂಟೆಡ್ ಪವರ್ ಸ್ಟೇಷನ್‌ಗೆ ಪರ್ಮಿಷನ್ ಅನ್ನು ಕೊಡುತ್ತಾರೆ. ಈ

ಕೆಲಸವನ್ನು ಯುರೋ ಇಂಡಿಯ ಕಂಪನಿಯವರಿಗೆ ವಹಿಸಿದ್ದಾರೆ. ಬಾರ್ಜ್ ಮೌಂಟೆಡ್ ಪವರ್ ಸ್ಟೇಷನ್ ಅಲ್ಲಿ ಪ್ರಾರಂಭ ಮಾಡದೆ ಅದನ್ನು ಥರ್ಮಲ್ ಪ್ರಾಜೆಕ್ಟ್‌ಗೆ ಕನ್ವರ್ಟ್ ಮಾಡಲಿಕ್ಕೆ ಸರ್ಕಾರಕ್ಕೆ ಕೇಳುತ್ತಾರೆ, ಥರ್ಮಲ್ ಪ್ರಾಜೆಕ್ಟ್ ಮಾಡಲಿಕ್ಕೆ ಮಂಡ್ಯ, ಬೆಂಗಳೂರು ಭಾಗದಲ್ಲಿ ಅವಕಾಶ ಕೊಡಿಯೆಂದು ಸರ್ಕಾರವನ್ನು ಕೇಳುತ್ತಾರೆ. ಬಾರ್ಜ್ ಮೌಂಟೆಡ್ ಪವರ್ ಸ್ಟೇಷನ್ ಅನ್ನು ಥರ್ಮಲ್ ಪ್ರಾಜೆಕ್ಟ್‌ಗೆ ಕನ್ವರ್ಟ್ ಮಾಡಿದಾಗ ಅದು ಹೊಸ ಪ್ರಾಜೆಕ್ಟ್ ಆಗುತ್ತದೆ. The Government should call for fresh bid. ಅದನ್ನು ಮಾಡಲಿಲ್ಲ. ನಿನ್ನೆ ನನಗೆ ಉತ್ತರವನ್ನು ಕೊಟ್ಟಿದ್ದಾರೆ. ಅದನ್ನ ಕಂಟಿನ್ಯೂಡ್ ಬಿಡ್ ರೂಟ್ ಎಂದು ಪರಿಗಣಿಸಿ ಅವರಿಗೊಂದು ಅವಕಾಶವನ್ನು ಕೊಟ್ಟಿದ್ದೇವೆ ಎಂದು. ಅವರು ಪವರ್ ರೇಟ್ ಕಡಿಮೆ ಮಾಡುತ್ತಾರೆಂದು ಹೇಳಿದ್ದಾರೆ. ಕೆಪಿಟಿಸಿಎಲ್ ಅಧ್ಯಕ್ಷರು ರಿಪೋರ್ಟ್‌ನಲ್ಲಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಕಂಪನಿಯವರು ಸ್ಥಳವನ್ನು ಗುರುತಿಸಿಲ್ಲ, ಪ್ರಾಜೆಕ್ಟ್ ರಿಪೋರ್ಟ್ ಸಬ್‌ಮಿಟ್ ಮಾಡಿಲ್ಲವೆಂದು. Inspite of that, the Government gives permission to this. ಹಾಗಾದರೆ ಇವರು ಕಡಿಮೆ ರೇಟ್‌ನಲ್ಲಿ ಪವರ್ ಉತ್ಪತ್ತಿ ಮಾಡುವುದಾದರೆ, ಅದಕ್ಕಿಂತ ಕಡಿಮೆ ರೇಟ್‌ನಲ್ಲಿ ನಾನು ಮಾಡುತ್ತೇನೆ. ನನಗೆ ಅವಕಾಶ ಸರ್ಕಾರ ಕೊಡುತ್ತದೆಯೇ ಎಂದು ಕೇಳಲಿಕ್ಕೆ ಇಚ್ಛಿಪಡುತ್ತೇನೆ. ಈಗ ಜಿಂದಾಲ್‌ನವರಿಗೆ ಕೊಟ್ಟರು. ಅದರಲ್ಲಿ ಪರಿಸ್ಥಿತಿ ಹೀಗಿದೆ. ಒಂದು ಹೊಸ ಪ್ರಾಜೆಕ್ಟ್ ಇನ್ನೊಂದು ಕ್ಯಾಪ್ಟೀವ್ ಪವರ್‌ಗೆ ಕೆಪಿಟಿಸಿಎಲ್‌ನವರು ಒಂದು ಪ್ರಸ್ತಾವನೆಯನ್ನು ಇಡುತ್ತಾರೆ. ಹಿಂದೆ ರೇಟ್‌ನ ಬಗ್ಗೆ ಸರ್ಕಾರ ತೀರ್ಮಾನ ಮಾಡಿದೆ. ನಾವು ಅದೇ ರೀತಿ ಕೊಡುತ್ತೇವೆಂದು ಹೇಳುತ್ತಾರೆ. ಹಾಗಾದರೆ, ಇವರು ಕಮಿಟಿಯನ್ನು ಏಕೆ ಮಾಡಿದರು ರಿಪೋರ್ಟ್‌ನ್ನು ಏಕೆ ತರಿಸಿಕೊಂಡರು? ಆದರಿಂದ ಜನತೆಯ ಮೇಲೆ ಹೊರೆ ಬೀಳುತ್ತಿದೆ. 200 ಕೋಟಿ ರೂ. ಮಿಕ್ಕಿ ನಷ್ಟವಾಗುತ್ತದೆ. ಇದನ್ನು ಪರಿಗಣಿಸಬೇಕು. ಯುನೋಕೋಲ್ ಬಿಡದಿಯದ್ದು ಕಡಿಮೆ ಟೆಂಡರ್ ಯಾರು ಹಾಕಿದ್ದಾರೆ ಅವರಿಗೆ ಇವರು ಕೊಡುತ್ತಿಲ್ಲ. ಜನರಲ್ ಎಲೆಕ್ಟ್ರಿಕಲ್ಸ್ ಅಮೇರಿಕಾದವರದ್ದು ಟೆಂಡರ್ ಹಾಕಿದರೆ ಸಬ್ ಸ್ಟ್ಯಾಂಡರ್ಡ್ ದು ರಿಜೆಕ್ಟ್ ಮಾಡುತ್ತಾರೆ. ಎಬಿಬಿಗೆ ಅವಕಾಶವನ್ನು ಕೊಡುತ್ತಾರೆ. ಅವರದ್ದು ಟೆಂಡರ್ ರೇಟ್ ಇನ್ನೂ ಜಾಸ್ತಿಯಿದೆ. ಇದೆಲ್ಲವನ್ನೂ ನೋಡಿದಾಗ ಟ್ರಾನ್ಸ್‌ಪರೆನ್ಸಿಯ ಬಗ್ಗೆ ಒಂದು ಹೊಸದಾದ ವಿವರಣೆಯನ್ನು ಟ್ರಾನ್ಸ್‌ಪರೆನ್ಸಿ ಅಂದರೇನು ಎಂದು ಸರ್ಕಾರ ಕೊಡಬೇಕಾಗುತ್ತದೆ. ಇನ್ನೊಂದು ಮುಖ್ಯವಾಗಿ ಪವರ್ ಸೆಕ್ಟರ್‌ನಲ್ಲಿ ಹೇಳಬೇಕಾದರೆ, ನಿನ್ನೆ ಒಬ್ಬರು ಇಂಜನಿಯರ್ ಕಂಪ್ಲೈಂಟನ್ನು ಕೊಡುತ್ತಾರೆ. ದೆಹಲಿಯ ಒಂದು ಸಂಸ್ಥೆ ನನಗೆ ಚಿನ್ನದ ನಾಣ್ಯಗಳನ್ನು ಲಂಚ ಕೊಡಲಿಕ್ಕೆ ಬಂದು, ಆ ಬಗ್ಗೆ ಕೆಪಿಟಿಸಿಎಲ್ ಅಧ್ಯಕ್ಷರ ಜೊತೆಯಲ್ಲಿ ನೇರವಾಗಿ ದೂರವಾಣಿ ಮೂಲಕ ಮಾತನಾಡಿದಾಗ ಅವರು ಪೋಲೀಸ್ ಕಂಪ್ಲೈಂಟ್ ಕೊಡಿಯೆಂದು ಹೇಳುತ್ತಾರೆ. ಅವರ ಆದೇಶದ ಮೇರೆಗೆ ಇಂಜನಿಯರ್ ಪೋಲೀಸ್ ಕಂಪ್ಲೆಂಟನ್ನು ಕೊಡುತ್ತಾರೆ. ಆ ಕೇಸಿನಲ್ಲಿ "ಬಿ" ರಿಪೋರ್ಟ್‌ನ್ನು ಹಾಕಿ ಪುನ: ಅವರಿಗೆ

ಆರ್ಡರ್ಸ್‌ನ್ನು ಪ್ಲೇಸ್ ಮಾಡುತ್ತಾರೆ. ಹಾಗಾದರೆ ಇವರು ಹೇಳಿದ್ದು ಸುಳ್ಳು ಎಂದಾದರೆ ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕೆಪಿಟಿಸಿಎಲ್ ಅಧ್ಯಕ್ಷರು ಇಂಜಿನಿಯರ್‌ಗೆ ಹೇಳಿ ಕಂಪ್ಲೈಂಟ್ ಕೊಟ್ಟಿದ್ದು ಸುಳ್ಳು ಎಂದು ಆದರೆ ಅಧಿಕಾರಿಗಳಿಗೆ ಯಾರಾದರೂ ಲಂಚ ಕೊಡಲಿಕ್ಕೆ ಬಂದಾಗ ಕಂಪ್ಲೈಂಟನ್ನು ಕೊಡಲಿಕ್ಕೆ ಯಾರು ಧೈರ್ಯವನ್ನು ಮಾಡುತ್ತಾರೆಂದು ಸದನದಲ್ಲಿ ತಿಳಿಸಬೇಕೆಂದು ನಾನು ಹೇಳುತ್ತೇನೆ.

ಇನ್ನು ರಿಸೋರ್ಸ್ ಮೊಬಲೈಸೇಷನ್ ಬಗ್ಗೆ ಒಂದೆರಡು ವಿಷಯವನ್ನು ಹೇಳಬಯಸುತ್ತೇನೆ. ಯೋಜನಾ ಮಂತ್ರಿಗಳು ಇಲ್ಲೇ ಇದ್ದಾರೆ. ಮಾನ್ಯ ಪಾಟೀಲ್‌ರವರು ಆಯವ್ಯಯದ ಬಗ್ಗೆ ಸುಮಾರು ಮಾತನಾಡಿದರು. ನಾನು ಓದುವಾಗ ಒಂದು ಕಡೆ ಇದು ಸಿಕ್ಕಿತು. It is the planned economy where everything is included in the Plan, except the economy. ಹಣ ಬಿಟ್ಟು ಬೇರೆ ಎಲ್ಲಾ ಇದೆ. ಇದನ್ನು ಸರಿಪಡಿಸಲಿಕ್ಕೆ ನಮ್ಮಲ್ಲಿ ಒಂಜದು ಪ್ಲಾನಿಂಗ್ ಬೋರ್ಡ್ ಇದೆ. ಪ್ಲಾನಿಂಗ್ ಬೋರ್ಡ್‌ನ ಅಧ್ಯಕ್ಷರೊಬ್ಬರು ಇದ್ದಾರೆ, ಬೋರ್ಡ್ ಕಾನ್ಸ್‌ಟಿಟ್ಯೂಟ್ ಆಗಿಲ್ಲ. ಪ್ಲಾನಿಂಗ್ ಬೋರ್ಡ್ ಒಂದು ಇದೆ. ಅಧ್ಯಕ್ಷರು ಇದ್ದಾರೆ, ಡೆಪ್ಯೂಟಿ ಛೇರ್ಮನ್ ಇದ್ದಾರೆ. ಆದರೆ ಡೆಪ್ಯೂಟಿ ಛೇರ್ಮನ್, he is planning everything except the State's economy ಇದನ್ನು ನೋಡಲಿಕ್ಕೆ ಅವರಿಗೆ ಅವಕಾಶವಿಲ್ಲ. ಒಂದು ಸಭೆ ಆಗಿರುವುದು ನನ್ನ ಗಮನಕ್ಕೆ ಬಂದಿಲ್ಲ. ಹಾಗಾದರೆ ಪ್ಲಾನಿಂಗ್ ಬೋರ್ಡ್ ಏತಕ್ಕೆ? ಒಂದು ವೇಳೆ ಅವರಿಗೆ ಇದನ್ನು ನೋಡಲಿಕ್ಕೆ ಸಮಯ ಇಲ್ಲದಿದ್ದರೆ ಬೇರೆಯವರಿಗೆ ಅವಕಾಶ ಮಾಡಿಕೊಡಬಹುದು. ನಮ್ಮ ಸಮಿತಿಯಲ್ಲಿ ಚರ್ಚೆಯಾಯಿತು, ಅವರು ಸಂಬಳವನ್ನು ತೆಗೆದುಕೊಂಡಿಲ್ಲವೆಂದು. ಅದು ಮುಖ್ಯವಲ್ಲ. ಅವರು ಸಂಬಳವನ್ನಾದರೂ ತೆಗೆದುಕೊಳ್ಳಲಿ ಬಿಡಲಿ, ರಾಜ್ಯದ ಹಿತದೃಷ್ಟಿಯಿಂದ ಏನೇನು ಆಗಬೇಕಾಗಿದೆ ಅದರ ಬಗ್ಗೆ ಅವರು ಹೆಚ್ಚಿನ ಗಮನವನ್ನು ಹರಿಸಬೇಕು.

ಇನ್ನು ಸಣ್ಣ ನೀರಾವರಿ ಇಲಾಖೆಯ ಬಗ್ಗೆ ಹೇಳಬೇಕಾದರೆ, ನಮ್ಮಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಭೆಯನ್ನು ಮಾಡಿದರು. ನಮಗೆಲ್ಲಾ ಬಹಳ ಸಂತೋಷವಾಯಿತು. ಸಮುದ್ರಕ್ಕೆ ಹೋಗುವ ನೀರನ್ನು ತಡೆದು, ಈ ಭಾಗದಲ್ಲಿ ಕೃಷ್ಣಾ ಕಾವೇರಿ ಕಾರ್ಯಕ್ರಮಗಳಿಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ ನಮ್ಮ ಭಾಗಕ್ಕೆ ವರಾಹಿ ಇದೆ. ಅದು ಇನ್ನೂ ನಮಗೆ ಬಂದೇ ಇಲ್ಲ. ಬರೀ ಹೇಳಿಕೆಗಳನ್ನು ನೋಡುವುದನ್ನು ಬಿಟ್ಟರೆ ಸಣ್ಣ ನೀರಾವರಿಗೆ ಸ್ವಲ್ಪ ಹೆಚ್ಚು ಹಣವನ್ನು ಕೊಟ್ಟು ಸಾಲ್ಟ್ ವಾಟರ್ ಎಕ್ಸ್‌ಕ್ಲೂಷನ್ ಡ್ಯಾಂವರ್ ಮಾಡಲಿಕ್ಕೆ ಸ್ವಲ್ಪ ಖರ್ಚು ಇದೆ. ಅದು ಅವರ ಕಾರ್ಯಕ್ರಮದಲ್ಲಿದೆ. ಪ್ರಾಯಶ: ನಮ್ಮ ಭಾಗದಲ್ಲಿ ಮೇಜರ್ ಇರಿಗೇಷನ್ ಯಾವುದೂ ಬೇಕಾಗುವುದಿಲ್ಲ. ಆ ರೀತಿ ಮಾಡಿದರೆ ಎಲ್ಲಾ ಭಾಗದಲ್ಲಿ ಜಲ ಮೇಲೆ

ಬರಲಿಕ್ಕೆ ಸಾಧ್ಯವಾಗುತ್ತದೆ. ಇದನ್ನು ಮಾಡುವುದನ್ನು ಬಿಟ್ಟು ನಮ್ಮಲ್ಲಿ ಕೆಲವು ವೆಂಟೆಡ್ ಡ್ಯಾಮ್‌ಗಳನ್ನು ಮಾಡುವ ಬಗ್ಗೆ ಮಾನ್ಯ ಸಚಿವರನ್ನು ಕೇಳಿದೆ, ಅನುದಾನ ಇಲ್ಲವೆಂದು ಹೇಳುತ್ತಾರೆ. ಆದರೆ ಮಾನ್ಯ ಪಾಟೀಲ್‌ರವರು ಹೇಳಿದರು ನಮ್ಮ ರಾಜ್ಯದಲ್ಲಿ ಎಲ್ಲಾ ಭಾಗದಲ್ಲಿ ಮುಖ್ಯವಾಗಿ ಬೇಕಾಗಿರುತಕ್ಕದ್ದು ಸಣ್ಣ ನೀರಾವರಿ. ಕೆರೆ ಹೂಳೆತ್ತುವಂತದ್ದು, ಚೆಕ್‌ಡ್ಯಾಮ್ಸ್ ಕಟ್ಟುವಂತಹದ್ದು ಇದನೆಲ್ಲಾ ಮಾಡಿದಾಗ ನಿಜವಾಗಿಯೂ ಗ್ರಾಮೀಣ ಪ್ರದೇಶದ ರೈತರಿಗೆ ತುಂಬ ಸಹಾಯವಾಗುತ್ತದೆ. ಎಲ್ಲಿಯಾದರೂ ಅಲ್ಪಸ್ವಲ್ಪ ಮಳೆ ಬಂದರೂ ನೀರನ್ನು ಸಂಗ್ರಹ ಮಾಡಲಿಕ್ಕೆ ಅವಕಾಶವಾಗುತ್ತದೆ. ಅದಕೋಸ್ಕರ ನಾನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಕೇಳಿಕೊಳ್ಳುವುದೇನೆಂದರೆ, ಸಣ್ಣ ನೀರಾವರಿ ಇಲಾಖೆಗೆ ಇನ್ನು ಹೆಚ್ಚಿನ ಅನುದಾನವನ್ನು ಕೊಟ್ಟು ಕೆಲಸಕಾರ್ಯಗಳನ್ನು ಮಾಡಬೇಕು. ನಮ್ಮ ಭಾಗದಲ್ಲಿ ಸ್ಕೀಮ್ಸ್ ಎಲ್ಲಾ ಇದೆ ಅದನ್ನು ಡೀಸಿಲ್ಟ್ ಮಾಡಲಿಕ್ಕೆ ಹೆಚ್ಚಿನ ಹಣವನ್ನು ಕೊಡಬೇಕಾಗುತ್ತದೆ. ಸ್ಕೀಮ್ಸ್ ಎಲ್ಲಾ ನೆಲದ ಮಟ್ಟಕ್ಕೆ ಬಂದಿದೆ. ಈ ಸಾರಿ ಹೆಚ್ಚು ಮಳೆಯೆಂದು ಹೇಳುತ್ತಾರೆ. ರಿಪೋರ್ಟ್‌ನಲ್ಲಿ ನಾರ್ಮಲ್ ಎಂದು ಇದೆ. ಆದರೆ ನಾವು ಒಂದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಮ್ಮಲ್ಲಿ ಬಿದ್ದ ಮಳೆಯ ನೀರೆಲ್ಲಾ ಸಮುದ್ರಕ್ಕೆ ಹೋಗುತ್ತದೆ. ಮಲೆನಾಡಿನ ಘಾಟಿನ ಮೇಲೆ ಬಂದಂತಹ ನೀರು ಮಾತ್ರ ಅಲ್ಲಿ ಸ್ವಲ್ಪ ಬಂದು ಅಂತರ್ಜಲ ಮಟ್ಟ ಏರಲಿಕ್ಕೆ ಸಹಾಯವಾಗುತ್ತದೆ. ನಾನು ಖಂಡಿತವಾಗಿಯೂ ಹೇಳುತ್ತೇನೆ, ಇದರ ಬಗ್ಗೆ ಜಾಗ್ರತೆಯನ್ನು ವಹಿಸದಿದ್ದರೆ ಮುಂದಿನ ತಿಂಗಳುಗಳಲ್ಲಿ ನಾವು ಕುಡಿಯುವ ನೀರಿನ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇವತ್ತು ಮಳೆ ಬಂದಿದೆ ಎಂದು ಸಂತೋಷಪಡುವ ಅವಶ್ಯಕತೆಯಿಲ್ಲ. ಇವತ್ತೂ ಕೂಡ ನಮ್ಮಲ್ಲಿ ಬಿಟ್ಟಿಗದ್ದೆ ಮಕ್ಕಿಯೊಂದು ಹೇಳುತ್ತೇನೆ. ಏರು ಪ್ರದೇಶಗಳಲ್ಲಿ ಸಾಗುವಳಿಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಬರಪೀಡಿತ ಪ್ರದೇಶಗಳ ಬಗ್ಗೆ ಯಾವ ರೀತಿಯ ಗಮನವನ್ನು ಹರಿಸಿದ್ದೇವೆ ಅದೇರೀತಿಯಲ್ಲಿ ನಮ್ಮ ಭಾಗದ ಕಡೆ ಸ್ವಲ್ಪ ಹೆಚ್ಚಿನ ಗಮನವನ್ನು ಹರಿಸಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸಣ್ಣ ಕೈಗಾರಿಕೆಗಳ ಸಚಿವರು ಸದನದಲ್ಲಿ ಇಲ್ಲ. ಅವರು ಇದ್ದಿದ್ದರೆ ಎರಡು ವಿಷಯ ಮಾತನಾಡಬಹುದಿತ್ತು. ಅವರ ಭಾಗದಲ್ಲಿ ಟೆಂಡರ್ ಕರೆಯುವಂತಹದ್ದು ಟೆಂಡರ್ ಬಾಕ್ಸ್‌ಗೆ ನೀರು ಹಾಕುವಂತಹದ್ದು, ಟೆಂಡರ್ ಬಾಕ್ಸ್‌ಗೆ ಟೆಂಡರ್ ಹಾಕುವಾಗ ಅಟ್ಟಿಸಿಕೊಂಡು ಹೋಗುವಂತಹದ್ದು ಇದರ ಬಗ್ಗೆ ಮೇಲ್ಮನೆಯಲ್ಲಿ ಚರ್ಚೆಯಾಗಿದೆ. ಕೆಳಮನೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡಿಲ್ಲ. ಆದರೆ ಅದರ ಬಗ್ಗೆ ಚರ್ಚೆಯಾಗಬೇಕಾಗಿದೆ. ನಾವು ಮಾನ್ಯ ಮಂತ್ರಿಗಳಾದ ಹೆಚ್.ಕೆ. ಪಾಟೀಲ್‌ರವರ ಗಮನಕ್ಕೆ ದೂರವಾಣಿಯ ಮುಖಾಂತರ ಒಂದು ವಿಚಾರವನ್ನು ತಂದೆ. ಅವೊತ್ತು ಕೆಲವರಿಗೆ ಟೆಂಡರ್ ಬಾಕ್ಸ್‌ಗೆ ಟೆಂಡರ್ ಹಾಕಲಿಕ್ಕೆ ಬಿಡಲಿಲ್ಲ. ಆಮೇಲೆ ಸಚಿವರು ಎಂ.ಡಿ.ಯವರಿಗೆ ಫೋನ್ ಮಾಡಿ ಅವಕಾಶವನ್ನು ಮಾಡಿಕೊಟ್ಟರು. ಇಂತಹ ಪರಿಸ್ಥಿತಿ ನಿರ್ಮಾಣವಾಗದ ಹಾಗೆ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಇನ್ನೂ ಹೆಚ್ಚಿನ ಗಮನವನ್ನು ಹರಿಸಬೇಕು. ಸಣ್ಣ ಕೈಗಾರಿಕಾ

ಇಲಾಖೆಯಲ್ಲಿ ಸಬ್ಸಿಡಿಯನ್ನು ಕೊಡಲಿಕ್ಕೆ ಅವರಿಗೆ ಸಾಧ್ಯವಾಗುತ್ತಿಲ್ಲ. ಅದಕ್ಕೆ ಬೇರೆ ಬೇರೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ, ಬಾಂಡ್‌ಗಳನ್ನು ಕೊಡುತ್ತೇವೆಂದು ಹೇಳುತ್ತಾರೆ. ಪ್ರಾಯಶ: ಬಾಂಡ್‌ನ್ನು ಕೊಟ್ಟರೆ ತೊಂದರೆಯಿಲ್ಲ. ಆದರ ಮೇಲೆ ಬ್ಯಾಂಕಿನಿಂದ ಲೋನನ್ನು ತೆಗೆಯಲಿಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಬಾಂಡುಗಳನ್ನು 10-20 ವರ್ಷಗಳ ಕಾಲ ಇಟ್ಟುಕೊಂಡರೆ ಅವನು ಬಡ್ಡಿಯನ್ನು ಕಟ್ಟುತ್ತಾ ಹೋಗುವಂತಹದ್ದು ಅವನ ಯೂನಿಟ್ ಕ್ಲೋಸ್ ಆದಮೇಲೆ ಈ ಗ್ಲೋಬಲೈಸೇಷನ್, ಲಿಬರಲೈಸೇಷನ್‌ನಿಂದಾಗಿ ಭಾರತದಲ್ಲಿ ಎಲ್ಲಾ ಉದ್ದಿಮೆಗಳು ಬಂದ್ ಆಗುತ್ತಾ ಬಂದಿದೆ. ಇವತ್ತು ಪತ್ರಿಕೆಯಲ್ಲಿದೆ. ಚೈನಾದಿಂದ ಕಡಿಮೆ ದರದಲ್ಲಿ ಮೋಟರ್‌ಸೈಕಲ್‌ಗಳು ಕಮ್ಮಿ ದರದಲ್ಲಿ ಬಂದರೆ ಪ್ರಾಯಶ: ಒಂದು ರೀತಿಯಲ್ಲಿ ನಾವು ತಪ್ಪು ಮಾಡಿದ್ದೇವೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಏಕೆಂದರೆ ಇಷ್ಟು ವರ್ಷಗಳ ಕಾಲ ನಮ್ಮ ಉದ್ದಿಮೆಯವರು, ಮೋಟಾರ್ ಕಂಪನಿಯವರು ಸಹ ಅಂಬಾಸಿಡರ್, ಫಿಯಟ್ ಕಾರುಗಳನ್ನು ಕೊಟ್ಟು ನಮಗೆ ಒಂದು ರೀತಿಯಲ್ಲಿ ಮೋಸವನ್ನು ಮಾಡಿಕೊಂಡು ಬಂದಿದ್ದರು. ಈ ಕಾರುಗಳಿಗೆ ಅಷ್ಟು ಹಣವನ್ನು ಕೊಡುತ್ತಿದ್ದವು. ಕೆಲವು ಕಾರುಗಳಿಗೆ ಹಣ ಜಾಸ್ತಿ ಕೊಟ್ಟರೂ ಕೂಡ ಮೈನ್‌ಟನೆನ್ಸ್ ಎಕ್ಸ್‌ಪೆಂಡೀಚರ್ ಇಲ್ಲ. ಅದನ್ನು ಇವರೇ ಹಿಂದೆ ಮಾಡಿಬಿಟ್ಟಿದ್ದರೆ ಹೊರಗಡೆಯಿಂದ ಮೋಟಾರ್‌ಗಳು ಇಲ್ಲಿ ಬರುವಂಥ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಇಂತಹ ವಿಷಯಗಳ ಬಗ್ಗೆ ನಾವು ಗಮನ ಹರಿಸದಿದ್ದರೆ ಮುಂದಿನ ದಿವಸಗಳಲ್ಲಿ ಸಣ್ಣ ಕೈಗಾರಿಕೆಗಳು ಬಂದ್ ಆಗುವಂಥ ಸ್ಥಿತಿ ಇದೆ. ಆದರೆ ಅವರ ಹತ್ತಿರ ಪ್ರಶ್ನೆಯನ್ನು ಕೇಳಿದಾಗ, ಸಿಕ್ ಯೂನಿಟ್ಸ್ ಎಷ್ಟು ಇವೆ ಎಂದು ನಮ್ಮ ಶಾಸಕರು ಕೆಲವರು ಕೇಳಿದರು. ಆದರಲ್ಲಿ ಅವರು ಒಂದು ಐದು ಪರ್ಸೆಂಟ್ ಸಹ ಸಿಕ್ ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದರು. ಹಾಗಾದರೆ ಇವರಲ್ಲಿ ಕೆ.ಎಸ್.ಎಫ್.ಸಿ.ಯಿಂದ ಲೋನ್ ತೆಗೆದುಕೊಂಡು ಸಿಕ್ ಆಗಿದ್ದರೆ ಬಗ್ಗೆ ಮಾತ್ರ ಮಾಹಿತಿ ಇರುವಂಥಾದ್ದು. ಅದು ಬಿಟ್ಟರೆ ಬೇರೆ ರಾಷ್ಟ್ರೀಕೃತ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳಿಂದ ಏನು ಸಾಲ ತೆಗೆದುಕೊಂಡಿದ್ದು ಸಿಕ್ ಆಗಿವೆ, ಆ ಸಂಖ್ಯೆ ಬಹಳ ಇದೆ. ನನ್ನ ಅಭಿಪ್ರಾಯದ ಪ್ರಕಾರ ಶೇಕಡಾ 75ರಿಂದ 80 ರಷ್ಟು ಸಣ್ಣ ಪ್ರಮಾಣದ ಕೈಗಾರಿಕೆಗಳು ಇವತ್ತು ರೋಗಗ್ರಸ್ತವಾಗಿವೆ. ಇದರ ಬಗ್ಗೆ ಇವರು ಏನು ಗಮನವನ್ನು ಹರಿಸಿದ್ದಾರೆ ಎಂಬುದನ್ನು ನಾವು ಆಲೋಚನೆ ಮಾಡುತ್ತಾ ಇದರ ಬಗ್ಗೆ ಹೆಚ್ಚು ಗಮನವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ಬೆಲ್ ಹೊಡದಾದಮೇಲೆ ನಾನುಮಾತನಾಡುವುದಿಲ್ಲ. ಏಕೆಂದರೆ ಹಿರಿಯರು ಮಾತನಾಡುವಾಗ ನೀವು ಫೋರ್ಸ್ ಮಾಡಿ ನಿಲ್ಲಿಸುತ್ತೀರಿ...

ಉಪಾಧ್ಯಕ್ಷರು :— ಆ ತರಹ ಅಲ್ಲ. ಈಗ ಮಧ್ಯಾಹ್ನದ ವಿರಾಮ ವೇಳೆ ಆಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ನೀವು ಮುಗಿಸುವುದಾದರೆ ಇನ್ನೂ ಹತ್ತು ನಿಮಿಷ ಕಳೆತುಕೊಳ್ಳೋಣ ಅಥವಾ ವಿರಾಮದ ನಂತರ ಬೇಕಾದರೆ ಮಾತನಾಡಬಹುದು ಎಂದು ನಾನು ಹೇಳುತ್ತಿದ್ದೆ...

ಮಾನ್ಯ ಸದಸ್ಯರು :— ಅವರು ಮುಗಿಸಿಬಿಟ್ಟಿದ್ದಾರೆ.

ಉಪಾಧ್ಯಕ್ಷರು :— ಮುಗಿಸಿದ್ದರೆ ಪರವಾಗಿಲ್ಲ. ಈಗ ಸದನವನ್ನು ಮೂರುಗಂಟೆ ವೇಳೆಗೆ ಮುಂದೂಡುತ್ತಿದ್ದೇನೆ.

(2 ಗಂಟೆ 2 ನಿಮಿಷಕ್ಕೆ ಸದನ ಮುಂದೂಡಲ್ಪಟ್ಟು ಪುನ: ಮಧ್ಯಾಹ್ನ 3 ಗಂಟೆಗೆ ಸೇರಲು ನಿರ್ಧರಿಸಿತು)

(ಸದನವು 3-10 ನಿಮಿಷಕ್ಕೆ ಪ್ರಾರಂಭವಾಯಿತು)

(ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ ಹೆಚ್. ತಹಸೀಲ್ದಾರ್) ರವರು ಅಧ್ಯಕ್ಷ ಪೀಠದಲ್ಲಿದ್ದರು)

+ ಶ್ರೀ ಎಸ್.ಎಚ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) :— ಮಾನ್ಯ ಅಧ್ಯಕ್ಷರೇ, ಈ ಮುಂಗಡ ಪತ್ರದ ಮೇಲೆ ನಾನು ನನ್ನ ಚರ್ಚೆಯನ್ನು ಪ್ರಾರಂಭಿಸುತ್ತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಗ್ಗೆ ಮಾತನಾಡುತ್ತೇನೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾ ಉತ್ಸವಗಳನ್ನು ನಡೆಸುವುದಕ್ಕೆ ಸರ್ಕಾರದವರು ಒಂದು ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಆದರೆ ಅದನ್ನು ಎಲ್ಲಾ ಜಿಲ್ಲೆಗಳಲ್ಲಿ ಏಕಕಾಲದಲ್ಲಿ ಮಾಡುವಂತಹ ವ್ಯವಸ್ಥೆ ಇಲ್ಲ. ಅವರು ಯಾವ ಯಾವುದೋ ಸಂದರ್ಭಗಳಲ್ಲಿ ಒಂದೊಂದು ಜಿಲ್ಲೆಯಲ್ಲಿ ಮಾಡುತ್ತಾರೆ, ಒಂದೊಂದು ಜಿಲ್ಲೆಯಲ್ಲಿ ಆ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವುದಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಅಧಿಕಾರಿಗಳ ಕೊರತೆ ಇರುವುದರಿಂದ ಅಲ್ಲಿ ಇಂತಹ ಒಂದು ವ್ಯವಸ್ಥೆ ಸರಿಯಾಗಿ ನಡೆಯುತ್ತಿಲ್ಲ ಮತ್ತು ಅವರು ಇದನ್ನು ಮಾಡುವಾಗ ಒಂದು ಸರ್ಕಾರಿ ಕಾರ್ಯಕ್ರಮದ ರೀತಿಯಲ್ಲಿ ಮಾಡುತ್ತಿದ್ದಾರೆ. ಅದರ ಬದಲು ಅಲ್ಲಿ ಇರುವ ಸಂಘ-ಸಂಸ್ಥೆಗಳು ಮತ್ತು ಅಲ್ಲಿರತಕ್ಕಂಥ ಸ್ವಯಂ ಸೇವಾ ಸಂಸ್ಥೆಗಳನ್ನು ಇನ್‌ವಾಲ್ವ್ ಮಾಡಿಕೊಂಡು ಜಿಲ್ಲಾ ಮಟ್ಟದಲ್ಲಿ ಎರಡು ಮೂರು ದಿನದ ಕಾರ್ಯಕ್ರಮ ಮಾಡಿದರೆ ಅದು ಸಮರ್ಪಕವಾಗಿ ಮತ್ತು ವ್ಯವಸ್ಥಿತವಾಗಿ ಆಗುತ್ತದೆ ಎನ್ನುವ ಒಂದು ವಿಚಾರವನ್ನು ತಿಳಿಸುತ್ತಾ, ಅದೇ ರೀತಿಯಲ್ಲಿ ಬಯಲು ರಂಗಮಂದಿರಗಳನ್ನು ಎಲ್ಲಾ ತಾಲ್ಲೂಕುಗಳಲ್ಲಿ ತೆರೆಯಬೇಕು, ಅದೂ ಅಲ್ಲದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬೇಕಾದಷ್ಟು ಕಾರ್ಯಕ್ರಮಗಳು ಘೋಷಣೆಗಳು ನಡೆಯುತ್ತಿರುತ್ತವೆ. ಅದರಲ್ಲಿ ಕಾರ್ಯರೂಪಕ್ಕೆ ಬರುವುದು ಕೆಲವೇ ಕೆಲವು ಮಾತ್ರ. ಅವು ಬರೀ

ಪ್ರಚಾರದಲ್ಲಿರುವಂತಹ ಒಂದು ಸನ್ನಿವೇಶ ಮಾತ್ರ ಇದೆ. ಕಲಾವಿದರಿಗೆ ಮತ್ತು ಸಾಹಿತಿಗಳಿಗೆ ಮಾಶಾಸನ ಕೊಡುವಂತಹ ಒಂದು ವ್ಯವಸ್ಥೆಗೆ 3600 ರೂಪಾಯಿಗಳು ಎಂದು ಅವರ ಆದಾಯದ ಮಿತಿಯನ್ನು ನಿಗದಿಗೊಳಿಸಿದ್ದಾರೆ. ಇವತ್ತು 3600 ರೂಪಾಯಿಗಳು ಏನೇನೂ ಅಲ್ಲ. ಆದ್ದರಿಂದ ಅವರ ಆದಾಯದ ಮಿತಿಯನ್ನು ಕನಿಷ್ಠಪಕ್ಷ 18 ಸಾವಿರ ರೂಪಾಯಿಗಳಿಗಾದರೂ ಏರಿಸಿದರೆ ಬಹಳಷ್ಟು ಜನ ಕಲಾವಿದರು ಮತ್ತು ಸಾಹಿತಿಗಳು ಆ ಮಾಸಾಶನವನ್ನು ಪಡೆಯುವುದಕ್ಕೆ ಎಲಿಜಬಿಲಿಟಿ ಬರುತ್ತದೆ. ಸರ್ಕಾರ ಸುಮಾರು8-10 ಅಕಾಡೆಮಿಗಳನ್ನು ರಚನೆ ಮಾಡಿ ಅದಕ್ಕೆ ಅಧ್ಯಕ್ಷರುಗಳನ್ನು ನೇಮಕ ಮಾಡುತ್ತಾರೆ. ಅವು ಲಲಿತಕಲಾ ಅಕಾಡೆಮಿ ಇರಬಹುದು, ಜಾನಪದ ಅಕಾಡೆಮಿ ಇರಬಹುದು, ನಾಟಕ ಅಕಾಡೆಮಿ ಇರಬಹುದು, ಇವುಗಳಿಗೆ ಬಹಳ ಪ್ರಚಾರ ಸಿಗುತ್ತಿದೆ. ಆದರೆ ಅವರು ಆ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಸಾಕಷ್ಟು ಧನ ಸಹಾಯವನ್ನು ಬಜೆಟ್‌ನಲ್ಲಿ ಪ್ರಾವಿಜನ್ ಮಾಡದೇ ಇರುವುದರಿಂದ ಅವರು ಸಮರ್ಪಕವಾಗಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಪ್ರತಿಯೊಂದು ಅಕಾಡೆಮಿಗಳಿಗೆ ಅಧ್ಯಕ್ಷರಾಗಲು ಪೈಪೋಟಿ ಇದೆ. ಅಧ್ಯಕ್ಷರಾದವರು ಅಲ್ಲಿ ಸಮರ್ಪಕವಾಗಿ ಅಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಮತ್ತು ಈ ಗಡಿನಾಡು ಸಮಸ್ಯೆಯ ಬಗ್ಗೆ ಅಧ್ಯಯನ ಮಾಡಲು ಒಂದು ಆಯೋಗವನ್ನು ರಚನೆ ಮಾಡಿ ಅದನ್ನು ಇದ್ದಕಿದ್ದ ಹಾಗೆ ಆ ಆಯೋಗವನ್ನು ರದ್ದುಪಡಿಸಿದರು, ಅವರು ಮಧ್ಯಕಾಲಿಕ ಒಂದು ವರದಿಯನ್ನು ಸಲ್ಲಿಸುದರು, ಆ ವರದಿ ಏನಾಯಿತು? ಆ ವರದಿ ಮೇಲೆ ಸರ್ಕಾರ ಏನು ಕಾರ್ಯಕ್ರಮ ಹಮ್ಮಿಕೊಂಡರು ಎನ್ನುವ ಬಗ್ಗೆ ಸರ್ಕಾರ ಈ ಮುಂಗಡ ಪತ್ರದಲ್ಲಿ ಪ್ರಸ್ತಾಪ ಮಾಡಿಲ್ಲ. ಆ ವರದಿ ಏನಾಗಿದೆ ಎನ್ನುವುದನ್ನು ಸರ್ಕಾರ ತಿಳಿಸಬೇಕು. ಮತ್ತು ಈ ಆಯೋಗವನ್ನು ಸರ್ಕಾರ ಮುಂದುವರಿಸುತ್ತೀರಾ ಅಥವಾ ಅಲ್ಲಿಗೆ ಕೊನೆಗೊಳಿಸುತ್ತೀರಾ ಎನ್ನುವ ವಿಚಾರವನ್ನು ಸರ್ಕಾರ ತಿಳಿಸಬೇಕು. ಅದರ ಜೊತೆಗೆ ಮೈಸೂರು ನಗರದಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಎಂದು ಹೇಳಿ ಇದೆ. ಈ ಪ್ರಾಧಿಕಾರ ಮೈಸೂರು ದಸರಾ ಸಂದರ್ಭದಲ್ಲಿ ಕೆಲಸ ಮಾಡುವುದನ್ನು ಬಿಟ್ಟರೆ ರಾಜ್ಯದ ಬೇರೆ ಜಿಲ್ಲೆಗಳಲ್ಲಿ ಆಗಲಿ ಅಥವಾ ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಆಗಲಿ ಬೆಂಗಳೂರು ನಗರದಲ್ಲಿ ಆಗಲಿ ಈ ರೀತಿ ವಸ್ತು ಪ್ರದರ್ಶನದ ಕಾರ್ಯಕ್ರಮಗಳು ನಡೆಯುತ್ತಿಲ್ಲ. ಈ ದಸರಾ ವಸ್ತು ಪ್ರದರ್ಶನದವರು ಪ್ರತಿ ವರ್ಷ ಮಳಿಗೆಗಳನ್ನು ಆಕ್ಷನ್ ಮಾಡುವುದು, ಮಳಿಗೆಗಳನ್ನು ನಿರ್ಮಾಣ ಮಾಡುವುದು, ಇದೇ ಒಂದು ಪರಿಪಾಠವಾಗಿದೆ. ಇದನ್ನು ತಪ್ಪಿಸಿ ಪ್ರತಿ ವರ್ಷ ದಸರಾ ಉತ್ಸವ ಪ್ರಾರಂಭವಾದಂತಹ ಸಂದರ್ಭದಲ್ಲಿ ಉದ್ಘಾಟನೆ ಮಾಡುವಂತಹ ಸಂದರ್ಭದಲ್ಲಿ ಒಂದು ಘೋಷಣೆಯನ್ನು ಮಾಡುತ್ತಾರೆ, ಅದೇನೆಂದರೆ ಇದನ್ನು ಪ್ರಗತಿ ಮೈದಾನ್ ಮಾದರಿಯಲ್ಲಿ ಖಾಯಂ ವಸ್ತು ಪ್ರದರ್ಶನ ಮಾದರಿಯಲ್ಲಿ ಮೈಸೂರು ನಗರದಲ್ಲಿ ಮಾಡುತ್ತೇವೆಂದು ಹೇಳುತ್ತಾರೆ. ಮೈಸೂರು ನಗರಕ್ಕೆ ಪ್ರತಿ ವರ್ಷ

ದಸರಾ ಸಂದರ್ಭದಲ್ಲಿ ಅಸಂಖ್ಯಾತ ವೀಕ್ಷಕರು ವಿದೇಶಗಳಿಂದ ಬರುತ್ತಾರೆ. ಅಂತಹ ಒಂದು ಸಂದರ್ಭದಲ್ಲಿ ಮೈಸೂರು ನಗರದಲ್ಲಿ ವಸ್ತು ಪ್ರದರ್ಶನ ಏನು ಇದೆ ಅದನ್ನು ಖಾಯಂ ವಸ್ತುಪ್ರದರ್ಶನವನ್ನಾಗಿ ನಿರ್ಮಾಣ ಮಾಡಿದರೆ ಅನುಕೂಲವಾಗುತ್ತದೆ. ಪ್ರತಿವರ್ಷ ಮಳಿಗೆಗಳನ್ನು ಆಕ್ಷನ್ ಮಾಡುವುದು, ನಿರ್ಮಾಣ ಮಾಡುವುದು ಇದೇ ಕಾಮಗಾರಿಯ ಕೆಲಸ ಮಾಡುತ್ತಿದ್ದಾರೆ, ಆದಕ್ಕಾಗಿಯೇ ಕೆಲವು ಗುತ್ತಿಗೆದಾರರು ವಸ್ತುಪ್ರದರ್ಶನ ಪ್ರಾಧಿಕಾರದಲ್ಲಿ ಖಾಯಂ ಗುತ್ತಿಗೆದಾರರಾಗಿಯೇ ಉಳಿದುಬಿಟ್ಟಿದ್ದಾರೆ. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರವು ಮೈಸೂರಿಗೆ ಮಾತ್ರ ಸೀಮಿತವಾಗಿದ್ದು ಇದು ರಾಜ್ಯದ ಎಲ್ಲಾ ಕಡೆ ಆಗಬೇಕು. ಬೇರೆ ಬೇರೆ ರಾಜ್ಯದಲ್ಲಿ ಪ್ರವಾಸ್ಯೋದ್ಯಮಕ್ಕೆ ಹೆಚ್ಚು ಒತ್ತುಕೊಟ್ಟು ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಪ್ರವಾಸ್ಯೋದ್ಯಮಕ್ಕೆ ಸಾಕಷ್ಟು ಸಿರಿ ಮಲೆನಾಡು ಪ್ರದೇಶದಲ್ಲಿದ್ದರೂ ಕೂಡ ಅದನ್ನು ಸಮರ್ಪಕವಾಗಿ ಬಳಸಿಕೊಂಡು ಪ್ರವಾಸ್ಯೋದ್ಯಮವನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತಿಲ್ಲ. ಪ್ರವಾಸ್ಯೋದ್ಯಮಕ್ಕೆ ಕೊಟ್ಟಿರುವ ಅನುದಾನ ಬಹಳ ಕಡಿಮೆ ಇದೆ. ನಮ್ಮ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಹಿಮದ್ ಗೋಪಾಲಸ್ವಾಮಿ ಬೆಟ್ಟವೆಂದು ಇದೆ, ಅಲ್ಲಿ ಸದಾ ಹಿಮವು ದೇವರ ಸನ್ನಿಧಿಯಲ್ಲಿ ಬೀಳುತ್ತಿರುತ್ತದೆ. ಅಲ್ಲಿನ ಪರಿಸರ ಬಹಳ ಚೆನ್ನಾಗಿದೆ. ಅಲ್ಲಿ ಪ್ರವಾಸ್ಯೋದ್ಯಮ ಧಾಮವನ್ನು ಅಬಿವೃದ್ಧಿಪಡಿಸಿಯೆಂದು ಕೇಳಿದರೆ ಹಣಕಾಸಿನ ಸಮಸ್ಯೆ ಇದೆ ಮುಂದೆ ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಮಾನ್ಯ ಸಚಿವರು ಯಾವಾಗಲೂ ಹೇಳುತ್ತಿರುತ್ತಾರೆ. ಪ್ರತಿ ವರ್ಷ ಹೀಗೆ ಹೇಳಿಕೊಂಡು ಹೋದರೆ ಪ್ರಯೋಜನವಾಗುವುದಿಲ್ಲ. ಕೇಂದ್ರದಲ್ಲಿ ನಮ್ಮ ರಾಜ್ಯದವರೇ ಪ್ರವಾಸ್ಯೋದ್ಯಮ ಸಚಿವರಾಗಿದ್ದಾರೆ. ಅವರೂ ಮತ್ತು ನೀವು ಇದಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟರೆ ಪ್ರವಾಸ್ಯೋದ್ಯಮದಲ್ಲಿ ಹೆಚ್ಚಿನ ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ. ನಮ್ಮ ರಾಜ್ಯದಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿದ್ದರೂ ಪ್ರವಾಸಿಗರನ್ನು ಆಕರ್ಷಣೆ ಮಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಪ್ರವಾಸ್ಯೋದ್ಯಮಕ್ಕೆ ಹೆಚ್ಚಿನ ಅನುದಾನವನ್ನು ಕೊಟ್ಟು ಅಭಿವೃದ್ಧಿಪಡಿಸಲು ಸರ್ಕಾರ ಮನಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಲೋಕ ಶಿಕ್ಷಣ ಇಲಾಖೆಯೊಂಬುದೊಂದಿದೆ. ಎಷ್ಟೋ ಜನರಿಗೆ ಇದು ಏನು ಕೆಲಸ ಮಾಡುತ್ತಿದೆ ಎಂಬ ಬಗ್ಗೆ ಮನವರಿಕೆಯಾಗಿಲ್ಲ. ಸಾಕ್ಷರತಾ ಆಂದೋಲನ 1987ರಲ್ಲಿ ಪ್ರಾರಂಭವಾದಾಗ ನಮ್ಮ ರಾಜ್ಯದಲ್ಲೂ ಸಾಕ್ಷರತಾ ಆಂಧೋಲನವನ್ನು ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದೊಂದು ಸಮಿತಿಗಳನ್ನು ಮಾಡಿ ಅನಕ್ಷರಸ್ತರನ್ನು ಅಕ್ಷರಸ್ತರನ್ನಾಗಿ ಮಾಡುವ ಕೆಲಸ ಪ್ರಾರಂಭವಾಯಿತು. ಆದರೆ ಹೊಸದಾಗಿ ಜಿಲ್ಲೆಗಳೇನು ರಚನೆಯಾಗಿದೆ ಅಲ್ಲಿ ಈ ಕಾರ್ಯಕ್ರಮ ಯಾವ ಹಂತದಲ್ಲಿದೆ ಎಂಬ ಬಗ್ಗೆ ಮಾಹಿತಿಯೇ ಗೊತ್ತಿಲ್ಲ. ಒಂದು ಮಾಹಿತಿಯ ಪ್ರಕಾರ ಸುಮಾರು 67ರಷ್ಟು ಜನರನ್ನು ಸಾಕ್ಷರಸ್ತರನ್ನಾಗಿ ಮಾಡಿದ್ದೇವೆ ಎಂಬ ವಿಚಾರ ತಿಳಿದು ಬಂದಿದೆ. ಉಳಿದಿರುವಂಥ ಜನರಿಗೆ ಸಾಕ್ಷರತೆಯನ್ನು ಕೊಡಿಸತಕ್ಕಂಥ ಮುಂದುವರೆದ

ಯೋಜನೆ ಏನಿದೆ ಅದನ್ನು ಮುಂದುವರೆಸಿಕೊಂಡು ಹೋಗಬೇಕಾಗುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಕಾರ್ಯಕ್ರಮ ಮಹತ್ವವನ್ನೇ ಕಳೆದುಕೊಂಡು ಈ ಕಾರ್ಯಕ್ರಮ ಸ್ಥಗಿತವಾಗಿದೆ. ಈ ಕಾರ್ಯಕ್ರಮ ಯಾವ ಹಂತದಲ್ಲಿದೆ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುವಾಗ ತಿಳಿಸಬೇಕಾಗಿ ವಿನಂತಿಸುವೆ. ಸಾರ್ವಜನಿಕ ಗ್ರಂಥಾಲಯವೆಂಬ ಒಂದು ಇಲಾಖೆಯಿದೆ. ಇದಕ್ಕೆ ಒಬ್ಬರು ಖಾಯಂ ನಿರ್ದೇಶಕರು ಇರುತ್ತಾರೆ. ಕೆಲವರದ್ದೇ ಸೀಮಿತವಾದಂಥ ಪ್ರಕಾಶಕರ ಪುಸ್ತಕಗಳು ಪ್ರಕಟವಾಗಬೇಕು, ಬೇರೆಯವರು ಭಾಗವಹಿಸಿ ಪುಸ್ತಕಗಳನ್ನು ಪ್ರಕಟಿಸುವಂಥ ವ್ಯವಸ್ಥೆ ಅಲ್ಲಿ ಇಲ್ಲ. ಒಂದು ಲಿಮಿಟೆಡ್ ಕಂಪನಿಯ ರೀತಿಯಲ್ಲಿ ಆ ಇಲಾಖೆ ಕೆಲಸ ನಿರ್ವಹಿಸುತ್ತಿದೆ. ಉದಾಹರಣೆಗೆ, ವಿಶ್ರಾಂತ ಉಪಕುಲಪತಿಗಳಾದ ದೇಜಗೌಡರವರು ನಿಜಲಿಂಗಪ್ಪನವರ ಬಗ್ಗೆ ಕನ್ನಡದಲ್ಲಿ ಬರೆದಂಥ ಕರ್ನಾಟಕ ರುವಾರಿಯೆಂಬ ಒಂದು ಕನ್ನಡ ಪುಸ್ತಕವನ್ನು ಖರೀದಿ ಮಾಡಿ ಎಲ್ಲಾ ಗ್ರಂಥಾಲಯಗಳಿಗೆ ಕೊಡಿಸಿ ಎಂದರೆ ನಿಜಲಿಂಗಪ್ಪನವರ ಬಗ್ಗೆ ಇಂಗ್ಲೀಷ್‌ನಲ್ಲಿ ಬರೆದಿರುವ ಪುಸ್ತಕವನ್ನು ಮೂರು ಲಕ್ಷ ರೂ. ವೆಚ್ಚದಲ್ಲಿ ಖರೀದಿ ಮಾಡಿಸಿ ಗ್ರಾಮಾಂತರ ಪ್ರದೇಶದ ಗ್ರಂಥಾಲಯಗಳಿಗೆ ಕೊಡಿಸುತ್ತಾರೆ. ಗ್ರಾಮಾಂತರದಲ್ಲಿ ಇಂಗ್ಲೀಷ್ ಪುಸ್ತಕವನ್ನು ಯಾರು ಓದುತ್ತಾರೆ ಪುಸ್ತಕಗಳನ್ನು ಆಯ್ಕೆ ಮಾಡುವಲ್ಲಿ ಸಹ ಬೇಕಾದಷ್ಟು ಅವ್ಯವಹಾರ ನಡೆಯುತ್ತಿದೆ. ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿ ಪ್ರಮುಖವಾಗಿಟ್ಟುಕೊಂಡಿರುವಾಗ ಗ್ರಾಮಾಂತರದಲ್ಲಿರುವ ಗ್ರಂಥಾಲಯಗಳಲ್ಲಿ ನಿಜಲಿಂಗಪ್ಪನವರ ಬಗ್ಗೆ ಕನ್ನಡ ಪುಸ್ತಕ ಒದಗಿಸುವುದರ ಬದಲಾಗಿ ಅದನ್ನು ತಿರಸ್ಕರಿಸಿ ಇಂಗ್ಲೀಷ್ ಪುಸ್ತಕವನ್ನು ತೆಗೆದುಕೊಳ್ಳುತ್ತಾರೆ. ಇಂತಹ ಒಂದು ವ್ಯವಸ್ಥೆ ಇದೆ. ಈಗ ಒಂದು ಪಂಚಾಯಿತಿಯಲ್ಲಿ ಅದಕ್ಕೆ ಸಂಬಂಧಪಟ್ಟಂತೆ ಎಂಟು ಹತ್ತು ಹಳ್ಳಿಗಳಲ್ಲಿ ಸಾಧನಸಲಕರಣೆಗಳು ಇರುವಂಥದ್ದು ಇರುತ್ತದೆ. ಅಂಥ ಗ್ರಾಮಗಳಲ್ಲಿ ಗ್ರಂಥಾಲಯಕ್ಕೆ ಸಹಾಯ ಮಾಡುವಂಥವರಿಗೂ ಹಾಗೂ ಅದಕ್ಕೆ ಬೇಕಾದ ಸಲಕರಣೆಗಳನ್ನು ಕೊಡುವ ಅವಕಾಶ ಇಲ್ಲದಿರುವಂಥ ಪರಿಸ್ಥಿತಿಯಾಗಿದೆ. ಆದ್ದರಿಂದ ಗ್ರಾಮ ಪಂಚಾಯಿತಿ ಕೇಂದ್ರದಲ್ಲೇ ಇದನ್ನು ಮಾಡದೆಯೇ ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಅನೇಕ ಜಿಲ್ಲೆಗಳಲ್ಲಿ ಬರಗಾಲದಿಂದ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗಿದೆ. ಎಲ್ಲಾ ಕಡೆ ನಾನೂರು ಅಡಿಗಳವರೆಗೆ ಹೋದರೂ ನೀರು ಬಾರದಿರುವ ಪರಿಸ್ಥಿತಿ ಇದೆ. ಕೆಲವು ಕಡೆ ಸಣ್ಣಪುಟ್ಟ ರಿಪೇರಿ ಮಾಡಿಸಿ ನೀರು ಕೊಡುವ ವ್ಯವಸ್ಥೆ ಇದೆ. ಆದರೆ ಪಂಚಾಯಿತಿ ಕಾಯ್ದೆಯ ಪ್ರಕಾರ ಗ್ರಾಮಪಂಚಾಯಿತಿಗಳಿಗೆ ಓವರ್‌ಹೆಡ್ ಟ್ಯಾಂಕ್‌ನ ನೀರು ಸರಬರಾಜು ವ್ಯವಸ್ಥೆ ಇದೆ. ಅದಕ್ಕೆ ಮೋಟಾರು ಕೆಟ್ಟುಹೋದರೆ ದುರಸ್ತಿ ಮಾಡುವುದನ್ನು ಗ್ರಾಮಪಂಚಾಯಿತಿಯ ವ್ಯಾಪ್ತಿಗೆ ವಹಿಸಿಬಿಟ್ಟಿದ್ದಾರೆ. ಯಾವುದೇ ಗ್ರಾಮ ಪಂಚಾಯಿತಿಯಲ್ಲಿ ಹಣಕಾಸಿನ ಲಭ್ಯತೆ ಇರುವುದಿಲ್ಲ. ಆದ್ದರಿಂದ ಏನಾದರೂ ಮೋಟಾರ್ ಕೆಟ್ಟುಹೋದರೆ ದುರಸ್ತಿ ಮಾಡಿಸಲು ತಿಂಗಳುಗಟ್ಟಲೆ ಕಾಯಬೇಕಾಗುತ್ತದೆ.

ಪಂಚಾಯಿತಿಯವರು ದುರಸ್ತಿ ಮಾಡಿಸದಿದ್ದಾಗ ಜನರು ಶಾಸಕರ ಹತ್ತಿರ ಬಂದು ದುಂಬಾಲುಬೀಳುತ್ತಾರೆ. ನಾವು ಜಿಲ್ಲಾಪಂಚಾಯಿತಿಯವರಿಗೆ ರಿಪೇರಿ ಮಾಡಿ ಎಂದರೆ ಅವರು ಗ್ರಾಮಪಂಚಾಯಿತಿಯವರು ಅದನ್ನು ಮಾಡಿಕೊಳ್ಳಬೇಕು ಎಂದು ಹೇಳಿಬಿಡುತ್ತಾರೆ. ಇದರಿಂದಾಗಿ ಎಷ್ಟೋ ಕಡೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಪಡಿಸಲು ಸಾಧ್ಯವಾಗಿಲ್ಲ. ಅದೇ ರೀತಿ ಬೋರ್‌ವೆಲ್ ಕೆಟ್ಟು ಹೋದರೆ ದುರಸ್ತಿ ಮಾಡುವ ಅಧಿಕಾರ ತಾಲ್ಲೂಕು ಪಂಚಾಯಿತಿಗೆ ಇದೆ. ತಾಲ್ಲೂಕು ಪಂಚಾಯಿತಿಗಳಿಂದ ಬೋರ್‌ವೆಲ್‌ನ್ನು ರಿಪೇರಿ ಮಾಡಿಸುವ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಹಿಂದೆ ಇದು ಜಿಲ್ಲಾಪಂಚಾಯಿತಿಯ ತಾಂತ್ರಿಕ ವಿಭಾಗದಲ್ಲಿದ್ದಾಗ ಅವರು ಹೇಗಾದರು ಮ್ಯಾನೇಜ್ ಮಾಡಿ ಸಮರ್ಪಕವಾಗಿ ಎಲ್ಲಾ ಸಮಸ್ಯೆಗಳು ಉದ್ಭವವಾಗದಂತೆ ನೋಡಿಕೊಳ್ಳುತ್ತಿದ್ದರು. ಎಲ್ಲಿ ಬರಗಾಲವಿದೆ, ಕುಡಿಯುವ ನೀರಿಗೆ ತೊಂದರೆ ಇದೆ ಅಲ್ಲಾದರೂ ತಾತ್ಕಾಲಿಕವಾಗಿ ರಿಪೇರಿ ಕೆಲಸದ ಮೆನೇಜ್‌ಮೆಂಟ್‌ನ್ನು ಜಿಲ್ಲಾ ಪಂಚಾಯಿತಿಯ ತಾಂತ್ರಿಕ ವಿಭಾಗಕ್ಕೆ ವಹಿಸಿ ಕೆಲಸ ಮಾಡಿಕೊಡಬೇಕು. ಇದರಿಂದ ಜನರ ಸಮಸ್ಯೆಗೆ ಪರಿಹಾರ ದೊರಕುತ್ತದೆ. ಅನೇಕ ತಾಲ್ಲೂಕುಗಳಿಗೆ ನದಿ ನೀರಿನ ಸೌಲಭ್ಯವಿಲ್ಲ. ಉದಾಹರಣೆಗೆ, ಗುಂಡ್ಲುಪೇಟೆ ತಾಲ್ಲೂಕಿಗೆ ಯಾವುದೇ ನದಿ ನೀರಿನ ಸೌಲಭ್ಯವಿಲ್ಲ. ಪೂರ್ಣ ಒಣ ಭೂಮಿಯಿಂದ ಕೂಡಿರುವ ತಾಲ್ಲೂಕಾಗಿದೆ. ಅನೇಕ ತಾಲ್ಲೂಕುಗಳಲ್ಲಿ ಮೇಜರ್ ಇರಿಗೇಷನ್, ಮೀಡಿಯಂ ಇರಿಗೇಷನ್‌ಗಾಗಿ ಸಾವಿರಾರು ಕೋಟಿ ಹಣವನ್ನು ಹಾಕಿ ನೀರಾವರಿ ಯೋಜನೆಗಳನ್ನು ಮಾಡಿ ಕುಡಿಯುವ ನೀರನ್ನು ವ್ಯವಸಾಯಕ್ಕೆ ನೀರನ್ನು ಭೂಮಿಗೆ ನೀರನ್ನು ಕೊಡತಕ್ಕ ವ್ಯವಸ್ಥೆ ಇದೆ. ಯಾವುದೇ ನದಿ ನೀರಿನ್ನು ತರಲು ಸಾಧ್ಯವಿಲ್ಲದಿರುವ ತಾಲ್ಲೂಕುಗಳಿಗೆ, ನೀರಾವರಿ ಯೋಜನೆಯಿಂದ ವಂಚಿತವಾಗಿರುವ ತಾಲ್ಲೂಕುಗಳಿಗೆ ಸಣ್ಣ ನೀರಾವರಿ ಇಲಾಖೆಯಲ್ಲಿ ಏನು ಕೆರೆಕಟ್ಟೆಗಳಿವೆ ಅದಕ್ಕೆ ಹೆಚ್ಚಿನ ಅನುದಾನವನ್ನು ಕೊಟ್ಟು ಅಭಿವೃದ್ಧಿಪಡಿಸಲು ಮಹತ್ವ ಕೊಡಬೇಕಾಗುತ್ತದೆ. ನೀರಾವರಿ ಪ್ರದೇಶದಲ್ಲೂ ಸಣ್ಣ ನೀರಾವರಿಯಿಂದ ಅಷ್ಟೇ ಅನುದಾನ, ನೀರಾವರಿಯಲ್ಲದ ಪ್ರದೇಶಕ್ಕೂ ಅಷ್ಟೇ ಅನುದಾನವನ್ನು ಕೊಡುವುದರಿಂದ ತಾರತಮ್ಯ ಮಾಡಿದಂತಾಗುತ್ತದೆ. ಅದನ್ನು ಸರಿದೂಗಿಸಲು, ಯಾವುದೇ ನೀರಾವರಿ ಯೋಜನೆಯ ಅಡಿಯಲ್ಲಿ ಒಳಪಡದಿರುವ ತಾಲ್ಲೂಕುಗಳಿಗೆ ಸಣ್ಣ ನೀರಾವರಿ ಇಲಾಖೆಯಿಂದ ಸಮುದಾಯ ಇರಿಗೇಷನ್ ಇರಬಹುದು, ಸಮಾಜ ಕಲ್ಯಾಣ ಇಲಾಖೆಯಿಂದೇನು ಗಂಗಾ ಕಲ್ಯಾಣ ಯೋಜನೆ ಮಾಡುತ್ತಿದ್ದಾರೆ ಅಂಥದ್ದನ್ನು ಪ್ರತಿಯೊಂದು ಗ್ರಾಮಗಳಲ್ಲಿ ಹತ್ತು ಹದಿನೈದು ಜನ ವ್ಯವಸಾಯಗಾರರನ್ನು ಒಟ್ಟುಗೂಡಿಸಿ ಸರ್ಕಾರವೇ ಕೊಳವೆಬಾವಿ ಮೋಟಾರನ್ನು ಅಳವಡಿಸಿ ನೀರಾವರಿ ವ್ಯವಸ್ಥೆಯನ್ನು ಮಾಡಬೇಕು. ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ನನ್ನ ಕ್ಷೇತ್ರದ ಬಗ್ಗೆ ಸರ್ಕಾರದವರ ಗಮನ ಸೆಳೆಯಬಯಸುತ್ತೇನೆ. ಬೆಳೆ ಪರಿಹಾರ ಹಣವನ್ನು ಕೊಡುವಲ್ಲಿ ಸರ್ಕಾರ ಬಹಳ ನಿಧಾನ ಮಾಡುತ್ತದೆ. ಆನೆ ಬಂದು ಫಸಲನ್ನು ಹಾಳು ಮಾಡುತ್ತದೆ, ಬೇರೆ ಬೇರೆ ಕಾರಣದಿಂದ ಬೆಳೆ ನಾಶವಾದಾಗ ಬೆಲೆ ಪರಿಹಾರಕ್ಕೆ ರೈತರು ಅರ್ಜಿಯನ್ನು ಹಾಕಿರುತ್ತಾರೆ, ಪರಿಹಾರದ ಮೊತ್ತವೂ ಬಹಳ

ಕಡಿಮೆ ಇರುತ್ತದೆ, ಆ ಹಣವನ್ನು ಪಡೆಯುವಷ್ಟರಲ್ಲಿ ಅಷ್ಟೇ ಹಣ ರೈತರಿಗೆ ಖರ್ಚಾಗಿರುತ್ತದೆ. ಆದ್ದರಿಂದ ಅರ್ಜಿಯನ್ನು ಕೊಟ್ಟ ಹದಿನೈದು ಇಪತ್ತು ದಿವಸಗಳಲ್ಲಿ ರೈತರಿಗೆ ಪರಿಹಾರವನ್ನು ಒದಗಿಸುವ ವ್ಯವಸ್ಥೆಯಾಗಬೇಕು. ಮತ್ತೆ ಅರಣ್ಯದ ಅಂಚಿನ ಪ್ರದೇಶಗಳಲ್ಲಿ ಆನೇ ತಡೆ ಕಂದಕಗಳನ್ನು ನಿರ್ಮಿಸಿ ಅಲ್ಲಿ ಒಂದು ಸೋಲಾರ್ ಫೆನ್ಸಿಂಗ್ ಹಾಕಿ ಕಾಡುಪ್ರಾಣಿಗಳು ಕೃಷಿ ಭೂಮಿ ಕಡೆ ಬರದೇ ಇರುವಂತಹ ವ್ಯವಸ್ಥೆಯನ್ನು ಮಾಡಬೇಕು. ಅಂಚಿನ ಪ್ರದೇಶದಲ್ಲಿರುವ ರೈತರು ಮನೆಮಠ ಬಿಟ್ಟು ದಿನಾ ರಾತ್ರಿ ಹೊತ್ತು ಈ ಕಾಡುಪ್ರಾಣಿಗಳನ್ನು ಕಾಯ್ದುಕೊಂಡಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೆ ಯಾವುದೇ ರೀತಿಯಾದ ಒಂದು ಸ್ಕೀಂ ಅರಣ್ಯ ಇಲಾಖೆಯಲ್ಲಿಲ್ಲ. ಶಾಸಕರುಗಳು ಒತ್ತಡ ತಂದು ವೈಯಕ್ತಿಕವಾಗಿ ಇಂತಹ ಸ್ಕೀಮ್‌ಗಳನ್ನು ಮಂಜೂರು ಮಾಡಿಸಬೇಕೇ ಹೊರತು ಅರಣ್ಯ ಇಲಾಖೆಯ ಕಾರ್ಯಕ್ರಮಗಳಲ್ಲಿ ಆನೆ ತಡೆ ಕಂದಕ ನಿರ್ಮಿಸುವ ವ್ಯವಸ್ಥೆಯಿಲ್ಲ. ಅದನ್ನು ಇಲಾಖೆಯ ಕಾರ್ಯಕ್ರಮಗಳ ವ್ಯಾಪ್ತಿಗೆ ಸೇರಿಸಿ ಮಾಡಬೇಕು. ಇನ್ನು ಬಂಡೀಪುರ ಕಾದಿಟ್ಟ ಅರಣ್ಯವಿದೆ, ಅಲ್ಲಿ ಯಾವುದೇ ಮರ ಬಿದ್ದುಹೋಗಲಿ ಏನೇ ಆಗಲಿ ಯಾರೂ ಮುಟ್ಟಲು ಅವಕಾಶವಿಲ್ಲ ಮತ್ತೆ ಅಲ್ಲಿ ಖಾಸಗಿ ವ್ಯಕ್ತಿಗಳು ಅರಣ್ಯ ಪ್ರವೇಶಿಸಲು ಅವಕಾಶವಿಲ್ಲ. ಆದರೆ 20, 30 ವರ್ಷಗಳ ಹಿಂದೆ ಒಣಗಿ ಬಿದ್ದುಹೋಗಿರುವ ಮರಗಳನ್ನು ಎತ್ತಿಹಾಕುವ ವ್ಯವಸ್ಥೆ ಇಲ್ಲ. ಇದರಿಂದ ಬೇಸಿಗೆ ಕಾಲದಲ್ಲಿ ಅವು ಕಾಳ್ಗಿಚ್ಚಾಗಿ ಬೆಂಕಿಯಿಂದ ಕಾಡು ನಾಶವಾಗುತ್ತಿದೆ. ಆದ್ದರಿಂದ ಅಂಥವನ್ನು ಐದು ಹತ್ತು ವರ್ಷಕ್ಕೊಂದು ಸಲವಾದರೂ ಹಾಗೆ ಒಣಗಿ ಬಿದ್ದಿರುವ ಮರಗಳನ್ನು ಹೊರಗಡೆ ಸಾಗಿಸುವ ವ್ಯವಸ್ಥೆಯನ್ನು ಮಾಡಬೇಕು.

ರೂರಲ್ ಡೆವಲಪ್‌ಮೆಂಟ್ ಇಲಾಖೆಯಲ್ಲಿ ಗ್ರಾಮೀಣ ಇಂಧನಶಕ್ತಿ ಎಂದು ಏನಿದೆ ಇದನ್ನು ಸ್ವಲ್ಪ ಸೀಮಿತವಾದ ರೀತಿ ಮಾಡುತ್ತಿದ್ದಾರೆ. ಇದಕ್ಕೆ ಹೆಚ್ಚಿನ ಮಹತ್ವ ಕೊಡುವುದರಿಂದ ಗ್ರಾಮಾಂತರದಲ್ಲಿ ಇಂಧನದ ಕೊರತೆ ನೀಗಬಹುದಾಗಿದೆ. ಇವತ್ತು ಇನ್ನೂ ಅನೇಕ ವಿಚಾರಗಳನ್ನು ಮಾತನಾಡಬೇಕೆಂದಿದ್ದರೂ ಕಾಲಾವಕಾಶ ಇಲ್ಲದೇ ಇರುವುದರಿಂದ ನನ್ನನ್ನು ಬಹಳ ಇಕ್ಕಟ್ಟಿಗೆ ಸಿಲುಕಿಸುತ್ತಿದ್ದೀರಿ. ಈ ವಿಚಾರಗಳ ಬಗ್ಗೆ ಸರ್ಕಾರ ಉತ್ತರ ಕೊಡುವಾಗ ತಿಳಿಸಬೇಕೆಂದು ಕೋರಿ ತಮಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

+ ಶ್ರೀ ಎಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) :— ಅಧ್ಯಕ್ಷರೇ, ನಮ್ಮ ದೇಶ ಇವತ್ತು ಕೃಷಿಗೆ ಹೆಚ್ಚಿನ ಆದ್ಯತೆ ಕೊಡುತ್ತಿರುವ ದೇಶವಾಗಿದೆ. ಆದರೆ ರೈತ ಇವತ್ತು ಅನೇಕ ವಿಚಾರಗಳಲ್ಲಿ ಬಹಳ ಹಿಂದುಳಿದಿದ್ದಾನೆ. ಕೃಷಿಗೆ ನಮ್ಮ ಈ ಸರ್ಕಾರ ಹೆಚ್ಚಿನ ಆದ್ಯತೆ ಕೊಟ್ಟಿದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳ ಆದೇಶದಂತೆ ಕೆರೆ ಆಶ್ರಿತ ಭೂಮಿ ಬಹಳ ಇದ್ದರೂ ಕೆರೆಗಳಲ್ಲಿ ನೀರಿಲ್ಲ. ಆದ್ದರಿಂದ ಕೆರೆಯಲ್ಲಿರುವ ಹೂಳನ್ನು ತೆಗೆಸಿ ಆದಷ್ಟು ಜಾಗ್ರತೆ ಮಳೆ ನೀರನ್ನು ಸಂಗ್ರಹಮಾಡುವುದರಿಂದ ಕೃಷಿಗೆ ಹೆಚ್ಚಿನ ಆದ್ಯತೆ ಕೊಟ್ಟಂತಾಗುವುದು. ರೈತರಿಗೂ ನಾವು ಸಹಕಾರ ಕೊಟ್ಟಂತಾಗುವುದು.

ಇವತ್ತು ವಿದ್ಯುತ್ ದೀಪ, ಅಲಂಕಾರ ಬರೀ ಪಟ್ಟಣದಲ್ಲೇ ಇದೆ. ವಿದ್ಯುದ್ದೀಪದ ವಿಷಯದಲ್ಲಿ ಹಳ್ಳಿ ರೈತ ಬಹಳ ಹಿಂದೆಬಿದ್ದಿದ್ದಾನೆಂದರೆ ತಪ್ಪಾಗಲಾರದು. ಆದ್ದರಿಂದ ಸರ್ಕಾರ ರೈತರಿಗೆ ಹೆಚ್ಚಿನ ರೀತಿಯಲ್ಲಿ ಒದಗಿಸಬೇಕೆಂದು ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತಿದ್ದೇನೆ. ಇನ್ನೊಂದು ವಿಚಾರ, ಸರ್ಕಾರ ಮನಸು ಮಾಡಿದರೆ ಪ್ರತಿ ಗ್ರಾಮದ ಒಳಗಡೆ ಕನಿಷ್ಠ ಒಂದು ಕಿಲೋಮೀಟರ್ ಆದರೂ ಡಾಂಬರೀಕರಣ ಮಾಡಿದರೆ ನಿಜವಾಗಲೂ ರೈತರಿಗೆ ಸಂತೋಷ ಕೊಟ್ಟಂತಾಗುವುದು. ಏಕೆಂದರೆ ಊರೊಳಗಿನ ರಸ್ತೆ ಸರಿಯಿಲ್ಲದೆ ಅಲ್ಲಿನ ರೈತ ಧೂಳುಮಯವಾಗಿರುತ್ತಾನೆ. ಅವರೂ ನಮ್ಮಂತೆಯೇ ಪ್ರಜೆಗಳು, ನಾವು ಬರೀ ಪಟ್ಟಣದವರನ್ನೇ ನೋಡಬಾರದು. ಗ್ರಾಮಾಂತರಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು. ಕನಿಷ್ಠ ಒಂದು ಕಿಲೋಮೀಟರ್ ಡಾಂಬರೀಕರಣ ಮಾಡಿಕೊಟ್ಟರೆ ಅವರಿಗೆ ಹೆಚ್ಚಿನ ರೀತಿ ಸಹಕಾರ ಕೊಟ್ಟಂತಾಗುವುದು. ಏಕೆಂದರೆ ಕೃಷಿ ನಂಬಿರುವ ರೈತ ಇವತ್ತು ನಿಷ್ಕ್ರಿಯನಾಗಿದ್ದಾನೆ. ಅವನು ಬೆಂಗಳೂರಿಗೆ ಬರುವಷ್ಟು ಶಕ್ತಿ ಇಲ್ಲ. ಅಂಥವರಿಂದ ವೋಟು ಪಡೆದು ಅವರ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದಿದ್ದೇವೆ. ಒಂದು ರೀತಿಯ ಸಂತೋಷ. ಆದರೆ ಯಾವತ್ತಿಗೂ ಅವನನ್ನು ನಾವು ಮರೆಯಬಾರದು ಎಂದು ಅಧ್ಯಕ್ಷರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಇನ್ನು ತೋಟಗಾರಿಕೆ. ತೋಟಗಾರಿಕೆ ಇವತ್ತು ಬಹಳ ಮುಖ್ಯ. ನಮ್ಮ ಕ್ಷೇತ್ರದಲ್ಲೂ ಅಡಿಕೆ, ತೆಂಗು, ಬಾಳೆ, ಕಬ್ಬು ಇದ್ದರೂ ಭತ್ತದ ಕಣಜವೂ ಹೌದು. ಆದ್ದರಿಂದ ನುಸಿರೋಗಪೀಡೆ ವಿಚಾರದಲ್ಲಿ ಸರ್ಕಾರ ನಮ್ಮ ಜಿಲ್ಲೆಗೆ ಹೆಚ್ಚಿನ ಆದ್ಯತೆ ಕೊಟ್ಟಿದೆ. ಅದು ಮತ್ತೆ ಹಬ್ಬದಂತೆ ಹೆಚ್ಚಿನ ಆದ್ಯತೆ ಕೊಡಬೇಕಾಗಿದೆ. ಅದೇ ರೀತಿ ಪಾಮ್ ಆಯಿಲ್ ಮರಗಳನ್ನು ಬೆಳೆಯಲು ಸರ್ಕಾರ ಎಲ್ಲಾ ರೀತಿಯ ಪ್ರೋತ್ಸಾಹ ಕೊಡುತ್ತಿತ್ತು ಆದರೆ ಇವತ್ತು ಪಾಮ್ ಆಯಿಲ್ ಗಿಡಗಳನ್ನು ರೈತರು ಕಿತ್ತುಹಾಕುತ್ತಿದ್ದಾರೆ. ಇದು ನಿಜವಾಗಲೂ ದು:ಖಪಡಬೇಕಾದ ವಿಚಾರ. ಎಣ್ಣೆಕಾಳು ಕೊಡುವ ಆ ಮರವನ್ನು ಇವತ್ತು ಉಳಿಸಬೇಕಾಗಿದೆ. ಏಕೆಂದರೆ ಮನುಷ್ಯನಿಗೆ ಅದು ಆಶ್ರಯದಾತ ಆಗಿದೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದರೂ ಇವತ್ತು ತಾತ್ಸಾರ ಭಾವನೆಯಿಂದ ಅದನ್ನು ನೋಡುತ್ತಿದ್ದೇವೆ. ಹಾಗಾಗುವುದು ಬೇಡವೆಂದು ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಅದೇ ರೀತಿ ನಮ್ಮಲ್ಲಿ ಕೃಷಿ ಸಂಬಂಧಿತ ಕಾಲೇಜಿದ್ದರೂ ಅಲ್ಲಿ ಅನೇಕ ಸಂಶೋಧನೆ ಮಾಡುವ ಅನೇಕ ವಿದ್ವಾಂಸರೂ ಇದ್ದಾರೆ,. ಅವರಿಂದ ಅಡಿಕೆ ಮೇಲೆ ಸಂಶೋಧನೆ ನಡೆಸಬೇಕೆಂದು ಅಧ್ಯಕ್ಷರಲ್ಲಿ ಕೇಳುತ್ತಿದ್ದೇನೆ. ಅಡಿಕೆಯನ್ನು ಎಲ್ಲಾ ಭಾಗದಲ್ಲೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ಒಂದು ರೀತಿ ಮನಗೆ ದು:ಖವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಸಹಕಾರ ಕೊಟ್ಟು ಅಡಿಕೆಧಾರಣೆಯನ್ನು ಉತ್ತಮವಾಗಿ ಉಳಿಸಿಕೊಳ್ಳಲು ಅವಕಾಶ ಕೊಟ್ಟಿದ್ದಾರೆ. ಇವತ್ತು ಭತ್ತಕ್ಕೆ ಬೆಲೆಯಿಲ್ಲ. ರಾಗಿ, ಜೋಳಕ್ಕೆ, ಬೆಲೆ ಇಲ್ಲ ಆದರೆ ಅಡಿಕೆಗೆ ಸ್ವಲ್ಪ ಬೆಲೆ ಇದೆ. ಅದನ್ನು ಉಳಿಸಿ ಕೊಡುವುದು ಸರ್ಕಾರದ ಕರ್ತವ್ಯ. ಹಾಗೆ ಉಳಿಸಿಕೊಟ್ಟಿರುವ ಮಾನ್ಯ ಮುಖ್ಯಮಂತ್ರಿಗಳಿಗೆ ನಾವು ಧನ್ಯವಾದ ಅರ್ಪಿಸುತ್ತಿದ್ದೇವೆ.

ಇನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕೇಂದ್ರಗಳಿಗೆ ರಾಜ್ಯದಲ್ಲಿ ಎಲ್ಲಾ ರೀತಿಯ ಸಹಕಾರವನ್ನೂ ಕೊಡಬೇಕು. ಏಕೆಂದರೆ ನಮಗೆ ಅನೇಕ ರೀತಿಯ ರೋಗಗಳು ಬರುತ್ತಿವೆ ಅದನ್ನು ತಡೆಗಟ್ಟಲು ಸರ್ಕಾರ ಎಲ್ಲಾ ಪ್ರಯತ್ನ ಮಾಡಬೇಕು. ಕೆಲವು ರೋಗಗಳು ಯಾವ ರೀತಿ ಹರಡುತ್ತವೆ ಎಂದು ಗೊತ್ತಾಗುವುದಿಲ್ಲ. ಅದನ್ನು ಸಂಶೋಧನೆ ಮಾಡುವ ಅನೇಕ ಯೋಜನೆಗಳನ್ನು ತಾಲ್ಲೂಕು ಜಿಲ್ಲಾ ಕೇಂದ್ರಗಳಲ್ಲಿ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ. ಹಾಗೆಯೇ ಮಲೆನಾಡಿನಲ್ಲಿ ಬಹಳ ಹೆಚ್ಚಿನ ಪ್ರದೇಶದಲ್ಲಿ ಮಂಗನಕಾಯಿಲೆ ಹಬ್ಬಿದೆ. ಅದರ ಬಗ್ಗೆ ಸಂಶೋಧನೆ ನಡೆಸಲಾಗುತ್ತಿತ್ತು, ಆದರೆ ಅದನ್ನು ಅಲ್ಲಿಂದ ಸ್ಥಳಾಂತರಿಸಲಾಗುತ್ತಿದೆಯೆಂದು ಗೊತ್ತಾಗಿದೆ. ಅದನ್ನು ಸ್ಥಳಾಂತರಿಸಬಾರದೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ಪ್ರಮುಖ ವಿಷಯವೇನೆಂದರೆ, ರಾಜ್ಯದ ಎಲ್ಲಾ ಭಾಗಗಳಲ್ಲೂ ರೈತರು ಬಗರ್‌ಹುಕಂ ಸಾಗುವಳಿ ಮಾಡುತ್ತಿದ್ದಾರೆ. ಇದು 30-40 ವರ್ಷಗಳಿಂದ ನಡೆದಿದೆ. ಅಂಥವರಿಗೆ ಒಂದು ರೀತಿ ಅರಣ್ಯದವರ ಕಾಟ, ಒಂದು ರೀತಿ ಸರ್ಕಾರದವರ ಕಾಟ, ಅಂದರೆ ಬೇರೆ ಇಲಾಖೆಗಳ ಕಾಟ. ಆದ್ದರಿಂದ ಅಂತಹ ಬಗರ್‌ಹುಕುಂ. ಸಾಗುವಳಿದಾರನಿಗೆ ಸರ್ಕಾರ ಮನಸ್ಸು ಮಾಡಿ ಪಟ್ಟಾ ಕೊಟ್ಟರೆ ಅರ್ಧ ಎಕರೆ ಒಂದು ಎಕರೆ ಎರಡೆಕರೆ ಮಾಡಿರುವ ಸಾಗುವಳಿದಾರನಿಗೆ ನಿಜವಾಗಿ ಆಶ್ರಯ ಕೊಟ್ಟಂತಾಗುವುದು ಇಲ್ಲದೇ ಹೋದರೆ ಈ ಭೂಮಿ ತನ್ನದಲ್ಲವೆಂದು ತಿಳಿದು, ಇದು ಯಾವತ್ತು ನನಗೆ ಸಿಗುವುದೋ ಎಂದು ಎಲ್ಲರಲ್ಲೂ ಭಿಕ್ಷಾಟನೆ ಮಾಡುತ್ತಿದ್ದಾನೆ. ಒಬ್ಬ ಮಂತ್ರಿ ಬರಲಿ, ಅಥವಾ ಹಿರಿಯ ರಾಜಕಾರಣಿ ಬರಲಿ ಎಲ್ಲರ ಹತ್ತಿರವೂ ಕೇಳುತ್ತಿದ್ದಾನೆ. ಯಾವತ್ತು ನನಗೆ ಸಕ್ರಮ ಮಾಡಿಕೊಡುತ್ತೀರಿ ಎಂದು ಕೇಳುತ್ತಿದ್ದಾನೆ. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಆದಷ್ಟು ಬೇಗ ಸಕ್ರಮ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅದೇ ರೀತಿ ರೇಷ್ಮೆ. ನಮ್ಮ ಕ್ಷೇತ್ರದಲ್ಲಿ ಕೋಟ್ಯಾಂತರ ರೂಪಾಯಿಗಳ ಕಟ್ಟಡ ಕಟ್ಟಿದ್ದಾರೆ. ಆದರೆ ರೇಷ್ಮೆ ಅಭಿವೃದ್ಧಿ ಇವತ್ತು ಆಗುತ್ತಿಲ್ಲ. ಆ ಭಾಗದಲ್ಲಿ ರೇಷ್ಮೆ ಅಭಿವೃದ್ಧಿಪಡಿಸಬೇಕೆಂದು ಅಧ್ಯಕ್ಷರಲ್ಲಿ ಕೇಳುತ್ತಿದ್ದೇನೆ. ಇನ್ನು ಬೋರ್‌ವೆಲ್‌ಗಳ ವಿಚಾರ. ನಾವು ಪಟ್ಟಣದಲ್ಲಿ ನೋಡಿರಬಹುದು. ಗ್ರಾಮಾಂತರದಲ್ಲೂ ನೋಡಬಹುದು. ಒಬ್ಬ ಬೋರ್ ಹಾಕಿಸಿದರೆ ಪಕ್ಕದ ಇನ್ನೊಬ್ಬ ಬೋರ್ ಹಾಕಿಸುತ್ತಾನೆ. ಯಾಕೆಂದರೆ ತನಗೂ ನೀರು ಬೇಕು ಎಂದು. ಆದರೆ ಅಂತರ್ಜಲ ಇಷ್ಟು ಅಡಿ ದೂರವಿದ್ದರೆ ನೀರು ಸಿಕ್ಕುತ್ತದೆ. ಇದನ್ನು ಮರೆತು ತನ್ನ ಬೆಳೆ ಉಳಿಸಿಕೊಳ್ಳಲು ಅಕ್ಕಪಕ್ಕದಲ್ಲೇ ಬೋರ್ ಹಾಕುತ್ತಿರುವ ರೈತನಿಗೆ ಒಂದು ನಿಯಮದ ಕಡಿವಾಣವನ್ನು ಹಾಕಿ ಇಷ್ಟೇ ದೂರದಲ್ಲಿ ಹಾಕಬೇಕೆಂದು ಯೋಜನೆ ಮಾಡಿಕೊಟ್ಟರೆ ಆ ನೀತಿ ಫಲಪ್ರದವಾಗುವುದು. ಈಗ

ಕೆರೆಗಳಲ್ಲೂ ನೀರಿಲ್ಲ, ಬೋರ್‌ವೆಲ್‌ನಲ್ಲೂ ನೀರಿಲ್ಲ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಆಲೋಚನೆ ಮಾಡಬೇಕೆಂದು ಸಚಿವರಲ್ಲಿ ಕೇಳುತ್ತಿದ್ದೇನೆ.

ಇನ್ನು ಪ್ರಾಥಮಿಕ ಪ್ರೌಢಶಿಕ್ಷಣ ಸಚಿವರಲ್ಲಿ ನಾನು ಕೇಳುವುದಿಷ್ಟೆ ಅನೇಕ ಹಳ್ಳಿಗಳಲ್ಲಿ ಶಾಲೆಗಳೇನೋ ಇವೆ. ಅವುಗಳ ದುಸ್ಥಿತಿಯನ್ನು ನಮ್ಮ ಸರ್ಕಾರ ರಿಪೇರಿ ಮಾಡಿಸುತ್ತಿದೆ. ಆದರೆ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿಲ್ಲ. ಅನೇಕ ಶಾಲೆಗಳು ಈಗಾಗಲೇ ಬಿದ್ದು ಹೋಗುವ ಸ್ಥಿತಿಯಲ್ಲಿವೆ. ಆದ್ದರಿಂದ ಸರ್ಕಾರ ವಿಶೇಷ ಆದ್ಯತೆಯನ್ನು ಶಾಲಾಕಟ್ಟಡಕ್ಕೆ ಅಂಗನವಾಡಿ ಕಟ್ಟಡಗಳಿಗೆ ಕೊಡಬೇಕೆಂದು ಅಧ್ಯಕ್ಷರ ಮೂಲಕ ಸರ್ಕಾರದವರನ್ನು

3.40 ಪಿ.ಎಂ.

ಕೇಳುತ್ತಿದ್ದೇನೆ. ಕೆಲವು ಮಕ್ಕಳು ಪಟ್ಟಣದಲ್ಲಿ ಉತ್ತಮ ಶಾಲೆಗಳಲ್ಲಿ ಓದುತ್ತಾರೆ. ಆದರೆ ಇನ್ನು ರೈತರ ಮಕ್ಕಳು, ಕೂಲಿ ಕಾರ್ಮಿಕರ ಮಕ್ಕಳು ಹಳ್ಳಿ ಗ್ರಾಮಗಳಲ್ಲಿ ಓದತಕ್ಕ ಮಕ್ಕಳುಗಳಿಗೆ ಉತ್ತಮವಾಗಿರುವ ಕಟ್ಟಡವನ್ನು ಕೊಟ್ಟರೆ ನಿಜವಾಗಿಯೂ ಆ ಮಕ್ಕಳು ಈ ದೇಶದಲ್ಲಿ ಉತ್ತಮ ಪ್ರಜೆಯಾಗಿ ಹುಟ್ಟಿ ಉನ್ನತವಾದ ವ್ಯಾಸಂಗವನ್ನು ಮಾಡುವುದಕ್ಕೆ ಅವಕಾಶವಿದೆ ಎನ್ನುವ ಸಂತೋಷವಾದ ಭಾವನೆ ಮಕ್ಕಳಲ್ಲೂ ಬರುತ್ತದೆ. ಆ ಮಕ್ಕಳ ಭವಿಷ್ಯಕ್ಕೋಸ್ಕರ ಈ ಶಾಲೆಯನ್ನು ಅಭಿವೃದ್ಧಿಪಡಿಸತಕ್ಕದ್ದು. ಇದನ್ನು ಸರ್ಕಾರ ಗಮನಿಸಬೇಕು. ಅದೇ ರೀತಿ ವಯಸ್ಕರ ಶಿಕ್ಷಣ ಸಮಿತಿ ಬಗ್ಗೆ ಹೇಳುವುದಾದರೆ ಆ ಇಲಾಖೆ ಎಲ್ಲಿ ಕೆಲಸ ಮಾಡುತ್ತದೆ, ಏನು ಮಾಡುತ್ತಿದೆ ಎಂಬುದು ಯಾರಿಗೂ ಗೊತ್ತಿಲ್ಲ. ನಮ್ಮ ಕ್ಷೇತ್ರದಲ್ಲೂ ಆ ಇಲಾಖೆ ಇದೆ. ಆದರೆ ಆ ಇಲಾಖೆ ಏನಾಗಿದೆ ಎಂಬುದು ಗೊತ್ತಿಲ್ಲ ಯಾರು ಕೆಲಸ ಮಾಡುತ್ತಾರೆ, ಯಾರು ಹೋಗುತ್ತಾರೆ ಎಂಬುದೂ ಗೊತ್ತಾಗುತ್ತಿಲ್ಲ. ಸರ್ಕಾರ ಅದರ ಬಗ್ಗೆ ಹೆಚ್ಚಿನ ಕಡಿವಾಣವನ್ನು ಹಾಕಿ ಹೆಚ್ಚಿನ ಆದ್ಯತೆಯನ್ನು ಕೊಟ್ಟು ವಯಸ್ಕರಿಗೂ ಕೂಡ ಕಡೆಯ ಪಕ್ಷ ಸಹಿ ಮಾಡುವುದನ್ನು ಕಲ್ಪಿಸಿಕೊಟ್ಟರೂ ಸಾಕು. ಸಹಿ ಮಾಡದೆ ಹೆಬ್ಬೆಟ್ಟನ್ನು ಒತ್ತುವಾರದು ನಾವು "ಅಕ್ಷರ ತುಂಗಾ"ಎನ್ನುವ ಕಾರ್ಯಕ್ರಮವನ್ನು ಮಾಡಿದ್ದೇವೆ. ನಮ್ಮ ಜಿಲ್ಲೆಯಲ್ಲೂ ಕೂಡ ಸಾಕ್ಷರತಾ ಆಂದೋಲನ ಆಗಿತ್ತು ಎಂದು ಹಿಂದಿ ಸರ್ಕಾರ ಹೇಳಿತ್ತು. ಆದರೆ ನಾವು ನೋಡಿದಾಗ ಆ ಸಾಕ್ಷರತಾ ಆಂದೋಲನಾ ಇನ್ನೂ ಆಗಿಲ್ಲ. ರೈತ ಕೂಡ ಸಹಿ ಮಾಡುವ ಹಾಗೆ ಮಾಡಬೇಕೆನ್ನುವ ಉದ್ದೇಶದಿಂದ ಮಾನ್ಯ ಸರ್ಕಾರ ಅದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳುತ್ತೇನೆ. ಅದೇ ರೀತಿ ಕೃಷಿ ಕಾರ್ಮಿಕರ ಬಗ್ಗೆ ನೋಡಿದರೆ ಅವರಿಗೆ ಹೆಚ್ಚಿಗೆ ಸಂಬಳ ಸಿಗುತ್ತಿಲ್ಲ. ಅದಕ್ಕಾಗಿ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಇದ್ದಾರೆ. ಅವರಿಗೆ ಹೆಚ್ಚಿಗೆ ಕೂಲಿ ಕೊಡುವ ಬಗ್ಗೆ ಸರ್ಕಾರ ಮನಸ್ಸು ಮಾಡಬೇಕೆಂದು ಹೇಳುತ್ತೇನೆ. ಹಾಗೆಯೇ ಸೋಲಾರ್ ಎನರ್ಜಿಗೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಹೇಳುತ್ತೇನೆ. ಇವತ್ತು ಮಳೆಯೇ ಬರುತ್ತಿಲ್ಲ. ಮಳೆ ಇಲ್ಲದೆ ಬೆಳೆಯ ಜೊತೆಗೆ ಬೀದಿ ದೀಪದ ಒಂದು

ತೊಂದರೆಯು ಜಾಸ್ತಿಯಾಗಿದೆ. ಬೀದಿ ದೀಪ ಉರಿಸುವುದನ್ನೇ ನಿಲ್ಲಿಸಬೇಕಾದ ಪರಿಸ್ಥಿತಿ ಬರುತ್ತಿದೆ. ಆದ್ದರಿಂದ ಸೋಲಾರ್ ಎನರ್ಜಿಗೆ ನಾವು ಹೆಚ್ಚಿನ ಆದ್ಯತೆಯನ್ನು ಕೊಟ್ಟರೆ ಅನುಕೂಲವಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ವಿಧಾನಸೌಧದ ಸುತ್ತಮುತ್ತ ಸೋಲಾರ್ ಎನರ್ಜಿಯನ್ನು ನೀವು ಮಾಡಿದರೆ ಜನಗಳಿಗೆ ಗೊತ್ತಾಗುತ್ತದೆ. ಸೋಲಾರ್ ಎನರ್ಜಿಯಿಂದ ರಾತ್ರಿ ಹೊತ್ತು ನಾವು ದೀಪವನ್ನು ಬೆಳಗಿಸಬಹುದು ಎಂದು ಅವರಿಗೆ ಗೊತ್ತಾಗುತ್ತದೆ. ಇವತ್ತು ಅದು ದುಬಾರಿ ಎಂದು ಹೇಳಬಹುದು. ಆದರೆ ಎಲ್ಲಾ ಭಾಗದಲ್ಲೂ ಅದು ಬಂದಿದೆ ಕಡಿಮೆಗೆ ಸಿಕ್ಕಿ ಉತ್ತಮ ಪ್ರಮಾಣದಲ್ಲಿ ಕೆಲಸವಾಗಿ ಜನಗಳಿಗೂ ಅನುಕೂಲವಾಗುತ್ತದೆ. ಅದರಂತೆ ಹಣ್ಣು ಸಂಸ್ಕರಣಾ ಕೇಂದ್ರವನ್ನು ಎಲ್ಲಾ ತಾಲ್ಲೂಕುಗಳಲ್ಲೂ ಮಾಡಬೇಕು. ಇದು ಬಹಳ ಮುಖ್ಯವಾದ ಅಂಶ. ನಾವು ಹಣ್ಣನ್ನು ಬೆಳೆಯುತ್ತೇವೆ. ಬೆಳೆದ ಹಣ್ಣನ್ನು ಮಾರುಕಟ್ಟೆಗೆ ತೆಗೆದುಕೊಂಡು ಬಂದರೆ ಬಹಳ ಕಡಿಮೆ ದರದಲ್ಲಿ ಹೋಗುತ್ತದೆ. ತರಕಾರಿ ಕೂಡ ಮಾರುಕಟ್ಟೆಗೆ ತಂದರೆ ಅದನ್ನು ಬೆಳೆದ ರೈತನಿಗೆ ಕೊಟ್ಟಿರುವ ಕೂಲಿ ಕೂಡ ಹುಟ್ಟುವುದಿಲ್ಲ. ಅದಕ್ಕೂ ಕೂಡ ಸರ್ಕಾರ ಮಧ್ಯವರ್ತಿ ವಹಿಸಿ ಸರ್ಕಾರ ನೇರವಾಗಿ ಅದನ್ನು ಖರೀದಿ ಮಾಡುವ ವಿಚಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ನಮ್ಮ ಎಪಿಎಂಸಿ ಯಾರ್ಡ್‌ಗಳನ್ನು ನೋಡಿದರೆ ದು:ಖವಾಗುತ್ತಿದೆ. ರೈತ ತಂದಿರುವ ಮಾಲಿಗೆ ನಿಜವಾದ ಬೆಲೆ ಕೂಡ ಸಿಗುವುದಿಲ್ಲ. ಪೂರ್ಣ ಬೇಡ, ಸ್ವಲ್ಪವಾದರೂ ಕೂಡ ಹಣ ಸಿಗುವುದಿಲ್ಲ. ಇದು ಬಹಳ ಮುಖ್ಯವಾದ ಅಂಶ. ಇವತ್ತು ಕಾಯಿ ರೇಟನ್ನು ನೋಡಿದರೆ ಗಗನಕ್ಕೆ ಹೋಗಬೇಕಾಗಿತ್ತು. ಇನ್ನು 5 ರೂಪಾಯಿ ಬಂದಿಲ್ಲ. ಈಗ ಎರಡು ರೂಪಾಯಿಗೆ ಬಂದಿದೆ. ಇದು ನಿಜವಾಗಿಯೂ ಶೋಚನೀಯ ಸ್ಥಿತಿ. ರೈತನಿಗೆ ಒಂದು ರೀತಿ ನುಸಿ ರೋಗ, ಬೆಳೆ ಹಾನಿ, ಬೀರೂರು, ಕಡೂರಿನಲ್ಲಿ ನೋಡಿದರೆ ಕಪ್ಪು, ಹುಳು ರೋಗ ಬಂದಿದೆ. ಮೊನ್ನೆ ಕೂಡ ನಾನು ಆ ಭಾಗಕ್ಕೆ ಹೋದಾಗ ರೈತರು ಅದನ್ನು ತೆಗೆದುಕೊಂಡು ಬಂದು ತೋರಿಸಿದರು. ಅದನ್ನು ನೋಡಿದರೆ ನನಗ ದು:ಖವಾಗುತ್ತದೆ. ಅದೇನೋ ಲ್ಯಾಂಪ್ ಹಿಡಿದರೆ ಮಾತ್ರ ಒಳಗಡೆ ಬಂದು ಸೇರಿಕೊಳ್ಳುತ್ತದಂತೆ. ಅದೆಷ್ಟು ದಿವಸ ಹಿಡಿಯುವುದಕ್ಕಾಗುತ್ತದೆ? ಅದಕ್ಕೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಆ ಬೆಳೆಯನ್ನು ಉಳಿಸಬೇಕೆಂದು ಹೇಳುತ್ತೇನೆ. ಮಳೆಯನ್ನು ಶೇಖರಣೆ ಮಾಡುವ ಒಡ್ಡುಗಳನ್ನು ಅದು ಹಳ್ಳಿ ಗ್ರಾಮಗಳಲ್ಲೇ ಇರಬಹುದು ಅಥವಾ ಯಾವುದೇ ಜಮೀನು ಇರಬಹುದು. ಅದನ್ನು ಮಾಡಬೇಕೆಂದು ಹೇಳುತ್ತೇನೆ. ನಮ್ಮ ಕ್ಷೇತ್ರದಲ್ಲಿ ಜಾರಗಲ್ ಹಳ್ಳ ಎಂದು ಇದೆ. ಬಹಳ ವರ್ಷಗಳಿಂದಲೂ ಕೂಡ ಅದು ನೆನೆಗುದಿಗೆ ಬಿದ್ದಿರುವ ಹಳ್ಳ. ಅರಣ್ಯ ಇಲಾಖೆಯವರು ಇದು ನಮ್ಮದು ಎಂದು ಹೇಳುತ್ತಾರೆ. ಮೊನ್ನೆ ಕೂಡ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಸಭೆ ಮಾಡಿದಾಗ ಇದು ಸರ್ಕಾರಕ್ಕೆ ಸೇರಿದ್ದು, ಫಾರೆಸ್ಟ್ ಇಲಾಖೆಗೆ ಸೇರಿಲ್ಲ ಎಂದು ಹೇಳುತ್ತಾರೆ. ಇದರ ಜಿಜ್ಞಾಸೆಯಲ್ಲಿ ಸಾವಿರಾರು ಜನರಿಗೆ ಕುಡಿಯುವ ನೀರು ಇವತ್ತು ಸಿಗುತ್ತಿಲ್ಲ. ಮಾನ್ಯ

ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಪತ್ರವನ್ನು ನಾವೆಲ್ಲಾ ಬಂದು ಕೊಟ್ಟಿದ್ದೇವೆ. ಇದನ್ನು ಆದಷ್ಟು ಜಾಗ್ರತೆ ಮಾಡಿಕೊಟ್ಟರೆ ಸಾವಿರಾರು ಎಕರೆಗೆ ನೀರನ್ನು ಕೊಟ್ಟಹಾಗೆ ಆಗುತ್ತದೆ. ಏಕೆಂದರೆ ಇವರೆಲ್ಲಾ ಶರಾವತಿ ಮುಳುಗಡೆಯಿಂದ ಬಂದಗಿರುವ ಜನರು. ಇಡೀ ಕರ್ನಾಟಕಕ್ಕೇ ನಾವು ದೀಪವನ್ನು ಕೊಟ್ಟು ಆ ದೀಪದ ಕೆಳಗೆ ಅವರು ಕತ್ತಲಲ್ಲಿ ವಾಸ ಮಾಡುತ್ತಿದ್ದಾರೆ. ನಿಜವಾಗಿಯೂ ಈ ಜಾರಗಲ್ ಹಳ್ಳಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಸಾವಿರಾರು ಜನರಿಗೆ ನೀರನ್ನು ಕೊಟ್ಟ ಹಾಗೆ ಆಗುತ್ತದೆ. ಏಕೆಂದರೆ ಅಲ್ಲಿ ಕುಡಿಯುವ ನೀರಿನ ತೊಂದರೆಯೂ ಕೂಡ ಇದೆ. ಅಂಥ ಯೋಜನೆಗೂ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಹೇಳುತ್ತೇನೆ. ಅದೇ ರೀತಿ ಶಿವಮೊಗ್ಗದಲ್ಲೂ ಕೂಡ ಈ ಗಾಜನೂರು ಡ್ಯಾಮನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತಿದ್ದೀರಿ. ಬಹಳ ಸಂತೋಷ. ಅದು ಆದಷ್ಟು ಜಾಗ್ರತೆ ಪ್ರಗತಿಪರವಾಗಿ ಉತ್ತರ ಕರ್ನಾಟಕಕ್ಕೆ ಹೆಚ್ಚಿನ ರೀತಿಯಲ್ಲಿ ಸೇವೆಯನ್ನು ಕೊಡುವ ಯೋಜನೆಯನ್ನು ನಮ್ಮ ಸರ್ಕಾರ ಇವತ್ತು ಅದನ್ನು ಬೃಹತ್ ಪ್ರಮಾಣದಲ್ಲಿ ಮಾಡುತ್ತಿದೆ. ಬಹಳ ಸಂತೋಷ. ಆದಷ್ಟು ಜಾಗ್ರತೆ ಅದನ್ನು ಮುಗಿಸುಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತಿದ್ದೀನಿ. ನೀರಾವರಿ ಇಲಾಖೆಯಲ್ಲಿ ನಮ್ಮಲ್ಲಿ ಅಚ್ಚುಕಟ್ಟು ಪ್ರದೇಶ ಜಾಸ್ತಿ. ಹಿಂದಿನಿಂದಲೂ ಕೂಡ ನಮಗೆ ಮಲತಾಯಿ ಧೋರಣೆಯಾಗಿದೆ. ಅದು ಆಗಬಾರದು. ಏಕೆಂದರೆ ನೀರು ಶೇಖರಣೆಯಾಗಿ ಚಾನಲ್‌ನಲ್ಲಿ ಬಂದರೆ ಪೂರ್ಣ ನೀರೆಲ್ಲಾ ಹಾಳಾಗುತ್ತಿದೆ. ಎರಡು ಭಾಗದಲ್ಲೂ ಕೂಡ ಆ ನೀರನ್ನು ಶೇಖರಣೆ ಮಾಡುವ ನಿಲ್ಲಿಸುವ ಯೋಜನೆಯನ್ನು ಹಾಕಿಕೊಂಡರೆ ಒಂದು ಉತ್ತಮ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ. ರೈತರಿಗೆ ಸರಾಗವಾಗಿ ನೀರು ಸಿಗುವುದಕ್ಕೆ ಒಂದು ಅವಕಾಶವಾಗುತ್ತದೆ. ಇದು ಬಹಳ ಪ್ರಮುಖವಾದ ಅಂಶ. ಇವತ್ತು ಎರಡು ನದಿಗಳು ತುಂಗಾ ಮತ್ತು ಭದ್ರಾ ಎರಡೂ ಸೇರತಕ್ಕ ಒಂದು ವಿಚಾರ ಇದೆ. ಆ ನೀರು ಶೇಖರಣೆಯಾಗಿ ಪ್ರತಿಯೊಬ್ಬರಿಗೂ ಕೂಡ ನೀರು ಸಿಗುತ್ತದೆ. ಈ ಯೋಜನೆ ಬಗ್ಗೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಹೇಳುತ್ತೇನೆ. ರೈತರಿಗೆ ಅನೇಕ ವಿಚಾರಗಳಲ್ಲೂ ಆದಷ್ಟು ಹೆಚ್ಚಿನ ಮಟ್ಟಿಗೆ ಅವರಿಗೆ ಅನುಕೂಲವನ್ನು ಮಾಡಿಕೊಡಬೇಕು. ನಿಜವಾಗಿ ರೈತನ ಕಣ್ಣೀರನ್ನು ಒರೆಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಂಡು ನನಗೆ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) :— ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಮಂಡಿಸಿರುವ ಬೇಡಿಕೆಗಳಿಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ ಈಗಾಗಲೇ ವಿವಿಧ ಇಲಾಖೆಗಳ ಬೇಡಿಕೆಗಳ ಬಗ್ಗೆ ಅನೇಕ ಸದಸ್ಯರುಗಳು ಮಾತನಾಡಿದ್ದಾರೆ. ನಾನು ಬಂದಿರುವುದು ನೀರಾವರಿ ಪ್ರದೇಶದಿಂದ. ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಸುಮಾರು 365 ದಿವಸಗಳೂ ಕೂಡ ಕಾವೇರಿಯ ವರಪ್ರಸಾದದಿಂದ ನೀರು ನಮಗೆ ಬಹುತೇಕ

ಸರಾಸರಿ ಲಭ್ಯವಾಗತಕ್ಕ ಪ್ರದೇಶದಿಂದ ಬಂದಿರುವವನು. ಆದರೆ ಸುಮಾರು ಎರಡು ಲಕ್ಷ ಎಕರೆಗಳ ಕೃಷಿ ಪ್ರದೇಶವನ್ನು ಹೊಂದಿರತಕ್ಕದ್ದು ನಮ್ಮ ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶ. ನಿರ್ವಹಣಾ ಕಾಮಗಾರಿಗಳು ಸಮರ್ಪಕವಾಗಿಲ್ಲದೆ ನಾಲೆಯ ಕೊನೆಯ ಭಾಗದ ರೈತರಿಗೆ ನೀರಿನ ಕೊರತೆಯನ್ನು ಅನುಭವಿಸುತ್ತಿರುವುದು ಸರ್ವೇ ಸಾಮಾನ್ಯವಾಗಿದೆ. ಕಾರಣವಿಷ್ಟೆ ಏನು ನೀರಾವರಿ ಇಲಾಖೆಯಿಂದ ತಲಾನುಧಾನವನ್ನು ಪ್ರತಿ ಎಕರೆಗೆ ವಾರ್ಷಿಕವಾಗಿ ಕೊಡುತ್ತಿದ್ದಾರೆ, ಅದು ಕೇವಲ ಅಲ್ಲಿರತಕ್ಕ ವಾಹನಗಳ ಇತರೆ ಒಂದು ಸಾಧನಗಳ ನಿರ್ವಹಣೆಗೆ ಸಾಕಾಗುತ್ತದೆಯೇ ಹೊರತು ನಮ್ಮ ಒಂದು ನಾಲೆಯ ಸಿಲ್ಟನ್ನು ತೆಗೆಯುವುದಾಗಲಿ, ಅಥವಾ ನಾಲಾ ರಿಪೇರಿ ಮಾಡುವುದಾಗಲಿ, ಪಿಕಪ್‌ನ್ನು ದುರಸ್ತಿ ಮಾಡುವುದಾಗಲೀ ನಮಗೆ ಸಾಲದೆ ನೀರಿನ ಒಂದು ಸಮಸ್ಯೆಯನ್ನು ಅನುಭವಿಸಬೇಕಾದ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಸರ್ಕಾರ ಕೊಡುತ್ತಿರುವುದನ್ನು ಲೆಕ್ಕ ಹಾಕಿದರೆ ಪ್ರತಿ ಎಕರೆಗೆ 70 ರೂಪಾಯಿ ಬರಬಹುದು. ಇದನ್ನು ದುಪ್ಪಟ್ಟು ಮಾಡಬೇಕೆಂದು ನಾನಾದರೂ ಕೂಡ ಸರ್ಕಾರದಲ್ಲಿ ನಿವೇದನೆ ಮಾಡುತ್ತೇನೆ. ಈ ಹಿಂದೆ ನಮ್ಮ ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿ ನಾಲೆಯ ಕೊನೆಯ ಭಾಗದ ರೈತರಿಗೆ ಅನುಕೂಲವಾಗಬೇಕೆಂದು ಹೇಳಿ ಸುಮಾರು 17 ರಿಂದ 18 ಏತ ನೀರಾವರಿ ಕಾಮಗಾರಿಗಳನ್ನು ಸುಮಾರು ಐದು ಕೋಟಿ ರೂಪಾಯಿ ವೆಚ್ಚದಲ್ಲಿ ತೆಗೆದುಕೊಂಡಿತ್ತು. ಆ ಕಾರ್ಯ ಬಹುತೇಕ ತುಂಬಾ ನಿಧಾನಗತಿಯಲ್ಲಿ ನಡೆಯುತ್ತಿದ್ದು ಈಗ ಒಂದು ಮಳೆಯ ಏರುಪೇರಿನಿಂದ ನಮಗೆ ನೀರು ಬಹಳಷ್ಟು ಮುಖ್ಯವಾಗಿರುವುದರಿಂದ ನಿಗದಿತ ಈ ಒಂದು ಆಯವ್ಯಯ ವರ್ಷದ ಕೊನೆಯಲ್ಲಿ ಮುಗಿಸುವ ಹಾಗೆ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಹಾಗೆಯೇ ಸಣ್ಣ ನೀರಾವರಿ ಇಲಾಖೆಯಲ್ಲೂ ಅನೇಕ ಏತ ನೀರಾವರಿಗಳನ್ನು ಕೆರೆಗಳ ದುರಸ್ತಿ ಕಾರ್ಯಗಳನ್ನು ಮಂಡ್ಯ ಜಿಲ್ಲೆಯಲ್ಲಿ ತೆಗೆದುಕೊಂಡಿದ್ದು ಅವೆಲ್ಲಾ ಅನುದಾನದ ಕೊರತೆಯಿಂದಾಗಿ ಅಪೂರ್ಣವಾಗಿದೆ. ಇಡೀ ಜಿಲ್ಲೆಯಲ್ಲಿ ಸುಮಾರು 30-40 ಏತನೀರಾವರಿ ಕಾಮಗಾರಿಗಳನ್ನು ನಮ್ಮ ಪಾಂಡವಪುರ ಉಪವಿಬಾಗ ಮಂಡ್ಯ ಉಪವಿಭಾಗದಲ್ಲೂ ಕೂಡ ಸಣ್ಣ ನೀರಾವರಿಯನ್ನು ತೆಗೆದುಕೊಂಡಿದೆ. ಹಾಗೆಯೇ ಕೆರೆ ಕೆಲಸವನ್ನೂ ಕೂಡ ತೆಗೆದುಕೊಂಡಿರುವುದು ಅನುದಾನದ ಕೊರತೆಯಾಗಿರುವ ಕಾಲದಲ್ಲಿ ತೆಗೆದುಕೊಂಡಿದ್ದಾರೆ. ಆ ಸಣ್ಣ ನೀರಾವರಿ ಇಲಾಖೆಯಲ್ಲೂ ಕೂಡ ಮಂಡ್ಯ ಜಿಲ್ಲೆ ಕಾಮಗಾರಿಗಳಿಗೆ ಅನುದಾನವನ್ನು ಒದಗಿಸಬೇಕೆನ್ನುವುದನ್ನು ನಾನಾದರೂ ಕೂಡ ಈ ಸದನದಲ್ಲಿ ಪ್ರಸ್ತಾವಿಸಬಯಸುತ್ತೇನೆ. ಹಾಗೆಯೇ ಇತ್ತೀಚೆಗೆ ನೀರಾವರಿ ಸಹಕಾರ ಸಂಘಗಳನ್ನು ಈ ಒಂದು ರೈತರ ನೀರಿನ ನಿರ್ವಹಣೆಯನ್ನು ರೈತರ ಜವಾಬ್ದಾರಿಗೆ ಬಿಡಬೇಕು, ಸಮರ್ಪಕವಾಗಿ ಅವರಲ್ಲಿನ ಸಹಕಾರದಿಂದ, ಸಹಮತದಿಂದ ನೀರನ್ನು ಹಾಯಿಸುವ ವ್ಯವಸ್ಥೆಯನ್ನು ತರಬೇಕೆಂದು ಹೇಳಿ ಸರ್ಕಾರ ಮನಸ್ಸು ಮಾಡಿರತಕ್ಕದ್ದು, ಪ್ರಯತ್ನ ಮಾಡಿರತಕ್ಕದ್ದು ಬಹಳ ಸ್ವಾಗತಾರ್ಹವಾದ ವಿಚಾರ. ಆದರೆ ಆ ನೀರಾವರಿ ಆ

ನೀರಾವರಿ ಸಹಕಾರ ಸಂಘಗಳೂ ಕೂಡ ಇನ್ನು ರಚನೆಯಾಗತಕ್ಕದ್ದು ಅದನ್ನೂ ಶೈಶವಾವಸ್ಥೆಯಲ್ಲೇ ಇದೆ. ಅದು ಬಹಳ ತೀರ ಅವಶ್ಯಕತೆ ಇದೆ. ಕಾರಣವಿಷ್ಟೆ. ನೀರು ಬಹಳ ತುಂಬಾ ಅಪರೂಪದ ವಸ್ತುವಾಗುತ್ತಿದೆ. ಆ ನೀರಿನ ಸದ್ಬಳಕೆ ಆಗಬೇಕೆನ್ನುವ ರೀತಿಯಲ್ಲಿ ಎಷ್ಟು ಬೇಕೊ ಅಷ್ಟು ನೀರನ್ನು ಹಾಯಿಸಿಕೊಳ್ಳತಕ್ಕ ಒಂದು ವ್ಯವಸ್ಥೆಗೆ ಈ ನೀರಾವರಿ ಸಹಕಾರ ಸಂಘಗಳು ಪೂರಕವಾಗಿರುವ ಒಂದು ಅಂಶ. ಅದ್ದರಿಂದ ನೀರಾವರಿ ಸಹಕಾರ ಸಂಘಗಳನ್ನು ಮಾಡಬೇಕೆಂದು ಹೇಳಿ ನಮ್ಮ ಕೃಷಿ ಇಲಾಖೆ ಹಾಗೂ ನೀರಾವರಿ ಇಲಾಖೆ ಜಂಟಿಯಾಗಿ ಈ ರೈತನಿಗೆ ನೀರಿನ ಒಂದು ಮಹತ್ವವನ್ನು ತಿಳಿಯಪಡಿಸಿ ಆ ನೀರು ಪೋಲಾಗದೆ ಅವರಿಗೆ ಬೇಕಾದಷ್ಟು ಮಾತ್ರ ವೈಜ್ಞಾನಿಕವಾಗಿ ನೀರನ್ನು ಹಾಯಿಸತಕ್ಕ ಅಥವಾ ನೀರನ್ನು ಪಡೆದುಕೊಳ್ಳುವ ಒಂದು ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಈ ಜಲಸಂವರ್ಧನೆ ಕಾರ್ಯಕ್ರಮ ರಾಜ್ಯ ಸರ್ಕಾರದ ಹೆಗ್ಗಳಿಕೆಯ ಕಾರ್ಯಕ್ರಮವಾಗಿದೆ, ಈ ಕಾರ್ಯಕ್ರಮದಡಿಯಲ್ಲಿ ನಮ್ಮ ವಿಶ್ವೇಶ್ವರಯ್ಯ ನಾಲಾ ಅಚುಕಟ್ಟು ಪ್ರದೇಶದಲ್ಲೂ ಕೂಡ ಕೆರೆ ನಮಗೆ ಬ್ಯಾಲೆನ್ಸಿಂಗ್ ರಿಸರ್ವಾಯರ್ ಇದ್ದ ಹಾಗೆ. ಆ ಕೆರೆಗಳನ್ನು ಕೂಡ ತೆಗೆದುಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ವಿನಂತಿ ಮಾಡುತ್ತೇನೆ. ಇವತ್ತು ಬಾರಿ ನೀರಾವರಿ ಪ್ರದೇಶದಲ್ಲಿರುವ ಕೆರೆಗಳ ನಿರ್ವಹಣೆಗೆ ನಮ್ಮ ಸಣ್ಣ ನೀರಾವರಿ ಇಲಾಖೆಯಿಂದ ಹಣವನ್ನು ಕೊಡಬೇಕಾಗುತ್ತದೆ. ಆದರೆ ವರ್ಷದ ಕೊನೆಯಲ್ಲಿ ಇಲಾಖೆಗೆ ಹಣ ಬಂದು ಈ ಕೆರೆಗಳ ನಿರ್ವಹಣೆ ಸರಿಯಾಗಿ ಆಗುತ್ತಿಲ್ಲ; ಜೊತೆಗೆ ಕೆರೆಗಳ ಒತ್ತುವರಿ ಕೂಡಾ ಈಗಾಗಲೇ ಆಗಿ ಕೆರೆಗಳು ಇವೆಯೋ ಇಲ್ಲವೋ ಎನ್ನುವ ರೀತಿಯಲ್ಲಾಗಿದೆ. ಆದರೆ ಕೆರೆಗಳು ಇರುವುದು ತುಂಬಾ ಅವಶ್ಯಕತೆ ಇದ್ದೆ, ಈ ಜನಸಂವರ್ಧನೆ ಯೋಜನೆಯಡಿಯಲ್ಲಿ ಕೆರೆಗಳನ್ನು ಉತ್ತಮಪಡಿಸುವುದರ ಜೊತೆಗೆ ಒತ್ತುವರಿಯಾಗಿರುವ ಕೆರೆಗಳನ್ನು ತೆರವು ಮಾಡಿಸುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಒಟ್ಟಾರೆ ಕಾವೇರಿ ಜಲಾಯನ ಪ್ರದೇಶದಲ್ಲಿ ಹೇಮಾವತಿ ಇರಬಹುದು, ಹಾರಂಗಿ ಇರಬಹುದು, ವಿಶ್ವೇಶ್ವರಯ್ಯ ಅಚ್ಚುಕಟ್ಟು ಪ್ರದೇಶದ ವರುಣಾ ನಾಲೆ ಇರಬಹುದು. ಈ ಕಾಮಗಾರಿಗಳು ನಾವು ನಿರೀಕ್ಷೆ ಮಾಡಿದ ರೀತಿಯಲ್ಲಿ ನಡೆಯದೆ ಯೋಜನೆ ಕುಂಟುತ್ತಾ ನಡೆಯುತ್ತಿದೆ. ಈಗ ಕೃಷ್ಣಾ ಜಲಭಾಗ್ಯ ನಿಗಮವೆಂದು ಸ್ಥಾಪಿಸಿ ಬಹಳ ಹೆಚ್ಚು ಒತ್ತನ್ನು ಕೊಟ್ಟು ನೀರಾವರಿ ಕಾಮಗಾರಿಗಳು ಸುಗಮವಾಗಿ ವೇಗವಾಗಿ ಆಗಬೇಕೆಂದು ಇಚ್ಛೆಯನ್ನು ಸರ್ಕಾರ ಏನು ಹೊಂದಿದೆಯೋ ಅದೇ ರೀತಿಯಲ್ಲಿ ನಮ್ಮ ಕಾವೇರಿ ಜಲಾಯನ ಪ್ರದೇಶದಲ್ಲೂ ಕೂಡ ಒಂದು ಕಾವೇರಿ ಜಲಭಾಗ್ಯ ನಿಗಮವನ್ನು ಪ್ರಾರಂಭ ಮಾಡುವುದು, ಇನ್ನು ನಮ್ಮ ಹೇಮಾವತಿ ಯೋಜನೆಯಲ್ಲಿರುವ ನೀರು ಇನ್ನು ಅನೇಕ ರೈತರಿಗೆ ತಲುಪಿಲ್ಲ ಇನ್ನೂ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳಾಗಬೇಕಾಗಿದೆ. ನಮ್ಮ ವಿಶ್ವೇಶ್ವರಯ್ಯ ನಾಲಾ ಕಾಮಗಾರಿಯು ಕೂಡ ಅಪೂರ್ಣವಾಗಿದೆ, ವರುಣ

ಕಾಮಗಾರಿಯೂ ಕೂಡ ಪೂರ್ಣವಾಗಬೇಕಾಗಿದೆ. ಇಷ್ಟೆಲ್ಲಾ ಕಾರ್ಯಕ್ರಮಗಳಿಗೆ ಒತ್ತು ಕೊಡುವ ರೀತಿಯಲ್ಲಿ ಒಂದು ಕಾವೇರಿ ಜಲಭಾಗ್ಯ ನಿಗಮವನ್ನೂ ಕೂಡ ಪ್ರಾರಂಭ ಮಾಡಬೇಕೆಂದು ಆಶಯವನ್ನು ವ್ಯಕ್ತಪಡಿಸುತ್ತೇನೆ. ತಮಗೆ ಗೊತ್ತಿರುವಂತೆ ನಮ್ಮಲ್ಲಿ ವರುಣ ನಾಲಾ ಚಳುವಳಿ ಬಹಳ ವ್ಯಾಪಕವಾಗಿದ್ದು, ಚಳುವಳಿ ನಡೆದ ಸಂದರ್ಭದಲ್ಲಿ ರೈತರು ಹಾಗೂ ಸರ್ಕಾರ ನಡುವೆ ಒಪ್ಪಂದವಾಗಿ ಅನೇಕವು ಜಾರಿಗೆ ಬಂದಿವೆ. ಈಗಾಗಲೇ 2-3 ವರ್ಷಗಳು ಪ್ರಾಯೋಗಿಕವಾಗಿ ವರುಣ ನಾಲೆಗೆ ನೀರನ್ನು ತರಿಸಿ, ನಂತರ ರೈತರಿಗೆ ಕೃಷಿಗೆ ನೀರು ಬಿಡುವುದಾಗಿದೆ. ಅದರಲ್ಲಿ ಬಹಳ ಪ್ರಮುಖವಾಗಿ ವರುಣ ಹಾಗೂ ವಿಶ್ವೇಶ್ವರಯ್ಯ ನಾಲಾ ಪ್ರದೇಶದ ರೈತರು ಬೆಳೆಯುವ ಕ್ರಾಪಿಂಗ್ ಪ್ಯಾಟ್ರನ್ ಏನು, ಅವರಿಗೆ ಎಷ್ಟೆಷ್ಟು ನೀರು ಬಿಡಬೇಕು, ಎಷ್ಟು ವೇಳೆ ನೀರು ಬಿಡಬೇಕು, ಹೀಗೆಲ್ಲಾ ಉಸ್ತುವಾರಿಯನ್ನು ಗಮನಿಸುವುದಕ್ಕೆ ಉಸ್ತುವಾರಿ ಸಮಿತಿಯನ್ನು ನೇಮಕ ಮಾಡಬೇಕೆಂದು ನಮ್ಮ ಮಂಡ್ಯ ರೈತರು ಹಾಗೂ ಸರ್ಕಾರದ ನಡುವೆ ಒಪ್ಪಂದವಾಗಿದೆ. ಈ ಬಗ್ಗೆ ಇನ್ನು ಆದೇಶ ಹೊರ ಬಂದಿಲ್ಲ. ಸರ್ಕಾರ ಆ ಉಸ್ತುವಾರಿ ಸಮಿತಿಯನ್ನು ಸ್ಟ್ಯಾಟ್ಯುಟರಿ ಪವರ್ಸ್ ಕೊಟ್ಟು ಕೃಪೆ ಮಾಡಬೇಕೆಂದು ಹೇಳುತ್ತೇನೆ. ಬಹಳ ಪ್ರಮುಖವಾಗಿ, ಕಾವೇರಿ ವಿವಾದದ ಸಮಸ್ಯೆಗೆ ಇನ್ನೇನು ಉತ್ತರ ಸಿಗುತ್ತದೆಂಬುದನ್ನು ನಾನು ತಮಿಳುನಾಡಿನ ಪತ್ರಿಕೆಯಲ್ಲಿ ನೋಡಿದೆ. ಕಾವೇರಿ ವಿವಾದದ ಹಿನ್ನಲೆಯಲ್ಲಿ ಈ ಎರಡು ಸದನಗಳಲ್ಲೂ ರಾಷ್ಟ್ರೀಯ ಜಲ ನೀತಿಯಡಿಯಲ್ಲಿ ಈ ವಿವಾದಕ್ಕೆ ಪರಿಹಾರ ಒದಗಿಸಿಕೊಡಬೇಕೆಂದು ನಿರ್ಣಯವಾಗಿತ್ತು. ನಮ್ಮ ಸರ್ಕಾರ ಕೇಂದ್ರ ಸರ್ಕಾರದ ಮುಖಾಂತರ ರಾಷ್ಟ್ರೀಯ ಜಲನೀತಿಯನ್ನು ರೂಪಿಸಲು ಒತ್ತಾಯವನ್ನು ಶೀಘ್ರವಾಗಿ ತರಬೇಕು, ಕಾವೇರಿ ಜಲವಿವಾದ ಪರಿಸಮಾಪ್ತಿಯಾಗಬೇಕು ಎನ್ನುವ ಒತ್ತಾಯಪೂರ್ವಕ ಮನವಿಯನ್ನು ಸರ್ಕಾರಕ್ಕೆ ಮಾಡುತ್ತೇನೆ. ಇನ್ನು ತೋಟಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ, ಕೃಷಿಕ ತೋಟಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಒದಗಿಸಿಕೊಡುವ ವ್ಯವಸ್ಥೆ ತೋಟಗಾರಿಕೆ ಇಲಾಖೆಯಲ್ಲಿದೆ. ಆದರೆ ಏಕರೂಪದ ಮಾರುಕಟ್ಟೆಯ ವ್ಯವಸ್ಥೆ ಇಲ್ಲ. ಈಗ ಮೂರು ರೀತಿಯ ಮಾರುಕಟ್ಟೆ ವ್ಯವಸ್ಥೆ ಇದೆ, ಅದಕ್ಕೆ ಬದಲಾಗಿ ಏಕ ರೂಪದ ಮಾರುಕಟ್ಟೆಯ ವ್ಯವಸ್ಥೆಯನ್ನು ತಂದರೆ ನಮ್ಮ ರೈತರು ಹಾಗೂ ಸಂಸ್ಥೆಗಳ ನಡುವೆ ಸಹಕಾರ, ಸಾಮರಸ್ಯವಿರುತ್ತದೆ ಹಾಗೂ ರೈತರಿಗೆ ಮಾರುಕಟ್ಟೆಯ ಸೌಲಭ್ಯ ಇನ್ನು ಉತ್ತಮವಾಗಿರುತ್ತದೆಂದು ಹೇಳುತ್ತೇನೆ. ನಮ್ಮ ತೋಟಗಾರಿಕೆ ಸಚಿವರು ಈ ತೋಟಗಾರಿಕೆಯ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಿ ಈಗಿರುವ ಮೂರು ಸಂಸ್ಥೆಗಳ ನಡುವೆ ಇಲ್ಲದಿರುವ ಸಾಮರಸ್ಯವನ್ನು ಸರಿಪಡಿಸಬೇಕು, ಇದಕ್ಕಾಗಿ ಏಕ ರೂಪದ ಮಾರುಕಟ್ಟೆ ವ್ಯವಸ್ಥೆಯನ್ನು ಜಾರಿಗೆತರಬೇಕು. ನಮ್ಮ ರಾಜ್ಯ ತೋಟಗಾರಿಕಾ ವಲಯದಲ್ಲಿ ರಾಷ್ಟ್ರದಲ್ಲಿ ಅಗ್ರಗಣ್ಯ ಸ್ಥಾನವನ್ನು ಹೊಂದಿದೆ, ನಮ್ಮ ತೋಟಗಾರಿಕೆ ಅಧಿಕಾರಿಗಳು ರೈತರ ನಡುವೆ ನಿರಂತರ ಸಂಪರ್ಕವನ್ನಿಟ್ಟುಕೊಂಡು, ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದಷ್ಟೆ ಅಲ್ಲ, ಮಾರುಕಟ್ಟೆ ವ್ಯವಸ್ಥೆಯನ್ನು ಆ ರೈತರಿಗೆ ಒದಗಿಸಿಕೊಡುವಲ್ಲಿ ಸಹಕಾರಿಯಾಗಿರಬೇಕೆಂದು ಹೇಳುತ್ತೇನೆ.

ಇನ್ನು ಬಹಳ ಚರ್ಚೆಗೆ ಒಳಪಟ್ಟಿರುವ ವಿಷಯವೆಂದರೆ ಈ ನುಸಿರೋಗದ ವಿಚಾರ, ಈ ರೋಗವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲಾಗುತ್ತಿಲ್ಲ. ರೈತರ ಬೇಡಿಕೆಗೆ ಅನುಗುಣವಾಗಿ ನುಸಿರೋಗವನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ನಿಟ್ಟಿನಲ್ಲಿ ಇನ್ನು ಹೆಚ್ಚು ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡು ಯಶಸ್ವಿಯಾಗಬೇಕು. ಇತ್ತೀಚೆಗೆ ನಮ್ಮ ಜಿಲ್ಲೆಯಲ್ಲೂ ಕೂಡ ಇತರೆ ಜಿಲ್ಲೆಗಳಂತೆ ನೀರಾ ಚಳುವಳಿ ಬಹಳ ವ್ಯಾಪಕವಾಗಿ ಹಬ್ಬಿದೆ. ನಮ್ಮ ರೈತರ ಬೇಡಿಕೆಯೂ ಕೂಡ ನೀರಾ ಇಳಿಸಲು ಸರ್ಕಾರ ಅನುಮತಿ ಕೊಡಬೇಕೆಂಬುದಾಗಿದೆ. ಸರ್ಕಾರದ ಬಹಳ ವಿಶಾಲ ದೃಷ್ಟಿಯಿಂದ ನೋಡಿ ಪ್ರಾಯೋಗಿಕವಾಗಿ ನಮ್ಮ ರೈತರ ಸಮಸ್ಯೆಗೆ ಸ್ಪಂದಿಸುವ ಮನಸ್ಸು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಸಕ್ಕರೆ ಬಗ್ಗೆ ಹೇಳುವುದಾದರೆ, ನಾನು ಕಬ್ಬನ್ನು ಬೆಳೆಯುವ ಪ್ರದೇಶದಿಂದ ಬಂದವನಾಗಿದ್ದೇನೆ, ರಾಜ್ಯ ಸರ್ಕಾರಿ ಸಕ್ಕರೆ ಗೋದಾಮುಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಸಕ್ಕರೆ ದಾಸ್ತಾನು ಇದ್ದು, ಸಕ್ಕರೆಗೆ ಬೇಡಿಕೆಯಿಲ್ಲದೆ, ಸಕ್ಕರೆ ಉದ್ಯಮ ಬಹಳ ಸಂಕಷ್ಟದ ಪರಿಸ್ಥಿತಿಯಲ್ಲಿದೆ. ಇದರಿಂದಾಗಿ ರೈತನಿಗೆ ಅವಧಿಗೂ ಮೀರಿ ಅವನ ಕಬ್ಬಿನ ಬೆಲೆಯನ್ನು ನೀಡುವುದಕ್ಕೆ ಇವತ್ತು ಸಕ್ಕರೆ ಕಾರ್ಖಾನೆಗಳಿಂದಾಗುತ್ತಿಲ್ಲ. ಆದಕಾರಣ ಈ ಸಕ್ಕರೆ ಉದ್ಯಮದ ನೆರವಿಗೆ ಸರ್ಕಾರ ಬರುವ ದೃಷ್ಟಿಯಲ್ಲಿ ಈಗಾಗಲೇ ಆವರ್ತ ನಿಧಿಯನ್ನು ಸ್ಥಾಪಿಸಿ ರೈತರ ನೆರವಿಗೆ ಸರ್ಕಾರ ಬರದಿರುವುದನ್ನು ಇಲ್ಲಿ ನೆನಸಿಕೊಳ್ಳುತ್ತೇನೆ. ಯಾವುದಾದರೂ ಒಂದು ನಿಧಿಯನ್ನು ಈ ಸಕ್ಕರೆ ಕಾರ್ಖಾನೆಗಳಿಗೆ ಪೂರಕವಾಗಿ ಸ್ಥಾಪಿಸುವಂತಹ ಪ್ರಯತ್ನವನ್ನು ಸರ್ಕಾರ ಮಾಡಬೇಕು, ಇದರಿಂದ ರೈತನಿಗೆ ಕೊಡಬೇಕಾದ ಬೆಲೆಯನ್ನು ಅಷ್ಟೋ ಇಷ್ಟೋ ಕೊಡುವುದಕ್ಕೆ ಸುಗಮವಾಗುತ್ತದೆಂದು ಹೇಳುತ್ತೇನೆ. ಈ ಸಕ್ಕರೆ ಕಾರ್ಖಾನೆಗಳಲ್ಲಿ ಸಮಗ್ರವಾಗಿ ಸಕ್ಕರೆ ಉತ್ಪಾದನೆ ಮಾಡುವ ಉತ್ಪಾದನಾ ವೆಚ್ಚವನ್ನು ತಗ್ಗಿಸದಿದ್ದರೆ, ರೈತನಿಗೆ ಬೆಲೆ ಕೊಡುವುದಕ್ಕಾಗುವುದಿಲ್ಲ. ಅಷ್ಟೇ ಅಲ್ಲದೆ ಇತರೆ ಉಪ ಉತ್ಪನ್ನಗಳಿಗೂ ಕೂಡ ಪ್ರೋತ್ಸಾಹ ಕೊಡುವ ಅವಶ್ಯಕತೆ ಹಿಂದೆಂದಿಗಿಂತ ತುಂಬಾ ಇದೆ. ಕೋಜನರೇಷನ್ ಘಟಕಗಳನ್ನು ಸ್ಥಾಪಿಸಬೇಕು, ತನ್ಮೂಲಕ ವಿದ್ಯುತ್ ಅನ್ನು ಉತ್ಪಾದಿಸಿ ರಾಜ್ಯದ ಗ್ರಿಡ್‌ಗೆ ಕೊಟ್ಟು ಈ ಕಾರ್ಖಾನೆಗಳು ಸ್ವಾವಲಂಬನೆಯಾಗುವುದಕ್ಕೆ ಪೂರಕವಾಗುತ್ತದೆ. ಅದಕ್ಕೆ ಒಂದು ನಿಗದಿತವಾದ ವೇಳೆಯನ್ನು ನಿಗದಿ ಮಾಡಬೇಕು, ಉದಾಹರಣೆಗೆ ಮೈಸೂರು ಸಕ್ಕರೆಯಲ್ಲಿ ಹತ್ತಾರು ವರ್ಷಗಳ ಹಿಂದೆ 35 ಕೋಟಿ ರೂಪಾಯಿಗಳಲ್ಲಿ ಕೋ-ಜನರೇಷನ್ ಘಟಕವನ್ನು ಪ್ರಾರಂಭ ಮಾಡಬೇಕೆಂದು ಯೋಜಿಸಲಾಗಿತ್ತು. ಇವತ್ತು ಆ ಯೋಜನೆಗೆ 65 ಕೋಟಿ ರೂಪಾಯಿ ಆದರೂ ಇನ್ನು ಕೂಡ ಪ್ರಾರಂಭ ಮಾಡುವುದಕ್ಕಾಗಿಲ್ಲ, ಇನ್ನು ಪೂರ್ವಭಾವಿ ಸಿದ್ಧತೆಯು ಕೂಡ ಇಲ್ಲ. ಹಣದ ವೆಚ್ಚ ಜಾಸ್ತಿಯಾದಂತೆ ದಿನ ದಿನ ಯೋಜನೆಯ ವೆಚ್ಚ ಜಾಸ್ತಿಯಾದಂತೆ ಅದರ ಹೊರೆ ರೈತನ ಮೇಲೆ ಬೀಳುತ್ತದೆ. ಖಾಸಗಿ ಅಥವಾ ಸರ್ಕಾರಿ ಸಕ್ಕರೆ ಕಾರ್ಖಾನೆಗಳಾಗಲಿ ಕೋಜನರೇಷನ್ ಘಟಕಗಳ ಸ್ಥಾಪನೆಗೂ ಕೂಡ ಸರ್ಕಾರ ಹೆಚ್ಚಿನ ಪ್ರೋತ್ಸಾಹವನ್ನು

ಕೊಡಬೇಕು. ವಿಶೇಷವಾಗಿ ಈ ಸಕ್ಕರೆ ಕಾರ್ಖಾನೆಗಳಿಗೆ ರೀಲಿಸ್ ಆಗುವಂತಹ ಸಕ್ಕರೆಗೆ ಸಂಬಂಧಿಸಿದಂತೆ ನಮ್ಮ ರಾಜ್ಯಮಟ್ಟದಲ್ಲಿ ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸಿ ನಮಗೆ ಸಕ್ಕರೆ ಬಿಡುಗಡೆಯಾಗುವಂತಹ ರೀತಿಯಲ್ಲಿ ಸರ್ಕಾರ ಪೂರಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಕೃಷಿ ಬಗ್ಗೆ ಈಗಾಗಲೇ ಸಾಕಷ್ಟು ಮಾತನಾಡಲಾಗಿದೆ. ಕೃಷಿಗೆ ಕೈಗಾರಿಕೆಯ ಸ್ಥಾನವನ್ನು ನೀಡಬೇಕೆಂಬುದು ರೈತರ ಒಕ್ಕೊರಲಿನ ಆಶಯಾಗಿದೆ ಅದನ್ನು ನಾನು ಪುಷ್ಟೀಕರಿಸುತ್ತೇನೆ. ಇವತ್ತು ರೈತನ ಕೃಷಿ ಸಾಮಾನು ಪರಿಕರಗಳ ಬೆಲೆ ಹೆಚ್ಚಾದರು ಕೂಡ, ರೈತ ಬೆಳೆದ ಬೆಳೆಯ ಬೆಲೆ ಸ್ಥಗಿತವಾಗಿ ಅಲ್ಲಿ ಕುಳಿತಿರುವ ಕಾಲದಲ್ಲಿ ಸಾಲದ ಹೊರೆ ಹೆಚ್ಚಾಗಿ ರೈತ ಆತ್ಮಹತ್ಯೆಗೆ ಪ್ರಯತ್ನಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ರಾಜ್ಯ ಸರ್ಕಾರ ಕೃಷಿ ಬೆಲೆ ಆಯೋಗವನ್ನು ರಚನೆ ಮಾಡಿ ಅದು ಕಾರ್ಯೋನ್ಮುಕವಾಗಿದೆ. ಆದರೆ ರೈತನಿಗೆ ತಾನು ಬೆಳೆದ ಬೆಳೆಯ ಬೆಲೆ ನಿಗದಿ ಮಾಡುವ ಸ್ವಾತ್ರಂತ್ಯ ಇನ್ನು ಬಂದಿಲ್ಲ. ರೈತನ ಅನಿಸಿಕೆಗೆ ತಕ್ಕಂತೆ ಬೆಲೆಯನ್ನು ನಿಗದಿ ಮಾಡುವ ವ್ಯವಸ್ಥೆಯನ್ನು ಮಾಡಬೇಕು. ಈ ಎಪಿಎಂಸಿಗಳಲ್ಲಿ ಈ ಎಲೆಕ್ಟ್ರಾನಿಕ್ಸ್ ತೂಕದ ಯಂತ್ರಗಳನ್ನು ಅಳವಡಿಸಬೇಕೆನ್ನುವ ಪ್ರಯತ್ನ ಇನ್ನೂ ಸಫಲವಾಗಿಲ್ಲ. ನಾವು ವೈಜ್ಞಾನಿಕ ಯುಗದಲ್ಲಿರುವ ಕಾರಣ ಈ ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನೂ ಕೂಡ ವ್ಯಾಪಕವಾಗಿ ಬಳಸುವಂತಾಗಬೇಕೆಂದು ಹೇಳುತ್ತಾ ಮಾನ್ಯ ಅಧ್ಯಕ್ಷರು ಇದುವರೆಗೆ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ವ್ಯಕ್ತಪಡಿಸಿ ಈ ಬೇಡಿಕೆಗಳಿಗೆ ನನ್ನ ಸಹಮತವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಈಗ ಒಂದು ಪ್ರಕಟಣೆ ಇದೆ.

4. ಪ್ರಕಟಣೆ

ವಿಷಯ: W.T.O. ಕುರಿತಂತೆ ನಡೆಯಲಿರುವ ಚರ್ಚೆಯಲ್ಲಿ ಸದಸ್ಯರುಗಳು ಭಾಗವಹಿಸಲು ಮನವಿ

"ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯೂಟಿಓಗೆ) ಕುರಿತಂತೆ ದಿನಾಂಕ: 26.7.2001 ರಂದು ಸಂಜೆ 5.00 ಗಂಟೆಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಚರ್ಚೆ ನಡೆಯಲಿದ್ದು, ಸದರಿ ಚರ್ಚೆಯಲ್ಲಿ ಭಾರತ ಸರ್ಕಾರದ ಕೃಷಿ ಕಾರ್ಯಪಡೆಯ ಅಧ್ಯಕ್ಷರಾದ ಶ್ರೀ ಶರದ್ ಜೋಶಿಯವರು ಭಾಗವಹಿಸಲಿದ್ದು ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು ಉಪಸ್ಥಿತರಿದ್ದು ಹಾಗೂ ಕರ್ನಾಟಕ ಸರ್ಕಾರದ ಎಲ್ಲಾ ಸಚಿವರು ಇದರಲ್ಲಿ ಭಾಗವಹಿಸಲಿದ್ದಾರೆ. ಆದುದರಿಂದ, ತಾವೂ ಕೂಡ ವಿಶ್ವ ವ್ಯಾಪಾರ ಸಂಘಟನೆ ಕುರಿತ ಚರ್ಚೆಯ ಸಮಾವೇಶದಲ್ಲಿ ಪಾಲ್ಗೊಳ್ಳುವಂತೆ ಕೋರಲಾಗಿದೆ."

5. ವಿತ್ತೀಯ ಕಾರ್ಯಕಲಾಪ

2001-2002ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ಶ್ರೀ ಎ. ರಾಮದಾಸ್ (ಕೃಷ್ಣರಾಜ) :— ಸನ್ಮಾನ್ಯ ಉಪಾಧ್ಯಕ್ಷರೆ, ನಾವು ಈಗಾಗಲೇ ಈ ರಾಜ್ಯದ ಬೃಹತ್ ಆಯವ್ಯಯದ ಅಂಗೀಕಾರದ ಕೊನೆಯ ಹಂತದಲ್ಲಿದ್ದು, ಪ್ರಮುಖವಾದ ವಿವಿಧ ಇಲಾಖೆಗಳ ಬೇಡಿಕೆಗಳ ಅನುಮೋದನೆಗೆ ಸರ್ಕಾರ ಕಾಯುತ್ತಿರುವಂಥ ಸಂದರ್ಭದಲ್ಲಿ ನಾನು ಕೇವಲ ಎರಡು ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚು ಗಮನಹರಿಸುವುದಕ್ಕೆ ಇಚ್ಛಿಸುತ್ತೇನೆ. ಅಧಿವೇಶನ ಪ್ರಾರಂಭವಾದಂದಿನಿಂದ ಈ ರಾಜ್ಯದ ಜನಸಂಖ್ಯೆಯಲ್ಲಿ ಶೇಕಡ 70 ಭಾಗದಷ್ಟಿರುವ ರೈತರ ಹಿತಚಿಂತನೆ ಕುರಿತಂತೆ ನಾವೆಲ್ಲರೂ ಚರ್ಚಿಸುತ್ತಿದ್ದು, ಇದರ ಫಲಶೃತಿ ರೈತರಿಗೆ, ಜನ ಸಾಮಾನ್ಯರಿಗೆ ತಲುಪಿದಾಗ ಮಾತ್ರ ಚರ್ಚೆ ಸಾರ್ಥಕವಾಗುತ್ತದೆ. ಇವೊತ್ತು ರಾಜ್ಯ ಬರದ ಕಠಿಣ ಪರಿಸ್ಥಿತಿ ಎದುರಿಸುತ್ತಿರುವ ಸಂದರ್ಭದಲ್ಲಿ ಹಾಗೂ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿರುವಂಥ ರೈತರು ಇರುವ ಅಲ್ಪಸ್ವಲ್ಪ ನೀರನ್ನು ಉಪಯೋಗಿಸಿಕೊಳ್ಳಲು ಸರ್ಕಾರ ವಿದ್ಯುತ್ ಸರಬರಾಜನ್ನು ಯಾವ ರೀತಿ ಮಾಡುತ್ತದೆಂಬ ಬಗ್ಗೆ ವಿಶೇಷ ಆಸಕ್ತಿಯಿಂದ ನಮ್ಮ ಕಡೆ ನೋಡುತ್ತಿದ್ದಾರೆ. ಕಳೆದ ಬಾರಿಯ ಅಧಿವೇಶನದ ಸಂದರ್ಭದಲ್ಲಿ ಏಪ್ರಿಲ್ ತಿಂಗಳಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ 'ತಮಿಳುನಾಡಿನ ಮಾದರಿಯಲ್ಲಿ ಮೇ 1ನೇ ತಾರೀಖಿನಿಂದ ರಾತ್ರಿ ಹತ್ತು ಗಂಟೆಯಿಂದ ಬೆಳಿಗ್ಗೆ ಆರು ಗಂಟೆವರೆಗೆ ತಡೆರಹಿತವಾಗಿ ವಿದ್ಯುತ್ ಸರಬರಾಜು ಮಾಡಲಾಗುವುದು' ಎಂದು ಘೋಷಿಸಿದರು. ಈಗ ಸದನದಲ್ಲಿದ್ದ ನಾವೆಲ್ಲರೂ ಕೂಡ ಪಕ್ಷಾತೀತವಾಗಿ ಮೇಜು ತಟ್ಟುವ ಮೂಲಕ ಘೋಷಣೆಯನ್ನು ಸ್ವಾಗತಿಸಿದೆವು. ಅನಂತರದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಘೋಷಣೆ ಕಾರ್ಯರೂಪಕ್ಕೆ ಬಾರದಿದ್ದಾಗ ನನಗನ್ನಿಸಿದ್ದು ಏನೆಂದರೆ "ಏಪ್ರಿಲ್ ಒಂದನೇ ತಾರೀಖಿನಂದು ನಾವೆಲ್ಲರೂ "ಏಪ್ರಿಲ್ ಫೂಲ್" ಆಗಿದ್ದೇವೆಯೇ ಎಂಬ ಭಾವನೆ ನಮ್ಮನ್ನು ಕಾಡುತ್ತಿದೆ. ಮತ್ತೊಮ್ಮೆ ಜೂನ್ ತಿಂಗಳನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆಯಲ್ಲಿ ಮಾತನಾಡುತ್ತಾ ನಾನು ರೈತರಿಗೆ ಕೊಟ್ಟಿರುವಂಥ ಮಾತನ್ನು ಯಾರಿಗೆ ನಡೆಸುವುದಕ್ಕೆ ಸಾಧ್ಯವಿಲ್ಲವೋ, ಆ ಇಲಾಖೆಯವರು ಯಾರೇ ಆಗಿರಬಹುದು, ಅಂತಹ ಪರಿಸ್ಥಿತಿ ನಿರ್ಮಾಣವಾಗುವುದಾದರೆ 'ತಲೆಗಳು ಉರುಳುತ್ತವೆ' (ಹೆಡ್ ವಿಲ್ ರೋಲ್) ಎಂದು ಹೇಳುವ ಮೂಲಕ ಇಲಾಖೆಯವರನ್ನು ತಲ್ಲಣಗೊಳಿಸಿದರು. ಇದರಿಂದ ನಾವು ಬಹಳಷ್ಟು ನಿರೀಕ್ಷಿಸಿದ್ದರೂ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿದಂತೆ ಇವೊತ್ತಿನ ವರೆಗೆ ನಿಗದಿತ ಅವಧಿಯಲ್ಲಿ ವಿದ್ಯುತ್ ಸರಬರಾಜಾಗಿಲ್ಲ ಮತ್ತು ಯಾವುದೇ ತಲೆಗಳೂ ಕೂಡ ಉರುಳಿದ್ದು ಕಾಣುತ್ತಿಲ್ಲ. ಅಂದರೆ, ಘೋಷಣೆಗಳು ಕೇವಲ ಘೋಷಣೆಗಳಾಗಿಯೇ ಉಳಿಯುವಂಥ ವ್ಯವಸ್ಥೆಗಳು ವಿದ್ಯುತ್ ಇಲಾಖೆ-ಯಲ್ಲಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಗ್ರಾಮೀಣ ಪ್ರದೇಶದ ರೈತರಿಗೆ ಒದಗಿಸಲಾಗುತ್ತಿರುವ

ವಿದ್ಯುತ್ ಸೌಕರ್ಯವನ್ನು ಹೆಚ್ಚಿಸುವುದಕ್ಕೋಸ್ಕರ ಭಾರತ ಸರ್ಕಾರ ವಿಶೇಷವಾಗಿ ತ್ವರಿತ ವಿದ್ಯುತ್ ಅಭಿವೃದ್ಧಿ ಯೋಜನೆಯಡಿ ರಾಜ್ಯ ಸರ್ಕಾರಕ್ಕೆ ಕಳೆದೆರಡು ತಿಂಗಳಿನಲ್ಲಿ 295 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಆ ಬಗ್ಗೆ ಯಾವುದೇ ಮನವಿ ಸಲ್ಲಿಸದಿದ್ದರೂ ಕೂಡ ಭಾರತ ಸರ್ಕಾರ ರಾಜ್ಯ ಸರ್ಕಾರಕ್ಕೆ ಇಷ್ಟು ಮೊತ್ತದಲ್ಲಿ ಹಣ ಬಿಡುಗಡೆ ಮಾಡಿದೆ. ಈಗ ಸದನದಲ್ಲಿ ವಿದ್ಯುತ್ ಖಾತೆಗೆ ಸಂಬಂಧಿಸಿದ ಇಬ್ಬರೂ ಮಂತ್ರಿಗಳೂ ಇಲ್ಲ. ನಾನು ಸರ್ಕಾರದಿಂದ ನಿರೀಕ್ಷಿಸಿದ್ದು ಏನೆಂದರೆ, ಇಂತಹ ಪ್ರಮುಖ ಕ್ಷೇತ್ರದ ಬಗ್ಗೆ ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಲೀ ಮತ್ತು ವಿದ್ಯುತ್ ಖಾತೆಯ ಸಹಾಯಕ ಸಚಿವರಾಗಲೀ ಇಬ್ಬರೂ ಇಲ್ಲದಿರುವುದರಿಂದ ನಾನು ಈ ಕುರಿತು ಮಾತನಾಡುವಂಥ ಅವಶ್ಯಕತೆಯಿದೆಯೇ ಎಂದು ಯೋಚಿಸುತ್ತಿದ್ದೇನೆ. ಉಪಾಧ್ಯಕ್ಷರಾದ ತಾವು ಹೇಗೆ ಹೇಳುತ್ತಿರೋ ಹಾಗೆ ನಾನು ನಡೆದು ಕೊಳ್ಳುತ್ತೇನೆ. ಸಚಿವರುಗಳು ಸದನಕ್ಕೆ ಬಂದ ನಂತರ ಮಾತನಾಡಿ ಎಂದರೆ ಹಾಗೆಯೇ ಮಾಡುತ್ತೇನೆ. ಸಂಬಂಧಪಟ್ಟ ಸಚಿವರು ಇಲ್ಲದಿರುವುದರಿಂದ ಇಲ್ಲಿ ನಾನು ಯಾರನ್ನು ಉದ್ದೇಶಿಸಿ ಮಾತನಾಡಬೇಕು? ಕೇವಲ ಮಾಧ್ಯಮದವರಿಗೋಸ್ಕರ ಮಾತನಾಡುವುದಾದರೆ ಮಾತನಾಡುತ್ತೇನೆ. ಬದಲಿಗೆ 'ಬೇಡ, ಇಡೀ ರಾಜ್ಯದ ವ್ಯವಸ್ಥೆ ಇದಲ್ಲ' ಎನ್ನುವುದಾದರೆ ಕುಳಿತುಕೊಳ್ಳುತ್ತೇನೆ. ತಾವು ಹೇಗೆ ಹೇಳುತ್ತೀರೋ ನಾನು ಹಾಗೆ ಮಾಡುತ್ತೇನೆ.

ಉಪಾಧ್ಯಕ್ಷರು :— ಇದು ನಿಮಗೆ ಬಿಟ್ಟಿರುವ ವಿಷಯ. ಸಂಬಂಧಪಟ್ಟ ಸಚಿವರು ಬಂದ ನಂತರವೇ ತಾವು ಮಾತನಾಡುವುದಾದರೆ ಈಗ ಕುಳಿತುಕೊಳ್ಳಿ. ಅವರು ಬಂದಾಗ ಮಾತನಾಡಿ. ಸಚಿವರು ಮೇಲ್ಮನೆಯಲ್ಲಿರುವುದರಿಂದ ಇಲ್ಲಿಗೆ ಬರುವವರೆಗೂ ಕಾಯಬೇಕು.

(ಆ ಹಂತದಲ್ಲಿ ಇಂಧನ ರಾಜ್ಯ ಸಚಿವರಾದ ಶ್ರೀ ವೀರಕುಮಾರ್
ಎ. ಪಾಟೀಲ್‌ರವರು ಸದನಕ್ಕೆ ಆಗಮಿಸಿದರು)

ಉಪಾಧ್ಯಕ್ಷರು :— ಈಗ ಸಚಿವರು ಬಂದಿರುವುದರಿಂದ ತಾವು ಮಾತನ್ನು ಮುಂದುವರೆಸಬಹುದು.

ಶ್ರೀ ಎ. ರಾಮದಾಸ್ :— ರಾಜ್ಯವು ವಿದ್ಯುತ್ ಕ್ಷೇತ್ರದಲ್ಲಿ ಬಹಳ ಕಠಿಣ ಪರಿಸ್ಥಿತಿ ಎದುರಿಸುತ್ತಿರುವಂಥ ಸನ್ನಿವೇಶದಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ತ್ವರಿತ ವಿದ್ಯುತ್ ಅಭಿವೃದ್ಧಿ ಯೋಜನೆಯಡಿ ಬಿಡುಗಡೆ ಮಾಡಿದ ಹಣದಲ್ಲಿ ರೈತಾಪಿ ವರ್ಗವು ತಮ್ಮ ಪಂಪುಸೆಟ್ಟುಗಳಿಗೆ ವಿದ್ಯುತ್ ಸೌಕರ್ಯ ಕಲ್ಪಿಸಿಕೊಳ್ಳುವ ಸಲುವಾಗಿ ಸರ್ಕಾರಕ್ಕೆ ಅರ್ಜಿಗಳನ್ನು ಸಲ್ಲಿಸಿದ್ದು, ಅರ್ಜಿಗಳನ್ನು ತಕ್ಷಣದಲ್ಲಿ ವಿಲೇವಾರಿಗೊಳಿಸುವುದಕ್ಕೆ ಅಗತ್ಯವಾದ

ಹೊಸ ಯೋಜನೆಯನ್ನು ರಾಜ್ಯ ಸರ್ಕಾರವು ಘೋಷಿಸಿ ಕಾರ್ಯ ರೂಪಕ್ಕೆ ತರುತ್ತದೆಂದು ನಾವು ಇಟ್ಟುಕೊಂಡಿದ್ದ ನಿರೀಕ್ಷೆ ಫಲಿಸಿಲ್ಲ. ಆದುದರಿಂದ, ಸರ್ಕಾರ ಈಗಲಾದರೂ ಈ ನಿಟ್ಟಿನಲ್ಲಿ ಹೊಸ ಕಾರ್ಯಕ್ರಮ ರೂಪಿಸಿ ತಮ್ಮ ಪಂಪುಸೆಟ್ಟುಗಳಿಗೆ ವಿದ್ಯುದ್ದೀಕರಣ ಸೌಲಭ್ಯ ಕಲ್ಪಿಸಿಕೊಡುವ ಸಂಬಂಧ ಸಲ್ಲಿಸಿರುವ ಅರ್ಜಿಗಳನ್ನು ತಕ್ಷಣದಲ್ಲಿ ವಿಲೇವಾರಿಗೊಳಿಸಿ ಸದರಿ ಸೌಲಭ್ಯವನ್ನು ಒದಗಿಸಿಕೊಡುವುದಕ್ಕೆ ವಿಶೇಷವಾದ ಕ್ರಮ ಕೈಗೊಳ್ಳಬೇಕೆಂದು ಹೇಳಲಿಚ್ಛಿಸುತ್ತೇನೆ. ಮತ್ತೊಂದು ವಿಚಾರವೇನೆಂದರೆ, ಇಡೀ ರಾಷ್ಟ್ರದಲ್ಲಿ ಕರ್ನಾಟಕ ಸರ್ಕಾರ ಅಗ್ಗದ ದರದಲ್ಲಿ ವಿದ್ಯುತ ಉತ್ಪಾದಿಸುವ ರಾಜ್ಯವಾಗಿದೆ. ಸರ್ಕಾರ ನೀಡಿರುವ ಮಾಹಿತಿ ಪ್ರಕಾರ ಹೈಡಲ್ ಪವರ್‌ನಲ್ಲಿ ಒಂದು ಯೂನಿಟ್ ವಿದ್ಯುತ್ ಉತ್ಪಾದಿಸಲು ಖರ್ಚಾಗುತ್ತಿರುವ ಹಣ ನಲವತ್ತು ಪೈಸೆಯಾಗಿದ್ದರೆ, ಥರ್ಮಲ್ ಪವರ್‌ನ ಒಂದು ಯೂನಿಟ್‌ಗೆ ಎರಡು ರೂಪಾಯಿ 23 ಪೈಸೆ ಹಾಗೂ ಸೆಂಟ್ರಲ್ ಗ್ರಿಡ್‌ನಿಂದ ಒಂದು ಯೂನಿಟ್‌ಗೆ 1 ರೂಪಾಯಿ 73 ಪೈಸೆ ತೆತ್ತು ವಿದ್ಯುತ್ ಖರೀದಿಸುತ್ತಿದೆ. ಅಲ್ಲದೆ, ವಿದ್ಯುತ್ ಕ್ಷೇತ್ರ ಬರ ಎದುರಿಸುವಂಥ ಸಂದರ್ಭದಲ್ಲಿ ಪಕ್ಕದ ರಾಜ್ಯಗಳಿಂದ ಒಂದು ಯೂನಿಟ್‌ಗೆ ಎರಡು ರೂಪಾಯಿ 41 ಪೈಸೆ ತೆತ್ತು ವಿದ್ಯುತ್ ಖರೀದಿಸುತ್ತಿದೆ. ನನಗೆ ಆಶ್ಚರ್ಯವಾಗುವುದೇನೆಂದರೆ, ಇಂಡಿಪೆಂಡೆಂಟ್ ಪವರ್ ಪ್ರೊಡ್ಯೂಸರ್‌ಗಳಿಂದ ರಾಜ್ಯ ಸರ್ಕಾರ ಒಂದು ಯೂನಿಟ್ ವಿದ್ಯುತ್‌ಗೆ ಏಳು ರೂಪಾಯಿ 16 ಪೈಸೆ ತೆತ್ತು ವಿದ್ಯುತ್ ಕೊಳ್ಳುವಂಥ ವ್ಯವಸ್ಥೆ ಮಾಡಿದೆ. ರಾಜ್ಯ ಸರ್ಕಾರವೇ ಸಲ್ಲಿಸಿರುವ ಕೆ.ಇ.ಆರ್.ಸಿ. ವರದಿಯಲ್ಲಿ ಈ ಕುರಿತು ತಿಳಿಸಿದ್ದು ಸರ್ಕಾರ ಈ ರಾಜ್ಯವನ್ನು ಯಾವ ದಿಕ್ಕಿನತ್ತ ತೆಗೆದುಕೊಂಡು ಹೋಗುತ್ತಿದೆ ಎಂಬ ಬಗ್ಗೆ ನಾವೆಲ್ಲರೂ ಯೋಚಿಸಬೇಕಾಗುತ್ತದೆ. ರಾಜ್ಯದಲ್ಲಿನ ವಿದ್ಯುತ್ ಕ್ಷೇತ್ರದ ಸುಧಾರಣೆಗಾಗಿ 1999ರಲ್ಲಿ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಒಂದು ಕಾಯ್ದೆಯನ್ನು ಅಂಗೀಕರಿಸಲಾಗಿದ್ದು, ಇದರ ಫಲಿತಾಂಶ ಏನಾಯಿತು? ಅಲ್ಲದೆ ಕರ್ನಾಟಕ ಎಲೆಕ್ಟ್ರಿಸಿಟಿ ರೆಗ್ಯುಲೇಷನ್ ಕಮೀಷನ್ ಸಹ ನೇಮಿಸಿ, ಇದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರೂ ಫಲಿತಾಂಶ ಏನಾಗಿದೆ? 1995-96ರಲ್ಲಿ ಶೇಕಡ 16 ರಷ್ಟು ನಷ್ಟ ವಿದ್ಯುತ್ ಪ್ರಸರಣಾ ಮತ್ತು ವಿತರಣೆಯಲ್ಲಿದ್ದರೆ, 1996ರಲ್ಲಿ ಸಹ ಅಷ್ಟೇ ಶೇಕಡಾ ಇದ್ದು, ಕಳೆದ ವರ್ಷ ಶೇಕಡ 38 ರಷ್ಟು ಪ್ರಸರಣಾ, ವಿತರಣಾ ನಷ್ಟದ ಜೊತೆಗೆ ವಿದ್ಯುತ್ ಕಳ್ಳತನವೂ ಆಗಿದೆ. ಇಷ್ಟು ಪ್ರಮಾಣದಲ್ಲಿ ರಾಜ್ಯದಲ್ಲಿ ವಿದ್ಯುತ್ ನಷ್ಟವಾಗುತ್ತಿರುವುದರಿಂದ ಸರ್ಕಾರ ಯಾವ ದಿಕ್ಕಿನಲ್ಲಿ ತನ್ನ ಚಿಂತನ ನಡೆಸಿದೆ ಎಂಬುದನ್ನು ಕೇಳಬಯಸುತ್ತೇನೆ. ವಿದ್ಯುತ್ ಪ್ರಸರಣಾ ಮತ್ತು ವಿತರಣೆಯಲ್ಲಿನ ನಷ್ಟವನ್ನು ತಡೆಗಟ್ಟಿ ಅಪ್-ಗ್ರೇಡ್ ಮಾಡುವುದಕ್ಕೋಸ್ಕರ 1997ರಲ್ಲಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್, ಪವರ್ ಫೈನಾನ್ಸ್ ಕಾರ್ಪೊರೇಷನ್ ಮತ್ತು ರೂರಲ್ ಎಲೆಕ್ಟ್ರಿಸಿಟಿ ಕಾರ್ಪೊರೇಷನ್‌ನಿಂದ ಸುಮಾರು 1,474 ಕೋಟಿ ರೂಪಾಯಿಗಳಷ್ಟು ಸಾಲದ ಹಣ ತಂದಿರಿ. ಈ ರೀತಿ ತಂದಿರುವ ಹಣವನ್ನು ಕಳೆದ ಮೂರು ವರ್ಷಗಳಲ್ಲಿ

ವಿನಿಯೋಗಿಸಿದ ಬಳಿಕ ಶೇಕಡ 16ರಷ್ಟಿದ್ದ ವಿದ್ಯುತ್ ಪ್ರಸರಣ ಹಾಗೂ ವಿತರಣಾ ನಷ್ಟ ಶೇಕಡ 38ರಷ್ಟಾಯಿತು! ಅಂದರೆ, ನಷ್ಟದಲ್ಲಿ ಶೇಕಡ 12 ರಷ್ಟು ಹೆಚ್ಚಾಗಿದೆಯೆಂದಾಗ ತಂದಂಥ ಸಾಲದ ಹಣದಿಂದ ಉಪಯೋಗವೇನಾಗಿದೆ? ವಿದ್ಯುತ್ ಕಳ್ಳತನದ ವಿಚಾರವಾಗಿ ಹೇಳುವುದಾದರೆ, ವಿದ್ಯುತ್ ಕಳ್ಳತನವನ್ನು ತಡೆಗಟ್ಟಲು ವಿಚಕ್ಷಣಾ ದಳ (ವಿಜಿಲೆನ್ಸ್ ಸ್ಕ್ವಾಡ್) ಏನಿತ್ತು, ಅದನ್ನು ಸರ್ಕಾರ 'ಪೊಲೀಸ್ ಠಾಣೆ'ಯಾಗಿ ಪರಿವರ್ತಿಸಿ ಕಾನೂನು ಮಾಡಿದಾಗ ಸರ್ಕಾರಿ ಆಜ್ಞೆಯನ್ನು ಆ ಸಂಬಂಧವಾಗಿ ಹೊರಡಿಸಿತು. ಮತ್ತು ಪೊಲೀಸ್ ಠಾಣೆಯಾಗಿ ಪರಿವರ್ತಿಸಿದ ಬಳಿಕ ಅದಕ್ಕೆ ಹೆಚ್ಚಿನ ಸ್ವಾಯತ್ತತೆ ನೀಡಿದಾಗ ನಾವು ಸರ್ಕಾರದ ಕ್ರಮವನ್ನು ಸ್ವಾಗತಿಸಿದೆವು ಹಾಗೂ ಇದರಿಂದ ತಕ್ಷಣದಲ್ಲಿ ಒಳ್ಳೆಯ ರೀತಿಯ ಪರಿಣಾಮಗಳುಂಟಾಗಬಹುದೆಂದು ನಿರೀಕ್ಷಿಸಿದ್ದೆವು. ಇದರ ಬಗ್ಗೆ ನಾವು ಹೇಳಲೇಬೇಕಾಗಿದೆ.

4.10 ಪಿ.ಎಂ.

ಕಳೆದಬಾರಿ ಇದೇ ಸದನದಲ್ಲಿ ಈ ವಿಷಯವನ್ನು ಮಾತನಾಡುವಂಥ ಸಂದರ್ಭದಲ್ಲಿ ಮಾನ್ಯ ಕಾಗೋಡುತಿಮ್ಮಪ್ಪನವರು ಬಹಳ ವಿಚಾರಗಳನ್ನು ನೋಟ್ ಮಾಡಿದ್ದರು. ಕಳೆದ ಬಾರಿಗೆ ಹೋಲಿಕೆ ಮಾಡಿದಾಗ ವಿದ್ಯುತ್ ಕಳ್ಳತನವನ್ನು 2.4 ಪರ್‌ಸೆಂಟ್‌ಗೆ ನಿಲ್ಲಿಸಿದ್ದೀರಿ. ಇದನ್ನು ನಾನು ಸ್ವಾಗತ ಮಾಡುತ್ತೇವೆ. ಆ ರೀತಿ 2.4 ಪರ್‌ಸೆಂಟ್ ಕಳ್ಳತನವನೇನು ನಿಲ್ಲಿಸಿದ್ದೀರಿ ವಿಥ್ ವಾಟ್ ಕಾಸ್ಟ್? ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಇದರ ಜೊತೆಗೆ ಪುಲಿಕೇಶಿ ಪಡೆಯೆಂಬುದನ್ನು ನಿರ್ಮಾಣ ಮಾಡಿದರು, ವಿದ್ಯುತ್ ಇಲಾಖೆಯಲ್ಲಿ ಇದೊಂದು ಒಳ್ಳೆಯ ಮೈಲುಗಲ್ಲು. ಆ ಪಡೆಯು ತನ್ನದೇ ಆದ ರೀತಿಯಲ್ಲಿ ಕೆಲಸವನ್ನು ಪ್ರಾರಂಭ ಮಾಡಿ ವಿದ್ಯುತ್ ಕ್ಷೇತ್ರದಲ್ಲಿ ಹೋದ ವರ್ಷಕ್ಕಿಂತ ಸುಮಾರು 80 ಕೋಟಿ ರೂಪಾಯಿ ಹಣವನ್ನು ವಿದ್ಯುತ್ ಕಳ್ಳತನದಲ್ಲಿ ನಿಲ್ಲಿಸಿದ್ದಾರೆ. ಇದು ಒಂದು ಭಾಗವಾದರೆ, ಎರಡನೆಯದಾಗಿ ವಿದ್ಯುತ್ ಇಲಾಖೆಯ ಸುಧಾರೀಕರಣದ ಹೆಸರಿನಲ್ಲಿ 13,500 ಸಾವಿರ ಕೋಟಿ ರೂಪಾಯಿಗಳನ್ನು ವಿಶ್ವ ಬ್ಯಾಂಕ್‌ನಿಂದ ಸಾಲವನ್ನಾಗಿ ತರಲು ಹೆಜ್ಜೆ ಇಟ್ಟಿದ್ದೀರಿ. ಈಗಾಗಲೇ ಚರ್ಚೆ ಪ್ರಾರಂಭವಾಗಿದೆ. ವಿವಿಧ ಹಂತಗಳಲ್ಲಿ, ವಿಶ್ವಬ್ಯಾಂಕ್ ಯೋಜನೆಯ ಕರಡುಗಳನ್ನು ತಂದು ಪರಿವರ್ತನೆಯ ಹಾದಿಯಲ್ಲಿ ಹೆಜ್ಜೆಯನ್ನಿಟ್ಟಿದ್ದೀರಿ. ಸುಧಾರಣೆಯ ಹೆಸರಿನಲ್ಲಿ ವಿಶ್ವ ಬ್ಯಾಂಕ್‌ನ ಸಾಲಕ್ಕಾಗಿ ವಿಶ್ವ ಬ್ಯಾಂಕ್‌ನವರು ಕೊಟ್ಟಿರುವ ರಿಫಾರ್ಮ್ಸ್ ಏನಿದೆ ಅದರಿಂದ ಮುಂದೆ ಏನಾಗುತ್ತದೆ ಎಂಬ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಇಡೀ ದೇಶದಲ್ಲಿ ಮೊದಲ ಬಾರಿಗೆ ವಿದ್ಯುತ್ ಕ್ಷೇತ್ರಕ್ಕೆ ವಿಶ್ವ ಬ್ಯಾಂಕ್‌ನಿಂದ ಹಣವನ್ನು ಸಾಲವನ್ನಾಗಿ ತಂದಂಥವರು ಒರಿಸ್ಸಾ ರಾಜ್ಯದವರು. ಅವರು ಕಳೆದ ಮೂರು ವರ್ಷಗಳ ಹಿಂದೆ ಸಾಲವನ್ನು ತಂದರು. ಆ ರೀತಿ ತಂದ ಮೇಲೆ ವಿಶ್ವಬ್ಯಾಂಕ್‌ನವರು ಹೇಳಿದ ರೀತಿಯಲ್ಲೇ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಿದರು, ವಿದ್ಯುತ್ ವಿತರಣಾ ನಷ್ಟವನ್ನು ಸರಿಮಾಡುತ್ತೇವೆಂದು

ವಿಶ್ವ ಬ್ಯಾಂಕ್‌ನವರು ಹೇಳಿದ ರೀತಿಯಲ್ಲಿ ಆಡಳಿತಾತ್ಮಕ ರಿಫಾರ್ಮ್ಸ್‌ನ್ನು ಮಾಡಿದರು. ಅದರ ಜೊತೆಗೆ ಇಡೀ ವಿದ್ಯುತ್ ಇಲಾಖೆಯನ್ನು ತನ್ನದೇ ಆದಂಥ ರೀತಿಯಲ್ಲಿ ವಿಂಗಡನೆ ಮಾಡಿಕೊಟ್ಟರು. ಒರಿಸ್ಸಾ ರಾಜ್ಯದವರು ವಿಶ್ವಬ್ಯಾಂಕ್‌ನ ನಾರ್ಮ್ಸ್ ಪ್ರಕಾರ ಹೋಗಿ ವಿದ್ಯುತ್ ಮಂಡಳಿಯ ನೌಕರರಿಗೆ ಸಂಬಳವನ್ನು ಕೊಡಲಾರದ ಆ ರಾಜ್ಯದ ಪರಿಸ್ಥಿತಿ ಹೇಳಲು ಅಸಾಧ್ಯವಾಗಿದೆ. ಎರಡೂವರೆ ಸಾವಿರ ಕೋಟಿ ರೂಪಾಯಿ ಸಾಲದ ಹಣವನ್ನು ಹಿಂದಕ್ಕೆ ಕೊಡಬೇಕಾಗಿರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಕಾರಣ ಯಾರ್‍ಯಾರನ್ನು ಹೇಳಿದ್ದರೋ ಅಂಥ ವ್ಯಕ್ತಿಗಳಿಗೆ ಗ್ಲೋಬಲ್ ಟೆಂಡರ್ ಮೂಲಕ ವಿತರಣಾ ವ್ಯವಸ್ಥೆಯನ್ನು ಕೊಟ್ಟರು. ಆದರೆ ಇವತ್ತು ವಿತರಣೆ ಉತ್ಪಾದನೆ, ಸರಬರಾಜು ಈ ಮೂರರ ಮಧ್ಯದಲ್ಲಿ ಸಾಮರಸ್ಯವಿಲ್ಲದೆ ಒರಿಸ್ಸಾದಲ್ಲೇನು ಪರಿಸ್ಥಿತಿ ನಿರ್ಮಾಣವಾಗಿದೆ ಎಂಬ ಬಗ್ಗೆ ನಾವು ನೀವೆಲ್ಲರೂ ನೋಡಿಕೊಂಡು ಮುಂದಿನ ಹೆಜ್ಜೆಯನ್ನು ಇಡುವಾಗ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಹದಿನೈದು ದಿವಸಗಳ ಹಿಂದೆ ಒಂದು ಸಭೆಯಲ್ಲಿ ಮಾತನಾಡುತ್ತಾ ವಿದ್ಯುತ್ ವಿಚಾರದಲ್ಲಿ ಯಾರು ಹೆಜ್ಜೆಯನ್ನಿಡುತ್ತಿದ್ದಾರೋ ಅಂಥವರಿಗೆ ಕ್ಯಾಲಿಫೋರ್ನಿಯನ್ ಪವರ್ ಕ್ರೈಸಿಸ್ ಒಂದು ದೊಡ್ಡ ಪಾಠವೆಂದು ಹೇಳಿದ್ದರು. ಕ್ಯಾಲಿಫೋರ್ನಿಯಾದಲ್ಲಿ ಇದೇ ರೀತಿ ವಿಶ್ವಬ್ಯಾಂಕ್‌ನಿಂದ ಸಾಲವನ್ನು ಪಡೆದಂಥ ಸಂದರ್ಭದಲ್ಲಿ ಎಲ್ಲವನ್ನೂ ಖಾಸಗೀಕರಣ ಮಾಡಿದರು. ಇಡೀ ಅಮೇರಿಕಾಕ್ಕೆ ವಿದ್ಯುತ್‌ನ್ನು ಕೊಡುವ ಕ್ಷೇತ್ರ ಅದಾಗಿತ್ತು. ಆದರೆ ಕಳೆದ ನಾಲ್ಕು ತಿಂಗಳಿನಿಂದ ಅಲ್ಲಿರುವ ಖಾಸಗಿ ಕಂಪನಿಗಳು ತಮ್ಮಲ್ಲಿ ಸಿಂಡಿಕೇಟ್‌ನ್ನು ಮಾಡಿಕೊಂಡು ಐವತ್ತು ಪರ್‌ಸೆಂಟ್ ಕಂಪನಿಗಳು ಉತ್ಪಾದನೆಯನ್ನು ನಿಲ್ಲಿಸಿದರು. ಆದ್ದರಿಂದ ವಿದ್ಯುತ್‌ಗೆ ಹಾಹಾಕಾರವಾಗಿ ಇಡೀ ಪ್ರಪಂಚದಲ್ಲಿ ಕ್ಯಾಲಿಫೋರ್ನಿಯನ್ ಪವರ್ ಕ್ರೈಸಿಸ್ ಒಂದು ದೊಡ್ಡ ಪಾಠವಾಗಿ ನಮ್ಮ ಮುಂದಿದೆ. ಆದ್ದರಿಂದ ವಿದ್ಯುತ್ ಕ್ಷೇತ್ರದಲ್ಲಿ ಒಂದು ಸುಧಾರಣೆಯ ಸಲುವಾಗಿ ಹೊರಟಿರುವಾಗ ನಾವು ಇಡುವ ಹೆಜ್ಜೆ ಏನು ಎನ್ನುವುದು ಬಹಳ ಮುಖ್ಯವಾದ ವಿಚಾರ. ಈ ವಿಚಾರದಲ್ಲಿ ರಾಜ್ಯ ಸರ್ಕಾರವು ಎಲ್ಲರ ಜೊತೆಯಲ್ಲಿ ಸಮಾಲೋಚನೆ ಮಾಡಿದ ನಂತರ, ವಿಶೇಷವಾಗಿ ಟೆಕ್ನೋಕ್ರಾಟ್ಸ್ ಜೊತೆಯಲ್ಲಿ ಪ್ರಮುಖರಾದ ಚರ್ಚೆಯಾದ ನಂತರ ಮುಂದಿನ ಹೆಜ್ಜೆ ಇಡಬೇಕೆಂದು ಹೇಳಬಯಸುತ್ತೇನೆ. ಇವರು ವಿಶ್ವ ಬ್ಯಾಂಕ್‌ನಿಂದ ಸಾಲವನ್ನು ತರುವಂಥ ಸಂದರ್ಭದಲ್ಲಿ ಯಾರಿಂದ ಸಲಹೆಯನ್ನು ಕೇಳಿದ್ದಾರೆಂದರೆ, ಕನ್‌ಸಲ್ಟೆಂಟ್ ಆಗಿ ಸಿ.ಎಂ.ಎಸ್. ಕ್ಯಮರಾ, ಯುಕೆ ಇವರಿಗೆ ನಮ್ಮಲ್ಲಿರುವಂಥ ಇಂಜಿನಿಯರ್‌ಗಳು ಕೊಡುವಂಥ ಮಾಹಿತಿಯನ್ನು ಸಂಗ್ರಹಿಸಿ ವರದಿ ನೀಡಲು 14 ಕೋಟಿ ರೂಪಾಯಿ ಹಣವನ್ನು ಕೊಟ್ಟಿದ್ದಾರೆ. ಇದಲ್ಲದೆ, ಪವರ್ ವಾಟರ್ ಹೌಸ್ ಕೂಪರ್ಸ್, ಯುಕೆ. ಇವರಿಗೆ ಮನೇಜ್‌ಮೆಂಟ್‌ಗೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಅಧ್ಯಯನ ಮಾಡಿ ವರದಿ ನೀಡಲು 18 ಕೋಟಿ ರೂಪಾಯಿಗಳ ಹಣವನ್ನು ಕೊಟ್ಟಿದ್ದಾರೆ. ಮಹಾನ್ ಇಂಡಿಯ ಇವರಿಗೆ ನಮ್ಮಲ್ಲಿರುವ ಮಾನವ ಶಕ್ತಿ

ಏನಿದೆ ಅದನ್ನು ಹೇಗೆ ಉಪಯೋಗ ಮಾಡಿಕೊಳ್ಳಬೇಕು ಎಂಬ ವಿಚಾರದಲ್ಲಿ ವರದಿ ನೀಡಲು ಒಂದು ಕೋಟಿ ಹಣವನ್ನು ಕನ್‌ಸಲ್‌ಟೇಷನ್ ಫೀ ಕೊಡುತ್ತಿದ್ದಾರೆ. ಹೀಗಾಗಿ ಸುಮಾರು 35 ಕೋಟಿ ರೂಪಾಯಿಗಳನ್ನು ಕೊಟ್ಟು ಕೇವಲ ನಮ್ಮ ವರದಿಯ ಆಧಾರದ ಮೇಲೆ ಅವರಿಂದ ವರದಿಯನ್ನು ಪಡೆದುಕೊಳ್ಳುವ ಸಲುವಾಗಿ ವಿಶ್ವಬ್ಯಾಂಕ್‌ನ ಸೂಚನೆ ಪ್ರಕಾರ ನಾವು ಹೆಜ್ಜೆಯನ್ನು ಇಡುತ್ತಿದ್ದೇವೆ. ಕಳೆದ ಸಲ 17 ಪರ್‌ಸೆಂಟಿನಷ್ಟು ವಿದ್ಯುತ್ ದರವನ್ನು ಜಾಸ್ತಿ ಮಾಡಿ ಸರ್ಕಾರ ಒಂದು ದೊಡ್ಡ ಶಾಕ್‌ನ್ನು ನೀಡಿತು. ಕಳೆದ ವಾರದ ಸಚಿವ ಸಂಪುಟದ ಸಭೆಯಲ್ಲಿ ಮತ್ತೆ 20 ಪರ್‌ಸೆಂಟ್ ವಿದ್ಯುತ್ ದರವನ್ನು ಹೆಚ್ಚು ಮಾಡುವ ವಿಚಾರ ಪ್ರಸ್ತಾಪಕ್ಕೆ ಬಂದಿತ್ತು. ವಿಧಾನಸಭೆಯ ಅಧಿವೇಶನ ನಡೆಯುತ್ತಿದೆಯೆಂಬ ಕಾರಣಕ್ಕಾಗಿ, ಬೇರೆ ಬೇರೆ ಯಾವುದೋ ಕಾರಣಕ್ಕಾಗಿ ಆ ಪ್ರಸ್ತಾವನೆಯನ್ನು ಮುಂದೂಡಿದ್ದಾರೆ. ತಕ್ಷಣವೇ ಅದಕ್ಕೆ ಚಾಲ್ತಿ ಕೊಡುವ ಕೆಲಸಗಳು ಪ್ರಾರಂಭವಾಗುತ್ತಿದೆ. ಕಾರಣವೇನೆಂದರೆ, ರಾಜ್ಯ ಸರ್ಕಾರದವರು ಸಾಲವನ್ನು ಮಾಡುತ್ತಿರುವ ಸಂದರ್ಭದಲ್ಲಿ ವಿಶ್ವಬ್ಯಾಂಕ್‌ಗೆ ಒಂದು ಮುಚ್ಚಳಿಕೆಯನ್ನು ಬರೆದು ಕೊಟ್ಟಿದ್ದಾರೆ. ವಿದ್ಯುತ್ ರೀಪೇಮೆಂಟ್ ಕೆಪ್ಯಾಸಿಟಿ ಎಷ್ಟಿದೆ ಎಂಬುದನ್ನು ತೋರಿಸುವುದಕ್ಕಾಗಿ ಉತ್ಪಾದನಾ ವೆಚ್ಚ ಎಷ್ಟು ಬೇಕಾದರೂ ಆಗಿರಲಿ, ಪ್ರತಿ ವರ್ಷ 15 ಪರ್‌ಸೆಂಟ್ ವಿದ್ಯುತ್ ದರವನ್ನು ಹೆಚ್ಚು ಮಾಡುತ್ತೇವೆಂದು ವಿಶ್ವಬ್ಯಾಂಕ್‌ನವರಿಗೆ ಮುಚ್ಚಳಿಕೆಯನ್ನು ರಾಜ್ಯ ಸರ್ಕಾರ ಕೊಟ್ಟಿದೆ. ಯಾರ ಹಿತಕ್ಕಾಗಿ ಈ ರೀತಿ ಮುಚ್ಚಳಿಕೆಯನ್ನು ನೀಡಿದ್ದೀರಿ ಎಂಬುದನ್ನು ತಾವು ತಿಳಿಸಬೇಕು. ಕೆ.ಪಿ.ಟಿ.ಸಿ.ಎಲ್ ನೌಕರರಿಗೆ ನಿವೃತ್ತಿ ವೇತನವನ್ನು ಕೊಡಲು ಏನು 3100 ಕೋಟಿ ರೂ. ಬೇಕಾಗಿತ್ತೋ ಆ ಹಣ ನಮ್ಮಲ್ಲಿ ಇಲ್ಲ, ಅದನ್ನು ಮೊಬಿಲೈಸ್ ಮಾಡುವುದಕ್ಕೋಸ್ಕರ ಹಣವನ್ನು ಪಡೆಯುವುದಕ್ಕೋಸ್ಕರ ವಿಶ್ವಬ್ಯಾಂಕ್‌ಗೆ ಹೋಗುತ್ತಿದ್ದೇವೆ ಎಂಬ ಅಂಶ ವರದಿಯಲ್ಲಿ ಬಂದಿರುವುದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. 13,500 ಕೋಟಿ ರೂಪಾಯಿಗಳ ಸಾಲದಲ್ಲಿ ಈಗಾಗಲೇ ಮೂರು ಸಾವಿರ ಕೋಟಿ ರೂಪಾಯಿ ಪಡೆಯಲು ಎಲ್ಲಾ ಯೋಜನೆಗಳು ಆಗಿದೆ, ಈ ಹಣಕ್ಕೆ ನಾವು 12 ಪರ್‌ಸೆಂಟ್ ಬಡ್ಡಿಯನ್ನು ಕೊಡತಕ್ಕ ವ್ಯವಸ್ಥೆ ಬಂದಿದೆ. ತಾವು ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಖಾಸಗಿಕರಣ ಮಾಡಲು ಹೊರಟಿದ್ದೀರಿ. ಟ್ರಾನ್ಸ್‌ಮಿಷನ್‌ನ್ನು ಖಾಸಗೀಕರಣ ಮಾಡಲು ಹೊರಟಿದ್ದೀರಿ. ಯಾವ ಪುರುಷಾರ್ಥಕ್ಕಾಗಿ ಹಾಗೆ ಮಾಡಲು ಹೊರಟಿರಿ? 1999ರಲ್ಲಿ ಇದೇ ವಿಚಾರವಾಗಿ ಇಲ್ಲಿ ಚರ್ಚೆಗೆ ಬಂದಿದ್ದಾಗ ನಾವು ಹೊಸದಾಗಿ ತಿದ್ದುಪಡಿಯನ್ನು ಮಾಡಿ ತಮಗೆ ಅವಕಾಶವನ್ನು ಮಾಡಿಕೊಟ್ಟೆವು. ರಾಜ್ಯದಲ್ಲೇನು ಐದು ವಿಭಾಗಗಳು ಇದೆ ಅದನ್ನು ರೀಜನಲ್ ಬಿಸ್‌ನೆಸ್ ಸೆಂಟರ್ಸ್ ಎಂದು ಈಗಾಗಲೇ ಡಿಕ್ಲೇರ್ ಮಾಡಿಕೊಂಡಿದ್ದಾರೆ. ಅದಕ್ಕೆ ಮುಖ್ಯ ಕಾರ್ಯದರ್ಶಿಗಳು, ಮುಖ್ಯ ಅಭಿಯಂತರುಗಳು ಮುಖ್ಯಸ್ಥರಾಗಿದ್ದಾರೆ. ಅವರುಗಳ ಜೊತೆಯಲ್ಲಿ ಕೆ.ಪಿ.ಟಿ.ಸಿ.ಎಲ್‌ನ ಅಧ್ಯಕ್ಷರು ಎಂ.ಓ.ಯು.ಗೆ ಸಹಿ ಮಾಡಿದ್ದಾರೆ. ಒಂದು ವರ್ಷವಾಯಿತು. ಎಂ.ಓ.ಯು.ಗೆ ಸಹಿ ಮಾಡಿದ ಮೇಲೆ ಅದು ಇಂಡಿಪೆಂಡೆಂಟ್

ಬಾಡಿಯಾಗುತ್ತದೆ. ರಾಜ್ಯದಲ್ಲಿರುವ ಐದು ರೀಜನಲ್ ಬಿಸ್‌ನೆಸ್ ಸೆಂಟರ್ಸ್ ಏನಿವೆ ಅದು ಇಂಡಿಪೆಂಡೆಂಟ್ ಕೇಂದ್ರಗಳಾಗುತ್ತದೆ. ಆ ರೀತಿಯಾದ ಮೇಲೆ ವಿದ್ಯುತ್ ಕ್ವಾಲಿಟಿಯಲ್ಲಿ, ವಿದ್ಯುತ್ ಸರಬರಾಜಿನಲ್ಲಿ ಅಡೆತಡೆಯಿಲ್ಲದೆ ವಿದ್ಯುತ್ ಒದಗಿಸುವಲ್ಲಿ ಏನಾದರೂ ಅಭಿವೃದ್ಧಿಯಾಗಿದೆಯೇ? ಇರತಕ್ಕ ಹ್ಯೂಮನ್ ರಿಸೋರ್ಸ್‌ನಲ್ಲಿ ಏನಾದರೂ ಅಭಿವೃದ್ಧಿಯಾಗಿದೆಯೇ? ಏನು ಸಾಧನೆಯಾಗಿದೆ ಎಂಬ ಬಗ್ಗೆ ಮೊದಲು ತಿಳಿಸಿ ಅನಂತರ ಇನ್ನೊಂದು ಕೆಲಸವನ್ನು ಮಾಡಲು ತಾವು ಹೋಗಬೇಕು. ಏನು ಸಾಧನೆ ಆಗಿದೆ ಎನ್ನುವುದನ್ನು ದಯವಿಟ್ಟು ತಿಳಿಸಿ. ಅನಂತರವೇ ಇನ್ನೊಂದು ಪರಿವರ್ತನೆಗೆ ಹೋಗುವಂತಹ ಕೆಲಸವನ್ನು ನೀವು ಮಾಡಬೇಕು. ಇವತ್ತು ರಾಜ್ಯ ಪವರ್ ಡಿಫಿಸಿಟ್ ಸ್ಟೇಟ್ ಆಗುತ್ತಿದೆ. ವಿಷಯ ಸಮಿತಿಯ ವರದಿ ಪ್ರಕಾರ ರಾಜ್ಯದಲ್ಲಿ ಸುಮಾರು 8 ಸಾವಿರ ಮೆಗಾವಾಟ್ ಜಲ ವಿದ್ಯುತ್ ಅನ್ನು ಉತ್ಪಾದನೆ ಮಾಡುವಂತಹ ಪೊಟೆನ್ಷಿಯಾಲಿಟಿ ಇದೆ. ವಿಶೇಷವಾಗಿ ಮಿನಿ ಹೈಡಲ್ ಮೂಲಕ ರಾಜ್ಯದಲ್ಲಿ ತಕ್ಷಣವೇ ಸುಮಾರು 3,000 ಮೆಗಾವ್ಯಾಟ್ ವಿದ್ಯುತ್ ಅನ್ನು ತಯಾರು ಮಾಡಲಿಕ್ಕೆ ಬೇಕಾಗಿರುವಂತಹ ಎಲ್ಲಾ ಪರಿಕರಗಳು ನಮ್ಮ ಮುಂದೆ ಇವೆ ಎಂಬ ವಿಚಾರವನ್ನು ವರದಿಯಲ್ಲಿ ಹೇಳಿದ್ದಾರೆ. ನಾನು ಈ ಮಾತನ್ನು ಹೇಳಿದ ತಕ್ಷಣ ಮಾನ್ಯ ಮಂತ್ರಿಗಳು ವಿಶೇಷವಾಗಿ ಆಂಧ್ರ ಪ್ರದೇಶ-ಕರ್ನಾಟಕ ಮತ್ತು ಕರ್ನಾಟಕ ತಮಿಳುನಾಡು ರಾಜ್ಯಗಳ ಮಧ್ಯೆ ಇರುವಂತಹ ಕೆಲವು ಜಲ ವಿವಾದಗಳಿಂದಾಗಿ ಇದು ಸಾಧ್ಯವಿಲ್ಲ ಎಂದು ಹೇಳಬಹುದು. ಇಂತಹ ಸಂದರ್ಭದಲ್ಲಿ ನ್ಯಾಷನಲ್ ಹೈಡಲ್ ಪವರ್ ಕಾರ್ಪೊರೇಷನ್‌ರವರಿಗೆ ಇದನ್ನು ವಹಿಸಿ ಕೊಟ್ಟಿದ್ದೇ ಆದರೆ ಅವರು ಉತ್ಪತ್ತಿ ಮಾಡಿ ಕೇವಲ 1.63 ಪೈಸೆ ಒಂದು ಯೂನಿಟ್ ಕರೆಂಟ್ ಅನ್ನು ಎರಡೂ ರಾಜ್ಯಗಳಿಗೆ ಕೊಡುವ ಒಪ್ಪಂದಕ್ಕೆ ಸಹಿ ಮಾಡಲಿಕ್ಕೆ ಇವತ್ತು ಕೇಂದ್ರ ಸರ್ಕಾರ ರೆಡಿಯಾಗಿದೆ. ದಯಮಾಡಿ ಇಂತಹ ವಿಚಾರಗಳ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕು. ವರ್ಲ್ಡ್ ಬ್ಯಾಂಕ್ ಸಾಲಕ್ಕೆ ಹೋಗುವುದರ ಬದಲು ತಾವು ಬೆಂಗಳೂರು ಮಹಾ ನಗರದಲ್ಲಿ ಹಿಂದಿನ ಸರ್ಕಾರ ಬಾಂಡ್ ಸಿಸ್ಟಮ್ ಅನ್ನು ತಂದ ರೀತಿಯಲ್ಲಿ ಇವತ್ತು ಹೈಡ್ರೋ ಪವರ್ ಕಾರ್ಪೊರೇಷನ್ ಎಂಬುದನ್ನು ಮಾಡಿ ಅದಕ್ಕೆ ಬೇಕಾಗಿರುವಂತಹ ಹಣವನ್ನು ಸೇರಿಸಲಿಕ್ಕೆ ಪವರ್ ಬಾಂಡ್ಸ್ ಅನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಿ. ಆಗ ವಿಶೇಷವಾಗಿ ಯಾರು ಪವರ್ ಬಾಂಡ್ ತೆಗೆದುಕೊಳ್ಳುತ್ತಾರೋ ಅವರಿಗೆ ಇನ್‌ಕಂ ಟ್ಯಾಕ್ಸ್ ಎಗ್ಸೆಂಪ್‌ಷನ್ ಸಿಗುತ್ತದೆ. ಕಡಿಮೆ ಬಡ್ಡಿಯ ದರದಲ್ಲಿ ನಿಮಗೆ ಬಾಂಡಿನ ಮುಖಾಂತರ ಹಣ ಬರುತ್ತದೆ. ಬರುವಂತಹ ಲಾಭ ನಮ್ಮ ರಾಜ್ಯದಲ್ಲಿರುವಂತಹ ಸಾಮಾನ್ಯ ವ್ಯಕ್ತಿಗೆ ಮುಟ್ಟುತ್ತದೆ. ಅದನ್ನು ಬಿಟ್ಟು ಇವತ್ತು ಕ್ಯಾಲಿಫೋರ್ನಿಯಾ ಮತ್ತು ಒರಿಸ್ಸಾಗಳಲ್ಲಿ ಆಗಿರುವಂತಹ ರೀತಿಯಲ್ಲಿ ನಮ್ಮ ಹಣವನ್ನು ವರ್ಲ್ಡ್ ಬ್ಯಾಂಕಿನಿಂದ ಯಾವುದೇ ದೇಶಕ್ಕೆ ಮುಟ್ಟಿಸುವಂತಹ ಕೆಲಸವನ್ನು ಮಾಡುವಂಥಾದ್ದು ಆಗಬಾರದು. ಇದರ ಬಗ್ಗೆ ಹೆಚ್ಚಿನ ಚಿಂತನೆಯನ್ನು ಮಾಡಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ಈ ಬಾರಿ ರಾಜ್ಯ ಸರ್ಕಾರ ಕೆಇಆರ್‌ಸಿ ಮುಂದೆ ಮನವಿಯೊಂದನ್ನು ಸಲ್ಲಿಸಿ ಅದರಲ್ಲಿ ತನ್ನ ಲಾಭ ನಷ್ಟದ ಬಗ್ಗೆ ಹೇಳಿದೆ. ಲಾಭ-ನಷ್ಟವನ್ನು ಹೇಳುವಂತಹ ಸಂದರ್ಭದಲ್ಲೂ ಕೂಡ 28,387 ಮಿಲಿಯನ್ ಯೂನಿಟ್ ವಿದ್ಯುತ್ ಅನ್ನು ಉತ್ಪಾದನೆ ಮಾಡಲಾಗುತ್ತಿದೆ ಅದಕ್ಕೆ

4,713 ಕೋಟಿ ರೂಪಾಯಿಗಳ ವೆಚ್ಚ ತಗಲುತ್ತಿದೆ. ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಮತ್ತು ಥೆಫ್ಟ್ ಮುಖಾಂತರ 9,651 ಮಿಲಿಯನ್ ಯೂನಿಟ್‌ಗಳು ಈ ಬಾರಿ ಸೋರಿ ಹೋಗುತ್ತದೆ ಎಂಬುದಾಗಿ ಇವತ್ತು ರಾಜ್ಯ ಸರ್ಕಾರ ಹೇಳಿಕೊಂಡಿದೆ. ಕಳೆದ ಬಾರಿಗಿಂತ ಕೇವಲ 2 ರಷ್ಟು ಮಾತ್ರ ಈ ಸಲ ಸೋರಿಕೆ ಕಡಿಮೆಯಾಗಿದೆ. 1474 ಕೋಟಿ ರೂಪಾಯಿಗಳ ಇನ್‌ವೆಸ್ಟ್ ಮಾಡಿದ ನಂತರವೂ ಕೂಡ ಶೇಕಡ 2 ರಷ್ಟು ಮಾತ್ರ ಕಡಿಮೆಯಾಗಿದೆ. ಅದೂ ಕೂಡ ಒಬ್ಬ ಎಫಿಷಿಯೆಂಟ್ ಆಫಿಸರ್ ನೇತೃತ್ವದಲ್ಲಿ 'ಪುಲಿಕೇಶಿ ಪಡೆ' ಎಂಬುದನ್ನು ರಚಿಸಿ ಕಳ್ಳತನದ ಪ್ರಕರಣಗಳನ್ನು ಪತ್ತೆ ಹಚ್ಚಿದ್ದರಿಂದ ಆಗಿದೆ. 82 ಕೋಟಿ ರೂಪಾಯಿಗಳು ಮಾತ್ರ ಸೇವ್ ಆಗಿದೆ. ಇವತ್ತು ಒಂದು ಆಶ್ಚರ್ಯ ನಮ್ಮ ಮುಂದೆ ಕಾದಿದೆ. ಕಳೆದ ಬಾರಿ ಕೂಡ ಒಂದು ಬಹಳ ಮುಖ್ಯವಾದಂತಹ ವಿಚಾರವನ್ನು ಪದೇ ಪದೇ ಹೇಳುವಂತೆ ಮಾನ್ಯ ಕಾಗೋಡು ತಿಮ್ಮಪ್ಪನವರು ಕೇಳಿದರು. ಮಾನ್ಯ ತಿಮ್ಮಪ್ಪನವರೇ, ನಾನು ಮತ್ತೊಮ್ಮೆ ಇದೇ ವಿಚಾರವನ್ನು ನಾನು ಹೇಳುತ್ತಿದ್ದೇನೆ. ನಮ್ಮಲ್ಲಿ ಇರುವಂತಹ ವಿದ್ಯುತ್ ಅನ್ನು ಉತ್ಪಾದನೆಮಾಡುತ್ತಿರುವಂತಹ ಘಟಕಗಳಲ್ಲಿ 10,543 ಮಿಲಿಯನ್ ಯೂನಿಟ್‌ಗಳನ್ನು ಉತ್ಪಾದಿಸಲು ನಾವು 451.66 ಕೋಟಿ ರೂಪಾಯಿಗಳನ್ನು ಪ್ರಸ್ತುತ ವರ್ಷದಲ್ಲಿ ಖರ್ಚುಮಾಡುತ್ತಿದ್ದೇವೆ. ಇದಲ್ಲದೇ ಥರ್ಮಲ್ ಪವರ್‌ನಿಂದ 8,235 ಮಿಲಿಯನ್ ಯೂನಿಟ್‌ಗಳನ್ನು ಉತ್ಪಾದಿಸಲು 1841 ಕೋಟಿ ರೂಪಾಯಿಗಳು ಅವತ್ತು ಖರ್ಚಾಗುತ್ತಿದೆ. ತಣ್ಣೀರು ಬಾವಿ, ರಾಯಲಸೀಮಾ, ಟಾಟಾ ಮತ್ತು ಜಿಂದಾಲ್‌ಗಳಂತಹ ಇಂಡಿಪೆಂಡೆಂಟ್ ಪವರ್ ಪ್ರೊಡ್ಯೂಸರ್ಸ್‌ಗಳಿಂದ ಇವತ್ತು ಸರ್ಕಾರ ಕೇವಲ 919 ಮಿಲಿಯನ್ ಯೂನಿಟ್‌ಗಳನ್ನು ಖರೀದಿಸಲು 658.37 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. 10 ಸಾವಿರ ಮಿಲಿಯನ್ ಯೂನಿಟ್‌ಗಳಿಗೆ ಸರ್ಕಾರ 451 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರೆ, ಕೇವಲ 919 ಮಿಲಿಯನ್ ಯೂನಿಟ್‌ಗಳನ್ನು ಪರ್ಚೇಸ್ ಮಾಡುವ ಸಲುವಾಗಿ ಇವತ್ತು 658.37 ಕೋಟಿ ರೂಪಾಯಿಗಳನ್ನು ಖರ್ಚುಮಾಡಲಾಗುತ್ತಿದೆ. ಮಾನ್ಯ ವಿಶ್ವೇಶ್ವರ ಹೆಗಡೆಯವರು ತಣ್ಣೀರು ಬಾವಿಯವರು ಪ್ರೊಡಕ್ಷನ್ ಅನ್ನು ಪ್ರಾರಂಭ ಮಾಡಿದ್ದಾರೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದರು. ಅದಕ್ಕೆ ಸರ್ಕಾರದವರು ತಣ್ಣೀರು ಬಾವಿ ಸಂಸ್ಥೆಯವರು ಈಗಾಗಲೇ ಪ್ರೊಡಕ್ಷನ್ ಅನ್ನು ತಯಾರು ಮಾಡಿದ್ದಾರೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಒಂದು ಮೂಲದ ಪ್ರಕಾರವಾಗಿ ತಾವೇ ಸರ್ಕಾರದ ವತಿಯಿಂದ, ಅದಕ್ಕೆ ಬೇಕಾದಂತಹ ಎಕ್ವಿಪ್‌ಮೆಂಟ್ಸ್ ಇನ್ನೂ ಬೇಕಾಗಿದೆ, ಅದು ಪ್ರೊಡಕ್ಷನ್ ಪ್ರಾರಂಭ ಮಾಡಿದ ನಂತರದಲ್ಲಿ ಅವರು ಕೀಳಿರ್‌ಸಿ ಮುಂದೆ ಹೋಗುತ್ತಾರೆ. ಅಲ್ಲಿಯವರೆಗೆ ನಾವು ಪರ್ಚೇಸ್ ಮಾಡಿಲ್ಲ ಎಂದು ಹೇಳಿದ್ದೀರಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಇನ್ನೊಂದು ಹೇಳಿಕೆಯನ್ನೂ ಕೂಡ ಸರ್ಕಾರದವರು ಕೊಟ್ಟಿದ್ದಾರೆ. ಅವರ ಬೆಲೆ 5.60 ರೂಪಾಯಿ ಆಯಿತು, ಆದ್ದರಿಂದ ಅದನ್ನು ಪರ್ಚೇಸ್ ಮಾಡುವುದಿಲ್ಲ ಎನ್ನುವಂತಹ ಹೇಳಿಕೆಯನ್ನು ಸಹ ಸರ್ಕಾರದವರು ಕೊಟ್ಟಿದ್ದಾರೆ.

F-75 II

ಶ್ರೀ ಎ. ರಾಮದಾಸ್:— ಇವತ್ತು ಅಲ್ಲಿ ಏನಾಗಿದೆ? ಇವತ್ತು ನೀವೇ ಕೊಟ್ಟ ಮಾಹಿತಿಯ ಪ್ರಕಾರ ನಾನು ಇದನ್ನು ಹೇಳುತ್ತಿದ್ದೇನೆ. ಇದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಇದರ ಬಗ್ಗೆ ಮಾನ್ಯ ಮಂತ್ರಿಗಳು ದಯವಿಟ್ಟು ಹೇಳಬೇಕು. ರಾಜ್ಯ ಸರ್ಕಾರ ತಾನು ಮಾಡಿಕೊಂಡ ಅಗ್ರಿಮೆಂಟ್ ಪ್ರಕಾರವೇ ಒಂದು ಯೂನಿಟ್ ಪವರ್ ಅನ್ನೂ ಕೂಡ ಪರ್ಚೇಸ್ ಮಾಡದೆ ಫಿಕ್ಸೆಡ್ ಚಾರ್ಜಸ್ ಆಗಿ ರಾಯಲಸೀಮಾದವರಿಗೆ 21.80 ಕೋಟಿ ರೂಪಾಯಿಗಳು ತಣ್ಣೀರು ಬಾವಿಯವರಿಗೆ 314.50 ಕೋಟಿ ರೂಪಾಯಿಗಳು ಮತ್ತು ಟಾಟಾದವರಿಗೆ 74.8 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ ಎನ್ನುವಂತಹ ವಿಚಾರವನ್ನು ರಾಜ್ಯ ಸರ್ಕಾರವೇ ಕೆಇಆರ್‌ಸಿ ಮುಂದೆ ಫೈಲ್ ಮಾಡಿದಂತಹ ಮನವಿಯಲ್ಲಿ ತಿಳಿಸಿದೆ. ಮಾನ್ಯ ಸದಸ್ಯರಾದ ವಿಶ್ವೇಶ್ವರ ಹೆಗಡೆಯವರು ಇವತ್ತು ಯಾವ ರೇಟ್‌ನಲ್ಲಿ ಕೊಂಡುಕೊಳ್ಳುತ್ತಿದ್ದಾರೆ ಎಂಬ ಬಗ್ಗೆ ಆಗಲೇ ಹೇಳಿದರು. ಸರ್ಕಾರ ಪತ್ರಿಕೆಯಲ್ಲಿ ಹೇಳುವಂತಹ ಮಾತೇ ಬೇರೆ. ಇವತ್ತು ಸರ್ಕಾರದ ವರದಿಯ ಪ್ರಕಾರವೇ ಇಂಡಿಪೆಂಡೆಂಟ್ ಪವರ್ ಪ್ರೊಡ್ಯೂಸರ್ಸ್‌ಗಳಿಂದ ಒಂದು ಯೂನಿಟ್ ಕರೆಂಟ್‌ಗೆ 7.16 ರೂಪಾಯಿಯ ದರದಲ್ಲಿ ಈ ವರ್ಷ ನಾವು ವಿದ್ಯುತ್ ಕೊಂಡುಕೊಳ್ಳುತ್ತೇವೆ ಎಂದು ಹೇಳಲಾಗಿದೆ. ಈ ರಾಜ್ಯವನ್ನು ನೀವು ಇವತ್ತು ಏನು ಮಾಡಲಿಕ್ಕೆ ಹೊರಟಿದ್ದೀರಿ? ಒಂದು ಯೂನಿಟ್ ಕರೆಂಟ್‌ಗೆ 7.16 ರೂಪಾಯಿ ದರದಲ್ಲಿ ಐಪಿಪಿಗಳಿಂದ ವಿದ್ಯುತ್ ಪರ್ಚೇಸ್ ಮಾಡುವುದಕ್ಕೆ ರಾಜ್ಯ ಸರ್ಕಾರ ಇವತ್ತು ಸಿದ್ಧವಾಗಿದೆ. 411 ಕೋಟಿ ರೂಪಾಯಿಗಳನ್ನು ಫಿಕ್ಸೆಡ್ ಚಾರ್ಜಸ್ ಆಗಿ ಯಾವುದೇ ಒಂದು ಯೂನಿಟ್ ಕರೆಂಟ್ ಅನ್ನು ಕೂಡ ಪರ್ಚೇಸ್ ಮಾಡದೆ ಕೊಡುವುದಕ್ಕೆ ಒಪ್ಪಿಕೊಂಡಿರುವುದು ಬಹಳ ಶೋಚನೀಯ. ಈ ವಿಚಾರವನ್ನು ಸರ್ಕಾರ ಪ್ರತಿಷ್ಠೆಯಾಗಿ ತೆಗೆದುಕೊಳ್ಳಬಾರದು. ಮಹಾರಾಷ್ಟ್ರದಲ್ಲಿ ಎನ್ರಾನ್‌ನ ಬಗ್ಗೆ ಅಲ್ಲಿಯ ರಾಜ್ಯ ಸರ್ಕಾರ ಏನೊಂದು ನಿಲುವನ್ನು ತೆಗೆದುಕೊಂಡಿದೆಯೋ ಅದೇ ರೀತಿಯಲ್ಲಿ ತಾವೂ ಕೂಡ ಈ ಕ್ಷಣದಲ್ಲಿ ರಾಜ್ಯದ ಹಿತದೃಷ್ಟಿಯಿಂದ ಇವತ್ತು ಸುಪ್ರೀಂ ಕೋರ್ಟಿಗೆ ಇದಕ್ಕೆ ಸಂಬಂಧಪಟ್ಟಂತೆ ಬೈಂಡಿಂಗ್ ಯಾರ ಮೇಲೂ ಇಲ್ಲ ಎಂದು ರಿಟ್ ಹಾಕಬಹುದು. ಒಪ್ಪಂದದ ಪ್ರಕಾರ ಅದು ಟ್ರೈ ಪಾರ್ಟೈಟ್ ಅಗ್ರಿಮೆಂಟ್ ಆಗಿರಬೇಕಾಗಿತ್ತು. ಮಧ್ಯದಲ್ಲಿ ಬ್ಯಾಂಕ್ ಒಂದು ಇರಬೇಕಾಗಿತ್ತು. ಆದರೆ ಈಗ ಆಗಿರುವುದು ಕೇವಲ ಬೈ ಪಾರ್ಟೈಟ್ ಅಗ್ರಿಮೆಂಟ್ ಮಾತ್ರ. ಯಾವುದೇ ಮಧ್ಯದ ಬ್ಯಾಂಕ್ ಇಲ್ಲದಿರುವುದರಿಂದ ಎಸ್ಕ್ರೋ ಕವರೇಜ್ ಇದರಲ್ಲಿ ಕವರ್ ಆಗುವುದಿಲ್ಲ. ಆದ್ದರಿಂದ ದಯವಿಟ್ಟು ರಾಜ್ಯದ ಹಿತದೃಷ್ಟಿಯಿಂದ ತಾವೇ ಇವತ್ತು ಸುಪ್ರೀಂ ಕೋರ್ಟ್‌ಗೆ ಹೋಗಿ ತಣ್ಣೀರ್ ಬಾವಿಗೆ ಕೊಡುವಂತಹ 256 ಕೋಟಿ ರೂಪಾಯಿಗಳ ಫಿಕ್ಸೆಡ್ ಚಾರ್ಜಸ್ ಏನಿದೆ ಅದನ್ನು ನಿಲ್ಲಿಸುವಂತಹ ಪ್ರಯತ್ನವನ್ನು ಮಾಡಿದರೆ ರಾಜ್ಯಕ್ಕೆ ದೊಡ್ಡ ಉಪಕಾರವನ್ನು ಮಾಡಿದಂತಾಗುತ್ತದೆ ಎನ್ನುವುದನ್ನು ಹೇಳಲಿಕ್ಕೆ ನಾನು ಇಚ್ಛೆ ಪಡುತ್ತಿದ್ದೇನೆ. ಮಾನ್ಯ ಹೆಗಡೆಯವರು ಆಗಲೇ ಒಂದು ಮಾತನ್ನು ಹೇಳಿದರು. 'ಯೂರೋ ಇಂಡಿಯಾ ಪವರ್ ಕೆನರಾ ಪ್ರೈವೇಟ್

ಲಿಮಿಟೆಡ್ ಯಾವುದು ಈ ಸಂಸ್ಥೆ? ಈ ಸಂಸ್ಥೆಗೆ ತಾವು ಗ್ಲೋಬಲ್ ಟೆಂಡರ್ ಅನ್ನು ಮಂಗಳೂರಿನಲ್ಲಿ ಕರೆದಿದ್ದಿರಿ. ಅದರ ಸಿಸ್ಟಮ್ ಏನು ಅಂದರೆ ಬಾರ್ಜ್ ಮೌಂಟೆಡ್. ಅದರ ಫ್ಯೂಯಲ್ ಏನು ಅಂದರೆ ನಾಫ್ತಾ ಫ್ಯೂಯಲ್. ಇದರ ಆಧಾರದ ಮೇಲೆ ತಾವು ಒಂದು ಅಗ್ರಿಮೆಂಟ್ ಮಾಡಿಕೊಂಡಿದ್ದಿರಿ. ಸರ್ಕಾರದ ನೀತಿಯ ಪ್ರಕಾರದಲ್ಲಿ ಬಾರ್ಜ್ ಮೌಂಟೆಡ್ ಬರಲಾರದು. ನಾಫ್ತಾ ಫ್ಯೂಯಲ್ ಯೂಸ್ ಮಾಡಬಾರದು ಎಂದು ಇದ್ದುದರಿಂದ ಅದು ಆಗುವುದಿಲ್ಲ ಎಂದು ತೀರ್ಮಾನವಾಯಿತು. ಅಲ್ಲಿಗೆ ಆ ಬಿಡ್ ಮುಗಿದ್ದಿತ್ತು. ಇವತ್ತು ಸರ್ಕಾರಿ ಆಜ್ಞೆ ಹೊರಡಿಸಿದ್ದಾರೆ. ಸರ್ಕಾರಿ ಆಜ್ಞೆ ಪ್ರಕಾರದಲ್ಲಿ ಈ ಬಿಡ್ ಅನ್ನು ಎಕ್ಸ್‌ಟೆಂಡೆಡ್ ಬಿಡ್ ರೂಟ್ ಪ್ರಾಜೆಕ್ಟ್ ಎಂದು ಕನ್‌ಸಿಡರ್ ಮಾಡಿ ಸರ್ಕಾರ ಆಜ್ಞೆ ಹೊರಡಿಸಿದೆ. ಹಾಗೆ ಹೊರಡಿಸುವ ಸಂದರ್ಭದಲ್ಲಿ ತಾವು ಒಂದು ಪತ್ರ ಬರೆದಿದ್ದೀರಿ. 19.2.2001ರಲ್ಲಿ ಒಂದು ಪತ್ರ ಬರೆದು ಹೇಳಿದ್ದೀರಿ. ಈ ಸಂಸ್ಥೆಗೆ ಕೇಂದ್ರ ಸರ್ಕಾರದಿಂದ ಟೆಕ್ನೋ ಎಕನಾಮಿಕ ಕ್ಲಿಯರೆನ್ಸ್ ಸಿಕ್ಕಿಲ್ಲ. ಟೆಕ್ನೋ ಎಕನಾಮಿಕ್ ಕ್ಲಿಯರೆನ್ಸ್ ಸಿಗದೆ ಇರುವ ಸಂಸ್ಥೆ ಕೂಡ ಇದರಲ್ಲಿ ಭಾಗವಹಿಸಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಲ್ಯಾಂಡ್ ಐಡೆಂಟಿಫೈ ಆಗಿಲ್ಲ. ಎಷ್ಟು ರೇಟ್‌ನಲ್ಲಿ ಕೊಡುತ್ತಾರೆಂದು ಫಿಕ್ಸ್ ಮಾಡಿಲ್ಲ. ಇದು ಯಾವುದೂ ಆಗದೆ ಕೆಪಿಟಿಸಿಎಲ್ ಅಧ್ಯಕ್ಷರು ಬರೆದಿದ್ದರೂ ಓವರ್‌ಲುಕ್ ಮಾಡಿ ಕೊಟ್ಟಿದ್ದಾರೆ.

ಶ್ರೀ ಎ. ರಾಮದಾಸ್ :— ತಮ್ಮ ಸರ್ಕಾರದಲ್ಲಿ ಆಗಿದ್ದು ತಮ್ಮ ಗಮನಕ್ಕೆ ಬಂದಿದೆ ಎಂದು ತಿಳಿದುಕೊಂಡಿದ್ದೇನೆ. ಈ ಸರ್ಕಾರಿ ಆಜ್ಞೆ ಹೊರಡಿಸುವುದಕ್ಕೆ ಮುಂಚೆ ಕ್ಯಾಬಿನೆಟ್‌ನಲ್ಲಿ ನಿರ್ಧಾರ ಆದ ನಂತರ ಟ್ರಾನ್ಸ್‌ಪರೆನ್ಸಿ ಆಕ್ಟ್ ಎಲ್ಲಿ ಹೋಯಿತು? ಯಾವ ಟೆಂಡರ್ ಕರೆದಿದ್ದೀರಿ ಇದನ್ನು ತೆಗೆದುಕೊಂಡು ಹೋಗಿ ಲ್ಯಾಂಡ್ ಮೌಂಟೆಡ್ ಕೋಲ್ ಬೇಸ್ಡ್ ಇದನ್ನು ಮಂಡ್ಯದಲ್ಲಿ ಪ್ರಾರಂಭ ಮಾಡಬೇಕಾಗಿದ್ದ ಯೋಜನೆಯನ್ನು ಕೇವಲ ಟೆಂಡರ್ ಕರೆಯದೆ, ಯಾವ ರೇಟ್‌ಗೆ ಕರೆಂಟ್ ಕೊಂಡುಕೊಳ್ಳುತ್ತಾರೆ ಎಂದಾಗಲಿ, ಅವರು ಯಾವ ರೇಟ್‌ಗೆ ನಿಮಗೆ ಮಾರುತ್ತಾರೆಂದಾಗಲಿ ಪವರ್ ಪರ್ಚೇಸ್ ಅಗ್ರಿಮೆಂಟ್ ಆಗಿಲ್ಲ. ನಾಳೆ ದಿವಸ ಇದನ್ನು ಇಟ್ಟುಕೊಂಡು ನ್ಯಾಯಾಲಯಕ್ಕೆ ಹೋದರೆ ಪರಿಸ್ಥಿತಿ ಏನು? ನಾಗಾರ್ಜುನ ಕನ್‌ಸ್ಟ್ರಕ್ಷನ್ ಮತ್ತು ನಾಗಾರ್ಜುನ ಪವರ್ ಪ್ರಾಜೆಕ್ಟ್‌ನವರ ಜೊತೆಯಲ್ಲಿ ಹಿಂದಿನ ಸರ್ಕಾರದವರು ಅಗ್ರಿಮೆಂಟ್ ಮಾಡಿಕೊಂಡಿರಲಿಲ್ಲ. ನೀವು ಮಾಡಿಕೊಂಡಿರಲಿಲ್ಲ. ಆದರೆ ಒಂದು ಕಮ್ಫರ್ಟ್ ಲೆಟರ್ ಕೊಟ್ಟಿದ್ದೀರಿ. ನಿಮ್ಮ ಜೊತೆ ಮಾತುಕತೆ ಮಾಡುತ್ತೇವೆಂದು ನೀವು ಕನ್‌ಸೆಂಟ್ ಪತ್ರ ಕೊಟ್ಟಿದ್ದೀರಿ. ಆದರ ಆಧಾರದ ಮೇಲೆ ನಾವು ಈಗಾಗಲೇ ನೂರಾರು ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದೇವೆ. ತಣ್ಣೀರು ಬಾವಿ ಅವರ ಜೊತೆಯಲ್ಲಿ ಹೇಗೆ escrow ಅಗ್ರಿಮೆಂಟ್ ಮಾಡಿಕೊಂಡಿದ್ದೀರಿ, ಹಾಗೆಯೇ ನಮ್ಮ

ಜೊತೆಯಲ್ಲೂ ಕೂಡ ಅಗ್ರಿಮೆಂಟ್ ಮಾಡಿಕೊಳ್ಳಬೇಕೆಂದು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಇವತ್ತು ಕೇಸ್ ನಡೆಯುತ್ತಿದೆ. ಕೇವಲ ಒಂದೇ ಒಂದು ಪತ್ರ ರಾಜ್ಯವನ್ನು ಯಾವ ರೀತಿ ದಿವಾಳಿಯಾಗುವ ಪರಿಸ್ಥಿತಿಗೆ ಕೊಂಡೊಯ್ಯುತ್ತಿದೆ ಎಂದು ಯೋಚನೆ ಮಾಡಿ ನೋಡಿ. ಯಾವ ಪುರುಷಾರ್ಥಕ್ಕೆ ಈ ಅಗ್ರಿಮೆಂಟ್ ಮಾಡಿಕೊಂಡಿದ್ದೀರಿ. Without going for PPA? ರಾಜ್ಯ ಸರ್ಕಾರ ಏಕೆ ಈ ಅಗ್ರಿಮೆಂಟ್ ಮಾಡಿಕೊಂಡಿತು?

ಶ್ರೀ ಕಾಗೋಡು ತಿಮ್ಮಪ್ಪ :— ಸರ್ಕಾರ ಅವರ ಪರವಾಗಿ ತೀರ್ಮಾನ ಮಾಡಿಲ್ಲ. ಅದಕ್ಕೋಸ್ಕರ ಹೋಗಿದ್ದರು. ಎಂಬುದು ತಮಗೆ ಗೊತ್ತಿಲ್ಲಾ?

ಶ್ರೀ ಎ. ರಾಮದಾಸ್ :— ಅವರು ಸರ್ಕಾರಕ್ಕೆ ಬರುವಂತಹ ದಾರಿಯಲ್ಲಿ ಇಲ್ಲಿ ಏನು ಆಗಬಾರದು ಅದನ್ನು ನ್ಯಾಯಾಲಯದ ಮೂಲಕ ಹುಡುಕುವ ವ್ಯವಸ್ಥೆಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ :— ಸರ್ಕಾರದ ಲೆವೆಲ್‌ನಲ್ಲಿ ಆಗಲಿಲ್ಲ, ಅದುದರಿಂದ ಕೋರ್ಟಿಗೆ ಹೋಗಿದ್ದಾರೆ. ಕೋರ್ಟಿನಲ್ಲಿ ನಾವು ನಿಜ ಹೇಳುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಈ ವಿಷಯ ಕೋರ್ಟಿನಲ್ಲಿರುವುದರಿಂದ ಅದರ ಬಗ್ಗೆ ಚರ್ಚೆ ಮಾಡುವ ಹಾಗಿಲ್ಲ. ಹೇಳುವುದಕ್ಕೆ ಅನೇಕ ವಿಷಯಗಳಿವೆ. ಅದನ್ನು ಹೇಳಬಹುದಿತ್ತು. ಆದರೆ it becomes subjuidce.

ಶ್ರೀ ಕಾಗೋಡು ತಿಮ್ಮಪ್ಪ :— ಸರ್ಕಾರಕ್ಕೆ ತಮ್ಮ ಸಲಹೆ ಏನಿದೆ ಅದನ್ನು ಕೊಡಿ.

ಶ್ರೀ ಅರಗ ಜ್ಞಾನೇಂದ್ರ :— ಸರ್ಕಾರ ನಮ್ಮ ಸಲಹೆಯನ್ನು ತೆಗೆದುಕೊಳ್ಳುವ ಸ್ಥಿತಿಯಲ್ಲಿ ಇದೇಯಾ? ಆ ಸ್ಥಿತಿಯನ್ನು ದಾಟಿದೆ ಎಂದು ರಾಮದಾಸ್‌ರವರು ಹೇಳುತ್ತಿದ್ದಾರೆ. ಕೇವಲ ನಮಗೆ ಅಲ್ಲ, ನಿಮಗೂ ಕೂಡ ಕೆಲವು ವಿಚಾರಗಳು ಗೊತ್ತಿಲ್ಲ.

ಶ್ರೀ ಎ. ರಾಮದಾಸ್ :— ನಿಮ್ಮ ಕಾರ್ಯಕ್ರಮಗಳ ಬಗ್ಗೆ ಬಹಳ ದೊಡ್ಡದಾಗಿ ಪತ್ರಿಕೆಯಲ್ಲಿ ಬರುತ್ತದೆ. ಬಹಳ ಸಂತೋಷ. ಯೂನಿವರ್ಸಲ್ ಮೀಟರಿಂಗ್ ಪ್ರೋಗ್ರಾಂ ಬಗ್ಗೆ ಪತ್ರಿಕೆಯಲ್ಲಿ ಬಂದಿತ್ತು. 850 ಕೋಟಿ ರೂಪಾಯಿ ವೆಚ್ಚದಲ್ಲಿ ಎಲ್ಲಾ ರೈತರ ಪಂಪ್‌ಸೆಟ್ಟ್‌ಗಳಿಗೆ ಎಲೆಕ್ಟ್ರಿಕಲ್ ಮೀಟರ್ ಹಾಕುತ್ತೇವೆ ಎಂದು ಘೋಷಣೆ ಮಾಡಿದ್ದೀರಿ ಸಂತೋಷ. ಇದನ್ನು ನಾವು ಯಾರೂ ಬೇಡವೆಂದು ಹೇಳಲಿಲ್ಲ. ಆದರೆ ಈ ಸಂದರ್ಭ ಬಂದಾಗ ಕಳೆದ ಬಾರಿ 2000ನೇ ಇಸ್ವಿಯಲ್ಲಿ 20 ಲಕ್ಷ ರೂಪಾಯಿಗಳ ಟೆಂಡರ್ ಕರೆದಿದ್ದಿರಿ, ಆ ಟೆಂಡರಿಗೆ ಟಿಟಿಎಲ್ ಸಂಸ್ಥೆ ದೆಹಲಿಯವರು ಬಂದು ಒಂದು ಟೆಂಡರ್ ಹಾಕಿದ್ದರು. ಆ ಟೆಂಡರಿಗೆ ಟೆಕ್ನಿಕಲ್ ಅಕ್ಸೆಪ್ಟೆನ್ಸ್ ಸಿಗಲಿಲ್ಲವೆಂದು ಗೊತ್ತಾದಾಗ ಆ ಸಂಸ್ಥೆಯ ಇಬ್ಬರು ನಿರ್ದೇಶಕರು ಕೆಪಿಟಿಸಿಎಲ್ ಅಧಿಕಾರಿಯ ಮನೆಗೆ ಹೋಗಿ ಟಿಟಿಎಲ್

ಸಂಸ್ಥೆಯ ಹೊಸ ಡೈರಿ ಹಾಗೂ 25 ಗ್ರಾಮ್ ಚಿನ್ನದ ಐದು ನಾಣ್ಯಗಳು ತೆಗೆದುಕೊಂಡು ಹೋಗಿ ಜಯನಗರದಲ್ಲಿರುವ ಅವರ ಮನೆಗೆ ಕೊಟ್ಟರು. ಆ ವಿಚಾರದಲ್ಲಿ ಕೆಪಿಟಿಸಿಎಲ್ ಅಧಿಕಾರಿ ಛೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ತಕ್ಷಣ ಜಯನಗರದ ಪೋಲಿಸ್ ಸ್ಟೇಷನ್‌ಗೆ ಕಂಪ್ಲೇಂಟ್ ಕೊಟ್ಟು ಅರೆಸ್ಟ್ ಮಾಡಿ ಸೀಜ್ ಮಾಡಲಾಯಿತು. ದೆಹಲಿಯ ಟಿಟಿಎಲ್ ಸಂಸ್ಥೆ.

ಶ್ರೀ ಕಾಗೋಡು ತಿಮ್ಮಪ್ಪ:— ದೆಹಲಿಯ ಸಂಸ್ಥೆ ಎಂದು ಹೇಳಿ.

ಶ್ರೀ ಎ. ರಾಮದಾಸ್:— ದೆಹಲಿಯ ಸಂಸ್ಥೆ ನಮ್ಮ ರಾಜ್ಯಕ್ಕೆ ಬಂದಿತ್ತು. Towers and Transformers Limited ಎಂಬ ಈ ಸಂಸ್ಥೆಯ ಮೇಲೆ ಕೇಸ್ ಹಾಕಲಾಯಿ. 31ನೇ ಡಿಸೆಂಬರ್ 200ನೇ ಇಸವಿಯಲ್ಲಿ ಅವರ ಮೇಲೆ ಕೇಸ್ ಹಾಕಿ 2001 ಜನವರಿ 2ನೇ ತಾರೀಖಿನಿಂದ ಅವರನ್ನು ಬ್ಲಾಕ್ ಲಿಸ್ಟ್‌ನಲ್ಲಿ ಇಡಲಾಯಿತು. ಇದು ಪತ್ರಿಕೆಯಲ್ಲು ಕೂಡ ಬಂದಿತ್ತು. ಆ ಸಂಸ್ಥೆಗೆ ಸೇರಿದ ಗೋಲ್ಡ್ ಕಾಯಿನ್ ಇದೆ. ಎಲ್ಲಾ ಸಾಕ್ಷಿ ಆಧಾರಗಳಿದ್ದರೂ ಕೂಡ ಪೋಲೀಸ್ ಅಧಿಕಾರಿಗಳು ಅವರ ಮೇಲೆ 'ಬಿ' ರಿಪೋರ್ಟ್ ಕೊಟ್ಟು ಅವರನ್ನು ಬ್ಲಾಕ್ ಲೀಸ್ಟಿನಲ್ಲಿ ಇದ್ದವರಿಗೆ ವೈಟ್ ಲೀಸ್ಟ್‌ನಲ್ಲಿ ತಂದು ಬಳುವಳಿಯನ್ನು ಕೊಟ್ಟದ್ದೀರಿ. 20ಲಕ್ಷ ರೂಪಾಯಿಯ ಟೆಂಡರ್ ಅವರು ಕೇಳಿದ್ದರು. ಈಗ 28 ಕೋಟಿ ರೂಪಾಯಿಗಳ ಟೆಂಡರ್ ಈಗಾಗಲೇ ಆರ್ಡರ್ ಪ್ಲೇಸ್ ಮಾಡಿ ಆಗಿದೆ. ಇದನ್ನು ಕೊಟ್ಟು ಒಂದು ತಿಂಗಳಾಯಿತು. 28 ಕೋಟಿ ರೂಪಾಯಿಗಳ ಆರ್ಡರ್ ಅವರಿಗೆ ಕೊಟ್ಟಿದ್ದು, ಬ್ಲಾಕ್ ಲಿಸ್ಟ್‌ನಲ್ಲಿ ಇದ್ದವರು ವೈಟ್ ಲಿಸ್ಟ್ ಹೇಗೆ ಬಂದರು? ಪೋಲೀಸ್ ಸ್ಟೇಷನ್‌ನಲ್ಲಿ ಸೀಜ್ ಆದ ಗೋಲ್ಡ್ ಕಾಯಿನ್ ಏನಾದವ್ವೊ? ಕೆಪಿಟಿಸಿಎಲ್ ಅಧಿಕಾರಿಗಳು ಹೋಗಿ ಕಂಪ್ಲೇಟ್ ಲಾಡ್ಜ್ ಮಾಡಿದ್ದಾರೆ, ಆ ಕೇಸ್ ಪರಿಸ್ಥಿತಿ ಏನು ರಾಜ್ಯ ಸರ್ಕಾರದಿಂದ ಏಕೆ ಹೀಗಾಯಿತು? ಎಂದು ಇದರ ಬಗ್ಗೆ ಸನ್ಮಾನ್ಯ ಸಚಿವರು ಚಿಂತನ ಮಂಥನ ಮಾಡಿ ರಾಜ್ಯದ ಹಿತವನ್ನು ಹೇಗೆ ಕಾಪಾಡಿಕೊಳ್ಳಬೇಕೆಂಬುದನ್ನು ಹೇಳಬೇಕು. ಸಿಎಜಿ ರಿಪೋರ್ಟಿಗೆ ಮಂತ್ರಿಗಳು ಒಂದು ಸಾರಿ ಕಣ್ಣು ಹಾಯಿಸಬೇಕು. ಇದು ಯಾರಿಗೂ ಶೋಭೆ ತರುವ ವಿಚಾರ ಇಲ್ಲ. ತಮ್ಮಲ್ಲಿರುವ ರಿಪೋರ್ಟ್ ಪೇಜ್ ನಂ.78-79ರಲ್ಲಿ ಕೊಜೆಂಟ್ರಿಕ್ಸ್ ಸಂಸ್ಥೆ ಇಲ್ಲಿ ಬರುತ್ತದೆ ಎಂದು ಎಲ್ಲಾ ಆಲೋಚನೆಗಳನ್ನು ಮಾಡಿ ಶಿವಮೊಗ್ಗ ಮತ್ತು ವರಾಹಿ ಇವೆರಡರ ಮಧ್ಯದಲ್ಲಿ 690 ಮೆಗಾವ್ಯಾಟ್ ವಿದ್ಯುತ್ ಟ್ರಾನ್ಸ್‌ಮಿಷನ್‌ಗೋಸ್ಕರ ಈಗಾಗಲೇ ಲೈನ್ ಹಾಕಿದ್ದೀರಿ. ಆ ಪವರ್ ಪ್ರಾಜೆಕ್ಟ್ ಬರಲಿಲ್ಲ. ಹಣ ಏನಾಗಬೇಕು? ಇದರಿಂದ ಕೆಪಿಟಿಸಿಎಲ್‌ಗೆ ಸುಮಾರು 24-25 ಕೋಟಿ ರೂಪಾಯಿಗಳ ನಷ್ಟವಾಗಿದೆ. ಸಿಎಜಿ ರಿಪೋರ್ಟ್ ಪ್ರಕಾರ ಸುಮಾರು 650 ಕೋಟಿ ರೂಪಾಯಿಗಳ ನಷ್ಟ ಕೆಪಿಟಿಸಿಎಲ್‌ಗೆ ಆಗಿದೆ 650 ಕೋಟಿ ರೂಪಾಯಿಗಳ ನಷ್ಟವಾಗುವ ಹಾಗೆ ಮಾಡಿದ ಅಧಿಕಾರಿಗಳ

ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅಕ್ಷನ್ ರಿಪೋರ್ಟ್ ಏನು ಪ್ಲೇಸ್ ಮಾಡಿದ್ದಾರೆ, ಅದರ ಜೊತೆಯಲ್ಲಿ ಆಗಿರುವಂತಹ ಲ್ಯಾಪ್ಸಸ್ ಮೇಲೆ ಅಕ್ಷನ್ ಟೇಕನ್ ರಿಪೋರ್ಟ್ ಇಡುವ ಕೆಲಸ ಮಾಡಿದ್ರೆ ಆದರೆ ನಿಮ್ಮ ಟ್ರಾನ್ಸ್‌ಪರೆನ್ಸಿ ಸರ್ಕಾರವನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. ಬಹಳ ಒಳ್ಳೆಯ ಕೆಲಸ ಮಾಡುವ ಕೆಪಿಸಿ ವರದಿಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ರಾಯಚೂರು ಥರ್ಮಲ್ ಪವರ್ ಪ್ರಾಜೆಕ್ಟನಲ್ಲಿ ಕೇವಲ ಅಧಿಕಾರಿಗಳ ನಿರ್ಲಕ್ಷದಿಂದ ಎರಡು ಗ್ರಿಡ್ ಹಾಳಾಯಿತು. ಇದರಿಂದ ಸುಮಾರು 484.15 ಕೋಟಿ ರೂಪಾಯಿಗಳ ನಷ್ಟ ಸಂಭವಿಸಿತು. ಸಿ.ಎ.ಜಿ ರಿಪೋರ್ಟ್‌ನಲ್ಲಿ ಕೆ.ಪಿ.ಸಿ ಅಕ್ರಮಗಳ ಬಗ್ಗೆ ಹೇಳುತ್ತಾ ಸುಮಾರು 867.57 ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸಿದೆಯೆಂದು ಹೇಳಲಾಗಿದೆ. ಇದು ಆಡಿಟ್ ರಿಪೋರ್ಟ್‌ನಲ್ಲಿದೆ. ನೀವು ವಿಶ್ವ ಬ್ಯಾಂಕ್‌ನಿಂದ 13500 ಕೋಟಿ ರೂಪಾಯಿಗಳ ಸಾಲವನ್ನು ಪಡೆಯುವುದಕ್ಕೋಸ್ಕರ ರಾಜ್ಯದಲ್ಲಿರುವ 1.25 ಕೋಟಿ ಗ್ರಾಹಕರ ಮೇಲೆ ಹೊರೆಯನ್ನು ಹಾಕಬೇಡಿ. ನಮ್ಮ ರಾಜ್ಯವನ್ನು ಒರಿಸ್ಸಾ ರಾಜ್ಯವನ್ನಾಗಿ ಮಾಡಬೇಡಿ. ಅಲ್ಲಿರುವ ಡಿಸ್ಟಿಬ್ಯೂಷನ್ ಸಂಸ್ಥೆಗಳು ಕಳೆದ ಒಂದೂವರೆ ತಿಂಗಳಿನಿಂದ ಸಂಬಳವನ್ನು ನೌಕರರಿಗೆ ಕೊಡಲಾಗದ ಪರಿಸ್ಥಿತಿಯಲ್ಲಿವೆ. ಸಾಲದ ಹೊರೆಯನ್ನು ಹೆಚ್ಚು ಮಾಡುವುದನ್ನು ಬಿಟ್ಟು ಪ್ರಮುಖವಾಗಿ ಪ್ರೊಫೆಷನಲ್ ಮ್ಯಾನೇಜ್‌ಮೆಂಟ್‌ಗೆ ಹೆಚ್ಚು ಒತ್ತನ್ನು ಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಪರಿಣಿತರಿರುವಂಥ ಸಮಿತಿಯನ್ನು ಮಾಡುತ್ತೇವೆಂದು ಹೇಳಿದಾಗ ನಾವು ಅದನ್ನು ಸ್ವಾಗತ ಮಾಡಿದ್ದೆವು. ಟೆಕ್ನೋಕ್ರಾಟ್ಸ್ ಇರುವಂಥ ಒಂದು ಒಳ್ಳೆಯ ಬೋರ್ಡ್ ನಮ್ಮ ರಾಜ್ಯದಲ್ಲಿ ಬರಲಿ ಎನ್ನುವ ಕಾರಣಕ್ಕೆ ನಾವು ಸ್ವಾಗತ ಮಾಡಿದೆವು. ಆದರೆ ಯುನೈಟೆಡ್ ಕಿಂಗ್‌ಡಮ್‌ನಲ್ಲಿರುವಂಥ ಯಾರೋ ನಾಲ್ಕು ಜನರನ್ನು ಇಲ್ಲಿಗೆ ಕರೆದುಕೊಂಡು ಬಂದು ಅವರಿಗೆ ತಲಾ 50 ಕೋಟಿ ರೂಪಾಯಿಗಳ ಹಣವನ್ನು ಕೊಟ್ಟು ಕೇವಲ ನಾಲ್ಕು ಪುಟದ ವರದಿಯನ್ನು ತೆಗೆದುಕೊಳ್ಳುವ ಬದಲು ನಮ್ಮಲ್ಲಿರುವಂಥ ಪರಿಣಿತರ ಬಗ್ಗೆ ಚಿಂತನೆ ಮಾಡಬಹುದಿತ್ತಲ್ಲಾ. ಟೆಕ್ನೋಕ್ರಾಟ್ಸ್ ಸಮಿತಿ ಏನಾಯಿತು? ಇನ್ನು ಪೌವರ್ ಪರ್ಚೇಸ್ ಕಾಸ್ಟನ್ನು ಕಡಿಮೆ ಮಾಡಲು ಹಣವನ್ನು ಕೊಡುತ್ತೇವೆನ್ನುವ ಮಾತನ್ನು ಹೇಳಿದಿರಿ. ಇದಕ್ಕಾಗಿ ದೀಪಕ್ ಪರೇಖ್ ಸಮಿತಿಯನ್ನು ಮಾಡಿದಾಗ ನಾವು ತುಂಬಾ ಸಂತೋಷಪಟ್ಟೆವು. ಆ ದೀಪಕ್ ಪರೇಖ್ ಕಮಿಟಿ ವರದಿ ಏನಾಯಿತು? ಅವರು ಲೀಸ್ಟ್ ಕಾಸ್ಟ್ ಬೇಸಿಸ್ ಮೇಲೆ ಪವರ್ ಪರ್ಚೇಸ್ ಮಾಡಬೇಕು ಎಂದು ಹೇಳಿದರು. ಹೀಗಿರುವಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ದೆಹಲಿಯಲ್ಲಿ ಭಾಷಣ ಮಾಡಿರುವುದನ್ನು ನಾನು ಓದಿದೆ. ಸುಮಾರು 8 ಸಾವಿರ ಕೋಟಿ ರೂಪಾಯಿಗಳು ಖರ್ಚಾದರೂ ಪರವಾಗಿಲ್ಲ ಒಂದು ಸೆಂಟ್ರಲ್ ಗ್ರೀಡ್ ಇರಬೇಕು ಎನ್ನುವ ಅಡ್ವೈಸನ್ನು ಕೇಂದ್ರ ಸರ್ಕಾರಕ್ಕೆ ಮಾನ್ಯ ಮುಖ್ಯಮಂತ್ರಿಗಳು ಭಾಷಣದಲ್ಲಿ ಮಾಡಿದ್ದಾರೆ. ಆದರೆ ನೀವೇನು ಮಾಡುವುದಕ್ಕೆ ಹೋರಟಿದ್ದೀರಿ? ನಮ್ಮಲ್ಲಿರುವಂಥ ಗ್ರಿಡ್ ಒಡೆದು ಛಿದ್ರ

ಮಾಡಿ ವಿಶ್ವ ಬ್ಯಾಂಕ್ ನಾರ್ಮ್ಸ್ ಪ್ರಕಾರ ಐದು ಗ್ರಿಡ್‌ಗಳನ್ನು ಕಂಪನಿಗಳಾಗಿ ಮಾಡುವುದಕ್ಕೆ ಹೊರಟಿದ್ದೀರಲ್ಲಾ, ಇದು ಯಾರ ಪುರುಷಾರ್ಥಕ್ಕಾಗಿ? ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತಲ್ಲವೆ? ಇದರ ಜೊತೆಗೆ ಮಿನಿ ಹೈಡಲ್ ಪ್ರಾಜೆಕ್ಟ್‌ಗಳನ್ನು ಪ್ರಾರಂಭ ಮಾಡುವ ಮೂಲಕ ಇವೊತ್ತು ವಿಶೇಷವಾಗಿ ನಮ್ಮಲ್ಲಿರುವಂಥ ಹೈಡಲ್ ಪಾವರ್‌ನ್ನು ಟ್ಯಾಪ್ ಮಾಡುವಂಥ ಕೆಲಸ ನಮ್ಮಲ್ಲಿ ಆಗಬೇಕು. ನಾನ್-ಕನ್ವೆನ್‌ಶನಲ್ ಎನರ್ಜಿಗೆ ಹೆಚ್ಚಿನ ಒತ್ತನ್ನು ಕೊಡುವ ಕೆಲಸವಾಗಬಬೇಕು. ಇನ್ನು ವಿದ್ಯುತ್ ಕ್ಷೇತ್ರದ ಸಮಸ್ಯೆಗಳು ದಿನೇ ದಿನೇ ಉಲ್ಬಣವಾಗುತ್ತಿರುವ ಸಂದರ್ಭಗಳು ಹೆಚ್ಚಾಗುತ್ತಿವೆ. ರಾಜ್ಯದ ರೈತರಿಗೆ ಹಾಗೂ ಸಣ್ಣ ಕೈಗಾರಿಕೆಗಳವರಿಗೆ ವಿದ್ಯುತ್ ಸರಬರಾಜು ವಿಷಯದಲ್ಲಿ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆಂದು ಹೇಳಿದ ಈ ಸರ್ಕಾರ ಆ ಕೆಲಸವನ್ನು ಮಾಡಿಲ್ಲ. ಇನ್ನು ನೀವೇ ಕೊಟ್ಟಂಥ ಮಾಹಿತಿಯಲ್ಲಿ ಪ್ರಾಫಿಟ್ ಅಂಡ್ ಲಾಸ್ ಅಕೌಂಟ್‌ನಲ್ಲಿ ನಾನು ಒಳ್ಳೆಯ ರಿಫಾರ್ಮ್ಸ್‌ಗಳನ್ನು ಸರ್ಕಾರ ಮಾಡುತ್ತದೆ ಎಂದು ನಿರೀಕ್ಷೆ ಮಾಡಿದ್ದೆ. ಆದರೆ ನೀವು ಒಂದೇ ಒಂದು ಒಳ್ಳೆಯ ಕೆಲಸ ಮಾಡಿರುವುದೇನೆಂದರೆ ಕೆ.ಇ.ಆರ್.ಸಿ.ಯವರು ಕೊಟ್ಟಂಥ ವರದಿಯಲ್ಲಿ ಪಾವರ್ ಟ್ಯಾರಿಫ್ ಒಂದನ್ನು ಬಿಟ್ಟು ಉಳಿಕೆ ಎಲ್ಲಾ ರೀತಿಯ ಜನ ಸಾಮಾನ್ಯರಿಗೆ ಕೊಡಬಹುದಾದ ರಿಫಾರ್ಮ್ಸ್ ಏನಿದೆಯೋ ಅವಸ್ವರ ವಿರುದ್ಧವಾಗಿ ರಾಜ್ಯ ಸರ್ಕಾರವೇ ಕೋರ್ಟ್‌ಗೆ ಹೋಗಿ ಸ್ಟೇ ತರುವಂಥ ಕೆಲಸವನ್ನು ಏನು ಮಾಡಿದೆಯೋ ಅದೇ ಇವರ ದೊಡ್ಡ ಸಾಧನೆಯಾಗಿದೆ. ಆದರೆ ನಾನು ರಾಜ್ಯದ ವಿದ್ಯುತ್ ಗ್ರಾಹಕನಾಗಿ ಕೋರ್ಟ್‌ಗೆ ಅರ್ಜಿ ಹಾಕಿ ರಿಫಾರ್ಮ್ ಮೇಲೆ ಇರುವ ಸ್ಟೇ ತೆಗೆದುಹಾಕಿ ಅಥವಾ ಪಾವರ್ ಟ್ಯಾರಿಫ್ ಮೇಲೆ ಸ್ಟೇ ಕೊಡಿ ಎಂದು ಕೇಳಿಕೊಂಡೆ. ನ್ಯಾಯಾಲಯದಲ್ಲಿ ಕಳೆದ ವಾರ ಕಡೆಗಾದರೂ ಬುದ್ಧಿ ಬಂತು ಎಂದು ತಿಳಿದು ರಾಜ್ಯ ಸರ್ಕಾರ ಆ ಕೇಸ್ ವಿತ್‌ಡ್ರಾ ಮಾಡಿಕೊಂಡಿದೆ. ಸಂತೋಷ. ಇನ್ನು ಮುಂದಾದರೂ ಅಂಥ ರಿಫಾರ್ಮ್ಸ್ ತರುವಂಥ ಕೆಲಸಗಳಿಗೆ ತಡೆಯಾಜ್ಞೆಯನ್ನು ತರುವಂಥ ಕೆಲಸವನ್ನು ಮಾಡಬೇಡಿ. ಗ್ರಾಹಕರಿಗೆ ರಿಫಾರ್ಮ್ಸ್ ಕೊಡುವ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಪ್ರಾಫಿಟ್ ಅಂಡ್ ಲಾಸ್ ಅಕೌಂಟ್ ನೋಡಿದಾಗ ಕಳೆದ ವರ್ಷಕ್ಕೆ ಇದನ್ನು ಹೋಲಿಕೆ ಮಾಡಿ ನೋಡುವುದಾದರೆ ಕಳೆದ ವರ್ಷ ಟೋಟಲ್ ಇನ್‌ಕಮ್ 5685 ಕೋಟಿ ರೂ ಇದ್ದರೆ ಈ ಬಾರಿ ಅದು 6701.66 ರೋಟಿ ರೂಪಾಯಿಗಳಾಗಿದೆ. ಇನ್ನು ಬಡ್ಡಿ ಬಗ್ಗೆ ಕಳೆದ ವರ್ಷಕ್ಕೆ ಹೋಲಿಕೆ ಮಾಡಿ ನೋಡಿದರೆ 115 ಕೋಟಿ ರೂಪಾಯಿಗಳನ್ನು ಹೆಚ್ಚು ಕೊಡುತ್ತಿದ್ದೇವೆ. ಇದು ಈಗಿರುವ ಸಾಲವನ್ನು ತೀರಿಸುವದಕ್ಕಾಗಿ ಕೊಡುತ್ತಿರುವುದು. ನಾನು ಏಕೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ ಮತ್ತೊಮ್ಮೆ 13500 ಕೋಟಿ ರೂಪಾಯಿಗಳ ಸಾಲವನ್ನು ಈ ರಾಜ್ಯ ಜನರ ಮೇಲೆ ಹೇರಬೇಡಿ ಎನ್ನುವುದಕ್ಕಾಗಿ ಹೇಳುತ್ತಿದ್ದೇನೆ. ಇನ್ನು ಎಕ್ಸ್‌ಪೆಂಡೀಚರ್ 6687.47 ಕೋಟಿ ರೂಪಾಯಿಗಳಾದರೆ ರಾಜ್ಯ ಸರ್ಕಾರದಿಂದ 2151.88 ಕೋಟಿ ರೂಪಾಯಿಗಳ ಸಬ್ಸೀಡಿಯನ್ನು

ನಿರೀಕ್ಷೆ ಮಾಡಲಾಗುತ್ತಿದೆ. ಆದರೆ ಪತ್ರಿಕೆಗಳಲ್ಲಿ ತಿಳಿಸಿರುವಂತೆ ಇನ್ನು ಮುಂದೆ ಸಬ್ಸಿಡಿಯನ್ನು ಕಡಿಮೆ ಮಾಡಲಾಗುವುದು ಎಂದು ಬಂದಿದೆ. ಇದರ ಬಗ್ಗೆ ತಾವು ಹೇಳಬೇಕು. ಸಬ್ಸಿಡಿ ನೀವು ಕೊಡದಿದ್ದರೆ ಕೆ.ಪಿ.ಟಿ.ಸಿ.ಎಲ್.ನ ಪರಿಸ್ಥಿತಿ ಏನು? ನೀವು ಮೊದಲು ಆಗುವಂಥ ಬಡ್ಡಿಯನ್ನು ನಿಲ್ಲಿಸಬೇಕು, ವಿದ್ಯುತ್ ಕಳ್ಳತನ ನಿಲ್ಲಿಸಬೇಕು. ಟ್ರಾನ್ಸ್‌ಮಿಷನ್-ಡಿಸ್ಟ್ರಿಬ್ಯೂಷನ್‌ನಲ್ಲಿ ಲಾಸ್ ಅನ್ನು ನಿಲ್ಲಿಸಬೇಕು. ಇದನ್ನು ಮಾಡಿದ ಮೇಲೆ ರಾಜ್ಯ ಸರ್ಕಾರ ಸಬ್ಸಿಡಿ ಕೊಡುವುದನ್ನು ಕಡಿಮೆ ಮಾಡಬೇಕು. ನಾನು ಕಳೆದ ಅಧಿವೇಶನದಲ್ಲಿ ಭಾಷಣ ಮಾಡಿದ 24 ಗಂಟೆಯೊಳಗಾಗಿ 9 ಜನರನ್ನು ಅರೆಸ್ಟ್ ಮಾಡಿದಿರಿ. ಆದರೇ ಕೇವಲ ಲೋಯರ್ ಆಫಿಸರ್‌ಗಳ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ ಹೊರಟಿದ್ದೀರಿ. ಆದರೆ ಅಲ್ಲಿದ್ದಂಥ ಡೈರೆಕ್ಟರ್‌ಗೆ ಪ್ರಮೋಷನ್ ಕೊಟ್ಟ ಎಂ.ಡಿ. ಎಂದು ಮಾಡಿ ಪೋಸ್ಟಿಂಗ್ಸ್ ಮಾಡಿದ್ದಾರೆ. ದಯಮಾಡಿ ಇಲ್ಲಿ ಯಾವುದೇ ರೀತಿಯಾದ ಮುಲಾಜಿಗೂ ಒಳಪಡದೆ ಇಡೀ ರಾಜ್ಯದ ಹಿತದೃಷ್ಟಿಯನ್ನಿಟ್ಟುಕೊಂಡು ಈ ಒಂದು ಇಲಾಖೆಯನ್ನು ಕಾಪಾಡುವಂಥ ಕೆಲಸ ಮಾನ್ಯ ಮುಖ್ಯಮಂತ್ರಿಗಳಿಗೆ ಇದೆ. ಆ ದೃಷ್ಟಿಯಲ್ಲಿ ಇಡೀ ರಾಜ್ಯ ಈ ಒಂದು ಇಲಾಖೆಯಲ್ಲಿ ಹೇಗೆ ಪರಿವರ್ತನೆಯಾಗುತ್ತಿದೆ ಎಂಬುದನ್ನು ನೋಡುತ್ತಿದೆ ಎನ್ನುವಂಥ ಮಾತನ್ನು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಈಗ ಸದನವನ್ನು ಮುಂದೂಡುತ್ತಿದ್ದೇನೆ. ನಾಳೆ ಬೆಳಿಗ್ಗೆ 10.00 ಗಂಟೆಗೆ ಸದನ ಸಮಾವೇಶಗೊಳ್ಳುತ್ತದೆ.

(ಸದನವು ಸಾಯಂಕಾಲ 4.46 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ: 27-7-2001ರ ಶುಕ್ರವಾರದಂದು ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕರ್ನಾಟಕ ವಿಧಾನಸಭೆ

ಶುಕ್ರವಾರ 27ನೇ ಜುಲೈ 2001ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಗ್ಗೆ 10.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ)ರವರು ಪೀಠವನ್ನು ಅಲಂಕರಿಸಿದ್ದರು.

1. ಸಂತಾಪ ಸೂಚನೆ.

ಶ್ರೀ ಬೋಳ ರಘುರಾಮ ಶೆಟ್ಟಿರವರ ನಿಧನದ ಬಗ್ಗೆ

ಅಧ್ಯಕ್ಷರು :— ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬೋಳ ರಘುರಾಮಶೆಟ್ಟಿ ಅವರು ದಿನಾಂಕ 29ನೇ ಜನವರಿ 1929ರಲ್ಲಿ ದಕ್ಷಿಣ ಕನ್ನಡದ ಬೋಳದಲ್ಲಿ ಜನಿಸಿದ್ದು, ವೃತ್ತಿಯಲ್ಲಿ ವಕೀಲರು, ಹಿರಿಯ ಪತ್ರಕರ್ತರು ಹಾಗೂ ರೈತಪರ ಹೋರಾಟಗಾರರಾಗಿದ್ದರು. ಅಲ್ಲದೆ, 1967ರಲ್ಲಿ ನಾಲ್ಕನೇ ವಿಧಾನಸಭೆಗೆ ಕಾರ್ಕಳ ವಿಧಾನಸಭಾ ಕ್ಷೇತ್ರದಿಂದ ಜನಸಂಘ ಪಕ್ಷದ ವತಿಯಿಂದ ಪ್ರತಿನಿಧಿಸಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ: 25ನೇ ಜುಲೈ, 2001 ರಂದು ನಿಧನ ಹೊಂದಿದರು.

ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಿದರು.)

ಅಧ್ಯಕ್ಷರು :— ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ಹೊಸಕೋಟೆ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಹಾಡುಹಗಲು ವಯೋವೃದ್ಧ ವಿಜ್ಞಾನಿ ಜಿ.ಎನ್. ಚಂದ್ರಶೇಖರನಾರವರನ್ನು ಕೊಲೆಮಾಡಿರುವ ವಿಚಾರ

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :— ಅಧ್ಯಕ್ಷರೇ ನಾನು ಒಂದು ಪತ್ರವನ್ನು ತಮಗೆ ಇಂದು ಬರೆದು ಒಂದು ವಿಚಾರವನ್ನು ಪ್ರಸ್ತಾಪಿಸಲು ಅನುಮತಿ ಕೋರಿದ್ದೇನೆ.

ಅಧ್ಯಕ್ಷರು :— ದಯವಿಟ್ಟು ಕ್ಷಮಿಸಬೇಕು. ಏನೆದಂರೆ ಇವತ್ತು ಪ್ರಶ್ನೋತ್ತರವಿಲ್ಲ, ಶೂನ್ಯವೇಳೆಯಿಲ್ಲ, ಗಮನಸೆಳೆಯುವ ಸೂಚನೆಯೂ ಇಲ್ಲ. ಇನ್ನೂ ಡಿಮಾಂಡ್ಸ್ ಮೇಲೆ

ಮಾತನಾಡುವವ್‌ರು ಬೇಕಾದಷ್ಟು ಜನರಿದ್ದಾರೆ. ಅವರಿಗೆ ನಾವು ಸಮಯ ಕೊಡದಿದ್ದರೆ ಪತ್ರಿಕೆಗಳಲ್ಲಿ ಸದಸ್ಯರಿಗೆ ಸಮಯವನ್ನೇ ಕೊಟ್ಟಿಲ್ಲವೆಂಬ ಪರಿಸ್ಥಿತಿ ಬಂದುಬಿಡುತ್ತದೆ. ನಾವು ಹೇಳಬೇಕೆಂದಿರುವಂಥ ಪ್ರಕರಣಗಳು ದಿನ ನಡೆಯುತ್ತಲೇ ಇರುತ್ತವೆ. ಪ್ರತಿ ದಿನ ನೀವು ಎತ್ತಲು ಆಗುತ್ತದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ತಾವು ಹೇಳುವುದನ್ನು ನಾವೆಲ್ಲಾ ಸಂಪೂರ್ಣ ಒಪ್ಪುತ್ತೇವೆ. ಮೊನ್ನೆ ತಾವು ಹೇಳಿದಿರಿ, ಎಲ್ಲಾ ಮುಂದಿನ ಸಾಲಿನಲ್ಲಿರುವವರೇ ಮಾತನಾಡುತ್ತಿದ್ದೀರಿ ಎಂದು. 16, 17 ಸಾವಿರ ಕೋಟಿ ರೂ. ಡಿಮಾಂಡ್ಸ್ ಬಗ್ಗೆ ನಾವ್ಯಾರೂ ಮಾತನಾಡದೇ ಹೊಸ ಸದಸ್ಯರಿಗೇ ಅವಕಾಶ ಸಿಕ್ಕಲಿ ಎಂದು ಕಡಿಮೆ ಮಾತನಾಡಿದ್ದೇವೆ. ನಾನು ಈ ವರ್ಷ ಯಾವುದೇ ಕಾರಣಕ್ಕೂ ಡಿಮಾಂಡ್ಸ್ ಮೇಲೆ ಮಾತನಾಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟ ಮೇಲೆ ಕೆಲವು ವಿವರಣೆಗಳನ್ನು ಕೇಳುತ್ತೇನೆ ಅಷ್ಟೇ. ಎರಡು ನಿಮಿಷದಲ್ಲಿ ಇದನ್ನು ಮುಗಿಸುವೆನು. ಮಾನ್ಯ ಗೃಹಸಚಿವರ ಗಮನಕ್ಕೆ ನಾನು ಮುಖ್ಯವಾಗಿ ತರುತ್ತಿರುವುದು; ನಿನ್ನೆ ಹಾಡುಹಗಲಲ್ಲಿ ವಯೋವೃದ್ಧ ವಿಜ್ಞಾನಿ ಜಿ.ಎಸ್. ಚಂದ್ರಶೇಖರನ್‌ರನ್ನು ಹೊಸಕೋಟೆ ಪೋಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಒಂದು ಗಂಟೆಯಲ್ಲಿ ಕೊಲೆ ಮಾಡಿ ಅವರ ಪತ್ನಿ ಪದ್ಮಾ ಅವರಿಗೂ ಬಹಳ ಹಿಂಸೆ ಕೊಟ್ಟು ಅವರ ಮೇಲೆ ಮರಣಾಂತಿಕ ಹಲ್ಲೆ ಮಾಡಿ ಅವರು ಆಸ್ಪತ್ರೆಯಲ್ಲಿ ಜೀವಕ್ಕೋಸ್ಕರ ಪರದಾಡುತ್ತಿರುವುದನ್ನು ಪತ್ರಿಕೆಗಳು ಇವತ್ತು ವರದಿ ಮಾಡಿವೆ. ಇದಷ್ಟೇ ಅಲ್ಲ, ಕಳೆದೆರಡು ಮೂರು ದಿನಗಳಲ್ಲಿ ಇದೇ ರೀತಿಯ ದೊಡ್ಡ ಕೊಲೆ ಬಳ್ಳಾರಿ ಜಿಲ್ಲೆಯಲ್ಲಿಯಲ್ಲಾಗಿದೆ. ಮಂಡ್ಯ ಜಿಲ್ಲೆಯಲ್ಲೂ ನಿನ್ನೆ ಆಗಿರುವುದು ವರದಿಯಾಗಿದೆ. ತಮಗೆ ಗೊತ್ತಿರುವಂತೆ ಮೂರ್ನಾಲ್ಕು ದಿನಗಳ ಹಿಂದೆ ಒಬ್ಬ ಜ್ಯೂಯಲರ್‌ನ್ನು ಕೊಲೆ ಮಾಡಿದ್ದನ್ನು ನಾವಿಲ್ಲಿ ಪ್ರಸ್ತಾಪಿಸಿದೆವು. ಈ ಕೊಲೆಗಡುಕರು ಯಾರು ಎಂಬುದನ್ನು ಪತ್ತೆ ಮಾಡಲು ಕ್ರಮ ತೆಗೆದುಕೊಳ್ಳುವುದಾಗಿ ಗೃಹಸಚಿವರು ಹೇಳಿದರೇ ಹೊರತು ಇದುವರೆಗೂ ಅವರನ್ನು ಪತ್ತೆ ಮಾಡುವಲ್ಲಿ ಸರ್ಕಾರ ಯಶಸ್ವಿ ಆಗಿಲ್ಲ. ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಜನ ಭಯಭೀತರಾಗಿ ತಲ್ಲಣಗೊಳ್ಳುವಂತಹ ಪರಿಸ್ಥಿತಿ ಉದ್ಭವವಾಗಿದೆ. ಹಾಡುಹಗಲೇ ಮಧ್ಯಾಹ್ನದ ಹೊತ್ತು ಒಬ್ಬ ವಿಜ್ಞಾನಿಯ ಕೊಲೆ ಆಗುತ್ತದೆಂದರೆ ಸಾಮಾನ್ಯ ಜನಗಳಿಗೆ ಇನ್ನು ರಕ್ಷಣೆ ಎಲ್ಲಿ ಬಂತು? ಇದು ಪೋಲೀಸ್ ವ್ಯವಸ್ಥೆಗೆ ಪೋಲೀಸ್ ನಿಷ್ಕ್ರಿಯತೆಗೆ ಹಿಡಿದ ಕೈಗನ್ನಡಿಯಲ್ಲವೇ? ಇದು ಒಂದು ರೀತಿ ದಿನಕ್ಕೊಂದು ಕೊಲೆ, ಗೃಹಸಚಿವರು ಒಂದು ಎಚ್ಚರಿಕೆಯನ್ನು ಪೋಲಿಸರಿಗೆ ಕೊಟ್ಟರು. ಇನ್ನು ಮೇಲೆ ಸರ್ಕಲ್ ಇನ್‌ಸ್ಪೆಕ್ಟರು, ಏಸಿಪಿಯವರು ನೇರವಾಗಿ ಕಾರಣಕರ್ತರಾಗಿರುತ್ತಾರೆಂದು ನಾನು ಈ ಸದನದ ಮೂಲಕ ಎಚ್ಚರಿಕೆ ಕೊಡುತ್ತಿದ್ದೇನೆ. ಅವರು ಬಹಳ ಅಲರ್ಟಾಗಿರಬೇಕೆಂದೂ ಹೇಳಿದರು. ಆದರೆ ಅದು ಪೋಲೀಸ್ ಅಧಿಕಾರಿಗಳಿಗೆ ತಲುಪಿಲ್ಲವೆಂದು ಕಾಣುತ್ತದೆ. ಜೊತೆಗೆ ನಾನು ಏನು ನಿರೀಕ್ಷೆ ಮಾಡಿದ್ದೆ ಅಂದರೆ, ಸದನ ನಡೆಯುತ್ತಿದೆ, ನಿನ್ನೆ ಮಧ್ಯಾಹ್ನ ಒಂದೂವರೆ ಗಂಟೆಗೆ ಇದು ಆಗಿದೆ, ಗೃಹಸಚಿವರು ಸ್ಥಳಕ್ಕೆ ಭೇಟಿ ನೀಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಅದು ಆಗಿಲ್ಲ.

ಉಪಾಧ್ಯಕ್ಷರು :— ಎರಡೂ ಸದನದಲ್ಲಿ ಅವರು ಬಿಜಿಯಾಗಿದ್ದರಲ್ಲಾ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಹಾಗಲ್ಲ, ಇದು ಗಂಭೀರವಾದ ವಿಚಾರ. ಬೆಂಗಳೂರನ್ನು ಬಹಳ ಸುರಕ್ಷಿತ ಸ್ಥಳವೆಂದು ಮತ್ತು ಇಲ್ಲಿ ಹವಾಗುಣ ಚೆನ್ನಾಗಿದೆಯೆಂದು ಅನೇಕ ವಿಜ್ಞಾನಿಗಳು, ನಿವೃತ್ತರು ವಾಸ್ತವ್ಯ ಮಾಡುವ ಸನ್ನಿವೇಶದಲ್ಲಿ ಪ್ರತಿನಿತ್ಯ ಈ ತರಹ ಕೊಲೆಗಳು ನಡೆದರೆ ಹೇಗೆ? ಇದನ್ನು ಹೇಗಾದರೂ ಅಂತ್ಯಗಾಣಿಸಲು ಸರ್ಕಾರ ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡಿ, ಅಧ್ಯಕ್ಷರೇ, ಇನ್ನೊಂದು ವಿಚಾರ, ನೋಡಿ ಬೆಂಗಳೂರು ನಗರ ಪೋಲಿಸರಿಗೂ ರೂರಲ್ ಪೋಲಿಸರಿಗೂ ಸಮನ್ವಯತೆಯೇ ಇಲ್ಲ. ನಿನ್ನೆ ಘಟನೆ ನಡೆದಿರುವುದು ಒಂದು ಗಂಟೆಗೆ, ತಕ್ಷಣ ಪೋಲಿಸರು ಹೋಗಲು ಆಗಿಲ್ಲ. ಬೇರೆ ಸ್ಟೇಷನ್ನಿನ ಪೋಲಿಸರು ಅಲ್ಲಿ ಹೋಗಿದ್ದಾರೆ, ಆದಾದನಂತರ ಹೊಸಕೋಟೆ ಪೋಲಿಸರು ಅಲ್ಲಿಗೆ ಹೋಗಿದ್ದಾರೆ. ಅವರು ಕೇಸನ್ನೂ ರಿಜಿಸ್ಟರ್ ಮಾಡಲು ಹೋಗಿಲ್ಲ, ತಕ್ಷಣ ರೆಡ್ ಅಲರ್ಟ್ ಮಾಡಿದ್ದರೆ ದುಷ್ಕರ್ಮಿಗಳನ್ನು ಹಿಡಿದುಹಾಕಬಹುದಾಗಿತ್ತು. ಅದೂ ಮಾಡಿಲ್ಲ. ಆದ್ದರಿಂದ ನಾನು ಕೆಲವು ಸಲಹೆಗಳನ್ನು ಗೃಹಸಚಿವರಿಗೆ ಕೊಡಲಿಚ್ಛಿಸುತ್ತೇನೆ. ಈ ರೀತಿಯ ಕೊಲೆಗಳು ಬೆಂಗಳೂರಿನಲ್ಲಿ ನಿಲ್ಲಬೇಕು. ಬೆಂಗಳೂರು ನಗರದಲ್ಲಿ ನೂರು ವಾರ್ಡ್‌ಗಳಿವೆ, ಅವುಗಳಲ್ಲಿ ತಕ್ಷಣ ಯುದ್ಧೋಪಾದಿಯಲ್ಲಿ ಅಂತಹ ವಯೋವೃದ್ಧರು ಎಲ್ಲೆಲ್ಲಿದ್ದಾರೆ ಇದರ ಬಗ್ಗೆ ಒಂದು ತಪಾಸಣೆ ಆಗಬೇಕು. ಅವರಿಗೊಂದು ಗುರುತಿನ ಚೀಟಿ ಕೊಡಬೇಕು. ಒಂದು ಸ್ಪೆಷಲ್ ಡ್ರೈವ್ ಇದಕ್ಕಾಗಿ ಆಗಬೇಕು. ಒಂಟಿ ಮನೆಗಳಲ್ಲಿವೆ ಅಲ್ಲಿ ಗಸ್ತು ಜಾಸ್ತಿ ಆಗಬೇಕು ಇದರ ಜೊತೆಗೆ ಉತ್ತರಹಳ್ಳಿ ಯಲಹಂಕ, ವರ್ತೂರು, ಆನೇಕಲ್ ಕೆಲವು ಭಾಗ, ಹೊಸಕೋಟೆ ಕೆಲವು ಭಾಗಗಳವರೆಗೆ ಬೆಂಗಳೂರು ನಗರ ಸಂಪೂರ್ಣ ವಿಸ್ತರಣೆಯಾಗಿದೆ. ಬೆಂಗಳೂರು ನಗರದಲ್ಲಿ ಪೋಲಿಸರ ಕೊರತೆಯಿದೆ. ವಾಹನ ಕೊರತೆಯಿದೆ. ಇದನ್ನೆಲ್ಲಾ ಕಂಟ್ರೋಲ್ ಮಾಡಬೇಕೆಂದರೆ ಅವರಿಗೆ ಅವೆಲ್ಲ ಒದಗಿಸಬೇಕು. ಸರ್ಕಾರದ ಪರಿಶೀಲನೆಗೆ ಇನ್ನೊಂದು ಸಲಹೆಯನ್ನು ಕೊಡುತ್ತೇನೆ. ನಾನು ಗೃಹ ಮಂತ್ರಿಯಾಗಿದ್ದಾಗಲೂ ಇದು ಇತ್ತು. ಬೆಂಗಳೂರು ರೂರಲ್ ಪೋಲಿಸರಿಗೂ ಬೆಂಗಳೂರು ಪೋಲಿಸರಿಗೂ ಮಧ್ಯೆ ಸಮನ್ವಯತೆ ಆಗುತ್ತಿಲ್ಲ. ಇಂಡಸ್ಟ್ರೀಯಲ್ ಪೋಲಿಸ್ ಎಂದು ಮಾಡಬೇಕೆಂದು ಪ್ರಸ್ತಾಪವೂ ಇತ್ತು. ಈಗ ಬೆಂಗಳಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಂಗಳಳೂರು ಅರ್ಬನ್ ಮೂರೂ ಜಿಲ್ಲೆಗಳಿವೆ. ಅರ್ಬನ್ ಜಿಲ್ಲೆಗೆ ಒಂದು ಎಸ್‌ಪಿ ಮಟ್ಟದ ಆಫೀಸನ್ನು ಮಂಜೂರು ಮಾಡಬೇಕು. ಇದು ಸರ್ಕಾರದ ಪರಿಶೀಲನೆಯಲ್ಲಿತ್ತು. ಪೋಲಿಸ್ ಇಲಾಖೆ ರೀ-ಆರ್ಗನೈಜ್ ಮಾಡಬೇಕೆಂದಿದ್ದಾಗ ಇದನ್ನು ನಾನೇ ಪ್ರಸ್ತಾಪ ಮಾಡಿದ್ದೆ. ಉದಾಹರಣೆಗೆ ಕೊಡಗು ಜಿಲ್ಲೆಯಲ್ಲಿ ಮೂರು ತಾಲ್ಲೂಕುಗಳಿವೆ ಮೂರು ಕ್ಷೇತ್ರಗಳಿವೆ. ಅಲ್ಲೊಬ್ಬ ಎಸ್ಪಿ ಇದ್ದಾರೆ. ಬೆಂಗಳೂರು ರೂರಲ್‌ನಲ್ಲಿ 9

ತಾಲ್ಲೂಕುಗಳಿವೆ, ಈ ಅರ್ಬನ್‌ನಲ್ಲಿ ಸುಮಾರು 25 ಲಕ್ಷ ಜನರಿದ್ದಾರೆ. ಇದು ಪ್ರತಿ ದಿನ ಬೆಳೆಯುತ್ತಲೇ ಇದೆ. ಇದನ್ನು ತಕ್ಷಣ ಕೊನೆಗಾಣಿಸಬೇಕಾದರೆ ಗೃಹ ಸಚಿವರು, ಮುಖ್ಯಮಂತ್ರಿಗಳು ಇದಕ್ಕೊಂದು ಪರಿಹಾರ ಕಂಡುಹಿಡಿಯಬೇಕು ಮತ್ತು ಪೋಲಿಸರಿಗೆ ಕಟ್ಟೆಚ್ಚರಿಕೆ ಕೊಡಬೇಕು. ಇಲ್ಲದಿದ್ದರೆ ಬೆಂಗಳೂರು ಕೊಲೆಗಡುಕರ ನಗರವಾಗುವುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) :— ಅಧ್ಯಕ್ಷರೇ, ಕಡೂರಿನಲ್ಲಿ ನಿನ್ನೆ ಮೋಟರ್‌ಬೈಕ್ ಸವಾರರಿಗೆ ಇಬ್ಬರು ಅಡ್ಡಗಟ್ಟಿ ...

ಅಧ್ಯಕ್ಷರು :— ಪ್ರತಿ ದಿನವೂ ಅಂಥವು ಆಗುತ್ತಿರುತ್ತವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ಹಾಗಾದರೆ ಸರ್ಕಾರ ಏಕಿರಬೇಕು, ಗೃಹ ಇಲಾಖೆ ಯಾಕೆ ಬೇಕು? ನಮಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು :— ಗೃಹ ಸಚಿವರಿಗೆ ಪಾಲಿಸಿಗಳ ಬಗ್ಗೆ ಸಜೆಸ್ಟ್ ಮಾಡಿ, ಅಲ್ಲಿ ಮೋಟರ್ ಬೈಕ್ ಅಡ್ಡಗಟ್ಟಿದರೆ ಇಲ್ಲಿ ಪ್ರಸ್ತಾಪಿಸಿದರೆ, ನನಗರ್ಥವಾಗುವುದಿಲ್ಲ. ನೀವು ಮಾತನಾಡುವುದನ್ನು ನಾನು ಮೆಚ್ಚುವುದಿಲ್ಲ. ರಾಜ್ಯದಲ್ಲೆಲ್ಲಾ, ಸಿಟಿಯಲ್ಲೆಲ್ಲಾ ಆಗುತ್ತಿರುತ್ತದೆ, ದಿನವೂ ಅದನ್ನೇ ಡಿಸ್ಕಸ್ ಮಾಡೋಣವೇ ಹೇಳಿ. ಅಂಥ ಚಿಕ್ಕ ವಿಷಯಗಳನ್ನೆಲ್ಲಾ ಅವರಿಗೆ ಪತ್ರದ ಮೂಲಕ ಫೋನ್ ಮೂಲಕ ಹೇಳಿ, ಅವರು ತಕ್ಷಣ ಕೈಗೊಳ್ಳುವರು. ಅರ್ಥ ಮಾಡಿಕೊಳ್ಳಿ.

+ ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಅಧ್ಯಕ್ಷರೇ ಇಂತಹ ವಿಚಾರದ ಬಗ್ಗೆ ಪ್ರತಿ ದಿನ ಮಾತನಾಡಲೂ ಉತ್ಸಾಹವೇನೂ ಬರುವುದಿಲ್ಲ. ಬಹು ದು:ಖದಿಂದ ಪ್ರಸ್ತಾಪಿಸುವ ಪರಿಸ್ಥಿತಿ. ಇನ್ನೊಬ್ಬ ಸೀನಿಯರ್ ಸಿಟಿಜನ್‌ದ್ದು ಕೊಲೆಯಾಗಿದೆ, ಮೂರು ತಿಂಗಳ ಹಿಂದೆ ಇದು ಅವ್ಯಾಹತವಾಗಿ ನಡೆಯಿತು. ಈಗ ಮತ್ತೆ ನಡೆಯುತ್ತಿದೆ. ಮಾನ್ಯ ಸಿಂಧ್ಯಾರವರು ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ನಾನು ಎರಡೇ ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ತಾವು ಏನಾದರೂ ಮಾಡಿ ಪೊಲೀಸ್ ಇಲಾಖೆಯನ್ನು ರೀ-ಆರ್ಗನೈಜೇಷನ್ ಮಾಡಬೇಕು. ಈ ಕೊಲೆಯಾದ ಮೂರು ಕಿಲೋ ಮೀಟರ್ ದೂರದಲ್ಲಿ ಕೆ.ಆರ್.ಪುರಂ ಪೊಲೀಸ್ ಠಾಣೆ ಇತ್ತು. ಅಲ್ಲಿಂದ ಬಂದಂಥ ಪೊಲೀಸರ್ ಇದು ನಮ್ಮ ಜ್ಯೂರಿಸ್‌ಡಿಕ್ಷನ್ ಅಲ್ಲವೆಂದು ವಾಪಸ್ ಹೋಗಿಬಿಟ್ಟರು. ಅನಂತರ 25 ಕಿ.ಮೀ. ದೂರದಲ್ಲಿರುವ ಹೊಸಕೋಟೆ ಪೊಲೀಸ್ ಠಾಣೆಯಿಂದ ಪೋಲೀಸರು ಬಂದರು, ಅವರು ಬರುವ ಹೊತ್ತಿಗೆ ಸಂಜೆ 6-30 ಆಗಿತ್ತು, ಸಂಜೆ ಆರೂವರೆಗೆ ಡಾಗ್ ಸ್ಕ್ವಾಡ್ ಬಂದರೆ ಏನು ವಾಸನೆ ಉಳಿದಿರುತ್ತದೆ? ಆದ್ದರಿಂದ ಕೊನೆಯ ಪಕ್ಷ ಇಂಥ ಕೊಲೆಗಳಾದಾಗ ಮೊದಲು ನಾವು ಏನು ಕ್ರಮತೆಗೆದುಕೊಳ್ಳಬೇಕೋ ಅದನ್ನು ಮಾಡುವುದಕ್ಕಾದರೂ

ಪೊಲೀಸ್‌ನವರಿಗೆ ಏನಾದರೂ ಮಾಡಿ ಅವಕಾಶವನ್ನು ಮಾಡಿಕೊಡಬೇಕು. ಎರಡನೆಯದಾಗಿ, ಅಂಥ ಸಂದರ್ಭದಲ್ಲಿ ಪೊಲೀಸ್‌ನವರ ನಡವಳಿಕೆ ದು:ಖವಾಗುತ್ತದೆ. ಆ ಪ್ರೊಫೆಸರ್ ಮಗ ತಂದೆಯನ್ನು ಕಳೆದುಕೊಂಡು ದು:ಖದಲ್ಲಿದ್ದಾನೆ, ತಾಯಿ ಸಾವು ಬದುಕಿನ ಮಧ್ಯ ಒದ್ದಾಡುತ್ತಿದ್ದಾರೆ. ಅಂಥ ಸಮಯದಲ್ಲಿ ಪೊಲೀಸ್‌ನವರು ನಿಮ್ಮ ತಾಯಿಯ ಮಾತನ್ನು ರೆಕಾರ್ಡ್ ಮಾಡಿಕೊಳ್ಳಬೇಕು, ಕ್ಯಾಸೆಟ್ ಕೊಡಿಸಿ ಎಂದು ಒತ್ತಾಯ ಮಾಡುತ್ತಾರೆ, ಮಗ ದು:ಖದಿಂದ ರೋಧಿಸುತ್ತಿದ್ದರೂ ಬಲವಂತ ಮಾಡಿ, ಗಲಾಟೆ ಮಾಡಿ ಅವನ ಹತ್ತಿರ ಹಣವನ್ನು ಕಿತ್ತುಕೊಂಡು ಕ್ಯಾಸೆಟ್‌ನ್ನು ತೆಗೆದುಕೊಳ್ಳುವಂಥ ಕೆಲಸವನ್ನು ಮಾನವೀಯತೆಯೆಂದು ಕರೆಯಬೇಕೆ? ಆ ಪರಿಸ್ಥಿತಿಯಲ್ಲಾದರೂ ಮಾನವೀಯತೆ ತೋರಹೊಮ್ಮಬೇಕು. ಮಾನವೀಯತೆ ದೃಷ್ಟಿಯಿಂದ ಪೊಲೀಸ್ ಇಲಾಖೆಯನ್ನು ರೀ-ಆರ್ಗನೈಜೇಷನ್ ಮಾಡುವ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾ ಮತ್ತು ಮಾನ್ಯ ಸುರೇಶ್‌ಕುಮಾರ್‌ರವರು ಪ್ರಸ್ತಾಪ ಮಾಡಿರುವ ವಿಚಾರದ ಬಗ್ಗೆ ನಾನೂ ಸಹ ಗಂಭೀರವಾಗಿ ಪರಿಗಣಿಸಿದ್ದೇನೆ. ಮಾನ್ಯ ಸಿಂಧ್ಯಾರವರು ಗೃಹ ಸಚಿವರಾಗಿದ್ದಾಗ ಏನು ಬೆಂಗಳೂರು ಜಿಲ್ಲೆಯ ಪೊಲೀಸ್ ಇಲಾಖೆಯನ್ನು ರೀ-ಆರ್ಗನೈಜೇಷನ್ ಮಾಡಲು ಅವರು ಪ್ರಪೋಸ್ ಮಾಡಿದ್ದ ಆ ಕಡತವನ್ನು ತರಿಸಿ, ಅದು ದಾಖಲೆಯಲ್ಲಿ ಇದೆಯೋ ಇಲ್ಲವೋ ಗೊತ್ತಿಲ್ಲ. ಇಲ್ಲದಿದ್ದರೂ ಇದರ ಬಗ್ಗೆ ಪರಿಶೀಲನೆ ಮಾಡಿ ಈ ಕೆಲಸವನ್ನು ವಿಭಾಗ ಮಾಡುವುದು ಒಂದು ಕಡೆ. ಎರಡನೇಯದಾಗಿ ಬೆಂಗಳೂರು ಅರ್ಬನ್ ಜಿಲ್ಲೆಗೆ ಒಂದು ಎಸ್‌ಪಿ ಪೋಸ್ಟನ್ನು ಕ್ರಿಯೇಟ್ ಮಾಡಿ ಅಗತ್ಯ ಸಿಬ್ಬಂದಿಯನ್ನು ಒದಗಿಸುವ ಬಗ್ಗೆ ಹೇಗೆ ಮಾಡಬೇಕು ಎಂಬ ಬಗ್ಗೆ ಸಹ ಯೋಚನೆ ಮಾಡುತ್ತೇನೆ. ಬೆಂಗಳೂರು ಅರ್ಬನ್ ಮತ್ತು ರೂರಲ್ ಎರಡೂ ರೂರಲ್ ಎಸ್.ಪಿ.ಯವರಿಗೆ ಸೇರಿರುವ ಕಾರಣ ಅನೇಕ ಸಲ ಈ ರೀತಿಯ ಗೊಂದಲಗಳು ಉಂಟಾಗುವ ಸಾಧ್ಯತೆ ಇದೆ. ಕೆ.ಆರ್.ಪುರಂ ಪೊಲೀಸ್ ಠಾಣೆಗೆ ದೂರವಾಣಿ ಮಾಡಿ ಹೇಳಿದಾಗ ಇದು ನಮಗೆ ಬರುವುದಿಲ್ಲ. ಬೆಂಗಳೂರು ಗ್ರಾಮಾಂತರ ಹೊಸಕೋಟೆಗೆ ಬರುತ್ತದೆಂದು ಹೇಳಿದಾಗ ಅಲ್ಲಿಂದ ಅಲ್ಲಿಯವರೆಗೆ ಬಂದು ವಾಪಸ್ ಹೋಗಿರುವುದನ್ನು ಪತ್ರಿಕೆಗಳಲ್ಲಿ ಬಂದಿರುವುದನ್ನು ನಾನು ಓದಿದ್ದೇನೆ. ಅನಂತರ ನಾನು ತಕ್ಷಣವೇ ಸಂಬಂಧಪಟ್ಟವರಿಗೆ ದೂರವಾಣಿ ಮಾಡಿ ಕ್ರಮ ತೆಗೆದುಕೊಳ್ಳಲು ತಿಳಿಸಿದ್ದೇನೆ. ರೀ-ಆರ್ಗನೈಜೇಷನ್ ಮಾಡುವ ಬಗ್ಗೆ ಹಣಕಾಸು ಇಲಾಖೆಯಿಂದ ಅನುಮತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ, ಆದ್ದರಿಂದ ಅದರ ಬಗ್ಗೆ ಆದಷ್ಟು ಬೇಗನೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಎರಡನೆಯದಾಗಿ, ಯಾವ ಸಬ್ ಇನ್ಸ್‌ಪೆಕ್ಟರ್ ಚಂದ್ರಶೇಖರ್‌ರವರ ಬಾಡಿಯ ಜೊತೆಯಲ್ಲಿ ಹೋಗಿದ್ದರು, ಹೋಗುವಾಗ ಏನು ಕ್ಯಾಸೆಟ್ ಕೊಡಿಸಿ ರೆಕಾರ್ಡ್ ಮಾಡಿಕೊಳ್ಳಬೇಕು ಎಂದು ಅವರು ತೊಂದರೆಯಲ್ಲಿದ್ದಾಗ ಒತ್ತಾಯಪೂರ್ವಕವಾಗಿ ಕ್ಯಾಸೆಟ್ ತರಲು

ಹೇಳಿದ್ದರು ಎಂಬ ಮಾತುಗಳು ಕೇಳಿಬಂದಿದೆ ಇದರ ಬಗ್ಗೆ ಸಂಬಂಧಪಟ್ಟ ಐ.ಜಿ.ಪಿಯವರಿಗೆ ಹೇಳಿ ಅವನ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಸೂಚನೆ ನೀಡುತ್ತೇನೆ. ಏಕೆಂದರೆ ಇಂಥ ಘಟನೆಗಳು ಬೇರೆ ಕಡೆ ಸಹ ನಡೆಯಬಾರದು. ಅವರ ಮೇಲೆ ನಾವು ಕ್ರಮ ತೆಗೆದುಕೊಂಡರೆ ಬೇರೆಯವರಾದರೂ ಎಚ್ಚರವಹಿಸುತ್ತಾರೆ. ಕ್ಯಾಸೆಟ್ ಕೇಳತಕ್ಕದ್ದು, ಕಾರು, ಜೀಪು ಕೇಳತಕ್ಕದ್ದು, ನೀವು ಬಂದರೆ ಮಾತ್ರ ನಾವು ಆಸ್ಪತ್ರೆಗೆ ಬರುತ್ತೇವೆ ಎಂದು ಹೇಳತಕ್ಕದ್ದು, ಈ ರೀತಿ ಏನು ಮಾಡುತ್ತಿದ್ದಾರೆ ಅದರ ಬಗ್ಗೆ ಐ.ಜಿ.ಪಿಯವರಿಗೆ ಹೇಳಿ ವಿಚಾರಣೆ ಮಾಡಿಸಿ ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ಕೊಡುತ್ತೇನೆ. ಇಂಥ ಘಟನೆ ನಡೆಯಬಾರದೆಂದು ಎರಡು ಮೂರು ದಿವಸಗಳ ಹಿಂದೆ ಅಧಿಕಾರಿಗಳಿಗೆ ಎಚ್ಚರಿಕೆಯನ್ನು ಕೊಟ್ಟಿದ್ದೇನೆ. ಸರ್ಕಾರ ಇಷ್ಟು ಎಚ್ಚರಿಕೆ ಕೊಟ್ಟರೂ ಯಾವ ಅಧಿಕಾರಿಗಳು ಇನ್ನೂ ಮಲಗಿದ್ದಾರೋ ಅಂಥವರಿಗೆ ಮತ್ತೊಮ್ಮೆ ಹೇಳಲು ಇಚ್ಛಿಸುತ್ತೇನೆ, ಅವರು ಕೆಲಸದಲ್ಲಿ ಇದೇ ರೀತಿಯಾಗಿ ನಿರ್ಲಕ್ಷತನವನ್ನು ತೋರಿಸಿದರೆ ಖಂಡಿತವಾಗಿ ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇದನ್ನೇನೂ ಮುಚ್ಚಿಡುವ ಉದ್ದೇಶವಿಲ್ಲ. ಸಾಮಾನ್ಯ ಜನರ ಜೀವನ ಏನು ಅಸ್ತವ್ಯಸ್ತವಾಗುತ್ತದೆ ಅದನ್ನು ತಡೆಗಟ್ಟಲು ಪ್ರಯತ್ನ ಮಾಡದ ಅಧಿಕಾರಿಗಳು ಇಲ್ಲಿರಲು ಯೋಗ್ಯರಲ್ಲ. ಅಂಥವರ ಮೇಲೂ ಕ್ರಮ ಜರುಗಿಸುತ್ತೇವೆ.

3. ವಿತ್ತೀಯ ಕಾರ್ಯಕಲಾಪಗಳು

2001-2002ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

ಅಧ್ಯಕ್ಷರು :— ಮಾನ್ಯ ರಾಮದಾಸ್‌ರವರೆ, ತಾವು ಐದು ವರ್ಷಗಳಿಂದ ಮಾತನಾಡಿದ್ದೀರಿ, ಆದ್ದರಿಂದ ಹೊಸ ಸದಸ್ಯರಿಗೂ ಮಾತನಾಡಲು ಅವಕಾಶ ಕೊಡಿ. ನಿನ್ನೆ ಸಹ ನೀವು 45 ನಿಮಿಷ ಮಾತನಾಡಿದ್ದೀರಿ. ಸಾಧ್ಯವಿದ್ದರೆ ಬೇರೆ ಸಮಯದಲ್ಲಿ ತಮಗೆ ಮಾತನಾಡಲು ಹೆಚ್ಚು ಅವಕಾಶ ಕೊಡುತ್ತೇನೆ. ದಯಮಾಡಿ ತಾವು ಅರ್ಥಮಾಡಿಕೊಂಡು ಹೊಸ ಸದಸ್ಯರಿಗೆ ಮಾತನಾಡಲು ಅವಕಾಶ ಕೊಡಿ. ನಿಮ್ಮ ಸದಸ್ಯರುಗಳೇ ನಮ್ಮ ಹತ್ತಿರ ಬಂದು ನಮಗೆ ಅವಕಾಶ ಸಿಗುವುದಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ತಾವು ಇನ್ನೊಂದು ಸಲ ಮಾತನಾಡುವಿರಂತೆ, ಈಗ ಬೇರೆಯವರಿಗೆ ಅವಕಾಶ ಕೊಡಿ.

+ಶ್ರೀ ಎ. ರಾಮದಾಸ್ (ಕೃಷ್ಣರಾಜ) :— ಜಯದೇವ ಆಸ್ಪತ್ರೆಯ ಬಗ್ಗೆ ಒಂದು ವಿಚಾರವಿದೆ, ಅದನ್ನು ಹೇಳಿ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :— ಅದೂ ಬೇಕಾಗಿಲ್ಲ. ಹೊಸ ಸದಸ್ಯರಿಗೆ ಅವಕಾಶ ಕೊಡಿ. ಒಂದು ವೇಳೆ ಮಾತನಾಡುವುದೇ ಇದ್ದರೆ ಯಾರಿಗೆ ಈ ಸದನದಲ್ಲಿ ಕುಳಿತುಕೊಂಡು

ಡಿಫೆಂಡ್ ಮಾಡಿಕೊಳ್ಳಲು ಶಕ್ತಿ ಇಲ್ಲವೋ ಅವರ ಮೇಲೆ ಅಲಿಗೇಷನ್ ಮಾಡಬೇಕಾಗಿದ್ದರೆ ಮೊದಲೇ ನಮಗೆ ಬರೆದು ಕಳುಹಿಸಬೇಕು. ತಾವು ದಯವಿಟ್ಟು ಆಫ್ ಹ್ಯಾಂಡ್ ತೆಗೆದುಕೊಂಡು ಆ ರೀತಿ ಮಾಡನಾಡಬಾರದು. ತಾವು ನನ್ನ ಸಮಸ್ಯೆಯನ್ನೂ ಅರ್ಥಮಾಡಿಕೊಳ್ಳಬೇಕು.

ಶ್ರೀ ಎ. ರಾಮದಾಸ್:— ಮಾನ್ಯ ಅಧ್ಯಕ್ಷರೆ, ನಿನ್ನೆ ಕೇವಲ ವಿದ್ಯುತ್ ಇಲಾಖೆಯ ಬಗ್ಗೆ ಪ್ರಸ್ತಾಪ ಮಾಡಲು ಸಾಧ್ಯವಾಯಿತು. ರಾಜ್ಯದಲ್ಲಿ ನಡೆಯುತ್ತಿರುವ ಕಿರಿಯ ವೈದ್ಯರುಗಳ ಮುಷ್ಕರದ ಬಗ್ಗೆ ಸಹ ತಾವು ಕಾಳಜಿಯನ್ನು ವಹಿಸಬೇಕು. ನಿನ್ನೆ ವಿಶ್ವವಿದ್ಯಾನಿಲಯದವರೂ ಕರೆದು ಮಾತನಾಡಿದ್ದಾರೆ, ಆದರೂ ಪ್ರಯೋಜನವಾಗಿಲ್ಲ. ಮಾನ್ಯ ಮುಖ್ಯಮಂತ್ರಿಯವರೂ ಇಲ್ಲಿದ್ದಾರೆ, ಇಲ್ಲಿ ರೆಸಿಡೆನ್ಸಿ ಸ್ಕೀಮ್‌ನ ಬಗ್ಗೆ ಮಾತ್ರ ಸಮಸ್ಯೆ ಇದೆ. ರೆಸಿಡೆನ್ಸಿ ಸ್ಕೀಮ್‌ನ್ನು ಕೊಡುತ್ತೇವೆಂದು ರಾಜ್ಯ ಸರ್ಕಾರ ಈಗಾಗಲೇ ಒಪ್ಪಿಗೆಯನ್ನು ಕೊಟ್ಟಿದೆ. ರೆಸಿಡೆನ್ಸಿ ಸ್ಕೀಮ್‌ನ್ನು ಕೊಟ್ಟರೆ ಆಗುವಂಥ ವಿಶೇಷವಾದ ಸಹಾಯವೇನೆಂದರೆ, 24 ಗಂಟೆಗಳ ಕಾಲ ವೈದ್ಯರು, ಕಿರಿಯ ವೈದ್ಯರು ಕ್ಯಾಂಪಸ್‌ನಲ್ಲಿರುತ್ತಾರೆ. ಹಿರಿಯ ವೈದ್ಯರ ಜೊತೆಯಲ್ಲಿ ಎಲ್ಲಾ ರೀತಿಯಲ್ಲೂ ಸಹಕಾರ ನೀಡಿ ಅನುಭವವನ್ನು ಪಡೆದುಕೊಳ್ಳಲು ಇದರಿಂದ ಸಹಾಯವಾಗುತ್ತದೆ. ಆ ಸ್ಕೀಮ್‌ನ್ನು ಜಾರಿಗೆ ತಂದರೆ ಸಂಬಳವನ್ನು ಜಾಸ್ತಿ ಮಾಡಬೇಕಾಗುತ್ತದೆ. ಆದರೂ ಅದರ ಅವಶ್ಯಕತೆಯಿಲ್ಲದೆ ಮುಖ್ಯಮಂತ್ರಿಗಳು ಅವರನ್ನು ಕರೆದು ಒಂದು ಸಲ ಮಾತನಾಡಿದರೆ ಸರಿಯಾದ ರೂಪ ಸಿಗುತ್ತದೆ. ಖಾಸಗಿ ಮೆಡಿಕಲ್ ಕಾಲೇಜುಗಳನ್ನು ಹೊಸದಾಗಿ ಪ್ರಾರಂಭ ಮಾಡುವ ದೃಷ್ಟಿಯಲ್ಲಿ ರಾಜ್ಯ ಸರ್ಕಾರ ಪುನರಾಲೋಚನೆ ಮಾಡಬೇಕೆಂದು ಅವರು ಮನವಿಯನ್ನು ಮಾಡಿದ್ದಾರೆ. ಮಾನ್ಯ ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಹಿಂದಿನ ಸರ್ಕಾರ ಹೊಸ ಮೆಡಿಕಲ್ ಖಾಸಗಿ ಕಾಲೇಜುಗಳನ್ನು ತೆರೆಯುವ ಬಗ್ಗೆ ಫೀಜಿಬಿಲಿಟಿ ಸರ್ಟಿಫಿಕೇಟ್‌ನ್ನು ಕೊಟ್ಟಿದ್ದಾರೆ ಅದಕ್ಕೆ ವಿರೋಧವಾಗಿ ರಾಜ್ ಭವನ್ ಚಲೋ ಕಾರ್ಯಕ್ರಮವಾಗಿದೆ. ರಾಜ್ಯಪಾಲರ ಹತ್ತಿರ ಹೋಗಿ ರಾಜ್ಯದಲ್ಲಿ ಹೊಸ ಮೆಡಿಕಲ್ ಕಾಲೇಜುಗಳ ಅವಶ್ಯಕತೆ ಇಲ್ಲ. ಹಾಫ್ ಬೇಕ್ಡ್ ವೈದ್ಯರನ್ನು ಸೃಷ್ಟಿ ಮಾಡುವುದು ಸೂಕ್ತವಲ್ಲ. ಆದ್ದರಿಂದ ಯಾವುದೇ ಫಿಸಿಬಿಲಿಟಿ ಸರ್ಟಿಫಿಕೇಟನ್ನು ಸರ್ಕಾರ ಕೊಡಬಾರದೆಂದು ಆ ರೀತಿ ಕೊಟ್ಟಂಥ ಫೀಸಿಬಿಲಿಟಿ ಸರ್ಟಿಫಿಕೇಟುಗಳನ್ನು ರದ್ದುಮಾಡುವಲ್ಲಿ ಯಶಸ್ವಿಯಾಗಿದ್ದವರು ಮಾನ್ಯ ಖರ್ಗೆಯವರು. ಕಾಂಗ್ರೆಸ್ ಪಕ್ಷದ ಎಲ್ಲಾ ಕಾರ್ಯಕರ್ತರೂ ಜೊತೆಯಲ್ಲಿ ಹೋಗಿದ್ದರು. ವಿರೋಧ ಪಕ್ಷದಲ್ಲಿದ್ದಾಗ ಹಾಗೆ ಮಾಡಿದ್ದಂಥವರು ಈಗ ಕೇವಲ ಫೀಜಿಬಿಲಿಟಿ ಸರ್ಟಿಫಿಕೇಟನ್ನು ಮಾತ್ರ ಕೊಟ್ಟಿಲ್ಲ, ಹತ್ತು ಕಾಲೇಜುಗಳಿಗೆ ಫೀಜಿಬಿಲಿಟಿ ಸರ್ಟಿಫಿಕೇಟನ್ನು ಕೊಡುವುದರ ಜೊತೆಗೆ ಅಫಿಲಿಯೇಷನ್ನೂ ಸಹ ರಾಜ್ಯ ಸರ್ಕಾರ ಕೊಟ್ಟಿದೆ. ಉದಾಹರಣೆಗೆ ಒಂದು

10.40 ಎ.ಎಂ

ಮಾತನ್ನು ಹೇಳಬೇಕು ಎಂದರೆ ಚಿಲ್ಡ್ರನ್ ಎಜ್ಯುಕೇಷನ್ ಸೊಸೈಟಿ, ಆಕ್ಸ್‌ಫರ್ಡ್ ಮೆಡಿಕಲ್ ಕಾಲೇಜು, ಇದರಲ್ಲಿ ಎಲ್.ಐ.ಸಿ. ರಿಪೋರ್ಟನ್ನು ಕೊಟ್ಟಿದ್ದಾರೆ. ಎಲ್.ಐ.ಸಿ. ರಿಪೋರ್ಟ್ ಪ್ರಕಾರ:

``According to the compliance report, the management doesn't own any building and manage 300 bedded hospital and yet to own a single plot of land measuring not less than 25 acres."

ಅಂತ ಹೇಳಿದರೆ ಈಗ ಅವರಿಗೆ ಯಾವುದೇ ಬೆಡೆಡ್ ಹಾಸ್ಪಿಟಲ್ ಇಲ್ಲ. ಸ್ವಂತ ಕಟ್ಟಡ ಇಲ್ಲ. ಇನ್ನೊಂದು ಆಶ್ಚರ್ಯ ಏನು ಎಂದರೆ ಅವರು ಇಲ್ಲಿ ಹೇಳುತ್ತಾರೆ.

``The Chairman of the Trust has informed that they have applied to BDA for the land"

ಭೂಮಿಗಾಗಿ ನಾನು ಬಿಡಿಎಗೆ ಅಪ್ಲೈ ಮಾಡಿದ್ದೇನೆ ಎನ್ನುವಂತಹ ಒಂದು ವಿಚಾರವನ್ನು ಕೊಟ್ಟಿದ್ದಾರೆ. ಅದರ ಆಧಾರದ ಮೇಲೆ ಎಲ್.ಐ.ಸಿ. ರಿಪೋರ್ಟ್ ಅವರ ವಿರುದ್ಧವಾಗಿ ಕೊಟ್ಟಿತ್ತು. ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಎರಡೂ ಕೂಡ ಇದನ್ನು ರದ್ದು ಮಾಡಬೇಕು, ಇದಕ್ಕೆ ಅಫಿಲಿಯೇಷನ್ ಕೊಡಬಾರದು ಎನ್ನುವಂತಹ ವಿಚಾರವನ್ನು ಹೇಳಿತು. ಆದರೆ ಆಶ್ಚರ್ಯ ಕಾದಿದೆ. ಇವತ್ತು ಅದರಲ್ಲಿಯೇ ಸರ್ಕಾರಿ ಆಜ್ಞೆ ಹೊರಟಿದೆ. ಸರ್ಕಾರಿ ಆಜ್ಞೆಯ ಪ್ರಕಾರದಲ್ಲಿ ಈ ರೀತಿ ಇದೆ.

``The recommendations of the Syndicate resolved to grant consent of affilliation for starting of medical colleges for the year 2001-2002 in view of the Government Order already issued under Section 45(5) of the Rajiv Gandhi Health University Act".

ಇಲ್ಲಿ ರಾಜ್ಯ ಸರ್ಕಾರಕ್ಕೆ ಒಂದು ಅಧಿಕಾರ ಇದೆ. ಇದರಲ್ಲಿ ಯಾವುದೇ ವಿಶ್ವವಿದ್ಯಾನಿಲಯಕ್ಕೆ ರಾಜ್ಯ ಸರ್ಕಾರ ಡೈರೆಕ್ಟೀವ್ಸ್ ಕೊಡಬಹುದು. ಆದರೆ ಡೈರೆಕ್ಟೀವ್ಸನ್ನು ಕೊಡುವಂಥದ್ದು ವಿಶ್ವವಿದ್ಯಾನಿಲಯದಲ್ಲಿ ಏನಾದರೂ ಅಕ್ರಮ ಆಗಿದ್ದರೆ ಮಾತ್ರ. ಜನಸಾಮಾನ್ಯ ವಿಚಾರಕ್ಕೆ ವಿರುದ್ಧವಾಗಿದ್ದರೆ ಸೆಕ್ಷನ್ 45(5) ಅಡಿಯಲ್ಲಿ ಡೈರೆಕ್ಟೀವ್ಸನ್ನು ಕೊಡಬಹುದು. ಆದರೆ ಇವತ್ತು ಹತ್ತು ಮೆಡಿಕಲ್ ಕಾಲೇಜುಗಳ ಪೈಕಿ 9 ಮೆಡಿಕಲ್ ಕಾಲೇಜುಗಳಲ್ಲಿ ಯಾವುದೇ ರೀತಿಯಾದಂತಹ ಫೆಸಿಲಿಟೀಸ್ ಇಲ್ಲ ಎಂದು ಬರೆದಿದ್ದಾರೆ. ವೆಂಕಟೇಶ್ವರ ಎಜ್ಯುಕೇಷನ್ ಸೊಸೈಟಿ ಮತ್ತು ಬಿವಿವಿ ಸಂಘ ಮೆಡಿಕಲ್ ಕಾಲೇಜಸ್, ಬಾಗಲಕೋಟೆ, ನವೋದಯ ಎಜ್ಯುಕೇಷನ್ ಟ್ರಸ್ಟ್, ರಾಯಚೂರು ಹಾಗೂ ಬಾಪೂಜಿ ಎಜ್ಯುಕೇಷನ್ ಸೊಸೈಟಿ ದಾವಣಗೆರೆ. ಬಾಪೂಜಿ ಎಜ್ಯುಕೇಷನ್ ಸೊಸೈಟಿಗೆ ಸಂಬಂಧಪಟ್ಟ ಹಾಗೆ ಈಗಾಗಲೇ ಸಿಂಡಿಕೇಟ್ ಕೂಡ ಒಂದು ವಿಚಾರವನ್ನು ಹೇಳಿದೆ:

``The management has not fulfilled the criteria of 2(5) of MCA regulations that the fundamental hospitals of not less than 300 beds owned and managed by the Trust with necessary infrastructure and facilities capable of developing it into teaching hospital" ಎಂದು. ಈ ರೀತಿ ವಿಚಾರವನ್ನು ಹೇಳಿದ್ದಾರೆ. ಯಾವುದೇ ರೀತಿಯಾದಂತಹ ಇಂತಹ ಒಂದು ಕಾಲೇಜುಗಳಿಗೆ ಯಾವುದೇ ಇನ್‌ಫ್ರಾಸ್ಟಕ್ಚರ್ ಇಲ್ಲದೇ ಇರುವುದರಿಂದ ಈ ಕಾಲೇಜುಗಳಿಗೆ ಒಂದು ಅಫಿಲಿಯೇಷನ್ ಕೊಡಬಾರದು ಎನ್ನುವಂತಹ ವಿಚಾರವನ್ನು ಹೇಳಿದರು. ಇಲ್ಲಿ ಕೇವಲ ಫೀಜಿಬಿಲಿಟ್ ಸರ್ಟಿಫಿಕೇಟನ್ನು ಕೊಟ್ಟಿಲ್ಲ. ರಾಜ್ಯ ಸರ್ಕಾರ ತನಗೆ ವಿಶ್ವವಿದ್ಯಾನಿಲಯಗಳ ಮೇಲೆ ಅದಕ್ಕಿರುವಂತಹ ಅಧಿಕಾರವನ್ನು ಸಿಂಡಿಕೇಟ್ ನಿರ್ಣಯದ ವಿರುದ್ಧವಾಗಿ ನಿರ್ಣಯವನ್ನು ಸರ್ಕಾರ ಕೈಗೊಂಡು ಇವತ್ತು ಎಲ್ಲಾ ಕಾಲೇಜುಗಳಿಗೆ ಅಫಿಲಿಯೇಷನ್‌ಅನ್ನು ಇಶ್ಯೂ ಮಾಡಿದೆ. ಅದರ ಜೊತೆಯಲ್ಲಿ ಆಶ್ಚರ್ಯ ಆಗುತ್ತದೆ. ಮತ್ತೊಂದು ಕಾಲೇಜನಲ್ಲಿ ಲೋಕಲ್ ಇನ್ಸ್‌ಪೆಕ್ಷನ್ ಕಮಿಟಿಯವರು ಮಲ್ಯ ಆಸ್ಪತ್ರೆಗೆ ವಿಸಿಟ್ ಮಾಡಿದ್ದಾರೆ. It was received by Sri Adikeshavalu. ಇಲ್ಲಿ ಒಂದು ಮಾತು ಹೇಳುತ್ತಾರೆ. The proposed land of 25 acres is marked for the medical colleges and hospital located in the Whitefiled. ಇದನ್ನು ಇನ್ಸ್‌ಪೆಕ್ಟ್ ಮಾಡಿ ಬಂದ ನಂತರದಲ್ಲಿ ಮಲ್ಯ ಆಸ್ಪತ್ರೆಯನ್ನು ತೋರಿಸಿದರು. ಮಲ್ಯ ಆಸ್ಪತ್ರೆಯವರು ಹೇಳುತ್ತಾರೆ. ನಾವು ಯಾವುದೇ ಕಾರಣಕ್ಕೂ ಆಸ್ಪತ್ರೆಯನ್ನು ಕೊಡುತ್ತೇವೆಂದು ಬರೆದು ಕೊಟ್ಟಿಲ್ಲ. ಮಲ್ಯ ಆಸ್ಪತ್ರೆಯನ್ನು ಟೀಚಿಂಗ್ ಆಸ್ಪತ್ರೆಯಾಗಿ ಕನ್ಸಿಡರ್ ಮಾಡಲಿಕ್ಕೆ ಆಗುವುದಿಲ್ಲ. ಏಕೆಂದರೆ ಇದಕ್ಕೆ ಹೈಟೆಕ್ ಫಸಿಲಿಟೀಸ್ ಇದೆ. ಇಲ್ಲಿ ಪೇಷಂಟ್ಸ್ ಎಲ್ಲೆಲ್ಲಿ ಇರುತ್ತಾರೋ ಅದನ್ನು ಟೀಚಿಂಗ್ ಹಾಸ್ಪಿಟಲ್ ಎಂದು ಕನ್ಸಿಡರ್ ಮಾಡಲಿಕ್ಕೆ ಆಗುವುದಿಲ್ಲ ಎನ್ನುವಂತಹ ವಿಚಾರವನ್ನು ಕೊಟ್ಟು ಇದನ್ನು ರಿಜೆಕ್ಟ್ ಮಾಡಬೇಕೆಂದು ಹೇಳಿದ್ದಾರೆ. ಇಷ್ಟೆಲ್ಲಾ ಇದ್ದರೂ ಸಹ ಈ ಹತ್ತು ಕಾಲೇಜುಗಳಿಗೆ ಅಫಿಲಿಯೇಷನ್ ಕೊಟ್ಟು ಇವತ್ತು ರಾಜ್ಯ ಸರ್ಕಾರ ಯಾವ ದಿಸೆಯಲ್ಲಿ ಹೊರಟಿದೆ? ವಿಶೇಷರಾಗಿ ಡಾ: ಸುದರ್ಶನ್ ಅವರ ವರದಿಯ ಆಧಾರದ ಮೇಲೆಯೇ, ಆ ವರದಿಯಲ್ಲಿ ಸ್ಪಷ್ಟವಾಗಿ ಹೇಳಿದೆ. ರಾಜ್ಯದಲ್ಲಿ ಹಾಫ್ ಬೇಕ್ಡ್ ಡಾಕ್ಟರ್‌ಗಳನ್ನು ನಿರ್ಮಾಣ ಮಾಡುವಂತಹ ಕೆಲಸ ಬೇಡ ಎಂದು ವರದಿಯಲ್ಲಿ ಹೇಳಿದ್ದಾರೆ. ನಾನು ದಯಮಾಡಿ ಕೈಮುಗಿದು ಕೇಳುವಂತಹದು ಇಷ್ಟೇ. ದಯಮಾಡಿ, ಒಬ್ಬ ಕ್ಲರ್ಕ್ ಏನಾದರೂ ಸಮಸ್ಯೆ ಮಾಡಿದರೆ ಒಂದು ಫೈಲಿನ ಸಮಸ್ಯೆ ಆದಾಗಬಹುದು. ಒಬ್ಬ ಹಾಫ್ ಬೇಕ್ಡ್ ಡಾಕ್ಟರ್ ಈ ರಾಜ್ಯದಲ್ಲಿ ಏನಾದರೂ ಕೂಡ ಹೊರಗಡೆ ಬಂದರೆ ಎಷ್ಟು ಜನ ಪೇಷಂಟ್ಸ್ ಅದರ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ? ಈ ದೃಷ್ಟಿಯಲ್ಲಿ ರಾಜ್ಯ ಸರ್ಕಾರ ಯಾವ ಹೆಜ್ಜೆಯನ್ನು ಇಡಲಿಕ್ಕೆ ಹೊರಟಿದ್ದಾರೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ಜಯದೇವ ಹಾಸ್ಪಿಟಲ್ ವಿಚಾರವನ್ನು

ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಜಯದೇವ ಹಾಸ್ಪಿಟಲ್ ಇಡೀ ರಾಜ್ಯದಲ್ಲಿಯೇ ಒಂದು ಪ್ರೆಸ್ಟೀಜಿಯಸ್ ಹಾಸ್ಪಿಟಲ್. ಇಡೀ ರಾಜ್ಯದಲ್ಲಿ ಒಬ್ಬ ಬಡವನಿಂದ ಹಿಡಿದು ಸಾಮಾನ್ಯ ವ್ಯಕ್ತಿ ಹೋಗಿ ಆ ಆಸ್ಪತ್ರೆಯಲ್ಲಿ ಫೆಸಿಲಿಟೀಸನ್ನು ಪಡೆಯುವಂತಹ ಒಂದು ಆಸ್ಪತ್ರೆಯಾಗಿ ಇದ್ದಂತಹ ಆಸ್ಪತ್ರೆ ಆದಾಗಿತ್ತು. ಇವತ್ತು 43 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹುಡ್ಕೋದಿಂದ ಸಾಲವನ್ನು ಪಡೆದುಕೊಂಡು ಬಂದು ಹೊಸ ಕಟ್ಟಡವನ್ನು ಕಟ್ಟಲಾಗಿದೆ. 15 ಕೋಟಿ ರೂಪಾಯಿಗಳ ಉಪಕರಣವನ್ನು ಪರ್ಚೇಸ್ ಮಾಡಿದರು. 15 ಕೋಟಿ ರೂಪಾಯಿಗಳ ಉಪಕರಣವನ್ನು ಪಡೆದಂತಹದು ಆದರೂ ಸುಮಾರು ಎರಡು ವರ್ಷಗಳ ಕಾಲದಿಂದ 15 ಕೋಟಿ ರೂಪಾಯಿಗಳ ಉಪಕರಣವನ್ನು ಬಾಕ್ಸ್‌ನಿಂದ ಒಡೆದಿಲ್ಲ. 15 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹುಡ್ಕೋದಿಂದ ಸಾಲವನ್ನು ಪಡೆದುಕೊಂಡರು. ಎರಡು ವರ್ಷಗಳ ಹಿಂದೆ 15 ಕೋಟಿ ರೂಪಾಯಿ ರಿಲೀಸ್ ಆಯಿತು. ಅದಕ್ಕೆ ಬಡ್ಡಿಯನ್ನು ಕಟ್ಟುತ್ತಿದ್ದಾರೆ. 15 ಕೋಟಿ ರೂಪಾಯಿಯ ಎಕ್ವಿಪ್‌ಮೆಂಟ್‌ನ ಬಾಕ್ಸ್‌ನ್ನು ಇವತ್ತಿನವರೆಗೆ ಒಡೆದಿಲ್ಲ. ಎರಡು ವರ್ಷಗಳ ಕಾಲದಿಂದಲೂ ಕೂಡ ಆ ಆಸ್ಪತ್ರೆಯಲ್ಲಿ 15 ಕೋಟಿ ರೂಪಾಯಿ ವೆಚ್ಚದ ಈ ಇನ್‌ಸ್ಟ್ರುಮೆಂಟ್ ಪರಿಸ್ಥಿತಿ ಏನಾಗಿದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಅಧ್ಯಕ್ಷರು. ದಯಮಾಡಿ ಒಂದು ನಿಮಿಷ ಕೇಳಬೇಕು. ಮಾನ್ಯ ಮುಖ್ಯಮಂತ್ರಿಗಳು ತಾವು ಇದಕ್ಕೆ ಛೇರ್ಮನ್ ಆಗಿದ್ದೀರಿ. ತಾವು ಬಹಳ ಒಳ್ಳೆಯ ವಿಚಾರಗಳನ್ನು ತಿಳಿದುಕೊಂಡಂಥವರು. ವಿಶೇಷವಾಗಿ ಈ ಆಸ್ಪತ್ರೆಯ ಪರಿಸ್ಥಿತಿ ಇವತ್ತೇನಾಗಿದೆ? ಈ ಒಂದು ಅಡ್ಮಿನಿಸ್ಟ್ರೇಟರ್ ಬಂದ ನಂತರದಲ್ಲಿ ಇದ್ದಂತಹ ಛಾರ್ಜಸ್ ದುಪ್ಪಟ್ಟು ಆಯಿತು. ಕಳೆದ ನಾಲ್ಕು ತಿಂಗಳ ಕಾಲದಿಂದಲೂ ಇದ್ದಂತಹ ಛಾರ್ಜಸ್ ಎಲ್ಲವನ್ನೂ ಸಹ ಒಂದಕ್ಕೆ 100ರಷ್ಟು ಏರಿಕೆಯನ್ನು ಮಾಡಿದ್ದಾರೆ. ಇದಕ್ಕೆ ಅಡ್ಮಿನಿಸ್ಟ್ರೇಟರ್ ಆದಮೇಲೆ ಬಹಳ ನಿರೀಕ್ಷೆ ಮಾಡಿದ್ದೆವು. ಆಸ್ಪತ್ರೆಯಲ್ಲಿ ಏನು ಗೊಂದಲಗಳು ಇದ್ದವು ಅವೆಲ್ಲ ನಿವಾರಣೆಯಾಗಬಹುದೆಂದು ಭಾವಿಸಿದ್ದೆವು. ಅಡ್ಮಿನಿಸ್ಟ್ರೇಟರ್ ಬಂದ ನಂತರ ಕೆಲವು ಬೇಕಾಗಿರುವಂತಹ ಕನ್ಸಲ್ಟೇಟೀವ್ ಕಮಿಟಿಯನ್ನು ಮಾಡಿದರು. ಅದರಲ್ಲಿ ಮಲ್ಯ ಅವರು ಮೋಡಿ ಅವರು, ವಿಶೇಷವಾಗಿ ನಮ್ಮ ಹಿರಿಯ ಸದಸ್ಯರಾದಂತಹ ಶ್ರೀ ಮುದ್ದಹನುಮೇಗೌಡರು ಕೂಡ ಆ ಒಂದು ಕಮಿಟಿಯ ಸದಸ್ಯರಾಗಿದ್ದಾರೆ. ಅದರ ಜೊತೆಯಲ್ಲಿ ಡಾ: ಚೆನ್ನಯ್ಯನವರು, ಅದಲ್ಲದೇ ಎಚ್.ಎಸ್. ಪುಟ್ಟಸ್ವಾಮಿ ಗೌಡರು, ನಿವೃತ್ತ ಐ.ಎ.ಎಸ್ ಆಫೀಸರ್ ಸದಸ್ಯರುಗಳು ಇವರೆಲ್ಲಾ ಬಂದ ಮೇಲೆ ಬಹಳ ಬದಲಾವಣೆಯ ನಿರೀಕ್ಷಣೆಯನ್ನು ನಾವು ಮಾಡಿದ್ದೆವು. ಆದರೆ ಆಸ್ಪತ್ರೆಯಲ್ಲಿ ಆಗಿರುವಂತಹ ಪರಿಸ್ಥಿತಿ ಏನಾಗಿದೆ ಇವತ್ತು? ದಿನೇ ದಿನೇ ಅಲ್ಲಿಗೆ ಬರುವಂತಹ ಪೇಷಂಟ್ಸ್‌ನ್ನು ಸುಮಾರು 25-30 ಪರ್ಸೆಂಟ್‌ನಷ್ಟು ಪೇಷೆಂಟ್ಸ್‌ನ್ನು ಬೇರೆ ಆಸ್ಪತ್ರೆಗೆ ರೆಫರ್ ಮಾಡುತ್ತಾ ಇದ್ದಾರೆ. ಇವತ್ತು ಜಯದೇವ ಆಸ್ಪತ್ರೆ ರೆಫರಿಂಗ್ ಆಸ್ಪತ್ರೆ ಆಗಿದೆ. ಅದರ ಒಂದು ಪರಿಸ್ಥಿತಿಯಲ್ಲಿ ಕೇವಲ ಒಬ್ಬ ನಿರ್ದೇಶಕನನ್ನು

ನೇಮಕ ಮಾಡುವುದು ಊರ್ಜಿತವೋ ಅಲ್ಲವೋ? ಅಲ್ಲಿರುವಂತಹ ನಿರ್ದೇಶಕನನ್ನು ಉಳಿಸಬೇಕೋ ಬೇಡವೋ? ಇದು ಅಡ್ಮಿನಿಸ್ಟ್ರೇಷನ್‌ಗೆ ಬಿಟ್ಟಂತಹ ವಿಚಾರ. ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನ್ಯಾಯಾಲಯದ ತೀರ್ಪನ್ನು ತೆಗೆದುಕೊಳ್ಳಬೇಕೋ ಬೇಡವೋ ಎಂದು ನಾನು ಹೇಳುವುದಿಲ್ಲ. ಆದರೆ ಬರುವಂತಹ ಪೇಷೆಂಟ್ಸ್ ಯಾರು ಇದ್ದಾರೆ, ಅವರನ್ನು ಬೇರೆ ಆಸ್ಪತ್ರೆಗೆ ಕಳುಹಿಸುವಂತಹದು. ಇವತ್ತು ವಕಾರ್ಡ್ ಆಸ್ಪತ್ರೆಯಲ್ಲಿಂತಕ್ಕಂಥ ಕ್ಲೀನಿಕಲ್ ಛಾರ್ಜಸ್ ಏನು ಇದೆ ಇದಕ್ಕಿಂತ ಜಯದೇವದಲ್ಲಿ ಇವತ್ತು ಛಾರ್ಜಸ್ ಜಾಸ್ತಿ ಮಾಡಿದ್ದಾರೆ. ಕಳೆದ ಹತ್ತು ದಿವಸಗಳ ಕಾಲದಿಂದ ಅದರ ಪರಿಸ್ಥಿತಿ ಹೇಳುವುದಕ್ಕೆ ಆಗುತ್ತಿಲ್ಲ. ಮೊನ್ನೆಯ ದಿವಸ ಜಯದೇವ ಆಸ್ಪತ್ರೆಯ ಬೋರ್ಡ್ ಮೀಟಿಂಗ್ ಆಯಿತು. ಸನ್ಮಾನ್ಯ ಅಧ್ಯಕ್ಷರಾದಂತಹ ಮಾನ್ಯ ಮುಖ್ಯಮಂತ್ರಿಗಳು ಹೋಗಬೇಕಾಗಿತ್ತು. ಕಾರಣಾಂತರದಿಂದ ಹೋಗಲಿಕ್ಕೆ ಆಗಲಿಲ್ಲ. ಒಂದು ಸಂತೋಷದ ವಿಚಾರ ಎಂದರೆ ಅವರು ಹೋಗಲಿಕ್ಕೆ ಆಗಲಿಲ್ಲ ಎಂದು ಸಭೆಯನ್ನು ಮುಂದೂಡಲಿಲ್ಲ. ಇದುವರೆಗೆ ಮುಖ್ಯಮಂತ್ರಿಗಳಾದಂತವರು ಯಾರೂ ಸಭೆಗೆ ಹೋಗದೇ ಇದ್ದರೆ ಸಭೆಯನ್ನೇ ಮುಂದೂಡುತ್ತಿದ್ದರು, ಆದರೆ ಅದರಲ್ಲಿ ಉಪಾಧ್ಯಕ್ಷರಾದಂತಹ ನಮ್ಮ ಮಾನ್ಯ ಆರೋಗ್ಯ ಸಚಿವರು ಸಭೆಯನ್ನು ತೆಗೆದುಕೊಂಡಿದ್ದರು. ಇದರ ಬಗ್ಗೆ ಸಮಗ್ರವಾದಂತಹ ಚರ್ಚೆಯನ್ನೂ ಮಾಡಿದ್ದಾರೆ. ಆದರೆ ಒಂದು ವಿಚಾರ ಇದೆ. ಅಭಿವೃದ್ಧಿಯನ್ನು ಮತ್ತು ಆಸ್ಪತ್ರೆಯ ಪ್ರಾರಂಭವನ್ನು ತಕ್ಷಣದಲ್ಲಿಯೇ ಮಾಡಬೇಕು ಎನ್ನುವುದರ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೇನೋ ಎಂದು ವಿಚಾರ ಮಾಡಿದರೆ ಇವತ್ತು ಆ ಆಸ್ಪತ್ರೆಯನ್ನು ಖಾಸಗೀಕರಣ ಮಾಡಿ ಯಾರಿಗೆ ಕೊಡಬಹುದು ಎನ್ನುವ ಬಗ್ಗೆ ಚಿಂತನೆ ನಡೆದಿದೆ. ಅಂದರೆ 43 ಕೋಟಿ ರೂಪಾಯಿಗಳ ಹುಡ್ಕೋ ಸಾಲವನ್ನು ತೆಗೆದುಕೊಂಡು ಬಂದು ಬಡವರಿಗೋಸ್ಕರವಾಗಿ ಇದ್ದಂತಹ ಆಸ್ಪತ್ರೆ. ಒಂದು ಕಡೆ ಸಾಯಿಬಾಬ ಆಸ್ಪತ್ರೆಯಲ್ಲಿ 18 ಸಾವಿರ ಜನಕ್ಕೆ ಅಪರೇಷನ್ ಮಾಡಿ ಟ್ರೀಟ್‌ಮೆಂಟ್ ಕೊಟ್ಟಿರುವಂತಹದು ಒಂದು ಆದರೆ ಇಂತಹ ಪ್ರೆಸ್ಟೀಜಿಯಸ್ ಆಸ್ಪತ್ರೆಯನ್ನು ಕೇವಲ ಒಬ್ಬ ನಿರ್ದೇಶಕನ್ನು ನೇಮಕ ಮಾಡಬೇಕೋ ಬೇಡವೋ ಎನ್ನುವಂತಹ ವಿಚಾರವನ್ನು ಇಟ್ಟುಕೊಂಡು ಇವತ್ತು ಖಾಸಗೀಕರಣ ಮಾಡಿ ಬೇರೆ ಸಂಸ್ಥೆಯವರಿಗೆ ವಹಿಸಬೇಕು ಎನ್ನುವಂತಹ ವಿಚಾರ ಇವತ್ತು ಚರ್ಚೆ ಆಗಿದೆ. ದಯಮಾಡಿ ಈ ವಿಚಾರದಲ್ಲಿ ವಿಶೇಷವಾಗಿ ಆರೋಗ್ಯವನ್ನು ರಾಜ್ಯದಲ್ಲಿ ನೀಡುವಂತಹ ದೃಷ್ಟಿಯಲ್ಲಿ, ವಿಶೇಷವಾಗಿ ಹಾರ್ಟ್ ಹಾಸ್ಪಿಟಲ್ ಆಗಿರುವಂತಹ ಇದು, ಬಡವರ ಸೇವೆಯನ್ನು ಮಾಡುವಂತಹ ಈ ಕೇಂದ್ರವನ್ನು ಪ್ರೈವಟೈಸ್ ಮಾಡಿ ಮತ್ತೆ ಅದನ್ನು ಮಾರಾಟದ ವಸ್ತುವನ್ನಾಗಿ, ಕಮರ್ಷಿಯಲ್ ಸೆಂಟರ್ ಆಗಿ ಮಾಡುವಂಥಾದ್ದು ಆಗಬಾರದು ಎನ್ನುವಂತಹ ವಿಚಾರವನ್ನು ಹೇಳುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

+ಕೆ.ಬಿ. ಮಲ್ಲಿಕಾರ್ಜುನ (ಬೀರೂರು) :— ಮಾನ್ಯ ಅಧ್ಯಕ್ಷರೇ, ಪ್ರಸಕ್ತ ಸಾಲಿನ ಆಯವ್ಯಯದ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಪಾಲ್ಗೊಳ್ಳಲು ನನಗೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ಮೊದಲನೆಯದಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತಾ, ಕಳೆದ ಅಧಿವೇಶನದ ಸಂದರ್ಭದಲ್ಲಿ ಈ ವಿಷಯದ ಕುರಿತು ಸೂಕ್ಷ್ಮವಾಗಿ ಪ್ರಸ್ತಾಪಿಸಿದ್ದೆ. 1990ನೇ ಇಸವಿಯಲ್ಲಿ ಈಗಿನ ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸ್ಥಾನದಲ್ಲಿ ಕುಳಿತಿದ್ದರು. ನಾನು ಆಗ ವಿಧಾನ ಪರಿಷತ್ತಿನ ಸದಸ್ಯನಾಗಿದ್ದೆ. ಅಧಿವೇಶನದ ಕಾರ್ಯಕಲಾಪಗಳು ಬಹಳ ಅಚುಕಟ್ಟಾಗಿ ಜರುಗುತ್ತಿರುವುದನ್ನು ನೋಡುತ್ತಿದ್ದೆ. ಆಯವ್ಯಯದ ಮೇಲೆ ಮಾತನಾಡುವ ಮಾನ್ಯ ಸದಸ್ಯರುಗಳಿಗೆ ಸಮಯದ ಅವಧಿಯನ್ನು ನಿಗಧಿಪಡಿಸಿ, ಒಂದೊಂದು ದಿವಸ ಒಂದೊಂದು ಇಲಾಖಾ ಬೇಡಿಕೆ ಮೇಲೆ ಚರ್ಚೆ ಮುಗಿಸಿ ಮರು ದಿವಸ ಮತ್ತೊಂದು ಬೇರೆ ಇಲಾಖೆ ಕಾರ್ಯ ಚಟುವಟಿಕೆ ಮೇಲೆ ಚರ್ಚಿಸುವ ಪರಿಪಾಠವಿತ್ತು. ಆದಾದ ನಂತರ, ಅಲ್ಲಿಂದ ಇಲ್ಲಿಯವರೆಗೆ ಆ ರೀತಿಯಾದ ಚರ್ಚೆಗಳು ಆಯವಯ್ಯದ ಮೇಲೆ ಜರುಗುತ್ತಿಲ್ಲ. ಸದನದಲ್ಲಿ ಮೊನ್ನೆ ಬುಧವಾರ ಜರುಗಿದ ಘಟನೆ ಕುರಿತು ಹೇಳುವುದಾದರೆ, ಸಂಸದೀಯ ವ್ಯವಹಾರಗಳ ಪದ್ಧತಿಯಲ್ಲಿ ಈ ರೀತಿಯಾದ ಅಧಿವೇಶನದ ಕಾರ್ಯಕಲಾಪಗಳನ್ನು ನಡೆಸುವುದು ತಪ್ಪು. ಈ ಕುರಿತಂತೆ ಒಂದು ತೀರ್ಮಾನವನ್ನು ಅಧ್ಯಕ್ಷರಾದ ತಾವು ಹಾಗೂ ಸರ್ಕಾರ ತೆಗೆದುಕೊಳ್ಳಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ಪಾರ್ಲಿಮೆಂಟಿನಲ್ಲಿ ಯಾವ ದಿವಸ ಆಯವ್ಯಯ ಅಧಿವೇಶನ ಕರೆಯಬೇಕು, ಮಳೆಗಾಲದ ಅಧಿವೇಶನ ಕರೆಯಬೇಕೆಂಬುದಕ್ಕೆ ಸಮಯ ನಿಗದಿಪಡಿಸಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಸಹ ಅಧಿವೇಶನ ಕರೆಯುವ ದಿವಸ ನಿಗದಿಪಡಿಸುವುದು ಸೂಕ್ತ. ಇಲ್ಲದೆ ಹೋದರೆ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡುವುದಕ್ಕೆ ಮಾರ್ಚ್ ತಿಂಗಳಿನ 15, 16, 17ನೇ ತಾರೀಖುಗಳಂದು ಅಧಿವೇಶನ ಕರೆದು, ಅದೇ ತಿಂಗಳ 26, 27ನೇ ತಾರೀಖಿನಂದು ಆಯವ್ಯಯವನ್ನು ಮಂಡಿಸುವುದು, ಇದಾದ ಮೂರು ದಿವಸಗಳಲ್ಲಿ ಅದನ್ನು ಅಂಗೀಕರಿಸಿಕೊಡಬೇಕೆಂದು ಕೇಳಿಕೊಳ್ಳುವುದು ಹಾಗೂ ಜೂನ್-ಜುಲೈ ತಿಂಗಳ 18, 19, 20ನೇ ತಾರೀಖಿನ ಕೊನೆಯ ವಾರದಲ್ಲಿ 'ಸಂವಿಧಾನಾತ್ಮಕ ಅನಿವಾರ್ಯತೆ' (ಕಾನ್ಸ್ಟಿಟ್ಯೂಷನಲ್ ಆಬ್ಲಿಗೇಷನ್) ಇದೆಯೆಂದು, ಆದಕಾರಣ ಅಯವ್ಯಯದ ಬೇಡಿಕೆಗಳಿಗೆ ಒಪ್ಪಿಗೆ ನೀಡಬೇಕೆಂದು ಸಂಸದೀಯ ವ್ಯವಹಾರಗಳ ಸಚಿವರು ಕೇಳುವುದು ಸಾಧುವಲ್ಲವೆಂಬುದು ನನ್ನ ಭಾವನೆ. ಅದಕ್ಕೋಸ್ಕರ, ರಾಜ್ಯಪಾಲರ ಭಾಷಣ ಯಾವತ್ತು ಜರುಗಬೇಕು? ಯಾವತ್ತು ಆಯವ್ಯಯ ಮಂಡಿಸಬೇಕು? ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಸಲ್ಲಿಸಲು ಯಾವತ್ತು ಚರ್ಚೆಗೆ ಅನುವು ಮಾಡಿಕೊಡಬೇಕು? ಮಳೆಗಾಲದ ಅಧಿವೇಶನ ಯಾವತ್ತು ಕರೆಯಬೇಕು, ಮುಂತಾದುವಕ್ಕೆ ನಿಗದಿತವಾದ ದಿನಾಂಕಗಳನ್ನು ಗೊತ್ತುಪಡಿಸುವುದು ಸೂಕ್ತ. ಈ ನಿಟ್ಟಿನಲ್ಲಿ ಸಂಬಂಧಿತ ನಿಯಮಾವಳಿಗೆ ತಿದ್ದುಪಡಿ ತರಬೇಕೆಂಬುದು ನನ್ನ ಮೊದಲ ಬೇಡಿಕೆಯಾಗಿದೆ.

ಎರಡನೆಯಾದಾಗಿ, ವಿಷಯ ಸಮಿತಿಗಳನ್ನು ರಚಿಸಲಾಗಿದ್ದು, ಸಮಿತಿಗಳ ಸಭೆಯಲ್ಲಿ ಹಲವಾರು ವಿಷಯಗಳ ಕುರಿತಂತೆ ಬಹಳಷ್ಟು ಚರ್ಚೆ ನಡೆಸಲಾಗಿ ಶಿಫಾರಸ್ಸುಗಳನ್ನೊಳಗೊಂಡ ವರದಿಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ. ಇಂದು ಆಯವ್ಯಯ ಬೇಡಿಕೆಗಳ ಮೇಲಿನ ಚರ್ಚೆಯನ್ನು ಮುಕ್ತಾಯಗೊಳಿಸುವ ಕೊನೆಯ ದಿವಸವಾಗಿದ್ದು ಸೋಮವಾರ ದಿವಸ ಮಾನ್ಯ ಮುಖ್ಯಮಂತ್ರಿಗಳು, ಸಂಬಂಧಪಟ್ಟ ಮಂತ್ರಿಗಳು ಉತ್ತರಿಸಬಹುದೆಂದು ಭಾವಿಸಿದ್ದೇನೆ. ಆದುದರಿಂದ, ವಿಷಯ ಸಮಿತಿಗಳು ಸರ್ಕಾರಕ್ಕೆ ಸಲ್ಲಿಸಿರುವ ವರದಿಗಳಲ್ಲಿ ಸರ್ಕಾರ ಯಾವ್ಯಾವ ಶಿಫಾರಸ್ಸುಗಳನ್ನು ಒಪ್ಪಿದೆ? ಯಾವುದನ್ನು ಒಪ್ಪಿಲ್ಲ ಎಂಬುದು ನಮಗೆ ಇನ್ನೂ ಗೊತ್ತಾಗಿಲ್ಲ. ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ವಿಷಯ ಸಮಿತಿಗಳು ಹಲವಾರು ಬಾರಿ ಸಭೆಗಳನ್ನು ನಡೆಸಿ ಶಿಫಾರಸ್ಸುಗಳನ್ನೊಳಗೊಂಡಂತೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರೂ ಸಹ ಶಿಫಾರಸ್ಸುಗಳಿಗೆ ಯಾವುದೇ ರೀತಿಯ ಬೆಲೆ ಬಾರದಿರುವ ವಾತಾವರಣವನ್ನು ನಾನು ಕಾಣುತ್ತಿದ್ದೇನೆ. ಹಾಗಾಗಿ, ನನಗೆ ಬೇಕಾಗಿರುವುದೇನೆಂದರೆ, ವಿಷಯ ಸಮಿತಿಗಳ ವರದಿಗಳನ್ನು ಸರ್ಕಾರ ಒಪ್ಪಿದೆಯೇ? ಒಪ್ಪದಿದ್ದರೆ ಏತಕ್ಕೋಸ್ಕರ ಒಪ್ಪುವುದಕ್ಕಾಗಿಲ್ಲ ಎಂಬುದನ್ನು ಸದನದಲ್ಲಿ ತಿಳಿಸಬೇಕಾಗುತ್ತದೆ. ಏಕೆಂದರೆ, ಇದು ನಮ್ಮ ಸದನದ ಗೌರವದ ಪ್ರಶ್ನೆಯಾಗಿದ್ದು, ಸದನವೇ ರಚಿಸಿರುವ ವಿಷಯ ಸಮಿತಿಗಳ ವರದಿಗಳ ಶಿಫಾರಸ್ಸುಗಳನ್ನು ಸರ್ಕಾರ ಒಪ್ಪದಿದ್ದರೆ ವಿಷಯ ಸಮಿತಿಗಳನ್ನು ರಚಿಸಿರುವುದಕ್ಕೆ ಏನಾದರೂ ಅರ್ಥ ಇದೆಯೇ? ಎಂದು ಕೇಳುತ್ತಿದ್ದೇನೆ. ಈ ಕುರಿತು ಸರ್ಕಾರದಿಂದ ನಾನು ಉತ್ತರ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ಕೊಡುವುದಕ್ಕಿಂತ ಮುಂಚೆ ವರದಿಗಳ ಶಿಫಾರಸ್ಸುಗಳ ಬಗ್ಗೆ ಉತ್ತರ ಕೊಡಬೇಕೆಂದು ಅಪೇಕ್ಷಿಸುತ್ತೇನೆ. ಅದೇ ರೀತಿ ಪಾರ್ಲಿಮೆಂಟಿನಲ್ಲಿರುವ ಒಂದು ವ್ಯವಸ್ಥೆ ಕುರಿತು ಗಮನಕ್ಕೆ ತರುವುದಾದರೆ, ಸದನದಲ್ಲಿ ಯಾವುದೇ ಒಂದು ವಿಷಯವನ್ನು ಮಂಡಿಸಿದ ಬಳಿಕ ಅದರ ಬಗ್ಗೆ ಚರ್ಚೆ ನಡೆದು ಸಂಬಂಧಪಟ್ಟ ಮಂತ್ರಿಗಳು ಉತ್ತರ ಹೇಳಿದ ನಂತರ ಮತಕ್ಕೆ ಹಾಕಿ ಸದನದ ಒಪ್ಪಿಗೆ ಪಡೆದು ಮುಕ್ತಾಯವಾಗಬೇಕಾಗುತ್ತದೆ. ಆ ಪದ್ಧತಿಯನ್ನು ಇಲ್ಲಿಯೂ ಸಹ ಜಾರಿಗೆ ತರಬೇಕೆಂಬುದು ಬೇಡಿಕೆಯಾಗಿದೆ. ಈ ಬೇಡಿಕೆಯನ್ನು ತಮಗೆ ನೇರವಾಗಿ ಮಂಡಿಸುತ್ತಿದ್ದೇನೆ. ಉದಾಹರಣೆಗೆ, 2-3 ಇಲಾಖೆಗಳ ಬೇಡಿಕೆಗಳನ್ನು ಮಂಡಿಸಿದಾಗ ಅವೊತ್ತೇ ಆ ಕುರಿತು ಚರ್ಚೆಯಾಗಿ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಟ್ಟು ಮತಕ್ಕೆ ಹಾಕಿ ಬೇಡಿಕೆಯನ್ನು ಅಂಗೀಕರಿಸಿಕೊಳ್ಳುವಂತಾಗಬೇಕು. ಇದಿಷ್ಟು ನನ್ನ ಬೇಡಿಕೆ.

ಇನ್ನು ಬೇಡಿಕೆಗಳ ಮೇಲಿನ ಚರ್ಚೆಯನ್ನು ಪ್ರಾರಂಭಿಸುವುದಾದರೆ, ಮೊದಲಿಗೆ ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಪ್ರಸ್ತಾಪಿಸಬಯಸುತ್ತೇನೆ. ಕಳೆದ ಹತ್ತು ವರ್ಷಗಳಿಂದಲೂ ಕೃಷಿ ಸಚಿವರ ಗಮನಕ್ಕೆ ತರುತ್ತಿರುವುದೇನೆಂದರೆ, ನಮ್ಮ ಜಿಲ್ಲೆಯಲ್ಲಿ ಕಂಬಳಿ ಹುಳುಗಳ ಬಾಧೆ ವಿಪರೀತವಾಗಿದ್ದು 12-13 ವರ್ಷಗಳಿಂದಲೂ

ಇದನ್ನು ನಿವಾರಿಸಲು ಯಾವುದೇ ರೀತಿಯಾದ ಪರಿಹಾರ ಕಂಡುಹಿಡಿದಿಲ್ಲ, ಪ್ರತಿ ವರ್ಷವೂ ಒಂದಲ್ಲ ಒಂದು ರೀತಿಯ ಪರಿಹಾರವನ್ನು ತೋರಿಸುತ್ತಿದ್ದೇವೆ. ಜಿಲ್ಲಾ ಪರಿಷತ್‌ಗೆ ಆದೇಶ ಕೊಡುತ್ತೇವೆ. ಪೆಟ್ರೋಮ್ಯಾಕ್ಸ್ ಲೈಟ್ ಇಟ್ಟರೇ ದರ ಬೆಳಕಿಗೆ ಕಂಬಳಿ ಹುಳು ಚಿಟ್ಟೆಗಳೆಲ್ಲವೂ ಆಕರ್ಷಿತಗೊಂಡು ಸತ್ತುಹೋಗುತ್ತದೆಂದು ಹೇಳಿದಾಗ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಪೆಟ್ರೋಮ್ಯಾಕ್ಸ್ ಲೈಟ್‌ಗಳನ್ನು ಖರೀದಿಸಿ ಕೊಟ್ಟರೂ ಪ್ರಯೋಜನವಾಗಲಿಲ್ಲ. ಅದೇ ರೀತಿ ಮರಗಳ ಸುತ್ತಲೂ ಕಂದಕ ತೋಡಿಸಬೇಕೆಂದು ಹೇಳಿದಾಗ ಅದರಂತೆ ಮಾಡಿದರೂ ಸಮಸ್ಯೆ ಬಗೆಹರಿದಿಲ್ಲ. ಕಂಬಳಿ ಹುಳುಗಳ ಬಾಧೆಯಿಂದಾಗಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕು ತರೀಕೆರೆ ತಾಲ್ಲೂಕು ಹಾಗೂ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿನ ಲಕ್ಷಾಂತರ ಎಕರೆಗಳಲ್ಲಿ ಎಣ್ಣೆಕಾಳುಗಳನ್ನು ಬೆಳೆಯಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಪರಿಹಾರ ಕಂಡುಹಿಡಿಯಬೇಕಿರುವ ಸಂದಂರ್ಭದಲ್ಲಿ ನಿನ್ನೆ ಸಮ್ಮೇಳನ ಸಭಾಂಗಣದಲ್ಲಿ ವಿಶ್ವ ವ್ಯಾಪಾರ ಸಂಘಟನೆ ಕುರಿತಂತೆ ಜರುಗಿದ ಸಭೆಯಲ್ಲಿ ನಾನು ಸಹ ಪಾಲ್ಗೊಂಡು 'ವಿಶ್ವ ವ್ಯಾಪಾರ ಸಂಘಟನೆಯಿಂದ ಹೊರಬರುವುದಕ್ಕಿಂತ ಅದರ ಒಳಗಿರತಕ್ಕಂಥಾದ್ದು ಬಹಳಷ್ಟು ಒಳ್ಳೆಯದು' ಎಂದು ಭಾರತ ಸರ್ಕಾರದ ಕೃಷಿ ಕಾರ್ಯಪಡೆಯ ಅಧ್ಯಕ್ಷರಾದ ಶರದ್ ಜೋಶಿಯವರಿಗೆ ಹೇಳಿದೆ. ನಾನು ಸರ್ಕಾರಕ್ಕೆ ಕೇಳಿಕೊಳುವುದೇನೆಂದರೆ, ಎಣ್ಣೆಯನ್ನಾಗಲಿ, ಎಣ್ಣೆಕಾಳುಗಳನ್ನಾಗಲಿ ಆಮದು ಮಾಡಿಕೊಳ್ಳುವುದಕ್ಕೆ ವಿಶ್ವ ವ್ಯಾಪಾರ ಸಂಘಟನೆ ಒಪ್ಪಿಕೊಳ್ಳಬೇಕು ಮತ್ತು ಅದೇ ರೀತಿ ರೋಗವನ್ನು ತಡೆಗಟ್ಟುವ ತಂತ್ರಜ್ಞಾನವನ್ನೂ ಸಹ ಆಮದು ಮಾಡಿಕೊಳ್ಳುವುದಕ್ಕೆ ಏಕೆ ಪ್ರಯತ್ನಿಸುತ್ತಿಲ್ಲ? ಇನ್ನು ನುಸಿರೋಗ ಹಾಗೂ ಕಪ್ಪುತಲೆ ಹುಳು ಬಾಧೆ ನಿಯಂತ್ರಣದ ಕುರಿತು ಹೇಳುವುದಾದರೆ, ಚಿಕ್ಕಮಗಳೂರು ಜಿಲ್ಲೆಯೊಂದರಲ್ಲೇ ಈ ರೋಗಗಳ ನಿಯಂತ್ರಣಕ್ಕಾಗಿ 1998-99ನೇ ಸಾಲಿನಲ್ಲಿ ಸುಮಾರು 19 ಲಕ್ಷ 12 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದರೆ 1999-2000ನೇ ಸಾಲಿನಲ್ಲಿ 15 ಲಕ್ಷ 88 ಸಾವಿರ ರೂಪಾಯಿಗಳು ಹಾಗೂ ಕಳೆದ ವರ್ಷ 2000-01ನೇ ಸಾಲಿನಲ್ಲಿ 21 ಲಕ್ಷ 45 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ರೀತಿ ಸಾಕಷ್ಟು ಪ್ರಮಾಣದಲ್ಲಿ ಹಣವನ್ನು ಹಿಂದಿನ ಸಾಲಿನ ವರ್ಷಗಳಲ್ಲಿ ಖರ್ಚು ಮಾಡಿದ್ದರೂ ಯಾವುದೇ ರೀತಿಯ ಫಲ ಸಿಕ್ಕಿರುವುದಿಲ್ಲ. ಬದಲಿಗೆ ರೋಗ ನಿಯಂತ್ರಣಕ್ಕೆ ಬಾರದೇ ಇನ್ನೂ ಜಾಸ್ತಿಯಾಗುತ್ತಿದೆಯೇ ವಿನಾ ಕಡಿಮೆಯಾಗುತ್ತಿಲ್ಲ. ಪ್ರಸಕ್ತ ವರ್ಷದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ನಾವೆಲ್ಲರೂ ಭೇಟೀಯಾಗಿ ಕೇಳಿದಂಥ ಸಂದರ್ಭದಲ್ಲಿ ಏಪ್ರಿಲ್ ತಿಂಗಳಿನಲ್ಲಿ ಸುಮಾರು 63 ಲಕ್ಷ 66 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. 2000-01ನೇ ಸಾಲಿನಲ್ಲಿ 21 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದಾಗ 2 ಲಕ್ಷ 20 ಸಾವಿರ ರೋಗ ತಗುಲಿದ ಮರಗಳಿಗೆ ಚಿಕಿತ್ಸೆ ಕೊಡಿಸಿ ಸುಮಾರು 2,369 ಲೀಟರ್‌ಗಳಷ್ಟು ನೋವಾಕ್ರೋನ್ ಔಷಧಿಯನ್ನೂ ಹಾಗೂ 1,160 ಲೀಟರ್‌ಗಳಷ್ಟು ಫೈಸೊಫಾಸ್ ಔಷಧಿಯನ್ನು

ಸಿಂಪಡಿಸಲಾಗಿತ್ತು. ಇದರಿಂದ ಗಿಡವನ್ನು ವಿಷ ಮಾಡುತ್ತಿದ್ದೇವೆಯೇ ಹೊರತು ಬೇರೆ ಯಾವುದೇ ರೀತಿಯ ಪರಿಹಾರ ಕಂಡು ಹಿಡಿಯುತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ತೋಟಗಾರಿಕೆ ಸಚಿವರು ರೈತರ ಕಷ್ಟವರಿತು 2000-01ನೇ ಸಾಲಿನಲ್ಲಿ 63 ಲಕ್ಷ 66 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಈ ಕುರಿತು ಸರ್ಕಾರದ ಆದೇಶ ಏನಿದೆಯೆಂದರೆ 'ಆಗ್ರೋ ಕೆಮಿಕಲ್ ಇಂಡಸ್ಟ್ರಿ' ಯಿಂದ ಔಷಧಿ ಕೊಂಡು ಮತ್ತು ಈ ರೀತಿ ಖರೀದಿಸಿದ ಔಷಧಿಯನ್ನು ರೋಗಕ್ಕೆ ತುತ್ತಾಗಿರುವ ಗಿಡ-ಮರಗಳಿಗೆ ಸಿಂಪಡಿಸಬೇಕೆಂಬುದು. ಆದಕಾರಣ, ಪುನ: ಅದೇ ಔಷಧಿ ಸಿಂಪಡಿಸಿದರೆ ತೆಂಗಿನ ಮರಗಳಿಗೆ ತಗುಲಿರುವ ರೋಗ ನಿವಾರಣೆಯಾಗುತ್ತದೆಯೇ? ಇತ್ತೀಚಿಗೆ ಜಿಲ್ಲಾ ಪರಿಷತ್ತಿನಲ್ಲಿ ಒಂದು ತೀರ್ಮಾನ ಕೈಗೊಳ್ಳಲಾಯಿತು. ಅದೇನೆಂದರೆ ಕರ್ನಾಟಕ ಆಗ್ರೋ ಕೆಮಿಕಲ್ಸ್ ಇಂಡಸ್ಟ್ರೀಸ್ ಲಿಮಿಟೆಡ್, ಬೆಂಗಳೂರು, ಇವರಿಂದ ಒಂದು ಪ್ರಯೋಗ ನಡೆಸಲಾಗಿ ನಮ್ಮ ಜಿಲ್ಲೆಯಲ್ಲಿರುವ ಸುಮಾರು ಆರು ಸಾವಿರದಷ್ಟು ತೆಂಗಿನ ಸಸಿಗಳಿಗೆ, ಒಂದು ಸಸಿಗೆ ಹತ್ತು ರೂಪಾಯಿ ದರದಲ್ಲಿ ಔಷಧಿ ಕೊಟ್ಟಿರುವುದಲ್ಲದೆ ಮಲ್ಟಿಪ್ಲೆಕ್ಸ್ ಗೊಬ್ಬರವನ್ನೂ ಸಹ ಹಾಕಿದ್ದು, ಇದಾದ ಹದಿನೈದು ದಿವಸಗಳ ನಂತರ ಕೃಷಿ ವಿಶ್ವವಿದ್ಯಾನಿಲಯದ ಪ್ರೊಫೆಸರ್‌ರಿಂದ ಗಿಡಗಳನ್ನು ಪರೀಕ್ಷೆಗೊಳಪಡಿಸಿದಾಗ ಕಪ್ಪು ತಲೆ ಹುಳುವಿನ ಬಾಧೆ ನೂರಕ್ಕೆ ನೂರು ಪರ್ಸೆಂಟ್ ನಿವಾರಣೆಯಾಗಿದ್ದರೆ ನುಸಿರೋಗ ಶೇಕಡ 58 ರಷ್ಟು ನಿವಾರಣೆಯಾಗಿದೆಯೆಂದು ತಿಳಿಸಿದರು. ಆದುದರಿಂದ, ಸರ್ಕಾರ ಇದಕ್ಕೆ ಒಪ್ಪಿಗೆ ಕೊಟ್ಟಲ್ಲಿ ನಮ್ಮ ಜಿಲ್ಲೆಯಲ್ಲಿರುವ ರೋಗಕ್ಕೆ ತುತ್ತಾಗಿರುವ ಆರು ಲಕ್ಷ ತೆಂಗಿನ ಮರಗಳಿಗೆ, ಮರವೊಂದಕ್ಕೆ ಹತ್ತು ರೂಪಾಯಿ ದರದಲ್ಲಿ ಔಷಧಿ ನೀಡಿದಲ್ಲಿ ಸಮಸ್ಯೆ ಬಗೆಹರಿಯುವುದರಿಂದ ಸರ್ಕಾರ ಈ ಕುರಿತಾದ ಆಜ್ಞೆ ಹೊರಡಿಸಬೇಕೆಂದು ನಿರ್ಣಯ ಕೈಗೊಳ್ಳಲಾಗಿದೆ. ಆದುದರಿಂದ, ಈ ಸಂದರ್ಭದಲ್ಲಿ ನಾನು ಪುನ: ಹೇಳುತ್ತೇನೆ. ನಾವು ಲಕ್ಷಾಂತರ ಸಂಖ್ಯೆಯಲ್ಲಿ ತೆಂಗಿನ ಕಾಯಿಗಳನ್ನು ಆಮದು ಮಾಡಿಕೊಂಡಿದ್ದು, ಅದಕ್ಕೆ ಆಮದು ಸುಂಕವನ್ನು ವಿಧಿಸಿರಬಹುದು. ಆದರೆ, ಈ ರೀತಿ ಆಮದು ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲಿ ನಾವೇಕೆ ಅವರಿಂದ ಈ ಕುರಿತಾದ ತಂತ್ರಜ್ಞಾನವನ್ನು ಆಮದು ಮಾಡುಕೊಳ್ಳುತ್ತಿಲ್ಲ? ಡಬ್ಲ್ಯೂಟಿಓವನ್ನು ವಿರೋಧ ಮಾಡುವುದನ್ನು ಬಹಳಷ್ಟು ದಿವಸ ಮುಂದುವರೆಸಿಕೊಂಡು ಹೋದರೂ ಸಹಿತ ತಂತ್ರಜ್ಞಾನವನ್ನು ಸಹ ಆಮದು ಮಾಡಿಕೊಳ್ಳಬೇಕು. ಡಬ್ಲ್ಯೂಟಿಓ ಏನು ತೀರ್ಮಾನ ತೆಗೆದುಕೊಳ್ಳುತ್ತದೋ ಆಗಲಿ. ಅದರ ಬಗ್ಗೆ ನಾವು ಚರ್ಚೆ ಮಾಡಿ ತೀರ್ಮಾನ ಮಾಡಲಿಕ್ಕೆ ನಮ್ಮ ಕೈಯಲ್ಲಿ ಆಗುತ್ತಿಲ್ಲ. ಜೊತೆಯಲ್ಲಿ ಯಾವ ರೀತಿ ಆಮದು ಮಾಡಿಕೊಳ್ಳತಕ್ಕದ್ದು ಇದೆ, ಅದೇ ರೀತಿ ತಂತ್ರಜ್ಞಾನವನ್ನೂ ಸಹ ಆಮದು ಮಾಡಿಕೊಳ್ಳಬೇಕೆಂದು ನನ್ನ ಸಲಹೆ ಇದೆ. ಅದನ್ನು ತಾವು ಪರಿಗಣಿಸಬೇಕಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಂಥ ಸಂದರ್ಭದಲ್ಲಿ ಬಹಳಷ್ಟು ರೈತರು ತೊಂದರೆಯಲ್ಲಿದ್ದಾರೆ, ಬಹಳ ಕಷ್ಟದಲ್ಲಿದ್ದಾರೆ, ಒಂದು

ಕಡೆ ನುಸಿರೋಗ, ಎಣ್ಣೆಕಾಳಿನ ಯಾವುದೇ ಬೆಳೆಗಳನ್ನು ಬೆಳೆಯುತ್ತಿಲ್ಲ ಎಂದು ಗಮನವನ್ನು ಹರಿಸಿ ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇನೆ, ಕೊಬ್ಬರಿಯನ್ನು ಖರೀದಿ ಮಾಡಿ ಎನ್ನುವ ಮಾತನ್ನು ಅವರು ಹೇಳಿ ಬಂದಿದ್ದರು. ಅದು ಇಲ್ಲಿಯವರೆಗೆ ಬಿಡುಗಡೆಯಾಗಿಲ್ಲ. ನಿನ್ನೆ ಎಪಿಎಂಸಿಯ ಎಲ್ಲಾ ರೈತರುಗಳು ಬಂದು ಸಂಬಂಧಪಟ್ಟಿರುವ ಕೃಷಿ ಸಚಿವರನ್ನು ಮತ್ತು ಜಿಲ್ಲಾ ಸಚಿವರನ್ನು ನೋಡಿದ್ದಾರೆ. ದಯಮಾಡಿ ಆ ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ಕಡೂರು ತಾಲ್ಲೂಕಿನ ರೈತರ ಕಷ್ಟ ಸ್ವಲ್ಪ ಬಗೆಹರಿಯುತ್ತದೆ ಎನ್ನುವ ಮಾತನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊನ್ನೆ ಪೀಣ್ಯಾದಲ್ಲಿ ಒಂದು ಗಲಾಟೆ ನಡೆಯಿತು. ಒಂದು ಓ.ಎಫ್.ನ್ನು ಕೊಡುವುದಕ್ಕೆ ಸ್ವಲ್ಪ ಬೇರೆ ಅರ್ಥ ಬರುವ ರೀತಿಯಲ್ಲಿ ಪತ್ರಿಕಾ ಹೇಳಿಕೆ ಅಥವಾ ಯಾರೋ ಗುಸುಗುಸು ಸುದ್ದಿಯನ್ನು ಹರಡಿಸಿದ್ದಕ್ಕೋಸ್ಕರ ಇಡೀ ಬೆಂಗಳೂರನ್ನೇ ತಲ್ಲಣಿಸತಕ್ಕ ಒಂದು ವಾತಾವರಣ ಅಲ್ಲಿ ನಿರ್ಮಾಣವಾಗಿತ್ತು. ಇವತ್ತು ರೈತರ ಸ್ಥಿತಿ ಹೀನಾಯಮಾನವಾಗಿದ್ದರೂ ಸಹಿತ ಯಾವುದೇ ರೀತಿಯಾಗಿರತಕ್ಕ ಅತಿ ಶೀಘ್ರವಾದ ಪರಿಹಾರವನ್ನು ಸರ್ಕಾರ ಕೊಡುತ್ತಿಲ್ಲ. ಅದಕ್ಕೆ ರೈತರು ಆ ಪೀಣ್ಯಾ ಘಟನೆಗೆ ಬಂದಿರತಕ್ಕ ಕೆಲವೇ ಜನಗಳ ಅಷ್ಟು ಒತ್ತಡವನ್ನು ರೈತರೆಲ್ಲರೂ ಸೇರಿಕೊಂಡು ಮಾಡುವ ಮೊದಲು ರೈತರಿಗೆ ಪರಿಹಾರವನ್ನು ಕಂಡುಹಿಡಿಯಬೇಕೆನ್ನತಕ್ಕದ್ದು. ಇದಕ್ಕೆ ಆಗತ್ಯವಾಗಿರತಕ್ಕ ಒಂದು ಆಯವ್ಯಯದಲ್ಲಿ ಈ ಎಲ್ಲಾ ರೋಗಗಳಿಗೂ ಸಹಿತ ನಿವಾರಣೆ ಮಾಡುವುದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನವನ್ನು ಮಾಡಬೇಕೆಂದು ನನ್ನ ಒಂದು ಬೇಡಿಕೆ ಇದೆ. ಇನ್ನು ಪಶುಸಂಗೋಪನಾ ಇಲಾಖೆಯಲ್ಲಿ ನಮ್ಮ ಜಿಲ್ಲೆಯಲ್ಲಿ ಎಮ್ಮೆದೊಡ್ಡಿ ಗೋಸದನ ಎಂದು ಇದೆ. ಹಿಂದೆ ಅದನ್ನು ಜೈನ್ ಸಂಘದವರು ನಡೆಸುತ್ತಿದ್ದರು. ಅದನ್ನು ಬಹಳ ಅಚ್ಚುಕಟ್ಟಾಗಿ ನಡೆಸುತ್ತಿದ್ದರು. ಈಗ ಆ ಗೋಸದನವನ್ನು ಸರ್ಕಾರ ಕಳೆದ 15 ವರ್ಷಗಳಿಂದ ವಹಿಸಿಕೊಂಡಿದೆ. ಅಲ್ಲಿ ಒಬ್ಬರು ಅಸಿಸ್ಟೆಂಟ್ ಡೈರೆಕ್ಟರ್ ಇದ್ದಾರೆ. ಕೆಲವು ಸಿಬ್ಬಂದಿ ಇದ್ದಾರೆ. ಯಾವುದೇ ರೀತಿಯಾಗಿರತಕ್ಕ ಸೌಲಭ್ಯಗಳನ್ನು ನಾವು ಕಾಣುತ್ತಿಲ್ಲ. ಖಾಸಗಿಯವರು ನಡೆಸಬೇಕಾದರೆ ಬಹಳಷ್ಟು ಚೆನ್ನಾಗಿತ್ತು. ಸರ್ಕಾರ ನಡೆಸಬೇಕಾದರೆ ಎಲ್ಲಾ ಹಾಳಾಗಿಹೋಯಿತು. ಆ ಗೋಸದನವನ್ನು ಮತ್ತೆ ಪುನಃ ಅದನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸುವುದಕ್ಕೆ ಅನುಕೂಲವನ್ನು ಮಾಡಿಕೊಡಬೇಕು ಎನ್ನುವುದ ನನ್ನ ಒತ್ತಾಯ ಇದೆ. ಇನ್ನು ಕಂದಾಯ ಇಲಾಖೆಯ ಬಗ್ಗೆ ಮಾನ್ಯ ಮುದ್ದಹನುಮೇಗೌಡರ ನೇತೃತ್ವದಲ್ಲಿ ಒಂದು ಅಧೀನ ಶಾಸನ ಸಮಿತಿ ರಚನೆಯಾಗಿತ್ತು. ಅದರಲ್ಲಿ ಆಣವಾರು ಬಗ್ಗೆ ಬಹಳಷ್ಟು ವಿಚಾರಗಳನ್ನು ಚರ್ಚೆ ಮಾಡಿದ್ದೇವೆ. ಅದರಲ್ಲಿ ಒಂದು ಕಡೆ ನಾವು ಹೇಳುತ್ತೇವೆ, ನಾಲ್ಕು ವರ್ಷಗಳಾದ ಮೇಲೆ ಸರ್ಕಾರ ಕಂದಾಯವನ್ನು ಮನ್ನಾ ಮಾಡಿದೆ. ಅದಕ್ಕೆ [illegible]. ಶಿಫಾರಸ್ಸು ಮಾಡಿರತಕ್ಕ ಸಂದರ್ಭದಲ್ಲಿ ನವೆಂಬರ್ ತಿಂಗಳೊಳಗೆ ಆಣವಾರಿಯನ್ನು ತಾಲ್ಲೂಕಿನ ಅಧಿಕಾರಿಗಳು ಕೃಷಿ ಇಲಾಖೆಯ ಅಧಿಕಾರಿಗಳ ಸಂಯೋಜನೆಗೆ ಕೊಡಬೇಕು. ಅದನ್ನು ಸರ್ಕಾರಕ್ಕೆ ಡಿವಿಜನಲ್ ಕಮೀಷನರ್ ಮತ್ತು ಸರ್ಕಾರದ ಮೂಲಕ ಸರ್ಕಾರಕ್ಕೆ ಅಂದರೆ ಮಂತ್ರಿಮಂಡಲದ ಸಭೆಗೆ ಅದನ್ನು ಡಿಸೆಂಬರ್ 31ರೊಳಗೆ

ಕೊಡಬೇಕೆನ್ನತಕ್ಕದು. ಫೆಬ್ರವರಿ 28ನೇ ತಾರೀಖಿನೊಳಗೆ ಅಣೆವಾರಿಯನ್ನು ತೀರ್ಮಾನ ಮಾಡಿದರೆ ನಮಗೆ ಅನುಕೂಲವಾಗುತ್ತದೆ ಎನ್ನುವ ವರದಿಯನ್ನು ನಾವು 24.10.2000ನೇ ಇಸವಿಯಲ್ಲಿ ಸರ್ಕಾರಕ್ಕೆ ಕೊಟ್ಟಿದ್ದೇವೆ. ಇದರಿಂದ ಸಾಲ ವಸೂಲಾತಿ ಬಗ್ಗೆ ಮಾರ್ಚಿ ತಿಂಗಳಲ್ಲಿ ಆಗತಕ್ಕದ್ದು ಅನುಕೂಲವಾಗುತ್ತದೆ. ಇದರಿಂದ ಬಹಳಷ್ಟು ವಿಷಯಗಳಲ್ಲಿ ರೈತರಿಗೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಕಂದಾಯ ಇಲಾಖೆಗೆ ನೇರವಾಗಿರುವ ವಿಷಯವನ್ನು ಪ್ರಸ್ತಾಪ ಮಾಡಿ ಶಿಫಾರಸ್ಸು ಮಾಡಿ ನಾವು ಕೊಟ್ಟಿದ್ದೇವೆ. ಆದರೆ ಇವತ್ತಿನವರೆಗೂ ಇದರ ಬಗ್ಗೆ ಯಾವುದೇ ನಿರ್ಣಯವಾಗಿಲ್ಲ. ಇದರಿಂದ ನಾನು ಒತ್ತಾಯ ಮಾಡುತ್ತಿರುವುದು ಅಣೆವಾರಿಯನ್ನು ಅದೇ ವರ್ಷ ಸಪ್ಟೆಂಬರ್‌ನಲ್ಲಿ ಎಲ್ಲಾ ಪ್ರೋಸೆಸ್‌ನ್ನು ಮುಗಿಸಿ ಫೆಬ್ರವರಿ 28ನೇ ತಾರೀಖಿನೊಳಗೆ ಅಣೆವಾರಿಯನ್ನು ಘೋಷಣೆ ಮಾಡಬೇಕು ಎನ್ನತಕ್ಕದ್ದು. ಅದನ್ನು ನಾನು ಇವತ್ತಿನ ದಿವಸ ಒತ್ತಾಯ ಮಾಡುತ್ತಿದ್ದೇನೆ. ಮಾನ್ಯ ಮುದ್ದಹನುಮೇಗೌಡರ ನೇತೃತ್ವದಲ್ಲಿ ಮಾಡಿರುವ ಶಿಫಾರಸ್ಸುಗಳನ್ನು ದಯಮಾಡಿ ತಕ್ಷಣ ಜಾರಿಗೆ ತರಬೇಕೆಂದು ಕಂದಾಯ ಸಚಿವರಲ್ಲಿ ಒತ್ತಾಯವನ್ನು ಮಾಡುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) :— ಮಾನ್ಯ ಅಧ್ಯಕ್ಷರೇ, ರಬಿ ಕ್ರಾಪ್ ಫೆಬ್ರವರಿಯೊಳಗೆ ಬಂದಿರುವುದಿಲ್ಲ. ಒಂದು ವರ್ಷದಲ್ಲಿ ಎರಡು ಬೆಳೆಗಳು ಬರುತ್ತವೆ. ಒಂದು ಖಾರೀಫ್ ಮತ್ತು ರಬಿ ಕ್ರಾಪ್. ಈಗ ಮುಂಗಾರು. ಸಾಮಾನ್ಯವಾಗಿ ಮುಂಗಾರು ಡಿಸೆಂಬರ್‌ವರೆಗೆ ಆಗುತ್ತದೆ. ಮಾನ್ಯ ಪಾಟೀಲರಿಗೆ ಇದು ಗೊತ್ತು. ಜೋಳ ಎಲ್ಲಾ ಕೋಯಿಲು ಆಗುವುದು ಡಿಸೆಂಬರ್‌ನಲ್ಲಿ. ಅದಕ್ಕಿಂತ ಮುಂಚೆ ಆಗುವುದಿಲ್ಲ. ಮತ್ತೆ ರಬಿ ಕ್ರಾಪ್ ಬರಬೇಕಾದರೆ ಮೇ ತಿಂಗಳಲ್ಲಿ ಆಗುತ್ತದೆ. ನೀರಾವರಿಯಾದರೂ ಹಾಗೆ ಆಗುತ್ತದೆ. ಏಕೆಂದರೆ ಬೇಸಿಗೆ ಭತ್ತ ಬೆಳೆಯುತ್ತಾರೆ. ಆದುದರಿಂದ ತಾವು ಫೆಬ್ರವರಿಯಲ್ಲಿ ಅಣೆವಾರಿ ಮುಗಿಯಬೇಕೆಂದರೆ ಸ್ವಲ್ಪ ಕಷ್ಟವಾಗಬಹುದೇನೊ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ :— ಮಾನ್ಯ ಅಧ್ಯಕ್ಷರೇ, ಹಿಂಗಾರು ಪೈರು ಯಾವತ್ತೂ ರೈತರಿಗೆ ಇವತ್ತಿನ ಪರಿಸ್ಥಿತಿಯಲ್ಲಿ ಅನಾನುಕೂಲವಾಗುವುದು ಕಷ್ಟ. ಮುಂಗಾರೇ ನಮಗೆ ತೊಂದರೆ ಕೊಡತಕ್ಕದ್ದು.

ಶ್ರೀ ಕೆ.ಹೆಚ್. ರಂಗನಾಥ್ :— ಹೆಚ್ಚು ನೀರಾವರಿ ಪ್ರದೇಶ ಬಂದಿರುವುದರಿಂದ ಅದನ್ನೂ ಕೂಡ ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಮುಂಗಾರು ಭತ್ತವೂ ಆಗುತ್ತದೆ. ಹಿಂಗಾರಿ ಭತ್ತವೂ ಆಗುತ್ತದೆ. ಮುಂಗಾರು ಖುಷ್ಕಿ ಬೆಳೆಯೂ ಆಗುತ್ತದೆ. ಹಿಂಗಾರು ಖುಷ್ಕಿ ಬೆಳೆಯೂ ಆಗುತ್ತದೆ. ಇವೆರಡನ್ನೂ ಗಮನದಲ್ಲಿಟ್ಟುಕೊಂಡರೆ ಬಹಳ ಮಟ್ಟಿಗೆ ಫೆಬ್ರವರಿಯೊಳಗೆ ತಾವು ಪ್ರಸ್ತಾಪ ಮಾಡಿರುವುದರ ಬಗ್ಗೆ ನನ್ನ[illegible]ತ್ತದೆ; ಹಳೆಯ ಮೈಸೂರು ವಿಷಯವನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತಾಪ ಮಾಡಿ[illegible]ದು. ಆದರೆ ಹೊಸ ಮೈಸೂರಿನ ಭಾಗ ಏನಿದೆ, ಬಾಂಬೆ ಕರ್ನಾಟಕ ಮತ್ತು ಹೈದರಾಬಾದ್-ಕರ್ನಾಟಕ ಇವೆಲ್ಲಾ ಲೆಕ್ಕ ಹಾಕಿದರೆ ನಮ್ಮ ಚಿತ್ರದುರ್ಗ ಡಿಸ್ಟಿಕ್ಟೂ ಸೇರಿ ಆದು ಬಹಳ ಮಟ್ಟಿಗೆ ಫೆಬ್ರವರಿಯೊಳಗೆ ಸರಿಯಾದ ಚಿತ್ರ ಬರಲಾರದು.

F-78 II

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ :— ಮಾನ್ಯ ಅಧ್ಯಕ್ಷರೇ, ಮಳೆಯ ಆಧಾರಿತವಾಗಿರತಕ್ಕ ಪೈರುಗಳು ಫೇಲ್ ಆಗತಕ್ಕದ್ದು ನಮಗೆ ಸಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳಲ್ಲಿ ಗೊತ್ತಾಗಿಬಿಡುತ್ತದೆ. ಇನ್ನು ನೀರಾವರಿಯಾಗಿರತಕ್ಕಂಥದ್ದು ಮಾರ್ಚ್ ಏಪ್ರಿಲ್‌ಗೆ ಹೋಗುತ್ತದೆ. 90 ಭಾಗ ಹಿಂಗಾರು ಬೆಳೆಗಳು ಆದು ಹಿಂಗಾರು ಮಳೆಯ ನೀರಾವರಿಯಿಂದ ಬೆಳೆಯತಕ್ಕ ಬೆಳೆಗಳು 90 ಭಾಗ. ಜೋಳ ಬೆಳೆಯಲಿ, ಮತ್ತೊಂದು ಬೆಳೆಯಲಿ ಅದು ಫೇಲ್ ಆಗುವುದು ಕಷ್ಟ. ಅದು ಅಶ್ಯೂರ್ಡ್ ಇರಿಗೇಷನ್. ಇನ್ನೇನು ಹಾಳಾಗಿ ಹೋದವು ಎಂದರೆ ಜೀವ ಉಳಿಸಲಿಕ್ಕೆ ಬರತಕ್ಕದ್ದು ಹಿಂಗಾರು; ಏನೇ ಆದರೂ ಸಹಿತ ಈ ಮಳೆ ಆಧಾರಿತವಾಗಿರತಕ್ಕವು ಅದು ಸಪ್ಟೆಂಬರ್‌ಗೇ ಗೊತ್ತಾಗುತ್ತದೆ. ಅಕ್ಟೋಬರ್‌ಗೆ ಪೂರ್ಣ ಮಟ್ಟದಲ್ಲಿ ಗೊತ್ತಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ :— ಬುಷ್ಟಿಯಲ್ಲೂ ಕೂಡ ರಬಿಯ ಜೋಳ ಫೇಲ್ ಆಗತಕ್ಕದ್ದು ಫೆಬ್ರವರಿಗೆ ಆಗುವುದಿಲ್ಲ. ಮಾರ್ಚ್ ಆದಮೇಲೆಯೇ ಸ್ವಲ್ಪ ಆಗತಕ್ಕದ್ದು.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ರಬಿಯನ್ನೇ ಬೇರೆ ಮಾಡುತ್ತಾರೆ. ಖಾರೀಫ್ ಬೇರೆ ಮಾಡುತ್ತಾರೆ. ಬೇರೆ ಬೇರೆನೇ ಮಾಡುತ್ತಾರೆ. ಆ ರೀತಿಯಾಗಿ ಮಾಡಿದರೇ ತಪ್ಪೇನಿಲ್ಲ. ಅವರು ಹೇಳಿದ್ದು ಖಾರೀಫ್ ಫೆಬ್ರವರಿ ಒಳಗೇ ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ :— ಹಿಂಗಾರಿ ಬೆಳೆ, ಉತ್ತರ ಮಳೆಗೆ ಬಿತ್ತನೆಯಾಗತಕ್ಕದ್ದು.

ಶ್ರೀ ಎಸ್.ಎಸ್. ಪಾಟೀಲ್ :— ಹಿಂಗಾರಿ ಮುಂಗಾರಿ ಬೇರೆ ಬೇರೆನೇ ಮಾಡುತ್ತಾರೆ. ಈಗಲೂ ಕೂಡ ಅದೇ ಪದ್ಧತಿ ಇದೆ. ಆದರೆ ವೇಳೆಗೆ ಸರಿಯಾಗಿ ಮಾಡುವುದಿಲ್ಲ. ಮುಂಗಾರನ್ನು ಫೆಬ್ರವರಿ ಒಳಗೆ ಮಾಡಿಕೊಡುವುದಕ್ಕೆ ಸಾಧ್ಯ ಇದೆ; ಇವರು ಮಾಡುವುದಿಲ್ಲ. ಏಪ್ರಿಲ್, ಮೇ ತಿಂಗಳಲ್ಲಿ ಮಾಡುತ್ತಾರೆ. ಅದು ಇದು ಮಾಡುವುದಕ್ಕೆ ನಮಗೆ ತೊಂದರೆಯಾಗಿಬಿಡುತ್ತದೆ. ಕನ್‌ವರ್ಷನ್ ಮಾಡುವುದಕ್ಕೆ ಇನ್ನೊಂದು ಮಾಡುವುದಕ್ಕೆ ತೊಂದರೆಯಾಗುತ್ತದೆ. ಅದಕ್ಕೆ ಫೆಬ್ರವರಿಯೊಳಗೆ ಮುಂಗಾರಿ ಬಿತ್ತನೆ ಮಾಡಬೇಕು. ಹಿಂಗಾರಿ ಬಿತ್ತನೆಯನ್ನು ಹಿಂಗಾರಿಯಲ್ಲಿ ಮಾಡಿಯೇ ಮಾಡುತ್ತಾರೆ. ಆ ರೀತಿಯಾಗಿ ಮಾಡಿದರೆ ಸರಿಯಾಗುತ್ತದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ :— ಮಾನ್ಯ ಅಧ್ಯಕ್ಷರೇ, ಆ ವಿಷಯ ಚರ್ಚೆಗೆ ಏಕೆ ಬಂತು ಎಂದರೆ ಕಂದಾಯ ಇಲಾಖೆಯ ಅಧಿಸೂಚನೆಗಳ ಬಗ್ಗೆ ನಾವು ಚರ್ಚೆ ನಡೆಸುತ್ತಿದ್ದೆವು. 1995ನೇ ಇಸವಿಯಲ್ಲಿ ಮಳೆ ಹೋಗಿರತಕ್ಕದ್ದು ಆಣೆವಾರಿ ಎಲ್ಲಾ ಸರ್ಕಾರದಿಂದ ಬಂದು ಕಂದಾಯ ಮನ್ನಾ ಆಗತಕ್ಕದ್ದು 1999ನೇ ಇಸವಿಯಲ್ಲಿ. ಈ ರೀತಿಯಾದರೆ ರೈತರಿಗೇನು ಅನುಕೂಲ ಸಿಗುತ್ತದೆ? ಅದಕ್ಕೆ ನಾವು ಹೇಳತಕ್ಕದ್ದು

ನಿಗದಿಯಾಗಿರುವ ಸಮಯವನ್ನು ಗೊತ್ತುಪಡಿಸಬೇಕೆನ್ನುವ ಶಿಫಾರಸ್ಸನ್ನು ಮಾಡಿದ್ದೇವೆ. ಎರಡು ಆಣೆವಾರಿಯನ್ನು ಕಳುಹಿಸಿದರೂ ಸರ್ಕಾರಕ್ಕೇನೂ ತಪ್ಪು ಇಲ್ಲ. ಎರಡು ಆಣೆವಾರಿಯನ್ನು ಕಳುಹಿಸಿ ರೈತರಿಗೆ ಅನುಕೂಲ ಮಾಡಿಕೊಡತಕ್ಕದ್ದು ಮಾಡದೇ ಹೋದರೆ ನಿರ್ದಿಷ್ಟವಾಗಿರತಕ್ಕ ಇಷ್ಟು ದಿವಸದೊಳಗೆ ಆಣೆವಾರಿಯನ್ನು ಡಿಕ್ಲೇರ್ ಆಗಬೇಕು. ಸರ್ಕಾರ ಕಂದಾಯವನ್ನು ಮನ್ನಾ ಮಾಡಬೇಕು. ಕೋ-ಆಪರೇಟೀವ್ ಸೊಸೈಟಿಗಳ ಲೋನ್ ರಿಕವರಿ ಬಗ್ಗೆ ಏನಾದರೂ ರಿಲೀಫ್ ಕೊಡಬೇಕು ಎಂದಾದರೆ ಇದು ಫೆಬ್ರವರಿಯಲ್ಲಿ ಆಗಲೇಬೇಕಾಗುತ್ತದೆ. ಅದು ಆಗದೇ ಹೋದರೂ ಸಹಿತ ಮಾನ್ಯ ರಂಗನಾಥ್‌ರವರು ಹೇಳಿದ ರೀತಿಯಲ್ಲಿ ಸ್ವಲ್ಪ ಮುಂದೆ ಹಾಕಿದರೂ ಸಹಿತ ಟೈಮ್ ಬೌಂಡ್ ಪ್ರೋಗ್ರಾಮನ್ನು ಹಾಕಬೇಕಾಗುತ್ತದೆ. 4 ವರ್ಷ 5 ವರ್ಷಗಳ ಮೇಲೆ ಆಣೆವಾರಿಯನ್ನು ಡಿಕ್ಲೇರ್ ಮಾಡಿಕೊಂಡು ಏನೂ ರಿಲೀಫ್ ಸಿಗದೇ ಅಷ್ಟು ಹೊತ್ತಿಗೆ ಬಡವರು ಬಗ್ಗರನ್ನು ಜಪ್ತಿ ಮಾಡಿ ವಿಲೇಜ್ ಅಕೌಂಟೆಂಟ್‌ಗಳು ದುಡ್ಡನ್ನು ವಸೂಲು ಮಾಡಿಕೊಂಡಿರುತ್ತಾರೆ. ಯಾರ್‍ಯಾರು ಆಣೆವಾರಿ ಡಿಕ್ಲೇರ್ ಆಗಿ ಉಳಿದುಕೊಳ್ಳುತ್ತೇವೆ ಎಂದು ಬುದ್ಧಿವಂತರಿರುತ್ತಾರೆ ಅವರು ಕಂದಾಯ ಕಟ್ಟದೆ ಇರುತ್ತಾರೆ. ಅವತ್ತು ಡಿಕ್ಲೇರ್ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತಾ ನಿಗದಿತ ಸಮಯದಲ್ಲಿ ಆಣೆವಾರಿಯನ್ನು ಡಿಕ್ಲೇರ್ ಮಾಡಬೇಕೆನ್ನುವ ಒತ್ತಾಯವನ್ನು ನಾನು ಮಾನ್ಯ ಕಂದಾಯ ಸಚಿವರಲ್ಲಿ ಮಾಡುತ್ತಿದ್ದೇನೆ. ಅದೇ ರೀತಿ ತಾಲ್ಲೂಕು ಮತ್ತು ಹೋಬಳಿಗಳನ್ನು ಇವತ್ತಿನ ದಿವಸ ವಿಂಗಡಣೆ ಮಾಡಬೇಕೆನ್ನುವ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಂಡಿರುವುದು ಬಹಳ ಸ್ವಾಗತಾರ್ಹವಾಗಿರುವ ಸಂಗತಿ. ನನ್ನ ಬೀರೂರು ಕ್ಷೇತ್ರ ಏನು ಇದೆ, ಅದಕ್ಕೆ ಯಾವುದೇ ರೀತಿಯಾದ ತಾಲ್ಲೂಕು ಹೆಡ್‌ಕ್ವಾರ್ಟರ್ಸ್ ಇಲ್ಲ. ಅದನ್ನು ಒಂದು ತಾಲ್ಲೂಕು ಮಾಡಿಕೊಡಬೇಕು. ಶೃಂಗೇರಿ ತಾಲ್ಲೂಕು ಏಕಿದೆ, ಅದಕ್ಕಿಂತ ಹೆಚ್ಚಾಗಿರುವ ಸಕ್ಕರೆ ಪಟ್ಟಣ ಹೋಬಳಿ ಒಂದು ಇದೆ. ಆ ಸಕ್ಕರೆ ಪಟ್ಟಣ ಹೋಬಳಿಯನ್ನು ಎರಡು ಭಾಗವನ್ನಾಗಿ ಮಾಡಬೇಕೆಂದು ಹೇಳಿ ನಾವು ಮನವಿಯನ್ನು ಸಲ್ಲಿಸಿದ್ದೇವೆ. ಅದನ್ನು ಮಾಡಿಕೊಡಬೇಕೆಂದು ಒತ್ತಾಯವನ್ನು ಮಾಡುತ್ತಿದ್ದೇನೆ. ಇನ್ನೊಂದು ಬಹಳ ಪ್ರಮುಖವಾಗಿರತಕ್ಕ ವಿಷಯ. ಹೋದ ಸಾರಿ ನಾವು ಪ್ರಿವಿಲೇಜ್ ಮೋಷನ್ ಸಹಿತ ಮೂವ್ ಮಾಡಿದ್ದೇವೆ. ತರೀಕೆರೆ ತಾಲ್ಲೂಕಿನಲ್ಲಿ ಶಾಸಕರ ನೇತೃತ್ವದಲ್ಲಿ ಒಂದು ಅಕ್ರಮ ಸಕ್ರಮ-ಸಮಿತಿಗಳನ್ನು ಮಾಡಿದ್ದಾರೆ. ಆ ಸಮಿತಿ ಮಾಡಿ ಆ ಸಮಿತಿ ಹೋಗಿದೆ. ಅದಾದ ಮೇಲೆ ಮತ್ತೊಂದು ಹೆಚ್ಚುವರಿ ಸಮಿತಿಯನ್ನೂ ಸಹಿತ ಮಾಡಿದರು. ಹೆಚ್ಚುವರಿ ಸಮಿತಿಯನ್ನು ಮಾಡಿದಾಗ ಯಾವುದು ಹೆಚ್ಚುವರಿ ಸಮಿತಿಯ ವ್ಯಾಪ್ತಿಗೆ ಬರುತ್ತದೆಂದು ಎಲ್ಲಿಯೂ ಹೇಳಲಿಲ್ಲ. ಅದೇನೊ ರಾಜಕೀಯ ಕಾರಣಕ್ಕೋ ಏನೋ ಆ ಅಕ್ರಮ-ಸಕ್ರಮ ಸಮಿತಿಯನ್ನು ಹೆಚ್ಚುವರಿ ಸಮಿತಿಯನ್ನು ರದ್ದುಮಾಡಿದರು. ಅದನ್ನು ರದ್ದು ಮಾಡಿ ಇರತಕ್ಕ ಅಕ್ರಮ-ಸಕ್ರಮ ಸಮಿತಿಯಲ್ಲೂ ಸಹಿತ ಕೇಸುಗಳನ್ನು ತೀರ್ಮಾನ ಮಾಡತಕ್ಕ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು

ಒಂದು ಆದೇಶವನ್ನು ಹೊರಡಿಸುತ್ತಾರೆ. ಇದನ್ನು ನೀವು ಮಾಡಕೂಡದು ಎಂದು ಇದಕ್ಕೆ ನಾನು ತಡೆಯಾಜ್ಞೆ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಜಿಲ್ಲಾಧಿಕಾರಿಗಳು ಯಾರು ಇದಕ್ಕೆ ತಡೆಯಾಜ್ಞೆಯನ್ನು ಕೊಡಲಿಕ್ಕೆ? ಜಿಲ್ಲಾಧಿಕಾರಿಗಳಿಗೆ ಏನು ಅಧಿಕಾರ ಇದೇ? ಅಕ್ರಮ ಸಕ್ರಮ ಸಮಿತಿಯಲ್ಲಿ ನೀವು ಮಾಡಬಾರದು ಎಂದು ಹೇಳುವುದಕ್ಕೆ ಜಿಲ್ಲಾಧಿಕಾರಿಗಳಿಗೇನು ಅಧಿಕಾರ ಇದೆ. ತಮಗೆ ನಾನು ದಾಖಲೆಗಳನ್ನು ಕಳುಹಿಸುತ್ತಿದ್ದೇನೆ.

11.10 ಎ.ಎಂ.

ಹೆಚ್ಚುವರಿಯಾಗಿ ಅಕ್ರಮ-ಸಕ್ರಮ ಸಮಿತಿ ಮಾಡಿರತಕ್ಕದ್ದೂ ಸಹ ಸರಿಯಲ್ಲ. ಶಾಸಕರನ್ನು ಆ ಸಮಿತಿಯ ಸದಸ್ಯರನ್ನಾಗಿ ಮಾಡಿಲ್ಲ. ಅಸಿಸ್ಟೆಂಟ್ ಕಮೀಷನರ್ ಅವರನ್ನು ಸದರಿ ಸಮಿತಿಯ ಛೇರ್ಮನ್ನಾಗಿ ಮಾಡಿ ಅವರಿಗೆ ಬೇಕಾಗಿರತಕ್ಕಂಥ ಮೂರು ಜನರನ್ನು ಅದರ ಸದಸ್ಯರನ್ನಾಗಿ ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿ ಬರತಕ್ಕಂಥ ವಿಷಯಗಳನ್ನು ಚರ್ಚೆ ಮಾಡಲಿಕ್ಕೆ ಮತ್ತು ಅದನ್ನು ತೀರ್ಮಾನ ಮಾಡಲಿಕ್ಕೆ ಶಾಸಕರನ್ನು ಕನಿಷ್ಠಪಕ್ಷ ಸಮಿತಿಯ ಸದಸ್ಯನನ್ನಾಗಿ ಮಾಡತಕ್ಕ ವ್ಯವಸ್ಥೆಯನ್ನೂ ಸಹ ಸರ್ಕಾರ ಮಾಡಿಲ್ಲ. ಇದು ನನ್ನ ಹಕ್ಕಿನ ಪ್ರಶ್ನೆಯಾಗಿರುವುದರಿಂದ ನಾನು ತಮ್ಮ ಮೂಲಕ ಇದನ್ನು ಸರಿಪಡಿಸಿಕೊಡಬೇಕೆಂದು ಕೋರುತ್ತೇನೆ. ಇದಕ್ಕೆ ಸಂಬಂಧಪಟ್ಟಂತಹ ದಾಖಲೆಗಳನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಕೆರೆಗಳ ಸರ್ವೆ ಮಾಡುವುದರ ಬಗ್ಗೆ ಸ್ಪಷ್ಟವಾಗಿರತಕ್ಕಂಥ ನಿಲುವನ್ನು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಅನೌನ್ಸ್ ಮಾಡಿದರು. ಕೆರೆಗಳ ಸರ್ವೆ ಮಾಡಿಸುತ್ತೇನೆ ಎನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಹೇಳಿ ಈಗಾಗಲೇ ಒಂಬತ್ತು ತಿಂಗಳಾಗುತ್ತಾ ಬಂತು. ಯಾವುದೇ ಒಬ್ಬ ಸರ್ವೇಯರ್ ಬಂದು ಒಂದು ಕೆರೆಯನ್ನೂ ಸಹಿತ ಇವತ್ತಿನವರೆಗೆ ಅಳತೆ ಮಾಡಿಲ್ಲ. ಹೀಗಾದರೇ ಸದನದಲ್ಲಿ ಹೇಳತಕ್ಕಂಥ ಮಾತುಗಳಿಗೆ ಏನು ಬೆಲೆ ಸಿಗುತ್ತದೆ ಎಂದು ನಾನು ಯೋಚಿಸುತ್ತಿದ್ದೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ :— ಮಾನ್ಯ ಅಧ್ಯಕ್ಷರೇ, ಕೆರೆ ಸರ್ವೆ ಮಾಡುವುದರ ಬಗ್ಗೆ ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ನಮ್ಮ ಇಲಾಖಾ ಸರ್ವೇಯರ್ ಸಿಗದಿರುವುದರಿಂದ ರೆವಿನ್ಯೂ ಡಿಪಾರ್ಟ್‌ಮೆಂಟಿನವರಿಂದ ಸರ್ವೆಯರ್‌ಗಳನ್ನು ತೆಗೆದುಕೊಂಡು ಎಲ್ಲೆಲ್ಲಿ ಕೆರೆಗಳನ್ನು, ನೀರು ಬಳಕೆದಾರರ ಸಹಕಾರ ಸಂಘ ಇರಬಹುದು ಅಥವಾ ಯಾವುದೇ ತರಹದ ಸಂಘ ಸಂಸ್ಥೆಗಳು ಇರಬಹುದು, ಅದನ್ನು ಸರ್ವೆ ಮಾಡಬೇಕೆಂದು ಕೋರಿ ಸರ್ವೇಯರ್‌ಗೆ ಮನವಿ ಕೊಟ್ಟರೆ ತಕ್ಷಣ ಸರ್ವೆ ಮಾಡಬೇಕೆಂದು ಈಗಾಗಲೇ ಒಂದು ನಿರ್ದೇಶನವನ್ನು ಕಂದಾಯ ಇಲಾಖೆಯಿಂದ ನೀಡಲಾಗಿದೆ ಯಾರೇ ನಿರ್ದೇಶನ ಕೊಟ್ಟರೂ ಕೂಡ ಇವತ್ತು ತತ್‌ಕ್ಷಣ ಕೆರೆಗಳ ಸರ್ವೆ ಮಾಡತಕ್ಕ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಈಗ ಹೋಬಳಿಗೊಂದು ಕೆರೆ ಎಂದು ಏನು ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೋ ಇದಿಷ್ಟನ್ನೂ ಸಹ ಸರ್ವೆ ಮಾಡಿಯೇ ತೆಗೆದುಕೊಳ್ಳಬೇಕು ಎಂಬ ವಾದದ ಮೇಲೆಯೇ ನಾವು ನಿಂತಿದ್ದೂ ಆಗಿದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ :— ಯಾರೂ ಸಹಿತ ಅರ್ಜಿ ಕೊಡುವುದಕ್ಕೆ ಬರುವುದಿಲ್ಲ. ಕೆರೆಗಳು ಒತ್ತುವರಿಯಾಗಿದೆ ಎಂಬ ಅರ್ಜಿಯನ್ನು ಯಾರಾದರೂ ಕೊಟ್ಟರೆ ಆ ಊರಿನಲ್ಲಿ ಹೊಡೆದಾಟ ಮತ್ತು ದೊಂಬಿಯಾಗುವುದಕ್ಕೆ ಶುರುವಾಗುತ್ತದೆ. ಯಾರೋ ಅರ್ಜಿ ಕೊಟ್ಟರೆ ಮಾತ್ರ ಕೆರೆಗಳ ಸರ್ವೆ ಮಾಡುತ್ತೇವೆ ಎನ್ನತಕ್ಕಂಥ ಸರ್ಕಾರದ ಕಲ್ಪನೆಯೇನಿದೆ ಅದು ಸರಿಯಲ್ಲ. ಸುವೊಮೋಟೋ ಯಾವ್ಯಾವ ಕೆರೆಗಳು ಎಷ್ಟೆಷ್ಟು ಎಕರೆ ಇವೆ ಎನ್ನತಕ್ಕಂಥದ್ದನ್ನು ಇಲಾಖೆಯಿಂದ ಮಾಹಿತಿ ತರಿಸಿ ಇವರೇ ಮಾಡಬೇಕು ಹೊರತು ಅರ್ಜಿಗಳು ಬಂದಾಗ ನಾವು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದರೆ, ಊರಿನಲ್ಲಿ ಗಲಾಟೆ ಮತ್ತು ದೊಂಬಿಗಳು ಆಗುತ್ತವೆ. ಒಂದೊಂದು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಂದೊಂದು ಪೊಲೀಸ್ ಸ್ಟೇಷನ್ ಅನ್ನು ಸರ್ಕಾರ ಮಾಡಬೇಕಾಗುತ್ತದೆ. ಬಹುತೇಕ ಎಲ್ಲಾ ಕೆರೆಗಳು ಒತ್ತುವರಿಯಾಗಿವೆ. ಎಲ್ಲಾ ಕೆರೆಗಳು ಮುಚ್ಚಿ ಹೋಗಿದ್ದು, ಎಲ್ಲರೂ ಅದರಲ್ಲಿ ಬೇಸಾಯ ಮಾಡುತ್ತಾರೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸಣ್ಣ ನೀರಾವರಿ ಸಚಿವರು 747 ಕೆರೆಗಳ ಹೂಳೆತ್ತುವ ಕಾರ್ಯಕ್ರಮವನ್ನು ಅತಿ ಶೀಘ್ರವಾಗಿ ಹಾಕಿಕೊಳ್ಳುತ್ತೇವೆ ಎಂಬ ಮಾತನ್ನು ಈಗಾಗಲೇ ಹೇಳಿದ್ದಾರೆ. ನಾವು ಈಗಾಗಲೇ 6-7 ತಿಂಗಳ ಹಿಂದೆ ಸದನದಲ್ಲಿ ಗಮನ ಸೆಳೆಯುವ ಸೂಚನೆಯೊಂದನ್ನು ಮಂಡಿಸಿ ಇಡೀ ರಾಜ್ಯದ ಎಲ್ಲಾ ಕೆರೆಗಳನ್ನು ಸರ್ವೆ ಮಾಡಿಸಬೇಕು ಮತ್ತು ಒತ್ತುವರಿ ಮಾಡಿಕೊಂಡಿರುವುದನ್ನು ಬಿಡಿಸಬೇಕು ಎಂದು ಕೋರಿದ್ದೇವು. ಇದು ಇವತ್ತು ಅತ್ಯಾವಶ್ಯಕವಾಗಿ ಆಗಲೇಬೇಕಾದ ಕಾರ್ಯಕ್ರಮವಾಗಿದೆ. ಜನ ಸಂವರ್ಧನಾ ಯೋಜನೆ ಇರಬಹುದು, ಕೆರೆಗಳ ಹೂಳೆತ್ತುವ ಕಾರ್ಯಕ್ರಮ ಇರಬಹುದು, ಇಂತಹ ಯಾವುದೇ ಒಂದು ಕೆರೆಗಳನ್ನು ಹೂಳೆತ್ತುವ ಕಾರ್ಯಕ್ರಮದಲ್ಲಿ ಆ ಕೆರೆಯ ಸರ್ವೆ ಮಾಡದೇ, ನಮ್ಮ ಕೆರೆ ಎಷ್ಟಿದೆ? ಅದರ ಅಚ್ಚುಕಟ್ಟು ಎಷ್ಟಿದೆ? ಅದರ ಅಂಗಳ ಎಷ್ಟು ಎನ್ನುವುದರ ಬಗ್ಗೆ ಕ್ರಮ ಕೈಗೊಂಡರೆ ಅದು ಪ್ರಯೋಜನವಾಗುವುದಿಲ್ಲ. ಪ್ರಾಥಮಿಕವಾಗಿ ಈ ಹಂತದಲ್ಲಿ 747 ಕೆರೆಗಳು ಹೂಳೆತ್ತಬೇಕೆಂಬ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನೀವೇನು ಯೋಜನೆಯನ್ನು ಮಾಡಿದ್ದಿರೋ, ಕನಿಷ್ಟ ಪಕ್ಷ ಆ 747 ಕೆರೆಗಳನ್ನು ಪ್ರಾಥಮಿಕವಾಗಿ ಸರ್ವೆ ಮಾಡಿಸತಕ್ಕಂಥ ಕೆಲಸವನ್ನು ನೀವು ಮೊದಲು ಮಾಡಿಸಿ. ತದನಂತರ ನೀವು ಉಳಿದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಿ. ನೀವು ಕೆರೆಗಳ ಸರ್ವೆ ಮಾಡದೇ ಹೂಳೆತ್ತಿದರೆ ಏನೂ ಪ್ರಯೋಜನವಾಗುವುದಿಲ್ಲ.

ಅಧ್ಯಕ್ಷರು :— ಮಾನ್ಯ ಸದಸ್ಯರು ಬಹಳ ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ :— ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ಅದೇ ರೀತಿಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಸರ್ವೆ ಮಾಡದೇ ಯಾವುದೇ

ಕೆರೆಗಳ ಹೂಳೆತ್ತುವ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುವುದಿಲ್ಲ. ಆದಕ್ಕಾಗಿ ಈಗ ಅರ್ಜಿಗಳನ್ನು ಸಲ್ಲಿಸಬೇಕು ಎಂದು ನನಗೆ ಅನ್ನಿಸುತ್ತಿಲ್ಲ. ಕೆಲವೆಡೆ ಕೆರೆಗಳಿಗೆ ನೀರೇ ಬಾರದೇ ಇರತಕ್ಕಂಥ ಪರಿಸ್ಥಿತಿ ಇದೆ. ಅಲ್ಲಿ ನೀರು ಬಳಕೆದಾರರ ಸಹಕಾರ ಸಂಘ ಅಥವಾ ಎಲ್ಲಿ ನೀರು ಬಳಕೆದಾರರ ಸಹಕಾರ ಸಂಘಗಳು ಇರುವುದಿಲ್ಲವೋ ಅಂತಹ ಕಡೆ ಬೇರೆಯವರು ಅರ್ಜಿ ಏನಾದರೂ ಕೊಟ್ಟರೆ ಆ ಕೆರೆಗಳ ಹೂಳೆತ್ತಬೇಕು ಎಂದು ಮಾಡಿದ್ದೇವೆ. ಒಂದು ವೇಳೆ ಅರ್ಜಿ ಕೊಡದಿದ್ದರೂ ಸಹ ನಾವು ಆ ಕೆಲಸವನ್ನು ಇಲಾಖಾ ವತಿಯಿಂದ ಮಾಡುತ್ತೇವೆ. ಕೆರೆಗಳು ಸರ್ಕಾರದ ಆಸ್ತಿಯಾಗಿರುವುದರಿಂದ ಯಾವುದೇ ಕಾರಣಕ್ಕೂ ಅವು ಪರಭಾರೆಯಾಗಲು ನಾವು ಬಿಡುವುದಿಲ್ಲ. ಕೆರೆಗಳಲ್ಲಿ ನೀರು ನಿಲ್ಲುವುದಿಲ್ಲ ಎಂಬ ಕಾರಣಕ್ಕಾಗಿ ಕೆಲವರು ಅಲ್ಲಿ ಒತ್ತುವರಿ ಮಾಡಿಕೊಂಡಿರುತ್ತಾರೆ. ನೀರನ್ನು ಅಟೋಮ್ಯಾಟಿಕ್ಕಾಗಿ ಅಲ್ಲಿ ಹೋಗಿ ನಿಲ್ಲಿಸತಕ್ಕಂಥ ಜವಾಬ್ದಾರಿಯನ್ನು ಇಲಾಖೆ ಹೊತ್ತುಕೊಂಡರೆ, ಒತ್ತುವರಿ ಮಾಡಿಕೊಂಡವರು ಈ ಜಾಗ ಬಿಟ್ಟು ಹೋಗಲೇಬೇಕಾಗುತ್ತದೆ. ಈಗ ನಾವೇನು 747 ಕೆರೆಗಳ ಹೂಳೆತ್ತಲು ಹೊರಟಿದ್ದೇವೆ, ಈ ಕೆರೆಗಳ ಸರ್ವೆ ಮಾಡಿಸಿಯೇ ನಾವು ಈ ಕಾರ್ಯಕ್ರಮ ಮಾಡುತ್ತೇವೆ.

ಶ್ರೀ ವೆಂಕಟರಮಣಪ್ಪ (ಪಾವಗಡ) :— ಮಾನ್ಯ ಅಧ್ಯಕ್ಷರೇ, ಯಾರು ಕೆರೆಗಳಲ್ಲಿ ಒತ್ತುವರಿ ಮಾಡಿಕೊಂಡು ಇರುತ್ತಾರೋ ಅಂತಹವರು ಕೆರೆ ಅಂಗಳದಲ್ಲಿ ಸುತ್ತಲೂ 4-5 ಅಡಿ ನೀರು ಬಾರದಂತೆ ಬಂಡ್ ಹಾಕಿಕೊಂಡಿರುತ್ತಾರೆ. ಬಂಡ್ ಹಾಕಿಕೊಂಡಿರುವುದರಿಂದ ಕೆರೆಯಲ್ಲಿ ಪೂರ್ಣ ಪ್ರಮಾಣದಲ್ಲಿ ನೀರು ನಿಲ್ಲುವುದಿಲ್ಲ. ಆದ್ದರಿಂದ ಮೊದಲು ಕೆರೆಗಳು ಸರ್ವೆ ಮಾಡಿಸಿ ಒತ್ತುವರಿಯನ್ನು ಬಿಡಿಸಬೇಕು. ನೀರು ಬಂದಾಗ ಅವರೇ ಬಿಡುತ್ತಾರೆ ಎಂದು ಹೇಳಲಾಗುವುದಿಲ್ಲ. ಅವರು ನೀರು ಬಾರದಂತೆ ವ್ಯವಸ್ಥೆ ಮಾಡಿಕೊಂಡಿರುತ್ತಾರೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೆರೆಗಳು ತುಂಬಿದ ತಕ್ಷಣ ಒತ್ತುವರಿ ತೆರವು ಮಾಡುತ್ತಾರೆ ಎಂದರು. ಆದರೆ ಆ ರೀತಿ ಕೆರೆಗಳು ತುಂಬಿದ ತಕ್ಷಣ ರೈತರು ಜಾಗ ಖಾಲಿ ಮಾಡುತ್ತಿಲ್ಲ. ಕೆರೆಯ ಏರಿಯನ್ನು ಒಡೆದು ನೀರು ಬಿಟ್ಟು ಆ ಜಮೀನು ಉಳಿಸಿಕೊಳ್ಳತಕ್ಕಂಥ ಪರಿಸ್ಥಿತಿ ಬಂದಿದೆ. ಮಾನ್ಯ ಸಣ್ಣ ನೀರಾವರಿ ಸಚಿವರು ಕೆರೆ ಎಂದರೆ ಕೆರೆ ಅಂಗಳ ಮಾತ್ರ ಎಂದು ತಿಳಿದುಕೊಂಡಿದ್ದಾರೆ. ಕೆರೆಗೆ ನೀರು ಬರತಕ್ಕಂಥ ಪೋಷಕ ನಾಲೆ ಕೂಡ ಮುಚ್ಚಿ ಹೋಗಿದೆ. ಪೋಷಕ ನಾಲೆ ಇಲ್ಲದೇ ಹೋದರೆ ಯಾವುದೇ ಕೆರೆಗೆ ನೀರು ಬರುವುದೇ ಇಲ್ಲ. ಕೆರೆ ಮತ್ತು ಕೆರೆಯ ಪೋಷಕ ನಾಲೆ ಎರಡನ್ನೂ ಕೂಡ ಸರ್ವೆ ಮಾಡಿಸಿ ವ್ಯವಸ್ಥಿತವಾಗಿ ಹೂಳೆತ್ತಿದರೆ ಮಾತ್ರ ಇವತ್ತು ಕೆರೆಗಳು ಉಳಿಯುತ್ತವೆ. ಈಗಾಗಲೇ ಕೆರೆಗಳು ಉಳಿಯದೇ ಇರತಕ್ಕಂಥ ಪರಿಸ್ಥಿತಿ ಬಂದಿದೆ. ಇದಕ್ಕಾಗಿ ನಿಮ್ಮ ಆಯವ್ಯಯದಲ್ಲಿ ಹಣವನ್ನು ಇಟ್ಟುಕೊಳ್ಳಿ ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಈ ಹಣದಿಂದ ಕೆರೆಯ ಪೋಷಕ ನಾಲೆ ಸರ್ವೆ

ಮತ್ತು ದುರಸ್ತಿ ಮಾಡುವುದಕ್ಕೆ ಇಂತಿಷ್ಟು ಹಣ ಎಂದು ನಿಗದಿಪಡಿಸಿಕೊಳ್ಳಿ ಎಂದು ನಾನು ಸಲಹೆ ಕೊಡುತ್ತಿದ್ದೇನೆ. ಕಳೆದ ಅಧಿವೇಶನದಲ್ಲಿ ಮಾನ್ಯ ಅರಣ್ಯ ಸಚಿವರು ಕೆರೆಯ ಅಂಗಳದಲ್ಲಿ ಮುಳ್ಳಿನ ಗಿಡಗಳು ಬೆಳೆಯುತ್ತಿವೆ ಎಂದು ಹೇಳಿದ್ದರು. ಈ ರೀತಿ ಬೆಳೆದಿರುವ ಮುಳ್ಳಿನ ಗಿಡಗಳನ್ನು ಯಾರೂ ಕೂಡ ಕಡಿಯುವುದಕ್ಕಾಗುವುದಿಲ್ಲ. ಯಾವ ಕೆರೆಯನ್ನು ನೋಡಿದರೂ ಕೂಡ ಮುಳ್ಳಿನ ಗಿಡಗಳೇ ತುಂಬಿವೆ. ಅಂತಹ ಗಿಡಗಳನ್ನು ತೆಗೆಸಿ ಹಾಕಲಿಕ್ಕೆ, ಕೆರೆಯನ್ನು ಸರ್ವೆ ಮಾಡಿಸಲಿಕ್ಕೆ ಮತ್ತು ಪೋಷಕ ನಾಲೆಯನ್ನು ಸರ್ವೆ ಮಾಡಿಸಲಿಕ್ಕೆ ನೀವು ಈ ಆಯವ್ಯಯದಲ್ಲಿ ಹಣವನ್ನು ಇಟ್ಟುಕೊಳ್ಳಲೇ ಬೇಕಾಗುತ್ತದೆ. ಇಲ್ಲದಿದ್ದಲ್ಲಿ ನಾವು ಮುಂದಿನ ದಿನಗಳಲ್ಲಿ ಹಿಂದೆ ಕೆರೆಗಳು ಇದ್ದವು ಎನ್ನುವಂತಹ ಕಲ್ಪನೆಯನ್ನೂ ಕೂಡ ಮರೆಯಬೇಕಾದಂತಹ ಸಂದರ್ಭ ಬಂದೊದಗಬಹುದು.

ಶ್ರೀ ಎಸ್. ಕುಮಾರ್ ಬಂಗಾರಪ್ಪ:— ಮಾನ್ಯ ಅಧ್ಯಕ್ಷರೇ, ನಾವು ಈಗ ಕೇವಲ ಕೆರೆಗಳ ಹೂಳೆತ್ತಬೇಕು ಎನ್ನುವಂತಹ ಕಾರ್ಯಕ್ರಮವನ್ನು ಮಾತ್ರ ಹಾಕಿಕೊಂಡಿಲ್ಲ. ಒಂದು ಕೆರೆಗೆ ನಿರ್ದಿಷ್ಟವಾದ ಮೊತ್ತವೊಂದನ್ನು ಕೊಟ್ಟು ಅದರಿಂದ ನೀವೇನಾದರೂ ಸಹ ಮಾಡಿಕೊಳ್ಳಿ ಎಂದು ನಾವು ಮಾಡಿಲ್ಲ. ಕ್ಯಾಚ್‌ಮೆಂಟ್ ಏರಿಯಾಕ್ಕೆಂದು ಸ್ವಲ್ಪ ದುಡ್ಡು ನಿಗದಿ ಮಾಡಿದ್ದೇವೆ. ಅಚ್ಚುಕಟ್ಟುದಾರರಿಗೆ ಕಾಲುವೆಗಳನ್ನು ನಿರ್ಮಿಸುವ ಸಲುವಾಗಿ ಇಷ್ಟು ದುಡ್ಡು ಎಂದು ನಿಗದಿ ಮಾಡಿದ್ದೇವೆ. ತೂಬು, ಕೋಡಿ, ಏರಿ ಇದೆಲ್ಲಕ್ಕೂ ಮತ್ತು ಹೂಳು ತೆಗೆಯುವುದಕ್ಕೂ ಕೂಡ ಪ್ರತ್ಯೇಕ ಪ್ರತ್ಯೇಕವಾಗಿ ಹಣ ನಿಗದಿಪಡಿಸಿದ್ದೇವೆ. ಮಳೆ ಬರತಕ್ಕಂಥ ಕಾಲದಲ್ಲಿ ಈ ದುಡ್ಡನ್ನು ಬಳಸುವುದಿಲ್ಲ. ಕ್ಯಾಚ್‌ಮೆಂಟ್ ಏರಿಯಾಗೆ ಮತ್ತು ಅಚ್ಚುಕಟ್ಟು ಏರಿಯಾಕ್ಕೆ ಮೀಸಲಿಟ್ಟ ಹಣವನ್ನು ಮೊದಲು ಬಳಸುತ್ತೇವೆ. ನಂತರ ಕೆರೆ ಒಣಗಿದ್ದರೆ, ಅದು ಹೂಳು ತೆಗೆಯುವುದಕ್ಕೆ ಸೂಕ್ತವಾಗಿದ್ದರೆ, ರೈತರ ಸಹಕಾರ ಸಿಕ್ಕರೆ ನಾವು ಹೂಳೆತ್ತುವ ಕೆಲಸ ಮಾಡುತ್ತೇವೆ. ಸಧ್ಯಕ್ಕಂತೂ ರೈತರ ಸಹಯೋಗ ಸಿಗಲು ಸಾಧ್ಯವಿಲ್ಲದಿರುವುದರಿಂದ ನಾವೇ ಆ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಈಗೇನು ಸಲಹೆಯನ್ನು ಕೊಟ್ಟರೋ ಆ ನಿಟ್ಟಿನಲ್ಲಿ ನಾವು ಈಗಾಗಲೇ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಅದೇ ರೀತಿಯಲ್ಲಿ ಕೆರೆ ಅಂಗಳ ಮತ್ತು ಕೆರೆ ಏರಿಯಲ್ಲಿ ಬೆಳೆದಿರತಕ್ಕಂಥ ಗಣೇಶನ ಗಿಡ ಅಥವಾ ಬಳ್ಳಾರಿ ಜಾಲಿ ಎಂಬ ಮುಳ್ಳು ಗಿಡಗಳನ್ನು ತೆಗೆಯಲೂ ಸಹ ಕಾರ್ಯಕ್ರಮ ಹಾಕಿಕೊಂಡು ಸಮಗ್ರವಾಗಿ ಒಂದು ಕೆರೆಯ ಅಭಿವೃದ್ಧಿ ಮಾಡುವಂತಹ ದಿಸೆಯಲ್ಲಿ ನಾವು ಸಾಗಿದ್ದೇವೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್:— ಎಲ್ಲಾ ಪ್ರಸ್ತಾವನೆಗಳೂ ಕೂಡ ವಿಧಾನಸೌಧದ ಫೈಲ್‌ನಲ್ಲೇ ಇರುತ್ತವೆ. ಅವು ನಮ್ಮ ಕೆರೆಗಳ ಬಳಿಗೆ ಬಂದೇ ಇಲ್ಲ. ಇದೇ ನಮಗೆ ಸಮಸ್ಯೆ ಇಂದು ಮಾಡಿದೆ. ಮಾನ್ಯ ಸಚಿವರು ಹೇಳಿದ ಕಾರ್ಯಕ್ರಮಗಳೆಲ್ಲವೂ ನಮ್ಮ ಕೆರೆಯಲ್ಲಿ ಅನುಷ್ಠಾನಗೊಂಡರೆ ನಾವು ಈ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸತಕ್ಕಂಥ ಕೆಲಸವನ್ನು ಮಾಡಬಹುದು. ಮಾನ್ಯ ಪಾಟೀಲರು ಆಗಲೇ ಮಾತನಾಡುತ್ತಾ ಮುಜರಾಯಿ

ಇಲಾಖೆ ಬಗ್ಗೆ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದರು. ನಾನು ಕೂಡ ಆ ಇಲಾಖೆಯ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ನಮ್ಮ ಮುಜರಾಯಿ ಮಂತ್ರಿಗಳು ಚಿಕ್ಕಮಗಳೂರು ಜಿಲ್ಲೆ ಎಂದರೆ ಕೇವಲ ತರೀಕೆರೆ ಕ್ಷೇತ್ರ ಮಾತ್ರ ಎಂದು ತಿಳಿದುಕೊಂಡಿದ್ದಾರೆ. ಏಕೆ ಹೀಗೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ 16 ದೇವಸ್ಥಾನಗಳ ರಿಪೇರಿಗೆಂದು ಹಣವನ್ನು ಬಿಡುಗಡೆ ಮಾಡಿದ್ದಾರೆ. ತರೀಕೆರೆ ಕ್ಷೇತ್ರ ಬಿಟ್ಟು ಉಳಿದ ಕ್ಷೇತ್ರಗಳ ಒಂದೇ ಒಂದು ದೇವಸ್ಥಾನಕ್ಕೂ ಸಹ ಹಣವನ್ನು ಬಿಡುಗಡೆ ಮಾಡಿಲ್ಲ. ಎಲ್ಲಾ 16 ದೇವಸ್ಥಾನಗಳೂ ಕೂಡ ತರೀಕೆರೆ ಕ್ಷೇತ್ರದಲ್ಲೇ ಇವೆ. ಈ ರೀತಿಯಾಗಿ ತಾರತಮ್ಯ ಮಾಡಿದರೆ ನಾವು ಯಾವ ರೀತಿಯಲ್ಲಿ ನಮ್ಮ ಕ್ಷೇತ್ರದಲ್ಲಿ ಕೆಲಸ ಮಾಡಬೇಕು. ಬೇರೆ ಯಾವ ಕ್ಷೇತ್ರದ ದೇವಸ್ಥಾನಕ್ಕೂ ಹಣ ಬಿಡುಗಡೆ ಮಾಡಿಲ್ಲ. ಈ ತರೀಕೆರೆ ಕ್ಷೇತ್ರದ 16 ದೇವಸ್ಥಾನಗಳಿಗೆ ಒಟ್ಟಾರೆಯಾಗಿ 3 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಹೀಗಾದರೆ ಉಳಿದ ಕ್ಷೇತ್ರಗಳ ಮುಜರಾಯಿ ದೇವಸ್ಥಾನಗಳು ಹೇಗೆ ರಿಪೇರಿಯಾಗುತ್ತವೆ. ಮಾನ್ಯ ಅಧ್ಯಕ್ಷರಿಗೆ ಈ ರೀತಿ ಹಣ ಬಿಡುಗಡೆ ಮಾಡಿರತಕ್ಕದ್ದು ಸಮಂಜಸ ಎಂದು ಕಂಡುಬಂದರೆ ನಾನು ಸುಮ್ಮನಾಗುತ್ತೇನೆ. ಈ ರೀತಿ ತಾರತಮ್ಯ ಮಾಡತಕ್ಕಂಥದ್ದನ್ನು ಮುಜರಾಯಿ ಸಚಿವರು ದಯಮಾಡಿ ನಿಲ್ಲಿಸಬೇಕಾಗುತ್ತದೆ. ಇದಕ್ಕೆ ತಾವು ಒಂದು ಆದೇಶವನ್ನು ಮಾಡಬೇಕಾಗುತ್ತದೆ. ಎಲ್‌ಓಸಿ ಬಿಡುಗಡೆ ಮಾಡುವುದರ ಬಗ್ಗೆ ಒಂದು ಡಾಕ್ಯುಮೆಂಟ್ ಇದೆ. ಎಲ್‌ಓಸಿ ಬಿಡುಗಡೆ ಮಾಡುವಾಗ ಹೆಡ್ ಆಫ್ ಅಕೌಂಟ್ ನಂಬರ್ 30-54 ಆಗಿರಬಹುದು 50-54 ಆಗಿರಬಹುದು, ಯಾವ ಕಾಮಗಾರಿಯನ್ನು ಮಾಡಿರುತ್ತಾರೆ, ಆ ಕಾಮಗಾರಿಗೆ ಪ್ರೈಯಾರಿಟಿ ಬೇಸಿಸ್‌ನಲ್ಲಿ ಬಿಡುಗಡೆ ಮಾಡಿ ಹಣ ಕೊಡುತ್ತಾರೆಂದು ನಾನು ಭಾವಿಸಿದ್ದೇನೆ. ನಿನ್ನೆ ಮೊನ್ನೆಯಿಂದ ಕಂಟ್ರಾಕ್ಟರ್ಸ್ ಶಾಸಕರ ಭವನದ ಸುತ್ತ ಸುತ್ತುತ್ತಿದ್ದಾರೆ. ನೀವು ಒಂದು ಪತ್ರ ಕೊಟ್ಟರೆ ನಮಗೆ ಎಲ್‌ಓಸಿ ರಿಲೀಸ್ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ನಾನು ನೀವು ಕಾಮಗಾರಿ ಮಾಡಿದ್ದೀರಿ, ನಿಮಗೆ ಹಣ ಬಿಡುಗಡೆ ಮಾಡುತ್ತಾರೆ ಹೋಗಿ ಎಂದು ಹೇಳಿದೆ. ಟ್ರಾನ್ಸ್‌ಪರನ್ಸಿ ಆ್ಯಕ್ಟ್ ಬಹಳ ಚೆನ್ನಾಗಿ ಮಾಡಿದ್ದೀರಿ. 1991ನೇ ಇಸವಿಯಿಂದ ಚೀಫ್ ಇಂಜಿನಿಯರ್ ಆಫೀಸ್‌ನಲ್ಲಿ ಒಬ್ಬ ಅಕೌಂಟ್ಸ್ ಆಫೀಸರ್ ಇದ್ದಾರೆ. ಮೂರು ಪರ್ಸೆಂಟ್ ಹಣ ಕೊಡಬೇಕು, ಮೂರು ಪರ್ಸೆಂಟ್ ಹಣ ಕೊಟ್ಟರೆ ಅವರು ರಿಲೀಸ್ ಮಾಡುವುದಿಲ್ಲ, ಅದರ ಜೊತೆಯಲ್ಲಿ ಒಂದು ಎಮ್‌ಎಲ್‌ಎ ಲೆಟರ್ ಕೊಟ್ಟರೆ ಹಣ ರಿಲೀಸ್ ಮಾಡುತ್ತಾರೆ. ಒಂದು ಕಡೆ ಮೈನರ್ ಇರೀಗೇಷನ್ ಡಿವಿಷನ್ ಹಾಸನ, ಇವರು Details of LOC released - Letter - Sl. No. Name of the Contractor, Recommended by whom: MLA or Minor Irrigation Minister ಎಂದು ಬರೆಯುತ್ತಾರೆ. ನಾನ್ ಪ್ಲಾನ್ ಎಷ್ಟು, ಯಾವ ಯಾವ ಹೆಡ್‌ನಲ್ಲಿ ಎಷ್ಟು ಬಿಡುಗಡೆ ಮಾಡಿದ್ದಾರೆ, ಟೋಟಲ್ ಎಷ್ಟು, ಎಂದು ಬಹಳ ಟ್ರಾನ್ಸ್‌ಪರೆಂಟ್ ಆಗಿ ಅವ್ಯವಹಾರ ಮಾಡಿದ್ದನ್ನು ನಾನು ಇದೇ ಮೊದಲು

ನೋಡುತ್ತಿರುವುದು. ಯಾವ ಎಮ್‌ಎಲ್‌ಎಗಳು ರಿಕಮೆಂಡ್ ಮಾಡಿದ್ದಾರೆ, ಯಾವ ಯಾವ ಮಂತ್ರಿಗಳು ರಿಕಮೆಂಡ್ ಮಾಡಿದ್ದಾರೆ, ಯಾವ ಯಾವ ಕಂಟ್ರಾಕ್ಟರ್‌ಗೆ ಹಣ ರಿಲೀಸ್ ಮಾಡಿದ್ದಾರೆ, ಎಂಬುದನ್ನು ನೋಡಿದರೆ ಈ ಕಂಟ್ರಾಕ್ಟರ್‌ಗಳು ಕೆಲಸ ಮಾಡಿರುವುದು ಎರಡು ತಿಂಗಳ ಹಿಂದೆ ಎಂಬುದು ಗೊತ್ತಾಗುತ್ತದೆ. ಆದರೆ ಎರಡು ವರ್ಷಗಳ ಹಿಂದೆ ಕೆಲಸ ಮಾಡಿದ ಕಂಟ್ರಾಕ್ಟರ್ ಹಣ ರಿಲೀಸ್ ಆಗಿಲ್ಲ. ಯಾರು ನಿಯತ್ತಾಗಿ ಅಲ್ಲಿ ಕಂಟ್ರಾಕ್ಟ್ ಕೆಲಸ ಮಾಡಿದ್ದಾರೆ ಅವರಿಗೆ ಹಣ ಇಲ್ಲ. ಯಾರು ಲಕ್ಷ ರೂಪಾಯಿಗೆ ಐದು ಸಾವಿರ ರೂಪಾಯಿ ಖರ್ಚು ಮಾಡಿಕೊಂಡು ಬಂದಿದ್ದಾನೆ ಅವನಿಗೆ ಹಣ ರಿಲೀಸ್ ಆಗುತ್ತಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಮಂಗಳೂರಿನಲ್ಲಿ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗೆ ಹೊಡೆಯುವುದಕ್ಕೆ ಹೋಗಿದ್ದಾರೆ. ಹಳೆಯ ಬಾಕಿ ಯಾವುದೇ ಇದೆ ಅದನ್ನು ಇದುವರೆಗೂ ಕೊಟ್ಟಿಲ್ಲ. ಯಾರು ಬೆಂಗಳೂರಿಗೆ ಬಂದು ಹಣದ ವ್ಯವಸ್ಥೆ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ ಅವರಿಗೆ ಹಣ ಹೋಗುತ್ತಿಲ್ಲ. ಹಳೆಯ ಬಾಕಿ ಎಷ್ಟು, ಎಷ್ಟು ಬಾಕಿ ಇದೆ, ಹೊಸಬರಿಗೆ ಎಷ್ಟು ಸಿಕ್ಕಿದೆ ಅದರ ವರದಿಯನ್ನು ಸದನದಲ್ಲಿ ಮಂಡಿಸಬೇಕಾಗುತ್ತದೆ. ಆಗ ಪರಿಸ್ಥಿತಿ ಏನಾಗಿದೆ ಎಂಬುದು ಗೊತ್ತಾಗುತ್ತದೆ. ಎಲ್‌ಓಸಿ ಹಣ ಏಕೆ ಬಂದಿಲ್ಲವೆಂದರೆ ನಮ್ಮನ್ನು ಬಂದು ಕಂಡಿಲ್ಲವೆಂದು ಹೇಳುತ್ತಾರೆ. ಕಂಡಿಲ್ಲವೆಂದರೆ ಏನು ಅರ್ಥ? ಅವರು ಮಾಡಿದ ಕೆಲಸಕ್ಕೆ ಹಣ ಸಿಗಬೇಕಾದರೆ ಅವರು ಯಾರ್‍ಯಾರಿಗೆ, ಎಲ್ಲೆಲ್ಲಿ ಕಾಣಬೇಕು ಪಟ್ಟಿ ಕೊಟ್ಟಿದ್ದೀರಾ? ಪಟ್ಟಿ ಕೊಟ್ಟಿದ್ದರೆ ಅದೇ ರೀತಿಯಲ್ಲಿ ಕಾಣುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇಲ್ಲದಿದ್ದರೆ ನಮ್ಮ ಹತ್ತಿರ ಏಕೆ ಪತ್ರ ತೆಗೆದುಕೊಂಡು ಬರುತ್ತಿದ್ದರು?

ಶ್ರೀ ಕೆ.ಬಿ. ಮಲ್ಲಿಕಾರ್ಜುನ :— ಇದನ್ನು ನಾನು ತಮಗೆ ಕಳುಹಿಸುತ್ತೇನೆ. ಇದನ್ನು ತಾವು ಸರ್ಕಾರಕ್ಕೆ ಕಳುಹಿಸಿ ಇದರ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಯಾರು ಯಾವ ಕಾಮಗಾರಿ ಯಾವ ವರ್ಷ ಮಾಡಿದ್ದಾರೆ, ಯಾವ ಡೇಟ್‌ನಲ್ಲಿ ಮಾಡಿದ್ದಾರೆ, ಯಾವ ಡೇಟ್‌ನಲ್ಲಿ ಮುಗಿಸಿದ್ದಾರೆ. ಅವರಿಗೆ ಅಮೌಂಟ್ ರಿಲೀಸ್ ಮಾಡಬೇಕು. ಬೆಂಗಳೂರುನಲ್ಲಿ ಕಂಟ್ರಾಕ್ಟರ್ ಯಾರೂ ಒಬ್ಬೊಬ್ಬರು ಬರುವುದಿಲ್ಲ, ಮೂರು ಮೂರು ಜನ ಸೇರಿಕೊಂಡು ಬರುತ್ತಾರೆ.

ಶ್ರೀ ಡಿ.ಕೆ. ಶಿವಕುಮಾರ್ :— ತಾವು ಮೂರು ಪರ್ಸೆಂಟ್ ಕೊಟ್ಟರೆ ಎಲ್‌ಓಸಿ ಕೊಡುತ್ತಾರೆಂದು ಹೇಳುತ್ತಿದ್ದೀರಿ, ಯಾವುದಾದರೂ ನಿರ್ದಿಷ್ಟವಾದ ದಾಖಲೆ ಇದೆಯಾ?

ಶ್ರೀ ಡಿ.ವಿ. ಸದಾನಂದಗೌಡ :— ದುಡ್ಡು ಕೊಟ್ಟಿದ್ದು ದಾಖಲೆ ಇರುತ್ತದೆಯೇ?

(ಗೊಂದಲ)

F-710

ಶ್ರೀ ಡಿ.ಕೆ. ಶಿವಕುಮಾರ್:— ನೀವು ಹೇಗೆ ಆರೋಪ ಮಾಡುತ್ತೀರಿ? ನಮ್ಮ ಸರ್ಕಾರ ಟ್ರಾನ್ಸ್‌ಪರೆನ್ಸಿಯಿಂದ ಕೂಡಿದೆ. ನಾವು ಮಾಡಿದಷ್ಟು ನೀವು ಮಾಡಿ. ಶಾಸಕರು ಹೇಳಿದರೆ ಎಲ್‌ಓಸಿ ಇಶ್ಯೂ ಮಾಡುತ್ತಿದ್ದಾರೆಂದು ಹೇಳಿ, ಬೇರೆ ಏನಾದರೂ ಹೇಳಿ, ಮೂರು ಪರ್ಸೆಂಟ್ ಫಿಕ್ಸ್ ಮಾಡಿ ಮೂರು ಪರ್ಸೆಂಟ್ ತೆಗೆದುಕೊಂಡು ಎಲ್‌ಓಸಿ ಕೊಡುತ್ತಿದ್ದಾರೆ ಎಂದರೆ ಎಲ್ಲಿದೆ ಎಂದು ಹೇಳಿ?

ಅಧ್ಯಕ್ಷರು :— ಏನಾದರೂ ವಿಷಯ ಮಾತನಾಡಬೇಕಾದರೆ ಎವಿಡೆನ್ಸ್ ಇಟ್ಟುಕೊಂಡು ಮಾತನಾಡಬೇಕು. ಮೂರು ಪರ್ಸೆಂಟ್ ಎಲ್ಲಿಯಾದರೂ ಫಿಕ್ಸ್ ಮಾಡಿದ್ದಾರಾ?

ಶ್ರೀ ಡಿ.ಕೆ. ಶಿವಕುಮಾರ್:— ಮೂರು ಪರ್ಸೆಂಟ್ ಲಂಚ ತೆಗೆದುಕೊಂಡಿರುವ ಎವಿಡೆನ್ಸ್ ಕೊಡಿ.

ಅಧ್ಯಕ್ಷರು :— ಜನರಲ್ಲಾಗಿ ಎಮ್‌ಎಲ್‌ಎಗಳಿಗೆ ಕೊಟ್ಟಿರಬಹುದು. ಅಷ್ಟೇ ಹೊರತು ಪರ್ಸೆಂಟೇಜ್ ಫಿಕ್ಸ್ ಮಾಡುವುದಿಲ್ಲ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್:— ನಾವು ಸರ್ಕಾರ ಸರಿಯಾಗಿ ನಡೆಯಲಿ ಎನ್ನುವ ಉದ್ದೇಶದಿಂದ ಹೇಳುತ್ತಿದ್ದೇವೆಯೇ ಹೊರತು, ಸರ್ಕಾರವನ್ನು ಅವಹೇಳನ ಮಾಡುವ ಉದ್ದೇಶದಿಂದ ಮಾತನಾಡುತ್ತಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್:— ನೀವು ಸರ್ಕಾರದ ಮೇಲೆ ಆಪಾದನೆ ಮಾಡುತ್ತಿಲ್ಲ ಸಂತೋಷ. ಅಧಿಕಾರಿಗಳ ಮೇಲೆ ಆಪಾದನೆ ಮಾಡುತ್ತಿದ್ದೀರಿ. ನಿರ್ದಿಷ್ಟವಾಗಿ ಇಂತಹ ಅಧಿಕಾರಿ ಇಂತಹ ಕೆಲಸ ಮಾಡುತ್ತಿದ್ದಾರೆಂದು ಹೇಳಿ. Definitely we will come out.

ಶ್ರೀ ಬಿ. ಸೋಮಶೇಖರ್:— ಪಾರ್ಲಿಮೆಂಟ್‌ನಲ್ಲಾಗಲಿ, ವಿಧಾನಸಭೆಯಲ್ಲಾಗಲಿ ಶಾಸಕರು, ಲೋಕಸಭಾ ಸದಸ್ಯರೂ, they have every right to make allegations against the officials or anybody else and they are not expected to adduce evidence. It is the responsibility of the government to enquire about it. ಇದು ಅನೇಕ ಸಾರಿ ಚರ್ಚೆಯಾಗಿದೆ. ನಾವು ಫೋಟೋ ತೆಗೆದು, ಟೇಪ್ ರಿಕಾರ್ಡ್ ಮಾಡಿ ಕೊಡುವುದಕ್ಕಾಗುವುದಿಲ್ಲ, ಅಲ್ಲಿ ಸಾರ್ವಜನಿಕವಾಗಿ ಏನು ಆಪಾದನೆಗಳಿವೆ ಅವುಗಳನ್ನು ನೀವು ಎನ್‌ಕ್ವೈರಿ ಮಾಡಬೇಕು.

(ಗೊಂದಲ)

SRI D.K. SHIVAKUMAR :— We will enquire it.

ಅಧ್ಯಕ್ಷರು :— ಅವರು ಭಾಷಣ ಪ್ರಾರಂಭ ಮಾಡುವಾಗ ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ, ನೀವು ಯಾರ ಮೇಲೆ ಅಲಿಗೇಷನ್ ಮಾಡಬೇಕಾದರೂ ಮೊದಲು ಬರೆದು ಕಳುಹಿಸಬೇಕೆಂದು ಇದೆ. Shall I read it?

``Procedure regarding allegations against a person."

``No allegation of a defamatory or incriminatory nature shall be made by a member against any person unless the member has given previous intimation to the Speaker and also to the Minister so that the Minister may be able to make an investigation into the matter for the purpose of reply." ಈ ನಿಯಮದ ಪ್ರಕಾರ ತಾವು ನನಗೆ ಬರೆದು ಕಳುಹಿಸಿಲ್ಲ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ :— ಯಾರ್‍ಯಾರಿಗೆ ಇದು ಅಪ್ಲೈ ಆಗುತ್ತದೆ.

MR. SPEAKER :— Any member, not only a Minister. Any person who cannot defend. ಇಲ್ಲಿ ಕುಳಿತುಕೊಂಡು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಶಕ್ತಿ ಇರುವುದಿಲ್ಲವೋ ಅವರಿಗೂ ಕೂಡ ಇದು ಅಪ್ಲೈ ಆಗುತ್ತದೆ. ಒಟ್ಟಿನಲ್ಲಿ ರೂಲ್ಸ್ ಪ್ರಕಾರ ನೋಟೀಸ್ ಕೊಡಬೇಕು.

ಶ್ರೀ ಸಿ. ಚೆನ್ನಿಗಪ್ಪ :— ಮಾನ್ಯ ಅಧ್ಯಕ್ಷರೆ, ಯಾವುದೇ ವಿಚಾರದ ಬಗ್ಗೆ ವಿಚಾರಣೆ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ. ಆದುದರಿಂದ ಇದರ ಬಗ್ಗೆ ಕೂಡ ಸರ್ಕಾರ ವಿಚಾರಣೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :— ಅಲಿಗೇಷನ್ ಮಾಡಬಾರದು ಎಂದು ನಾನು ಹೇಳುತ್ತಿಲ್ಲ. ಅಲಿಗೇಷನ್ ಮಾಡುವ ಮುಂಚೆಯೇ ಅದರ ಬಗ್ಗೆ ನನಗೆ ಬರೆದು ಕಳುಹಿಸಬೇಕೆಂದು ಹೇಳುತ್ತಿದ್ದೇನೆ. ಏಕೆಂದರೆ ಈ ವಿಚಾರದ ಬಗ್ಗೆ ನಾನು ಸಂಬಂಧಪಟ್ಟ ಮಂತ್ರಿಗೆ ಉತ್ತರ ಹೇಳುವ ಸಲುವಾಗಿ ಕಳುಹಿಸಿಕೊಡಲು ಸಾಧ್ಯವಾಗುತ್ತದೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ್‌ರವರು ಯಾವುದೋ ಒಬ್ಬ ಆಫೀಸರ್ ಪರ್ಸೆಂಟೇಜ್ ತೆಗೆದುಕೊಳ್ಳುತ್ತಿದ್ದಾನೆ ಎಂದು ಹೇಳಿದ್ದಾರೆ. ಮಾನ್ಯ ಜಯಪ್ರಕಾಶ್ ಹೆಗ್ಡೆ ಮಾತನಾಡುತ್ತಾ ಬೆಂಗಳೂರಿಗೆ ಬಂದು ಇಲ್ಲಿ ಯಾರನ್ನೋ ನೋಡಬೇಕಾಗುತ್ತದೆ ಎಂದು ಹೇಳಿದ್ದಾರೆ. ಯಾರನ್ನು ನೋಡಿಹೋಗಬೇಕು? ನಿರ್ದಿಷ್ಟವಾಗಿ ಇಂಥವರನ್ನು ನೋಡಿಹೋಗಬೇಕಾಗುತ್ತದೆ ಎಂದು ನೀವು ಹೇಳಿ ನೋಡೋಣ. ಅದನ್ನು ಬಿಟ್ಟು ನೀವು ಬೆಂಗಳೂರಿನಲ್ಲಿ

ಯಾರ್ಯಾರನ್ನೋ ನೋಡಿಕೊಳ್ಳಬೇಕಾಗುತ್ತದೆ ಎಂದರೆ ಅವರು ಯಾರು ಎಂದು ಹೇಗೆ ತಿಳಿದುಕೊಳ್ಳುವುದು.

ಶ್ರೀ ಜಯಪ್ರಕಾಶ್ ಹೆಗಡೆ :— ನನಗೆ ಗುತ್ತಿಗೆದಾರರೇ ಬಂದು ಹೇಳಿದ್ದಾರೆ. ಅವರನ್ನೇ ಬೇಕಾದರೆ ನಿಮ್ಮ ಕಛೇರಿಗೆ ಕರೆದುಕೊಂಡು ಬರುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ :— ಛೇಂಬರ್‌ಗೆ ಕರೆದುಕೊಂಡು ಬರಬೇಕಾಗಿಲ್ಲ, ಇಲ್ಲಿ ಯರನ್ನೋ ನೋಡಬೇಕಾಗುತ್ತದೆ ಎಂದು ಹೇಳಿದಿರಲ್ಲಾ, ಅವರು ಯಾರು ಎಂಬುದನ್ನು ಹೇಳಿ.

ಶ್ರೀ ಜಯಪ್ರಕಾಶ್ ಹೆಗಡೆ :— ಅವರನ್ನು ಎಲ್ಲಿಗೆ ಕರೆದುಕೊಂಡು ಬರಬೇಕು ಎಂದು ಹೇಳಿ. ನಾನು ಅಲ್ಲಿಗೆ ಕರೆದುಕೊಂಡು ಬರುತ್ತೇನೆ. ನಾನು ನಿಮ್ಮ ವಿರುದ್ಧವಾಗಿ ಅಲಿಗೇಷನ್ ಮಾಡುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ, ನಾವೇ ಮಾಡಿದಂಥ ರೂಲ್ಸ್‌ಗಳೇನಿವೆ ಆ ಪ್ರಕಾರ ಪ್ರೊಸೀಜರ್‌ನ್ನು ನಾವುಗಳು ಫಾಲೋ ಮಾಡಬೇಕಾಗುತ್ತದೆ. ಆ ಪ್ರಕಾರ ರೂಲ್ 328 ರಲ್ಲಿ ಏನು ಹೇಳಲಾಗಿದೆಯೆಂದರೆ.

`` No allegation of a defamatory or incrimatory nature shall be made by a member against any person unless the member has given previous intimation to the Speaker and also to the Minister concerned so that the Minister may be able to make an investiagation into the matter for the purpose of reply" ಆದುದರಿಂದ ನೋಟೀಸ್ ಕೊಟ್ಟು ಇಂಥವರ ಮೇಲೆ ಅಲಿಗೇಷನ್ ಮಾಡುತ್ತೇವೆಂದು ಹೇಳಿದರೆ ಒಳ್ಳೆಯದು. ಇದು ಪ್ರೊಸೀಜರ್ ಕೂಡ ಆಗಿದೆ. ಅದನ್ನು ಬಿಟ್ಟು ನಾವೇ ಮಾಡಿದ ರೂಲ್ ಉಲ್ಲಂಘನೆ ಮಾಡಿದರೆ ಹೇಗೆ?

ಶ್ರೀ ಎಸ್.ಎಸ್ ಪಾಟೀಲ್ :— ಈಗ ಗೃಹ ಸಚಿವರಾಗಿರುವ ಮಾನ್ಯ ಖರ್ಗೆಯವರು ಹಿಂದೆ ವಿರೋಧ ಪಕ್ಷದ ನಾಯಕರಾಗಿ ಇಲ್ಲಿ ಕುಳಿತಿದ್ದಾಗ ಇಂಥ ಹಲವಾರು ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಆಗ ಅವರಿಗೆ ಅಧ್ಯಕ್ಷರು ಮಾತನಾಡುವುದಕ್ಕೆ ಅಲೋ ಮಾಡಿದ್ದಾರೆ. ನೀವು ಬೇಕಾದರೆ ರೆಕಾರ್ಡ ತೆಗೆಸಿ ನೋಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅಧ್ಯಕ್ಷರೆ, ಡಿಸ್ಕಷನ್ ಬಗ್ಗೆಯೂ ಕೂಡ ಏನು ಹೇಳಲಾಗಿದೆಯೆಂದರೆ,

``Provided that the Speaker, may at any time prohibit any member from making any such allegation if he is of opinion that such allegation is derogatopry to the dignity of the House or that no puiblic interest is served by making such allegation,"

ಆ ಪ್ರಕಾರ ನೀವು ಮೊದಲನೆಯದಕ್ಕಂತೂ ನೋಟೀಸ್ ಕೊಡಲೇಬೇಕು. ಇದರ ಬಗ್ಗೆ ಬರವಣಿಗೆಯಲ್ಲಿ ಕೊಡಬೇಕಲ್ಲದೆ ಮಂತ್ರಿಗಳಿಗೂ ಕೂಡ ಇನ್‌ಫಾರ್ಮ್ ಮಾಡಬೇಕಾಗುತ್ತದೆ. ಯಾವ ವ್ಯಕ್ತಿ ವಿರುದ್ಧವಾಗಿ ತಾವು ಮಾತನಾಡುತ್ತೀರಿ ಎಂಬ ಬಗ್ಗೆ ಕೂಡ ಹೇಳಬೇಕಾಗುತ್ತದೆ. ಇದನ್ನು ಬಿಟ್ಟು ನೀವು ಹಿಂದೆ ಈ ರೀತಿ ಹಲವು ಬಾರಿ ಮಾತನಾಡಿದ್ದೀರಿ ಎಂದು ನನಗೆ ಹೇಳಿದರೆ; ಆಗ ಅಧ್ಯಕ್ಷರು ರೂಲ್ಸ್‌ನಲ್ಲಿ ಪ್ರಾವಿಷನ್ ಇದ್ದರೆ ಆ ಪ್ರಕಾರ ಅವಕಾಶ ಮಾಡಿಕೊಟ್ಟಿರಬಹುದೇ ಹೊರತಾಗಿ ರೂಲ್ಸ್ ವಯೋಲೇಟ್ ಮಾಡಿ ಹೌಸ್ ನಡೆದಿಲ್ಲ. ಆ ರೀತಿ ರೂಲ್ಸ್ ವಯೊಲೇಟ್ ಮಾಡಿ ಹೌಸ್ ನಡೆಯುತ್ತಿತ್ತೇ? ಇದು ನನ ಪಾಯಿಂಟ್ ಆಫ್ ಆರ್ಡರ್.

ಶ್ರೀ ಬಿ. ಸೋಮಶೇಖರ್:— ಮಾನ್ಯ ಅಧ್ಯಕ್ಷರೆ,

"328. No allegation of a defamatory or incrimitory nature shall be made by a member against any person unless the member has given previous intimation to the Speaker and also the Minister concerned so that the Minister may be able to make an investigation into the matter for the purpose of reply"

ನಮ್ಮ ಸದಸ್ಯರು ಯಾವುದೇ ವ್ಯಕ್ತಿಯ ಹೆಸರು ಹೇಳಿ ಅವರ ಮೇಲೆ ಆಪಾದನೆ ಮಾಡುತ್ತೇನೆಂದು ಹೇಳಿಲ್ಲ. ಅವರು ಹೇಳಿರುವುದೇನೆಂದರೆ ಸಣ್ಣ ನೀರಾವರಿ ಇಲಾಖೆಯ ಮುಖ್ಯ ಅಭಿಯಂತರ ಕಛೇರಿಯಲ್ಲಿ ಮೂರು ಪರ್ಸೆಂಟ್ ಅಕೌಂಟ್ಸ್ ಆಫೀಸರ್ ತೆಗೆದುಕೊಳ್ಳುವ ಬಗ್ಗೆ ಹೇಳಿದ್ದಾರೆ. ಒಟ್ಟಾರೆ ಆ ಕಛೇರಿಯ ಬಗ್ಗೆ ಹೇಳಿದ್ದಾರೆ. ಇಲ್ಲಿ ವ್ಯಕ್ತಿ ಎಂದು ಹೆಸರು ತಿಳಿಸಿ ಅವರ ಮೇಲೆ ಆಪಾದನೆ ಮಾಡುತ್ತೇನೆಂದು ಹೇಳಿಯೇ ಇಲ್ಲ. ಇಲ್ಲಿ ಅವರು ಕಛೇರಿಯ ವಿರುದ್ಧವಾಗಿ ಅಲಿಗೇಷನ್ ಮಾಡಿದ್ದಾರೆ. ಇನ್ನು ಎರಡನೆಯದಾಗಿ ತಾವೇನು ಹೇಳಿದಿರೆಂದರೆ.....

``Provided that the Speaker, may at any time prohibit any member from making any such allegation if he is of opinion that such allegation is derogatory to the dignity of the House or that no public interest if served by making such allegation."

ಈ ಸದನದಲ್ಲಿ ಭ್ರಷ್ಟಾಚಾರ ವಿರುದ್ಧವಾಗಿ ಮಾತನಾಡಿದರೆ, is it against the interest of the public? If it lowers the dignity of the House and if it is against the interest of the public, that allegation cannot be made. You cannot give the permission. Whereas in this case, he is making an allegation to purify the adminitration briging corruption to light. Is it against the public interest? ಆದುದರಿಂದ ಮಾನ್ಯ ಗೃಹ ಸಚಿವರು ಹೇಳಿದ ಹಾಗೆ ಆ ಎರಡೂ ವಿಚಾರಗಳು ಇಲ್ಲಿ ಅಷ್ಟೆ ಆಗುವುದಿಲ್ಲ. ಏಕೆಂದರೆ ಮಾನ್ಯ ಸದಸ್ಯರು ಕಛೇರಿಯ ವಿರುದ್ಧವಾಗಿ ಆಪಾದನೆ ಮಾಡಿರುವುದೇ ಇದಕ್ಕೆ ಕಾರಣವಾಗಿದೆ ಎಂಬುದನ್ನು ಹೇಳಬಯಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಹಿತಾಸಕ್ತಿಗೆ ಪೂರಕವಾಗಿಲ್ಲದ ವಿಷಯವಾಗಿದ್ದರೆ ಮಾತ್ರ ಅಂಥ ವಿಚಾರದ ಬಗ್ಗೆ ಮಾತನಾಡಲು ತಮ್ಮ ಅನುಮತಿ ಪಡೆಯಲು ಮೊದಲು ನೋಟೀಸ್ ಕೊಡಬೇಕಾಗುತ್ತದೆ. ಆದರೆ ಸಾರ್ವಜನಿಕ ಹಿತಾಸಕ್ತಿ ವಿಷಯಕ್ಕೆ ಪೂರಕವಾಗಿದ್ದರೆ ರೂಲ್ 328ರ ಪ್ರಕಾರ ನೋಟೀಸ್ ಕೊಡುವ ಅಗತ್ಯ ಬರುವುದಿಲ್ಲ. ಮಾನ್ಯ ಸದಸ್ಯರು ಈಗ ಏನು ಹೇಳಿದ್ದಾರೆ ಅದು ಒಬ್ಬ ವ್ಯಕ್ತಿಯ ವಿರುದ್ಧವಾಗಿ ಮಾಡಿದ ಆಪಾದನೆಯಲ್ಲ. ಆಡಳಿತದಲ್ಲಿ ಈ ರೀತಿಯಾಗುತ್ತಿದೆ ಎಂಬ ಬಗ್ಗೆ ಹೇಳಿದ್ದಾರೆ. ಆದುದರಿಂದ ತಾವು ಇದನ್ನು ಗಮನಿಸಿಕೊಂಡು ರೂಲಿಂಗ್ ಕೊಡಬೇಕು. ಏಕೆಂದರೆ ಇಂಥ ಪ್ರಕರಣ ಮುಂದಿನ ದಿನಗಳಲ್ಲಿ ಚರ್ಚೆಗೆ ಬರಬಹುದು. ಒಂದು ವೇಳೆ ಇದಕ್ಕೆ ಸಮರ್ಪಕವಾದ ರೂಲಿಂಗ್ ಸಿಕ್ಕದಿದ್ದರೆ ಈ ಸದನದಲ್ಲಿ ಯಾವುದೇ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಈ ಸರ್ಕಾರ ಏನು ಮಾಡಿದರೂ ಕೂಡ ನಾವು ಕಣ್ಣು ಮುಚ್ಚಿಕೊಂಡು ಕೈಕಟ್ಟಿಕೊಂಡು ಸುಮ್ಮನೆ ಕೂರಬೇಕಾದ ಪರಿಸ್ಥಿತಿ ಬರುತ್ತದೆ. ಆದುದರಿಂದ ಮಾನ್ಯ ಅಧ್ಯಕ್ಷರು ರೂಲಿಂಗ್‌ನ್ನು ಎರಡು ವಿಚಾರಗಳ ಬಗ್ಗೆ ಕೊಡಬೇಕು. ಒಂದನೆಯದಾಗಿ, ಯಾವುದೇ ಕಛೇರಿಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ಮಾತನಾಡಲು ನಾವು ನೋಟೀಸ್ ಕೊಡಬೇಕೆ? ಎರಡನೆಯದಾಗಿ, ಸಾರ್ವಜನಿಕ ಹಿತಾಸಕ್ತಿಗೆ ಪೂರಕವಾದ ವಿಚಾರಗಳನ್ನು ಈ ಸದನದಲ್ಲಿ ಮಾತನಾಡಲು ಮೊದಲೇ ನೋಟೀಸ್ ಕೊಡಬೇಕೆ? ಎನ್ನುವ ಎರಡು ವಿಚಾರಗಳಿಗೆ ತಾವು ರೂಲಿಂಗ್ ಕೊಡಬೇಕು. ಆ ರೂಲಿಂಗ್ ಮುಂದಿನ ದಿನಗಳಲ್ಲಿ ಸದನದ ಎಲ್ಲ ಸದಸ್ಯರಿಗೆ ಅದು ಅನುಕೂಲವಾಗುತ್ತದೆ.

ಅಧ್ಯಕ್ಷರು :— ರೂಲಿಂಗ್ ಇಲ್ಲೇ ಇದೆ. ಇವೊತ್ತ್ತೆ ರೂಲಿಂಗ್ ಕೊಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರತಿಪಕ್ಷದ ನಾಯಕರಾಗಿ ಹಾಗೂ ಜಯಚಂದ್ರರವರು ಉಪನಾಯಕರಾಗಿ

ಇಲ್ಲಿಯೇ ಹಿಂದೆ ಕುಳಿತಿದ್ದರು. ಇಲ್ಲಿಯೇ ನಿಂತು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿ ಹಿಂದೆ ಮಾತನಾಡಿದ್ದಾರೆ. ಆದರೆ ಇಂದು ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುವುದು ಹೇಗಿದೆಯೆಂದರೆ, ನಾನು ಮಾಡಿದ ಹಾಗೆ ಮಾಡಬೇಡ, ನಾನು ಹೇಳಿದ ಹಾಗೆ ಕೇಳು ಎನ್ನುವ ಹಾಗಿದೆ. ಈ ರೀತಿಯ ಒಂದು ಹೊಸ ನೀತಿಯನ್ನು ಹೇಳುತ್ತಿದ್ದಾರೆ. ಈ ಸದನ ರಾಜ್ಯದ ಪರಮೋಚ್ಛ ವೇದಿಕೆ. ಇಲ್ಲಿ ನಾವು ಕುಳಿತು ರಾಜ್ಯದ ಪ್ರಗತಿ ಬಗ್ಗೆ, ರಾಜ್ಯದ ಬೆಳವಣಿಗೆ ಬಗ್ಗೆ ಹಾಗೂ ಪ್ರಗತಿಯಲ್ಲಿ ಪೂರಕವಾಗಿರುವ

11.40 ಎ.ಎಂ.

ವಿಷಯಗಳ ಬಗ್ಗೆ ಮಾತನಾಡುತ್ತೇವೆ. ಮಾತನಾಡುವಾಗ ಈ ಅಹಿತ ಬೆಳವಣಿಗೆಗಳು ಏನಿವೆ ಅದಕ್ಕೆ ಇತಿಶ್ರೀ ಹಾಡುವುದಕ್ಕೆ ತಾವು ವೇದಿಕೆಯನ್ನು ಉಪಯೋಗಿಸಿಕೊಳ್ಳಬೇಕು. ಈಗ ಅವರು ಒಂದು ಫಾರಂ ಅನ್ನು ತೋರಿಸುತ್ತಿದ್ದಾರೆ. ಮಾನ್ಯ ಸೋಮಶೇಖರ್ ಅವರು ಯಾವುದೇ ವ್ಯಕ್ತಿಯ ಹೆಸರನ್ನು ಹೇಳುತ್ತಿಲ್ಲ. ಆದರೆ ಅದು ಪಿಡುಗಾಗಿದೆ. ಆ ಪಿಡುಗನ್ನು ಎತ್ತಿ ತೋರಿಸುವುದಕ್ಕೋಸ್ಕರ ಆ ಡಾಕ್ಯುಮೆಂಟ್‌ನ್ನು ಅವರು ಉಪಯೋಗಿಸಿಕೊಳ್ಳುತ್ತಿದ್ದಾರೆ. ಅವರು ಯಾವುದೇ ವ್ಯಕ್ತಿಯ ಹೆಸರನ್ನು ಹೇಳುತ್ತಿಲ್ಲ. ಇಂತಹ ಸಂದರ್ಭದಲ್ಲಿ ಹಿರಿಯ ಸಚಿವರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಯಾರು ಕಳೆದ ಮೂರು ದಶಕಗಳಿಂದ ಇಲ್ಲಿ ಸದಸ್ಯರಾಗಿದ್ದಾರೆ ಅವರು ಇದನ್ನು ಸ್ವಾಗತ ಮಾಡಬೇಕು. ಅವರೇನು ಇಲ್ಲಿ ಬೆಳಕು ಚೆಲ್ಲುತ್ತಿದ್ದಾರೆ, ಅದನ್ನು ನೀವು ಸ್ವಾಗತಿಸಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ, ಯಾರು ಅಕ್ರಮ ಮಾಡಿದ್ದಾರೆ ಅವರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ ಅದನ್ನು ಸ್ವಾಗತಿಸಬೇಕು. ಆದರೆ ಅದನ್ನು ಬಿಟ್ಟು just to shield some corrupt officers, some corrupt practices, you cannot take shelter under this Rule book, we have to come to a decision that you are condoming it. ಎಂದು ಒಂದು ನಿರ್ಧಾರಕ್ಕೆ ನಾವು ಬರಬೇಕಾಗುತ್ತದೆ. ದಯವಿಟ್ಟು ಈ ರೂಲ್ಸ್ ಅಡಿಯಲ್ಲಿ ಯಾವಾಗ ಈ ರೂಲ್ಸ್ ಸಹಕಾರವನ್ನು ನಾವು ತೆಗೆದುಕೊಳ್ಳಬೇಕು ಆಗ ತೆಗೆದುಕೊಳ್ಳಬೇಕೇ ಹೊರತು, ಅದು ನಮ್ಮ ಅನುಕೂಲ ಸಿಂಧು ನೀತಿಯಾಗಬಾರದು. ಇಲ್ಲಿ ಇದ್ದಾಗ ರೂಲ್ ಬುಕ್ ನೋಡುವುದಿಲ್ಲ, ಅಲ್ಲಿ ಹೋದಮೇಲೆ ರೂಲ್ ಬುಕ್ ನೋಡುತ್ತೇನೆ ಎನ್ನುವ ವಿಚಾರ ಅದು ಆಗಬಾರದು. ನಾವೆಲ್ಲರೂ ಸೇರಿಕೊಂಡು ಈ ಒಂದು ಪಿಡಿಗು ಏನಿದೆ ಅದನ್ನು ತೊಡೆದು ಹಾಕುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ನಾವು ಈ ರೂಲ್ ಕೋಟ್ ಮಾಡಿ, ಯಾರ ಮೇಲೆ ಅಲಿಗೇಷನ್ ಇದೆ, ಅಂತಹವರನ್ನು ಈ ಸರ್ಕಾರ ಪ್ರೊಟೆಕ್ಟ್ ಮಾಡುವುದಕ್ಕೆ ಹೊರಟಿದೆ ಎನ್ನುವ ಭಾವನೆಯನ್ನು ವ್ಯಕ್ತ ಮಾಡಿದ್ದಾರೆ.

ಖಂಡಿತವಾಗಿ ತಪ್ಪು ಮಾಡಿದವರಿಗೆ ರಕ್ಷಣೆ ಮಾಡಬೇಕೆಂದು ಸರ್ಕಾರ ಯಾವಾಗಲೂ ಕೂಡ ಅವರಿಗೆ ಸಪೋರ್ಟ್ ಮಾಡುವುದಿಲ್ಲ ಮತ್ತು ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯಾಗಲಿ ಅಥವಾ ಯಾರೇ ಮುಖ್ಯಸ್ಥರಾಗಿರಲಿ ಅವರಿಗೆ ಡಿಫೆಂಡ್ ಮಾಡುವಂತಹ ಪ್ರಶ್ನೆ ಉದ್ಭವಿಸುವುದಿಲ್ಲ. ಯಾರೇ ತಪ್ಪು ಮಾಡಿದರೂ ಕೂಡ ಅವರಿಗೆ ಶಿಕ್ಷೆಯಾಗಲೇ ಬೇಕು. ಅದು ಬೇರೆ ವಿಷಯ. ಆದರೆ ಇರತಕ್ಕಂಥ ಪ್ರೊಸೀಜರ್ ಏನಿದೆ ಅದನ್ನು ಹೇಳುತ್ತಿದ್ದೇನೆ. ನೀವು ಇಲ್ಲಿ ಯಾವುದೇ ವ್ಯಕ್ತಿ ವಿರುದ್ಧ ಎತ್ತಬೇಕೆಂದರೆ, ಅಥವಾ ಅಂತಹವರ ಬಗ್ಗೆ ಚರ್ಚೆ ಮಾಡಬೇಕೆಂದರೆ ಅದಕ್ಕೆ ಪ್ರೊಸೀಜರ್ ಇದೆ. ನೀವು ಇಲ್ಲಿ ಬರವಣಿಗೆಯಲ್ಲಿ ಕೊಡಿ ಎಂದು ಸ್ಪಷ್ಟವಾಗಿ ಹೇಳಿದ ಮೇಲೂ ಈ ರೀತಿ ಮಾತನಾಡಿದರೆ ಹೇಗೆ? ಈಗ ನೀವು ನನ್ನನ್ನು ಈ ಕಡೆ ಕೂರಿಸಿ, ಆ ಕಡೆಯ ರೋಲ್ ಮಾಡಿ ಎಂದರೆ ಹೇಗಾಗುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ಬಯಲಾಟದಲ್ಲಿ ಒಂದು ಕಡೆ ರಾಮ ಒಂದು ಕಡೆ ರಾವಣನ ಪಾತ್ರ ಮಾಡಿದ ಹಾಗೆ ಆಯಿತು.

ಶ್ರೀ ಸಿ. ಚೆನ್ನಿಗಪ್ಪ :— ಹಾಗಾದರೆ ನಿಮಗೆ ಎರಡು ಮುಖಗಳು ಇವೆ.

(ಗೊಂದಲ)

ಅಧ್ಯಕ್ಷರು :— ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅದಕ್ಕಾಗಿ ಇಲ್ಲಿ ರೂಲ್‌ನಲ್ಲಿ ಸ್ಪಷ್ಟವಾಗಿ ಇದೆ. ``No allegation of any defamatory or incriminatory nature shall be made by a member against any person unless the member has given previous intimation to the Speaker..." ತಮಗೆ ಪ್ರೀವಿಯಸ್ ಆಗಿ ಇಂಟಿಮೇಷನ್ ಅವರು ಕೊಟ್ಟಿದ್ದರೆ? ಇದು ಒಂದು ವಿಚಾರ.

``...and also to the Minister concerned so that the Minister may be able to make an investigation into the matter for the purpose of reply:"

ಇದಕ್ಕೆ ಒಂದು ರೂಲಿಂಗ್ ಕೂಡ ಹಿಂದೆ ಕೊಟ್ಟಿದ್ದಾರೆ.

I am quoting from the edition of Loksabha Secretariat by Subash Kashyap. According to this. ``a member must first come to the Speaker if he wants to make a charge like that."

ಅದಕ್ಕೆ ಸದಸ್ಯರು ತಮ್ಮ ಕೊಠಡಿಯಲ್ಲಿ ಬಂದು, ನಾನು ಇಂತಹ ವಿಷಯದ ಬಗ್ಗೆ ಎತ್ತುತ್ತಿದ್ದೇನೆ, ಅದಕ್ಕೆ ದಯವಿಟ್ಟು ಮಾತನಾಡುವುದಕ್ಕೆ ಅಪ್ಪಣೆ ಕೊಡಿ ಎಂದು

ಕೇಳಬೇಕು. ನಾವು ಮಾಡುತ್ತಿರುವಂತಹ ಅಲಿಗೇಷನ್ ಕರೆಕ್ಟ್ ಇರಬಹುದು, ಆ ವಿಷಯ ಬೇರೆ. Whether these Rules permit the matter to be raised in this House. That is important.

ಅಧ್ಯಕ್ಷರು :— ಬರೀ ನೀವೆ ಆರ್ಗ್ಯೂಮೆಂಟ್ ಮಾಡಿಕೊಂಡರೆ ಹೇಗೆ? ನಾನು ರೂಲಿಂಗ್ ಏನು ಕೊಡುವುದು?

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ಇದರಲ್ಲಿ ಎರಡೇ ಪ್ರಶ್ನೆ ಇರತಕ್ಕಂಥಾದ್ದು. ಮಾನ್ಯ ಖರ್ಗೆಯವರು ಹೇಳಿದ್ದನ್ನು ನಾನು ಪೂರ್ತಿಯಾಗಿ ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಯಾವುದಾದರೂ ಒಂದು ವ್ಯಕ್ತಿ ಮೇಲೆ ನಾವು ಅಲಿಗೇಷನ್ ಮಾಡಬೇಕಾದರೆ ಆಗ ನಾವು ಅದರ ಬಗ್ಗೆ ಮೊದಲೇ ಬರವಣಿಗೆಯಲ್ಲಿ ಕೊಡಬೇಕಾಗುತ್ತದೆ. ಆದರೆ ನಮಗೆ ರೂಲಿಂಗ್ ಬೇಕಾಗಿರುವುದು ಯಾವುದರ ಬಗ್ಗೆ ಎಂದರೆ ನಾವು ಯಾವುದಾದರೂ ಒಂದು ಒಂದು ಆಫೀಸ್‌ನ ಮೇಲೆ ಅಥವಾ ಇಡೀ ಅಡ್ಮಿನಿಸ್ಟ್ರೇಟಿವ್ ಸಿಸ್ಟಂ ಮೇಲೆ ಆರೋಪ ಮಾಡುವುದಾದರೆ ನಿಯಮ 378ರ ಪ್ರಕಾರ ನೋಟೀಸ್ ಕೊಡುವಂತಹ ಅವಶ್ಯಕತೆ ಇದೆಯೇ? ಅವರು ರೂಲ್ಸ್ ಓದಿದ್ದನ್ನು ನಾವು ಅಬೈಡ್ ಮಾಡುತ್ತೇನೆ. ಅದರಲ್ಲಿ ಎರಡು ಮಾತಿಲ್ಲ. ಯಾವುದಾದರೂ ವ್ಯಕ್ತಿ ಮೇಲೆ ಅಥವಾ ಮತ್ತೊಂದು ಡಿಪಾರ್ಟ್‌ಮೆಂಟ್ ಬಗ್ಗೆ ಸ್ಟೇಟ್‌ಮೆಂಟ್ ಮಾಡುವುದಾದರೆ ಮಾಡಲೇಬೇಕು. It is not against an individual or against a Minister or against a person. ಈಗ ಒಂದು ಆಫೀಸ್‌ನಲ್ಲಿ ಈ ರೀತಿ ನಡೆಯುತ್ತಿದೆ ಎಂದು ನಾವು ಇಲ್ಲಿ ಮಾತನಾಡಬೇಕಾ? ಮಾತನಾಡಬಾರದಾ? ಅದಕ್ಕೆ ಸ್ಪೆಸಿಫಿಕ್ ಆಗಿ ತಾವು ರೂಲಿಂಗ್ ಕೊಡಬೇಕು. ಇನ್ನೊಂದು ಸಾರ್ವಜನಿಕ ಹಿತಾಸಕ್ತಿಗೆ ಪೂರಕವಾದ ವಿಚಾರ ಇದು. It is a matter of public importance, whether we can raise it on the floor of the House?

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಮಾನ್ಯ ಅಧ್ಯಕ್ಷರೆ, ನೀವು ರೂಲಿಂಗ್ ಕೊಡುವುದಕ್ಕಿಂತ ಮೊದಲು ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಎಸ್. ಕುಮಾರ್ ಬಂಗಾರಪ್ಪ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ್‌ರವರು, ಶಾಸಕರಿಂದ ರೆಕಮೆಂಡೇಷನ್ ಕೊಟ್ಟಿರತಕ್ಕಂಥ ಯಾರೋ ಒಬ್ಬ ಆಫೀಸರ್ ಹೀಗೆ ಮಾಡುತ್ತಿದ್ದಾನೆ ಎಂದು ಪರ್ಟಿಕ್ಯುಲರ್ ಆಗಿ ಹೇಳುತ್ತಿದ್ದಾರೆ. ಅದಕ್ಕೆ ಆ ರೀತಿ ಪರ್ಟಿಕ್ಯುಲರ್ ಆಗಿ ಆಫೀಸರ್ ಬಗ್ಗೆ ಹೇಳುವುದಾದರೆ ನೀವು ಅವರ ಹೆಸರನ್ನು ಹೇಳಿ. ಅವರು ಏನಾದರೂ ತಪ್ಪು ಮಾಡಿದ್ದರೆ ಶಿಕ್ಷೆಗೆ ಒಳಪಡಿಸುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ :— ಆಫೀಸರ್ ಹೆಸರನ್ನು ಹೇಳಬೇಕೆಂದು ಹೇಳಿದರು. ದಯವಿಟ್ಟು ಮಂತ್ರಿಗಳು ರೂಲ್ಸ್ ಪುಸ್ತಕ ಓದಿ. ಅದರಲ್ಲಿ ಹೆಸರು ಹೇಳಬಾರದು ಎಂದು ರೂಲ್‌ನಲ್ಲಿ ಇರುವುದರಿಂದ ಹೆಸರು ಹೇಳುತ್ತಿಲ್ಲ.

F-50 II
F-50 II

(Interruptions)

SRI A. RAMADAS :— The Chair is not permitting him to name him here.

SRI S. SURESH KUMAR :— We will convince K.B. Mallikarjuna. You convince Mallikarjuna Kharge.

Sri S. Kumara Bangarappa :— It is not convincing anybody, We have to obey the law of the land. He is making a mention about a particular officer, You name him. ಈ ರೀತಿ ರೆಕಮಂಡೇಷನ್ ಮಾಡಿರತಕ್ಕಂಥ ಆಫೀಸರ್ ಇದ್ದಾರೆ, ನಾವು ಅವನ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೇನಲ್ಲ.

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ :— ಹಿಂದಿನ ಸರ್ಕಾರದಲ್ಲಿ ಹಿರಿಯ ಸದಸ್ಯರಾದ ಪಾಟೀಲ್‌ರವರು ಸಹಕಾರ ಮಂತ್ರಿಗಳಾಗಿದ್ದರು. ಅವರು ಬಹಳ ಅತ್ಯುತ್ತಮವಾದಂತಹ ರೀತಿಯಲ್ಲಿ ಕೆಲಸ ಮಾಡುತ್ತಿದ್ದರೂ. ಅವರು ಒಂದು ಸಾರಿ ತಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಹತ್ತು ಹದಿನೈದು ಪರ್ಸೆಂಟ್‌ಗೆ ಯಾವುದೋ ಒಂದು ವಿಚಾರದಲ್ಲಿ ಹಗರಣಗಳು ಇತ್ತೆಂದು ಹೇಳಿದರು. ಆದರೆ ಈಗ ಶ್ರೀ ಕೆ.ಬಿ. ಮಲ್ಲಿಕಾರ್ಜುನ ಅವರು ಮೂರು ಪರ್ಸೆಂಟ್‌ಗೆ ಇಳಿದಿದೆ ಎಂದರೆ ನಮ್ಮ ಸರ್ಕಾರ ಬಂದಮೇಲೆ ಕಡಿಮೆಯಾಗಿದೆ ಎಂದಾಯಿತು.

ಶ್ರೀ ಆರ್. ಅಶೋಕ್ :— ಹಾಗಾದರೆ ಲಂಚ ನಡೆಯುತ್ತಿದೆ ಎಂದು ಒಪ್ಪಿಕೊಂಡ ಹಾಗೆ ಆಯಿತು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಡುವ ಮೊದಲು ಮಾನ್ಯ ಮಲ್ಲಿಕಾರ್ಜುನ ಖರ್ಗೆ ಹೇಳಿದ ಪ್ರಕಾರ ಇಂತಹ ಘಟನೆಗಳಲ್ಲಿ ಹಿಂದೆ ಸಹ ಅಲಿಗೇಷನ್ ಮಾಡಿದಂತಹ ಸಂದರ್ಭ ಇದೆ. ಆದದನ್ನು ಅವರು ಒಪ್ಪಿಕೊಂಡಿದ್ದಾರೆ. ಆದುದರಿಂದ ತಾವು ಪುನ: ರೂಲಿಂಗ್ ಕೊಡುವುದಕ್ಕಿಂತ ಮೊದಲು, ಈ ಸದನದಲ್ಲಿ ಯಾವ ವಿಷಯವನ್ನು ಚರ್ಚೆ ಮಾಡಬೇಕು, ಯಾವ ವಿಷಯವನ್ನು ಚರ್ಚೆ ಮಾಡಬಾರದೆಂದು ಹೇಳುವುದರ ಬಗ್ಗೆ ಡಿಟೈಲ್ ಡಿಸ್ಕಷನ್ ಆಗುವುದು ಒಳ್ಳೆಯದು. ಆದರ ಬಗ್ಗೆ ಡಿಟೈಲ್ ಡಿಸ್ಕಷನ್ ಆಗಿ ತಾವು ನಂತರ ರೂಲಿಂಗ್ ಕೊಟ್ಟರೆ ಒಳ್ಳೆಯದು. ಮುಂದೆ ನಾವು ಯಾವುದೇ ವಿಷಯ ಮಾತನಾಡುವುದಕ್ಕೆ ಬಾಯಿ ಕಟ್ಟಿದಂತಹ ಪರಿಸ್ಥಿತಿ ನಿರ್ಮಾಣವಾಗಬಾರದೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತೆ ನಾನು ಈಗ ಸ್ಪೆಸಿಫಿಕ್ ಆಗಿ ಅಲಿಗೇಷನ್ ಮಾಡುವುದಿಲ್ಲ. ಎಲ್‌ಓಸಿ ನೇರವಾಗಿ

ಕೊಡುವಂತಾದ್ದನ್ನು ನಿಲ್ಲಿಸುವಂತಹ ಕಾರ್ಯಕ್ರಮವನ್ನು ಸರ್ಕಾರ ಮಾಡಬೇಕು. ಕೇವಲ ಸಣ್ಣ ನೀರಾವರಿ ಬಗ್ಗೆ ನಾನು ಹೇಳುತ್ತಿಲ್ಲ. ಯಾವ್ಯಾವ ಇಲಾಖೆಯಲ್ಲಿ ನೇರವಾಗಿ ಎಲ್‌ಓಸಿಯನ್ನು ಕಂಟ್ರಾಕ್ಟರ್ ಹೆಸರಿನಲ್ಲಿ ಕೊಡುತ್ತಾರೆ ಅದನ್ನು ನಿಲ್ಲಿಸಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಡುವುದಕ್ಕಿಂತ ಮೊದಲು ನಾನು ಎರಡು ಮೂರು ವಿಚಾರಗಳನ್ನು ಎತ್ತಿದ್ದೇನೆ. ತಾವು ಅದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಮೊದಲನೆಯದಾಗಿ ಯಾವುದೇ ಒಬ್ಬ ಚುನಾಯಿತ ಪ್ರತಿನಿಧಿ ಆಡಳಿತ ದೃಷ್ಟಿಯಿಂದ, ಭ್ರಷ್ಟಾಚಾರ ನಿರ್ಮೂಲನ ಮಾಡತಕ್ಕಂಥ ದೃಷ್ಟಿಯಿಂದ ಕೆಲವು ಆಪಾದನೆಗಳನ್ನು ಮಾಡುವಾಗ ಅದಕ್ಕೆ ಮಾಹಿತಿಗಳು ಅಥವಾ ಪ್ರೂಫ್ ಅಥವಾ ಅದಕ್ಕೆ ಎವಿಡೆನ್ಸ್‌ಗಳನ್ನು ಕೊಡತಕ್ಕಂಥ ಜವಾಬ್ದಾರಿಯನ್ನು ಹೊಂದಿರುವುದಿಲ್ಲ. ಅವರಿಗೆ ಈ ಆಪಾದನೆ ಮಾಡುವುದಕ್ಕೆ ಹಕ್ಕಿದೆ. ಅದರ ಬಗ್ಗೆ ಸರ್ಕಾರ ವಿಚಾರಣೆ ಮಾಡಿ, ಅದು ಸರಿಯೋ ತಪ್ಪೊ, ಅದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ನೋಡುವುದು ಸರ್ಕಾರದ ಜವಾಬ್ದಾರಿ. It is left to he Government to conduct an investigation or enquiry. ಇನ್ನು ಎರಡನೆಯದಾಗಿ ಮಾನ್ಯ ಖರ್ಗೆಯವರೆ ಒಪ್ಪಿಕೊಂಡ ಹಾಗೆ ಹಿಂದೆ ನಿಮ್ಮ ಸರ್ಕಾರ ಇದ್ದಾಗ ನಾನು ವಿರೋಧ ಪಕ್ಷದಲ್ಲಿದ್ದೆ. ಆಗ ನಾನು ಏನೇನು ಆಲಿಗೇಷನ್ ಮಾಡಿದ್ದೇನೆ, ಅದನ್ನು ವಿರೋಧಪಕ್ಷದಲ್ಲಿದ್ದು ಮಾಡಿದ್ದೇನೆ. ಅದಕ್ಕೆ ಸದನದಲ್ಲಿ ಅಧ್ಯಕ್ಷರು ನನಗೆ ಅನುಮತಿ ಕೊಟ್ಟಿದ್ದಾರೆ. ಈಗ ನಾನು ಇಲ್ಲಿ ಬಂದಿದ್ದೇನೆ, ನೀವು ಅದನ್ನು ಮಾಡಬಾರದು ಎಂದರೆ ಹೇಗೆ? ಅವರು ವಿರೋಧಪಕ್ಷದಲ್ಲಿದ್ದಾಗ ಅದನ್ನು ಮಾಡಬಹುದು. ಎಂದರೆ ಅವರು ಇಲ್ಲಿ ಇದ್ದಾಗ ಒಂದು ಪಾತ್ರ, ಅಲ್ಲಿ ಇದ್ದಾಗ ಒಂದು ಪಾತ್ರ ಮಾಡಬಹುದಾ? A leader can perform two roles, one as Opposition Leader nad another as Minister. Is it the meaning accroding to the Minister? ಸಾರ್ವಜನಿಕ ಜೀವನದಲ್ಲಿ ಒಬ್ಬ ಮುಖಂಡನಾದವನು, a Statesmen, Can he perform double role? ಎರಡು ಮುಖಗಳು ಇರುವುದಕ್ಕೆ ಸಾಧ್ಯವೇ ಇದು ಸಾರ್ವಜನಿಕ ಜೀವನದಲ್ಲಿ ಒಪ್ಪತಕ್ಕಂಥಾದ್ದೆ? ಅದನ್ನು ತಾವು ಹೇಳಬೇಕಾಗುತ್ತದೆ? ಮಲ್ಲಿಕಾರ್ಜುನ ಖರ್ಗೆಯವರೆ ತಾವು ಒಪ್ಪಿಕೊಂಡಿದ್ದೀರಿ.

Sri Mallikarjuna Kharge :— When I was the Opposition Leader, I had to perform my duties as the Opposition Leader, according to the Rules framed by this House. Now, I am here to reply as Minister. ರೂಲ್ಸ್ ಪ್ರಕಾರ ಇರಲಿಲ್ಲರೆಂದರೆ definitely I will say that. ನಾನು ಈ ಸದನದಲ್ಲಿ ಹೇಳುವುದೇನೆಂದರೆ, ಹಿಂದೆ ಮಾನ್ಯ ಕೆ. ಹನುಮಂತಯ್ಯನವರು

ಮುಖ್ಯಮಂತ್ರಿಗಳಾಗಿದ್ದಾಗ ಮಾನ್ಯ ಬಿ. ರಾಚಯ್ಯನವರು ಒಂದು ಅಲಿಗೇಷನ್ ಮಾಡಿದರು. ಆಗ ಮಾನ್ಯ ಹನುಮಂತಯ್ಯನವರು wild allegations ಮಾಡುವಂಥಾದ್ದು ಸರಿಯಲ್ಲ. ತಾವು ಬೇಕಾದರೆ specific instances ಇದ್ದರೆ ತಂದು ಕೊಡಿ, ನಾವು ಅದನ್ನು ನೋಡುತ್ತೇನೆಂದು ಹೇಳಿದರು. ಆಗಲೂ ನೋಟೀಸ್ ಇಲ್ಲದೇ ಹೇಳುವಂಥಾದ್ದು ಸರಿಯಲ್ಲವೆನ್ನುವಂತಹ ಮಾತನ್ನು ಹೇಳಿದ್ದಾರೆ. ಇದು ಈಗ ಹೇಳುತ್ತಿರುವಂಥಾದ್ದಲ್ಲ. "All allegations; Members can make allegations against Officers on substantial grounds. On the General discussion on the budget, the Hon'ble Member B. Rachaiah made allegation of malpractices against some officers of the Government to which the Hon'ble Chief Minister Sri K.Hanumanthaiah taking objection remarked that it was a well known Parliamentary convention that wild allegations should not be made against Government Officers who had no means to defend themselves on the floor of the House and if the Hon'ble Member wanted to make, they could do so by substantiating the charges against the officers. There upon the Hon'ble Speaker observed: No doubt, the Hon'ble Member have a right to criticise the administrtation including its officers, For doing so, the Leader of the House had only taken objection to the wild allegations. Apart from that, in logic, whereas a particular may be a true, the general is doubtful. Therefore, the members though they have a right to criticise the administration, subject to certain limitations and restrictions, must also have in mind concrete instances before they make allegations or cast aspersions against the officers and when the Leader of the House calls for such information so as to enable the Government to verify the facts and take suitable action.`` This Ruling was given on 30th June 1952. ನೀವು ಯಾವುದೇ ಸೂಚನೆಯನ್ನು ಕೊಡದೇ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳಿದ್ದಾರೆ.

ಶ್ರೀ ಬಿ. ಸೋಮಶೇಖರ್:— ಇದು ಹಳೆಯ ಕತೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:— ಮಾನ್ಯ ಅಧ್ಯಕ್ಷರೇ ಇದನ್ನು ಹಳೆಯ ಕತೆ ಎಂದರೆ ನಾವು ಇಲ್ಲಿ ರೂಲ್ಸ್ ಆಫ್ ಪ್ರೊಸಿಜರ್ ಅನ್ನು ಫಾಲೋ ಮಾಡಬೇಕಾಗುತ್ತದೆ.

(Interruptions)

Mr. Speaker :— I have heard enough of arguments. Leave it to me to give my ruling.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಬಹಳ ಗಂಭೀರವಾದಂತಹ ಅಲಿಗೇಷನ್ ಮಾಡುವಾಗ any allegation should be specific according to the Ruling just now quoted. Here is a case where specific allegation is being made. ಎರಡನೆಯದಾಗಿ, ಯಾವುದೋ ಒಬ್ಬ ವ್ಯಕ್ತಿಯ ವಿರುದ್ಧ ಆಪಾದನೆ ಮಾಡುವಂಥಾದ್ದು ಅಲ್ಲ. ನಾವು ಸರ್ಕಾರಕ್ಕೆ ಆಡಳಿತದಲ್ಲಿ ಬಂದಿರುವಂತಹ ವಿಫಲತೆಯನ್ನು ತೋರಿಸುವಂಥಾದ್ದಕ್ಕೆ ಒಂದು ವಿಧಾನವಾಗಿದೆ, ಅದನ್ನು ನಾವು ಇಲ್ಲಿ ಹೇಳುತ್ತಿದ್ದೇವೆ. ಮೂರನೆಯದಾಗಿ, ಭ್ರಷ್ಟಾಚಾರ ಮಾಡುವಂಥಾದ್ದಕ್ಕೆ ರೂಲ್ಸ್ ಇಲ್ಲ, ಆದರೆ ಭ್ರಷ್ಟಾಚಾರದ ಬಗ್ಗೆ ಎತ್ತಿ ತೋರಿಸುವುದಕ್ಕೆ ರೂಲ್ಸ್ ಪರಿಸ್ಥಿತಿ ಏನು? There is no rule. ಯಾರು ಎಷ್ಟು ಬೇಕಾದರೂ ಭ್ರಷ್ಟಾಚಾರವನ್ನು ಮಾಡುತ್ತಾ ಹೋಗಬಹುದು. ಆದರೆ ಇದರ ಬಗ್ಗೆ ಮಾತನಾಡಬೇಕಾದರೆ ರೂಲ್ಸ್, ನಿಯಮ, ಕಾನೂನು ಅಡಿಯಲ್ಲಿ ಹೋದರೆ it will become a unequal fight. ಇದು ಸಾರ್ವಜನಿಕ ಸಭೆಯಲ್ಲ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೆ, ಇದು ಸದನ, ಸಾರ್ವಜನಿಕ ಸಭೆಯಲ್ಲ. ತಾವು ಸಾರ್ವಜನಿಕ ಸಭೆಯಲ್ಲಿ ಬೇಕಾದಷ್ಟು ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ನಾವು ಸದನದಲ್ಲಿ ಏನು ಮಾತನಾಡಬೇಕು, ಏನು ಮಾತನಾಡಬಾರದೆಂಬ ಬಗ್ಗೆ ನಾವು ನೀವೇ ಮಾಡಿರುವಂತಹ ನಿಯಮಾವಳಿಯಾಗಿದೆ. ಅದನ್ನು ತಾವೆಲ್ಲರೂ ಸೇರಿ ಅಲ್ಲವೆಂದರೆ ತೆಗೆದುಹಾಕಿ, ತಾವು ಯಾವಾಗ ಬೇಕಾದರೂ, ಏನು ಬೇಕಾದರು ಮಾತನಾಡಬಹುದೆಂದರೆ without intimation, can we do like that?

(interruptions)

ಶ್ರೀ ಎಸ್. ಸುರೇಸ್ ಕುಮಾರ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇದು ಸಾರ್ವಜನಿಕ ಸಭೆಯಲ್ಲವೆಂದು ಹೇಳಿದರು. ಹೌದು, ಇದು ಖಂಡಿತವಾಗಿ, ಸಾರ್ವಜನಿಕ ಸಭೆಯಲ್ಲ, ನಾನು ಏನೇನು ಅಲಿಗೇಷನ್ ಮಾಡುತ್ತೇವೋ ಅದನ್ನು ಸಬ್‌ಸ್ಟ್ಯಾನ್ಷಿಯೇಟ್ ಮಾಡಬೇಕು. I am bound by that.

ಶ್ರೀ ಯು.ಆರ್. ಸಭಾಪತಿ :— ತಾವು ಏನು ಹೇಳಬೇಕೆಂದರೂ ಅದಕ್ಕೆ ನಿಯಮಾವಳಿ ಎಂದು ಇದೆಯಲ್ಲಾ...

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೆ, ಸದನದ ಸಭೆ ಹೇಗೆ ನಡೆಯಬೇಕೆಂಬ ಬಗ್ಗೆ ನಾವೇ ಮಾಡಿದಂತಹ ನಡವಳಿಕೆ ಇದೆ. ಆ ನಡವಳಿಕೆಯ ಪ್ರಕಾರ ತಾವು ಮಾತನಾಡಿ, ಆ ನಡವಳಿಕೆಯನ್ನು ಬಿಟ್ಟು ನಾವು ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಹಾಗೆ ಇಲ್ಲಿ ಮಾತನಾಡಿದರೆ ಹೇಗೆ?

ಶ್ರೀ ಬಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೇ, ನಾವು ಸ್ಪೆಸಿಫಿಕ್ ಅಲಿಗೇಷನ್ ಮಾಡಬೇಕೆಂದು ವೇಗ್ ಆಗಿ ಮಾಡಬಾರದೆಂದು ಇತ್ತು, ಇದನ್ನು ನಾವು ವೇಗ್ ಆಗಿ ಏನೂ ಮಾಡಿಲ್ಲ. ಇಂತಹ ಒಂದು ಕಛೇರಿಯಲ್ಲಿ ಈ ರೀತಿ ನಡೆಯುತ್ತಿದೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂಬುದು it is substantiating with the documents. ಇನ್ನು ಎರಡನೆಯದಾಗಿ, ರೂಲ್ಸ್ ಪ್ರಕಾರ ಏನು ಆಡಳಿತವನ್ನು ನಡೆಸುವುದಿಲ್ಲವೋ, ಆಗ ಅದನ್ನು ಇಲ್ಲಿ ಪ್ರಸ್ತಾಪ ಮಾಡುವಂಥಾದ್ದಕ್ಕೆ ಅವಕಾಶ ಇದೆಯೋ, ಇಲ್ಲವೋ ಎಂಬುದನ್ನು ನೋಡಬೇಕಾಗುತ್ತದೆ. ಈಗ ಎಲ್‌ಓಸಿಯನ್ನು ರಿಲೀಸ್ ಮಾಡಬೇಕೆಂದರೆ name of the contractor-one column / second coloumn is recommended by : ಎಕ್ಸಿಕ್ಯೂಟೀವ್ ಇಂಜಿನಿಯರ್‌ನಿಂದ ರೆಕಮೆಂಡೋ ಅಥವಾ ಎಂ.ಎಲ್.ಎ. ಶಿವರಾಂ ಎಂದೋ, ಅಥವಾ ಸೋಮಶೇಖರ್ ಎಂದೋ; ಒಂದು ಆಡಳಿತದಲ್ಲಿ ಗೌವರ್ನಮೆಂಟ್ ಆರ್ಡರ್ ಅನ್ನು ಇಷ್ಯೂ ಮಾಡಬೇಕೆಂದರೆ ಪ್ರೊಸೀಜರ್ ಇರಬೇಕು. ಅಧಿಕಾರಿಗಳಿಂದ ರೆಕ್‌ಮೆಂಡೇಷನ್ ಆಗಿ ಬರಬೇಕು, ಇಷ್ಟು ಕೆಲಸವನ್ನು ಮಾಡಿದ್ದಾರೆ, ಇಷ್ಟು ಹಣ ಬರಬೇಕಾಗಿದೆ, ಇಷ್ಟು ಹಣವನ್ನು ರಿಲೀಸ್ ಮಾಡಬೇಕಾಗಿದೆ, ಇಷ್ಟು ಕೆಲಸವಾಗಿದೆ, ಎಂದು ಎಕ್ಸಿಕ್ಯೂಟೀವ್ ಇಂಜಿನಿಯರ್ ರೆಕಮೆಂಡ್ ಮಾಡಬೇಕೋ ಅಥವಾ ಎಂ.ಎಲ್.ಎ.ಗಳಿಂದ ಎಂದು ಮಾಡಬೇಕೋ is it not improper? ಈ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲವೇ? ಈ ರೂಲ್ಸ್ ವಿರುದ್ಧವಾಗಿ ಆದೇಶವನ್ನು ಹೊರಡಿಸಿದ್ದಾರೆ. ಎಲ್‌ಓಸಿಯನ್ನು ಪೊಲಿಟಿಕಲ್ ಗ್ರೌಂಡ್ ಮೇಲೆ ಅಥವಾ ರಾಜಕೀಯ ಹಿತಾಸಕ್ತಿಯ ಮೇಲೆ ಆಡಳಿತವನ್ನು ಮಾಡಿದಾಗ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅಧಿಕಾರ ಇಲ್ಲವೇ? ಎನ್ನುವುದನ್ನು ಹೇಳಬೇಕಾಗುತ್ತದೆ. ಯಾವುದೇ ಗೌವರ್ನಮೆಂಟ್ ಆರ್ಡರ್ ಮಾಡಬೇಕೆಂದರೂ in the preamble, so and so recommended ಎಂದು ಮಾಡಬೇಕೋ, ಅಥವಾ ಇಂಥಿಂಥ ಇಲಾಖೆಯಿಂದ ರೆಕಮೆಂಡೇಷನ್‌ಗಾಗಿ ಬಂದಿದೆ ಎಂದು ಮಾಡುತ್ತಾರೋ, ಎಂ.ಎಲ್.ಎಗಳು ಲೆಟರ್ ಇಷ್ಯೂ ಮಾಡುತ್ತಿದ್ದಾರೆಂದು, ಅಥವಾ ಮಿನಿಸ್ಟರ್‌ರಿಂದ ಲೆಟರ್ ಬಂದಿದೆ ಎಂದು ಇಷ್ಯೂ ಮಾಡುತ್ತೇವೆಂದು ಆಗುತ್ತದೆಯೇ? ಇದು ಆಡಳಿತ ನೀತಿಯೇ? ಇದನ್ನು ತಾವು ಹೇಳಬೇಕಾಗುತ್ತದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ :— ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳುತ್ತಿದ್ದೆ ಎಂದರೆ ಸಣ್ಣ ನೀರಾವರಿ ಇಲಾಖೆಯಲ್ಲಿ ಎಲ್‌ಓಸಿಯನ್ನು ನೀಡಬೇಕಾದರೆ ಈ

ರೀತಿಯಾಗುತ್ತದೆ ಎಂದು ಹೇಳುತ್ತಿದ್ದೆ. ನಾನು ಯಾರನ್ನೂ ತನಿಖೆ ಮಾಡಿ, ವಜಾ ಮಾಡಿ, ಸಸ್ಪೆಂಡ್ ಮಾಡಿ, ಕ್ರಮ ತೆಗೆದುಕೊಳ್ಳಿ ಎಂದು ನಾನು ಹೇಳುತ್ತಿಲ್ಲ. ನಾನೂ ಸಹ ರೂಲ್ 327 ಹಾಗೂ 328 ಅನ್ನು ಓದಿದ್ದೇನೆ. ನಾನು ಸ್ಪಷ್ಟವಾಗಿ ಹೇಳಿದ್ದೇನೆ, ನಾನು ತನಿಖೆ ಮಾಡಿ ಎಂದು ಕೇಳಲಿಲ್ಲ. ನಾನು ಏನೇನು lapses ನಡೆಯುತ್ತಿದೆ ಎಂಬ ಬಗ್ಗೆ, ಮಾನ್ಯ ಸಣ್ಣ ನೀರಾವರಿ ಇಲಾಖೆಯ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ನೀವು ಎಲ್‌ಓಸಿಯನ್ನು ರಿಲೀಸ್ ಮಾಡಬೇಕಾದರೆ ಯಾವ ಕಾಮಗಾರಿಗಳು ಆಗಿದೆ, ಆ ಕಾಮಗಾರಿಗೆ ಪ್ರೈಯಾರಿಟಿಯ ಮೇಲೆ ಮಾಡಿ. ಈ ರೀತಿ ಎಂ.ಎಲ್.ಎಗಳ ಮಿನಿಸ್ಟರ್‌ಗಳ ಲೆಟರ್‌ಗಳನ್ನು ತೆಗೆದುಕೊಂಡು ಅದಕ್ಕೆ ಡಾಕ್ಯೂಮೆಂಟ್ ಕೊಡುವುದು ಏನಿದೆ ಇದು ತಪ್ಪು ಎಂದು ಹೇಳುತ್ತಿದ್ದೇನೆ; ಕಂಟ್ರಾಕ್ಟ್‌ದಾರರು ಬಂದರೆ ಪ್ರೂವ್ ಮಾಡಿ ಎಂದು ಹೇಳುತ್ತೀರಾ? ಅದಕ್ಕೆ ಲಂಚ ಕೊಡಬೇಕೆ? ತಾವು ರೂಲಿಂಗ್ ಮಾಡಿ. ಯಾರು ಲಂಚದ ಆಪಾದನೆ ಮಾಡುತ್ತಾನೆ, ಆ ಅಕೌಂಟ್ ಆಫೀಸರ್ ಕುಳಿತುಕೊಂಡು ತಾವು ಎಲ್‌ಓಸಿಯನ್ನು ರಿಲೀಸ್ ಮಾಡಿ ಎಂದು ಐದುನೂರು ರೂಪಾಯಿಗಳು ತೆಗೆದುಕೊಳ್ಳುವ ಫೋಟೋ ತೆಗೆದುಕೊಂಡು ಆ ಫೋಟೋ ತಂದು ನಿಮಗೆ ಕೊಡುವುದಕ್ಕೆ ಆಗುತ್ತದೆಯೇ? ನಾನು ಹೇಳುವಂಥಾದ್ದು ಸಾರ್ವಜನಿಕವಾಗಿ ಎಲ್‌ಹೆಚ್‌ನಲ್ಲಿ ನಡೆದಿರುವಂತಹ ಡಿಬೇಟ್ ಇದು. ಮಾನ್ಯ ಶಿವಕುಮಾರ್‌ರವರು ಭ್ರಷ್ಟಾಚಾರವನ್ನು ತೋರಿಸಿ ಎಂದು ಹೇಳಿದರು, ಇಲ್ಲಿ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಈ ಭ್ರಷ್ಟಾಚಾರ ಗಾಳಿ ಇದ್ದಾಹಾಗೆ, ಈ ಗಾಳಿ ನಾವು ಉಸಿರು ಆಡುತ್ತಿರುವಂಥಾದ್ದು, ಇದನ್ನು ನಾವು ಎಲ್ಲಿ ತೋರಿಸುವುದು? ಹಾಗೆ ಸರ್ಕಾರದಲ್ಲಿ ನಡೆಯುತ್ತಿರುವಂತಹ ಭ್ರಷ್ಟಾಚಾರ ಒಂದು ರೀತಿಯಲ್ಲಿ ಗಾಳಿ ಇದ್ದಹಾಗೆ, ಇದನ್ನು ನಾವು ಪ್ರೂವ್ ಮಾಡುವುದು ಕಷ್ಟವಾಗುತ್ತದೆ. ಇದನ್ನು ಹಾಗೆ ಮಾಡಿ, ಹೀಗೆ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲ. ಇವರು 1991ನೇ ಇಸವಿಯಿಂದಲೂ ಅಲ್ಲೇ ಇದ್ದಾರೆ, ಅವರ ಮೇಲೆ ತಾವು ಕ್ರಮ ತೆಗೆದುಕೊಳ್ಳಿ, ನೀವು ಈ ರೀತಿ ಎಲ್‌ಓಸಿಯನ್ನು ರಿಲೀಸ್ ಮಾಡುವಂಥಾದ್ದು ತಪ್ಪು ಎನ್ನುವ ಮಾತನ್ನು ಹೇಳಿದ್ದೇನೆ.

(ಗೊಂದಲ)

4. ಅಧ್ಯಕ್ಷರ ತೀರ್ಪು

ವಿಷಯ : ಆಪಾದನೆ ಮಾಡುವುದಕ್ಕೆ ಮೊದಲು ಅನುಸರಿಸಬೇಕಾದ ನಿಯಮಗಳ ಬಗ್ಗೆ

ಅಧ್ಯಕ್ಷರು :— ಮಾನ್ಯ ಸದಸ್ಯರು ಒಂದು ಆಪಾದನೆಯನ್ನು ಮಾಡಿದರು. I want to give my ruling.

ಶ್ರೀ ಕೆ.ಬಿ. ಮಲ್ಲಿಕಾರ್ಜುನ :— ನಾನು ಅಲಿಗೇಷನ್ ಮಾಡಿಲ್ಲ.

ಅಧ್ಯಕ್ಷರು :— ಮಾನ್ಯ ಸದಸ್ಯರುಗಳೆಲ್ಲರೂ ಬಂದು ಕನ್‌ಸರ್ನ್ಡ್ ಆಫೀಸ್‌ನಲ್ಲಿ ನಡೆಯುತ್ತಿದೆ, ಎಂದು ಹೇಳಿದರು, that itself is an allegation. ಈಗ ನಾನು ಹೇಳುವಂಥಾದ್ದು ಕೇಳಿ. This is the latest edition of Practice and Procedure of Parliament written by Mr. Malhotra. ಅವರು ಬರೆದಿರುವಂತಹ ಕೆಲವು ವಾಕ್ಯಗಳನ್ನು ಓದಿ ಹೇಳಬೇಕಾಗುತ್ತದೆ. ನೀವು ಅಲಿಗೇಷನ್ ಮಾಡಬಾರದೆಂದು ಹೇಳುವುದಿಲ್ಲ, ಆದರೆ ಈ ರೀತಿ ಅಲಿಗೇಷನ್ ಮಾಡುವ ಮೊದಲು ಆದಕ್ಕೆ ಏನು ಪ್ರೊಸೀಜರ್ ಇದೆ ಅದನ್ನು ಫಾಲೋ ಮಾಡಬೇಕೆಂದು ಹೇಳುತ್ತೇನೆ. ಈಗ ನಾನು ಹೇಳುವುದನ್ನು ಕೇಳಿ. ನೀವು ಅಲಿಗೇಷನ್ಸ್ ಮಾಡಕೂಡದು ಎಂದು ಯಾರೂ ಹೇಳುವುದಿಲ್ಲ. ಮಾಡುವುದಕ್ಕೆ ಮೊದಲು ಪ್ರೊಸೀಜರ್ ಇದೆ ಅದನ್ನು ಫಾಲೋ ಮಾಡಿ ಆರೋಪ ಮಾಡಿ ಎಂದು ಹೇಲುತ್ತಾರೆಯೇ ಹೊರತು ಮಾಡಕೂಡದು ಎಂದು ಯರೂ ಹೇಳುವುದಿಲ್ಲ. Earlier it was Kaul and Shakder. The present General Secretary is Mr. Malhotra. I would like to quote some sentences:

"The Member must first come to the Speaker if he wants to make a charge like that. The Speaker must be satisfied about the facts and then the allegations can be made. I am not going to permit mere relationship as a charge or a matter of insinuation, that mere relationship gives a ground for believing that there has been a nepotism. However, there may be cases, where in order to bring home certain defects in the administration, it may be necessary to refer it to the Official Misconduct or any particular officer. In such a case, the procedure evolved, is, hat if the Member has sufficient material either from personal experience or on reliable evidence, that an officer has been guilty of misconduct in his official duties, it is necessary that before raising the issue on the floor of the House, he should in the first instance give intimation to the Minister concerned so that the Minister in turn may call for records and find out whatever answer he should give when the matter is taken up. He may have material to refute the allegations or he may be convinced that there is sufficient basis for the allegation or he may be convinced that there is sufficient basis for the allegation in which case he may order an enquiry or take departmental action. This procedure while

achieving the purpose which a Member has or should have in raising the matter also safegaurds the interests of officers who are not in a position ot defend themselves in the House." ನೀವು ಅಲಿಗೇಷನ್ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಅಲಿಗೇಷನ್ ಮಾಡುವುದಕ್ಕೆ ಮೊದಲು ಕೆಲವು ಪ್ರೊಸೀಜರ್ ಇದೆ. ಈ ಪುಸ್ತಕದಲ್ಲಿ ಅವರು ಹೇಳಿದ ಪ್ರೊಸೀಜರಂತೆ ನೀವು ಮಾಡಬೇಕು. ಮಾನ್ಯ ಸದಸ್ಯರು ಆಫೀಸ್‌ನಲ್ಲಿ ನಡೆಯುತ್ತಿದೆ ಎಂದು ಹೇಳಿದ್ದಾರೆ. ಇವರು ಆಫೀಸರ್ ಎಂದು ಹೇಳಿದ್ದಾರೆ. ಇಲ್ಲಿ ಆಫೀಸ್ ಮತ್ತು ಆಫೀಸರ್ ಎನ್ನುವುದರ ನಡುವೆ ಸ್ವಲ್ಪ ಡಿಸ್ಕ್ರಿಮಿನೇಷನ್ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಅಧ್ಯಕ್ಷರೆ, ಇದು ರೂಲಿಂಗ್ ಅಥವಾ ಬರೀ ಅಬ್ಸರ್ವೇಷನ್ ಬಗ್ಗೆ ಹೇಳುತ್ತಿದ್ದೀರಾ? ಒಂದು ವೇಳೆ ಇದು ಕೇವಲ ಅಬ್ಸರ್ವೇಷನ್ ಆದರೆ ನಮ್ಮದೇನೂ ಅಬ್ಜೆಕ್ಷನ್ ಇಲ್ಲ. If it is an observation we have no objection.

ಅಧ್ಯಕ್ಷರು :— ನಾನು ಆಗಲೇ ಹೇಳಿ ಆಗಿದೆ. ತಾವು ಸ್ವಲ್ಪ ನಿಧಾನವಾಗಿ ಬಂದಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಒಂದು ಕೆಲಸ ಮಾಡಿ ಸ್ವಾಮಿ ಈಗ ಎಲ್.ಓ.ಸಿ.ಯಲ್ಲಿ ಕಟ್-ಆಫ್ ಇಲ್ಲ ಎನ್ನುವುದಾದಲ್ಲಿ ನನ್ನ ಜೊತೆಯಲ್ಲಿ ನೀವು ಬನ್ನಿ, ನಾನು ತೋರಿಸುತ್ತೇನೆ.

ಅಧ್ಯಕ್ಷರು :— ಸಿಂಧ್ಯಾರವರೇ, ತಾವು ಅದನ್ನೆಲ್ಲಾ ಮಾತನಾಡಬೇಡಿ. ದಯವಿಟ್ಟು ಅದೆಲ್ಲಾ ಬೇಡ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಏಕೆ ಸ್ವಾಮಿ, ಬನ್ನಿ ಎಲ್.ಓ.ಸಿ.ಯಲ್ಲಿ ಕಟ್-ಆಫ್ ಇದೆಯೋ ಅಥವಾ ಇಲ್ಲವೋ ಎನ್ನುವುದನ್ನು ನಾನು ತೋರಿಸುತ್ತೇನೆ.

ಅಧ್ಯಕ್ಷರು :— ದಯವಿಟ್ಟು ಕೇಳಿ. ಅಲಿಗೇಷನ್ಸ್ ಮಾಡಕೂಡದೆಂದು ಯಾರೂ ಹೇಳುವುದಿಲ್ಲ. ಪ್ರೊಸೀಜರ್ ಇದೆ ಅದನ್ನು ಫಾಲೋ ಮಾಡಿ ಎಂದು ಇದೆ.

(ಗೊಂದಲ)

Sri K. Jayaprakash Hegde :— I want to interpret. It is only about miscoduct ರೆಕಾರ್ಡ್ಸ್‌ನಲ್ಲಿ ಬರುತ್ತದೆ. ಲಂಚ ತೆಗೆದುಕೊಂಡಿರುವುದು ಯಾವುದಾದರೂ ರೆಕಾರ್ಡ್ಸ್‌ನಲ್ಲಿ ಬರುವುದಾದರೆ ನಾನು ಇನ್ನು ಮೇಲೆ ಲಂಚದ ಬಗ್ಗೆ ಮಾತನಾಡುವುದೇ ಇಲ್ಲ.

(ಗೊಂದಲ)

ಅಧ್ಯಕ್ಷರು :— ಮಾನ್ಯ ಸಿಂಧ್ಯಾರವರೆ, ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ನಾವು ಕೋರ್ಟಿನಲ್ಲಿ ಆರ್ಗ್ಯುಮೆಂಟ್ಸ್ ಮಾಡಿದ ಹಾಗೆ ಮಾಡುವುದಕ್ಕಾಗುವುದಿಲ್ಲ. ಏನಾದರೂ ಇಂಥ ಅಲಿಗೇಷನ್ಸ್ ಆಫೀಸರ್ಸ್ ಮೇಲಾಗಲಿ ಅಥವಾ ಆಫೀಸ್ ಮೇಲಾಗಲಿ ನಾವು ಅಲಿಗೇಷನ್ ಮಾಡಬೇಕಾದರೆ ಮೊದಲು ಸ್ಪೀಕರ್ ಆಫೀಸಿಗೆ ಸೂಚನಾ ಪತ್ರ ಕೊಟ್ಟು, ಈಗ ಇಲ್ಲಿ ಮಾತನಾಡಿದ್ದರೆ ಸರಿಯಾಗುತ್ತಿತ್ತು. You have not submitted it to the Speaker earlier: there you have failed. I uphold the Point of Order raised by Mr. Mallikarjuna Kharge.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— Our allegations stands ಎಂದು ನಾವು ಹೇಳುತ್ತಿದ್ದೇವೆ. ಅವರ ಪ್ರೊಸೀಜರ್ ಫಾಲೋ ಮಾಡಬೇಕೆನ್ನತಕ್ಕಂಥದ್ದನ್ನು, ಕೌಲ್ ಅಂಡ್ ಶಕ್‌ದರ್ ಬರೆದಿರತಕ್ಕಂಥದ್ದನ್ನು ರೀ-ಇಟರೇಟ್ ಮಾಡಿ ನಮಗೆಲ್ಲಾ ಮಾರ್ಗದರ್ಶನ ಮಾಡಿದ್ದೀರಿ. ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. ಅದರ ಬಗ್ಗೆ ನಮ್ಮದೇನೂ ಚರ್ಚೆ ಇಲ್ಲ. ತಾವು ಹೇಳಿರತಕ್ಕಂಥದ್ದು ಅಂತಿಮ ಎಂದು ನಾವೆಲ್ಲಾ ಒಪ್ಪಿಕೊಳ್ಳುತ್ತೇವೆ. ಆದರೆ ಕೆಲವೊಂದು ಎಲ್.ಓ.ಸಿ ರಿಲೀಸ್ ಆಗತಕ್ಕಂಥ ಸಂದರ್ಭದಲ್ಲಿ ಮೇಲಿಂದ ಕೆಳಗಡೆವರೆಗೂ ಕಟ್-ಆಫ್ ಇದೆ ಎನ್ನತಕ್ಕಂಥದ್ದನ್ನು ನಾನು ರಿಪೀಟ್ ಮಾಡುತ್ತಿದ್ದೇನೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ :— ಮಾನ್ಯ ಅಧ್ಯಕ್ಷರೆ, ತಮ್ಮ ರೂಲಿಂಗ್‌ನ್ನು ನಾವು ಗೌರವಪೂರ್ವಕವಾಗಿ ಒಪ್ಪಿಕೊಳ್ಳುತ್ತಾ, ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಒಂದು ಕ್ಯಾಮರಾ, ಎಂದು ವಿಡಿಯೊ ಸೆಟ್, ಒಂದು ಟೇಪ್ ರೇಕಾರ್ಡ್‌ರನ್ನು ತಾವು ದಯಮಾಡಿ ಕೊಡಿಸಬೇಕು. ಇದರಿಂದ ಈ ಭ್ರಷ್ಟಾಚಾರವನ್ನು ಹಿಡಿದುಕೊಂಡು ಬರುವುದಕ್ಕೆ ಅನುಕೂಲವಾಗುತ್ತದೆ. ಇಲ್ಲವೆಂದರೆ ಇಲ್ಲಿ ಮಾತನಾಡುವುದು ಕಷ್ಟವಾಗುತ್ತದೆ. ಇದು ಒಂದು ತರಹ ಗಾಳಿ ಇದ್ದಹಾಗೆ. ಎಲ್ಲಿದೆ, ಹೇಗಿದೆ ಎನ್ನುವುದು ಗೊತ್ತಾಗುವುದಿಲ್ಲ. ಭ್ರಷ್ಟಾಚಾರವನ್ನು ಹಿಡಿದುಕೊಂಡು ಬರುವುದಕ್ಕೆ ನಮಗೆಲ್ಲಾ ಕಂಪ್ಯೂಟರ್‌ಗಳನ್ನು ಒದಗಿಸಿದ ಹಾಗೆ ಮೇಲೆ ಹೇಳುದವುಗಳನ್ನು ಒದಗಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಎಲ್.ಓ.ಸಿ. ರಿಲೀಸ್ ಮಾಡುವುದರ ಬಗ್ಗೆ ಸರ್ಕಾರ ಸ್ಪಷ್ಟವಾದ ನಿರ್ಣಯವನ್ನು ತೆಗೆದುಕೊಳ್ಳಬೇಕು. ಇದನ್ನು ಮುಂದೆ ಏನು ಮಾಡಬೇಕು, ಯಾವ ಕೆಲಸ ಮೊದಲು ಆಗಿದೆ ಅದಕ್ಕೆ ರಿಲೀಸ್ ಮಾಡಬೇಕೆಂಬುದು ನನ್ನ ಮನವಿ. ಇನ್ನು ಈ ಶಿಕ್ಷಣ ಇಲಾಖೆಯಲ್ಲಿ ಸಮನ್ವಯ ಸಮಿತಿ ಮಾಡುತ್ತಿದ್ದಾರೆ. ಯಾವುಯಾವುದೋ ಊರಿನಲ್ಲಿ ಇರತಕ್ಕಂಥ ಮಕ್ಕಳನ್ನು ಕರೆದುಕೊಂಡು ಬಂದು ಅವರನ್ನು ತಮ್ಮ ಮಕ್ಕಳೆಂದು ಇಲ್ಲಿ ಶಾಲೆಗೆ ಸೇರಿಸಿ ಅವತ್ತು ಎಲೆಕ್ಷನ್‌ಗೆ ನಿಲ್ಲುವುದಕ್ಕೆ ಜನಗಳು ತಯಾರಾಗುತ್ತಿದ್ದಾರೆ ನಮ್ಮಲ್ಲಿ ಮಾಚಿಗನ ಹಳ್ಳಿ ಎನ್ನುವ ಊರು ಇದೆ. ಅಲ್ಲಿಯ ಪ್ರಧಾನರನ್ನು ಅಧ್ಯಕ್ಷರು ಆಗುವ ಹಾಗೆ ನೋಡಿಕೊಳ್ಳಬೇಕೆಂದು ಬೇರೆ ಬೇರೆ ಊರುಗಳಲ್ಲಿರುವ ಹುಡುಗರನ್ನು ಕರೆದುಕೊಂಡು ಬಂದು ಇಲ್ಲಿಗೆ ಸೇರಿಸಿಕೊಳ್ಳುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಪುನರ್‌ಪರಿಶೀಲನೆ ಮಾಡಬೇಕೆಂದಿದ್ದಾರೆ. ಏಕೆಂದರೆ ಈ ಪೋಷಕರ ಮಧ್ಯೆ ಎಲೆಕ್ಷನ್ ಮಾಡುವುದು, ಆಗ ಗಲಾಟೆ ಆಗುವಂಥಾದ್ದು ನಡೆಯುತ್ತಿದೆ. ಅದರ ಬಗ್ಗೆ ಪುನರ್‌ಪರಿಶೀಲನೆ ಮಾಡಿ ನಮ್ಮ ನೇತೃತ್ವದಲ್ಲಿ ಎಲೆಕ್ಷನ್ ನಡೆಯುವ ಹಾಗೆ ಮಾಡುತ್ತಿದ್ದಾರೆ.

ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ :— ಆ ಆದೇಶವನ್ನು ಅಮಾನತ್ತಿನಲ್ಲಾದರೂ ಇಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ಅವರೆಲ್ಲರೂ ಅನುಭವದ ಆಧಾರದ ಮೇಲೆ ಮಾತನಾಡುತ್ತಾರೆ. ಇವರು ಅನುಭವ ಇಲ್ಲದೆ ಅನೇಕ ಸಾರಿ ಅಲಿಗೇಷನ್ ಮಾಡಿಬಿಡುತ್ತಾರೆ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ಇಲ್ಲಿ ಒಂದು ವಿಚಾರ ಏನೆಂದರೆ ಹಲವಾರು ಸಂದರ್ಭದಲ್ಲಿ ನಾವು ಕಾನೂನಿನ ಪುಸ್ತಕಗಳನ್ನು ಅವಲಂಬನೆ ಮಾಡಬೇಕಾಗುತ್ತದೆ. ಈಗ ಈ ಪರಿಸ್ಥಿತಿಯಲ್ಲಿ ಏನಾಗಿದೆ ಎಂದರೆ ಹಲವಾರು ಸಂದರ್ಭದಲ್ಲಿ ಅಲಿಗೇಷನ್‌ನ್ನು ಅವರು ಇಂಟಿಮೇಷನ್ ಎಂದು ಟ್ರೀಟ್ ಮಾಡಿದರೆ ಬಹುಶ: ನಮಗೆ ಆರ್ಗ್ಯುಮೆಂಟ್ ಮಾಡಲಿಕ್ಕೆ ಸುಲಭ ಆಗಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಅಧ್ಯಕ್ಷರೆ, ಹಿಂದಿನ ಅಸೆಂಬ್ಲಿಯಲ್ಲಿ ಮತ್ತು ಈಗಿನ ಅಸೆಂಬ್ಲಿಯಲ್ಲಿ ಬಿ.ಜೆ.ಪಿ.ಯವರು ಮಾತನಾಡುತ್ತಿರತಕ್ಕಂಥ ಧಾಟಿ, ಅದರಲ್ಲಿದ್ದಂಥ ಒಂದು ಗ್ರಾವಿಟಿ ಕಡಿಮೆಯಾಗಿರತಕ್ಕಂಥದ್ದನ್ನು ನೀವು ಗಮನಿಸಿರಬಹುದು. ಅದಕ್ಕೆ ಮುಖ್ಯವಾದ ಕಾರಣ ಏನೆಂದರೆ ಅವರೂ ಈಗ ಆಳಲಿಕ್ಕೆ ಶುರು ಮಾಡಿದ್ದಾರೆ ಅದಕ್ಕೋಸ್ಕರ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಆಳಲಿಕ್ಕೆ ಶುರು ಮಾಡಿದ್ದಾರೋ ಅಥವಾ ಅಳುವುದಕ್ಕೆ ಶುರುಮಾಡಿದ್ದಾರೋ?

ಶ್ರೀ ಕೆ.ಬಿ. ಮಲ್ಲಿಕಾರ್ಜುನ :— ಹಾಗಾಗಿ 31ನೇ ತಾರೀಖಿನೊಳಗೆ ಚುನಾವಣೆ ನಡೆಯಬೇಕು. ಚುನಾವಣೆ ನಡೆಯುವುದಕ್ಕೆ ಆದೇಶ ಕೊಡಬೇಕೆಂದು ಹೇಳಿ ಈ ದಾಖಲೆಯನ್ನು ತಮ್ಮ ಮುಖಾಂತರ ಮಾನ್ಯ ಸಣ್ಣ ನೀರಾವರಿ ಸಚಿವರಿಗೆ ತಲುಪಿಸುತ್ತಾ ತಮಗೆ ಧನ್ಯವಾದವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

5. ವಿತ್ತೀಯ ಕಾರ್ಯಕಲಾಪ

2001-2002ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ಶ್ರೀ ಹೆಚ್. ಗೋಪಾಲ್ ಭಂಡಾರಿ (ಕಾರ್ಕಳ) :— ಮಾನ್ಯ ಅಧ್ಯಕ್ಷರೆ, ಸರ್ಕಾರ ಮಂಡಿಸಿದಂಥ ಬೇಡಿಕೆಗಳನ್ನು ಬೆಂಬಲಿಸಿ ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಶೇಕಡ 70ಕ್ಕಿಂತ ಹೆಚ್ಚು ರೈತರು ಕೃಷಿಯನ್ನು ಅವಲಂಬಿಸಿಕೊಂಡಿದ್ದು ಇವರ ಬಗ್ಗೆ ಹಿಂದೆ ಮಾತನಾಡಿದಂಥ ಎಲ್ಲಾ ಸದಸ್ಯರು ಈಗಾಗಲೇ ಪ್ರಸ್ತಾಪ ಮಾಡಿರುತ್ತಾರೆ. ಈ ರಾಜ್ಯದ ರೈತರ ಮತ್ತು ಕೃಷಿಯ ಬಗ್ಗೆ ಪ್ರಸ್ತಾಪ ಮಾಡುವುದಕ್ಕಿಂತ ಕರಾವಳಿ ಜಿಲ್ಲೆಯ ರೈತರ ಸಮಸ್ಯೆ ವಿಶಿಷ್ಟವಾದಂಥ ಸಮಸ್ಯೆಯಾಗಿದ್ದು ಅದನ್ನು ಪ್ರಸ್ತಾಪ ಮಾಡಲಿಕ್ಕೆ ನಾನು ಇಚ್ಛಿಸುತ್ತೇನೆ. ನಮ್ಮ ಕರಾವಳಿ ಜಿಲ್ಲೆಯಲ್ಲಿ ಸಾಕಷ್ಟು ಮಳೆ ಬರುತ್ತಿದೆ. ಸಾಕಷ್ಟು ಮಳೆ ಬಂದರೂ ಸಹ ಬೆಳೆಯತಕ್ಕಂಥ ಬೆಳೆಯ ಪ್ರಮಾಣ ಬಹಳ ಕಡಿಮೆಯಾಗಿದೆ. ಬಹುಶ: ಪಶ್ಚಿಮಘಟ್ಟದಿಂದ ಮೇಲ್ಭಾಗದಲ್ಲಿ ಬೆಳೆದಂಥ ಬೆಳೆಯ ಕಾಲುಭಾಗ ಬೆಳೆ ನಮ್ಮ ದಕ್ಷಿಣಕನ್ನಡ, ಉಡುಪಿ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇವತ್ತು ಬರುತ್ತಿದೆ. ಮೂಲತ: ಈ ಮೂರು ಜಿಲ್ಲೆಗಳಲ್ಲಿ ರೈತರು ಭತ್ತದ ಬೆಳೆಯನ್ನು ಅವಲಂಬಿಸಿಕೊಂಡಿರತಕ್ಕಂಥವರು. ಈಗ ಇದು ಬದಲಾಗಿದೆ. ಭತ್ತದ ಬೆಳೆಯನ್ನು ಅವಲಂಬಿಸಿಕೊಂಡಿದ್ದಂಥ ಸಾಕಷ್ಟು ಜನ ಇವತ್ತು ಬೆಳೆಯ ಪ್ರಮಾಣ ಕಡಿಮೆಯಾಗಿದ್ದರಿಂದ, ಲಾಭದ ಪ್ರಮಾಣ ಅತ್ಯಂತ ಕಡಿಮೆಯಾಗಿದ್ದರಿಂದ ಭತ್ತದ ಬೆಳೆಗೆ ಬದಲಾಗಿ ಬದಲಿ ವ್ಯವಸ್ಥೆಯನ್ನು ಮಾಡತಕ್ಕಂಥ ನಿಟ್ಟಿನಲ್ಲಿ ಇವತ್ತು ಸಾಕಷ್ಟು ವಾಣಿಜ್ಯ ಬೆಳೆಗಳಾದ ಅಡಿಕೆ, ಕರಿಮೆಣಸು, ತೆಂಗು ಈ ರೀತಿಯಾದ ಬೇರೆ ಬೇರೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಶೇಕಡ 50ರಷ್ಟು ಭತ್ತದ ಬೆಳೆಯನ್ನು ಕಡಿಮೆ ಮಾಡಿ ಅಡಿಕೆ ಬೆಳೆಯನ್ನು ಜಾಸ್ತಿ ಮಾಡಿರುತ್ತಾರೆ. ಇದರಿಂದ ನಮ್ಮ ಭಾಗದ ಕರಾವಳಿ ಜಿಲ್ಲೆಯ ರೈತರ ಪರಿಸ್ಥಿತಿ ಅತ್ಯಂತ ಚಿಂತಾಜನಕವಾಗಿದೆ. ಅಡಿಕೆ ಬೆಲೆಯನ್ನು ಅವಲಂಬಿಸಿಕೊಂಡಿರತಕ್ಕಂಥ ರೈತರು ಲಕ್ಷಾಂತರ ರೂಪಾಯಿಗಳನ್ನು ಸಾಲ ಮಾಡಿದ್ದಾರೆ. ಇದು ದೀರ್ಘಾವಧಿ ಬೆಳೆಯಾಗಿದ್ದು ಗಿಡ ಹಾಕಿ ಸುಮಾರು 4-5 ವರ್ಷಗಳು ಆದ ನಂತರ ಫಲ ಕೊಡತಕ್ಕಂತ ಅಡಿಕೆ ಬೆಳೆಯಾಗಿರುವುದರಿಂದ ಲಕ್ಷಾಂತರ ರೂಪಾಯಿಗಳನ್ನು ಬೇರೆ ಬೇರೆ ಬ್ಯಾಂಕುಗಳಿಂದ ಸಾಲ ಮಾಡಿ ಈ ಬೆಳೆಯನ್ನು ಬೆಳೆಸಿದ್ದಾರೆ. ಆದರೆ ಕಳೆದ 2-3 ವರ್ಷಗಳ ಹಿಂದೆ ಒಂದು ಕೆ.ಜಿ. ಬಿಳಿ ಗೋಟು ಅಡಿಕೆಗೆ 165 ರಿಂದ 175 ರೂಪಾಯಿ ಇದ್ದಲ್ಲಿ ಇವತ್ತು ಅದು ಕೇವಲ 35 ರೂಪಾಯಿಗಳಿಗೆ ಇಳಿಯತಕ್ಕಂಥ

12.10 ಪಿ.ಎಂ.

ಪರಿಸ್ಥಿತಿ ನಿರ್ಮಾಣವಾಗಿದೆ. ಈ ಜಿಲ್ಲೆಯ ಪ್ರದೇಶದ ರೈತರು ಕಂಗಾಲಾಗುವ ಪರಿಸ್ಥಿತಿ ಇದೆ. ಈಗಾಗಲೇ ತಾವು ಪತ್ರಿಕೆಯಲ್ಲಿ ಓದಿರಬಹುದು, ನಮ್ಮ ಭಟ್ಕಳ ಶಾಸಕರ

ಕ್ಷೇತ್ರದಲ್ಲಿ ಅಡಿಕೆ ಬೆಳೆ ಬೆಳೆಸುವ ರೈತ ಕುಟುಂಬದವರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಿದೆ. ಆದುದರಿಂದ, ಈ ಬಗ್ಗೆ ಏನಾದರೂ ಅಡಿಕೆ ಬೆಳೆಗೆ ಬೆಲೆಯನ್ನು, ಮಾರುಕಟ್ಟೆಯನ್ನು ಒದಗಿಸುವ ವ್ಯವಸ್ಥೆ ಮಾಡಬೇಕು ಮತ್ತು ಈ ಬಗ್ಗೆ ಸರ್ಕಾರ ಚಿಂತನೆಯನ್ನು ಮಾಡುತ್ತಿದೆ. ಮಾರುಕಟ್ಟೆ ಮಂತ್ರಿಗಳು ಈ ಬಗ್ಗೆ ಒಂದೆರಡು ಸಭೆಗಳನ್ನು ನಡೆಸಿದ್ದಾರೆ. ಆದರೆ, ಅಡಿಕೆಯಲ್ಲಿಯೂ ಬಿಳಿ ಗೋಟು ಇದ್ದು, ಕೆಂಪು ಅಡಿಕೆಗೆ ಸ್ವಲ್ಪಮಟ್ಟಿನ ಬೆಲೆಯಾದರೂ ಇದೆ. ಆದರೆ, ಬಿಳಿ ಗೋಟಿಗೆ ಏನೂ ಬೆಲೆ ಇರದ ಪರಿಸ್ಥಿತಿ ಇದೆ. ಅಂಥ ರೈತರನ್ನು ರಕ್ಷಿಸುವ, ಅವರಿಗೆ ಸರಿಯಾದ ಮಾರುಕಟ್ಟೆ ಬೆಲೆಯನ್ನೊದಗಿಸುವ ವ್ಯವಸ್ಥೆ ಮಾಡಲು ಸರ್ಕಾರ ಗಮನಹರಿಸಬೇಕೆಂದು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಮಳೆ ಬರುತ್ತದೆ. ಕೋಲಾರದಂಥ ಭಾಗದ ಕೆಲವು ಜಿಲ್ಲೆಗಳಲ್ಲಿ ಇಡೀ ವರ್ಷದಲ್ಲಿ ಬಂದ ಮಳೆ ನಮ್ಮ ಜಿಲ್ಲೆಯಲ್ಲಿ ಒಂದು ದಿನದಲ್ಲಿ ಬಂದು ಹೋಗುತ್ತದೆ. ಭೂಮಿಯಲ್ಲಿದ್ದ ಸಾರವೆಲ್ಲಾ ಕೊಚ್ಚಿಹೋಗುವ ಪರಿಸ್ಥಿತಿ ಇವತ್ತು

(ಈ ಹಂತದಲ್ಲಿ ಶ್ರೀ ಯು.ಆರ್. ಸಭಾಪತಿಯವರು ಪೀಠವನ್ನಲಂಕರಿಸಿದರು)

ನಿರ್ಮಾಣವಾಗುತ್ತಿದೆ. ಭೂಸಾರ ಸಂರಕ್ಷಣೆ ಮಾಡುವ ವ್ಯವಸ್ಥೆ ಅತ್ಯಂತ ಅವಶ್ಯಕವಾಗಿ ಕರಾವಳಿ ಜಿಲ್ಲೆಗಳಿಗೆ ಇದೆ. ಸರ್ಕಾರ ಭೂಸಾರ ಸಂರಕ್ಷಣೆಯನ್ನು ಮಾಡುವ ಬಗ್ಗೆ ವಿಶೇಷವಾಗಿ ಚಿಂತಿಸಿ, ಕೃಷಿ ಇಲಾಖೆಯವರು ಇದಕ್ಕೆ ಬೇರೆಯಾದ ಇಲಾಖೆಯನ್ನು ರಚಿಸಿದೆ ನಮ್ಮ ಮೈನರ್ ಇರಿಗೇಷನ್ ಇಲಾಖೆಯಿಂದ ಅಂತರ್ಜಲ ಮಟ್ಟ ಎತ್ತರಿಸುವ, ಭೂಮಿಯ ಸಾರವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದೆ. ಇದಕ್ಕೆ ಇನ್ನಷ್ಟು ಶಕ್ತಿ ಕೊಡಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಮಳೆಯಿಂದಾಗಿ ಭೂಮಿಯ ಸಾರ ಕೊಚ್ಚಿ ಸಮುದ್ರಕ್ಕೆ ಹೋಗಿ ಬೆಳೆ ಬರುವ ಪ್ರಮಾಣ ಕಡಿಮೆಯಾಗುತ್ತಿದೆ. ಆದುದರಿಂದ, ಕರಾವಳಿ ಜಿಲ್ಲೆಯ ರೈತರ ರಕ್ಷಣೆ ಬಗ್ಗೆ, ಅಲ್ಲಿಯ ರೈತರಿಗೆ ಭದ್ರತೆ ಕೊಡುವುದಕ್ಕೆ ಸರ್ಕಾರ ವಿಶೇಷವಾಗಿ ಚಿಂತಿಸಬೇಕೆಂದು ಹೇಳುತ್ತೇನೆ. ಅಡಿಕೆ ಜೊತೆಗೆ ಸಾಕಷ್ಟು ತೆಂಗನ್ನು ಸಹ ಕರಾವಳಿಯಲ್ಲಿ ಬೆಳೆಸುತ್ತಿದ್ದಾರೆ. ಎಲ್ಲರೂ ಕೂಡ ಕರಾವಳಿ ಪ್ರದೇಶಕ್ಕೆ ಹೋದಾಗ, ಅಲ್ಲಿ ತೆಂಗಿನ ಕೃಷಿ ಜಾಸ್ತಿ ಇರುವುದನ್ನು ನೋಡಬಹುದು. ಆದರೆ ತೆಂಗಿನಕಾಯಿಗೂ ಕೂಡ ಬೆಲೆ ಇಲ್ಲದ ಪರಿಸ್ಥಿತಿ ಇರುವಾಗ ಕೊಬ್ಬರಿ ಮಾಡಿದಾಗ ನಮ್ಮ ಭಾಗದ ಜನರಿಗೆ ಕೊಬ್ಬರಿಯನ್ನು ಕೇಂದ್ರ ಸರ್ಕಾರ ನಫೆಡ್ ಮೂಲಕ ಕೊಂಡುಕೊಳ್ಳುವ ವ್ಯವಸ್ತೆ ಮಾಡಿದೆ ಎಂದು ಕೇಳಿದ್ದೇನೆ. ಆದರೆ, ಕರಾವಳಿ ಜಿಲ್ಲೆಗೆ ಇದೇನೋ ವ್ಯವಸ್ತೆ ಜಾರಿಯಾಗಿಲ್ಲ. ಅಲ್ಲಿ ಈ ವ್ಯವಸ್ಥೆ ಮಾಡಬೇಕೆಂದು ಕೇಳುತ್ತೇನೆ. ಆರೋಗ್ಯ ಇಲಾಖೆಯಲ್ಲಿ ಭಾರತೀಯ ವೈದ್ಯ ಪದ್ಧತಿ ಎನ್ನುವ ಆಯುರ್ವೇದ ವ್ಯವಸ್ಥೆ ಇದೆ. ಆಯುರ್ವೇದದ ಬಗ್ಗೆ ರಾಜ್ಯ ಮತ್ತು ರಾಷ್ಟ್ರದ ಎಲ್ಲಾ ಪ್ರದೇಶಗಳಲ್ಲಿಯೂ ವಿಶೇಷವಾಗಿ ಜನರು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ನಮ್ಮಲ್ಲಿ ಆಯುರ್ವೇದ ಕಾಲೇಜುಗಳಿದ್ದು,

ಸಾಕಷ್ಟು ಜನ ಆಯುರ್ವೇದ ಪದವಿ ಪಡೆಯುತ್ತಿದ್ದಾರೆ. ಆದರೆ, ನಮ್ಮಲ್ಲಿರುವ ಆಯುರ್ವೇದ ಆಸ್ಪತ್ರೆಗಳನ್ನು ಉಳಿಸಿಕೊಳ್ಳುವ ವ್ಯವಸ್ಥೆ ಮಾಡಬೇಕಾಗಿದೆ. ವಿಶೇಷವಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಿಂದೆ ರೂರಲ್ ಡಿಸ್ಪೆನ್ಸರಿ ಎನ್ನುವ ವ್ಯವಸ್ಥೆ ಇತ್ತು. ಅಲ್ಲಿದ್ದ ವೈದ್ಯರುಗಳನ್ನು ಖಾಯಂ ಮಾಡಿ ಸರ್ಕಾರಿ ಆಯುರ್ವೇದ ಆಸ್ಪತ್ರೆಗಳಲ್ಲಿರುವ ಎಲ್ಲಾ ವ್ಯವಸ್ಥೆಗಳನ್ನು, ಕಟ್ಟಡಗಳನ್ನು, ಔಷಧಿಗಳನ್ನು ಕೊಡುವ ವ್ಯವಸ್ಥೆ ಇದೆ. ಇತ್ತೀಚೆಗೆ, ಆ ವೈದ್ಯರುಗಳ ನಿವೃತ್ತಿ ನಂತರ ಆಸ್ಪತ್ರೆಗಳನ್ನು ಮುಚ್ಚುವ ವ್ಯವಸ್ಥೆ ಇದೆ. ಅಲ್ಲಿ ಹೊಸ ಹುದ್ದೆ ಸೃಜಿಸುವ, ಹೊಸ ವ್ಯವಸ್ಥೆ ಸ್ಥಾಪಿಸುವ ವ್ಯವಸ್ಥೆಯನ್ನು ಮಾಡಿ, ಭಾರತೀಯ ವೈದ್ಯ ಪದ್ಧತಿಗೂ ಕೂಡ ಇದರಿಂದ ಸಾಕಷ್ಟು ಬೇಡಿಕೆ ಇರುವುದರಿಂದ, ಆ ವ್ಯವಸ್ಥೆಯನ್ನು ಅನುಷ್ಠಾನ ಮಾಡಬೇಕೆಂದು ಹೇಳುತ್ತೇನೆ. ಪಶ್ಚಿಮ ವಾಹಿನಿ ಬಗ್ಗೆ ನಾವು ಕೇಳುತ್ತಿದ್ದೇವೆ. ಅದಕ್ಕೆ ಸಾಕಷ್ಟು ಯೋಜನೆಗಳನ್ನು ರೂಪಿಸಿದ್ದೇವೆ. ಮೈನರ್ ಇರಿಗೇಷನ್ ಮಂತ್ರಿಗಳು ಮತ್ತು ಇಲಾಖೆಯವರು ಮುಖ್ಯಮಂತ್ರಿಗಳ ನಿರ್ದೇಶನದ ಮೇರೆಗೆ ಸಾಕಷ್ಟು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಈ ಕಾರ್ಯಕ್ರಮಗಳು ಕರಾವಳಿಯ ಮೂರು ಜಿಲ್ಲೆಗಳಿಗೆ ಅತ್ಯಂತ ಅವಶ್ಯಕವಾದುದಾಗಿವೆ. ಆದುದರಿಂದ, ಅದನ್ನು ಆದಷ್ಟು ಬೇಗ ಅನುಷ್ಠಾನ ಮಾಡುವ ಹಾಗೆ ಮಾಡಬೇಕೆಂದು ಸರ್ಕಾರವನ್ನು ವಿನಂತಿಸುತ್ತಿದ್ದೇನೆ. ಇತ್ತೀಚಿನ ದಿನಗಳಲ್ಲಿ ನಾನು ಪ್ರತಿನಿಧಿಸುವ ಕಾರ್ಕಳ, ಉಡುಪಿ ಮತ್ತು ಮಂಗಳೂರಿನ ಪ್ರದೇಶಗಳಲ್ಲಿ ಸಾಕಷ್ಟು ಮಲೇರಿಯಾ ರೋಗಗಳು ಕಾಣಿಸಿಕೊಳ್ಳುತ್ತಿವೆ. ಮಲೇರಿಯಾ ಕೇಸುಗಳ ಪತ್ತೆಯಾಗಿ, ಆ ಪ್ರದೇಶಗಳಲ್ಲಿ ಮಲೇರಿಯಾ ರೋಗವಿದೆ ಎಂಬುದೂ ಕೂಡ ಸರ್ಕಾರದ ಗಮನಕ್ಕೆ ಬಂದಿದೆ. 5-6 ವರ್ಷಗಳ ಹಿಂದೆ ನಮ್ಮ ರಾಜ್ಯದಲ್ಲಿ ಮಲೇರಿಯಾ ರೋಗವಿರಲಿಲ್ಲ. ನಮ್ಮ ಪ್ರದೇಶದಲ್ಲಿಯೂ ಇರಲಿಲ್ಲ. ಅದು ಸಂಪೂರ್ಣ ನಿಯಂತ್ರಣದಲ್ಲಿತ್ತು. ಈಗ ಅದು ಸಂಪೂರ್ಣ ನಿಯಂತ್ರಣ ಕಳೆದುಕೊಳ್ಳುವ ಹಂತಕ್ಕೆ ಬಂದಿದೆ. ಅದಕ್ಕೆ ಸರಿಯಾದ ಯೋಜನೆ ರೂಪಿಸಿ, ಇದಕ್ಕೊಂದು ರೀತಿಯ ವಾರ್‌ಫುಟ್‌ನಲ್ಲಿ ಕೆಲಸ ಮಾಡುವ ವ್ಯವಸ್ಥೆ ಮಾಡಬೇಕು. ವಿಶೇಷವಾಗಿ ಅಲ್ಲಿ ವೈದ್ಯರನ್ನು, ಲ್ಯಾಬೋರೇಟರಿಯನ್ನು ಅಥವಾ ಆರೋಗ್ಯ ಕಾರ್ಯಕರ್ತರನ್ನು ನಿಯೋಜಿಸುವ ಮೂಲಕ ಎಲ್ಲೆಲ್ಲಿ ಮಲೇರಿಯಾ ರೋಗದ ತೀವ್ರತೆ ಇದೆ, ಅಲ್ಲಿ ಈ ವ್ಯವಸ್ಥೆ ಮಾಡುವ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಬಗ್ಗೆ ಅನೇಕ ಸದಸ್ಯರು ಮಾತನಾಡಿದರು. ಶಾಲಾ ಅಭಿವೃದ್ಧಿ ಸಮಿತಿ ರಚಿಸುವಾಗ ಗೊಂದಲದ ವಾತಾವರಣ ಎಲ್ಲಾ ಕಡೆ ಸೃಷ್ಟಿಯಾಗಿದೆ. ಅದನ್ನು ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರ ಗಮನಹರಿಸುತ್ತದೆನ್ನುವ ವಿಶ್ವಾಸವಿದೆ. ಸಾಕಷ್ಟು ಶಾಲಾ ಕಟ್ಟಡಗಳ ಕೊರತೆ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ಶಾಲಾ ಕಟ್ಟಡಗಳ ಕೊರತೆ ತುಂಬುವ ಬಗ್ಗೆ ಸರ್ಕಾರ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆಂಬುವ ನಂಬಿಕೆ ಇದೆ. ವಯಸ್ಕರ ಶಿಕ್ಷಣದ ಬಗ್ಗೆ ಹೇಳುವುದಾದರೆ, 10 ವರ್ಷಗಳ ಹಿಂದೆ ನಮ್ಮ ಜಿಲ್ಲೆಯಲ್ಲಿ ಸಾಕ್ಷರತಾ ಆಂದೋಲನ ಮಾಡಿದ್ದೇವು. ಸಾಕಷ್ಟು

ಜನ ಅನಕ್ಷರಸ್ಥರು ಅಕ್ಷರಸ್ಥರಾಗಿರುವ ಸಾಧನೆ ಇದೆ; ಅದು ಒಂದು ಚರಿತ್ರೆಯಾಗಿದೆ. ಆದರೆ, ಈ ಸಾಕ್ಷರತಾ ಆಂದೋಲನಕ್ಕೆ ಬೇರೆ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದಿಂದ ಬೇರೆ ಬೇರೆ ಯೋಜನೆಗಳನ್ನು ತರಿಸುವ ಯೋಚನೆ ಇದೆ. ಆದರೆ, ಇದನ್ನು ಎಲ್ಲಾ ಜಿಲ್ಲೆಗಳಲ್ಲೂ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಈ ನಿರಂತರ ಶಿಕ್ಷಣ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ, ಬಹಳ ಉತ್ತಮವಾಗಿ ಜಾರಿ ಮಾಡುವ ನೆಲೆಯಲ್ಲಿ ಅನುಷ್ಠಾನ ಮಾಡುವ ಕಾರ್ಯಕ್ರಮ ಹಾಕಿಕೊಳ್ಳುವುದು ಅಗತ್ಯವಿದೆ ಎಂದು ಹೇಳುತ್ತೇನೆ. ಕಂದಾಯ ಮಂತ್ರಿಗಳು ಈಗಾಗಲೇ ಒಂದು ಘೋಷಣೆ ಮಾಡಿದ್ದಾರೆ. ಬಗರ್ ಹುಕುಂ ಏನಿದೆ ಅದನ್ನು ಸಕ್ರಮ ಮಾಡುವ ನಿಟ್ಟಿನಲ್ಲಿ ಅರ್ಜಿ ಕೊಡಲು ಪುನ: ಮೂರು ತಿಂಗಳ ಅವಧಿ ಕೊಡುತ್ತೇವೆಂದು ಹೇಳಿದ್ದಾರೆ. ಸಾಕಷ್ಟು ಡಿಸಿ ರಿಸರ್ವೇಷನ್ ಜಾತಿಗಳಿವೆ, ಗೋಮಾಳ, ಸೇಂದಿ, ಶರಾಬು ಅಂಗಡಿಗಳಿಗೆ ಬೇರೆ ಬೇರೆ ಪ್ರದೇಶಗಳಿಗೆ ಮೀಸಲಾಗಿರುವ ಜಾಗಗಳಿವೆ. ಸಾಮಾನ್ಯ ಬಡ ಜನರಿಗೆ ಗೊತ್ತಿಲ್ಲದೆ, ಅದರಲ್ಲಿ ಅವರು ಸಾಕಷ್ಟು ಆಕ್ರಮಣ ಮಾಡಿ ಮನೆ ಕಟ್ಟಿ ಸಾಕಷ್ಟು ಅಭಿವೃದ್ಧಿ ಮಾಡಿಕೊಂಡ ಜನರಿದ್ದಾರೆ. ಅಂಥ ಸಂದರ್ಭದಲ್ಲಿ ಅವರಿಗೆ ಆ ಜಾಗವನ್ನು ಮಂಜೂರು ಮಾಡಲು ಸಾಧ್ಯವಿರುವ ವ್ಯವಸ್ಥೆಯಲ್ಲಿ ಅನಾನುಕೂಲವಿರುವುದರಿಂದ ಡಿಸಿ ರಿಸರ್ವೇಷನ್, ಗೋಮಾಳ, ಸೇಂದಿ, ಅಂಗಡಿ ಇರಬಹುದು, ಇಂಥ ಮೀಸಲಿರುವ ಜಾಗಗಳಲ್ಲಿ ಪರಿಣಾಮಕಾರಿಯಾದ ಅಭಿವೃದ್ಧಿ ಕೃಷಿ ಇದ್ದರೆ, ಅದೇ ಜಾಗವನ್ನು, ಅದೇ ಉದ್ದೇಶಕ್ಕೆ, ಅದೇ ಗ್ರಾಮದಲ್ಲಿ ಬೇರೆ ಕಡೆ ಮೀಸಲಾಗಿರಿಸುವ ವ್ಯವಸ್ಥೆ ಮಾಡಿ ನಂತರ ಆ ಜಾಗವನ್ನು ಮಂಜೂರು ಮಾಡಿವ ವ್ಯವಸ್ಥೆ ಮಾಡಿದರೆ ಎಲ್ಲರಿಗೂ ಇದರಿಂದ ಅನುಕೂಲವಾಗುತ್ತದೆ. ಈ ಬಗ್ಗೆ ಸರ್ಕಾರ ವಿಶೇಷ ಚಿಂತನೆ ಮಾಡುತ್ತದೆಂದು ಹೇಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಕೃಷಿ ಕಾರ್ಮಿಕರಿದ್ದಾರೆ. ಇಲ್ಲಿ ಬೀಡಿ ಕಾರ್ಮಿಕರ ಸಮಸ್ಯೆ ಚಿಂತಾಜನಕವಾಗಿದೆ. ಈ ರಾಜ್ಯದಲ್ಲಿ ಹೆಚ್ಚು ಬೀಡಿ ಕಾರ್ಮಿಕರಿದ್ದರೆ ಅದು ಕರಾವಳಿ ಜಿಲ್ಲೆ. ಅಲ್ಲಿ ಬೀಡಿ ಕಾರ್ಮಿಕರಿಗೆ ವಾರದಲ್ಲಿ ಒಂದೆರಡು ದಿನವೂ ಕೆಲಸ ಸಿಗದಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಕಾರ್ಮಿಕ ಇಲಾಖೆಯು ವಿಶೇಷವಾಗಿ ಚಿಂತನೆ ಮಾಡಬೇಕು. ಗೇರು ಬೀಜ ಅಭಿವೃದ್ಧಿ ಘಟಕಗಳ ಬಗ್ಗೆ ಹೇಳುವುದಾದರೆ, ಇದು ಬೀಡಿ ಕಾರ್ಮಿಕರ ನಂತರ ಗೇರು ಬೀಜಗಳನ್ನು ಸಂಸ್ಕರಣ ಮಾಡುವ ಘಟಕ. ನನ್ನ ತಾಲ್ಲೂಕಿನಲ್ಲಿ ಸುಮಾರು 20 ಸಾವಿರ ಜನ ಕಾರ್ಮಿಕರು ಗೇರು ಬೀಜ ಘಟಕಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿಯೂ ಕೂಡ ಇವತ್ತು ಡಬ್ಲ್ಯೂಟಿಓನಿಂದ ಬೇರೆ ಬೇರೆ ರಾಷ್ಟ್ರಗಳಿಂದ ಗೇರು ಬೀಜ ಉತ್ಪನ್ನಗಳು ಇಲ್ಲಿ ಆಮದಾಗುವ ಪರಿಸ್ಥಿತಿ ಇರುವುದರಿಂದ ಅಲ್ಲಿ ಕೂಡ ಕಾರ್ಮಿಕರ ಪರಿಸ್ಥಿತಿ ಚಿಂತಾಜನಕವಾಗಿದೆ. ಸಾಕಷ್ಟು ಗೇರು ಬೀಜ ಕಾರ್ಖಾನೆಗಳು ಮುಚ್ಚುವ ಪರಿಸ್ಥಿತಿ ಇದೆ. ನನ್ನ ತಾಲ್ಲೂಕಿನಲ್ಲಿ ಶೇ.50 ರಷ್ಟು ಗೇರು ಬೀಜ ಘಟಕಗಳನ್ನು ಮುಚ್ಚಿದ್ದಾರೆ. ಆದರಿಂದಾಗಿ ಸಾಕಷ್ಟು ಕಾರ್ಮಿಕರಿಗೆ ಸಮಸ್ಯೆಯಾಗುತ್ತದೆ. ಈ ಬಗ್ಗೆ

ವಿಶೇಷವಾದ ಕಾರ್ಯಕ್ರಮವನ್ನು ಸರ್ಕಾರ ರೂಪಿಸುತ್ತದೆನ್ನುವ ವಿಚಾರ ಹೇಳುತ್ತೇನೆ. ಅರಣ್ಯ ಸಚಿವರಿಗೆ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ನಮ್ಮಲ್ಲಿ ಅರಣ್ಯ ಭೂಮಿಯ ಪಕ್ಕದಲ್ಲಿರುವ ಸರ್ಕಾರಿ ಜಮೀನನ್ನು ಹಂಚುವಾಗ ಕೆಲವು ಸಮಸ್ಯೆಗಳಾಗುತ್ತಿವೆ. ಉದಾಹರಣೆಗೆ ತಾಲ್ಲೂಕಿನಲ್ಲಿ ಸುಮಾರು ಒಂದು, ಒಂದೂವರೆ ಸಾವಿರ ಎಕರೆ ವಿಸ್ತೀರ್ಣವಿರುವ ಆ ಒಂದು ಸರ್ವೆ ನಂಬರಿನಲ್ಲಿ ಸುಮಾರು 100 ಎಕರೆ ಅಕ್ರಮ ಮೀಸಲು ಅರಣ್ಯವಿರುತ್ತದೆ. ಆ ನೂರು ಎಕರೆ ಮೀಸಲು ಅರಣ್ಯದಲ್ಲಿ ಅಕ್ರಮ ಸಕ್ರಮ ಮಾಡಲಿಕ್ಕೆ ನಾವು ಬೇಡಿಕೆ ಮಂಡಿಸುತ್ತಿಲ್ಲ. ಆದರೆ, ಆ ಒಂದು ಸಾವಿರ ಮೀಸಲು ಅರಣ್ಯ ಏನಿದೆ ಅದನ್ನು ಬಿಟ್ಟು ಉಳಿದಂತಹ ಸರ್ಕಾರಿ ಜಮೀನು ಏನಿದೆ, ಅಲ್ಲಿ ಕೃಷಿ ಮಾಡಿದಂಥ ರೈತರಿಗೆ ಆ ಭೂಮಿಯನ್ನು ಕೊಡಲಿಕ್ಕೆ ಅರಣ್ಯ ಇಲಾಖೆಯ ಅಧಿಕಾರಿಗಳು ಆಕ್ಷೇಪಣೆ ಮಾಡುತ್ತಿದ್ದಾರೆ, ಸರಿಯಾದಂಥ ನಕಾಶೆ ಕೂಡ ನಮ್ಮಲ್ಲಿ ಇಲ್ಲ. ಇದೆಲ್ಲವೂ ಕೂಡ ನಮ್ಮದೆನ್ನುವ ಅವರು ಕೇವಲ ಆರ್‌ಟಿಸಿಎಲ್ 100 ಎಕರೆಗೆ ಮಾತ್ರ ಆಕ್ಷೇಪಿಸಬಹುದೇ ವಿನಾ: ಎಲ್ಲದಕ್ಕೂ ಕೂಡ ಆಕ್ಷೇಪಿಸಬಾರದು. ಇದಕ್ಕಾಗಿ ತಾವು ಸದರಿ ಅಧಿಕಾರಿಗಳಿಗೆ ನಿರ್ದೇಶನ ಕೊಡಬೇಕು ಎಂದು ಹೇಳುತ್ತೇನೆ. ಕುದುರೆಮುಖ ವನ್ಯಜೀವಿಯ ವಿಭಾಗಕ್ಕೆ ಜಾಗವನ್ನು ಹಸ್ತಾಂತರ ಮಾಡತಕ್ಕ ಸಂದರ್ಭದಲ್ಲಿ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರ್ಸ್‌ರವರು ಸ್ಥಳಕ್ಕೆ ಹೋಗಿ ಪರಿಶೀಲಿಸಿ ಹಸ್ತಾಂತರ ಮಾಡಲಿಲ್ಲ. ಉದಾಹರಣೆಗೆ ಕಾರ್ಕಳ ತಾಲ್ಲೂಕಿನಲ್ಲಿರುವ ಜಾರಾ ಗ್ರಾಮದಲ್ಲಿ ನಾಲ್ಕಾರು ನಿವೇಶನ ಇರುವ ಕಾಲೋನಿ, ಕೇಂದ್ರ ಸರ್ಕಾರದ ನವೋದಯ ಶಾಲೆಯಿರುವ ಪ್ರದೇಶ, ಇವೆಲ್ಲವನ್ನು ವನ್ಯ ಜೀವಿ ವಿಭಾಗಕ್ಕೆ ಸೇರಿಸುವ ವ್ಯವಸ್ಥೆ ಮಾಡಿದ್ದಾರೆ. ಅರಣ್ಯವೇ ಇಲ್ಲದೆ ಇದ್ದರೂ ಇದನ್ನು ಸೇರಿಸಿರುವುದರಿಂದ ಇದನ್ನು ಡಿನೋಟಿಫಿಕೇಷನ್ ಮಾಡುವುದಕ್ಕೆ ಸಂಬಂಧಪಟ್ಟ ಇಲಾಖೆಗೆ ಚತಾವು ನಿರ್ದೇಶಿಸಬೇಕು. ಇದರ ಜೊತೆಗೆ ಎಲ್ಲರಿಗೂ ಗೊತ್ತಿರುವಂತೆ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಮುಖೇನ ಹಳದಿ ಕಾರ್ಡುಗಳನ್ನು ವಿಚತರಣೆ ಮಾಡುತ್ತಿದ್ದಾರೆ, ಇದಕ್ಕೆ ಪೂರಕವಾಗಿ ಬಡತನ ರೇಖೆಗಿಂತ ಕೆಳಗಿರುವವರ ಪಟ್ಟಿಯನ್ನು ಎರಡು ವರ್ಷಗಳ ಹಿಂದೆ ಸಮೀಕ್ಷೆ ಮಾಡಲಾಗಿದೆ. ಈ ಪಟ್ಟಿಯನ್ನು ತಯಾರಿಸುವಾಗ ಸಾಕಷ್ಟು ಲೋಪದೋಶಗಳಾಗಿವೆ. ಇವುಗಳನ್ನು ಪರಿಹಾರ ಮಾಡಲು ಒಂದು ಗ್ರಾಮ ಸಭೆಯನ್ನು ಕರೆದು ಆ ಬಿಪಿಎಲ್ ಪಟ್ಟಿಗೆ ಯಾರನ್ನು ಸೇರಿಸಿಲ್ಲ ಅಂಥವರನ್ನು ಸೇರಿಸುವ ಕೆಲಸವಾಗಬೇಕು, ಯಾರು ಅನರ್ಹರು ಅದರಲ್ಲಿ ಸೇರಿದ್ದಾರೆ ಅಂಥವರನ್ನು ಕೈಬಿಡಬೇಕು ಎಂದು ಸರ್ಕಾರ ಈಗಾಗಲೇ ಎಲ್ಲಾ ಜಿಲ್ಲೆಗಳಿಗೆ ಸುತ್ತೋಲೆ ಕಳುಹಿಸಿದ್ದರೂ ಇದು ಸರಿಯಾಗಿ ಅನುಷ್ಠಾನಕ್ಕೆ ಬರುವಲ್ಲಿ ಜಿಲ್ಲಾ ಮಟ್ಟದಲ್ಲಿ ಒಂದು ರೀತಿಯ ಜಿಜ್ಞಾಸೆ ಇದೆ, ಇದನ್ನು ಪರಿಹರಿಸಲು ಸರ್ಕಾರ ಗಮನಹರಿಸಬೇಕೆಂದು ಹೇಳುತ್ತಾ, ಅಂತರಜಲ ವೃದ್ಧಿಯ ಬಗ್ಗೆ ಈಗಾಗಲೇ ಸರ್ಕಾರ ಯೋಜನೆಗಳನ್ನು ರೂಪಿಸಿಕೊಂಡಿದೆ. ಇನ್ನು ನಮ್ಮ ಜಿಲ್ಲೆ ಆ ಕಾರ್ಯಕ್ರಮವನ್ನು ಸರಿಯಾಗಿ

ಅನುಷ್ಠಾನಗೊಳಿಸಬೇಕೆಂದು ಹೇಳಿ, ನಮ್ಮ ಕರಾವಳಿ ಜಿಲ್ಲೆಯ ರೈತರ ವಿಶೇಷವಾದ ತೊಂದರೆಗಳನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡು, ಅದನ್ನು ಪರಿಹರಿಸಲು ಕಾರ್ಯಕ್ರಮಗಳನ್ನು ರೂಪಿಸುತ್ತಾರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಎನ್. ಸಂಪಂಗಿ (ಬಾಗೇಪಲ್ಲಿ) :— ಮಾನ್ಯ ಛೇರ್ಮನ್‌ರವರೆ, ಈ ಬೇಡಿಕೆಗಳ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದನೆಗಳು. ಕೋಲಾರ ಜಿಲ್ಲೆಯ 11 ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಬಹಳ ಅವ್ಯವಸ್ಥೆಯಿಂದ ಕೂಡಿದೆ. ಇದರ ಜೊತೆಗೆ ಮುಂಗಾರು ಮಳೆ ಬಾರದೆ ಇರುವ ಕಾರಣ ಅನೇಕ ರೈತರು ಕಂಗಾಲಾಗಿರುವ ವಿಚಾರ ಈ ಸದನದಲ್ಲಿ ಚರ್ಚೆಯಾಗಿದೆ. ಅದರಲ್ಲೂ ನನ್ನ ಕ್ಷೇತ್ರದಲ್ಲಿ ಸುಮಾರು ವರ್ಷಗಳಿಂದ ಕುಡಿಯುವ ನೀರಿನ ಅವ್ಯವಸ್ಥೆ ಜೊತೆಗೆ ಈ ಫ್ಲೋರೈಡ್ ಅಂಶ ಜಾಸ್ತಿಯಿರುವುದರಿಂದ, ರೈತರಿಗೆ, ನಾಗರೀಕರಿಗೆ ಬಹಳ ನೋವು ಆಗಿದೆ. ಕಳೆದ ಸದನದಲ್ಲೂ ಇದೇ ವಿಷಯವಾಗಿ ನಾನು ಚರ್ಚೆ ಮಾಡಿದಾಗ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು, ಈ ಫ್ಲೋರೈಡ್ ಅಂಶ ಎಲ್ಲೆಲ್ಲಿ ಜಾಸ್ತಿಯಿದೆ ಅಲ್ಲಿ ಫ್ಲೋರೈಡ್ ರಹಿತ ನೀರು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆಂದೂ ಹೇಳಿದ್ದರು. ನಮ್ಮ ಭಾಗದ ಸುಮಾರು 300 ಹಳ್ಳಿಗಳಲ್ಲಿ ಈ ಫ್ಲೋರೈಡ್ ಅಂಶ ಹೆಚ್ಚಾಗಿದೆ. ಇಲ್ಲಿರುವ ಸುಮಾರು 30 ಸಾವಿರ ಜನರು ಈ ಫ್ಲೋರೋಸಿಸ್ ಖಾಯಿಲೆಗೆ ತುತ್ತಾಗಿದ್ದಾರೆ. ಇವನ್ನೆಲ್ಲಾ ಹತೋಟಿ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗಿದೆ. ಇವತ್ತು ಈ ಬಾಗದಲ್ಲಿ 400 ರಿಂದ 500 ಅಡಿಗಳಷ್ಟು ಬೋರ್ ಹಾಕಿದರೂ ನೀರು ಸಿಗತ್ತಿಲ್ಲ, ಸಿಕ್ಕರೂ ಕೂಡ ಫ್ಲೋರೈಡ್ ಅಂಶ ಜಾಸ್ತಿಯಿರುವುದರಿಂದ, ಗಡಿನಾಡಿನಲ್ಲಿರುವ ಜನಗಳು ಬೇರೆ ಕಡೆಗೆ ವಲಸೆ ಹೋಗುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ರೈತನಿಗೆ ಬೆಳೆಯಿಲ್ಲದೆ ಆರ್ಥಿಕವಾಗಿ ಹಿಂದೆ ಬಿದ್ದಿದ್ದು ಬಡತನ ತಾಂಡವಾಡುತ್ತಿದೆ. ಈಗಾಗಲೇ ಈ ಫ್ಲೋರೈಡ್ ಅಂಶವನ್ನು ತೆಗೆಯತಕ್ಕ ಕೆಲಸ ಮಾಡುತ್ತೇವೆ ಎಂದು ಸರ್ಕಾರ ಏನು ಹೇಳಿದೆ, ಈ ವ್ಯವಸ್ಥೆಯನ್ನು ನಮ್ಮ ಭಾಗಕ್ಕೆ ಆದಷ್ಟು ಬೇಗನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿರುವ ಕೆರೆಗಳಲ್ಲಿ ಅವತ್ತು ಹೂಳು ತುಂಬಿಕೊಂಡಿರುವುದರಿಂದ, ಈ ಹೂಳೆತ್ತುವ ಕಾರ್ಯಕ್ರಮ ನಮ್ಮ ಭಾಗದಲ್ಲಿ ಜರುಗಿಲ್ಲ. ಪಕ್ಕದಲ್ಲಿರುವ ಆಂಧ್ರಪ್ರದೇಶದ ಗಡಿನಾಡು ಪ್ರದೇಶಗಳಲ್ಲಿ ಹೂಳೆತ್ತುವ ಕಾರ್ಯಕ್ರಮವಾಗಲಿ, ಫೀಡರ್ ಚಾನಲ್ ಕಾರ್ಯಕ್ರಮವಾಗಲಿ, ಪ್ರಾರಂಭವಾಗಿವೆ. ಆದರೆ ನಮ್ಮ ಬಾಗದಲ್ಲಿ ಈ ಕೆಲಸ ತೆಗೆದುಕೊಳ್ಳುತ್ತೇವೆಂದು ಸರ್ಕಾರ ಏನು ಹೇಳಿದೆ, ಅದನ್ನು ಆದಷ್ಟು ಬೇಗನೆ ಪ್ರಾರಂಭಿಸಬೇಕು. ಇಲ್ಲಿಯವರೆಗೆ ಮಳೆ ಇರಲಿಲ್ಲ, ಆಗ ಹೂಳೆತ್ತಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಈಗಾಗಲೇ ಅಲ್ಲಿ ಬರ ಬಂದಿರುವುದರಿಂದ ವಲಸೆ ಹೋಗುವ ಜನಗಳನ್ನು ಉಳಿಸುವುದಕ್ಕಾಗಿ ಆದಷ್ಟು ಬೇಗನೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಬಾಗೇಪಲ್ಲಿ ಮತ್ತು ಗುಡಿಬಂಡೆ ಪಟ್ಟಣಗಳಲ್ಲಿ ಫ್ಲೋರೋಸಿಸ್ ಖಾಯಿಲೆಗೆ ತುತ್ತಾಗಿರುವವರ ಸಂಖ್ಯೆ ಹೆಚ್ಚಾಗಿರುವುದರಿಂದ,

ಇವರಿಗೆ ಸರಿಯಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಚಿತ್ರಾವತಿ ನದಿಗೆ ಬರಗೋಡು ಹತ್ತಿರ ಅಡ್ಡವಾಗಿ ಒಂದು ಅಣೆಕಟ್ಟನ್ನು ನಿರ್ಮಿಸಿ, ಅಲ್ಲಿ ಸಿಗುವಂಥ ಫ್ಲೋರೈಡ್ ರಹಿತ ನೀರನ್ನು ಬಾಗೇಪಲ್ಲಿ ಮತ್ತು ಗುಡಿಬಂಡೆ ಪಟ್ಟಣಗಳಿಗೆ ಸರಬರಾಜು ಮಾಡಲು ವ್ಯವಸ್ಥೆ ಮಾಡಿಸುತ್ತೇನೆಂದು ಏನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಆ ಒಂದು ಕಾರ್ಯವನ್ನು ಆದಷ್ಟು ಬೇಗ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಅವರನ್ನು ವಿನಂತಿಸುತ್ತೇನೆ. ನಮ್ಮ ಭಾಗದ ಜನರಿಗೆ ಅನೇಕ ವಿಚಾರಗಳಲ್ಲಿ ಬಹಳ ಅನ್ಯಾಯವಾಗಿದೆ. ಮಾನ್ಯ ಕಂದಾಯ ಮಂತ್ರಿಗಳಿಗೆ ಅನೇಕ ಸಲ ಪತ್ರಗಳನ್ನು ಕೊಟ್ಟಿದ್ದೇನೆ. ನಮ್ಮ ಭಾಗದ ಜನಕ್ಕೆ ಹಾಗೂ ಚಿಕ್ಕಬಳ್ಳಾಪುರದ ಉಪ ವಿಭಾಗದ ಜನಗಳಿಗೆ ಬಹಳ ಅನಾನುಕೂಲವಾಗಿದೆ. ಏಕೆಂದರೆ, ಕೋಲಾರ ಜಿಲ್ಲಾ ಕೇಂದ್ರವಾಗಿರುವುದರಿಂದ, ಇಲ್ಲಿನ ಜನರು ಅಲ್ಲಿಗೆ ಹೋಗುವುದಕ್ಕೆ ಬಹಳ ಅನಾನುಕೂಲವಾಗಿದೆ. ಏಕೆಂದರೆ ನೂರರಿಂದ ನೂರೈವತ್ತು ಕಿಲೋಮೀಟರ್ ಸಂಚರಿಸಬೇಕಾಗುತ್ತದೆ. ಚಿಕ್ಕಬಳ್ಳಾಪುರದ ಸುತ್ತ ಮುತ್ತ ಇರುವ ಶಿಡ್ಲಘಟ್ಟವಾಗಲಿ ಗೌರಿಬಿದನೂರು ಆಗಲಿ ಗುಡಿಬಂಡೆಯಿರಬಹುದು, ಚಿಕ್ಕಬಳ್ಳಾಪುರ ಇರಬಹುದು. ಈ ಭಾಗದ ಜನರು ಕೋಲಾರಕ್ಕೆ ಹೋಗಬೇಕೆಂದರೆ ಬಹಳ ಅವ್ಯವಸ್ಥೆ ಇದೆ. ಏಕೆಂದರೆ, ಚಿಕ್ಕಬಳ್ಳಾಪುರದಿಂದ ಕೋಲಾರಕ್ಕೆ ಹೋಗುವ ರಸ್ತೆಗಳು ಡಾಂಬರೀಕರಣವಾಗಿಲ್ಲ. ಚಿಕ್ಕಬಳ್ಳಾಪುರ ಉಪ ವಿಭಾಗದವರು, ಯಾವುದೇ ಕೋರ್ಟು, ಕಛೇರಿ, ಕೆಲಸಕ್ಕೆ ಹೋಗಬೇಕಾದರೆ ಸಮಯಕ್ಕೆ ಸರಿಯಾಗಿ ಹೋಗುವುದಕ್ಕೆ ಆಗುತ್ತಿಲ್ಲ. ಏಕೆಂದರೆ ಬಸ್ಸಿನ ಸೌಕರ್ಯಗಳು ಹೆಚ್ಚಾಗಿಲ್ಲ. ಚಿಕ್ಕಬಳ್ಳಾಪುರ ಪ್ರಸಿದ್ಧವಾದ ಸ್ಥಳ. ಇಡೀ ರಾಜ್ಯದಲ್ಲಿ ಅಲ್ಲದೆ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧವಾದ ಸ್ಥಳ ಚಿಕ್ಕಬಳ್ಳಾಪುರ. ಏಕೆಂದರೆ ಸರ್ ಎಂ. ವಿಶ್ವೇಶ್ವರಯ್ಯನವರು ಜನಿಸಿದಂತ ಮುದ್ದೇನಹಳ್ಳಿಯಲ್ಲಿರುವ ಅವರ ಮನೆಯನ್ನು ವಸ್ತು ಸಂಗ್ರಹಾಲಯವನ್ನಾಗಿ ಮಾಡಿ, ಪ್ರವಾಸಿಗರನ್ನು ಆಕರ್ಷಿಸುವ ಕೆಲಸ ಮಾಡುತ್ತಿಲ್ಲ. ಶ್ರೀ ವಿಶ್ವೇಶ್ವರಯ್ಯನವರೇ ಪಂಡಿತ್ ಜವಹರ್‌ಲಾಲ್ ನೆಹರೂ ಅವರನ್ನು ಕರೆದುಕೊಂಡು ಬಂದು ಒಂದು ಗ್ರಂಥಾಲಯಕ್ಕೆ ಶಂಕು ಸ್ಥಾಪನೆ ಮಾಡಿದಂಥ ಕಟ್ಟಡದಲ್ಲಿ ಇವತ್ತು ನಾಯಿಗಳು, ಭಿಕ್ಷುಕರು ಮಲಗುವಂಥ ಪರಿಸ್ಥಿತಿ ಬಂದಿದೆ. ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿರುವ ನಂದಿ ಬೆಟ್ಟ ಗಿರಿಧಾಮಕ್ಕೆ ಮಹಾತ್ಮ ಗಾಂಧೀಜೀಯವರು ಬಂದು ಶಾಂತಿ ಧಾಮದಲ್ಲಿ ಕೆಲವು ದಿನಗಳವರೆಗೆ ನೆಲೆಸಿದ್ದರು ಎನ್ನತಕ್ಕಂಥದನ್ನು ನಾವು ಪುಸ್ತಕದಲ್ಲಿ ಓದಿದ್ದೇವೆ.

ಛೇರ್ಮನ್ :— ಈ ವಿಷಯದ ಬಗ್ಗೆ ತಾವು ಪ್ರಸ್ತಾವನೆಯನ್ನು ಸಲ್ಲಿಸಿದ್ದೀರಾ?

ಶ್ರೀ ಎನ್. ಸಂಪಂಗಿ :— ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿದ್ದೇನೆ. ಹಾಗೆಯೇ ಇದರ ಬಗ್ಗೆ ಎರಡು-ಮೂರು ಬಾರಿ ಮಾತನಾಡಿದ್ದೇನೆ. ಈ ವಿಷಯ ಕಂದಾಯ ಮಂತ್ರಿಯವರಿಗೂ ಸಹ ಗೊತ್ತಿದೆ.

ಚಿಕ್ಕಬಳ್ಳಾಪುರಕ್ಕೆ ಮಹನೀಯರಾದಂಥ ಶ್ರೀ ಪಂಡಿತ್ ಜವಹಾರ್‌ಲಾಲ್ ನೆಹರುರವರು ಮತ್ತು ಮಹಾತ್ಮ ಗಾಂಧೀಯವರು ಪಾದಾರ್ಪಣೆ ಮಾಡಿದಂಥ ಸ್ಥಳವಾಗಿದೆ. ಆದರೆ, ಇವತ್ತಿನ ದಿವಸ ಈ ಒಂದು ಜಾಗಗಳು ನಶಿಸಿ ಹೋಗುವಂಥ ಪರಿಸ್ಥಿತಿ ಬಂದಿದೆ. ಈ ಭಾಗದ ಜನರಿಗೆ ಯಾವುದೇ ರೀತಿಯ ಸೌಕರ್ಯ ಸಿಕ್ಕಿಲ್ಲ. ಹಾಗೆಯೇ ಇಲ್ಲಿನ ರೈತರ ಅಭಿವೃದ್ಧಿ ವಿಚಾರದಲ್ಲಿ ಬಹಳಷ್ಟು ಕುಂಠಿತವಾಗಿದೆ. ಹಾಗೆಯೇ ಇಲ್ಲಿ ಒಳ್ಳೆಯ ರಸ್ತೆಗಳು ಮತ್ತು ಆಸ್ಪತ್ರೆಗಳ ಸೌಕರ್ಯವೂ ಕೂಡ ಇಲ್ಲ. ಇಲ್ಲಿರತಕ್ಕಂಥ ಜನರಿಗೆ ಅನೇಕ ಅಡೆತಡೆಗಳಿರುವುದರಿಂದ ಈ ಸಂದರ್ಭದಲ್ಲಿ ಸರ್ಕಾರಕ್ಕೆ ನೇರವಾಗಿ ಕೇಳಿಕೊಳ್ಳುವುದೇನೆಂದರೆ, ಈ ಭಾಗವನ್ನು ಚಿಕ್ಕಬಳ್ಳಾಪುರ ಜಿಲ್ಲೆಯನ್ನಾಗಿ ಮಾಡಿ ಇದಕ್ಕೆ ಸರ್ ಎಂ. ವಿಶ್ವೇಶ್ವರಯ್ಯ ಜಿಲ್ಲೆಯೆಂದು ನಾಮಕರಣ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಚಿಕ್ಕಬಳ್ಳಾಪುರದಿಂದ ಬೆಂಗಳೂರು ಸುಮಾರು 60 ಕಿ.ಮೀ. ದೂರವಿದೆ. ಆದೆ, ಚಿಕ್ಕಬಳ್ಳಾಪುರದಿಂದ ನಮ್ಮ ಮುಖ್ಯ ಕೇಂದ್ರಸ್ಥಾನವಾದ ಕೋಲಾರ ಸುಮಾರು 100 ಕಿ.ಮೀ. ದೂರವಿದೆ. ಇವತ್ತಿನ ದಿವಸ ಬೆಂಗಳೂರಿನಿಂದ ಬಾಗೇಪಲ್ಲಿಯವರೆಗೆ 6 ಲೈನ್‌ಗಳ ಕಾರಿಡಾರ್ ಯೋಜನೆಯಲ್ಲಿ ಒಳ್ಳೆಯ ರಾಷ್ಟ್ರೀಯ ಹೆದ್ದಾರಿಯನ್ನು ಸನ್ಮಾನ್ಯ ಮುಖ್ಯಮಂತ್ರಿಯವರು ಮಾಡಿಸಿದ್ದಾರೆ. ಹಾಗೆಯೇ ಚಿಕ್ಕಬಳ್ಳಾಪುರಕ್ಕೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವೂ ಕೂಡ ಬಹಳ ಹತ್ತಿರವಿದೆ. ಆದ್ದರಿಂದ ಬಹಳ ಹತ್ತಿರ ಇರತಕ್ಕಂಥ ಚಿಕ್ಕಬಳ್ಳಾಪುರವನ್ನು ಚಿಕ್ಕಬಳ್ಳಾಪುರ ಜಿಲ್ಲೆಯನ್ನಾಗಿ ಮಾಡಿದರೆ ನಿಜವಾಗಿಯೂ ನಮ್ಮ ಜನರು ಸರ್ಕಾರಕ್ಕೆ ಕೃತಜ್ಞತರಾಗಿರುತ್ತಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ, ಆದಷ್ಟು ಬೇಗ ಚಿಕ್ಕಬಳ್ಳಾಪುರವನ್ನು ಜಿಲ್ಲೆಯನ್ನಾಗಿ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಮೊನ್ನೆ ದಿವಸ ಒಂದು ವಿಚಾರದ ಬಗ್ಗೆ ನಾನು ಸದನದ ಬಾವಿಗೆ ಹೋಗಿದೆ. ಇವತ್ತಿನ ದಿವಸ ಬಾವಿಯಾಗಲಿ ಅಥವಾ ಸಮುದ್ರಕ್ಕೆ ಹೋದರೂ ಸಹ ನಮ್ಮ ವಿಚಾರವನ್ನು ಕೇಳುವಂಥವರು ಇಲ್ಲ. ಇವತ್ತಿನ ದಿವಸ ವಾರ್ತೆ ಓದುವಾಗ ಕ್ರೀಡಾರಂಗದ ವಿಷಯವನ್ನು ಕೊನೆಯಲ್ಲಿ ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಇವತ್ತಿನ ದಿವಸ ಯುವಕರೂ ಕೂಡ ಕೊನೆಯಲ್ಲಿದ್ದಾರೆ. ಯುವಕರು ಇವತ್ತಿನ ದಿವಸ ಕರಬೇವಿನಸೊಪ್ಪಾಗಿದ್ದಾರೆ. ಹೇಗೆಂದರೆ, ಕರಬೇವಿನಸೊಪ್ಪು ವಗ್ಗರಣೆಗೆ ಮುಖ್ಯವಾಗಿರುತ್ತದೆ. ಆದರೆ ಊಟದ ಸಮಯದಲ್ಲಿ ಇದನ್ನು ಹೊರಕ್ಕೆ ಹಾಕುತ್ತಾರೆ. ಇವತ್ತಿನ ದಿವಸ ಯುವಕರ ಪರಿಸ್ಥಿತಿ ಇದೇ ರೀತಿಯಾಗಿದೆ. ಈ ಸಂದರ್ಭದಲ್ಲಿ ಕ್ರೀಡಾ ಮಂತ್ರಿಯವರಿಗೆ ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ಸುಮಾರು ಕ್ರೀಡಾ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿದೆ. ನಮ್ಮ ರಾಜ್ಯದಲ್ಲಿರತಕ್ಕಂಥ ೧೭೫ ತಾಲ್ಲೂಕುಗಳಲ್ಲಿ ಕೇವಲ ೮ ತಾಲ್ಲೂಕುಗಳಲ್ಲಿ ಮಾತ್ರ ಕ್ರೀಡಾಂಗಣ ಪೂರ್ತಿಯಾಗಿದೆ ಎಂದು ವರದಿ ಬಂದಿದೆ. ಇನ್ನು ೮೫ ಕ್ರೀಡಾಂಗಣಗಳನ್ನು ಪೂರ್ತಿ ಮಾಡುವುದಕ್ಕೆ ಸುಮಾರು ೧೮ ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಸರ್ಕಾರ ಹೇಳಿದೆ.

ಇವತ್ತಿನ ದಿವಸ ೧೮ ಕೋಟಿ ರೂಪಾಯಿ ಕೊಡತಕ್ಕಂಥ ಸ್ಥಿತಿಯಲ್ಲಿ ಸರ್ಕಾರ ಇಲ್ಲ. ಇವತ್ತಿನ ದಿವಸ ತಾಲ್ಲೂಕು ಕ್ರೀಡಾಂಗಣಗಳನ್ನು ಆದಷ್ಟು ಬೇಗ ಪೂರ್ತಿಮಾಡಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಕ್ರೀಡಾಪಟುಗಳಿಗೆ ಉತ್ತೇಜನ ಕೊಡುವುದರ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕಾಗಿದೆ. ಇವತ್ತಿನ ದಿವಸ ಸುಮಾರು ೨೦ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದರೆ ತಾಲ್ಲೂಕು ಕ್ರೀಡಾಂಗಣಗಳು ಪೂರ್ತಿಯಾಗುತ್ತವೆ. ಇದಕ್ಕೆ ನನ್ನ ಸಲಹೆ ಏನೆಂದರೆ, ಲೋಕಸಭಾ ಮತ್ತು ರಾಜ್ಯ ಸಭಾ ಸದಸ್ಯರನ್ನು ನಮ್ಮ ರಾಜ್ಯದಿಂದ ಆಯ್ಕೆ ಮಾಡಿ ಕೇಂದ್ರಕ್ಕೆ ಕಳುಹಿಸಿ ಕೊಡುತ್ತೇವೆ. ಕೇಂದ್ರ ಸರ್ಕಾರ ಇವರಿಗೆ ಕೊಡತಕ್ಕಂಥ ಅನುದಾನದಲ್ಲಿ ಕನಿಷ್ಠಪಕ್ಷ ೨೫ ಲಕ್ಷ, ರೂಪಾಯಿಗಳನ್ನು ಕ್ರೀಡಾ ರಂಗಕ್ಕೆ ಉತ್ತೇಜನ ನೀಡುವುದಕ್ಕಾಗಿ ಪ್ರತಿಯೊಬ್ಬ ಸದಸ್ಯರು ಕೊಟ್ಟರೆ, ಇದರಿಂದ ಸುಮಾರು ೨೦ ಕೋಟಿ ರೂ. ಕಲೆಕ್ಟ್ ಆಗುತ್ತದೆ. ಈ ಒಂದು ಹಣದಿಂದ ತಾಲ್ಲೂಕು ಕ್ರೀಡಾಂಗಣವನ್ನು ಪೂರ್ತಿ ಮಾಡಿ ಕ್ರೀಡೆಗೆ ಹೆಚ್ಚಿನ ಉತ್ತೇಜನ ನೀಡುವುದಕ್ಕೆ ಸಾಧ್ಯವಾಗುತ್ತದೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ತಿಳಿಸಲಿಚ್ಛಿಸುತ್ತೇನೆ. ಇವತ್ತಿನ ದಿವಸ ಯುವಜನ ಸೇವಾ ಇಲಾಖೆಯವರು ಸರ್ಕಾರಿ ಕ್ರೀಡಾ ಕೂಟಗಳನ್ನು ನಡೆಸುತ್ತಿದ್ದಾರೆ. ೧೪ ಲಕ್ಷ ರೂಪಾಯಿಗಳನ್ನು ಸರ್ಕಾರಿ ಕ್ರೀಡಾ ಕೂಟಕ್ಕೆ ಕೊಡತಕ್ಕಂಥದು ಅವಶ್ಯಕತೆ ಇದೆಯೆ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ನಮ್ಮಲ್ಲಿರತಕ್ಕಂಥ ಅನೇಕ ಕ್ರೀಡಾಪಟುಗಳು ಚಿನ್ನದ ಮತ್ತು ಬೆಳ್ಳಿಯ ಪದಕವನ್ನು ಗೆದ್ದಿದ್ದಾರೆ. ಇವರಿಗೆ ಇವತ್ತಿನ ದಿವಸ ಒಂದು ಸಮಯದ ಊಟ ಸಿಗದೇ ಭಿಕ್ಷೆ ಮಾಡತಕ್ಕಂಥ ಪರಿಸ್ಥಿತಿ ಇದೆ. ಇಂಥ ಸಂದರ್ಭದಲ್ಲಿ ಸರ್ಕಾರ ನೌಕರರ ಕ್ರೀಡಾ ಕೂಟಕ್ಕೆ ೧೪ ಲಕ್ಷ ರೂಪಾಯಿ ಕೊಡುತ್ತಿದ್ದಾರೆಂದರೆ ನಿಜವಾಗಿಯೂ ಇದರ ಬಗ್ಗೆ ಆಲೋಚನೆ ಮಾಡಬೇಕಾಗಿದೆ. ಏಕೆಂದರೆ, ಒಬ್ಬ ಸರ್ಕಾರಿ ನೌಕರ ಒಂದು ವರ್ಷದಲ್ಲಿ ೫ ರೂಪಾಯಿಯನ್ನು ಈ ಒಂದು ಕ್ರೀಡಾ ಕೂಟಕ್ಕೆ ಕೊಡುವುದರಿಂದ ಲಕ್ಷಾಂತರ ರೂಪಾಯಿ ಕಲೆಕ್ಟ್ ಆಗುತ್ತಿದೆ. ಈ ಒಂದು ಹಣದಿಂದಲೇ ಯುವಜನ ಸೇವಾ ಇಲಾಖೆಯವರು ಸರ್ಕಾರಿ ನೌಕರರ ಕ್ರೀಡಾ ಕೂಟವನ್ನು ನಡೆಸಬಹುದು.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ್ ಹೆಚ್. ತಹಸಿಲ್ದಾರ್)ರವರು ಪೀಠವನ್ನು ಅಲಂಕರಿಸಿದರು)

ಸರ್ಕಾರಿ ನೌಕರರ ಕ್ರೀಡಾಕೂಟಕ್ಕೆ ಕೊಡತಕ್ಕಂಥ 14 ಲಕ್ಷ ರೂಪಾಯಿಗಳನ್ನು ಕೊಳಚಿ ನಿವಾಸಿಗಳ ಕ್ರೀಡಾಕೂಟಕ್ಕೆ ಕೊಡುವಂಥ ಒಂದು ವ್ಯವಸ್ಥೆ ಆಗಬೇಕು. ಏಕೆಂದರೆ ಕೊಳಚಿ ನಿವಾಸಿಗಳ ಕ್ರೀಡಾಕೂಟಕ್ಕೆ ನಾನು ಅಧ್ಯಕ್ಷನಾಗಿದಂಥ ಸಂದರ್ಭದಲ್ಲಿ ಇದನ್ನು ಮಾಡಿ ಕೊಟ್ಟಿದ್ದೇನೆ. ಆದರೆ ಈಗ ಇದನ್ನು ನಿಲ್ಲಿಸಿದ್ದಾರೆ. ಕೊಳಚಿ ಪ್ರದೇಶದಲ್ಲಿರತಕ್ಕಂಥ ಮಕ್ಕಳಿಗೆ ಇವತ್ತಿನ ದಿವಸ ಯಾವುದೇ ರೀತಿಯ ಉತ್ತೇಜನವನ್ನು ಕೊಡುತ್ತಿಲ್ಲ. ಹಳ್ಳಿಯಿಂದ ಬಂದಿರತಕ್ಕಂಥವರಿಗೆ ಸರಿಯಾದ ಆರ್ಥಿಕ ವ್ಯವಸ್ಥೆ ಇಲ್ಲದೇ ಇರತಕ್ಕಂಥ

ಸಂದರ್ಭದಲ್ಲಿ ಇವರೆಲ್ಲರೂ ಕೊಳಚಿ ಪ್ರದೇಶಗಳಿಗೆ ಹೋಗಿ ಸೇರಿಕೊಂಡಿದ್ದಾರೆ. ಇಲ್ಲಿನ ಮಕ್ಕಳಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಆಸೆ ಇರುತ್ತದೆ. ಹಾಗೆಯೇ ಕ್ರೀಡೆಗಳಲ್ಲಿ ಭಾಗವಹಿಸುವುದಕ್ಕೆ ಆಸಕ್ತಿ ಇರುತ್ತದೆ. ಆದರೆ ಇವರಿಗೆ ಯಾವುದೇ ರೀತಿಯ ಉತ್ತೇಜನ ಸಿಗುತ್ತಿಲ್ಲ. ಆದ್ದರಿಂದ ಸರ್ಕಾರ ಕೊಳಚಿ ಪ್ರದೇಶದ ನಿವಾಸಿಗಳಿಗೆ ಉತ್ತೇಜನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೇಯೇ ಕೊಳಚಿ ಪ್ರದೇಶದಲ್ಲಿ ಕ್ರೀಡಾಕೂಟಗಳನ್ನು ಪ್ರತಿವರ್ಷ ಮಾಡಿ, ಪ್ರತಿವರ್ಷ ೨೦ ಪ್ರತಿಭಾವಂತ ಮಕ್ಕಳನ್ನು ಸರ್ಕಾರ ದತ್ತು ತೆಗೆದುಕೊಂಡು ಯುವಜನ ಸೇವಾ ಹಾಸ್ಟೆಲ್‌ನಲ್ಲಿ ಇವರು ಇದ್ದುಕೊಂಡು ಓದುವುದಕ್ಕೆ ಮತ್ತು ಕ್ರೀಡಾ ಕಾರ್ಯಕ್ಕೆ ಉತ್ತೇಜನ ಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇದೇ ರೀತಿಯಾಗಿ ನಮ್ಮಲ್ಲಿರತಕ್ಕಂಥ ಕ್ರೀಡಾಪಟುಗಳಿಗೆ ನಾವು ಎಲ್ಲಾ ರೀತಿಯಾದ ವ್ಯವಸ್ಥೆಯನ್ನು ಮಾಡುತ್ತಿದ್ದೇವೆಂದು ತಾವು ಹೇಳುತ್ತೀರಿ. ಆದರೆ ಯಾವುದೇ ರೀತಿಯ ವ್ಯವಸ್ಥೆಯನ್ನು ಇವತ್ತಿನ ದಿವಸ ಕ್ರೀಡಾಪಟುಗಳಿಗೆ ಕೊಡುತ್ತಿಲ್ಲ. ವರ್ಷಕ್ಕೆ ಒಂದು ಬಾರಿ ಏಕಲವ್ಯ ಎನ್ನತಕ್ಕಂಥ ಪ್ರಶಸ್ತಿಯನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದಂಥ ಸಂದರ್ಭದಲ್ಲಿ ಎಲ್ಲಾ ಕ್ರೀಡಾಪಟುಗಳು ಬಹಳ ಸಂತೋಷಪಟ್ಟರು. ಏಕೆಂದರೆ ಕೇಂದ್ರ ಸರ್ಕಾರ ಅರ್ಜುನ ಪ್ರಶಸ್ತಿ ಕೊಡುತ್ತಿದ್ದು, ನಮ್ಮ ರಾಜ್ಯದಲ್ಲಿ ಉನ್ನತ ಮಟ್ಟದ ಕ್ರೀಡಾ ಪಟುಗಳಿಗೆ ಏಕಲವ್ಯ ಪ್ರಶಸ್ತಿಯನ್ನು ಕೊಡುತ್ತಿದ್ದುದನ್ನು ಈಗ ನಿಲ್ಲಿಸಿದ್ದಾರೆ. ಇಂಥ ಪ್ರಶಸ್ತಿಗಳನ್ನು ಮತ್ತು ಇತರೇ ಸೌಕರ್ಯಗಳನ್ನು ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಕ್ರೀಡಾಪಟಗಳಿಗೆ ಕೊಡದೇ ಇದ್ದರೆ ಯಾವ ರೀತಿಯಾದ ನೋವು ಅವರಿಗೆ ಆಗುತ್ತದೆ ಎನ್ನತಕ್ಕಂಥದನ್ನು ಸರ್ಕಾರ ಅರ್ಥ ಮಾಡುಕೊಳ್ಳಬೇಕಾಗಿದೆ. ಇವರಿಗೆ ಕೊಡತಕ್ಕಂಥ ಪ್ರತಿಮೆ ಅಥವಾ ಹಣ ಮುಖ್ಯವಲ್ಲ. ಪ್ರತಿವರ್ಷ ಪ್ರಶಸ್ತಿ ಕೊಡತಕ್ಕಂಥದು ಪ್ರಾರಂಭಮಾಡಬೇಕು. ಹಾಗೆಯೇ ಪ್ರತಿ ವರ್ಷ ಇವರಿಗೆ ಸಿಗಬೇಕಾಗಿರತಕ್ಕಂಥ ಸೌಕರ್ಯಗಳನ್ನು ಕೊಡುವುದಕ್ಕೆ ಸರ್ಕಾರ ಹಿಂದು-ಮುಂದು ನೋಡಬಾರದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸಾರಿಗೆ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಏಕಲವ್ಯ ವಿಜೇತರಿಗೆ ಮತ್ತು ಅವರ ಕುಟುಂಬದ ಮೂರು ಜನ ಸದಸ್ಯರಿಗೆ ಇಡೀ ಕರ್ನಾಟಕ ರಾಜ್ಯದಲ್ಲಿ ಒಂದು ವರ್ಷ ಪೂರ್ತಿ ಬಸ್ಸಿನಲ್ಲಿ ಓಡಾಡುವುದಕ್ಕೆ ಉಚಿತ ಪಾಸ್ ಕೊಡತಕ್ಕಂಥ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವೆಲ್ಲವನ್ನೂ ನಾನು ಏಕೆ ಹೇಳುತ್ತಿದ್ದೇನೆಂದರೆ, ನಮ್ಮ ರಾಜ್ಯದ ಕ್ರೀಡಾಪಟುಗಳಿಗೆ ಸರಿಯಾದಂಥ ಸೌಕರ್ಯಗಳು ಸಿಗದೇ ಇದ್ದಾಗ ನಮ್ಮ ಕ್ರೀಡಾ ಪ್ರಗತಿ ಬಹಳ ಹಿಂದೆ ಬೀಳುತ್ತದೆ ಎನ್ನತಕ್ಕಂಥ ವಿಷಯವನ್ನು ಸರ್ಕಾರಕ್ಕೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಕ್ರೀಡೆ ಹಿಂದಕ್ಕೆ ಬೀಳುವುದಕ್ಕೆ ಆರ್ಥಿಕ ಪರಿಸ್ಥಿತಿ ಒಂದು ಮುಖ್ಯ ಕಾರಣವೆಂದು ನಾವೆಲ್ಲಾ ಕೇಳಿದ್ದೇವೆ. ಬಹಳ ಪ್ರಯತ್ನಗಳಿಂದ ರಾಷ್ಟ್ರೀಯ ಕ್ರೀಡಾ ಕೂಟವನ್ನು ನಮ್ಮ ರಾಜ್ಯಕ್ಕೆ ತಂದಂಥ ಸಂದರ್ಭದಲ್ಲಿ ಸುಮಾರು ೧೪೦ ಕೋಟಿ ರೂಪಾಯಿ ವೆಚ್ಚದಲ್ಲಿ ಕ್ರೀಡಾಂಗಣ ನಿರ್ಮಾಣವನ್ನು ನಾವು ಮಾಡಿದ್ದೇವೆ.

ಆಗ ಕ್ರೀಡಾಂಗಣ ಮಾಡುವಂಥ ವಿಚಾರದಲ್ಲಿ ಕರ್ನಾಟಕ ರಾಜ್ಯದ ನಾಗರೀಕರು ಮತ್ತು ಕ್ರೀಡಾಪಟುಗಳು ಬಹಳ ಸಂತೋಷಪಟ್ಟರು. ನಾವು ಒಂದು ಕಂಠೀರವ ಕ್ರೀಡಾಂಗಣವನ್ನು

12.40 ಪಿ.ಎಂ.

ನೋಡುತ್ತಿದ್ದೇವೆ. ಅದರ ಬಗ್ಗೆ ಜನರು ಕೇಳುತ್ತಿದ್ದರು. ಆದರೆ, ಕಾಂಗ್ರೆಸ್ ಸರ್ಕಾರವಿದ್ದ ಸಂದರ್ಭದಲ್ಲಿ ರಾಷ್ಟ್ರೀಯ ಕ್ರೀಡೆಗಳನ್ನು ಕರ್ನಾಟಕದಲ್ಲಿ ನಡೆಸಲೇಬೇಕೆಂಬ ಒತ್ತಾಯ ಮಾಡಿ, ಸತತ ಪ್ರಯತ್ನದಿಂದ ಕರ್ನಾಟಕದಲ್ಲಿ ರಾಷ್ಟ್ರೀಯ ಕ್ರೀಡೆಗಳನ್ನು ತಂದೆವು. ಆ ಸಂದರ್ಭದಲ್ಲಿ ನಮಗೆ ಸುಮಾರು 70-80 ಕೋಟಿ ರೂ.ಗಳಲ್ಲಿ ಒಳಾಂಗಣ ಕ್ರೀಡಾಂಗಣ, ಹೊರಾಂಗಣ ಕ್ರೀಡಾಂಗಳನ್ನು ನಿರ್ಮಿಸಲು ಎಸ್ಟೀಮೆಟ್ ತಯಾರಾಯಿತು. ಸಭೆ ನಡೆದು, ಕೆಲಸವು ಸಹ ಶುರುವಾಯಿತು. ನಂತರ, ಯಾವುದೋ ಕಾರಣದಿಂದ ಅದು ಬಿದ್ದುಹೋಯಿತು. ಇನ್ನೊಂದು ಸರ್ಕಾರ ಬಂದಾಗ, ಹಿಂದೆ ನಡೆಸಿದ ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುವುದಕ್ಕೆ ಪ್ರಯತ್ನ ಮಾಡಿದ ಎಲ್ಲರನ್ನೂ ದೂರವಿಟ್ಟು, ಯಾರನ್ನೂ ಈ ವಿಚಾರವಾಗಿ ಕೇಳಲಿಲ್ಲ. ಕಾಂಗ್ರೆಸ್ ಸರ್ಕಾರ ಬರುವುದಕ್ಕೆ ಮುಂದೆ ಯಾವ ಸರ್ಕಾರವಿತ್ತು ಅದರ ಬಗ್ಗೆ ಹೇಳುತ್ತಿದ್ದೇನೆ. ನಾನು ಸ್ವತಂತ್ರ ಅಭ್ಯರ್ಥಿ. ನನಗೆ ಸ್ವಾತಂತ್ರ್ಯ ಸಿಕ್ಕಿದೆ, ಮಾತನಾಡಲು ಅವಕಾಶ ಕೊಟ್ಟಿದ್ದಾರೆ. ಸ್ವಾತಂತ್ರ್ಯ ಬಂದ ಮೇಲೆ ಬಹಳ ದಿವಸಗಳಿಂದ ಮಾತನಾಡುವುದಕ್ಕೆ ಅವಕಾಶ ಕೊಡಿ ಎನ್ನುತ್ತಿದ್ದೆ, ಅಲ್ಲಿ ಜನರು ನನಗೆ ಸ್ವಾತಂತ್ರ್ಯ ಕೊಟ್ಟು ಕಳುಹಿಸಿದರೂ ಇಲ್ಲಿ ನನಗೆ ಸ್ವಾತಂತ್ರ್ಯ ಸಿಗದ ಪರಿಸ್ಥಿತಿ ಇತ್ತು. ಇಂದು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ, ಮಾತನಾಡುತ್ತಿದ್ದೇನೆ. ಇವತ್ತು ನಾವೆಲ್ಲಾ ಕೆಲಸ ಮಾಡಿ ರಾಷ್ಟ್ರೀಯ ಕ್ರೀಡೆಗಳನ್ನು ಕರ್ನಾಟಕಕ್ಕೆ ತರಲೇಬೇಕೆಂಬ ಕಾರಣದಿಂದ ಇಲ್ಲಿ ತಂದ ಸಂದರ್ಭದಲ್ಲಿ ನಮ್ಮನ್ನು ದೂರವಿಟ್ಟು, 80 ಕೋಟಿ ರೂ.ಗಳಲ್ಲಿ ಕ್ರೀಡಾಂಗಣವನ್ನು ಪೂರ್ತಿ ಮಾಡುವುದು ಬಿಟ್ಟು, 140 ಕೋಟಿ ರೂ.ಗಳಲ್ಲಿ ಪೂರ್ಣ ಮಾಡಿದರು. ಅಂದರೆ ಇದರಲ್ಲಿ ಬಹಳ ಅವ್ಯವಹಾರ ನಡೆದಿರುವುದಕ್ಕೆ ಬಹಳ ದಾಖಲೆಗಳಿವೆ. ಒಳಾಂಗಣ ಕ್ರೀಡಾಂಗಣಕ್ಕೆ ಹಲಗೆ ಹಾಸಿಗೆ ಹಾಕಿದೆ; ಸಿಂಥೆಟಿಕ್ ಫ್ಲೋರಿಂಗ್ ಹಾಕಲು ಎಲ್ಲರೂ ತೀರ್ಮಾನಿಸಿದರು. ಅದನ್ನು ಹಾಕುವುದಕ್ಕೋಸ್ಕರ ಹೊರ ದೇಶಕ್ಕೆ ಅನೇಕ ಅಧಿಕಾರಿಗಳು ಹೋದರು. ಇದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದರು. ಹೊರ ದೇಶದಿಂದ ಸುಮಾರು 76.81 ಸಾವಿರ ರೂ. ವೆಚ್ಚದಲ್ಲಿ ನೆದರ್‌ಲ್ಯಾಂಡ್ ಕಂಪನಿಯಿಂದ 1997ರ ಫೆಬ್ರವರಿಯಲ್ಲಿ ಸಿಂಥೆಟಿಕ್ ಫ್ಲೋರಿಂಗ್ ಸಾಮಗ್ರಿಗಳನ್ನು ಬೆಂಗಳೂರಿಗೆ ತರಿಸಿಕೊಂಡರು. ಅದು ಬಂದ ನಂತರ, ಇದರ ಬಗ್ಗೆ ಚರ್ಚೆ ಪ್ರಾರಂಭವಾಯಿತು. ಕೊನೆಗೆ ಇವರೆಲ್ಲರೂ ಒಂದು ತೀರ್ಮಾನಕ್ಕೆ ಬಂದು 1997ರಲ್ಲಿ ನೆಲ ಹಾಸುವ ಪ್ರಕ್ರಿಯೆಯನ್ನು ಮುಂದೆ ಹಾಕಿದರು. ಮತ್ತೆ ಇವರೇ 1997ರಲ್ಲಿ ನೆಲ ಹಾಸು ಹಾಕುವುದಕ್ಕೆ ಸಾಧ್ಯವಿಲ್ಲವೆಂದರು. ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ

ಸಾಮಗ್ರಿಗಳನ್ನು ಇವರೇಕೆ ತರಿಸಿಕೊಂಡರು? ಇದರಿಂದೇನು ಪ್ರಯೋಜನವಾಯಿತು? ಇದರ ಬಗ್ಗೆ ಯಾರ ಕ್ರಮ ತೆಗೆದುಕೊಂಡಿರಿ? ಸಿಎಜಿರವರೂ ಸಹ ಇದನ್ನು ಅನಾವಶ್ಯಕವಾಗಿ ತರಿಸಿದ ಸಾಮಗ್ರಿ ಎಂದು ಹೇಳಿದ್ದಾರೆ. ಇದರ ಬಗ್ಗೆ ದೂರುಗಳನ್ನೂ ಸಹ ನಾನು ಪತ್ರಿಕೆಯಲ್ಲಿ ಓದಿದ್ದು, 4ನೇ ರಾಷ್ಟ್ರೀಯ ಕ್ರೀಡೆಗೆ ರಾಜ್ಯ ಸರ್ಕಾರವು ಸೂಕ್ತ ರೀತಿಯಲ್ಲಿ ಹಣವನ್ನು ಬಿಡುಗಡೆ ಮಾಡದೆ ಬ್ಯಾಂಕ್‌ಗಳಿಂದ ಓವರ್ ಡ್ರಾಫ್ಟ್ ಪಡೆದ ಹಿನ್ನಲೆಯಲ್ಲಿ ಅನಗತ್ಯವಾಗಿ 18.59 ಕೋಟಿ ರೂ. ಬಡ್ಡಿ ಕಟ್ಟಲಾಗಿದೆ ಎಂದು ವರದಿಯಾಗಿತ್ತು. ಅಂದರೆ, ಇದೇ ಹಣವನ್ನು ನಮ್ಮ ರಾಜ್ಯದ ಕ್ರೀಡಾಪಟುಗಳಿಗೆ ಕೊಟ್ಟಿದ್ದರೆ ರಾಜ್ಯದ ಎಲ್ಲಾ ಕ್ರೀಡಾಪಟುಗಳಿಗೂ ಗೌರವವಿರುತ್ತಿತ್ತು. ಅವರ ಮುಖದಲ್ಲಿ ಸಂತೋಷವಿರುತ್ತಿತ್ತು. ಸಂಥಟಿಕ್ ಟ್ರಾಕ್ ವಿಚಾರದಲ್ಲಿ ಅವ್ಯವಹಾರವೇನು ನಡೆದಿದೆ, ಸಿಎಜಿ ಇದರ ವಿರುದ್ಧ ವರದಿ ಕೊಟ್ಟಿದ್ದಾರೆ, ಇದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಾಗುತ್ತಿಲ್ಲವೇ? ಯಾವ್ಯಾವ ಅಧಿಕಾರಿಗಳು ಇದರಲ್ಲಿದ್ದಾರೆ? ಯಾವ್ಯಾವ ರಾಜಕಾರಣಿಗಳು ಶಾಮೀಲಾಗಿದ್ದರು? ಅವರೆಲ್ಲರೂ ಹೊರ ಬರಬೇಕಾಗುತ್ತದೆ. ಅಂದು ರಾಜ್ಯ ಕ್ರೀಡಾ ಪರಿಷತ್ತಿನ ಅಧ್ಯಕ್ಷನಾಗಿದ್ದೆ. ಆ ಸಂದರ್ಭದಲ್ಲಿ ಕರ್ನಾಟಕಕ್ಕೆ ನಾವು ರಾಷ್ಟ್ರೀಯ ಕ್ರೀಡೆಗಳನ್ನು ತರಲು ಪ್ರಯತ್ನಿಸಿದಾಗ ಈ ಕ್ರೀಡೆಗಳು ನಡೆಯುವ ಸಂದರ್ಭದಲ್ಲಿ ನಾನೇ ಸ್ವತ: ಫೋನ್ ಮಾಡಿ ಒಂದು ಪಾಸ್ ಸಳುಹಿಸಿ ಎಂದರೆ ಒಬ್ಬ ಅಧಿಕಾರಿ ಸಹ ಕಿವಿಗೊಡಲಿಲ್ಲ. ನಮ್ಮನ್ನು ಮೂಲೆಯಲ್ಲಿ ಕೂರಿಸಿ ಅವಮಾನ ಮಾಡಿದರು. ಆದರೆ, ಇಂಥ ಅವ್ಯವಹಾರ ಮಾಡುವುದಕ್ಕೆ ಮುಂದಾಗಿದ್ದಾರೆ. ಇದರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಒಳಾಂಗಣ ಕ್ರೀಡಾಂಗಣಕ್ಕೆ 80 ಕೋಟಿ ರೂ.ಗಳನ್ನು ಖರ್ಚು ಮಾಡುವ ಸಂದರ್ಭದಲ್ಲಿ ಇಂದೂ ಕೂಡ ಮಳೆ ನೀರು ಬಂದರೆ ಇಡೀ ಕ್ರೀಡಾಂಗಳಣದಲ್ಲಿ ನೀರು ತುಂಬುತ್ತದೆ. ಅಲ್ಲಿ ಕ್ರೀಡೆಗಳಿಗೆ ಅವಕಾಶವಿಲ್ಲ. ಈಗಾಗಲೇ ಯಾರ್‍ಯಾರು ಟೆಂಡರ್‌ಗಳಲ್ಲಿ ಭಾಗವಹಿಸಿದ್ದರು, ಕಟ್ಟಡ ಕಟ್ಟಿದ ಕಂಟ್ರಾಕ್ಟರ್ಸ್‌ಗಳಿಗೆ ಪೂರಾ ಹಣ ಕೊಟ್ಟಿದ್ದಾರೆ. ಅವರಿಗೆ ಯಾವುದೇ ಕಮಿಟ್‌ಮೆಂಟ್ ಇಲ್ಲ. ಕೆಲವು ಅಧಿಕಾರಿಗಳು, ನಾವೇನೂ ಕಮಿಟ್‌ಮೆಂಟ್ ಮಾಡಿಲ್ಲ, ಅವರಿಗೆ ಇಷ್ಟು ಕೋಟಿ ರೂ.ಗಳಲ್ಲಿ ಕಟ್ಟಿ ಹೊರಟು ಹೋಗಿ ಎಂದಿದ್ದವು ಎಂದರು. ಅವರು ಹೊರಟು ಹೋಗಿದ್ದಾರೆ. ಒಳಾಂಗಣ ಕ್ರೀಡಾಂಗಣದ ಮೈನ್‌ಟನನ್ಸ್‌ಗೆ ಸರ್ಕಾರ ಪ್ರತಿವರ್ಷ 25 ಲಕ್ಷ ರೂ. ಕೊಡುತ್ತಿದೆ. ಇಷ್ಟು ಕೋಟಿ ರೂ. ಖರ್ಚು ಮಾಡಿ ಪೂರ್ಣ ಮಾಡಿದ, ಅವ್ಯವಸ್ಥೆಯಲ್ಲಿರುವ ಕ್ರೀಡಾಂಗಣಕ್ಕೆ 25 ಲಕ್ಷ ರೂ.ಗಳನ್ನು ಪ್ರತಿವರ್ಷ ಕೊಡುವ ಅವಶ್ಯಕತೆ ಏನಿದೆ? ಇಂಥ ಅನೇಕ ಅವ್ಯವಹಾರಗಳು ರಾಷ್ಟ್ರೀಯ ಕ್ರೀಡೆಗಳ ಹೆಸರಲ್ಲಿ ನಡೆದ ಸಂದರ್ಭದಲ್ಲಿ ನಾವು ಕಣ್ಣುಮುಚ್ಚಿ ಕೂರಬೇಕೆ? ಇದರಿಂದ ನಮ್ಮ ಗ್ರಾಮೀಣ ಪ್ರದೇಶದ ಕ್ರೀಡಾಂಗಣಗಳನ್ನು ಪೂರ್ತಿ ಮಾಡುವುದಕ್ಕಾಗುವುದಿಲ್ಲ, ಕ್ರೀಡಾಪಟುಗಳನ್ನು ಮೇಲಕ್ಕೆ ತರಲು ಆಗುವುದಿಲ್ಲ. ಆದರ ಬಗ್ಗೆ ಯಾರ್‍ಯಾರು ಶಾಮೀಲಾಗಿ, ರಾಷ್ಟ್ರೀಯ ಕ್ರೀಡೆಗಳ ಸಂದರ್ಭದಲ್ಲಿ ಅವ್ಯವಹಾರದಲ್ಲಿ

ಒಳಗಾಗಿದ್ದಾರೆ, ಅಂಥ ಅಧಿಕಾರಿಗಳ, ರಾಜಕಾರಣಿಗಳ ಹೆಸರುಗಳನ್ನು ಬಯಲು ಮಾಡಿ. ನಮ್ಮ ಕ್ರೀಡಾಪಟುಗಳು ಬಹಳ ಹಿಂದಿದ್ದಾರೆ. ನಮಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಆಡಲು ಅವಕಾಶ ಸಿಕ್ಕಿದಾಗ, ಒಬ್ಬ ಕ್ರೀಡಾಪಟು ಹೋಗಿ ಪ್ರತಿಯೊಂದು ಸಂಸ್ಥೆಯಲ್ಲಿ ಭಿಕ್ಷೆ ಬೇಡುವ ಪರಿಸ್ಥಿತಿ ಬಂದಿದೆ. ಸರ್ಕಾರ ನೇರವಾಗಿ ಹಣ ಕೊಟ್ಟು ಹೋಗಿ ಕ್ರೀಡೆಗಳಲ್ಲಿ ಭಾಗವಹಿಸಿ ಎಂದು ಹೇಳುವ ಪರಿಸ್ಥಿತಿ ಇಲ್ಲದಿರುವಾಗ ನಮ್ಮ ಕ್ರೀಡಾಪಟುಗಳು ಭಿಕ್ಷೆಬೇಡುವ ಪರಿಸ್ಥಿತಿಯಲ್ಲಿರುವ ಸಂದರ್ಭದಲ್ಲಿ ಇಂದು ಇಂಥ ಅವ್ಯವಹಾರಗಳನ್ನು ನೋಡಿ ನಾವು ಕಣ್ಣುಮುಚ್ಚಿ ಕುಳಿತರೆ, ನಮ್ಮ ಕರ್ನಾಟಕದ ಯುವ ಜನತೆಗೆ, ಕ್ರೀಡಾಪಟುಗಳಿಗೆ ಮಾಡುವ ಅವಮಾನವೆಂದು ಹೇಳುತ್ತೇನೆ. ನನಗೆ ಇಂದು ಮಾತನಾಡಲು ಅವಕಾಶಕೊಟ್ಟು ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತು ಮುಗಿಸುತ್ತೇನೆ.

+ಶ್ರೀಮತಿ ಅನುಸೂಯಮ್ಮ ನಟರಾಜ್ (ಚಿಕ್ಕಬಳ್ಳಾಪುರ) :— ಮಾನ್ಯ ಉಪಾಧ್ಯಕ್ಷರೇ, ಚಿಕ್ಕಬಳ್ಳಾಪುರ ಜಿಲ್ಲೆಯಾಗಬೇಕೆಂದು ನಾನು ಪ್ರತಿ ಅಧಿವೇಶನದಲ್ಲಿಯೂ ಚುಕ್ಕೆ ಗುರ್ತಿನ ಪ್ರಶ್ನೆ ಕೇಳುತ್ತಿದ್ದೆ, ಗಮನ ಸೆಳೆವ ಪ್ರಶ್ನೆ ಮೂಲಕ ಕೇಳುತ್ತಿದ್ದರೂ, ಅದು ಬರಲಿಲ್ಲ. ಈ ದಿನ ತಾವು ಅವಕಾಶ ನೀಡಿದ್ದಕ್ಕೆ ವಂದನೆಗಳು. ಏಕೆಂದರೆ, ಈಗಾಗಲೇ ಮಾನ್ಯ ಸಂಪಂಗಿಯವರು ಹೇಳಿದ್ದಾರೆ. ಅದು ಜಿಲ್ಲೆಯಾಗಲೇ ಬೇಕೆಂಬುದಕ್ಕೆ ಸುಮಾರು ಕಾರಣಗಳಿವೆ, ಚಿಕ್ಕಬಳ್ಳಾಪುರ ಉಪವಿಭಾಗಕ್ಕೆ ಚಿಂತಾಮಣಿ, ಶಿಡ್ಲಘಟ್ಟ, ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರು, ಚಿಕ್ಕಬಳ್ಳಾಪುರ ಸೇರಿ 6 ತಾಲ್ಲೂಕುಗಳಾಗುತ್ತವೆ. ಅವುಗಳನ್ನು ಸೇರಿಸಿ ವಿಶ್ವೇಶ್ವರಯ್ಯ ಜಿಲ್ಲೆ ಎಂದು ಮಾಡಿದರೆ ತುಂಬಾ ಅನುಕೂಲವಾಗುತ್ತದೆ. ಲೋಕಸಭಾ ಸದಸ್ಯರಾದ ಮಾನ್ಯ ಜಾಲಪ್ಪನವರು ಎಸಿ, ಡಿವೈಎಸ್‌ಪಿ, ಎಕ್ಸಿಕ್ಯೂಟಿವ್ ಇಂಜಿನಿಯರ್ಸ್, ಹೊಸದಾಗಿ ಸಾರಿಗೆ ಇಲಾಖೆಯಿಂದ ವಿಶೇಷ ಡಿಸಿ ಬಂದಿದ್ದಾರೆ, ಶಿಕ್ಷಣ ಇಲಾಖೆಯಿಂದ ಡಿಡಿಪಿಐ ಬಂದಿದ್ದಾರೆ; ಮಾನ್ಯ ಸಂಪಂಗಿಯವರ ಕ್ಷೇತ್ರದಲ್ಲಿ ಸುಮಾರು ಗಲಾಟೆಗಳಾಗುತ್ತವೆ. ಕೋಲಾರದಿಂದ ಎಸ್‌ಪಿ ಬರಬೇಕಾದರೆ ಎರಡು ಗಂಟೆ ಬೇಕು. ಆದೇ ನಮ್ಮ ಚಿಕ್ಕಬಳ್ಳಾಪುರದಿಂದ ಅವರು ಬರಲು 45 ನಿಮಿಷ ಸಾಕು. ಅದೂ ಅಲ್ಲದೆ, ನಮ್ಮಲ್ಲಿ ಅನೇಕ ವಿದ್ಯಾ ಸಂಸ್ಥೆಗಳಿವೆ, ಇಂಜಿನಿಯರಿಂಗ್, ಪಾಲಿಟೆಕ್ನಿಕ್ ಕಾಲೇಜುಗಳು, ಟಿಸಿಹೆಚ್, ಬಿಎಡ್, ಸಿಪಿಎಡ್ ಸಂಸ್ಥೆಗಳಿವೆ. ನಾವು ಸೆಪ್ಟೆಂಬರ್ 15 ರಂದು ವಿಶ್ವೇಶ್ವರಯ್ಯನವರ ಜನ್ಮದಿನವನ್ನು ಆಚರಿಸುತ್ತಿದ್ದೇವೆ. ಇಂತಹ ಪವಿತ್ರವಾದ ನಮ್ಮ ಚಿಕ್ಕಬಳ್ಳಾಪುರವನ್ನು ಜಿಲ್ಲೆಯನ್ನಾಗಿ ಮಾಡಬೇಕೆಂದು ನಾನು ತಮ್ಮೆಲ್ಲರ ಹತ್ತಿರ ವಿನಂತಿಸುತ್ತೇನೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರಿಗೆ ಇದರ ಬಗ್ಗೆ ಸೋಮವಾರ ಪತ್ರವನ್ನು ಕೊಟ್ಟಿದ್ದೇನೆ. ದಯವಿಟ್ಟು ಚಿಕ್ಕಬಳ್ಳಾಪುರವನ್ನು ಅತೀ ಬೇಗನೆ ಜಿಲ್ಲೆಯನ್ನಾಗಿ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆಂದು ಹೇಳುತ್ತಾ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕಟ್ಟಾಸುಬ್ರಹ್ಮಣ್ಯನಾಯ್ಡು (ಶಿವಾಜಿನಗರ) :— ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಇದರಲ್ಲಿ ಮುಖ್ಯವಾಗಿ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಬಗ್ಗೆ ಮಾತನಾಡುವುದಾದರೆ, ಕರ್ನಾಟಕ ರಾಜ್ಯದಲ್ಲಿ 4 ಸಾವಿರ ಕೊಳಗೇರಿಗಳು ಇವೆ. ಇದರಲ್ಲಿ ಸುಮಾರು 15 ಲಕ್ಷಕ್ಕಿಂತಲೂ ಹೆಚ್ಚು ಜನರು ವಾಸ ಮಾಡುತ್ತಿರುವುದು ನಮ್ಮೆಲ್ಲರಿಗೂ ಗೊತ್ತಿದೆ. ಅದರಲ್ಲೂ ವಿಶೇಷವಾಗಿ ಇಲ್ಲಿ ಆರಿಸಿ ಬಂದಿರುವಂತಹ ಶಾಸಕರು ಯಾರಿದ್ದಾರೆ ಅವರೆಲ್ಲರೂ ಕೂಡ ಕೊಳಗೇರಿ ಭಾಗಗಳಲ್ಲಿ ಜನತೆಯ ಓಟನಿಂದಲೇ ನಾವು ಆರಿಸಿ ಬಂದವರು ಎಂಬುದನ್ನು ಯಾರು ಮರೆಯತಕ್ಕದ್ದಲ್ಲ. ಮಾನ್ಯ ವಸತಿ ಸಚಿವರು ಸದನದಲ್ಲಿ ಕುಳಿತ್ತಿದ್ದಾರೆ, ಈ ವರ್ಷದ ಬಜೆಟ್‌ನಲ್ಲಿ 32 ಕೋಟಿ ರೂಪಾಯಿಗಳನ್ನು 15 ಲಕ್ಷ ಜನರು ವಾಸ ಮಾಡತಕ್ಕಂಥ ಕೊಳಗೇರಿಗಳಿಗೆ ಮೀಸಲಿಟ್ಟಿದ್ದೇವೆ. ಆದರಲ್ಲಿ 17 ಕೋಟಿ ರೂಪಾಯಿಗಳನ್ನು ಹುಡ್ಕೋ ಸಾಲಕ್ಕೆ ನಾವು ಮರುಪಾವತಿಗೆಂದು ಕೊಡುತ್ತಿದ್ದೇವೆ. 3 ಕೋಟಿ ರೂಪಯಿಗಳನ್ನು ಸರ್ಕಾರಿ ಸಂಬಳಕ್ಕಾಗಿ ವೆಚ್ಚ ಮಾಡುತ್ತಿದ್ದೇವೆ, ಇನ್ನು ಉಳಿದಿರುವುದೆಷ್ಟು? ಕೇವಲ 12 ಕೋಟಿ ರೂಪಾಯಿಗಳು ಮಾತ್ರ, ಈ 12 ಕೋಟಿ ರೂಪಾಯಿಗಳಲ್ಲಿ 10 ಕೋಟಿ ರೂಪಾಯಿಗಳನ್ನು ನಾವು ನಿರ್ಮಲಜ್ಯೋತಿ ಯೋಜನೆ ಎಂದು ಹೇಳಿ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಇನ್ನು 2 ಕೋಟಿ ರೂಪಾಯಿಗಳನ್ನು ಅವರ ದುರಸ್ತಿಕಾರ್ಯಕ್ಕಾಗಿ ಮಾಡುತ್ತೇವೆಂದು ಹೇಳಿದರು. ನಾನೂ ಕೂಡ ಸನ್ಮಾನ್ಯ ಗೃಹ ಸಚಿವರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಜಿಲ್ಲೆಯಾದಂತಹ ಗುಲ್ಬರ್ಗಾ ಜಿಲ್ಲೆಗೆ ಪ್ರವಾಸ ಮಾಡಿದ್ದೇನೆ. ಜೇವರ್ಗಿಯಲ್ಲಿ ಎಲ್ಲಾ ಭಾಗದಲ್ಲಿ ಸ್ಲಮ್‌ಗಳ ಪರಿಸ್ಥಿತಿ ಯಾವ ರೀತಿ ಇದೆಯೆಂದು ಹೇಳಿ ಮಾನ್ಯ ಸಚಿವರಾದ ಖಮರುಲ್ಲಾ ಇಸ್ಲಾಂರವರಿಗೂ ಗೊತ್ತಿದೆ. ಅನೇಕ ಕೊಳಗೇರಿಗಳ ಬಗ್ಗೆ ಎಲ್ಲಾ ಶಾಸಕರಿಗೂ ಸಹ ಗೊತ್ತಿದೆ. ಇಡೀ ರಾಜ್ಯದಲ್ಲಿ 4 ಸಾವಿರ ಕೊಳಗೇರಿಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ, ಸರಿಯಾದ ವಸತಿ ಸೌಕರ್ಯಗಳಿಲ್ಲ, ಸರಿಯಾದಂತಹ ರಸ್ತೆಗಳಿಲ್ಲ, ಶೌಚಾಲಯಗಳ ವ್ಯವಸ್ಥೆಯಿಲ್ಲ, ಶಾಲೆಯ ವ್ಯವಸ್ಥೆಯಿಲ್ಲ. ಇದು ಅಲ್ಲಿರುವಂತಹ ಪರಿಸ್ಥಿತಿಯಾಗಿದೆ. ಕೊಳಚೆ ನಿರ್ಮೂಲನಾ ಮಂಡಳಿಯವರು 21 ಜಿಲ್ಲೆಗಳಿಗೆ 750 ಕೋಟಿ ರೂ.ಗಳು ಬೇಕೆಂದು ಹೇಳಿದ್ದಾರೆ. ಬೆಂಗಳೂರು ಮಹಾನಗರದಲ್ಲಿರುವಂತಹ 400 ಕೊಳಗೇರಿಗಳಿಗೆ 500 ಕೋಟಿ ರೂಪಾಯಿಗಳ ಹಣ ಬೇಕೆಂದು ಹೇಳಿ ಈಗಾಗಲೇ ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ. ಜಪಾನ್‌ದೇಶದ ನೆರವಿನಿಂದ 1250 ಕೋಟಿ ರೂಪಾಯಿಗಳ ಸಾಲವನ್ನು ತಂದು ಇವರನ್ನು ಅಭಿವೃದ್ಧಿ ಮಾಡುತ್ತೇವೆಂದು ಹೇಳಿದರು. ನಾವು 12000 ಮತ್ತು 20000 ಕೋಟಿ ರೂಪಾಯಿಗಳ ಸಾಲವನ್ನು ತರುತ್ತೇವೆಂದು ಅನೇಕ ಭಾರಿ ಯೋಜನೆಗಳನ್ನು ಘೋಷಣೆಯನ್ನು ಮಾಡಿದೆವು. ಆದರೆ ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಯಾವ ಬಡಜನತೆಯು

ಶೋಷಣೆಗೆ ಒಳಪಟ್ಟಿದ್ದಾರೆ, ಅವರಿಗೆ ಅನೇಕ ವರ್ಷಗಳಿಂದ ಕುಡಿಯುವುದಕ್ಕೆ ನೀರಿಲ್ಲ. 'ಕೊಳಚೆ ನೀರು ಕುಡಿಯಬೇಕೆ, ಬನ್ನಿ ಗುಲ್ಬರ್ಗಾಕ್ಕೆ' ಎಂದು ಪೇಪರಿನಲ್ಲಿ ಹೆಡ್‌ಲೈನ್ಸ್‌ನಲ್ಲಿ ಇವತ್ತು ಪ್ರಕಟವಾಗಿರುವುದನ್ನು ನಾವು ನೋಡುತ್ತಿದ್ದೇವೆ. ಇಂತಹ ಸ್ಥಿತಿಯಲ್ಲಿ ನಾನು ಸರ್ಕಾರದ ಗಮನಸೆಳೆಯುವುದೇನೆಂದರೆ, ತಾವು ಏನೊಂದು ಯೋಜನೆಯನ್ನು ಹಾಕಿಕೊಂಡಿದ್ದೀರಿ, ಖಂಡಿತವಾಗಿಯೂ ಕೂಡ ಆ ಯೋಜನೆಯನ್ನು ಜಾರಿಗೆ ತರಬೇಕು. ಏನು 1250 ಕೋಟಿ ರೂಪಾಯಿಗಳನ್ನು ತಾವು ಈ ಯೋಜನೆಗಾಗಿ ಕೊಡುತ್ತೇವೆಂದು ಹೇಳಿದ್ದೀರಿ, ತಮ್ಮ ಕಾಲಾವಧಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆ ಕೆಲಸದ ಕಡೆ ಸ್ವಲ್ಪ ಗಮನವನ್ನು ಕೊಟ್ಟು ಖಂಡಿತವಾಗಿಯೂ ಮಾಡಿದ್ದೇ ಆದರೆ ನಿಜವಾಗಿಯ ಕೂಡ ಆ ಬಡ ಜನತೆಯ ಆಶೀರ್ವಾದ ನಮಗೆ ಸಿಗುತ್ತದೆ ಎಂದು ಹೇಳುತ್ತಾ ನಾನು ಸರ್ಕಾರದವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಅದೊಂದೆ ಅಲ್ಲ, ಈಗ ತಾವೇನು ಕೊಡುತ್ತಿದ್ದೀರಿ, ಕೇಂದ್ರದಿಂದ ಎನ್‌ಎಸ್‌ಡಿಪಿಯಿಂದ ಹಣ ಬರುತ್ತದೆ, ಆ ಹಣವನ್ನು ನೇರವಾಗಿ ಆ ಕೊಳಚೆ ನಿರ್ಮೂಲನಾ ಮಂಡಳಿಗೆ ಕೊಟ್ಟು, ಅದಕ್ಕೆ ಬೇಕಾದಷ್ಟು ಹಣವನ್ನು ನಾವು ಕೂಡ ಕೊಳಚೆ ನಿರ್ಮೂಲನಾ ಮಂಡಳಿಗೆ ಕೊಟ್ಟರೆ ಅನುಕೂಲವಾಗುತ್ತದೆ. ಈ 32 ಕೋಟಿ ರೂಪಾಯಿಗಳಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. ರಾಜ್ಯ ಸರ್ಕಾರದಿಂದ ಕನಿಷ್ಠ ಪಕ್ಷ ಒಂದು ವರ್ಷಕ್ಕೆ 75 ರಿಂದ 100 ಕೋಟಿ ರೂಪಾಯಗಳ ಹಣವನ್ನು ತಾವು ಬಿಡುಗಡೆ ಮಾಡದೇ ಇದ್ದರೆ ಖಂಡಿತವಾಗಿಯೂ ಏನು ಮಾಡುವುದಕ್ಕೆ ಸಾಧ್ಯವಿಲ್ಲ. ಕೊಳಗೇರಿಗಳ ಪರಿಸ್ಥಿತಿ ಈ ರೀತಿಯಾಗಿದೆ, ರಾಜ್ಯದ ಎಲ್ಲಾ ಭಾಗದಲ್ಲಿಯೂ ಕೂಡ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿಯೂ ಕೂಡ ಬಹುತೇಕ ಭಾಗಗಳಲ್ಲಿ ಇವತ್ತು ಕೊಳಗೇರಿಗಳಿವೆ. ಇಲ್ಲಿರುವಂತಹ ಎಲ್ಲಾ ಶಾಸಕರ ಕ್ಷೇತ್ರಗಳಲ್ಲಿ ಈ ಸಮಸ್ಯೆ ಇದೆ. ಕರಾವಳಿ ಪ್ರದೇಶಗಳಾದ ಉತ್ತರ ಕನ್ನಡ, ದಕ್ಷಿಣಕನ್ನಡದಲ್ಲಿ ಕೆಲವು ಭಾಗಗಳಲ್ಲಿ ಇಲ್ಲದೇ ಇರಬಹುದು. ಅಲ್ಲಿ ಕೊಳಗೇರಿಗಳ ಸಂಖ್ಯೆ ಕಡಿಮೆ ಇದೆ, ಆದರೆ ಹುಬ್ಬಳ್ಳಿ, ಧಾರವಾಡ, ಗುಲ್ಬರ್ಗಾ, ಬೆಂಗಳೂರು, ಮೈಸೂರು ಈ ಪ್ರಾಂತ್ಯಗಳನ್ನು ನಾವು ಒಂದು ಸಾರಿ ನೋಡಿದಾಗ ನಿಜವಾಗಿಯೂ ಕೂಡ ದು:ಖದ ಸ್ಥಿತಿ ಇದೆ. ಆದಕ್ಕಾಗಿ ನಾನು ಈ ವರ್ಷದ ಆಯವ್ಯಯದ ಒಂದು ಬೇಡಿಕೆಯ ಮೇಲೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ವಿಶೇಷವಾಗಿ ತಮ್ಮಲ್ಲಿ ಬೇಡಿಕೊಳ್ಳುವುದೇನೆಂದರೆ, ಕನಿಷ್ಠ ಬರುವ ವರ್ಷದಿಂದ, ಈ ವರ್ಷ ಮುಗಿಯಿತು, ಈ ವರ್ಷ ಎಷ್ಟು ಅನುದಾನವನ್ನು ಕೊಡಬೇಕು ಅಷ್ಟು ಕೊಡಿ, ಮುಂದಿನ ವರ್ಷದಿಂದಲಾದರೂ ಕೂಡ ಕನಿಷ್ಠ 100 ಕೋಟಿ ರೂಪಾಯಿಗಳನ್ನು ಈ ಕೊಳಚೆ ನಿರ್ಮೂಲನಾ ಮಂಡಳಿಗೆ ಅಲ್ಲಿರುವಂತಹ ಬಡಜನರಿಗೆ ಉಪಯೋಗವಾಗುವ ರೀತಿಯಲ್ಲಿ ತಾವು ಹಣವನ್ನು ಮೀಸಲಿಡಬೇಕೆಂದು ಹೇಳಿ ಸರ್ಕಾರದವರಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಉಳಿದಿರುವುದೇನೆಂದರೆ, ಕರ್ನಾಟಕ ಗೃಹಮಂಡಳಿ ವಿಚಾರದ ಬಗ್ಗೆ ಹೇಳುವುದಾದರೆ,

ಮಾನ್ಯ ವಸತಿ ಸಚಿವರು ಸದನದಲ್ಲಿದ್ದಾರೆ, ನಾವು ಪ್ರತಿನಿತ್ಯವೂ ನೋಡುತ್ತಿದ್ದೇವೆ, ಇವತ್ತು, ಯಲಹಂಕದಲ್ಲಿ ಮನೆಗಳನ್ನು ನಿರ್ಮಾಣಮಾಡಿದ್ದಾರೆ. ಕೆಂಗೇರಿಯಲ್ಲಿಯೂ ಮೈಸೂರಿನಲ್ಲಿಯೂ ಸಹ ಮನೆಗಳನ್ನು ನಿರ್ಮಾಣ ಮಾಡಿದ್ದಾರೆ. ಆದರೆ ಆ ಮನೆಗಳನ್ನು ಕೊಂಡುಕೊಳ್ಳುವುದಕ್ಕೆ ಜನರೇ ಇಲ್ಲ. ಅಲ್ಲಿ ಕಟ್ಟಿರುವಂತಹ ಮನೆಗಳು ಕಳಪೆ ಕಾಮಗಾರಿಯಿಂದ ಕೂಡಿದೆ. ಈ ಗೃಹ ಮಂಡಳಿಯಲ್ಲಿ ಅನೇಕ ಅವ್ಯವಹಾರಗಳು ನಡೆದಿದೆ ಎಂದು ಅನೇಕ ಬಾರಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ. ಇದು ಪ್ರತಿನಿತ್ಯ ಎಲ್ಲರಿಗೂ ಗೊತ್ತಿರುವಂತಹ ಸಂಗತಿಯಾಗಿದೆ. ಆ ಗೃಹಮಂಡಳಿಯ ಕಛೇರಿಯನ್ನು ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅದನ್ನು ದುರಸ್ಥಿ ಮಾಡಿರುವಂತಹ ಕೆಲಸವಾಗಿದೆ, ಅದು ಏತಕ್ಕಾಗಿ ಬೇಕಿತ್ತೆಂದು ಅರ್ಥವಾಗಲಿಲ್ಲ. ಗೃಹಮಂಡಳಿಯ ಪರಿಸ್ಥಿತಿಯನ್ನು ನೋಡಿದಾಗ ನಿಜವಾಗಿಯೂ ಗೊತ್ತಾಗುತ್ತದೆ. ಮಡಿಕೇರಿಯಲ್ಲಿ ಒಂದು ಮನೆಯನ್ನು ಕಟ್ಟಿದ್ದಾರೆ, ಆ ಮನೆಯೂ 10 ವರ್ಷಗಳಾದರೂ ಕೂಡ ವಿತರಣೆಯಾಗಲಿಲ್ಲ. ಅದು 12 ಲಕ್ಷ ರೂಪಾಯಿಗಳು ಬೆಲೆಬಾಳುವ ಮನೆಯಾಗಿದ್ದು, ಸರ್ಕಾರದ ಅಧಿಕಾರಿಗಳು ಯಾವ ರೀತಿಯಾಗಿ ಸರ್ಕಾರದ ಹಣವನ್ನು ದುರುಪಯೋಗ ಮಾಡುತ್ತಾರೆಂಬ ಬಗ್ಗೆ ನಾವು ಅರ್ಥಮಾಡಿಕೊಳ್ಳಬೇಕಾದ ಸಂಗತಿಯಾಗಿರುತ್ತದೆ. ಇವತ್ತು ಕಟ್ಟಿರುವ ಮನೆಗಳಲ್ಲಿ ಕೆಲವು ಕಡೆಗಳಲ್ಲಿ ಬಾಗಿಲುಗಳಿಲ್ಲ, ಉದಾಹರಣೆಗೆ ಚನ್ನಪಟ್ಟಣದಲ್ಲಿರುವ ಮನೆಗಳನ್ನು ಯಾರು ಕೊಂಡುಕೊಳ್ಳುವುದಕ್ಕೆ ಬಂದಿಲ್ಲ, ಅಲ್ಲಿ ಹುಲ್ಲು ಬೆಳೆದಿದೆ, ಅದು ಹಾವುಗಳ ತಾಣವಾಗಿದೆ, ಇಂತಹ ಪರಿಸ್ಥಿತಿಯಿದ್ದಾಗ, ಇದಕ್ಕೆ ಹೊಣೆಗಾರರು ಯಾರು? 100ಕ್ಕೆ 75ರಷ್ಟು ಹಣವನ್ನು ನಾವು ಏನು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಮಾಡುತ್ತೇವೆ, ಆದರೂ ಕೂಡ ನಿಗದಿತ ಸಮಯದಲ್ಲಿ ಈ ಕೆಲಸಗಳನ್ನು ಪೂರೈಸುವುದಿಲ್ಲ. ಯಾರೇ ಗುತ್ತಿಗೆದಾರರಿಬಹುದು, ಇಲ್ಲಿ ಎಷ್ಟು ಅವ್ಯವಹಾರ ನಡೆಯುತ್ತದೆಂದರೆ, ಇವತ್ತು ಗುಲ್ಬರ್ಗಾ ನಗರದಲ್ಲಿ ಏನಾಗಿದೆ, ಮೈನ್ ರಸ್ತೆಯಲ್ಲಿ ಒಬ್ಬ ವಕೀಲರಿಗೆ 22 ಎಕರೆ ಜಮೀನನ್ನು ನಾವು ಡೀನೋಟಿಫೈ ಮಾಡಿಕೊಟ್ಟಿದ್ದೇವೆಂದು ಪತ್ರಿಕೆಗಳಲ್ಲಿ ಬಂದಿದೆ. ಇದರಲ್ಲಿ ನಿಜ ಎಷ್ಟು ಎಂಬುದು ಗೊತ್ತಾಗಲಿಲ್ಲ, 1988ರಲ್ಲಿ ಅಕ್ವಿಜಿಷನ್ ಮಾಡಿದಂತಹ ಲ್ಯಾಂಡ್ ಇದಕ್ಕಾಗಿ ಒಂದ ಯಂತ್ರಾಂಗ, ಒಂದು ಮಂತ್ರಾಂಗ ಎಲ್ಲವೂ ಇದ್ದರೂ ಕೂಡ 12 ವರ್ಷಗಳಿಂದಲೂ ಹಣವನ್ನು ಬ್ಯಾಂಕಿನಲ್ಲಿಟ್ಟು ಆ ಜಮೀನನ್ನು ನಾವು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ, ನ್ಯಾಯಾಲಯಕ್ಕೆ ನಮ್ಮ ವಕೀಲರುಗಳು ಹೋಗಲಿಲ್ಲ ಮತ್ತು ನಮ್ಮ ಪರವಾಗಿ ವಾದವನ್ನು ಮಾಡಲಿಲ್ಲ. ಕೊನೆಗೆ ಎಕ್ಸ್‌ಪಾರ್ಟೆ ಆರ್ಡರ್ ಆಗಿ ಆ ಜಮೀನು ಖಾಸಗಿಯವರಿಗೆ ಹೋಯಿತು. ಈ ರೀತಿಯಾಗಿ ನಾವು ಮಾಡುವುದೇ ಆದರೆ ಆ ಇಲಾಖೆ ಇರುವುದು ಏತಕ್ಕಾಗಿ? ಇವತ್ತು ಆ ಇಲಾಖೆಯ ಬಗ್ಗೆ ಪೂರ್ಣ ವಿಶ್ವಾಸ ಹೊರಟು ಹೋಗಿದೆ. ಕರ್ನಾಟಕ ಗೃಹ ಮಂಡಳಿಯ ಮೇಲೆ ಜನತೆಗೆ ವಿಶ್ವಾಸ ಹೋಗಿದೆ. ಇವತ್ತು ಚಂದಾಪುರ ರಸ್ತೆಯಲ್ಲಿ ಕಳೆದ 5 ವರ್ಷಗಳಿಂದ ಒಂದು ಯೋಜನೆಯು

275 ಎಕರೆಯಲ್ಲಿ ನಾವು ಮನೆಗಳನ್ನು ನಿರ್ಮಾಣ ಮಾಡುವ ಕೆಲಸವನ್ನು ಮಾಡುತ್ತೇವೆ ಎಂದು ಹೇಳಿದರು. ಅಲ್ಲಿ ಐದು ವರ್ಷಗಳಾದರೂ ಕೂಡ ಇಲ್ಲಿಯವರೆವಿಗೂ ಕಾರ್ಯಗತವಾಗಿಲ್ಲ, ಆದರೆ ಈ ಗೃಹಮಂಡಳಿಯ ಬಗ್ಗೆ ನಾವು ವಿಷಯ ಸಮಿತಿಯಲ್ಲಿ ಕೂಡ ಚರ್ಚೆ ಮಾಡಿದ್ದೇವೆ. ಅಲ್ಲಿಯೂ ಕೂಡ ಆ ಗೃಹ ಮಂಡಳಿಯನ್ನು ಮುಚ್ಚುವುದು ಒಳ್ಳೆಯದೆಂದು ಹೇಳಿದರು. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ, ಬೆಂಗಳೂರ ಅಭಿವೃದ್ಧಿ ಪ್ರಾಧಿಕಾರವಿದೆ, ಅದನ್ನು ನೋಡಿದಾಗ ನಿಜವಾಗಿಯೂ ಕೂಡ ಸರ್ಕಾರಕ್ಕೆ ಮತ್ತು ಸಾರ್ವಜನಿಕರಿಗೆ ಒಳ್ಳೆಯ ಹೆಸರು ತರುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಆ ರೀತಿಯಾಗಿ ಏಕೆ ಈ ಗೃಹಮಂಡಳಿಯವರು ಕೆಲಸವನ್ನು ಮಾಡುವುದಕ್ಕೆ ಆಗಲಿಲ್ಲ. ಇದರಲ್ಲಿ ಯಾರ ಲೋಪವಿದೆ, ಮಂತ್ರಿಗಳ ಲೋಪವೇ, ಅಲ್ಲಿರುವ ಆಯುಕ್ತರ ಲೋಪವೇ ಅಥವಾ ಸಿಬ್ಬಂದಿ ವರ್ಗದವರ ಲೋಪವೇ ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿರುವಂತಹ ಸಂಗತಿಯಾಗಿದೆ. ನಾವು ಅನೇಕ ಭಾರಿ ಅನೇಕ ವಿಚಾರಗಳನ್ನು ವಿಷಯ ಸಮಿತಿಯಲ್ಲಿ ಚರ್ಚೆ ಮಾಡಿದಾಗ ಒಂದು ತೀರ್ಮಾನಕ್ಕೆ ಬಂದೆವು, ಈ ಗೃಹಮಂಡಳಿಯನ್ನು ಮುಚ್ಚುವುದು ಒಳ್ಳೆಯದು. ಒಂದು ಸಂದರ್ಭದಲ್ಲಿತ್ತು ಹಿಂದೆ ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಶ್ರೀ ವೀರೇಂದ್ರ ಪಾಟೀಲ್‌ರ ಕಾಲದಲ್ಲಿ ಆ ಸಮಯವನ್ನು ನಾವೆಲ್ಲರೂ ಕೂಡ ನೆನಪಿಸಿಕೊಳ್ಳಬೇಕು. ಅಲ್ಲಿ ಯಾರೂ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಈ ಬಿಡಿಎಯನ್ನು ಮುಚ್ಚಿಹಾಕಬೇಕೆಂದು ಅವತ್ತು ಯೋಚನೆಯನ್ನು ಮಾಡಿದ್ದರು; ಇದಕ್ಕೆ ಕಾರಣ ಯಾರು ಎಂದು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅಲ್ಲಿರುವ ಅಧಿಕಾರಿ ಯಂತ್ರಾಂಗ ಸರಿಯಾಗಿ ಕೆಲಸ ಮಾಡದೆ ಇದ್ದರೆ ಈ ದುಸ್ಥಿತಿಯಾಗಿದೆ. ಇದಕ್ಕೆ ಯಾರು ಹೊಣೆಗಾರರು ಎಂದು ಯೋಚನೆ ಮಾಡುವಂತಹ ಪರಿಸ್ಥಿತಿಯಾಗಿದೆ. ಈ ರೀತಿಯಾಗಿ ಆಗುವುದೇ ಆದರೆ 100ಕ್ಕೆ 75ರಷ್ಟು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್, ಅವರ ಸ್ಯಾಲರಿ ಮತ್ತು ಇತರ ಎಕ್ಸ್‌ಪೆಂಡಿಚರ್‌ನ್ನು ನಾವು ಮಾಡುತ್ತೇವೆ. 25 ರಷ್ಟು ಹಣವನ್ನು ನಾವು ಅಭಿವೃದ್ಧಿ ಕೆಲಸಗಳಿಗಾಗಿ ವಿನಿಯೋಗ ಮಾಡುತ್ತೇವೆ. ಆ ಹಣ 2 ರಿಂದ 4 ವರ್ಷವಾಗುತ್ತದೋ, ಆ ಕೆಲಸಗಳನ್ನು ನಾವು ಮಾಡುವುದಿಲ್ಲವೆಂದರೆ, ಯಾವುದಕ್ಕೋಸ್ಕರ ನಮ್ಮ ಯಂತ್ರಾಂಗ, ಯಾರಿಗೆ ನಾವು ಅಕೌಂಟಬಿಲಿಟಿಯನ್ನು ಕೊಡಬೇಕು. ಅಲ್ಲಿ ಯಾರ ಮುಲಾಜುಗಳು ಇದರ ಬಗ್ಗೆ ಅರ್ಥವೆ ಆಗುತ್ತಿಲ್ಲ. ಯಾರನ್ನು ನಾವು ಕೇಳಬೇಕೋ ಬೇಡವೋ, ನಮಗೂ ಕೂಡ ಮುಲಾಜುಗಳು. ಎಂಎಲ್‌ಎಗೆ ಮತ್ತು ಮಂತ್ರಿಗಳಿಗೂ ಕೂಡ ಮುಲಾಜುಗಳು, ಅಧಿಕಾರಿಗಳ ಹತ್ತಿರ ಏನಾದರೂ ಕೆಲಸಗಳಾಗಬೇಕಾದರೆ, ಜೋರಾಗಿ ನಾವು ಮಾತನಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ಅವರ ಹತ್ತಿರ ನಮ್ಮ ಮುಲಾಜು, ಆ ಅಧಿಕಾರಿಗಳಿಗೆ ನಮ್ಮ ಮುಲಾಜು ಅವರಿಗೆ ಇದೆ. ಪರಸ್ಪರ ಮುಲಾಜುಗಳ ಮೇಲೆ ಕೆಲಸವು ನಡೆಯುತ್ತಿದೆ. ಹೀಗೆಯೇ ಆಗುವುದಾದರೆ, ಗೃಹಮಂಡಳಿಯ ಪರಿಸ್ಥಿತಿ ಇದು,

ಕೊಳಚೆ ನಿರ್ಮೂಲನಾ ಮಂಡಳಿಯಲ್ಲಿ ಕೆಲವು ಮನೆಗಳನ್ನು ಕಟ್ಟಿದ್ದಾರೆ, ನಾನು ಮಂಡ್ಯ ಜಿಲ್ಲೆಗೆ ಹೋಗಿದ್ದೆ, ಅಲ್ಲಿ ಮನೆಗಳು ಕುಸಿದು ಬೀಳುತ್ತಿದೆ, ಆ ರೂಫ್‌ಗಳು ಇವತ್ತು ಸಿಂಕಾಗಿದೆ. ಅದು ಸಿಂಕಾಗಿ ಆ ಮನೆಗಳಲ್ಲಿ ವಾಸವನ್ನು ಮಾಡುತ್ತಿಲ್ಲ. ಅಲ್ಲಿ 200 ಮನೆಗಳನ್ನು ಕಟ್ಟಿದ್ದಾರೆ, ಈಗ ಮಾನ್ಯ ಶಾಸಕರಾದ ಶ್ರೀ ಎಂ.ಎಸ್. ಆತ್ಮಾನಂದರವರು ಬಂದ ಮೇಲೆ ಅದನ್ನು ರಿಪೇರಿ ಮಾಡಿದ್ದೇವೆಂದು ಹೇಳಿದರು. ನಾನು ಅಲ್ಲಿಗೆ ಹೋಗಿ ಬಂದು ಒಂದೂವರೆ ವರ್ಷವಾಯಿತು. ಕೊಳಚೆ ನಿರ್ಮೂಲನ ಮಂಡಳಿಯವರು ಕಟ್ಟಿರುವಂತಹ ಮನೆಗಳು ಆ ರೀತಿ, ಹೌಸಿಂಗ್ ಬೋರ್ಡ್‌ನವರು ಕಟ್ಟಿರುವ ಮನೆಗಳು ಹೀಗೆ. ಇದಕ್ಕೆ ಯಾರು ಹೊಣೆಗಾರರು ಯಾರು ಜವಾಬ್ದಾರರೆಂದು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾದ ಸಂಗತಿ ಇದು. ಕಾರಣ ಏನೆಂದರೆ, ಬೇಡಿಕೆಗಳ ಮೇಲೆ ನಾವು ಚರ್ಚೆ ಮಾಡುತ್ತೇವೆ, ಹಣವನ್ನು ಮಂಜೂರು ಮಾಡುತ್ತೇವೆ. ಈ ವರ್ಷ ಆಗಬೇಕಾಗಿರುವ ಕೆಲಸವನ್ನು ಈ ವರ್ಷ ಮಾಡುವುದಿಲ್ಲ. ಕೆಲಸವನ್ನು ಡಿಸೆಂಬರ್ ಜನವರಿಯಲ್ಲಿ ಪ್ರಾರಂಭ ಮಾಡುತ್ತಾರೆ. ಮಾರ್ಚಿಯೊಳಗೆ ಕೆಲಸ ಮುಗಿಸುವುದಿಲ್ಲ, ಸ್ಪಿಲ್‌ಓವರ್ ವರ್ಕ್ ಎನ್ನುತ್ತಾರೆ. ಈ ವರ್ಷದಲ್ಲಿದ್ದ ರೇಟ್ ಈ ವರ್ಷವೇ ಇರುವುದಿಲ್ಲ. ಮುಂದಿನ ವರ್ಷಕ್ಕೆ ಎಲ್ಲವೂ ಕೂಡ ಒನ್ ಟು ಡಬ್ಬಲ್ ರೇಟಾಗುತ್ತದೆ. ಇದಕ್ಕೆ ಹೊಣೆಗಾರರು ಯಾರು? ಯಾರ ತಪ್ಪಿನಿಂದ ಯಾರಿಗೆ ಶಿಕ್ಷೆ? ಜನರ ಮೇಲೆ ತಪ್ಪನ್ನು ಹಾಕುತ್ತಿದ್ದೇವೆ. ಅಧಿಕಾರಿಗಳು ಮತ್ತು ನಾವು ನಾವಿಬ್ಬರೂ ಸೇರಿಕೊಂಡು ಯಾರ ಮೇಲೆ ನಾವು ತಪ್ಪನ್ನು ಹಾಕುತ್ತಿದ್ದೇವೆ ಎನ್ನುವುದು ನಾವು ಯೋಚನೆ ಮಾಡುವಂತಹ ಸಂಗತಿಯಾಗಿದೆ.

ಇನ್ನೊಂದು ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇದನ್ನು ನಾವು ಇತ್ತೀಚೆಗೆ ಪ್ರಾರಂಭ ಮಾಡಿದ್ದೇವೆ. ದಿನಾಂಕ: 20-4-2000ದಂದು ನಾವು ಪ್ರಾರಂಭ ಮಾಡಿದ್ದೇವೆ. ಅದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ವಸತಿ ಸಚಿವರು ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು ಒಂದು ವರ್ಷದ ಅವಧಿಯೊಳಗಾಗಿ ಎರಡು ಲಕ್ಷ ಮನೆಗಳನ್ನು ನಿರ್ಮಾಣ ಮಾಡುತ್ತೇವೆಂದು ಅನೇಕ ಬಾರಿ ಹೇಳಿದರು. ಆ ಎರಡು ಲಕ್ಷ ಮನೆಗಳಿಗೆ ಎಷ್ಟು ಹಣ ಬೇಕೋ ಆ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿ ಆರ್ಥಿಕ ಇಲಾಖೆಯ ಜಂಟಿ ಕಾರ್ಯದರ್ಶಿಯವರು ಹೇಳಿದ್ದಾರೆ. ಆದರೆ ಈ ಎರಡು ಲಕ್ಷ ಮನೆಗಳನ್ನು ನಿರ್ಮಾಣ ಮಾಡುವಂತಹ ಕೆಲಸದಲ್ಲಿ ಕೇವಲ ನಾವು 60 ಸಾವಿರ ಮನೆಗಳನ್ನು ನಿರ್ಮಾಣ ಮಾಡಿದರೆ ಹೇಗೆ? ನೀವು ಅಧಿಕಾರಕ್ಕೆ ಬಂದು 20 ತಿಂಗಳಾಗಿದೆ. ನೀವು ಘೋಷಣೆ ಮಾಡಿ 16 ತಿಂಗಳು ಆಗಿದೆ. ಆದರೆ ಇಲ್ಲಿಯ ತನಕ 60 ಸಾವಿರ ಮನೆಗಳನ್ನು ಕಟ್ಟಿ ಉಳಿಕೆ ಇರುವಂತಹ 1 ಲಕ್ಷದ 40 ಸಾವಿರ ಮನೆಗಳನ್ನು ಕಟ್ಟದಿರುವುದಕ್ಕೆ ಕಾರಣವೇನು? ಇದನ್ನು ನಾವು ಕೇಳಬೇಕಾಗುತ್ತದೆ. ಇದನ್ನು ನೀವೇ ಘೋಷಣೆ ಮಾಡಿರತಕ್ಕದ್ದು ಆದಕ್ಕೆ ಹಣವನ್ನು ಬಿಡುಗಡೆ ಮಾಡಲಾಗಿದೆ. ಆದರೆ ಆಶ್ರಯ ಮತ್ತು ಅಂಬೇಡ್ಕರ್ ಯೋಜನೆಗಳ ಅಡಿಯಲ್ಲಿ ಒಂದೂವರೆ ಲಕ್ಷ ಮನೆಗಳನ್ನು

ಗ್ರಾಮೀಣ ಪ್ರದೇಶಗಳಲ್ಲಿ 50 ಸಾವಿರ ಮನೆಗಳನ್ನು ಪಟ್ಟಣ ಪ್ರದೇಶಗಳಲ್ಲಿ ಮಾಡುತ್ತೇವೆಂದು ಏನು ಹೇಳಿದ್ದೀರಿ, ದುರ್ದೈವ ಅಂದುಕೊಂಡಹಾಗೆ ಗುರಿಯನ್ನು ಸಾಧನೆ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಹಣ ಇದೆ ಆದರೆ ಕೆಲಸ ಮಾಡುವುದಿಲ್ಲ. ಮಂತ್ರಿಗಳಿಗೆ ಇದರ ಮೇಲೆ ಗಮನ ಇಲ್ಲವಾ? ಮಾನ್ಯ ವಸತಿ ಸಚಿವರಿಗೆ ಇದರ ಮೇಲೆ ಕಾಳಜಿ ಇಲ್ಲವಾ? ಮಂತ್ರಿಗಳ ತಪ್ಪೆಂದು ನಾನು ಹೇಳುವುದಿಲ್ಲ. ಅಧಿಕಾರಿಗಳನ್ನು ನೀವು ಏಕೆ ಕೇಳುವುದಿಲ್ಲ. ತಾವು ಸ್ಥಳಕ್ಕೆ ಧಾವಿಸಿ ಏಕೆ ಹೋಗುವುದಿಲ್ಲ? ಏಕೆ ಈ ಕೆಲಸವನ್ನು ಮಾಡುವುದಿಲ್ಲ? ಯಾರು ತಮ್ಮನ್ನು ತಡೆಹಿಡಿದಿದ್ದಾರೆ? ಇದನ್ನು ತಾವು ಯೋಚನೆ ಮಾಡಬೇಕು. ನಾವೇ ಹೇಳಿದ ಮಾತು, 2 ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ನಾವೇ ಹೇಳಿಲ್ಲವೇ? ಮಂತ್ರಿಗಳು ಹೇಳಿದ್ದಾರೆ. ಆದರೆ ಇಲ್ಲಿಯ ತನಕ ಆ ಮನೆಗಳನ್ನು ಕಟ್ಟಲಿಕ್ಕೆ ವಿಫಲರಾಗುವುದಕ್ಕೆ ಕಾರಣವೇನು? ಯಾವಾಗ ಕಟ್ಟುತ್ತೀರಿ? ಇನ್ನು ಮೂರು ವರ್ಷದಲ್ಲಿ ಕಟ್ಟುತ್ತೀರಿ. ಮೂರು ವರ್ಷದಲ್ಲಿ ಬೆಲೆ ಎಷ್ಟು ಹೆಚ್ಚಾಗುತ್ತದೆ? ನಿಗದಿತ ಬೆಲೆಯಲ್ಲಿ ಮನೆಗಳನ್ನು ಕಂಪ್ಲೀಟ್ ಮಾಡಿಕೊಡಲಿಕ್ಕೆ ಆಗುತ್ತದೆಯೇ? ಇಲ್ಲ, ಆದೇ ಬೆಲೆಗೆ ಕಟ್ಟಬೇಕಾದರೆ ಕಳಪೆ ಕಾಮಗಾರಿಯಾಗುತ್ತದೆ. ಇದಕ್ಕೆ ಜವಾಬ್ದಾರರು ಯಾರು ಸ್ವಾಮಿ? ಇದಕ್ಕೆ ಹೊಣೆಗಾರರು ಯಾರು? ಅಂದರೆ ಎಲ್ಲಿಯೋ ಒಂದು ಜಾಗದಲ್ಲಿ ನಾವು ಅಧಿಕಾರಿಗಳನ್ನು ಕೇಳಿ ಕೆಲಸ ತೆಗೆಯುವುದರಲ್ಲಿ ವಿಫಲರಾಗಿದ್ದೇವೆನ್ನುವ ಮಾತನ್ನು ನಾವು ಒಪ್ಪಲೇ ಬೇಕಾಗುತ್ತದೆ. ನಾನು ಇದು ಒಂದೇ ಇಲಾಖೆಗೆ ಸಂಬಂಧಪಟ್ಟಹಾಗೆ ಹೇಳುತ್ತಿಲ್ಲ. ಈ ರೀತಿ ರಾಜೀವಗಾಂಧಿ ಗ್ರಾಮೀಣ ವಸತಿ ಯೋಜನೆಯಲ್ಲಿ ಏನು ಕೆಲಸಗಳನ್ನು ತೆಗೆದುಕೊಂಡಿದ್ದಾರೆ ಏನು ಘೋಷಣೆಗಳನ್ನು ಮಾಡಿದ್ದಾರೆ ಆ ಕೆಲಸವನ್ನು ನಿಗದಿತ ಸಮಯದಲ್ಲಿ ತಾವು ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳ ಏನು ಒಳ್ಳೆಯ ಯೋಜನೆಯನ್ನು ಹಾಕಿಕೊಂಡಿದ್ದಾರೆ ನಿಗದಿತ ಸಮಯದಲ್ಲಿ ಕೆಲಸವಾಗುವ ದಿಸೆಯಲ್ಲಿ ಆ ಕಡೆಗೆ ಸಂಬಂಧಪಟ್ಟ ಮಂತ್ರಿಗಳಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಇನ್ನು ಪೌರಾಡಳಿತ ಇಲಾಖೆಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ, ಇವತ್ತು ಕೇಂದ್ರ ಸರ್ಕಾರ ಐದು ಅಂಶಗಳ ಕಾರ್ಯಕ್ರಮವನ್ನು ನಗರಗಳ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರಗಳಿಗೆ ಕೊಟ್ಟಿದೆ. ಅದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಕೇಂದ್ರ ಸರ್ಕಾರ ಪ್ರತಿ ವರ್ಷ ಬಿಡುಗಡೆ ಮಾಡುತ್ತಿದೆ. ಆ ಐದು ಅಂಶಗಳು ಏನೆಂದರೆ ಸಮಗ್ರ ಸಣ್ಣ ಮತ್ತು ಪಟ್ಟಣಗಳ ಅಭಿವೃದ್ಧಿ ಯೋಜನೆ. ಸ್ವರ್ಣ ಜಯಂತಿ ಶಹರ ರೋಜ್‌ಗಾರ್ ಯೋಜನೆ. ಹತ್ತನೆಯ ಹಣಕಾಸಿನ ಯೋಜನೆ, ಮೆಗಾಸಿಟಿ ಯೋಜನೆ ಮತ್ತು ತ್ವರಿತ ನೀರು ಸರಬರಾಜು ಯೋಜನೆ. ಈ ರೀತಿಯ ಐದು ಅಂಶಗಳ ಯೋಜನೆಗಳ ಕಾರ್ಯಕ್ರಮವನ್ನು ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಇದರಲ್ಲಿ ಸಮಗ್ರ ಸಣ್ಣ ಮತ್ತು ಪಟ್ಟಣ ಅಭಿವೃದ್ಧಿ ಯೋಜನೆಗಾಗಿ 1999-2000ದಲ್ಲಿ 7 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ, ನಮ್ಮ ಸರ್ಕಾರ ಖರ್ಚು ಮಾಡಿರುವುದು ಕೇವಲ 4 ಕೋಟಿ 83 ಲಕ್ಷ ರೂಪಾಯಿಗಳನ್ನು ಮಾತ್ರ. ಅವರು ಹಣ ಕೊಡದಿದ್ದರೆ

ಕೊಡಲಿಲ್ಲವೆಂದು ಹೇಳುತ್ತೇವೆ. ಹಣ ಕೊಟ್ಟ ಮೇಲೆ ಈ ತರಹ ಮಾಡುತ್ತೇವೆ. ನಾವು ಸರಿಯಾದ ಸಮಯಕ್ಕೆ ಕೆಲಸ ಮಾಡುವುದಿಲ್ಲ, ಇದನ್ನು ಕೇಳುವವರು ಯಾರು? ಅದೇ ರೀತಿಯಲ್ಲಿ ಶಹರಿ ರೋಜ್‌ಗಾರ್ ಯೋಜನೆಯಡಿಯಲ್ಲಿ 199899, 1999-2000ದಲ್ಲಿ 68 ಕೋಟಿ 42 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರೆ ಅದರಲ್ಲಿ 32 ಕೋಟಿ 72 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಇನ್ನು 35 ಕೋಟಿ 70 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿಲ್ಲ. ಯೋಜನೆಗಳು ಕೇಂದ್ರಸರ್ಕಾರದ್ದು. ನಾವು ಅವುಗಳನ್ನು ಕಾರ್ಯಗತ ಮಾಡಬೇಕು. ನಿಗದಿತ ಸಮಯದಲ್ಲಿ ಪೂರ್ತಿ ಮಾಡಬೇಕು. ಆದರೆ ಅದನ್ನು ನಾವು ಮಾಡಲಿಲ್ಲ. ಅದೇರೀತಿ ಇನ್ನೊಂದು ವಿಷಯ ಹೇಳುವುದಾದರೆ ಹತ್ತನೆಯ ಹಣಕಾಸು ಯೋಜನೆಯಡಿಯಲ್ಲಿ 71 ಕೋಟಿ 87 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ, ಅದರಲ್ಲಿ 31 ಕೋಟಿ 14 ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿ 40 ಕೋಟಿ 73 ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಲಿಲ್ಲ. ಅಂದರೆ ಎಲ್ಲಿಯೋ ಒಂದು ಕಡೆ ನಾವೇನು ಯೋಜನೆಗಳನ್ನು ಹಾಕಿಕೊಳ್ಳುತ್ತೇವೆ, ಈ ಸದನದಲ್ಲಿ ಚರ್ಚೆ ಮಾಡುತ್ತೇವೆ, ಅನೇಕ ಇಲಾಖೆಗಳಿಗೆ ನಾವೇನು ಅನುದಾನವನ್ನು ಕೊಡುತ್ತೇವೆ ಅನುದಾನವನ್ನು ಸರಿಯಾಗಿ ಬಳಸದಿರುವ ಅಧಿಕಾರಿಗಳ ಮೇಲೆ ಆಯಾಯ ಖಾತೆಯ ಮಂತ್ರಿಗಳ ಮೇಲಾಗಲೀ ಅವರನ್ನು ಕೇಳುವಂತಹ ಪ್ರಶ್ನೆಯೇ ಇಲ್ಲವಾ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಸಂಬಂಧಪಟ್ಟ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ, ಈ ರೀತಿ ಯೋಜನೆಗಳು ನಮಗೆ ಏನು ಕೇಂದ್ರದಿಂದ ಬರುತ್ತವೆ, ರಾಜ್ಯದಿಂದ ಕೊಡುತ್ತೇವೆ ಅವು ಸರಿಯಾದ ಸಮಯಕ್ಕೆ ತಾವು ಪೂರೈಸಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಇನ್ನೊಂದು ವಿಚಾರವನ್ನು ನಾನು ಆಗಲೇ ಹೇಳಿದೆ. ಕೊಳಚೆ ನೀರು ಕುಡಿಯಬೇಕೇ ಬನ್ನಿ ಕಲ್ಬುರ್ಗಿಗೆ ಎಂದು ಪತ್ರಿಕೆಯಲ್ಲಿ ಬಂದಿದೆ. ಗೃಹಮಂತ್ರಿಗಳ ಜಿಲ್ಲೆ. ಧರ್ಮಸಿಂಗ್, ಮಾಲಕರೆಡ್ಡಿ, ಖಮರುಲ್ ಇಸ್ಲಾಂರವರು ಇರುವಂತಹ ಜಿಲ್ಲೆ. ಇಂತಹ ಪರಿಸ್ಥಿತಿಯನ್ನು ನಾವು ಹತೋಟಿಯಲ್ಲಿ ತರಬೇಕಾಗುತ್ತದೆ. ನಾನು ರಾಯಚೂರಿಗೆ ಹೋಗಿದ್ದೆ. ಪಕ್ಕದಲ್ಲಿ ಆ ಕಡೆ ಕೃಷ್ಣಾನದಿ ಹರಿಯುತ್ತಿದೆ. ಆದರೆ ಅಲ್ಲಿ ಕುಡಿಯುವ ನೀರಿಗೆ ಅಭಾವ. ಕುಡಿಯುವ ನೀರಿನ ಬಗ್ಗೆ ವಿಶೇಷವಾದ ಗಮನವನ್ನು ಕೊಟ್ಟು ಕೆಲಸ ಮಾಡಬೇಕು. ಜನರಿಗೆ ಪರಿಶುದ್ಧವಾದ ನೀರನ್ನು ಕುಡಿಯಲಿಕ್ಕೆ ಕೊಡಬೇಕು. ಕಳೆದ ವರ್ಷದ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರತಿಯೊಬ್ಬ ಪ್ರಜೆಗೂ ಕೂಡ 55 ಲೀಟರ್ ನೀರನ್ನು ಕೊಡುತ್ತೇನೆಂದು ಹೇಳಿದ್ದರು. ಆ ರೀತಿಯಲ್ಲಿ ನಾವು ಕನಿಷ್ಟ ಪ್ರತಿಯೊಬ್ಬ ಪ್ರಜೆಗೆ 50 ಲೀಟರ್, ಕಡೆಗೆ 30 ಲೀಟರ್ ಕೊಡುವಂತಹ ವ್ಯವಸ್ಥೆಯನ್ನು ಮಾಡಿದರೆ ಅನುಕೂಲವಾಗುತ್ತದೆ. ನಿಜವಾಗಿಯೂ ಕುಡಿಯಲಿಕ್ಕೆ ನೀರಿಲ್ಲದಿದ್ದರೆ ಮನುಷ್ಯ ಬದುಕಲಿಕ್ಕೆ ಸಾಧ್ಯವಿಲ್ಲ. ಈ ವ್ಯವಸ್ಥೆಯನ್ನೂ ಕೂಡ ನೀವು ಸಮಗ್ರವಾಗಿ ಜಾರಿಗೆ ತರಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಇವತ್ತು ಕೋಲಾರ, ಚಿತ್ರದುರ್ಗ ಹೀಗೆ ಅನೇಕ ಭಾಗಗಳಲ್ಲಿ ಆಶ್ರಯ

ಮನೆಗಳನ್ನು ಕಟ್ಟುವಂತಹ ವಿಚಾರದಲ್ಲಿ ಅನೇಕ ಅವ್ಯವಹಾರಗಳು ಆಗಿವೆ. ಜಿಲ್ಲಾಪಂಚಾಯಿತಿಗಳಲ್ಲಿ ಅನೇಕ ಕಾಮಗಾರಿಗಳನ್ನು ಗುತ್ತಿಗೆದಾರರನ್ನು ಕರೆಯದೆ 44 ಲಕ್ಷ, 50 ಲಕ್ಷ, 75 ಲಕ್ಷ ರೂಪಾಯಿಗಳನ್ನು ಅಲ್ಲಿರತಕ್ಕ ಕಾರ್ಯ ನಿರ್ವಹಣಾಧಿಕಾರಿಗಳು ಹಾಗೆಯೇ ಕೆಲಸಗಳನ್ನು ಅವಾರ್ಡ್ ಮಾಡಿದ್ದಾರೆಂದು ಪತ್ರಿಕೆಗಳಲ್ಲಿ ಬರುವುದನ್ನು ದಿನನಿತ್ಯವೂ ಕೂಡ ನೋಡುತ್ತಿದ್ದೇವೆ. ಆ ದಿಸೆಯಲ್ಲಿಯೂ ಕೂಡ ತಾವು ಗಮನವನ್ನು ಹರಿಸಬೇಕೆಂದು ನಾನು ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ನಾಯ್ಡುರವರೇ ಒಂದು ನಿಮಿಷ. ಗುಲ್ಬರ್ಗದಲ್ಲಿ ನೀರಿನ ಅಭಾವದ ಬಗ್ಗೆ ಅವರು ಮಾತನಾಡುತ್ತಾ ಹೇಳಿದರು. ಅವರು ಮಾತನಾಡುವಾಗ ಗೃಹಮಂತ್ರಿಗಳು, ಧರ್ಮಸಿಂಗ್, ಖಮರುಲ್ ಇಸ್ಲಾಂರವರು ಇದ್ದಾರೆಂದು ಹೇಳಿದರು. ತಮಗೆ ಗೊತ್ತಿರಬಹುದು. ಇತ್ತೀಚೆಗೆ ಗುಲ್ಬರ್ಗ ನಗರಕ್ಕೆ ಒಂದು ಪ್ಯಾಕೇಜ್ ಮಾಡಿ ಬರೀ ಇಂಟರ್‌ನಲ್ ವಾಟರ್‌ಸಪ್ಲೈಗೆ 60 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ ಈಗಾಗಲೇ ಟೆಂಡರ್ ಕಾಲ್‌ಫಾರ್ ಮಾಡಲಾಗಿದೆ. ಇದರ ಹಿಂದೆ ಕಾಂಗ್ರೆಸ್ ಪಕ್ಷದ ಸರ್ಕಾರವಿದ್ದಾಗ 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಭೀಮಾ ನದಿಗೆ ಬ್ಯಾರೇಜ್ ಕಟ್ಟಿ ಪೈಪ್‌ಲೈನ್ ಎಳೆದು ನೀರು ತರತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಅದು ಇಂಟರ್‌ನಲ್ ಪೈಪ್‌ಲೈನ್ ಸರಿ ಇರಲಾರದಕ್ಕೆ ನೀರಿನ ಸರಬರಾಜು ಆಗದೆ ಅದು ಪೆಂಡಿಂಗ್ ಬಿದ್ದಿತ್ತು. ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ಫೆಬ್ರವರಿ ತಿಂಗಳಿನಲ್ಲಿ ಗುಲ್ಬರ್ಗಾಕ್ಕೆ ಯಾವಾಗ ಭೇಟಿ ನೀಡಿದ್ದರು ಆಗ 120 ಕೋಟಿ ರೂಪಾಯಿಯ ಒಂದು ಪ್ಯಾಕೇಜ್‌ನಲ್ಲಿ 60 ಕೋಟಿ ರೂಪಾಯಿ ಬರೀ ಕುಡಿಯುವ ನೀರಿಗಾಗಿ ಇಂಟರ್‌ನಲ್ ಪೈಪ್ ವಾಟರ್‌ಗಾಗಿ ಕೊಡಲಾಗಿದೆ. ಕಳೆದ ಐದು ದಿವಸಗಳ ಹಿಂದೆ 18 ಕೋಟಿ ರೂಪಾಯಿಗಳನ್ನು ಒಳಚರಂಡಿ ವ್ಯವಸ್ಥೆಗೆ ಮಂಜೂರಾತಿ ಕೊಡಲಾಗಿದೆ. ಅಂದರೆ ಒಂದೇ ವರ್ಷದಲ್ಲಿ ಸುಮಾರು ಹೆಚ್ಚು ಕಡಿಮೆ 78 ಕೋಟಿ ರೂಪಾಯಿ ಕೆಲಸವನ್ನು ಒಂದು ಸಿಟಿಯಲ್ಲಿಯೇ ಪ್ರಾರಂಭವಾಗಿದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :— ತಮಗೆ ತುಂಬಾ ಧನ್ಯವಾದಗಳು. 78 ಕೋಟಿ ರೂಪಾಯಿಗಳನ್ನು ಗುಲ್ಬರ್ಗ ಜಿಲ್ಲೆಗೆ ಕೊಟ್ಟರೆ ಬೇರೆ ಜಿಲ್ಲೆಗಳ ಗತಿಯೇನು?

1.10 ಪಿ.ಎಂ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಇಷ್ಟು ಹೊತ್ತು ಗುಲ್ಬರ್ಗಾಕ್ಕೆ ಏನೂ ಮಾಡಿಲ್ಲ ಎಂದು ಫೋಟೋ ತೋರಿಸಿ ತೋರಿಸಿ ಹೇಳಿದರು. ಏಕೆಂದರೆ ನಮ್ಮ ನಾಯ್ಡು ಅವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಹಾಗೆ ಮಾತನಾಡಿಕೊಂಡು ಅಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಿಗಳ ಜಾಗಕ್ಕೆ ಹೋಗತಕ್ಕಂಥ ಪ್ರಯತ್ನ ನಡೆದಿದೆ.

ಅದು ನಡೆಯಲಿ. ಆದರೆ ನನ್ನನ್ನು ಅವರು ನೇರವಾಗಿ ಕೇಳಿದರು ಗುಲ್ಬರ್ಗಾ ಜಿಲ್ಲೆಯ ಗತಿ ಏನಾಗಿದೆ ಎಂದು. ಪ್ರೆಸ್‌ನವರ ಕಡೆ ನೋಡಿಕೊಂಡು ಅವರು ಹಾಗೆ ಹೇಳಿದಾಗ ನಾನು ಈ ಕಡೆ ಸ್ವಲ್ಪ ಮಾತನಾಡುತ್ತಿದ್ದೆ. ಅದಕ್ಕೆ ಏನು ಮಾಡಿದ್ದೇವೆ ಎಂದು ಉತ್ತರ ಕೊಟ್ಟರೆ 'ಗುಲ್ಬರ್ಗಾಕ್ಕೆ ಇಷ್ಟು ಆಗಿದೆಯೆಂದರೆ ಬೇರೆ ಜಿಲ್ಲೆಗಳ ಗತಿ ಏನು?' ಎಂದರೆ ನಾನು ಏನು ಹೇಳಲಿ?

ಶ್ರೀ ಕಟ್ಟ ಸುಬ್ರಹ್ಮಣ್ಯಂ ನಾಯ್ಡು:— ಮಾನ್ಯ ಗೃಹಮಂತ್ರಿಗಳಿಗೆ ಧನ್ಯವಾದಗಳು. ನನ್ನ ಮೇಲೆ ಅವರು ಅಪಾರವಾದಂಥ ಗೌರವ ಮತ್ತು ಬಹಳ ಆಸಕ್ತಿಯನ್ನು ತೋರಿಸಿದ್ದಾರೆ. ಅದರ ಬಗ್ಗೆ ನನಗೆ ಸಂತೋಷವಾಗಿದೆ. ಅವರು ಇನ್ನೂ ಕೂಡ ಒಳ್ಳೆಯ ಸ್ಥಾನಕ್ಕೆ ಹೋಗಬೇಕು ಮತ್ತು ಮುಖ್ಯಮಂತ್ರಿಗಳೂ ಕೂಡ ಒಳ್ಳೆಯ ಸ್ಥಾನಕ್ಕೆ ಹೋಗಬೇಕು ಎಂದು ನನಗೆ ಆಸೆ ಇದೆ. ನನಗೆ ಒಳ್ಳೆಯದನ್ನು ಬಯಸುವುದಾದದರೆ ಅವರೂ ಕೂಡ ಚೆನ್ನಾಗಿ ಇರಬೇಕೆಂದು ನನ್ನಾಸೆ. ಹೀಗಾಗಿ ಸನ್ಮಾನ್ಯ ಉಪಾಧ್ಯಕ್ಷರೇ, ನಾವು ಬೀದರ್‌ಗೆ ಹೋಗಿದ್ದೆವು. ಬೀದರ್‌ನಲ್ಲಿ ನಾವು ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಮಾತನಾಡುವಾಗ ಅಲ್ಲಿ ರಾಜಕಾರಣಗಳು ನಡೆಯುತ್ತಿದೆ ಎನ್ನತಕ್ಕಂಥ ಮಾತು ಬಂತು. ಬೀದರ್ ಜಿಲ್ಲೆಯಲ್ಲಿ ನಾನು ಯಾರ ಮೇಲೂ ಆರೋಪ ಮಾಡುತ್ತಿಲ್ಲ, ದಯವಿಟ್ಟು ಕ್ಷಮಿಸಬೇಕು. ಅಲ್ಲಿ ಇರುವಂಥ ನಮ್ಮ ಪ್ರಜಾ ಪ್ರತಿನಿಧಿಗಳೇ ಕೆಲವರು ಸೇರಿಕೊಂಡು ಅಧಿಕಾರಿಗಳ ಮೇಲೆ ದಬ್ಬಾಳಿಕೆ ಮಾಡಿ, ಅವರು ಬೀದಿಮೆರವಣಿಗೆ ಮಾಡಿ ಯಾವ ರೀತಿ ಅವ್ಯವಸ್ಥೆ ಆಯಿತು ಎಂಬುದು ತಮಗೆ ಗೊತ್ತಿದೆ. ಇದನ್ನು ನಾವು ತಡೆಗಟ್ಟಬೇಕಾಗಿದೆ. ಕಾರಣ ಏನೆಂದರೆ, ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಜನರ ಅಭಿಪ್ರಾಯ ಇದೆ. ನಾವು ಒಳ್ಳೆಯ ಕೆಲಸ ಆದರೆ ಒಳ್ಳೆಯದು ಎಂದು ಹೇಳುತ್ತೇವೆ. ಆದರೆ ಕೆಲಸ ಚೆನ್ನಾಗಿ ಇಲ್ಲವಾದರೆ ಅದನ್ನು ಖಂಡಿತವಾಗಿಯೂ ಸದನದಲ್ಲಿ ಹೇಳಬೇಕಾಗುತ್ತದೆ. ಇದಲ್ಲದೆ, ಚಿತ್ರದುರ್ಗದಲ್ಲಿ ಕಂಪ್ಯೂಟರ್ ಹಗರಣ, ಕೋಲಾರ ಜಿಲ್ಲೆಯಲ್ಲಿ ಕಾಮಗಾರಿಗಳ ಹಗರಣ, ಈ ರೀತಿ ಅನೇಕ ಭಾಗಗಳಲ್ಲಿ ಜಿಲ್ಲಾ ಪಂಚಾಯತ್‌ಗಳಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಇವತ್ತು ಅನೇಕ ರಾಜ್ಯಗಳಲ್ಲಿ ಅಲ್ಲಿಯ ಮುಖ್ಯಮಂತ್ರಿಗಳು ಆಯಾಯ ಜಿಲ್ಲಾಧಿಕಾರಿಗಳ ಜೊತೆಗೆ ಟೆಲಿಕಾನ್ಫರೆನ್ಸ್ ಮಾಡಿ ದಿನನಿತ್ಯ ನಡೆಯತಕ್ಕಂಥ ವಿಚಾರಗಳ ಬಗ್ಗೆ ನೇರವಾಗಿ ಮಾತನಾಡುವಂಥ ವ್ಯವಸ್ಥೆ ಇದೆ. ನನಗೆ ತಮ್ಮ ಬಗ್ಗೆ ಅತ್ಯಂತ ಗೌರವ ಇದೆ. ಅವರೂ ಕೂಡ ಹೀಗೆ ಮಾಡಬೇಕು. ತಮ್ಮಲ್ಲಿ ಗುಪ್ತದಳ ಇದೆ, ಅವ್ಯವಹಾರಗಳು ಆಗುತ್ತವೆ ಎಂಬುದು ತಮಗೆ ಗೊತ್ತಿದೆ. ಎಲ್ಲೆಲ್ಲಿ ಇಂಥಾದ್ದು ನಡೆಯುತ್ತಿದೆ ಎಂಬ ಮಾಹಿತಿ ದೊರೆತ ಕೂಡಲೇ ತಾವು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಟೆಲಿಕಾನ್ಫರೆನ್ಸ್ ಮಾಡಿದರೆ ನಿಜವಾಗಿಯೂ ಪರಿಸ್ಥಿತಿ ಸುಧಾರಣೆ ಆಗುತ್ತದೆ ಎನ್ನತಕ್ಕಂಥ ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಅದೇ ರೀತಿಯಲ್ಲಿ ಇವತ್ತು

ಬೆಂಗಳೂರು ಮಹಾನಗರದ ಬಗ್ಗೆ ಮುಖ್ಯಮಂತ್ರಿಗಳಿಗೆ ಹೆಚ್ಚು ಕಾಳಜಿ ಇದೆ. ಇದು ನಿಜವಾಗಿಯೂ ಸಂತೋಷದ ಸಂಗತಿ. ನಾನು ಅವರಿಗೆ ಅಭಾರಿಯಾಗಿದ್ದೇನೆ. ಅನೇಕ ಯೋಜನೆಗಳನ್ನು ಬೆಂಗಳೂರು ಮಹಾನಗರದಲ್ಲಿ ಮಾಡಬೇಕೆಂದು ಹೇಳುತ್ತಿದ್ದಾರೆ. ಇದಕ್ಕೆ ಕಾರಣಗಳು ಬೇರೆ ಬೇರೆ ಇವೆ. ಯಾವ ಕಾರಣಕ್ಕೋಸ್ಕರ ಬೆಂಗಳೂರು ಮಹಾ ನಗರವನ್ನು ಅಭಿವೃದ್ಧಿ ಮಾಡಬೇಕೆಂದರೆ ಇದು ನಮ್ಮ ರಾಜ್ಯದ ರಾಜಧಾನಿಯಾಗಿದೆ. ಇದು ಭಾರತದೇಶದಲ್ಲೇ ಒಳ್ಳೆಯ ಹೆಸರು ಪಡೆದಿರತಕ್ಕಂಥ ಪಟ್ಟಣ ಮತ್ತು ಅದರ ಜೊತೆಯಲ್ಲಿ ಪ್ರಪಂಚದಲ್ಲಿ ಅನೇಕ ಜನರಿಗೆ ಕೂಡ ಬೆಂಗಳೂರು ನಗರದ ಮೇಲೆ ಕಣ್ಣು ಇದೆ. ಅದಕ್ಕೆ ಕಾರಣ ಇಲ್ಲಿಯ ವಾತಾವರಣ ಇರಬಹುದು, ಇಲ್ಲಿ ಇರುವಂಥ ಜನತೆ ಇರಬಹುದು. ಎಲ್ಲದರ ಬಗ್ಗೆ ಹೆಚ್ಚು ಗೌರವ ಇರುವ ಕಾರಣಕ್ಕೆ ಮುಖ್ಯ ಮಂತ್ರಿಗಳು ಈ ದಿಸೆಯಲ್ಲಿ ಕೆಲಸ ಮಾಡಿದ್ದಾರೆ. ಆದರೆ ಸಮಸ್ಯೆ ಏನಿದೆ ಎಂದರೆ, ಮುಖ್ಯಮಂತ್ರಿಗಳಿಗೆ ಒಳ್ಳೆಯದು ಮಾಡಬೇಕೆಂದು ಆಸೆಯಿದೆ ಮತ್ತು ಅವರು ಘೋಷಣೆಯನ್ನೂ ಮಾಡುತ್ತಾರೆ. ಆದರೆ ಅದು ಅನುಷ್ಠಾನಕ್ಕೆ ಬರುತ್ತಿಲ್ಲ. ಒಂದು ಸಲ ನನ್ನ ಕ್ಷೇತ್ರಕ್ಕೆ ಬಂದು ಬಸ್ ನಿಲ್ದಾಣ ಉದ್ಘಾಟನೆಯನ್ನು ಮಾಡಿದರು, ತುಂಬಾ ಸಂತೋಷ. ಸುತ್ತಮುತ್ತ ಕಾಂಕ್ರೀಟ್ ರಸ್ತೆಯನ್ನು ಹಾಕಿರಿ ಒಂದು ಹೇಳು ಶಿಫಾರಸ್ಸು ಪತ್ರವನ್ನೂ ಕೊಟ್ಟರು. ನನ್ನ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡುವುದಕ್ಕೆ ನನಗೆ ಅನುವು ಮಾಡಿಕೊಟ್ಟಿದ್ದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ ಒಂದು ಕೆಲಸವನ್ನು ತಾವು ಹೇಳಿದ ಮೇಲೆ ಅವರು ಎಷ್ಟು ಸಮಯ ತೆಗೆದುಕೊಳ್ಳುತ್ತಾರೆ ಎಂಬುದು ಇಲ್ಲಿಯ ಪ್ರಶ್ನೆ. ತಾವು ಘೋಷಣೆ ಮಾಡುತ್ತೀರಿ, ಆದೇಶ ಮಾಡುತ್ತೀರಿ. ಆದರೆ ಒಂದು ವರ್ಷವಾದರೂ ಅದು ಕಾರ್ಯಗತವಾಗುವುದಿಲ್ಲ. ಹೀಗಾದರೆ ಹೇಗೆ? ಬೆಂಗಳೂರು ನಗರದಲ್ಲಿ ಟಾರ್ ರಸ್ತೆ ಆಗಬೇಕಾಗಿದದ್ದು ಹನ್ನೊಂದು ತಿಂಗಳ ಹಿಂದೆ. ಇವತ್ತು ಇನ್ನೂ ಟೆಂಡರ್ ಫೈನಲೈಸ್ ಮಾಡುತ್ತಿದ್ದಾರೆ. ಇದರ ಅರ್ಥ ಏನು? ಬೆಂಗಳೂರು ನಗರವನ್ನು ಚೆನ್ನಾಗಿ ಇಡಬೇಕೆಂದು ಮುಖ್ಯಮಂತ್ರಿಗಳಿಗೆ ಆಸೆ ಇದೆ. ಆದರೆ ಇವತ್ತು ನಡೆಯುತ್ತಿರುವುದೇನು? ಅವರು ಒಂದು ವರ್ಷದ ಕೆಲಸವನ್ನು ಮುಂದಿನ ವರ್ಷ ತೆಗೆದುಕೊಳ್ಳುತ್ತಾರೆ, ಮುಂದಿನ ವರ್ಷದ ಕೆಲಸವನ್ನು ಅದರ ಮುಂದಿನ ವರ್ಷ ತೆಗೆದುಕೊಳ್ಳುತ್ತಾರೆ. 40 ಪರ್ಸೆಂಟ್‌ನಷ್ಟು ಟಾರ್ ಬೆಲೆ ಜಾಸ್ತಿಯಾಗಿದೆ. ಅಧಿಕಾರಿಗಳ ನಿರ್ಲಕ್ಷ್ಯವೇ ಇದಕ್ಕೆ ಕಾರಣ. ನಾನು ನಿಜವಾಗಿಯ ಬಹಳ ನೇರವಾಗಿ ಹೇಳುವುದಕ್ಕೆ ಇಚ್ಛಿಪಡುವುದು ಏನೆಂದರೆ ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಟೆಂಡರ್ ಕರೆಯಬೇಕಾದದ್ದು ಕರೆಯಲಿಲ್ಲ. ಜೂನಿಯರ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್, ಚೀಫ್ ಇಂಜಿನಿಯರ್, ಇಂಜಿನಿಯರ್ ಇನ್ ಚೀಫ್, ಕಮೀಷನರ್, ಕೌನ್ಸಿಲ್ - ಅದು ಮತ್ತೆ ವಾಪಸ್ಸು ಬರಬೇಕು. ಟೆಂಡರ್ ಆದಮೇಲೆ ಗೋಯಿಂಗ್‌ಬ್ಯಾಕ್ ಅಂಡ್ ಕಮಿಂಗ್‌ಬ್ಯಾಕ್ - ಈ ರೀತಿಯ ವಾತಾವರಣ ಇದೆ. ಈ ಕಮಿಂಗ್ ಬ್ಯಾಕ್ ಮತ್ತು

ಗೋಯಿಂಗ್ ಬ್ಯಾಕ್‌ನಲ್ಲಿ ಅನೇಕ ವ್ಯವಹಾರಗಳು ಇವೆ. ಇದರಲ್ಲಿ ಡೀಲಿಂಗ್‌ಗಳೂ ಆಗುತ್ತವೆ. ತಾವು ದೊಡ್ಡ ಯೋಜನೆಗಳನ್ನು ಮಾಡುತ್ತಿದ್ದೀರಿ, ತುಂಬಾ ಸಂತೋಷ. ಆದರೆ ಸಣ್ಣಸಣ್ಣ ಕೆಲಸಗಳಲ್ಲೂ ಹೀಗೆ ಆಗುತ್ತಿದೆ. ಮೊನ್ನೆ ಕೂಡ ತಾವು ಸರ್ಕಾರದ ಜತೆಗೆ ಮಹಾನಗರ ಪಾಲಿಕೆಯ ವತಿಯಿಂದ ಸಾವಿರ ಕೋಟಿ ರೂಪಾಯಿಗಳ ಒಪ್ಪಂದಕ್ಕೆ ಸಹಿಹಾಕಿಸಿದಿರಿ. ತಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ ಈ ಸಣ್ಣಸಣ್ಣ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಬೆಂಗಳೂರು ನಗರದ ಶಾಲೆಗಳಲ್ಲಿರುವ ಶೌಚಾಲಯಗಳ ಬಗ್ಗೆ ಹೇಳಬೇಕೆಂದರೆ ನನಗೆ ದು:ಖವಾಗುತ್ತದೆ. ಕಾಂಪೌಂಡ್ ಇದೆ, ಗೋಡೆ ಇಲ್ಲ, ಶೌಚಾಲಯ ಇದೆ, ನೀರು ಇಲ್ಲ, ಗಬ್ಬುನಾತ ಹೊಡೆಯುತ್ತದೆ. ಯಾರು ನಮ್ಮ ಮುಂದಿನ ಭವಿಷ್ಯ, ಮುಂದಿನ ಆಸ್ತಿಯೆಂದು ನಾವು ಮಾತನಾಡುತ್ತೇವಲ್ಲಾ, ಆ ಶಾಲೆಗಳ ಬಳಿ ಏನಾಗಿದೆ ಎಂಬುದನ್ನು ಹೇಳುತ್ತೇನೆ. ಬಹಳ ದು:ಖದ ಸಂಗತಿ ಏನೆಂದರೆ ಆ ಸ್ಥಳಗಳಲ್ಲಿ ಸಾಯಂಕಾಲ ಹೊತ್ತಿನಲ್ಲಿ ಮಾಡಬಾರದ್ದು, ಆಗಬಾರದ್ದು ಆಗುತ್ತಿದೆ. ಆ ಶಾಲೆಗಳಲ್ಲಿ ದೊಡ್ಡ ಕಾಪೌಂಡ್ ಇದ್ದರೆ, ಗೇಟಿಗೆ ಬೀಗ ಇಲ್ಲ, ವಾಚ್‌ಮನ್ ಇಲ್ಲ, ಶೌಚಾಲಯ ಇಲ್ಲ. ಆ ಶಾಲೆಗಳ ದುಸ್ಥಿತಿ ಹೀಗೆ ಇದೆ. ಇನ್ನು ರಸ್ತೆಗಳಿಗೆ ಡಾಂಬರೀಕರಣ ಮಾಡುವಂಥಾದ್ದು, ಅಸ್ಫಾಲ್ಟಿಂಗ್ ಮತ್ತು ಚಿಪ್‌ಕಾರ್ಪೆಟಿಂಗ್ ಎಂದು ಮಾಡುತ್ತಾರೆ. ಚಿಪ್‌ಕಾರ್ಪೆಟಿಂಗ್ ಎಂದರೆ ಅದು ಕೂದಲು ಎಳೆಯಷ್ಟು ದಪ್ಪ ಇರುತ್ತದೆ. ಇಲ್ಲದಿದ್ದರೆ ಈ ಕೆಲಸ ಮಾಡುವುದಿಲ್ಲ ಎಂದು ಕಂಟ್ರಾಕ್ಟರ್ ಓಡಿಹೋಗುತ್ತಾನೆ, ಇಂಜಿನಿಯರ್ ನನ್ನ ಕೈಯಲ್ಲಿ ಕೆಲಸ ಮಾಡಿಸುವುದಕ್ಕೆ ಆಗುವುದಿಲ್ಲವೆಂದು ಈ ಕಡೆ ಹೋಗುತ್ತಾನೆ. ಹಾಗಾದರೆ ನಮ್ಮ ಗತಿ ಏನು ಅಲ್ಲಿ ಹಳ್ಳ ಇದ್ದ ಜಾಗದಲ್ಲಿ ಹಳ್ಳವೇ ಇರುತ್ತದೆ. ಕೊಳ್ಳ ಇರುವ ಜಾಗದಲ್ಲಿ ಕೊಳ್ಳ, ದಿಣ್ಣೆ ಇರುವ ಜಾಗದಲ್ಲಿ ದಿಣ್ಣೆ ಹಾಗೆಯೇ ಇರುತ್ತದೆ. ಈ ರೀತಿ ಟಾರನ್ನು ಹಾಕುತ್ತಾರೆ. ಮತ್ತೆ ಮುಂದಿನ ವರ್ಷ ತಿರುಪತಿಗೆ ಹೋಗುತ್ತೇವಲ್ಲಾ ಮಾಡಿಕೊಂಡು ಬರುತ್ತೇವಲ್ಲಾ ಹಾಗೆ, ಮುಂದಿನ ವರ್ಷ ಪುನ: ಇದೇ ಕೆಲಸ ಮಾಡುತ್ತಾರೆ. ಸುಮಾರು 40 ಕೋಟಿ ರೂಪಾಯಿಗಳನ್ನು ಈ ವರ್ಷ ಖರ್ಚುಮಾಡಿ ಅದು ಮುಂದಿನ ವರ್ಷ ಮಳೆಗಾಲಕ್ಕೆ ಇರುವುದಿಲ್ಲ. ಏಕೆಂದರೆ ವೈಜ್ಞಾನಿಕವಾಗಿ ಕೆಲಸ ಮಾಡಿರುವುದಿಲ್ಲ. ವೈಜ್ಞಾನಿಕವಾಗಿ ಕೆಲಸ ಮಾಡುವ ಇಂಜಿನಿಯರುಗಳು ಇದ್ದಾರೆ. ಆದರೆ ಯಾರ ಹತ್ತಿರವೋ ಡಿಸೈನಿಂಗ್ ಮಾಡಿಸುತ್ತಾರೆ, ಒಳಸುರಂಗ ಮಾರ್ಗಗಳನ್ನು ಮಾಡುತ್ತಾರೆ. ನನ್ನ ಕ್ಷೇತ್ರದಲ್ಲಿಯೂ ಒಂದ ಒಳ ಸುರಂಗ ಕೆಲಸ ಮಾಡಿದ್ದಾರೆ. ಆದರೆ ಅದು ಕೆಲಸ ಸಾಗುತ್ತಿಲ್ಲ. ನೀವು ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ? ಈ ಕಡೆ ಇಂಜಿನಿಯರುಗಳು ಹೋದರೆ, ಆ ಕಡೆ ಕಂಟ್ರಾಕ್ಟರ್ ದುಡ್ಡು ತೆಗೆದುಕೊಂಡುಹೋಗುತ್ತಾನೆ. ಹೀಗೆ ಬೆಂಗಳೂರು ನಗರದ ಬಗ್ಗೆ ಇನ್ನೂ ಅನೇಕ ವಿಚಾರಗಳು ಇವೆ. ಉಪಾಧ್ಯಕ್ಷರೇ, ತಾವು ಬೆಲ್ ಹೊಡೆಯಬೇಡಿ, ನಾನು ಬೇಗ ಮುಗಿಸುತ್ತೇನೆ. ಬಾಂಡ್ ಯೋಜನೆಯನ್ನು ತಂದರು ಸ್ವಾಮಿ. 125 ಕೋಟಿ ರೂಪಾಯಿಗಳ

ಬಾಂಡ್ ಯೋಜನೆಯನ್ನು ತಂದಿದ್ದು ಮುಂದೆ ಅದು 185 ಕೋಟಿ ರೂ. ಆಯಿತು. ಇದರಲ್ಲಿ ಆಗಿರತಕ್ಕಂಥ ಹಗರಣಗಳ ಬಗ್ಗೆ ಹೇಳಿದರೆ ಕಣ್ಣಲ್ಲಿ ನೀರು ಬರುತ್ತದೆ. ನಿಜವಾಗಿಯೂ ಬಾಂಡ್ ಹಗರಣ ಹೇಗೆ ಆಯಿತು ಎಂದರೆ ನೂರಕ್ಕೆ ನಲ್ವತ್ತು ಪರ್ಸೆಂಟ್ ಹೆಚ್ಚಾಗಿ ಟೆಂಡರ್ ಕೊಟ್ಟು ಅವಾರ್ಡ್ ಮಾಡಿಬಿಟ್ಟರು. ಅವತ್ತು ಇದ್ದಂಥ ಆಯುಕ್ತರು 40 ಪರ್ಸೆಂಟ್ ಹೆಚ್ಚು ಮಾಡಿ ಟೆಂಡರ್ ಅವಾರ್ಡ್ ಮಾಡಿಬಿಟ್ಟರು. ಅವರು ಏನು ಮಾಡಿದರು ಎಂದರೆ ಟೆಂಡರ್ ಸ್ಪೆಸಿಫಿಕೇಷನ್ಸ್ ಏನಿದೆ, ಆ ಕೆಲಸ ಮಾಡಲಿಲ್ಲ. ಸಾರ್ವಜನಿಕರಿಂದ ಬಾಂಡ್ ಎತ್ತಿ, ಆ ಹಣ ಸಾಲಮಾಡಿ ಈ ರೀತಿಯಾಗಿ ಕಂಟ್ರಾಕ್ಟದಾರರ ಪಾಲು ಮಾಡಿದರು. ಇದು ಸರಿಯೇ ಎಂದು ನಾನು ಕೇಳುತ್ತೇನೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಾವು ಕೇಳಿದಾಗ ಮುಖ್ಯಮಂತ್ರಿಗಳು ಅನೇಕ ಬಾರಿ ಈ ರೀತಿ ನಡೆದಿಲ್ಲವೆಂದು ಹೇಳಿದರು. ಕೊನೆಗೆ ಮತ್ತೊಮ್ಮೆ 'ಇಲ್ಲ ನಡೆದಿದೆ, ಕ್ರಮ ತೆಗೆದುಕೊಳ್ಳುತ್ತೇನೆ' ಎಂದು ಹೇಳಿದರು. ಪಾಲಿಕೆಯ ಆಯುಕ್ತರ ಹತ್ತಿರ ಈ ರೀತಿ ಬಾಂಡ್ ಯೋಜನೆಯಲ್ಲಿ ಕಾಮಗಾರಿಗಳು ಕಳಪೆ ಮಟ್ಟದಲ್ಲಿವೆ, ಎಷ್ಟು ಕೆಲಸ ಮಾಡಬೇಕೋ ಅಷ್ಟು ಮಾಡಿಲ್ಲವೆಂದು ಹೇಳಿದವು ಸಭಾನಾಯಕರೇನೋ ಒಳ್ಳೆಯ ಮನಸ್ಸಿನಿಂದ ಆಯಿತು, ನಾನು ತನಿಖೆ ಮಾಡಿಸುತ್ತೇನೆ ಎಂದು ಹೇಳಿದರು. ಆದರೆ ಇಲ್ಲಿಯ ತನಕ ತನಿಖೆ ನಡೆದಿಲ್ಲ. ತಾವು ತನಿಖೆ ಮಾಡಿದರೆ ಸರಿ, ಮಾಡದೇ ಇದ್ದರೆ ಅದು ತಮಗೇ ಬಿಟ್ಟಿದ್ದು. ಆದರೆ ಇಂತಹ ಕೆಲಸಗಳಲ್ಲಿ ಈ ರೀತಿಯಾಗುತ್ತಿದ್ದರೆ ಇದನ್ನು ಹತೋಟಿಗೆ ತರುವವರು ಯಾರು? ಇದಕ್ಕೆಲ್ಲಾ ಅಕೌಂಟಬಿಲಿಟಿ ಯಾರು ಎನ್ನುವ ಪ್ರಶ್ನೆ ಬರುತ್ತದೆ. ಇಷ್ಟನ್ನು ನಾನು ಹೇಳುತ್ತಾ ಕೊನೆಯದಾಗಿ ಗೃಹಮಂತ್ರಿಗಳ ಗಮನ ಸೆಳೆಯುತ್ತೇನೆ. ಸಾಕಷ್ಟು ಸಮಯ ಇಲ್ಲ. ಆದರೆ ಮುಖ್ಯಮಂತ್ರಿಗಳು ಇಲ್ಲಿ ಇರುವುದು ನನಗೆ ಸಂತೋಷ ಉಂಟು ಮಾಡಿದೆ. ಮೊನ್ನೆದಿನ ಕಾನೂನು ವಿಚಾರ ಬಗ್ಗೆ ಸುರೇಶ್ ಕುಮಾರ್, ಸಿಂಧ್ಯಾ ಮತ್ತು ಎಲ್ಲ ನಾಯಕರು ಮಾತನಾಡಿದ್ದಾರೆ. ಸ್ವಾಮಿ, ಇತ್ತೀಚೆಗೆ ಬ್ಯಾಟರಾಯನಪುರ ಸಿ.ಎಂ.ಸಿ ಚುನಾವಣೆ ನಡೆಯಿತು. ಒಂದು ಪಕ್ಷದವರು ಗೆದ್ದರು. ಇನ್ನೊಂದು ಪಕ್ಷದವರು ಸೋತರು. ಗೆದ್ದ ಪಕ್ಷದವರು ಸಾಮಾನ್ಯವಾಗಿ ವಿಜಯಘೋಷಣೆ ಮಾಡಿ ಬರುವಂಥಾದ್ದು ಸಹಜ. ಅಂತಹ ಸಂದರ್ಭದಲ್ಲಿ ಸೋತ ಪಕ್ಷದ ಅಭ್ಯರ್ಥಿಗಳ ಮೇಲೆ ಹಲ್ಲೆ ಮಾಡಿದರು. ಅಲ್ಲಿ ಮೋಟಾರ್‌ಸೈಕಲ್‌ನ್ನು ಬೆಂಕಿಗೆ ಹಾಕಿದರು. ಪೋಲಿಸಿನವರು ಅಲ್ಲಿ ನಿಂತಿದ್ದರು, ಮೂಕ ಪ್ರೇಕ್ಷಕರಾಗಿ ಅವರೆಲ್ಲ ನೋಡಿದ್ದಾರೆ. ಇದು ಪೋಲಿಸ್ ರಾಜಕಾರಣವೋ, ರಾಜ್ಯದ ರಾಜಕಾರಣವೋ ಎಂದು ಕೇಳುವಂಥ ಸಂದರ್ಭ ಸ್ವಾಮಿ. ದೂರನ್ನು ಕೊಟ್ಟಿದ್ದಾರೆ. ಆ ಒಂದು ಪಕ್ಷದವರನ್ನು ಸುಮಾರು ನಲ್ವತ್ತು ಜನರನ್ನು ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋದರು. ಮಾರನೇ ದಿವಸ ಅವರನ್ನು ಬಿಡುಗಡೆ ಮಾಡಿದ್ದಾರೆ. ನಾವು ಪೊಲೀಸ್ ಕಮೀಷನರ್ ಹತ್ತಿರ ಹೋಗಿದ್ದೆವು, ಐ.ಜಿ. ಹತ್ತಿರ ಹೋಗಿದ್ದೆವು. ಆದರೆ ಅಲ್ಲಿದ್ದಂಥ ಸರ್ಕಲ್ ಇನ್‌ಸ್ಪೆಕ್ಟರ್ ಯಾರ ಅರ್ಜಿಯನ್ನೂ ಸ್ವೀಕಾರ ಮಾಡಿ ಅದರ ಮೇಲೆ ತನಿಖೆ ಮಾಡುವುದಕ್ಕೆ ತಯಾರಿಲ್ಲ. ಇಂತಹ ಅಧಿಕಾರಿಗಳು ಇದ್ದಾಗ ನಿಮ್ಮ ಇಲಾಖೆಗೆ ಒಳ್ಳೆಯ ಹೆಸರು ಹೇಗೆ ಬರುತ್ತದೆ? ಒಂದು ಪಕ್ಷದ ಕಾರ್ಯಕರ್ತರನ್ನು ನಾವು ವಿಜೃಂಭಿಸಿ ರೌಡಿಸಂ ಮಾಡಿ

ಎಂದು ಹೇಳಿ ಅವರನ್ನು ಬಿಟ್ಟು ಇನ್ನೊಂದು ಕಡೆ ರಾತ್ರಿ ಹೊತ್ತಿನಲ್ಲಿ ಸುಲಿಗೆ ಮಾಡುತ್ತಾರೆ. ಕೊಲೆ ಮಾಡುತ್ತಾರೆ, ಅತ್ಯಾಚಾರ ಮಾಡುತ್ತಾರೆ, ಮಾನಭಂಗ ಮಾಡುತ್ತಾರೆ ಎಂದರೆ ಇವತ್ತು ಇದನ್ನೆಲ್ಲಾ ಹತೋಟಿಯಲ್ಲಿ ಇಡುವುದಕ್ಕೆ ಸಾಧ್ಯವಾಗುತ್ತದೆಯೇ? ಎಲ್ಲಿ ರಾಜಕೀಯ ಶಕ್ತಿಗಳು ಪ್ರವೇಶ ಮಾಡುತ್ತವೆಯೋ, ಅಲ್ಲಿಯ ತನಕ ನ್ಯಾಯ ದೊರಕಲು ಸಾಧ್ಯವೇ ಇಲ್ಲ. ಯಾವ ರೀತಿ ಸಾಧ್ಯ? ಒಂದು ಪಕ್ಷದವರು ರೌಡಿಸಂ ಮಾಡಿಕೊಂಡು ಮನೆಗಳನ್ನು ಒಡೆದಿದ್ದಾರೆ. ಅವರ ಕೈಗೆ ಹೊಡೆದಿದ್ದಾರೆ, ಕಣ್ಣಿಗೆ ಹೊಡೆದಿದ್ದಾರೆ, ಕಣ್ಣುಗಳ ಮೇಲೆ ಸ್ಟಿಚಸ್ ಆಗಿದೆ. ಮನೆಗಳ ಕಿಟಕಿ, ಬಾಗಿಲುಗಳು ಹೋಗಿವೆ. ಈ ರೀತಿ ಅನೇಕ ಸಮಸ್ಯೆಗಳು ಬೆಂಗಳೂರು ನಗರದಲ್ಲಿ ಇವೆ. ಇವತ್ತು ಕಾನೂನು ಸುವ್ಯವಸ್ಥೆ ಹದಗೆಡುವುದಕ್ಕೆ ಇದೂ ಒಂದು ಕಾರಣ. ಕಾರಣ ಏನೆಂದರೆ, ಎಲ್ಲಿಯೂ ಭಯ ಭಕ್ತಿ ಎನ್ನುವುದು ಇಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಒಳ್ಳೆಯ ಅನುಭವ ಇರತಕ್ಕ ಮಂತ್ರಿಗಳು. ಅವರು ಈ ದಿಸೆಯಲ್ಲಿ ಕ್ರಮ ಕೈಗೊಳ್ಳಬೇಕು. ಇವತ್ತು ಏನು ಲೊಟ್ಟೆಗೊಳ್ಳಹಳ್ಳಿಯಲ್ಲಿ ದೌರ್ಜನ್ಯಗಳು ನಡೆಯುತ್ತಾ ಇದೆ, ಪೋಲೀಸಿನವರು ನಿಷ್ಕ್ರಿಯರಾಗಿ ಇವತ್ತು ರಾಜಕಾರಣ ಮಾಡುತ್ತಿದ್ದಾರೆ ಅದನ್ನು ತಡೆಗಟ್ಟಬೇಕು. ಯಾವ ಪೋಲೀಸ್ ಅಧಿಕಾರಿ ತನ್ನ ಕರ್ತವ್ಯದಲ್ಲಿ ವಿಫಲನಾಗಿದ್ದಾನೋ, ಡ್ಯೂಟಿ ನೆರವೇರಿಸುವುದರಲ್ಲಿ ಸಫಲವಾಗಿಲ್ಲವೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಇಷ್ಟು ಹೇಳಿ ಇವತ್ತಿನ ದಿವಸ ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ, ಜೈಹಿಂದ್.

+ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) :— ಮಾನ್ಯ ಸಭಾಧ್ಯಕ್ಷರೇ, ಇವತ್ತು ಇಲಾಖೆಗಳ ಬೇಡಿಕೆಗಳ ಮೇಲೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಯಾವುದೇ ಸರ್ಕಾರ, ಜನಪರ ಕಾರ್ಯಕ್ರಮಗಳನ್ನು ಮಾಡುತ್ತದೆ. ಅದು ಅನುಷ್ಠಾನಕ್ಕೆ ಬರದೇ ಇದ್ದರೆ, ಆ ಕಾರ್ಯಕ್ರಮಗಳು ಜನರನ್ನು ಮುಟ್ಟಲಿಕ್ಕೆ ಸಾಧ್ಯವಿಲ್ಲ. ಇವತ್ತು ಚುನಾವಣಾ ಪ್ರಣಾಳಿಕೆಯಲ್ಲಿ ಪ್ರಮುಖವಾಗಿ ಹೇಳುವಂಥ ವಿಚಾರ ಯಾವುದೆಂದರೆ, ರೈತರ ಸಮಸ್ಯೆ ಬಗ್ಗೆ. ನಾವು ಅಧಿಕಾರಕ್ಕೆ ಬಂದರೆ ಇಂತಹ ಸಮಸ್ಯೆಗಳನ್ನು ಬಗೆಹರಿಸುತ್ತೇವೆ, ರೈತರಿಗೆ ನೀರಾವರಿ ಸೌಕರ್ಯವನ್ನು ಮಾಡಿಕೊಡುತ್ತೇವೆ, ರೈತರಿಗೆ ಒಳ್ಳೆಯ ಬೆಳೆಯನ್ನು ಬೆಳೆಯುವುದಕ್ಕೆ ಮಾರ್ಗದರ್ಶನವನ್ನು ಇಲಾಖೆಯಿಂದ ನೀಡುತ್ತೇವೆ. ಕಾರಣ ಇದಕ್ಕೆ ನನಗನ್ನಿಸುತ್ತದೆ, ಗಾಂಧೀಜಿಯವರ ಸಿದ್ಧಾಂತ. ಅವರ ಸಿದ್ಧಾಂತ ಏನೆಂದರೆ, ಎಲ್ಲಿಯವರೆಗೆ ಈ ದೇಶದಲ್ಲಿ ಶೇಕಡ 80 ಭಾಗ ಗ್ರಾಮೀಣ ಪ್ರದೇಶ ಇದೆ, ಅದು ಅಭಿವೃದ್ಧಿಯಾಗದ ಹೊರತು, ಆ ಜನರಿಗೆ ಮೂಲಭೂತ ಸೌಕರ್ಯ ಸಿಗದೇ ಇದ್ದರೆ, ದೇಶದ ಪ್ರಗತಿಯನ್ನು ಕಾಣಲಿಕ್ಕೆ ಸಾಧ್ಯವಿಲ್ಲ. ಹಾಗೆಯೇ ಮಹಿಳೆಯರಿಗೆ ಸ್ಥಾನಮಾನಗಳು, ಕೃಷಿಕರಿಗೆ ಸವಲತ್ತುಗಳು ಈ ಸಿದ್ಧಾಂತದ ಮೇಲೆ ಇವತ್ತು ನಮ್ಮ ದೇಶದ ಸಂವಿಧಾನ ರೂಪಿತವಾಗಿದೆ. ಯಾವುದೇ ಸರ್ಕಾರ ಚುನಾವಣೆಯಲ್ಲಿ ಪ್ರಣಾಳಿಕೆಯನ್ನು ಇಟ್ಟರೂ ಕೂಡ ಅದನ್ನು ಅನುಷ್ಠಾನಗೊಳಿಸಲಿಕ್ಕೆ ಸರ್ಕಾರ ಬದ್ಧವಾಗಿರುತ್ತದೆ. ಆದರೆ ಇಲ್ಲಿ ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಹೇಳಿದಹಾಗೆ ಎಲ್ಲೋ ಆಡಳಿತ ಲೋಪ, ಇಲಾಖೆಯ

ಅಧಿಕಾರಿಗಳ ನಿರ್ಲಕ್ಷ್ಯ ಹೀಗೆ ಹಲವಾರು ವಿಚಾರಗಳಿಂದ, ನಾವು ಹಲವಾರು ಸಮಸ್ಯೆಗಳನ್ನು ಈ ಸದನದಲ್ಲಿ ಚರ್ಚೆ ಮಾಡುತ್ತೇವೆ. ಆಡಳಿತ ಪಕ್ಷದವರು ಉತ್ತರವನ್ನು ಕೊಡುತ್ತಾರೆ. ವಿರೋಧ ಪಕ್ಷದವರು ಗಲಾಟೆ ಮಾಡುತ್ತಾರೆ. ಆದರೂ ಕೂಡ ನಮ್ಮೆಲ್ಲರ ಚಿಂತನೆ, ಈ ರಾಷ್ಟ್ರದ ಈ ರಾಜ್ಯದ ಜನರಿಗೆ ಮೂಲಭೂತ ಸೌಕರ್ಯಗಳನ್ನು, ಒಂದು ಕಾನೂನಿನ ಚೌಕಟ್ಟಿನಲ್ಲಿ ಕೊಡಿಸಿಕೊಡಬೇಕೆಂಬ ಉದ್ದೇಶ ಎಲ್ಲಾ ಸರ್ಕಾರಗಳ ಉದ್ದೇಶ. ಆದರೆ, ಜವಹರಲಾಲ್ ನೆಹರೂರವರು ಕೈಗಾರೀಕರಣ ಮಾಡಬೇಕೆಂದು ಒಂದೇ ಉದ್ದೇಶದಿಂದ ಇವತ್ತು ಕೃಷಿಕರು ಈ ದೇಶದಲ್ಲಿ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಏನು ವಲ್ಲಭಾಯ್ ಪಟೇಲರವರು ಮೊದಲನೇ ಆದ್ಯತೆಯನ್ನು ಕೃಷಿಗೆ ಕೊಟ್ಟು, ನೀರಾವರಿ ಸೌಕರ್ಯ ಕೊಡಬೇಕೆಂದು ಹೇಳಿದರೋ ಅದನ್ನೇನಾದರೂ ಮಾಡಿದ್ದರೆ, ಈ ದೇಶದಲ್ಲಿ ಯಾರೂ ಕೂಡ ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿಲ್ಲ. ಏನೋ ಕೈಗಾರಿಕೆಗಳನ್ನು ಮಾಡಬೇಕು, ಅದಕ್ಕೆ ಸರಿಯಾದ ಕಚ್ಚಾ ವಸ್ತುಗಳು ಸಿಗದಿರುವುದರಿಂದ ಮತ್ತು ಉತ್ಪಾದನೆ ಒಳ್ಳೆಯ ಮಟ್ಟದಲ್ಲಿ ಆಗದೇ ಇರುವುದರಿಂದ ನಮ್ಮ ರಾಜ್ಯ ಸರ್ಕಾರದಲ್ಲೂ ಕೂಡ, ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಹಲವಾರು ಸಂಸ್ಥೆಗಳು ಇವತ್ತು ನಷ್ಟವನ್ನು ಅನುಭವಿಸುವಂಥ ಪರಿಸ್ಥಿತಿಯನ್ನು ತಲುಪಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇವತ್ತು ನಾನು ಮೊದಲನೆಯದಾಗಿ ಕೃಷಿಗೆ ಸಂಬಂಧಪಟ್ಟ ವಿಷಯವನ್ನು ತೆಗೆದುಕೊಂಡರೆ ನಮ್ಮಲ್ಲಿ ಒಂದು ಗಾದೆ ಇದೆ. ವ್ಯವಸಾಯ ಮನೆ ಮಂದಿಯೆಲ್ಲಾ ಸಾಯ ಎಂದು. ಮನೆ ಮಂದಿಯವರೆಲ್ಲಾ ಎಂದರೆ, ಯಜಮಾನ, ಹೆಂಡತಿ ಮಕ್ಕಳು, ತಾಯಿ, ತಂದೆ 24 ಗಂಟೆ ದುಡಿದರೂ ಕೂಡ ಇವತ್ತು ಅವನಿಗೆ ನೆಮ್ಮದಿಯಾದ ಜೀವನವನ್ನು ಮಾಡಲಿಕ್ಕೆ ಆಗತ್ತಾ ಇಲ್ಲ. ಇದಕ್ಕೆ ಸರ್ಕಾರವೇ ಕಾರಣ ಎಂದು ನಾನು ಹೇಳುವುದಿಲ್ಲ. ಒಂದು ಕಡೆ ಪ್ರಕೃತಿ ವಿಕೋಪ ಇರಬಹುದು, ದೇಶದಲ್ಲಿ ಪ್ರಕೃತಿ ವಿಕೋಪ ಇಲ್ಲದೇ, ಸರಿಯಾಗಿ ಮಳೆ ಬಂದರೆ, ರೈತ ಸರ್ಕಾರದ ವಿಚಾರಕ್ಕೆ ಬರುವುದಿಲ್ಲ. ಏನಾದರೂ ಮಾಡಿಕೊಳ್ಳಿ ಎಂದು ಶಾಸಕರಿಗೆ ಹೇಳುತ್ತಾನೆ. ಒಳ್ಳೆಯ ಕೆಲಸ ಮಾಡಿ, ನಮಗೇನು ಸವಲತ್ತುಗಳನ್ನು ಕೊಡಬೇಕೋ ಅವುಗಳನ್ನು ಕೊಡಿ ಎಂದು ಹೇಳುತ್ತಾನೆಯೇ ಹೊರತು ಯಾವುದೇ ಬೇಡಿಕೆಯನ್ನು ಅವನು ನಮ್ಮ ಮುಂದಿಡುವುದಿಲ್ಲ. ಆದರೆ, ಇವತ್ತು ನಾವು ಕೃಷಿ ಇಲಾಖೆಗೆ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಇದರ ಉದ್ದೇಶ. ಸಮಸ್ಯೆ ನಿವಾರಣೆಯಾಗಬೇಕು, ನಾವೇನು ಇಲ್ಲಿ ವಿಧಾನ ಸಭೆಗೆ ಬಂದಿದ್ದೇವೆ ಶೇಕಡ 75 ರಿಂದ 80 ಭಾಗ ಕೃಷಿಕರ ಮಕ್ಕಳೇ. ಯಾರೋ ಒಬ್ಬಿಬ್ಬರು ಸಿಟಿಯಲ್ಲಿದ್ದಂತಹವರು. ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಅಥವಾ ಸುರೇಶ್ ಕುಮಾರ್‌ರಂಥವರು ಇರಬಹುದು. ಅವರೂ ಕೂಡ ಬೇರೆ ವ್ಯವಹಾರಿಕವಾಗಿ ಇದ್ದರೂ ಕೂಡ ಅವರಿಗೂ ರೈತರ ಬಗ್ಗೆ ಚಿಂತನೆ ಇದೆ. ಈವತ್ತು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದರೆ ಒಂದು ತರಹ ಹಾಸ್ಯಾಸ್ಪದ ಮಾತು. ಇವತ್ತು ಏತಕ್ಕೋಸ್ಕರ ಅವನು ಆತ್ಮಹತ್ಯೆ ಮಾಡಿಕೊಂಡಿದ್ದಾನೆ, ಅವನಿಗೇನಾಗಿತ್ತು

ಎಂಬ ಬಗ್ಗೆ ವಿಚಾರ ಮಾಡಬೇಕು. ಅದು ಗೊತ್ತಾದರೆ ಜನಪ್ರತಿನಿಧಿಗಳಾದವರು ಆ ಭಾಗದ ಜನರ ಹತ್ತಿರ ಇನ್ನೂ ಹೆಚ್ಚು ಜನಪ್ರಿಯತೆ ಗಳಿಸುವುದಕ್ಕೆ, ಸರ್ಕಾರದ ಸವಲತ್ತುಗಳನ್ನು ಕೊಡಿಸಲಿಕ್ಕೆ ಪ್ರಯತ್ನ ಮಾಡುತ್ತಾರೆ. ಅದು ಶಾಸಕರು ಇರಬಹುದು, ಜಿಲ್ಲಾ ಪಂಚಾಯ್ತಿ ಸದಸ್ಯರು ಇರಬಹುದು, ತಾಲ್ಲೂಕು ಪಂಚಾಯ್ತಿ ಸದಸ್ಯರು ಇರಬಹುದು, ನಾವು ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಈ ಕಾಂಗ್ರೆಸ್ ಸರ್ಕಾರದಲ್ಲೇ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಾ ಇವೆ ಎಂದು ಹೇಳುವುದಿಲ್ಲ. ನಮ್ಮ ಸರ್ಕಾರ ಇದ್ದಾಗಲೂ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಾ ಇದ್ದವು. ಆದರೆ, ಶಾಸಕರುಗಳು ಅದರ ಬಗ್ಗೆ ಚರ್ಚೆ ಮಾಡುತ್ತಲೇ ಇದ್ದೇವೆ. ಏನು ಚರ್ಚೆ ಮಾಡುತ್ತಿದ್ದೇವೆ, ರೈತರಿಗೆ ಇಂತಹ ಸೌಲಭ್ಯ ಕೊಡಿ. ಕೆಲವೊಂದು ಸವಲತ್ತುಗಳನ್ನು ಕೊಡುವಂಥ ಕೆಲಸ ಮಾಡಿ. ಉತ್ತಮ ಗುಣಮಟ್ಟದ ಬೀಜಗಳನ್ನು ಕೊಡಿ ಎಂದು. ನಮ್ಮ ಕಾರ್ಯಕ್ರಮ ಒಂದು ಕಡೆ ಇದನ್ನು ಮಾಡಿದರೆ, ಒಂದು ಕಡೆ ನಮ್ಮ ದೇಶದ ಆರ್ಥಿಕ ನೀತಿ, ಆರ್ಥಿಕ ವ್ಯವಸ್ಥೆ, ನಮ್ಮ ರೈತರ ಜನಜೀವನದ ಮೇಲೆ ಬಹಳ ಪರಿಣಾಮ ಬೀರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಚಿಕ್ಕಮಗಳೂರಿಗೆ ಬಂದಾಗ ನಾನು ತೋರಿಸಿದೆ. ನಮ್ಮ ಕಣ್ಣಲ್ಲಿ ನೀರು ಬರುತ್ತಾ ಇಲ್ಲ, ನಮ್ಮ ಕಣ್ಣಲ್ಲಿ ರಕ್ತ ಬರುತ್ತಾ ಇದೆಯೆಂದು ಹೇಳಿ, ತೋಟಗಾರಿಕೆಗೆ ಸಂಬಂಧ ಪಟ್ಟ ವಿಚಾರಗಳನ್ನು ತೋರಿಸಿದೆ. ಏನು ನಮಗೆ ಅನ್ಯಾಯವಾಗಿದೆ. ನುಸಿರೋಗ, ನಾನು ಈ ನುಸಿರೋಗದ ಬಗ್ಗೆ ಹೋಗುವುದಿಲ್ಲ. ಮೊದಲು ಕೃಷಿ ಇಲಾಖೆಗೆ ಬರುತ್ತೇನೆ. ಮಾನ್ಯ ಜಯಚಂದ್ರರವರು ಕೃಷಿ ಸಚಿವರಾಗಿ ಒಳ್ಳೆಯ ಕಾರ್ಯಕ್ರಮಗಳನ್ನೇನೋ ಮಾಡಿದ್ದಾರೆ. ಆದರೆ, ಇಲಾಖೆಯಲ್ಲಿ ಕೆಲವು ಬದಲಾವಣೆಯನ್ನು ಮಾಡಿರುವುದರಿಂದ ರೈತರ ಸಮಸ್ಯೆಗಳನ್ನು ನಿವಾರಣೆ ಮಾಡಲಿಕ್ಕೆ ಸಚಿವರು ಮತ್ತು ಇಲಾಖೆಯವರು ತೆಗೆದುಕೊಂಡ ಕ್ರಮ ಸರಿಯಾಗಿಲ್ಲವೆಂಬ ಅಭಿಪ್ರಾಯವನ್ನು ತಮ್ಮ ಮುಖಾಂತರ ಕೃಷಿ ಸಚಿವರಿಗೆ ಹೇಳಬೇಕಾಗಿದೆ. ಏಕೆಂದರೆ, ಬೇರೆ ದೇಶಗಳವರಿಗೆ ಹೋಲಿಸಿಕೊಂಡರೆ, ನಮ್ಮ ರೈತರು ಇನ್ನೂ ಹೊಸ ನೀತಿಯನ್ನು ಅನುಸರಿಸಬೇಕೆಂಬ ರೀತಿ ಇಲ್ಲ. ಇದಕ್ಕೋಸ್ಕರ ಹಿಂದೆ ಒಂದು ವ್ಯವಸ್ಥೆ ಇತ್ತು. ಹೋಬಳಿ ಮಟ್ಟದಲ್ಲಿ ಒಬ್ಬ ಗ್ರಾಮಸಹಾಯಕ ಇದ್ದ, ಒಂದೊಂದು, ಎರಡೆರಡು ಪಂಚಾಯ್ತಿಗೆ, ಅಲ್ಲೇನು ಹೆಕ್ಟೇರ್ ಅಥವಾ ಎಕರೆವಾರು ಇದೆ ಅದಕ್ಕನುಗುಣವಾಗಿ ಗ್ರಾಮಸೇವಕರು ಇದ್ದರು. ಯಾವ್ಯಾವ ನಮೂನೆ ಭೂಮಿಯಲ್ಲಿ ಏನೇನು ಬೆಳೆಯನ್ನು ಬೆಳೆಯುತ್ತಾರೆ, ಮುಂಗಾರು ಮತ್ತು ಹಿಂಗಾರಿನಲ್ಲಿ ಯಾವ್ಯಾವ ಬೆಳೆಗಳನ್ನು ಬೆಳೆಯಬಹುದು, ಪರ್ಯಾಯವಾಗಿ ಏನು ಬೆಳೆಯನ್ನು ಬೆಳೆಯಬಹುದು ಎಂಬ ಬಗ್ಗೆ ರೈತರಿಗೆ ವಾರಕ್ಕೊಂದು ಸಲ ಆ ಗ್ರಾಮಕ್ಕೆ ಹೋಗಿ ಮಾಹಿತಿಯನ್ನು ಕೊಡುತ್ತಿದ್ದರು. ಹೋಬಳಿಯಲ್ಲಿ ಒಂದು ರೈತರ ಮಾಹಿತಿ ಕೇಂದ್ರವಿದೆ. ಒಂದು ಹೋಬಳಿ ಎಂದರೆ ಸುಮಾರು ನಲವತ್ತು ಸಾವಿರದಿಂದ ಐವತ್ತು ಸಾವಿರ ಹೆಕ್ಟೇರ್ ಭೂಮಿ, ಸುಮಾರು ಎಂಟು ಸಾವಿರ ರೈತ ಕುಟುಂಬದವರು

ವಾಸ ಮಾಡುತ್ತಿದ್ದಾರೆ. ಅದು ತರಿ, ಕೆಂಪು, ಮರಳು ಭೂಮಿ ಇರಬಹುದು. ಆ ಭೂಮಿಗೆ ತಕ್ಕ ಬೆಳೆಯನ್ನು ಬೆಳೆಯಲು ಮಾರ್ಗದರ್ಶನ ಬೇಕು. ಇವತ್ತು ರೈತರು ಹೋಬಳಿ ಕೇಂದ್ರಕ್ಕೆ ಹೋಗಿ ಮಾಹಿತಿಯನ್ನು ಪಡೆದು ಬೆಳೆಯನ್ನು ಬೆಳೆಯುವಂಥ ಸ್ಥಿತಿಯಲ್ಲಿಲ್ಲ. ರೈತ ವ್ಯವಸಾಯವನ್ನು ಮಾಡುವುದನ್ನು ಬಿಟ್ಟು ಬೇರೆ ಏನನ್ನಾದರೂ ಮಾಡಬೇಕು ಎಂಬ ಮಟ್ಟಿಗೆ ನಿರಾಶಾದಾಯಕನಾಗಿದ್ದಾನೆ. ಮುಂಗಾರು ಇಲ್ಲವೆ ಹಿಂಗಾರು ಬೆಳೆ ಇರಬಹುದು, ರೋಗದ ಬಾಧೆ, ಕೀಟದ ಬಾಧೆ ಇನ್ನೂ ಏನೇನೋ ಸಮಸ್ಯೆಗಳಿಂದ ಬೆಳೆಯನ್ನು ಬೆಳೆದರೂ ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ ಅವನನ್ನು ಸುಲಿಗೆ ಮಾಡುತ್ತಾರೆ. ಹೊಸದುರ್ಗ, ಚಿಕ್ಕನಾಯಕನಹಳ್ಳಿ, ತರೀಕೆರೆ, ಕಡೂರಿನ ಕೆಲವು ಭಾಗಗಳಲ್ಲಿ ಕಂಬಳಿ ಹುಳುವಿನ ಬಾಧೆ ಇದೆಯೆಂದು ಮಾನ್ಯ ಕೃಷಿ ಸಚಿವರಿಗೆ ತಿಳಿಸಿದ್ದೆ. 1988ರಲ್ಲಿ ಕೇವಲ 450 ಎಕರೆ ಕಂಬಳಿ ಹುಳುವಿನ ಬಾಧೆ ಮುಂಗಾರಿನ ಕಮರ್ಷಿಯಲ್ ಬೆಳೆಗಳಾದ ಸೂರ್ಯಕಾಂತಿ, ಎಳ್ಳು, ಹೆಸರು, ಉದ್ದು ಇವುಗಳಿಗೆ ಬರುತ್ತಿತ್ತು. ಆದರೆ ಈಗ ಈ ನಾಲ್ಕೈದು ತಾಲ್ಲೂಕಿನಲ್ಲಿ ನಮ್ಮ ರೈತರು ಯಾವುದೇ ವಾಣಿಜ್ಯ ಬೆಳೆಯನ್ನು ಇದರಿಂದಾಗಿ ಬೆಳೆಯದಂತಾಗಿದ್ದಾರೆ. ಹೀಗಾದರೆ ರೈತರ ಆರ್ಥಿಕ ಪರಿಸ್ಥಿತಿ ಹೇಗೆ ಸುಧಾರಿಸುತ್ತದೆ? ರೈತ ಸಾಲವನ್ನು ಹೇಗೆ ತೀರಿಸುತ್ತಾನೆ? ಹಿಂಗಾರಿನಲ್ಲಿ ರಾಗಿ, ಜೋಳ ಈ ರೀತಿ ಅವನ ಊಟಕ್ಕೆ ಬೇಕಾದಂಥ ಪದಾರ್ಥಗಳನ್ನು ಬೆಳೆಯುವುದು ನಮ್ಮ ರೈತರ ನೀತಿಯಾಗಿದೆ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಸಹ ಈ ಏರಿಯಾವನ್ನು ಎಂಡೋಮಿಟ್ ಏರಿಯಾ ಎಂದು ಘೋಷಣೆ ಮಾಡಿ ಎಂದು ಕೇಳಿದ್ದೆ. ಆ ರೀತಿ ಘೋಷಣೆ ಮಾಡುವುದರಿಂದ ಈ ಸಮಸ್ಯೆಯನ್ನು ನಿರ್ಮೂಲನೆ ಮಾಡಬಹುದು. ಸರ್ಕಾರ 20-30 ಲಕ್ಷ ರೂ. ಹಣವನ್ನು ಕೊಟ್ಟರೆ ಅದರಿಂದ ಈ ಸಮಸ್ಯೆಯನ್ನು ನಿರ್ಮೂಲನೆ ಮಾಡಲು ಸಾಧ್ಯವಿಲ್ಲ. 1988ರ ನಂತರ ಹನ್ನೆರಡು ವರ್ಷದಲ್ಲಿ ಆ ಕಂಬಳಿ ಹುಳುವಿನ ಬಾಧೆ 4500 ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆಯೆಂದರೆ ನಾವು ಹೇಗೆ ಜೀವನ ಮಾಡಬೇಕು? ಸರ್ಕಾರ ಇದರ ನಿವಾರಣೆಗೆ ಹಣವನ್ನು ಖರ್ಚು ಮಾಡುತ್ತಲಿದೆ. ಫೆಬ್ರವರಿ ತಿಂಗಳಿನಲ್ಲಿ ಚಿಟ್ಟೆಯಾಗುತ್ತದೆ, ಮಾರ್ಚ್ ತಿಂಗಳಿನಲ್ಲಿ ಎಲೆಗಳ ಮೇಲೆ ಮೊಟ್ಟೆಯನ್ನು ಇಡುತ್ತದೆ, ಮೇ ಮತ್ತು ಜೂನ್‌ನಲ್ಲಿ ಹುಳುವಾಗಿ ಮುಂಗಾರು ಪೈರನ್ನೆಲ್ಲಾ ತಿನ್ನುತ್ತದೆ. ಕಂಬಳಿ ಹುಳು ಆವರಿಸಿರುವ ಹೊಲದ ಹತ್ತಿರ ನಿಂತುಕೊಂಡರೆ ಅದು ಎಲೆಯನ್ನು ತಿನ್ನುವ ಶಬ್ದ ಕೇಳಿಸುತ್ತದೆ. ಮತ್ತೆ ಜೂನ್ ಜುಲೈ ಸಮಯಕ್ಕೆ ಕೋಶಾವಸ್ಥೆಗೆ ಬಂದುಬಿಡುತ್ತದೆ. ಭೂಮಿಯೊಳಗೆ ಸೇರಿಕೊಂಡುಬಿಡುತ್ತದೆ. ಇದರ ಜೊತೆಗೆ ಹಿಂಗಾರು ಬೆಳೆಗಳಾದ ಜೋಳ, ರಾಗಿ ಕಾಂಡ ಕೊರೆಯುವ ಹುಳುಗಳ ಭಾದೆ ಬರುತ್ತದೆ. ಯಾವುದೋ ಸಂದರ್ಭದಲ್ಲಿ ಹಣವನ್ನು ಖರ್ಚು ಮಾಡಿದರೆ ಉಪಯೋಗವಾಗುವುದಿಲ್ಲ, ಸಮಯಕ್ಕೆ ಸರಿಯಾಗಿ ಉಪಯೋಗ ಮಾಡಿದರೆ ಅನುಕೂಲವಾಗುತ್ತದೆ ಎಂದು ಬೇಕಾದಷ್ಟು ಸಲ ಇಲಾಖೆಯವರಿಗೆ ಹೇಳಿದ್ದೇನೆ. ಮಾನ್ಯ ಬೈರೇಗೌಡರು ಸಚಿವರಾಗಿದ್ದಾಗಲೂ

ಹಣವನ್ನು ಕೊಟ್ಟಿದ್ದರು, ಮಾನ್ಯ ಜಯಚಂದ್ರರವರೂ ಹಣವನ್ನು ಕೊಟ್ಟಿದ್ದಾರೆ. ಆದರೆ ಕೊಟ್ಟಿರುವ ಹಣದಲ್ಲಿ ಗುರಿ ಸಾಧನೆಯಾಗಿದೆಯೇ ಎಂಬ ಬಗ್ಗೆ ಪರಿಶೀಲನೆ ಮಾಡಬೇಕೆಂದು ಮಾನ್ಯ ಸಚಿವರಿಗೆ ತಿಳಿಯಬಯಸುತ್ತೇನೆ. ಆದರೆ ಆ ಕೆಲಸ ಇವತ್ತು ಆಗುತ್ತಿಲ್ಲ. ಆದ್ದರಿಂದ ಇವತ್ತು ಹಿಂಗಾರು ಬೆಳೆಗಳಿಗೇನು ಕೀಟಬಾಧೆ ಇದೆ ಅದನ್ನು ನಿವಾರಣೆ ಮಾಡಲು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕಳುಹಿಸಿಕೊಡಬೇಕು, ಅನಂತರ ಅದನ್ನು ಜಾರಿಗೆ ತರುವಲ್ಲಿ ಮಾನ್ಯ ಮುಖ್ಯಮಂತ್ರಿಯವರು ಪ್ರಯತ್ನ ಮಾಡಬೇಕೆಂಬ ವಿಚಾರವನ್ನು ಹೇಳುತ್ತೇನೆ. ಎರಡನೆಯದಾಗಿ, ರಾಜ್ಯದಲ್ಲಿ ಎಲ್ಲಾ ಕಡೆ ನುಸಿರೋಗವಿದೆ. ಆದರೆ ನಮ್ಮಲ್ಲಿ ಯಾವ ದುರಾದೃಷ್ಟವೋ ಏನೋ ಮುಂಗಾರಿನಲ್ಲಿ ಕೆಂಪುತಲೆ ಹುಳು, ಹಿಂಗಾರಿನಲ್ಲಿ ಕಪ್ಪುತಲೆ ಹುಳುವಿನ ಭಾದೆ ಇದೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ಚಿಕ್ಕಮಗಳೂರಿಗೆ ಬಂದಿದ್ದಾಗ ಒಂದು ಕಾಯಿಯನ್ನು ತೋರಿಸಿ ಇದು ನುಸಿರೋಗದಿಂದ ಆಗುರುವಂಥದ್ದು, ಒಂದು ತೆಂಗಿನ ಗರಿಯನ್ನು ತೋರಿಸಿ ಇದು ಕೆಂಪುತಲೆ ಹುಳುವಿನಿಂದ ಆಗಿರುವ ತೊಂದರೆಯೆಂದು ತೋರಿಸಿದೆ. ಈ ರೋಗವನ್ನು ತಡೆಗಟ್ಟಲು ಮಾರ್ಚ್ ತಿಂಗಳಿನಲ್ಲಿ ಮಾನ್ಯ ಅಲ್ಲಂವೀರಭದ್ರಪ್ಪನವರು 62 ಲಕ್ಷ ರೂಪಾಯಿಗಳನ್ನು ಕೊಟ್ಟರು. ಆದರೆ ಇವತ್ತಿನವರೆಗೆ ಜಿಲ್ಲಾಪಂಚಾಯಿತಿಯವರು, ತೋಟಗಾರಿಕಾ ಇಲಾಖೆಯವರು ಆ ಹಣವನ್ನು ಖರ್ಚು ಮಾಡಿಲ್ಲ. ಇದನ್ನೇಕೆ ಸಚಿವರು ವಿಚಾರ ಮಾಡಲಿಲ್ಲ? ತಾವು ಕಡೂರಿನ ಸುತ್ತಮುತ್ತ ಬಂದು ಪರಿಸ್ಥಿತಿಯನ್ನು ನೋಡಬೇಕು. ಇವತ್ತು ನಮ್ಮ ಕಣ್ಣಿನಲ್ಲಿ ನೀರು ಬರುತ್ತಿಲ್ಲ, ರಕ್ತ ಬರುತ್ತಿದೆ. ಇಪ್ಪತ್ತು ವರ್ಷಗಳಿಂದ ನಾವು ಬರಗಾಲವನ್ನು ಅನುಭವಿಸುತ್ತಿದ್ದೇವೆ. ನಮ್ಮ ಅದೃಷ್ಟ ನಮ್ಮ ಭಾಗದಲ್ಲಿ ಕಾಫಿ ತೋಟಗಳಲ್ಲಿ ಕೂಲಿ ಸಿಗುತ್ತಿದೆ. ನಮ್ಮಲ್ಲಿ ನಲವತ್ತು ಭಾಗ ಜನರು ಕಾಫಿ ತೋಟಗಳಿಗೆ ಕೂಲಿಗೆ ಹೋಗುತ್ತಾರೆ. ಆದರೆ ತಮ್ಮ ಡಬ್ಲ್ಯು.ಟಿಒ. ಒಪ್ಪಂದದಿಂದಾಗಿ ಕಾಫಿಯ ಬೆಲೆ ಇಳಿದಿರುವುದರಿಂದ ಕಾಫಿ ತೋಟಗಳಲ್ಲಿ ಕೂಲಿಗೆ ತೆಗೆದುಕೊಳ್ಳುತ್ತಿಲ್ಲ. ಹೊಟ್ಟೆಯ ಹಸಿವು ಉಂಟಾದರೆ ಕಳ್ಳತನ ಮಾಡಬೇಕು, ಇಲ್ಲದಿದ್ದರೆ ಹೊಟ್ಟೆ ತುಂಬಲು ಏನಾದರೂ ಒಂದು ಕೆಲಸವನ್ನು ಮಾಡಲೇ ಬೇಕಾಗುತ್ತದೆಂದು ಮಾನ್ಯ ಕೃಷಿ ಸಚಿವರಿಗೆ ಹೇಳಿದೆ. ನಮ್ಮ ರೈತರ ಪರಿಸ್ಥಿತಿಯನ್ನು ಸುಧಾರಿಸಲು ಹಣವನ್ನು ಖರ್ಚು ಮಾಡುವುದು ಮುಖ್ಯವಲ್ಲ. ಖರ್ಚು ಮಾಡಿದಂಥ ಹಣ ಆ ರೈತನಿಗೆ ಮುಟ್ಟಿತ್ತೇ, ರೈತನಿಗೆ ಅದರಿಂದ ಅನುಕೂಲವೇನಾಗಿದೆ ಎಂಬುದನ್ನು ನೋಡಬೇಕಾಗುತ್ತದೆ. ನಮ್ಮಲ್ಲಿ ತೆಂಗಿನ ಮರದ ಬುಡದಲ್ಲಿ ಕಾಂಡ ಸೋರುವಿಕೆಯ ರೋಗ ಇದೆ. ಅದು ಬಂದುಬಿಟ್ಟರಂತೂ ತೆಂಗಿನ ಮರವು ಉಳಿಯುವುದಿಲ್ಲ. ನುಸಿರೋಗ ಬಂದರೆ ಮರವು ನೋಡಲು ಚೆನ್ನಾಗಿರುತ್ತದೆ, ಆದರೆ ಮರದಲ್ಲಿ ತೆಂಗಿನ ಕಾಯಿ ಇರುವುದಿಲ್ಲ, ಕೆಂಪುತಲೆ ಹುಳುವಿನ ರೋಗ ಬಂದರೆ ಮರವನ್ನು ನೋಡಲು ಆಗುವುದಿಲ್ಲ, ಆದರೂ ಮರ ಬದುಕುತ್ತದೆ, ಎರಡು ಮೂರು ವರ್ಷ ಏನಾದರೂ ಔಷದಿಯನ್ನು ಇನ್‌ಜೆಕ್ಟ್ ಮಾಡಿದರೆ ಬದುಕುತ್ತದೆ. ಆದರೆ ಮರದ ಬುಡದಲ್ಲಿ

ಸೋರುವಿಕೆ, ಸ್ಟೆಮ್ ಬ್ಲೀಡಿಂಗ್ ರೋಗ ಬಂದರೆ ಆ ಮರ ಬದುಕಲು ಸಾಧ್ಯವಿಲ್ಲ. ಇದರ ಬಗ್ಗೆ ತಾವು ಪರಿಶೀಲನೆ ಮಾಡಬೇಕಾಗುತ್ತದೆ. ಇವತ್ತು ಕರಾವಳಿಯ ಸುಮಾರು ನಲವತ್ತೈದು ಸಾವಿರ ತೆಂಗಿನ ಮರಗಳು ಸ್ಟೆಮ್ ಬ್ಲೀಡಿಂಗ್‌ನಿಂದ ಹಾನಿಗೆ ಒಳಗಾಗಿದೆಯೆಂಬ ವಿಚಾರವನ್ನು ಅಧಿಕಾರಿಗಳು ಸರ್ಕಾರದ ಗಮನಕ್ಕೆ ತರಲಿಲ್ಲ? ತೋಟಗಾರಿಕಾ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಜಂಟಿ ನಿರ್ದೇಶಕ ಮಟ್ಟದ ಹುದ್ದೆಯನ್ನು ಮಾಡಿರುವಂಥ ಅಧಿಕಾರಿಗಳು ಸರ್ಕಾರದ ಗಮನಕ್ಕೆ ಇದನ್ನು ತಾರದಿದ್ದರೆ ಹೇಗೆ, ಇದರ ಬಗ್ಗೆ ನಾನು ಕಳೆದ ಸಲ ಮಾತನಾಡಿದ್ದೆ. ಆಗ ಮಾನ್ಯ ಜಯಚಂದ್ರರವರು ಇದರ ಬಗ್ಗೆ ವಿಚಾರ ಮಾಡುತ್ತೇನೆಂದು ಹೇಳಿದ್ದರು. ನಾವು ಚರ್ಚೆ ಮಾಡಿದ್ದು ಇಲ್ಲೇ ಉಳಿಯುವುದಾದರೆ ನಾವೇಕೆ ಇಲ್ಲಿ ಚರ್ಚೆ ಮಾಡಬೇಕು? ನಾನು ಒಂದು ವಿಚಾರವನ್ನು ಹೇಳುತ್ತೇನೆ.

1.40 ಪಿಎಂ

ನಾವೇನಾದರೂ ತೆಂಗಿನ ಕಾಯಿಯನ್ನು ತೆಗೆದುಕೊಂಡು ಹೋದರೆ ಒಂದು ನಿಂಬೆಹಣ್ಣಿನ ಬೆಲೆ ಇಲ್ಲ. ನಮ್ಮ ತೆಂಗಿನ ಕಾಯಿ ಎಷ್ಟು ಚೆನ್ನಾಗಿ ಇರುತ್ತಿತ್ತು. ಇವತ್ತು ತೆಂಗಿನ ಮರಕ್ಕೆ ನುಸಿರೋಗ ಬಂದಿರುವುದರಿಂದ ಮನುಷ್ಯನಿಗೆ ಕುಷ್ಟರೋಗ ಬಂದರೆ ಹೇಗೆ ಇರುತ್ತದೆಯೊ ಹಾಗೆ ಇರುತ್ತದೆ. ಕಾಯಿ ಸುಲಿಯುವವರನ್ನು ಕೇಳುತ್ತೇನೆ, ಎಷ್ಟು ಕಾಯಿ ಸುಲಿಯುವದಕ್ಕೆ ಸುಲಭವಾಗುತ್ತಾ ಎಂದು. ಇಲ್ಲ ಸ್ವಾಮಿ ಕಾಯಿ ಗಂಟು ; ಎಲ್ಲಿ ನುಸಿ ಬಂದಿದೆ ಅಲ್ಲಿ ಸುಲಿಯುವುದಕ್ಕೆ ಆಗುವುದಿಲ್ಲ. ಗಂಟಾಗುತ್ತದೆಂದು ಹೇಳುತ್ತಾರೆ. ಇವತ್ತು ಒಳ್ಳೆಯ ಕಾಯಿಯನ್ನು ಸುಲಿಯುವುದಕ್ಕೆ ಒಂದು ಸಾವಿರ ರೂ. ಇದ್ದರೆ ನುಸಿ ರೋಗ ಬಂದಂತಹ ಕಾಯಿಯನ್ನು ಸುಲಿಯುವುದಕ್ಕೆ 1250 ರೂಪಾಯಿ. 250 ರೂಪಾಯಿ ಜಾಸ್ತಿ ತೆಗೆದುಕೊಳ್ಳುತ್ತಾರೆ. ಮಾರುಕಟ್ಟೆಗೆ ಹೋದರೆ ಇಷ್ಟು ಕಷ್ಟಪಟ್ಟು, ಕಳ್ಳರನ್ನು ಕಾದು, ಮಂಗಗಳನ್ನು ಕಾದು, ಮನೆಯವರೆಲ್ಲಾ ತೋಟ ಕಾದು, ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ ಸಾವಿರಕ್ಕೆ ನೂರು ರೂ. ಲಾಭ, ಒಂದು ಕೆ.ಜಿ. ಎಳ್ಳಿಗೆ ಮೂರು ಕೆ.ಜಿ. ಟಕ್ಕ. ಆದರಲ್ಲಿ ಸಣ್ಣ ಕಾಯಿ ದೊಡ್ಡಕಾಯಿ, ಮೀಡಿಯಂ ಎಂದು ಮೂರು ಭಾಗ ಮಾಡುತ್ತಾನೆ. ನಾವು ಏನು ಟೆಂಡರ್ ರೇಟ್ ಹಾಕಿರುತ್ತೇವೆ ಅದರಲ್ಲಿ 30 ಪರ್ಸೆಂಟ್ 40 ಪರ್ಸೆಂಟ್ ಮಾತ್ರ. ಇದು ಸರ್ಕಾರದ ಗಮನಕ್ಕೆ ಏನಾದರೂ ಬಂದಿದೆಯೇ? ಇದು ಹಗಲು ದರೋಡೆ. ನಾವು ವೀರಪ್ಪನ್‌ಗೆ ಏಕೆ ಹೇಳಬೇಕು ಹಗಲು ದರೋಡೆ ಎಂದು ಹೇಳಿ? ಅವನು ಕಾಡಿನಲ್ಲಿ ದರೋಡೆ ಮಾಡುತ್ತಾನೆ. ಅಧಿಕಾರಿಗಳು, ವರ್ತಕರು ಸೇರಿಕೊಂಡು ಊರಿನಲ್ಲಿ ರೈತರನ್ನು ದರೋಡೆ ಮಾಡುತ್ತಾರೆ. ರೈತರನ್ನು ಸುಲಿಗೆ ಮಾಡುತ್ತಾರೆ. ಇವತ್ತು ನಾವು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಅದು ವಿಶೇಷ ಘಟಕ ಯೋಜನೆ ಇರಬಹುದು, ಸಾಮಾನ್ಯ ಯೋಜನೆ ಇರಬಹುದು, ರೈತರಿಗೆ ಕೊಡುವಂತಹ ಜಾನುವಾರುಗಳು ಇರಬಹುದು, ಇವತ್ತು ಸಹಕಾರ ಸಂಘಗಳ ಮೂಲಕ ನಾವು ಸಾಲ ಕೊಡುತ್ತಿದ್ದೇವೆ. ಕೆಲವೊಂದು ಇಲಾಖೆಗಳ ಮೂಲಕ ಸಾಲ

ಕೊಡುತ್ತಿದ್ದೇವೆ. ರೈತರನ್ನು ಸಾಲಗಾರರನ್ನಾಗಿ ಮಾಡುತ್ತಿದ್ದೇವೆ. ನಾನು ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. 1987ನೇ ಇಸವಿಯಲ್ಲಿ ನೂರು ಬಾವಿ ಯೋಜನೆ ಎಂದು ಇತ್ತು. ಅದರಲ್ಲಿ ಐದು ಜನಕ್ಕೆ ಸಾಲ ಕೊಟ್ಟರು. ಅದರಲ್ಲಿ ವಿಚಾರ ಏನೆಂದರೆ ಟರ್ನ ಕೀ ಬೇಸಿಸ್; ನೋ ವಾಟರ್ ನೋ ಮನಿ. ಅದೊಂದು ತರಹ ಗುತ್ತಿಗೆದಾರರಿಗೆ ಲಾಭ. ಒಂದು ಬಾವಿಗೆ 30 ಸಾವಿರ ರೂ. ಸಾಲ ಕೊಟ್ಟಿದ್ದರು. ಈಗ 12 ವರ್ಷಕ್ಕೆ ಒಂದು ಲಕ್ಷ 35 ಸಾವಿರ ರೂ. ಆಗಿದೆ. ಅವರಿಗೆ ಏನು ಮಾಡಿದರು ಅಂದರೆ 3 ಸಾವಿರ ರೂಪಾಯಿ ಟೀನಲ್ ಬೋರ್ಡ್, 14 ಸಾವಿರ ರೂಪಾಯಿ ಬೋರ್‌ವೆಲ್ ಕೊರೆದಿದ್ದು, ಎಲೆಕ್ಟ್ರಿಫಿಕೇಷನ್ ಅವೆಲ್ಲಾ ಅವನೇ ಮಾಡಿಸಿಕೊಂಡಿದ್ದರೆ ಕೇವಲ 18 ಸಾವಿರ ರೂಪಾಯಿಗಳಲ್ಲಿ ಆಗುತ್ತಿತ್ತು. ಇವತ್ತು ಅವರು 30 ಸಾವಿರ ರೂ. ಮಾಡಿದ್ದಾರೆ. ಆ ಬಾವಿಯಲ್ಲಿ ನೀರು ಇಲ್ಲ ಅವನನ್ನು ನಂಬಿಸಿದರು. 3 ಇಂಚು ನೀರು ಬಂದಿದೆ ಇದರಲ್ಲಿ ನೀನು ಬೆಳೆ ಬೆಳೆದುಕೊಳ್ಳಬಹುದು ಅಂತ. ಅವನು ಯಾವುದೇ ಒಂದು ಪೈರು ಬೆಳೆಯುವುದಕ್ಕೆ ಆಗಲಿಲ್ಲ. ಆ ಐದು ಜನ ರೈತರು ಸಾಲಗಾರರಾಗಿದ್ದಾರೆ. ತಾವು ಬೇಕಾದರೆ ತನಿಖೆ ಮಾಡಿಸಿ, ತಾವು ಆ ರೈತರು ಸತ್ತ ಮೇಲೆ ಲಕ್ಷ ರೂ. ಕೊಡಬೇಡಿ. ಅವರು ಬದುಕಿದ್ದಾಗ ಏನಾದರೂ ಮಾಡಿ. ಈ ಬಗ್ಗೆ ತನಿಖೆ ಮಾಡಿಸಿ. ರೆಕಾರ್ಡ್ ಇದೆ. ನೂರು ಬಾವಿಯೋಜನೆಯಲ್ಲಿ ಎಷ್ಟು ಜನರಿಗೆ ಕೊಟ್ಟರು? ಆಗ್ರೋ ಇಂಡಸ್ಟ್ರೀಯವರು ವಿಚಾರಿಸಿ. ಅವರು ಏನು ಮಾಡಿದರು ಎಷ್ಟು ಇಂಚು ನೀರು ಬಂತು? ಜಿಯಾಲಜಿಕಲ್ ಸರ್ವೆ ಇಲಾಖೆಯವರು ಏನು ಸರ್ಟಿಫಿಕೇಟ್ ಕೊಟ್ಟರು ಎಂಬುದರ ಬಗ್ಗೆ ತನಿಖೆ ಮಾಡಿ. ಇದರಿಂದ ನಮ್ಮ ಕಾರ್ಯಕ್ರಮಗಳು ವಿಫಲವಾಗುತ್ತಿವೆ. ನಾವು ಸಹಕಾರ ಸಂಘಗಳ ಮೂಲಕ ಯತೇಚ್ಛವಾಗಿ ಜಿಲ್ಲಾ ಪಂಚಾಯಿತಿ ಮೂಲಕ ಸಾಲವನ್ನು ಕೊಡುತ್ತೇವೆ. ಮನುಷ್ಯನಿಗೆ ಆಸೆ ಇದೆ. ಯಾರೂ ಸನ್ಯಾಸಿಗಳು ಅಲ್ಲ. ಸಾಲ ತೆಗೆದುಕೊಂಡವರು ಸಾಲ ತೀರಿಸುವುದಕ್ಕೆ ಆಗುತ್ತಿಲ್ಲ. ಇದರಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದು ಅವರು ಸತ್ತಾಗ ಒಂದು ಲಕ್ಷ ರೂ. ಪರಿಹಾರ ಕೊಡಬೇಡಿ. ಇದ್ದಾಗ ಏನಾದರೂ ಮಾಡಿ. ಇಲ್ಲಿ ರೈತ ತಪ್ಪು ಮಾಡಿದ್ದಾನೆಯೇ; ಇಲಾಖೆಯವರು ತಪ್ಪು ಮಾಡಿದ್ದಾರೆಯೇ ಎನ್ನುವುದನ್ನು ವಿಚಾರ ಮಾಡಿ. ನಾನು ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಹೇಳಿದೆ. ಏನು ಮಾಡುವುದು ಕೃಷ್ಣಮೂರ್ತಿಯವರೇ, ಸಾಲ ಮನ್ನಾ ಮಾಡುವುದಕ್ಕೆ ಬರುವುದಿಲ್ಲ ಅದು ರಿಜರ್ವ್ ಬ್ಯಾಂಕ್‌ಗೆ ಸಂಬಂಧಪಟ್ಟ ವಿಚಾರ ಎಂದು ಹೇಳಿದರು. ಇನ್ನು ಆರೋಗ್ಯ ಇಲಾಖೆ ಬಗ್ಗೆ ಹೇಳುವುದಾದರೆ ನಾವು ವಿಶ್ವ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡಿದ್ದೇವೆ. ಹುಡ್ಕೋದಿಂದ ಸಾಲ ತೆಗೆದುಕೊಂಡಿದ್ದೇವೆ. ಈ ಸಂಸ್ಥೆಗಳಿಂದ ನಾವು ಸಾಲ ತೆಗೆದುಕೊಂಡು ಆಸ್ಪತ್ರೆಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ಈ ಕಾರ್ಯಕ್ರಮ 1999ನೇ ಇಸವಿಗೆ ಮುಗಿಯಬೇಕಾಗಿತ್ತು. ಆ ಯೋಜನೆಗಳು ಇದುವರೆಗೂ ಮುಗಿದಿಲ್ಲ. ವಿಶ್ವಬ್ಯಾಂಕ್‌ನವರು ಕೊಟ್ಟ ಹಣಕ್ಕೆ ಬಡ್ಡಿ ತೆಗೆದುಕೊಳ್ಳುತ್ತಾರೆ. ಸುಮ್ಮನೆ ಕೊಟ್ಟಿಲ್ಲ. 2002ನೇ ಇಸವಿ ಬಂದರೂ ಕೂಡ ಕಾಮಗಾರಿಗಳು ಪೂರ್ಣವಾಗದೇ ಇದ್ದರೆ ಈ ಬಗ್ಗೆ ನಾವು ಏನು

ಹೇಳಬೇಕು? ತಾವು ಆಸ್ಪತ್ರೆಗಳನ್ನು ಕೊಟ್ಟಿದ್ದೀರಿ ಅಲ್ಲಿ ಡಾಕ್ಟರ್ ಇಲ್ಲ, ನರ್ಸ್‌ಗಳು ಇಲ್ಲ, ಔಷಧಿ ಇಲ್ಲ. ಅದೇ ರೀತಿ ನಾವು ಪಶುವೈದ್ಯ ಇಲಾಖೆಗೆ ಬಂದರೆ ಇಡೀ ಜಿಲ್ಲೆಗೆ ಜಿಲ್ಲಾ ಪಂಚಾಯತಿಯವರು ಔಷಧಿಗೆ ಐದು ಲಕ್ಷ ಕೊಟ್ಟಿದ್ದಾರೆ. ಇವತ್ತು ರೈತ ಬೆಳೆದ ಬೆಳೆಗೆ ಕಡಿಮೆ ದರ. ನಾವು ಕೊಂಡುಕೊಳ್ಳುವಂತಹ ವಸ್ತುಗಳ ಬೆಲೆ ಜಾಸ್ತಿ. ಇದರ ಜೊತೆಗೆ ಜಾನುವಾರುಗಳಿಗೆ ಏನಾದರೂ ರೋಗ ಬಂದರೆ ಆ ಇಲಾಖೆಯಲ್ಲಿ ಔಷಧಿ ಇಲ್ಲ. ಇದು ಏಕೆ ಬೇಕು? ಜಿಲ್ಲಾ ಪಂಚಾಯತಿ ಸರ್ಕಾರ್‌ನಲ್ಲಿ ಇಷ್ಟು ಹಣ ಆ ಇಲಾಖೆಗೆ ಕೊಡಬೇಕು. ರಾಜ್ಯ ಸರ್ಕಾರ್‌ನಿಂದ ಇಷ್ಟು ಹಣ ಕೊಡಬೇಕು. ಇವತ್ತು ಒಂದು ಜೊತೆ ಎತ್ತಿನ ಬೆಲೆ 25 ಸಾವಿರ ರೂಪಾಯಿ. ಆ ಎತ್ತುಗಳಿಗೆ ಏನಾದರೂ ರೋಗ ಬಂದು ಕಳೆದುಕೊಂಡರೆ ಅವನು ನಿಜವಾಗಿಯೂ ಸಾಲಗಾರನಾಗುತ್ತಾನೆ. ನಾವು ಎಷ್ಟು ಸಾಲ ಕೊಟ್ಟು ಏನು ಪ್ರಯೋಜನ? ಅಧ್ಯಕ್ಷರೇ, ಇನ್ನು ಶಿಕ್ಷಣ ಇಲಾಖೆ. ಈಗಾಗಲೇ ಲೋಕಸಭೆ, ವಿಧಾನಸಭೆ, ತಾಲ್ಲೂಕು ಜಿಲ್ಲಾ ಪಂಚಾಯಿತಿಗಳಿಗೇ ಊರಿನಲ್ಲಿ ಮೂರು ಪಾರ್ಟಿ, ಶಿಕ್ಷಣ ಇಲಾಖೆಯಿಂದ ನಾಲ್ಕೈದು ಪಾರ್ಟಿ. ಶಿಕ್ಷಣ ಸಚಿವರಿಗೆ ಹೇಳುತ್ತೇನೆ ಹಿಂದಿನ ವ್ಯವಸ್ಥೆ ಏನಿತ್ತೋ ಅದನ್ನು ಜಾರಿಗೆ ತರಲಿಕ್ಕೆ ಅವರು ಪ್ರಯತ್ನ ಮಾಡಬೇಕು. ಇವತ್ತು ನಾನು ಅವರನ್ನು ಅಭಿನಂದಿಸಬೇಕಾಗುತ್ತದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಹಣವನ್ನು ದೋಚುತ್ತಿದ್ದರು. ಅದನ್ನು ಪತ್ತೆಹಚ್ಚಿ ಕನಿಷ್ಟ ಒಂದು ವರ್ಷಕ್ಕೆ 10 ರಿಂದ 12 ಕೋಟಿ ರೂ. ಹಣ ಉಳಿಸಿದರು ಎಂದು ನನಗನ್ನಿಸುತ್ತದೆ. ಆದರೆ ಒಂದೊಂದು ಸಲ ಶಿಕ್ಷಣ ಸಚಿವರ ಹೇಳಿಕೆಗಳೇ ಗೊಂದಲ. ಒಂದು ಸಲ ಜವಳಿ ಇಲಾಖೆಯಿಂದ ಬಟ್ಟೆ ಕೊಳ್ಳುವುದಿಲ್ಲ ಎನ್ನುತ್ತಾರೆ. ಜವಳಿ ಇಲಾಖೆಯವರು ಹೇಳುತ್ತಾರೆ ನಮ್ಮಿಂದಲೇ ಬಟ್ಟೆ ಕೊಳ್ಳಬೇಕೆಂದು. ಇದು ಹಾಸ್ಯಾಸ್ಪದ. ಏಕೆ ಹೀಗೆ? ಒಂದು ಸಚಿವಸಂಪುಟವಿದ್ದು, ಮುಖ್ಯಮಂತ್ರಿಗಳಿದ್ದು ಇಂತಹ ಹೇಳಿಕೆ ಕೊಡುವುದರಿಂದ ಏನು ಆಗುತ್ತದೆ ಅಂದರೆ, ಇದರಿಂದ ನಮಗೆ ವಿರೋಧಪಕ್ಷದವರಿಗೆ ಒಳ್ಳೆಯದೇ, ಆಡಳಿತ ಪಕ್ಷದವರ ಸ್ಥಿತಿಗತಿಗಳನ್ನು ತಾವು ವಿಚಾರ ಮಾಡಬೇಕಾಗುತ್ತದೆ.

ಇನ್ನು ಉನ್ನತ ಶಿಕ್ಷಣ. ಎಲ್ಲಿ ವಿದ್ಯಾರ್ಥಿಗಳಿಲ್ಲವೋ ಅಲ್ಲಿ ಮುಚ್ಚುತ್ತೇವೆ ಅಂದರು. ಬಹಳ ಸಂತೋಷ. ಆದರೆ ಉನ್ನತ ಶಿಕ್ಷಣ ಕಾಲೇಜುಗಳಲ್ಲಿ ಎಷ್ಟು ಲೆಕ್ಚರರ್‌ಗಳನ್ನು ತುಂಬಿದ್ದೀರಿ? ಉದಹರಣೆಗೆ ಕಡೂರಿನಲ್ಲಿ ಪ್ರಥಮದರ್ಜೆ ಕಾಲೇಜಿದೆ, ಬಿಎಸ್‌ಸಿ ಇದೆ, ಇವತ್ತು ನಮ್ಮ ಮಕ್ಕಳು 40 ಕಿಮೀ ದೂರ ಹೋಗಿ ಪ್ರಾಕ್ಟಿಕಲ್ ಮಾಡಿಕೊಂಡು ಬರಬೇಕು. 45 ಲಕ್ಷ ರೂ. ವೆಚ್ಚದಲ್ಲಿ ಕಟ್ಟಡ ಕಟ್ಟಿದ್ದೇವೆ. ಕುಳಿತುಕೊಳ್ಳಲು ಬೆಂಚಿಲ್ಲ, ಉನ್ನತ ಶಿಕ್ಷಣ ಇಲಾಖೆ ಕಮೀಷನರು ಹೇಳುತ್ತಾರೆ ಏನು ಮಾಡುವುದು ಕೃಷ್ಣಮೂರ್ತಿಯವರೇ, ಈ ದೇಶದ ದುಡ್ಡು ಈ ರಾಜ್ಯದ ದುಡ್ಡು ಯಾವುದಕ್ಕೋ ಖರ್ಚಾಗುತ್ತದೆ, ಶಿಕ್ಷಣ ಇಲಾಖೆಗಿಲ್ಲ, ನೀವೇ ಏನಾದರೂ ಮಾಡಿ ಬೆಂಚುಗಳನ್ನು ಮಾಡಿಸಿಕೊಳ್ಳಿ ಎಂದು.

ಕೊನೆಯದು, ನಮ್ಮ ಚಿಕ್ಕಮಗಳೂರಿನ ಚಿಕ್ಕಮಗಳು ಮೋಟಮ್ಮ, ಯಾವತ್ತೂ ನಾವು ನೋಡಿ ಸಂತೋಷಪಡುತ್ತೇವೆ. ಯಾಕೆಂದರೆ ಒಳ್ಳೆ ಕಾರ್ಯಕ್ರಮ ಮಾಡಿಸುತ್ತಿದ್ದಾರೆ. ಯಾರೇ ಇರಲಿ, ಅವರು ಕಾಂಗ್ರೆಸ್ ಪಕ್ಷದಲ್ಲಿದ್ದಾರೆ ಎಂದು ಅವರನ್ನು ವಿರೋಧಿಸಬೇಕೆಂಬ ಅಭಿಪ್ರಾಯವಲ್ಲ. ಅವರ ಕಾರ್ಯಕ್ರಮಗಳನ್ನು ನೋಡಿದರೆ ನಾವು ಮೆಚ್ಚಿಕೊಳ್ಳಬೇಕು. ಮೊನ್ನೆ ಕೆಡಿಪಿ ಸಭೆ ನಡೆದಾಗ ಶಿಕ್ಷಣ ಇಲಾಖೆಯ ಅನುದಾನವನ್ನು ಪೂರ್ಣವಾಗಿ ಅವರು ಜಿಲ್ಲಾ ಪಂಚಾಯ್ತಿ ಮೂಲಕ ಕೊಡಲಿಕ್ಕೆ ಪ್ರಯತ್ನ ಮಾಡಿದರು. ನನಗನ್ನಿಸುತ್ತದೆ: ನಮ್ಮ ಮಗಳು, ಸ್ತ್ರೀ ಶಕ್ತಿ, ಅಂಗವಿಕಲರ ಕಲ್ಯಾಣ ಇವೆಲ್ಲಾ ನೋಡಿದರೆ ಸ್ವಲ್ಪ ಹೆಚ್ಚಿನ ಹಣವನ್ನು ಕೊಡಿ. ಅಂಗವಿಕಲರಿಗೆ ನಾವೇನಾದರೂ ಸಹಾಯ ಮಾಡಿದಂತಾಗುವುದು. ಅಂಗವಿಕಲರ ಅಭ್ಯುದಯ ಸಾಧಿಸಲು, ನನಗೆ ಯಾರೂ ಏನೂ ಹೇಳಿಕೊಟ್ಟಿಲ್ಲ. ಮೋಟಮ್ಮನವರು ನಮಗೆ ಸಿಗುವುದೇ ಕಮ್ಮಿ ಅವರನ್ನು ನೀವು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯೆ ಮಾಡಿದ ಮೇಲೆ ನಮ್ಮ ತಾಲ್ಲೂಕಿನ ಯಾವುದೇ ಸಮಾರಂಭಕ್ಕೆ ಕರೆದರೂ ಅವರು ಬರುತ್ತಾ ಇಲ್ಲ. ಅದೊಂದು ದೊಡ್ಡ ತಪ್ಪಾಗಿಬಿಟ್ಟಿದೆ ನಮಗೆ. ಬರೀ ಸಚಿವರಾಗಿದ್ದರೆ ಬರುತ್ತಿದ್ದರೇನೋ. ಆದ್ದರಿಂದ ಒಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ ಇವತ್ತು ಮಹಿಳೆ ಪರಿಶಿಷ್ಟ ವರ್ಗದಲ್ಲಿ ಹುಟ್ಟಿರುವುದರಿಂದ ಆಕೆಗೆ ನೋವು ಆ ಒಂದು ಸಂಕಟ ಎಲ್ಲಾ ಗೊತ್ತಾಗುತ್ತದೆ. ಯಾಕೆಂದರೆ ಮೋಟಮ್ಮ ಬೇರೆ ಯಾವುದಾದರೂ ಉತ್ತಮವಾದ ಜಾತಿಯಲ್ಲಿ ಹುಟ್ಟಿದ್ದರೆ ಆ ಅರಿವು ಇರುತ್ತಿರಲಿಲ್ಲ. ಆದರೆ ಆ ವರ್ಗದಲ್ಲಿ ಹುಟ್ಟಿರುವುದರಿಂದ ಮಹಿಳೆಯರ ಬಗ್ಗೆ ಚಿಂತನೆಯಿದೆ, ಅಂಗವಿಕಲರ ಬಗ್ಗೆ ಚಿಂತನೆಯಿದೆ, ಮಕ್ಕಳ ಬಗ್ಗೆ ಚಿಂತನೆಯಿದೆ, ನಾನೇನೂ ಅವರನ್ನು ಹೊಗಳುತ್ತಿಲ್ಲ. ಆದ್ದರಿಂದ ಅಧ್ಯಕ್ಷರೇ, ಮಹಿಳಾ ಇಲಾಖೆಗೆ ಹೆಚ್ಚಿನ ಅನುದಾನವನ್ನು ಕೊಡುವ ಮೂಲಕ ಮತ್ತು ಅಂಗವಿಕಲರಿಗಾಗಿ ಒಂದು ಮಂಡಲಿ ಮಾಡುವುದರಿಂದ ಅವರ ಕಲ್ಯಾಣವಾಗಬಹುದು, ಅವರೂ ಕೂಡ ಮನುಷ್ಯರಾಗಿ ನಮ್ಮಲ್ಲಿ ಹುಟ್ಟಿದ್ದಾರೆ ಅವರಿಗೂ ಸಮಾಜದಲ್ಲಿ ಬದುಕಲು ಅವಕಾಶ ಕಲ್ಪಿಸಿಕೊಡಬೇಕೆಂಬ ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಧನ್ಯವಾದಗಳು. ನಿಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಈಗ ಸದನವನ್ನು 2.45ರ ವರೆಗೆ ಮುಂದೂಡುತ್ತಿದ್ದೇನೆ.

(ಸದನವು 1.55ಕ್ಕೆ ಮುಂದೂಡಲ್ಪಟ್ಟು ಮತ್ತೆ 2.45ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು 3.10 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ ಹೆಚ್. ತಹಸೀಲ್ದಾರ್) ರವರು ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)

6. ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ಬರ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದಿಂದ ತಜ್ಞರ ತಂಡ ರಾಜ್ಯಕ್ಕೆ ಬರುತ್ತಿರುವ ಬಗ್ಗೆ

+ಶ್ರೀ ಡಿ.ವಿ. ಸದಾನಂದಗೌಡ (ಸೂಳ್ಯ) :— ಮಾನ್ಯ ಅಧ್ಯಕ್ಷರೇ, ಕಳೆದ ಒಂದು ವಾರದಿಂದ ನಾವು ಇಲ್ಲಿ ಬರಗಾಲದ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ. ಅದರ ಸಾಧಕಬಾಧಕಗಳನ್ನು ನೋಡಿ ಆ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ, ಮತ್ತು ರಾಜ್ಯದ ದಾರುಣ ಪರಿಸ್ಥಿತಿಯ ಬಗ್ಗೆ, ಈ ಸದನದ ವಿರೋಧಪಕ್ಷದ ನಾಯಕರಾದ ಜಗದೀಶ ಶೆಟ್ಟರು ಮತ್ತು ಕೇಂದ್ರ ಮಂತ್ರಿಗಳಾದ ಅನಂತಕುಮಾರ್ ಮತ್ತು ಧನಂಜಯಕುಮಾರ್ ಮತ್ತು ನಮ್ಮ ಪಕ್ಷದ ಲೋಕಸಭಾ ಸದಸ್ಯರು ನಮ್ಮ ಪಕ್ಷದ ಅಧ್ಯಕ್ಷರು ಇವರು ನಿನ್ನೆಯ ದಿವಸ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುವಂತಹ ಕೆಲಸ ಮಾಡಿದ್ದಾರೆ. ಅವರು ಹಲವಾರು ಪ್ರಮುಖ ವಿಚಾರಗಳನ್ನು ಪ್ರಧಾನ ಮಂತ್ರಿಗಳಿಗೆ ತಿಳಿಸಿದ್ದಾರೆ. ಅವರು ಈ ಗಂಭೀರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡಿದ್ದಾರೆ. ಅಲ್ಲಿ ನಡೆದ ಒಂದೆರಡು ವಿಚಾರಗಳನ್ನು ಈ ಸದನಕ್ಕೆ ತಿಳಿಸಲು ಮಾನ್ಯ ವಿರೋಧ ಪಕ್ಷದ ನಾಯಕರು ನನಗೆ ಫೋನ್ ಮೂಲಕ ತಿಳಿಸಿದ್ದಾರೆ. ಮೊದಲನೆಯದು ಕೇಂದ್ರದಿಂದ ಒಂದು ತಜ್ಞರ ತಂಡ ನಮ್ಮ ರಾಜ್ಯಕ್ಕೆ ಬಂದು ಬರ ಪೀಡಿತ ಪ್ರದೇಶವನ್ನು ಅಧ್ಯಯನಮಾಡುವುದು. ಎರಡನೆಯದು ಕೇಂದ್ರದಿಂದ ಬರಬೇಕಾದ ಹಣ 58 ಕೋಟಿ ರೂಪಾಯಿಗಳಲ್ಲಿ ಈಗಾಗಲೇ 29 ಕೋಟಿ ರೂ. ಬಿಡುಗಡೆಯಾಗಿದ್ದು ಇನ್ನುಳಿದ ಹಣವನ್ನು ಶೀಘ್ರ ಬಿಡುಗಡೆ ಮಾಡುವ ಭರವಸೆ ಕೊಟ್ಟಿದ್ದಾರೆ. ಆಮೇಲೆ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಒಂದು ಭರವಸೆಯನ್ನು ಕೊಟ್ಟಿದ್ದಾರೆ, ಈ ರಾಜ್ಯಕ್ಕೆ ಬರುವ ಗ್ರಾಮೀಣಾಭಿವೃದ್ಧಿಯ ಮೊತ್ತ ಎರಡು ಕಂತುಗಳು ಇವೆ ಅದರಲ್ಲಿ ಒಂದು ಕಂತಿನ ಹಣ ಏನು ಬಾಕಿ ಬರಬೇಕಾಗಿದೆ ಅದನ್ನು ಕೇಳಿಕೊಂಡರೆ ಅದಷ್ಟು ಶೀಘ್ರವಾಗಿ ಆ ಹಣ ಬಿಡುಗಡೆ ಮಾಡುತ್ತೇವೆಂದೂ ಸಹ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಕುಡಿಯುವ ನೀರು ಮತ್ತು ಗ್ರಾಮೀಣಾಭಿವೃದ್ಧಿ, ಬರಗಾಲಕ್ಕೆ ಬೇಕಾದ ಕೆಲಸಗಳನ್ನು ಮಾಡಿಸುತ್ತೇವೆ ಎನ್ನುವ ಭರವಸೆ ಕೊಟ್ಟಿದ್ದಾರೆ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ವಸ್ತು ಸ್ಥಿತಿಯನ್ನು ಅತ್ಯಂತ ಶೀಘ್ರವಾಗಿ ಕಳುಹಿಸಿ ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :— ಕೇಂದ್ರ ಸರ್ಕಾರದಲ್ಲಿ ನಮ್ಮ ರಾಜ್ಯದ 4-5 ಜನ ಮಂತ್ರಿಗಳು ಇದ್ದಾರಲ್ಲಾ, ಅವರು ತಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರವಾಸ ಮಾಡಿದರೆ ಬಹಳ ಉಪಯೋಗವಾಗುತ್ತದೆ. ನಮ್ಮ ಎಸ್.ಎಸ್. ಪಾಟೀಲರು ಈ ಸಲಹೆಯನ್ನು ಕೊಟ್ಟರು.

ಶ್ರೀ ಡಿ.ವಿ. ಸದಾನಂದಗೌಡ :— ಲೋಕಸಭೆಯ ಅಧಿವೇಶನ ಪ್ರಾರಂಭವಾದ ಹಿನ್ನಲೆಯಲ್ಲಿ ಈ ಭಾಗದಲ್ಲಿ ಅವರು ತಕ್ಷಣ ಪ್ರವಾಸ ಮಾಡಲು ಆಗಲಿಲ್ಲ. ಅರು ಈ ಭಾಗಕ್ಕೆ ಭೇಟಿ ಕೊಡುವವರಿದ್ದಾರೆ, ಅವರು ಈ ವಿಚಾರವನ್ನು ತುಂಬಾ ಗಂಭೀರವಾಗಿ ಪರಿಗಣನೆ ಮಾಡಿ ಪ್ರಧಾನ ಮಂತ್ರಿಗಳ ಬಳಿ ನಿಯೋಗ ಹೋಗಿ ಮನವರಿಕೆ ಮಾಡಿ ಕೊಟ್ಟಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಚಾರ ಅದರಲ್ಲಿ ಬರಲಿಲ್ಲ. ನಮಗೆ ಹೋದ ವರ್ಷ ಬರಬೇಕಾಗಿದ್ದ ಎಎಸ್ಎಸ್, ಜಿಜಿಎಸ್‌ವೈನಲ್ಲಿ ರಾಜ್ಯಕ್ಕೆ 20 ಕೋಟಿ ರೂ. ಬಂದಿಲ್ಲ. ಅದನ್ನು ಗ್ರಾಮೀಣಾಭಿವೃದ್ಧಿ ಸಚಿವರು ಕೊಡುವುದಕ್ಕೆ ಬರುತ್ತದೆ. ಅದನ್ನು ರಿಲೀಜ್ ಮಾಡಿಸಿಕೊಂಡು ಬರಲು ತಿಳಿಸಿದರೆ ಅನುಕೂಲ.

ಶ್ರೀ ಡಿ.ವಿ. ಸದಾನಂದಗೌಡ :— ಈ ರಾಜ್ಯಕ್ಕೆ ಬರಬೇಕಾದ ಎಲ್ಲಾ ಮೊತ್ತವನ್ನು ತಕ್ಷಣ ಬಿಡುಗಡೆ ಮಾಡುತ್ತೇವೆ ಎನ್ನುವ ಭರವಸೆ ಕೊಟ್ಟಿದ್ದಾರೆ.

ಶ್ರೀ ಸಿ. ಚೆನ್ನಿಗಪ್ಪ :— ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರ ಬಲವಾದ ಸರ್ಕಾರ. ಅವರಿಗೆ ಹೆಚ್ಚು ಹಣ ಕ್ರೋಢೀಕರಿಸುವುದಕ್ಕೆ ಸಾಧ್ಯವಿದೆ. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಹೆಚ್ಚು ಹಣ ಬಿಡುಗಡೆ ಮಾಡಿದರೆ ನಮ್ಮ ರಾಜ್ಯದ ರೈತರಿಗೆ, ಬರಗಾಲಕ್ಕೆ ಅನುಕೂಲವಾಗುತ್ತದೆ.

(ಅ) ಹೊಸಕೋಟೆ ತಾಲ್ಲೂಕಿನಲ್ಲಿ ವಯೋವೃದ್ಧ ಜಿ.ಎನ್. ಚಂದ್ರಶೇಖರನ್ ಕೊಲೆ ಕುರಿತು (ಮುಂದು)

+ ಶ್ರೀ ಬಿ.ಎನ್.ಬಚ್ಚೇಗೌಡ (ಹೊಸಕೋಟೆ) :— ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಭಟ್ಟರಹಳ್ಳಿ ಸುಭಾಷ್‌ನಗರ ಅಲ್ಲಿ ಒಂದು ಭೀಕರ ಕೊಲೆಯಾಗಿದೆ. ನಾನು ಬೆಳಗ್ಗೆ ಆ ಸ್ಥಳಕ್ಕೆ ಹೋಗಿ ಬಂದೆ. ಅಷ್ಟರಲ್ಲಿ ಮಾನ್ಯ ಸದಸ್ಯರಾದ ಸುರೇಶ್ ಕುಮಾರ್ ಅವರು ಪ್ರಸ್ತಾಪ ಮಾಡಿದ್ದಾರೆ. ನಿವೃತ್ತ ವಿಜ್ಞಾನಿಯವರ ಮಗ ಗಾರ್ಡನ್ ಸಿಟಿ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರು. ಅವರನ್ನು ಮಧ್ಯಾಹ್ನ 1-30 ಗಂಟೆಯಲ್ಲಿ ಕತ್ತು ಕೊಯ್ದು ಕೊಲೆ ಮಾಡಿ ಅವರಲ್ಲಿದ್ದ ಹಣ ಅಪಹರಣ ಮಾಡಿರತಕ್ಕಂಥಾದ್ದು ಮತ್ತು ಅವರ ಶ್ರೀಮತಿಯವರ ಮೇಲೆ ಹಲ್ಲೆ ಮಾಡಿದ್ದಾರೆ, ಅವರು ನಿಮ್ಹಾನ್ಸ್‌ನಲ್ಲಿದ್ದಾರೆ. ಅವರು ಸಾವು ಬದುಕಿನ ಜೊತೆ ಹೋರಾಟ ಮಾಡುತ್ತಿದ್ದಾರೆ. ಮೃತರ ಪತ್ನಿ ಆಸ್ಪತ್ರೆಯಲ್ಲಿ ಕೋಮಾ ಸ್ಟೇಜಿನಲ್ಲಿ ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ. ಆ ಘಟನೆ ನಡೆದ ಸ್ಥಳ ಹೊಸಕೋಟೆ ಪೋಲೀಸ್ ಠಾಣೆ ವ್ಯಾಪ್ತಿಗೆ ಬರುತ್ತದೆ. ಅವಲಹಳ್ಳಿ ಔಟ್‌ಪೋಸ್ಟ್ ಎಂದು ಅದನ್ನು ಕರೆಯುತ್ತಾರೆ. ಇವತ್ತು ಬೆಂಗಳೂರು ಹೊರವಲಯ ಸಾಕಷ್ಟು ಬೆಳೆದಿದೆ. ನಮ್ಮ ಬೆಂಗಳೂರು (ಗ್ರಾಮಾಂತರ) ಜಿಲ್ಲೆಯಲ್ಲಿ ಒಬ್ಬ ಎಸ್ಪಿ ಇದ್ದಾರೆ. ಬೆಂಗಳೂರು (ನಗರ) ಜಿಲ್ಲೆಯಲ್ಲಿ ಒಬ್ಬ ಪೋಲೀಸ್ ಕಮೀಷನರ್ ಇದ್ದಾರೆ. ಆನೇಕಲ್ ತಾಲ್ಲೂಕು, ಬೆಂಗಳೂರು (ಉತ್ತರ) ಮತ್ತು (ದಕ್ಷಿಣ) ತಾಲ್ಲೂಕು ಈ ಮೂರು ತಾಲ್ಲೂಕುಗಳಲ್ಲಿ ಬೆಂಗಳೂರು (ಗ್ರಾಮಾಂತರ) ಜಿಲ್ಲೆಯ ಜನಸಂಖ್ಯೆಯ ಸುಮಾರು ಇದ್ದು, ಅವರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಹೊರವಲಯಗಳನ್ನು ನಾವು ನಗರ ಜಿಲ್ಲೆಗೇ ಸೇರಿಸಿಕೊಂಡಿದ್ದೇವೆ. ಮೂರು ತಾಲ್ಲೂಕು ಇರತಕ್ಕಂಥ ಕೊಡಗು ಜಿಲ್ಲೆಗೆ ಒಬ್ಬ ಎಸ್ಪಿ ಇದ್ದಾರೆ. ಇಲ್ಲಿ ಬೆಂಗಳೂರು (ನಗರ)

ಜಿಲ್ಲೆಯ ವ್ಯಾಪ್ತಿಗೆ ಬರತಕ್ಕಂಥ ಈ ಮೂರು ತಾಲ್ಲೂಕುಗಳಿಗೆ ಒಬ್ಬ ಎಸ್ಪಿ ಇಲ್ಲ ಮತ್ತು ಸಾಕಷ್ಟು ಸಿಬ್ಬಂದಿಯೂ ಕೂಡ ಇಲ್ಲ. ಇದರಿಂದ ತೀವ್ರ ತೊಂದರೆಯಾಗಿದೆ. ನಾನು ಆವಲಹಳ್ಳಿಯಲ್ಲಿ ಎಷ್ಟು ಪೊಲೀಸ್ ಇದ್ದಾರೆ ಎಂದು ವಿಚಾರಿಸಿದಾಗ ಔಟ್‌ಪೋಸ್ಟ್‌ನಲ್ಲಿ ಎರಡು ಕಾನ್ಸ್‌ಟೇಬಲ್‌ಗಳು ಮಾತ್ರ ಇರುವುದು ತಿಳಿದು ಬಂದಿತು. ಬಿದರಹಳ್ಳಿ ಹೋಬಳಿಯಲ್ಲೇ 63 ಹಳ್ಳಿಗಳು ಇವೆ. ಆ ಕಡೆ ಭಾಗದಲ್ಲಿ ಕಸಬಾ ಹೋಬಳಿಯನ್ನೂ ಕೂಡ ಅವರ ಜ್ಯುರಿಸ್‌ಡಿಕ್ಷನ್‌ಗೆ ಸೇರಿಸಿದ್ದಾರೆ. ಸುಮಾರು 120-130 ಹಳ್ಳಿಗಳಿಗೆ ಒಂದು ಪೊಲೀಸ್ ಸ್ಟೇಷನ್ ಇದೆ. ಇದರ ಜೊತೆಗೆ ಹೊಸಕೋಟೆ ಟೌನ್‌ಅನ್ನೂ ಕೂಡ ಸೇರಿಸಿದ್ದಾರೆ. ಇದನ್ನೆಲ್ಲವನ್ನೂ ನೋಡಿಕೊಳ್ಳಲು ಅಗತ್ಯ ಪೊಲೀಸ್ ಸಿಬ್ಬಂದಿಯೇ ಇಲ್ಲಿಲ್ಲ. ಇದರಿಂದಾಗಿ ರಾತ್ರಿ ವೇಳೆ ಗಸ್ತು ತಿರುಗಲು ಅಗತ್ಯ ಪೊಲೀಸ್ ಸಿಬ್ಬಂದಿಯಿಲ್ಲದೇ ಸಾಧ್ಯವಿಲ್ಲದಂತಾಗಿದೆ. ಬೆಳೆಯುತ್ತಿರುವ ಹೊರವಲಯಕ್ಕಾಗಿಯೇ ಒರ್ವ ಪ್ರತ್ಯೇಕವಾದ ಎಸ್ಪಿಯನ್ನು ನಗರ ಜಿಲ್ಲೆಯ ವ್ಯಾಪ್ತಿಗೆ ನೇಮಿಸಬೇಕು. ಇದರ ಜೊತೆಗೆ 2000-2500 ಪೊಲೀಸ್ ಸಿಬ್ಬಂದಿಯನ್ನು ಇದಕ್ಕಾಗಿ ಮಂಜೂರು ಮಾಡಿದರೆ ಕಾನೂನು ವ್ಯವಸ್ಥೆ ಪರಿಪಾಲನೆ ಸುಗಮವಾಗಿ ಮಾಡಬಹುದು. ಮೊನ್ನೆ ಪೀಣ್ಯದಲ್ಲಿ ಪಿ.ಎಫ್. ಫಂಡ್‌ನ ವಿಚಾರದಲ್ಲಿ ಹಬ್ಬಿದ ವದಂತಿಯಿಂದಾಗಿ ನೂರಾರು ಕಾರ್ಮಿಕರು ಬಸ್ಸುಗಳನ್ನು ಸುಟ್ಟು ಗಲಾಟೆ ಮಾಡಿದ ಪ್ರಕರಣದ ಬಗ್ಗೆ ಮಾನ್ಯ ಗೃಹ ಸಚಿವರು ಉಭಯ ಸದನಗಳಲ್ಲಿ ಹೇಳಿಕೆಯೊಂದನ್ನು ಕೊಟ್ಟು ಇದರ ಹಿನ್ನಲೆಯಲ್ಲಿ ಸಾಕಷ್ಟು ಬಿಗಿಯಾದ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಇದಲ್ಲದೆ, ಮೊನ್ನೆ ಸತ್ಯಪ್ರಕಾಶ್ ಹೋಟೆಲ್‌ನ ಮಾಲೀಕರಾದ ಗೋವಿಂದರಾಜ್ ಎಂಬುವವರು ಹಾದು ಹಗಲಿನಲ್ಲೇ ಕೊಲೆಯಾಗಿದ್ದಾರೆ. ಸುರಾನ ಕೊಲೆ, ಈಗ ಕತ್ತನ್ನು ಕೊಯ್ದು ಕೊಲೆ ಮಾಡಿರುವಂತಹ ಪ್ರಕರಣಗಳು ಒಂದಾದ ಮೇಲೆ ಒಂದರಂತೆ ನಡೆಯುತ್ತಿದೆ; ಇದು ಹಣಕ್ಕಾಗಿಯೇ ನಡೆಯುತ್ತಿದೆಯೋ, ಇದರ ಹಿನ್ನಲೆಗಳು ಏನು ಎಂಬುದನ್ನು ಗೃಹ ಇಲಾಖೆ ತನಿಖೆ ಮಾಡುತ್ತಿದೆ. ಆದರೆ ಇಂತಹ ಪ್ರಕರಣಗಳು ಮರುಕಳಿಸದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಇವತ್ತು ಜನ ಅಲ್ಲಿ ಭಯಭೀತರಾಗಿದ್ದಾರೆ, ಅವರಿಗೆ ನೆಮ್ಮದಿ ಇಲ್ಲದಂತಾಗಿದೆ. ನಾನು ಅಲ್ಲಿಗೆ ಹೋಗಿದ್ದಾಗ ಅಲ್ಲಿದ ಜನರು, ನಾವೆಲ್ಲಾ ನಿವೃತ್ತರು, ನಾವೆಲ್ಲಾ ಸೇರಿ ಇಲ್ಲಿ 10-15 ಮನೆಗಳನ್ನು ಕಟ್ಟಿಸಿಕೊಂಡಿದ್ದೇವೆ, ಪೊಲೀಸ್ ಇಲ್ಲಿಗೆ ಬರುವುದೇ ಇಲ್ಲ, ನಮಗೆ ಯಾವುದೇ ರೀತಿಯ ರಕ್ಷಣೆಯೂ ಕೂಡ ಇಲ್ಲ, ದಯವಿಟ್ಟು ನಮಗೆ ರಕ್ಷಣೆ ಒದಗಿಸಿ ಎಂದು ಮೊರೆ ಇಟ್ಟರು. ಅವರು ಸಾಕಷ್ಟು ಭಯಭೀತರಾಗಿದ್ದು ಇದರಿಂದ ಕಂಡುಬರುತ್ತದೆ. ಜನರ ಭಯ ಭೀತಿಯನ್ನು ಹೋಗಲಾಡಿಸಲು ಅವರಿಗೆ ಸೂಕ್ತ ರಕ್ಷಣೆ ಕೊಡುವ ವ್ಯವಸ್ಥೆಯಾಗಬೇಕು. ನಗರ ಜಿಲ್ಲೆಗಾಗಿ ಹೊಸದಾಗಿ ಎಸ್ಪಿ ಹುದ್ದೆ ಕ್ರಿಯೇಟ್ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕು. ಇಂತಹ ಘಟನೆಗಳು ಮತ್ತಷ್ಟು ಆಗದಿರುವ ಹಾಗೆ ಪೊಲೀಸ್ ವ್ಯವಸ್ಥೆಯನ್ನು ಬಿಗಿ ಮಾಡಲು ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಗೃಹ

ಸಚಿವರು ಈ ಸಂಬಂಧದಲ್ಲಿ ಹೇಳಿಕೆಯೊಂದನ್ನು ನೀಡಬೇಕೆಂದು ಕೋರುತ್ತೇನೆ. ಪೊಲೀಸಿನವರ ವೈಫಲ್ಯವನ್ನು ತೋರಿಸುವಂತಹ ಘಟನೆಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ನಡೆಯುತ್ತಿವೆ. ಸಾಕಷ್ಟು ಕಾಯಕಲ್ಪ ಮತ್ತು ಶಕ್ತಿಯನ್ನು ಆ ಇಲಾಖೆಗೆ ತುಂಬಬೇಕು. ಬೇರೆಯ ಕಡೆಯಿಂದ ಜನಗಳು ಬಂದು ಇವತ್ತು ಬೆಂಗಳೂರಿನಲ್ಲಿ ಅಂಡರ್‌ವರ್ಲ್ಡ್ ಚಟುವಟಿಕೆಗಳು ಶುರುವಾಗಿವೆ. ಸುಪಾರಿ ಕೊಲೆಗಳು ಇತ್ತೀಚೆಗೆ ಹಣಕ್ಕಾಗಿ ನಡೆಯುತ್ತಿವೆ. ನಾವು ಪತ್ರಿಕೆಗಳಲ್ಲಿ ಕೊಲೆ ಪ್ರಕರಣಗಳ ಬಗ್ಗೆ ವರದಿಗಳನ್ನು ಓದಿದಾಗ, ದರೋಡೆಕೋರರು ಮುಸುಕುಧಾರಿಗಳಾಗಿದ್ದರು, ಅವರು ತೆಲುಗು ಮತ್ತು ತಮಿಳು ಮಾತನಾಡುತ್ತಿದ್ದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿರುವುದು ಗೊತ್ತಾಗಿದೆ. ಇವತ್ತು ಬೆಂಗಳೂರಿಗೆ ಎಲ್ಲೆಲ್ಲಿಂದಲೋ ಜನಗಳು ಬಂದು ಕನ್ನಡಿಗರಿಗೆ ರಕ್ಷಣೆ ಇಲ್ಲದಂತಾಗಿದೆ. ಹೊರವಲಯದಲ್ಲಿರುವಂತಹ ಜನಗಳಿಗೆ ಸೂಕ್ತ ರಕ್ಷಣೆ ಕೊಟ್ಟು ಅವರಲ್ಲಿ ಧೈರ್ಯ ತುಂಬುವಂತಹ ಕೆಲಸವನ್ನು ಇಲಾಖೆ ಮಾಡಬೇಕಾಗಿದೆ. ಮಾನ್ಯ ಗೃಹ ಸಚಿವರು ಇದರ ಬಗ್ಗೆ ಒಂದು ಹೇಳಿಕೆಯೊಂದನ್ನು ನೀಡಬೇಕೆಂದು ಕೋರುತ್ತೇನೆ.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರಾದ ಬಚ್ಚೇಗೌಡರು ಅವರ ಮತಕ್ಷೇತ್ರದಲ್ಲಿ ಸಂಭವಿಸಿದಂತಹ ಕೊಲೆ ನಡೆದ ಜಾಗಕ್ಕೆ ಖುದ್ದಾಗಿ ಭೇಟಿ ಕೊಟ್ಟು ಬಂದಿದ್ದಾರೆ. ಅಲ್ಲಿ ನಡೆದಂತಹ ಘಟನೆ ಬಗ್ಗೆ ಅವರು ಸದನಕ್ಕೆ ವಿವರಿಸಿದ್ದಾರೆ. ಈಗಾಗಲೇ ಆ ಸದನದಲ್ಲಿ ಈ ವಿಷಯದ ಬಗ್ಗೆ ಮಾನ್ಯ ಸಿಂಧ್ಯ ಮತ್ತು ಮಾನ್ಯ ಸುರೇಶ್ ಕುಮಾರ್‌ರವರು ಪ್ರಸ್ತಾಪ ಮಾಡಿದ್ದರು. ಆಗ ನಾನು ಒಂದು ಹೇಳಿಕೆಯನ್ನು ಈಗಾಗಲೇ ಅದರ ಬಗ್ಗೆ ಸದನದಲ್ಲಿ ನೀಡಿದ್ದೇನೆ. ಪುನ: ಮತ್ತೆ ಅದನ್ನು ಇಲ್ಲಿ ಪುನರುಚ್ಚಾರ ಮಾಡತಕ್ಕಂಥ ಅವಶ್ಯಕತೆ ಇಲ್ಲವೆಂದು ನಾನು ಭಾವಿಸಿದ್ದೇನೆ. ಮಾನ್ಯ ಸದಸ್ಯರು ಗ್ರಾಮಾಂತರ ಜಿಲ್ಲೆ ಬಹಳ ದೊಡ್ಡದಿದೆ, ಇದನ್ನು ಡಿವೈಡ್ ಮಾಡಿ, ಅರ್ಬನ್ ಮತ್ತು ರೂರಲ್‌ಗೆ ಪ್ರತ್ಯೇಕವಾಗಿ ಎಸ್ಪಿಗಳನ್ನು ನೇಮಕ ಮಾಡಬೇಕು, ಮತ್ತು ಅದಕ್ಕೆ ತಕ್ಕಂತಹ ಸಿಬ್ಬಂದಿಯನ್ನು ನೇಮಕ ಮಾಡಿದರೆ ಸಾಕಷ್ಟು ಇಂತಹ ಕ್ರೈಮ್ಸ್ ಅನ್ನು ಹತೋಟಿಯಲ್ಲಿಡಲು ಸಾಧ್ಯವಾಗುತ್ತದೆ ಎಂಬ ಸಲಹೆಗಳನ್ನು ಮಾತನಾಡುತ್ತಾ ನೀಡಿದ್ದಾರೆ. ಬೆಳೆಯುತ್ತಿರುವ ನಗರದಲ್ಲಿ ಆಗತಕ್ಕಂಥ ಅಪರಾಧಗಳನ್ನು ತಡೆಗಟ್ಟಬೇಕಾದರೆ ಸಾಕಷ್ಟು ಪೊಲೀಸ್ ಸಿಬ್ಬಂದಿ ಇದ್ದಾಗ ಮಾತ್ರ ಸಾಧ್ಯವಾಗುತ್ತದೆ ಎನ್ನತಕ್ಕಂಥ ಮಾತನ್ನೂ ಸಹ ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ನಾನು ಈಗಾಗಲೇ ಒಪ್ಪಿಕೊಂಡಿದ್ದೇನೆ. ಆಗ ನಾವು ಅಡಿಷನಲ್ ಫೋರ್ಸ್‌ಗಾಗಿ ಕೇಳಿಕೊಂಡಿದ್ದೇವೆ. 2090 ಹೆಚ್ಚು ಕಾನಸ್ಟೇಬಲ್‌ಗಳು ಬೆಂಗಳೂರು ನಗರಕ್ಕಾಗಿಯೇ ಬೇಕು ಎಂದು ನಾವು ಮೊನ್ನೆ ಅಂದರೆ 16ನೇ ತಾರೀಖು ಇಲಾಖೆಗೆ ಅನುಮತಿ ಸಿಕ್ಕರೆ 510 ಕಾನ್ಸಟೇಬಲ್‌ಗಳನ್ನು ಈ ವರ್ಷ ಮತ್ತು ಇನ್ನುಳಿದ 510 ಕಾನಸ್ಟೇಬಲ್‌ಗಳನ್ನು ನೇಮಕ ಮಾಡಿಕೊಳ್ಳಲು ಅನುಮತಿ ನಮಗೆ ದೊರಕಿದೆ. ಸುಮಾರು ಸಾವಿರ ಕಾನ್ಸಟೇಬಲ್‌ಗಳ ರಿಕ್ರೂಟ್‌ಮೆಂಟ್

ಮಾಡಬೇಕಾದ ಪ್ರಕ್ರಿಯೆಯನ್ನು ನಾವು ನಡೆಸಬೇಕಾಗಿದೆ. ಆದರೆ ಅದಕ್ಕಾಗಿ ರೂಲ್ಸ್ ಅನ್ನು ತಿದ್ದುಪಡಿ ಮಾಡಬೇಕಾಗಿದೆ. ಸುಪ್ರೀಂ ಕೋರ್ಟಿನ ತೀರ್ಪಿನಿಂದರ ಹಿನ್ನಲೆಯಲ್ಲಿ ಈಗ ನಾವು ಹಿಂದಿನಂತೆ ನೇರವಾಗಿ ಉದ್ಯೋಗ ವಿನಿಮಯ ಕೇಂದ್ರದಿಂದ ಹೆಸರುಗಳನ್ನು ಪಡೆದುಕೊಂಡು ಕಾನ್ಸ್ಟೆಬಲ್‌ಗಳನ್ನು ನೇಮಕಾತಿ ಮಾಡಲು ಸಾಧ್ಯವಿಲ್ಲದಂತಾಗಿದೆ. ಪೇಪರ್‌ಗಳಲ್ಲಿ ವೈಡರ್ ಪಬ್ಲಿಸಿಟಿ ಕೊಟ್ಟು ರಿಕ್ರೂಟ್‌ಮೆಂಟ್ ಮಾಡಬೇಕು, ಇಲ್ಲದಿದ್ದರೆ ಎಲ್ಲಾ ಜನಗಳಿಗೆ ಅವಕಾಶಗಳು ಸಿಗದೇ ಕೆಲವೇ ಜನಗಳಿಗೆ ಮಾತ್ರ ನೇಮಕಾತಿಯಾಗುವ ಅವಕಾಶ ಸಿಗುತ್ತದೆ ಎನ್ನತಕ್ಕಂಥ ಒಂದು ನಿರ್ಣಯವನ್ನು ಸುಪ್ರೀಂ ಕೋರ್ಟ್ ಕೊಟ್ಟಿರುವ ಹಿನ್ನಲೆಯಲ್ಲಿ ನಾವು ರೂಲ್ಸ್‌ಗಳಿಗೆ ತಿದ್ದುಪಡಿ ಮಾಡಿ ಹೊಸ ನೇಮಕಾತಿಯನ್ನು ಮಾಡುತ್ತೇವೆ. ಈಗಾಗಲೇ ಹಿಂದೆ ರಿಕ್ರೂಟ್‌ಮೆಂಟ್ ಮಾಡಿದ್ದನ್ನೂ ಸಹ ಸ್ವಲ್ಪ ತಡೆಹಿಡಿದಿದ್ದೇವೆ. ಅನೇಕ ಜನ ನೇಮಕಾತಿಯಲ್ಲಿ ಅವ್ಯವಹಾರವಾಗಿದೆ ಎಂಬಂತಹ ಆರೋಪಗಳನ್ನು ಮಾಡಿದ್ದರು. ಆದ್ದರಿಂದ ಅದನ್ನು ನಾವು ತಡೆಹಿಡಿದಿದ್ದೆವು. ಇದರ ಬಗ್ಗೆ ತನಿಖೆ ನಡೆಸಿದ್ದು, ಇದಕ್ಕೆ ಸಂಬಂಧಪಟ್ಟಂತಹ ಸಿ.ಓ.ಡಿ. ತನಿಖೆ ವರದಿ ಕೂಡ ಸರ್ಕಾರಕ್ಕೆ ಬಂದಿದೆ. ಸದರಿ ವರದಿಯಲ್ಲಿ ನೇಮಕಾತಿಯಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿಲ್ಲ, ಆದರೆ ಕೆಲವೊಂದು ಪ್ರೊಸೀಜರಲ್ ಲ್ಯಾಪ್ಸಸ್ ಇದೆ, ಅದನ್ನು ಸಂಪಡಿಸಿ ಮಾಡಬಹುದಾಗಿತ್ತು ಎಂದು ಹೇಳಲಾಗಿದೆ. ಪ್ರೊಸೀಜರ್ ಲ್ಯಾಪ್ಸ್ ಎಂದರೆ ಇಷ್ಟೆ; ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದ ನೇರವಾಗಿ ಅವರು ಹೆಸರುಗಳನ್ನು ತೆಗೆದುಕೊಂಡಿದ್ದರು, ಆದರೆ ಪೇಪರ್‌ನಲ್ಲಿ ಜಾಹೀರಾತು ಕೊಟ್ಟಿರಲಿಲ್ಲ. ಪೇಪರ್‌ನಲ್ಲಿ ಜಾಹೀರಾತು ಕೊಡದೇ ಇದ್ದ ಕಾರಣ ಸುಪ್ರೀಂ ಕೋರ್ಟಿನ ಆದೇಶದ ಪ್ರಕಾರ ಇದು ತಪ್ಪಾಗುತ್ತದೆ ಎಂಬುದಾಗಿ ವರದಿಯಲ್ಲಿ ತಿಳಿಸಲಾಗಿದೆ. ಕಳೆದ ಹತ್ತಾರು ವರ್ಷಗಳಿಂದಲೂ ಕೂಡ ಪ್ರತಿಯೊಂದು ಜಿಲ್ಲೆಗಳಲ್ಲೂ ಕೂಡ ಎಮ್ಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದಲೇ ಹೆಸರುಗಳನ್ನು ಪಡೆದುಕೊಂಡು ಕಾನ್ಸ್ಟೇಬಲ್‌ಗಳನ್ನು ನೇಮಕಾತಿಮಾಡಿಕೊಳ್ಳಲಾಗುತ್ತಿತ್ತು. ಈಗ ಆಗಿರುವ ನೇಮಕಾತಿಯನ್ನು ನಾವು ಇನ್‌ವ್ಯಾಲಿಡ್ ಮಾಡಬೇಕೆಂದರೆ ಹಿಂದೆ ಮಾಡಿದಂತಹ ನೇಮಕಾತಿ ಕೂಡ ಇನ್‌ವ್ಯಾಲಿಡ್ ಎನ್ನುವಂತಹ ಪ್ರಶ್ನೆ ಉದ್ಭವವಾಗುತ್ತದೆ. ಆದ್ದರಿಂದ ನಾನು ಆ ವಿಷಯವನ್ನು ಕ್ಯಾಬಿನೆಟ್ ಮುಂದೆ ಪ್ರಸ್ತಾಪ ಮಾಡಿ ಇದರ ಬಗ್ಗೆ ಯಾವ ರೀತಿಯಾದಂತಹ ತೀರ್ಮಾನವನ್ನು ಕೈಗೊಳ್ಳಬೇಕು ಎಂಬುದನ್ನು ನಿರ್ಧರಿಸುತ್ತೇನೆ. ಈಗಾಗಲೇ ಆಗಿರುವಂತಹ ನೇಮಕಾತಿ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ತೀರ್ಮಾನಿಸುತ್ತೇವೆ. ಈಗ ಹೊಸದಾಗಿ ಸುಮಾರು 1000 ಕಾನ್ಸ್ಟೇಬಲ್‌ಗಳನ್ನು ನೇಮಕಾತಿ ಮಾಡುವ ಪ್ರಕ್ರಿಯೆಯನ್ನೂ ಕೂಡ ಹೊಸದಾಗಿ ರೂಲ್ಸ್ ಅನ್ನು ತಿದ್ದುಪಡಿ ಮಾಡಿದ ಮೇಲೆ ನಾವು ಪ್ರಾರಂಭ ಮಾಡುತ್ತೇವೆ. ಈ ರೀತಿ ಪೊಲೀಸ್ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಳ್ಳುವ ಮೂಲಕ ಬೆಂಗಳೂರು ನಗರ ಮತ್ತು ಹೊರವಲಯಗಳಲ್ಲಿ ನಡೆಯುತ್ತಿರುವ ಕೊಲೆ ಪ್ರಕರಣಗಳನ್ನು ತಡೆಗಟ್ಟತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ ಎಂಬ

ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ನಾನು ಬೆಳಿಗ್ಗೆ ಕೂಡ ಸದನದಲ್ಲಿ ಈ ಮಾತನ್ನು ಹೇಳಿದ್ದೇನೆ. ಸರ್ಕಾರ ಯಾರೇ ನಿಷ್ಕ್ರಿಯವಾಗಿ..

ಶ್ರೀ ಪಿ.ಜಿ.ಆರ್. ಸಿಂಧ್ಯ :— ನಾವು ಮೊನ್ನೆ ಸುರಾನ ಕೊಲೆ ಪ್ರಕರಣದ ಬಗ್ಗೆ ಪ್ರಸ್ತಾಪ ಮಾಡಿದಾಗಲೂ ಸಹ ಒಂದು ಸಲಹೆಯನ್ನು ಕೊಟ್ಟಿವು. ಬೆಳಿಗ್ಗೆಯೂ ಕೂಡ ನಾವು ಅದೇ ಸಲಹೆಯನ್ನು ಕೊಟ್ಟಿವು. ಸುಮಾರು ಒಂದು ತಿಂಗಳಿನಿಂದ ಈ ರೀತಿಯ ಸರಣಿ ಕೊಲೆಗಳು ಆಗುತ್ತಿರುವುದನ್ನು ನೋಡಿದರೆ, ಜೈಲಿನಿಂದ ಬಿಡುಗಡೆಯಾದಂತಹ ಖೈದಿಗಳೇನಾದೂ ಈ ಕೆಲಸಗಳನ್ನು ಮಾಡುತ್ತಿದ್ದಯೇ ಎಂಬ ಸಂಶಯ ಬರುತ್ತಿದೆ. ಈ ರೀತಿಯಾಗಿ ಯಾರಾದರೂ ಬಿಡುಗಡೆ ಆಗಿದ್ದಾರೆಯೇ ಎಂಬದನ್ನು ಸಚಿವರು ಪತ್ತೆ ಮಾಡಿಸಿ ಬೈಲ್ ಇತ್ಯಾದಿ ಕಾರಣಗಳ ಮೇಲೆ ಸೆಂಟ್ರಲ್ ಜೈಲುಗಳಿಂದ ಕ್ರಿಮಿನಲ್‌ಗಳು ಹೊರಗೆ ಬರುತ್ತಲೆ ಇರುತ್ತಾರೆ. ಅಂತಹವರ ಪಾತ್ರ ಏನಾದರೂ ಇದರಲ್ಲಿ ಇದೆಯೇ ಎಂಬ ಬಗ್ಗೆ ತನಿಖೆ ಮಾಡಿಸಿ. ಎರಡನೆಯದಾಗಿ, ಕೆಲವರು ಜೈಲಿನಲ್ಲೇ ಇದ್ದುಕೊಂಡು ರಿಮೋಟ್ ಕಂಟ್ರೋಲ್ ರೀತಿಯಲ್ಲಿ ಇಂತಹ ಆಪರೇಷನ್ಸ್‌ಗಳನ್ನು ಮಾಡಿಸುತ್ತಾರೆ. ಅಂತಹದ್ದೇನಾದರೂ ಇಲ್ಲಿ ನಡೆದಿದೆಯೇ ಎಂಬ ಬಗ್ಗೆ ಮಾನ್ಯ ಸಚಿವರು ತನಿಖೆ ಮಾಡಿಸಬೇಕು. ಇದಲ್ಲದೇ ಒಂದು ಸ್ಪೆಷಲ್ 'ಕೂಂಬಿಂಗ್ ಆಪರೇಷನ್' ಅನ್ನು ಒಂದು ವಾರದೊಳಗಾಗಿ ಮಾಡಿಸಬೇಕೆಂದು ನಾನು ಕೇಳುತ್ತೇನೆ. ತಾವು ಇದನ್ನು ಮಾಡಲೇಬೇಕು ಎಂದು ನಾನು ಒತ್ತಾಯಿಸುತ್ತೇನೆ. ಅಂಡರ್‌ವರ್ಲ್ಡ್ ಮತ್ತು ಈ ರೀತಿಯ ಚಟುವಟಿಕೆಗಳನ್ನು ನಡೆಸತಕ್ಕಂಥ ಆ್ಯಂಟಿ ಸೋಷಿಯಲ್ ಎಲಿಮೆಂಟ್ಸ್‌ಗಳ 'ಕೂಂಬಿಂಗ್ ಆಪರೇಷನ್' ಮಾಡಿಸಿ ಸರ್ಕಾರ ಸ್ಟರ್ನ್ ಆಕ್ಷನ್ ಅನ್ನು ತೆಗೆದುಕೊಳ್ಳಬೇಕಾಗುತ್ತದೆ. ಕೆಲವು ಪೊಲೀಸ್ ಅಧಿಕಾರಿಗಳು ಇದೆಲ್ಲಾ ನಡೆಯುವುದನ್ನು ನೋಡಿಕೊಂಡು, ಇದೆಲ್ಲಾ ನಡೆಯಲಿ ಬಿಡಿ ಎಂದು ಮೌನವಾಗಿದ್ದಾರೆ. ಅಂತಹ ಪೊಲೀಸ್ ಅಧಿಕಾರಿಗಳ ಮೇಲೆ ದಯವಿಟ್ಟು ತಾವು ಕಠಿಣ ಕ್ರಮ ಜರುಗಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಯಾರು ಅಧಿಕಾರಿಗಳು ನಿಷ್ಕ್ರಿಯವಾಗಿ ನಡೆದುಕೊಳ್ಳುತ್ತಾರೆ, ಅವರಿಗೆ ಯಾವ ದಾಕ್ಷಿಣ್ಯ ಕೂಡ ತೋರಿಸುವುದಿಲ್ಲ ಎನ್ನುವ ಮಾತನ್ನು ನಾನು ಒತ್ತಿ ಹೇಳುತ್ತಿದ್ದೇನೆ. ಎರಡನೆಯದಾಗಿ, ಕ್ರಿಮಿನಲ್‌ಗಳು ಜೈಲಿನಿಂದ ಬಿಡುಗಡೆಯಾದವರು ಇರಬಹುದು ಜೈಲಿನಲ್ಲಿ ಇದ್ದುಕೊಂಡು ಇದಕ್ಕೆ ಪ್ರೋತ್ಸಾಹ ಕೊಡತಕ್ಕಂತಹ ಜನ ಇದ್ದಾರೆ, ಅದರ ಬಗ್ಗೆ ಕೂಡ ನಾನು ಉನ್ನತ ಮಟ್ಟದ ಪೊಲೀಸ್ ಅಧಿಕಾರಿಗಳಿಗೆ ಆದೇಶ ಕೊಟ್ಟು ಎಲ್ಲೆಲ್ಲಿ ಈ ರೀತಿಯ ಜನ ಇದ್ದಾರೆ ಅವರಿಗೆ ಪತ್ತೆ ಹಚ್ಚಬೇಕು. ಮತ್ತು ಯಾವ ಯಾವ ಜೈಲಿನಿಂದ ಬಿಡುಗಡೆಯಾದವರು ಇಂತಹ ಚಟುವಟಿಕೆಗಳಿಗೆ ಕುಮ್ಮಕ್ಕು ಕೊಡುತ್ತಿದ್ದಾರೆಂದು ಪತ್ತೆ ಹಚ್ಚಬೇಕೆಂದು ಆದೇಶ ಕೊಡುತ್ತೇನೆ. ಎಕನಾಮಿಕಲ್ ಆ್ಯಕ್ಟಿವಿಟೀಸ್‌ಗೂ ಹಿನ್ನಲೆ ಇದೆ. ಈ ಸಂದರ್ಭದಲ್ಲಿ ಅದನ್ನು ಹೇಳುವುದು

ಉಚಿತವಲ್ಲ. ಪ್ರಾಪರ್ಟಿ ಗೈನ್‌ಗೋಸ್ಕರ ಅನೇಕ ಕಡೆ ಇದು ನಡೆದಿದೆ. ಇದರ ಎನ್‌ಕ್ವೈರಿ ಮೇಲೆ ಏನು ನಡೆದಿದೆ ಎಂದು ಹೇಳುವುದಕ್ಕೆ ನಮಗೆ ಸಾಧ್ಯವಾಗುತ್ತದೆ. ನಾವು ಫರ್ಮಾಗಿ ಡೀಲ್ ಮಾಡುವ ಅವಶ್ಯಕತೆ ಇದೆ. ವಿಶೇಷವಾಗಿ ಅಧಿಕಾರಿಗಳಿಗೂ ನಾವು ಜವಾಬ್ದಾರಿ ಕೊಟ್ಟು ನೋಡಬೇಕಾಗಿದೆ. ಮಾನ್ಯ ಸಿಂಧ್ಯರವರ ಹೇಳಿದ ಹಾಗೆ ಜೈಲಿನಲ್ಲಿದ್ದು ಈ ಆಕ್ಟಿವಿಟೀಸ್ ನಡೆಸುವವರನ್ನು ನಾವು ಪತ್ತೆ ಹಚ್ಚಬೇಕಾಗುತ್ತದೆ. ಆ ಕೆಲಸವನ್ನು ನಾವು ಮಾಡುತ್ತೇವೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಸಿ. ಚೆನ್ನಿಗಪ್ಪ :— ಕಾನೂನು ಸುವ್ಯವಸ್ಥೆ ಬಗ್ಗೆ ಮಾನ್ಯ ಗೃಹ ಸಚಿವರು ಹೇಳಿದರು. ಬೆಂಗಳೂರಿನಲ್ಲಿ ಕೋಮು ಗಲಭೆ ಆಗಿದ್ದಕ್ಕೆ ಯಾರು ಕಾರಣಕರ್ತರಲ್ಲ, ಅಲ್ಲಿನ ಕೈಗಾರಿಕೆಯಲ್ಲಿ ಕೆಲಸ ಮಾಡುವ ಕೆಲಸಗಾರರು ಇದನ್ನು ಮಾಡಿರುವುದು ಎಂದು. ಒಂದು ವರ್ಷದ ಹಿಂದೆ ಸುಮಾರು 500 ಜನ ಪೋಲೀಸರಿಗೆ ಬೆಂಗಳೂರಿಗೆ ಹೊಸದಾಗಿ ಅಪಾಯಿಂಟ್ ಮಾಡಿದ್ದರೂ, ಇವತ್ತಿಗೂ ಅಪಾಯಿಂಟ್ ಆರ್ಡರ್ ಕೊಟ್ಟಿಲ್ಲ. ಕೂಡಲೇ ಅಪಾಯಿಂಟ್‌ಮೆಂಟ್ ಆರ್ಡರ್ ಕೊಟ್ಟರೆ ಆ ಪೋಲಿಸ್ ಸಿಬ್ಬಂದಿ ಈ ಕಾರ್ಯ ನಿರ್ವಹಿಸಿದರೆ ಇಂತಹ ಮೊಕದ್ದಮೆಗಳು ಆಗುವುದಿಲ್ಲವೆಂದು ಮಾನ್ಯ ಗೃಹ ಸಚಿವರರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಆ ರಿಕ್ರೂಟ್‌ಮೆಂಟ್ ನಿಲ್ಲಿಸಿರುವುದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಮೊನ್ನೆ ಸಿಂಧ್ಯರವರು ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದರು. ಪ್ರೊಸೀಜರಲ್ ಲ್ಯಾಪ್ಸಸ್ ಆಗಿದೆ ಎಂದು ವರದಿ ಬಂದಿದೆ. ಕ್ಯಾಬಿನೆಟ್ ಮುಂದೆ ತೆಗೆದುಕೊಂಡು ಹೋಗಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ :— ಏನಾದರೂ ಮಾಡಿ ಜನರಿಗೆ ಧೈರ್ಯ ಕೊಡಿ. ಜನ ರಾತ್ರಿ ಹೊತ್ತು ಒಂಟಿಯಾಗಿ ಮನೆಯಲ್ಲಿರುವ ಹಾಗೆ ಮಾಡಿ ಅಷ್ಟೆ ನಾವು ಹೇಳುವುದು.

7. ವಿತ್ತೀಯ ಕಾರ್ಯಕಲಾಪ

2001-2002ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ ಶ್ರೀ ಬಿ.ಆರ್. ಯಾವಗಲ್ (ನರಗುಂದ) :— ಮಾನ್ಯ ಅಧ್ಯಕ್ಷರೆ, 2001-02ನೇ ಸಾಲಿನ ಬೇಡಿಕೆಗಳನ್ನು ಸಮರ್ಥನೆ ಮಾಡುತ್ತಾ, ಕೃಷಿ ಇಲಾಖೆಯ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ವಿಶಿಷ್ಟವಾದ ನಮ್ಮ ದೇಶದ ಪರಿಸ್ಥಿತಿಯಲ್ಲಿ ಸುಮಾರು 70 ಪಾಲು ನಾವೆಲ್ಲಾ ಕೃಷಿ ಮೇಲೆ ಅವಲಂಬನೆ ಆಗುವಂತಹ ಸನ್ನಿವೇಶದಲ್ಲಿ ವಿಶ್ವ ವ್ಯಾಪಾರ ಸಂಘಟನೆ ಗ್ಯಾಟ್ ಒಪ್ಪಂದದ ಮುಂದುವರೆದ ಎರಡನೇ ಹಂತದ ಈ ಸನ್ನಿವೇಶದಲ್ಲಿ....

(ಗೊಂದಲ)

ಈ ಸದನವು ಹೆಚ್ಚಿನ ಅವಧಿಯನ್ನು ಕೃಷಿ ಬಗ್ಗೆ ಮಾತನಾಡುವುದಕ್ಕೆ ಕಳೆದಿದೆ. ಇದು ಅವಶ್ಯವೂ ಹೌದು ಎಂದು ನಾನು ಭಾವಿಸಿದ್ದೇನೆ. ನಾನು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ, ಇನ್ನು ಅದಕ್ಕೆ ಎಷ್ಟು ಪ್ರಾಮುಖ್ಯತೆ ಸಮಯ ವಿನಿಯೋಗ ಆಗಬೇಕಾಗಿತ್ತು ಅದು ಆಗುತ್ತಿಲ್ಲವೆಂದು ನನ್ನ ಭಾವನೆ. ಕೃಷಿಗೆ ಭವಿಷ್ಯವಿಲ್ಲವೆಂದರೆ ಬಹುತೇಕ ನಮಗೆ ಮತ್ತು ನಮ್ಮ ದೇಶಕ್ಕೆ ಭವಿಷ್ಯ ಇಲ್ಲ. ಕೃಷಿ ವಲಯ ಸಂಕಷ್ಟದಲ್ಲಿ ಸಿಲುಕಿದೆ ಎಂದರೆ, ಕೈಗಾರಿಕೆಯಾಗಲಿ, ದೇಶದ ಆರ್ಥಿಕ ಪರಿಸ್ಥಿತಿಯಾಗಲೀ ಬಹಳಷ್ಟು ಸಂಕಷ್ಟಕ್ಕೆ ಸಿಗುತ್ತದೆ. ಕೊನೆ ಹಂತಕ್ಕೆ ನಾವೆಲ್ಲಾ ಬಂದಿದ್ದೇವೆ ಎಂದರೂ ಅತಿಶಯೋಕ್ತಿ ಆಗಲಾರದು ಎಂದು ನಾನು ಭಾವಿಸುತ್ತೇನೆ. ನಾನು ಬರದ ಬಗ್ಗೆ ಮಾತನಾಡುವಾಗ ಅನೇಕ ವಿಚಾರಗಳನ್ನು ಹಿಂದಿನ ಸಭೆಯಲ್ಲಿ ಹೇಳಿದ್ದೇನೆ. ಇವತ್ತು ನಾವು ಹೊಸ ಆರ್ಥಿಕ ವ್ಯಾಪಾರ ನೀತಿಯನ್ನು ಜಾಗತೀಕರಣದ ನೀತಿಯನ್ನು ಒಪ್ಪಿಕೊಂಡಾಗ ಅದರ ಗಂಭೀರವಾದ ಪರಿಣಾಮದಿಂದ ಕೃಷಿ ವಲಯದಲ್ಲಿ ಅತಂತ್ರತೆ ಬೆಳೆದಿದೆ ಎಂದರೆ ತಪ್ಪಾಗುವುದಿಲ್ಲ.

3.40 ಪಿ.ಎಂ.

ಇಂದು ಖಾಸಗಿ ಕಂಪನಿಗಳ ವ್ಯಾಪಾರಿ ವರ್ಗಕ್ಕೂ ಕೂಡ ಇವೊತ್ತು ಏನು ಮಾಡಬೇಕು ಮತ್ತು ಏನನ್ನು ಮಾಡಿದರೆ ವ್ಯಾಪಾರಿ ರಂಗ ಸರಿಯಾಗುತ್ತದೆ ಎನ್ನುವ ಬಗ್ಗೆ ಸರಿಯಾದ ವಿಚಾರವಾಗಲಿ ಅಥವಾ ಯೋಜನೆಯಾಗಲಿ ಗೊತ್ತಾಗದ ಪರಿಸ್ಥಿತಿ ಇದೆ. ಎಂದಿಗೂ ಕೂಡ ಬಾಧೆಗೊಳಗಾಗುವುದಿಲ್ಲ ಮತ್ತು ನಷ್ಟವನ್ನು ಅನುಭವಿಸುವುದಿಲ್ಲವೆಂದುಕೊಂಡ ಅನೇಕ ದೊಡ್ಡ ದೊಡ್ಡ ಕಾರ್ಖಾನೆಗಳೂ ಕೂಡ ಇಂದು ಸಂಕಷ್ಟಕ್ಕೆ ಒಳಗಾಗಿವೆ. ಇದು ಬಹು ರಾಷ್ಟ್ರೀಯ ಕಂಪನಿಗಳಿಂದಾಗಿ ಆಗಿರಬಹುದು ಅಥವಾ ನಮ್ಮ ದೇಶದ ಆರ್ಥಿಕ ವಲಯದಲ್ಲಿ ಒಟ್ಟಾರೆ ಬೇಡಿಕೆ ಹಿನ್ನಲೆಯೊಳಗೆ ದೊಡ್ಡ ದೊಡ್ಡ ಅಂತರಾಷ್ಟ್ರೀಯ ಕಂಪನಿಗಳ ತೀವ್ರತರವಾದ ಪೈಪೋಟಿಯಿಂದಾಗಿ ಇಂದು ದೊಡ್ಡ ಕಾರ್ಖಾನೆಗಳವರು ಕೂಡ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಅನೇಕ ಅಂಥ ದೊಡ್ಡ ಸಂಸ್ಥೆಗಳು ಭವಿಷ್ಯದಲ್ಲಿ ನಷ್ಟ ಅನುಭವಿಸಿ ಬಂದ್ ಆಗಬಹುದು, ಅದರಲ್ಲಿ ಸಂಶಯವಿಲ್ಲ. ಇವೊತ್ತು ಕೃಷಿ ಆಧಾರಿತ ಉದ್ದಿಮೆಗಳಿವೆ, ಅದು ಹತ್ತಿ ಉದ್ದಿಮೆ ಇರಬಹುದು, ಎಣ್ಣೆ ಉದ್ಯಮಗಳು ಇರಬಹುದು ಅವುಗಳೆಲ್ಲಾ ಇಂದು ಒಂದೂ ಕೂಡ ಕೆಲಸವನ್ನು ಮಾಡುತ್ತಿಲ್ಲ. ಇವುಗಳು ಖಾಸಗಿ ವಲಯ, ಸಹಕಾರಿ ವಲಯ, ಜಂಟೀ ವಲಯಗಳಾಗಿರಬಹುದು. ಈಗಾಗಲೇ ಒಂದನೇ ಹಂತ, ಎರಡನೇ ಹಂತ ಮುಗಿದು ಈಗ ಮೂರನೇ ಹಂತದ ರಿಫಾರ್ಮ್ಸ್‌ನಲ್ಲಿದ್ದೇವೆ. ಬಹುಶ: 2004ನೇ ಇಸವಿಯೊಳಗೆ ಬಹುತೇಕವಾಗಿ ಇನ್ನೂ ಕೆಳಗಡೆ ಹೋಗುತ್ತೇವೆನ್ನುವ ಭಯ ಆವರಿಸಿದೆ. ಈ ಭಯ ವಿಶೇಷವಾಗಿ ಕೃಷಿಯಲ್ಲಿ ಈ ರೀತಿಯಾಗಬಹುದು. ಸಾಮಾನ್ಯವಾಗಿ ನಾವು ರೈತರಾಗಿರುವುದರಿಂದ ನಾವು ಬೆಳೆ ಬೆಳೆಯತಕ್ಕಂಥ ಸನ್ನಿವೇಶಗಳನ್ನು

ಅವಲೋಕಿಸಿ ನೋಡಿ ಹೇಳುವುದಾದರೇ ಬೆಳೆಯ ಪ್ರಮಾಣ ದಿನೇ ದಿನೇ ಕಡಿಮೆಯಾಗುತ್ತಿರುವುದನ್ನು ನಾವು ನೋಡಿದ್ದೇವೆ. ಯಾವುದೇ ಬೆಳೆಯನ್ನು ಬೆಳೆದರೂ ಕೂಡ ಎಷ್ಟು ಪ್ರಮಾಣದಲ್ಲಿ ಬೆಳೆ ಬರಬೇಕೋ ಆ ಪ್ರಮಾಣದಲ್ಲಿ ಬರುತ್ತಿಲ್ಲ. ಇದು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲೂ ಅನುಭವಕ್ಕೆ ಬಂದಿದೆ. ಇಂದು ಕೃಷಿ ಇರಬಹುದು, ಕೈಗಾರಿಕೆ ಇರಬಹುದು ಒಂದು ರೀತಿಯಲ್ಲಿ ನೆಗೆಟಿವ್ ಗ್ರೋತ್ ಕಡೆಗೆ ಹೋಗುತ್ತಿದ್ದೇವೆ ಎಂದು ಒಂದು ಹೆಜ್ಜೆ ಮುಂದೆ ಹೋಗಿ ಹೇಳಬಹುದು. ಎಕನಾಮಿಕ್ ಸರ್ವೆ ರಿಪೋರ್ಟ್‌ನಲ್ಲಿ ಕಳೆದ ವರ್ಷ ಕೃಷಿ ಉತ್ಪಾದನೆಗಳು ಗುರಿಗಿಂತ ಸ್ವಲ್ಪ ಮಟ್ಟಿಗೆ ಕಡಿಮೆ ಇದೆಯೆಂದು ಹೇಳಿದ್ದಾರೆ. ಅದೇ ರೀತಿಯಲ್ಲಿ ಕೈಗಾರಿಕೆಯಲ್ಲೂ ಕೂಡ ಇದೆ ಎನ್ನುವುದನ್ನು ನಾವು ಪತ್ರಿಕೆಯಲ್ಲಿ ಓದಿದ್ದೇವೆ: 1970ರ ದಶಕದಿಂದ 1980 ರವರೆಗೆ ಹಸಿರುಕ್ರಾಂತಿ, ಹೇಗೆ ನಡೆದುಕೊಂಡು ಬಂದಿತ್ತು ಮತ್ತು ನಂತರದ ದಿನಗಳಲ್ಲಿ ಇದು ಎಂಥ ಗಂಭೀರವಾದ ಸಮಸ್ಯೆಗಳನ್ನು ಎದುರಿಸುತ್ತಿದೆ ಮತ್ತು 1980ರ ನಂತರದ 20 ವರ್ಷದ ಅವಧಿಯಲ್ಲಿ ಅದು ಅತ್ಯಂತ ಕೆಳ ಹಂತಕ್ಕೆ ಹೋಗಿದೆಯೆಂದರೆ ತಪ್ಪಾಗುವುದಿಲ್ಲ. ಇಂದು ಭೂಮಿಯ ಫಲವತ್ತತೆ ಬಹಳ ಕಡಿಮೆಯಾಗಿದೆ. ನೀರಾವರಿ ಪ್ರದೇಶದಲ್ಲಿ ಪಿ.ಹೆಚ್. ವ್ಯಾಲ್ಯೂ ಎಂದು ಏನು ಹೇಳುತ್ತೇವೆ ಅದು ಬಹುತೇಕವಾಗಿ ಗಂಡಾಂತರ ಮಟ್ಟಕ್ಕೆ ಬೆಳೆಯುತ್ತಿದೆ. ಬಹುತೇಕ ಅದು ವಾಟರ್ ಮ್ಯಾನೇಜ್‌ಮೆಂಟ್‌ನಿಂದ ಈ ರೀತಿಯಾಗಿದೆಯೋ ಅದು ನನಗೆ ಗೊತ್ತಿರಲಿಕ್ಕಿಲ್ಲ. ಅಥವಾ ಅಗತ್ಯಕ್ಕಿಂತ ಹೆಚ್ಚು ರಸಾಯನಿಕ ಗೊಬ್ಬರವನ್ನು ಹಾಕುತ್ತಿರುದರಿಂದ ಈ ರೀತಿಯಾಗಿದೆಯೋ ಎಂಬುದು ಗೊತ್ತಾಗಿಲ್ಲ. ನನ್ನ ಅನುಭವದಲ್ಲಿ ಹೇಳುವುದದಾರೆ ಕಳೆದ 25 ವರ್ಷಗಳಿಂದ ಹೆಚ್ಚು ರಾಸಾಯನಿಕ ಗೊಬ್ಬರಗಳನ್ನು ಬಳಸಿಕೊಂಡು ಬಂದಿರುವುದರಿಂದ ಇಂದು ಭೂಮಿಯ ರಚನೆ ಬೆಳೆಯನ್ನು ಬೆಳೆಯಲು ಪೂರಕವಾಗಿಲ್ಲ ಎಂದು ಹೇಳಬಯಸುತ್ತೇನೆ. ರಸಾಯನಿಕ ಗೊಬ್ಬರವನ್ನು ಬಳಸಲು ಪ್ರಾರಂಭ ಮಾಡಿದ ದಿನಗಳಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ಇದನ್ನು ಉಪಯೋಗಿಸಿದರೂ ಕೂಡ ದೊಡ್ಡ ಪ್ರಮಾಣದ ಫಸಲು ಬಂದು ಒಳ್ಳೆಯ ಬೆಳೆಯಾಗುತ್ತಿದ್ದುದ್ದನ್ನು ನಾವು ನೋಡುತ್ತಿದ್ದವು. ಆದರೆ ಈಗ ಆ ಪರಿಸ್ಥಿತಿ ಇಲ್ಲ. ಈಗೇನಾಗಿದೆಯೆಂದರೆ ಬೆಳೆಗಳನ್ನು ಹೆಚ್ಚು ಬೆಳೆಯಲು ಒಬ್ಬರು ಒಂದು ಪ್ರಯೋಗವನ್ನು ಮಾಡಿದರೆ ಮತ್ತೊಬ್ಬರು ಮತ್ತೊಂದು ಪ್ರಯೋಗವನ್ನು ಮಾಡುತ್ತಿರುವ ಪರಿಸ್ಥಿತಿ ಇದೆ. ಒಂದು ರೀತಿಯಲ್ಲಿ ಕಾಂಪಿಟೆಟಿವ್ ಮನೋಭಾವನೆಯಿಂದ ಹೆಚ್ಚು ಬೆಳೆ ಬೆಳೆಯಬಹುದು ಎಂದು ತಿಳಿದು ಹೆಚ್ಚು ರಸಾಯನಿಕ ಗೊಬ್ಬರ, ಕ್ರಿಮಿನಾಶಕ, ಹೊಸ ಹೊಸ ಬೇರೆ ಬೇರೆ ತಳಿಗಳನ್ನು ಬಳಸುವುದು, ಹೀಗೆ ಇವೆಲ್ಲಾ ಪ್ರಯೋಗಗಳನ್ನು ಮಾಡಿ ಈಗ ಕೊನೆಯ ಹಂತಕ್ಕೆ ಬಂದು ನಿಂತಿದ್ದೇವೆ. ಇದರಿಂದ ಭೂಮಿಯ ರಚನೆಯೇ ಹಾಳಾಗಿ ಹೋಗುತ್ತಿದೆ. ಇನ್ನು ಬೀಜದ ಬಗ್ಗೆ ಹೇಳಬೇಕೆಂದರೆ ಕಳೆದ 25 ವರ್ಷಗಳ ಹಿಂದೆ ಏನು ಹೈಬ್ರೀಡ್ ಬೀಜಗಳನ್ನು ಹಾಕಿ ಬೆಳೆಯನ್ನು ತೆಗೆಯಲಾಗುತ್ತಿತ್ತೋ ಈಗ ಆ

ಪರಿಸ್ಥಿತಿ ಇಲ್ಲವಾಗಿದೆ. ಉದಾಹರಣೆಗೆ ಹೇಳಬೇಕೆಂದರೆ ಮೊಟ್ಟ ಮೊದಲ ಬಾರಿಗೆ ಗುಜರಾತ್‌ನ ಡಾ: ಪಟೇಲ್ ಎನ್ನುವವರೊಬ್ಬರು ಹೆಚ್-4 ಎನ್ನುವ ಹತ್ತಿ ಬೀಜದ ತಳಿಯನ್ನು ಸಂಕಿರಣ ಮಾಡಿ ಅದನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುವುದಕ್ಕೆ ಬಿಡುಗಡೆ ಮಾಡಿದರು. ಈವತ್ತು ಏನು ಸಾಂಪ್ರದಾಯಿಕವಾಗಿ ಹಳೆಯ ಲೋಕಲ್ ವೆರೈಟಿ ಹತ್ತಿ ಇತ್ತು; ಅದು ಲಕ್ಷ್ಮೀ ಆಗಿರಬಹುದು; ಜರೀಲಾ ಆಗಿರಬಹುದು, ಮೀಡಿಯಂ ಸ್ಟೇಪಲ್ ಅಥವಾ ಶಾರ್ಟ್ ಸ್ಟೇಪಲ್ ಕೋರ್ಸ್ ವೆರೈಟಿ ಆ ರೀತಿಯಾದಂಥ ಹತ್ತಿ ಬೆಳೆದು ಅದರ ಇಳುವರಿ ಪರಿಸ್ಥಿತಿ ಏನು ಇತ್ತು ಅದಕ್ಕೆ ಬದಲಾಗಿ ಹೈಬ್ರಿಡ್ ತಳಿಯನ್ನು ಬೆಳೆದವು. ಆ ದಿನಗಳಲ್ಲಿ ಈ ಹೈಬ್ರಿಡ್ ತಳಿಯಿಂದ ಹೆಚ್ಚು ಬೆಳೆ ಬಂದಿತ್ತು. ಇದರಿಂದಾಗಿ ಆರ್ಥಿಕವಾಗಿ ರೈತರು ಅಂದು ಚೇತರಿಸಿಕೊಂಡಿದ್ದರು. ನಂತರ ಬಂದಂತ ವರಲಕ್ಷ್ಮಿ ಇರಬಹುದು ಡಿಬಿಸಿಎಸ್-32 ಆದಿರಬಹುದು ಅಥವಾ ಇತ್ತೀಚಿಗೆ ಬಂದ ಅನೇಕ ಸುಧಾರಿತ ತಳಿಗಳನ್ನು ರೈತ ಬಿತ್ತಿರಬಹುದು; ಬಹುತೇಕ ಈ ಎಲ್ಲಾ ತಳಿಗಳಿಂದ ಹೆಚ್ಚು ಇಳುವರಿ ಬರುತ್ತಿಲ್ಲ, ಈ ತಳಿಯನ್ನು ಉಳುಮೆ ಮಾಡಿ ಕಾಯಿ ಬಂದು, ಬೆಲೆ ಬರುವವರೆಗೆ ನಾವು ಸಾಕಷ್ಟು ಪ್ರಮಾಣದಲ್ಲಿ ಅದರ ಪೋಷಣೆಯನ್ನು ಮಾಡಿದರೂ ಕೂಡ ಅದರಿಂದ ಬರಬೇಕಾದ ಪೂರ್ಣ ಪ್ರಮಾಣದ ಬೆಳೆಯನ್ನು ಪಡೆಯದ ಮಟ್ಟಕ್ಕೆ ಬಂದಿದ್ದೇವೆ. ಇಂದು ಎಷ್ಟೇ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಲು ಕ್ರಮ ಕೈಗೊಂಡಿದ್ದರೂ ಕೂಡ ಈ ತಳಿಗಳನ್ನು ಬಿತ್ತಿದ್ದರೂ ಕೂಡ ಮೊಗ್ಗು ಸರಿಯಾಗಿ ಬರುವುದಿಲ್ಲ, ಒಂದು ವೇಳೆ ಮೊಗ್ಗು ಬಂದರೂ ಕೂಡ ಹವಾಮಾನ ವೈಪರೀತ್ಯದಿಂದಾಗಿ, ರೋಗಗಳ ಬಾಧೆಯಿಂದಾಗಿ ಆತಂಕಕಾರಿಯಾದ ಗಂಡಾಂತರಗಳು ಬಂದರಾಗಿ ಬಹುತೇಕ ಹತ್ತಿ ಬೆಳೆ ಇಂದು ಸರಿಯಾದ ಪ್ರಮಾಣದಲ್ಲಿ ಬರುತ್ತಿಲ್ಲವೆಂದು ಹೇಳಬಯಸುತ್ತೇನೆ. ನಾವೇನು 25 ವರ್ಷಗಳ ಹಿಂದೆ ಅಷ್ಟೇ ಭೂಮಿಯಲ್ಲಿ ಆ ತಳಿಗಳಿಂದ ಹತ್ತಿ ಬೆಳೆಯನ್ನು ಬೆಳೆಯುತ್ತಿದ್ದೇವೋ ಅದರ ಕಾಲು ಭಾಗ ಕೂಡ ಇಂದು ಬೆಳೆಯುವುದಕ್ಕೆ ಆಗದ ಪರಿಸ್ಥಿತಿಗೆ ಮುಟ್ಟಿದ್ದೇವೆ. ಇದೇ ರೀತಿ ಬೇರೆ ಬೆಳೆಗಳಾದ ಮುಸುಕಿನ ಜೋಳ, ಸಾದಾ ಜೋಳ, ಹೈಬ್ರೀಡ್ ಜೋಳ, ಗೋಧಿ, ಇರಬಹುದು, ಭತ್ತ ಇರಬಹುದು, ಅಥವಾ ರಾಗಿ ಇರಬಹುದು, ಇವುಗಳನ್ನು ಬೆಳೆಯಲು ರೈತ ಏನೆಲ್ಲಾ ಪ್ರಯತ್ನಗಳನ್ನು ಪಟ್ಟು ಅದರ ಪೋಷಣೆಯನ್ನು ಮಾಡಿದರೂ ಕೂಡ ಒಳ್ಳೆಯ ಬೆಳೆ ಬರದ ಪರಿಸ್ಥಿತಿ ಇದೆ. ರೈತ ಇದನ್ನು ಬೆಳೆಯಲು ಸಾಕಷ್ಟು ಸಾಲ ಮಾಡಿ ಬಂಡವಾಳ ಹಾಕಿರುತ್ತಾನೆ. ಆದರೆ ಈ ಕೃಷಿಯಿಂದ ಅತ್ಯಂತ ಕಡಿಮೆ ಆದಾಯ ಬರುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಒಂದು ಕಡೆ ಈ ಪರಿಸ್ಥಿತಿಯಿಂದ ರೈತ ತೊಂದರೆ ಪಡುತ್ತಿದ್ದಾನೆ. ಇನ್ನೊಂದು ಕಡೆಯಲ್ಲಿ ಬೆಳೆದ ಬೆಳೆಗೆ ಉತ್ತಮವಾದ ಬೆಲೆಯೂ ಕೂಡ ರೈತರಿಗೆ ಸಿಗುತ್ತಿಲ್ಲ. ಜೋಳವನ್ನು ಇದೇ ಕಾರಣದಿಂದ ಪ್ರೊಕ್ಯೂರ್ ಮಾಡಬೇಕೆಂದು ಹೇಳಿ ಬಹಳಷ್ಟು ಒತ್ತಾಯವನ್ನು ನಾವೂ ಕೂಡ ಸರ್ಕಾರಕ್ಕೆ ಮಾಡಿದವು. ಜೋಳವನ್ನು ಪ್ರೊಕ್ಯೂರ್ ಮಾಡಬೇಕಂದು ಹೇಳಿ ಆ

ಸಂದರ್ಭದಲ್ಲಿ ಬಹಳಷ್ಟು ಗಲಾಟೆಯಾಯಿತು. ನಾವೂ ಬಹಳಷ್ಟು ಒತ್ತಾಯವನ್ನು ಸರ್ಕಾರಗಳ ಮೇಲೆ ಮಾಡಿದ್ದೇವೆ. ರೈತರು ಬೆಳೆದಂತಹ ಮಾಲನ್ನು ಬೆಂಬಲ ಬೆಲೆಯಲ್ಲಿ ತೆಗೆದುಕೊಳ್ಳಬೇಕೆಂದು ಬಹಳಷ್ಟು ಆಗ್ರಹ ಮಾಡಿದ್ದೇವು. ಇವತ್ತು ದೇಶದಲ್ಲಿ ಬೆಳೆದಿರತಕ್ಕಂಥ ಬೇಳೆಕಾಳುಗಳು ಇರಬಹುದು, ವಾಣಿಜ್ಯ ಬೆಳೆಗಳು ಇರಬಹುದು, ಅಥವಾ ಎಣ್ಣೆಕಾಳುಗಳು ಇರಬಹುದು, ಅವುಗಳು ಸುಗ್ಗಿ ಕಾಲದಲ್ಲಿ ಇರುವಂತಹ ಬೆಲೆಗಳನ್ನು ನೋಡಿದರೆ ಉದಾಹರಣೆಗೆ ಮುಸುಕಿನ ಜೋಳದ ಬೆಂಬಲ ಬೆಲೆ 445 ರೂಪಾಯಿ ಇದ್ದರೆ ಅವತ್ತಿನ ಮಾರುಕಟ್ಟೆಯಲ್ಲಿ 290 ರೂಪಾಯಿ ಕ್ವಿಂಟಾಲ್ ಇತ್ತು. ಅವತ್ತು ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾದವರು, ಸ್ಟೇಟ್ ಫುಡ್ ಅಂಡ್ ಸಿವಿಲ್ ಸಪ್ಲೈ ಕಾರ್ಪೋರೇಷನ್‌ನವರು, ಇಲಾಖೆಯವರು ಖರೀದಿ ಮಾಡಿದಂತಹ ಬೆಲೆ 445 ರೂಪಾಯಿ ಆದರೆ, ಮಾರುಕಟ್ಟೆಯಲ್ಲಿ ಅದರ ಬೆಲೆ 290 ರಿಂದ 300 ರೂಪಾಯಿಗೆ ಇಳಿದಂತಹ ಪರಿಸ್ಥಿತಿ ಇತ್ತು. ವ್ಯಾಪಾರಸ್ಥರು ಯಾರಿಗೆ ಹಣ ನೀಡಿದ್ದರು, ಸಾಲ ಕೊಟ್ಟಿದ್ದರು, ಮತ್ತೊಂದು ರೀತಿಯಲ್ಲಿ ಸಹಾಯ ಮಾಡಿದ್ದರು, ಅವರಿಗೆ ಆ ರೈತರು ಬೆಲೆಯನ್ನು ಕೊಡಲೇಬೇಕಾದಂತಹ ಪರಿಸ್ಥಿತಿ ಇತ್ತು. ಅದೇ ಬೆಲೆಗೆ ಅವರು ತೆಗೆದುಕೊಳ್ಳುವಂತಹ ಸನ್ನಿವೇಶ ಇದ್ದುದ್ದರಿಂದ ಅದನ್ನು ತೆಗೆದುಕೊಂಡರು. ಬಹುತೇಕ ಈ ಒಂದು ವೇರ್‌ಹೌಸ್ ಕಾರ್ಪೋರೇಷನ್ನಿನವರು, ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾದವರು ತೆಗೆದುಕೊಳ್ಳದೆ ಹೋಗಿದ್ದರೆ, ರಾಜ್ಯ ಸರ್ಕಾರ ಅದರಲ್ಲಿ ಭಾಗವಹಿಸದೆ ಇದ್ದಿದ್ದರೆ, ಮೂವತ್ತು ಲಕ್ಷಕ್ಕಿಂತಲೂ ಹೆಚ್ಚು ಚೀಲ ಖರೀದಿ ಮಾಡದೇ ಇದ್ದಿದ್ದರೆ ಆ ಮಾಲು ಬಹುತೇಕ 250 ರೂಪಾಯಿಗಿಂತಲೂ ಕಡಿಮೆ ಬೆಲೆಗೆ ಗೋವಿನ ಜೋಳ ಮಾರಾಟವಾಗುತ್ತಿತ್ತು. ಅವತ್ತು ರೈತರೆಲ್ಲಾ ಸೇರಿ ಕೊಟ್ಟರು. ರಾಜ್ಯದ ಅನೇಕ ಗೋದಾಮುಗಳಲ್ಲಿ, ಬಿಲ್ಡಿಂಗ್‌ಗಳಲ್ಲಿ ಕಲ್ಯಾಣ ಮಂಟಪದಲ್ಲಿರಲಿ ಅಥವಾ ಸರ್ಕಾರಿ ಕಚೇರಿಗಳಲ್ಲಿರಲಿ ಎಲ್ಲೆಲ್ಲಿ ಜಾಗ ಸಿಗುತ್ತಿತ್ತು ಅಲ್ಲಿ ಪರ್‌ಚೇಸ್ ಮಾಡಿರುವಂತಹ ಮಾಲನ್ನು ಸ್ಟೋರ್ ಮಾಡಿ ಇಡುವುದರ ಮೂಲಕ ಸರ್ಕಾರ ರೈತರ ಸಹಾಯಕ್ಕೆ ಬಂದಿತ್ತು. ಅದಕ್ಕೆ ರಾಜ್ಯ ಸರ್ಕಾರಕ್ಕೆ ನಾವು ಶ್ಲಾಘನೆ ಮಾಡಬೇಕು. ಅವತ್ತು ಬೆಳೆದಂತಹ ಮಾಲನ್ನು ತೆಗೆದುಕೊಳ್ಳದೆ ಹೋಗಿದ್ದರೆ ರೈತರಿಗೆ ಬಹಳ ಕಷ್ಟವಾಗುತ್ತಿತ್ತು. ಆದರೆ ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ ಅದೇ ಗೋವಿನ ಜೋಳ ಎಲ್ಲಿ ಇತ್ತೋ ಅಲ್ಲೇ ಇದೆ. ಯಾವ ಗೋದಾಮುಗಳಲ್ಲಿ ಇಟ್ಟಿದ್ದಾರೋ ಅದೇ ಗೋದಾಮಿನಲ್ಲೆ ಇದೆ. ಆದರೆ ಕೆಲವರು ಮದ್ರಾಸ್‌ನಿಂದ ಬರುತ್ತಾರೆ, ಕೆಲವರು ಮುಂಬೈಯಿಂದ, ಕೆಲವರು ಹೈದರಾಬಾದ್‌ನಿಂದ, ಕೆಲವರು ಬೆಂಗಳೂರಿನಿಂದ ಬರುತ್ತಾರೆ, ಅವರು ಫುಡ್ ಕಾರ್ಪೋರೇಶನ್‌ನವರು ಕೊಡುವಂತಹ ಬೆಲೆಗೆ ತೆಗೆದುಕೊಂಡು, ಅದೇ ಗೋಡೌನ್‌ನಲ್ಲಿ ಸ್ಟೋರ್ ಮಾಡಿಟ್ಟು, ಸ್ವಲ್ಪ ದಿವಸ ತಡೆದು ಅದನ್ನು ಇನ್ನೊಬ್ಬರಿಗೆ ಮಾರಿದಾಗ ಲಕ್ಷಾಂತರ ರೂಪಾಯಿ ಲಾಭವನ್ನು ಮಾಡಿಕೊಂಡರು. ಯಾವ ವ್ಯಾಪಾರಸ್ಥರು ಅವತ್ತು ತೆಗೆದುಕೊಂಡು ಬಂದರು, ಸಪೋರ್ಟ್ ಪ್ರೈಸ್ ಕೊಟ್ಟಿದ್ದರು ಅವರೇ ವಾಪಸ್ಸು

ತೆಗೆದುಕೊಂಡು ಲಾಭ ಮಾಡಿಕೊಂಡರು. ಅದಕ್ಕೆ ಸಾಕಷ್ಟು ಆಗ್ರಹ ಇತ್ತು, ನಾನೇ ನೋಡಿದೆ. ನನಗೆ ಕೊಡಿಸಿ, ಇವರಿಗೆ ಕೊಡಿಸಿ ಎಂದು ರೈತರು ಅವತ್ತು ಏನು ಮಾಲು ಖರೀದಿಗೆ ಇಟ್ಟಿದ್ದರು, ಅದನ್ನು ಇಂತಹ ವ್ಯಾಪಾರಸ್ಥರ ಪರವಾಗಿ ಕೊಡಿ ಎಂದು ಹೇಳುವಂತಹ ಪರಿಸ್ಥಿತಿ ಹಾಗೂ ಬಹಳಷ್ಟು ಬೇಡಿಕೆ ಬಂದಿತ್ತು. ಆ ಪರಿಸ್ಥಿತಿಯಿಂದಾಗಿ ನಾನು ಹೇಳಿದ್ದೇನೆ, ಇವತ್ತು ಬೆಲೆಗಳು ಬಿದ್ದಿದೆ. ಬಹುತೇಕ ಅದರ ಲಾಭ ವ್ಯಾಪಾರ ವರ್ಗಕ್ಕೆ, ವರ್ತಕ ವರ್ಗಕ್ಕೆ, ಎಕ್ಸ್‌ಪೋರ್ಟ್ ಮಾಡುವಂತಹ ಜನರಿಗೆ, ಇನ್ನಾರಿಗೋ ಆಗುವಂತಹ ಸನ್ನಿವೇಶವಾಗಿದೆ. ಇವತ್ತು ಸಾಲ ಮಾಡಿದಂತಹ ರೈತರಿಗೆ ಅವರ ಸಾಲ ವಾಪಸ್ಸು ಕೊಡುವಂತಹ ಸಂದರ್ಭ ಸಹ ಒದಗಿಲ್ಲ. ಅವನು ಯಾವ ಬೆಳೆ ಬೆಳೆಯುತ್ತಾನೆ, ಅದಕ್ಕೆ ಎಷ್ಟು ಬಂಡವಾಳ ಹಾಕುತ್ತಾನೆ, ಆ ಬಂಡವಾಳ ಸಹ ವಾಪಸ್ಸು ಬರದೆ ಇರುವಂತಹ ಪರಿಸ್ಥಿತಿ ಈ ದೇಶದಲ್ಲಿ ಹಾಗೂ ರಾಜ್ಯದಲ್ಲಿ ರೈತನಿಗೆ ಒದಗಿದೆ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಹಾಗಾಗಿ ಬಹಳ ಸಂಕಷ್ಟದಲ್ಲಿ ಇದ್ದಂತಹ ರೈತ ವರ್ಗವನ್ನು ಇವತ್ತು ಅವರಷ್ಟಕ್ಕೆ ಅವರನ್ನೇ ಬಿಟ್ಟರೆ ಏನಾಗಬಹುದು? ಒಂದು ಕಡೆ ಅವರ ಹತ್ತಿರ ಬಂಡವಾಳ ಇಲ್ಲ. ಇವತ್ತು ಅವನು ಎಷ್ಟು ಸಾಲ ಪಡೆಯಬಹುದಾಗಿತ್ತು, ಅಥವಾ ಬಂಡವಾಳವನ್ನು ಹೊರಗಡೆಯಿಂದ ತರಬಹುದಾಗಿತ್ತು, ಅದು ಮುಗಿದುಹೋಗಿದೆ. ಅವನು ಸಾಲಗಳನ್ನು ಪಡೆದಂತಹ ಸಂಸ್ಥೆಗಳಲ್ಲಿ, ಅದು ಡಿಸಿಸಿ ಬ್ಯಾಂಕ್ ಅಥವಾ ಸೊಸೈಟಿಗಳಲ್ಲಿ ಪಡೆದಂತಹ ಸಾಲ ಒಂದು ರೂಪಾಯಿ ಆಗಿದ್ದರೆ, ಅದು 10 ರೂಪಾಯಿಗೆ ಏರಿರುವಂತಹ ಪರಿಸ್ಥಿತಿ ಬಂದಿದೆ. ಹೊಸ ಸಾಲವನ್ನು ಪಡೆಯುವಂತಹ ಸ್ಥಿತಿಯಲ್ಲಿ ಅವನಿಲ್ಲ ಇವತ್ತು ಖಾಸಗಿಯಾಗಿ ಸಾಲವನ್ನು ಪಡೆಯುವಂತಹ ಪರಿಸ್ಥಿತಿಯಲ್ಲೂ ಸಹ ಇಲ್ಲ. ಕಾರಣವೇನೆಂದರೆ ಸಾಲ ತೆಗೆದುಕೊಂಡರೆ ಅವರಿಗೆ ವಾಪಸ್ಸು ಕೊಡುವುದಕ್ಕೆ ಸಾಧ್ಯವಿಲ್ಲ. ಇವರಿಗೆ ಭವಿಷ್ಯವೇ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನು ಹೊಸ ವ್ಯವಸ್ಥೆಗೆ ನಾವೆಲ್ಲಾ ಹೊಂದಿಕೊಳ್ಳಬೇಕು. ಇವತ್ತೇನು ಜಾಗತಿಕ ವ್ಯಾಪಾರ ಒಪ್ಪಂದದ ಸದಸ್ಯರಾಗಿ ನಮ್ಮ ರಾಷ್ಟ್ರ ಮುಂದುವರೆದಿದೆ. ಅದರ ಮೂಲಕ ನಮ್ಮ ಇರುವಿಕೆಯನ್ನು, ನಮ್ಮ ವ್ಯವಹಾರವನ್ನು, ನಮ್ಮ ಉದ್ಯೋಗವನ್ನು ಅದರ ತತ್ವಕ್ಕೆ ಅನುಗುಣವಾಗಿ ಬದಲಾವಣೆ ಮಾಡಿಕೊಳ್ಳಬೇಕಾದಂತಹ ಸನ್ನಿವೇಶ ಬಂದಿದೆ. ಇವತ್ತು ನಾವು ದೊಡ್ಡ ದೊಡ್ಡ ವಿದೇಶಿ ರಾಷ್ಟ್ರಗಳೊಂದಿಗೆ ಹೋಲಿಸಿದಾಗ ಯಾವ್ಯಾವ ದೇಶದಲ್ಲಿ ರೈತರು ಕಡಿಮೆ ಪ್ರಮಾಣದಲ್ಲಿ ಇದ್ದಾರೆಂದರೆ ಅಮೇರಿಕಾದಲ್ಲಿ ಶೇಕಡ ಎರಡರಷ್ಟು ಮಾತ್ರ ಕೃಷಿಯಲ್ಲಿ ಅವಲಂಭನೆಯಾಗಿದ್ದಾರೆ. ಆದರೆ ಅವರಲ್ಲಿ ದೊಡ್ಡ ಪ್ರಮಾಣದಲ್ಲಿ ಇರುವಂತಹ ಕೃಷಿ ಉತ್ಪಾದನೆ, ಅದಕ್ಕೆ ಇರುವಂತಹ ಸರ್ಕಾರದ ಬೆಂಬಲ ಅದರ ಜೊತೆಗೆ ನಾವು ಪೈಪೋಟಿ ಮಾಡುವಂತಹ ಪರಿಸ್ಥಿತಿಯಲ್ಲಿದ್ದೇವೆ. ಅನೇಕ ವಿಧವಾದಂತಹ ಬಹುರಾಷ್ಟ್ರೀಯ ಕಂಪನಿಗಳ ಜೊತೆ ಪೈಪೋಟಿ ಮಾಡುವಂತಹ ಸ್ಥಿತಿಯಲ್ಲಿ ನಮ್ಮ ದೇಶದ ಕೃಷಿ ಇದೆ. ಇದು ಸಾಧ್ಯವೇ ಎಂದು ನಾವು

ನೋಡಿಕೊಳ್ಳಬೇಕಾಗಿದೆ. ಇವತ್ತು ಒಂದು ಕಡೆ ಬಂಡವಾಳ ಇಲ್ಲ, ಇನ್ನೊಂದು ಕಡೆ ತಾಂತ್ರಿಕ ಜ್ಞಾನ ಇಲ್ಲ, ಮತ್ತೊಂದು ಕಡೆ ಯಾವುದೇ ಸ್ಪಷ್ಟವಾದ ಮಾರ್ಗದರ್ಶನ ಬರುತ್ತಿಲ್ಲ. ಹೊಸ ಹೊಸ ವಿಚಾರಗಳ ಬಗ್ಗೆ ಕ್ರಮವನ್ನು ಈ ಸರ್ಕಾರ ತೆಗೆದುಕೊಂಡಿದೆ. ಅದಾಗ್ಯೂ, 70 ಭಾಗದ ಜನ ಅದರ ಮೇಲೆ ಅವಲಂಭಿತವಾಗಿದ್ದೇವೆ, ಅವರನ್ನು ಸರಿಯಾದಂತಹ ದಾರಿಯಲ್ಲಿ, ಸರಿಯಾದಂತಹ ಮಾರ್ಗದಲ್ಲಿ ಅವರೇ ತಮ್ಮನ್ನು ತಾವು ರೂಪಿಸಿಕೊಂಡು, ತಮ್ಮ ಜೀವನವನ್ನು ಈ ವೃತ್ತಿಯನ್ನು ರೂಪಿಸಿಕೊಂಡು ಹೆಚ್ಚುವರಿ ಬೆಳೆಯನ್ನು ಬೆಳೆದು, ಉತ್ಪಾದನೆ ಜಾಸ್ತಿ ಮಾಡಿಕೊಂಡು ತಮ್ಮ ಉತ್ಪಾದನೆ ವೆಚ್ಚವನ್ನು ಕಡಿಮೆ ಮಾಡಿಕೊಂಡು, ಹೊರ ಜಗತ್ತಿನೊಂದಿಗೆ, ಹೊರ ಸಂಸ್ಥೆಗಳೊಂದಿಗೆ ಮಾರುಕಟ್ಟೆಯಲ್ಲಿ ನಾವು ಪೈಪೋಟಿ ಮಾಡಿ ಲಾಭ ಮಾಡಿಕೊಂಡು ದೊಡ್ಡ ವ್ಯವಸ್ಥೆಗೆ, ಹೊಸ ಉದ್ಯಮ ಸ್ಥಿತಿಗೆ ನಾವು ಬರಬೇಕಾದರೆ ಬಹಳ ಕಷ್ಟವಿದೆಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದುದರಿಂದ ಇಲಾಖೆ ಆ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಮಾಡಬಯಸುತ್ತೇನೆ. ಇವತ್ತು ಕೃಷಿ ಇಲಾಖೆ ಬಹಳ ದೊಡ್ಡ ಇಲಾಖೆ. ಬಹುತೇಕ ತಾಲ್ಲೂಕು ಮಟ್ಟದಲ್ಲಿ ಒಬ್ಬ ಸಹಾಯಕ ನಿರ್ದೇಶಕನ ಒಂದು ನೇತೃತ್ವದಲ್ಲಿ ಈ ಇಲಾಖೆ ಕೆಲಸ ಮಾಡುತ್ತಿದೆ. ಆದರೆ ಒಟ್ಟಾರೆ ಇದರ ಮೇಲೆ ವೆಚ್ಚ ಮಾಡಿದಂತಹ ಹಣವನ್ನು ನೋಡಿದಾಗ ಬೇರೆ ಬೇರೆ ತಾಲ್ಲೂಕಿಗೆ ಒಂದು ಲಕ್ಷ ಬಂತು, ಒಂದು ತಾಲ್ಲೂಕಿಗೆ ಹತ್ತು ಸಾವಿರ ಇನ್ನೊಂದು ತಾಲ್ಲೂಕಿಗೆ ಇವತ್ತು ಸಾವಿರ ಸಿಕ್ಕಿತ್ತು, ಅದು ಪರಿಕರಗಳನ್ನು ಅಥವಾ ವಿಶೇಷ ಕಾರ್ಯಕ್ರಮಗಳಿಗೆ ಸಣ್ಣ ಪ್ರಮಾಣದಲ್ಲಿ ರೈತರಿಗ ಆರ್ಥಿಕವಾಗಿ ಬೆಂಬಲವನ್ನು ನೀಡುತ್ತಿದೆ. ತಾಂತ್ರಿಕ ಅಥವಾ ಎಕ್ಸ್‌ಟೆನ್‌ಷನ್ ಕೊಡುವಂತಹ ಸ್ಥಿತಿ ಅವರಿಗೆ ಇದೆ. ಭೂಮಿಯ ಸಾರವನ್ನು ರಕ್ಷಣೆ ಮಾಡುವುದಕ್ಕೆ ಒಂದು ಸಾಯಿಲ್ ಕನ್‌ಸರ್ವೇಷನ್ ವಿಭಾಗ ಇದೆ. ಆದರೆ ಇವತ್ತು ಏನು ರೈತ ಮಿತ್ರ ಕೇಂದ್ರ ಎಂದು ಹೊಸ ಯೋಜನೆ ಮಾಡಿದ್ದೇವೆ, ಅದಕ್ಕೆ ಬೇಕಾದಂತಹ ಮ್ಯಾನ್‌ಪವರ್ ಅಥವಾ ತಾಂತ್ರಿಕ ಮಾರ್ಗದರ್ಶನವಾಗಿರಬಹುದು, ಅದು ಅಷ್ಟು ಉಪಯುಕ್ತವಾಗಿ ನಡೆಯುತ್ತಿಲ್ಲವೆನ್ನುವ ಭಾವನೆ ಇದೆ. ಅಂತಹ ಒಂದು ದೊಡ್ಡ ಜವಾಬ್ದಾರಿ ಕೃಷಿ ಮಂತ್ರಿಗಳ ಮೇಲೆ ಇದೆಯೆಂದು ನಾನು ತಿಳಿದುಕೊಳ್ಳುತ್ತೇನೆ. ಈ ಇಲಾಖೆ ಕಾಲಾಂತರದಲ್ಲಿ ಏನು ಮೂಲ ಉದ್ದೇಶ ಇತ್ತು, ಎಕ್ಸ್‌ಟೆನ್‌ಷನ್ ಕೆಲಸ ಮಾಡುವುದರಲ್ಲಿ ಹಿಂದೆ ಬೀಳುತ್ತಿದೆ ಎಂದರೆ ತಪ್ಪಿಲ್ಲವೆಂದು ನಾನು ಭಾವಿಸುತ್ತೇನೆ. ಇವತ್ತು ಕೃಷಿ ಇಲಾಖೆಯಲ್ಲಿ ಅನೇಕ ಹುದ್ದೆಗಳು ಖಾಲಿ ಇದೆ. ಇಲಾಖೆಯಲ್ಲಿ ಅನೇಕರು ಪ್ರಮೋಷನ್ ಸಿಕ್ಕದೆ ಬಹಳಷ್ಟು ನಿರಾಶೆಗೊಂಡಂತಹ ಪರಿಸ್ಥಿತಿ ಇದೆ. ಮೊದಲು ಕೆಲಸಕ್ಕೆ ಸೇರಿಕೊಂಡ ನಂತರ ರಿಟೈರ್ಡ್ ಆಗುವಾಗ ಅವರಿಗೆ ಎರಡು ಮೂರು ಪ್ರಮೋಷನ್ ಅಷ್ಟೇ ಸಿಕ್ಕಿರುವುದು. ಅಸಿಸ್ಟೆಂಟ್ ಅಗ್ರಿಕಲ್ಚರ್ ಆಫೀಸರ್ ಆಗಿ ಸೇರಿದಂತಹ ವ್ಯಕ್ತಿ ಕೇವಲ ಅಗ್ರಿಕಲ್ಚರ್ ಆಫೀಸರ್ ಆಗಿ ಆಫೀಸರ್ ಆಗಿ ರಿಟೈರ್ಡ್ ಆದಂತಹ ಅನೇಕ ಉದಾಹರಣೆಗಳು

ನ್ನ ಗಮನಕ್ಕೆ ಬಂದಿದೆ. ಇನ್ನೂ ಮುಂದೆ ಹೋದರೆ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಆಗುವಂತಹ ಒಂದು ಸನ್ನಿವೇಶ ಇದೆ. ಅನೇಕ ದೊಡ್ಡದೊಡ್ಡ ವ್ಯಕ್ತಿಗಳು ಈ ಇಲಾಖೆಯನ್ನು ನಡೆಸಿಕೊಂಡು ಹೋದಂತಹ ಲೀಡರ್‌ಗಳನ್ನು ಕೊಟ್ಟಂತಹ ಉದಾಹರಣೆಯನ್ನು ನಾವು ನೋಡಿದ್ದೇವೆ ಇವತ್ತು ಐ.ಎ.ಎಸ್. ಅಧಿಕಾರಿಗಳು ಉತ್ತಮರು ಇದ್ದಾರೆ. ಅದರಲ್ಲಿ ಎರಡು ಮಾತಿಲ್ಲ. ಆದರೆ ಅದರ ಉಪಯುಕ್ತತೆ ಜನರಿಗೆ ಈ ಇಲಾಖೆಗೆ ಹೇಗಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಯಾರೇ ಆಗಲಿ ಒಬ್ಬ ತಾಂತ್ರಿಕವಾಗಿ ಸೌಂಡ್ ಆಗಿ ಇರುವಂತಹ, ಎಲ್ಲಾ ಪ್ರಬುದ್ಧತೆಯನ್ನು ಹೊಂದಿದಂತಹ, ಜ್ಞಾನವನ್ನು ಹೊಂದಿದಂತಹ ವ್ಯಕ್ತಿ, ಸಾಮಾನ್ಯ ಜನರಿಗೆ ವಿಚಾರಗಳನ್ನು ಮುಟ್ಟುವಂತೆ ಕೆಲಸ ಮಾಡಿ ಆ ಇಲಾಖೆಯನ್ನು ಮುಂದುವರೆಸುವಂತಹ ಕೆಲಸವಾಗಬೇಕು. ಈ ವಿಚಾರವನ್ನು ಹೇಳುತ್ತಾ ನಾನು ಕಮೀಷನರ್‌ರವರು ಮಾಡಿರುವಂಥಾದ್ದು ತಪ್ಪು ಎಂದು ಹೇಳುವುದಿಲ್ಲ. ಅವರು ಬಹಳ ಉತ್ತಮವಾದಂತಹ ವ್ಯಕ್ತಿಗಳಾಗಿದ್ದಾರೆ. ಆ ಇಲಾಖೆಯ ಬಹಳ ಉಪಯುಕ್ತವಾದಂತಹ ಇಲಾಖೆಯಾಗಿದೆ. ಆದರೆ ಇದು ಸಾಮಾನ್ಯವಾದ ರೈತನನ್ನು ಹೋಗಿ ಮುಟ್ಟಬೇಕಾಗುತ್ತದೆ. ತಾವು ದಯವಿಟ್ಟು ಇದನ್ನು ಗಮನಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕೊನೆಯದಾಗಿ ನಾವು ಬಯೋಟೆಕ್ನಾಲಜಿಯ ಬಗ್ಗೆ ಸಾಕಷ್ಟು ಮಾತನಾಡುತ್ತೇವೆ. ಈ ಬಯೋಟೆಕ್ನಾಲಜಿಗೆ ಸರ್ಕಾರವೂ ಸಹ ಸಾಕಷ್ಟು ಒತ್ತನ್ನು ನೀಡುತ್ತಿದೆ, ಅದರಲ್ಲಿ ಏನೂ ಸಂಶಯವಿಲ್ಲ. ಆದರೆ ಕಾಲವನ್ನು ನಾವು ಬಹಳಷ್ಟು ಕಳೆಯಬಾರದು, ನಮ್ಮ ಶರದ್ ಜೋಶಿಯವರು ರೈತ ಚಳುವಳಿಯನ್ನು ಮಾಡಿದಂಥವರು, ನಾವು ನರಗುಂದ ತಾಲ್ಲೂಕಿನಲ್ಲಿ ಮಾಡುವಾಗ ಅವರು ನಿಪ್ಪಾಣಿಯಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಮಾಡುತ್ತಿದ್ದರು. ಅವರು ನಾಲ್ಕೈದು ವರ್ಷಗಳಲ್ಲಿ, ಎಂಟು ವರ್ಷಗಳಲ್ಲಿ ಬದಲಾವಣೆ ಬರುತ್ತದೆಂದು ಹೇಳುತ್ತಿದ್ದರು. ಆದರೆ ನನ್ನದೇ ಆದಂತಹ ಸಂಶಯ ಅದರಲ್ಲಿ ಇದೆ. ಸುಮಾರು ನಾವು 8-10 ವರ್ಷಗಳ ಕಾಲವನ್ನು ಈಗಾಗಲೇ ವ್ಯಯ ಮಾಡಿದ್ದೇವೆ. ಇಲ್ಲಿಯವರೆಗೆ ಸರ್ಕಾರದಿಂದಾಗಲಿ, ಅಥವಾ ಸ್ವಾಭಾವಿಕವಾಗಿ ಬರುವಂತಹ ಸ್ವಾತಂತ್ರವನ್ನು ನೀಡಿದಂತಹ ಸನ್ನಿವೇಶದಲ್ಲಿ ಅಥವಾ ಮುಕ್ತವಾಗಿ ಇರುವಂತಹ ಸನ್ನಿವೇಶದಲ್ಲಿ ಯಾವ ರೀತಿಯಾಗಿ ನಾವು ಸ್ಪಂದನ ಮಾಡಬೇಕಾಗಿತ್ತು, ಯಾವ ರೀತಿ ವರ್ತನೆ ಮಾಡಬೇಕಾಗಿತ್ತು? ಯಾವ ರೀತಿಯಾಗಿ ನಾವು ರೀ-ಕನ್‌ಸ್ಟ್ರಕ್ಟ್ ಮಾಡಬೇಕಾಗಿತ್ತು, ಈ ರೈತ ವರ್ಗವು ಲವಲವಿಕೆಯಿಂದ ಕೂಡಿ ಅದನ್ನು ಮಾಡುವಂತಹ ಸಂದರ್ಭ ಬರಬೇಕಾಗಿತ್ತು. ಆದರೆ ಅದು ಈ ರೀತಿಯಾಗಿ ಆಗಿಲ್ಲ, ನಾವು ವರ್ಷವರ್ಷ ನೆಗೆಟೀವ್ ಕಡೆಗೆ ಹೋಗುತ್ತಿದ್ದೇವೆ. ಹಾಗಾಗಿ ನಾವು ಬರುವ ನಾಲ್ಕಾರು ವರ್ಷಗಳು ಎಷ್ಟರಮಟ್ಟಿಗೆ ಪ್ರಯೋಜನಕಾರಿಯಾಗಿ ಆಗುತ್ತದೆ? ಎಂದು ಹೇಳುವಾಗ ಅದರಲ್ಲಿ ಸರ್ಕಾರದ ಪಾತ್ರವಿಲ್ಲವೆಂದು ಹೇಳಿದಾಗ, ಅದು ಸಾಧ್ಯವಾಗುತ್ತದೆಂದು ಹೇಳುವಂಥಾದ್ದರಲ್ಲಿ ನನಗೆ ನಂಬಿಕೆ ಇಲ್ಲ. ಸರ್ಕಾರ ಬಹಳ ದೊಡ್ಡ ಪ್ರಮಾಣದಲ್ಲಿ ಈ ಕ್ಷೇತ್ರವನ್ನು

ನೋಡಬೇಕಾಗುತ್ತದೆ, ದೊಡ್ಡ ಪ್ರಮಾಣದಲ್ಲಿ ಬಂಡವಾಳ ಸಿಗುವಂತೆ ಮಾಡಬೇಕಾಗುತ್ತದೆ. ಮತ್ತೆ ತಾಂತ್ರಿಕ ಜ್ಞಾನವನ್ನು ಒದಗಿಸುವಂಥಾದ್ದು ಆಗಬೇಕಾಗುತ್ತದೆ. ತಾವು ಎಲ್ಲಾ ರೀತಿಯಲ್ಲೂ ರೈತರಿಗೆ ಬೆಂಬಲವನ್ನು ಕೊಡಬೇಕಾಗುತ್ತದೆ. ಅದನ್ನು ಮಾಡಿದಾಗ ಮಾತ್ರ ಈ ಒಂದು ಹೊಸ ವಾತಾವರಣವನ್ನು ಎದುರಿಸಿ, ಈಜಿ ಜಯಿಸುವುದಕ್ಕೆ ಸಾಧ್ಯವಾಗುತ್ತದೆಯೆಂದು ಹೇಳುತ್ತೇನೆ. ಇದಕ್ಕಾಗಿ ಹೊಸ ಹೊಸ ಕಾರ್ಯಕ್ರಮಗಳು ಏನಿವೆ, ಅದು ಬಿ.ಟಿ. ಹತ್ತಿ ತಳಿ ಇರಬಹುದು. ಈ ಬಯೋ ಟೆಕ್ನಾಲಜಿ ಬೇರೆ ಬೇರೆ ಫಸಲುಗಳಿಗೆ ಇರಬಹುದು, ಅವುಗಳಿಗೆ ಬೇಗ ಒತ್ತು ಕೊಡಬೇಕು. ತಮಗೆ ಗೊತ್ತಿರುವಂತೆ ವಿಶ್ವವಿದ್ಯಾಲಯಗಳು ಯಾವ ಮಟ್ಟದಲ್ಲಿ ಅವರು ಸಂಶೋಧನೆಗಳನ್ನು ಮಾಡಬೇಕಾಗಿತ್ತೋ, ಅದಕ್ಕೆ ಯಾವ ರೀತಿಯಾಗಿ ಹಣಕಾಸಿನ ನೆರವು ಸಿಗಬೇಕಾಗಿತ್ತೋ, ಅದು ಆಗುತ್ತಿಲ್ಲವೆನ್ನುವಂತಹ ಮಾತನ್ನು ಹೇಳಿದರೆ ತಪ್ಪಾಗುವುದಿಲ್ಲ. ಇವತ್ತಿಗೂ ಅವರು ಸಂಬಳವನ್ನು ಪಡೆಯುವುದಕ್ಕೆ, ಸ್ಥಾನಮಾನಗಳನ್ನು ಪಡೆಯುವಂಥಾದಕ್ಕೆ, ಪುರಸ್ಕಾರಗಳನ್ನು ನಡೆಯುವಂಥಾದ್ದಕ್ಕೆ, ಈ ಕೃಷಿ ವಿಶ್ವವಿದ್ಯಾಲಯಗಳು ಒಂದು ಸಂಸ್ಥೆಯಾಗಿ ಮಾತ್ರ ಮಾರ್ಪಾಡಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅವರು ನೈಜವಾಗಿ ರೈತರಿಗೆ ಸಹಾಯ ಮಾಡಲು ಮುಂದೆ ಬರಬೇಕಾದರೆ ದೊಡ್ಡ ಪ್ರಮಾಣದಲ್ಲಿ ಸಂಶೋಧನೆಯ ಕೆಲಸ, ಎಕ್ಸ್‌ಟೆನ್ಷನ್ ಕೆಲಸವನ್ನು ಮಾಡಬೇಕಾದಂತಹ ಅವಶ್ಯಕತೆ ಇದೆ. ಅದಕ್ಕೆ ಪೂರಕವಾದಂತಹ ಹಣಕಾಸಿನ ಬೆಂಬಲವನ್ನು ಸರ್ಕಾರ ದೊಡ್ಡ ಪ್ರಮಾಣದಲ್ಲಿ ನೀಡಬೇಕಾಗುತ್ತದೆ. ಇವತ್ತು ಧಾರವಾಡದಲ್ಲಿ ಮಾಡಿದಂತಹ ಸಮಿಟ್ ಆಗಿರಬಹುದು, ಕೃಷಿ ಆಯೋಗವಾಗಿರಬಹುದು, ಅವರು ಕೊಟ್ಟಿರುವಂತಹ ಮತ್ತು ತೆಗೆದುಕೊಂಡಿರುವಂತಹ ನಿರ್ಣಯಗಳನ್ನು ಆದಷ್ಟು ಬೇಗ ಜಾರಿಗೆ ತರುವಂತಹ ಕೆಲಸವಾಗಬೇಕೆಂದು ಹೇಳುತ್ತಾ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಗುಂಡಪ್ಪ ವಕೀಲ್ (ಔರಾದ್) :— ಮಾನ್ಯ ಉಪಾಧ್ಯಕ್ಷರೆ ನಾವು ನಮ್ಮ ರಾಜ್ಯದ ಮಟ್ಟಿಗೆ ಮಾತನಾಡಬೇಕೆಂದರೆ ಕಳೆದ 53-54 ವರ್ಷಗಳನ್ನು ಹೊರತುಪಡಿಸಿ ನಮ್ಮ ಹಿರಿಯರು ರಾಜ್ಯವನ್ನು ಕಟ್ಟಿದ್ದಾರೆ, ಕೆರೆಕಟ್ಟೆಗಳನ್ನು ನಿರ್ಮಾಣ ಮಾಡಿದ್ದಾರೆ, ಎಷ್ಟೋ ಯುದ್ಧಗಳನ್ನು ಮಾಡಿದ್ದಾರೆ, ಅವರು ಪ್ರಗತಿಪರವಾದಂತಹ ಕೆಲಸಗಳನ್ನು ಮಾಡಿದ್ದಾರೆ. ಅವರು ತಮ್ಮಲ್ಲಿರುವಂತಹ ಆದಾಯವನ್ನು ಕ್ರೋಢೀಕರಿಸಿ ಪ್ರಗತಿಪರವಾದಂತಹ ಕೆಲಸವನ್ನು ಮಾಡಿದ್ದಾರೆ. ಆದರೆ ಇವತ್ತು ಏನಾಗಿದೆ ಎಂದರೆ ನಮ್ಮಲ್ಲಿರುವಂತಹ ಆದಾಯವನ್ನು ಕಳೆದುಕೊಂಡಿದ್ದೇವೆ, ಇಡೀ ದೇಶದಲ್ಲೇ ಈ ಪರಿಸ್ಥಿತಿಯಾಗಿದೆ. ಈಗ ನಮ್ಮಲ್ಲಿ ಏನೂ ಇಲ್ಲ, ನಾವು ಸಾಲವನ್ನು ತರುತ್ತಿದ್ದೇವೆ, ನಮಗೆ ಎಲ್ಲಿ ಸಾಲ ಸಿಗುತ್ತದೆಯೋ ಎಂದು ಹುಡುಕುವಂತಹ ಪರಿಸ್ಥಿತಿಯಲ್ಲಿದೆ, ಯಾರು ಸಾಲವನ್ನು ಕೊಡುತ್ತಾರೋ ಅವರ ಬೆನ್ನ ಹಿಂದೆ ಬೀಳುವಂತಹ ವ್ಯವಸ್ಥೆ ನಮ್ಮ ದೇಶದಲ್ಲಿ ಬೆಳೆದುಕೊಂಡು ಬರುತ್ತಿದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಮ್ಮಲ್ಲಿರುವಂತಹ

ಆದಾಯವನ್ನು ಖರ್ಚು ಮಾಡುವಾಗ ನಾವು ಹೆಚ್ಚು ಖರ್ಚು ಮಾಡಬಹುದು, ಕಡಿಮೆಯಾದರೂ ಖರ್ಚು ಮಾಡಬಹುದು, ಆ ಮಾತು ಬೇರೆ, ಅದರ ಪರಿಣಾಮ ನಮ್ಮ ಮೇಲೆ ಹೆಚ್ಚು ಆಗುತ್ತಾ ಇಲ್ಲ. ಆದರೆ ನಾವು ಬೇರೆ ದೇಶಗಳಿಂದ, ಸಂಸ್ಥೆಗಳಿಂದ ಸಾಲವನ್ನು ತೆಗೆದುಕೊಂಡು ಬಂದು, ಈ ಹಣವನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡುತ್ತಿಲ್ಲವೆಂದರೆ ಖಂಡಿತವಾಗಿ ನಮಗೆ ಜಾಗತಿಕ ಭವಿಷ್ಯವಿಲ್ಲವೆನ್ನುವ ಮಾತನ್ನು ಈ ಸಭೆಯಲ್ಲಿ ಹೇಳಬಯಸುತ್ತೇನೆ. ಇವತ್ತು ಜಾಗತಿಕ ಸಂಸ್ಥೆಗಳಿಂದ, ಹುಡ್ಕೋದವರಿಂದ, ಜರ್ಮನ್ ಫಂಡ್, ಈ ರೀತಿಯಾಗಿ ಎಲ್ಲಾ ವಿದೇಶಗಳಿಂದ ಸಾಲವನ್ನು ಬಡ್ಡಿರೂಪದಲ್ಲಿ ತೆಗೆದುಕೊಂಡು ಬಡ್ಡಿಯನ್ನು ಕಟ್ಟುತ್ತೇವೆ, ಈ ಬಡ್ಡಿ ಬೆಳೆಯುತ್ತಿರುತ್ತದೆ. ಈ ರೀತಿಯಾಗಿ ಹಣವನ್ನು ನಾವು ತಂದು ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿದರೆ ಖಂಡಿತವಾಗಿಯೂ ಭವಿಷ್ಯವಿದೆ, ಇಲ್ಲದಿದ್ದರೆ ಇಲ್ಲವೆನ್ನುವಂತಹ ಮಾತನ್ನು ಹೇಳುತ್ತಿದ್ದೇನೆ. ಈ ಸಭೆಯಲ್ಲಿ ಮಾನ್ಯ ಕೈಗಾರಿಕಾ ಮಂತ್ರಿಯವರು ಇದ್ದಾರೆ, ಅವರು ನಾನು ಹೇಳುವ ಮಾತನ್ನು ಗಮನಿಸಬೇಕು. ನಮ್ಮ ಬೀದರ್ ಜಿಲ್ಲೆ ಹಿಂದುಳಿದಿರುವಂತಹ ಜಿಲ್ಲೆಯೆಂದು ಘೋಷಿಸಿದ್ದಾರೆ, ಇಲ್ಲಿ 1989ರಿಂದ ಸುಮಾರು 5300 ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದಾರೆ. ಆದರೆ ಇವತ್ತು ಅಲ್ಲಿ ಹೋಗಿ ನೋಡಿದರೆ ಕೇವಲ ಐದು ಕೈಗಾರಿಕೆಗಳು ಮಾತ್ರ ಕೆಲಸ ಮಾಡುತ್ತಿವೆ, ಇನ್ನು ಉಳಿದಂತಹ 5,295 ಕೈಗಾರಿಕೆಗಳು ಮುಚ್ಚಿ ಹೋಗಿವೆ, ಇವತ್ತು ಇಂತಹ ನೀತಿಯನ್ನು ನಾವು ಮಾಡುತ್ತಿದ್ದೇವೆ. ಇದನ್ನು "ಇಂಡಸ್ಟ್ರಿಯಲ್ ಬ್ಯಾಕ್‌ವರ್ಡ್ ಏರಿಯಾ" ಎಂದು ಡಿಕ್ಲೇರ್ ಮಾಡಿ ಶೇ.35ರಷ್ಟು ಸಬ್ಸಿಡಿಯನ್ನು ಕೊಡುತ್ತಾರೆಂದು ಘೋಷಣೆಯನ್ನು ಮಾಡಿದರು. ಸ್ಟೇಟ್ ಗೌವರ್ನಮೆಂಟ್‌ನವರು ಮ್ಯಾಚಿಂಗ್ ಸಬ್ಸಿಡಿಯನ್ನು ಕೊಡುತ್ತೇವೆಂದು ಘೋಷಣೆ ಮಾಡಿದರು. ಇಲ್ಲಿ ಯಾರು ಯಾರೋ ಬಂದು ಇಂಡಸ್ಟ್ರೀಯನ್ನು ಹಾಕಿದರು, ಸಬ್ಸಿಡಿಯನ್ನು ಎತ್ತಿಕೊಂಡು ಹೋದರು. ಈ ಬೀದರ್ ಜಿಲ್ಲೆಯ ಜನರು ಈ 5300 ಕೈಗಾರಿಕೆಗಳು ಪ್ರಾರಂಭವಾದರೆ ಸಾವಿರಾರು ಜನರಿಗೆ ಉದ್ಯೋಗ ಸಿಗುತ್ತದೆನ್ನುವಂತಹ ವಿಶ್ವಾಸದಲ್ಲಿದ್ದರು, ಆದರೆ ಅದೆಲ್ಲಾ ಸುಳ್ಳಾಯಿತು. ನಾವು ಈ ರೀತಿ ಒಂದು ಸರಿಯಾದ ಉದ್ದೇಶವಿಲ್ಲದೇ, ಗೊತ್ತುಗುರಿಯಿಲ್ಲದೇ ಯಾವುದೇ ಫೀಲ್ಡ್‌ನಲ್ಲಿ ಕೆಲಸ ಮಾಡಿದರೆ ಅಥವಾ ಯೋಜನೆಗಳನ್ನು ಹಾಕಿದರೆ ಖಂಡಿತವಾಗಿ ಉದ್ಧಾರವಾಗುವುದಕ್ಕೆ ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ನಾನು ಮತ್ತೊಂದು ಮಾತನ್ನು ಹೇಳಬಯಸುವುದೆನೆಂದರೆ "ನಮ್ಮ ಯಾವ ಕಾಲು ಎಡವಿ, ಬೆರಳಿಗೆ ನೋವಾಗುತ್ತದೆ, ಅದಕ್ಕೆ ಪದೇ ಪದೇ ಏಟಾಗುತ್ತದೆ" ಎನ್ನುವ ಮಾತನ್ನು ಹೇಳುತ್ತೇವೆ. ಅದೇ ರೀತಿಯಲ್ಲಿ ಬೀದರ್ ಜಿಲ್ಲೆಯಲ್ಲೂ ಕಂಟಿನ್ಯೂಯಸ್ ಆಗಿ ಹೊಡೆತದ ಮೇಲೆ ಹೊಡೆತ ಬೀಳುತ್ತಿದೆ. ಮಾನ್ಯ ಸಾರಿಗೆ ಮಂತ್ರಿಯವರು ಸಭೆಯಲ್ಲಿ ಇದ್ದಾರೆ, ಈ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ 1992ನೇ ಇಸವಿಯಲ್ಲಿ ಬೀದರ್ ಜಿಲ್ಲೆಯ ಭಾಲ್ಕಿಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ಟಿಕೇಟ್‌ಗಳು ಪ್ರಿಂಟ್ ಆಗಿ ಇಡೀ

ಕರ್ನಾಟಕ ರಾಜ್ಯದ ಬಸ್‌ಗಳಲ್ಲಿ ಖರ್ಚಾಗುತ್ತಿತ್ತು, ಮತ್ತೆ 1996ರಲ್ಲಿ 50ರ ನಕಲಿ ನೋಟುಗಳೂ ಸಹ ಬೀದರ್ ಜಿಲ್ಲೆಯಲ್ಲೇ ಪ್ರಿಂಟ್ ಆಗಿ ಸರ್ಕುಲೇಷನ್ ಆಗುತ್ತಿತ್ತು.

4.10 ಪಿಎಂ

ಬೀದರ್ ಜಿಲ್ಲೆಯಲ್ಲಿ ಇದನ್ನು ಪ್ರಿಂಟ್ ಮಾಡಿರತಕ್ಕಂಥಹ ವ್ಯಕ್ತಿ ಯಾರು ಎಂದರೆ ಜಿಲ್ಲಾ ಪಂಚಾಯಿತಿಯ ಪ್ರೆಸಿಡೆಂಟ್ ಅವರು. ಅದು ಪತ್ತೆ ಆಯಿತು. ಆ ಪ್ರಿಂಟ್ ಮಾಡತಕ್ಕಂಥ ಮೆಷಿನರಿ ಸಹ ಸಿಕ್ಕಿತು. ಆದರೆ ಏನಾಯಿತು? ಇಲ್ಲಿಯವರೆಗೆ ಏನೂ ಕ್ರಮ ಜರುಗಿಲ್ಲ. ಯಾರ ಮೇಲೂ ಕ್ರಮ ಆಗಿಲ್ಲ. ಬಸ್ಸಿನ ಟಿಕೇಟ್ ಪ್ರಿಂಟ್ ಮಾಡಿ, ಏನೂ ಇಲ್ಲ ಸ್ವತಂತ್ರತೆ ಇದೆ. ಏನು ಬೇಕಾದ್ದು ಮಾಡಿ. ಖೋಟಾ ನೋಟುಗಳನ್ನು ಪ್ರಿಂಟ್ ಮಾಡಿ, ಯಾರೂ ಕೇಳುವವರು ಇಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ಈಗ ಬಂದ್ ಮಾಡಿರುವಂತಹ ವಿಚಾರ ಅಲ್ಲ. ನಡೆಯುವಂತಹ ಸಂದರ್ಭದಲ್ಲಿ ಯಾರ‍್ಯಾರ ಕಾಲದಲ್ಲಿ ಏನೇನು ನಡೆಯಬೇಕೋ ಅದು ನಡೆದಿದೆ. ನಡೆದಿಲ್ಲ ಎಂಬ ವಿಚಾರ ಅಲ್ಲ. ಆದರೆ ಈ ಖಾಲಿ ಟಿಕೇಟ್ ಪ್ರಕರಣದಲ್ಲಿ ಎಷ್ಟು ಜನ ಶಾಮೀಲಾಗಿದ್ದರು, ಅವರ ವಿರುದ್ಧ ಮೊಕದ್ದಮೆ ಹಾಕುವುದರ ಜೊತೆಗೆ ಇವತ್ತು ನ್ಯಾಯಾಲಯದಲ್ಲಿ ಮೊಕದ್ದಮೆ ನಡೆಯುತ್ತಿದೆ. ತನಿಖೆ ನಡೆಸಿದ್ದೇವೆ. ಅದರಲ್ಲಿ ಭಾಗಿ ಆಗಿರುವಂತಹ ಹಿಂದಿನ ಸರ್ಕಾರದವರು ಮಾಡಿದ್ದಾರೆ, ಮಾಡಿಲ್ಲ ಎಂದಲ್ಲ. ಅದೇ ವಿಚಾರವಾಗಿ ಮುಂದುವರಿಯುತ್ತಿರುವಂತಹದು. ಆ ನ್ಯಾಯಾಲಯದ ತೀರ್ಪು ಬರುವವರೆಗಂತೂ ನಾವು ಕಾಯಬೇಕಲ್ಲಾ, ಅದರ ಮುಂಚಿತವಾಗಿ ನಾವು ಯಾವುದೇ ಆದೇಶವನ್ನು ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ನ್ಯಾಯಾಲಯದ ನಿಂದನೆ ನಾನು ಮಾಡಿದ ಹಾಗಾಗುತ್ತದೆ. ಯಾವುದೇ ಒಂದು ತೀರ್ಪು ಸರ್ಕಾರದ ವತಿಯಿಂದಾಗಲೀ ಅಥವಾ ಇಲಾಖೆಯ ವತಿಯಿಂದ ಆಗಲಿ ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ನ್ಯಾಯಾಲಯದ ನಿಂದನೆ ಆಗುತ್ತದೆ. ತನಿಖೆಯ ಹಂತದಲ್ಲಿದೆ. ತನಿಖೆ ಆದ ನಂತರ ಅದಕ್ಕೆ ಗುರಿಯಾಗಿರುವಂತಹ ಜನ ಯಾರು ಎಂದು ಗುರುತಿಸಿದ್ದೇವೆ. ಪೋಲೀಸ್ ಮೊಕದ್ದಮೆಗಳನ್ನು ಹಾಕಿದ್ದೇವೆ. ನ್ಯಾಯಾಲಯದಿಂದ ಅವರು ಜಾಮೀನು ಮೇಲೆ ಬಿಡುಗಡೆ ಆಗಿದ್ದಾರೆ. ಇವತ್ತು ನ್ಯಾಯಾಲಯಗಳಲ್ಲಿ ಮೊಕದ್ದಮೆಗಳು ಮುಂದುವರೆದಿವೆ. ತೀರ್ಪಿಗಾಗಿ ಕಾಯುತ್ತಿದ್ದೇವೆ. ನಂತರ ಸರ್ಕಾರ ನನ್ನ ಇಲಾಖೆ ನೇರವಾದಂತಹ ತೀರ್ಮಾನ ತೆಗೆದುಕೊಳ್ಳುತ್ತದೆ.

ಶ್ರೀ ಗುಂಡಪ್ಪ ವಕೀಲ್ :— ಸ್ವಾಮಿ ಇನ್ನು 1968ರಲ್ಲಿ ಕಾರಂಜಾ ಯೋಜನೆ 9 ಕೋಟಿ ರೂಪಾಯಿಗಳಲ್ಲಿ ಪ್ರಾರಂಭ ಆಗಿದೆ. ಇವತ್ತಿನವರೆಗೂ ಮುಗಿದಿಲ್ಲ. ಖರ್ಚಾದ ಹಣ 356 ಕೋಟಿ ರೂಪಾಯಿಗಳು. ಈ 356 ಕೋಟಿ ರೂಪಾಯಿಗಳಲ್ಲಿ 200

ಕೋಟಿ ರೂಪಾಯಿಗಳು ಕೇವಲ ಈ ಸಾಮಾನು ಖರೀದಿಗೆ ಹೋಗಿದೆ. ಯಾರಿಗೆ ಶಿಕ್ಷೆ ಆಗಿದೆ? ಚಾಣಕ್ಯ ತನ್ನ ಅರ್ಥ ಶಾಸ್ತ್ರದಲ್ಲಿ ಬರೆದಿದ್ದಾನೆ. "ಯಾವ ರಾಜನು ತನ್ನ ಭ್ರಷ್ಟ ಅಧಿಕಾರಿಗಳನ್ನು ಗುರುತಿಸಿ ಕಠಿಣವಾದಂತಹ ಶಿಕ್ಷೆಯನ್ನು ಕೊಟ್ಟು ಇತರ ಅಧಿಕಾರಿಗಳಿಗೆ ಭಯ ಹುಟ್ಟಿಸುವಂತೆ ಮಾಡುವುದಿಲ್ಲವೋ ಆ ರಾಜ್ಯದಲ್ಲಿ ದರಿದ್ರ ದೇವತೆ ತಾಂಡವಾದುತ್ತಾಳೆ" ಎಂದು ಬರೆದಿದ್ದಾನೆ. ಹಾಗೆ ಎಷ್ಟು ಜನರಿಗೆ ಶಿಕ್ಷೆ ಮಾಡಿದ್ದೀರಿ? ಇಡೀ ಬೀದರ್ ಜನ ಎಲ್ಲಾ ಅರ್ಜಿ ಕೊಡುತ್ತಾರೆ. ಅಲ್ಲೊಂದು ನಿಯೋಗಕ್ಕೆ ಬರುತ್ತಾರೆ, ಸರ್ಕಾರಕ್ಕೆ ಹೇಳುತ್ತಾರೆ. ಇವತ್ತು ಪತ್ರಿಕೆಯಲ್ಲಿ ಬರುತ್ತದೆ ಇಷ್ಟೆಲ್ಲಾ ಆದರೂ ಸಹಿತ ಒಂದಾದರೂ ಪ್ರಕರಣದಲ್ಲಿ ನೀವು ಶಿಕ್ಷೆ ಕೊಟ್ಟು ಬೀದರ್ ಜಿಲ್ಲೆಯಲ್ಲಿ ಆಡಳಿತ ಸುಧಾರಣೆಗಾಗಿ ಯಾವುದಾದರೂ ಕ್ರಮವನ್ನು ತೆಗೆದುಕೊಂಡು ಭಯವನ್ನು ಹುಟ್ಟಿಸತಕ್ಕಂಥ ಕ್ರಮ ಜರುಗಿದೆಯೇ ಎಂದು ಈ ಸಭೆಯಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇವತ್ತೇನಾಗುತ್ತದೆ ಎಂದರೆ ಈ ಉಪ್ಪಿನವನು ಅಳುತ್ತಾನೆಂದರೆ ತೆಂಗನವನೂ ಸಹ ಅಳುತ್ತಾನಂತೆ. ಉಪ್ಪಿನವ, ತೆಂಗಿನವರು ಇಬ್ಬರೂ ಕುಳಿತುಕೊಂಡು ವ್ಯಾಪಾರಕ್ಕೆ ಹೋದಾಗ ಮಳೆ ಆಗುತ್ತದೆ. ಉಪ್ಪಿನವ ಉಪ್ಪು ತೊಯ್ದು ಕರಗಿ ಹೋಗಿದೆ ಎಂದು ಅಳುವಾಗ ತೆಂಗಿನವನೂ ಸಹ ನನ್ನ ತೆಂಗೂ ಹೋಯ್ತು ಎಂದು ಅಳುತ್ತಿದ್ದನಂತೆ. ಇವತ್ತು ಆ ರೀತಿ ಆಗಿದೆ. ಇವತ್ತೇನು ಆಗಿದೆ ಎಂದರೆ ಬೀದರ್ ವಿಚಾರ ಹೇಳುತ್ತೇನೆ. ಎಲ್ಲಾದರೂ ಓಲ್ಡ್ ಮೈಸೂರಿನಲ್ಲಿ ನಾರ್ತ್ ಕರ್ನಾಟಕದಲ್ಲಿ ಈ ಉದಾಹರಣೆ ಇದೆಯಾ? ರೋಡಿಗೆ ರೋಡು ನುಂಗಿದ ಇದಾಹರಣೆ ಎಲ್ಲಾದರೂ ಇದೆಯಾ? ಸ್ವಾಮಿ, ಸಂತ್‌ಪುರ್‌ನಿಂದ ಸಣ್ಣಮೋರಿಗೆ ಆರು ತಿಂಗಳ ಕೆಳಗೆ ಒಂದು ಕೋಟಿ ರೂಪಾಯಿಯ ಬೋಗಸ್ ಬಿಲ್ ಮಾಡಿ ಹಣ ಲೂಟಿ ಮಾಡಿದ್ದಾರೆ. ಲೋಕೋಪಯೋಗಿ ಇಲಾಖೆಯಿಂದ ಆರು ಜನ ಸಸ್ಪೆಂಡ್ ಆಗಿದ್ದಾರೆ. ಇವತ್ತು ಆರು ತಿಂಗಳು ಸಸ್ಪೆಂಡ್‌ನಲ್ಲಿ ಉಳಿದರು ಎಂದು ಹೇಳಿ ಯಾವುದೇ ಎನ್‌ಕ್ವೈರಿ ಇಲ್ಲದೆ ಪುನ: ಅವರಿಗೆ ನೌಕರಿಯಲ್ಲಿ ತೆಗೆದುಕೊಂಡಿದ್ದೀರಲ್ಲಾ, ಅವರ ಸರ್ವೀಸ್ ತೆಗೆದುಕೊಂಡಿದ್ದೀರಲ್ಲಾ, ಈ ರೀತಿ ಮೈಸೂರಿನಲ್ಲಿ ಆಗುತ್ತದೆಯೇ? ಬೆಂಗಳೂರು ಏರಿಯದಲ್ಲಿ ಈ ರೀತಿ ಆಗುತ್ತದೆಯೇ? ಶಿವಮೊಗ್ಗದಲ್ಲಿ ಆಗುತ್ತದೆಯೇ? ಇವತ್ತು ರೋಡ್ ಮಾಡಲಾರದೇ ರೋಡ್ ಮಾಡಿದ್ದೇವೆಂದು ಹೇಳಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದರೆ ಇಲ್ಲಿನ ಜನ ಸುಮ್ಮನೆ ಕೂರುತ್ತಾರಾ? ಸ್ವಾಮೀ, ನಾವೂ ಸಹ ಸುಮ್ಮನೆ ಕೂಡುತ್ತಿಲ್ಲ. ನಾವೆಲ್ಲಾ ಏನು ಪ್ರಯತ್ನಗಳನ್ನು ಮಾಡಬೇಕೋ ಅವೆಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇನೆ. ಆದರೆ ಆಕ್ಷನ್ ಆಗುತ್ತಿಲ್ಲ. ಏಕೆ ಆಗುತ್ತಿಲ್ಲ? ನಾನು ಹೇಳಬೇಕು ಎಂದರೆ ಸರ್ಕಾರದ ಯೋಜನೆಗಳು ಎಷ್ಟೇ ಒಳ್ಳೆಯವು ಆಗಿದ್ದರೂ, ಆ ಒಳ್ಳೆಯ ಯೋಜನೆಗಳನ್ನು ನಮ್ಮ ಕ್ಷೇತ್ರಕ್ಕೆ ಕಳುಹಿಸಿದರೂ ಕೂಡ ಆ ಯೊಜನೆಗಳನ್ನು ಅನುಷ್ಠಾನಗೊಳಿಸತಕ್ಕ ಮಷಿನರಿ ಎಲ್ಲಿಯವರೆಗೆ ಅದು ಸರ್ಕಾರದ ಕಂಟ್ರೋಲ್‌ನಲ್ಲಿ, ಪ್ರಜೆಗಳ ಕಂಟ್ರೋಲ್‌ನಲ್ಲಿ ಇದ್ದುಕೊಂಡು ಸತ್ಯವಾಗಿ

ಕೆಲಸವನ್ನು ಮಾಡುವುದಿಲ್ಲವೋ, ಅಲ್ಲಿಯವರೆಗೆ ಯಾವ ಪ್ರಗತಿಯೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಒಂದು ಮಾತು ಹೇಳುತ್ತೇನೆ. ನಮ್ಮ ಕಡೆ ಹಿರಿಯರು ಹೇಳುತ್ತಾರೆ, ಒಂದು ಬುದ್ಧಿ ಮಾತು ಹೇಳುತ್ತಾರೆ. ಏನೆಂದರೆ "ಯಾವ ಸಭೆಯಲ್ಲಿ ವಯಸ್ಸಾದಂತಹ ವೃದ್ಧರು ಇರುವುದಿಲ್ಲವೋ ಅದು ಸಭೆಯೇ ಅಲ್ಲ" ಯಾವ ಸಭೆಯಲ್ಲಿ ವಯಸ್ಸಾದಂತಹ ವೃದ್ಧರು ಇರುವುದಿಲ್ಲವೋ ಅದು ಸಭೆನೇ ಅಲ್ಲ. ಯಾವ ಹಿರಿಯರು, ವೃದ್ಧರು ಧರ್ಮದ ಮಾತಾಡುವುದಿಲ್ಲವೋ ಅವರು ಹಿರಿಯರಲ್ಲ, ವೃದ್ಧರಲ್ಲ ಯಾವ ಧರ್ಮದಲ್ಲಿ ಸತ್ಯದ ಉಲ್ಲೇಖ ಇರುವುದಿಲ್ಲವೋ ಅದು ಧರ್ಮ ಅಲ್ಲ. ಯಾವ ಸತ್ಯ ಮಾತಾಡುವುದರಿಂದ ಕಷ್ಟ ದೂರ ಆಗುವುದಿಲ್ಲವೊ ಅದು ಸತ್ಯ ಅಲ್ಲ ಎನ್ನತಕ್ಕಂಥಹ ಮಾತು ಇದೆ. ಇವತ್ತು ಈ ಸಭೆಯಲ್ಲಿ ಹಿರಿಯರು ಇದ್ದಾರೆ. ಧರ್ಮ, ನ್ಯಾಯ ನೀತಿ ಮೇಲೆ ನಡೆಯತಕ್ಕಂಥಹ ಹಿರಿಯರು ಇದ್ದಾರೆ. ಸತ್ಯವನ್ನು ಎತ್ತಿ ಹಿಡಿಯತಕ್ಕಂಥಹ ಹಿರಿಯರು ಇದ್ದಾರೆ. ಇಷ್ಟೆಲ್ಲಾ ಇದ್ದುಕೊಂಡು ಇವತ್ತು ನಮ್ಮಿಂದ ಈ ಭ್ರಷ್ಟಾಚಾರವನ್ನು ತಡೆ ಹಿಡಿಯಲಿಕ್ಕೆ ಆಗುತ್ತಿಲ್ಲ. ಆದ್ದರಿಂದ ನಾವು ಯಾವುದೇ ಯೋಜನೆ ಹಾಕಿಕೊಂಡರೂ, ಆ ಯೋಜನೆಗಳನ್ನು ಒಳ್ಳೆಯ ರೀತಿಯಿಂದ ಕಾರ್ಯಗತ ಮಾಡಲಾರದೇ ಹೋದರೆ ಜನಕ್ಕೆ ಆ ಯೋಜನೆಯ ಲಾಭ ಕೊಡಲಿಲ್ಲ ಎಂದರೆ ಅದು ಏನೂ ಸಾರ್ಥಕ ಆಗುವುದಿಲ್ಲ. ಏನಾಗುತ್ತದೆ ಎಂದರೆ ಈ ತೂತು ಬಿದ್ದ ರಂಧ್ರ ಇರತಕ್ಕ ಕೊಡದಲ್ಲಿ ಸಮುದ್ರ ತುಂಬಿದರೂ ಸಹ ಏನೂ ಆಗುವುದಿಲ್ಲ. ನೀರು ಸೋರಿ ಹೋಗುತ್ತದೆ. ಅದೇ ರೀತಿ ಇಂದಿನ ವ್ಯವಸ್ಥೆ ಆಗುತ್ತಿದೆ. ಅದರಿಂದ ಸರ್ವ ಸಾಮಾನ್ಯರಿಗೆ ಏನೂ ಉಪಯೋಗ ಆಗುತ್ತಿಲ್ಲ. ಆದ್ದರಿಂದ ನಾವು ಬೀದರ್ ಜನ ಎಲ್ಲಾ ಹೇಗಿದ್ದೇವೆಂದರೆ ನಮಗೆ ಎಷ್ಟೇ ಕಷ್ಟ ಆದರೂ ಸಹಿತ ನಾವು ತಾಳಿಕೊಳ್ಳುತ್ತೇವೆ. ಅದು ಬೇರೆ ಜನರಿಗೆ ಕಾಣುವುದಿಲ್ಲ. ಅದಕ್ಕಾಗಿ ನಮ್ಮ ಸಭಾಧ್ಯಕ್ಷರು ಬೆಲ್ ಹೊಡೆಯುತ್ತಿದ್ದಾರೆ. ನಾನು ಕೂರಬೇಕಾಗುತ್ತದೆ. ಏಕೆಂದರೆ ನಾನು ನೀವು ಬೆಲ್ ಹೊಡೆದರೆ ನಾನು ಕೂರುತ್ತೇನೆಂದು ಮಾತು ಕೊಟ್ಟಿದ್ದೇನೆ. ನನಗೆ ಅವಕಾಶ ಕೊಡಿ ಎಂದು ಹೇಳಿದ್ದಾನೆ. ಆದ್ದರಿಂದ ನಾನೊಂದು ಉರ್ದು ಕವಿತೆಯನ್ನು ಹೇಳಿ ನನ್ನ ಮಾತು ಮುಗಿಸುತ್ತೇನೆ. ಮಾನ್ಯ ಸಾರಿಗೆ ಸಚಿವರೇ, ನಾವು ಬೀದರ್ ಜನ ಹೇಗಿದ್ದೇವೆ ಎಂದರೆ ಆ ಬಗ್ಗೆ ಒಂದು ಉರ್ದು ಕವಿತೆ ಹೇಳುತ್ತೇನೆ.

"ದುನಿಯಾ ಮೇ ಕುಚ್ ಐಸೇ ಭೀ ಲೋಗ್ ಹೈ"

ಸಾರ್, ನಾನು ಹೇಳುತ್ತಿರುವುದು ಕವಿತೆ.

"ದುನಿಯಾ ಮೇ ಕುಚ್ ಐಸೇ ಭೀ ಲೋಗ್ ಹೈ"
ಜೋ ಮೆಹಿಫಿಲ್ ಮುಸ್ಕುರಾತೇ ಹೈ,
"ದುನಿಯಾ ಮೇ ಕುಚ್ ಐಸೇ ಭೀ ಇನ್ಸಾನ್ ಹೈ,
ಜೋ ಮೆಹಿಫಿಲ್ ಮುಸ್ಕುರಾತೇ ಹೈ,
ಔರ್ ತನಹಾಯ್ ಮೇ ರೋತೇ ಹೈ ..."

ಆ ರೀತಿ. ಜಗತ್ತಿನಲ್ಲಿ ಇಂತಹ ಜನರೂ ಇದ್ದಾರೆ. ಅವರು ಸಭೆ ಸಮಾರಂಭಗಳಲ್ಲಿ ನಗುತ್ತಾರೆ. ಆದರೆ ಏಕಾಂತದಲ್ಲಿ ಅಳುತ್ತಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್:— ಮಾನ್ಯ ಎಸ್.ಎಸ್ ಪಾಟೀಲ್ ಅವರೇ, ಮಾನ್ಯ ಸದಸ್ಯರು ಹೇಳಿದ ಕವಿತೆಯ ಅರ್ಥ ಗೊತ್ತಾಯಿತಾ? ಇಲ್ಲಿ ಇವರು ಮಾತನಾಡುವಾಗ ಬಹಳ ಸಂತೋಷ ಆಗುತ್ತದೆ. ಕ್ಷೇತ್ರಕ್ಕೆ ಹಿಂತಿರುಗಿದಾಗ ಅಳುತ್ತಾರೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್:— ಸರ್ಕಾರದ ವೈಫಲ್ಯದಿಂದ ಅಳುತ್ತಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ:— ಸರ್ಕಾರದ ಆಡಳಿತ ನೋಡಿ ಜನ ಅಳುತ್ತಾರೆ ಎಂದು.

ಶ್ರೀ ಗುಂಡಪ್ಪ ವಕೀಲ್:— ನಾನು ಸಬ್ಮಿಷನ್ ಮಾಡತಕ್ಕ ಉದ್ದೇಶ ಏನು ಎಂದರೆ ಬೀದರ್ ಜನತೆಗೆ ಅನ್ಯಾಯ ಆಗಿದ್ದರೂ ಸಹಿತ ಈ ಒಂದು ಪ್ರವೃತ್ತಿ ಇರತಕ್ಕ ಜನ ಎಂದು ಹೇಳಬೇಕಾಗಿತ್ತು. ಆದಕ್ಕೆ ಈ ಒಂದು ಕವಿತೆಯನ್ನು ನಾನು ಹೇಳುತ್ತಿದ್ದೇನೆ.

"ದುನಿಯಾ ಮೇ ಕುಛ್ ಐಸೇ ಭೀ ಲೋಗ್ ಹೋತೇ ಹೈ
ಜೋ ಮೈಫಿಲ್ ಮೇ ಮುಸ್ಕುರಾತೇ ಹೈ, ತನಹಾಯ್ ಮೇ ರೋತೇ ಹೈ"

ಆ ರೀತಿ ನಾವು ನಿಮಗೆ ನೋಡಲಿಕ್ಕೆ ಚೆನ್ನಾಗಿರುತ್ತೇವೆ, ನಗುತ್ತಿರುತ್ತೇವೆ- ಎಂದು ಕಾಣಿಸಿದರೂ ಸಹ ನಮ್ಮ ಮೇಲೆ ಬಹಳ ಅನ್ಯಾಯ ಆಗುತ್ತಿದೆ. ಆಫಿಸರ್ಸ್ ಅಲ್ಲಿ ಚೆನ್ನಾಗಿ ಬರುತ್ತಿಲ್ಲ. ಭ್ರಷ್ಟಾಚಾರ ಹೆಚ್ಚಾಗುತ್ತಿದೆ. ವಿಶ್ವಬ್ಯಾಂಕಿನ ಕುಡಿಯುವ ನೀರಿನ ಯೋಜನೆಯಡಿ ನನ್ನ ಒಂದೇ ಕ್ಷೇತ್ರದಲ್ಲಿ 40 ಹಳ್ಳಿಗಳನ್ನು ಅಳವಡಿಸಿಕೊಂಡು 90 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಖಾತೆಯಲ್ಲಿ ಹಣ ಖರ್ಚಾಗಿದೆ. ಆದರೆ ಎಂದು ಹಳ್ಳಿಗೂ ನೀರಿನ ಸರಬರಾಜು ಆಗಿಲ್ಲ. ಸರ್ಕಾರದ ಕಡೆಯಿಂದ ಯಾವ ಹಳ್ಳಿಗಾದರೂ ಬಂದರೂ ಪ್ರಮಾಣಿಸಿ ನೋಡಬಹುದು. ಇಂಥ ವ್ಯವಸ್ಥೆ ನಮ್ಮ ಜಿಲ್ಲೆಯಲ್ಲಿ ಬೆಳೆಯುತ್ತಿದೆ. ನಮ್ಮ ಜಿಲ್ಲೆ ಹಿಂದುಳಿದ ಪ್ರದೇಶವೆಂದು ನಮ್ಮ ಜಿಲ್ಲೆಗೆ ಸರ್ಕಾರದಿಂದ ಹೆಚ್ಚಿಗೆ ಅನುದಾನ ಬಂದಿದೆ. ನಮ್ಮಲ್ಲಿರತಕ್ಕಂಥ ಧುರೀಣರು ಈ ನಿಟ್ಟಿನಲ್ಲಿ ವಿಚಾರ ಮಾಡಿ ಕೆಲಸ ಮಾಡಿಲ್ಲ. ರಾಜಕೀಯ ವ್ಯಕ್ತಿಗಳಾದ ನಾವೆಲ್ಲಾ ಕುಳಿತುಕೊಂಡು ಭ್ರಷ್ಟಾಚಾರವನ್ನು ಹೆಚ್ಚು ಮಾಡಿದ್ದೇವೆ. ಬೀದರ್ ಜಿಲ್ಲೆಯಲ್ಲಿ ಬೇರೆ ಬೇರೆ ಪಾರ್ಟಿ ಎಂದು ಇಲ್ಲ. ಅಲ್ಲಿ ಇರುವುದು ಒಂದೇ, ಒಟ್ಟು ಪಾರ್ಟಿ ಅದುವೇ ಭ್ರಷ್ಟಾಚಾರದ ಪಾರ್ಟಿ. ಯಾವುದೇ ಒಂದು ಭ್ರಷ್ಟಾಚಾರ ಮಾಡಬೇಕಾದರೆ ಎಲ್ಲರೂ ಕುಳಿತುಕೊಂಡು ಮಾಡುವಂಥ ವ್ಯವಸ್ಥೆ ನಮ್ಮಲ್ಲಿ ಬಂದಿದೆ. ಇದು ಬಹಳ ಅಪಾಯ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ :— ಎಲ್ಲಾ ಪಾರ್ಟಿಯವರು ಎಂದು ಹೇಳಿದರೆ ಅದರಲ್ಲಿ ಇವರೊಬ್ಬರು ಸದಸ್ಯರಾಗಿರಬೇಕಲ್ಲಾ ಎಂದು ಕೇಳುತ್ತಿದ್ದೇನೆ.

ಶ್ರೀ ಗುಂಡಪ್ಪ ವಕೀಲ್ :— ಮಾನ್ಯ ಉಪಾಧ್ಯಕ್ಷರೆ, ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ ಪೀರ್ ಎಂದು ಕೂಡಿಸುತ್ತಾರೆ. ಮೊಹರಂನಲ್ಲಿ ಪಂಜುಗಳು ಇರುತ್ತವೆ. ಆ ಪೀರ್‌ಗಳಲ್ಲಿ ಬಹಳಷ್ಟು ಪೀರ್‌ಗಳು ಇರುತ್ತವೆ. ಮೌಲನಸಾಬ್‌ಜಿ ಖಾಸಿಂದುಲಾ, ಹೈದರ್‌ಸಾಬ್ ಈ ರೀತಿಯೆಲ್ಲಾ ಪೀರ್‌ಗಳನ್ನು ಕೂಡಿಸುತ್ತಾರೆ. ಆ ಪೀರ್‌ಗಳನ್ನು ಕೂಡಿಸಿ ಅದನ್ನು ಈ ಮೊಹರಂನಲ್ಲಿ ಜುಲೂಸ್ ತೆಗೆಯುತ್ತಾರೆ. ಜುಲೂಸ್ ತೆಗೆಯುವಾಗ ಯಾವ ಪೀರ್‌ನ ಮುಂದೆ ಜನ ಇರುತ್ತಾರೋ ಆ ಪೀರ್‌ಗೆ ಮಾತ್ರ ಜೈ ಎಂದು ಹೇಳಬೇಕಾಗುತ್ತದೆ.

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, he is a very good orator. The difficulty in Bidar is one sher. ಅಲ್ಲಿ ಬಿ.ಜೆ.ಪಿ 5 ಜನ ಎಂ.ಎಲ್.ಎ ಏನು ಇದ್ದಾರೆ they are not taking others with them. ಅವರು ಕವಿತೆ ಏನು ಹೇಳುತ್ತಾರೆಂದರೆ 'ಹಯಾತ್ ಲೇಕೇ ಚಲೋ ಕಯನಾಥ್ ಲೇಕೇ ಚಲೋ, ಚಲೊತೋ ಸಾರೇ ಜಮಾನ್ ಕೊ ಸಾತ್ ಲೇ ಚಲೋ' ತಾವು ಎಂ.ಎಲ್.ಎ. ಆಗಿದ್ದೀರಿ, ಎಲ್ಲರನ್ನೂ ಒಟ್ಟಿಗೆ, ಜೊತೆಗೂಡಿಸಿ ತೆಗೆದುಕೊಂಡು ಹೋದರೆ ಬೀದರ್‌ಗೆ ಬಹಳ ಕರಕಿ ಆಗುತ್ತದೆ.

ಶ್ರೀ ಗುಂಡಪ್ಪ ವಕೀಲ್ :— ಮಾನ್ಯ ಉಪಾಧ್ಯಕ್ಷರೆ, ನಾನು ಏನು ಹೇಳುತ್ತಿದ್ದೆನೆಂದರೆ ಈ ಪೀರ್‌ಗಳನ್ನು ಕೂಡಿಸುವಾಗ ಮೌಲಾನಾಸಾಬ್, ಖಾಸಿದುಲ್, ಹೈದರ್‌ಸಾಬ್ ಪೀರ್‌ಗಳು ಇರುತ್ತವೆ. ಈ ಪೀರ್‌ಗಳಿಗೆ ಜನರೆಲ್ಲಾ ಘೋಷಣೆ ಹಾಕುತ್ತಾರೆ. ಮೌಲಾನಿಜಿದೋ ಜಾರೊ ಜೇನೋ, ಹೈದರ್ ಸಾಬ್ ಜಿ ದೊ ಜಾರೋ ಜೇನೋ ಎಂದು ಈ ಘೋಷಣೆ ಹಾಕ್ಕುತ್ತಾರೆ. ಹಾಗೆ ಘೋಷಣೆ ಹಾಕುವುದಕ್ಕೆ ಒಬ್ಬನಿಗೆ ಸಿಟ್ಟು ಬಂತಂತೆ. ಅವನು ಏನು ಹೇಳಿದನೆಂದರೆ ಇದೆಲ್ಲಾ ಬೇರೆ ಬೇರೆ ಏಕೆ ಘೋಷಣೆ ಹಾಕುತ್ತೀರಿ, ಒಟ್ಟು ಪೀರ್‌ಕೆ ದೋ ಜಾರೋ ಜೇನೋ ಎಂದು ಘೋಷಣೆ ಹಾಕಿ ಎಂದು ಹೇಳಿದನಂತೆ. ಅದೇ ರೀತಿ ನಮ್ಮ ಜಿಲ್ಲೆಯಲ್ಲಿ ಕಳೆದ 50 ವರ್ಷಗಳಿಂದ ಏನು ಬೆಳೆಸಿದ್ದಾರೆ, ನಾವು 5 ಜನ ಎಂ.ಎಲ್.ಎ ಇದ್ದೇವೆ, ಆದರೆ ನಿಮ್ಮ ಜನ ಯಾರು ಇದ್ದಾರೆ ಅವರಿಗೆ ಯಾವ ಪಾರ್ಟಿ ಇಲ್ಲ, ಪಕ್ಷ ಇಲ್ಲ, ಹಣ ಲೂಟಿ ಮಾಡುವುದಕ್ಕೆ ಸ್ಟಾರ್ಟ್ ಮಾಡಿದವರೇ ಅವರು. ಸರ್ಕಾರ ಕೊಟ್ಟಂಥ 350 ಕೋಟಿ ರೂಪಾಯಿಗಳನ್ನು ತಿಂದವರು ಅವರೇ. ರೋಡ್ ಕೆಲಸ ಆಗದೆ ಅವರ ಹಣವನ್ನು ನುಂಗಿಹಾಕಿದವರು ಅವರೇ ಆಗಿದ್ದಾರೆ. ಅಂಥವರಿಗೆ ಎಂಕರೇಜ್ ಮಾಡಬೇಡಿ, ಸರ್ಕಾರದಲ್ಲಿರತಕ್ಕಂಥ ತಾವು ಆ ನಿಟ್ಟಿನಲ್ಲಿ ಸ್ವಲ್ಪ ಗಮನಹರಿಸಿ ನೋಡಿ ಎಂದು ನಾನು ಹೇಳುತ್ತಿದ್ದೇನೆ. ಇನ್ನು ಯಾವುದೇ ಒಂದು ಊರಿನಲ್ಲಿ ಒಬ್ಬ ಮನುಷ್ಯನಿಗೆ ಕಾಯಿಲೆ ಬಂದರೆ ನಾವು

ಜೀಪಿನಲ್ಲಿ ಅಥವಾ ಆಟೋರಿಕ್ಷಾದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಔಷಧಿ ಕೊಡಿಸುತ್ತೇವೆ. ಆದರೆ ಕಾಲರಾ ಅಥವಾ ಮಹಾಮಾರಿ ಬೇನೆ ಬಂದು ಇಡೀ ಊರಿಗೇ ಊರೇ ರೋಗಿಷ್ಟರಾಗಿ ಬಿದ್ದುಬಿಟ್ಟರೆ ಆಗ ದವಾಖಾನೆಯ ಡಾಕ್ಟರುಗಳು, ನರ್ಸ್‌ಗಳು ಆ ಊರಿಗೆ ಬಂದು ಕ್ಯಾಂಪ್ ಹಾಕಿ ಟ್ರೀಟ್‌ಮೆಂಟ್ ಕೊಡಬೇಕು. ಆ ಒಂದು ಅವಸ್ಥೆ ಬೀದರ್‌ನಲ್ಲಿದೆ. ಇಡೀ ಬೀದರ್ ಜಿಲ್ಲೆಯ ಜನರು ಕಾಯಿಲೆಯಿಂದ ನರಳುತ್ತಿದ್ದಾರೆ. ಆದಕ್ಕಾಗಿ ಆಸ್ಪತ್ರೆಯವರು ಎಲ್ಲಾ ಅಲ್ಲಿ ಬಂದು ಕ್ಯಾಂಪ್ ಹಾಕಬೇಕಾಗುತ್ತದೆ. ನಾನು ಈ ಸಭೆಯ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ವಿನಂತಿ ಮಾಡುಕೊಳ್ಳುವುದೇನೆಂದರೆ ಈ ಸರ್ಕಾರ ಒಂದು ಎರಡು ವರ್ಷವಾದರೂ ಸಹಿತ ತಾವು ಬೀದರ್ ಜಿಲ್ಲೆಗೆ ಬಂದಿಲ್ಲ. ತಾವು ಶೀಘ್ರದಲ್ಲಿಯೇ ಬೀದರ್ ಜಿಲ್ಲೆಗೆ ಬರಬೇಕು. ಬಂದು ಪರಿಶೀಲನಾ ಸಭೆಯನ್ನು ಕರೆದು ಎಲ್ಲಾ ವಿಷಯಗಳನ್ನು ಅಲ್ಲಿ ಕೂಲಂಕಷವಾಗಿ ಚರ್ಚೆ ಮಾಡಬೇಕು. ಮಾನ್ಯ ಖಮರುಲ್ ಇಸ್ಲಾಂರವರೆ, ತಾವು ನಮಗಿಂತ ಬಹಳ ಸೀನಿಯರ್ ಇದ್ದೀರಿ. ನಾವು 5 ಜನ ಎಂ.ಎಲ್.ಎಗಳು ಹೊಸಬರಾಗಿದ್ದೇವೆ. ಇನ್ನೂ ನಮಗೆ ರಾಜಕೀಯದಲ್ಲಿ ಜನ್ಮ ಆಗಿ ಒಂದೂವರೆ ವರ್ಷ ಆಗಿಲ್ಲ. ನಮಗೆ ಮಾತನಾಡಲಿಕ್ಕೆ ಬರುವುದಿಲ್ಲ, ಇನ್ನೂ ಕೈ ಆಡಿಸಲಿಕ್ಕೆ ಬರುವುದಿಲ್ಲ, ನಾವು ನಿಮಗೆ ಏನೂ ಮಾಡುವವರಲ್ಲ. ನಮ್ಮ ಬಗ್ಗೆ ಭಯಪಡಬೇಡಿ. ನಿಮ್ಮ ವೈರಿ ನಿಮ್ಮಲ್ಲಿಯೇ ಇದ್ದಾರೆ. ಅವರಿಂದ ನಿಮಗೆ ಕೆಟ್ಟ ಹೆಸರು ಬರುತ್ತಿದೆ. ಇವತ್ತು ಇಡೀ ಬೀದರ್‌ನಲ್ಲಿ ನಮ್ಮ ಒಂದು ತಾಕತ್ತಿನ ಮೇಲೆ ಆರಿಸಿ ಬಂದಿಲ್ಲ. ನಿಮ್ಮ ಜನ ಕೆಟ್ಟವರು ಯಾರು ಇದ್ದಾರೆ ಅವರು ನಮ್ಮನ್ನು ಆರಿಸಿ ಕಳುಹಿಸಿದ್ದಾರೆ. ಆ ಸಲುವಾಗಿ ಆ ಜನರಿಗೆ ನೀವು ಎಂಕರೇಜ್ ಮಾಡಬೇಡಿ. ಬಹಳಷ್ಟು ಮಂದಿ ಒಳ್ಳೊಳ್ಳೆಯ ಜನರು ಇದ್ದಾರೆ. ಅಂಥ ಜನರನ್ನು ಹುಡುಕಿ ಅವರ ಮುಖಾಂತರ ಒಳ್ಳೊಳ್ಳೆಯ ಕೆಲಸಗಳನ್ನು ಮಾಡಿಸಿ ಬೀದರ್ ಜಿಲ್ಲೆಯ ಪರವಾಗಿ ಪುಣ್ಯ ಕಟ್ಟಿಕೊಳ್ಳಿ ಎನ್ನುವ ಮಾತನ್ನು ಹೇಳುತ್ತಾ ಇನ್ನು ಬೀದರ್ ಜಿಲ್ಲೆಯಲ್ಲಿ ಬಿ.ಜೆ.ಪಿ.ಯವರು ಇದ್ದಾರೆನ್ನುವ ಕಾರಣಕ್ಕಾಗಿ ಅಲ್ಲಿಗೆ ಮಾನ್ಯ ಮುಖ್ಯಮಂತ್ರಿಗಳು ಬರುತ್ತಿಲ್ಲವೆಂದು ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿ ನಮಗೆ ಬಹಳ ನೋವಾಗಿದೆ. ನಾವು ಯಾವುದೇ ಪಕ್ಷದವರಾಗಿದ್ದರೂ ಶಾಸಕರಾಗಿದ್ದೇವೆ. ನಮ್ಮ ಮುಖ್ಯಮಂತ್ರಿಗಳಾಗಿ ನೀವಿದ್ದೀರಿ. ನಿಮ್ಮನ್ನು ನಾವು ಸ್ವಾಗತ ಮಾಡಿ ಸಹಕಾರ ಕೊಟ್ಟು ನಿಮ್ಮ ಮಾನ ಮರ್ಯಾದೆಯನ್ನು ಹೆಚ್ಚು ಮಾಡತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಾದದ್ದು ನಮ್ಮ ಕರ್ತವ್ಯವಾಗಿದೆ, ನಾವು ಮಾಡಿ ತೋರಿಸುತ್ತೇವೆ. ಯಾವ ಜಿಲ್ಲೆಯಲ್ಲೂ ಅಂಥ ಸತ್ಕಾರ್ಯ ಸಿಕ್ಕಿರಬಾರದು, ಹಾಗೆ ನಾವು ನಿಮ್ಮನ್ನು ಸ್ವಾಗತ ಮಾಡುತ್ತೇವೆ, ದಯವಿಟ್ಟು ನಮ್ಮ ಜಿಲ್ಲೆಗೆ ಬನ್ನಿ. ಮೊನ್ನೆತಾನೆ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಆಗಲಿಕ್ಕೆ ಹೋದಾಗ- 'ಮಾನ್ಯ ಮುಖ್ಯಮಂತ್ರಿಗಳೇ, ನಮ್ಮ ಜಿಲ್ಲೆಯನ್ನು ದತ್ತುಗೆ ತೆಗೆದುಕೊಳ್ಳಿ' ಎಂದು ನಮ್ಮ ಗೆಳೆಯರು ಹೇಳುತ್ತಿದ್ದರು. ಸರಿಯಾದ ಮಾತನ್ನು ಹೇಳಿದ್ದಾರೆ. ನಮ್ಮ ಜಿಲ್ಲೆ ಅನಾಥ ಜಿಲ್ಲೆಯಾಗಿದೆ. ಅದನ್ನು ತಾವು ದತ್ತುಗೆ ತೆಗೆದುಕೊಂಡರೆ ತಮಗೆ ಪುಣ್ಯ ಬರುತ್ತದೆ.

ತಮ್ಮ ಅಧಿಕಾರಾವಧಿ ಹೆಚ್ಚು ಆಗುತ್ತದೆ. ತಮಗೆ ದೇವರು ಶಕ್ತಿ ಕೊಡುತ್ತಾನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆಡಿನ ಕೊರಳಲ್ಲಿ ಮಾಲೆ ಯಾವ ರೀತಿ ಉಪಯೋಗಕ್ಕೆ ಬರುವುದಿಲ್ಲವೋ ಆ ರೀತಿ ಕಳೆದ 53 ವರ್ಷಗಳಿಂದ ಬಂದಂಥ ಸರ್ಕಾರಗಳ ಅವಸ್ಥೆ ನಮ್ಮ ಜಿಲ್ಲೆ ಬಗ್ಗೆ ಆಗಿದೆ. ಆ ಭಾವನೆ ನಮ್ಮ ಜನರಲ್ಲಿ ಬೆಳೆದಿದೆ. ಆದ್ದರಿಂದ ಈ ಅವ್ಯವಹಾರಗಳು, ಭ್ರಷ್ಟಾಚಾರಗಳು, ನಮ್ಮ ಜಿಲ್ಲೆಯಲ್ಲಿ ಕಂಡುಬಂದರೆ ತಾವು ಉಗ್ರವಾದಂಥ, ಕಠಿಣವಾದಂಥ ಕ್ರಮವನ್ನು ತೆಗೆದುಕೊಂಡು ಭಯ ಹುಟ್ಟಿಸತಕ್ಕಂಥ ವಾತಾವರಣವನ್ನು ನಿರ್ಮಾಣ ಮಾಡಿ ಸರ್ಕಾರದ ಯೋಜನೆಗಳು ಬಡವರಿಗೆ ಮುಟ್ಟಿಸುವ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ತಮ್ಮಲ್ಲಿ ಕೈಜೋಡಿಸಿ ಕೇಳಿಕೊಳ್ಳುತ್ತೇನೆ. ತಮಗೆ ನಾವು ಇರುವವರೆಗೆ ಪ್ರಾಮಾಣಿಕವಾದ ಸಹಕಾರವನ್ನು ಕೊಡುತ್ತೇವೆಂದು ಹೇಳಿ, ನನಗೆ ನಾಲ್ಕು ಮಾತುಗಳನ್ನಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಮಾನ್ಯ ರಾಮಯ್ಯನವರೆ, ತಾವು ಈಗ ಬೇಡಿಕೆ ಮೇಲಿನ ಚರ್ಚೆಯನ್ನು ಪ್ರಾರಂಭ ಮಾಡಿ.

+ ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ) :— ಮಾನ್ಯ ಉಪಾಧ್ಯಕ್ಷರೆ, ಈಗ ಅವಕಾಶ ಕೊಟ್ಟಿದ್ದೀರಿ, ಬೇಕಾಗಿಲ್ಲ. ಹೊಸಬರಿಗೆ ಅವಕಾಶ ಕೊಡಿ. ನಿಮ್ಮದೂ ಸೇರಿದಂತೆ ಯಾರ ಕೃಪಾಕಟಾಕ್ಷದಲ್ಲೂ ನನಗೆ ಬದುಕಲಿಕ್ಕೆ ಇಷ್ಟ ಇಲ್ಲ. ಮಾತನಾಡಲಿಕ್ಕೂ ಇಷ್ಟ ಇಲ್ಲ. ನಿನ್ನೆಯ ದಿವಸ ಕೇಳಿದಾಗ ಬೆಳಿಗ್ಗೆ 10 ಗಂಟೆಗೆ ಪ್ರಾರಂಭ ಮಾಡಿ ಎಂದು ಮಾನ್ಯ ಸಭಾಧ್ಯಕ್ಷರು ಹೇಳಿದರು. ಇಡೀ ರಾತ್ರಿ ನೋಟ್ಸ್ ಪ್ರಿಪೇರ್ ಮಾಡಿ ಬೆಳಿಗ್ಗೆ 10 ಗಂಟೆಯಿಂದ ಕಾದಿದ್ದೇನೆ. ಬೆಳಿಗ್ಗೆಯಿಂದ ಆ ಸ್ಥಾನಕ್ಕೆ ಮೂರು ಜನ ಬಂದಿದ್ದೀರಿ. ನನ್ನ ಸರದಿ ಯಾವಾಗ ಬರುತ್ತದೆಂದು ಇಬ್ಬರಿಗೆ ಹೇಳಿ ಕಳುಹಿಸಿದೆ. 10 ಗಂಟೆಗೆ ಪ್ರಾರಂಭ ಮಾಡಿ ಎಂದು ನಿನ್ನೆಯ ದಿವಸ ಹೇಳಿದ್ದರೂ ನಾನು ಎರಡು ಗಂಟೆಯವರೆಗೆ ಕಾದು ಕುಳಿತೆ. ಪುನ: ತಾವು ಬಂದ ಮೇಲೆ ತಮ್ಮ ಹಿಂದೆ ಬಂದೆ. ತಾವು ಎಲ್ಲಿಗೆ ಹೋದ್ರೋ ನನ್ನ ಕೈಗೆ ಸಿಗಲಿಲ್ಲ. ಆ ಮೇಲೆ ಶ್ರೀ ಸಭಾಪತಿಯವರು ಆ ಸ್ಥಾನದಲ್ಲಿ ಕುಳಿತುಕೊಂಡ ಮೇಲೆ ಹೇಳಿ ಕಳುಹಿಸಿದೆ. ಅವರು ಯಾರೋ ಹಬ್ಬಕ್ಕೆ ಹೋಗುವವರಂತೆ, ಅವರು ಮಾತನಾಡಿದ ಮೇಲೆ ಮಾತನಾಡುವಿರಂತೆ ಎಂದು ಹೇಳಿದರು. ಅದನ್ನೂ ಕಾದೆ. 3 ಗಂಟೆಗೆ ನೀವು ಮೂರನೆಯವರಾಗಿ ಬಂದಿರಿ. ನೀವು ಯವ ನಿಯಮಗಳನ್ನು ಪಾಲನೆ ಮಾಡುತ್ತೀರೋ ಗೊತ್ತಾಗುತ್ತಿಲ್ಲ.

ಉಪಾಧ್ಯಕ್ಷರು :— ಮಾನ್ಯ ರಾಮಯ್ಯನವರೆ, ತಮಗೆ ಈಗ ಅವಕಾಶ ಸಿಕ್ಕಿದೆ. ದಯವಿಟ್ಟು ಸಮಯ ಹಾಳು ಮಾಡುವುದು ಬೇಡ. ಮಾತನಾಡಿ.

ಶ್ರೀ ವೈ.ಕೆ. ರಾಮಯ್ಯ :— ಕೃಪೆ ಮಾಡಿ ನಾನು ಹೇಳುವುದನ್ನು ಸ್ವಲ್ಪ ಕೇಳಿ.

ನೀವು ಹೇಳುವುದನ್ನು ನಾವು ಕೇಳುತ್ತೇವಲ್ಲಾ. ನಮ್ಮ ಮಾತನ್ನು ಸ್ವಲ್ಪ ಕೇಳಿ. ನಾನು ಅನೇಕ ಸಾರಿ ಈ ಸದನದಲ್ಲಿ ಛೇರ್‌ಗೆ ಪ್ರಾರ್ಥಿಸಿದ್ದೇನೆ. ಮೊದಲನೆಯದಾಗಿ, ನಾವು ಈ ಸದನದ ಸದಸ್ಯರು. ಕಾಂಗ್ರೆಸ್ ಕಮ್ಯುನಿಸ್ಟ್, ಬಿಜೆಪಿ, ಜನತಾದಳ (ಯು), ಜನತಾದಳ (ಎಸ್) ನವರು ಎನ್ನುವುದು ಆಮೇಲೆ. ನೀವು ರೌಂಡ್ ಕರೆಯುತ್ತೇವೆಂದರೆ ಮೂರು ಜನರನ್ನು ಕರೆದ ನಂತರ ಅವರು ತಮ್ಮ ಮಾತು ಮುಗಿಸುತ್ತಾರೆ. 4ನೇ ರೌಂಡಿಗೆ ಇಬ್ಬಿಬ್ಬರು ಬರುತ್ತಾರೆ. ಅದು ಬೇಡ. ನಾನು ಪ್ರಾರ್ಥಿಸುತ್ತಿದ್ದೇನೆ, ನಾವು ಮೊದಲು ಈ ಸದನದ ಸದಸ್ಯರಾಗಿದ್ದೇವೆ. ಎಲ್ಲಾ ಸದಸ್ಯರಿಗೇನೇನು ಹಕ್ಕುಬಾಧ್ಯತೆಗಳಿವೆಯೋ, ಅವೆಲ್ಲಾ ನಮಗೂ ಇವೆ. ಆದುದರಿಂದ, ಅಲ್ಲಿ ಮೂರು ಜನರಿಗೆ ಮಾತನಾಡಲು ಎಷ್ಟು ಸಮಯ ಕೊಡುತ್ತೀರೋ, ಅಷ್ಟೇ ಸಮಯವನ್ನು 40 ಜನರಿಗೂ ಅಲಾಟ್ ಮಾಡಿ. ಅಲ್ಲಿ ಮೂರು ಜನರಿಗೆ ಕೊಟ್ಟಾಗ, ನಮಗೆ 9 ಜನರಿಗೆ ಕೊಡಿ. ಆ ರೀತಿ ಒಂದು ನಿಯಮಾವಳಿ ಪ್ರಕಾರ ಅವಕಾಶ ಕೊಡಬೇಕು. ನಾನು ಯಾರ ಕೃಪಾಕಟಾಕ್ಷವನ್ನೂ ಅಪೇಕ್ಷಿಸುತ್ತಿಲ್ಲ. ನನಗೆ ಇಲ್ಲಿ ಮಾತನಾಡಲು ಇಷ್ಟವಿಲ್ಲ. ಆದುದರಿಂದ, ಯಾರಾದರೂ ಹೊಸಬರಿಗೆ ಅವಕಾಶ ಕೊಡುವ ಅಪ್ಪಣೆಯನ್ನು ತಾವು ಮಾಡಿದ್ದೀರಿ, ಕೊಟ್ಟು ಮಾತನಾಡಿಸಬಹುದು. ಕೆಲವರು ಮಾತನಾಡಲು ಇಷ್ಟವಿಲ್ಲದ ದಿನ ಎದ್ದುನಿಂತು ಹೊಸಬರಿಗೆ ಅವಕಾಶ ಕೊಡಿ ಎನ್ನುತ್ತಾರೆ. ನಾನೂ ನೋಡಿದ್ದೇನೆ. ಯಾವ ಮಹಾನ್ ನಾಯಕರು ಮಾತನಾಡುವುದಕ್ಕೆ ಇಷ್ಟವಿರುವುದಿಲ್ಲವೋ, ಆಗ ಮಾತ್ರ ಹೊಸಬರಿಗೆ ಅವಕಾಶ ಕೊಡಿ ಎನ್ನುತ್ತಾರೆ. ಅವರು ಮಾತನಾಡುವಾಗ ಹೊಸಬರಿಗೆ ಅವಕಾಶ ಕೊಡಿ ಎಂದು ಹೇಳುವುದಿಲ್ಲ. ಅವರೇ ಮಾತನಾಡುತ್ತಾರೆ.

ಉಪಾಧ್ಯಕ್ಷರು :— ಹೊಸಬರಿಗೆ ಅವಕಾಶ ಕೊಡಬೇಕೆಂದಿದೆ. ಆದರೂ ಕೆಲ ಹಳಬರಿಗೂ ಅವಕಾಶ ಕೊಡಲೇಬೇಕು. ಇವತ್ತು ಕೊನೆ ದಿವಸ. ಸೋಮವಾರ ಮತ್ತೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಅದಕ್ಕೋಸ್ಕರ ಇವತ್ತೇ ಮುಗಿಸಬೇಕು.

ಶ್ರೀ ವೈ.ಕೆ. ರಾಮಯ್ಯ :— ಆ ಸ್ಥಾನಕ್ಕೆ ತಾವು 3 ಜನರು ಬರುತ್ತೀರಿ. ಬೆಳಿಗ್ಗೆ ಅಧ್ಯಕ್ಷರು ಬಂದರು, ಅವರೊಂದು ನಿಯಮ ಫಾಲೋ ಮಾಡಿದರು. ಸಭಾಪತಿಯವರು ಬಂದರು ಅವರೊಂದು ನಿಯಮ ಫಾಲೋ ಮಾಡಿದರು. ಮೂರನೆಯದಾಗಿ ನೀವು ಬಂದಿರಿ ನೀವೊಂದು ಪದ್ಧತಿ ಫಾಲೋ ಮಾಡುತ್ತಿದ್ದೀರಿ. ನಾವು ಯಾರ ಪದ್ಧತಿಗೆ ಹೊಂದಿಕೊಳ್ಳಬೇಕು? ಅದರ ಬದಲು ಒಂದು ಪದ್ಧತಿಯನ್ನು ಅಡಾಪ್ಟ್ ಮಾಡಿಕೊಂಡುಬಿಡಿ. ನಾವು ಅದಕ್ಕೆ ಹೊಂದಿಕೊಳ್ಳುತ್ತೇವೆ. ಮೂರು ಜನರಲ್ಲಿ ನಾವು ಯಾರ ಪದ್ಧತಿಗೆ ಹೊಂದಿಕೊಳ್ಳಬೇಕು?

+ ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :— ಸನ್ಮಾನ್ಯ ಉಪಾಧ್ಯಕ್ಷರೇ, ನನಗೆ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಕೊನೆಯದಾಗಿ ಅವಕಾಶ ಕೊಟ್ಟಿದ್ದೀರಿ, ಅದಕ್ಕೆ

ನಾನು ಮೊದಲು ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಹಿಂದೆ ನಾನು ಶಿಕ್ಷಣದ ಮತ್ತು ಶಿಕ್ಷಣ ಇಲಾಖೆ ಬಗ್ಗೆ ಮಾತನಾಡಿದ್ದೇನೆ. ಇವತ್ತು ಸುಮಾರು 58 ಬೇಡಿಕೆಗಳನ್ನು ಸರ್ಕಾರ ಈ ಸಭೆಯ ಮುಂದೆ ಮಂಡಿಸಿದೆ. ಈ ಎಲ್ಲಾ ಬೇಡಿಕೆಗಳ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಕೆಲವು ಇಲಾಖೆಗಳ ಬಗ್ಗೆ ಸೂಕ್ಷ್ಮವಾಗಿ ಕೆಲವು ವಿಚಾರಗಳನ್ನು ನಾನು ಹೇಳುವುದಕ್ಕೆಇಚ್ಛಿಪಡುತ್ತಿದ್ದೇನೆ. ಮೊದಲನೆಯದಾಗಿ, ಆರೋಗ್ಯ ಇಲಾಖೆ ಬಹಳ ಮುಖ್ಯವಾದ ಇಲಾಖೆಯಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಬಡವರ, ನಿರ್ಗತಿಕರ, ದೀನದಲಿತರ ಆರೋಗ್ಯವನ್ನು ನೋಡಿಕೊಳ್ಳುವಂಥಾದ್ದು ಸರ್ಕಾರಿ ಆಸ್ಪತ್ರೆಗಳು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಖಾಸಗಿ ನರ್ಸಿಂಗ್ ಹೋಂಗಳು ಅಣಬೆ ರೀತಿಯಲ್ಲಿ ತಲೆ ಎತ್ತಿವೆ. ಅದರ ಬಗ್ಗೆ ಅಷ್ಟು ಸಮಸ್ಯೆ ಇಲ್ಲ. ಆದರೆ, ಬಡವರಾರೂ ಆರೋಗ್ಯ ತಪಾಸಣೆಗಾಗಲಿ, ಚಿಕಿತ್ಸೆಗಾಗಲಿ ಹೋಗುತ್ತಾರೆ, ಅವರು ಯಾವಾಗಲೂ ಸರ್ಕಾರಿ ಆಸ್ಪತ್ರೆಗಳನ್ನೇ ನಂಬಿ ಕೊಂಡಿರುತ್ತಾರೆ. ಯಾವುದೇ ಸರ್ಕಾರವಿರಲಿ, ಈ ಸರ್ಕಾರಿ ಆಸ್ಪತ್ರೆಗಳು ಮತ್ತು ಸರ್ಕಾರಿ ಶಾಲೆಗಳು ಈ ಎರಡೂ ಇಲಾಖೆಗಳ ಸಂಸ್ಥೆಗಳನ್ನು ಹೆಚ್ಚು ಆಕರ್ಷಣೀಯವಾಗಿ ಮಾಡಿದಾಗ ಮಾತ್ರ ಬಡವರ ಸೇವೆ ಆಗುತ್ತದೆಂಬುದು ನಮ್ಮೆಲ್ಲರ ಅಭಿಪ್ರಾಯ. ಇವತ್ತು ಆಸ್ಪತ್ರೆಗಳ ಪರಿಸ್ಥಿತಿಯನ್ನು ನಾವು ನೋಡಿದಾಗ, ಯಾವುದೇ ಪಕ್ಷದ ಸದಸ್ಯರು ಚೆನ್ನಾಗಿದೆಯೆಂದು ಹೇಳುವುದಿಲ್ಲ. ಆದೇಕೋ ಅದರ ಅಭಿವೃದ್ಧಿಗೆ ಪ್ರಯತ್ನ ಮಾಡುತ್ತಿಲ್ಲ. ನಾವು ಆಸ್ಪತ್ರೆಗಳನ್ನು ಕಟ್ಟಿಸುವುದಕ್ಕೆ ಸುಮಾರು 200 ಕೋಟಿ ರೂ.ಗಳನ್ನು ವಿಶ್ವಬ್ಯಾಂಕ್‌ನಿಂದ ಸಾಲ ತೆಗೆದು ಬಿಲ್ಡಿಂಗ್ ಕಟ್ಟಿಸಿದೆವು. ಎಲ್ಲಾ ತಾಲ್ಲೂಕುಗಳಿಗೆ ಸುಸಜ್ಜಿತವಾದದ ಕಟ್ಟಡಗಳಿವೆ. ಆದರೆ, ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಪ್ರತಿಯೊಂದು ಆಸ್ಪತ್ರೆಗಳಲ್ಲಿಯೂ ವೈದ್ಯರ ಕೊರತೆಯಿದೆ. ನೇಮಿಸಿದ ವೈದ್ಯರು ಅಲ್ಲಿ ಕೆಲಸ ಮಾಡುವುದಿಲ್ಲ. ಪ್ರತಿಯೊಬ್ಬರೂ ಪಟ್ಟಣಕ್ಕೆ ಬರುತ್ತಾರೆ. ತಾಲ್ಲೂಕು ಮಟ್ಟದಲ್ಲಿ ಒಂದೊಂದು ಸಾರ್ವಜನಿಕ ಆಸ್ಪತ್ರೆಗಳನ್ನು ಕಟ್ಟಿದ್ದೀರಿ. ಅದಕ್ಕೆ ಪೋಸ್ಟ್‌ಗಳು ಸ್ಯಾಂಕ್ಷನ್ ಆಗಿದೆ. ಸವಲತ್ತುಗಳಿವೆ, ಸರ್ಕಾರ ಎರಡು ವರ್ಷಗಳ ಹಿಂದೆ ಕಟ್ಟಡ ಕಟ್ಟಿದ್ದರೂ ಆ ಸ್ಪೆಷಲೈಜ್ಡ್ ಪೋಸ್ಟ್‌ಗಳಿಗೆ ಅಪ್ರೂವ್ ಮಾಡಿಲ್ಲ ಮತ್ತು ನೇಮಕಾತಿಯನ್ನೂ ಮಾಡಿಲ್ಲ. ಆದಷ್ಟು ಬೇಗ ಈ ನೇಮಕಾತಿಗಳನ್ನು ಮಾಡಬೇಕೆಂಬುದು ನನ್ನ ಆಗ್ರಹ. 1995ನೇ ಇಸವಿಯಲ್ಲಿ ನಾವು ಹೊಸ ವ್ಯವಸ್ಥೆಯನ್ನು ನಿರ್ಮಾಣ ಮಾಡಿದೆವು. ಮುಖ್ಯಮಂತ್ರಿಗಳಾಗಿದ್ದ ಶ್ರೀ ಹೆಚ್.ಡಿ. ದೇವೇಗೌಡರವರು ಕರ್ನಾಟಕ ಮುಖ್ಯಮಂತ್ರಿಗಳ ವೈದ್ಯಕೀಯ ಪರಿಹಾರ ನಿಧಿ ಎಂಬ ವ್ಯವಸ್ಥೆಯನ್ನು ಜಾರಿಗೆ ತಂದರು. ಅದು ಸುಮಾರು ಐದು ವರ್ಷಗಳಿಂದಲೂ ಚೆನ್ನಾಗಿ ನಡೆದುಕೊಂಡು ಬಂದಿದೆ. ಬಡವರು, ನಿರ್ಗತಿಕರು, ಹೃದ್ರೋಗಕ್ಕೆ ಸಂಬಂಧಪಟ್ಟ ಖಾಯಿಲೆಗಳಿಗೆ ಜನರು ಖರ್ಚು ಮಾಡಲಾಗುವುದಿಲ್ಲ. ಸರ್ಕಾರ ಸ್ವಲ್ಪಮಟ್ಟಿಗೆ ಅಂಥವರಿಗೆ ಬೆಂಬಲ ಕೊಡಬೇಕೆಂಬುದು ಅವರ ಉದ್ದೇಶವಾಗಿತ್ತು. ಇದು ಬಹಳ ಒಳ್ಳೆಯ ಉದ್ದೇಶ. ಆದರೆ, ಬೆಂಗಳೂರು ನಗರದಲ್ಲಿ ಕೆಲವು ಆಸ್ಪತ್ರೆಗಳನ್ನು ಉದಾ: ಕಿದ್ವಾಯಿ,

ಜಯದೇವ ಇರಬಹುದು, ಗುರುತಿಸಿದ್ದೀರಿ, ಉತ್ತರ ಕರ್ನಾಟಕದ ಭಾಗದವರು ಚಿಕಿತ್ಸೆಗಾಗಿ ಬೆಂಗಳೂರಿಗೆ ಬಂದು ಹೋಗಬೇಕಾದರೆ ಪ್ರವಾಸ, ಇಲ್ಲಿ ಉಳಿದುಕೊಳ್ಳುವ ಖರ್ಚು ಇರಬಹುದು, ಅದಕ್ಕೆ ಕಷ್ಟವಾಗುತ್ತದೆ. ಹೀಗಾಗಿ, ಆದರಿಂದ ಈ ಭಾಗಕ್ಕೇನೋ ಸ್ವಲ್ಪ ಅನುಕೂಲವಾಗಿದೆ. ಆದರೆ ಉತ್ತರ ಕರ್ನಾಟಕ, ಬಾಂಬೆ ಕರ್ನಾಟಕ, ಹೈದರಾಬಾದ್ ಕರ್ನಾಟಕ ಇರಬಹುದು, ಸೌಲಭ್ಯಗಳನ್ನು ಪಡೆಯುವುದರಲ್ಲಿ ಸ್ವಲ್ಪ ತೊಂದರೆಯಾಗಿದೆ ಎನ್ನುವುದು ನಮ್ಮ ಅಭಿಪ್ರಾಯ. ಆ ದೃಷ್ಟಿಯಿಂದ ನಮ್ಮ ರಾಯಚೂರಿನಲ್ಲಿ ಒಪೆಕ್ ಆಸ್ಪತ್ರೆಯನ್ನು ಸುಮಾರು 30 ಕೋಟಿ ರೂಪಾಯಿಗಳನ್ನು ಆ ಸಂಸ್ಥೆಯಿಂದ ತಂದು ಕಟ್ಟಿಸಿದ್ದೇವೆ. ಎಲ್ಲರಿಗೂ ಗೊತ್ತಿರುವ ಹಾಗೆ, ಮೊನ್ನೆ ನಾವು ಕೆಲವು ಮುಖಂಡರುಗಳು ಆಸ್ಪತ್ರೆಗೆ ಬೇಟಿ ನೀಡಿದ್ದೆವು. ಒಳ್ಳೆಯ ಕಟ್ಟಡವನ್ನು ಕಟ್ಟಿ ಅದಕ್ಕೆ ಸುಮಾರು 15 ಕೋಟಿ ರೂ. ಅಂದಾಜಿನ ಸ್ಕ್ಯಾನಿಂಗ್, ಬೇರೆ ಬೇರೆ ಎಕ್ಸ್-ರೇ ಇರಬಹುದು, ಆಧುನೀಕರಣವಾದ ಎಕ್ವಿಪ್‌ಮೆಂಟ್ಸ್‌ಗಳನ್ನು ಅಲ್ಲಿಟ್ಟಿದ್ದಾರೆ. ಆ ಒಂದು ಉಪಕರಣಗಳ ವಾರಂಟಿ ಅವಧಿ ಮುಗಿದುಹೋಗಿದೆ. ಅದನ್ನು ಕೆಟ್ಟು ಹೋಗಿದ್ದರೆ ಮತ್ತೇ ರಿಪ್ಲೇಸ್ ಮಾಡುವ ಅವಕಾಶವಿಲ್ಲ. ಅದನ್ನು ಪ್ರಾರಂಭಿಸಿದ್ದೀರಿ. ರಾಜೀವ್ ಗಾಂಧಿ ವೈದ್ಯಕೀಯ ಸಂಸ್ಥೆ ಎಂಬ ಹೆಸರನ್ನು ಹಾಕಿಸಿದ್ದೀರಿ, ಸಂತೋಷ. ಆದರೆ, ಅದೊಂದು ಜಿಲ್ಲಾ ಆಸ್ಪತ್ರೆಯ ಮಟ್ಟದಲ್ಲೂ ಇಲ್ಲ. ಅಷ್ಟೊಂದು ದೊಡ್ಡ ಕಟ್ಟಡ ಕಟ್ಟಿ, ಆ ಭಾಗದ ರೈತರಿಗಾಗಲಿ, ಕೂಲಿಕಾರರಿಗಾಗಲಿ, ಬಡವರಿಗಾಗಲಿ ಅನುಕೂಲವಾಗಬೇಕು, ಎಲ್ಲರೂ ಸಹ ಉತ್ತಮವಾದ ಚಿಕಿತ್ಸೆಗಾಗಿ ದೊಡ್ಡ ದೊಡ್ಡ ಖಾಯಿಲೆಗಳಿಗೆ ಬೆಂಗಳೂರಿಗೆ ಬರುವುದಕ್ಕಾಗುವುದಿಲ್ಲ, ಸ್ಪೆಷಲೈಸ್ಡ್ ಫೆಸಲಿಟೀಸ್ ಅಲ್ಲಿ ಸಿಗಬೇಕೆಂಬ ಉದ್ದೇಶದಿಂದ ಮಾಡಿದೆವು. ಅದು ಪ್ರಾರಂಭವಾಗಿ ಏಳು ತಿಂಗಳಾಯಿತು. ಅದು ಜಿಲ್ಲಾ ಆಸ್ಪತ್ರೆಯ ಮಟ್ಟದಲ್ಲೂ ಇಲ್ಲ. ಆದುದರಿಂದ ಅದನ್ನು ನೀವು ಯಾವಾಗ ಸುಸಜ್ಜಿತವಾದ ಆಸ್ಪತ್ರೆಯನ್ನಾಗಿ ಮಾಡುತ್ತೀರಿ. ಒಂದು ಪರಿಣತದ ಡಾಕ್ಟರ್‌ಗಳನ್ನು ಯಾವಾಗ ನೇಮಿಸುತ್ತೀರಿ? ಉಪಕರಣಗಳನ್ನು ಯಾವಾಗ ಉಪಯೋಗಿಸಿಕೊಳ್ಳುತ್ತೀರಿ? ಅದರ ಬಗ್ಗೆ ಹೆಚ್ಚು ಗಮನಹರಿಸಬೇಕು. ಏಕೆಂದರೆ, ಅಷ್ಟು ದಿನಗಳಿಂದ ಅಂದರೆ 7-8 ತಿಂಗಳಿನಿಂದ ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲವೆಂಬುದು ನನ್ನ ಅನಿಸಿಕೆ. ಸಮಾಜ ಕಲ್ಯಾಣ ಇಲಾಖೆ ತುಳಿತಕ್ಕೊಳಗಾದವರ, ಬಡವರ, ದೀನದಲಿತರ, ಪರಿಶಿಷ್ಟ ಜಾತಿ : ವರ್ಗದವರ ಕಲ್ಯಾಣಕ್ಕಿರುವ ಇಲಾಖೆ. ಈ ಸರ್ಕಾರದಲ್ಲಿ ಆ ಇಲಾಖೆ ಬಗ್ಗೆ ಕಳಕಳಿ ಇರುವ ಮಂತ್ರಿಗಳೇ ಮಂತ್ರಿಗಳಾಗಿದ್ದಾರೆ. ನಾವು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆಂದಿದ್ದೀರಿ. ಹೋದ ಸಭೆಯಲ್ಲಿ ನಾವು ಏನೇಕ ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಆದರೆ, ಅದಕ್ಕೆ ನಿರೀಕ್ಷಿತ ಮಟ್ಟದಲ್ಲಿ ಆರ್ಥಿಕ ಬೆಂಬಲ ಸಿಕ್ಕಿಲವೆಂಬುದು ನನ್ನ ಭಾವನೆ. ಮಕ್ಕಳ ಶಾಲಾ ಪ್ರವೇಶ ಕಡಿಮೆಯಾಗಬಾರದು, ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಎಲ್ಲಾ ಸವಲತ್ತುಗಳನ್ನು ಒದಗಿಸಿಕೊಡಬೇಕೆಂಬುದು ಸರ್ಕಾರದ ನೀತಿ ಎಂದು ನೀವು ಹೇಳಿದ್ದೀರಿ. ಅದಕ್ಕೆ ಶಿಕ್ಷಣ ಇಲಾಖೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅದರಲ್ಲಿ ಪ್ರಾಮುಖ್ಯವಾದುದೆಂದರೆ, ಹಾಸ್ಟೆಲ್ ಪ್ರವೇಶ ಕಾರ್ಯಕ್ರಮ.

ಪ್ರೀ ಮತ್ತು ಪೋಸ್ಟ್ ಮೆಟ್ರಿಕ್ ಇರಬಹುದು, ಬಡ ಮಕ್ಕಳಿಗೆ ವಿದ್ಯಾಭ್ಯಾಸ ಅಲ್ಲಿಂದಲೇ ಪ್ರಾರಂಭವಾಗುವುದು. ತಂದೆ ತಾಯಿಗಳು ಮಕ್ಕಳನ್ನು ಹಾಸ್ಟೆಲ್‌ಗಳಿಗೆ ಸೇರಿಸುತ್ತಾರೆ. 75-76 ಸಾವಿರ ಮಕ್ಕಳು ಪ್ರೀ ಮೆಟ್ರಿಕ್ ಹಾಸ್ಟೆಲ್‌ಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅದೇ ರೀತಿ ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅದೇ ರೀತಿ ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳಲ್ಲಿ 10-15 ಸಾವಿರ ವಿದ್ಯಾರ್ಥಿಗಳಿದ್ದಾರೆ. ವಿದ್ಯಾರ್ಥಿಗಳ

4.40 ಪಿಎಂ

ಬೇಡಿಕೆ ಇದೆ ಎಂದು ನನಗೆ ಅನ್ನಿಸುತ್ತದೆ, ಹಾಸ್ಟೆಲ್ ಕಟ್ಟಡಕ್ಕೆ ಕಾರ್ಯಕ್ರಮವೇನೋ ಹಾಕಿಕೊಂಡಿದ್ದೀರಿ ಕಟ್ಟಡ ಇದ್ದು, ಸ್ಥಳಾವಕಾಶ ಇದ್ದು, ವಿದ್ಯಾರ್ಥಿಗಳ ಬೇಡಿಕೆ ಇದ್ದರೂ ತಾವು ಇನ್ನು ಮಂಜೂರಾತಿ ಕೊಟ್ಟಿಲ್ಲ. ಆ ಬಡ ಮಕ್ಕಳಿಗೆ 5 ರಿಂದ 10ನೇ ತರಗತಿಯವರೆಗೆ ಹಾಸ್ಟೆಲ್ ಸೌಲಭ್ಯ ದೊರಕಿಸಿದರೆ ಅವರು ಅಲ್ಲಿ ವಿದ್ಯಾಭ್ಯಾಸ ಮಾಡಿ ಮುಂದಿನ ವಿದ್ಯಾಭ್ಯಾಸಕ್ಕೆ ಹೋಗುತ್ತಾರೆ. ಅದಕ್ಕಾಗಿ ಪ್ರವೇಶಾವಕಾಶವನ್ನು ಹೆಚ್ಚು ಮಾಡತಕ್ಕದ್ದು ಬಹಳ ಅತ್ಯಾವಶ್ಯಕ. ಪ್ರತಿಯೊಂದು ಕ್ಷೇತ್ರದಲ್ಲೂ ಈಗ ಎಷ್ಟು ಪ್ರವೇಶಾವಕಾಶ ಇದೆಯೋ ಅಷ್ಟು ಬೇಡಿಕೆ ಇದೆ. ಕೊನೇಪಕ್ಷ ಆ ಬೇಡಿಕೆಯ ಮೇಲೆ ಶೇಕಡ 15 ರಷ್ಟನ್ನಾದರೂ ಹೆಚ್ಚಿಗೆ ಮಾಡಿದಾಗ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಕೊನೇ ಪಕ್ಷ 10 ಸಾವಿರ ಪ್ರವೇಶಾವಕಾಶವನ್ನು ಈ ವರ್ಷ ಹೆಚ್ಚಿಗೆ ಮಾಡಬೇಕು, ಇದಕ್ಕೆ ಹಣಕಾಸಿನ ಇಲಾಖೆಯವರು ಮಂಜೂರಾತಿ ನೀಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. "ಗಂಗಾಕಲ್ಯಾಣ ಯೋಜನೆಯನ್ನು" ಮಾನ್ಯ ಮುಖ್ಯಮಂತ್ರಿಗಳು ಹಾಗೂ ತಾವುಗಳೂ ಕೂಡ ಇದೊಂದು ಒಳ್ಳೆಯ ಕಾರ್ಯಕ್ರಮ, ದಲಿತರ ಆರ್ಥಿಕ ಅಭಿವೃದ್ಧಿಯಾಗಬೇಕಾದರೆ ಇದೊಂದು ಒಳ್ಳೆಯ ಕಾರ್ಯಕ್ರಮವೆಂದು ತಾತ್ವಿಕವಾಗಿ ಒಪ್ಪಿಕೊಂಡಿದ್ದೀರಿ. ಕಳೆದ ಬಾರಿ ಕೆಲವು ತಾಲ್ಲೂಕುಗಳಲ್ಲಿ ಒಂದೆರಡು ಮಾತ್ರ ಇದೆ ಮುಂದಿನ ಸಾರಿ ಇದನ್ನು ಹೆಚ್ಚು ಮಾಡುತ್ತೇವೆಂದು ಹೇಳಿದ್ದೀರಿ. ಈ ವರ್ಷ ಮಧ್ಯದಲ್ಲಿ ಮಾನ್ಯ ಸಚಿವರು, ಎಸ್‌ಸಿಗೆ 15, ಎಸ್‌ಟಿಗೆ 5 ಒಟ್ಟಾರೆ 20 ಮಾಡುತ್ತೇವೆಂದು ಹೇಳಿದ್ದೀರಿ. ನನಗೆ ಅನ್ನಿಸುತ್ತದೆ ಇದೂ ಕೂಡ ಸಾಕಾಗುವುದಿಲ್ಲ. ಪ್ರತಿ ತಾಲ್ಲೂಕುಗಳಲ್ಲಿ ಇವತ್ತು ನೂರು ಅರ್ಜಿಗಳು ಪೆಂಡಿಂಗ್‌ನಲ್ಲಿದೆ ಹೀಗಿರುವಾಗ ನಾವು ಕೇವಲ 20 ಕೊಟ್ಟರೆ ಅದು ಏನೂ ಪ್ರಯೋಜನವಾಗುವುದಿಲ್ಲ. ನಮ್ಮ ಸರ್ಕಾರ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಸುಮಾರು 10 ಸಾವಿರ ಬೋರ್‌ವೆಲ್‌ಗಳನ್ನು ಕೊರೆಸಿರುವುದು ತಮಗೆಲ್ಲರಿಗೂ ಗೊತ್ತಿದೆ. ನಮ್ಮ ಸರ್ಕಾರ ಅಷ್ಟೊಂದು ಮಾಡಿರುವಾಗ, ದೀನದಲಿತರ ಹೆಸರು ಹೇಳಿಕೊಂಡು ಬಂದಿರುವ ಕಾಂಗ್ರೆಸ್ ಸರ್ಕಾರ 20 ಸಾವಿರ ತೆಗೆಸಬೇಕೆಂಬುದು ನನ್ನ ಅನಿಸಿಕೆ. ಏಕೆಂದರೆ, ಬೃಹತ್ ಮತ್ತು ಸಣ್ಣ ನೀರಾವರಿ ಸೇರಿದಂತೆ ಸಾವಿರಾರು ಕೋಟಿ ರೂಪಾಯಿಗಳನ್ನು ನಾವು ಈ ನೀರಾವರಿಗಾಗಿ ಖರ್ಚು ಮಾಡುತ್ತೇವೆ. ಈ ಟ್ರ್ಯಾಕ್‌ನಲ್ಲಿ ಷೆಡ್ಯೂಲ್ ಕ್ಯಾಸ್ಟ್‌ನವರ ಜಮೀನುಗಳು ಇರುವುದಿಲ್ಲ. ಇವರ ಜಮೀನುಗಳು ಎಲ್ಲೋ

ಒಂದು ಕಡೆ ಎರಡು, ಮೂರು ಎಕರೆ ಇಟ್ಟುಕೊಂಡಿರುತ್ತಾರೆ. ಇಂಥವರಿಗೆ ಈ ಯೋಜನೆ ಒಂದು ವರದಾನ. ಇಂಥವರು ಈ ಯೋಜನೆಯಿಂದ ಬೋರ್‌ವೆಲ್ ತೆಗೆಸಿಕೊಂಡು, ಪಂಪ್‌ಸೆಟ್ಟು ಹಾಕಿಕೊಂಡು ವರ್ಷಕ್ಕೆ ಕನಿಷ್ಟ ಒಂದು ಬೆಳೆಯನ್ನಾದರೂ ತೆಗೆಯುತ್ತಾರೆ. ಹೀಗಾಗಿ ಸಣ್ಣ ನೀರಾವರಿ ಇರಬಹುದು, ಬೃಹತ್ ನೀರಾವರಿ ಇರಬಹುದು, ಇದರಲ್ಲಿ ನಾನು ಪರ್ಸೆಂಟೇಜ್ ಪ್ರಕಾರ ಕೊಡಿ ಎಂದು ನಾನು ಕೇಳುತ್ತಿಲ್ಲ. Relatively to compensate with the demands - ಸ್ವಲ್ಪ ಹೆಚ್ಚು ಹಣವನ್ನು ಕೊಟ್ಟರೆ, ಕೊನೇ ಪಕ್ಷ ಒಂದು ತಾಲ್ಲೂಕಿಗೆ 25 ಸಾಲುವುದಿಲ್ಲ, ಒಂದು ನೂರು ಆದರೂ ನೀವು ಕೊಡಬೇಕಾಗುತ್ತದೆ ಇದಕ್ಕೆ ತಾವು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿ ಇದಕ್ಕೆ ಹಣ ಬಿಡುಗಡೆ ಮಾಡಿಸಿಕೊಳ್ಳಬೇಕೆಂದು ನನ್ನ ಅನಿಸಿಕೆ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ಕಳೆದ ಸಾರಿ ಒಟ್ಟು ರಾಜ್ಯಕ್ಕೆ ಒಂದು ಸಾವಿರ ಗಂಗಾ ಕಲ್ಯಾಣ ಸಿಕ್ಕಿತ್ತು. ಹಿಂದಿನ ಸರ್ಕಾರದವರು ಮಾಡಿದ್ದಾರೆ ನಾನು ಇಲ್ಲವೆಂದು ಹೇಳುವುದಿಲ್ಲ. 1995-96 ರಿಂದ 1998-99ರವರೆಗೆ 10 ಸಾವಿರ ವೈಯಕ್ತಿಕ ಮತ್ತು 10 ಸಾವಿರ ಗುಂಪು ಮಾಡಿದ್ದಾರೆ. ಈ ವರ್ಷ ನಾವು ಒಂದು ವರ್ಷಕ್ಕೆ 5 ಸಾವಿರ ಮಾಡಿದ್ದೇವೆ. ಇದೇ ಪ್ರಮಾಣದಲ್ಲಿ ನಾವು ಇನ್ನೂ ಮೂರು ವರ್ಷ ಹೋದರೆ ಖಂಡಿತವಾಗಿ ನಾವು ಕೂಡ ಅಷ್ಟೇ ಪ್ರಮಾಣದಲ್ಲಿ ಮಾಡುತ್ತೇವೆ. ಬೇರೆ ಬೇರೆ ಸಣ್ಣ ಪುಟ್ಟ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡುವುದಕ್ಕಿಂತ, ನಾವು ಮೂರು ನಾಲ್ಕು ಕಾರ್ಯಕ್ರಮಗಳಿಗೆ ವಿಶೇಷವಾದ ಆದ್ಯತೆಯನ್ನು ಕೊಟ್ಟಿದ್ದೇವೆ. ಕ್ರೋಢೀಕೃತ ಹಣ ಸ್ವಲ್ಪ ಜಾಸ್ತಿ ಸಿಕ್ಕಿದರೆ, ಕಳೆದ ಸಾರಿ ಅದು ನೂರು ಕೋಟಿ ರೂಪಾಯಿ ಇತ್ತು ಈ ಸಾರಿ ಅದು ಇನ್ನೂರು ಕೋಟಿ ಆಗಬಹುದೆಂದು ನಾವು ನಿರೀಕ್ಷೆ ಮಾಡಿದ್ದೇವೆ, ಮನೆ ಮತ್ತು ಗಂಗಾ ಕಲ್ಯಾಣ ಮತ್ತೊಂದು ತರಬೇತಿ, ಇವುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಕೊಡಬೇಕೆನ್ನುವ ಆಸೆ ಇದೆ. ಹಣದ ಸಂಗ್ರಹಣೆಯ ಮೇಲೆ ಇದು ಅವಲಂಬಿಸಿದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಒಪ್ಪಿದ್ದಾರೆ.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಮುಖ್ಯಮಂತ್ರಿಗಳ ಚಿಂತನೆಯಂತೆ ರಾಜ್ಯದಲ್ಲಿ 11 ಲಕ್ಷ ಮನೆಗಳನ್ನು ಕಟ್ಟಿಸುತ್ತೇವೆನ್ನುವ ಘೋಷಣೆ ಮಾಡಿದ್ದಾರೆ. ಇದೊಂದು ಒಳ್ಳೆಯ ಕಾರ್ಯಕ್ರಮ, ಏಕೆಂದರೆ, ಒಬ್ಬ ವ್ಯಕ್ತಿಗೆ ಮೂಲಭೂತವಾಗಿ ವಾಸ ಮಾಡುವುದಕ್ಕೆ ಮನೆ ಬಡವರಿಗೆ ಶಿಕ್ಷಣ, ನೀರಾವರಿ ಸೌಲಭ್ಯ ಕೊಡಬೇಕಾಗುತ್ತದೆ. ಪರಿಶಿಷ್ಟಜಾತಿಯವರಿಗೆ ನೀವು ಆ ಮೂರು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ತಾವೇನು ಶಿಕ್ಷಣ ಹೌಸಿಂಗ್, ನೀರಾವರಿಗೆ ಏನು ಆದ್ಯತೆ ಕೊಟ್ಟಿದ್ದೀರಿ ಅದೇ ಪ್ರಕಾರವಾಗಿ ಮನೆಗೆ ರಾಜೀವಗಾಂಧಿ ಹೌಸಿಂಗ್ ಕಾರ್ಪೋರೇಷನ್ ಅದು ಹಿಡಿದುಕೊಂಡು ಹೋಗುತ್ತಿದೆ. ಅದೊಂದು ಒಳ್ಳೆಯ ಕಾರ್ಯಕ್ರಮ ಅದರ ಜೊತೆಗೆ ತಮ್ಮ ಮೂರು ವರ್ಷಗಳ ಒಳಗೆ

ಪರಿಶಿಷ್ಟ ಜಾತಿ ಅರ್ಹ ಫಲಾನುಭವಿಗಳು ಈ ರಾಜ್ಯದಲ್ಲಿ ಯಾರು ಇದ್ದಾರೆ ಅವರಿಗೆ ಹಂತ ಹಂತವಾಗಿ ಈ ಗಂಗಾ ಕಲ್ಯಾಣ ಯೋಜನೆಯನ್ನು ಕೊಡಿಸುತ್ತೇವೆನ್ನುವ ಘೋಷಣೆ ಮಾಡಿ. ಒಂದೇ ವರ್ಷದಲ್ಲಿ ಕೊಡಿ ಎಂದು ನಾನು ಹೇಳುವುದಿಲ್ಲ, ಬದಲಾಗಿ ನಿಮ್ಮ ಅಧಿಕಾರಾವಧಿಯಲ್ಲಿ ಯಾರ್‍ಯಾರು ಅರ್ಹತೆವುಳ್ಳ ಫಲಾನುಭವಿಗಳು ಇದ್ದರೆಂಬುದನ್ನು ಒಂದು ಸರ್ವೇ ಮಾಡಿ ಅವರಿಗೆ ಕೊಡತಕ್ಕಂಥ ಕೆಲಸ ಮಾಡಿದರೆ ಬಹಳ ಪುಣ್ಯ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :— ತಮ್ಮ ಅವಗಹನೆಗೆ ತರುವುದಾದರೆ, ರಾಜ್ಯದಲ್ಲಿ ಪ್ರತಿಯೊಂದು ತಾಲ್ಲೂಕುಗಳಲ್ಲಿಯೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕುಟುಂಬಗಳಿಗೆ ಎಷ್ಟು ಮನೆಯಿಲ್ಲ ಅದನ್ನು ಸರ್ವೇ ಮಾಡಲಿಕ್ಕೆ ಈಗಾಗಲೇ ನಾನು ಕಳುಹಿಸಿದ್ದೇನೆ.

ಶ್ರೀ ಬಿ. ಸೋಮಶೇಖರ್ :— ಅವರಿಗೂ ಹಾಗೂ ಇತರರನ್ನು ಕೂಡ ಗುರುತಿಸಬೇಕು, ಏಕೆಂದರೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು 11 ಲಕ್ಷ ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :— ಅದೊಂದು ತೀರ್ಮಾನದ ಪ್ರಕಾರ ನಾವು ಈಗಾಗಲೇ ಕೆಲಸವನ್ನು ಮಾಡಿದ್ದೇವೆ, ಮೊದಲನೇ ಹಂತದಲ್ಲಿ 2 ಲಕ್ಷ, ಕಟ್ಟಿದ್ದು, ಎರಡನೇ ಹಂತವಾಗಿ ಆ ಕಾರ್ಯಕ್ರಮ ಅನುಷ್ಠಾನವಾಗುತ್ತಿದೆ. ವಿಶೇಷವಾಗಿ ಉಳಿದ ಮೂರು ವರ್ಷಗಳ ಅವಧಿಯಲ್ಲಿ ಈ ಪರಿಶಿಷ್ಟ ಜಾತಿ ಮತ್ತು ವರ್ಗದ ಎಲ್ಲಾ ಜನರಿಗೂ ಮನೆ ಕೊಡತಕ್ಕಂಥ ಒಂದು ವ್ಯಾಪಕವಾದ ಕಾರ್ಯಕ್ರಮವನ್ನು ಮಾಡಬೇಕೆನ್ನುವ ಚಿಂತನೆ ಇದೆ, ಇದಕ್ಕೆ ಹಣವನ್ನು ಒದಗಿಸಿಕೊಂಡು ಮಾಡುತ್ತೇವೆ ಜೊತೆಗೆ ಹೆಚ್ಚು ಸಂಖ್ಯೆ ಎಲ್ಲಿದೆಯೋ ಅಲ್ಲಿ ಹೆಚ್ಚು ಮನೆ ಕೊಡಬೇಕೆಂದು ಆಲೋಚನೆ ಮಾಡಿದ್ದೇವೆ.

ಶ್ರೀ ಬಿ. ಸೋಮಶೇಖರ್ :— ಪರಿಶಿಷ್ಟ ಜಾತಿಯವರಿಗೆ 50 ಸಾವಿರ ರೂ. ಆದಾಯ ಇದ್ದರೆ ಇಂಥವರಿಗೆ ವಿದ್ಯಾರ್ಥಿವೇತನ ಕೊಡುವುದಿಲ್ಲವೆಂದು ಕೇಂದ್ರ ಸರ್ಕಾರದವರು ಈ ಒಂದು ಮಾರ್ಗಸೂಚನೆಯನ್ನು ಕೊಟ್ಟಿದ್ದಾರೆಂದು ಕಾಣಿಸುತ್ತದೆ. ಇದರಿಂದಾಗಿ ಬಹಳ ಅನ್ಯಾಯವಾಗುತ್ತದೆ, ಏಕೆಂದರೆ ಒಬ್ಬ ಅಟೆಂಡರ್ ಆದವನಿಗೂ ಕೂಡ ಒಂದು ವರ್ಷಕ್ಕೆ ಒಂದು ಲಕ್ಷ ರೂಪಾಯಿ ಆದಾಯ ಬರುತ್ತದೆ, ಇಂಥವರಿಗೆ ಆದಾಯ ಮಿತಿ ಹಾಕಿದರೆ, ಯಾವುದೇ ವಿದ್ಯಾರ್ಥಿವೇತನ ಬರುವುದಿಲ್ಲ. ಸುಮಾರು 450 ರೂಪಾಯಿಗಳನ್ನು ಹಾಸ್ಟೆಲ್‌ಗೆ ಕೊಡುತ್ತೀರಿ, ಡೇಸ್ ಸ್ಕಾಲರ್-ಷಿಪ್‌ಗಳಿಗೆ 200 ರೂಪಾಯಿಗಳವರೆಗೆ ಕೊಡುತ್ತೀರಿ, ಅದರ 50 ಪರ್ಸೆಂಟ್ ಆದರೂ ನೀವು ಹಾಸ್ಟೆಲ್‌ಗೆ ಕೊಡಬೇಕಾಗುತ್ತದೆ. ಎಸ್‌ಸಿಪಿಯಲ್ಲಿ ಡಿಫರೆನ್ಸ್ ಅಮೌಂಟ್‌ನ್ನು ಕೊಟ್ಟರೆ ಅನುಕೂಲವಾಗುತ್ತದೆ. ಇದನ್ನು ನಮ್ಮ ರಾಜ್ಯದಲ್ಲಿಯಾದರೂ

ಆ ಒಂದು ಸೀಲಿಂಗ್ ಲಿಮಿಟ್ ಅನ್ನು ತೆಗೆದು ಅದರ ಡಿಫರೆನ್ಸ್‌ನ್ನು ಎಸ್‌ಸಿಪಿಯಲ್ಲಿ ಕೊಡತಕ್ಕಂಥದ್ದು ಸೂಕ್ತವೆಂದು ಹೇಳಲಿಚ್ಛಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಸಭೆ ಕರೆದಿದ್ದರು, ಪರಿಶಿಷ್ಟ ಜಾತಿಯ ಹೈಪವರ್ ಕಮಿಟಿ ಎಂದು ಆಗ ಕರೆದಿದ್ದರು, ಅವರು ಒಂದು ಆಶ್ವಾಸನೆ ಕೊಟ್ಟಿದ್ದರು. ತಾವೂ ಕೂಡ ಹೇಳಿದ್ದೀರಿ, ಏನೆಂದರೆ, ಎಸ್‌ಸಿ ಎಸ್‌ಟಿ ಕಮೀಷನ್ ಮಾಡುವುದಕ್ಕೆ ನಾವು ಒಪ್ಪಿದ್ದೇವೆಂದು ಹೇಳಿದ್ದೀರಿ. ಏಕೆಂದರೆ ನಾವು ಆ ಬಿಲ್‌ನ್ನು ತಯಾರಿಸಿದ್ದೆವು, ಕಾರಣಾಂತರಗಳಿಂದ ಅದನ್ನು ನಾವು ತರಲಿಕ್ಕೆ ಆಗಲಿಲ್ಲ, ನಾನು ಆಗ ನಮ್ಮ ಸರ್ಕಾರ ಮಾಡಲಿಕ್ಕೆ ಆಗಲಿಲ್ಲ ನೀವಾದರೂ ಅದನ್ನು ಮಾಡಬೇಕು, ಏಕೆಂದರೆ, ಹಿಂದುಳಿದ ವರ್ಗಗಳ ಆಯೋಗ ಇದೆ, ಅಲ್ಪಸಂಖ್ಯಾತರ ವರ್ಗಗಳ ಆಯೋಗ ಇದೆ, ಹೀಗಾಗಿ ಎಸ್‌ಸಿ/ಎಸ್‌ಟಿ ಕಮೀಷನ್ ಮಾಡಬೇಕು, ಅದರ ಜೊತೆಗೆ ಪವರ್ಸ್ ಕೊಡಬೇಕು, ಸುಮ್ಮನೆ ಟೀಥ್‌ಲೆಸ್ ಕಮೀಷನ್ ಆದರೆ ಏನೂ ಪ್ರಯೋಜನವಿಲ್ಲ. ಕ್ವಾಸಿ ಜ್ಯೂಡಿಷಲ್ ಪವರ್ಸ್ ಕೊಟ್ಟು ಆ ಕಮೀಷನ್ ಮಾಡಬೇಕೆಂದು ಹೇಳಿದಾಗ ಅದಕ್ಕೆ ನೀವು ಒಪ್ಪಿಕೊಂಡಿದ್ದೀರಿ, ಅದನ್ನು ಏಕೆ ಈ ಅಧಿವೇಶನದಲ್ಲಿ ತರಲಿಲ್ಲ, ಅದನ್ನು ತರಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:— ನಾನು ಈಗಾಗಲೇ ಮಂಜೂರಾತಿಯನ್ನು ನೀಡಿದ್ದೇನೆ, ಸಚಿವ ಸಂಪುಟದ ಮುಂದೆ ಈ ಅಧಿವೇಶನದಲ್ಲಿ ಮಂಡಿಸುತ್ತೇನೆ.

ಶ್ರೀ ಬಿ. ಸೋಮಶೇಖರ್:— ಸಂತೋಷ. ಮತ್ತೊಂದು ವಿಷಯ ಏನೆಂದರೆ, ಈ ಡಿಪಿಎಆರ್‌ನವರು ತಮ್ಮ ಗಮನಕ್ಕೆ ತಂದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಪರಿಶಿಷ್ಟ ಜಾತಿ ಮತ್ತು ವರ್ಗದ ಜನಗಳಿಗೆ ನೀಡುತ್ತಿರುವ ಮೀಸಲಾತಿಯಿರಬಹುದು, ಉದ್ಯೋಗ ಇರಬಹುದು, ಬಡ್ತಿ ವಿಚಾರ ಇರಬಹುದು, ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು 1976-78 ರಲ್ಲಿ ಮಾನ್ಯ ದೇವರಾಜ್ ಅರಸ್ ರವರು ಮುಖ್ಯಮಂತ್ರಿಯಾಗಿದ್ದಾಗ ಹೈ ಪವರ್ ಕಮಿಟಿ ಎಂದು ಮಾಡಿದ್ದರು. ಇದರಲ್ಲಿ ಏನು ಎಂದರೆ ಪ್ರತಿ ಆರು ತಿಂಗಳಿಗೊಮ್ಮೆ ಸಭೆ ಸೇರಿ, ಮೀಸಲಾತಿ ಎಲ್ಲೆಲ್ಲಿ ಉಲ್ಲಂಘನೆಯಾಗಿದೆ, ಎಲ್ಲೆಲ್ಲಿ ಬಡ್ತಿ ಸರಿಯಾಗಿ ಕೊಟ್ಟಿಲ್ಲ, ಎಲ್ಲೆಲ್ಲಿ ನೇಮಕಾತಿ ಆಗಿಲ್ಲ, ಇದನ್ನೆಲ್ಲಾ ಮಾನೀಟರ್ ಮಾಡತಕ್ಕಂಥ ಈ ಹೈಪವರ್ ಕಮಿಟಿಗೆ ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ, ಸಮಾಜ ಕಲ್ಯಾಣ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ, ಕೆಲವು ಮಂತ್ರಿಗಳೂ ಹಾಗೂ ಕೆಲವು ಶಾಸಕರು ಈ ಕಮಿಟಿಯಲ್ಲಿ ಇರುತ್ತಾರೆ. ಇದನ್ನು ನಾವು ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಮತ್ತು ಮಾನ್ಯ ಜೆ.ಹೆಚ್. ಪಾಟೀಲ್‌ರವರ ಕಾಲದಲ್ಲಿ ಮುಂದುವರೆಸಿಕೊಂಡು ಬಂದು ಆರು ತಿಂಗಳಿಗೊಮ್ಮೆ ಸಭೆ ಸೇರುತ್ತಿದ್ದೆವು. ಈಗ ಎರಡು ವರ್ಷವಾಗಿದೆ ಒಂದು ಸಭೆಯೂ ಆಗಿದೆ ಎಂದು ನನಗೆ ಅನ್ನಿಸುತ್ತಿಲ್ಲ. ಬಹುಶ: ಇದು ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ ಏಕೆಂದರೆ, ನೀವು ಆಗಿಂದಾಗ್ಗೆ ಈ ಸಭೆಯನ್ನು ಕರೆದು ಚರ್ಚೆ ಮಾಡಿದ್ದರೆ ಇಷ್ಟೊಂದು ನಿರುದ್ಯೋಗದ ಸಮಸ್ಯೆಯಾಗಲಿ,

ಬಡ್ತಿಯ ವಿಚಾರವಾಗಲಿ, ಇಂಥ ಸಮಸ್ಯೆಗಳು ಉದ್ಭವಿಸುತ್ತಿರಲಿಲ್ಲ. ಒಂದು ಕಡೆ ಬ್ಯಾಕ್‌ಲಾಗ್ ಹುದ್ದೆ ತುಂಬುವುದಿಲ್ಲವೆನ್ನುವ ಆಜಿಟೇಷನ್ ಮತ್ತೊಂದು ಕಡೆ ಬಡ್ತಿಯ ವಿಚಾರದಲ್ಲಿ ಅನ್ಯಾಯವಾಗಿದೆ ಅಂತಾರೆ, ಮತ್ತೊಂದು ಮೀಸಲಾತಿ ಉಲ್ಲಂಘಿಸಿದ್ದಾರೆ ಅಂತಾರೆ, ಆದ್ದರಿಂದ, ನೀವು ಪ್ರತಿ ಆರು ತಿಂಗಳಿಗೊಮ್ಮೆ ಈ ಹೈಪವರ್ ಕಮಿಟಿ ಕರೆದು ಚರ್ಚೆ ಮಾಡಿದ್ದರೆ ಅನುಕೂಲವಾಗುತ್ತಿತ್ತು. ಇನ್ನು ಮುಂದೆಯಾದರೂ ಆ ಸಭೆಯನ್ನು ಕರೆಯಬೇಕೆನ್ನುವುದು ನನ್ನ ಒಂದು ಆಗ್ರಹ. ಬ್ಯಾಕ್‌ಲಾಗ್ ವಿಚಾರವಾಗಿ ನಾವು ಬೇರೆ ರೂಪದಲ್ಲಿ ತಂದು ಅದರ ಬಗ್ಗೆ ನಂತರ ಮಾತನಾಡುತ್ತೇನೆ. ಈಗ ಈ ಬೇಡಿಕೆಗಳಿಗೆ ಸಂಬಂಧಿಸಿದಂತೆ ನಾನು ಮಾತನಾಡಲಿಚ್ಛಿಸುತ್ತೇನೆ. ೧೯೯೧ರಲ್ಲಿ ಎಸ್‌ಸಿ : ಎಸ್‌ಟಿ ರಿಸರ್ವೇಶನ್ ವೈಲೇಶನ್ ಆಕ್ಟ್‌ಗೆ ನಾವು ರೂಲ್ಸ್‌ನ್ನು ಮಾಡಿದ್ದೆವು. ಇವತ್ತು ಎಲ್ಲಾ ಇಲಾಖೆಗಳಲ್ಲಿ ರಿಸರ್ವೇಶನ್ ವೈಲೇಶನ್ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಇವತ್ತಿನ ದಿವಸ, ಸಹಕಾರ ಇಲಾಖೆಯ ವ್ಯಾಪ್ತಿಗೆ ಬರತಕ್ಕಂಥ ಸೊಸೈಟಿಗಳಲ್ಲಿಯೂ ಕೂಡ ಮೀಸಲಾತಿಯನ್ನು ವೈಲೇಷನ್ ಮಾಡಲಾಗುತ್ತಿದೆ. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಹಕಾರ ಸಚಿವರಾಗಿದ್ದಂಥ ಸಂದರ್ಭದಲ್ಲಿ ಸಹಕಾರ ಇಲಾಖೆಗೆ ಈ ರೂಲ್ಸ್‌ನ್ನು ಮಾಡಿದ್ದರು. ಆದರೆ ಇವತ್ತಿನ ದಿವಸ ಯಾವುದೇ ಸೊಸೈಟಿಯಲಾಗಲಿ ಮತ್ತು ಅನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿಯೂ ಕೂಡ ಮೀಸಲಾತಿಯನ್ನು ಅನುಸರಿಸುತ್ತಿಲ್ಲ. ಮೀಸಲಾತಿಯನ್ನು ಸರಿಯಾಗಿ ಅನುಸರಿಸದಿದ್ದರೆ ಕಠಿಣವಾದ ಶಿಕ್ಷೆಗೆ ಒಳಗಾಗುತ್ತಾರೆ ಎನ್ನತಕ್ಕಂಥ ಕಾನೂನು ಇದ್ದರೂ ಕೂಡ ಇವತ್ತಿನ ದಿವಸ ಯಾರೂ ಹೆದರುತ್ತಿಲ್ಲ. ಆದ್ದರಿಂದ ಇದನ್ನು ಕಟ್ಟುನಿಟ್ಟಾಗಿ ಆಚರಣೆಗೆ ತಂದಿದ್ದಾರೆಯೇ ಅಥವಾ ಇಲ್ಲವೇ ಎನ್ನತಕ್ಕಂಥದನ್ನು ಪರಿಶೀಲನೆ ಮಾಡತಕ್ಕಂಥ ಅಧಿಕಾರ ಸಮಾಜ ಕಲ್ಯಾಣ ಇಲಾಖೆಯ ಸಚಿವರಿಗೆ ಇದೆ. ಆದ್ದರಿಂದ ಮಾನ್ಯ ಸಚಿವರು ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದರೆ ಎಲ್ಲಾ ಇಲಾಖೆಗಳಿಗೆ ಚುರುಕು ಮುಟ್ಟಿಸುವುದಕ್ಕೆ ಸಾಧ್ಯವಾಗುತ್ತದೆಂದು ನನ್ನ ಭಾವನೆಯಾಗಿದೆ. ನಾನು ಈಗಾಗಲೇ ಕಳೆದ ಬಾರಿ ಕಂದಾಯ ಇಲಾಖೆ ಬಗ್ಗೆ ಮಾತನಾಡಿದ್ದೇನೆ. ಆದರೆ, ಇವತ್ತಿನ ದಿವಸ ಎರಡು-ಮೂರೂ ಪ್ರಮುಖವಾದಂಥ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಒಂದೆರಡು ತಿದ್ದುಪಡಿಗಳನ್ನು ತಂದಿದ್ದೆವು. ಬಗರ್‌ಹುಕುಂ ಸಾಗುವಳಿ ಯಾರ್ಯಾರು ಮಾಡುತ್ತಿದ್ದಾರೆ, ಅಂಥವರು ಅರ್ಜಿ ಹಾಕಿಕೊಳ್ಳಲು ೧೯೯೧ರವರೆಗೆ ಸಮಯವನ್ನು ನಿಗದಿ ಮಾಡಲಾಗಿತ್ತು. ಆದರೆ, ನಾವು ೧೯೯೯ರವರೆಗೆ ಬಗರ್‌ಹುಕುಂ ಸಾಗುವಳಿಗೆ ಅರ್ಜಿ ಹಾಕಲು ತಿದ್ದುಪಡಿ ತಂದೆವು. ಇದೇ ರೀತಿಯಾಗಿ ಗೇಣಿದಾರರಿಗೆ ಅರ್ಜಿ ಹಾಕಲು ೧೯೭೭ರವರೆಗೆ ಮಾತ್ರ ಅವಕಾಶ ಇತ್ತು. ಇವರಿಗೂ ಸಹ ಮತ್ತೊಂದು ಅವಕಾಶವನ್ನು ಕೊಡಬೇಕೆಂದು ನಾವು ಮತ್ತೆ ತಿದ್ದುಪಡಿ ತಂದೆವು. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಸುಮಾರು ೧೦ ಲಕ್ಷ, ಅರ್ಜಿದಾರರು ಬಗರ್‌ಹುಕುಂ,

ಸಾಗುವಳಿ ಚೀಟಿ ಪಡೆಯಲು ಅರ್ಜಿ ಹಾಕಿದ್ದಾರೆ. ಈ ಬಗರ್‌ಹುಕುಂ ಮ್ಯಾಟ್ರಿಯೊಳಗೆ ಸಣ್ಣ ಸಣ್ಣ ಕಾಫಿ ಬೆಳೆಗಾರರನ್ನು ಮತ್ತು ಕೇಂದ್ರ ಸರ್ಕಾರದಿಂದ ಸಿ ಅಂಡ್ ಡಿ ಲ್ಯಾಂಡ್ ಪಡೆದುಕೊಂಡಿರುವಂತವರನ್ನೂ ಕೂಡ ರೆಗ್ಯುಲರೈಸ್ ಮಾಡುವುದಕ್ಕೋಸ್ಕರ ಇದರಲ್ಲಿ ಸೇರಿಸಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಇರತಕ್ಕಂಥ ಕಮಿಟಿಯೂ ಕಳೆದ ಎರಡು ವರ್ಷಗಳಿಂದ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಇವತ್ತಿನ ದಿವಸ ಅಧಿಕಾರಿಗಳ ನೇತೃತ್ವದಲ್ಲಿ ಒಂದು ಕಮಿಟಿ ಮತ್ತು ಶಾಸಕರ ನೇತೃತ್ವದಲ್ಲಿ ಒಂದು ಕಮಿಟಿ ಶಿವಮೊಗ್ಗದಲ್ಲಿ ಮಾಡಿರತಕ್ಕಂಥದ್ದನ್ನು ನಾನು ಕೇಳಿದ್ದೇನೆ. ಇದು ಸರಿಯಾದ ವ್ಯವಸ್ಥೆಯಲ್ಲ. ಒಂದು ಕಮಿಟಿಯಲ್ಲಿ ಶಾಸಕರು ಇಲ್ಲದೇ ಇದ್ದರೆ, ಅವರನ್ನು ಬೇರೊಂದು ಕಮಿಟಿಗೆ ನೇಮಕ ಮಾಡುವುದು ಸಹಜ.

ಶ್ರೀ ಅರಗಜ್ಞಾನೇಂದ್ರ :— ಇವತ್ತಿನ ದಿವಸ ನೀವು ಎಷ್ಟೇ ಕಮಿಟಿ ಮಾಡಿದರೂ ಕೂಡ ತಾಲ್ಲೂಕುಗಳಲ್ಲಿ ಸರ್ವೆಯರ್‌ಗಳು ಇಲ್ಲ. ಸರ್ವೆ ಮಾಡದೇ ಕಮಿಟಿ ಯಾವ ರೀತಿ ಕೆಲಸ ಮಾಡುವುದಕ್ಕಾಗುತ್ತದೆ ಆದ್ದರಿಂದ, ಮೊದಲು ಸರ್ವೇಯರ್ ಕೊರತೆಯನ್ನು ನೀಗಿಸಬೇಕು.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಉಪಾಧ್ಯಕ್ಷರೆ ಇನ್ನೊಂದು ಐತಿಹಾಸಿಕ ತಿದ್ದುಪಡಿಯನ್ನು ನಾವು ತಂದಿದ್ದೇವೆ. ಅದೇನೆಂದರೆ, ಸರ್ಕಾರಿ ಅಥವಾ ಖಾಸಗಿ ಜಮೀನುಗಳಲ್ಲಿ ಬಡವರು ಮನೆಗಳನ್ನು ಕಟ್ಟಿಕೊಂಡಿದ್ದರೆ ಅವುಗಳನ್ನು ರೆಗ್ಯುಲರೈಸ್ ಮಾಡತಕ್ಕಂಥ ಒಂದು ಕಾನೂನನ್ನು ತಂದಿದ್ದೇವು. ಕೆಲವು ಬಡವರು ಸುಮಾರು ೨೦ ವರ್ಷಗಳಿಂದ ಒಂದೇ ಕಡೆ ಮನೆಯನ್ನು ಕಟ್ಟಿಕೊಂಡಿರುತ್ತಾರೆ. ಬಹಳ ವರ್ಷಗಳಿಂದ ಇವರು ವಾಸವಾಗಿದ್ದರು ಕೂಡ ಅವರು ಖಾತೆ ಮಾಡಿಕೊಡಲಿಕ್ಕೆ ಅವಕಾಶ ಇಲ್ಲ. ಹಾಗೆಯೇ ಇವರು ಸದರಿ ಮನೆಯ ಹಕ್ಕುದಾರರು ಆಗದೇ ಇರುವುದರಿಂದ ಯಾವುದೇ ರೀತಿಯ ಕೆಲಸವನ್ನು ತೆಗೆದುಕೊಳ್ಳಲಿಕ್ಕೆ ಆಗುತ್ತಿರಲಿಲ್ಲ. ಆದ್ದರಿಂದ ಇವುಗಳನ್ನು ರೆಗ್ಯುರಲೈಸ್ ಮಾಡುವುದಕ್ಕೋಸ್ಕರ ನಾವು ೯೪ಸಿ ಗೆ ತಿದ್ದುಪಡಿಯನ್ನು ತಂದಿದ್ದೇವೆ. ಐದು ಸಾವಿರ ಮನೆಗಳನ್ನು ರೆಗ್ಯುಲರೈಸ್ ಮಾಡಿಸಿಕೊಟ್ಟಿದ್ದೇವೆ ಮತ್ತು ಇದರಿಂದ ಬಹಳ ಜನರಿಗೆ ಸಹಾಯವಾಗಿದೆಯೆಂದು ಸನ್ಮಾನ್ಯ ರೇವಣ್ಣನವರು ಮತ್ತು ವಸಂತ ಸಾಲಿಯಾನರವರು ಹೇಳಿದರು. ಇವತ್ತಿನದಿವಸ ಇನ್ನು ಕೆಲವು ಕಡೆ ಅರ್ಜಿಗಳನ್ನು ತೆಗೆದುಕೊಂಡಿಲ್ಲ. ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಸದರಿ ಕಾನೂನನ್ನು ಮಾಡಿದರೂ ಕೂಡ ನನ್ನ ಕ್ಷೇತ್ರದಲ್ಲಿ ನಮ್ಮ ತಾಲ್ಲೂಕಿನ ತಹಸೀಲ್ದಾರರವರು ಇದರ ಬಗ್ಗೆ ಸರಿಯಾದ ಪ್ರಚಾರ ಕೊಡದೇ ಇರುವುದರಿಂದ ಅನೇಕ ಅರ್ಜಿದಾರರಿಗೆ ಈ ಕಾನೂನು ಇದೇ ಎಂಬುದೇ ಗೊತ್ತಿಲ್ಲ. ಇದಕ್ಕೆ ಮತ್ತೆ ಕಾಲಮಿತಿ ಮಾಡಿ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ವಹಿಸಬೇಕು. ಒಂದು ವೇಳೆ ಸಂಬಂಧಪಟ್ಟ ಅಧಿಕಾರಿಗಳು ಆಸಕ್ತಿಯಿಂದ ಸದರಿ

ಕಾರ್ಯವನ್ನು ನಿರ್ವಹಿಸದಿದ್ದರೆ, ಅಂಥ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಆಗಬೇಕು. ರೆಗ್ಯುಲರೈಸ್ ಮಾಡತಕ್ಕಂಥ ಕೆಲಸವನ್ನು ಸರ್ಕಾರ ಮತ್ತೊಮ್ಮೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ :— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಒಳ್ಳೆಯ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನನ್ನ ತಾಲ್ಲೂಕಿನಲ್ಲಿ ತಹಸೀಲ್ದಾರರು ಐದು ಸಾವಿರ ಅರ್ಜಿಗಳನ್ನು ರೆಗ್ಯುಲರೈಸ್ ಮಾಡಿದ್ದಾರೆ. ಅದರಲ್ಲಿ ಶ್ರೀಮಂತರೇ ಸಾಗುವಳಿ ಚೀಟಿಯನ್ನು ತೆಗೆದುಕೊಂಡು ಹೋಗಿದ್ದಾರೆ. ಆದರೆ ಬಡವರು ಮತ್ತು ದಲಿತರು ಒಂದು ಸಾಗುವಳಿ ಚೀಟಿಯನ್ನೂ ತೆಗೆದುಕೊಂಡು ಹೋಗಿಲ್ಲ. 20 x 30 ನಿವೇಶನಕ್ಕೆ ಎರಡೂವರೆ ಸಾವಿರ ರೂಪಾಯಿ ಖರ್ಚಾಗುವಾಗ ಹಳ್ಳಿಯಲ್ಲಿರತಕ್ಕಂಥ ಬಡವರು ಸಾಗುವಳಿ ಚೀಟಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ? ಆರ್ಥಿಕವಾಗಿ ಯಾರು ಹಿಂದುಳಿದಿದ್ದಾರೆ ಅಂಥವರಿಗೆ ನಾಮಿನಲ್ ರೇಟ್‌ನಲ್ಲಿ ಸಾಗುವಳಿ ಚೀಟಿ ಕೊಡುವಂಥ ವ್ಯವಸ್ಥೆ ಆಗಬೇಕು. ಆದ್ದರಿಂದ ಸದರಿ ಇರತಕ್ಕಂಥ ರೇಟ್‌ನ್ನು ಸ್ವಲ್ಪ ಕಡಿಮೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್‌ಹೆಗಡೆ :— ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ಆಶ್ರಯ ಯೋಜನೆಯಲ್ಲಿ ಉಚಿತವಾಗಿ ಕೊಡುವಂಥ ಒಂದು ವ್ಯವಸ್ಥೆ ಇದೆ. ಆದರೆ ಈ ಒಂದು ಯೋಜನೆಯಲ್ಲಿ ಹಣ ಕೊಡಬೇಕಾಗಿರುವುದರಿಂದ, ಇದನ್ನು ಆಶ್ರಯ ಯೋಜನೆಯ ರೂಪದಲ್ಲೇ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಒಳ್ಳೆಯದು.

ಶ್ರೀ ಬಿ. ಸೋಮಶೇಖರ್ :— ಇವತ್ತಿನ ದಿವಸ ಇರತಕ್ಕಂಥ ಎಲ್ಲಾ ತೊಂದರೆಗಳನ್ನೂ ನಮ್ಮ ಸರ್ಕಾರ ಅರಿತುಕೊಂಡು, ಇದನ್ನು ನಿವಾರಣೆ ಮಾಡಿಕೊಂಡು ಕೆಲಸ ಮಾಡುವುದಕ್ಕೆ ಕೆಲವೊಂದು ಆದೇಶಗಳನ್ನು ಹೊರಡಿಸಿದ್ದೇವೆ. ಆದರೆ ಇದನ್ನು ಸರಿಯಾಗಿ ಅನುಸರಿಸುತ್ತಿಲ್ಲವಷ್ಟೆ. ಮೊದಲು ಅವರಿಗೆ ಸಾಗುವಳಿ ಚೀಟಿ ಕೊಟ್ಟು ಆ ನಂತರ ಡಿಮಾಂಡ್‌ಗೆ ಸೇರಿಸಬೇಕೆಂದು ಹೇಳಿದ್ದೇವೆ. ಇವತ್ತಿನ ದಿವಸ ಇದನ್ನೂ ಕೂಡ ಅವರು ಮಾಡಿಲ್ಲ. ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೇ ೧೯೯೬ ರಿಂದ ೧೯೯೮ನೇ ಇಸವಿಯೊಳಗೆ ಮೈಸೂರಿನಲ್ಲಿ ಸುಮಾರು ೬೮ ಕೋಟಿ ರೂಪಾಯಿಗಳಷ್ಟು ಹಗರಣ ನಡೆದಿದೆ. ಈ ವಿಷಯದ ಬಗ್ಗೆ ಈ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಹಾಗೆಯೇ ಇದರ ಬಗ್ಗೆ ವಿಚಾರಣೆ ಕೂಡ ನಡೆದಿದೆ. ಜಿಲ್ಲಾಧಿಕಾರಿಗಳು ಇದರ ಬಗ್ಗೆ ತನಿಖೆ ಮಾಡಿ ವರದಿಯನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರ ಕ್ರಮ ತೆಗೆದುಕೊಂಡಿತ್ತು. ಈ ಒಂದು ನಿಟ್ಟಿನಲ್ಲಿ ನೀವು ಇವತ್ತಿನ ದಿವಸ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿಲ್ಲ.ನಾಲ್ಕು ಮಂಡಲ್ ಪಂಚಾಯತಿಗಳಲ್ಲಿ ಸುಮಾರು ೬೦೦ ಎಕರೆ ಸರ್ಕಾರ ಮತ್ತು ಖಾಸಗಿ ಜಮೀನಿನಲ್ಲಿ ಸುಮಾರು ೧೦ ಸಾವಿರ ಮನೆಗಳು

ಅನಧಿಕೃತವಾಗಿ ನಿರ್ಮಾಣವಾಗಿದೆ. ಇದರಲ್ಲಿ ಸುಮಾರು ೧೫ ಲಕ್ಷ ರೂಪಾಯಿ ಬೆಲೆ ಬಾಳುವಂಥ ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಕೊಂಡಿದ್ದಾರೆ. ಖಾಸಗಿ ಜಮೀನನ್ನು ಕನ್‌ವರ್ಶನ್ ಮಾಡಿಸಿದೆ; ಕೇವಲ ಪವರ್ ಆಫ್ ಅಟಾರ್ನಿ ಮಾಡಿ ಒಂದು ದೊಡ್ಡ ಹಗರಣವೇ ಆಗಿರುವಂಥದ್ದು ಸರ್ಕಾರದ ಗಮನಕ್ಕೆ ಬಂತು. ಈ ವಿಷಯದ ಬಗ್ಗೆ ಜಿಲ್ಲಾಧಿಕಾರಿಗಳು ವರದಿ ಕೊಟ್ಟ ಮೇಲೆ ಸರ್ಕಾರದ ವತಿಯಿಂದ ಉಪ ಕಾರ್ಯದರ್ಶಿಯವರಿಂದ ಸದರಿ ವಿಷಯವನ್ನು ತನಿಖೆ ಮಾಡಿ ವರದಿ ತರಿಸಿಕೊಂಡಿದ್ದೆವು. ಸುಮಾರು ೭೮ ಕೋಟಿ ರೂಪಾಯಿಗಳಲ್ಲಿ ಖಾತೆ ಮಾಡತಕ್ಕಂಥದರಲ್ಲಿ ಸರ್ಕಾರಕ್ಕೆ ಸುಮಾರು ೧೨ ಕೋಟಿ ೮೦ ಲಕ್ಷ ರೂಪಾಯಿ ನಷ್ಟವಾಗಿದೆ. ಹಾಗೆಯೇ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ೪೯ ಕೋಟಿ ೭೨ ಲಕ್ಷ, ೧೨ ಸಾವಿರ ೮೦೦ ರೂಪಾಯಿಗಳು ನಷ್ಟವಾಗಿದೆ. ಮತ್ತೆ ಬೆಟರ್‌ಮೆಂಟ್ ಶುಲ್ಕದಿಂದ ೪೮ ಲಕ್ಷ ರೂಪಾಯಿ ಹಾಗೆಯೇ ನೋಂದಣಿ ಶುಲ್ಕ ೧೦ ಕೋಟಿ ೪೫ ಲಕ್ಷ ರೂಪಾಯಿಗಳಷ್ಟು ಸರ್ಕಾರಕ್ಕೆ ನಷ್ಟವಾಗಿದೆ. ಈ ಎಲ್ಲಾ ವಿಚಾರಗಳ ಮೇಲೆ ತೀಕ್ಷ್ಣವಾದಂಥ ಕ್ರಮ ತೆಗೆದುಕೊಳ್ಳಬೇಕೆಂದು ವರದಿ ಬಂದ ಮೇಲೆ ನಮ್ಮ ಸರ್ಕಾರ ದಿನಾಂಕ: ೨೪-೦೯-೧೯೯೯ರಲ್ಲಿ ಒಂದು ಆದೇಶ ಹೊರಡಿಸಿತ್ತು ಅದೇನೆಂದರೆ "ಈ ಪ್ರಕರಣದಲ್ಲಿ ಸರ್ಕಾರ ಜಮೀನಿನಲ್ಲಿ ಅನಧಿಕೃತವಾಗಿ ನಿವೇಶನ ಮತ್ತು ಮನೆಗಳನ್ನು ನಿರ್ಮಾಣ ಮಾಡಿಕೊಂಡಿರುವಂಥದು ಸರ್ಕಾರ ತಕ್ಷಣ ಇದನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕಂಥದ್ದು ಹಾಗೂ ಅನಧಿಕೃತವಾಗಿ ಮನೆ ನಿವೇಶನ ಆಗಿರುವಂಥದನ್ನು ಬಹಿರಂಗ ಹರಾಜು ಮಾಡಿ ಇತ್ಯರ್ಥ ಮಾಡಿ ಇದರಿಂದ ಬಂದಂಥ ಹಣವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಆದೇಶವನ್ನು ಮಾಡಿದ್ದೇವೆ." ಹಾಗೆಯೇ ಖಾಸಗಿ ಜಮೀನಿನಲ್ಲಿ ವೈಲೇಷನ್ ಮಾಡಿರತಕ್ಕಂಥದನ್ನು ಬೇಗ ಇತ್ಯರ್ಥ ಮಾಡಿ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ನಾವು ಆದೇಶವನ್ನು ಹೊರಡಿಸಿದ್ದೇವೆ ಸರ್ಕಾರಿ ಆದೇಶ ಹೊರಡಿಸಿ ಸುಮಾರು ಎರಡು ವರ್ಷವಾಯಿತು. ಆದರೆ ಇದುವರೆಗೆ ಯಾವುದೇ ಮನೆಯನ್ನು ಅಲ್ಲಿ ಹರಾಜು ಹಾಕಿಲ್ಲ. ಯಾವುದೇ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲವೆಂದು ಮಾನ್ಯ ಭಾರತೀಶಂಕರ್‌ರವರು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದರು.

ಡಾ: ಭಾರತಿಶಂಕರ್:— ಈ ಸಂದರ್ಭದಲ್ಲಿಯೂ ಕೂಡ ನಾನು ಸರ್ಕಾರಕ್ಕೆ ಕೇಳುವುದೇನೆಂದರೇ ಈ ವಿಷಯದ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಮನಸ್ಸು ಇದೆಯೋ ಅಥವಾ ಇಲ್ಲವೋ ಎಂಬುದನ್ನು ಇಲ್ಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್:— ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ ಮತ್ತು ಈಗ ಇರುವ ಕಾಂಗ್ರೆಸ್ ಸರ್ಕಾರ ಕ್ರಮ ತೆಗೆದುಕೊಂಡಿಲ್ಲವೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ನಮ್ಮ ಸರ್ಕಾರ ಇದಕ್ಕೆ ಸಂಬಂಧಪಟ್ಟಂಥ

ವರದಿಯನ್ನು ತರಿಸಿಕೊಂಡು ಪರಿಶೀಲನೆ ಮಾಡಿ 24-09-1999ರಲ್ಲಿ ನಿರ್ದಿಷ್ಟವಾದಂಥ ಆದೇಶವನ್ನು ವಿಭಾಗಾಧಿಕಾರಿಗಳಿಗೆ ಕೊಟ್ಟಿದೆ.

ಡಾ: ಭಾರತಿ ಶಂಕರ್:— ನಿರ್ದಿಷ್ಟವಾಗಿ ಜನಪ್ರತಿನಿಧಿಗಳು ಇದರಲ್ಲಿ ಭಾಗಿಗಳಾಗಿದ್ದಾರೆಂದು ವರದಿಯಲ್ಲಿ ಕೋಟ್ ಮಾಡಲಾಗಿದೆ.

ಶ್ರೀ ಬಿ. ಸೋಮಶೇಖರ್:— ಮಾನ್ಯ ಅಧ್ಯಕ್ಷರೆ, ನಾನು ವ್ಯಕ್ತಿಗಳ ಹೆಸರನ್ನು ಹೇಳುತ್ತಿಲ್ಲ. ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ನೀಡಿರತಕ್ಕಂತ ವರದಿಯನ್ನು ಪರಿಶೀಲನೆ ಮಾಡಿದ್ದೇವೆ. ಈ ಪ್ರಕರಣದಲ್ಲಿ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ನಿವೇಶನ ಮತ್ತು ಮನೆ ನಿರ್ಮಿಸಿರುವ ಬಗ್ಗೆ ಸರ್ಕಾರ ತಕ್ಷಣ ಮುಟ್ಟುಗೋಲು ಹಾಕಿಕೊಳ್ಳುವಂಥದ್ದು ಹಾಗೂ ಅನಧಿಕೃತವಾಗಿ ನಿವೇಶನ ಮನೆ ಆಗಿರುವಂಥದ್ದನ್ನು ಬಹಿರಂಗ ಹರಾಜು ಮಾಡಿ ಇತ್ಯರ್ಥಮಾಡಲು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಆ ನಂತರ ಕಾನೂನು ಬಾಹಿರವಾಗಿ ಕಂದಾಯ ಜಮೀನನ್ನು ಭೂ ಪರಿವರ್ತನೆ ಮಾಡಿಸದೆ ಕಟ್ಟಡಗಳು ಹಾಗೂ ನಿವೇಶನ ಮಾಡಲು ಸಹಕರಿಸಿದ ಸ್ಥಳೀಯ ಅಂದಿನ ನಿರ್ದೇಶಕರು ಮತ್ತು ನಾಡ ಕಛೇರಿಯ ಉಪ ತಹಸೀಲ್ದಾರ್‌ರವರ ಮೇಲೆ ಕ್ರಮ ಕೈಗೊಂಡು, ಈ ಕೇಸ್‌ನ್ನು ಇತ್ಯರ್ಥ ಮಾಡಬೇಕೆಂದು ನಾವು ಆದೇಶವನ್ನು ಕೊಟ್ಟು ಸುಮಾರು ಎರಡು ವರ್ಷವಾಗಿದೆ. ಇದರ ಮೇಲೆ ನಮ್ಮ ಸರ್ಕಾರ ಕ್ರಮ ತೆಗೆದುಕೊಂಡಿದೆ. ಆದರೆ ಎರಡು ವರ್ಷಗಳಿಂದ ಇದರ ಪ್ರಗತಿ ಏನಾಗಿದೆ ಎಂಬುದನ್ನು ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹೇಳಬೇಕು. ಇಲ್ಲದಿದ್ದರೆ, ಮುಂದೆ ಯಾವತ್ತು ಅಥವಾ ಎಷ್ಟು ದಿನಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನತಕ್ಕಂಥದನ್ನು ಈ ಸಂದರ್ಭದಲ್ಲಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ: ಭಾರತಿಶಂಕರ್:— ಬಹುಶ: ಕಂದಾಯ ಮಂತ್ರಿಯವರಿಗೆ ಯಾರಾದರೂ ಇದರ ಬಗ್ಗೆ ಒತ್ತಾಯ ತಂದಿದ್ದಾರೆಯೇ ಅಥವಾ ಇಲ್ಲವೊ ಎಂಬುದರ ಬಗ್ಗೆ ಆ ಸದನದಲ್ಲಿ ಸ್ಪಷ್ಟಪಡಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್:— ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಕಾನೂನು ಇಲಾಖೆಯವರು ಲೋಕಾಯುಕ್ತ ಕಾಯಿದೆಗೆ ತಿದ್ದುಪಡಿ ತರಬೇಕೆಂದು ಹೇಳುತ್ತಲೇ ಇದ್ದೇವೆ. ಈಗ ಹೊಸದಾಗಿ ಲೋಕಾಯುಕ್ತರು ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಅವರು ಬಹಳ ಆಸಕ್ತಿಯಿಂದ ತಪಾಸಣೆಯನ್ನು ಮಾಡುತ್ತಿದ್ದಾರೆ, ಬಹಳ ಸಂತೋಷ. ಅವರು ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿದ್ದರು, ಹೈಕೋರ್ಟಿನಿಂದ ಸುಪ್ರೀಂಕೋರ್ಟಿಗೆ ಹೋಗಿರುವ ಹಿರಿಯ ನ್ಯಾಯಾಧೀಶರಾಗಿದ್ದಾರೆಂದು ನನಗನ್ನಿಸುತ್ತದೆ. ಅವರಿಗೆ ಬಹಳ ಉತ್ಸಾಹ ಇರಬಹುದೆಂದು ಕಾಣಿಸುತ್ತದೆ, ಅವರು ಈ ಕಾನೂನಿನ ತಿದ್ದುಪಡಿಯಾಗುವುದಕ್ಕೆ

ಮುಂಚೆಯೇ ಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರಿಂದ ಅವರು ತೀಕ್ಷ್ಣತೆಯನ್ನು ಅರ್ಥ ಮಾಡಿಕೊಂಡು, ಏಕೆಂದರೆ, ಈಗಿರತಕ್ಕಂತಹ ಲೋಕಾಯುಕ್ತ ಕಾಯಿದೆಯಲ್ಲಿ ಸ್ವೋಮೋಟೋ ಇನ್ಸ್‌ಪೆಕ್ಷನ್‌ಗೆ ಅವಕಾಶವಿಲ್ಲ. ಯಾರಾದರೂ ಅರ್ಜಿಯನ್ನು ಕೊಟ್ಟಾಗ ಮಾತ್ರ ಆ ಅರ್ಜಿಯ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರವಿದೆ. ಸ್ವೋಮೋಟೋ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ತಿದ್ದುಪಡಿಯನ್ನು ತರಬೇಕು, ಅವರು ಇನ್ ಅಡ್ವಾನ್ಸ್ ಆಗಿ ಸುವೋಮೋಟೋ ಇನ್ಸ್‌ಪೆಕ್ಷನ್ ಮಾಡುತ್ತಿರುವುದರಿಂದ ತಿದ್ದುಪಡಿಯನ್ನು ಬೇಗ ಮಾಡಿ ಅವರು ಆಸಕ್ತಿಯಿಂದ ಕೆಲಸವನ್ನು ಮಾಡುವುದಕ್ಕೆ ತಾವು ಬೆಂಬಲವನ್ನು ಕೊಡಬೇಕೆಂದು ನನ್ನ ಅನಿಸಿಕೆಯಾಗಿದೆ. ಹೈಕೋರ್ಟಿಗೆ ಹೋಗಿ ನಮ್ಮ ಪಬ್ಲಿಕ್ ಸರ್ವೆಂಟ್ಸ್ ಯಾರ್‍ಯಾರು ರಿಟರ್ನ್ಸ್ ಕೊಡುವುದಿಲ್ಲ ಅಂಥವರ ಬಗ್ಗೆ ಅನೇಕ ಟೀಕೆ ಟಿಪ್ಪಣಿಗಳು ಬರುತ್ತಿದೆ. ಇದರ ಬಗ್ಗೆ ನ್ಯಾಯಾದೀಶರು ಅನೇಕ ನಿದರ್ಶನಗಳನ್ನು ಕೊಡುತ್ತಿದ್ದಾರೆ. ಅದಕ್ಕೆ ತಿದ್ದುಪಡಿಯನ್ನು ತಂದು ಮ್ಯಾಂಡೇಟರಿ ಮಾಡುವಂತಹ ಕಾನೂನನ್ನು ತರಬೇಕು. ಏಕೆಂದರೆ, ಅನಾವಶ್ಯಕವಾಗಿ ನಮ್ಮ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥ ಶಾಸಕರಿಗೆ, ಮಂತ್ರಿಗಳಿಗೆ ಟೀಕೆ ಟಿಪ್ಪಣಿಗಳು ಬರುತ್ತಿರುವುದರಿಂದ ಈ ಮ್ಯಾಂಡೇಟರಿ ಮಾಡಿದಾಗ ಆ ನಿಗಧಿತ ಅವಧಿಯೊಳಗಡೆ ನಮ್ಮ ಒಂದು ರಿಟರ್ನ್ಸ್‌ನ್ನು ಕೊಡತಕ್ಕಂತಹ ಪ್ರಯತ್ನಗಲಾಗುತ್ತದೆ. ಸರ್ಕಾರದ ವತಿಯಿಂದ ನೂರಾರು, ಸಾವಿರಾರು ಪ್ರಕರಣಗಳು ಇವತ್ತು ಹೈಕೋರ್ಟಿನಲ್ಲಿರಬುಹುದು, ಬೇರೆ ಬೇರೆ ನ್ಯಾಯಾಲಯಗಳಲ್ಲಿರಬಹುದು. ಇವತ್ತಿನ ಮಾಹಿತಿಗಳ ಪ್ರಕಾರ ಶೇಕಡ 85 ರಷ್ಟು ಕೇಸ್‌ಗಳು, ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿ ತೀರ್ಮಾನವಾಗುತ್ತಿದೆ. ಇದು ಬಹಳ ಆತಂಕಕಾರಿಯಾದ ಸಂಗತಿಯಾಗಿದೆ, ಯಾವುದಾದರೂ ಒಬ್ಬ ವ್ಯಕ್ತಿಗಳು ಸರ್ಕಾರದ ವಿರುದ್ಧವಾಗಿ ಕೋರ್ಟಿಗೆ ಹೋದರೆ, ಕೋರ್ಟಿನಲ್ಲಿ ವೈಯಕ್ತಿಕವಾದಂತಹ ಅಹಿತವಾದ ತೀರ್ಮಾನವಾಗುತ್ತಿದೆಯೇ ಹೊರತು, ಸರ್ಕಾರದ ಹಿತ ಇವತ್ತು ಬಲಿಯಾಗುತ್ತಿದೆ. ಇದಕ್ಕೆ ಕಾರಣವೇನೆಂದರೆ, ನಮ್ಮಲ್ಲಿ ಸರಿಯಾದಂತಹ ಸಹಕಾರಗಳಿಲ್ಲ, ನಮ್ಮ ಅಧಿಕಾರಿಗಳು ಸ್ಟೇಟ್‌ಮೆಂಟ್ಸ್‌ನ್ನು ಕೊಡುವುದಾಗಲಿ, ಅದಕ್ಕೆ ಸರಿಯಾದಂತಹ ಸ್ಟೇಟ್‌ಮೆಂಟ್‌ಗಳಾಗುತ್ತಿಲ್ಲ. ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಷನ್ಸ್ ಇರಬಹುದು, ಪ್ಯಾರಾವೈಸ್ ರಿಮಾರ್ಕ್ಸ್ ಇರಬಹುದು ಅದನ್ನು ಅವರು ಸರಿಯಾಗಿ ಕೊಡುತ್ತಿಲ್ಲ, ಇಲ್ಲವೆಂದರೆ ನ್ಯಾಯಾಲಯದಲ್ಲಿ ಸರ್ಕಾರಿ ವಕೀಲರುಗಳು ಅವರು ಸರಿಯಾಗಿ ನ್ಯಾಯಾಲಯದ ಮುಂದೆ ಸರಿಯಾಗಿ ವಾದವನ್ನು ಮಾಡುತ್ತಿಲ್ಲ. ಆಬ್ಸೆಂಟ್ ಆಗುತ್ತಿರುತ್ತಾರೆ, ಈ ಎಲ್ಲಾ ಕಾರಣಗಳಿಂದಲೂ ಸಹ ಸರ್ಕಾರದ ಹಿತ ಬಲಿಯಾಗುತ್ತಿದೆ. ಇದರ ಬಗ್ಗೆ ನನ್ನ ಸಲಹೆ ಏನೆಂದರೆ, ಈ ಸರ್ಕಾರಿ ವಕೀಲರುಗಳು ಅವರಿಗೆ ಏನು ಫೀಯನ್ನು ಕೊಡುತ್ತೀರಿ, it should be linked with performance. ತಾವು ಕೂಡ ಲಾ ಮಿನಿಸ್ಟರ್ ಆಗಿದ್ದೀರಿ, ಕೋರ್ಟಿಗೆ ಅವರು ಹೋಗಿ ಗೆಲ್ಲಲಿ ಅಥವಾ ಬಿಡಲಿ, ಅವರಿಗೆ ಫೀಯನ್ನು ಕೊಡಬೇಕು. ಯಾರು 2-3 ಸಾರಿ ಗೈರು ಹಾಜರಾಗುತ್ತಾರೆ,

ಅಂತಹವರನ್ನು ಪ್ಯಾನಲ್‌ನಿಂದ ತೆಗೆದುಹಾಕಬೇಕು. ಇಲ್ಲದಿದ್ದರೆ ಸರ್ಕಾರಿ ವಕೀಲರುಗಳನ್ನು ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ. ಅವರು ಎಷ್ಟರ ಮಟ್ಟಕ್ಕೆ ಹೋಗಿದ್ದಾರೆಂದರೆ, 100ಕ್ಕೆ 90 ಭಾಗ ಸರ್ಕಾರಿ ವಕೀಲರುಗಳು ಸರ್ಕಾರದ ಪರವಾಗಿ ವಾದವನ್ನು ಮಾಡುತ್ತಿಲ್ಲ. ಇದನ್ನು ನಾನು ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ಹೇಳುತ್ತಿದ್ದೇನೆ. ನೀವು ಯಾವುದನ್ನಾದರೂ ತೆಗೆದುಕೊಳ್ಳಿ, 100ಕ್ಕೆ 85 ರಷ್ಟು ಪ್ರಕರಣಗಳು ಸರ್ಕಾರದ ವಿರುದ್ಧವಾಗಿಯೇ ತೀರ್ಮಾನವಾಗುತ್ತಿದೆ, ಅದಕ್ಕೆ ಸರ್ಕಾರಿ ಅಧಿಕಾರಿಗಳಿರಬಹುದು, ಅಥವಾ ಸರ್ಕಾರಿ ವಕೀಲರುಗಳಿರಬಹುದು. ಇದನ್ನು ಕಂಟ್ರೋಲ್ ಮಾಡಬೇಕು. ನಮ್ಮ ಅಧಿಕಾರಿಗಳು ಯಾರು ಸರಿಯಾದಂತಹ ಮಾಹಿತಿಯನ್ನು ಒದಗಿಸುವುದಿಲ್ಲವೋ, ಅಂತಹವರ ಮೇಲೆ ತೀಕ್ಷ್ಣವಾದ ಕ್ರಮವನ್ನು ತೆಗೆದುಕೊಳ್ಳಬೇಕು, ಅದನ್ನು ತಿದ್ದುಪಡಿ ಆ್ಯಕ್ಟಿನಲ್ಲಿ ತರಬೇಕೆಂದು ನನ್ನ ಒಂದು ಅನಿಸಿಕೆಯಾಗಿದೆ. ಮಾನ್ಯ ವಾರ್ತಾ ಸಚಿವರಾದ ಶ್ರೀ ಬಿ.ಕೆ. ಚಂದ್ರಶೇಖರ್‌ರವರು ಸದನದಲ್ಲಿಲ್ಲ. ಅವರು ಮಾಹಿತಿಯ ಬಗ್ಗೆ ಒಂದು ಆ್ಯಕ್ಟನ್ನು ತಂದರು, ಸರ್ಕಾರ ಯಾವುದೇ ಖಾತೆಯಲ್ಲಿ "ರೈಟ್ ಟು ಇನ್‌ಫರ್‌ಮೇಷನ್" ಬಹಳ ಸಂತೋಷ, ಅದನ್ನು ನಾನು ಸ್ವಾಗತಿಸುತ್ತೇನೆ. ಇದರ ಬಗ್ಗೆ ಸರ್ಕಾರವು ಚೆನ್ನಾಗಿ ಮಾಡಿದೆ ಎಂದು ಪ್ರಚಾರ ಚೆನ್ನಾಗಿ ಸಿಕ್ಕಿತು. ಆದರೆ ನಿಯಮಾವಳಿಗಳು ಇನ್ನೂ ರಚನೆಯಾಗಿಲ್ಲ. ಒಳ್ಳೆಯ ಕಾರ್ಯಕ್ರಮಗಳನ್ನು ತಂದು, ಅದನ್ನು ಜಾರಿಗೆ ತರದಿದ್ದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇದರ ಬಗ್ಗೆ ಏಕೋ ಏನೋ ಮೀನಾ-ಮೇಷ ಎಣಿಸುತ್ತಿದ್ದಾರೆ. ಎಲ್ಲಾ ಕೆಲಸಗಳಾದ ಮೇಲೆ "ರೈಟ್ ಟು ಇನ್‌ಫರ್‌ಮೇಷನ್" ತರೋಣವೆಂದುಕೊಂಡಿದ್ದಾರೆಂದು ನನಗನ್ನಿಸುತ್ತದೆ. ಆದ್ದರಿಂದ ಇವತ್ತು ಬೇಗ ಅದಕ್ಕೆ ರೂಲ್ಸನ್ನು ತರಬೇಕೆಂದು ನಾನು ಹೇಳುತ್ತೇನೆ, ಏಕೆಂದರೆ, ಇದು ಉತ್ತಮವಾದಂತಹ ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕರು, ಸರ್ಕಾರ ಯಾವ ರೀತಿಯಾಗಿ ಕೆಲಸವನ್ನು ಮಾಡುತ್ತಿದೆ, ಏನೇನು ಮಾಹಿತಿಯನ್ನು ಪಡೆಯತಕ್ಕಂತಹ ಹಕ್ಕು ಸಾರ್ವಜನಿಕರಿಗಿದೆ, ಆ ಹಕ್ಕನ್ನು ಒದಗಿಸಿಕೊಡುವಂಥದ್ದು ಇದು ಐತಿಹಾಸಿಕವಾದಂಥ ತೀರ್ಮಾನವಾಗಿದೆ; ಅದನ್ನು ಆದಷ್ಟು ಬೇಗ ಜಾರಿಗೆ ತರಬೇಕು. ಎಲ್‌ಓಸಿಯನ್ನು ಕೊಡತಕ್ಕಂಥದ್ದು ಅದು ಟ್ರಾನ್ಸ್‌ಪರೆನ್ಸಿ ಆ್ಯಕ್ಟ್‌ನಲ್ಲಿಯೇ ಸೇರಿದೆ, ಆದರೂ ಅದನ್ನು ಮಾಡಿಲ್ಲ. ಇನ್ನು ಮಾನ್ಯ ಮುಖ್ಯಮಂತ್ರಿಗಳ ಇಲಾಖೆಯಾದ ಸಾಮಾನ್ಯ ಆಡಳಿತ ಇಲಾಖೆಯ ಬಗ್ಗೆ ಹೇಳುವುದಾದರೆ, ಸಾಮಾನ್ಯ ಆಡಳಿತದಲ್ಲಿ ಮೊದಲು ಮಾನ್ಯ ಮುಖ್ಯಮಂತ್ರಿಗಳು ರಾಜ್ಯಪಾಲರ ಭಾಷಣವನ್ನು ಕೊಟ್ಟಿರುವಂಥದ್ದನ್ನು ನಾನು ನೋಡಿದೆ. ಅವರು ರಿಪ್ಲೈ ಕೊಟ್ಟಿರತಕ್ಕಂಥದ್ದನ್ನು ಸಹ ನೋಡಿದ್ದೇನೆ. ಅದರಲ್ಲಿ ಅವರು ಏನು ಹೇಳಿದ್ದಾರೆಂದರೆ, ಸರ್ಕಾರದ ಆಡಳಿತದಲ್ಲಿ ವಿಳಂಬ ತಪ್ಪಿಸಲು ಸರ್ವೀಸ್ ರೂಲ್ಸ್‌ಗೆ ನಾನು ತಿದ್ದುಪಡಿಯನ್ನು ತರುತ್ತೇನೆ. ಡಿಲೇ ಮಾಡುವುದನ್ನು ಯಾವ ರೀತಿಯಾಗಿ ತಪ್ಪಿಸಬೇಕು ಎನ್ನುವ ಬಗ್ಗೆ ತಿದ್ದುಪಡಿಯನ್ನು ತರುತ್ತೇನೆಂದು ಹೇಳಿದ್ದಾರೆ. 1978 ರಿಂದ ಯಾರೂ ಸಹ ಆಡಳಿತ ಸುಧಾರಣೆಯ ಬಗ್ಗೆ

ಯಾರೂ ಚಿಂತನೆಯನ್ನು ಮಾಡಿಲ್ಲ. ಅಡ್ಮಿನಿಸ್ಟ್ರೇಷನ್ಸ್ ರಿಫಾರ್ಮ್ಸ್ ಬಗ್ಗೆ ನಾನು ಅದನ್ನು ಮಾಡುತ್ತಿದ್ದೇನೆ. ಈ ವರ್ಗಾವಣೆ ನೀತಿಯನ್ನು ನಾವು ಮಾಡುತ್ತೇವೆ; ಇವೆಲ್ಲವೂ ಒಳ್ಳೆಯ ಘೋಷಣೆಗಳಾಗಿರುತ್ತವೆ. ನಾನು ಈ ಬಗ್ಗೆ ಬಹಳ ಸಂತೋಷವನ್ನು ಪಟ್ಟಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದ ತಕ್ಷಣ ಅವರು ಒಳ್ಳೆಯ ಚಿಂತನೆಯನ್ನು ಮಾಡಿದ್ದಾರೆ, ಆಡಳಿತವನ್ನು ಒಳ್ಳೆಯ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುತ್ತಾರೆಂದು ಸಂತೋಷವನ್ನು ಪಟ್ಟೆ. ಯಾರಾದರೂ ಒಂದು ಸಾರ್ವಜನಿಕರಿಗೆ ಒಳ್ಳೆಯದಾಗುತ್ತದೆಂಬ ಕಾರ್ಯಕ್ರಮವನ್ನು ಘೋಷಣೆಯನ್ನು ಮಾಡಿದಾಗ ಅದಕ್ಕೆ ಸಂತೋಷಪಡುವವರು ನಾವು. ನಾವು ವಿರೋಧಪಕ್ಷದಲ್ಲಿದ್ದರೂ ಸಹ ಸ್ವಾಗತವನ್ನು ಮಾಡುತ್ತೇವೆ. ಆದರೆ ಇವರು ಅಧಿಕಾರಕ್ಕೆ ಬಂದು ಎರಡು ವರ್ಷಗಳಾಯಿತು, ಟ್ರಾನ್ಸ್‌ಫರ್ ಪಾಲಿಸಿ ಇನ್ನೂ ಆಗಿಲ್ಲ, ಆಡಳಿತ ಸುಧಾರಣೆಯವರು ವರದಿಯನ್ನು ಕೊಟ್ಟಿದ್ದಾರೆ. ಅದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ಗೊತ್ತಿಲ್ಲ. ಈ ಡಿಲೇ ಆಗುವುದಕ್ಕೆ ಏನು ತಿದ್ದುಪಡಿಯನ್ನು ತಂದಿದ್ದೇವೆ, ಅದನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಭ್ರಷ್ಟಾಚಾರದ ಬಗ್ಗೆ ಇವತ್ತು ಸಮರವನ್ನು ಸಾರುತ್ತೇನೆ, ಧರ್ಮಯುದ್ಧವನ್ನು ಸಾರುತ್ತೇನೆ, ಎಂದು ಹೇಳಿದರು. ಇದರ ಬಗ್ಗೆ ಅನೇಕ ನಿದರ್ಶನಗಳನ್ನು ಕೊಡಬಹುದು. ಈ ಬಗ್ಗೆ ನಾನು ಕಳೆದ ಅಧಿವೇಶನದಲ್ಲಿಯೂ ಸಹ ಅನೇಕ ವಿಚಾರಗಳನ್ನು ಗಮನಕ್ಕೆ ತಂದಿದ್ದೇನೆ. ಒಂದರ ಬಗ್ಗೆಯೂ ಸಹ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಭ್ರಷ್ಟಾಚಾರದ ಪ್ರಕರಣಗಳಲ್ಲಿ ಟ್ರಾನ್ಸ್‌ಫರ್ ಪಾಲಿಸಿಯಲ್ಲಿಯೂ ಸಹ ಏನೇನೂ ಇಲ್ಲ. ಈ ರೀತಿ ವಿಳಂಬವಾಗುತ್ತಿರುವುದನ್ನು ತಪ್ಪಿಸುವ ಬಗ್ಗೆ ಹೇಳುವುದಾದರೆ, ಒಂದು ಸಣ್ಣ ಉದಾಹರಣೆಯನ್ನು ಮಾನ್ಯ ಗೃಹ ಸಚಿವರ ಇಲಾಖೆಯ ಬಗ್ಗೆ ಹೇಳುತ್ತೇನೆ. ಒಂದು ಸಣ್ಣ ಬದಲಾವಣೆಯನ್ನು ಮಾಡುವ ಬಗ್ಗೆ ಒಂದು ಅರ್ಜಿಯನ್ನು ತಮಗೆ ಕೊಟ್ಟು 2 ವರ್ಷಗಳಾಯಿತು. ಒಂದು ಪೊಲೀಸ್ ಸ್ಟೇಷನ್ ತಾಲ್ಲೂಕಿನಲ್ಲಿದೆ, ಅದರ ಸರ್ಕಲ್‌ನ್ನು ಇನ್ನೊಂದು ತಾಲ್ಲೂಕಿಗೆ ವರ್ಗಾವಣೆಯನ್ನು ಮಾಡಿದ್ದಾರೆ. ನಮ್ಮ ಸರ್ಕಾರದಲ್ಲಿ ಆಗಿರಬಹುದು, ನಮ್ಮ ಸರ್ಕಾರದವರು ತಪ್ಪನ್ನು ಮಾಡಿದ್ದರೆ ನೀವು ಸರಿ ಮಾಡಬಾರದೇ? ಕೆಲವು ಮೋಸ ಮಾಡುವ ಅಧಿಕಾರಿಗಳಿರುತ್ತಾರೆ, ಅವರಿಗೆ ಕೆಡಕು ಮಾಡುವಂತಹ ಬದ್ಧಿಯಿರುತ್ತದೆ, ಅಂತಹ ಯಾವುದೇ ಅಧಿಕಾರಿ ಗುಟ್ಟಾಗಿ ಒಂದು ಪ್ರಪೋಸಲ್ ಅನ್ನು ಕಳುಹಿಸಿಕೊಟ್ಟಿದ್ದನ್ನು ಬದಲಾವಣೆ ಮಾಡಿಸಿದ್ದಾನೆ. ಆದರಿಂದಾಗಿ ತಾಲ್ಲೂಕು ಒಂದು ಕಡೆ ಇದೆ, ಸರ್ಕಲ್ ಒಂದು ತಾಲ್ಲೂಕಿನಲ್ಲಿ ಇದೆ. ಹೀಗಾಗಿ ತಾಲ್ಲೂಕು ಆಫೀಸಿಗೆ ಒಂದು ಕಡೆಗೆ ಹೋಗಬೇಕು, ಇದರ ಬಗ್ಗೆ ವರದಿಯನ್ನು ತರಿಸಿ ಎಂದು ಹೇಳಿ ಎರಡು ವರ್ಷಗಳಾಯಿತು. 10-15 ಸಾರಿ ಜಿಲ್ಲಾ ಕಛೇರಿಗೂ ಮತ್ತು ಕೇಂದ್ರ ಕಛೇರಿಗೂ ಬಂತು. ಕೊನೆಯಪಕ್ಷ ಆ ವರದಿ ಬಂದು 5-6 ತಿಂಗಳಾಯಿತು, ವರದಿಯನ್ನು ಇಲ್ಲಿಗೆ ಕಳುಹಿಸಿಕೊಡಬೇಕಾದರೆ, ಇನ್ನು ಐದು ತಿಂಗಳಾದರೂ ಕಳುಹಿಸಿಕೊಟ್ಟಿಲ್ಲ. ಅವರು ವರದಿಯನ್ನು ಕೊಟ್ಟು ಶಿಫಾರಸ್ಸನ್ನು ಮಾಡಿದ್ದರೂ ಸಹ,

ಇಲ್ಲಿ ತಪ್ಪಾಗಿದೆ ತಿದ್ದುಕೊಳ್ಳಬೇಕೆಂದು ಹೇಳಿದ್ದರೂ ಸಹ ಅದು ಇನ್ನೂ ಐದು ತಿಂಗಳಾದರೂ ಸಹ ಆಗಿರುವುದಿಲ್ಲ. ನಾವು ಮಂತ್ರಿಗಳು ನಾವೇ ಕೆಲಸವನ್ನು ಮಾಡಬೇಕಾಗಿಲ್ಲ. Our image should work. We should not work. Our image should work. ಆ ತರಹ ಇಮೇಜನ್ನೇ ನೀವು ಸೃಷ್ಟಿ ಮಾಡಿಲ್ಲ. ಈ ಒಂದು ತಪ್ಪು, ಮಂತ್ರಿಗಳ ಗಮನಕ್ಕೆ ಹೋದರೆ, ಸರ್ಕಾರದ ಗಮನಕ್ಕೆ ಹೋದರೆ ಈ ವಿಳಂಬ ಗೊತ್ತಾದರೆ ನನ್ನ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೋ ಎಂಬ ಬಗ್ಗೆ ಅಧಿಕಾರಿಗಳಿಗೆ ಭಯವೇ ಇಲ್ಲ. ಹೀಗೆಲ್ಲಾ ಇದು ಹುಟ್ಟಬೇಕಾದರೆ, ಈ ಟ್ರಾನ್ಸಫರ್ ಪಾಲಿಸಿಯೊಳಗಡೆ ಇವೆಲ್ಲಾ ನ್ಯೂನತೆಗಳಿವೆ, ಮಾನ್ಯ ಮುಖ್ಯಮಂತ್ರಿಗಳು ಇವತ್ತು ಕೆಎಎಸ್‌ನಿಂದ ಐಎಎಸ್ ಮತ್ತ ಐಪಿಎಸ್‌ಗಳನ್ನು ಕೊಡಬೇಕಾದರೆ ಶೇಕಡ 10ರಷ್ಟು ಇರುವುದನ್ನು ಶೇಕಡ 50 ರಷ್ಟು ಮಾಡುತ್ತೇನೆಂದು ಘೋಷಣೆಯನ್ನು ಮಾಡಿದರು. ಅದನ್ನು 50 ಪರ್ಸೆಂಟ್ ಮಾಡಿದರೆ ಆಡಳಿತದಲ್ಲಿ ಅದು ಇನ್ನೂ ಅಧೋಗತಿಗೆ ಹೋಗುತ್ತದೆಂಬ ನನ್ನ ವೈಯಕ್ತಿಕವಾದ ಅಭಿಪ್ರಾಯವಾಗಿದೆ. ಐಎಎಸ್ ಮಾಡಿದಂತಹ ಉದ್ದೇಶವೇನೆಂದರೆ, ದೊಡ್ಡ ದೊಡ್ಡ ಹುದ್ದೆಗಳಲ್ಲಿರುವಂತಹ ಅಧಿಕಾರಿಗಳು ಅವರಿಗೆ ರಾಷ್ಟ್ರವ್ಯಾಪಿ ಚಿಂತನೆ ಇರಬೇಕು, ನ್ಯಾಷನಲ್ ಔಟ್‌ಲುಕ್ ಇರಬೇಕು, ರೀಜನಲ್ ಕಮ್ಯೂನಲ್ ಔಟ್‌ಲುಕ್ ಇರಬಾರದು, ಇದು ನಮ್ಮ ದೇಶದ ಸಾರ್ವಜನಿಕ ಕೆಲಸವೆನ್ನುವ ಭಾವನೆಯಿರಬೇಕೆಂದು ಅದನ್ನು ಮಾಡಿದರು. ಅದರಲ್ಲಿ ಒಂದು ಸಣ್ಣ ಪ್ರಾವಿಷನ್‌ನ್ನು ಇಟ್ಟುಕೊಂಡು 10 ಪರ್ಸೆಂಟ್ ರಾಜ್ಯದವರು ಬಂದು ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳಾಗಿರಬಹುದು ಎಂದು ಮಾಡಿಕೊಂಡರು, ಕನ್ನಡಿಗರಾಗಬೇಕು, ಅವರಿಗೆ ಸ್ಥಳೀಯ ಸಮಸ್ಯೆಗಳು ಗೊತ್ತಿರುತ್ತದೆ, ಅವರಿಗೆ ಕಳಕಳಿಯಿರುತ್ತದೆ, ನಮ್ಮ ರಾಜ್ಯವನ್ನು ಅಭಿವೃದ್ಧಿ ಮಾಡುತ್ತಾರೆ ಈ ವಾದವೆಲ್ಲವೂ ಸರಿಯಾಗಿರುತ್ತದೆ. ಆದರೆ ಎಲ್ಲಾ ಜಾತಿಯಲ್ಲಿ ಬೇರೆ ರೀತಿಯಾಗಿ ರಾಜಕೀಯವನ್ನು ಮಾಡುತ್ತಾರಲ್ಲಾ, ಅದು ರಾಜಕೀಯವಿರಬಹುದು, ಅಥವಾ ಜಾತಿಯ ಆಧಾರದ ಮೇಲೆ ಆಡಳಿತವಿರಬಹುದು. ಇದು ಬಹಳ ಅಧೋಗತಿಗೆ ಹೋಗಿದೆ. ಇದನ್ನು ಮಾಡಿದರೆ ಪಟ್ಟಭದ್ರ ಹಿತಾಸಕ್ತಿಗಳಿಗೆ ಅನುಕೂಲವಾಗುತ್ತದೆ. ಇವತ್ತು ನೀವು ಮುಖ್ಯಮಂತ್ರಿಗಳಾಗಿದ್ದರೆ ನಿಮ್ಮ ಜಾತಿಯವರೇ ದೊಡ್ಡ ದೊಡ್ಡ ಅಧಿಕಾರಿಗಳು ಇರುತ್ತಾರೆ. ಇನ್ನೊಂದು ಜಾತಿಯವರು ಮುಖ್ಯಮಂತ್ರಿಗಳಾದರೆ ಅವರವರ ಜಾತಿಗಳವರೇ ಕೀ ಪೋಸ್ಟುಗಳಲ್ಲಿ ಇರುತ್ತಾರೆ. ಬೇರೆಯವರೆಲ್ಲರೂ ಹತಾಶರಾಗಿರುತ್ತಾರೆ.

5.10 ಪಿಎಂ

ಒಟ್ಟೊಟ್ಟು ಅಧಿಕಾರಿಗಳನ್ನು ಮಂತ್ರಿಗಳು ಕಂಟ್ರೋಲ್ ಮಾಡುವುದಕ್ಕಾಗುತ್ತಿಲ್ಲ; ಈ ಪರಿಸ್ಥಿತಿ ಬಂದಿದೆ. ನಾನು ಯಾವ ಸರ್ಕಾರವೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಸಾಮಾಜಿಕ ವ್ಯವಸ್ಥೆ ಏನಾಗಿದೆ ಎಂದು ಹೇಳುವುದಾದರೆ, ಅಧಿಕಾರಿಗಳು ಒಟ್ಟು

ಮಂತ್ರಿಗಳನ್ನು ಲೆಕ್ಕಕ್ಕೆ ಇಟ್ಟುಕೊಳ್ಳುವುದಿಲ್ಲ. ಅಂತಹ ಅಧಿಕಾರಿಗಳು ಸ್ಥಳೀಯರಾಗಿರುತ್ತಾರೆ, ನಾವು ಬೇರೆ ರಾಜ್ಯದಿಂದ ಬಂದಿರುವಂತಹ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬಹುದು. ಅವರಿಗೆ ಯಾವುದೇ ಸ್ಥಳೀಯ ಹಿತಾಸಕ್ತಿಗಳಿರುವುದಿಲ್ಲ. ಅವರ ಸಂಬಂಧಿಕರು, ಜಾತಿಯವರು ಇರುವುದಿಲ್ಲ, ಅವರು ಚುನಾವಣೆಯಲ್ಲಿ ನಮ್ಮನ್ನು ಜನಗಳನ್ನು ಎತ್ತಿಕಟ್ಟಿ ಸೋಲಿಸುತ್ತಾರೆಂಬ ಭಯವಿರುವುದಿಲ್ಲ. ನಿನ್ನನ್ನು ಡಿಸ್‌ಮಿಸ್ ಮಾಡುತ್ತೇನೆಂದು ಹೆದರಿಕೊಂಡು ಯು.ಪಿ.ಗೆ, ಬಿಹಾರಕ್ಕೆ ಕಳುಹಿಸಿಕೊಡುತ್ತೇನೆಂದು ಹೇಳಬಹುದು. ಅದನ್ನು ನೀವು ಕಂಟ್ರೋಲ್ ಮಾಡಬಹುದು, ಆದರೆ ನೀವು ಇವರನ್ನು ಕಂಟ್ರೋಲ್ ಮಾಡುವುದಕ್ಕೆ ಆಗುತ್ತದೆಯೇ? ಇವತ್ತು ಗೃಹ ಇಲಾಖೆಯಲ್ಲಿ ಏನಾದರೂ ವೈಫಲ್ಯವೆಂದು ನಾವು ಏನು ಹೇಳುತ್ತೇವೆ, ಆ ರೀತಿಯಾಗಿದ್ದರೆ ವರ್ಗಾವಣೆಯಲ್ಲಿ ಅದು ಪೋಸ್ಟಿಂಗ್ಸ್‌ನಲ್ಲಿ ಆಗಿರತಕ್ಕಂತಹ ಪಟ್ಟಭದ್ರ ಹಿತಾಸಕ್ತಿಯಿಂದ ಆಗಿದೆ. ಅಥವಾ ರಾಜಕೀಯ ಪೋಸ್ಟಿಂಗ್ಸ್ ಎಲ್ಲಾ ಇಲಾಖೆಗಳಲ್ಲಿ ಜಾತಿ ಆಧಾರದ ಪೋಸ್ಟಿಂಗ್ಸ್‌ಗಳು ಇರಬಹುದು, ನಿಮ್ಮ ಮಾತುಗಳನ್ನು ಕೆಲವರು ಕೇಳುವುದೇ ಇಲ್ಲ, ಅವರಿಗೆ ನಿಮ್ಮ ಬಗ್ಗೆ ಭಯವೇಕೆ ಬರುತ್ತದೆ, ಇದಕ್ಕೆಲ್ಲಾ ರೋಗ ಬರಬೇಕಾದರೆ ಅದನ್ನು ಮಾಡುವುದಕ್ಕೆ ಹೋಗಬೇಡಿ. ಅವರು ನನ್ನ ಬಗ್ಗೆ ಏನೇ ತಿಳಿದುಕೊಂಡರೂ ಚಿಂತೆಯಿಲ್ಲ. ಈ ದೊಡ್ಡ ದೊಡ್ಡ ಹುದ್ದೆಗಳಲ್ಲಿರತಕ್ಕಂಥವರಿಗೆ ವಿಶಾಲವಾದಂತಹ ದೃಷ್ಟಿ ಬರಬೇಕಾದರೆ ಅವರು ಈ ರಾಜ್ಯದವರೇ ಆಗಲಿ, ಇಲ್ಲದಿದ್ದರೆ ಐಎಎಸ್‌ನ್ನು ಕೊಟ್ಟು ಬೇರೆ ರಾಜ್ಯಗಳಿಗೆ ಕಳುಹಿಸಿಕೊಡಿ ಚಿಂತೆಯಿಲ್ಲ; ಇದು ನನ್ನ ಸ್ಪಷ್ಟವಾದ ಅಭಿಪ್ರಾಯವಾಗಿದೆ. ಟ್ರಾನ್ಸ್‌ಫರ್ ಪಾಲಿಸಿಯೊಳಗಡೆ ನನಗನ್ನಿಸುವುದೇನೆಂದರೆ, ಆಡಳಿತದಲ್ಲಿ ಹಸ್ತಕ್ಷೇಪ ಇರಬಾರದು, We have to be here only to make policies. We have to frame rules. We have to frame policies and give it to the officers to implement. What has happened here? We have taken the transfers and we have given policy to the Officers. They do not know how to make policy and we do not know how to make transfer. ಇದು ಈ ಪರಿಸ್ಥಿತಿಗೆ ಬಂದಿದೆ. ಇದು ನೈಜಸತ್ಯವಾಗಿರುವುದನ್ನು ಹೇಳುತ್ತಿದ್ದೇನೆ. ಒಬ್ಬ ಗ್ರಾಮ ಲೆಕ್ಕಾಧಿಕಾರಿಯವರನ್ನು ಜಿಲ್ಲಾಧಿಕಾರಿಯವರು ಕಂಟ್ರೋಲ್ ಮಾಡುವುದಕ್ಕಾಗುತ್ತಿಲ್ಲ. ಒಬ್ಬ ಫಾರೆಸ್ಟ್ ಗಾರ್ಡ್‌ನ್ನು ಚೀಫ್ ಕನ್ಸರ್‌ವೇಟರ್ ಕಂಟ್ರೋಲ್ ಮಾಡುವುದಕ್ಕಾಗುತ್ತಿಲ್ಲ. ನಾವು ಒಬ್ಬ ಮಂತ್ರಿಗಳು ಐ.ಬಿ.ಗೆ ಹೋದರೆ, ಪ್ರವಾಸಿ ಮಂದಿರದಲ್ಲಿರುವಂತಹ ಮೇಟಿ ನಾನು ಹೋದಾಗಲೇ ಒಂದು ತರಹ ಟ್ರೀಟ್‌ಮೆಂಟ್, ಮಾನ್ಯ ಸಚಿವರಾದ ದೇಶಪಾಂಡೆಯವರು ಹೋದಾಗಲೇ ಒಂದು ಟ್ರೀಟ್‌ಮೆಂಟ್, ಮಾನ್ಯ ಗೃಹ ಸಚಿವರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹೋದಾಗ ಒಂದು ತರಹ ಟ್ರೀಟ್‌ಮೆಂಟ್ ಮಾಡುತ್ತಾನೆ. ಇಂತಹ ಮನೋಭಾವವಿರತಕ್ಕಂತಹ ಸಮಾಜದಲ್ಲಿ, ಯಾವ ರೀತಿಯಾಗಿ ಮಾಡುತ್ತೀರಿ, ನಾನು ಅವರನ್ನು ವರ್ಗ ಮಾಡಿದರೆ,

ನಾನು ನನ್ನ ಜಾತಿಯವರನ್ನು ಹಿಡಿದುಕೊಂಡು ನಾನು ವರ್ಗಾವಣೆಯನ್ನು ಕ್ಯಾನ್ಸಲ್ ಮಾಸಿಕೊಂಡು ಬರುತ್ತೇನೆ ಎಂಬ ಧೈರ್ಯ ಅವರಿಗಿದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು, ಟ್ರಾನ್ಸ್‌ಫರ್ ಪಾಲಿಸಿಯನ್ನು ಮಾಡುತ್ತೇವೆಂದು ಹೇಳಿದ ತಕ್ಷಣ ನನಗೆ ಬಹಳ ಸಂತೋಷವಾಯಿತು. ಈ ಟ್ರಾನ್ಸ್‌ಫರ್‌ನ್ನು ನಾವು ಮುಖ್ಯವಾಗಿ ಇಟ್ಟುಕೊಳ್ಳಲೇ ಬಾರದು, ನಮಗೆ ಏನು ಇರಬೇಕೆಂದು ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಬೇಕು. We must make them accountable. We must give them target. They must give us achievement. We should give them policy. ಅವರು ಮಾಡಲಿಲ್ಲವೆಂದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ನಾವು ಪಾಲಿಸಿಯನ್ನು ಮಾಡುವುದು, ಅವನನ್ನು ಪೋಸ್ಟಿಂಗ್‌ನ್ನು ಮಾಡಿ, ಅವನು ನಮ್ಮ ಮಾತನ್ನೇ ಕೇಳುವುದಿಲ್ಲ, ಅವನು ಇನ್ನೊಬ್ಬರ ಮಾತನ್ನು ಕೇಳುತ್ತಾನೆ. ಯಾವುದೇ ಸರ್ಕಾರದ ಕಾರ್ಯಕ್ರಮಗಳು ಇವತ್ತು ಅನುಷ್ಠಾನಕ್ಕೆ ಆಗುತ್ತಿಲ್ಲ. ಆದರಿಂದ ನಾನು ಮೊದಲಿನ ಸಭೆಯಲ್ಲಿ ಹೇಳಿದ್ದೇನೆ, ಎಸ್ಟಾಬ್ಲಿಷ್‌ಮೆಂಟ್ ಬೋರ್ಡ್ ಎಂದು ಮಾಡಿ ಒಂದು ವರ್ಗಾವಾರು ನಾರ್ಮ್ಸ್‌ನ್ನು ಹಾಕಿ, ಯಾವ ಅಧಿಕಾರಿ ಯಾವ ತಾಲ್ಲೂಕಿನಲ್ಲಿಬೇಕು, ಅವನ ಹುಟ್ಟಿದ ಊರು ಯಾವುದು? ಅವನ ಯಾವ ಹಂತದಲ್ಲಿ ಯಾವ ಅಧಿಕಾರಿ ಇರಬೇಕು. ಸ್ಥಳೀಯ ತಾಲ್ಲೂಕಿನಲ್ಲಿ ಯಾರಿರಬೇಕು, ಜಿಲ್ಲಾ ಮಟ್ಟದಲ್ಲಿ ಯಾರು ಇರಬೇಕು, ರೀಜನ್ ಬಿಟ್ಟು ರೀಜನ್ ಯಾರಿರಬೇಕು, ಎಲ್ಲಾ ವಿಚಾರಗಳ ಬಗ್ಗೆ ನಾರ್ಮ್ಸ್‌ನ್ನು ಹಾಕಿ ಎಷ್ಟು ವರ್ಷ ಅವನು ಎಲ್ಲಿ ಕೆಲಸ ಮಾಡಬೇಕು, ಎಕ್ಸಿಕ್ಯೂಟೀವ್‌ನಲ್ಲಿ ಎಷ್ಟು ವರ್ಷ ಕೆಲಸ ಮಾಡಬೇಕು, ನಾನ್ ಎಕ್ಸಿಕ್ಯೂಟೀವ್‌ನಲ್ಲಿ ಎಷ್ಟು ವರ್ಷ ಕೆಲಸ ಮಾಡಬೇಕು ಈ ರೀತಿಯಾಗಿ ಒಂದು ನಾರ್ಮ್ಸ್‌ನ್ನು ಮಾಡಿ ಅದನ್ನು ಅಧಿಕಾರಿಗಳಿಗೆ ಕೊಟ್ಟು ಅವರು ಆ ಪ್ರಕಾರ ಕೆಲಸವನ್ನು ಮಾಡಲಿಲ್ಲವೆಂದರೆ, ನೀವು ಅವರ ಮೇಲೆ ಕಾರ್ಯದರ್ಶಿಯವರಿಗೆ ತಿಳಿಸಿ ಕ್ರಮವನ್ನು ತೆಗೆದುಕೊಳ್ಳಬೇಕು. ಕಾರ್ಯದರ್ಶಿಯವರ ಜುಟ್ಟು ನಿಮ್ಮ ಕೈಯಲ್ಲಿ ಇರಬೇಕು, ನೀವು ವಿಲೇಜ್ ಅಕೌಂಟೆಂಟ್ ಜುಟ್ಟನ್ನು ಹಾಗೂ ಸೆಕ್ರೆಟರಿಯವರ ಜುಟ್ಟನ್ನು ಇಟ್ಟುಕೊಳ್ಳುತ್ತೀರಿ, ಅದು ಹೇಗೆ ಆಗುತ್ತದೆ? ಅದನ್ನಾದರೂ ಮಾಡಬೇಕೆಂದು ನನ್ನ ಆಸೆಯಾಗಿದೆ. ನಾವೇನೇ ಕಾನೂನುಗಳನ್ನು ತಂದರೂ ಏನೊಂದು ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಅನುಷ್ಠಾನಕ್ಕೆ ತರುವಂತಹವರು ಅಧಿಕಾರಿಗಳಾಗಿದ್ದಾರೆ. ಸರ್ಕಾರಕ್ಕೆ ಒಳ್ಳೆಯ ಹೆಸರನ್ನು ತರಬೇಕಾದರೂ ಅಧಿಕಾರಿಗಳೇ, ಕೆಟ್ಟ ಹೆಸರನ್ನು ತರಬೇಕಾದರೂ ಅಧಿಕಾರಿಗಳೇ. ಅದಕ್ಕಾಗಿ ಅಧಿಕಾರಿಗಳನ್ನು ನೀವು ಒಂದು ಹಿಡಿತದಲ್ಲಿಟ್ಟುಕೊಳ್ಳದೆ ಹೋದರೆ ನಮ್ಮ ಸರ್ಕಾರವೇ ಇರಬಹುದು, ನಿಮ್ಮ ಸರ್ಕಾರವೇ ಇರಬಹುದು, ಆ ಸರ್ಕಾರಗಳು ವಿಫಲವಾಗುತ್ತವೆ. ಆ ದೃಷ್ಟಿಯಿಂದ ನಾನು ನಿಮಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ನೀವಾದರೂ ಈ ಬಗ್ಗೆ ಗಮನವನ್ನು ಹರಿಸಿ ಒಂದು ಟ್ರಾನ್ಸ್‌ಫರ್ ಪಾಲಿಸಿಯನ್ನು ಬೇಗನೆ ತನ್ನಿ, ಈ ವರ್ಗಾವರ್ಗಿಯನ್ನು ನಮ್ಮ ಎಂಎಲ್‌ಎಗಳಿಗೇ

ಕೊಡಬಾರದು, ಒಬ್ಬ ಎಂಎಲ್‌ಎ ಅವನ ವಿರುಧವಾಗಿ ಅಧಿಕಾರಿಯನ್ನು ವರ್ಗಾವಣೆ ಮಾಡಿಸುತ್ತಾನೆ, ಮತ್ತೆ ಅವನಿಗೆ ಕಿರುಕುಳವನ್ನು ಕೊಡಿಸುತ್ತಾನೆ. ನಾವು ಅಧಿಕಾರಿಗಳನ್ನು ನಮಗೆ ಬೇಕಾದವರನ್ನು ಏತಕ್ಕಾಗಿ ಹಾಕಿಸಿಕೊಳ್ಳುತ್ತೇವೆಂದರೆ ನನಗೆ ಬೇಕಾದ ಕೆಲಸವನ್ನು ಮಾಡಿಸಿಕೊಳ್ಳುವುದಕ್ಕೋಸ್ಕರ. ಸಾರ್ವಜನಿಕರಿಗೆ ಬೇಕಾದ ಕೆಲಸವನ್ನು ಯಾರು ಬೇಕಾದರೂ ಮಾಡುತ್ತಾರೆ, ಇದನ್ನು ನಾನು ಹೇಳಬೇಕಾಗಿಲ್ಲ. ಸಾರ್ವಜನಿಕವಾಗಿ ಕೆಲಸಮಾಡಲು ಯಾವ ಅಧಿಕಾರಿ ಬೇಕಾದರೂ ಮಾಡುತ್ತಾನೆ. ಆದರೆ ನನಗೆ ಬೇಕಾಗಿದ್ದನ್ನು ಸಾರ್ವಜನಿಕರಿಗೆ ವಿರುದ್ಧವಾಗಿದ್ದರೂ ಸಹ ಅದನ್ನು ಮಾಡಿಸಿಕೊಳ್ಳುವುದಕ್ಕೋಸ್ಕರ ನನಗೆ ಬೇಕಾದವರನ್ನು ಹಾಕಿಸಿಕೊಳ್ಳುತ್ತೇನೆ. ಇದರ ಬಗ್ಗೆ ಯಾರಾದರೂ ಚಿಂತನೆಯನ್ನು ಮಾಡಿ ಇದನ್ನು ತೀಕ್ಷ್ಣವಾಗಿ ಪರಿಶೀಲನೆ ಮಾಡಿ ಟ್ರಾನ್ಸಫರ್ ಪಾಲಿಸಿಯನ್ನು ಬೇಗನೆ ತರಬೇಕೆಂದು ನನ್ನ ಅನಿಸಿಕೆಯಾಗಿದೆ. ಇನ್ನು ಅನೇಕ ವಿಚಾರಗಳ ಬಗ್ಗೆ ಮಾತನಾಡಬೇಕಾಗಿತ್ತು ತಾವು ಸಮಯವನ್ನು ಕೊಡುತ್ತಿಲ್ಲ, ಆದರೂ ಈ ಹೈದರಾಬಾದ್-ಕರ್ನಾಟಕದ ಬಗ್ಗೆ...

ಶ್ರೀ ಎಸ್. ಸುರೇಶ್ ಕುಮಾರ್:— ಮಾನ್ಯ ಸೋಮಶೇಖರ್‌ರವರು ಒಂದು ಮಾತನ್ನು ಹೇಳಿದರು, ಯಾರೋ ಒಬ್ಬ ಅಧಿಕಾರಿಗಳನ್ನು ನಾವು ಏತಕ್ಕಾಗಿ ಹಾಕಿಸಿಕೊಳ್ಳುತ್ತೇವೆಂದರೆ ನಮಗೆ ಬೇಕಾದಂತಹ ಕೆಲಸವನ್ನು ಅವರು ಮಾಡಿಕೊಡಲಿ ಎಂದು ಹೇಳಿದ್ದಾರೆ. It cannot be genaralised. ಯಾರೋ ಒಬ್ಬ ಅಧಿಕಾರಿ ನಮಗೆ ಗೊತ್ತಿದ್ದಾನೆ, ಅವನ ನೇಚರ್ ಎಲ್ಲಾ ನಮಗೆ ಗೊತ್ತಿದೆ, ಅವನನ್ನು ತಂದು ನಮ್ಮ ಏರಿಯಾಕ್ಕೆ ಹಾಕಬೇಕಾದಾಗ ನಾವು ಅದನ್ನು ವಿರೋಧಿಸುತ್ತೇವೆ. ಅವನು ನಮ್ಮ ಏರಿಯಾಕ್ಕೆ ಬಂದರೆ ನಮ್ಮ ಹೆಸರು ಹಾಳಾಗುತ್ತದೆ, ನಮ್ಮ ಕ್ಷೇತ್ರದಲ್ಲಿ ಕೆಲಸಗಳಾಗುವುದಿಲ್ಲ, ನಮ್ಮ ಕ್ಷೇತ್ರದ ಜನ ತೊಂದರೆಗೊಳಗಾಗುತ್ತಾರೆ ಎಂದು ನಾವು ಇದನ್ನು ವಿರೋಧಿಸಬಾರದೇ?

ಶ್ರೀ ಬಿ. ಸೋಮಶೇಖರ್:— ಯಾವ ಅಧಿಕಾರಿಯನ್ನು ಯಾವ ಸ್ಥಳಕ್ಕೆ ಹಾಕಬೇಕೆಂದು ಒಂದು ನಾರ್ಮ್ಸ್ ಇದ್ದಾಗ ಕಂಪ್ಲೈಂಟ್ಸ್ ಯಾರಿಗೆ ಇದೆ, ಯಾರ ಮೇಲೆ ಎನ್‌ಕ್ವಯರಿ ಆಗಿದೆ, ಯಾರ ಮೇಲೆ ಚಾರ್ಜ್‌ಶೀಟಾಗಿದೆ, ಅಂತಹವನನ್ನು ತಂದು ಹಾಕಿದರೆ ಹಾಕಬಾರದು ಎಂದು ಪಾಲಿಸಿಯನ್ನು ಮಾಡಿದಾಗ ಅವನನ್ನು ಹಾಕುವುದಿಲ್ಲ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ,, ಅದಕ್ಕಾಗಿ ನಾರ್ಮ್ಸ್‌ನ್ನು ಹಾಕಿಕೊಡಬೇಕು. ಕೆಲವು ಎಕ್ಸಿಕ್ಯೂಟೀವ್ ಪೋಸ್ಟ್‌ನಲ್ಲಿ 20 ವರ್ಷಗಳಿಂದಲೂ ಇರುತ್ತಾರೆ. Honest officers are the most sufferers. Honesty has become a casualtuy to-day. ಇವತ್ತು ಯಾರ ಮೇಲೆ ಭ್ರಷ್ಟಾಚಾರದ ಆರೋಪಗಳಿವೆ, ಅವರೆಲ್ಲರೂ ದೊಡ್ಡ ದೊಡ್ಡ ಕೀ ಪೋಸ್ಟ್‌ಗಳಲ್ಲಿದ್ದಾರೆ. ಇದರ ಬಗ್ಗೆ ನಾನು ಬೇಕಾದಷ್ಟು ಹೆಸರುಗಳನ್ನು ಕೊಡಬಹುದು, ಯಾರ್ಯಾರಿಗೆ ಜಾತಿಗಳ ಬೆಂಬಲವಿದೆ, ಯಾರ್ಯಾರಿಗೆ ಭ್ರಷ್ಟಾಚಾರವಿದೆ, ಅವರೆಲ್ಲರೂ ಇವತ್ತು ಕೀ ಪೋಸ್ಟ್‌ಗಳಲ್ಲಿದ್ದಾರೆ. ಅವರೆಲ್ಲರೂ ನಿಮ್ಮ ಮಾತನ್ನು ಕೇಳುತ್ತಾರೆಯೇ? ಯಾರೂ ನಿಮ್ಮ ಮಾತನ್ನು ಕೇಳುವುದಿಲ್ಲ, ಅದಕ್ಕೋಸ್ಕರ ಒಂದು ನಾರ್ಮ್ಸ್‌ನ್ನು ಹಾಕಿಕೊಳ್ಳಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಪ್ರಮೋಷನ್‌ಗೆ ಇದನ್ನು ಪ್ರೀ ಕಂಡಿಷನ್ ಮಾಡಿ ಪೊಲೀಸ್ ಇಲಾಖೆ, ಅರಣ್ಯ ಇಲಾಖೆಯಿರಬಹುದು, ಎಲ್ಲಾ ವಿಂಗ್‌ಗಳಲ್ಲಿ ಅವರು ವರ್ಕ್ ಮಾಡದೆ ಇದ್ದರೆ ಅವರನ್ನು ಪ್ರಮೋಷನ್‌ಗೆ ಎಲಿಜಿಬಲ್ ಇಲ್ಲವೆಂದು ಮಾಡಿದರೆ ಕ್ರಮೇಣ ಇದನ್ನು ಜಾರಿಗೆ ತರುವುದಕ್ಕಾಗುತ್ತದೆ.

ಶ್ರೀ ಬಿ. ಸೋಮಶೇಖರ್ :— ನೀವು ಒಂದು ಪ್ರಮೋಷನ್‌ನಿಂದ ಮತ್ತೊಂದು ಪ್ರಮೋಷನ್‌ಗೆ ಹೋಗಬೇಕಾದರೆ, ಅವನು ಅಗತ್ಯವಾದ ವಿಂಗ್‌ಗಳಲ್ಲಿ ಸೇವೆಯನ್ನು ಮಾಡಿರಬೇಕು. ಅವನು ಎಕ್ಸಿಕ್ಯೂಟೀವ್ ಹಾಗೂ ನಾನ್-ಎಕ್ಸಿಕ್ಯೂಟೀವ್‌ಗಳಲ್ಲೂ ಸಹ ಕೆಲಸವನ್ನು ಮಾಡಿರಬೇಕು. ಇದರ ಬಗ್ಗೆ ಉದಾಹರಣೆಯನ್ನು ಸಹ ಹೇಳುತ್ತೇನೆ. ಪೊಲೀಸ್ ಸಬ್-ಇನ್ಸ್‌ಪೆಕ್ಟರಾಗಿ ಕೆಲಸಕ್ಕೆ ಸೇರಿದವನು ಸರ್ಕಲ್ ಇನ್ಸ್‌ಪೆಕ್ಟರಾಗಿ 10 ವರ್ಷದಲ್ಲಿ ಬಡ್ತಿಯನ್ನು ಹೊಂದಬೇಕಾದರೆ ಸಿಓಡಿಯಲ್ಲಿ ಮೂರು ವರ್ಷಗಳಿರಬೇಕು, ಗುಪ್ತದಳದಲ್ಲಿ ಎರಡು ವರ್ಷಗಳಿರಬೇಕು ಎಂದು ಮಾಡಿದರೆ ನನಗೆ ಪ್ರಮೋಷನ್ ಸಿಗುವುದಿಲ್ಲವೆಂದು ಹೇಳಿ ತಾನೇ ವರ್ಗಾವಣೆಯನ್ನು ಮಾಡಿಸಿಕೊಂಡು ಹೋಗುತ್ತಾನೆ. In the absence of these rules, an Inspector who has got influence will continue to be an Inspector for 20 years. ಯಾರಿಗೆ ಇನ್‌ಫ್ಲ್ಯೂಯೆನ್ಸ್ ಇರುವುದಿಲ್ಲ ಅವನನ್ನು ಸಿಓಡಿಗೆ ತಂದು ಹಾಕುತ್ತಾರೆ, ಎಲ್ಲಾ ಇಲಾಖೆಗಳಲ್ಲೂ ಇದಾಗಿದೆ, ಅದಕ್ಕಾಗಿ ಒಂದು ನಾರ್ಮ್ಸ್‌ನ್ನು ಹಾಕಿಕೊಟ್ಟರೆ, ಅಂತಹವನಿಗೆ ಆ ನಾರ್ಮ್ಸ್ ಪ್ರಕಾರ ಪ್ರಮೋಷನ್ ಸಿಗುವುದಿಲ್ಲ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಮಾನ್ಯ ಸೋಮಶೇಖರ್‌ರವರೇ, ಡಿಪಿಎಆರ್‌ನವರು ಇದನ್ನು ಮಾಡುತ್ತಿಲ್ಲವೇ? ಆ ಇಲಾಖೆ ಇರುವುದೇ ಈ ಕೆಲಸವನ್ನು ಮಾಡುವುದಕ್ಕಾಗಿ, ಎತಕ್ಕಾಗಿ ಅವರು ಮಾಡುತ್ತಿಲ್ಲ?

ಶ್ರೀ ಬಿ. ಸೋಮಶೇಖರ್ :— ಡಿಪಿಎಆರ್‌ನವರು ಏನು ಕೆಲಸವನ್ನು ಮಾಡುತ್ತಾರೆ? ಅದಕ್ಕಾಗಿ ರಾಜಕೀಯ ಇಚ್ಛಾಶಕ್ತಿ ಬೇಕು, ಮತ್ತು ವಿಶಾಲವಾದ ದೃಷ್ಟಿಯಿರಬೇಕು. ಸಾರ್ವಜನಿಕ ಕೆಲಸ ಮಾಡಬೇಕೆಂಬ ವಿಶಾಲವಾದ ದೃಷ್ಟಿಯಿರಬೇಕು. ಇನ್ನು ಉತ್ತರ ಕರ್ನಾಟಕದ ಬಗ್ಗೆ ಹೇಳುವುದಾದರೆ, ಎಲ್ಲಾ ಉತ್ತರ ಭಾಗದಲ್ಲಿ ಸಮಾನವಾಗಿ ಅಭಿವೃದ್ಧಿಯಾಗಬೇಕಾದರೆ,...

ಶ್ರೀ ಬಿ.ಆರ್. ಯಾವಗಲ್ :— ಮಾನ್ಯ ಸೋಮಶೇಖರ್‌ರವರೇ, ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ, ತಾವು ಹಿಂದೆ ಮಂತ್ರಿಗಳಾಗಿದ್ದೀರಿ, ಆಗ ಇದನ್ನು ತರಬಹುದಾಗಿತ್ತಲ್ಲಾ?

ಶ್ರೀ ಬಿ. ಸೋಮಶೇಖರ್ :— 1987 ರಲ್ಲಿ ಸುಮಾರು 95 ಅಸಿಸ್ಟೆಂಟ್ ಎಜ್ಯುಕೇಷನಲ್ ಆಫೀಸರ್‌ರವರನ್ನು ಪೋಸ್ಟ್ ಮಾಡಿದೆ, ಎಲ್ಲರವರನ್ನು ಪೋಸ್ಟ್

ಮಾಡಬೇಕಾದರೆ, 80 ಜನ ಒಂದೇ ಶಾಲೆಯಲ್ಲಿ ಪ್ರೊಬೇಷನರ್ಸ್ ಹೆಡ್‌ಮಾಸ್ಟರ್‌ಗಳಾಗಿದ್ದರು, ಕೆಲವರು ಬಡ್ತಿಯನ್ನು ತೆಗೆದುಕೊಂಡು ಎಇಒ ಎಕ್ಸಿಕ್ಯೂಟೀವ್ ಪೋಸ್ಟ್‌ನಲ್ಲಿ ಎಲ್ಲರೂ ಹಣವನ್ನು ಕೊಟ್ಟು ಅಲ್ಲಿಯೇ ಮುಂದುವರಿಯುತ್ತಿದ್ದರು. 10 ರಿಂದ 20 ವರ್ಷಗಳವರೆಗೂ ಅಲ್ಲಿಯೇ ಏಇಒಗಳಾಗಿದ್ದರು. ನಾನು ಬಂದು ಯಾರು ಎಇಒಗಳಾಗಿ ಕೆಲಸವನ್ನು ಮಾಡಿಲ್ಲವೋ, ಅವರೆಲ್ಲರೂ ಎಇಒಗಳಾಗಿ ಕೆಲಸವನ್ನು ಮಾಡಬೇಕು; ಏಇಒಗಳಾಗಿ 5-5 ವರ್ಷಗಳಿಂದ ಯಾರಿದ್ದಾರೆ, ಅವರೆಲ್ಲೂ ಹೆಡ್‌ಮಾಸ್ಟರ್ ಆಗಬೇಕೆಂದು ಪಾಲಿಸಿಯನ್ನು ಮಾಡಿದೆ. ನಮ್ಮ ಸಿಂಧ್ಯಾರವರು ಈ ರೀತಿಯಾಗಿ ಮಾಡಬೇಕೆಂದು ಹೇಳಿದರು, ನಾನು ಮಾನ್ಯ ಸಿಂಧ್ಯಾರವರಿಗೆ ಈ ರೀತಿಯಾಗಿ ತಾವು ಕೇಳಬೇಡಿ ಎಂದು ನಾವು ಒಂದು ನಾರ್ಮ್ಸ್‌ನ್ನು ಇಟ್ಟುಕೊಂಡು ಮಾಡುತ್ತಿದ್ದೇನೆ ಎಂದು ಹೇಳಿದೆ. ಯಾರೊಬ್ಬರೂ ನನ್ನ ಹತ್ತಿರ ಬರಲಿಲ್ಲ. ಇವತ್ತು ನಿಮ್ಮ ಅಧಿಕಾರಿಗಳಿದ್ದಾರೆ, ಬೇಕಾದರೆ ಅವರನ್ನು ಕೇಳಿ. ಅವರೆಲ್ಲರೂ ಕೂಡ ಇವತ್ತು ಡಿಡಿಪಿಐಗಳಾಗಿದ್ದಾರೆ, ಎಲ್ಲರೂ ನನ್ನನ್ನು ಪ್ರಶಂಶಿಸಿದರು. 80 ಜನರು ಇಂತಹ ಮಂತ್ರಿ ಈ ರೀತಿಯಾಗಿ ಪಾಲಿಸಿಯನ್ನು ಮಾಡಿದವರು ಯಾರು ಇಲ್ಲವೆಂದು ಹೇಳಿದರು. ಇದನ್ನು ನಾನು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. ಇದನ್ನು ಅವರೆಲ್ಲರೂ ಒಪ್ಪಿಕೊಂಡರು, ನಾನು ಎಂ.ಎಲ್‌ಎಗಳಿಗೆ ನಿಮ್ಮ ಜಾತಿಯ ಅಧಿಕಾರಿಗಳನ್ನು ಕೊಡುವುದಿಲ್ಲವೆಂದು ಹೇಳಿದೆ, ನಿಮ್ಮ ತಾಲ್ಲೂಕಿಗೆ ನಿಮ್ಮ ಜಾತಿಯ ಅಧಿಕಾರಿಗಳು ಬೇಡವೆಂದು ಹೇಳಿದೆ. ಆದರೆ ಬೇರೆ ಜಾತಿಯವರನ್ನು ಅಲ್ಲಿಗೆ ಕೊಡುತ್ತೇನೆ. ಹಾರ್ಟಿಕಲ್ಚರ್ ಮಂತ್ರಿಯಾಗಿಯೂ ಸಹ ಕೆಲಸವನ್ನು ಮಾಡಿದ್ದೇನೆ, ಶಿಕ್ಷಣ ಇಲಾಖೆಯ ಮಂತ್ರಿಗಳಾಗಿಯೂ ಸಹ ಮಾಡಿದ್ದೇನೆ. ಇದರಲ್ಲಿ ಒಂದು ಬದಲಾವಣೆಗಲಾಗಿರುವುದಿಲ್ಲ, ಇದರ ಬಗ್ಗೆ ಏನಾದರೂ ಬಂದರೆ ರಾಜೀನಾಮೆಯನ್ನು ಕೊಡುವುದಕ್ಕೆ ತಯಾರಾಗಿದ್ದೇನೆ. ಸ್ಯಾಕ್ರಿಫೈಸ್ ಮಾಡುವುದಕ್ಕೂ ತಯಾರಾಗಿರಬೇಕು, ಏನಾದರೂ ಒಳ್ಳೆಯದನ್ನು ಮಾಡಬೇಕಾದರೆ ನಾವು ತ್ಯಾಗ ಮಾಡುವುದಕ್ಕೂ ಸಿದ್ಧರಾಗಿರಬೇಕು. ಇಲ್ಲದಿದ್ದರೆ ತ್ಯಾಗ ಮಾಡದಿದ್ದರೆ ಏನೂ ಸಾಧನೆಯನ್ನು ಮಾಡುವುದಕ್ಕಾಗುವುದಿಲ್ಲ. ಎಲ್ಲಾ ಭಾಗದಲ್ಲಿ ಅಭಿವೃದ್ಧಿಯು ಸಮಾನವಾಗಿ ಆಗಬೇಕಾದರೆ ಮತ್ತು ಅಸಮಾನತೆ ತೆಗೆದುಹಾಕಬೇಕಾದರೆ ಉತ್ತರ ಕರ್ನಾಟಕದಲ್ಲಿ, ಸಂವಿಧಾನ ತಿದ್ದುಪಡಿ ಬಗ್ಗೆ ಮಾನ್ಯ ಖರ್ಗೆಯವರು ಮಧ್ಯಪ್ರವೇಶಿಸಿ ಹೇಳಿದರು. ನಾವು 8ನೇ ಜುಲೈ 1998ರಲ್ಲಿ ಕೇಂದ್ರ ಸರ್ಕಾರಕ್ಕೆ ನಮ್ಮ ಸರ್ಕಾರ ಪತ್ರ ಬರೆದಿದೆ.

``Sub:- Amendment of Constitution of India for providing Regional reservation in Karnataka.

ಆಗ ನಾವೇನು ಮಾಡಿದ್ದೇವೆಂದರೆ,

....

a) to promote accelerated development of the backward areas of the State of Andhra Pradesh so as to secure the balanced development of the State as a whole;

F-91-II

b) to provide equitable opportunities to different areas of the State in the matter of education, employment and career prospects in Public Service ;

To promote accelerated development of backward areas in Karnataka, the Government has constituted the Hyderabad-Karnataka Area Development Baord; Malnad Area Development Board and Bayaluseeme Development Board, so as to secure the balance development of the State as a whole. Copies of the enactments creating these Boards are enclsoed.

The Government of Karnataka proposes to provide for regional reservation with a view to make available suitable opportunities and facilities for the people belonging to different parts of the State in the matter of public employment and in the matter of education, as has been doen in Andhra Pradesh and thus promote accelerated development of Backward areas of Karnataka. Therefore, I am to request you kindly to take im.*/*ediate necessary action to amend the Constitution of India so as to make special provision with respect to the State of Karnataka on the lines of Article 371(D) of the Constitution which provides for special provision in respect of the State of Andhra Pradesh."

ಅಂದರೆ ನಾವು ಕಾನ್ಸಿಟ್ಯೂಷನಲ್ ಅಮೆಂಡ್‌ಮೆಂಟ್ ಮಾಡಬೇಕೆಂದು ನಾವು ಈಗಾಗಲೇ ಪ್ರಸ್ತಾವನೆಯನ್ನು ನಾವು ಕಳುಹಿಸಿದ್ದೇವೆ. ನಾನು ಇವತ್ತೂ ಸಲಹೆ ಕೊಡುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಬಿಲ್ಲನ್ನು ಏನೂ ತಯಾರು ಮಾಡಬೇಕಾಗಿಲ್ಲ. ಸರ್ಕಾರ ಇವತ್ತು ಮೂವ್ ಮಾಡಲಿ ನಾವು ರೆಸಲ್ಯೂಷನ್ ಮಾಡೋಣ. ಎಲ್ಲಾ ಪಕ್ಷದವರು ಸೇರಿ ಇಂತಹ ಒಂದು ಕಾನ್ಸಿಟ್ಯೂಷನಲ್ ಅಮೆಂಡ್‌ಮೆಂಟ್‌ನ ಅವಶ್ಯಕತೆಯಿದೆ ಎಂದು ಹೇಳಿ ನಾವೆಲ್ಲರೂ ಬೆಂಬಲ ಕೊಡುತ್ತೇವೆ. ತಾವೊಂದು ರೆಸಲ್ಯೂಷನ್ ತನ್ನಿ, ಅದನ್ನು ನಾವೆಲ್ಲರೂ ಪಾಸ್ ಮಾಡಿ ಕಳುಹಿಸೋಣ ಎಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ (ಬ್ಯಾಡಗಿ) :— ಮಾನ್ಯ ಉಪಾಧ್ಯಕ್ಷರೆ, ಕಳೆದ ಒಂದೂವರೆ ವರ್ಷದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಸಾರ್ವಜನಿಕರಿಗೆ

ಅನುಕೂಲವಾಗುವ ಬಹಳಷ್ಟು ಕೆಲಸಗಳನ್ನು ಹಮ್ಮಿಕೊಂಡಿದೆ. ಮುಂದಿನ ದಿನಗಳಲ್ಲಿ ಸರ್ಕಾರ ಸಾಕಷ್ಟು ಕೆಲಸಗಳನ್ನು ಮಾಡಬೇಕೆಂದು ಆಶಿಸುತ್ತೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಗ್ರಾಮೀಣ ಪ್ರದೇಶಗಳಿಗೆ ರಸ್ತೆ ಸಂಪರ್ಕವನ್ನು ಕಲ್ಪಿಸುವಂತಹ ನೂರು ಲಕ್ಷ ರೂಪಾಯಿಗಳ ಯೋಜನೆಯಡಿಯಲ್ಲಿ ಸಾಕಷ್ಟು ರಸ್ತೆಗಳನ್ನು ಮಾಡಿ ಯಾವ ಹಳ್ಳಿಯ ಜನರಿಗೆ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಲಿಕ್ಕೆ ದಾರಿಯೇ ಇರಲಿಲ್ಲವೋ ಅಂತಹ ಕಡೆಗಳಲ್ಲಿ ಬಹಳಷ್ಟು ಉತ್ತಮವಾದ ಕೆಲಸಗಳನ್ನು ಮಾಡಿದೆ. ಅದೇ ರೀತಿಯಲ್ಲಿ ಮತ್ತೊಂದು ಸಾರಿ ನೂರು ಲಕ್ಷ, ರೂಪಾಯಿಗಳ ಯೋಜನೆಯನ್ನು ಜಾರಿಗೆ ತಂದು ಇಎಎಸ್ ಮತ್ತು ಸರ್ಕಾರ ಕೊಡತಕ್ಕ ಅನುದಾನದಲ್ಲಿ ರಸ್ತೆಗಳನ್ನು ಮಾಡಿದರೆ ಬಹುಮಟ್ಟಿಗೆ ಹಳ್ಳಿಗಳ ಸಂಪರ್ಕ ರಸ್ತೆಯಿಂದ ಜನರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶಿಕ್ಷಣ ಕ್ಷೇತ್ರದಲ್ಲಿ ಮಾನ್ಯ ಶಿಕ್ಷಣ ಸಚಿವರು ಬಹಳಷ್ಟು ಮಹತ್ತರವಾದ ಬದಲಾವಣೆಗಳನ್ನು ಮಾಡಿದ್ದಾರೆ. ಇದರಲ್ಲಿ ಶಾಲೆ ಬಿಟ್ಟ ಮಕ್ಕಳಿಗೆ ಚಿನ್ನರ ಅಂಗಳ ಕಾರ್ಯಕ್ರಮ ಚೆನ್ನಾಗಿದೆ. ಚಿನ್ನರ ಅಂಗಳ ಕಾರ್ಯಕ್ರಮದಡಿಯಲ್ಲಿ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಕೇಂದ್ರಗಳನ್ನು ಒಪನ್ ಮಾಡಿ ಪ್ರಗತಿದಾಯಕವಾದ ಕೆಲಸವನ್ನು ಮಾಡಿದ್ದಾರೆ. ಈ ಕೆಲಸವನ್ನು ಮಾಡಿರುವುದಕ್ಕೆ ನಾನು ಸರ್ಕಾರವನ್ನು ಶ್ಲಾಘಿಸುತ್ತೇನೆ. ಇಂತಹ ಕೆಲಸಗಳನ್ನು ಮಾಡಿರುವುದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದರ ಜೊತೆಗೆ ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಿ ಅವರ ಮುಂದಿನ ಭವಿಷ್ಯಕ್ಕೆ ಅನುಕೂಲವಾಗುವ ರೀತಿಯಲ್ಲಿ ಅವರಿಗೆ ವ್ಯವಸ್ಥೆಗಳನ್ನು ಕಲ್ಪಿಸಬೇಕಾಗಿದೆ. ಉದಾಹರಣೆಗ ನಾನು ಕೂಡ ಶಾಲೆ ಬಿಟ್ಟ ಒಬ್ಬ ವಿದ್ಯಾರ್ಥಿಯಾಗಿದ್ದೆ. ನಾನು ಶಾಲೆಗೇ ಹೋಗುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ನನ್ನನ್ನು ಒಬ್ಬ ಶಿಕ್ಷಕರು ಕರೆದು ತಂದು ಒಂದೇ ವರ್ಷದಲ್ಲಿ ಒಂದನೆಯ ಮತ್ತು ಎರಡನೆಯ ಕ್ಲಾಸ್, ಮುಂದಿನ ವರ್ಷದಲ್ಲಿ ಮೂರು ನಾಲ್ಕು ಹೀಗೆ ಹಳೆಯ ಅಡ್ಮಿಷನ್ ಪ್ರಕಾರ ನನ್ನನ್ನು ಅಡ್ಮಿಟ್ ಮಾಡಿಕೊಂಡು ಕಲಿಸಿದ್ದರಿಂದ ಇವತ್ತು ನಾನು ಬಿ.ಎ. ತನಕ ಎಜುಕೇಷನ್ ಮುಗಿಸಿ ಇವತ್ತು ಒಬ್ಬ ಶಾಸಕನಾಗಿ ತಮ್ಮ ಮುಂದೆ ಇದ್ದೇನೆ. ಅದೇ ರೀತಿಯಲ್ಲಿ ಶಾಲೆ ಮಕ್ಕಳಿಗೆ ಏನು ಅವಕಾಶ ಮಾಡಿಕೊಟ್ಟಿದ್ದೀರಿ, ಈ ಕಾರ್ಯಕ್ರಮವನ್ನು ಬಹಳ ಭರವಸೆಯಿಂದ ಸರ್ಕಾರ ನಡೆಸಿದರೆ ಬಡ ಜನರಿಗೆ ಅನುಕೂಲವಾಗುತ್ತದೆ. ಮೊನ್ನೆ ಗುಲ್ಬರ್ಗ ಜಿಲ್ಲೆಯ ಬಗ್ಗೆ ಮಾನ್ಯ ಗೃಹ ಸಚಿವರು ಹೇಳುತ್ತಿದ್ದರು. ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ 80 ಸಾವಿರ ಜನ ಮಕ್ಕಳು ಇವತ್ತು ಶಾಲೆಯಲ್ಲಿ ಕಲಿಕೆಯಿಂದ ವಂಚಿತರಾಗಿದ್ದನ್ನು ಗುರುತಿಸಿ ಸರ್ಕಾರ ಈ ಕಾರ್ಯಕ್ರಮದಡಿಯಲ್ಲಿ ಅವರನ್ನು ವಿದ್ಯಾವಂತರನ್ನಾಗಿ ಮಾಡುವುದರಿಂದ ಬಹಳಷ್ಟು ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಇದೂ ಕೂಡ ಸ್ವಾಗತಾರ್ಹವಾದ ಯೋಜನೆ. ಜೊತೆಗೆ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ಬಗ್ಗೆ ಹೇಳಬೇಕೆಂದರೆ,

ಹಳ್ಳಿಗಳಲ್ಲಿರತಕ್ಕ ಪ್ರೌಢಶಾಲೆಗಳಲ್ಲಿ ಶಿಕ್ಷಣದ ಕೊರತೆಯಿಂದ ಇವತ್ತು ಇಂಗ್ಲೀಷ್ ಹೇಳುವ ಶಿಕ್ಷಕರು ಇಲ್ಲ. ವಿಜ್ಞಾನ, ಗಣಿತ ಹೇಳುವ ಶಿಕ್ಷಕರು ಇಲ್ಲ. ಇತರೆ ವಿಷಯಗಳ ಶಿಕ್ಷಕರ ಕೊರತೆಯಿರುವುದರಿಂದ ಬಹಳಷ್ಟು ತೊಂದರೆಯಾಗಿದೆ. ಉದಾಹರಣೆಗೆ ನನ್ನ ಕ್ಷೇತ್ರದ ಒಂದು ಶಾಲೆಯಲ್ಲಿ ಮೂರು ನಾಲ್ಕು ಜನ ಶಿಕ್ಷಕರ ಕೊರತೆಯಿರುವುದರಿಂದ ಇವತ್ತು ವಿದ್ಯಾರ್ಥಿಗಳು ನೂರಕ್ಕೆ ಎಂಭತ್ತು ಜನ ಪಾಸಾಗತಕ್ಕ ಕಾಲದಲ್ಲಿ ಶೇಕಡ 10-15 ರಷ್ಟು ಜನ ಪಾಸಾಗುತ್ತಿದ್ದಾರೆ. ಸರ್ಕಾರ ಕೂಡಲೇ ಶಿಕ್ಷಕರನ್ನು ಸರ್ಕಾರಿ ಪ್ರೌಢಶಾಲೆಗಳಲ್ಲಿ, ಜೂನಿಯರ್ ಕಾಲೇಜುಗಳಲ್ಲಿ, ಪದವಿ ಕಾಲೇಜುಗಳಲ್ಲಿ ಇವತ್ತು ಏನು ಶಿಕ್ಷಕರ ಕೊರತೆಯಿದೆ ಅದನ್ನು ಕೂಡಲೇ ನೀಗಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಹೊಸ ಶಿಕ್ಷಣ ಯೋಜನೆಯಡಿಯಲ್ಲಿ ಪರ್ಸೆಂಟೇಜ್ ಕಟ್ ಮಾಡಿ ಹೊಸ ಹುದ್ದೆಗಳನ್ನು ಕೊಡಬಾರದೆಂದು ಹೇಳುತ್ತಿದ್ದಾರೆ. ಮ್ಯಾನೇಜ್‌ಮೆಂಟ್‌ನವರು ಆ ಹುದ್ದೆಗಳನ್ನು ತುಂಬಿಕೊಳ್ಳಲಿಕ್ಕೆ ಆಗುವುದಿಲ್ಲ ಅವರು ಪಗಾರ ಕೊಡಲಿಕ್ಕೆ ಅವರಲ್ಲಿ ದುಡ್ಡು ಇರುವುದಿಲ್ಲ. ನಾವೆಲ್ಲಾ ಹೆಚ್ಚಾಗಿ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ತೆಗೆಯುತ್ತಿದ್ದೇವೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಪಟ್ಟಣ ಪ್ರದೇಶಗಳಲ್ಲಿರತಕ್ಕ ಡಿಗ್ರಿ ಕಾಲೇಜುಗಳು ಸಂಪೂರ್ಣವಾಗಿ ಬಂದ್ ಆಗತಕ್ಕ ಪರಿಸ್ಥಿತಿ ಬಂದಿದೆ. ಈಗಾಗಲೇ ಸರ್ಕಾರ ಆದೇಶ ಮಾಡಿ ಇಷ್ಟು ಜನ ವಿದ್ಯಾರ್ಥಿಗಳು ಇರಬೇಕು ಇಲ್ಲದಿದ್ದರೆ ಕಾಲೇಜು ಇರಬಾರದೆನ್ನುವ ತೀರ್ಮಾನಕ್ಕೆ ಬರಲಾಗಿದೆ. ಮುಂದಿನ ದಿನಗಳಲ್ಲಿ ನನಗೆ ಹೀಗೆ ಅನ್ನಿಸುತ್ತದೆ, ಬರೀ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಮಾಡಿಬಿಟ್ಟರೆ ಇಂಜಿನಿಯರ್ ಪಾಸು ಮಾಡಿದಂತಹವರಿಗೆ ಹೆಚ್ಚು ಉದ್ಯೋಗಗಳನ್ನು ಕೊಡಲಿಕ್ಕೆ ಆಗುತ್ತಿಲ್ಲ. ಹೆಚ್ಚು ಹೆಚ್ಚು ಇಂಜಿನಿಯರ್‌ಗಳನ್ನು ತಯಾರು ಮಾಡಿ ಅವರನ್ನು ನಿರುದ್ಯೋಗಿಗಳನ್ನಾಗಿ ಮಾಡುತ್ತಿದ್ದೇವೆ. ಅವರಿಗೆ ಉದ್ಯೋಗವಿಲ್ಲ. ಮತ್ತೊಂದು ಕಡೆ ನಮ್ಮ ಮುಂದಿನ ಮಕ್ಕಳಿಗೆ ಕಲಿಯುವುದಕ್ಕೆ ಗಣಿತ, ವಿಜ್ಞಾನ ಪಾಠ ಹೇಳತಕ್ಕ ಶಿಕ್ಷಕರ ತೊಂದರೆಯಾಗುತ್ತದೆ. ಅಂತಹ ಸಂದರ್ಭಗಳಲ್ಲಿ ತಾವೇನು ಮಾಡುತ್ತೀರಿ? ಸರ್ಕಾರ ಇದಕ್ಕೆ ಹೆಚ್ಚು ಒತ್ತನ್ನು ಕೊಟ್ಟು ಕೆಲಸ ಮಾಡಬೇಕು. ಇವತ್ತು ಡಿಗ್ರಿ ಕಾಲೇಜುಗಳೆಲ್ಲ ಮುಚ್ಚಿಹೋಗುತ್ತಿವೆ. ಇದಕ್ಕೆ ಪುನಶ್ಚೇತನವನ್ನು ಕೊಡಬೇಕು, ಆ ದೃಷ್ಟಿಯಲ್ಲಿ ಸರ್ಕಾರ ಹೆಚ್ಚು ಒತ್ತನ್ನು ಕೊಡಬೇಕೆಂದು ಹೇಳುತ್ತೇನೆ. ಜೊತೆಗೆ ಹೆಚ್ಚುವರಿ ಮ್ಯಾನೇಜ್‌ಮೆಂಟ್ ತುಂಬತಕ್ಕ ಶಿಕ್ಷಕರ ಕೊರತೆ ಏನಿದೆ ಅದನ್ನು ಬ್ಯಾಕ್‌ಲಾಗ್ ಹುದ್ದೆಗಳ ಪ್ರಕಾರ ತುಂಬಲಿಕ್ಕೆ ನಮಗೆ ಅವಕಾಶವಿರಬೇಕು. ನಾವು ತುಂಬುವುದಿಲ್ಲ, ಸರ್ಕಾರ ಬ್ಯಾಕ್‌ಲಾಗ್ ಹುದ್ದೆಗಳನ್ನು ಇದುವರೆಗೆ ತುಂಬಿಲ್ಲ. ಹಿಂದಿನ ಸರ್ಕಾರ ತುಂಬಿಲ್ಲವೆಂದು ಈ ಸರ್ಕಾರ ಆ ನೆವ ಹೇಳಿಕೊಳ್ಳಬಾರದು, ತಕ್ಷಣ ಕ್ರಮ ಕೈಗೊಂಡು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬತಕ್ಕ ಕಾರ್ಯಕ್ರಮವನ್ನು ಮಾಡಬೇಕು. ಇವತ್ತು ಹತ್ತು ಹನ್ನೆರಡು ವರ್ಷಗಳ ಹಿಂದೆ ಶಾಶ್ವತ ಅನುದಾನರಹಿತ ಕನ್ನಡ ಶಾಲೆಗಳನ್ನು ಪದವಿ ಪೂರ್ವ ಕಾಲೇಜು ಡಿಗ್ರಿ ಕಾಲೇಜುಗಳನ್ನು

ತೆಗೆದಿದ್ದಾರೆ. ಆದರೆ ಇದುವರೆಗೆ ಅವುಗಳಿಗೆ ಅನುದಾನ ನೀಡತಕ್ಕ ವ್ಯವಸ್ಥೆಯಾಗಿರಲಿಲ್ಲ. ಈ ಬಗ್ಗೆ ಪರಿಶಿಷ್ಟಜಾತಿ ಪರಿಶಿಷ್ಟವರ್ಗಗಳ ಶಾಸಕರು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಂಡಾಗ, ಅವರು ಕೂಡಲೇ ಅನುದಾನವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ. ಅದನ್ನೂ ಕೂಡ ಸರ್ಕಾರ ಬಹಳಷ್ಟು ತೀವ್ರವಾಗಿ ಪರಿಗಣಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಕೃಷಿ ಪ್ರಧಾನವಾಗಿರತಕ್ಕ ನಮ್ಮ ದೇಶದಲ್ಲಿ ನೂರಕ್ಕೆ 75-80ರಷ್ಟು ಜನ ಹಳ್ಳಿಗಳಲ್ಲಿ ಜೀವನಕ್ಕೆ ಕೃಷಿಯನ್ನೇ ಅವಲಂಭಿಸಿಕೊಂಡಿದ್ದಾರೆ. ಈ ಸಲ ಬರಗಾಲ ಬಂದು ಬಹಳಷ್ಟು ಜನರಿಗೆ ತೊಂದರೆಯಾಗಿದೆ. ಸರ್ಕಾರ ಈಗಾಗಲೇ ಹಾಕಿಕೊಂಡಿರತಕ್ಕ ಕಾರ್ಯಕ್ರಮಗಳನ್ನು ಮಾಡಲಿಕ್ಕೆ ತ್ವರಿತವಾಗಿ ಹಣವನ್ನು ಬಿಡುಗಡೆ ಮಾಡಿ ಕೆಲಸಕಾರ್ಯಗಳನ್ನು ತ್ವರಿತವಾಗಿ ಮಾಡಬೇಕು. ನಮ್ಮ ಕಡೆ ಹೋಬಳಿಗಳ ಸಂಖ್ಯೆ ಕಡಿಮೆಯಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ನಮ್ಮ ಭಾಗದ ಕಂದಾಯ ಇಲಾಖೆಯಲ್ಲಿ ಬಹಳಷ್ಟು ಖಾಲಿಯಿರತಕ್ಕ ಹುದ್ದೆಗಳನ್ನು ತುಂಬತಕ್ಕ ವ್ಯವಸ್ಥೆಯನ್ನು ಮಾಡಬೇಕು. ಹಿಂದಿನ ದಿನಗಳಲ್ಲಿ ಬಣವೆ ಸುಟ್ಟರೆ ಮನೆ ಸುಟ್ಟರೆ ಅವುಗಳಿಗೆ ಪರಿಹಾರವಾಗಿ 500 ರೂಪಾಯಿಗಳನ್ನು ಕೊಡತಕ್ಕ ವ್ಯವಸ್ಥೆ ಇದೆ. ಅದು ಯಾವ ದ್ವಾಪರ ಯುಗದಲ್ಲಿ ಮಾಡಿದ ಕಾನೂನೋ ಗೊತ್ತಿಲ್ಲ. ಆದ್ದರಿಂದ ಕನಿಷ್ಟಪಕ್ಷ ಇಂತಹ ಸಂದರ್ಭದಲ್ಲಿ ಎರಡು ಸಾವಿರ ರೂಪಾಯಿಗಳಿಗೆ ಕಡಿಮ ಇಲ್ಲದ ಹಾಗೆ ಸರ್ಕಾರ ಕೊಡಬೇಕೆಂಬ ವಿಚಾರ ಹೇಳುತ್ತಾ ಇನ್ನು ಜಲಾಯನ ಪ್ರದೇಶಗಳನ್ನು ಹೆಚ್ಚು ಮಾಡಿ ನೀರು ಸಂಗ್ರಹಣೆ ಮಾಡಬೇಕು, ಕೆರೆ ಕಾಲುವೆಗಳನ್ನು ತೋಡತಕ್ಕಂಥ ಕೆಲಸ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಣ್ಣ ನೀರಾವರಿ ಮಂತ್ರಿಗಳು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಇದಕ್ಕೆ ಬೇರೆ ದೇಶಗಳು ಸಾಲ ಕೊಡುತ್ತಿವೆ. ಇವತ್ತು ನಾನು ಪತ್ರಿಕೆಯಲ್ಲಿ ಓದಿದ ಪ್ರಕಾರ ಸುಮಾರು ಎಂಟು ಜಿಲ್ಲೆಗಳಿಗೆ ಸರ್ಕಾರ ಈ ಜಲಾನಯನ ಅಭಿವೃದ್ಧಿಗಾಗಿ ಹಣ ಕೊಡುತ್ತಿದೆ. ನಮ್ಮದು ಮತ್ತು ನಿಮ್ಮದೂ ಕೂಡ ಆರುನೂರು-ಏಳುನೂರು ಕೆರೆಗಳು ಇರತಕ್ಕಂಥ ತಾಲ್ಲೂಕುಗಳಾಗಿವೆ. ಬೇರೆ ಬೇರೆ ಕಡೆಗಳಿಗೆ ಹೀಗೆ ಚೆಕ್‌ಡ್ಯಾಮ್ ಹಾಕಿ, ಕಲ್ಲು ಮಣ್ಣು ಹಾಕಿ ದೊಡ್ಡ ಮಳೆ ಬಂದರೆ ಅದು ಕೊಚ್ಚಿಕೊಂಡು ಹೋಗಿ ಅದರ ಬಗ್ಗೆ ಸರ್ಕಾರಕ್ಕೆ ಲೆಕ್ಕ ಕೊಡತಕ್ಕಂಥ ವಿಚಾರ ಇವತ್ತು ನಡೆದಿದೆ. ಇದರ ಬಗ್ಗೆ ನಮ್ಮ ಸಮಗ್ರ ವರದಿಯನ್ನು ಕೃಷಿ ಸಮಿತಿಯಲ್ಲಿ ಪ್ರಸ್ತಾಪ ಮಾಡಿದ್ದೇವೆ. ಈ ದೃಷ್ಟಿಯಿಂದ ಜಲಾನಯನ ಪ್ರದೇಶವನ್ನು ಅಭಿವೃದ್ಧಿಪಡಿಸುವ ಯೋಜನೆಯಡಿಯಲ್ಲಿ ಕೆರೆಗಳ ಹೂಳು ಎತ್ತುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಈ ಕಾರ್ಯಕ್ರಮದಲ್ಲಿ ಅದು ಸರಣಿಯಾಗಿ ಒಂದು ಕಡೆ ಮಳೆ ನೀರು ಬಂತು ಎಂದರೆ, ಒಂದು ಕೋಡಿ ಬಿತ್ತು ಎಂದರೆ ಅದು 15-20 ಕೆರೆಗಳನ್ನು ತುಂಬುವಂಥ ನಮ್ಮಲ್ಲಿ ಸರಣಿ ಕೆರೆಗಳಿವೆ. ಆದ್ದರಿಂದ ಕೆರೆಗಳನ್ನು ದುರಸ್ತಿ ಮಾಡಿ ಅವುಗಳಿಗೆ ಕೋಡಿಗಳನ್ನು ಕಟ್ಟಿ, ಅವುಗಳಲ್ಲಿ ನೀರು ನಿಲ್ಲಿಸುತ್ತಾ ಬಂದುಬಿಟ್ಟರೆ

ಅನುಕೂಲವಾಗುತ್ತದೆ. ಅವತ್ತು ಮುನ್ನೂರು-ನಾಲ್ಕುನೂರು ಕೆರೆಗಳನ್ನು ನಾವು ಜಲಾನಯನ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಹೊಸ ಯೋಜನೆಯನ್ನು ಹಾಕಿಕೊಂಡು ಕೆಲಸ ಪ್ರಾರಂಭ ಮಾಡಿದರೆ ಎಲ್ಲಾ ಜಲಾನಯನ ಪ್ರದೇಶಗಳೂ ಅಭಿವೃದ್ಧಿಯತ್ತ ಸಾಗುತ್ತವೆ ಮತ್ತು ಹಾಗೆ ಖರ್ಚು ಮಾಡುವಂಥ ಸಾಕಷ್ಟು ಹಣ ಸದುಪಯೋಗವಾಗುತ್ತದೆ ಎನ್ನುವ ಒಂದು ಮಾತನ್ನು ಸಲಹೆ ರೂಪದಲ್ಲಿ ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಸಿ.ಬಿ. ಸುರೇಶ್ ಬಾಬು (ಚಿಕ್ಕನಾಯಕನಹಳ್ಳಿ) :— ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ತುಮಕೂರು ಜಿಲ್ಲೆಯಲ್ಲಿ ವ್ಯಾಪಕವಾಗಿ ತೆಂಗು ಬೆಳೆಗಾರರು ಹೆಚ್ಚಿಗೆ ಇದ್ದು ಇವತ್ತು ಅವರೆಲ್ಲೂ ಕೂಡ ನುಸಿರೋಗದಿಂದ ತತ್ತರಿಸಿ ಹೋಗುತ್ತಿದ್ದಾರೆ. ಮಾನ್ಯ ಕೃಷಿ ಸಚಿವರೂ ಕೂಡ ಇಲ್ಲಿ ಇದ್ದಾರೆ. ನಾನು ಕಳೆದ ಅಧಿವೇಶನದಲ್ಲೂ ಕೂಡ ಮನವಿ ಮಾಡಿಕೊಂಡಿದ್ದೆ. ಈ ರಾಜ್ಯದಲ್ಲಿ ಎಷ್ಟು ತೆಂಗಿನ ಮರಗಳಿವೆ, ಅವೆಲ್ಲಕ್ಕೂ ಕೂಡ ಏನು ಮಕ್ಕಳಿಗೆ ಪಲ್ಸ್ ಪೋಲಿಯೊ ಹಾಕತಕ್ಕಂಥ ಕಾರ್ಯಕ್ರಮ ಮಾಡಿದ್ದೀರೋ, ಅದೇರೀತಿಯಲ್ಲಿ ರಾಜ್ಯದಲ್ಲಿರತಕ್ಕಂಥ ಎಲ್ಲಾ ತೆಂಗಿನ ಮರಗಳಿಗೆ ಕೂಡ ಎಲ್ಲಾ ಇಲಾಖೆಗಳನ್ನು ಅದರಲ್ಲಿ ತೊಡಗಿಸಿಕೊಂಡು ಅವುಗಳಿಗೆ ಔಷಧಿಯನ್ನು ಸಿಂಪಡಣೆ ಮಾಡುವ ವ್ಯವಸ್ಥೆ ಮಾಡಿದರೆ ಖಂಡಿತವಾಗಿಯೂ ಕೂಡ ಈ ರೋಗವನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಮತ್ತು ರೈತರನ್ನು ಆರ್ಥಿಕವಾಗಿ ಉಳಿಸುವುದಕ್ಕೆ ಸಾಧ್ಯವೆಂದು ನಾನು ಕಳೆದ ಅಧಿವೇಶನದಲ್ಲಿ ಸನ್ಮಾನ್ಯ ಕೃಷಿ ಸಚಿವರಿಗೆ ಮನವಿ ಮಾಡಿಕೊಂಡಿದ್ದೆ. ಅದೇ ರೀತಿ ಈಗಲೂ ಕೂಡ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಸಹ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಒಗ್ಗೂಡಿಸಿಕೊಂಡು ಈ ಕಾರ್ಯಕ್ರಮವನ್ನು ಹಮ್ಮಿಕೊಂಡರೆ ಖಂಡಿತವಾಗಿಯೂ ಈ ನುಸಿರೋಗ ಮತ್ತು ಕಪ್ಪುತಲೆ ಹುಳ ರೋಗ ಏನಿದೆ, ಇವೆರಡನ್ನೂ ಕೂಡ ನಿವಾರಣೆ ಮಾಡುವುದಕ್ಕೆ ಸಾಧ್ಯವಿದೆ.

ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) :— ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ಅನೇಕ ಸಾರಿ ಈ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಚಿಕ್ಕಮಗಳೂರು ಜಿಲ್ಲಾಪಂಚಾಯತ್‌ನವರು ವಿಶೇಷ ರೀತಿಯಲ್ಲಿ ಈ ನುಸಿರೋಗವನ್ನು ಸಂಪೂರ್ಣವಾಗಿ ಪರಿಹಾರ ಮಾಡಬೇಕೆಂಬ ದೃಷ್ಟಿಯಿಂದ ಈಗಾಗಲೇ ಪ್ರಾಯೋಗಿಕವಾಗಿ ತರೀಕೆರೆ ಮತ್ತು ಕಡೂರು ತಾಲ್ಲೂಕಿನಲ್ಲಿ ಇದನ್ನು ಮಾಡಿದ್ದಾರೆ. ಆ ದೃಷ್ಟಿಯಿಂದ ಮಾನ್ಯ ಸದಸ್ಯರು ಹೇಳಿದ ಪ್ರಕಾರ ರೈತರಿಗೆ ಒಂದು ಕಡೆ ಬರಗಾಲ ಇದೆ, ಮತ್ತೊಂದು ಕಡೆ ಈ ನುಸಿರೋಗದ ತೊಂದರೆ ಇದೆ. ರೈತರಿಗೆ ತೊಂದರೆ ಉಂಟುಮಾಡುವ ಈ ನುಸಿರೋಗವನ್ನು ಸಂಪೂರ್ಣವಾಗಿ ತೊಡೆದುಹಾಕಬೇಕು ಎನ್ನುವುದಾದರೆ ಎಲ್ಲಾ ಮರಗಳಿಗೆ ನುಸಿರೋಗದ ಔಷಧಿಯನ್ನು ಹೊಡೆಸುವುದಕ್ಕೆ ತಾವು ವಿಶೇಷ ರೀತಿಯಲ್ಲಿ ಹಣ ಬಿಡುಗಡೆ ಮಾಡಬೇಕು. ಹಾಗೆ ಮಾಡಿದರೆ ಮಾತ್ರ ಅದು ಸಾಧ್ಯ. ಇಲ್ಲದಿದ್ದರೆ ಬರಗಾಲದಿಂದ ನೀರು ಕಡಿಮೆಯಾಗುತ್ತಿದೆ

ಮತ್ತು ಮುಂದೆ ಬೇಸಿಗೆ ಬರುತ್ತಿದೆ. ಆ ದೃಷ್ಟಿಯಿಂದ ತಾವು 30ನೇ ತಾರೀಖು ಬಜೆಟ್ ಮೇಲಿನ ಚರ್ಚೆಗೆ ಉತ್ತರ ಕೊಡುತ್ತಿದ್ದೀರಿ. ಅಂದು ವಿಶೇಷ ರೀತಿಯಲ್ಲಿ ಈ ನುಸಿರೋಗಕ್ಕೆ ಹಣ ಬಿಡುಗಡೆ ಮಾಡುವ ಘೋಷಣೆಯನ್ನು ತಾವು ಮಾಡಬೇಕು. ಇಲ್ಲದಿದ್ದರೆ ತೆಂಗಿನಮರಗಳು ಸಂಪೂರ್ಣವಾಗಿ ನಾಶವಾಗುತ್ತವೆ. ಸುಮಾರು ಇಪ್ಪತ್ತು ವರ್ಷದ ತೆಂಗಿನಮರಗಳನ್ನು ಮತ್ತೆ ಬೆಳೆಯುವುದಕ್ಕಾಗುವುದಿಲ್ಲ.

ಈ ವರ್ಷ ನುಸಿರೋಗವನ್ನು ತಡೆಗಟ್ಟದೇ ಹೋದರೆ 25 ವರ್ಷಗಳಿಂದ ಮರಗಳನ್ನು ಬೆಳೆಸಿದ ರೈತರು ಹಾಳಾಗಿ ಹೋಗುತ್ತಾರೆ. ಆದಕ್ಕಾಗಿ 30ನೇ ತಾರೀಖು ವಿಶೇಷ ಹಣವನ್ನು ಬಜೆಟ್‌ನಲ್ಲಿ ಬಿಡುಗಡೆ ಮಾಡತಕ್ಕಂಥ ಔಚಿತ್ಯವನ್ನು ಮನಗಂಡು ಮಾನ್ಯ ಕೃಷಿ ಸಚಿವರು ಮುಖ್ಯಮಂತ್ರಿಗಳ ಮೂಲಕ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಬಿ. ಸುರೇಶ್ ಬಾಬು :— ಇವತ್ತು ರೈತರು ಕಂಗಾಲಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಆರ್ಥಿಕವಾಗಿ ಜೀವನ ನಡೆಸುವುದು ಅವರಿಗೆ ತುಂಬಾ ಕಷ್ಟವಾಗಿದೆ. ಈ ಸಂದರ್ಭದಲ್ಲಿ ಅವರು ತಾವು ಬೆಳೆಸಿದಂಥ ತೆಂಗಿನ ಮರಗಳಲ್ಲಿ ನೀರಾ ಇಳಿಸುವ ವ್ಯವಸ್ಥೆಯನ್ನು ಸ್ವಂತವಾಗಿ ಮಾಡಿಕೊಳ್ಳುತ್ತಿದ್ದಾರೆ. ನಮ್ಮ ಭಾಗದಲ್ಲಿ ಕಿತ್ತನಹಳ್ಳಿ ಇರಬಹುದು, ಬೇರೆ ಎಲ್ಲಾ ಕಡೆಗಳಲ್ಲಿ ಕೂಡ ಎಲ್ಲೆಲ್ಲಿ ನೀರಾ ಕಟ್ಟುವವರು ಸಿಗುತ್ತಾರೆ ಅವರನ್ನು ಹುಡುಕಿಕೊಂಡು ಬಂದು ನೀರಾ ಕಟ್ಟುವ ವ್ಯವಸ್ಥೆಯನ್ನು ರೈತರು ವೈಯಕ್ತಿಕವಾಗಿ ಮಾಡಿಕೊಳ್ಳುತ್ತಿದ್ದಾರೆ. ಸರ್ಕಾರ ಇದರ ಕಡೆಗೆ ಗಮನ ಹರಿಸಿ ರೈತರಿಗೆ ಯಾವುದಾದರೂ ರೀತಿಯಿಂದ ಪರಿಹಾರವನ್ನು ಕಂಡುಹಿಡಿಯಬೇಕು. ನೀರಾ ಇಳಿಸುವದಕ್ಕೆ ಕೂಡ ತಾವು ವ್ಯವಸ್ತೆ ಮಾಡಿಕೊಡಬೇಕು. ಏಕೆಂದರೆ ನೀರಾವನ್ನು ಬೆಳಗಿನ ಜಾವದಲ್ಲಿ ಕುಡಿದರೆ ಅದು ಆರೋಗ್ಯಕ್ಕೆ ಒಳ್ಳೆಯದು, ಆಮೇಲೆ ಕುಡಿದರೆ ಅದು ಸೇಂದಿಯಾಗಿ ಪರಿವರ್ತನೆಯಾಗುತ್ತದೆಯೆಂದು ಸರ್ಕಾರಕ್ಕೆ ಆಲೋಚನೆ ಇದೆ. ಆದರೆ ಇವತ್ತು ನಾವು ಫ್ರೂಟಿ ತರಹ ಪೇಯಗಳನ್ನು ಮಾರಾಟ ಮಾಡುವುದನ್ನು ನೋಡುತ್ತೇವೆ. ಅದೇ ತರಹ ಸುಮಾರು ಆರು ತಿಂಗಳು ಪ್ರಿಸರ್ವ್ ಮಾಡುವ ರೀತಿಯಲ್ಲಿ ಅದನ್ನು ಇಟ್ಟು ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕು. ಆದರಿಂದ ಬೆಲ್ಲ, ವಿನಿಗರ್ ತಯಾರು ಮಾಡಬಹುದು ಎಂದು ರೈತರು ನಮಗೆ ಸಲಹೆ ಮಾಡುತ್ತಿದ್ದಾರೆ. ಈ ರೀತಿ ಇವತ್ತು ರೈತರು ಟ್ರೈನ್‌ಅಪ್ ಆಗಿದ್ದಾರೆ. ಈ ನಿಟ್ಟಿನಲ್ಲಿ ವಿಜ್ಞಾನಿಗಳನ್ನು ಆಳವಡಿಸಿಕೊಂಡು ಹೆಚ್ಚಿನ ರೀತಿಯಲ್ಲಿ ಅವರನ್ನು ಉಪಯೋಗ ಮಾಡಿಕೊಂಡು ರೈತರಿಗೆ ಸ್ವಲ್ಪ ಉಸಿರಾಡುವುದಕ್ಕೆ ಆದರೂ ಅವಕಾಶ ಮಾಡಿಕೊಡಬೇಕೆಂದು ಕೃಷಿ ಸಚಿವರಲ್ಲಿ ಹಾಗೂ ಸರ್ಕಾರದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಇನ್ನೂ ಇದರ ಬಗ್ಗೆ ಸರ್ಕಾರ ಕಾನೂನು ತಂದಿಲ್ಲ. ಹೀಗೆ ಮಾಡಿದರೆ ಅದು ಕಾನೂನು ಬಾಹಿರವಾಗುತ್ತದೆ ಎಂದು ರೈತರಿಗೆ ಹೇಳುವುದಕ್ಕೆ ಹೋದರೆ ಅವರು

ಹೇಳುತ್ತಾರೆ, ಏನೆಂದರೆ ಈ ಗಿಡಗಳನ್ನು ನಾವೇ ಹಾಕಿ ಬೆಳೆಸಿರುವಂಥಾದ್ದು ಎಂದು ಆವಾಗ ಸರ್ಕಾರ ಗಿಡ ಬೆಳೆಯುವುದಕ್ಕೆ ಯಾವುದೇ ನಿಯಮವನ್ನು ಮಾಡಿರಲಿಲ್ಲ. ಆದ್ದರಿಂದ ನಾವು ಬೆಳೆಸಿದ ಮರಗಳಿಗೆ ಬೆಳೆ ಸಿಗದೇ ಇರುವಾಗ, ಬೇರೆ ಏನಾದರೂ ಪರಿಹಾರ ಕಂಡುಹಿಡಿಯುವುದಕ್ಕೆ ಹೋದರೆ ಇದಕ್ಕೆ ಸರ್ಕಾರ ಏಕೆ ಅಡ್ಡಿ ಮಾಡಬೇಕು ಎಂದು ಅವರು ಕೇಳುತ್ತಾರೆ. ಅಂದರೆ ರೈತರು ಇಷ್ಟೊಂದು ತಯಾರಾಗಿ ಮಾತನಾಡುವಂಥ ಸ್ಥಿತಿ ಬಂದಿದೆ ದಯವಿಟ್ಟು ಈ ರೋಗ ಎಲ್ಲಾ ಕಡೆ ವ್ಯಾಪಕವಾಗಿ ಹಬ್ಬುವದಕ್ಕೆ ಮುಂಚೆ ಸರ್ಕಾರ ಈ ನಿಟ್ಟಿನಲ್ಲಿ ಯೋಚನೆ ಮಾಡಿ ನೀರಾ ಇಳಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಇವತ್ತು ನನ್ನ ಕ್ಷೇತ್ರವಾದ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಒಂದು ಕಡೆ ನುಸಿರೋಗ, ಇನ್ನೊಂದು ಕಡೆ ಕಪ್ಪುತಲೆ ಹುಳ ರೋಗದ ಸಮಸ್ಯೆ ಇದೆ. ಹಿಂದೆ ಒಂದು ಗಾದೆ ಮಾತು ಹೇಳುತ್ತಿದ್ದರು.'ರೋಗ ಮನುಷ್ಯರಿಗೆ ಬರದೆ ಮರಕ್ಕೆ ಬರುತ್ತದೆಯೇ' ಎಂದು. ಆದರೆ ಇವತ್ತು ಇಬ್ಬರಿಗೂ ರೋಗ ಬರುತ್ತಿದೆ. ಅವತ್ತು ಭಾರತದ ಭೂಪಟದಲ್ಲಿ ಮಲೇರಿಯಾ ವ್ಯಾಪಕವಾಗಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಎರಡು ವರ್ಷಗಳಿಂದ ಹಬ್ಬಿದೆ ಎನ್ನತಕ್ಕಂಥಾದ್ದು ಇದೆ. ಇವತ್ತು ಮರದ ಜೊತೆಗೆ ಮನುಷ್ಯನಿಗೂ ಕೂಡ ಮಲೇರಿಯಾ ರೋಗ ಹೆಚ್ಚು ಕಾಡುತ್ತಾ ಬಂದಿದೆ. ಇವೆರಡನ್ನೂ ಕೂಡ ನಿಯಂತ್ರಣ ಮಾಡಬೇಕು. ಇಲ್ಲದಿದ್ದರೆ ಜನರು ಯಾವ ರೀತಿಯಿಂದ ಬದುಕಬೇಕು ಎಂದು ಸರ್ಕಾರ ಆಲೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಮಲೇರಿಯಾ ಜೊತೆಗೆ ನೀರಿನ ಕಲ್ಮಶದಿಂದಾಗಿ ಅದು ಜಾಂಡೀಸ್ ಆಗಿ ಪರಿವರ್ತನೆಯಾಗುತ್ತಿದೆ. ಇದರ ಬಗ್ಗೆ ಸನ್ಮಾನ್ಯ ಆರೋಗ್ಯ ಸಚಿವರು ಹೆಚ್ಚಿನ ಗಮನಹರಿಸಬೇಕೆಂದು ಹೇಳುತ್ತೇನೆ. ಕಳೆದ ಜಿಲ್ಲಾಪಂಚಾಯತ್ ಮೀಟಿಂಗ್‌ನಲ್ಲಿ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕೃಷಿ ಸಚಿವರು ಹೇಳಿದರು ಏನೆಂದರೆ ನಾಲ್ಕು ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ ಎಂದು. ಈ ಹಣ ಇನ್ನೂ ಕೂಡ ಬಂದಿಲ್ಲ. ಆದಷ್ಟು ಬೇಗ ಇದರ ಕಡೆಗೆ ಗಮನಹರಿಸಿ ಜನರ ಆರೋಗ್ಯವನ್ನು ಕಾಪಾಡಬೇಕೆಂದು ಈ ಸದನದರ ಮುಖಾಂತರ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಇವತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಮಳೆ ನೀರನ್ನು ಅವಲಂಬಿಸಿಕೊಳ್ಳದೆ ರೈತರಿಗೆ ಬೇರೆ ಯಾವುದೇ ತರಹ ನೀರಾವರಿ ವ್ಯವಸ್ಥೆ ಇರುವುದಿಲ್ಲ. ಈ ನಿಟ್ಟಿನಲ್ಲಿ ಈಗಾಗಲೇ ಸರ್ವೆ ಮಾಡುವುದಕ್ಕೆ ಐದು ಕೋಟಿ ರೂಪಾಯಿಗಳನ್ನು ಮುಖ್ಯಮಂತ್ರಿಗಳು ಬಿಡುಗಡೆ ಮಾಡಿದ್ದಾರೆ. ಆದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದಷ್ಟು ಬೇಗ ಈ ಕಾರ್ಯಕ್ರಮವನ್ನು ಹಮ್ಮಿಕೊಂಡು ನಮ್ಮ ಭಾಗಕ್ಕೂ ಕೂಡ ನೀರಾವರಿ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಇವತ್ತು ಹರಿಯುವ ನೀರಿಗೆ 8 ಕೋಟಿ 18 ಲಕ್ಷ ರೂಪಾಯಿಗಳು ಮಂಜೂರಾಗಿದೆ. ಈ ಕಾರ್ಯ ನಡೆಯುತ್ತಿದೆ. ಆದರೆ ಅದು

ತ್ವರಿತವಾಗಿ ಆದಷ್ಟು ಬೇಗ ಆಗಬೇಕಾಗಿದೆ. ಈಗಾಗಲೇ ಒಂದು ವರ್ಷ ಆಗಿಹೋಯಿತು. ಇನ್ನೂ ಕೂಡ ಅರ್ಧ ಕೆಲಸ ಆಗಿಲ್ಲ. ಮಾರ್ಚ್‌ಗೆ ಅದರ ವೇಳೆ ಮುಗಿಯುತ್ತದೆ. ದಯಮಾಡಿ ಇದನ್ನು ಕೂಡ ಆದಷ್ಟು ಶೀಘ್ರವಾಗಿ ಮಾಡಿಸಿಕೊಡಬೇಕೆಂದು ನಾನು

5.40 ಪಿ.ಎಂ.

ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇವತ್ತೇನು ಮುಂದುವರೆದ ಕಲಿಕಾ ಕೇಂದ್ರ ಎಂಬ ಯೋಜನೆಯನ್ನು ಕೇಂದ್ರ ಸರ್ಕಾರ ಮಾಡಿದೆ, ಅದರ ಮುಖಾಂತರ ಏನಾಗುತ್ತದೆಂದರೆ ಊರಿನಲ್ಲಿ ಇಬ್ಬರಿಗೆ ಕೆಲಸ ಸಿಗುತ್ತದೆ. ಆದರಿಂದ ಅವರು ಜೀವನ ಮಾಡಬಹುದೆಂಬ ದೃಷ್ಟಿಯಿಂದ, ಊರಲ್ಲಿ ಸಾಕಷ್ಟು ಪಾರ್ಟಿಗಳಾಗಿ ನನಗೆ ಬೇಕು, ನನಗೆ ಬೇಕು ಎನ್ನತಕ್ಕಂತಾದ್ದು ಕೂಡ ಹಳ್ಳಿಗಳಲ್ಲಿ ಗೊಂದಲವಾಗಿ, ಎಷ್ಟು ವರ್ಷದವರೆಗೆ ಈ ಮುಂದುವರೆದ ಕಲಿಕಾ ಕೇಂದ್ರವೆಂಬ ಸ್ಕೀಮ್ ಮಾಡಿದ್ದಾರೆ ಎಂಬುದನ್ನೂ ಕೂಡ ತಿಳಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೆಯೇ ಕಂದಾಯ ಇಲಾಖಾ ಸಚಿವರಲ್ಲಿ ನಾನು ಮನವಿ ಮಾಡುವುದೇನೆಂದರೆ, ನಮ್ಮ ಕ್ಷೇತ್ರದಲ್ಲಿ ಇವತ್ತು ಸೇಂದಿವನ ವ್ಯಾಪಕವಾಗಿದೆ. ಅಲ್ಲಿ ಯಾವುದಕ್ಕೂ ಕೂಡ ಅದು ಬಳಕೆಯಾಗುತ್ತಾ ಇಲ್ಲ. ಅದರಲ್ಲಿ ಸುಮಾರು ಇಪ್ಪತ್ತು ವರ್ಷದಿಂದ ತೆಂಗಿನ ಗಿಡಗಳನ್ನು ಹಾಕಿಕೊಂಡು ಸಾಕಷ್ಟು ಜನ ರೈತರು ಉಪಯೋಗಿಸಿಕೊಳ್ಳುತ್ತಿದ್ದಾರೆ. ಆದರೆ, ಅವರಿಗೆ ರಿಲೀಸ್ ಮಾಡಿ, ಮಂಜೂರ್ಮಾಡಿಕೊಡುವ ವ್ಯವಸ್ಥೆಯಾಗಬೇಕು. ಇವತ್ತೇನು ಈಚಲುವನ ಇದೆ, ಇದು ಎಲ್ಲಾ ಕಡೆಯೂ ನಶಿಸಿ ಹೋಗಿದೆ, ಆದ್ದರಿಂದ, ಇವತ್ತು ಏನು ಸೇಂದಿವನ ಇದೆ ಅದನ್ನು ರಿಲೀಸ್ ಮಾಡಿ ಕಂದಾಯ ಇಲಾಖೆಯವರುಮಂಜೂರ್ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇವತ್ತು ನಮ್ಮ ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ವ್ಯಾಪಕವಾಗಿ ಖನಿಜಸಂಪತ್ತು ಇದೆ. ಅದೆಲ್ಲವನ್ನೂ ಸರ್ವೆ ಮಾಡಿಸಬೇಕು. ಅದು ರಾಜ್ಯಕ್ಕೆ ಒಳ್ಳೆಯ ಆಸ್ತಿ. ಅದರ ಮುಖಾಂತರ ಒಳ್ಳೆಯ ಆದಾಯವು ಕೂಡ ಆಗುತ್ತದೆ. ಆದ್ದರಿಂದ ಏನೇನು ಖನಿಜ ಸಂಪತ್ತು ಸಿಗುತ್ತದೆಂಬ ಬಗ್ಗೆ ಸರ್ವೆ ಮಾಡಿಸಿ, ಅದನ್ನು ಉಪಯೋಗಿಸಿಕೊಳ್ಳಬೇಕು. ಇಲ್ಲದೇ ಹೋದರ, ಅದು ಹಾಗೆಯೇ ಹಾಳಾಗಿ ಹೋಗುತ್ತದೆ ಎಂಬುದನ್ನೂ ಕೂಡ ಹೇಳುತ್ತೇನೆ. [illegible] ಅಂತರ್ ಜಲದ ಬಗ್ಗೆ ಹೇಳಬೇಕೆಂದರೆ, ಕೃಷಿ ಇಲಾಖೆಯವರು ಇವತ್ತು ಅಂತರ್ ಜಲದ ಕಾರ್ಯಕ್ರಮವನ್ನು ಕೂಡ ಹಾಕಿಕೊಂಡಿದ್ದಾರೆ. ತಿಪಟೂರಿನಲ್ಲಿ ಬಯೋ[illegible] ಸಂಸ್ಥೆಯ[illegible] ಹೊಂಡಗಳನ್ನು ಮಾಡಿ, ಅಲ್ಲೇ ನೀರನ್ನು ಇಂಗಿಸುವಂತ[illegible] ಮಾಡುತ್ತಿದ್ದಾರೆ. ಇದೇ ರೀತಿ ಸರ್ಕಾರ ಎಲ್ಲಾ ಕಡೆ ನೀ[illegible]ಕ್ರಮವನ್ನು ಮಾಡಿದರೆ ಒಳ್ಳೆಯದು. ಮಾನ್ಯ ಕೃಷಿ ಸಚಿವರು [illegible] ಒಮ್ಮೆ ಬಯೋಟೆಕ್ಸ್ ಸಂಸ್ಥೆಗೆ ಭೇಟಿ [illegible]ದಿದ್ದರು. ಇದೇ ರೀತಿ ರಾಜ್ಯದಲ್ಲಿ ಎಲ್ಲಾ ಕಡೆಯೂ ಅಳವಡಿಸಿಕೊಂಡರೆ ನಮಗೆ ಅಂತರ ಜಲದ ನೀರಿನ ಮಟ್ಟ ಹೆಚ್ಚಾಗುತ್ತದೆ. ಇದರ ಬಗ್ಗೆ ಗಮನಹರಿಸಿ, ಸರ್ಕಾರ ನೀರನ್ನು ಇಂಗಿಸುವ

ಕಾರ್ಯಕ್ರಮವನ್ನು ಮಾಡಬೇಕೆಂದು ಹೇಳುತ್ತೇನೆ. ಇವತ್ತೇನು ಒಂದಂಕಿ ಲಾಟರಿ ರಾಜ್ಯದಲ್ಲಿ ಮತ್ತು ಹಲವಾರು ಕಡೆಗಳಲ್ಲಿ ಇದೆ, ಆದರಿಂದ ಸಾಕಷ್ಟು ಸಂಸಾರಗಳು ಹಾಳಾಗುತ್ತವೆ. ಒಂದೊಂದೇ ನಂಬರಿಗೆ ಇಷ್ಟಿಷ್ಟು ದುಡ್ಡು ಎಂದು ಕಟ್ಟಿಕೊಂಡು ಲಾಟರಿ ಟಿಕೆಟ್‌ಗಳನ್ನು ತೆಗೆದುಕೊಳ್ಳುವುದರ ಮುಖಾಂತರ, ಅದನ್ನೇ ನೋಡಿಕೊಂಡು ಕಾಲ ಕಳೆಯುವದರ ಜೊತೆಗೆ ಮಾನವ ಶಕ್ತಿಯನ್ನೂ ಹಾಳು ಮಾಡಿಕೊಳ್ಳುತ್ತಾರೆ. ಇದು ಅದೃಷ್ಟ ಇದ್ದವರಿಗೆ ಬರುತ್ತದೆ, ಹತ್ತರಲ್ಲಿ ಒಬ್ಬರಿಗೆ ಬರಬಹುದು, ಇನ್ನೂ ಒಂಭತ್ತು ಜನರ ಬದುಕು ಹಾಳಾಗುತ್ತದೆ. ಆದ್ದರಿಂದ, ಅದನ್ನೂ ಕೂಡ ನಿಲ್ಲಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮುಜರಾಯಿ ಇಲಾಖೆಯಿಂದ ಆರಾಧನಾ ಸಮಿತಿ ಎಂದು ಮಾಡಿ ಸುಮಾರು 60-70 ಸಾವಿರ ರೂಪಾಯಿಗಳನ್ನು ವರ್ಷಕ್ಕೆ ಈ ಸಮಿತಿಗೆ ಕೊಡುವುದರ ಮುಖಾಂತರ ಹಳ್ಳಿಗಳ ಕಡೆ ಇರತಕ್ಕಂಥ ದೇವಸ್ಥಾನಗಳ ಅಭಿವೃದ್ಧಿಗೆ ಸರ್ಕಾರ ದುಡ್ಡನ್ನು ಕೊಡುತ್ತಾ ಇದೆ. ಇದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ನೀಡಬೇಕು. ಸುಮಾರು 5 ಲಕ್ಷದಿಂದ 10 ಲಕ್ಷದವರೆಗೆ ಕೊಟ್ಟರೂ ಕೂಡ ಒಳ್ಳೆಯದು. ಇದರಿಂದ ಎಲ್ಲಾ ಹಳ್ಳಿಗಳಲ್ಲಿರತಕ್ಕ ದೇವಸ್ಥಾನಗಳ ಅಭಿವೃದ್ಧಿಗೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಹೇಳುತ್ತೇನೆ. ನಮ್ಮ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಸಾಕಷ್ಟು ಸಾರಿಗೆ ವ್ಯವಸ್ಥೆ ಇಲ್ಲ. ದಯಮಾಡಿ ಸಾರಿಗೆ ಸಚಿವರು ನಮ್ಮ ತಾಲ್ಲೂಕಿನ ಕಡೆ ಗಮನಹರಿಸಿ, ಎಲ್ಲಾ ಹಳ್ಳಿಗಳಿಗೂ ಕೂಡ ಬಸ್ಸಿನ ವ್ಯವಸ್ಥೆ ಸಿಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೆಯೇ ಚಿಕ್ಕನಾಯಕನಹಳ್ಳಿಯಲ್ಲಿ ಸಾಕಷ್ಟು ದೇವಸ್ಥಾನಗಳು ಇವೆ. ಅದರಲ್ಲಿ ಗೋಡೆಕೆರೆ ಸಿದ್ದರಾಮೇಶ್ವರ ಇರಬಹುದು, ವಡ್ರ ಇರಬಹುದು ಹಾಗೂ ಯಳನಡು ಸಿದ್ದರಾಮೇಶ್ವರ ದೇವಸ್ಥಾನ ಇರಬಹುದು ಹೀಗೆ ಸಾಕಷ್ಟು ದೇವಾಲಯಗಳು ಇವೆ. ಅದನ್ನು ಪ್ರವಾಸಿ ತಾಣವೆಂದು ಘೋಷಿಸಬೇಕೆಂದು ಈ ಸದನದ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಚಿಕ್ಕನಾಯಕನ-ಹಳ್ಳಿಯಲ್ಲಿದ್ದಂತಹ ಕೃಷಿ ಮಾರುಕಟ್ಟೆಯನ್ನು ಇವತ್ತು ಹುಲಿಯೂರಿಗೆ ವರ್ಗಾವಣೆ ಮಾಡಲಾಗಿದೆ. 1992ರಲ್ಲಿ ಅಂದಿನ ಸರ್ಕಾರದಲ್ಲಿದ್ದಂತಹ ಕೃಷಿ ಮಾರುಕಟ್ಟೆ ಸಚಿವರು ಇದರ ಬಗ್ಗೆ ಆರ್ಡರನ್ನು ತಂದಿದ್ದರು, ಅದನ್ನು ದಯಮಾಡಿ ಹಿಂತೆಗೆದುಕೊಂಡು ತಾಲ್ಲೂಕು ಕೇಂದ್ರವಾದಂಥ ಚಿಕ್ಕನಾಯಕನಹಳ್ಳಿಯಲ್ಲಿಯೇ ಕೃಷಿ ಮಾರುಕಟ್ಟೆಯನ್ನು ಉಳಿಸಲಿಕ್ಕೆ ವ್ಯವಸ್ಥೆ ಮಾಡಿ ನಮಗೆ ಅನುಕೂಲ ಮಾಡಿಕೊಡಬೇಕು. ಏಕೆಂದರೆ, ಇವತ್ತು ಎಲ್ಲಾ ಕಛೇರಿಗಳೂ ಕೂಡ ತಾಲ್ಲೂಕು ಕೇಂದ್ರ ಸ್ಥಾನದಲ್ಲಿರುವುದರಿಂದ, ಮಾರುಕಟ್ಟೆಯೂ ಕೂಡ ಇಲ್ಲಿಯೇ ಇರಬೇಕು. ಇದರಿಂದ ರೈತರು ಬೆಳೆದಂಥ ಎಲ್ಲಾ ಬೆಳೆಗಳನ್ನೂ ತಂದು ಮಾರುವುದಕ್ಕೆ ಒಂದು ಅವಕಾಶವಾಗುತ್ತದೆ. ಆದ್ದರಿಂದ, ದಯಮಾಡಿ ಆ ಚಿಕ್ಕನಾಯಕನಹಳ್ಳಿ ಮಾರುಕಟ್ಟೆಯನ್ನು ಅಲ್ಲಿಯೇ ಉಳಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಸದನದಲ್ಲಿ ಯಾವತ್ತು ಮಾರುಕಟ್ಟೆ ಸಚಿವರನ್ನು ನೋಡಿಲ್ಲ. ಆದ್ದರಿಂದ ಮಾನ್ಯ

ಕೃಷಿ ಸಚಿವರು ನಮ್ಮ ಮೇಲೆ ಅಭಿಮಾನವಿಟ್ಟು ಕೃಷಿ ಮಾರುಕಟ್ಟೆಯನ್ನು ನಮ್ಮಲ್ಲಿಯೇ ಉಳಿಸಿಕೊಡಬೇಕು. ಬೇಕಾದರೆ, ಹುಲಿಯೂರಿನಲ್ಲೂ ಮಾರುಕಟ್ಟೆ ಇರಲಿ. ಇದರ ಬಗ್ಗೆ ಮಾನ್ಯ ಸಚಿವರು ಏನಾದರೂ ಹೇಳಬೇಕೆಂದು ಈ ಸದನದ ಮುಖಾಂತರ ಕೇಳುತ್ತೇನೆ. ಹಾಗೆಯೇ ಶ್ರೀರಂಗಪಟ್ಟಣ - ಹುಮ್ನಾಬಾದ್ ರಸ್ತೆ ಏನಿದೆ, ಅದು ಸಾಕಷ್ಟು ತಾಲ್ಲೂಕಗಳನ್ನು ಹಾದು ಹೋಗುವಂಥ ರಸ್ತೆ. ಆ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಮಾಡುವುದರ ಮುಖಾಂತರ 9-10 ತಾಲ್ಲೂಕಿಗಳಿಗೆ ಅನುಕೂಲ ಮಾಡಬೇಕು. ಮಾನ್ಯ ಲೋಕೋಪಯೋಗಿ ಸಚಿವರಾದ ಧರ್ಮಸಿಂಗ್‌ರವರು ದಯಮಾಡಿ ಶ್ರೀರಂಗಪಟ್ಟಣ ಹುಮ್ನಾಬಾದ್ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡುವುದರ ಮುಖಾಂತರ, ಮಧ್ಯೆ ಬರತಕ್ಕ ಎಲ್ಲಾ ತಾಲ್ಲೂಕಿನವರಿಗೂ ಅನುಕೂಲ ಮಾಡಿಕೊಡಬೇಕು. ಇದರಿಂದ ಸಾಕಷ್ಟು ವೇಳೆಯೂ ಉಳಿಯುತ್ತದೆ ಮತ್ತು ಬೇಗ ಹೋಗುವಂಥ ರಸ್ತೆಯಾಗುತ್ತದೆ. ದಯಮಾಡಿ, ಅದನ್ನು ರಾಷ್ಟ್ರೀಯ ಹೆದ್ದಾರಿಯೆಂದು ಪರಿಗಣಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ಕೆ.ಪಿ.ಟಿ.ಸಿ.ಎಲ್. ಬಗ್ಗೆ ಹೇಳುವುದಾದರೆ, ಇವತ್ತು ಸಕಾಲಕ್ಕೆ ಸರಿಯಾಗಿ ಮಳೆ ಬರದೇ ಎಲ್ಲಾ ರೈತರು ಕಂಗಾಲಾಗಿದ್ದಾರೆ. ಜೊತೆಗೆ ಕೇಬಿನವರು ಮೀಟರ್ ಹಾಕಲಿ, ಅದರ ಬಗ್ಗೆ ಯಾರಿಗೂ ಕೂಡ ಎರಡನೇ ಅಭಿಪ್ರಾಯ ಇಲ್ಲ. ಏನು ಬಾಕಿ ಇದೆ ಅದನ್ನು ಮನ್ನಾ ಮಾಡಿ, ಇವತ್ತಿನಿಂದ ನಿಗದಿತ ಬೆಲೆಯನ್ನು ಬೇಕಾದರೆ ನಿಗದಿ ಮಾಡಿ. ಹಿಂದಿನ ಸರ್ಕಾರದವರು ಮನ್ನಾ ಮಾಡದೇ ಇದ್ದರೆ, ಎಲ್ಲಾ ರೈತರೂ ಕಟ್ಟಿಕೊಂಡು ಬರುತ್ತಿದ್ದರು. ಜೊತೆಗೆ ನೀವು ಎಷ್ಟು ಕರೆಂಟ್ ಕೊಡುತ್ತೀರಿ, ಯಾವ ವೋಲ್ಟೇಜ್‌ನಲ್ಲಿ ಕರೆಂಟ್ ಕೊಡುತ್ತೀರಿ ಎನ್ನುವುದನ್ನೂ ಕೂಡ ಘೋಷಣೆ ಮಾಡಬೇಕು. ಮತ್ತು ನಿಮಗೆ ಇಷ್ಟು ಹಣವನ್ನು ವಿಧಿಸುತ್ತೇವೆಂಬುದನ್ನೂ ಕೂಡ ಸರ್ಕಾರ ಘೋಷಣೆ ಮಾಡಬೇಕು. ಇದನ್ನು ರೈತರು ಯಾರೂ ಕೂಡ ಕಟ್ಟುವುದಕ್ಕೆ ಹಿಂಜರಿಯುವುದಿಲ್ಲ. ಆದ್ದರಿಂದ, ಇವತ್ತು ಎಷ್ಟು ಗಂಟೆಗಳ ಕಾಲ ಕರೆಂಟ್ ಕೊಡುತ್ತೇವೆಂಬುದನ್ನು ಘೋಷಣೆ ಮಾಡಬೇಕು. ಇನ್ನು ಚಿಕ್ಕನಾಯಕನಹಳ್ಳಿ ಪಟ್ಟಣದಲ್ಲಿ ವ್ಯಾಪಕವಾಗಿ ಕಂಬಳಿ ಮಾಡುತ್ತಿದ್ದೇವೆ. ಮೊದಲು ಮಲೆನಾಡಿನವರು ಈ ಕಂಬಳಿಗಳನ್ನು ಉಪಯೋಗಿಸುತ್ತಿದ್ದರು. ಆದರೆ, ಈಗ ರಗ್ಗುಗಳೇ 100-150 ರೂಪಾಯಿಗಳಿಗೆ ಸಿಗುವ ಸಂಭವ ಬಂದಿರುವುದರಿಂದ ಈ ಕಂಬಳಿ ವ್ಯಾಪಾರ ತುಂಬಾ ನಿಂತು ಹೋಗಿದೆ. ಇದಕ್ಕೆ ಸರ್ಕಾರ ಏನಾದರೊಂದು ಕಾರ್ಯಕ್ರಮ್ನು ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ. ರೇಷ್ಮೆ ಬಟ್ಟೆಯನ್ನೂ ಕೂಡ ನಮ್ಮ ಕಡೆ ಸಾಕಷ್ಟು ನೇಯುತ್ತಾರೆ. ಸೀರೆಗಳು ಮತ್ತು ಬೇರೆ ಬೇರೆ ಬಟ್ಟೆಗಳನ್ನು ಮಾಡುತ್ತಾರೆ. ಅದಕ್ಕೂ ಕೂಡ ಒಳ್ಳೆಯ ಬೆಲೆ ಇಲ್ಲ, ಹೊರಗಡೆಯಿಂದ ಬರತಕ್ಕ ಬಟ್ಟೆಯನ್ನೇ ಜನ ಉಪಯೋಗಿಸುವುದರಿಂದ ಇವತ್ತು ಅವರಿಗೂ ಕೂಡ ಸಾಕಷ್ಟು ಬೇಡಿಕೆ ಇಲ್ಲ, ಅದಕ್ಕೂ ಸರ್ಕಾರ ಏನಾದರೊಂದು ಮಾಡಬೇಕೆಂದು ಹೇಳುತ್ತೇನೆ. ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಸಾಯಂಕಾಲ 6 ಗಂಟೆಗೆ ಕಾವೇರಿ ಜಲಾನಯನಕ್ಕೆ ಸಂಬಂಧಿಸಿದ ಮೀಟಿಂಗ್ ಇದೆ. ಆದಕ್ಕೋಸ್ಕರ, ಸಭೆಯನ್ನು ಮುಗಿಸಬೇಕಾಗಿದೆ. ಇವತ್ತೇ ಚರ್ಚೆಯನ್ನು ಮುಗಿಸಬೇಕು. ಬಹುಶ: ಸೋಮವಾರ ಸರ್ಕಾರದವರು ಉತ್ತರ ಕೊಡುತ್ತಾರೆ.

ಶ್ರೀ ಡಿ.ವಿ. ಸದಾನಂದಗೌಡ :— ಆ ಮೀಟಿಂಗ್‌ಗೆ ಸಂಬಂಧಪಟ್ಟಂತೆ ನಮ್ಮ ಪಾರ್ಟಿಯವರೆಲ್ಲಾ ಹೋಗಿದ್ದಾರೆ. ತಾವು ಬೇಕಾದರೆ ವೆಂಪ್ಟೆ ಮಾಡಬಹುದು. ಆದಕಾರಣ 10-10 ನಿಮಿಷಗಳ ಕಾಲ ಎರಡು ಜನರಿಗೆ ಕೊಟ್ಟು, 6.30ಕ್ಕೆ ನಾವು ಕ್ಲೋಸ್ ಮಾಡೋಣ.

ಉಪಾಧ್ಯಕ್ಷರು :— 6 ಗಂಟೆಗೆ ಆ ಸಭೆಗೆ ಕೆಲವು ಮಂತ್ರಿಗಳು ಹೋಗುವವರಿದ್ದಾರೆ. ಆದಕ್ಕೋಸ್ಕರ ನಾವು 6 ಗಂಟೆಗೆ ಮುಗಿಸಬೇಕು ಎನ್ನುವ ವಿಚಾರವನ್ನು ಹೇಳಿದೆ.

ಶ್ರೀ ಡಿ.ವಿ. ಸದಾನಂದಗೌಡ :— ಹಾಗದರೆ ಸೋಮವಾರ ಬೆಳಗ್ಗೆ ನಮ್ಮ ಕಡೆಯ ಎರಡು ಜನರಿಗೆ ಮಾತನಾಡಲು ಅವಕಾಶ ಕೊಡಿ

ಉಪಾಧ್ಯಕ್ಷರು :— ಇಲ್ಲಾ, ಇವತ್ತೇ ಮುಗಿಸಬೇಕೆಂದು ಇದೆ. ಬೇಕಾದರೆ ಇನ್ನೊಂದು ಹತ್ತು ನಿಮಿಷ ನಾನು ಕುಳಿತುಕೊಳ್ಳುತ್ತೇನೆ. ಇವತ್ತೇ ಮುಗಿಸಬೇಕು, ಸೋಮವಾರ ಸರ್ಕಾರದ ಕಡೆಯಿಂದ ಉತ್ತರ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಅಧ್ಯಕ್ಷರೇ, ನನ್ನದೊಂದು ಸಲಹೆ ಇದೆ. ಸೋಮವಾರ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ. ತದನಂತರ ಉಳಿದ ವಿಷಯಗಳನ್ನು ಪಾಸ್ ಮಾಡಿಕೊಡುವ ಭರವಸೆಯನ್ನು ನಾವು ಮತ್ತು ವಿರೋಧ ಪಕ್ಷದ ನಾಯಕರು ಮಾನ್ಯ ಅಧ್ಯಕ್ಷರಿಗೆ ಕೊಟ್ಟಿದ್ದೇವೆ. ನನ್ನ ಮನವಿ ತಮ್ಮಲ್ಲಿ ಏನೆಂದರೆ ಕೆಲವರು ಹೊಸ ಸದಸ್ಯರು ಮಾತನಾಡುವವರಿದ್ದಾರೆ. ನಾವು ಮುಂದಿನ ಸಾಲಿನಲ್ಲಿ ಕುಳಿತವರು ಬಜೆಟ್ ಬಗ್ಗೆ ಮಾತನಾಡತಕ್ಕಂಥಾದ್ದು ಇದ್ದರೂ ಸಹ ನಾನು ಮತ್ತು ಸೋಮಶೇಖರ್‌ರವರು ಬಿಟ್ಟರೆ ಯಾರೂ ಮಾತನಾಡಲಿಲ್ಲ ಎಂಬುದು ತಮಗೆ ಗೊತ್ತಿದೆ. ಕಾವೇರಿ ಜಲಾನಯನ ಪ್ರದೇಶಕ್ಕೆ ಸಂಬಂಧಪಟ್ಟಂತಹ ಶಾಸಕರು ಎಲ್ಲರೂ ಸಭೆಗೆ ಹೋಗಿದ್ದಾರೆ. ಹೋಗದೇ ಇರುವವರು ನಾನು ಮತ್ತು ಕೃಷಿ ಇಲಾಖೆ ಮಂತ್ರಿಗಳು ಇಬ್ಬರೇ. ಇನ್ನುಳಿದ 4-5 ಜನ ಮಾತ್ರ. ಅವರು 10 ನಿಮಿಷ ಮಾತನಾಡುತ್ತಾರೆ. ನಾವು ಅರ್ಧ ಗಂಟೆ ಕುಳಿತುಕೊಳ್ಳೋಣ. ನಮ್ಮ ಪತ್ರಿಕಾ ಮಿತ್ರರಿಗೆ ತೊಂದರೆಯಾಗುತ್ತದೆ. ಇವತ್ತು ಒಂದು ದಿನ ಸಹಕಾರ ಕೊಡುವುದಕ್ಕೆ ತಾವು ಮನವಿ ಮಾಡಿಕೊಳ್ಳಿ.

ಉಪಾಧ್ಯಕ್ಷರು :— ನನ್ನದೇನೂ ತಕರಾರು ಇಲ್ಲ. 8-00 ಗಂಟೆಯವರೆಗೂ ನಾನು ಕುಳಿತುಕೊಳ್ಳುವುದಕ್ಕೆ ರೆಡಿ.

ಶ್ರೀ ಓ.ಜಿ.ಆರ್. ಸಿಂಧ್ಯಾ :— ಈಗ ಮಾನ್ಯ ಗುರುಸ್ವಾಮಿಯವರು ಚಾಮರಾಜನಗರದಿಂದ ಚುನಾಯಿತರಾಗಿ ಬಂದಿದ್ದಾರೆ. ಕಳೆದ ಅಧಿವೇಶನದಲ್ಲಿ ಚಾಮರಾಜನಗರದ ಮಾಜಿ ಶಾಸಕರ ಹೆಸರು ಪ್ರತಿದಿನ ಪತ್ರಿಕೆಗಳಲ್ಲಿ ಬರುತ್ತಿತ್ತು. ಈಗ ಅವರ ಹೆಸರು ಪತ್ರಿಕೆಗಳಲ್ಲಿ ಬರದಿದ್ದರೆ ಅವರ ಕ್ಷೇತ್ರದಲ್ಲಿ ಅವರ ಪರಿಸ್ಥಿತಿ ಏನಾಗುವುದಿಲ್ಲ? ಏನಪ್ಪ ನಮ್ಮ ಶಾಸಕರು ಮಾತನಾಡುವುದೇ ಇಲ್ಲವಲ್ಲಾ ಎಂದು ಜನ ಹೇಳುತ್ತಾರೆ. ಆದಕ್ಕೆ ದಯವಿಟ್ಟು ಅವಕಾಶ ಕೊಡಿ.

ಶ್ರೀ ಬಿ.ಆರ್. ನೀಲಕಂಠಪ್ಪ :— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಸೋಮವಾರ ಉತ್ತರ ಕೊಡಬೇಕಾಗಿದೆ. ಈಗ ಈ ಸದನದಲ್ಲಿ ಶೇಕಡ 90 ಭಾಗದಷ್ಟು ಸದಸ್ಯರು ಇಲ್ಲ. ಮಾನ್ಯ ಸದಸ್ಯರು ಸಲಹೆ ಕೊಟ್ಟು ಆಗಿದೆ. ಆದ್ದರಿಂದ ಸದನವನ್ನು 6-00 ಗಂಟೆಗೆ ಮುಗಿಸುವುದು ಸೂಕ್ತ. ಮತ್ತು ಬಜೆಟ್ ಬಗ್ಗೆ ಸದಸ್ಯರು ವಿಷಯ ಸಮಿತಿ ಸಭೆಯಲ್ಲಿ ಅಧಿಕಾರಿಗಳ ಜೊತೆ ಸಾಕಷ್ಟು ಚರ್ಚೆ ಮಾಡಿ ವರದಿ ಕೊಟ್ಟಿದ್ದಾರೆ.

+ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) :— ಮಾನ್ಯ ಅಧ್ಯಕ್ಷರೇ, ನಾನು ಕೆಲವು ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಬಯಸುತ್ತೇನೆ. ಪ್ರಮುಖವಾಗಿ ಕೃಷಿ ಮತ್ತು ತೋಟಗಾರಿಕೆ ಹಾಗೂ ನೀರಾವರಿ ಬಗ್ಗೆ ಮಾತನಾಡುತ್ತೇನೆ. ಇವತ್ತು ಕೃಷಿ ಬಗ್ಗೆ ಈ ಸದನದಲ್ಲಿ ಹಲವಾರು ಹಿರಿಯ ಸದಸ್ಯರು ಮಾತನಾಡಿದ್ದಾರೆ. ಇವತ್ತಿನ ಅಂತರರಾಷ್ಟ್ರೀಯ ಮಾರುಕಟ್ಟೆಯ ಒಂದು ಒಪ್ಪಂದದ ಹಿನ್ನಲೆಯಲ್ಲಿ ನಾವು ನಮ್ಮ ರಾಜ್ಯವನ್ನು ಹೇಗೆ ತೆಗೆದುಕೊಂಡು ಹೋಗಬೇಕು ಎನ್ನುವ ವಿಚಾರದಲ್ಲಿ ಬಹಳಷ್ಟು ವಿಚಾರಗಳನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸಿದ್ದಾರೆ. ಮಾನ್ಯ ಕೃಷಿ ಇಲಾಖೆ ಸಚಿವರೂ ಸಹ ಸದನದಲ್ಲಿ ಇದ್ದಾರೆ. ಅದಕ್ಕೆ ನಾನು ಸಂತೋಷವನ್ನು ವ್ಯಕ್ತಪಡಿಸಿ, ಈ ವರ್ಷ ಮುಂಗಾರು ವಿಫಲವಾಗಿರುವುದರಿಂದ ರೈತ ಅತ್ಯಂತ ಸಂಕಷ್ಟದಲ್ಲಿದ್ದಾನೆ. ಕೃಷಿ ಉತ್ಪಾದನೆ ಕುಂಠಿತಗೊಂಡಿದೆ. 1999-2000 ವರದಿಯನ್ನು ನಾವು ನೋಡಿದರೆ 99.42 ಲಕ್ಷ ಟನ್ ಆಹಾರ ಉತ್ಪಾದನೆಯಾಗಿದೆ. ಆದರೆ 2001-2002ರಲ್ಲಿ 96.32 ಲಕ್ಷ ಟನ್ ಉತ್ಪಾದನೆಯಾಗಿದೆ. ಅಂದರೆ 3 ಲಕ್ಷ ಟನ್ ಆಹಾರ ಉತ್ಪಾದನೆ ಕುಂಠಿತಗೊಂಡಿದೆ ಎಂದು ಹೇಳಿ ಈ ವರದಿ ಮೂಲಕ ನಮಗೆ ಕಂಡು ಬರುತ್ತದೆ. ಇದರ ಆರ್ಥಿಕ ನಷ್ಟ ಅಂದಾಜು ಎಷ್ಟು ಆಗಿದೆ ಅಂದರೆ ನಾನು ಈ ಮಾಹಿತಿಯನ್ನು ಪ್ರಜಾವಾಣಿಯಲ್ಲಿ ಬಂದಿರುವ ವರದಿ ಆಧಾರದ ಮೇಲೆ ಮಾತನಾಡುವುದಾದರೆ 2500 ಕೋಟಿ ರೂ. ನಮ್ಮ ರಾಜ್ಯಕ್ಕೆ ಕೃಷಿ ಉತ್ಪಾದನೆ ಕುಂಠಿತದಿಂದ ನಷ್ಟವಾಗಿದೆ ಎನ್ನುವ ವರದಿಯನ್ನು ನೋಡುತ್ತಿದ್ದೇವೆ. ಈ ಹಿನ್ನಲೆಯಲ್ಲಿ ನಾವು ಕೃಷಿಯನ್ನು ಹೇಗೆ ಬದುಕಿಸಬೇಕು? ನಾವು ಬಹುಪಾಲ ಜನ ಕೃಷಿಗೆ ಒಳಪಟ್ಟವರು. ಮತ್ತು ಬಹುಪಾಲು ಪ್ರದೇಶ ಮಳೆಯನ್ನು ಅವಲಂಬಿತ ಪ್ರದೇಶವಾಗಿರುವುದರಿಂದ ಕೃಷಿಯನ್ನು ಹೇಗೆ ತೆಗೆದುಕೊಂಡು ಹೋಗಬೇಕು ಎನ್ನುವ

ಬಗ್ಗೆ ಯೋಚನೆ ಮಾಡಬೇಕಾಗಿದೆ ನಿನ್ನೆ ಶರದ್‌ಜೋಷಿಯವರು ಬಂದಾಗ ಹಿರಿಯ ಸದಸ್ಯರು ಮತ್ತು ಮಂತ್ರಿಗಳು ಹೋಗಿ ನಾವು ಹೇಗೆ ಒಕ್ಕಲುತನ ಮಾಡಬೇಕು? ಈ ಕೃಷಿಯಲ್ಲಿ ಯಾವ ತರಹ ಆಮದು ಮತ್ತು ರಫ್ತು ಮಾಡಬೇಕೆನ್ನುವ ಬಗ್ಗೆ ವಿಚಾರಗಳೂ ಸಹ ನಡೆದವು. ನಮ್ಮಲ್ಲಿ ಏನಾಗಿದೆ ಅಂದರೆ ಶೇಕಡ 70 ರಷ್ಟು ಸಣ್ಣ ಹಿಡುವಳಿದಾರರು ಇದ್ದಾರೆ. ಮುಂದುವರೆದ ರಾಷ್ಟ್ರದಲ್ಲಿ ಶೇಕಡ 2 ಪರ್ಸೆಂಟ್ 5 ಪರ್ಸೆಂಟ್ 7 ಪರ್ಸೆಂಟ್ ಕೃಷಿಯನ್ನು ಮಾಡುತ್ತಾರೆ. ಹೀಗಾಗಿ ಅವರು ಅಲ್ಲಿ ಆರ್ಥಿಕ ಒತ್ತು ಕೊಡುವುದಕ್ಕೆ ಸಾಧ್ಯತೆ ಇದೆ. ನಾವು ಇವತ್ತಿನ ವಾತಾವರಣವನ್ನು ಆಲೋಚನೆ ಮಾಡಿದರೆ ಕೃಷಿಯನ್ನು ಯಾವ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಲು ಆಲೋಚನೆ ಮಾಡಿದ್ದಾರೆಂದು ನಾನು ಕೇಳಬಯಸುತ್ತೇನೆ. ಏಕೆಂದರೆ ಇವತ್ತು ನಮ್ಮಲ್ಲಿ ಮುಂಗಾರು ವಿಫಲವಾಗಿದೆ. ನಮ್ಮಲ್ಲಿ ಮೊದಲು ವಾಯುಮಾನ ವರದಿ ಹೇಳಿತ್ತು ಈ ಸಾರಿ ನಮ್ಮಲ್ಲಿ ಮಾನ್‌ಸೂನ್ ಬಹಳ ಚೆನ್ನಾಗಿ ಆಗುತ್ತದೆಂದು. ಮತ್ತು ರೈತರು ಒಳ್ಳೆಯ ಕೃಷಿ ಉತ್ಪನ್ನ ತೆಗೆಯುತ್ತಾರೆಂದು ವರದಿ ಆಗಿತ್ತು. ಆದರೆ ಏನಾಯಿತು? ಮುಂದೆ ಸಹ ಮಳೆ ಅವಲಂಬಿತ ಪ್ರದೇಶದಲ್ಲಿ ಆ ರೈತ ಮುಂದೆ ಯಾವ ಗುರಿಯನ್ನಿಟ್ಟುಕೊಳ್ಳಬೇಕೆನ್ನುವುದು ಕೂಡ ಕೃಷಿ ಲಾಖೆ ಮಂತ್ರಿಗಳು ಆಲೋಚನೆ ಮಾಡಬೇಕಾಗಿದೆ. ನಮ್ಮ ಮಾನ್ಯ ಹಿರಿಯ ಸದಸ್ಯರಾದ ಬೈರೇಗೌಡರು ಇಸ್ರೇಲ್ ಬಗ್ಗೆ ಮಾತನಾಡುವುದನ್ನು ನಾನು ಕೇಳಿದ್ದೇನೆ. ನಾನು ಇಸ್ರೇಲಿಗೇ ಭೇಟಿ ಕೊಟ್ಟಿಲ್ಲ. ಆದರೆ ಅಲ್ಲಿ ಎಷ್ಟು ಪ್ರಮಾಣದ ವಾಟರ್ ಸೋರ್ಸ್ ಇದೆ. ಮತ್ತು ಅಲ್ಲಿನ ಭೂಮಿಯ ಗುಣಧರ್ಮ ಏನು ಇದೆ. ಅಲ್ಲಿ ಯಾವ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಿದೆ, ಅವರು ರಫ್ತು ಮಾಡಬೇಕಾದರೆ ಗುಣಮಟ್ಟದ ಬೆಳೆಯನ್ನು ಬೆಳೆಯದಿದ್ದರೆ ನಮ್ಮ ಬೆಳೆಯ ಫಸಲು ರಿಜೆಕ್ಟ್ ಆಗುತ್ತದೆ. ಆಗ ಆ ರೈತ ಕೂಡ ಸಂಕಷ್ಟದಲ್ಲಿ ಬರುತ್ತಾನೆ. ಅದಕ್ಕೆ ಅವರ ಮಾದರಿಯ ಒಂದ ಚಿತ್ರಣವನ್ನು ಮುಂದಿನ ದಿನಗಳಲ್ಲಿ ಇಲ್ಲಿ ಹಾಕಿಸಿಕೊಂಡಿದ್ದೀರಾ ಹೇಗೆ? ಏಕೆಂದರೆ ನಾವು ಅದರಿಂದ ಹಿಂದೆ ಬರುವುದಕ್ಕೆ ಆಗುತ್ತಿಲ್ಲ. ಕಾರಣ ಗ್ಯಾಟ್ ಒಪ್ಪಂದದಿಂದ ಇರಬಹುದು ಅಥವಾ ಅಂತರರಾಷ್ಟ್ರೀಯ ಮಾರುಕಟ್ಟೆಯ ವ್ಯಾಪ್ತಿಯಿಂದ ಹಿಂದೆ ಸರಿಯುವುದಕ್ಕೆ ಆಗುತ್ತಿಲ್ಲ. ಅದಕೋಸ್ಕರವಾಗಿ ಪೂರಕವಾಗಿ ರೈತರಿಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಕೃಷಿಯನ್ನು ನಾವು ಉದ್ದಿಮೆಯನ್ನಾಗಿ ಪರಿಗಣಿಸಿಲ್ಲ. ಆದರೆ ಇವತ್ತು ಸುಮಾರು 70 ಉದ್ದಿಮೆಗಳು ನಷ್ಟದಲ್ಲಿವೆ. ಅದಕ್ಕೆ ನಾವು ಎಷ್ಟು ಹಣಕಾಸಿನ ವ್ಯವಸ್ಥೆಯನ್ನು ಮಾಡಿದ್ದೇವೆ? ಅದರಿಂದ ನಮಗೆ ಇವತ್ತು ಏನು ಹಾನಿಯಾಗಿದೆ. ಆ ರೀತಿ ನಮ್ಮ ಕೃಷಿಗೆ ಒತ್ತು ಕೊಡುವಂತಹ ಕೆಲಸ ಆಗಿಲ್ಲ. ಆ ಬಗ್ಗೆ ತಾವು ಚಿಂತನೆಯನ್ನು ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಇನ್ನು ಗುಣ ಮಟ್ಟದ ಬಿತ್ತನೆ ಬೀಜಗಳು ದೊರೆಯದೆ ಕಳಪೆ ಗುಣಮಟ್ಟದ ಬೀಜಗಳಿಂದ ರೈತನಿಗೆ ಹಾನಿಯಾಗುತ್ತದೆ. ಈ ಬೀಜಗಳನ್ನು ಸರಬರಾಜು ಮಾಡಿದಂತಹ ಬೀಜ ನಿಗಮದವರು ಇರಬಹುದು, ಖಾಸಗಿಯವರು ಇರಬಹುದು ಅವರ ಮೇಲೆ ನಿಮ್ಮ

ಹತೋಟಿ ಏನು ಇದೆ. ಅವರ ಮೇಲೆ ಹತೋಟಿಯನ್ನು ಇಟ್ಟುಕೊಳ್ಳುವಂತಹ ಕೆಲಸ ಸರ್ಕಾರದಿಂದ ಆಗಬೇಕು. ಆ ರೀತಿ ಆದರೆ ಮಾತ್ರ ರೈತ ತನ್ನ ಬದುಕನ್ನು ಹಸನು ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ. ಆ ದಿಕ್ಕಿನಲ್ಲಿ ತಾವು ಚಿಂತನೆ ಮಾಡುತ್ತೀರೆಂದು ನಾನು ಆಶಿಸುತ್ತೇನೆ. ಇನ್ನು ಬೆಳೆಯ ಬೆಲೆ ಕುಸಿತವಾದಾಗ, ಪ್ರಕೃತಿಯ ವಿಕೋಪ, ಬೆಳೆಗೆ ಬೆಂಕಿ ಬಿದ್ದಾಗ ಇದಕ್ಕೆ ಸರ್ಕಾರ ಏನು ನೆರವು ಕೊಡುತ್ತದೆ? ಈಗ ನಮ್ಮ ಮಾನ್ಯ ಲಮಾಣಿಯವರು ಒಂದು ಮಾತನ್ನು ಹೇಳಿದರು. ಇವತ್ತು ಬಣವಿ ಸುಟ್ಟರೆ ಅಥವ ರೈತನ ಫಸಲು ಸುಟ್ಟರೆ ಅದಕ್ಕೆ 500 ರೂಪಾಯಿಗಳನ್ನು ಕೊಡತಕ್ಕಂಥ ಒಂದು ಕಾನೂನು ವ್ಯವಸ್ಥೆ ಇದೆ. ಈ ಕಾನೂನನ್ನು ಮಾರ್ಪಾಡು ಮಾಡಬೇಕಾಗುತ್ತದೆ. ರೈತ ಜಾನುವಾರುಗಳಿಗೆ ಒಂದು ವರ್ಷದ ಬಣವೆ ಏನು ಇಟ್ಟುಕೊಂಡಿರುತ್ತಾನೆ ಅದು ಸುಟ್ಟು ಹೋದರೆ ಅದಕ್ಕೆ ತಾವು 500 ರೂಪಾಯಿ ಕೊಡುತ್ತೀರಿ. ಅದು ಏನೇನೂ ಸಾಲದು ಅದನ್ನು ಎರಡು ಸಾವಿರ ರೂಪಾಯಿಗಳಿಗೆ ಏರಿಸತಕ್ಕಂಥ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಆ ಕೆಲಸ ಸರ್ಕಾರ ಮಾಡಬೇಕೆಂದು ನಾನೂ ಸಹ ಇಚ್ಛೆಪಡುತ್ತೇನೆ. ಇದೂ ಅಲ್ಲದೆ ರೈತರಿಗೆ ಇರತಕ್ಕಂಥ ವಾಣಿಜ್ಯ ಬೆಳೆಗಳು ಹತ್ತಿ, ಶೇಂಗಾ, ಸೂರ್ಯಕಾಂತಿ ಈ ಎಲ್ಲಾ ಬೆಳೆ ವಿಫಲವಾಗಿದೆ. ಹತ್ತಿಯ ಬಗ್ಗೆ ನಾವು ಯೋಚನೆ ಮಾಡಿದರೆ ಈ ಬೆಳೆಗೆ ಬರುವ ರೋಗಕ್ಕೆ ನಾವು ಉಪಯೋಗ ಮಾಡುವ ಕೀಟನಾಶಕಗಳ ಔಷಧಿ ಶೇಕಡ 50ಕ್ಕಿಂತ ಹೆಚ್ಚು ಉಪಯೋಗ ಮಾಡುತ್ತೇವೆ. ಇದರಿಂದ ಪರಿಸರಕ್ಕೂ ಕೂಡ ತೊಂದರೆಯಾಗುತ್ತದೆ. ಪರಿಸರ ಮಾಲಿನ್ಯ ಕೂಡ ಆಗುತ್ತದೆ. ಇಷ್ಟು ಹಣ ರೈತ ಕೀಟನಾಶಕಗಳಿಗೆ ಖರ್ಚು ಮಾಡಿದರೆ ರೈತ ಎಲ್ಲಿ ಉಳಿಯಲು ಸಾಧ್ಯವಾಗುತ್ತದೆ? ಅದು ಬಿಟ್ಟು ಇನ್ನು ಯಾವ ಬೆಳೆ ಮಾಡಬೇಕು. ಆರ್ಥಿಕ ಬೆಳೆ ಅಂದರೆ ಹತ್ತಿ, ಶೇಂಗಾ, ಸೂರ್ಯಕಾಂತಿ, ಅದನ್ನು ಮಾಡುವುದಕ್ಕೆ ಆಗುತ್ತಿಲ್ಲ, ಈ ಕಡೆ ತೆಂಗು ಬೆಳೆಯುತ್ತಾರೆ, ತೆಂಗುಬೆಳೆಗೆ ಯಾವ ಯಾವ ರೋಗ ಬರುತ್ತದೆಂದು ನಮ್ಮ ಮಾನ್ಯ ಸುರೇಶ್ ಬಾಬುರವರು ಮಾತನಾಡುತ್ತಾ ಹೇಳಿದರು, ಅದು ಕಪ್ಪುತಲೆ ಹುಳ ಇರಬಹುದು, ನುಸಿರೋಗ ಇರಬಹುದು, ಹೀಗೆ ಮುಖ್ಯವಾದ ಎಲ್ಲಾ ಬೆಳೆಗಳನ್ನು ಬೆಳೆಯಲು ಸಾಧ್ಯವಾಗುತ್ತಿಲ್ಲ. ಅದಕ್ಕೆ ರೀಸರ್ಚ್ ಏನು ಇದೆ? ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಮತ್ತು ಕೃಷಿ ಪದವಿಯನ್ನು ಪಡೆದುಕೊಂಡಂತಹವರನ್ನು ಎಲ್ಲಿಗೆ ಕಳುಹಿಸುತ್ತಿದ್ದೀರಿ? ಮತ್ತು ಅದಕ್ಕೆ ಹಣಕಾಸಿನ ನೆರವು ಕೊಡಲಿಕ್ಕೆ ತಾವೇನು ಇಚ್ಛೆಪಟ್ಟಿದ್ದೀರಿ? ಈ ಕೆಲಸ ಇವತ್ತು ಸರ್ಕಾರದಿಂದ ಆಗಬೇಕಾಗಿದೆ. ಇರತಕ್ಕಂಥ ಅಲ್ಪಸ್ವಲ್ಪ ನೀರಿನಲ್ಲಿ ಮುಖ್ಯವಾದ ಬೆಳೆಗಳನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಇವತ್ತು ಯಾವ ಆಧಾರದ ಮೇಲೆ ಹಳ್ಳಿಗಾಡಿನ ಜನಜೀವನ ನಡೆಯುತ್ತಿದೆ. ಇವತ್ತು ಬೇರೆ ಉದ್ಧಿಮೆಗಳಲ್ಲಿ ಕೆಲಸ ಮಾಡೋಣವೆಂದರೂ ಆ ಉದ್ಧಿಮೆಗಳೂ ಸಹ ಕುಂಠಿತಗೊಂಡಿವೆ. ಆದ್ದರಿಂದ ಕೃಷಿ ವಿಶ್ವವಿದ್ಯಾನಿಲಯಗಳಿಗೆ ಹೆಚ್ಚಿನ ಹಣಕಾಸಿನ ನೆರವು ಕೊಡುವಂತಹ ಕೆಲಸ ಆಗಬೇಕು.

ನಾನು ಕೊಪ್ಪಳದ್ದು ಒಂದು ಉದಾಹರಣೆ ಹೇಳಬೇಕಿಂದರೆ ಮೊನ್ನೆ ಮಾನ್ಯ ಖರ್ಗೆಯವರು ಹೇಳಿದರು. ಉತ್ತರ ಕರ್ನಾಟಕದಲ್ಲಿ ಕ್ಲಾಸ್‌ಗಳನ್ನು ಮಾಡಿದರು. ಹುಬ್ಬಳ್ಳಿ ಧಾರವಾಡ ಭಾಗ 'ಎ' ಕ್ಲಾಸ್. ಬಿಜಾಪುರ, ಬಾಗಲಕೋಟೆ 'ಬಿ' ಕ್ಲಾಸ್. ಗುಲ್ಬರ್ಗ 'ಸಿ' ಬೀದರ್ 'ಡಿ' ಕ್ಲಾಸ್; ಹೀಗೆ ಕೊಪ್ಪಳ ಮತ್ತು ಮುಂಡರಗಿ ನಾವು 'ಇ' ಕ್ಲಾಸ್‌ನಲ್ಲಿದ್ದೇವೆ. ಅದಕ್ಕೆ ತಾವು ಪ್ರಾದೇಶಿಕ ಅಸಮತೋಲನೆಯನ್ನು ಕಾಪಾಡಬೇಕಾಗುತ್ತದೆ. ಮಾನ್ಯ ಕಂದಾಯ ಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಬಂದಿದ್ದರು. ಕಳೆದ ತಿಂಗಳು 7ನೇ ತಾರೀಖು. ನಮಗೆ ಜಿಲ್ಲಾ ಕೇಂದ್ರ ಮಾಡಿಕೊಟ್ಟಿದ್ದೀರಿ ನಮಗೆ ಡಿಗ್ರಿ ಕಾಲೇಜು ಬೇಕು ಎಂದು ಅಲ್ಲಿ ವಿದ್ಯಾರ್ಥಿಗಳು ಹೋರಾಟ ಮತ್ತು ಧರಣಿ ಮಾಡಿದರು. 300 ಜನ ವಿದ್ಯಾರ್ಥಿಗಳಿಗೆ ಅಡ್ಮಿಷನ್ ಸಿಕ್ಕಿಲ್ಲ ಎಂಬುದನ್ನು ಅವತ್ತು ಮಾನ್ಯ ಕಂದಾಯ ಮಂತ್ರಿಗಳು ಒಪ್ಪಿಕೊಂಡಿದ್ದರು. ನಮ್ಮ ಜಿಲ್ಲಾ ಮಂತ್ರಿಗಳು ಮತ್ತು ಎಲ್ಲಾ ಶಾಸಕರನ್ನು ಕರೆದುಕೊಂಡು ಹೋಗಿ ವಿಷಯ ಹೇಳಿ ಕಾಲೇಜನ್ನು ಮಂಜೂರು ಮಾಡಿಸುತ್ತೇನೆಂದು ಹೇಳಿದರು. ಇದುವರೆಗೂ ಆಗಲಿಲ್ಲ. ಎಲ್ಲಿ ನೀವು ಪ್ರಾದೇಶಿಕ ಅಸಮತೋಲನೆಯನ್ನು ಕಡಿಮೆ ಮಾಡುತ್ತೀರಿ? ಈ ವರ್ಷದಲ್ಲಿ ಮಂಡ್ಯ ಜಿಲ್ಲೆಗೆ ಒಂದು ಡಿಗ್ರಿ ಕಾಲೇಜನ್ನು ಕೊಟ್ಟಿದ್ದೀರಿ. ಹುಬ್ಬಳ್ಳಿಯಲ್ಲಿ ಒಂದು ಸರ್ಕಾರಿ ಡಿಗ್ರಿ ಕಾಲೇಜು ಕೊಟ್ಟಿದ್ದೀರಿ. ಎಲ್ಲಿ ಮುಂದುವರಿದಿದೆ ಅಲ್ಲಿಯೇ ಹೆಚ್ಚು ಹೆಚ್ಚು ಅಭಿವೃದ್ಧಿ ಮಾಡುವಂತಹ ಪರಿಸ್ಥಿತಿಯಾಗಿದೆ. ನಾವು ಇಂಬ್ಯಾಲೆನ್ಸ್ ಎಂದು ಬರೀ ಬಾಯಿಂದ ಮಾತ್ರ ಹೇಳುತ್ತೇವೆ. ಆದರೆ ಅದು ನಿಜವಾಗಿಯೂ ಕಾರ್ಯಗತವಾಗುತ್ತಿಲ್ಲ. ಕೊಪ್ಪಳಕ್ಕೆ ಸರ್ಕಾರಿ ಡಿಗ್ರಿ ಕಾಲೇಜು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮಾನ್ಯ ವಿದ್ಯಾಮಂತ್ರಿಗಳಾದ ಎಚ್. ವಿಶ್ವನಾಥ್‌ರವರೂ ಸಹ ಆ ಭಾಗದಲ್ಲಿ ಒಂದು ಕಾಂತ್ರಿಕಾರಕವಾದ ಹೆಜ್ಜೆಯನ್ನು ಇಟ್ಟಿದ್ದಾರೆ. ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ನಮಗೆ ಈಗ ಶೈಕ್ಷಣಿಕವಾಗಿ ಸ್ವಾತಂತ್ರ ಬಂದಿದೆ ಎಂದು ಅನ್ನಿಸುತ್ತದೆ. ಡ್ರಾಪ್ ಔಟ್ ಆದ ಮಕ್ಕಳು ಇರಬಹುದು, ಮತ್ತು ಅಲ್ಲಿನ ವಿದ್ಯಾಭ್ಯಾಸದ ಮಟ್ಟ ಇರಬಹುದು, ಎಷ್ಟು ಜನ ಶಿಕ್ಷಣದಿಂದ ವಂಚಿತರಾಗಿದ್ದಾರೆ ಎನ್ನುವ ಒಂದು ಸರ್ವೆ ಮಾಡಿಸಿ ಆ ಭಾಗಕ್ಕೆ ವಿಶೇಷವಾಗಿ ಹೈಸ್ಕೂಲ್‌ಗಳನ್ನು ಕೊಡತಕ್ಕಂಥ ಕಾರ್ಯಕ್ರಮ ಮತ್ತು ಅಲ್ಲಿಗೆ ಕಾಲೇಜುಗಳನ್ನು ಕೊಡತಕ್ಕಂಥ ಕಾರ್ಯಕ್ರಮ, ಶಿಕ್ಷಕರನ್ನು ತುಂಬತಕ್ಕಂಥ ಕಾರ್ಯಕ್ರಮ, ಮತ್ತು ನಬಾರ್ಡ್ ಯೋಜನೆಯಲ್ಲಿ ಶಾಲೆಗೆ ಮೂಲಭೂತ ಸೌಲಭ್ಯಗಳನ್ನು ಕೊಡತಕ್ಕಂಥ ಕಾರ್ಯಕ್ರಮ, ಇವು ಬಹಳ ಚೆನ್ನಾಗಿ ಮಾಡಿದ್ದಾರೆ. ಅವರಿಗೆ ಇನ್ನೂ ಹೆಚ್ಚಿನ ಇಂತಹ ಕೆಲಸ ಮಾಡುವುದಕ್ಕೆ ಶಕ್ತಿ ಕೊಡಲಿ ಎಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ. ಅದರಲ್ಲೂ ಕೊಪ್ಪಳಕ್ಕೆ ವಿಶೇಷವಾಗಿ ಒಂದು ಹೈಸ್ಕೂಲ್ ಕೊಡಬೇಕೆಂದು ನಾನು ಒತ್ತಾಯಿಸುತ್ತೇನೆ. ತಾವು ಕ್ಷೇತ್ರವಾರು ಹೈಸ್ಕೂಲ್ ಕೊಟ್ಟಿದ್ದೀರಿ. ವಿರೋಧಪಕ್ಷದ ಶಾಸಕರು ಇದ್ದಾರೆಂದು ತಾವು ಈ ರೀತಿ ಮಾಡುತ್ತಿದ್ದೀರೋ ಏನೋ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನಮ್ಮನ್ನು ಜನ ಆಶೀರ್ವಾದ ಮಾಡಿ ಕಳುಹಿಸಿದ್ದಾರೆ. ಜನರ ಬದುಕಿನ ಹಿನ್ನಲೆಯಲ್ಲಿ

ನಾವು ಕೆಲಸ ಮಾಡಬೇಕಾಗಿದೆ. ಶೈಕ್ಷಣಿಕವಾಗಿ ನಾವು ನಮ್ಮ ಮಕ್ಕಳನ್ನು ಓದಿಸಬೇಕಾಗಿದೆ. ನಮಗೆ ಒಂದು ಹೈಸ್ಕೂಲ್ ಕೊಟ್ಟಿದ್ದಾರೆ. ಮಂತ್ರಿಗಳು ಇರುವ ಕ್ಷೇತ್ರದಲ್ಲಿ 3-4 ಹೈಸ್ಕೂಲ್‌ಗಳನ್ನು ಕೊಟ್ಟಿದ್ದಾರೆ. ಕುಷ್ಟಗಿಯಲ್ಲಿ ಎರಡು ಕೊಟ್ಟಿದ್ದಾರೆ. ಈ ರೀತಿ ತಾರತಮ್ಯವಾದರೆ ನಾವು ಯಾವ ರೀತಿ ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯ? ತಾವು ಬೇರೆ ತಾಲ್ಲೂಕುಗಳಿಗೆ ಕೊಟ್ಟ ಹಾಗೆ ನಮಗೂ ಹೈಸ್ಕೂಲ್ ಕೊಡಬೇಕಾಗುತ್ತದೆ. ಇದೇ ರೀತಿ ಮುಂದುವರೆದರೆ ಅಲ್ಲಿನ ಜನ ಗಲಾಟೆ ಶುರು ಮಾಡಿದ್ದಾರೆ. ಈ ಶಾಸಕರು ಏನೂ ಕೆಲಸ ಮಾಡುತ್ತಿಲ್ಲ. ಬೇರೆ ಕ್ಷೇತ್ರದಲ್ಲಿ ಇಷ್ಟೊಂದು ಹೈಸ್ಕೂಲ್ ಸಿಕ್ಕಿವೆ ನೀವು ಏನು ಕೆಲಸ ಮಾಡುತ್ತೀರಿ ಎಂದು ಪ್ರಶ್ನೆ ಮಾಡುತ್ತಾರೆ. ಅಲ್ಲಿ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು ತೋಟಗಾರಿಕೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಇವತ್ತು ತೆಂಗು ನಾಶವಾಗತಕ್ಕಂಥ ಸಂದರ್ಭ. ವೀಳೆದೆಲೆ ಬಹಳಷ್ಟು ಉತ್ತಮವಾದ ಆರ್ಥಿಕ ಬೆಳೆ ಆಗಿತ್ತು. ಪ್ರಜಾವಾಣಿ ಪತ್ರಿಕೆಯವರು ಕೊಪ್ಪಳದಿಂದ ಒಂದು ವರದಿ ಮಾಡಿದ್ದಾರೆ. ಈ ಬೆಳೆಗೆ ಇವತ್ತು ಜಂತು ಮತ್ತು ವೈರಸ್ ರೋಗ ಬಂದಿದೆ. ಆ ಬಗ್ಗೆ ವಿಶ್ವವಿದ್ಯಾಲಯದವರು ಒಂದು ವರದಿ ಕೊಟ್ಟಿದ್ದಾರೆ ಆ ಬಳ್ಳಿ ಕಿತ್ತುಹಾಕಬೇಕೆಂದು. ಆದರೆ ಬೆಂಗಳೂರು ವಿಜ್ಞಾನಿಗಳು ಒಬ್ಬರು ಹೇಳಿದ್ದಾರೆ. ಆ ವೀಳೆದೆಲೆ ಬಳ್ಳಿಯನ್ನು ಕಿತ್ತು ಹಾಕುವಂತಹ ಪ್ರಶ್ನೆ ಇಲ್ಲ. ಅದನ್ನು ಕಂಟ್ರೋಲ್ ಮಾಡಬಹುದು ಎಂದು. ನಾನು ಆಮೇಲೆ ಆ ವರದಿಯನ್ನು ಕಳುಹಿಸಿಕೊಡುತ್ತೇನೆ. ನಮ್ಮ ಕೊಪ್ಪಳ ಕ್ಷೇತ್ರದ ದೊಂಬರಳ್ಳಿ ಎನ್ನುವ ಕಡೆ ಸುಮಾರು 80-90 ತೋಟಗಳು ಇವೆ. ಆ ಎಲ್ಲಾ ತೋಟಗಳು ಸರ್ವ ನಾಶವಾಗಿವೆ. ಇದರಿಂದ ಜಾನುವಾರುಗಳಿಗೆ ಅನುಕೂಲವಾಗುತ್ತದೆ. ಆ ಬಳ್ಳಿ ನೆರಳಿನಲ್ಲಿ ಜಾನುವಾರುಗಳಿಗೆ ಮೇವು ಬೆಳೆಸುತ್ತಿದ್ದರು. ಅದು ಇಲ್ಲದಂತೆ ಆಗಿದೆ. ಇದರಿಂದ ಹೈನುಗಾರಿಕೆ ಬಹಳ ಉತ್ತಮ ಸ್ಥಿತಿಯಲ್ಲಿತ್ತು. ಇದರಿಂದ ಈಗ ಹೈನುಗಾರಿಕೆ ಹೊರಟುಹೋಗಿದೆ. ಆ ಗ್ರಾಮದಲ್ಲಿ ಸಾವಿರಾರು ಕೃಷಿ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಅವರೂ ಸಹ ಈಗ ಗುಳೆ ಹೋಗಿದ್ದಾರೆ. ಆದ್ದರಿಂದ ಇವತ್ತು ನಾವು ವಿಶ್ವವಿದ್ಯಾನಿಲಯದ ಒಂದು ತಂಡವನ್ನು ಕಳುಹಿಸಿ ಅದನ್ನು ಎನ್‌ಕರೇಜ್ ಮಾಡುವಂತಹ ಕೆಲಸ ಸರ್ಕಾರದಿಂದ ಆಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಆಮೇಲೆ ಮೆಕ್ಕೆಜೋಳವನ್ನು ಖರೀದಿ ಮಾಡುವಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿ ನಮಗೆ ಬೆಂಬಲ ಬೆಲೆ ಬೇಕೆಂದು ರೈತರು ಹೋರಾಟ ಮಾಡಿದರು. ಆ ಸಂದರ್ಭದಲ್ಲಿ ರೈತರು ರೊಚ್ಚಿಗೆದ್ದು ನಮಗೆ ಒಂದು ವಾರದಿಂದ ಪೇಟೆಗೆ ತಂದ ಮಾಲನ್ನು ಕೊಳ್ಳುವವರು ಯಾರೂ ಇಲ್ಲ ಎಂದು ಗಲಾಟೆ ಮಾಡಿದರು. ಇದು ಸ್ವಾಭಾವಿಕ. ಆ ಸಂದರ್ಭದಲ್ಲಿ ರೈತರ ಮೇಲೆ ಕೇಸ್ ಹಾಕಿದ್ದಾರೆ. ನಾನು ಈ ಬಗ್ಗೆ ಕಳೆದ ಅಧಿವೇಶನದಲ್ಲಿ ಸಹ ಒತ್ತಾಯ ಮಾಡಿದೆ. ಅಲ್ಲಿ ಯಾರಿಗೂ ಗಾಯವಾಗಿಲ್ಲ. ಯಾರ ಜೀವಹಾನಿ ಆಗಿಲ್ಲ ಇಂತಹ ಕೇಸ್‌ಗಳನ್ನು ವಾಪಸ್ಸು

ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ, ಸಣ್ಣ ನೀರಾವರಿ ಬಗ್ಗೆ ಹೇಳುವುದಾದರೆ ಜಲ ಸಂವರ್ಧನ ಯೋಜನೆ ಮತ್ತು ಕೆರೆಗಳ ಹೂಳು ಎತ್ತುವ ಯೋಜನೆ ಹಾಕಿಕೊಂಡಿದ್ದಾರೆ. ಅದು ಬಹಳ ಸಂತೋಷದ ವಿಚಾರ. ಆದರೆ ಸಣ್ಣ ನೀರಾವರಿ ಇಲಾಖೆಯಿಂದ ಹಾಕಿಕೊಂಡಂತಹ ಕೆಲಸಗಳು ಯಾವುವೂ ಪ್ರಾರಂಭವಾಗಿಲ್ಲ. ಈ ಕಾರ್ಯಕ್ರಮ ಅಡಿಯಲ್ಲಿ ಹಿಂದೆ ಕೆಲಸ ಮಾಡಿದಂತಹ ಗುತ್ತಿಗೆದಾರರಿಗೆ ಒಂದು ಪೈಸೆ ಹಣ ಸಹ ಬಿಡುಗಡೆಯಾಗಿಲ್ಲ. ಅವರು ಮೂರು ವರ್ಷಗಳಿಂದ ಬಡ್ಡಿ ಕಟ್ಟುತ್ತಿದ್ದಾರೆ. ಈ ಇಲಾಖೆಯಲ್ಲಿ ಹಣ ಇದೆಯೋ ಇಲ್ಲವೋ ಎನ್ನುವುದನ್ನು ಸ್ಪಷ್ಟಪಡಿಸಬೇಕಾಗಿದೆ. ನಮ್ಮ ಕುಷ್ಟಗಿ ಡಿವಿಜನ್‌ನಲ್ಲಿ ಯಾವ ಕೆಲಸ ಸಹ ಪ್ರಾರಂಭವಾಗಿಲ್ಲ. ನಮ್ಮ ಸರ್ಕಾರವಿದ್ದಾಗ ಏತ ನೀರಾವರಿಗೆ ಮಂಜೂರಾತಿ ಕೊಟ್ಟು ಮೂರನೇ ಒಂದು ಭಾಗದಷ್ಟು ಹಣ ಕೊಟ್ಟ ಕಾರ್ಯಕ್ರಮಗಳೂ ಸಹ ಕೆಲಸ ಪ್ರಾರಂಭವಾಗಿಲ್ಲ. ಈ ರೀತಿ ಆದರೆ ನಾವು ಯಾವ ದಿಕ್ಕಿನಲ್ಲಿ ರೈತರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಿದೆ ಹೇಳಿ? ಇವತ್ತು ಮೂರನೇ ಒಂದು ಭಾಗದ ಹಣ ಇರುವ ಕಡೆಯೂ ಸಹ ಕೆಲಸ ಪ್ರಾರಂಭವಾಗಿಲ್ಲ, ಕೆಲಸ ಮಾಡಿದ ಕಡೆ ಹಣ ಪಾವತಿ ಮಾಡಿಲ್ಲ. ಎಷ್ಟರಮಟ್ಟಿಗೆ ನಾವು ರೈತರ ನೆರವಿಗೆ ಬರುವುದಕ್ಕೆ ಸಾಧ್ಯವಿದೆ? ಆದ್ದರಿಂದ ನಾನು ಸರ್ಕಾರವನ್ನು ಒತ್ತಾಯ ಮಾಡುವುದು ಸಣ್ಣ ನೀರಾವರಿ ಇಲಾಖೆಯಿಂದ ತೆಗೆದುಕೊಂಡಂತಹ ಕಾರ್ಯಕ್ರಮಗಳಿಗೆ ಚಾಲನೆ ಕೊಡಬೇಕು, ಆ ಕೆಲಸಗಳನ್ನು ಶುರು ಮಾಡಬೇಕೆಂದು ಹೇಳಿ, ಇನ್ನು ಸಿಂಗಟಾಲೂರು ಪ್ರಾಜೆಕ್ಟ್ ಬಗ್ಗೆ ಹೇಳುವುದಾದರೆ, ಇವತ್ತು ಏನು ತುಂಗಭದ್ರಾ ಪ್ರಾಜೆಕ್ಟ್ ನಿರ್ಮಾಣವಾಗಿದೆ ಆ ಕಾಲಕ್ಕೆ ಕೊಪ್ಪಳ ಮತ್ತು ಹಡಗಲಿ ಕ್ಷೇತ್ರದ ಈ ಕಡೆ 33 ಹಳ್ಳಿ ಆ ಕಡೆ 33 ಹಳ್ಳಿಗಳನ್ನು ಸ್ಥಳಾಂತರಗೊಳಿಸಿದರು. ಅವತ್ತು ಅವರು ತಮ್ಮ ಜಮೀನುಗಳನ್ನು ತ್ಯಾಗ ಮಾಡಿದರು. ಆದರೆ ಅವರಿಗೆ ನೀರಾವರಿ ಸೌಲಭ್ಯ ಏನೂ ಇಲ್ಲ. ಮಾನ್ಯ ಹೆಚ್.ಕೆ. ಪಾಟೀಲರನ್ನು ನಾನು ಮತ್ತು ಮಾನ್ಯ ಹಂಪನಗೌಡರು ಹೋಗಿ ಕೇಳಿದಾಗ ನಿಮಗೆ 8 ಸಾವಿರ ಹೆಕ್ಟೇರ್‌ಗೆ ಪ್ರಾವಿಷನ್ ಮಾಡುತ್ತೇವೆಂದು ಹೇಳಿದರು. ಆ ಉತ್ತರ ನಮಗೆ ಸಮಾಧಾನ ತಂದಿಲ್ಲ. ಆ ಪ್ರಾಜೆಕ್ಟ್ ಕಟ್ಟುವಾಗ ಆ ಕ್ಷೇತ್ರದ ಜನರು ಏನು ತ್ಯಾಗ ಮಾಡಿದ್ದಾರೆ ಅದರಿಂದ ನಮ್ಮ ಕ್ಷೇತ್ರಕ್ಕೆ ಸುಮಾರು 40 ಸಾವಿರ ಹೆಕ್ಟೇರ್ ನೀರಾವರಿ ಸಿಗಬೇಕೆನ್ನುವ ಒತ್ತಾಯ ಇದೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ನಾನು ಆಶಿಸಿ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಸ್.ಎಸ್. ಪೂಜಾರ್ (ಬಾಗಲಕೋಟೆ) :— ಮಾನ್ಯ ಅಧ್ಯಕ್ಷರೇ, ನಾನೊಬ್ಬ ಹಿಂದುಳಿದ ಜಿಲ್ಲೆಗೆ ಸೇರಿದ ವ್ಯಕ್ತಿಯಾಗಿದ್ದೇನೆ. ನಮ್ಮ ಉತ್ತರ ಕರ್ನಾಟಕ ಭಾಗದ ಸಾಮಾಜಿಕ ವ್ಯವಸ್ಥೆ ಎಲ್ಲಾ ವಿಭಾಗಗಳಲ್ಲಿ ಹಿಂದುಳಿದಿದೆ. ಇದಕ್ಕೆ ಕಾರಣ ಅನೇಕ ವರ್ಷಗಳಿಂದ ಇಲ್ಲಿ ದೊರೆಯಬೇಕಾದ ಮೂಲ ಭೂತ ಸೌಲಭ್ಯಗಳು

ದೊರೆಯದೆ ಇರುವುದೇ ಮೂಲ ಕಾರಣವೆಂದು ನಾನು ಹೇಳಬಯಸುತ್ತೇನೆ. ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ, ಗ್ರಾಮೀಣ ಸಂಪರ್ಕ ರಸ್ತೆ ಸೇತುವೆಗಳಿಂದ ಹಿಡಿದು ರೈಲು ಸಂಪರ್ಕ ದೊರೆಯುವವರೆಗೆ ಕೊರತೆ, ಅತಿ ಸಣ್ಣ ಕೈಗಾರಿಕೆಗಳಿಂದ ಹಿಡಿದು ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಕೊರತೆ ನೀರಾವರಿಗೆ ಸಹಾಯಕವಾಗುವ ಸಣ್ಣ ಸಣ್ಣ ಕೆರೆಗಳಿಂದ ಹಿಡಿದು ಭಾರಿ ಮತ್ತು ಮಧ್ಯಮ ನೀರಾವರಿ ಕಾರ್ಯಾರಂಭದಲ್ಲಿ ಆದಂತಹ ಕೊರತೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಹಿಡಿದು

6.10 ಪಿ.ಎಂ.

ದೊಡ್ಡ ಆಸ್ಪತ್ರೆಗಳ ಕೊರತೆ, ಇವು ಹಿಂದುಳಿದಿರುವಿಕೆಗೆ ಮೂಲ ಕಾರಣವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅಷ್ಟೇ ಏಕೆ ಸ್ವಾಮಿ, ಉತ್ತರ ಕರ್ನಾಟಕದ ವ್ಯವಸ್ಥೆ ಪ್ರದೇಶಗಳನ್ನು ಮುಂದುವರೆಸಬೇಕೆಂದು ಮಾಡಬೇಕೆಂಬ ಹಿನ್ನಲೆಯಲ್ಲಿ ಸಣ್ಣಪುಟ್ಟ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು, ಯೋಜನೆಗಳನ್ನು ಕಾರ್ಯಗತಗೊಳಿಸಬೇಕೆಂಬ ನಿಟ್ಟಿನಲ್ಲಿ ಅವಶ್ಯವಿರುವಷ್ಟು ಸ್ಥಳೀಯ ಸಂಸ್ಥೆಗಳನ್ನೂ ಸಹ ಕಡಿತಮಾಡಲಾಗಿದೆ. ಅದಕ್ಕೆ ಸ್ಪಷ್ಟ ದಾಖಲೆಗಳೇ ನಮ್ಮ ಕಣ್ಮುಂದಿವೆ. ವಿಸ್ತೀರ್ಣವನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕಾದ ಅವಶ್ಯಕತೆಯಿದೆ. ದಕ್ಷಿಣ ಕರ್ನಾಟಕದ ಭೌಗೋಳಿಕ ವಿಸ್ತೀರ್ಣವು 93,170 ಚದರ ಕಿಮೀಗಳಿದ್ದರೆ ಅಲ್ಲಿರುವ ಗ್ರಾಮಪಂಚಾಯ್ತಿಗಳ ಸಂಖ್ಯೆ 3181, ಉತ್ತರ ಕರ್ನಾಟಕದ ಭೌಗೋಳಿಕ ವಿಸ್ತೀರ್ಣ 98, 621 ಚದರ ಕಿಮೀ ಇದ್ದರೆ ಗ್ರಾಮಪಂಚಾಯ್ತಿಗಳ ಸಂಖ್ಯೆ 2511 ಮಾತ್ರ. ಒಟ್ಟು 5451 ಚದರ ಕಿಮೀ ಹೆಚ್ಚಿನ ಪ್ರದೇಶವಿದ್ದರೂ ಕೂಡ ಇನ್ನೂ ಸಾವಿರದಷ್ಟು ಗ್ರಾಮಪಂಚಾಯ್ತಿಗಳು ಅಲ್ಲಿ ಆಗಬೇಕಾಗಿತ್ತು. ಈ ನಿಟ್ಟಿನಲ್ಲಿ ಅನೇಕ ಅವ್ಯವಸ್ಥೆಗಳು ಅನೇಕ ವರ್ಷಗಳಿಂದ ಆಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಆದ್ದರಿಂದ ಇಂದಿನ ಸರ್ಕಾರ ಈ ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡಿ, ಹಿಂದುಳಿದ ಪ್ರದೇಶಗಳಿಗೆ ಅಭಿವೃದ್ಧಿಗೆ ಅವಕಾಶ ಕೊಡಬೇಕೆಂಬ ನಿಟ್ಟಿನಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಸ್ಥಾಪನೆ ಮಾಡಿರುವುದನ್ನು ನಾನು ಶ್ಲಾಘನೆ ಮಾಡುತ್ತಿದ್ದೇನೆ, ಸ್ವಾಗತ ಮಾಡುತ್ತಿದ್ದೇನೆ ಸ್ವಾಮಿ. ನಮ್ಮ ಭಾಗ ವಿಶೇಷವಾಗಿ ಪ್ರಾಥಮಿಕ ಶಿಕ್ಷಣದಲ್ಲಿ ಹಿಂದುಳಿದಿದ್ದು ಇತ್ತೀಚೆಗೆ ಗುಲ್ಬರ್ಗ ವಿಭಾಗದಲ್ಲಿ ಈಶಾನ್ಯ ಶಿಕ್ಷಣ ನಿರ್ದೇಶನಾಲಯ ಕಛೇರಿಯನ್ನು ಪ್ರಾರಂಭ ಮಾಡಿದ್ದಾರೆ. ಜೊತೆಗೆ 100 ಹೊಸ ಹೈಸ್ಕೂಲುಗಳನ್ನು ಕೊಟ್ಟಿದನ್ನು ಸ್ವಾಗತ ಮಾಡುತ್ತಾ ಇದೇ ರೀತಿಯ ವ್ಯವಸ್ಥೆ ಹಿಂದುಳಿದ ವಿಭಾಗಗಳಿಗೂ ಮುಂದುವರೆಯಬೇಕು, ಎಂದು ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ವಿಶೇಷವಾಗಿ ನಮ್ಮ ಭಾಗದಲ್ಲಿ ನೀರಾವರಿ ಎಂದರೆ ಕೃಷ್ಣಾ ಜಲಾನಯನ ನೀರಾವರಿ ಯೋಜನೆಗಳು. ಈ ಭಾಗದಲ್ಲಿ ಯಾವ ರೀತಿ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಾವರಿ ಯೋಜನೆ ಹಮ್ಮಿಕೊಂಡಿದ್ದಾರೆ ದುರ್ದೈವದ ಸಂಗತಿ, ಕಾವೇರಿ ಜಲಾನಯನದ ಯೋಜನೆಗಳ

ಕಾರ್ಯಪ್ರಗತಿ ಶೇಕಡ 60, 70 ರಷ್ಟಾಗಿದ್ದರೂ ಕೃಷ್ಣಾ ಜಲಾನಯನ ಯೋಜನೆಗಳ ಪ್ರಗತಿ ಇನ್ನೂ ಕುಂಠಿತಗೊಳ್ಳುತ್ತಾ ಬಂದಿದೆ. ಶೇಕಡ 50ರಷ್ಟೂ ಪ್ರಗತಿ ಇಲ್ಲಿಯವರೆಗೇ ಮಾಡಲು ಆಗಲಿಲ್ಲ. ಈಚೆಗೆ ನಮ್ಮ ಹಿರಿಯ ಶಾಸಕರಾದ ಮಾನ್ಯ ಹನುಮೇಗೌಡರು ಉತ್ತರ ಕರ್ನಾಟಕದ ಕೃಷ್ಣಾ ಯೋಜನೆಗಳಿಗೆ ಹೆಚ್ಚುವರಿ ಅನುದಾನವನ್ನು ಈ ಸರ್ಕಾರ ಕೊಡುತ್ತಿದೆ, ಸ್ವಾಗತ ಎಂದು ಹೇಳಿದರು. ಸ್ವಾಮಿ ನಾನು ಇವರೆಲ್ಲರನ್ನೂ ಕೇಳುತ್ತೇನೆ: ಇದುವರೆಗೂ ಅಸಮತೋಲನವನ್ನು ಲೆಕ್ಕಿಸದೆ ಕಾವೇರಿ ಯೋಜನೆಗಳಿಗೆ ಹಣವನ್ನು ನೀಡುತ್ತಾ ಬಂದಿದ್ದರು ಇವತ್ತು ಅದನ್ನು ಕೃಷ್ಣಾ ಯೋಜನೆಗಳಿಗೆ ನೀಡಿದರೆ ತಪ್ಪಾ? ಅಲ್ಲಿಯ ರೈತರು ಉದ್ಧಾರವಾಗುವುದು ತಪ್ಪಾ? ಇವತ್ತು ನೀರಾವರಿಗೊಳಿಸುವ ಭರಾಟೆಯಲ್ಲಿ ಪುನರ್ವಸತಿ ಅತ್ಯಂತ ಹದಗೆಡುತ್ತಾ ಬಂದಿದೆ. ಒಂದು ಮಾತು ಈ ಸರ್ಕಾರಕ್ಕೆ ನಾನು ಹೇಳಲು ಇಚ್ಛೆಪಡುತ್ತೇನೆ: ಕೆಲವೊಂದು ಕಾರ್ಯಕ್ರಮಗಳಲ್ಲಿ ತಾವು ಒಳ್ಳೆಯದನ್ನು ಮಾಡುತ್ತಾ ಬಂದಿದ್ದೀರಿ. ಬಡ ರೈತರ ಭೂಮಿ ಪರಿಹಾರವನ್ನು ಶೇಕಡ 30ರಷ್ಟು ಹೆಚ್ಚು ಮಾಡಿದ್ದೀರಿ, ಎಕರೆಗೆ ಎರಡೆರಡು ಲಕ್ಷದವರೆಗೆ ಅಲ್ಲಿ ಕಿಮ್ಮತ್ತಿದ್ದರೂ ತಾವು ಹೆಚ್ಚುವರಿ ಮಾಡಿ 30 ಪರ್ಸೆಂಟ್ ಹಣ ಸಾಕಾಗದಿದ್ದರೂ ಕನಿಷ್ಠ ಆ ರೈತನಿಗೆ ಸಮಾಧಾನವಾಗುವಂತಹ ಕೆಲಸ ಮಾಡಿದ್ದೀರಿ. ಈ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು, ಭಾರಿ ನೀರಾವರಿ ಸಚಿವರು ಹಾಗೂ ಕಂದಾಯ ಸಚಿವರಿಗೆ ನಾನು ಅಭಿನಂದನೆ ಸಲ್ಲಿಸದಿದ್ದರೆ ತಪ್ಪಾಗುವುದೆಂದು ಹೇಳುತ್ತಾ ಇವತ್ತಿಗೂ ಪುನರ್ವಸತಿ ವ್ಯವಸ್ಥೆ ಬಾರಿ ಹಿಂದುಳಿದಿದೆ. ಪುನರ್ವಸತಿ ಅನ್ನುವುದನ್ನು ಇವತ್ತಿನ ಸರ್ಕಾರವೂ ತಪ್ಪಾಗಿ ಅರ್ಥೈಸಿದೆ ಎಂದು ಅನಿವಾರ್ಯವಾಗಿ ಹೇಳಬೇಕಾಗಿದೆ. ಪರಿಹಾರ ಧನ ವಿತರಿಸಿ ಅವರಿಗೊಂದೊಂದು ಮನೆ ಕೊಟ್ಟರೆ ಪುನರ್ವಸತಿ ಸಾಲದು, ಅವರ ಮೂಲ ಬದುಕಿಗೆ ಆಧಾರ ಎನಿತ್ತು, ಅವರ ಜಮೀನುಗಳು ಏನು ಮುಳುಗಡೆ ಆಗಿದೆ ಅವರಿಗೆ ಮತ್ತೆ ಜೀವನ ಕೊಡಬೇಕಾಗಿದೆ ಆವರಲ್ಲಿ ಬದುಕುವ ವಿಶ್ವಾಸ ನೀಡಬೇಕಾಗಿದೆ. ಈ ಹಿನ್ನಲೆಯಲ್ಲಿ ಸರ್ಕಾರಕ್ಕೆ ಕೊಡಲು ಸಾಧ್ಯವಿಲ್ಲ. ಅಲ್ಲಿನ ಜನರಿಗೆ ಸಣ್ಣ ಸಣ್ಣ ಉದ್ಯೋಗ ಮಾಡಲು ಅನುಕೂಲವಾಗುವ ವ್ಯವಸ್ಥೆ ಮಾಡಬೇಕು. ಅಲ್ಲಿ ಉದ್ಯಮ ತೆರೆಯಲು ಏನೇನು ತೆರಿಗೆ ವಿನಾಯ್ತಿ ಇದೆ ಅವನ್ನೆಲ್ಲಾ ಮಾಡಬೇಕು ಎಂದು ಒತ್ತಾಯ ಮಾಡುತ್ತಿದ್ದೇನೆ. ಇದಕ್ಕಾಗಿ ವಿಶೇಷವಾದ ಹಣಕಾಸಿನ ನೆರವನ್ನು ತೆಗೆದಿಡಬೇಕೆಂಬ ಒತ್ತಾಯವನ್ನು ಮಾಡುತ್ತಿದ್ದೇನೆ. ಕೈಗಾರಿಕೀಕರಣದಲ್ಲೂ ನಮ್ಮ ಜಿಲ್ಲೆ ಅತ್ಯಂತ ಹಿಂದುಳಿದಿದೆ. ನಮ್ಮ ಜಿಲ್ಲೆಯಲ್ಲಿ ವಿಪುಲ ಖನಿಜ ಸಂಪತ್ತಿದೆ, ಡೋಲೋಮೈಟ್ ಇದೆ, ಲ್ಯಾಂಡ್‌ಸ್ಟೋನಿದೆ, ವಿಶ್ವಪ್ರಸಿದ್ಧವಾದ ಗ್ರಾನೈಟ್ ಇಳಕಲ್ಲಿನಲ್ಲಿ ಸಿಗುತ್ತಿದೆ. ಅದರ ಜೊತೆಗೆ ವಿಪುಲ ಹಣ್ಣು ಹಂಪಲು ಸಂಪತ್ತು, ವಿದೇಶಗಳಲ್ಲಿ ಅತ್ಯಂತ ಬೇಡಿಕೆಯಿರುವ ನಮ್ಮ ಬಾಗಲಕೋಟೆ ಬಿಜಾಪುರ ದ್ರಾಕ್ಷಿ, ದಾಳಿಂಬೆಗಳಿದ್ದರೂ ಅದಕ್ಕೆ ಮಾರಾಟದ ವ್ಯವಸ್ಥೆ ಇವತ್ತಿನವರೆಗೆ ಮಾಡಲು ಆಗಲಿಲ್ಲ. ಇಲ್ಲಿನ ಸರ್ಕಾರ ಅದಕ್ಕೆ ಅನುಕೂಲ ಮಾಡಿಕೊಡಲಿಲ್ಲ. ಕೇಂದ್ರ ಸರ್ಕಾರ ಕೂಡ ಈ ದಿಸೆಯಲ್ಲಿ ಹಿಂದೆ ಬಿದ್ದಿದೆ

ಎಂದರೆ ತಪ್ಪಾಗಲಿಕ್ಕಿಲ್ಲ. ರೈಲ್ವೇ ಯೋಜನೆಗಳ ಬಗ್ಗೆ ನಮ್ಮ ಸರ್ಕಾರ ಇತ್ತೀಚೆಗೆ ಒಂದು ಒಡಂಬಡಿಕೆಯನ್ನು ಮಾಡಿಕೊಂಡಿದೆ. ಗದಗ-ಬಿಜಾಪುರ, ಹುಬ್ಬಳ್ಳಿ-ಅಂಕೋಲಾ, ಹಾಸನ-ಮಂಗಳೂರು ಯೋಜನೆಗಳ ಕುರಿತು ರೈಲ್ವೆ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಂಡು ಬರುವ ಮೂರ್ನಾಲ್ಕು ವರ್ಷಗಳಲ್ಲಿ ಅದನ್ನು ಕಾರ್ಯಗತ ಮಾಡಬೇಕು. ಅದನ್ನು ಶ್ಲಾಘನೇ ಮಾಡುತ್ತೇನೆ. ಆದರೆ ಒಂದು ಚಿಂತನೆ ಬೇಕಾಗಿದೆ. ಮೂಲಭೂತ ಸೌಕರ್ಯ ನೀಡಲು ರೈಲ್ವೆ ಒಪ್ಪಂದ ಮಾಡಿಕೊಂಡಿದ್ದರೂ ಮುಂಗಡ ಪತ್ರದಲ್ಲಿ ಅದಕ್ಕಾಗಿ ಕೇವಲ ಮೂರು ಕೋಟಿ ರೂ. ಈಕ್ವಿಟಿಶೇರ್ ಎಂದು ಇಟ್ಟಿದೆ. ಇದು ಸಾಲದು, ಏಕೆಂದರೆ ಗದಗ-ಬಿಜಾಪುರ ಮಾರ್ಗಕ್ಕೆ ಕೇಂದ್ರ ಸರ್ಕಾರ ತನ್ನ ಬಜೆಟ್‌ನಲ್ಲಿ 10 ಕೋಟಿ ರೂ ತೆಗೆದಿಟ್ಟಿದೆ. ಒಡಂಬಡಿಕೆಯಂತೆ ಕೇಂದ್ರ ಸರ್ಕಾರ ಶೇಕಡ 26, ರಾಜ್ಯ ಸರ್ಕಾರ ಶೇಕಡ 26 ಕೊಟ್ಟು ಆಮೇಲೆ ಈಕ್ವಿಟಿ ಶೇರು ಬಂಡವಾಳವನ್ನು ವಿವಿಧ ಬ್ಯಾಂಕ್‌ಗಳಿಂದ ಸಂಗ್ರಹಿಸಬೇಕು, ಆದ್ದರಿಂದ ಕೇಂದ್ರ 10 ಕೋಟಿ ರೂ. ಕೊಟ್ಟಿರುವಾಗ ರಾಜ್ಯವೂ ಸಹ 10 ಕೋಟಿ ರೂ. ತೆಗೆದಿಡಬೇಕು, ಇನ್ನೂ 25 ಕೋಟಿ ರೂ. ಬೇಕಾಗಬಹುದು, ಅದನ್ನು ಅನೇಕ ಸಹಕಾರ ಬ್ಯಾಂಕುಗಳು ಕೊಡಲು ಸಿದ್ಧವಿವೆ. ಬಿಜಾಪುರದ ಸಿದ್ದೇಶ್ವರ ಬ್ಯಾಂಕಿನ ಚೇರ್ಮನ್‌ರು ಹೇಳುತ್ತಾರೆ, ನಾವು 5 ಕೋಟಿ ರೂ. ಶೇರ್ ತೆಗೆದುಕೊಳ್ಳಲು ತಯಾರಿದ್ದೇವೆ, ನಮ್ಮನ್ನು ಸಂಪರ್ಕಿಸಲಿ; ಬಾಗಲಕೋಟೆಯ ಬಸವೇಶ್ವರ ಬ್ಯಾಂಕ್‌ನವರೂ ಮುಂದೆ ಬರುತ್ತಿದ್ದಾರೆ. ಆ ಭಾಗದಲ್ಲಿರುವ ಅನೇಕ ಸಹಕಾರಿ ಬ್ಯಾಂಕ್‌ಗಳು ತಮ್ಮ ಬ್ಯಾಂಕಿನ ಶೇರನ್ನು ಈ ಯೋಜನೆಯಲ್ಲಿ ತೊಡಗಿಸಲು ತಯಾರಿವೆ, ಇದಕ್ಕಾಗಿ ಸರ್ಕಾರ ಇದುವರೆಗೂ ಏನು ಕಾರ್ಯಕ್ರಮ ಹಾಕಿಕೊಂಡಿಲ್ಲ. ಕೇವಲ ಒಂದು ಅಗ್ರಿಮೆಂಟ್ ಮಾಡಿಕೊಂಡಿದ್ದು ಬಿಟ್ಟರೆ ಈ ಸರ್ಕಾರ ಇದರಲ್ಲಿ ವಿಫಲವಾಗಿದೆಯೆಂದು ಟೀಕಿಸುತ್ತಾ, ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ; ರಾಜ್ಯ ಸರ್ಕಾರ ತೀವ್ರವಾಗಿ ಇದರ ಬಗ್ಗೆ ನಿಗಾವಹಿಸಬೇಕು ತನ್ನ ಪಾಲಿನ 10 ಕೋಟಿ ರೂ.ಯನ್ನು ಈ ಬಜೆಟ್‌ನಲ್ಲಿ ಇಡುವುದರ ಜೊತೆಗೆ ಇನ್ನೂ 42 ಪರ್ಸೆಂಟ್ ಏನು ವ್ಯವಸ್ಥೆ ಮಾಡಬೇಕಾಗಿದೆ ಅದಕ್ಕೆ ತಕ್ಷಣ ಕಾರ್ಯಕ್ರಮ ತೆಗೆದುಕೊಂಡು ಆ ಭಾಗದ ಜನತೆಯ ಪ್ರಯಾಣಕ್ಕೆ ಅನುಕೂಲ ಮಾಡಿಕೊಡಬೇಕು.

ಅಧ್ಯಕ್ಷರೇ, ಇನ್ನೊಂದು ವಿಚಾರ, ನಮ್ಮ ಸಾರಿಗೆ ಸಚಿವರು ಇದ್ದಾರೆ, ಸಾರಿಗೆ ಇಲಾಖೆಯಿಂದ ನಮ್ಮ ಭಾಗಕ್ಕೆ ಅತ್ಯಂತ ಅಸಡ್ಡೆಯಾಗಿದೆ. ಒಂದು ಹೇಳಬೇಕೆಂದರೆ ನಮ್ಮ ಭಾಗದ ರಸ್ತೆಗಳು ಸರಿಯಾಗಿದ್ದರೂ ಬಸ್‌ಗಳು ವಿಫುಲವಾಗಿಲ್ಲ, ಡ್ರೈವರ್ ಕಂಡಕ್ಟರ್‌ಗಳ ನೇಮಕಾತಿ ಮಾಡಿಲ್ಲವೆಂಬ ಆಪಾದನೆ ಮೇಲಿಂದ ಮೇಲೆ ಬರುತ್ತಾ ಇದೆ. ಯಾವುದಾದರೂ ಬಸ್ ಬೇಕು ಅಂದರೆ ಡ್ರೈವರ್ಲ್ರೀ ಕಂಡಕ್ಟರಿಲ್ರೀ, ನೇಮಕ ಮಾಡಿಕೊಳ್ಳಿ ಎನ್ನುತ್ತಾರೆ. ದಯವಿಟ್ಟು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ; ಡ್ರೈವರ್ ಕಂಡಕ್ಟರ್‌ಗಳ ನೇಮಕಾತಿಗೆ ತಕ್ಷಣ ತಾವು ಆದೇಶ ಕೊಡಬೇಕು. ಇದರ ಜೊತೆಗೆ ಬಾಗಲಕೋಟೆಯಿಂದ

ಬೆಂಗಳೂರಿಗೆ 190, 230 ಮತ್ತು 270 ಎಂದು ಮೂರು ವರ್ಗದ ಬಸ್‌ಟಿಕೆಟ್ ದರ ಇಟ್ಟಿದ್ದಾರೆ. ಯಾರೂ ಬರುತ್ತಿಲ್ಲ. ಕೇವಲ ಶಾಸಕರಿಗೆ ಮಾತ್ರ ಒಂದು ಬಸ್ ಎಂಬ ದುರ್ದೈವ ಕಾಣುತ್ತಿದೆ. ಕೇವಲ ನಾವು ಮೂರ್ನಾಲ್ಕು ಶಾಸಕರು ಬಸ್‌ನಲ್ಲಿ ಕುಳಿತಾಗ ಇನ್ನುಳಿದ ಪ್ರಯಾಣಿಕರು ಯಾರೂ ಇಲ್ಲವಲ್ಲಪ್ಪಾ ಎಂಬ ದು:ಖ ನಮಗೆ ಆಗುತ್ತಿದೆ. ಆದಕ್ಕೆ ಒಂದೇ ರೇಟನ್ನು ಮಾಡಬೇಕು. ಬಾಗಲಕೋಟೆಯಿಂದ ಎಂಟು ಹತ್ತು ಬಸ್‌ಗಳನ್ನು ಬೇರೆ ಬೇರೆ ಕಂಪನಿಯವರು ಓಡಿಸುತ್ತಿದ್ದಾರೆ. ಕೇವಲ 190 ರೂ. ಮತ್ತು 170 ರೂ.ಗಳಲ್ಲಿ ಬೆಂಗಳೂರಿಗೆ ತಂದುಬಿಡುತ್ತಾರೆ. ಕೆ.ಎಸ್.ಆರ್.ಟಿ.ಸಿ.ಯವರು 200-270 ರೂ. ಮಾಡಿದರೆ ಯಾರೂ ಬರುತ್ತಿಲ್ಲ. ಅಲ್ಲಿ ಭರವಸೆ ಕೂಡ ಹೊರಟು ಹೋಗುತ್ತದೆ. ಅಲ್ಲಿ ಇವತ್ತು ಅಪನಂಬಿಕೆ ಬರುತ್ತದೆ. ದಯವಿಟ್ಟು ತಾವು ಒಂದೇ ಫ್ಲ್ಯಾಟ್ ರೇಟನ್ನು ಮಾಡಬೇಕು. ಅಲ್ಲಿದ ಬರುವ ಪ್ರಯಾಣಿಕರನ್ನು ಆಕರ್ಷಿಸಲು ಒಂದು ಕೆಲಸವನ್ನು ತಾವು ಮಾಡಬೇಕೆಂದು ಹೇಳುತ್ತೇನೆ. ಇನ್ನು ಅನೇಕ ವಿಚಾರಗಳನ್ನು ಹೇಳಬೇಕಾಗಿತ್ತು. ತಾವು ಇಷ್ಟೊತ್ತಾದರೂ ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಕರಡಿ ಸಂಗಣ್ಣ ಅಮರಪ್ಪ :— ಮಾನ್ಯ ಉಪಾಧ್ಯಕ್ಷರೇ, ಹಿಂದೆ ಮೈಜ್ ಅನ್ನು ಖರೀದಿ ಮಾಡುವ ಸಂದರ್ಭದಲ್ಲಿ ಅಲ್ಲಿ ರೈತರ ಮೇಲೆ ಕೇಸ್ ಆಗಿತ್ತು. ಅದನ್ನು ವಾಪಸ್ ತೆಗೆದುಕೊಳ್ಳಿ ಎಂದು ಆ ಸಂದರ್ಭದಲ್ಲಿ ಒತ್ತಾಯವನ್ನು ಮಾಡಿದ್ದೆವು. ಮಾನ್ಯ ಖರ್ಗೆ ಸಾಹೇಬರು ಅದನ್ನು ವಾಪಸ್ ತೆಗೆದುಕೊಳ್ಳುವ ಕೆಲಸವನ್ನು ಮಾಡುತ್ತೀರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ಗೃಹ ಸಚಿವರು) :— ಮಾನ್ಯ ಉಪಾಧ್ಯಕ್ಷರೇ, ಪರಿಶೀಲನೆ ಮಾಡಿ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಅಲ್ಲಿಂದ ರಿಪೋರ್ಟ್ ಬಂದು ಆಮೇಲೆ ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್‌ನವರಿಂದ ಒಪೀನಿಯನನ್ನು ತೆಗೆದುಕೊಂಡು ತದನಂತರ ಅದನ್ನು ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು :— ಮಾನ್ಯ ಗುರುಸ್ವಾಮಿಯವರೇ, ತಾವು ಆರೂವರೆಗೆ ಮುಗಿಸಬೇಕಾಗುತ್ತದೆ.

+ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) :— ಮಾನ್ಯ ಉಪಾಧ್ಯಕ್ಷರೇ, ನನಗಂತೂ ಒಂದು ವಿಚಾರದಲ್ಲಿ ಬಹಳ ನೋವಾಗಿದೆ. ನಮ್ಮ ಹಳ್ಳಿಯಲ್ಲಿ ಒಂದು ಗಾದೆಯನ್ನು ಹೇಳುತ್ತಾರೆ. "ಅತ್ತು ಕರೆದು ಔತಣ ಮಾಡಿಸಿಕೊಂಡರು" ಎಂದು ಹೇಳಿ ಮಾನ್ಯ ಸಿಂಧ್ಯಾರವರೂ ಕೂಡ ನನ್ನ ವಿಚಾರವನ್ನು ಮಂಡಿಸುವುದಕ್ಕೂ ಮೊದಲು ಸನ್ಮಾನ್ಯ ಅಧ್ಯಕ್ಷರು ಏನು ಹೊಸದಾಗಿ ಈ ಒಂದು ಸದನಕ್ಕೆ ಆಯ್ಕೆಯಾಗಿ ಬಂದಿದ್ದಾರೆ, ಅವರಲ್ಲೂ ಕೂಡ ಪ್ರತಿಭೆ ಇದೆ. ಸಾಮರ್ಥ್ಯ ಇದೆ. ಆ ಸಾಮರ್ಥ್ಯ ಮತ್ತು ಪ್ರತಿಭೆಗಳನ್ನು ಈ ಸಮಾಜಕ್ಕೆ ಕೊಡುಗೆಯಾಗಿ ಕೊಡಿಸಬೇಕಾದರೆ ಗುರುತಿಸಬೇಕಾದ

ಜವಾಬ್ದಾರಿ ತಮ್ಮ ಪೀಠಕ್ಕೆ ಇದೆ ಎನ್ನುವ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ನೆನಪಿಸುತ್ತಾ ಬಹುಶ: ಹಿಂದೆ ಇದ್ದಂಥ ಶಾಸಕರು ಪ್ರತಿದಿನ ನಮ್ಮ ಸಿಂಧ್ಯಾರವರು ಹೇಳಿದ ರೀತಿಯಲ್ಲಿ ಪ್ರತಿದಿನ ಸುದ್ದಿ. ಆರು ತಿಂಗಳಿಗೋ ಮೂರು ತಿಂಗಳಿಗೋ ಒಂದು ಸುದ್ದಿ ಬರಲಿಲ್ಲವೆಂದರೆ ನಾವು ಇಲ್ಲಿ ಬಂದು ಸಾರ್ಥಕವಾದರೂ ಏನು? ಅಥವಾ ನಮ್ಮ ಜನರು ನಮಗೆ ಮನ್ನಣೆಯನ್ನು ಕೊಟ್ಟು ಮಾಡಿದ ಸಾರ್ಥಕವೇನು ಎಂಬುದನ್ನು ಚಿಂತನೆ ಮಾಡಬೇಕಾದ ವಿಚಾರ. ಈ ವಿಚಾರವನ್ನು ತಮಗೆ ಬಿಡುತ್ತೇನೆ. ಈಗ ನಾನು ಒಂದು ಗಂಟೆಗಳ ಕಾಲ ಮಾತನಾಡುವಷ್ಟು ಮೆಟೀರಿಯಲ್ಸ್ ವಿಷಯ ಸಮಿತಿಗಳು ಒದಗಿಸಿರತಕ್ಕ ವಿಚಾರಗಳನ್ನೂ ಕೂಡ ಅಧ್ಯಯನ ಮಾಡಿದ್ದೇನೆ ಮತ್ತು ಮಾತನಾಡತಕ್ಕ ಶಕ್ತಿಯೂ ಕೂಡ ಇದೆ. ಆದರೆ ತಾವು ನಮಗೆ ಟೈಮ್ ರಿಸ್ಟ್ರಿಕ್ಷನನ್ನು ಹಾಕಿದ್ದೀರಿ.

ಉಪಾಧ್ಯಕ್ಷರು :— ಹೊಸಬರಿಗೆ ಹೆಚ್ಚು ಅವಕಾಶ ಸಿಗಬೇಕಾದರೆ ಹಿರಿಯ ಸದಸ್ಯರುಗಳು ಮಾಜಿ ಸಚಿವರು ನಿಮಗೆ ಸಹಕಾರವನ್ನು ಕೊಡಬೇಕಾಗುತ್ತದೆ. ಅವರು ಗಂಟೆಗಟ್ಟಲೆ ಮಾತನಾಡಿದರೆ ನಿಮಗೆಲ್ಲಿ ಅವಕಾಶ ಸಿಗುತ್ತದೆ? ಅನಿವಾರ್ಯವಾಗಿ ಅವಕಾಶ ಸಿಗುವುದಿಲ್ಲ. ಆದಕ್ಕಾಗಿ ಅವರು ಈಗ ನಿರ್ಬಂಧನೆಯನ್ನು ತಮ್ಮಷ್ಟಕ್ಕೇ ತಾವೇ ಹಾಕಿಕೊಳ್ಳಬೇಕಾಗುತ್ತದೆ. ಅರ್ಧ ಗಂಟೆಗಿಂತ ಹೆಚ್ಚು ನಾವು ಮಾತನಾಡುವುದಿಲ್ಲವೆಂದು. ಗಂಟೆಗಟ್ಟಲೆ ಮಾತನಾಡಿದರೆ ಹೊಸಬರಿಗೆ ಅವಕಾಶ ಸಿಗುವುದಿಲ್ಲ. ಇರುವ ಸಮಯದಲ್ಲಿ ನಾವು ಅವಕಾಶ ಕೊಡಬೇಕಾಗುತ್ತದೆ. ನಾವಂತೂ ಸಾಕಷ್ಟು ಕೊಟ್ಟಿದ್ದೇವೆ.

ಶ್ರೀ ಸಿ. ಗುರುಸ್ವಾಮಿ :— ನನ್ನ ಮನಸ್ಸಿನಲ್ಲಿರುವುದನ್ನು ಸಭೆಯ ಮುಂದೆ ಮಂಡಿಸಿದ್ದೇನೆ. ಈಗ ತಾವು ಸಮಯವನ್ನು ಕೂಡ ನಿಗದಿ ಮಾಡಿರುವುದರಿಂದ ನಾನು ಒಂದೆರಡು ಇಲಾಖೆಗಳ ಬಗ್ಗೆ ಮಾತ್ರ ಈ ಒಂದು ಸದನದಲ್ಲಿ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಇವತ್ತು ಇಲ್ಲಿ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಮಾನ್ಯ ಎಸ್.ಎಂ. ಕೃಷ್ಣಾರವರ ನೇತೃತ್ವದಲ್ಲಿ ಸುಮಾರು 150 ಸದಸ್ಯರುಗಳ ಬೆಂಬಲವನ್ನು ಹೊಂದಿ ಆಡಳಿತವನ್ನು ನಡೆಸುತ್ತಿದೆ. ನಾನು ಏಕೆ ಈ ವಿಚಾರವನ್ನು ಇಲ್ಲಿ ಮಾತನಾಡುತ್ತಿದ್ದೇನೆ ಎಂದರೆ ಇಲ್ಲಿ ವಿಷಯ ಸಮಿತಿಗಳನ್ನೂ ಕೂಡ ರಚನೆ ಮಾಡಿ ಇಲ್ಲಿ ಇಲಾಖಾ ಬೇಡಿಕೆಗಳ ಬಗ್ಗೆಯೂ ಕೂಡ ವರದಿಯನ್ನು ಕೊಟ್ಟಿದ್ದಾರೆ, ಏನೇನು ಮಾಡಬೇಕು, ಏನೇನು ಮಾಡಬಾರದು ಎಂದು. ಮತ್ತೆ ಇಲ್ಲಿ ವಿರೋಧ ಪಕ್ಷದ ಸದಸ್ಯರುಗಳೂ ಕೂಡ, ಅವರವರ ಅಭಿಪ್ರಾಯಗಳನ್ನು ಕೊಡತಕ್ಕದ್ದನ್ನು ಕೂಡ ಮಾಡುತ್ತಿದ್ದಾರೆ. ಇಲ್ಲಿ ಎರಡು ರೀತಿಯ ದಾರಿಗಳು ಈ ಸರ್ಕಾರಕ್ಕೆ ಇರುವುದನ್ನು ನಾವು ಕಾಣುತ್ತೇವೆ. ಒಂದು, ಯಾವ ಒಂದು ವಿಷಯಸಮಿತಿಯನ್ನೂ ಗಣನೆಗೆ ತೆಗೆದುಕೊಳ್ಳದೆ, ವರದಿಯನ್ನೂ ಗಣನೆಗೆ ತೆಗೆದುಕೊಳ್ಳದೇ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ವಿರೋಧಪಕ್ಷದ ಒಂದು ಏನು ಮಾಹಿತಿಗಳನ್ನು ತಮ್ಮ ನಿರ್ಧಾರಗಳನ್ನು ಹೇಳುವುದನ್ನು

ಕೇಳತಕ್ಕದ್ದು ಅದೂ ಮಾಡಬಹುದು. ಅದಿಲ್ಲದಿದ್ದರೆ ಬಹುಶ: ನಾವು 150 ಜನರಿದ್ದೇವೆ, ಇವರನ್ನೇನು ಕೇಳಬೇಕು, ಎನ್ನುವ ಧೋರಣೆಯನ್ನು ಇಟ್ಟುಕೊಂಡು ಕೆಲಸ ಮಾಡುವ ರೀತಿಯಲ್ಲೂ ಕೂಡ ಮಾಡಬಹುದು. ಅದು ಅವರಿಗೆ ಬಿಟ್ಟಂಥ ವಿಚಾರ. ಇದರಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎನ್ನುವುದು ಮಾನ್ಯ ಎಸ್.ಎಂ. ಕೃಷ್ಣಾರವರ ಒಂದು ಸರ್ಕಾರಕ್ಕೆ ಬಿಟ್ಟಂಥ ವಿಚಾರ. ನಾವು ಈ ಸದನದಲ್ಲಿ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇವೆ. ಮೊದಲನೆಯದಾಗಿ ನಾನು ಇಲ್ಲಿ ಪ್ರಸ್ತಾಪ ಮಾಡತಕ್ಕದ್ದು ಈ ಕಂದಾಯ ಇಲಾಖೆಗೆ ಸಂಬಂಧಪಟ್ಟ ಒಂದು ವಿಚಾರ. ನನಗನ್ನಿಸುತ್ತದೆ, ಈ ಏಳು ಹೊಸ ಜಿಲ್ಲೆಗಳನ್ನು ಮಾನ್ಯ ಜೆ.ಹೆಚ್ ಪಟೇಲ್‌ರವರ ಸರ್ಕಾರ ಇದ್ದಂಥ ಕಾಲದಲ್ಲಿ ರಚನೆ ಮಾಡಿದರು. ನನಗಾದರೂ ಅನಿಸುತ್ತಿದೆ, ಈ ಒಂದು ಚಾಮರಾಜನಗರ ಜಿಲ್ಲೆ ಹೊಸ ಜಿಲ್ಲೆಯಾಗಿ ಏಕಾದರೂ ರೂಪುಗೊಂಡಿತೋ, ಅದು ಮೈಸೂರಿನಲ್ಲಿಯೇ ಇದ್ದರೆ ಬಹಳ ಚೆನ್ನಾಗಿತ್ತೇನೋ ಎನ್ನುವ ಭಾವನೆ ನನಗಾದರೂ ಬರುತ್ತಿದೆ. ಕಾರಣವಿಷ್ಟೆ. ಸುಮಾರು ನಾಲ್ಕು ವರ್ಷಗಳು ಕಳೆದರೂ ಸಹ ಹೊಸ ಜಿಲ್ಲೆಗಳಾಗಿ ಅದರಲ್ಲೂ ಕೂಡ ನಮ್ಮ ಚಾಮರಾಜನಗರ ಜಿಲ್ಲೆಗೆ ಯಾವುದೇ ಒಂದು ಇನ್‌ಫ್ರಾಸ್ಟ್ರಕ್ಚರ್‌ನ್ನು ಕೊಡಲಿಲ್ಲ. ಬಹಳ ನೋವಾಗುತ್ತದೆ. ಯಾವುದೇ ಒಂದು ಕಛೇರಿಗಳನ್ನು ಪ್ರಾರಂಭ ಮಾಡುವುದಕ್ಕೆ ಜಿಲ್ಲಾ ಸಂಕೀರ್ಣವನ್ನು ಮಾಡತಕ್ಕದ್ದಕ್ಕೆ ಹಣ ಬಿಡುಗಡೆಯಾಗಲಿಲ್ಲ. ಕಟ್ಟಡಗಳು ಬರತಕ್ಕದು ಆಗಲಿಲ್ಲ. ಬರೀ ಅಧಿಕಾರಿಗಳು ಬಂದಿದ್ದಾರೆ. ಹಿಂದೆ ತಾಲ್ಲೂಕು ಯಾವ ಮಟ್ಟದಲ್ಲಿತ್ತೋ ಅದೇ ಮಟ್ಟದಲ್ಲಿ ಇವತ್ತಿಗೂ ಕೂಡ ಜಿಲ್ಲೆಯಾಗಿ ನಾಲ್ಕು ವರ್ಷವಾದರೂ ಹಾಗೇಯೇ ಮುಂದುವರಿಯುತ್ತಿದೆ. ಅದಕ್ಕಾಗಿ ನಾನು ಮಾನ್ಯ ಕೃಷ್ಣಾರವರ ಸರ್ಕಾರಕ್ಕೆ ಈ ಸಂದರ್ಭದಲ್ಲಿ ನಾನು ಮನವಿ ಮಾಡತಕ್ಕದ್ದು ಏನೆಂದರೆ ತಾವು ಈ ಬಜೆಟ್‌ನಲ್ಲಿ ಹೊಸ ಜಿಲ್ಲೆಗಳಿಗೆ ಒತ್ತನ್ನು ಕೊಡತಕ್ಕ ಪ್ರಯತ್ನವನ್ನು ತಾವು ಮಾಡಬೇಕು. ತಮಗೆ ಒಳ್ಳೆಯ ಹೆಸರು ಬರುತ್ತದೆ. ಬಹುಶ: ನಾನು ಇಲ್ಲಿ ಹೇಳತಕ್ಕದ್ದು ಎಸ್.ಎಂ. ಕೃಷ್ಣಾ ಅವರು, ಅವರ ಮಂತ್ರಿ ಮಂಡಲ ಎಷ್ಟು ವರ್ಷಗಳ ಕಾಲ ಈ ಕರ್ನಾಟಕ ರಾಜ್ಯವನ್ನು ಆಳಿತೋ ಎನ್ನುವುದು ಬಹಳ ಮುಖ್ಯವಲ್ಲ. ಎಷ್ಟು ವರ್ಷಗಳ ಕಾಲ ಆಳಿತೋ ಆಳುವಂಥ ಕಾಲದಲ್ಲಿ ಯಾವ ರೀತಿ ಜನರಿಗೆ ಕೆಲಸವನ್ನು ಮಾಡಿತು, ಜನರಿಗೆ ಹೇಗೆ ಸ್ಪಂದಿಸಿತು, ಅದು ಮುಖ್ಯ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಮಾನ್ಯ ಉಪಾಧ್ಯಕ್ಷರೇ, ಅದಕ್ಕಾಗಿ ನಿಮ್ಮ ಜಿಲ್ಲೆಗೆ ಹೊಸದಾಗಿ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ನಮ್ಮ ಪೋಲೀಸ್ ಇಲಾಖೆಯಿಂದ ಕೊಡುತ್ತಿದ್ದೇವೆ. ಎಸ್‌ಪಿ ಆಫೀಸ್ ಕಟ್ಟಿಸುವುದಕ್ಕೆ ಡಿವೈಎಸ್‌ಪಿ ಆಫೀಸ್ ಕಟ್ಟಿಸುವುದಕ್ಕೆ. ಲೀಡರ್‌ಗಳು, ಮಂತ್ರಿಗಳು ಬರುವುದಿಲ್ಲವೆನ್ನುತ್ತೀರಿ. ಏಕೋ ನಿಮ್ಮೂರಿಗೆ ಮತ್ತು ನಮ್ಮ ಮುಂಡರಗಿಗೆ ಹೋಗುವುದಿಲ್ಲ. ಸಿಂಧ್ಯಾರವರ ಕಾಲದಲ್ಲಿ ಕೂಡ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಜೆ.ಹೆಚ್. ಪಟೇಲರು ಕೂಡ

ಹೋಗಲು ಹಿಂಜರಿದು ಎಂ.ಎಂ. ಹಿಲ್‌ನಿಂದಲೇ ವಾಪಸ್ ಬಂದರು. ಅದಕ್ಕೆ ಏನಾದರೂ ಮಾಡಿಸಿ ನಿಮ್ಮೂರಿಗೆ ಬರುವ ಹಾಗಿ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಉಪಾಧ್ಯಕ್ಷರೇ, ನೀವು ಎರಡೂ ಕಡೆಗೂ ಬನ್ನಿ. ನೀವು ಮುಖ್ಯಮಂತ್ರಿಯಾಗುತ್ತೀರಿ. ಗೃಹಮಂತ್ರಿಗಳು ನೀವು ಚಾಮರಾಜನಗರ ಮತ್ತು ಮುಂಡರಗಿಗೆ ಬನ್ನಿ. ಬೇಕಾದರೆ ಇವತ್ತು ಗಾಂಧಿಫೋಟೋ ಮುಂದೆ ಹೇಳುತ್ತೇನೆ, ನೀವು ಮುಂದೆ ಮುಖ್ಯಮಂತ್ರಿಯಾಗುತ್ತೀರಿ.

ಶ್ರೀ ಸಿ. ಗುರುಸ್ವಾಮಿ :— ಧನ್ಯವಾದಗಳು. ಮಾನ್ಯ ಖರ್ಗೆಯವರು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ. ಇನ್ನೂ ಕೂಡ ಅದು ನಮಗೆ ಬಂದು ತಲುಪಿಲ್ಲ. ಬರುತ್ತದೆ ಎನ್ನುವ ನಂಬಿಕೆ ನನಗಿದೆ. ಅಲ್ಲಿ ಯಾವುದೇ ಹಣವನ್ನು ಕೊಟ್ಟಿಲ್ಲ. ಯಾವುದೇ ಬಿಲ್ಡಿಂಗ್ ಕೂಡ ಬಂದಿಲ್ಲ. ಇದುವರೆಗೂ ಪ್ರಾರಂಭವಾಗಿಲ್ಲ. ಇನ್ನು ಒಂದು ಹೊಸ ಜಿಲ್ಲೆಯಲ್ಲಿ ತಮಗೆ ಗೊತ್ತಿರುವ ರೀತಿಯಲ್ಲಿ ಜಿಲ್ಲೆಯನ್ನು ಮಾಡುವುದು ದೊಡ್ಡದಲ್ಲ. ಅದಕ್ಕೇನು ಸವಲತ್ತುಗಳು ಬೇಕೋ ಅವುಗಳನ್ನು ಇಮ್ಮೀಡಿಯೇಟ್ ಆಗಿ ಒದಗಿಸಬೇಕಾಗುತ್ತದೆ. ಯಾವಾಗಲೂ 10 ವರ್ಷಕ್ಕೋ 15 ವರ್ಷಕ್ಕೋ ಒದಗಿಸತಕ್ಕದ್ದಲ್ಲ. ಇಮ್ಮೀಡಿಯೇಟ್ ಆಗಿ ಒದಗಿಸುವ ಕೆಲಸವಾಗಬೇಕು. ನಮ್ಮಲ್ಲಿ ಕೋರ್ಟ್ ಕೂಡ ಓಪನ್ ಆಗಿಲ್ಲ. ಅಸಿಸ್ಟೆಂಟ್ ಕಮೀಷನರ್ ಆಫೀಸ್ ಜಿಲ್ಲಾ ಕೇಂದ್ರ ಚಾಮರಾಜನಗರವಾಗಿದ್ದರೂ ಸಹ ನಾವು ಇವತ್ತು ಕೊಳ್ಳೇಗಾಲಕ್ಕೆ ಹೋಗಬೇಕಾಗಿದೆ. ಇನ್ನೂ ಕೂಡ ತಾಲ್ಲೂಕು ಲೆವೆಲ್ ಇದ್ದಂಥ ಜ್ಯೂನಿಯರ್ ಡಿವಿಜನ್ ಕೋರ್ಟ್ ಮಾತ್ರ ಇರತಕ್ಕಂಥದ್ದು ಸೀನಿಯರ್ ಡಿವಿಜನ್ ಕೋರ್ಟ್ ಆಗಲಿಲ್ಲ. ಡಿಸ್ಟ್ರಿಕ್ಟ್ ಕೋರ್ಟ್ ಆಗಲಿಲ್ಲ. ಸೆಷನ್ಸ್ ಕೋರ್ಟ್ ಆಗಲಿಲ್ಲ. ಇದೇ ರೀತಿ ಯಾವುದೇ ವಿಧವಾದ ಡೆವಲಪ್‌ಮೆಂಟ್ಸ್ ಕಿಂಚಿತ್ತೂ ಆಗಲಿಲ್ಲ. ಆದರಿಂದ ನಾನು ಬಹಳ ನೊಂದು ಹೇಳುತ್ತಿರುವುದು. ಮಾನ್ಯ ಮುಖ್ಯಮಂತ್ರಿಗಳವರು ಈ ಒಂದು ಬಜೆಟ್‌ನಲ್ಲಿ ಹೊಸ ಜಿಲ್ಲೆಗಳಿಗೆ ಅದರಲ್ಲೂ ಹಿಂದುಳಿದ ಜಿಲ್ಲೆಗಳಿಗೆ ಹೆಚ್ಚು ಒತ್ತನ್ನು, ಹೆಚ್ಚು ಬಜೆಟನ್ನು ಕೊಡತಕ್ಕ ಕೆಲಸವನ್ನು ತಾವು ಮಾಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) :— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಜಿಲ್ಲೆಗಳಿಗೂ ಪ್ರಗತಿಪರಿಶೀಲನಾ ಸಭೆಗಳನ್ನು ನಡೆಸುತ್ತಾ ಬರುತ್ತಿದ್ದಾರೆ. ಹೆಚ್ಚುಕಡಿಮೆ ರಾಜ್ಯದ ಬಹುತೇಕ ಜಿಲ್ಲೆಗಳು ಮುಗಿದಿವೆ. ಚಾಮರಾಜನಗರ ಜಿಲ್ಲೆಗೂ ಬಂದು ಅಲ್ಲಿ ಪ್ರಗತಿ ಪರಿಶೀಲನೆಯನ್ನು ಮಾಡಬೇಕು.

ಶ್ರೀ ಸಿ. ಗುರುಸ್ವಾಮಿ :— ಮಾನ್ಯ ಉಪಾಧ್ಯಕ್ಷರೇ, ಇನ್ನೊಂದು ನಾನು ಹೇಳುವುದೇನೆಂದರೆ ಬಹುಶ: ಮಂತ್ರಿಮಂಡಲ ಎಂದರೆ ಒಬ್ಬರು ಇಬ್ಬರು ಕೆಟ್ಟವರು

ಇದ್ದೇ ಇರುತ್ತಾರೆ. ಅಥವಾ ಅಧಿಕಾರಿಗಳಾದರೂ ಒಬ್ಬರು ಇಬ್ಬರೂ ಕೆಟ್ಟವರು ಇದ್ದೇ ಇರುತ್ತಾರೆ. ಎಲ್ಲರೂ ಶುದ್ಧವಾಗಿರಲಿಕ್ಕೆ ಸಾಧ್ಯವಾಗುವುದಿಲ್ಲ. ಹೊಸ ಜಿಲ್ಲೆಗಳಿಗೆ ಡೈರೆಕ್ಟ್ ಐಪಿಎಸ್ ಆಗಿರುವ ಯಂಗ್ ಅಂಡ್ ಎನರ್ಜಿಟಿಕ್ ಐಎಎಸ್ ಆಫೀಸರ್‌ಗಳನ್ನು ಡಿಸಿ ಯಾಗೋ ಅಥವಾ ಎಸ್‌ಪಿಯಾಗಿ ಹಾಕಬೇಕು. ನಮ್ಮ ಚಾಮರಾಜನಗರದಲ್ಲಿ ಚರಣ್ ರೆಡ್ಡಿ ಎನ್ನುವ ಎಸ್‌ಪಿ ಇದ್ದರು. ಅವರ ಹೆಸರನ್ನು ಮತ್ತು ಅಣ್ಣೇಗೌಡರು ಹೇಳಲೇಬೇಕಾಗುತ್ತದೆ. ಒಳ್ಳೆಯ ದಕ್ಷ ಅಧಿಕಾರಿ. ಅವರ ಕಾಲದಲ್ಲಿ ಪೋಲೀಸ್ ಇಲಾಖೆಗೆ ನೇಮಕಾತಿಯನ್ನು ಮಾಡಿದರು ಇವತ್ತಿಗೂ ಕೂಡ ಆ ಹುಡುಗರನ್ನು ನೋಡುತ್ತಿದ್ದರೆ ನಿಜವಾಗಿಯೂ ಪೋಲೀಸ್ ಇಲಾಖೆಗೆ ಹೇಳಿ ಮಾಡಿಸಿದಂತೆ ಇದ್ದಾರೆ. ಅಂಥ ಸಿಬ್ಬಂದಿಯನ್ನು ಅವರು ನೇಮಕ ಮಾಡಿದರು. ನಾನು ಬಹಳ ಖುಷಿಪಡುತ್ತೇನೆ. ಆ ತರಹದ ದಕ್ಷ ಅಧಿಕಾರಿಗಳನ್ನು ತಾವು ಹಾಕಿದಾಗ ಹೊಸ ಜಿಲ್ಲೆಯ ಅಭಿವೃದ್ಧಿ ಆಗುವಂತಹ ದೃಷ್ಟಿಯಿಂದ ಬಹಳ ಅನುಕೂಲ ಆಗುತ್ತದೆ. ಇದನ್ನೂ ಕೂಡ ತಾವು ಮಾಡಬೇಕಾಗುತ್ತದೆ. ಮತ್ತು ಯೋಜನೆಗಳನ್ನು ರೂಪಿಸತಕ್ಕದ್ದು. ನಿಮ್ಮ ಬಜೆಟ್ ಆಗಲೀ ಅಥವಾ ಇಲಾಖೆಯ ಬೇಡಿಕೆ ಮೇಲೆ ಕೊಟ್ಟಿರತಕ್ಕಂಥ ಕಾರ್ಯಕ್ರಮವೇ ಆಗಲಿ ಅದನ್ನು ರೂಪಿಸಿಕೊಂಡ ಮೇಲೆ ಆ ಒಂದು ವರ್ಷದಲ್ಲಿ ಆ ಕಾರ್ಯಕ್ರಮಕ್ಕೆ ಏನೊಂದು ಸಂಪನ್ಮೂಲ ಬೇಕು, ಹಣ ಬೇಕು, ಅದನ್ನು ಒದಗಿಸಿಕೊಡತಕ್ಕದ್ದು ಆಗಬೇಕು. ಕಳೆದ ಸಾರಿ 15 ರಿಂದ 20 ಪರ್ಸೆಂಟ್ ಹಣ ಕಟ್ ಮಾಡಿದ್ದಾರೆ. ಅದು ನಮ್ಮ ಚಾಮರಾಜನಗರ ಜಿಲ್ಲೆಗೆ 15 ರಿಂದ 20 ಪರ್ಸೆಂಟ್ ಹಣ ಬರಲೇ ಇಲ್ಲ. ಇದು ಆಗಬಾರದು ಎಂದು ನನ್ನ ಒಂದು ಅನಿಸಿಕೆ.

ಇನ್ನು ತೋಟಗಾರಿಕೆ ವಿಚಾರ ಬಂದಾಗ ಈಗಾಗಲೇ ಸುಮಾರು ಜನ ಸದಸ್ಯರುಗಳು ಮಾತನಾಡಿದ್ದಾರೆ. ಈ ನುಸಿರೋಗದ ವಿಚಾರ ಮಾತನಾಡಿದ್ದಾರೆ. ಕಳೆದ ಸಾರಿ ನಾವು ಈ ನುಸಿರೋಗದ ಬಗ್ಗೆ ಸುಮಾರು 2-3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ಬಜೆಟ್‌ನಲ್ಲಿ ಕೂಡ ತೋರಿಸಿದ್ದಾರೆ. ಆದರೆ ಫಲ ಏನು? ಸಾರ್ಥಕ ಏನು? ಇದರ ರಿಸಲ್ಟ್ ಏನು? ಜೀರೋ. ಏಕೆ ಇದು ಹೀಗಾಯಿತು? ವೈಜ್ಞಾನಿಕವಾಗಿ ಏನು ಔಷಧಿ ಕೊಡಬೇಕು ಎನ್ನತಕ್ಕ ಸಂಶೋಧನೆಯನ್ನೂ ಮಾಡದೇ ಸುಮ್ಮನೆ ಯಾವುದೋ ಒಂದು ಏಜೆನ್ಸಿಗೆ ಕೊಟ್ಟು ಔಷಧಿ ಸಿಂಪಡಿಸಿದ ಹಾಗೆ ಮಾಡಿದಾಗ ಸುಮ್ಮನೆ ಸರ್ಕಾರದ ಹಣ, ಸಾರ್ವಜನಿಕರ ಹಣ ಪೋಲಾಗಿರತಕ್ಕದ್ದನ್ನು ನಾವು ಗಮನಿಸುತ್ತೇವೆ. ಈ ವರ್ಷವೂ ಕೂಡ ಸುಮಾರು ಹಣವನ್ನು ಅದಕ್ಕೆ ಇಟ್ಟುಕೊಂಡಿದ್ದೀರಿ. ಸುಮ್ಮನೆ ಇಟ್ಟುಕೊಂಡು ವೇಸ್ಟ್ ಆಗುವುದು ಏಕೆ? ಅದರಿಂದ ರೈತರ ಸಂಕಟ ಇವತ್ತು ಬಹಳ ಇದೆ. ಇವತ್ತು ಎಲ್ಲಾ 17-18 ಜಿಲ್ಲೆಗಳಲ್ಲಿ ಕೂಡ ತೆಂಗು ಬೆಳೆಗಾರರು ಬಹಳ ಕಷ್ಟದಲ್ಲಿದ್ದಾರೆ. ಸುಮಾರು ಜನರು ಇದರ ಬಗ್ಗೆ ಕಾಳಜಿಯನ್ನು ವ್ಯಕ್ತಮಾಡಿದ್ದಾರೆ. ಕಾಂಗ್ರೆಸ್ ಪಕ್ಷದ ಸದಸ್ಯರೂ ಕೂಡ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಎಲ್ಲಾ ಕಡೆಯೂ ಧರಣಿ ನಡೆಯುತ್ತಿದೆ. ಎಲ್ಲಾ ಕಡೆಯು ಎಕ್ಸೈಜ್‌ನವರು

ಗೂಂಡಾಗಳನ್ನು ಕರೆದುಕೊಂಡು ರೈತರನ್ನು ಹಿಂಸೆ ಮಾಡುತ್ತಿರತಕ್ಕದನ್ನು ನಾವು ನೋಡುತ್ತಿದ್ದೇವೆ. ನುಸಿರೋಗ ಕಂಟ್ರೋಲ್ ಆಗಲಿಲ್ಲ. ರೈತರು ಮತ್ತಿನ್ನೇನು ಮಾಡಬೇಕು? ಎಳನೀರನ್ನು ಕಿತ್ತು ಎಳನೀರನ್ನು ಮಾರಿ ಕಾಸು ಮಾಡಿಕೊಳ್ಳುವುದಕ್ಕೂ ಆಗುವುದಿಲ್ಲ. ತೆಂಗಿನಕಾಯಿ ಕಿತ್ತು, ತೆಂಗಿನಕಾಯಿ ಮಾಡಿಕೊಳ್ಳುವುದಕ್ಕೂ ಆಗುವುದಿಲ್ಲ. ಇನ್ನು ತೆಂಗಿನ ಮರ ಇಟ್ಟುಕೊಂಡು ಫಲ ಇದ್ದೇನು ಪ್ರಯೋಜನ? ಅವರು ಬದುಕುವುದು ಹೇಗೆ? ಇನ್ನುಳಿದಿರತಕ್ಕದ್ದು ಏನು ಎಂದರೆ ನೀರಾ ಇಳಿಸುವುದಕ್ಕೆ ಒಂದು ಪರ್ಮಿಷನ್ ಕೊಡಿ ಎಂದು ಕೇಳುವುದು. ಇವತ್ತೂ ಕೂಡ ನನ್ನ ಜಿಲ್ಲೆಯಲ್ಲಿ ನನ್ನ ಆದಿಯಾಗಿ ಹಲವಾರು ಜನ ಜಿಲ್ಲಾಧಿಕಾರಿಗಳಿಗೆ ಅರ್ಜಿಯನ್ನು ಕೊಟ್ಟಿದ್ದೇವೆ. ನೀವು ನೀರಾ ಇಳಿಸುವುದಕ್ಕೆ ರೈತರಿಗೆ ಪರ್ಮಿಷನ್ ಕೊಡಿ ಎಂದು ಕೇಳಿದ್ದೇವೆ. ಬಹಳ ಸಂಕಟ ಇದೆ, ಬಹಳ ಕಷ್ಟ ಇದೆ ಎಂದು ಹೇಳಿ ಅರ್ಜಿ ಕೊಟ್ಟು ಸುಮಾರು ನಾಲ್ಕು ತಿಂಗಳ ಮೇಲೆ ಆಯಿತು. ಇದಕ್ಕೆ ಉತ್ತರ ಬರಲಿಲ್ಲ. ಇದಕ್ಕೆ ಕಾನೂನು ಬದ್ಧವಾಗಿ ಕೊಡುವುದಕ್ಕೆ ಬರುವುದಿಲ್ಲ ಎಂತಲೂ ಹೇಳುವುದಿಲ್ಲ. ಇದಕ್ಕೆ ಕೊಡಬಹುದೂ ಎಂತಲೂ ಹೇಳುವುದಿಲ್ಲ. ಯಾವುದೇ ವಿಧವಾದ ಪ್ರತಿಕ್ರಿಯೆ ರೂಪದಲ್ಲಿ ಒಂದು ಎಂಡಾರ್ಸ್‌ಮೆಂಟನ್ನು ಕೂಡ ಇದುವರೆಗೆ ನಮಗೆ ಬರಲಿಲ್ಲ. ನೀರಾ ಇಳಿಸುವ ವಿಚಾರದಲ್ಲಿ ನಮಗೆ ಎಂಡಾರ್ಸ್‌ಮೆಂಟ್ ಬರಲಿಲ್ಲ. ಏನು ಇದರ ಅರ್ಥ? ನೀರಾ ಇಳಿಸತಕ್ಕದ್ದು ಅಪರಾಧವೇ? ಅದು ಯಾವ ಕಾಯಿದೆಯಲ್ಲಿ ಅಪರಾಧ ಎಂದು ಇದೆ? ಇದನ್ನು ಏಕೆ ಕೊಡಬಾರದು ಎಂದು ಹೇಳಿ ಅಟ್‌ಲೀಸ್ಟ್ ಒಂದು ಎಂಡಾರ್ಸ್‌ಮೆಂಟ್‌ನ್ನಾದರೂ ಕೊಡಬಹುದಾಗಿತ್ತು. ಅದನ್ನು ಕೊಡತಕ್ಕ ಪ್ರಯತ್ನ ಅವರು ಮಾಡಲಿಲ್ಲ. ಇವತ್ತು ರೈತರು ಬಹಳ ಕಷ್ಟದಲ್ಲಿದ್ದಾರೆ. ಆದ್ದರಿಂದ ನನ್ನ ಒತ್ತಾಯ ಎಂದರೆ ನಿಜವಾಗಲೂ ಇವತ್ತು ಎಕ್ಸೈಜ್ ಇಲಾಖೆಯವರು ಎಲ್ಲೆಲ್ಲಿಂದಲೋ ಗೂಂಡಾಗಳನ್ನು ಕರೆದುಕೊಂಡು ಬಂದು ರೈತರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ, ರೈತರಿಗೆ ಹಿಂಸೆ ಕೊಡುತ್ತಿದ್ದಾರೆ. ಇದನ್ನೆಲ್ಲಾ ತಡೆಹಾಕಬೇಕು. ಸದನದಲ್ಲಿ ಮುಂದಿನ ವಿಚಾರ ತಾವು ಈ ವಿಚಾರ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ನೀರಾ ಇಳಿಸುವ ಬಗ್ಗೆ ಈ ಒಂದು ಸದನದಲ್ಲಿ ಗಂಭೀರವಾದಂತಹ ಚರ್ಚೆ ಆಗಬೇಕು. ಸಾಧಕ ಬಾಧಕವನ್ನು ನೋಡಿ ಸರ್ಕಾರವನ್ನು ಒತ್ತಾಯ ಮಾಡುವಂತಹ ಕಾರ್ಯಕ್ರಮ ಇದೆ. ಈ ಮಧ್ಯೆ ಇರುವಾಗ ಯಾವುದೇ ವಿಧವಾದ ಸರ್ಕಾರದ ಆದೇಶ ಇಲ್ಲದೆ ಈ ಎಕ್ಸೈಜ್ ಅಧಿಕಾರಿಗಳು ರೈತರ ಮೇಲೆ ದಬ್ಬಾಳಿಕೆ ನಡೆಸುತ್ತಿರತಕ್ಕದ್ದನ್ನು ನಿಲ್ಲಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ ಮತ್ತು ನೀರಾ ಇಳಿಸುವುದರ ಬಗ್ಗೆ ಸಹ ಪರ್ಮಿಷನ್ ಕೊಡಬೇಕು ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ರೇಷ್ಮೆ ಇಲಾಖೆ ವಿಚಾರ. ಬಹುಶ: ಈ ಭಾಗದಲ್ಲಿ ತೆಂಗು ಹೋಗಿ ಬಿಟ್ಟರೆ, ನಮ್ಮಲ್ಲಿ ರೇಷ್ಮೆಯಿಂದ ನಿಜವಾಗಿಯೂ ಬಹಳ ಉಪಯೋಗ ಆಗತಕ್ಕದ್ದು. ಸುಮಾರು 70ರಿಂದ 80 ಪರ್ಸೆಂಟ್ ಜನ ಅದರಲ್ಲೂ ಚಾಮರಾಜನಗರ ಜಿಲ್ಲೆಯಲ್ಲಿ

ರೇಷ್ಮೆ ಬೇಸಾಯದಿಂದ ಜೀವನ ಸಾಗಿಸುತ್ತಿರತಕ್ಕ ಜನರನ್ನು ನಾವು ಕಾಣುತ್ತಿದ್ದೇವೆ. ಈಗ ಇದಕ್ಕೆ ಜಾಸ್ತಿ ಒತ್ತು ಕೊಡಬೇಕಾದಂತಹ ಪರಿಸ್ಥಿತಿ ಬಂದಿದೆ. ಆದರಿಂದ ಈ ಒಂದು ವಿಚಾರದಲ್ಲಿ ನಾನು ಅಧ್ಯಯನ ಮಾಡಿದ ರೀತಿಯಲ್ಲಿ ಒಟ್ಟಾರೆ ನಮ್ಮ ರಾಜ್ಯದಲ್ಲಿ 1994-95 ರಲ್ಲಿ 1,67,778 ಹೆಕ್ಟಾರ್ ರೇಷ್ಮೆ ಮಾಡತಕ್ಕಂಥ ಇದ್ದದ್ದು 2000-2001ರಲ್ಲಿ 1,12,557 ಹೆಕ್ಟೇರ್‌ವರೆಗೆ ಬೇಸಾಯ ಆಗತಕ್ಕದ್ದು. ಅಂದರೆ ಈ ಅವಧಿಯಲ್ಲಿ ಬೇಸಾಯ ಮಾಡತಕ್ಕಂಥಹ ಎಕ್ಸ್‌ಟೆಂಟ್ ಇಳಿದಿರತಕ್ಕದ್ದು 55,221 ಹೆಕ್ಟೇರ್ ಇವತ್ತು ರೇಷ್ಮೆ ಕಡಿಮೆ ಆಗಿರತಕ್ಕದ್ದನ್ನು ನಾವು ಈ ಅಂಕಿ ಅಂಶದಲ್ಲಿ ಗಮನಿಸುತ್ತೇವೆ. ಏಕೆ ಹೀಗಾಯಿತು? ಏಕೆ ರೇಷ್ಮೆ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಅವಕಾಶ ಕೊಡುತ್ತಿಲ್ಲವೇ? ಇದರ ಬಗ್ಗೆ ನಾವು ಚಿಂತನೆ ಮಾಡಬೇಕಾದಂತಹ ಪರಿಸ್ಥಿತಿ ಇವತ್ತು ಇದೆ. ಒಂದು ಹೆಕ್ಟೇರ್‌ಗೆ ಬೇಸಾಯ ಕಡಿಮೆ ಆದ್ದರಿಂದ 55 ಸಾವಿರ ಹೆಕ್ಟೇರ್ ರೇಷ್ಮೆ ಬೇಸಾಯ ಕಡಿಮೆ ಆಯಿತು, ಆದರಿಂದ ಬಹುಶ: ಇವತ್ತು 6 ಲಕ್ಷ ಚಿಲ್ಲರೆ ಜನ ಈ ರೇಷ್ಮೆ ವ್ಯವಸಾಯ ಕಸುಬು ಇಲ್ಲದೇ ನಿರ್ಗತಿಕರಾಗಿರತಕ್ಕಂಥಹ ಒಂದು ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಆದರಿಂದ ಅದರ ಬಗ್ಗೆಯೂ ಸಹ ಇವತ್ತು ಹೆಚ್ಚಿನ ಹಣವನ್ನು ಈ ಬಜೆಟ್‌ನಲ್ಲಿ ಕೊಡತಕ್ಕಂಥಹ ಪ್ರಯತ್ನವನ್ನೂ ಕೂಡ ಮಾಡಬೇಕಾಗಿದೆ. ಆಮೇಲೆ ಸಕಾಲದಲ್ಲಿ ರೇಷ್ಮೆ ಮೊಟ್ಟೆಗಳನ್ನು ಇವತ್ತು ಕೊಡುತ್ತಿಲ್ಲ. ಇವತ್ತು ಚಾಕಿ ಕೇಂದ್ರಗಳು ಇವೆ, ಸಿಲ್ಕ್ ಫಾರ್ಮ್ಸ್ ಇದೆ. ಇವತ್ತು ರಾಜ್ಯದಲ್ಲಿ ಹಲವಾರು ಸಿಲ್ಕ್ ಫಾರ್ಮ್‌ಗಳಿವೆ. ಆದರೆ ಪ್ರಯೋಜನ ಆಗುತ್ತಿಲ್ಲ. ಏಕೆ ಪ್ರಯೋಜನ ಆಗುತ್ತಿಲ್ಲ ಎಂದರೆ ಎಲ್ಲಾ ಪೋಸ್ಟ್‌ಗಳು ಅಲ್ಲಿ ಖಾಲಿ ಇದ್ದಾರೆ. ಅದನ್ನು ಭರ್ತಿ ಮಾಡಬೇಕು. ಅದನ್ನು ಭರ್ತಿ ಮಾಡಿದಾಗ ಮಾತ್ರ ಸಿಲ್ಕ್ ಫಾರ್ಮ್ಸ್ ಸಮರ್ಪಕವಾಗಿ ಕೆಲಸ ಮಾಡಲಿಕ್ಕೆ ಅನುಕೂಲ ಆಗುತ್ತದೆ. ಆ ಜನರಿಗೆ ಅನುಕೂಲ ಆಗುತ್ತದೆ. ಆದರಿಂದ ದಯಮಾಡಿ ನಾನು ಒತ್ತು ಕೊಡತಕ್ಕದ್ದು ಈ ಏನು ಸಿಲ್ಕ್ ಫಾರ್ಮ್‌ಗಳಲ್ಲಿ ಖಾಲಿ ಹುದ್ದೆಗಳು ಏನು ಇವೆ ಆ ಖಾಲಿ ಹುದ್ದೆಗಳನ್ನು ತುಂಬುವುದರ ಮುಖಾಂತರ ಆ ಒಂದು ರೇಷ್ಮೆ ಉತ್ಪನ್ನ ಹೆಚ್ಚು ಮಾಡಲಿಕ್ಕೋಸ್ಕರ ಪ್ರಯತ್ನ ಮಾಡಬೇಕು ಎಂದು ನನ್ನ ಒಂದು ಡಿಮ್ಯಾಂಡ್ ಆಗಿದೆ. ಈ ಒಂದು ಬಜೆಟ್‌ನಲ್ಲಿ ಏನೂ ಪ್ರಾವಿಜನ್ ಅದಕ್ಕೆ ಮಾಡಲಿಲ್ಲ. ಆಮೇಲೆ ಅಂತರ್ಜಲ ಕೂಡ ಕಡಿಮೆ ಆಗಿರತಕ್ಕದ್ದು. ಈ ರೇಷ್ಮೆ ಮಾಡಬೇಕು ಎಂದರೆ ಡ್ರಿಪ್ ಇರಿಗೇಷನ್‌ಗೆ ಈ ರೇಷ್ಮೆ ಇಲಾಖೆಯಲ್ಲಿ ಒತ್ತು ಕೊಡತಕ್ಕದ್ದು ಬಹಳ ಅವಶ್ಯಕತೆ ಇದೆ. ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಲು ನಾನು ಇಷ್ಟಪಡುತ್ತೇನೆ.

ಇನ್ನು ಒಂದು ವಿಚಾರ ಕೊನೆಯದಾಗಿ ಹೇಳುತ್ತೇನೆ. ಪಂಚಾಯಿತಿ ಕಾರ್ಯದರ್ಶಿಗಳ ಬಗ್ಗೆ ಸಂಬಂಧಪಟ್ಟ ಇಲಾಖೆ ಮಾಹಿತಿಯನ್ನು ಕೊಡಲು ನಾನು ಇಚ್ಛಿಪಡುತ್ತೇನೆ. ಈಗ ನಾವು ಆಶ್ರಯ ಸಮಿತಿಗಳು ಎಂದು ಮಾಡಿಕೊಂಡಿದ್ದೇವೆ. ಅದಕ್ಕೆ ಶಾಸಕರುಗಳೇ ಅಧ್ಯಕ್ಷರಾಗಿರುವುದು. ತಾವು ಇದರಲ್ಲಿ ಏನು ಮಾಡುತ್ತೀರಿ ಎಂದರೆ ಈ ಫಲಾನುಭವಿಗಳ

ಪಟ್ಟಿ ಗ್ರಾಮ ಸಭೆ ನಡೆಸಿ ಗ್ರಾಮ ಪಂಚಾಯತಿಯಿಂದ ನಮ್ಮ ಆಶ್ರಯ ಸಮಿತಿಗೆ ಕಳುಹಿಸಿಕೊಡತಕ್ಕದ್ದು. ಈ ಗ್ರಾಮ ಸಭೆಕೊಟ್ಟಂತಹ ಫಲಾನುಭವಿಗಳ ಪಟ್ಟಿಯಲ್ಲಿ ಬೆನಿಫಿಷರೀಸನ್ನು ರೇಷಿಯೋ ಬೇಸಿಸ್ ಮೇಲೆ ಮಾಡುತ್ತಾರೆ. ಎಸ್‌ಸಿ: ಎಸ್‌ಟಿ ಬಿಸಿಎಂ. ಲೇಡೀಸ್ ಹ್ಯಾಂಡಿಕ್ಯಾಪ್ ಇದಕ್ಕೆಲ್ಲಾ ಆಯ್ಕೆ ಮಾಡತಕ್ಕಂಥಹ ಪವರ್ ನಮಗೆ ಇದೆ. ನಾವೇನೋ ಒಂದು ಸಾವಿರ ಮನೆಗಳನ್ನು ನಮ್ಮ ಕ್ಷೇತ್ರದಲ್ಲಿ ಆಯ್ಕೆ ಮಾಡಿ ಚಾಲನೆ ಕೊಟ್ಟಿದ್ದೇವೆ. ನಾವು ಚಾಲನೆ ಕೊಟ್ಟ ಮೇಲೆ ಏನಾಗುತ್ತದೆ ಎಂದರೆ ಯಾವ ಗ್ರಾಮ ಪಂಚಾಯಿತಿಯವರು, ಯಾವ ಸೆಕ್ರೆಟರಿ ಅಥವಾ ಛೇರ್ಮನ್ ಗ್ರಾಮಸಭೆ ನಡೆಸಿ ಪಟ್ಟಿ ಕೊಟ್ಟಿರುತ್ತಾನೋ, ಆ ಪಟ್ಟಿಯನ್ನು ಕೊಟ್ಟು ನಾವು ಆಯ್ಕೆ ಮಾಡಿದ ನಂತರ ಅದೇ ಸೆಕ್ರೆಟರಿ, ಅದೇ ಗ್ರಾಮ ಪಂಚಾಯತಿಯ ಅಧ್ಯಕ್ಷರು ನಮಗೆ ಪತ್ರ ಬರೆಯುತ್ತಾರೆ. ಏನು ಪತ್ರ ಬರೆಯುತ್ತಾರೆ ಎಂದರೆ ಇವರಿಗೆ ಗ್ರಾಮದಲ್ಲಿ ಸೈಟ್ ಇರುವುದಿಲ್ಲ. ಆದ್ದರಿಂದ ಬದಲಾವಣೆ ಮಾಡಿ ಎಂದು ಪತ್ರ ಕೊಡುತ್ತಾರೆ. ಮತ್ತೆ ಇವರಿಗೆ ಈ ಹಿಂದೆ ಅಂಬೇಡ್ಕರ್ ಯೋಜನೆಯಲ್ಲಿ, ಆಶ್ರಯ ಯೋಜನೆಯಲ್ಲಿ ಮನೆ ಆಗಿರುತ್ತದೆ. ಆದ್ದರಿಂದ ಬೇರೆಯವರಿಗೆ ಬದಲಾವಣೆ ಮಾಡಿ ಎಂದು ಪತ್ರ ಕೊಡುತ್ತಾರೆ. ಇದು ಹಲವಾರು ಪ್ರಕರಣದಲ್ಲಿ ಆಗಿದೆ. ಈ ಬಗ್ಗೆ ನಾನು ನೂರಾರು ಪ್ರಕರಣಗಳನ್ನು ನನ್ನ ಕ್ಷೇತ್ರದಲ್ಲಿ ನೋಡಿರತಕ್ಕದ್ದು, ನಾನು ಏಕೆ ಈ ವಿಚಾರದಲ್ಲಿ ಒತ್ತು ಕೊಡುತ್ತಿದ್ದೇನೆ ಎಂದರೆ ಇವರು ಈ ಕೆಲಸ ಮಾಡುವುದರಿಂದ ನಾವು ಸಮರ್ಪಕವಾಗಿ ನಾವೇನು ಸವಲತ್ತುಗಳನ್ನು ಮುಟ್ಟಿಸಬೇಕೋ ಅದನ್ನು ಮುಟ್ಟಿಸುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಈ ಕಾರ್ಯದರ್ಶಿ ಇರಬಹುದು ಅಥವಾ ಗ್ರಾಮ ಪಂಚಾಯಿತಿ ಅಧ್ಯಕ್ಷರು ಇರಬಹುದು, ಇವರ ಮೇಲೆ ಒಂದು ಸ್ಟ್ರಿಕ್ಟಾಗಿ ಕಾನೂನು ಮಾಡತಕ್ಕದ್ದು, ಸ್ಟ್ರಿಕ್ಟಾಗಿ ಅದನ್ನು ಜಾರಿಗೊಳಿಸತಕ್ಕದ್ದು ಈ ದಿಸೆಯಲ್ಲಿ ಪ್ರಯತ್ನ ಆಗಬೇಕು ಎಂದು ನನ್ನ ಮನವಿ. ತಾವು ಬೆಲ್ ಹೊಡೆಯುತ್ತಲೇ ಇದ್ದೀರಿ. ಸಮಯವೂ ಆರೂವರೆ ಆಗಿದೆ. ನಾನು ನಿಮಗೆ ತೊಂದರೆ ಕೊಡಲು ಹೋಗುವುದಿಲ್ಲ. ಇನ್ನೂ ಹಲವಾರು ವಿಚಾರಗಳೂ ಕೂಡ ಇದೆ. ಮುಂದೆ ಸಭೆ ಬಂದಾಗ ನಮಗೆ ಹೆಚ್ಚಿನ ಒಂದು ಅವಕಾಶವನ್ನು ಕೊಡಬೇಕು ಎನ್ನತಕ್ಕ ಮನವಿಯನ್ನೂ ಸಹ ಈ ಸಂದರ್ಭದಲ್ಲಿ ಮಾಡುತ್ತೇನೆ. ಮತ್ತೆ ತಾವು ಬೆಲ್ ಹೊಡೆದಿದ್ದಕ್ಕೆ ನಾನು ಗೌರವ ಸಲ್ಲಿಸದೆ ಇದ್ದರೆ ಅದಕ್ಕೆ ಅಪಚಾರ ಮಾಡಿದ ಹಾಗೆ ಆಗುತ್ತದೆ. ನಾನಂತೂ ಮತ್ತೆ ಮತ್ತೆ ಮುಂದುವರಿಯಲು ಇಷ್ಟಪಡುವುದಿಲ್ಲ. ಇಷ್ಟಾದರೂ ನನಗೆ ಮಾತನಾಡಲೂ ಅವಕಾಶ ಮಾಡಿಕೊಟ್ಟಿದ್ದೀರಿ. ಒಂದೆರಡು ವಿಚಾರಗಳನ್ನು ಮಾತ್ರ ನನಗೆ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಆಯಿತು. ಇನ್ನೂ ಹಲವಾರು ವಿಚಾರಗಳು ಇವೆ. ಮುಂದೆ ಸದನ ಸೇರಿದಾಗ ನನಗೆ ಹೆಚ್ಚಿನ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(B) 025226

ಉಪಾಧ್ಯಕ್ಷರು:— ಮಾನ್ಯ ಹಂಪನಗೌಡರು ಒಂದು ವಿಚಾರವನ್ನು ಮಾತನಾಡಬೇಕೆಂದು ಎರಡು ನಿಮಿಷ ಅವಕಾಶ ಕೇಳುತ್ತಿದ್ದಾರೆ. ಅವರು ಮಾತನಾಡಬಹುದು.

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) :— ಮಾನ್ಯ ಉಪಾಧ್ಯಕ್ಷರೆ, ಮನೆಗೆ ಮೊದಲ ಮಗ ಆಗಬಾರದು. ಕೊನೆಯ ಭಾಷಣಕಾರ ಆಗಬಾರದು ಎಂಬ ಒಂದು ವಿಚಾರದಲ್ಲಿ ಇವತ್ತಿನ ದಿವಸ ನನಗೆ ಕೊನೆಯದಾಗಿ ಭಾಷಣ ಮಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸಿ, ಸಮಯದಾನವನ್ನು ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :— ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಸೋಮವಾರ ಬೆಳಿಗ್ಗೆ 9.30ಕ್ಕೆ ಮತ್ತೆ ಸಮಾವೇಶಗೊಳ್ಳುತ್ತದೆ.

(ಸದನವು 6.30ಕ್ಕೆ ಮುಂದೂಡಲ್ಪಟ್ಟು ಮತ್ತೆ ಸೋಮವಾರ ದಿನಾಂಕ 30.07.2001ರಂದು ಬೆಳಿಗ್ಗೆ 9.30ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಸರ್ಕಾರಿ ಶಾಖಾ ಮುದ್ರಣಾಲಯ, ಟಮಕ, ಕೋಲಾರ - ೫೬೩೧೦೧

ಸರ್ಕಾರಿ ಶಾಖಾ ಮುದ್ರಣಾಲಯ, ಟಮಕ, ಕೋಲಾರ - ೫೬೩೧೦೧